
ಕುಮಾರವ್ಯಾಸ ಭಾರತ ಸಂಗ್ರಹ

ಸಂ: ಪ್ರೊ|ಎಂ.ವಿ.ಸೀತಾರಾಮಯ್ಯ



ಬಿ. ಎಂ. ಶ್ರೀ. ಸ್ಮಾರಕ ಪ್ರತಿಷ್ಠಾನ

ಬೆಂಗಳೂರು – 19

ಈ ಪುಸ್ತಕದ ಬಿಡುಗಡೆ.

ದಿನಾಂಕ. ೯.೯.೧೯೯೦.

ಸ್ಥಳ: ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆ, ಬೆಂಗಳೂರು.

ಬಿಡುಗಡೆಮಾಡಿದವರು: ಶ್ರೀ ಜಿ.ಎಸ್. ಶಿವರುದ್ರಪ್ಪನವರು

ಪರಿಚಯಭಾಷಣ: ವಿದ್ವಾನ್. ರಂಗನಾಥಶರ್ಮ ಅವರು.

ಪ್ರಸ್ತಾವನೆ: ಶ್ರೀ ಎಲ್.ಎಸ್. ಶೇಷಗಿರಿರಾಯರು

ಅಧ್ಯಕ್ಷತೆ: ಶ್ರೀ ನಿಟ್ಟೂರು ಶ್ರೀನಿವಾಸರಾಯರು

ಈ ಸಂದರ್ಭದಲ್ಲಿ ಕೊಂಡಿದ್ದು.

೯.೯.೯೦.

ಕುಮಾರವ್ಯಾಸ ಭಾರತ ಸಂಗ್ರಹ

ಸಂಪಾದಕರು

ಎಂ. ವಿ. ಸೀತಾರಾಮಯ್ಯ

ಬಿ. ಎಂ. ಶ್ರೀ. ಸ್ಮಾರಕ ಪ್ರತಿಷ್ಠಾನ
ಬೆಂಗಳೂರು–19

1990

KUMARAVYASA BHARATHA SANGRAHA : A Collection and Critical Edition of Epic of Kumaravyasa, in the form of Shatpadhi (C. 1430 A.D) Edited by Prof. M. V. Seetharamiah, Published by B. M. Sri. Smaraka Prathishthana, Bangalore-560 019 Pp. : 636 + 100 1000 Copies, First Edition : 1990, Price : Rs. 75-00/- *(Calico copy) Rs.* 40/- *(Ordinary copy)*

Published with the Financial Assistance from the Govt. of India, Department of National Archives, New Delhi.

ಸಂಪಾದಕೀಯ ಸಹಾಯಕರು :

ಶ್ರೀ ಎನ್. ಎಸ್. ರಾಮಸ್ವಾಮಿ ಅಯ್ಯರ್

ಶ್ರೀ ವಿ. ವೆಂಕಟರಾವ್

ಬೆಲೆ : ಉತ್ತಮಪ್ರತಿ ಎಪ್ಪತ್ತೈದು ರೂಪಾಯಿ

ಸಾದಾಪ್ರತಿ : ನಲವತ್ತು ರೂಪಾಯಿ

ಮುದ್ರಕರು : ಶ್ರೀ ರಾಘವೇಂದ್ರ ಪ್ರಿಂಟರ್ಸ್
ಬೆಂಗಳೂರು–18

ಮುನ್ನುಡಿ

ಯಾವ ಸಾಹಿತ್ಯವಾದರೂ ತನ್ನವನೆಂದು ಹೇಳಿಕೊಳ್ಳಲು ಹೆಮ್ಮೆಪಡಬಹುದಾದ ಉಜ್ವಲ ಪ್ರತಿಭೆಯ ಕವಿ ಕುಮಾರವ್ಯಾಸ. ಆತನ ಮಹಾಕಾವ್ಯದ ಸಂಗ್ರಹವನ್ನು ಪ್ರಕಟಿಸುವ ಬಯಕೆ ಪ್ರೊ. ಎಂ. ವಿ. ಸೀತಾರಾಮಯ್ಯನವರಿಗೆ ಇತ್ತು. ಈಗಾಗಲೆ ಕೆಲವು ಸಂಗ್ರಹಗಳು ಪ್ರಕಟವಾಗಿದ್ದರೂ ಇಂತಹ ಅಸಾಧಾರಣ ಕೃತಿಯನ್ನು ಸಾಮಾನ್ಯ ಜನರ ಕೈಗೆ ತಂದುಕೊಡುವ ಎಷ್ಟು ಪ್ರಯತ್ನಗಳಾದರೂ ಸಾಲದು. ಬಿ. ಎಂ. ಶ್ರೀ. ಪ್ರತಿಷ್ಠಾನದ ಮೂಲಕ ಈ ಸಂಗ್ರಹವನ್ನು ಪ್ರಕಟಿಸುವ ಪ್ರಯತ್ನದ ಕಥೆಯನ್ನು "ಪಾಠ ಪರಿಷ್ಕರಣ"ದಲ್ಲಿ ನಿರೂಪಿಸಿದೆ. ಸುಮಾರು ಎರಡು ವರ್ಷಗಳ ಕಾಲ ಅವರು ಪ್ರೀತಿಯಿಂದ ಶ್ರಮಿಸಿ ಸಿದ್ಧಪಡಿಸಿದ ಈ ಕೃತಿಯ ಪ್ರಕಟಣೆಯನ್ನು ಪ್ರೊ. ಎಂ. ವಿ. ಸೀ. ಅವರು ಕಾಣದೆ ಹೋದದ್ದು ದುಃಖದ ಸಂಗತಿ. ಅವರನ್ನು ಈ ಸಂದರ್ಭದಲ್ಲಿ ಪ್ರೀತಿ ಕೃತಜ್ಞತೆಗಳಿಂದ ಸ್ಮರಿಸುತ್ತೇವೆ.

ಈ ಆವೃತ್ತಿಯು ಅಚ್ಚಾಗಲು ಅನುದಾನವನ್ನು ನೀಡಿದ ಕೇಂದ್ರ ಸರ್ಕಾರಕ್ಕೆ ಪ್ರತಿಷ್ಠಾನ ಕೃತಜ್ಞತೆಯನ್ನರ್ಪಿಸುತ್ತದೆ. ಈ ಸಂಗ್ರಹಕ್ಕೆ ಆಚಾರ್ಯ ಬಿ.ಎಂ.ಶ್ರೀ. ಅವರು, ಪ್ರೊ|| ಟಿ. ಎಸ್. ವೆಂಕಣ್ಣಯ್ಯ ಅವರು ಪ್ರೊ. ಎ. ಆರ್. ಕೃಷ್ಣಶಾಸ್ತ್ರಿಗಳು ಮತ್ತು ಪ್ರೊ. ಡಿ. ಎಲ್. ನರಸಿಂಹಾಚಾರ್ಯರ ನೆರವಿನಿಂದ ಸಿದ್ಧಗೊಳಿಸಿದ ಹಸ್ತಪ್ರತಿ ಒಂದು ಮುಖ್ಯ ಆಕರವಾಗಿದೆ. ಆ ಹಿರಿಯರಿಗೆ ನಮ್ಮ ವಂದನೆಗಳು. ಇವರೊಡನೆ ಕುಮಾರವ್ಯಾಸ ಭಾರತದ ಹಲವು ಆವೃತ್ತಿಗಳನ್ನು ಅವಲೋಕಿಸಲಾಗಿದೆ. ಪ್ರತ್ಯಕ್ಷವಾಗಿ, ಪರೋಕ್ಷವಾಗಿ ಈ ಸಂಗ್ರಹದ ಸಿದ್ಧತೆಗೆ ನೆರವಾದ ವಿದ್ವಾಂಸರೆಲ್ಲರಿಗೆ ನಾವು ಕೃತಜ್ಞರು.

ಶ್ರಮ, ಶ್ರದ್ಧೆ, ಸಾಮರ್ಥ್ಯಗಳನ್ನು ಬೇಡುವ ಈ ಕಾರ್ಯದಲ್ಲಿ ಶ್ರೀ ಎನ್. ಎಸ್. ರಾಮಸ್ವಾಮಿ ಅಯ್ಯರ್ ಅವರು ಶ್ರೀ ವಿ. ವೆಂಕಟರಾಯರು ಪ್ರೊ. ಎಂ. ವಿ. ಸೀ. ಅವರಿಗೆ ಮೌಲಿಕವಾದ ನೆರವು ನೀಡಿದ್ದಾರೆ. ಈ ವಿದ್ವಾಂಸರಿಗೆ ನಾವು ಕೃತಜ್ಞರು. ಡಾ. ಟಿ. ವಿ. ವೆಂಕಟಾಚಲಶಾಸ್ತ್ರೀ ಅವರು ಶ್ರಮವಹಿಸಿ ಕೃತಿಯನ್ನು ಅವಲೋಕಿಸಿ ಉಪೋದ್ಘಾತವನ್ನು ಬರೆದು ಕೊಟ್ಟಿದ್ದಾರೆ, ಅವರ ವಿದ್ವತ್ತಿನ ಲಾಭ ಪ್ರತಿಷ್ಠಾನಕ್ಕೆ ಆಗಿದೆ. ಅವರ ಉಪಕಾರವನ್ನು ಸಂತೋಷದಿಂದ ಸ್ಮರಿಸುತ್ತೇವೆ. ಶ್ರೀ ರಾಘವೇಂದ್ರ ಪ್ರಿಂಟರ್ಸ್‌ನವರು ಪುಸ್ತಕವನ್ನು ಅಂದವಾಗಿ ಅಚ್ಚು ಮಾಡಿಕೊಟ್ಟಿದ್ದಾರೆ. ಅವರಿಗೆ ನಮ್ಮ ವಂದನೆಗಳು.

ಕಾವ್ಯದ ವಿಶೇಷ ಅಧ್ಯಯನ ಮಾಡುವವರಿಗೆ ಮಾತ್ರ ಉಪಯುಕ್ತವಾಗುವ ವಿವರಗಳನ್ನು ನೀಡದೆ, ಇತರ ಕಾವ್ಯಾಭಿಮಾನಿಗಳಿಗೆ ಉಪಯುಕ್ತವಾಗುವಂತೆ ಪಾಠಾಂತರಗಳನ್ನೂ ಇತರ ವಿವರಗಳನ್ನೂ ಈ ಆವೃತ್ತಿಯಲ್ಲಿ ಅಳವಡಿಸಿದೆ. ಕಾವ್ಯದ ಕಥನ, ಸೊಗಡುಗಳಿಗೆ ಊನ ಬಾರದಂತೆ ಓದುಗವರ್ಗಕ್ಕೆ ನೆರವಾಗುವ ಗಾತ್ರದಲ್ಲಿ ಈ ಮಹಾ ಕೃತಿಯನ್ನು ಸಿದ್ಧಗೊಳಿಸಿದೆ. ಕನ್ನಡ ಕಾವ್ಯಪ್ರೇಮಿಗಳಿಗೆ, ವಿದ್ಯಾರ್ಥಿಗಳಿಗೆ, ಗಮಕಿಗಳಿಗೆ ಈ ಕೃತಿಯಿಂದ ಪ್ರಯೋಜನವಾಗುತ್ತದೆ ಎಂಬ ನಂಬಿಕೆಯೊಡನೆ ಸಂತೋಷದಿಂದ ಈ ಪ್ರಕಟಣೆಯನ್ನು ಅವರ ಕೈಯಲ್ಲಿಡುತ್ತಿದ್ದೇವೆ.

ಎಲ್. ಎಸ್. ಶೇಷಗಿರಿರಾವ್
ಅಧ್ಯಕ್ಷ
ಬಿ. ಎಂ. ಶ್ರೀ. ಸ್ಮಾರಕ ಪ್ರತಿಷ್ಠಾನ

ಉಪೋದ್ಘಾತ

೧. ಕವಿಚರಿತ್ರೆ

ಕವಿಯ ಕಾಲವಿಚಾರ

ಕುಮಾರವ್ಯಾಸನ ಜೀವಿತವೃತ್ತಾಂತದಲ್ಲಿ ಹೆಚ್ಚು ತೊಡಕಾದುದು ಎಂದರೆ, ಆತನ ಕಾಲವಿಚಾರ. ಈ ಭಾಗದಲ್ಲಿಯೇ ವಿದ್ವಾಂಸರ ವಿಮರ್ಶೆ ಹೆಚ್ಚಾಗಿ ನಡೆದಿರುವುದು, ಭಿನ್ನಾಭಿಪ್ರಾಯಗಳು ವ್ಯಕ್ತಪಟ್ಟಿರುವುದು. ಕವಿ ಬದುಕಿದ್ದ ಕಾಲವನ್ನಾಗಲಿ, ಆತನು ತನ್ನ ಕೃತಿಯನ್ನು ರಚಿಸಿ ಮುಗಿಸಿದ ಕಾಲವನ್ನಾಗಲಿ ತಿಳಿಯಲು ಗ್ರಂಥದಲ್ಲಿಯೇ ಸ್ಪಷ್ಟವಾದ ಆಧಾರಗಳು ಯಾವುವೂ ಇಲ್ಲ.

ಈ ಕವಿಯ ಕಾಲವನ್ನು ಗೊತ್ತುಮಾಡಲು, ಮುಖ್ಯವಾಗಿ ಬಳಸಿರುವ ಸಹಾಯಕ ಪ್ರಮಾಣಗಳು ಹೀಗಿವೆ : (i) ಕುಮಾರವ್ಯಾಸ ಭಾರತದಲ್ಲಿ ಪೂರ್ವಕವಿಗಳ ಅನುಸರಣೆ ಮತ್ತು ಉತ್ತರಕಾಲೀನ ಕವಿ ಕೃತಿಗಳ ಮೇಲೆ ಆ ಗ್ರಂಥದ ಪ್ರಭಾವ, (ii) ಶಾಸನ ಸಾಕ್ಷ್ಯಗಳು, (iii) ವೀರಶೈವ ಗ್ರಂಥಗಳಲ್ಲಿ ಬಂದಿರುವ ಕವಿಯ ಚರಿತ್ರೆ, (iv) ಗ್ರಂಥದ ಅಂತರ ಸಾಕ್ಷ್ಯಗಳು, (v) ಗ್ರಂಥದ ಭಾಷೆ ಶೈಲಿಗಳು, (vi) ಕೋಳಿವಾಡದ ಕಾಗದ ಪತ್ರಗಳಲ್ಲಿ ಕವಿಯ ವಿಚಾರ.

ಇವುಗಳ ಅನುಕ್ರಮವನ್ನು ಹಿಡಿದು, ಈವರೆಗೆ ನಡೆದಿರುವ ಚರ್ಚೆಗಳ ಸಾರಾಸಾರ ವಿಮರ್ಶೆ ಮತ್ತು ತಾತ್ಪೂರ್ತಿಕ ನಿರ್ಣಯದ ಸಾಧ್ಯತೆಗಳನ್ನು ಈಗ ಗಮನಿಸಬಹುದು.

(i) ಅನುಸರಣೆ ಮತ್ತು ಗ್ರಂಥದ ಪ್ರಭಾವ :

ಕುಮಾರವ್ಯಾಸ ತನ್ನ ಕೃತಿಯಲ್ಲಿ ವೇದವ್ಯಾಸ ಶುಕರ ಹೊರತು ಬೇರೆ ಯಾವ ಪೂರ್ವಕವಿಯನ್ನೂ ಸ್ಮರಿಸಿಲ್ಲ. ಪರಿಶೀಲನೆಯಿಂದ ಪಂಪಕವಿಯ ಭಾರತದ ಪರಿಚಯ ಅವನಿಗಿದ್ದುದು ಈಗ ಸ್ಪಷ್ಟಪಟ್ಟಿದೆ. ಇತರ ಪ್ರಾಚೀನ ಸಂಸ್ಕೃತ ಕನ್ನಡ ಕವಿಗಳ ಪ್ರಭಾವ ಇನ್ನೂ ಸರಿಯಾಗಿ ಶೋಧಿತವಾಗಿಲ್ಲ. ಸಂಸ್ಕೃತದಲ್ಲಿ ಭಾರತ ಕಥಾ ಸಂಬಂಧವಾದ ಅನೇಕ ಕೃತಿಗಳಿದ್ದು, ಭಾಸನಿಂದ ತೊಡಗಿ ಕುಮಾರವ್ಯಾಸನಿಗೆ ಸಮೀಪಕಾಲದ (ಸು.೧೩೩೦) "ಸೌಗಂಧಿಕಾಹರಣ"ದ ವಿಶ್ವನಾಥನ ವರೆಗೆ ಯಾವ ಕವಿಯ, ಯಾವ ಕೃತಿಯ ಅನುಸರಣೆ ಪ್ರಭಾವಗಳು ಎಷ್ಟರಮಟ್ಟಿಗೆ ಕುಮಾರವ್ಯಾಸ ಭಾರತದಲ್ಲಿ ಆಗಿರಬಹುದು ಎಂಬುದನ್ನು ತಿಳಿಯಲು ತಕ್ಕ ಪ್ರಯತ್ನವೇ ಇನ್ನೂ ನಡೆದ ಹಾಗೆ ತೋರುವುದಿಲ್ಲ. ಅಂತಹ ಪ್ರಯತ್ನದಿಂದ ಈ ಕವಿಯ ಕಾಲನಿರ್ಣಯಕ್ಕೆ ಸಹಕಾರಿಯಾದ ಪ್ರಮಾಣಗಳು ಬೆಳಕಿಗೆ ಬರುವುದು ಸಾಧ್ಯ. ಸದ್ಯದಲ್ಲಿ ಪಂಪ

ಕವಿಯ ಅನುಸರಣೆಯಿಂದಾಗಿ, ಈ ಕವಿ ಸುಮಾರು ೧೧ನೆಯ ಶತಮಾನದಿಂದೀಚೆ ಯವನೆಂದು ಮಾತ್ರ ತಿಳಿಯುವುದು.

ಕುಮಾರವ್ಯಾಸನ ಹೆಸರು ಹೇಳುವ ಉತ್ತರಕಾಲೀನ ಕವಿಗಳಲ್ಲಿ ಬಹುಶಃ ಮೊದಲಿಗನೆಂದರೆ ತಿಮ್ಮಣ್ಣ ಕವಿ (ಸು. ೧೫೧೦). ಇವನು ವಿಜಯನಗರದ ಕೃಷ್ಣ ದೇವರಾಯನ (೧೫೦೯-೨೯) ಆಜ್ಞಾನುಸಾರವಾಗಿ ತನ್ನ "ಕೃಷ್ಣರಾಜ ಭಾರತ" ಎಂಬ ಕೃತಿ ರಚಿಸಿದ್ದಾನೆ. ಇವನಿಗೆ ಸ್ವಲ್ಪ ಮೊದಲೋ ಬಳಿಕವೋ ಇದ್ದಿರಬಹುದಾದ ಕುಮಾರ ವಾಲ್ಮೀಕಿ (ಸು. ೧೫೦೦), ನಾರಾಯಣ ಕವಿ (ಸು. ೧೫೩೦), "ಆದಿತ್ಯ ಪುರಾಣ" ಕರ್ತೃ (ಸು ೧೫೬೦), ನರಸ ಕವಿ (ಸು.೧೬೧೨), ಲಕ್ಷ್ಮ ಕವಿ (೧೭೨೩), ಕೋನಯ್ಯ (ಸು. ೧೭೫೦), ಬಬ್ಬೂರು ರಂಗ (ಸು. ೧೭೫೦) ಈ ಮೊದಲಾದವರು ಈ ಕವಿಯನ್ನು ಕೀರ್ತಿಸಿರುವ ಇತರ ಕವಿಗಳು. ಇವರಲ್ಲಿ ಹಲವರನ್ನು ಒಳಕೊಂಡು ಭಾಸ್ಕರ (೧೪೨೪), ನಂಜುಂಡ (ಸು. ೧೫೨೫), ಚಾಟುವಿಟ್ಠಲನಾಥ (ಸು. ೧೫೩೦), ಸುಕುಮಾರ ಭಾರತಿ (ಸು. ೧೫೫೦), ಸಾಳ್ವ (ಸು. ೧೫೫೦), ಲಕ್ಷ್ಮೀಶ (ಸು. ೧೫೫೦), ಗೋಪಕವಿ (೧೫೮೧), ಷಡಕ್ಷರಿ (೧೬೫೫), ಮನೋಹರ ವಿಠಲ (೧೭೬೨), ಬ್ರಹ್ಮಣಾಂಕ (ಸು. ೧೮೦೦) ಈ ಕೆಲವರು, ಇನ್ನೂ ಹಲವರು, ತಂತಮ್ಮ ಕೃತಿಗಳಲ್ಲಿ ಕುಮಾರವ್ಯಾಸ ಭಾರತದ ಪ್ರಭಾವವನ್ನು ನಾನಾ ವಿಧಗಳಲ್ಲಿ ಬಿಂಬಿಸಿದ್ದಾರೆ. ಈ ಕೃತಿಯ ವರ್ಚಸ್ಸು ಮರಾಠಿ ಸಾಹಿತ್ಯ ಕ್ಷೇತ್ರವನ್ನೂ ಪ್ರವೇಶಿಸಿದೆ.

ಈ ಕವಿಶ್ರೇಣಿಯಲ್ಲಿ ಕವಿಯಾಗಿ ಕುಮಾರವ್ಯಾಸನ ಹೆಸರನ್ನು ಸ್ಪಷ್ಟವಾಗಿ ಉಲ್ಲೇಖಿಸುವ ತಿಮ್ಮಣ್ಣನ ಕಾಲದ ಉತ್ತರದ ಗಡಿ ಬಲುಮಟ್ಟಿಗೆ ೧೫೩೦ ಎಂದು ನಿರ್ದಿಷ್ಟವಾಗಿರುವುದರಿಂದ, ತಿಳಿಯಬೇಕಾದ ಕುಮಾರವ್ಯಾಸನ ಕಾಲದ ಉತ್ತರದ ಗಡಿಯೂ ಅದೇ ಆಗಿದೆ ಎನ್ನಬಹುದು.

ತಿಮ್ಮಣ್ಣ ಕವಿಯ ಕೃತಿಸಾಕ್ಷ್ಯವು ಪ್ರತ್ಯಕ್ಷವಾದುದಾಗಿ ಗ್ರಾಹ್ಯವಾಗುವಂತೆ, ಭಾಸ್ಕರನ "ಜೀವಂಧರ ಚರಿತೆ"ಯಲ್ಲಿ ಅಲ್ಲಲ್ಲಿ ಕುಮಾರವ್ಯಾಸ ಭಾರತದ ಭಾವಗಳನ್ನೂ ಉಕ್ತಿಗಳನ್ನೂ ಸ್ವೀಕರಿಸಿರುವುದು ಪರೋಕ್ಷಸಾಕ್ಷ್ಯವಾಗಿ ಗ್ರಾಹ್ಯವಾಗಬಹುದಾಗಿದೆ. ಭಾಸ್ಕರ ಕವಿ ಜೈನನಾಗಿರುವುದರಿಂದಲೋ ಏನೋ, ತಾನು ಹೇಳಿರುವ ಪೂರ್ವಕವಿಗಳ ಗುಂಪಿನಲ್ಲಿ ಕುಮಾರವ್ಯಾಸನನ್ನು ಹೆಸರಿಸಿಲ್ಲ. "ಜೀವಂಧರ ಚರಿತೆ"ಯ ಕಾಲಸೂಚಕ ಪದ್ಯದ ಪ್ರಚಲಿತ ಪಾಠಕ್ಕೆ ಹಲವು ಹಸ್ತಪ್ರತಿಗಳ ಅಬಾಧಿತವಾದ ಬೆಂಬಲವಿರುವಂತಿದೆ. ಪಾಠ ಹೊಂದುವುದಿಲ್ಲ ಎಂಬ ಮಾತಿಗೆ ಹಿಂಜರಿಕೆ ಅನಗತ್ಯ. ಪಂಪಾದ್ಯರಾದ ಪ್ರಾಚೀನ ಕೃತಿಕರ್ತರ ಹಾಗೂ ಶಾಸನಕವಿಗಳ ಸವಿವರ ಕಾಲ ಸೂಚಕ ಪದ್ಯಗಳಲ್ಲಿಯೂ ಈ ವ್ಯತ್ಯಾಸ ಸಾಮಾನ್ಯವಾಗಿ ಉಂಟು. ಇನ್ನು, ಕೆಲವರು ಎತ್ತಿರುವ ಭಾಸ್ಕರ ಕುಮಾರವ್ಯಾಸರಲ್ಲಿ ಯಾರು ಯಾರಿಂದ ಸ್ವೀಕರಿಸಿದ್ದಾರೆಂಬ ಪ್ರಶ್ನೆಯ ವಿಚಾರ. ನಾಗಚಂದ್ರ ರಾಘವಾಂಕರ, ಇತರರ ಅನುಸರಣೆ "ಜೀವಂಧರ

ಚರಿತೆ"ಯಲ್ಲಿ ಸ್ಪಷ್ಟವಾಗಿ ಗೋಚರಿಸುತ್ತಿರುವುದರಿಂದ, ತೌಲನಿಕವಾಗಿ ನೋಡಿದರೆ ಭಾಸ್ಕರನ ಪದ್ಯರಚನೆಯು ಹೊಗರು ಸಾಮಾನ್ಯವೇ ಆದುದರಿಂದ, ಅವನು "ಅನುಕರಣಪ್ರಿಯ ಸಾಧಾರಣಕವಿ"ಯೆನ್ನುವುದು ಸಿದ್ಧವಾಗುತ್ತದೆ. ಇಂಥವನು ಕುಮಾರವ್ಯಾಸನಿಂದಲೂ ಸ್ವೀಕರಿಸಿರಬಹುದು ಎನ್ನುವುದು ಯುಕ್ತಿಯುಕ್ತವೇ ಆಗಿದೆ. ಭಾಸ್ಕರನೂ ಸೇರಿದಂತೆ ಈಚಿನ ಹಲವರು ಷಟ್ಪದೀ ಕವಿಗಳೂ ಇತರರೂ ಅವನ ಪ್ರತಿಭಾವ್ಯಾಪಾರಕ್ಕೆ ಮನಸೋತು ಅವನನ್ನು ಅನುಸರಿಸಿರುವುದು ವಿದಿತ ವಾಗಿಯೇ ಇದೆ.

ಉತ್ತರಕಾಲೀನ ಕವಿಗಳಲ್ಲಿ, ಭಾಸ್ಕರ, ತಿಮ್ಮಣ್ಣ, ಕುಮಾರ ವಾಲ್ಮೀಕಿ ಈ ಕೆಲವರಲ್ಲಿ, ಸಮೀಪದ ಭಾಸ್ಕರನ ಕಾಲಕ್ಕಿಂತ ಹಿಂದೆ ಸು. ೩೦–೪೦ ಅಥವಾ ೫೦–೭೦ ವರ್ಷಗಳ ಮೊದಲು, ಅಥವಾ ಕೆಲವರ ಅಭಿಪ್ರಾಯದಂತೆ ಇನ್ನೂ ಎಷ್ಟೋ ಮೊದಲು ಕುಮಾರವ್ಯಾಸನಿದ್ದನೆಂಬುದು ಈಗ ರೂಢವಾಗಿರುವ ಅಭಿಪ್ರಾಯ. ಆ ಕಾಲವನ್ನು ಸು. ೧೪೦೦ ಎಂದು ತಿಳಿಯಲಾಗುತ್ತಿದೆ.

(ii) ಶಾಸನ ಸಾಕ್ಷ್ಯ :

ಕುಮಾರವ್ಯಾಸನ ಹೆಸರು ಬಂದಿರುವ ಒಂದು ಶಾಸನ ಗದುಗಿನ ವೀರನಾರಾಯಣಸ್ವಾಮಿ ದೇವಾಲಯಕ್ಕೆ ಸೇರಿದ ಬಾವಿಯ ಎಡಮಗ್ಗುಲ ಗೋಡೆಯ ಮೇಲಿದೆ. ವಿಜಯನಗರದ ಅಚ್ಯುತರಾಯನು ಬ್ರಾಹ್ಮಣರಿಗೆ ಆನಂದನಿಧಿಯೆಂಬ ದಾನವನ್ನು ನೀಡಿದ ವಿಚಾರ ಶಾಸನದ ವಸ್ತು. ಇದರ ಕಾಲ ೨೬–೮–೧೫೩೯. ದಾನವಿತ್ತ ಮೇಲೆ, ಆ ಸಂಬಂಧದ ಪ್ರಶಸ್ತಿಯನ್ನು ಸಂಸ್ಕೃತದಲ್ಲಿ ಬರಸಿ, "ಕವಿ ಕುಮಾರವ್ಯಾಸಂಗೆ ಪ್ರಸಂನನಾದ ಗದುಗಿನ [ಶ್ರೀ ವೀರ] ನಾರಾಯಣನ ಸಂನಿಧಿಯಲ್ಲಿ" (ಸಾಲು ೮–೯) ಪ್ರಸಿದ್ಧಿಸಿತೆಂದು ಅಲ್ಲಿ ಉಕ್ತವಾಗಿದೆ.

ಈ ಸಾಕ್ಷ್ಯವನ್ನು ವಿಮರ್ಶಕರು ವಿಮರ್ಶಿಸಿದ್ದಾರೆ. ಅಚ್ಯುತರಾಯನ ಆಳಿಕೆಯ ಕಾಲದ (೧೫೨೯–೪೨) ಈ ಶಾಸನ ದೊರೆ ಮತ್ತು ಕವಿ ಇವರ ನಡುವೆ ಆಶ್ರಯಾಶ್ರಿತಭಾವ ಸಮಕಾಲಿಕತೆಗಳನ್ನು ಹೇಳಲಾರದು ಎನ್ನುವುದು ಬಹುಶಃ ಸರಿ. ಸೋದರ ಕೃಷ್ಣದೇವರಾಯನ (೧೫೦೯–೨೯) ಆಡಳಿತಾವಧಿಗೆ ಸ್ವಲ್ಪ ಹಿಂದೆ ಕವಿ ಯಿದ್ದನೆಂದು ಈ ಸಂಬಂಧದಲ್ಲಿ ಊಹಿಸಲಾಗಿದೆ. ಗದುಗಿನಂತಹ ಅಗ್ರಹಾರದಲ್ಲಿ, ಕುಮಾರವ್ಯಾಸನಂತಹ ದೊಡ್ಡ ಕವಿ ಭಾರತದಂತಹ ಜನಪ್ರಿಯ ಕಥಾವಸ್ತುವಿನ ಮಹಾಗ್ರಂಥವನ್ನು ರಚಿಸಿಯೂ ತನ್ನ ಭಕ್ತಿಸಂಪನ್ನ ಮಹನೀಯ ವ್ಯಕ್ತಿತ್ವದಿಂದಾಗಿಯೂ ೫೦–೧೦೦ ವರ್ಷಗಳೇಕೆ, ೧೦೦–೧೫೦ ವರ್ಷಗಳ ಹಿಂದಿನಿಂದಲೂ ಜನರ ಮನಸ್ಸಿನಲ್ಲಿ ಉಳಿದಿದ್ದರೆ, ಅದರಲ್ಲಿ ಆಶ್ಚರ್ಯವೇನಿಲ್ಲ. ಆಗ ಅದು ಸು. ೧೩೫೦–೧೪೦೦ ಎಂದಾಗಿ ಭಾಸ್ಕರ ಪೂರ್ವಕಾಲೀನತೆಯು ಸಾಕ್ಷ್ಯದೊಂದಿಗೆ ಹೊಂದಿಕೊಳ್ಳುತ್ತದೆ.

(iii) ವೀರಶೈವ ಗ್ರಂಥಗಳಲ್ಲಿ ಬಂದಿರುವ ಕವಿಯ ಚರಿತ್ರೆ :

ಅದೃಶ್ಯ ಕವಿಯ (ಸು. ೧೫೮೦) "ಪ್ರೌಢರಾಯನ ಕಾವ್ಯ", ಸಿದ್ಧ ನಂಜೇಶನ (ಸು. ೧೬೫೦) "ಗುರುರಾಜ ಚಾರಿತ್ರ" ಮತ್ತು "ರಾಘವಾಂಕ ಚಾರಿತ್ರ", ಶಾಂತಲಿಂಗ ದೇಶಿಕನ (೧೬೭೨) "ಭೈರವೇಶ್ವರ ಕಾವ್ಯದ ಕಥಾಮಣಿ ಸೂತ್ರರತ್ನಾಕರ", ಶಂಕರ ಕವಿಯ (೧೬೬೩) "ಚೋರಬಸವ ಚರಿತ್ರೆ" ಈ ಕೆಲವು ವೀರಶೈವ ಗ್ರಂಥಗಳಲ್ಲಿಯ ಕುಮಾರವ್ಯಾಸನ ವಿಚಾರ ಮತ್ತು ಕೆಲವು ಪರೋಕ್ಷ ಪ್ರಮಾಣಗಳನ್ನು ಆಧರಿಸಿ, ಆ ಕವಿಯ ಕಾಲನಿರ್ಣಯವನ್ನು ಮಾಡುವ ಪ್ರಯತ್ನಗಳು ನಡೆದಿವೆ.

ಚಾಮರಸನ "ಪ್ರಭುಲಿಂಗಲೀಲೆ"ಯ (ಸು. ೧೪೩೦) "ಸತ್ತವರ ಕಥೆಯಲ್ಲ...." ಎಂಬ ಮಾತು ಒಟ್ಟಾಗಿ ರಾಮಾಯಣ ಭಾರತಗಳನ್ನು ಲಕ್ಷಿಸಿ ಹೇಳಿದ್ದೇ, ಕುಮಾರವ್ಯಾಸ ಭಾರತವನ್ನು ಪರೋಕ್ಷವಾಗಿ ಕುರಿತದ್ದೇ ನಿಶ್ಚಯವಿಲ್ಲ. ಪ್ರಾಯಶಃ ಈ ಮಾತು ಹುಟ್ಟಿಸಿದ ಕುತೂಹಲ ಕಾರಣವಾಗಿ, ಸ್ವಮತ, ಸ್ವಮತೀಯರಾದ ಕವಿಗಳು ಮತ್ತು ಅವರ ಕೃತಿಗಳು ಅನ್ಯಮತ, ಅನ್ಯಮತೀಯರಾದ ಕವಿಗಳು ಮತ್ತು ಅವರ ಕೃತಿಗಳಿಗಿಂತ ಅಧಿಕವೆಂಬ ಹೆಗ್ಗಳಿಕೆಯನ್ನು ಸ್ಥಾಪಿಸುವ ಹುರುಡು ಕಾರಣವಾಗಿ, ಮೇಲೆ ಹೇಳಿದ ಗ್ರಂಥಗಳಲ್ಲಿಯ ಕುಮಾರವ್ಯಾಸನ ವಿಚಾರವಾದ ಕಥೆಗಳು ಹುಟ್ಟಿರುವುದು ಬಹಳ ಮಟ್ಟಿಗೆ ಸಂಭಾವ್ಯವಾದ್ದು. ಈ ಕಥೆಗಳಲ್ಲಿ ಉಕ್ತರಾದ ಹರಿಹರಾದ್ಯರಾದ ಕವಿಗಳು ಬೇರೆ ಬೇರೆ ಕಾಲಗಳಲ್ಲಿ ಇದ್ದರೆಂಬುದು ಈಗ ವಿಶದಪಟ್ಟಿದೆ; ಅಲ್ಲದೆ ಅವುಗಳಲ್ಲಿಯೇ ಪರಸ್ಪರ ವ್ಯತ್ಯಾಸಗಳೂ ವೈಪರೀತ್ಯಗಳೂ ಕಂಡುಬರುತ್ತವೆ. ಇಂಥ ಕಥೆಗಳು ಕನ್ನಡ ಸಾಹಿತ್ಯದಲ್ಲಿಯೇ ನೇಮಿಚಂದ್ರ–ಷಡಕ್ಷರಿ, ರುದ್ರಭಟ್ಟ–ಲಕ್ಷ್ಮೀಶ–ಷಡಕ್ಷರಿ ಈ ಕೆಲವರು ಕವಿಗಳ ವಿಷಯದಲ್ಲಿಯೂ ಕಂಡುಬರುತ್ತವೆ. ಒಂದು ಪಕ್ಷ, ಕವಿಚರಿತೆಕಾರರು ಭಾವಿಸುವಂತೆ, ಕುಮಾರವ್ಯಾಸ ಚಾಮರಸರು ಸಮಕಾಲೀನರೆಂದು ಇಟ್ಟುಕೊಂಡರೂ, ಅವರ ಬಾಂಧವ್ಯ ಸ್ಪರ್ಧೆಗಳು ಕೇವಲ ಕವಿಕಲ್ಪಿತವಿರಲೂ ಬಹುದು. ಸದ್ಯದಲ್ಲಿ ಕುಮಾರವ್ಯಾಸ ಚಾಮರಸನ ಸಮಕಾಲೀನನೋ, ಅದ್ಯತನ ಪೂರ್ವಿಕನೋ, ಪ್ರಾಚೀನನೋ ಹೇಗೆ ಎನ್ನುವುದನ್ನು ಮೇಲಿನ ವೀರಶೈವ ಗ್ರಂಥಗಳಿಂದ ಬೇರೆಯಾದ ಪ್ರಮಾಣಗಳನ್ನಾಶ್ರಯಿಸಿ ಗೊತ್ತುಮಾಡಬೇಕಾಗುತ್ತದೆ. ಚಾಮರಸನ ಸಮಕಾಲೀನರಾದ ಅನ್ಯವೀರಶೈವ ಕವಿಗಳು ಯಾರೂ ಇವರ ಸಂಬಂಧವನ್ನೂ ಸಮಕಾಲೀನತೆಗಳನ್ನೂ ಹೇಳದಿರುವುದು ಗಮನಾರ್ಹವಾದ ಸಂಗತಿ. ಆದ್ದರಿಂದ ಇವರ ಸಂಬಂಧವಿರಲಿ, ಸಮಕಾಲೀನತೆಯೇ ಸಂದಿಗ್ಧವಾದ್ದು. ಇವನ್ನು ಸಾಧಿಸುವ ವೀರಶೈವೇತರವಾದ ಪ್ರಮಾಣಗಳೂ ಸಹ ಯಾವುವೂ ಇರುವಂತಿಲ್ಲ ಎನ್ನುವುದರಿಂದಾಗಿ ಈ ಸಂದಿಗ್ಧತೆ ಇನ್ನೂ ಹೆಚ್ಚುತ್ತದೆ.

(iv) ಗ್ರಂಥದ ಅಂತರಸಾಕ್ಷ್ಯಗಳು :

ಕುಮಾರವ್ಯಾಸ ಭಾರತದ ಗ್ರಂಥಾಂತರ್ಗತ ಸಾಕ್ಷ್ಯಗಳನ್ನು ಸಂಗ್ರಹಿಸಿ,

ವಿಮರ್ಶಿಸಿ, ಕುಮಾರವ್ಯಾಸನ ಕಾಲನಿರ್ಣಯ ಮಾಡುವ ಪ್ರಯತ್ನಗಳು ನಡೆದಿವೆ. ವಿಮರ್ಶಕರು ರಾಜಕೀಯ, ಧಾರ್ಮಿಕ ಮತ್ತು ಸಾಂಸ್ಕೃತಿಕ ಪ್ರಾಮುಖ್ಯದ ಸಂದರ್ಭಗಳನ್ನೂ ಶಬ್ದಗಳನ್ನೂ ಅಂತಹ ಸಾಕ್ಷ್ಯಗಳನ್ನಾಗಿ ಗುರುತಿಸಿದ್ದಾರೆ. ಈ ದಿಕ್ಕಿನ ಪ್ರಯತ್ನದಲ್ಲಿ, ಸು. ೧೩೩೦-೫೦ ರಿಂದ ಸು. ೧೫೦೦ ರ ವರೆಗೆ ವಿವಿಧವಾಗಿ ಕುಮಾರವ್ಯಾಸನ ಕಾಲ ಸೂಚಿತವಾಗಿದೆ. ಒಬ್ಬರ ಸಾಕ್ಷ್ಯಗಳನ್ನೂ ಫಲಿತಗಳನ್ನೂ ಇನ್ನೊಬ್ಬರು ವಿಮರ್ಶಿಸಿ ದೌರ್ಬಲ್ಯಗಳನ್ನು ಭೇದಿಸಿದ್ದಾರೆ; ಹೊಸ ನೆಲೆಗಳಲ್ಲಿ ನಿಂತಿದ್ದಾರೆ. ಹೊಸ ಪ್ರಮಾಣಗಳ ಮಂಡನೆಯೂ ಗುಣದೋಷ ವಿಮರ್ಶೆಯೂ ನಡೆದಿವೆ. ಇನ್ನೂ ಕಾಲನಿಷ್ಕರ್ಷೆ ಸಾಧ್ಯವಾಗಿಲ್ಲ.

ಹೊಯ್ಸಳರು, ಸೇಉಣರು, ಬುದ್ಧಲಿಂಗಿಗಳು ಇತ್ಯಾದಿ ಸಂದರ್ಭಸಾಕ್ಷ್ಯಗಳು ಉಪಯುಕ್ತವಾದವು, ನಿಜ; ಆದರೆ ಈಗಾಗಲೇ ಭಾವಿಸಿರುವಂತೆ ಕವಿ ಆ ಸಂದರ್ಭಗಳ ಕಾಲದವನೂ ಆಗಿರಬಹುದು, ಅನಂತರದವನೂ ಆಗಿರಬಹುದು. ಇವುಗಳಲ್ಲಿ ಇತ್ತೀಚೆಯ ಸಾಕ್ಷ್ಯ, ಕಾಲದ ಕೆಳಗಡು ಆಗಬಹುದು; ಆದರೆ ನಿಶ್ಚಿತ ಕಾಲವನ್ನು ಸೂಚಿಸಲಾರದು. ಹೊಯ್ಸಳ-ಸೇಉಣರ ಪ್ರಸ್ತಾವವಿದೆ ಎನ್ನುವುದರಿಂದ, ಕವಿ ಆ ಕಾಲಕ್ಕೆ (ಸು. ೧೦೨೨-೧೩೪೬) ಈಚಿನವನು ಎಂದಾಗುವುದಲ್ಲದೆ, ಆದೇ ಕಾಲದಲ್ಲಿ ಜೀವಿಸಿದ್ದ ಎಂದು ಖಂಡಿತವಾಗಿ ಸ್ಥಾಪಿಸುವುದಾಗದು; ಜೀವಿಸಿರಲಾರ ಎಂದು ಇದರ ಅರ್ಥವಲ್ಲ; ಜೀವಿಸಿಯೇ ಇದ್ದ ಎಂಬುದಕ್ಕೆ ಆ ಪ್ರಮಾಣ ನಿರ್ಣಾಯಕ ಸ್ವರೂಪದ್ದಲ್ಲ ಎಂದರ್ಥ". ಉದಾಹರಣೆಗೆ, ಭೀಷ್ಮಪರ್ವದ ೪-೬೭ನೆಯ ಪದ್ಯವನ್ನೇ ನೋಡಬಹುದು. ಗುಜ್ಜರ, ಮಾಳವ ಮೊದಲಾದ ರಾವುತರ ಹೋರಾಟದ ವರ್ಣನೆ ಹೇಗೆ ಒಂದಕ್ಕಿಂತ ಒಂದು ಅತಿಶಯವೋ ಅಥವಾ ಅತಿಶಯವಲ್ಲವೋ ಹಾಗೆಯೇ ಸೇಉಣರಾಯ ರಾವುತರದು ಸಹ. ಇದರಿಂದ ಕವಿಗೆ ಸೇಉಣರೆಂಬವರು ಗೊತ್ತು ಎಂದು ಸಿದ್ಧವಾಗುವುದಲ್ಲದೆ ಮತ್ತೇನೂ ಸಿದ್ಧವಾಗುವುದಿಲ್ಲ. ಕವಿ ಅವರ ಕಾಲದವನಿರಬಹುದು, ಇಲ್ಲದಿರಬಹುದು; ಅವರನ್ನು ಕಂಡು ಬಲ್ಲವನಿರಬಹುದು, ಕಾಣದೆ ಕೇಳಿ ಬಲ್ಲವನೂ ಇರಬಹುದು.

ತುರುಕೋಪಪ್ಲವ, ವಿಜಯನಗರ ರಾಜ್ಯ, ಮಾಧವ-ಸಾಯಣರ ನೇತೃತ್ವದ ಬ್ರಾಹ್ಮಣವಿದ್ಯಾ ಪ್ರವರ್ತನೆ ಇತ್ಯಾದಿ ಉಲ್ಲೇಖಗಳ ಅಭಾವದಿಂದ ಕವಿ ಆ ಘಟನೆಗಳಿಗೆ ಮೊದಲೇ ಇದ್ದವನೆಂದು ನಿರ್ಣಯವಾಗುವುದಿಲ್ಲ. ಇವುಗಳ ಕಾಲದಲ್ಲೇ ಇದ್ದೂ, "ವರ್ತಮಾನ"ಕ್ಕಿಂತ "ಗತ"ದ ನಿರೂಪಣೆ ಕವಿಗೆ ಆಸಕ್ತಿಯ ವಿಷಯವಾಗಿರಬಹುದು. ಒಂದು ಸಂದರ್ಭವನ್ನು ಹೇಳುವ, ಬಿಡುವ ಸ್ವಾತಂತ್ರ್ಯ ಅಭಾವ ಕಾರಣವಾಗಿರಬಹುದು; ಪಾರಮಾರ್ಥಿಕ ದೃಷ್ಟಿ, ನಿರ್ಲಿಪ್ತತೆ, ರಾಜಾಶ್ರಯ ರಾಹಿತ್ಯ, ಕಥಾವಸ್ತು ವಿಶೇಷತೆ ಇವು ಮೂಲವಾದ ಔದಾಸೀನ್ಯ ಕಾರಣವಾಗಿರಲೂ ಬಹುದು. ಕವಿ ಈ ಘಟನೆಗಳಿಗಿಂತ ಈಚೆಯವನಾಗಿದ್ದರೆ, ಉಲ್ಲೇಖ ಅಸಂಭಾವ್ಯವೇ. ಕರ್ಣಾಟಕದ ಇತಿಹಾಸದಲ್ಲಿ ತುರುಕರ ಸ್ಥಾನಮಾನ ಬಹಮನಿ ರಾಜ್ಯದ ಉದಯ

ದೊಂದಿಗೆ ಹೆಚ್ಚಿದ ಕಾಲದಲ್ಲಿ ಕವಿಯಿದ್ದುದರಿಂದಲೇ ತುರುಷ್ಕ ಇತ್ಯಾದಿ ಶಬ್ದಗಳು ಉಚಿತ ಮನ್ನಣೆಯ ಸಂದರ್ಭಗಳಲ್ಲಿ ಕಾಣಿಸಿಕೊಂಡಿರಬಹುದು ಎಂದು ಯಾರಾದರೂ ಸಾಧಿಸಿದರೆ, ಹಾಗಲ್ಲವೆನ್ನುವುದು ಸುಲಭವೇ? "ಖುರಸಾಣ" (ಉದ್ಯೋಗ ೧೧–೨೨) ಶಬ್ದ ಬೇರೆ ಬೇರೆ ರೂಪಗಳಲ್ಲಿ ನಂಜುಂಡ, ಗೋವಿಂದ ವೈದ್ಯರ ಗ್ರಂಥಗಳಲ್ಲಿಯೂ ಬಂದಿದೆ; ಅದು ಯಾವಾಗ ಸಾಹಿತ್ಯ ಕ್ಷೇತ್ರವನ್ನು ಹೊಕ್ಕಿತು, ಹೇಳುವುದು ಕಷ್ಟ.

"ತಿಳಿಯ ಹೇಳುವೆ ಕೃಷ್ಣಕಥೆಯನು ...." ಪದ್ಯ ಬಹುಪಾಲು ಹಸ್ತಪ್ರತಿಗಳಲ್ಲಿ ಇಲ್ಲವೆನ್ನುವ ಮಾತಿರಲಿ, ಅಲ್ಲಿ "ಕೃಷ್ಣ ಮೆಚ್ಚಲಿಕೆ" ಎಂಬ ಭಾಗದಲ್ಲಿ ಕೃಷ್ಣದೇವರಾಯ ಅಥವಾ ಸೇಉಣ ಕೃಷ್ಣನನ್ನು ಉದ್ದೇಶಿಸಿದ ಶ್ಲೇಷೆಯುಂಟು ಎಂದು ನಿರ್ಧಾರವಾಗಿ ತಿಳಿಯುವುದು ಸಾಧ್ಯವೇ? "ಕೃಷ್ಣರಾಯ:" ಎಂಬ ಮಾತು ಕೃಷ್ಣದೇವರಾಯನನ್ನೇ ಏಕೆ ನೆನಪಿಸಬೇಕು? ಆತ್ಮೀಯತೆ ಗೌರವಗಳಿಂದ ಕವಿ ಕೃಷ್ಣನನ್ನೇ ಹಾಗೇಕೆ ಹೇಳಿರಬಾರದು? "ಕುರುರಾಯ" ಮೊದಲಾದೆಡೆಯೂ "ರಾಯ" ಶಬ್ದ ಸೇರಿದೆಯಲ್ಲ. ಹೀಗೆಯೇ "ದೇವ ನಿಮ್ಮಯ ಖಾತಿ ಪರಿಯಂತಾವು ...." ಪದ್ಯದಲ್ಲಿ "ದೇವಗಿರಿ" ಶಬ್ದದ ಪ್ರಯೋಗ ಸುರಗಿರಿಯನ್ನು ಹೇಗೋ ಹಾಗೆ ಸೇಉಣ ರಾಜಧಾನಿಯನ್ನೂ ವ್ಯಂಜಿಸುವುದೆಂಬುದು ಎಷ್ಟು ನಿಜ? "ಭಾಗವತ ಸಂಹಿತಾರ್ಥ"ದ ನಾರಾಯಣ ಕವಿ ಕುಮಾರವ್ಯಾಸನ ಗುರುವೆಂದು ತಿಳಿಯಲು ಆ ಕವಿ ಸು. ೧೪೫೦ರಲ್ಲಿದ್ದನೆಂಬ ಊಹೆಯೂ ಕುಮಾರವ್ಯಾಸ ತನ್ನನ್ನು ಯೋಗೀಂದ್ರನೆಂದು ಕರೆದುಕೊಂಡಿರುವುದೂ ಪ್ರಮಾಣವಾಗಲು ಸಮರ್ಥವಾಗಿವೆಯೇ? ಹಾಗೆಯೇ "ಗಜವೈಹಾಳಿಯುಲಿಯೋಗೀಂದ್ರ" ಎಂಬುದು "ಗಜವೇಂಟೆಕಾರ" ಬಿರುದಿನ ಪ್ರೌಢದೇವರಾಯನ ನೆನಪು ತರುವಷ್ಟು ಶಕ್ತವೇ?

ಇವೆಲ್ಲ ನೋಡಿದರೆ, ಸಂಗ್ರಹಿತವಾಗಿರುವ ಬಹುಪಾಲು ಅಂತರ ಸಾಕ್ಷ್ಯಗಳು ಕುಮಾರವ್ಯಾಸ ಕವಿಯ ಕಾಲವನ್ನು ನಿರ್ಣಯಿಸಲು ನಿರ್ವಿವಾದ ಸಾಕ್ಷ್ಯಗಳಾಗುವುದಕ್ಕೆ ಸಮರ್ಥವಾಗಿಲ್ಲವೆಂದು ತಿಳಿಯಬೇಕಾಗುವುದು. ಆದರೆ ಕೆಳಗಡುವನ್ನು ಗೊತ್ತುಮಾಡುವ ಸಾಕ್ಷ್ಯಗಳಾಗಿ, ಬಲ್ಲಾಳ ದಡ್ಡಿ (ಆದಿ. ೧೨–೧೧), ಪ್ರತಿಷ್ಠಾಚಾರ್ಯ (ಉದ್ಯೋಗ ೯–೮), ಸಾಹಣ ಸಮುದ್ರರು (ಉದ್ಯೋಗ ೧೧–೨೨), ಖುರಸಾಣ (ಉದ್ಯೋಗ ೧೧–೨೨), ಕಟಕಾಚಾರ್ಯರ (ದ್ರೋಣ ೧೩–೧೬; ಶಲ್ಯ ೧–೨೦)—ಇಂತಹ ಹೊಯ್ಸಳ-ಸೇಉಣ ಕಾಲೀನವೂ ಸ್ವಲ್ಪ ಸಮೀಪಕಾಲದವೂ ಆದ ಶಾಬ್ದಿಕ ಸಾಕ್ಷ್ಯಗಳು ಒದಗುತ್ತವೆಯೆನ್ನಬಹುದು. ಈ ಕೆಳಗಡುವನ್ನು ೧೨–೧೩ನೆಯ ಶತಮಾನವೆಂದು ತಿಳಿಯುವುದು ತಪ್ಪಲ್ಲ.

ಕುಮಾರವ್ಯಾಸ ಕವಿ ವ್ಯಾಸಭಾರತದ ಕಥೆ ಸನ್ನಿವೇಶಗಳನ್ನು ಆಶ್ರಯಿಸಿ ಕೃತಿರಚನೆ ಮಾಡಿದ್ದರೆ, ಕೆಲವು ಕಥಾಂಶಗಳೂ ಸನ್ನಿವೇಶಗಳೂ ವ್ಯಾಸಭಾರತದಲ್ಲಿ ಕಂಡುಬರುತ್ತಿಲ್ಲ ಎಂಬುದನ್ನು ಈಗಾಗಲೇ ಗಮನಿಸಲಾಗಿದೆ. ಅಂತಹ ಕಾವ್ಯಭಾಗಗಳನ್ನು ಪಂಪಭಾರತದಿಂದ ಗುರುತಿಸುವ ಕೆಲಸ ಕೆಲಮಟ್ಟಿಗೆ ಆಗಿದ್ದು, ಬೇರೆ ಮೂಲಗಳ

ಶೋಧನೆಯೂ ತೃಪ್ತಿಕರವಾಗಿ ನಡೆದರೆ, ಆಗ ಕವಿಯ ಕಾಲದ ಕೆಳಗಡುವನ್ನು ಗುರುತಿಸುವುದಕ್ಕೆ ಹೊಸ ಪ್ರಮಾಣಗಳು ದೊರೆಯುವ ಸಾಧ್ಯತೆಯಿದೆ. ಇದೊಂದು ಮಹತ್ತ್ವದ ಸಂಶೋಧನೆಯ ಕೆಲಸ.

(v) ಗ್ರಂಥದ ಭಾಷೆ ಶೈಲಿಗಳು :

ಕುಮಾರವ್ಯಾಸ ಭಾರತದ ಭಾಷೆ ಶೈಲಿಗಳು, ಆ ಕೃತಿಕರ್ತೃ ಅತಿಪ್ರಾಚೀನನೂ ಅಲ್ಲ, ಅರ್ವಾಚೀನನೂ ಅಲ್ಲ, ಮಧ್ಯಕಾಲದವನೆಂಬುದನ್ನು ಹೇಳುವಂತಿವೆ. ಆದರ ಕಾಲನಿರ್ಣಯಕ್ಕೆ, ಗ್ರಂಥದ ಮೂಲಪಾಠವನ್ನು ಗುರುತಿಸುವುದು ಒಂದು ಸಹಾಯಕ ಪ್ರಮಾಣವಾಗಿ ಒದಗಬಹುದಲ್ಲದೆ, ಅದೇ ನಿರ್ದುಷ್ಟ ಪ್ರಮಾಣವಲ್ಲ. ೧೩ನೆಯ ಶತಮಾನದಲ್ಲಿ ಲಿಖಿತವಾದ್ದೆಂಬ ವಿರಾಟಪರ್ವದ ಹಸ್ತಪ್ರತಿಯ ಕಾಲ ಸೂಚನೆ, ಈವರೆಗೆ ತಿಳಿದ ಕನ್ನಡ ಹಸ್ತಪ್ರತಿಗಳ ಹಾಗೂ ಕುಮಾರವ್ಯಾಸ ಭಾರತದ ಲಬ್ಧ ಹಸ್ತಪ್ರತಿಗಳ ಇತಿಹಾಸದ ದೃಷ್ಟಿಯಿಂದ ಸಂಶಯಾಸ್ಪದವಾಗಿ ತೋರುತ್ತದೆ.

ಕುಮಾರವ್ಯಾಸ ಸಮಗ್ರ ಕೃತಿರಚನೆಗೆ ಭಾಮಿನೀಷಟ್ಪದಿ ಬಳಸಿದ್ದಾನೆ. ಆತ ಕುಮಾರ ಪದ್ಮರಸ ಕುಮುದೇಂದುಗಳ ಕಾಲದಲ್ಲಿ ಇದ್ದಿರಲಾರ. ಭೀಮಕವಿ, ಮಲ್ಲಣ, ಭಾಸ್ಕರ, ಚಾಮರಸ ಈ ಈಚಿನ ೧೪-೧೫ನೆಯ ಶತಮಾನದ ಕವಿಗಳ ಕಾಲದಲ್ಲಿ ಯಾವಾಗಲೋ ಇದ್ದಿರಬೇಕು ಎಂಬುದನ್ನು ಅದು ಸೂಚಿಸುತ್ತದೆ. ಆತನ ಭಾಷಾಶೈಲಿಗಳ ಪಕ್ವತೆ, ಛಂದಃಪರಿಣತಿ ಇವು, ಆ ಮೊದಲಿನ ಷಟ್ಪದಿಕಾರರ ಭಾಷೆ ಶೈಲಿ ಛಂದಸ್ಸುಗಳ ಬೆಳೆವಣಿಗೆಯ ಫಲವಾಗಿ ಗೋಚರಿಸುತ್ತದೆ ಎನ್ನಬಹುದು. ಸು. ೧೩೫೦-೧೩೦೦ರಲ್ಲಿ ಕುಮಾರವ್ಯಾಸ ಭಾರತ ರಚಿತವಾದುದು ನಿಜವಾದರೆ, "ಬಸವ ಪುರಾಣ" (೧೩೬೯) ರಚಿತವಾಗುವ ವರೆಗೆ ಸಮಗ್ರ ಭಾಮಿನೀಷಟ್ಪದಿಯ ಕೃತಿ ಒಂದೇ ಒಂದು ಸಹ ಹುಟ್ಟಲಿಲ್ಲ ಎನ್ನುವುದು, ಕುಮಾರ ವಾಲ್ಮೀಕಿ, ತಿಮ್ಮಣ್ಣ ಕವಿಗಳ ಕಾಲದ ವರೆಗೆ (ಸು. ೧೫೦೦) ಒಬ್ಬನೇ ಒಬ್ಬ ಕವಿ ಕೂಡ ಕುಮಾರವ್ಯಾಸ ಸ್ಮರಿಸಲಿಲ್ಲ ಎನ್ನುವುದು—ಯೋಚಿಸಬೇಕಾದ ವಿಷಯವಾಗುತ್ತದೆ. ಈಗ ತಿಳಿದಿರುವಂತೆ ಉತ್ತರಕಾಲೀನ ಕವಿಗಳ ಮೇಲೆ ಈ ಕವಿಯ ಪ್ರಭಾವ ಗೋಚರಿಸುತ್ತಿರುವುದು ಭಾಸ್ಕರ, ಕುಮಾರ ವಾಲ್ಮೀಕಿ, ತಿಮ್ಮಣ್ಣ ಕವಿಗಳ ಕಾಲದಿಂದೀಚೆಗೆ; ಆ ಪ್ರಭಾವ ವಸ್ತು ರೀತಿಗಳ ಮೇಲೆ ಸಾಂದ್ರವಾಗಿಯೂ ಇದೆ; ಸು. ೧೪೦೦ರ ವರೆಗಿನ ಯಾವುದೇ ಕನ್ನಡ ಕೃತಿಯ ಮೇಲೆ "ಕುಮಾರವ್ಯಾಸ ಭಾರತ"ದ ಪ್ರಭಾವವಾಗಿದೆಯೆಂದು ವಿದ್ವಾಂಸರು ಗುರುತಿಸಿರುವುದು ಈವರೆಗೆ ತಿಳಿದುಬಂದಿಲ್ಲ.

ಈ ಸಂಗತಿಗಳನ್ನು ಗಮನಿಸಿದರೆ, ಭಾಗವತಧರ್ಮ ಭಕ್ತಿಪಂಥಗಳಿಂದ ಪ್ರೇರಿತರಾಗಿ, ರಾಮಾಯಣ ಭಾರತ ಭಾಗವತ ವಸ್ತುಗಳನ್ನಾಶ್ರಯಿಸಿ ಕೃತಿರಚನೆ ಮಾಡಲು ಬ್ರಾಹ್ಮಣ ಕವಿಗಳು ತರತರವಾಗಿ ಕಾಣಿಸಿಕೊಂಡ ಕಾಲದಲ್ಲಿ, ಎಂದರೆ ಸು. ೧೩೫೦ರ ತರುವಾಯದಲ್ಲಿ ಈ ಕವಿಯೂ ಕಾಣಿಸಿಕೊಂಡಿರಬಹುದು. "ಮಹಾ

ಭಾರತ ತಾತ್ಪರ್ಯ ನಿರ್ಣಯ"ದ ಪ್ರಭಾವ ಕುಮಾರವ್ಯಾಸ ಭಾರತದಲ್ಲಿ ಕಂಡು ಬರುತ್ತದೆಯೆಂದು ಕೆಲವರು ಹೇಳುವುದು ನಿಜವಾದರೆ, ಈ ಕವಿಯು ಸು. ೧೩೦೦ರ ಅನಂತರ ಕಾಲದಲ್ಲಿದ್ದನೆಂಬುದು ವಿದಿತವಾಗುತ್ತದೆ.

(vi) ಕೋಳಿವಾಡದ ಕಾಗದ ಪತ್ರಗಳಲ್ಲಿ ಕವಿಯ ವಿಚಾರ:

ವಂಶದವರ ಉಲ್ಲೇಖವುಂಟೆಂಬ ಇವು ಆಧಾರಪ್ರಮಾಣವಾಗಲಾರವು ಎಂದು ತಿಳಿಯಲು ಹಲವು ಕಾರಣಗಳಿವೆ: ಇವುಗಳಲ್ಲಿ ಕುಮಾರವ್ಯಾಸನ ಇಲ್ಲವೆ ಅವನ ಕೃತಿಯ ಉಲ್ಲೇಖವಿಲ್ಲ. ಪ್ರಕಟವಾಗಿರುವಷ್ಟು ಭಾಗದ ಭಾಷೆ ಶೈಲಿಗಳನ್ನು ನೋಡಿದರೆ, ಇವು ತೀರ ಆಧುನಿಕವಾಗಿವೆ; ಶಕ ಶೇದಿ ಮಾತ್ರ ೧೬ನೆಯ ಶತಮಾನದ ಪೂರ್ವಾವಧಿಯಷ್ಟು ಪ್ರಾಚೀನ ಕಾಲದ್ದಾಗಿದೆ. ೧೫೬೩ರ ಕೋಳಿವಾಡ ಶಾಸನದಲ್ಲಿ ಸಹ ಕವಿಯ ಹೆಸರಾಗಲಿ, ಕೃತಿಯ ಹೆಸರಾಗಲಿ ಇಲ್ಲ. ಇವೆರಡನ್ನೂ ಸಮನ್ವಯಿಸಿ ವಿಮರ್ಶಿಸುವುದಕ್ಕೆ ಪ್ರಬಲ ಆಧಾರಗಳಿಲ್ಲ. ಅಲ್ಲದೆ ಈ ಸಂಬಂಧದಲ್ಲಿ ತಲೆಮಾರಿನ ಎಣಿಕೆಗೆ ತುಂಬ ಬೆಲೆ ಕೊಟ್ಟಿದೆ. ವ್ಯಕ್ತಿ ಸಂದರ್ಭಗಳನ್ನು ಗುರುತಿಸುವುದರಲ್ಲಿ, ವಿಮರ್ಶಕರ ನಿರೂಪಣೆಗಳಲ್ಲಿ ಗೊಂದಲವೇರ್ಪಟ್ಟಿದೆ, ತಪ್ಪುಗಳಾಗಿವೆ. ಕವಿ ಬೇರೆ ಬೇರೆ ಕಾಲದ ವಿಜಯನಗರದ ದೊರೆಗಳ ಅವಧಿಗೆ ಸೇರಿದವನೆಂದು ತಿಳಿಯುವಂತಾಗಿದೆ.

ಸದ್ಯದ ನಿಲವು: ಕುಮಾರವ್ಯಾಸನು ಭಾಸ್ಕರ ತಿಮ್ಮಣ್ಣ ಕವಿಗಳಿಗೆ ಹಿಂದೆ ಇದ್ದವನು. ಭಾಸ್ಕರನ "ಜೀವಂಧರ ಚರಿತೆ"ಯ ರಚನಾ ಕಾಲವಾದ ೧೪೨೪ರ ಮೊದಲು ಅವನು ಜೀವಿಸಿದ್ದು, ಕೃತಿರಚನೆ ಮಾಡಿದನು. ಎಷ್ಟು ಹಿಂದೆ ಜೀವಿಸಿದ್ದನೆಂದು ತಿಳಿಯುವುದಕ್ಕೆ ನಿರ್ಣಾಯಕ ಪ್ರಮಾಣಗಳ ಅಭಾವವಿದೆ. ಪ್ರಾಯಃ ಹೊಯ್ಸಳರೂ ಸೇಉಣರೂ ಕನ್ನಡ ನಾಡನ್ನು ಆಳಿ ಅಳಿದ ಕಾಲದಿಂದೀಚೆಗೆ, ಎಂದರೆ ಸು. ೧೩೩೦-೪೦ ರಿಂದೀಚೆಗೆ, ಹರಿದಾಸರಿಂದ ಉಗಮಗೊಂಡ ಭಕ್ತಿಪಂಥದ ಆರಂಭ ಕಾಲಕ್ಕೆ, ಎಂದರೆ ಸು. ೧೪೦೦ಕ್ಕೆ ಸ್ವಲ್ಪ ಮೊದಲು, ಕುಮಾರವ್ಯಾಸ ಜೀವಿಸಿದ್ದು, ಕೃತಿರಚನೆ ಮಾಡಿರುವುದು ಸಂಭಾವ್ಯವಾಗಿ ತೋರುತ್ತದೆ. ಈಗ ಪ್ರಚಲಿತವಾಗಿರುವ ಅಭಿಪ್ರಾಯವನ್ನು ಮನ್ನಿಸಿ, ಕವಿಯ ಕಾಲವನ್ನು ಸು. ೧೪೦೦ ಎಂದು ಭಾವಿಸಬಹುದಾಗಿದೆ. ಆದರೆ ಈ ಕವಿಯ ಜೀವಿತಾವಧಿ ಕೃತಿರಚನೆಯ ಕಾಲಗಳು ಸು. ೧೩೫೦-೧೪೦೦ರ ನಡುವೆ ಎಂದು ಬಲುಮಟ್ಟಿಗೆ ತೋರುತ್ತದೆ.

ಕವಿಯ ವೈಯಕ್ತಿಕ ಚರಿತ್ರೆ

ಕುಮಾರವ್ಯಾಸ ಭಾರತದ ಪರ್ವಾಂತ ಗದ್ಯದಿಂದ ಗ್ರಂಥಕರ್ತೃ "ಕುಮಾರವ್ಯಾಸ ಯೋಗೀಂದ್ರ"ನೆಂದು ತಿಳಿಯುವುದು. ಪ್ರಚಲಿತ ಗ್ರಂಥಪಾಠದಂತೆ ಕುಮಾರವ್ಯಾಸ ಭಾರತ ಆದಿಪರ್ವದ ಪೀಠಿಕಾ ಸಂಧಿಯ "ವೀರ ನಾರಾಯಣನೆ ಕವಿ ಲಿಪಿ। ಕಾರ ಕುವರವ್ಯಾಸ", "ಶುಕರೂಪನಲ್ಲವೆ। ಕುಣಿಸಿ ನಗನೇ ಕವಿ ಕುಮಾರವ್ಯಾಸ

ನುಳಿದವರ", "ಕಾವ್ಯಕೆ। ಗುರುವೆನಲು ರಚಿಸಿದ ಕುವರಾರವ್ಯಾಸ ಭಾರತವ" ಎಂಬ ಪದ್ಯಭಾಗಗಳಿಂದಲೂ (೧-೭, ೯.೭, ೧೯) ಕುವರಾರವ್ಯಾಸ ಭಾರತ ಗದಾಪರ್ವದ ಅಂತ್ಯಭಾಗದಲ್ಲಿಯ "ಕವಿ ಕುವರಾರವ್ಯಾಸ ಸೂಕ್ತದ। ಸವೆಯದವ್ಯತವನೊಲಿದೊಲಿದು ...." ಎಂಬ ಇನ್ನೊಂದು ಪದ್ಯಭಾಗದಿಂದಲೂ (೧೩-೧೬) ಕವಿಯ ಹೆಸರು ಕುವರಾರವ್ಯಾಸನೆಂದಿರುವುದು ಸ್ಪಷ್ಟವಾಗಿದೆ. "ಯೋಗೀಂದ್ರ" ಎಂಬುದು ಕವಿಯು ಯತಿಯಾಗಿದ್ದುದನ್ನೋ ಅವನ ಅಧ್ಯಾತ್ಮ ಪ್ರವೃತ್ತಿಯನ್ನೋ ಸೂಚಿಸುವ ಒಂದು ವಿಶೇಷಣವೆಂದು ಊಹಿಸಬಹುದಾಗಿದೆ.

ಕುವರಾರವ್ಯಾಸ ಎನ್ನುವುದು ನಿಜನಾಮವಾಗಿರಲಾರದು. ಪಂಪನ ಮೇಲಿನ ಗೌರವಾದರಗಳಿಂದ ನಾಗಚಂದ್ರನು ತನ್ನನ್ನು "ಅಭಿನವ ಪಂಪ" ಎಂದು ಕರೆದುಕೊಂಡಂತೆ, ವ್ಯಾಸರ ಮೇಲಿನ ಗೌರವಾದರಗಳಿಂದ ಅಥವಾ ಆತ್ಮಪ್ರತ್ಯಯಸ್ಫೂರ್ತವಾದ ಉತ್ಸಾಹದಿಂದ ತನ್ನನ್ನು ಈ ಕನ್ನಡ ಭಾರತದ ಕರ್ತೃ "ಕುವರಾರವ್ಯಾಸ" ಎಂದು ಕರೆದುಕೊಂಡಿರಬಹುದು. ಈ ಬಗ್ಗೆಯೂ ಕೆಲವರು ಚರ್ಚಿಸಿದ್ದಾರೆ.

ಕುವರಾರವ್ಯಾಸ ಎಂಬುದು ಕೃತಿ ರಚನಾವಸರದಲ್ಲಿ ಕವಿಯಿಟ್ಟುಕೊಂಡ ಕಾವ್ಯನಾಮ ಅಥವಾ ಬಿರುದಿನಂಥ ಹೆಸರಾಗಿರಬೇಕು, ನಿಜನಾಮವಾಗಿರಲಾರದು ಎಂದು ತಿಳಿದರೆ ಪ್ರಾಯಃ ತಪ್ಪಾಗಲಾರದು. ಈಚಿನ ಎಲ್ಲ ಕವಿಗಳೂ ಅಚ್ಯುತರಾಯನ ೧೫೩೯ರ ಗದುಗು ಶಾಸನವೂ ಕವಿಯ ಹೆಸರನ್ನು ಕುವರಾರವ್ಯಾಸನೆಂದೇ ಗುರುತಿಸಿರುವುದು ಕಾಣುತ್ತದೆ.

ಕವಿ ಖ್ಯಾತನಾಗಿರುವುದು ಕುವರಾರವ್ಯಾಸನೆಂದೇ ನಿಜ; ಆತನ ನಿಜವಾದ ಹೆಸರನ್ನು ತಿಳಿಯುವುದು ಸಾಧ್ಯವೇ? ಕೃತಿಯಲ್ಲಿ ಎಲ್ಲಿಯೂ ಕವಿ ತನ್ನ ನಿಜ ನಾಮವನ್ನು ಹೇಳಿಕೊಂಡಿಲ್ಲ, ಅಡಗಿಸಿಯೂ ಇಟ್ಟಿಲ್ಲ. ಹಾಗೆ ಹೆಸರನ್ನು ಮೆರಸಿ ಲೌಕಿಕಪ್ರತಿಷ್ಠೆಯನ್ನು ಹೆಚ್ಚಿಸಿಕೊಳ್ಳಲು ಈ ಕೃತಿಕಾರ ಒಲ್ಲದೆ ಹೋದುದು ಸಹ ಸಾಹಿತ್ಯಲೋಕದ ಒಂದು ವಿಶೇಷವೇ. ಈ ಕವಿಯ ಹೆಸರು ನಾರಣಪ್ಪನೆಂದೂ ಈತ ಗದುಗಿನಲ್ಲಿದ್ದುದರಿಂದ ಗದುಗಿನ ನಾರಣಪ್ಪನೆಂದು ಕರೆಯಲ್ಪಡುತ್ತಿದ್ದನೆಂದೂ ಕೆಲವರು ಹೇಳುತ್ತಾರೆ. ಇದಕ್ಕೆ ಸ್ಥಳೀಯ ಪ್ರವಾದ, ಪ್ರತೀತಿ ಆಧಾರವಲ್ಲದೆ ಅನ್ಯ ಸಾಕ್ಷ್ಯಗಳೇನೂ ಇಲ್ಲವೆಂದೇ ತೋರುತ್ತದೆ.

ಕೃತಿಯಿಂದ ತಿಳಿದು ಬರುವುದು ಕವಿಯ ಹೆಸರು ಮತ್ತು ಆತ ಗದುಗಿನ ವೀರ ನಾರಾಯಣ ಸ್ವಾಮಿಯ ಭಕ್ತನಾಗಿದ್ದನು ಎಂಬುದು. ಕವಿಯ ತಂದೆ ತಾಯಿಗಳು, ಗುರು ಯಾರ ಹೆಸರೂ ಅಲ್ಲಿ ಉಕ್ತವಾಗಿಲ್ಲ. ಕುವರಾರವ್ಯಾಸ ಭಾರತದ ಆದಿಪರ್ವ ೧-೧, ಕುವರಾರವ್ಯಾಸ ಭಾರತದ ಗದಾಪರ್ವ ೧೩-೧೭, ಪರ್ವಾಂತ ಗದ್ಯ ಇವುಗಳಿಂದ, ಕೆಲವು ಸಂಧ್ಯಂತ ಪದ್ಯಗಳಿಂದ, ಕುವರಾರವ್ಯಾಸಕವಿ ಗದುಗಿನ ವೀರ ನಾರಾಯಣ ಸ್ವಾಮಿಯ ಭಕ್ತನೆಂಬುದು ವಿದಿತವಾಗುತ್ತದೆ. ಇದರಿಂದ ಅವನು ಗದುಗಿನಲ್ಲಿಯೇ ನೆಲಸಿದ್ದನೆಂದೂ ಅಲ್ಲಿಯೇ ದೇವತಾಸನ್ನಿಧಿಯಲ್ಲಿ ಕೃತಿರಚನೆ

ಮಾಡಿದನೆಂದೂ ಸಾಮಾನ್ಯವಾಗಿ ಊಹಿಸಬಹುದು. ಈ ಊಹೆ ಪ್ರಚಲಿತವಾಗಿಯೂ ಇದೆ. ಆದರೆ ಈ ಊಹೆಗೆ ಕೃತಿಯನ್ನೇ ಆಶ್ರಯಿಸಿದರೆ, ನಿಶ್ಚಿತ ಪ್ರಮಾಣಗಳೇನೂ ಇರುವಂತಿಲ್ಲ. ಗದುಗು ವೀರನಾರಾಯಣ ಸ್ವಾಮಿಯ ಭಕ್ತನಾದ ಕುಮಾರವ್ಯಾಸ ಬೇರೆಲ್ಲಿಯೋ ಇದ್ದು, ಕೃತಿ ರಚಿಸಿ, ತನ್ನ ಇಷ್ಟದೈವಕ್ಕೆ ಅದನ್ನು ಅಂಕಿತಮಾಡಿರುವುದು ಸಾಧ್ಯವಿಲ್ಲವೇ ಎಂದು ಪ್ರಶ್ನಿಸಿದರೆ, ಅದನ್ನು ಅಲ್ಲಗಳೆಯುವುದಕ್ಕೆ ಕೃತಿಯಲ್ಲಿಯೇ ಏನಾದರೂ ಆಧಾರವಿರುವಂತೆ ತೋರದು. ಆದರೆ ಕುಮಾರವ್ಯಾಸನ ಉಲ್ಲೇಖವಿರುವ ಅಚ್ಯುತರಾಯನ ೧೫೩೯ರ ಶಾಸನ ಗದುಗಿನ ವೀರನಾರಾಯಣ ಸ್ವಾಮಿಯ ದೇವಾಲಯದಲ್ಲಿ ದೊರೆತಿರುವುದರಿಂದ, ಈ ಕವಿ ಆ ಸ್ಥಳದಲ್ಲಿಯೇ ಜೀವಿಸಿದ್ದಿರಬಹುದಾದ್ದು ಸಂಭವನೀಯವಿದೆ. ಕೆಲವರು ಕುಮಾರವ್ಯಾಸ ಗದುಗು ತಾಲ್ಲೂಕು ಕೋಳಿವಾಡದವನೆಂದು ಹೇಳುತ್ತಾರೆ; ಆ ಊರಿನ ಕರಣಿಕರ ಅಥವಾ ಶಾನುಭೋಗರ ಮನೆತನಕ್ಕೆ ಆತ ಸೇರಿದವನೆಂಬ ಪ್ರತೀತಿಯನ್ನಾಧರಿಸಿದ ತಿಳುವಳಿಕೆಯಿದು. ಕೃತಿಯಲ್ಲಿ ತನ್ನ ಹೆಸರು, ವಂಶ, ಆಶ್ರಯ ಇತ್ಯಾದಿಗಳೇನನ್ನೂ ಹೇಳದಿರುವುದು, ಯೋಗೀಂದ್ರನೆಂದು ತನ್ನನ್ನು ಕರೆದುಕೊಂಡಿರುವುದು—ಇವನ್ನು ನೋಡಿದರೆ, ಕೃತಿರಚನೆಯ ಕಾಲಕ್ಕೆ ಆತನು ವಿರಕ್ತನೋ ಯತಿಯೋ ಆಗಿದ್ದುದು ಬಹಳ ಮಟ್ಟಿಗೆ ಸಾಧ್ಯವೆಂದು ತೋರುತ್ತದೆ.

ಕುಮಾರವ್ಯಾಸನ ಜೀವನ, ವಿದ್ಯೆ, ಸಂಸ್ಕಾರಗಳು ಮತ್ತು ಕೃತಿರಚನೆ—ಇವುಗಳ ಹಿನ್ನೆಲೆಯಲ್ಲಿ ಕೆಲವು ಐತಿಹ್ಯಗಳು ಪ್ರಚಲಿತವಾಗಿವೆ. ಇವನ್ನು ಕುರಿತು ಬರೆದಿರುವವರು, ಇವು ಗದುಗು ಮತ್ತು ಸುತ್ತಮುತ್ತ ಪ್ರಚಲಿತವಾಗಿವೆಯೆಂದು ತಿಳಿಸಿದ್ದಾರೆ. ಈ ಅಶ್ವತ್ಥಾಮ ಸಂದರ್ಶನ ವೃತ್ತಾಂತವೇ ಆದಿಯಾದ ಐತಿಹ್ಯಗಳ ಸೃಷ್ಟಿಯ ಹಿನ್ನೆಲೆಯಲ್ಲಿ, ಈಗಾಗಲೇ ಊಹಿಸಿರುವಂತೆ "ಕನ್ನಡ ಮಹಾಭಾರತದಂಥ ಬೃಹತ್ಕಾವ್ಯ ಹೊರಹೊಮ್ಮಲು ದೈವಾನುಗ್ರಹ ಅಗತ್ಯ" ಎಂಬ ದೃಷ್ಟಿಯಿದೆ. ಕುಮಾರವ್ಯಾಸ ಭಾರತದಂತಹ ವಿಸ್ತಾರವೂ ಘನವೂ ಆದ ಕೃತಿ ಭಗವದನುಗ್ರಹ, ಗುರುಪ್ರೇರಣೆ, ಅಲೌಕಿಕ ಸಂದರ್ಭದ ಸಂಘಟನೆ ಇವುಗಳಿಂದ ಸಾಧ್ಯವಾಗಿರಬೇಕಲ್ಲದೆ, ಮನುಷ್ಯಮಾತ್ರನಾದ ಕವಿಯ ಶಕ್ತಿಯಿಂದ ಆಗಿರಲಾರದು ಎಂಬ ನಂಬುಗೆ ಅವುಗಳ ಹುಟ್ಟಿಗೆ ಕಾರಣವೆಂದು ಊಹಿಸಬಹುದಾಗಿದೆ. ಇವುಗಳಿಗೆ ವಾಸ್ತವಿಕತೆಯ ಮೌಲ್ಯವನ್ನು ಕೊಡದೆ, ಸಾಂಕೇತಿಕ ಮೌಲ್ಯವನ್ನು ಕೊಡುವುದು ಅಪೇಕ್ಷಣೀಯ.

ದಿಟವಾಗಿ ಕುಮಾರವ್ಯಾಸ ಅನಭಿಜ್ಞನಲ್ಲ, ವಿದ್ಯಾವಂತ; ಬಹುಶ್ರುತನಾದ ವಿದ್ವಾಂಸ. ಇದನ್ನು ವಿದ್ವಾಂಸರು ಈಗಾಗಲೇ ಗುರುತಿಸಿದ್ದಾರೆ. ಆತನು ಸ್ವತಂತ್ರವಾಗಿ ಸಂಸ್ಕೃತ ಸಾಹಿತ್ಯದ ವೇದೋಪನಿಷತ್ತುಗಳು, ಪುರಾಣಗಳು, ಸ್ಮೃತಿಗ್ರಂಥಗಳು, ಕಾವ್ಯಗಳು, ನಾಟಕಗಳು ಮೊದಲಾದುವುಗಳನ್ನು ಅಭ್ಯಾಸ ಮಾಡಿದ್ದವನು, ವಿವಿಧ ಶಾಸ್ತ್ರ ಮತ್ತು ಲಕ್ಷಣ ಗ್ರಂಥಗಳ ಪರಿಚಯ ಪಡೆದಿದ್ದವನು ಎಂಬುದಾಗಿ ಸಾಧಾರವಾಗಿ ತಿಳಿಯಲಾಗಿದೆ. ಅಲ್ಲದೆ ಪ್ರಾಚೀನ ಕನ್ನಡ ಸಾಹಿತ್ಯದ ಉತ್ಕೃಷ್ಟ

ಭಾಗಗಳನ್ನು ಹೃದಯಂಗಮವಾಗಿ ಓದಿಕೊಂಡಿದ್ದನೆಂಬುದರಲ್ಲಿಯೂ ಸಂದೇಹವಿಲ್ಲ. ಈ ವಿಷಯದಲ್ಲಿ ವಿದ್ವಾಂಸರ ಹೇಳಿಕೆಗಳಲ್ಲಿಯ ಕೆಲಮಟ್ಟಿನ ಅತ್ಯುಕ್ತಿಯನ್ನು ನಾವು ಅರ್ಥಮಾಡಿಕೊಳ್ಳಬಹುದು. ಆದರೆ ಕುಮಾರವ್ಯಾಸನಿಗಿದ್ದ ವಸ್ತು ಸಂಗತಿಗಳ ವಿಜ್ಞತೆ ಅವನ ವೈದುಷ್ಯ ಲೋಕಾನುಭವಗಳಿಗೆ ಹಿಡಿದ ಕನ್ನಡಿಯೆಂಬುದು ನಿಜ. ಇಷ್ಟು ಮಾತ್ರವಲ್ಲದೆ, ಅವನ ಭಾಷಾಜ್ಞಾನ, ಛಂದಸ್ಸಿದ್ಧಿ, ಸಾಹಿತ್ಯಸತ್ತ್ವದ ಪರಿಪಾಕಗಳು ಉತ್ಕೃಷ್ಟರೀತಿಯವು ಎಂಬುದನ್ನು ನೆನೆದರೆ, ಅವನಲ್ಲಿ ಪ್ರತಿಭೆ ಪಾಂಡಿತ್ಯಗಳು ಸಮರಸವಾಗಿ ಮೇಳವಿಸಿದ್ದುವೆಂದು ತಿಳಿಯುತ್ತದೆ.

ಕವಿಯ ಮತ ಒಂದು ಜಟಿಲವಾದ ಜಿಜ್ಞಾಸೆಯ ವಿಚಾರವಾಗಿ, ವಿದ್ವಾಂಸರ ನಡುವೆ ದೀರ್ಘಚರ್ಚೆಗಳು ನಡೆದಿವೆ, ನಡೆಯುತ್ತಿವೆ. ಕವಿಯ ಮತ ಸಂಪ್ರದಾಯಗಳು ಯಾವುವು ಎಂಬುದನ್ನು ತಿಳಿಯುವುದಕ್ಕೆ ಕೃತಿಯೊಳಗಿನ ಹಾಗೂ ಕೋಳಿವಾಡದ ಕಾಗದ ಪತ್ರಗಳ ಮತ್ತು ಶಾಸನದ ಸಾಕ್ಷ್ಯಗಳನ್ನು ಬಿಡಿಯಾಗಿ ಮತ್ತು ಇಡಿಯಾಗಿ ಪರಿಶೀಲಿಸಿರುವುದು ಕಾಣುತ್ತದೆ. ವಿಮರ್ಶೆಯಿಂದ ಖಂಡನೆ ಮಂಡನೆಗಳು ನಡೆದಿವೆಯಲ್ಲದೆ, ಎಲ್ಲರಿಗೂ ಒಪ್ಪಿತವಾದ ನೆಲೆ ಇನ್ನೂ ಸಿಕ್ಕಿಲ್ಲವೆಂಸೇ ಹೇಳಬೇಕಾಗಿದೆ.

ಕುಮಾರವ್ಯಾಸ ಬ್ರಾಹ್ಮಣಕವಿಯೆಂಬುದು ಮುಖ್ಯವಾಗಿ ಬ್ರಾಹ್ಮಣಕವಿಗಳೇ ಅವನನ್ನು ಸ್ಮರಿಸುವುದರಿಂದಲೂ ಪ್ರಾಯಃ ಅನ್ಯಮತೀಯರಾರೂ ಅವನನ್ನು ಹೆಸರಿಸಿಲ್ಲದಿರುವುದರಿಂದಲೂ ವಿಶದವಾಗುತ್ತದೆ. ದ್ವೈತಿಯೋ ಅದ್ವೈತಿಯೋ ಎನ್ನುವ ವಿಷಯದಲ್ಲಿ ಹೆಚ್ಚಿನ ಭಿನ್ನಾಭಿಪ್ರಾಯಗಳಿವೆ; ಶೈವನೇ ವೈಷ್ಣವನೇ ಎನ್ನುವುದು ದೊಡ್ಡ ಸಮಸ್ಯೆಯಾಗಿಲ್ಲ. ದ್ವೈತಿಯೆಂದು ತಿಳಿಯಲು ಯಾವ ಆಧಾರಗಳೂ ಇಲ್ಲವೆಂದೂ ಪ್ರತಿಬಂಧಕವಾದ ಆಧಾರಗಳುಂಟೆಂದೂ ಕೆಲವರು ವಾದಿಸಿದ್ದಾರೆ. ಹೀಗೆ ಹೇಳಿರುವವರೇ ಹೆಚ್ಚು. ದ್ವೈತಿಯೆಂದು ತಿಳಿಯುವುದಕ್ಕೆ ಸಾಧಕಗಳೆಂದು ಉದ್ಧರಿಸಿರುವ ಬಹುಪಾಲು ಗ್ರಂಥಸಾಕ್ಷ್ಯಗಳು ಪ್ರಚಲಿತ ಪದ್ಯಪಾಠಗಳಲ್ಲಿಯೂ ಪ್ರಾಚೀನವಾದ ಹೆಚ್ಚಿನ ಹಸ್ತಪ್ರತಿಗಳಲ್ಲಿಯೂ ಕಂಡುಬರುವಂತೆ ತೋರುವುದಿಲ್ಲವಾದ್ದರಿಂದ ಅವು ಪ್ರಕ್ಷೇಪಗಳಾಗಿ ಸೇರಿರುವ ಸಾಧ್ಯತೆ ಹೆಚ್ಚಾಗಿದೆ. ಇಂಥ ಪ್ರಕ್ಷೇಪಗಳನ್ನು ಅವಲಂಬಿಸಿ ಮಾಡಿರುವ ಮತನಿರ್ಣಯ ಫಲಕಾರಿಯಾಗದೆಂಬುದು ತಿಳಿದೇ ಇದೆ. ಸೈದ್ಧಾಂತಿಕವಾಗಿಯೂ ದ್ವೈತಮತದ ಮುಖ್ಯ ಪ್ರಮೇಯಗಳಿಗೆ ಕೃತಿಯಲ್ಲಿ ಪ್ರಾಶಸ್ತ್ಯವಿಲ್ಲ.

ಕವಿ ವಿಶಿಷ್ಟಾದ್ವೈತಿಯೆಂಬ ವಾದ ಪಕ್ಷವಾಗಿ ಪುರಸ್ಕೃತವಾಗಿಲ್ಲ. ಕೃತಿಯಲ್ಲಿ ಉಭಯ ವೇದಾಂತದ ಶಾಸ್ತ್ರಪರಿಕ್ರಮವಿಲ್ಲ. ಬ್ರಹ್ಮನ ಹಾಗೆ ಜಗತ್ತು ಸತ್ಯವೆಂಬ ದಾರ್ಶನಿಕ ದೃಷ್ಟಿಯೂ ಇಲ್ಲ; ಶುದ್ಧ ಸತ್ತ್ವಮಯವೂ ನಿತ್ಯವೂ ಆದ ವೈಕುಂಠವೊಂದು ಇದೆಯೆಂಬ ಕಲ್ಪನೆಯಿಲ್ಲ. ಹೀಗೆಯೇ ಕವಿ ನಾಥಪಂಥದವನೆಂಬ ಸೂಚನೆ ಸಹ ದುರ್ಬಲವಾದ್ದು. ಇದಕ್ಕೆ ಆಧಾರವಾದ "ಅಭಂಗ" ಶಬ್ದಕ್ಕೆ (ಕುಮಾರವ್ಯಾಸ

ಭಾರತ ಆದಿಪರ್ವ ೧೯–೩೪; ಕುಮಾರವ್ಯಾಸ ಭಾರತ ಭೀಷ್ಮಪರ್ವ ೬–೪೪) ಕೃತಿಯ ಸಂದರ್ಭದಲ್ಲಿ ಓವಿಯ ಅಭಂಗಗಳ ಸಂಬಂಧವೋ ಪ್ರಭಾವವೋ ಉಂಟೆಂದು ನಿಶ್ಚಯವಾಗಿ ತಿಳಿಯುವುದಕ್ಕಾಗದು. "ಬಸವ ಪುರಾಣ" (೫–೪೪) ಮೊದಲಾದೆಡೆಗಳಲ್ಲಿ ಬಂದಿರುವ ಹಾಗೆ ಆ ಶಬ್ದದ ಸಾಮಾನ್ಯಾರ್ಥದ ಅನ್ವಯವೇ ಆಯಾ ಸಂದರ್ಭಗಳಿಗೆ ಸಾಕು. ಈಗಾಗಲೇ ಗಮನಿಸಿರುವಂತೆ ವಿಟ್ಠಲನ ಹೆಸರು ಕೃತಿಯಲ್ಲಿಲ್ಲ. ಹೀಗೆಯೇ ದತ್ತಾತ್ರೇಯನನ್ನು ಕುರಿತ ಒಂದು ಉಲ್ಲೇಖದಿಂದಲೇ (ಕುಮಾರವ್ಯಾಸ ಭಾರತ ಸಭಾಪರ್ವ ೯–೩೭) ಕವಿಯ ಮತನಿಷ್ಕರ್ಷೆ ಸಾಧ್ಯವಾಗದು. ಆತನಿಗೆ ಮಹಾನುಭಾವ ಪಂಥದ ಪರಿಚಯವಿದ್ದಿರಬಹುದು ಎಂದು ಇಂಥ ಉಲ್ಲೇಖಗಳಿಂದ ಹೇಳಬಹುದು; ಪ್ರಭಾವವನ್ನೂ ಊಹಿಸಬಹುದು.

ಹರಿಪ್ರಶಂಸೆ ಹರಿಪಾರಮ್ಯಗಳು ಕೃತಿಯಲ್ಲಿ ಸುಸ್ಪಷ್ಟ. ಆದ್ದರಿಂದ ಕವಿ ಯಾವುದೇ ಶೈವ ಸಂಪ್ರದಾಯಕ್ಕೆ ಸೇರಿಲ್ಲ ಎಂದು ಭಾವಿಸಬಹುದು. ಶುದ್ಧವಾದ ಅದ್ವೈತವು ಜ್ಞಾನಮಾರ್ಗವನ್ನು ಒಪ್ಪುತ್ತದೆ; ಕವಿ ಭಕ್ತಿಗೆ ಪ್ರಾಶಸ್ತ್ಯ ಕೊಟ್ಟಿರುವುದರಿಂದ ಆತ ಶಾಂಕರ ಅದ್ವೈತಿಯಿರಲಾರ. ಕಥೆ ವೈಷ್ಣವ ಕಥೆಯೆಂಬ ಕಾರಣದಿಂದಲೂ ಕವಿ ವೀರನಾರಾಯಣನ ಭಕ್ತನಾಗಿರುವುದರ ವಿಶೇಷ ಕಾರಣದಿಂದಲೂ ಆತನಿಗೆ ಹರಿ ಸರ್ವಾಧಿಕ ದೈವವಾಗಿರುವುದು ಸಹಜ. ಆದರೆ ಹರಿಹರರ ಪ್ರಶಂಸೆ ಪಾರಮ್ಯಗಳ ಪ್ರತಿಪಾದನೆಯಲ್ಲಿ ಮನಸ್ಸಿನ ಲಹರಿ ಉದಾರವಾಗಿದೆ. ಶ್ರುತಿ ಸ್ಮೃತಿಗಳನ್ನು ಪುರಸ್ಕರಿಸುವ, ತಾತ್ತ್ವಿಕ ನೆಲೆಗಟ್ಟಿನಲ್ಲಿ ಅದ್ವೈತದ ಅಭಿನಿವೇಶವುಳ್ಳ, ಭಾಗವತ ಸಂಪ್ರದಾಯದ ಕವಿಯಿರಬಹುದೆಂದು ತೋರುವುದು. ಬಹುಜನ ವಿದ್ವಾಂಸರಿಗೆ ಸಮ್ಮತವಾದ ಅಭಿಪ್ರಾಯವೂ ಇದೇ. ತನ್ನ ಕಾಲದ, ಆ ಪೂರ್ವದ ಮಹಾರಾಷ್ಟ್ರ ಭಕ್ತಿಪಂಥಗಳ "ಅದ್ವೈತವನ್ನು ಬಿಡದೆ ಹರಿಪಾರಮ್ಯವನ್ನೂ ಭಕ್ತಿಪಾರಮ್ಯವನ್ನೂ ಅಂಗೀಕರಿಸಿದ" ಸ್ಮಾರ್ತ ಭಾಗವತ ಸಂಪ್ರದಾಯಗಳ ಮೇಲಾದ ಪ್ರಭಾವಕ್ಕೆ ಕವಿ ಒಳಗಾಗಿರುವುದೂ ಸಹಜವೇ ಇದೆ. ಭಾಗವತ ಸಂಪ್ರದಾಯವೆಂದರೂ, ಅದರಲ್ಲಿ ಯಾವ ಒಳಪಂಗಡಕ್ಕೆ ಅವನು ಸೇರಿದ್ದಾನೆ ಎನ್ನುವುದನ್ನು ನಿಶ್ಚಯಿಸುವುದು ಪ್ರಾಯಃ ಕ್ಲಿಷ್ಟವಾದ ಶೋಧನೆ.

ಕವಿ ಕಾವ್ಯ ಪ್ರಶಂಸೆ

ಕುಮಾರ ವಾಲ್ಮೀಕಿ (ಸು. ೧೫೦೦) ತನ್ನ "ತೊರವೆ ರಾಮಾಯಣ"ದಲ್ಲಿ "ಸರಸ ವರ್ಣಕ ಕವಿಗಳಲಿ ಭಾ। ಸುರ ಕುಮಾರವ್ಯಾಸನೊಬ್ಬನು ಎರಡನೆಯಲಾನೊಬ್ಬ ...." ಎಂದೂ "ವರ ಕುಮಾರವ್ಯಾಸ ಘನ ಬಂ। ಧುರದ ಭಾರತಕೃತಿಗೆ ಕರ್ತನು ...." ಎಂದೂ (೨ ೫೫–೬೭, ೬೮) ಅಭಿಮಾನಪೂರ್ವಕವಾಗಿ ಸ್ಮರಿಸಿದ್ದಾನೆ. ತಿಮ್ಮಣ್ಣನು (ಸು. ೧೫೧೦) ತನ್ನ "ಕೃಷ್ಣರಾಜ ಭಾರತ"ದಲ್ಲಿ "ಲೇಸೆನಿಸಿ ಮೊದಲಾ ಕುಮಾರವ್ಯಾಸ ದಶಪರ್ವಗಳ ಹೇಳಿದ ....", "ಸುರನದಿಯ ಯಮುನಾ

ತರಂಗಿಣಿಯು ಬೆರಸಿ ಹರಿವಂದದಲಿ ಕವಿ ಕುಂ। ಜರ ಕುಮಾರವ್ಯಾಸನುರುವಾಗ್ಲಹರಿ ಯೊಡನೀಗ। ಸರಿಯೆನಿಸಿ ನೀ ಕೂಡಿಸ್ಸೆ ಸುರುಚಿರ ಭವತ್ಕವಿತಾ ಪ್ರವಾಹವ .... " ಎಂಬೆಡೆಗಳಲ್ಲಿ (೧. ೨೪-೨೬) ಕೃಷ್ಣದೇವರಾಯ ಆಡಿದ ಮಾತಿನ್ನಂತೆ ತನ್ನ ಮೆಚ್ಚುಮಾತುಗಳನ್ನು ಆಡಿದ್ದಾನೆ. ನಾರಾಯಣ ಕವಿ (ಸು. ೧೫೩೦) "ಉತ್ತರ ರಾಮಾಯಣ"ದಲ್ಲಿ "ಆ ಮಹಾಭಾರತವನಿಳೆಗೆ ಸು। ಧಾ ಮಧುರ ಕರ್ಣಾಟ ಭಾಷಾ। ಭಾಮಿನೀಪತಿ ಭಾಮಿನೀಷಟ್ಪದಿಯೊಳಳವಡಿಸಿ। ಸ್ವಾಮಿ ಗದುಗಿನ ವೀರ ಲಕ್ಷ್ಮೀ। ಧಾಮ ನಾರಾಯಣನ ಕರುಣದ। ಲೀ ಮಹಿಮೆ ಪೇಳದ ಕುಮಾರ ವ್ಯಾಸಗೆರಗುವೆನು॥" (೧-೮) ಎಂಬುದಾಗಿ ಮೆಚ್ಚಿದ್ದಾನೆ. ಕನಕದಾಸರ (ಸು. ೧೫೫೦) "ಮೋಹನ ತರಂಗಿಣಿ"ಯಲ್ಲಿ, "ಉರಗಾಲಯವ ಪೆಸರ್ವಡೆದವನ ಮಹೋನ್ನತೀ। ದರ ಜಾತೆಯಾತ್ಮಸಂಭವನ। ಪರ ಪುರಾಣಂಗಳ ಕನ್ನಡಿಸಿದ ಕವಿ। ವರರ ಕೊಂಡಾಡುವೆ ಮುದದಿ .... " ಎಂದು (೧-೧೬) ಹೇಳುವಲ್ಲಿ ಪರೋಕ್ಷವಾಗಿ ಕುಮಾರವ್ಯಾಸನನ್ನು ನೆನೆದಿರುವಂತೆ ತೋರುವುದು. ಅಜ್ಞಾತ ಕವಿಕರ್ತೃಕವಾದ "ಆದಿತ್ಯ ಪುರಾಣ"ದಲ್ಲಿ (ಸು. ೧೫೫೦) ಕವಿ ಪೂರ್ವಕವಿ ಕೃಪೆಯನ್ನು ಬೇಡುತ್ತ, " .... ಕಾಳೀ। ದಾಸ ಕುಮಾರವ್ಯಾಸ ಪೌರಾತನ ಕವೀಶ್ವರರು। .... ಲೇಸೆನಿಸಿ ನೀವ್ ಸವಿದ ಶಬ್ದ ಮ। ಹಾ ಸುಧೆಯೊಳೊಲಿದಿತ್ತುಯೀವುದು ತನಗೆ ಕರುಣದಲಿ" ಎಂಬುದಾಗಿ (೧-೩೧) ಹೇಳಿದ್ದಾನೆ.

ಮುಂದಿನ ಶತಮಾನಗಳಲ್ಲಿ, ನರಸನೆಂಬ ಕವಿ (೧೬೧೨) "ಉತ್ತರರಾಮ ಕಥೆ" ಯಲ್ಲಿ " .... ರಾಘವಾಂಕ ಕುಮಾರವ್ಯಾಸ ವಿ। ರಾಗಿ ಶುಕರೂಪನು ಧನಂಜಯ। ಯೋಗಿ ನಿತ್ಯಾನಂದ ಸುಕವೀಂದ್ರರಿಗೆ ವಂದಿಸುವೆ" (೧-೧೮) ಎಂದಿದ್ದಾನೆ; ಲಕ್ಷ್ಮ ಕವಿ (೧೭೨೩) ತನ್ನ ಭಾರತದಲ್ಲಿ "ಸಾಕುಳಿದ ಕವಿಗಳನ್ನೆಣಿಸುವೆನೆ ಎಂದನಂ। ದಾ ಕುಮಾರವ್ಯಾಸನವರ .... " ಎಂಬುದಾಗಿ ಅದೇ ಕವಿಯ ಮಾತಿನಲ್ಲಿ ನೆನೆದಿದ್ದಾನೆ. ಕೇನಯ್ಯ (ಸು. ೧೭೫೦) ತನ್ನ "ಗಯ ಚರಿತ್ರೆ"ಯಲ್ಲಿ ".... ಮಲುಹಣಿ ಕುಮಾರ ವ್ಯಾಸ ಶುಕರೂಪ। ಲೋಲಗುಣ ಲಕ್ಷ್ಮೀಶ ಘನ ಕವಿಜಾಲ ಮೃದುಪದಪಲ್ಲವ ಗಳಿಗೆ। ಫಾಲಮಂ ಚಾಚುತ್ತ ಪೇಳುವೆನೀ ಮಹಾಕೃತಿಯ" (೧-೧೨) ಎಂದು ಪೂರ್ವಕವಿ ಶ್ರೇಣಿಯಲ್ಲಿ ಈತನನ್ನು ನೆನೆದಿದ್ದಾನೆ. ಬಬ್ಬೂರು ರಂಗ (ಸು ೧೭೫೦) ತನ್ನ "ಅಂಬಿಕಾ ವಿಜಯ"ದಲ್ಲಿ "ಇಳೆಯು ಕರ್ಣಾಟಕ ಮಹಾಕೃತಿ। ಗಳಿಗೆ ಗುರು ವೆಂದೆಂಬ ಬಿರುದನು। ತಳೆದು ಭಾರತವನು ವಿವರಿಸಿದ .. . ಕುಮಾರವ್ಯಾಸ" ಎಂಬು ದಾಗಿ ಸುಂದರವಾದ ಕವಿಪ್ರಶಸ್ತಿಯನ್ನು ನೀಡಿದ್ದಾನೆ.

ಕುಮಾರವ್ಯಾಸನ ಭಾರತದ ವಸ್ತು ಶೈಲಿಗಳಿಂದ ಪ್ರಭಾವಿತರಾಗಿ, ನಂಜುಂಡ ಕವಿ, ಚಾಟು ವಿಟ್ಠಲನಾಥ, ಷಡಕ್ಷರಿ, ಬ್ರಹ್ಮಣಾಂಕ ಮುಂತಾದವರು ಕೃತಿ ರಚಿಸಿರು

ವುದು ವಿದಿತವೇ ಇದೆ. ಮುರಾರಿ ಕವಿಗಳ ಮೇಲೆ ಸಹ ಈ ಕವಿಯ ಪ್ರಭಾವವನ್ನು ವಿದ್ವಾಂಸರು ಗುರುತಿಸಿರುತ್ತಾರೆ.

ಹೀಗೆ ಉತ್ತರಕಾಲೀನ ಕವಿಗಳು ಕುಮಾರವ್ಯಾಸ ಭಾರತವನ್ನು ಹೃದ್ಯವಾಗಿ ಓದಿ, ಮೆಚ್ಚಿಕೊಂಡು, ಅದರ ಭಾವ ಭಾಷೆಗಳ, ಕಥೆ ಪಾತ್ರ ಸನ್ನಿವೇಶ ವರ್ಣನೆಗಳ ಪ್ರಭಾವವನ್ನು ತಮ್ಮ ತಮ್ಮ ರಚನೆಗಳಲ್ಲಿ ಬಿಂಬಿಸಿರುವರು. ಬೇರೆ ಬೇರೆ ರೀತಿಗಳಲ್ಲಿ, ಪ್ರಮಾಣಗಳಲ್ಲಿ ಆ ಕೃತಿಯ ಉತ್ತಮಾಂಶಗಳನ್ನು ಸ್ವೀಕರಿಸಿ ತಮ್ಮ ತಮ್ಮ ಕೃತಿಗಳನ್ನು ಅಲಂಕರಿಸಿರುವರು, ಅವುಗಳ ಕಾಂತಿಯನ್ನು ಹೆಚ್ಚಿಸಿರುವರು. ಪ್ರಾಚೀನ ಕವಿಗಳೇ ಅಲ್ಲದೆ, ಹೊಸಗನ್ನಡ ಕಾಲದಲ್ಲಿ ಷಟ್ಪದೀನಿಬದ್ಧ ಕಾವ್ಯಗಳನ್ನು ರಚಿಸಿದವರು ಸಹ ಆ ಪ್ರಭಾವ ವಲಯದಲ್ಲಿಯೇ ಬೆಳಗಲು ಯತ್ನಿಸಿದ್ದಾರೆ.

ಕುಮಾರವ್ಯಾಸ ಭಾರತವನ್ನು, ಅದು ರಚಿತವಾದಂದಿನಿಂದ ಅಪಾರ ಸಂಖ್ಯೆಯ ಪ್ರಾಚೀನ ಅರ್ವಾಚೀನ ಕವಿಗಳೂ ಗಮಕಿಗಳೂ ಸಹೃದಯರಾದ ಕಾವ್ಯಪ್ರೇಮಿಗಳೂ ಮೆಚ್ಚಿಕೊಂಡು ಬರುತ್ತಿರುವುದರಿಂದಲೇ ಅದರ ಹಸ್ತಪ್ರತಿಗಳು ನಾಡಿನ ನಾನಾ ಭಾಗಗಳಲ್ಲಿ ಬಹುಸಂಖ್ಯೆಯಲ್ಲಿ ಲಭ್ಯವಾಗುತ್ತಿರುವುದಕ್ಕೆ ಅವಕಾಶವಾಗಿದೆ. ಇದೇ ಕಾರಣವಾಗಿ ಅದರ ಹಲವು ಪರಿಷ್ಕರಣಗಳು ಹೊರಟಿವೆ, ಸಂಗ್ರಹಗಳು ಹುಟ್ಟಿಕೊಂಡಿವೆ.

“ಕುಮಾರವ್ಯಾಸ ಭಾರತ”ದ ಜನಪ್ರಿಯತೆಯ ಕಾರಣಗಳನ್ನು ಹೀಗೆ ಗುರುತಿಸಬಹುದೆಂದು ತೋರುತ್ತದೆ:

(೧) ರಾಮಾಯಣದಂತೆಯೇ ಅಪಾರ ಜನಪ್ರಿಯತೆಯನ್ನು ಗಳಿಸಿರುವ ಮಹಾಭಾರತ ಕಥಾವಸ್ತುವನ್ನು ಒಳಕೊಂಡಿದೆ. (೨) ಮಹಾಭಾರತದ ಕಥೆಯಲ್ಲಿ ಕೃಷ್ಣನ ದೈವಿಕ ಪ್ರಭಾವ, ಶರಣಜನ ವತ್ಸಲತೆ, ಮಹಿಮಾನ್ವಿತ ಚರಿತ್ರೆ ಎದ್ದು ತೋರುವಂತೆ ಹೆಣೆದುಕೊಂಡು ಬಂದಿದೆ. (೩) ಮಾನವಸ್ವಭಾವದ ನಾನಾ ಮುಖಗಳನ್ನು, ಸಂಬಂಧಗಳನ್ನು, ಸಂಘರ್ಷಗಳನ್ನು ಹೃದಯಸ್ಪರ್ಶಿಯಾಗಿ ನಿರೂಪಿಸಿದೆ. (೪) ಸುಖದುಃಖಗಳು ಜಟಿಲವಾಗಿ ಹೆಣೆದುಕೊಂಡಿರುವ ಲೌಕಿಕದ ಬದುಕಿನಲ್ಲಿ ಅರಿಷಡ್ವರ್ಗಗಳ ದಾರಿಯನ್ನು ಬಿಟ್ಟು, ಸರ್ವಶಕ್ತನೂ ವಾತ್ಸಲ್ಯಪರನೂ ಧರ್ಮಪಕ್ಷಪಾತಿಯೂ ಆದ ದೈವವನ್ನು ನಂಬಿ ನ್ಯಾಯವಾದ ರೀತಿಯಲ್ಲಿ ನಡೆದುಕೊಂಡರೆ, ಸತ್ಯಧರ್ಮಗಳ ಹಾದಿಯನ್ನು ಹಿಡಿದರೆ, ಇಹಪರಗಳಲ್ಲಿ ಶ್ರೇಯಸ್ಸಾಗುವುದು ಎಂಬ ಭಾರತೀಯ ಜೀವನದೃಷ್ಟಿಯನ್ನು ಇದು ಪೋಷಿಸುತ್ತದೆ. (೫) ಭಾರತ ಪಂಚಮವೇದ; ಸಮುದ್ರದಂತಹ ಅದರ ಒಡಲಿನಲ್ಲಿ ಅನೇಕ ಪುರಾಣ ಶಾಸ್ತ್ರಗಳ ವಿಚಾರಗಳು ಅಡಗಿ ಕುಳಿತಿವೆ; ಅರಸರು, ದ್ವಿಜರು, ವಿರಹಿಗಳು, ವಿದ್ಯಾಪರಿಣತರು ಮೊದಲಾದವರಿಗೆ, ಅವರವರಿಗೆ ಇಷ್ಟವಾದುದು ಇಲ್ಲಿ ದೊರೆಯುತ್ತದೆ; ಅಲ್ಲದೆ ಆದರಿಸಿ ಭಾರತದಲ್ಲಿ ಒಂದಕ್ಷರವನ್ನು ಕೇಳಿದರೂ ಸಾಕು, ವೇದ ಪಾರಾಯಣದ ಫಲ, ಗಂಗಾದಿ ತೀರ್ಥಸ್ನಾನ ಫಲ ಮೊದಲಾದ ಫಲಗಳು ಪ್ರಾಪ್ತವಾಗುತ್ತವೆ: ಹೀಗೆ ಸಂಪ್ರದಾಯ

ಶ್ರದ್ಧೆಯ ಸಹೃದಯವಾಚಕರನ್ನು ಈ ಕೃತಿ ತನ್ನೆಡೆಗೆ ಕೂಗಿ ಕರೆದು ಒರಮಾಡಿ ಕೊಳ್ಳುತ್ತದೆ. (೬) ಕೃತಿಯ ಭಾಷೆ ದೇಶ್ಯಪ್ರಚುರವಾದ, ಆಡುಮಾತಿನ ಭಣಿತಿಯಿಂದ ಕೂಡಿದ ನಡುಗನ್ನಡ; ಶೈಲಿ, ವ್ಯಕ್ತಿವಿಶಿಷ್ಟವಾದ, ವೀರ್ಯವತ್ತಾದ ಸಿರ್ಗಳ ತರಂಗಶೈಲಿ; ಛಂದಸ್ಸು, ಕಥನಗತಿಗೆ ಚೆನ್ನಾಗಿ ಹೊಂದುವ, ವಿವಿಧ ಗಣಪರಿವೃತ್ತಿಗಳಿಂದ ಬಾಗಿ ಬಳುಕುವ ಉತ್ಕೃಷ್ಟ ಮಾತ್ರಾಬಂಧವಾದ ಭಾಮಿನೀ ಷಟ್ಪದಿ. (೭) ನವರಸ ಪ್ಲಾವಿತವೂ ವಿವಿಧಾಲಂಕಾರ ಸಮೃದ್ಧವೂ ಘನವಾದ ಪಾತ್ರ ಸನ್ನಿವೇಶ ಕಲ್ಪನೆ ವರ್ಣನೆಗಳಿಂದ ಸಂಪದ್ಯುಕ್ತವೂ ಆದ ಕಾವ್ಯಗುಣದಿಂದ ಮೆರೆಯುವಂತಹ ಕೃತಿಯಿದು. (೮) ಧೀರ ಗಂಭೀರ ಶೈಲಿಯ ಗಮಕದಿಂದ ಕಾವ್ಯದ ಪರಿಚಯವು ಕಾಲದಿಂದ ಕಾಲಕ್ಕೆ ಹೆಚ್ಚು ಹೆಚ್ಚು ಆತ್ಮೀಯವಾಗುತ್ತಿರುವುದು. (೯) ಅತ್ಯಂತ ಗಮನಾರ್ಹವಾದ ಕಾರಣವೆಂದರೆ, ಅಸ್ಮಾದೃಶವಾದ ಪ್ರತಿಭೆ ಪಾಂಡಿತಗಳನ್ನು ಮೆರೆಯಬಲ್ಲ ಕುಮಾರವ್ಯಾಸನು ಕಾವ್ಯಕರ್ತೃವಾಗಿರುವುದು.

೨. ಕಾವ್ಯಸಮೀಕ್ಷೆ

"ಕುಮಾರವ್ಯಾಸ ಭಾರತ", "ಗದುಗು ಭಾರತ", "ಕನ್ನಡ ಭಾರತ", "ದಶಪರ್ವ ಭಾರತ", "ಕರ್ಣಾಟಕ ಮಹಾಭಾರತ" ಎಂದು ಮುಂತಾಗಿ ರೂಢಿಯಾಗಿರುವ "ಕರ್ಣಾಟ ಭಾರತ ಕಥಾಮಂಜರಿ" ಎಂಬ ಕೃತಿ ವ್ಯಾಸರ ಸಂಸ್ಕೃತ ಮಹಾಭಾರತದ ಮೊದಲ ಹತ್ತು ಪರ್ವಗಳ ಕಥೆಯನ್ನು ಸ್ವತಂತ್ರ ರೀತಿಯಲ್ಲಿ ಅನುವಾದಿಸಿರುವ ಜನಪ್ರಿಯ ಮಹಾಕಾವ್ಯವಾಗಿದೆ. ಇದರ ಕರ್ತೃ ಕುಮಾರವ್ಯಾಸ ಈ ಕೃತಿಯನ್ನಲ್ಲದೆ, "ಐರಾವತ" ಎಂಬ ಒಂದು ಗ್ರಂಥವನ್ನೂ ರಚಿಸಿರುವಂತೆ ಸಾಮಾನ್ಯವಾಗಿ ತಿಳಿಯಲಾಗಿದೆ. ಆದರೆ ಈ ಗ್ರಂಥದ ಕರ್ತೃತ್ವವಿಚಾರ ಚರ್ಚಾಸ್ಪದವಾಗಿದೆ. ಈಗ ಈ ಕವಿಯ ಹೆಸರಿನಲ್ಲಿ ಪ್ರಸಿದ್ಧವಾಗಿರುವುದು, ಕವಿಯ ಹಾಗೂ ಕನ್ನಡ ಭಾಷೆಯ ಹಿರಿಮೆಗೆ ಕಾರಣವಾಗಿರುವುದು "ಕರ್ಣಾಟ ಭಾರತ ಕಥಾಮಂಜರಿ"ಯೊಂದೇ.

"ಕರ್ಣಾಟ ಭಾರತ ಕಥಾಮಂಜರಿ" (ಕುಮಾರವ್ಯಾಸ ಭಾರತ)ಯ ಭಾಷೆ ನಡುಗನ್ನಡ; ಛಂದಸ್ಸು ಭಾಮಿನೀಷಟ್ಪದಿ. ಈ ಕೃತಿಯ ಅತಿ ಪ್ರಾಚೀನವೆನ್ನಲಾದ ಒಂದು ಹಸ್ತಪ್ರತಿಯಲ್ಲಿ (ಮೈಸೂರು ಕನ್ನಡ ಅಧ್ಯಯನ ಸಂಸ್ಥೆಯ ಹಸ್ತಪ್ರತಿ) ೧೦ ಪರ್ವಗಳು. ೧೬೭ ಸಂಧಿಗಳು, ೭೯೭೧ ಪದ್ಯಗಳು ಇವೆಯೆಂದು ತಿಳಿದು ಬಂದಿದೆ. ಕವಿಚರಿತೆಕಾರರು ನೋಡಿದ್ದುದರಲ್ಲಿ ೧೦ ಪರ್ವಗಳು, ೧೫೨ ಸಂಧಿಗಳು, ೮೪೭೯ ಪದ್ಯಗಳಿದ್ದುದಾಗಿ ಅವರ ಸೂಚನೆಯಿಂದಲೇ ತಿಳಿಯುವುದು. ಈಗ ಜನಪ್ರಿಯವಾಗಿರುವ ಒಂದು ಪ್ರಚಲಿತ ಮುದ್ರಿತ ಪ್ರತಿಯಲ್ಲಿ ೧೦ ಪರ್ವಗಳು, ೧೫೨ ಸಂಧಿಗಳು, ೮೧೬೪ ಪದ್ಯಗಳು ಕಂಡುಬರುತ್ತಿವೆ. ಈ ಕೃತಿಯ ಪ್ರಚುರತೆ ಕಾರಣ

ವಾಗಿ ಹಲವು ಹಸ್ತಪ್ರತಿಗಳು ಹುಟ್ಟಿಕೊಂಡು ಕವಿರಚಿತವಾದ ಕೃತಿಭಾಗಗಳ ಪದ್ಯಗಳೂ ಬಿಟ್ಟುಹೋಗಿರುವುದು, ಹೊಸದಾಗಿ ಬೇರೆಯವರು ಬರೆದ ಕೃತಿಭಾ ಗಳೂ ಪದ್ಯಗಳೂ ಸೇರಿರುವುದು—ಕಾರಣವಾಗಿ ಈ ವ್ಯತ್ಯಾಸಗಳು ತಲೆದೋರಿ ಎನ್ನಬಹುದು.

ಕುಮಾರವ್ಯಾಸ ಭಾರತದ ಕಥಾವಸ್ತುವಿಗೆ ಮೂಲ ಸಂಸ್ಕೃತ ಮಹಾಭಾರ ಇದರ ಕರ್ತೃ ಕೃಷ್ಣದ್ವೈಪಾಯನ ವ್ಯಾಸನೆಂದು ರೂಢಿಯಾಗಿದೆ. ಅವರಿ ವೈಶಂಪಾಯನನು ಈ ಇತಿಹಾಸಕಥೆಯನ್ನು ಕೇಳಿ ತಿಳಿದನೆಂದೂ ಅನಂತರದ ಅದನ್ನು ಆತನು ಸರ್ಪಯಾಗ ಸಂದರ್ಭದಲ್ಲಿ ಜನಮೇಜಯನಿಗೆ ನಿರೂಪಿಸಿದನೆಂದ ಆಗ್ಗೆ ಅಲ್ಲಿಯೇ ಇದ್ದ ಲೋಮಹರ್ಷಣನ ಮಗ ಉಗ್ರಶ್ರವ ನಾಮಧೇಯನಾ ಸೂತಪೌರಾಣಿಕನು ಅದನ್ನು ತಾನು ಸಹ ಶ್ರವಣಮಾಡಿದನೆಂದೂ ಈತನು ಕೆ ಕಾಲದ ಮೇಲೆ ನೈಮಿಷಾರಣ್ಯದಲ್ಲಿ ಕುಲಪತಿ ಶೌನಕನು ನಡೆಸುತ್ತಿದ್ದ ದ್ವಾದ ವರ್ಷಗಳ ಸತ್ರಕ್ಕೆ ಬಂದಿದ್ದಾಗ್ಗೆ ಅಲ್ಲಿಯ ಋಷಿಗಳ ಪ್ರಾರ್ಥನೆಯಂತೆ ಅವರಿ ಅದನ್ನು ಬಿತ್ತರಿಸಿದನೆಂದೂ ಉಕ್ತವಾಗಿದೆ.

ಮಹಾಭಾರತದ ಕಥೆ ಭರತ ವಂಶದ ಧೃತರಾಷ್ಟ್ರ ಪಾಂಡುಗಳೆಂಬ ಅಣ್ಣ ತಮ್ಮಂದಿರ ಮಕ್ಕಳಾದ ಕೌರವ ಪಾಂಡವರ ಕಥೆ. ಹಂಚಿಕೊಂಡು ಅನುಭವಿ ಬೇಕಾದ ರಾಜ್ಯಕೋಶಗಳನ್ನು ಪೂರ್ತಿಯಾಗಿ ತಾವೇ ದಕ್ಕುಹಾಕಿಕೊಳ್ಳಲು ಕೌ ವರು ನಡೆಸಿದ ಕುಟಿಲ ಕಾರಸ್ಥಾನಗಳೂ ನ್ಯಾಯಬದ್ಧವಾಗಿ ತಮಗೆ ಸೇರಬೇಕಾದ ದನ್ನು ದಕ್ಕಿಸಿಕೊಳ್ಳಲು ಪಾಂಡವರು ಪಟ್ಟ ಪಾಡುಗಳೂ ಈ ಕಥೆಯಲ್ಲಿ ವಿಸ್ತಾರವಾ ನಿರೂಪಿತವಾಗಿವೆ.

ಈ ಕಥೆಯು ಮೂಲರೇಖೆಗಳು "ಜಯ", "ಭಾರತ" (ಸು. ೨೪,೦೦೦ ಗ್ರಂಥ ಪ್ರಮಾಣ) ಎಂಬ ಘಟ್ಟಗಳನ್ನು ದಾಟಿ, ಕಾಲಕ್ರಮದಲ್ಲಿ (ಕ್ರಿ.ಪೂ. ೪೦೦—ಕ್ರಿ.ಶ ೪೦೦) ಹಲವು ಉಪಾಖ್ಯಾನಗಳನ್ನೂ ಕಥೆ ಉಪಕಥೆಗಳನ್ನೂ ಕೂಡಿಸಿಕೊಂಡು "ಮಹಾಭಾರತ"ವಾಗಿ (ಉತ್ತರದ ಪಾಠ ೮೨,೧೩೬; ದಕ್ಷಿಣದ ಪಾಠ ೯೫,೫೮೬) ಬೆಳೆದಿದೆಯೆಂದು ಭಾವಿಸಿದೆ. ಹೀಗೆ ಬೆಳೆದುದರ ಫಲವಾಗಿ ಈ ಮಹಾಕೃತಿ ಏಕ ಕಾಲದಲ್ಲಿ ಪುರಾಣ, ಚರಿತ್ರೆ, ಕಥೆ, ಉದಾಹರಣೆ, ಧರ್ಮ ಮತ್ತು ಅರ್ಥಶಾಸ್ತ್ರಗಳ ಸಮಾವೇಶಗೊಂಡ ವಿದ್ಯಾನಿಧಿಯೆನ್ನಿಸಿದ ಗ್ರಂಥರಾಜವಾಗಿದೆ; ಪಂಚಮ ವೇದವೆ ಆಗಿದೆ. ರಾಮಾಯಣದ ಹಾಗೆಯೇ ಇದು ಸಹ ಭಾರತೀಯ ಮಹಾಕಾವ ಪರಂಪರೆಗೆ ಮೂಲಸ್ರೋತವಾಗಿ ಪರಿಣಮಿಸಿದೆ. ಉತ್ತರಕಾಲೀನ ಲೌಕಿಕ ಸಂಸ್ಕೃ ಹಾಗೂ ದೇಶಭಾಷೆಗಳಲ್ಲಿ ಹುಟ್ಟಿರುವ ಹಲವು ಸಾಹಿತ್ಯಕೃತಿಗಳು ಭಾಷೆ, ವಸ್ತು ಮತ್ತು ರೀತಿಗಳಲ್ಲಿ ಇದರಿಂದ ಪರಿಪೋಷಣೆಗೊಂಡಿವೆ. ಸಾಂಸ್ಕೃತಿಕ ಜನಜೀವನದ ಮೇಲೆ ಮಹಾಭಾರತ ಬೀರಿರುವ ಸಾಂದ್ರವಾದ ಪ್ರಭಾವ ಇಂದಿಗೂ ಅಚ್ಚಳಿಯ ದಂತಿದೆ.

ಮೂಲ ಭಾರತದಲ್ಲಿ ಸಾಮಾನ್ಯವಾಗಿ ತಿಳಿದಿರುವಂತೆ ಆದಿ, ಸಭಾ, ಅರಣ್ಯ, ರಾಟ, ಉದ್ಯೋಗ, ಭೀಷ್ಮ, ದ್ರೋಣ, ಕರ್ಣ, ಶಲ್ಯ, ಸೌಪ್ತಿಕ, ಸ್ತ್ರೀ, ಶಾಂತಿ, ಶಾಸನ, ಅಶ್ವಮೇಧಿಕ, ಆಶ್ರಮವಾಸಿಕ, ಮೌಸಲ, ಮಹಾಪ್ರಸ್ಥಾನಿಕ, ರ್ಗಾರೋಹಣ—ಎಂಬುದಾಗಿ ೧೮ ಪರ್ವಗಳಿದ್ದು ಇವುಗಳಲ್ಲಿ ಉಪವಿಭಾಗಗಳಿವೆ. ವುಗಳ ಕಥಾಸಾರಾಂಶವೆಂದರೆ :

ಮಹಾಭಾರತ ಕಥೆಯ ಪ್ರಮುಖ ವ್ಯಕ್ತಿಗಳ ವಂಶಕಥನ, ಉತ್ಪತ್ತಿ ಮತ್ತು ಲ್ಯ (ಆದಿ); ಯುಧಿಷ್ಠಿರನು ರಾಜ್ಯವಾಳುತ್ತ ರಾಜಸೂಯವನ್ನು ಮಾಡುತ್ತಾನೆ. ಳ್ಳಿಂದ ದ್ಯೂತಪ್ರಸಂಗದಲ್ಲಿ ಸೋತು (ಸಭಾ) ಸೋದರರು ಮತ್ತು ಪತ್ನಿಯೊಂದಿಗೆ ತಿಜ್ಞಾಬದ್ಧನಾಗಿ ೧೨ ವರ್ಷ ಅರಣ್ಯವಾಸವನ್ನು ಕೈಕೊಳ್ಳುತ್ತಾನೆ (ವನ); ಳ್ಳಿಂದ ಅವರೆಲ್ಲರೂ ೧ ವರ್ಷದ ಅಜ್ಞಾತವಾಸಕ್ಕೆ ಎಂದು ವಿರಾಟನಗರ ನ್ನು ಸೇರುತ್ತಾರೆ (ವಿರಾಟ); ೧೩ ವರ್ಷದ ಅವಧಿ ಮುಗಿದುದರಿಂದ ರಾಜ್ಯ ನ್ನು ಮರಳಿ ಪಡೆಯುವ ಪ್ರಯತ್ನಗಳು ನಡೆದು, ಅವು ವಿಫಲಗೊಳ್ಳುತ್ತವೆ ದ್ಯೋಗ). ಕೌರವ ಪಾಂಡವರು ಕಾಳಗಕ್ಕೆ ಸಿದ್ಧರಾಗುತ್ತಾರೆ; ೧೦ ದಿನ ಳ ಪರ್ಯಂತ ಕೌರವ ಪಕ್ಷದಲ್ಲಿ ಭೀಷ್ಮನ ಸೇನಾಪತ್ಯದಲ್ಲಿ ಯುದ್ಧ ನಡೆಯುತ್ತದೆ ಭೀಷ್ಮ). ೫ ದಿನಗಳ ಕಾಲದ, ದ್ರೋಣ ಸೇನಾ ನಾಯಕತ್ವದ ಯುದ್ಧವಾದ ಮೇಲೆ (ದ್ರೋಣ), ೨ ದಿನಗಳ ಕಾಲ ಕರ್ಣನ ಮುಂದಾಳುತನದಲ್ಲಿ ಯುದ್ಧ ಗುತ್ತದೆ (ಕರ್ಣ). ಕರ್ಣವಧೆಯಾದ ಅನಂತರ, ಭಾರತ ಯುದ್ಧದ ೧೮ನೆಯ ನ ಶಲ್ಯ ಸೇನಾಪತಿಯಾಗುತ್ತಾನೆ; ಶಲ್ಯನೊಂದಿಗೆ ದುರ್ಯೋಧನನ ಸಾವು ಸ ಘಟಿಸಿ ಭಾರತದ ಮಹಾಸಂಗ್ರಾಮ ಇಲ್ಲಿಗೆ ಮುಗಿಯುತ್ತದೆ (ಶಲ್ಯ). ಪಾಂಡ ರು ನಿದ್ರಿಸುತ್ತಿದ್ದಾಗ ಅಶ್ವತ್ಥಾಮ ಧೃಷ್ಟದ್ಯುಮ್ನನನ್ನೂ ಪಂಚಪಾಂಡವರನ್ನೂ ಧೆ ಮಾಡುತ್ತಾನೆ (ಸೌಪ್ತಿಕ). ಯುದ್ಧದಲ್ಲಿ ಮೃತರಾದವರ ಸಂಬಂಧಿಗಳಾದ ್ರೀಯರು ಪ್ರಲಾಪ ಮಾಡುತ್ತಾರೆ (ಸ್ತ್ರೀ). ಯುದ್ಧದ ಪರಿಣಾಮವನ್ನು ಕಂಡು ುಃಖಿಸಿ ನಿರ್ವೇದಗೊಂಡ ಯುಧಿಷ್ಠಿರನಿಗೆ ಭೀಷ್ಮರು ಮೋಕ್ಷಧರ್ಮವನ್ನು ಬೋಧಿಸಿ, ವನ ಮನಸ್ಸಿಗೆ ಶಾಂತಿಯನ್ನುಂಟುಮಾಡುತ್ತಾರೆ (ಶಾಂತಿ). ಭೀಷ್ಮನ ಸಾವಿಗೆ ನೆ ದುಃಖಿಸುತ್ತಾನೆ; ಕೃಷ್ಣನು ಸಮಾಧಾನ ಹೇಳುತ್ತಾನೆ (ಅನುಶಾಸನ). ಪಾಪ ಿಹಾರಕ್ಕೆ ಧರ್ಮರಾಯನು ಅಶ್ವಮೇಧಯಾಗವನ್ನು ಮಾಡುತ್ತಾನೆ (ಅಶ್ವ ೇಧಿಕ). ಇದಾದ ಮೇಲೆ ಧೃತರಾಷ್ಟ್ರ ಗಾಂಧಾರಿಯರು, ಕುಂತಿ ಮೊದಲಾದ ರು ವಾನಪ್ರಸ್ಥಾಶ್ರಮವನ್ನು ಕೈಕೊಳ್ಳುತ್ತಾರೆ (ಆಶ್ರಮವಾಸಿಕ). ಇತ್ತ ಾದವರಲ್ಲಿ ಪರಸ್ಪರ ಕಲಹವುಂಟಾಗಿ ಮುಸಲದಿಂದ ಅವರೆಲ್ಲ ನಾಶ ಹೊಂದುತ್ತಾರೆ; ಲರಾಮ ಕೃಷ್ಣರ ದೇಹತ್ಯಾಗವೂ ಆಗುತ್ತದೆ (ಮೌಸಲ). ಪಾಂಡವರು ಕೃಷ್ಣ ರ್ಯಾಣದಿಂದ ದುಃಖಿತರಾಗಿ, ಮಹಾಪ್ರಸ್ಥಾನವನ್ನು ನಿರ್ಧರಿಸುತ್ತಾರೆ. ಹಿರಿಯರ ಜ್ಯದಲ್ಲಿ ಯುಯುತ್ಸುವೂ ಪರೀಕ್ಷಿತ್ತುವೂ ಪಟ್ಟಾಭಿಷೇಕಗೊಳ್ಳುತ್ತಾರೆ (ಮಹಾ

ಪ್ರಸ್ಥಾನಿಕ). ಮಾರ್ಗಮಧ್ಯದಲ್ಲಿ ಎಲ್ಲರೂ ಮೃತರಾಗಿ, ಯುಧಿಷ್ಠಿರನು ಮಾತ್ರ
ಇಂದ್ರರಥದಲ್ಲಿ ಕುಳಿತು ಸಶರೀರವಾಗಿ ಸ್ವರ್ಗವನ್ನು ಸೇರುತ್ತಾನೆ (ಸ್ವರ್ಗಾರೋಹಣ).

ಮಹಾಭಾರತದ ಈ ೧೮ ಪರ್ವಗಳಲ್ಲಿ ಭಾರತ ಹಲಗಾಲದಿಂದ ಪೋಷಿಸಿ
ಕೊಂಡು ಬಂದ ಸಂಸ್ಕೃತಿ ನಾಗರಿಕತೆಗಳ ನಾನಾಮುಖದ ಚಿತ್ರಣಗಳು ದೊರೆಯು
ತ್ತವೆ. ಜೀವನಸಿದ್ಧಾಂತ ಯೋಗವನ್ನು ಬೋಧಿಸುವ ಭಗವದ್ಗೀತೆಯೂ ಅದರ
ಒಡಲಲ್ಲಿಯೇ ಅಡಗಿ ಕುಳಿತಿದೆ.

"ಮಹಾಭಾರತ ರೂಪೈಕ್ಯವುಳ್ಳ ಏಕಕೃತಿಗಿಂತ ಹೆಚ್ಚಾಗಿ ಸಮಗ್ರಸಾಹಿತ್ಯ
ವೊಂದನ್ನು ಪ್ರತಿನಿಧಿಸುತ್ತದೆ. ಅದು ಭರತಖಂಡದ ಲೌಕಿಕ ಹಾಗೂ ಧಾರ್ಮಿಕ
ಪರಂಪರೆಯ ನಿಜವಾದ ಭಂಡಾರವಾಗಿದೆ; ಅದರಂತೆ ಜನತೆಯ ಆತ್ಮದ ಅಂತರಾಳ
ವನ್ನು ತೋರಿಸಿಕೊಡುವ ಕೃತಿ ಮತ್ತೊಂದಿಲ್ಲವೆ ಇಲ್ಲ. ಸ್ತ್ರೀತ್ವಕ್ಕಾದ ಅಪಮಾನಗಳ
ಸೇಡು ತೀರಿಸಿಕೊಳ್ಳುವುದಕ್ಕಾಗಿ ಮತ್ತು ಭರತನ ಆಸ್ತಿಯನ್ನು ವಿಸ್ತರಿಸಿ ಭರತ
ಖಂಡದ ಪೂರ್ವ ಪಶ್ಚಿಮ ದಕ್ಷಿಣೋತ್ತರಗಳನ್ನು ಒಂದು ಸಾಮ್ರಾಜ್ಯವನ್ನಾಗಿ
ಒಗ್ಗೂಡಿಸಿದ ವಂಶವೊಂದರ ನ್ಯಾಯಬದ್ಧ ಹಕ್ಕುಗಳ ರಕ್ಷಣೆಗಾಗಿ ನಡೆದ ಸಮರ
ವೊಂದರಲ್ಲಿ ವ್ಯಕ್ತವಾದ ಪೌರುಷಕೃತ್ಯಗಳಿಗೆ ಸ್ಮಾರಕವಾಗಿರುವ "ಜಯಗೀತೆ"ಯದು.
ದ್ರಷ್ಟಾರರ ಮತ್ತು ಋಷಿಗಳ, ಸುಂದರ ಕನ್ಯೆಯರ ಮತ್ತು ಕರ್ತವ್ಯನಿಷ್ಠ ಸತಿಯರ,
ವೀರಯೋಧರ ಮತ್ತು ರಾಜರ್ಷಿಗಳ ವಿವಿಧ ಕಥೆಗಳನ್ನೊಳಗೊಂಡ "ಪುರಾಣಸಂಹಿತೆ"
(ಪ್ರಾಚೀನ ಕಥೆಗಳ ಸಂಗ್ರಹ)ವದು. ಅದು ರಣರಂಗದ ಮಹೋಗ್ರತೆ, ವನ್ಯಾ
ಶ್ರಮದ ಪ್ರಶಾಂತತೆ, ತೆರೆಯಿಂದ ನರ್ತಿಸುತ್ತ ನೊರೆಯಿಂದ ನಗುವ ಸಾಗರದ
ಭವ್ಯತೆ, ನಿಜವಾದ ಕ್ಷತ್ರಿಯವಂಶ ಸಂಜಾತೆಯೊಬ್ಬಳ ನ್ಯಾಯವಾದ ರೋಷ, ಮೃತ
ವೀರರ ಯುದ್ಧಮಾತೆಯ ರೋದನ—ಎಲ್ಲವನ್ನೂ ಅನನುಕರಣೀಯ ಭಾಷೆಯಲ್ಲಿ
ವರ್ಣಿಸುವ ಅದ್ಭುತಕಾವ್ಯವೂ ಹೌದು. ಅದು ಶಾಸನ, ನೀತಿಗಳ ಮತ್ತು
ಸಾಮಾಜಿಕ, ರಾಜಕೀಯ ತತ್ತ್ವಶಾಸ್ತ್ರದ ಪ್ರಮಾಣಭೂತ ಗ್ರಂಥವಾಗಿದ್ದು,
ತ್ರಿವರ್ಗವೆನಿಸಿಕೊಂಡ ಧರ್ಮ ಅರ್ಥ ಕಾಮಗಳ ಸಾಧನೆಗಾಗಿ ನಿಯಮಗಳನ್ನು ವಿಧಿ
ಸುತ್ತದೆ ಮತ್ತು ಭರತಖಂಡದ ಅತ್ಯುನ್ನತ ಧಾರ್ಮಿಕದರ್ಶನವನ್ನು ಪ್ರತಿಪಾದಿಸು
ತ್ತದೆ; ಮತ್ತು ಪರಮಾತ್ಮನಾದ ನಾರಾಯಣನಿಗೆ, ಎಲ್ಲ ಕಲೆಗಳಿಗೂ ಜ್ಞಾನಕ್ಕೂ
ಉಗಮವಾದ ಸರಸ್ವತಿಗೆ, ಅತಿಮಾನವನೂ ಆದರ್ಶಯೋಧನೂ ಋಷಿಯೂ ಭಗ
ವಂತನ ನಿಕಟಮಿತ್ರನೂ ಆದ ನರನಿಗೆ ಮಾತ್ರವಲ್ಲದೆ ಇಡೀ ಮಾನವಜಾತಿಗೇ ಗೌರವ
ತೋರಬೇಕೆಂದು ಬೋಧಿಸುತ್ತದೆ. "ಇದು ಪವಿತ್ರವಾದ ರಹಸ್ಯ ; ಮಾನವತೆಗಿಂತ
ಉದಾತ್ತವಾದುದು ಮತ್ತಾವುದೂ ಇಲ್ಲ" ಎಂದು ಶಾಂತಿಪರ್ವದಲ್ಲಿ ಉದ್ಘೋಷಿಸಲಾ
ಗಿದೆ." ("ಯುಗಯಾತ್ರೀ ಭಾರತೀಯ ಸಂಸ್ಕೃತಿ", ಸಂ. ೨, ಪು. ೫೨).

"ಕುಮಾರವ್ಯಾಸ ಭಾರತ" ಮೂಲ ಮಹಾಭಾರತದ ೧೮ ಪರ್ವಗಳ
ವಿಭಜನೆಯನ್ನು ಹೊಂದದೆ, ದುರ್ಯೋಧನಾವಸಾನ ಧರ್ಮರಾಜಪಟ್ಟಾಭಿಷೇಕ

ಗಳೊಂದಿಗೆ ಹಾಗೂ ಪಾಂಡವರಕ್ಷೆಯ ಕಾರ್ಯದಲ್ಲಿ ಕೃತಕೃತ್ಯನಾದ ಶ್ರೀಕೃಷ್ಣನು ತನ್ನೂರಿಗೆ ಮರಳಿದ ವಿಷಯದೊಂದಿಗೆ ಹತ್ತು ಪರ್ವಗಳ ವ್ಯಾಪ್ತಿಯನ್ನು ಪಡೆದಿದೆ. ಕ್ಷೇಮೇಂದ್ರನ ಹಾಗೆ ಕುಮಾರವ್ಯಾಸನು ಶಲ್ಯಪರ್ವದಿಂದ ಬೇರೆಯಾಗಿ ಗದಾಪರ್ವವನ್ನು ನಿರೂಪಿಸಿ, ಮುಂದಿನ ಸೌಪ್ತಿಕ, ಸ್ತ್ರೀ, ಶಾಂತಿ ಮತ್ತು ಅನುಶಾಸನ ಪರ್ವಗಳ ಸಾರಾಂಶವನ್ನು ಕೆಲವೇ ಪದ್ಯಗಳಲ್ಲಿ ಅಲ್ಲಿಯೇ ಅಡಕಗೊಳಿಸಿ ಕೃತಿಯನ್ನು ಪೂರ್ತಿಗೊಳಿಸಿರುವಂತೆ ತೋರುತ್ತದೆ. ಅಲ್ಲದೆ ಆಶ್ವಮೇಧಿಕ, ಮೌಸಲ ಪರ್ವಗಳ ಕಥಾಭಾಗಗಳು ಅವರೆಗೆ ಏಕಸೂತ್ರವಾಗಿ ಬಂದ ಕೌರವ ಪಾಂಡವರ ಕಥೆಯೊಂದಿಗೆ ಚೆನ್ನಾಗಿ ಹೊಂದಿಕೊಳ್ಳದೆಂಬ, ಇಲ್ಲವೆ ಮಂಗಳಾಂತವಾಗಿ ಕಾವ್ಯ ಮುಗಿಯಲೆಂಬ ಉದ್ದೇಶದಿಂದ ಕಥೆಯನ್ನು ಹೀಗೆ ನಿಲ್ಲಿಸಿರಬಹುದೆಂದು ಹೇಳಲೂ ಅವಕಾಶವಿದೆ. ಹಾಗೆಂದೇ ಆಶ್ರಮವಾಸಿಕ, ಮಹಾಪ್ರಸ್ಥಾನಿಕ ಮತ್ತು ಸ್ವರ್ಗಾರೋಹಣ ಪರ್ವಗಳ ದುಃಖನಿರ್ಭರವಾದ ಕಥೆಯ ಕಾರುಣ್ಯಮಯ ಘಟನಾವಳಿಗಳನ್ನೂ ಕೈಬಿಟ್ಟದೆಯೆಂದು ತಿಳಿಯಬಹುದಾಗಿದೆ.

ಕುಮಾರವ್ಯಾಸ ಭಾರತ ಕವಿಯೇ ಸೂಚಿಸುವಂತೆ ಭಾರತವಸ್ತು ಪಲ್ಲವಿಸಿದ ಒಂದು ಕಥಾಮಂಜರಿಯೇ ಆಗಿದ್ದರೂ ಮಂಜರಿಯ ಹೂವುಗಳೆಲ್ಲ ಮುಖ್ಯಕಥೆಯ ಸಂಬಂಧವಾದ ಘಟನೆಗಳೇ ಆಗಿವೆ. ಪಂಪನ ಹಾಗೆಯೇ ಕುಮಾರವ್ಯಾಸ ಸಹ ಮಹಾರಣ್ಯ ಸದೃಶವಾದ ಮಹಾಭಾರತವನ್ನು ಒಂದು ಸುಂದರ ನಂದನವನವನ್ನಾಗಿ ಮಾಡಲು ಪ್ರಯತ್ನಿಸಿರುವುದು ಮೂಲದ ವೈವಿಧ್ಯಮಯ ಕಥೆ ಉಪಕಥೆಗಳು, ಆಖ್ಯಾನೋಪಾಖ್ಯಾನಗಳು, ನಿದರ್ಶನಗಳು, ಉದಾಹರಣೆಗಳು, ನೀತಿಬೋಧೆ ತತ್ತ್ವೋಪದೇಶಗಳು, ಸಾಮಾನ್ಯ ವರ್ಣನೆಗಳು ಇವನ್ನು ಬಲುಮಟ್ಟಿಗೆ ಹ್ರಸ್ವಗೊಳಿಸಿರುವ ಇಲ್ಲವೆ ಲೋಪಗೊಳಿಸಿರುವ ಸಂವಿಧಾನಕೌಶಲದಿಂದ ವಿಶದವಾಗುವುದು. ಕಥೆಯ ಏಕಸೂತ್ರತೆಗೆ ಭಂಗತರುವ, ಪಾತ್ರಗಳ ಸ್ವಭಾವದ ಆವಿಷ್ಕಾರಕ್ಕೆ ಸಹಾಯವಾಗದ, ಹಾಗೂ ರಸಾಸ್ವಾದದ ಸ್ವಾರಸ್ಯವನ್ನು ಪೋಷಿಸದ ಕಥಾಭಾಗಗಳ ಹಾಗೂ ವರ್ಣನೆಗಳ ವಿಚಾರದಲ್ಲಿ ಈ ಕೌಶಲ ಪ್ರವರ್ತಿಸಿರುವುದನ್ನು ಕಾಣಬಹುದು. ಮೂಲದ ಅಂತಹ ಕಥಾಭಾಗಗಳ ಹಾಗೂ ವರ್ಣನೆಗಳ ವಿಪುಲತೆ ವಿಸ್ತಾರಗಳು ಇಲ್ಲಿ ಯಥೋಚಿತವಾಗಿ ಒಂದು ಅಧ್ಯಾಯದಿಂದ ಒಂದು ವಾಕ್ಯದ ವರೆಗೆ ಎಂಬ ಮಟ್ಟಿಗೆ ಕುಗ್ಗಿರುವುದನ್ನು ಗಮನಿಸಬಹುದು. ಒಟ್ಟಾಗಿ ಕಥೆಯ ಮೇಲೆ ದಟ್ಟೈಸಿರುವ ಕೃಷ್ಣಮಹಿಮೆಗೆ ತಕ್ಕ ಅವಕಾಶ ಇದರಿಂದಾಗಿಯೇ ದೊರೆಯುವುದೂ ಸಾಧ್ಯವಾಗಿದೆ. ತನಗೆ ತಾನೇ ವಿಸ್ತಾರವಾದುದೆಂದು ತೋರುವ ಕುಮಾರವ್ಯಾಸ ಭಾರತವನ್ನು ಮೂಲಭಾರತದೊಂದಿಗೆ ಹೋಲಿಸಿ ನೋಡಿದಾಗ, ಇದು ಅದರ ಸಂಕ್ಷಿಪ್ತವೂ ಸ್ವತಂತ್ರವೂ ಆದ ಆವೃತ್ತಿಯೆಂದು ಈ ಬಗೆಯ ಹ್ರಸ್ವಗಳಿಂದ, ಲೋಪಗಳಿಂದ ಭಾವಿಸುವುದು ಶಕ್ಯ. ಈ ಆವೃತ್ತಿ ದಿಟವಾಗಿ ತಾತ್ಪರ್ಯವೆಂದೋ ಪ್ರತಿಬಿಂಬವೆಂದೋ ತಿಳಿಯುವಂತಹುದಲ್ಲ; ಸಾರಗ್ರಹಣವೆಂದೂ ಪುನಃಸೃಷ್ಟಿಯೆಂದೂ ತಿಳಿಯು

ವಂತಹುದು. ಹೀಗಾಗಿ ಮೂಲಕಾವ್ಯದ ವ್ಯಾಪ್ತಿ ಇಲ್ಲಿ ಸುಮಾರು ಹತ್ತನೆಯ ಒಂದು ಭಾಗಕ್ಕೆ ಅಡಕವಾಗಿರುವುದು ಸಹಜವೇ. ಅಲ್ಲದೆ ಕುಮಾರವ್ಯಾಸ ಭಾರತದಲ್ಲಿ ಯುದ್ಧಪಂಚಕದ ಪರ್ವಗಳ ಅನಂತರದ ಪರ್ವಗಳಿಗೆ ಸ್ಥಾನವೇ ಇಲ್ಲವಾಗಿದೆ.

ಕವಿಯ ಸಂಗ್ರಹ ನೈಪುಣ್ಯ ಆದಿಪಂಚಕದಲ್ಲಿ ಕೆಲಸ ಮಾಡಿರುವ ರೀತಿಯನ್ನು ಇಲ್ಲಿ ದಿಙ್ಮಾತ್ರವಾಗಿ ಸೂಚಿಸಬಹುದಾಗಿದೆ :

ಅನುಕ್ರಮಣಿಕೆ, ಪರ್ವಸಂಗ್ರಹ, ಪೌಷ್ಯ, ಪೌಲೋಮಾಸ್ತೀಕ, ಅಂಶಾವತರಣಗಳೆಂಬ ಉಪಪರ್ವಗಳು ಬಲುಮಟ್ಟಿಗೆ ಲುಪ್ತವಾಗಿ, ಸಂಭವಪರ್ವದ ವಿವರಗಳು ಸಂಕ್ಷಿಪ್ತವಾಗಿ ಬಂದಿವೆ. ಭೀಷ್ಮ ವ್ಯಾಸರ ಜನನ, ಶಂತನು–ಸತ್ಯವತಿಯರ ಪ್ರಣಯ, ಅಂಬೆಯ ಕಥೆ, ಸತ್ಯವತಿ–ಭೀಷ್ಮರ ಸಂವಾದ, ಧೃತರಾಷ್ಟ್ರಾದಿ ಸೋದರರ ವಿವಾಹ, ಪಾಂಡು ದಿಗ್ವಿಜಯ, ಕಿಂದಮ ಮುನಿಶಾಪ, ಭೀಮ ನಾಗಲೋಕದಿಂದ ಸಿದ್ಧರಸ ಪಾನಮಾಡಿ ಬಂದುದು, ದ್ರೌಪದಿ–ಧೃಷ್ಟದ್ಯುಮ್ನರ ಜನನ, ಏಕಲವ್ಯನ ಕಥೆ, ಕುರುಬಾಲಕರ ಶಸ್ತ್ರವಿದ್ಯಾ ಪ್ರದರ್ಶನ, ಲಾಕ್ಷಾಗೇಹದಾಹ, ಭೀಮ ಹಿಡಿಂಬ ಯುದ್ಧ, ತಪತಿಯ ಚರಿತೆ — ಈ ಕೆಲವು ಬಹುವಾಗಿ ಸಂಕ್ಷಿಪ್ತಗೊಂಡಿವೆ. ವಸಿಷ್ಠ, ಕಲ್ಮಾಷಪಾದ ಮತ್ತು ಔರ್ವ ಉಪಾಖ್ಯಾನಗಳು, ಸೌದಾಸನ ಕಥೆ, ಬಹುಪತಿತ್ವ ನಿದರ್ಶನದ ಕಥೆಗಳಲ್ಲಿ ಕೆಲವು, ಭೌಮಾಶ್ವಿಯ ಮತ್ತು ಅಂಬುವೀಚರ ಕಥೆ ಇವು ಲುಪ್ತವಾಗಿರುವ ಉಪಕಥೆಗಳು (ಆದಿಪರ್ವ). ಕೃಷ್ಣಮಹಿಮಾವರ್ಣನೆ, ಮಯ ಸಭೆಯ ಪರಿಭವ ಹಾಗೂ ಭೀಮಾದ್ಯರ ಪ್ರತಿಜ್ಞಾವಾಕ್ಯ ಇವುಗಳನ್ನು ಸಂಗ್ರಹಿಸಿದೆ; ಪುನರ್ದ್ಯೂತ ಸಮರ್ಥನೆಯ ಸಲುವಾದ ಕಾರ್ತವೀರ್ಯಾರ್ಜುನನ ಕಥೆಯನ್ನು ಲೋಪಿಸಿದೆ (ಸಭಾಪರ್ವ). ಸಾಲ್ವಯುದ್ಧ, ಭೀಮ ದ್ರೌಪದಿಯರು ಯುಧಿಷ್ಠಿರನೊಡನೆ ನಡಸಿದ ಸಂವಾದ, ನಳೋಪಾಖ್ಯಾನ ಮತ್ತು ತೀರ್ಥಕ್ಷೇತ್ರಗಳ, ಮಹಾಪುರುಷರ ಮಹಿಮಾ ವರ್ಣನೆ, ಪ್ರಭಾಸ ತೀರ್ಥದಲ್ಲಿ ಯುಧಿಷ್ಠಿರನ ತಪಶ್ಚರ್ಯೆ, ಸೌಗಂಧಿಕಾ ಹರಣ ಪ್ರಸಂಗ, ಜಟಾಸುರ ನಿವಾತಕವಚಾದಿಗಳ ವಧೆ, ಮಾರ್ಕಂಡೇಯ ಸಮಸ್ಯಾಪರ್ವದ ಕಥೆಗಳು, ರಾಮನ ಮತ್ತು ಸಾವಿತ್ರಿಯ ಉಪಾಖ್ಯಾನಗಳು, ಯಕ್ಷಪ್ರಶ್ನೆ ಈ ಕಥಾಘಟ್ಟಗಳ ಮುಖ್ಯ ಹಾಗೂ ಉಪಕಥೆಗಳ ಬಹುಭಾಗ ತುಂಬ ಸಂಕ್ಷೇಪಗೊಂಡಿವೆ. ಇಲ್ಲಿಯೇ ಕಾಮಧೇನು ಮಕ್ಕಳಿಗಾಗಿ ಶೋಕಿಸುವ ಕಥೆ, ನರಕಾಸುರನ ಕಥೆ, ವರಾಹಾವತಾರದ ಕಥೆ ಈ ಮುಂತಾದುವು ಲೋಪಗೊಂಡಿವೆ (ವನಪರ್ವ). ಯುಧಿಷ್ಠಿರ ಕೃತ ದುರ್ಗಾಸ್ತುತಿ ಮತ್ತು ದುರ್ಗೆಯ ಹರಕೆ, ಸಮಯಪಾಲನ ಪರ್ವ ವಿವರಗಳು, ಕೀಚಕನ ಪೂರ್ವಚರಿತ್ರೆ, ಭೀಮ ದ್ರೌಪದಿಯನ್ನು ಸಮಾಧಾನಪಡಿಸುವಾಗ ನಿರೂಪಿಸಿದ ಸತೀಮಣಿಯರ ನಿದರ್ಶನ ಕಥೆಗಳು, ಪಾಂಡವ ಶೋಧವನ್ನು ಕುರಿತು ದುರ್ಯೋಧನ ನಡಸಿದ ಚರ್ಚೆ ಮತ್ತು ಭೀಷ್ಮರ ಸಮಾಧಾನ ಇವು ಲುಪ್ತವಾಗಿವೆ. ಸೈರಂಧ್ರೀವೇಷದ ದ್ರೌಪದಿಯ ರೂಪಾತಿಶಯದ ವರ್ಣನೆ, ಯುದ್ಧ ವರ್ಣನೆ ಮುಂತಾದುವು ಹ್ರಸ್ವಗೊಂಡಿವೆ (ವಿರಾಟಪರ್ವ). ದ್ರುಪದ ಪ್ರೇಷಿತ

ಪುರೋಹಿತ ದೌತ್ಯ, ಯಾನಸಂಧಿ, ದುರ್ಯೋಧನನ ಆತ್ಮವಿಶ್ವಾಸ, ಕರ್ಣನ ಪ್ರತಿಜ್ಞೆ ಮತ್ತು ಭೀಷ್ಮರ ಧಿಕ್ಕಾರ, ಪರಶುರಾಮನ ಮಾತು, ನಾರದನ ಹಿತವಚನ, ಗಾಲವೋಪಾಖ್ಯಾನ, ಉಪಪ್ಲಾವ್ಯದಲ್ಲಿ ಕೃಷ್ಣ ಹಸ್ತಿನಾವತಿಯ ವೃತ್ತಾಂತವನ್ನು ನಿರೂಪಿಸಿದ್ದು, ಪ್ರಜಾಗರಪರ್ವ ವಿವರಗಳು ಈ ಕೆಲವು ಬಹುವಾಗಿ ಸಂಕ್ಷೇಪಗೊಂಡಿವೆ. ದ್ರುಪದ ಪ್ರೇಷಿತ ದೌತ್ಯದಲ್ಲಿ ಭೀಷ್ಮ ಕರ್ಣಾದ್ಯರ ಚರ್ಚೆ, ಅತ್ಯಾಶೆಯು ಅನರ್ಥಕಾರಿಯೆಂದು ವಿದುರ ಧೃತರಾಷ್ಟ್ರನಿಗೆ ನಿರೂಪಿಸಿದ ಎರಡು ಪಕ್ಷಿಗಳ ನಿದರ್ಶನ, ವೃಕಸ್ಥಳದಲ್ಲಿ ಕೃಷ್ಣನಿಗೆ ಸತ್ಕಾರ, ಕಣ್ವನ ಹಿತವಚನ, ಗರುಡ ಗರ್ವಭಂಗದ ಕಥೆ, ದುರ್ಯೋಧನನಿಗೆ ತೊಡೆಯಲ್ಲೀ ಮರಣವೆಂಬ ಶಾಪ, ವಿದುಲೋಪಾಖ್ಯಾನ, ಅರ್ಜುನಾದಿಗಳಿಗೆ ಉಚಿತ ಬುದ್ಧಿವಾದ, ಸೈನ್ಯ ನಿರ್ಯಾಣ ಪರ್ವ, ಉಲೂಕದೂತಾಗಮನ ಪರ್ವ, ರಥಾತಿರಥ ಸಂಖ್ಯಾನ ಪರ್ವ, ಅಂಬೋಪಾಖ್ಯಾನ ಈ ಕೆಲವು ಬಲುಮಟ್ಟಿಗೆ ಲೋಪಗೊಂಡಿವೆ (ಉದ್ಯೋಗ ಪರ್ವ).

ಹೀಗೆಯೇ ಯುದ್ಧಪಂಚಕದಲ್ಲಿ ಸಹ ಕವಿಯು ಸಂಗ್ರಹಶೀಲ ಪ್ರವರ್ತಿಸಿರುವುದೆಂದು ಸಾಮಾನ್ಯವಾಗಿ ತಿಳಿಯಬಹುದಾಗಿದೆ.

ಕುಮಾರವ್ಯಾಸ ಭಾರತದ ಮುಖ್ಯ ಆಕರ ವ್ಯಾಸಭಾರತವೇ ಆದರೂ ಕಥಾರಂಜನೆ, ಪಾತ್ರಾವಿಷ್ಕಾರ ಮತ್ತು ರಸೋತ್ಕರ್ಷಗಳ ಸಲುವಾಗಿ ಅನ್ಯಭಾರತ ಕಥಾಮೂಲಗಳನ್ನೂ ಕುಮಾರವ್ಯಾಸ ಗಮನಿಸಿರುವುದು ಸಂಭವನೀಯವೇ ಆಗಿದೆ. ವಿಮರ್ಶಕರು ಭಾಸನ "ದೂತವಾಕ್ಯ", "ಊರುಭಂಗ" ನಾಟಕಗಳ, ಭಾರವಿಯ "ಕಿರಾತಾರ್ಜುನೀಯ" ಮತ್ತು ಮಾಘನ "ಶಿಶುಪಾಲವಧ" ಕಾವ್ಯಗಳ ಪ್ರತ್ಯಕ್ಷ ಅಥವಾ ಪರೋಕ್ಷ ಪ್ರಭಾವವನ್ನು ಗುರುತಿಸಬಹುದೆಂದಿದ್ದಾರೆ; ವಿಶೇಷವಾಗಿ ಪಂಪಕವಿಯ ಕನ್ನಡ ಕಾವ್ಯ "ವಿಕ್ರಮಾರ್ಜುನ ವಿಜಯ"ದ ಅನುಸರಣೆಯನ್ನು ನಿದರ್ಶನಪೂರ್ವಕವಾಗಿ ಸಮರ್ಥಿಸಿದ್ದಾರೆ. ಈ ಪ್ರಭಾವ ಅನುಸರಣೆಗಳು ಸಮಾನವಾಗಿ ಕಥಾಂಶ ವರ್ಣನಾಂಶಗಳೆರಡಕ್ಕೂ ಅನ್ವಯಿಸುತ್ತವೆ. ರನ್ನನ ಗದಾಯುದ್ಧವನ್ನು ಗಮನಿಸಿರುವ ಸಾಧ್ಯತೆಯೂ ಬಹುಶಃ ಇದೆ (ಕರ್ಣ ೧೯–೯೩). ಅಲ್ಲದೆ "ಹಿತೋಪದೇಶ", "ಶುಕ್ರನೀತಿಸಾರ" ಇಂತಹ ನೀತಿಗ್ರಂಥಗಳ ಅನುವಾದಗಳೂ ಇವೆಯೆನ್ನಲಾಗಿದೆ. ಜನಶ್ರುತಿಯ ಭಾರತ ಕಥಾಂಶಗಳು ಬೆರತಿರುವುದಂತೂ ಶಕ್ಯವೇ.

ಕಥಾಸಂದರ್ಭಗಳ ದೃಷ್ಟಿಯಿಂದ ಕುಮಾರವ್ಯಾಸ ಮೂಲಭಾರತದ ಸಾಮಗ್ರಿಯನ್ನು ಯಥೋಚಿತವಾದ ಕೌಶಲದಿಂದ ಬಳಸಿದ್ದಾನೆ. ಘಟನೆಗಳನ್ನು ಪೂರ್ತಿಯಾಗಿ ಕೈಬಿಡುವುದು ಇಲ್ಲವೆ ಉಚಿತಪ್ರಮಾಣದಲ್ಲಿ ಸಂಕ್ಷೇಪಿಸುವುದು ಒಂದು ತೆರನಾದರೆ, ಅಲ್ಪಸ್ವಲ್ಪ ವ್ಯತ್ಯಾಸಗಳೊಂದಿಗೆ ಸಣ್ಣಪುಟ್ಟ ಸೇರ್ಪಡೆಗಳೊಂದಿಗೆ ಪರಿಷ್ಕರಿಸಿ ಸ್ವೀಕರಿಸುವುದು ಇನ್ನೊಂದು ತೆರನಾಗಿದೆ. ಕೆಲವು ಕಡೆ ಮೂಲದ ಘಟನೆಗಳೋ ಕಥಾಂಶಗಳೋ ಸ್ಥಳಾಂತರಗೊಂಡಿರುವುದೂ ಉಂಟು. ಈ ಬಗೆಯ ಲೋಪ, ಸಂಕ್ಷೇಪ ಮೊದಲಾದವುಗಳ ಸಂವಿಧಾನವು ಘಟನೆಗಳಿಗೆ ಮಾತ್ರವೇ ಅಲ್ಲದೆ

ವರ್ಣನೆ, ಪಾತ್ರರಚನೆ, ನೀತಿಬೋಧೆ ತತ್ತ್ವೋಪದೇಶಗಳಿಗೆ ಸಹ ಅನ್ವಯಿಸುವು ದೆನ್ನಬೇಕು.

ಘಟನೆಗಳನ್ನು ಕೈಬಿಡುವ ಹಾಗೂ ಸಂಕ್ಷೇಪಿಸುವ ವಿಷಯದಲ್ಲಿ ಕುಮಾರವ್ಯಾಸ ವಹಿಸಿರುವ ಸ್ವಾತಂತ್ರ್ಯವೂ ತೋರಿಸಿರುವ ಧೈರ್ಯವೂ ಪ್ರಕಟಿಸಿರುವ ಔಚಿತ್ಯ ಪ್ರಜ್ಞೆಯೂ ಮಿಗಿಲಾಗಿ ಮೆಚ್ಚತಕ್ಕವಾಗಿವೆ. ಈ ಕಾರಣದಿಂದಾಗಿಯೇ ಮುಖ್ಯ ಕಥೆಯು ಹರಿವಿಗೆ, ಅದು ಸಾಧಿಸಬೇಕಾದ ಫಲ ಪರಿಣಾಮಗಳಿಗೆ ಕೃತಕೃತ್ಯತೆ ಸಾಧ್ಯ ವಾಗಿದೆ. ಈ ಮಾತು ವರ್ಣನೆ, ನೀತಿಬೋಧೆ ಮತ್ತು ತತ್ತ್ವೋಪದೇಶಗಳಿಗೆ ಸಹ ಅನ್ವಯಿಸುತ್ತದೆ. ಇವು ಮುಖ್ಯಕಥೆಯನ್ನು ಪೋಷಿಸುವಂತೆ, ಅದಕ್ಕೆ ಹೊಂದಿ ಕೊಂಡು ಅಧೀನವಾಗಿ ಬರುವುದೇ ಸಾಮಾನ್ಯ.

ಇನ್ನು ವ್ಯತ್ಯಾಸ, ಸೇರ್ಪಡೆಗಳ ವಿಚಾರ: ಕುಮಾರವ್ಯಾಸ ಭಾರತ ಮೂಲದ ಮುಖ್ಯವಾದ ಕಥೆ ಮತ್ತು ಅದರ ಆಶಯವನ್ನು ಮೀರುವ ಯತ್ನವನ್ನು ಎಲ್ಲಿಯೂ ಮಾಡಿರುವ ಹಾಗೆ ತೋರುವುದಿಲ್ಲ ಎಂದು ನಿಶ್ಚಯವಾಗಿ ಗ್ರಹಿಸುವುದು ಸಾಧ್ಯವಾ ಗದು. ಕಥೆಯು ಮೂಲರೇಖೆಗಳ ಅನುಸರಣೆ ಸ್ಪಷ್ಟವೇ ಆದರೂ, ಕಾವ್ಯದಲ್ಲಿ ದುರ್ಯೋಧನ ಕರ್ಣ ಮೊದಲಾದ ಕೆಲವು ಪ್ರಮುಖ ಪಾತ್ರಗಳ ಚಿತ್ರಣದ ದೃಷ್ಟಿ ಯಿಂದಲೂ ತುಂಬಿ ಸೂಸುತ್ತಿರುವ ಕೃಷ್ಣಮಹಿಮೆಯು ಕವಿದರ್ಶನ ವಿಶೇಷದಿಂದಲೂ, ಆಶಯದ ಮಟ್ಟಿಗೆ ಬೇರೆತನವೂ ವಿದಿತವಾಗುವಂತಿದೆ. ಈ ಆಶಯದ ಬೇರೆತನ ಬಲುಮಟ್ಟಿಗೆ ಪಾತ್ರರಚನೆಯಲ್ಲಿ ಆಗಿರುವ ಕವಿಯು ಹಾಗೂ ಕಾಲದ ದೃಷ್ಟಿವಿಶೇಷದ ಮಾರ್ಪಾಡುಗಳಿಂದಲೂ ಮೇಲ್ಪಾಡುಗಳಿಂದಲೂ ಸಿದ್ಧವಾದುವೆಂಬು ಹೇಳಲು ಸಾಧ್ಯ. ಮೂಲದ ಕಥಾಂಶಗಳ ವ್ಯತ್ಯಾಸ ಮತ್ತು ಸೇರ್ಪಡೆಗಳು ಸಾಮಾನ್ಯವಾದವು, ಸ್ವಲ್ಪವಾದವು. ಇವು ಮುಖ್ಯಕಥೆಯ ಗತಿಯ ದೃಷ್ಟಿಯಿಂದಲೂ, ಪರಿಣಾಮದ ದೃಷ್ಟಿ ಯಿಂದಲೂ ತುಂಬ ಗಮನಾರ್ಹವೇನಲ್ಲ. ವಿಶೇಷವಾಗಿ "ಪಂಪಭಾರತ"ವನ್ನು ಅನು ಸರಿಸಿದ, ಆ ಕಾರಣದಿಂದಾಗಿ ವ್ಯತ್ಯಾಸಗಳನ್ನು ಹೂಡಿದ ಭಾಗಗಳಲ್ಲಿಯೂ ಪ್ರಮುಖ ವಾದ ಕಥಾವ್ಯತ್ಯಾಸಗಳೆಂದು ಹೇಳಬಹುದಾದುವು ಹೆಚ್ಚಾಗಿ ಏನೂ ಇಲ್ಲ. ಕವಿ ಸ್ವತಃ ಹೊಸದಾಗಿ ಸೇರಿಸಿದ ಕಥಾಂಶಗಳಾದರೂ ಗೌಣವಾದುವೇ ಆಗಿವೆ. ಇವೆಲ್ಲ ಮೂಲದ ಆಶಯವನ್ನು ಸ್ಫುಟಗೊಳಿಸಲೂ ಮೊನೆಗೊಳಿಸಲೂ ಮಾಡಿಕೊಂಡ ಮಾರ್ಮಿಕವಾದ ಸಣ್ಣಪುಟ್ಟ ತಿರುವುಗಳು. ಇವನ್ನು ವಿಮರ್ಶಕರು ಈಗಾಗಲೇ ಗುರುತಿಸಿದ್ದಾರೆ; ಸಂಪಾದಕರು ಪಟ್ಟಿಮಾಡಿದ್ದಾರೆ. ಕಥಾಗತಿಗೆ ಸಂಬಂಧಿಸಿ ಅಂಬೆಯ ಕಥೆ, ಕರ್ಣ ಇಂದ್ರನಿಗೆ ಕವಚ ಕುಂಡಲಗಳನ್ನು ದಾನಮಾಡಿದ ಪ್ರಸಂಗ, ದ್ರೌಪದೀ ಧೃಷ್ಟದ್ಯುಮ್ನರ ಜನ್ಮವೃತ್ತಾಂತ, ಪಾಂಡುವಿನ ರಾಜ್ಯಾಭಿಷೇಕ ಮತ್ತು ಸಂತಾನಪ್ರಾಪ್ತಿ ವಿಚಾರ, ಮೈತ್ರೇಯರ ಶಾಪ, ದುರ್ವಾಸಾತಿಥ್ಯ, ವಿದುರಾತಿಥ್ಯ, ಕರ್ಣ ಶಸ್ತ್ರ ಹಿಡಿಯದ ಪ್ರತಿಜ್ಞೆ ಮಾಡಿದುದು—ಈ ಕೆಲವು ಕಥಾಂಶಗಳು ಸ್ಥಳಾಂತರ ಗೊಂಡಿರುವುದೂ ವಿದಿತವೇ ಆಗಿದೆ.

ಸನ್ನಿವೇಶಗಳು

"ಪ್ರತಿಪರ್ವ ರಸೋದಯ" ಎಂಬ ಮಾತನ್ನು ಸಾರ್ಥಕಪಡಿಸುವಂತೆ ಕುಮಾರವ್ಯಾಸ ಭಾರತದಲ್ಲಿ ಪರ್ವದಿಂದ ಪರ್ವಕ್ಕೆ ಸಾಗುತ್ತಿದ್ದ ಹಾಗೆ, ಬಿಟ್ಟು ಬಿಡದಂತೆ ಒಂದಾದ ಮೇಲೊಂದು ರಸಘಟ್ಟ ತೆರೆಯೇಳುವುದನ್ನು ಕಾಣಬಹುದು. ಆದಿಪರ್ವದಲ್ಲಿ ಕರ್ಣ ಜನನ, ಕಿಂದಮಮುನಿ ಶಾಪ, ಪಾಂಡುವಿನ ಮರಣ, ಕುರುಬಾಲಕರ ಬಾಲಲೀಲೆ, ದ್ರೋಣ–ದ್ರುಪದ ಸಂವಾದ, ವ್ಯಾಯಾಮ ರಂಗದಲ್ಲಿ ಕುರುಬಾಲಕರ ಶಸ್ತ್ರಶಿಕ್ಷೆಯ ಪ್ರದರ್ಶನ, ಹಿಡಿಂಬ ವಧೆ, ಬಕ ವಧೆ, ದ್ರೌಪದೀ ಸ್ವಯಂವರ, ಸುಭದ್ರಾ ಹರಣ, ಖಾಂಡವ ದಹನ ಭಾಗಗಳೂ; ಸಭಾಪರ್ವದಲ್ಲಿ ರಾಜಸೂಯ ಯಾಗಾರಂಭ, ಜರಾಸಂಧ ವಧೆ, ಶಿಶುಪಾಲ ವಧೆ, ಕಪಟದ್ಯೂತ, ದ್ರೌಪದೀವಸ್ತ್ರಹರಣ, ವನಾಭಿಗಮನ ಭಾಗಗಳೂ; ಅರಣ್ಯಪರ್ವದಲ್ಲಿ ಕಿರಾತಾರ್ಜುನೀಯ, ಅರ್ಜುನೋರ್ವಶೀಯ, ಸೌಗಂಧಿಕಾ ಹರಣ, ಅಜಗರ ಪ್ರಸಂಗ, ಘೋಷಯಾತ್ರೆ, ಜಯದ್ರಥ ಪರಾಭವ, ಯಕ್ಷಪ್ರಶ್ನೆ ಈ ಭಾಗಗಳೂ; ವಿರಾಟಪರ್ವದಲ್ಲಿ ಕೀಚಕವಧೆ, ಗೋಗ್ರಹಣ ಪ್ರಸಂಗ ಮತ್ತು ಅದರ ಭಾಗವಾಗಿ ಉತ್ತರನ ಪೌರುಷ ಪ್ರಕರಣವೂ; ಉದ್ಯೋಗಪರ್ವದಲ್ಲಿ ಕೃಷ್ಣ ರಾಯಭಾರದ ಪೂರ್ವಸಮಾಲೋಚನೆ, ವಿದುರಾತಿಥ್ಯ, ಕೃಷ್ಣ ರಾಯಭಾರ, ಕರ್ಣಭೇದ ನೀತಿ, ಕುಂತೀ–ಕರ್ಣ ಸಂದರ್ಶನ ಈ ಘಟನೆಗಳೂ; ಭೀಷ್ಮಪರ್ವದಲ್ಲಿ ಭೀಷ್ಮಸೇನಾಧಿಪತ್ಯ, ಅರ್ಜುನವಿಷಾದ ಮತ್ತು ಗೀತೋಪದೇಶ, ಭೀಷ್ಮಾರ್ಜುನ ಸಂಗ್ರಾಮ, ಭೀಷ್ಮರ ಶರಶಯ್ಯೆ ಇವೂ; ದ್ರೋಣಪರ್ವದಲ್ಲಿ ಸುಪ್ರತೀಕ ಗಜಾವಷ್ಟಂಭ, ಅಭಿಮನ್ಯು ಪ್ರತಾಪ ಮತ್ತು ಸೈಂಧವ ವಧೆ, ದ್ರೋಣ ಪ್ರತಾಪ ಮತ್ತು ಮರಣ ಸಂದರ್ಭಗಳೂ; ಕರ್ಣಪರ್ವದಲ್ಲಿ ಶಲ್ಯ ಸಾರಥ್ಯಕ್ಕೆ ದುರ್ಯೋಧನನ ಸಂಧಾನ, ಶಲ್ಯ ಕರ್ಣರ ಸಂವಾದ, ದುಶ್ಶಾಸನ ವಧೆ, ಕರ್ಣಾರ್ಜುನ ಸಂಗ್ರಾಮ ಮತ್ತು ಕರ್ಣಾವಸಾನಗಳೂ; ಶಲ್ಯಪರ್ವದಲ್ಲಿ ಧರ್ಮಜ–ಶಲ್ಯ ಸಂಗರ ವರ್ಣನೆಯೂ; ಗದಾಪರ್ವದಲ್ಲಿ ಭೀಮದುರ್ಯೋಧನೀಯ ಮತ್ತು ಪಾಂಡವಹತ್ಯೆಗೆ ಅಶ್ವತ್ಥಾಮನ ವಿಫಲ ಪ್ರಯತ್ನ ಇವೂ—ಗಮನಾರ್ಹವಾದ ಕಥಾಘಟ್ಟಗಳಾಗಿವೆ.

ಈ ಕಥಾಘಟ್ಟಗಳ ವಸ್ತುವಿನ್ಯಾಸ ಹೆಚ್ಚು ಆಕರ್ಷಕವಾಗುವಂತೆ ಕವಿ ಏನು ಕವಿತಾಚಾತುರ್ಯವನ್ನು ಮೆರೆದಿದ್ದಾನೆ ಎಂಬುದು ಗಮನಿಸಬೇಕಾದ್ದು. ಈ ಚಾತುರ್ಯದ ಮೂಲದ್ರವ್ಯ ಪ್ರತಿಭೆಯೇ ಆದರೂ ಆಯಾ ಘಟ್ಟವನ್ನು ಬಿಡಿಬಿಡಿಯಾದ ಸನ್ನಿವೇಶವನ್ನಾಗಿ ಕಟ್ಟುವ ಮೂಲಕ, ಆ ಸನ್ನಿವೇಶ ರಸ ವರ್ಣನೆ ನಾಟಕೀಯತೆ ಮತ್ತು ಪಾತ್ರರಚನೆಗಳೆಂಬ ಶಕ್ತಿಮೂಲಗಳಿಂದ ಸಜೀವಚಿತ್ರವಾಗಿ ಸಹೃದಯರ ಕಣ್ಮುಂದೆ ಹೊಳೆದು ನಿಲ್ಲುವಂತೆ ಒಂದು ವಾಗ್ರೂಪವನ್ನು ಕೊಡುವ ಮೂಲಕ, ಆ ಪ್ರತಿಭೆಯ ಆವಿಷ್ಕಾರವನ್ನು ಮೆರೆದಿದ್ದಾನೆ. ರಸಾದಿ ಶಕ್ತಿಮೂಲಗಳು ಕವಿಯ ವ್ಯುತ್ಪತ್ತಿ ಪ್ರತಿಭೆಗಳ ಫಲವಾದವು; ವಾಗ್ರೂಪವು ದೇಸಿನಿಷ್ಠ ನಡುಗನ್ನಡದ

ನುಡಿನಿರಿಂಗೆ ಕವಿಯು ಕೈಯುಪಕರವಲ್ಲಿ ಪಳಗಿ ಪಕ್ವವಾದುದರ ಲಕ್ಷಣವನ್ನು ಸ್ಫುಟಗೊಳಿಸುವಂತಹುದು.

ಸನ್ನಿವೇಶ ಸೃಷ್ಟಿಯಲ್ಲಿ ಕವಿಶಕ್ತಿ ಹೇಗೆ ಕೆಲಸ ಮಾಡಿದೆಯೆಂದು ತಿಳಿಯಲು ಒಂದು ಕಥಾಪ್ರಸಂಗವನ್ನು ಇಲ್ಲಿ ಎತ್ತಿಕೊಳ್ಳಬಹುದಾಗಿದೆ. ಈ ಪ್ರಸಂಗ ಮೂಲ ಭಾರತದ ಸೌಪ್ತಿಕ ಪರ್ವದೊಳಗಿನದು. ಇದು "ಪಂಪಭಾರತ"ದ ೧೩ನೆಯ ಆಶ್ವಾಸದಲ್ಲಿಯೂ (೯೮ ವ., – ೧೦೮) "ಗದಾಯುದ್ಧ"ದ ೯ನೆಯ ಆಶ್ವಾಸದಲ್ಲಿಯೂ (೧–೩೪ ವ.) ಬಂದಿದೆ, ಇದನ್ನು ಕುಮಾರವ್ಯಾಸನು ತನ್ನ ಕೃತಿಯ ಗದಾಪರ್ವದ ೮ರಿಂದ ೧೦ನೆ ೨ ಸಂಧಿಗಳಲ್ಲಿ ನಿರೂಪಿಸಿದ್ದಾನೆ. ಮೂಲಭಾರತದ ವಿಸ್ತಾರವೂ ಕೆಲವಂಶದ ವಿವರಗಳೂ ಇಲ್ಲಿ ಕಾಣಿಸದಿದ್ದರೂ, ಅಲ್ಲಿಯದೇ ಕಥಾಗತಿ ಇಲ್ಲಿಯದು; ಅಲ್ಲದೆ ಪಂಪ ರನ್ನರ ವಸ್ತುವ್ಯಾಪ್ತಿಗಿಂತ ಎಷ್ಟೋ ದೊಡ್ಡದು, ಸೊಗಸಾದುದು.

ಭಾರತ ಯುದ್ಧದ ಕೊನೆಯ ಘಟ್ಟದಲ್ಲಿ ನಿದ್ರಾವಶರಾಗಿ ವಿಶ್ರಾಂತಿಯಲ್ಲಿದ್ದ ಪಾಂಡವದಳದ ವೀರರನ್ನು ವೀರೋಚಿತವಲ್ಲದ ರೀತಿಯಲ್ಲಿ ಅಶ್ವತ್ಥಾಮನು ವಧೆ ಮಾಡಿದ ಈ ಮಾರ್ಮಿಕ ಪ್ರಸಂಗ ಏಕಕಾಲದಲ್ಲಿ ಭಯ ಬೀಭತ್ಸಗಳ ನೆಲೆ, ಶೋಕ ಕರುಣೆಗಳ ನೆಲೆ ಆಗಿ ಪರಿಣಮಿಸಿದೆ. ದುರ್ಯೋಧನ ಹತೋರುವಾಗಿ, ಮುರಿದು ಬಿದ್ದ ಮಹಾವೃಕ್ಷದ ಹಾಗೆ ರಣಾಂಗಣದಲ್ಲಿ ಬಿದ್ದ ಹಿನ್ನೆಲೆಯಲ್ಲಿ ಈ ಪ್ರಸಂಗ ಬೆಳೆದಿರುವುದರಿಂದ ಇಲ್ಲಿ ನಮ್ಮ ಮನಸ್ಸನ್ನು ತುಂಬಿಕೊಳ್ಳುವುದು ಒಂದು ದಾರುಣ ವಿಷಾದಮಯ ಭಾವಪ್ರಪಂಚ. ಅಧರ್ಮಮೂಲವಾದ ವಂಚನೆಯೂ ಸಂಚೂ ಹೇಗೆ ವಿಧಿವಿಲಾಸದಿಂದ ಇಲ್ಲವೆ ದೈವಶಕ್ತಿಯಿಂದ ಹುಸಿಹೋಗುವುದು ಎಂಬುದನ್ನು ಅಶ್ವತ್ಥಾಮನ ಈ ಉಪಾಂಶುವಧೆಯ ಪ್ರಯತ್ನ ವಿಫಲಗೊಂಡ ರೀತಿಯಿಂದ ತಿಳಿಯಬಹುದಾಗಿದೆ.

ಕೌರವ ಪಕ್ಷದಲ್ಲಿ ಅಳಿಯುಳಿದ ವೀರರಲ್ಲಿ ಕೃಪ ಕೃತವರ್ಮರೂ ಅಶ್ವತ್ಥಾಮನೂ ದುರ್ಯೋಧನನಿಗೆ ಒದಗಿದ ದುಃಸ್ಥಿತಿಗೆ ಮರುಗಿದ ಮೇಲೆ, ಪಾಂಡವರನ್ನೂ ಪಾಂಚಾಲರನ್ನೂ ಕೃಷ್ಣನ ಕಣ್ಣೆದುರಿನಲ್ಲಿಯೇ ಕೊಲ್ಲುವ ಸಂಕಲ್ಪವನ್ನು ಅಶ್ವತ್ಥಾಮನು ಕೈಕೊಂಡಂತೆಯೂ ದುರ್ಯೋಧನನು ಅವನಿಗೆ ಸೈನ್ಯಾಧಿಪತ್ಯವನ್ನು ನೀಡಿದುದಾಗಿಯೂ ಮೂಲಭಾರತದ ಕಥನದಲ್ಲಿದೆ. ಹತೋರುವಾದರೂ ಹತಾಶನಾಗದ ದುರ್ಯೋಧನನ ಈ ವರ್ತನೆ ನಮಗೆ ಬೇಸರ ಕನಿಕರಗಳನ್ನು ತರುತ್ತವೆ. ಕುಮಾರವ್ಯಾಸನ ದುರ್ಯೋಧನನಾದರೋ "ಹದುಳಿಸಿರೆ ಸಾಕೇಳಿ ಸಾಕಿ! ನ್ನಿದಱಲಿನ್ನೇನಹುದು ದೈವದ। ಕದಡು ಮನಗಾಣಿಸಿತು ನಮಗೀ ಕಂಟಕವ್ಯಥೆಯು। ಉದಯದಲಿ ನಾವೀ ಶರೀರವ। ನೊದೆದು ಹಾಯ್ವೆವು ನೀವು ನಿಜಮಾ। ರ್ಗದಲಿ ಬಿಜಯಂಗೈವುದು" ಎನ್ನುತ್ತಾನೆ, ಅವರ ಪರಿತಾಪವನ್ನು ಕಂಡು. ಮುಂದುವರಿದು, ಅಶ್ವತ್ಥಾಮನ ನಿರ್ಧಾರ ಅವನಿಗೆ "ಮತಿವಿಕಳತನ"ದಂತೆ ಕಾಣುತ್ತದೆ; "ಬಕನ ಧರ್ಮಸ್ಥಿತಿ"ಯನ್ನು ಅನುಸರಿಸಿ "ಕೌಳಿಕದ ಸಿದ್ಧ"ನಾದ ಕೃಷ್ಣ ಪಾಂಡವರನ್ನು ರಕ್ಷಿಸುತ್ತಿರುವ

ನೆಂದು ಅವನು ಸ್ಪಷ್ಟವಾಗಿ ತಿಳಿಸುತ್ತಾನೆ. ನೇರವಾಗಿ ಗುರುಸುತನಿಗೆ, "ನಿನ್ನ ಭುಜಬಲ! ವಾಗುರೆಯು ವೇಢೆಯಲಿ ಬೀಳದು ಕೃಷ್ಣಬುದ್ಧಿವ್ಯಾಗ" ಎಂದು ಎಚ್ಚರದ ನುಡಿಯಾಡುತ್ತಾನೆ. ಅವನ ಒತ್ತಾಯಕ್ಕೆ ಒಪ್ಪಿಕೊಂಡನೆಂಬಂತೆ, "ಈಗಳೇ ನಿರ್ಬಂಧ-ವಚನವಿ! ರಾಗವೆಮಗೇಕಾರಿಗಾವುದು! ಭಾಗಧೇಯವದಾಗಲಿ" ಎಂದು ಆಡಿ ಸುಮ್ಮನಾಗುತ್ತಾನೆ. ಈ ನಿರೂಪಣೆಯಿಂದ ದುರ್ಯೋಧನ ನಮಗೆ ತನ್ನ ಛಲದಲ್ಲಿ ಸೋತಹಾಗೆ ಕಂಡರೂ, ಕಡೆಗಾದರೂ ಬುದ್ಧಿ ಬಂದ ಒಂದು ನೊಂದ ಜೀವದ ಲಕ್ಷಣವನ್ನು ಮನಗಾಣಿಸಿದಂತಿದೆ. ಅವನಿಗೆ ದೈವಶಕ್ತಿಯ ಬಲುಹು ಗೋಚರವಾಗಿದೆ, ತನ್ನ ದುಶ್ಚರಿತಗಳು ಅರ್ಥವಾಗಿವೆ, ಛಲದ ಒರತೆ ಹಿಂಗಿ ಅವನ ಮನಸ್ಸು ಹಣ್ಣಾಗಿದೆ—ಎಂದು ನಾವು ಭಾವಿಸುವಂತಾಗುತ್ತದೆ. ತನ್ನ ಪ್ರತಿಜ್ಞೆಯನ್ನು ಪೂರೈಸಿಕೊಳ್ಳುವಲ್ಲಿ ಅಶ್ವತ್ಥಾಮ ಸಫಲನಾಗುವುದಿಲ್ಲ ಎಂಬ ತಿಳಿವಳಿಕೆ ಅವನಿಗೆ ಬಂದಿರುವುದೂ ವಿದಿತವಾಗುತ್ತದೆ. "ತನ್ನ ಅವಸ್ಥೆ ವಿಧಿಯೋಗದಿಂದಾದುದು. ಇದಕ್ಕೆ ನೋಯಬೇಕಾದುದಿಲ್ಲ. ಕೃಷ್ಣ ಪಕ್ಕದಲ್ಲಿರಬೇಕಾದರೆ ಪಾಂಡವರನ್ನು ಗೆಲ್ಲಲಾಗದು; ಆದರೆ ನೀನು 'ಕೊಲ್ಲುತ್ತೇನೆ' ಎನ್ನುವೆಯಾದರೆ, ನಾನೇಕೆ ಆಗದು ಎನ್ನಲಿ, ನನ್ನ ಜೀವ ಹೋಗುವುದರೊಳಗೆ ಶತ್ರುಗಳನ್ನು ಸಂಹರಿಸಿ ಬಾ"—ಎಂಬುದಾಗಿ ಬಂದಿರುವ ಪಂಪನ ಮಾತುಗಳು ಮೂಲಭಾರತದ ಮಾತುಗಳನ್ನೂ ಧೋರಣೆಯನ್ನೂ ಪ್ರಕಟಿಸುತ್ತವೆ; ಕುಮಾರವ್ಯಾಸನು ಈ ಸಂದರ್ಭದಲ್ಲಿ ವಿಧಿಹತ ಜೀವನವೊಂದರ ನಿಸ್ಸಹಾಯಕ ಸ್ಥಿತಿಯನ್ನು ಚಿತ್ರಿಸಿದ್ದಾನೆ "ಏನೇನು ಆಗಬೇಕಾಗಿದೆಯೋ, ಆಗಿಹೋಗಲಿ" ಎನ್ನುವುದು ಇಲ್ಲಿಯ ಧೋರಣೆ. ಮಾನವ ಸಹಜವಾದ ಹತಾಶೆ ದೌರ್ಬಲ್ಯಗಳಿಗೆ ಅನುಗುಣವಾದುದು ಇದು.

ಕೃಪ ಕೃತವರ್ಮ ಸಹಾಯನಾಗಿ ಅಶ್ವತ್ಥಾಮನು ದುರ್ಯೋಧನನನ್ನು ಅರಸಿ ಬರುವಾಗ, ದಾರಿಯಲ್ಲಿ ಅವನು ಕುರುಕುಲದ ರಾಜ್ಯಲಕ್ಷ್ಮಿಯನ್ನು ಕಂಡು, ನುಡಿಸಿ, ಒಡಗೊಂಡು ಹೊರಟನೆಂಬ ಪಂಪ ರನ್ನರ ನಿರೂಪಣೆಯನ್ನು ಕುಮಾರವ್ಯಾಸ ಕೈಬಿಟ್ಟಿದ್ದಾನೆ. ಇದು ಮೂಲದಲ್ಲಿಯೂ ಇರುವಂತಿಲ್ಲ. ನಷ್ಟರಾಜ್ಯನಾದ ದುರ್ಯೋಧನನ ದುರ್ಗತಿಯ ಪ್ರತೀಕವಾಗಿ ಬರುವ ಈ ಚಿತ್ರ ಅಷ್ಟು ಸಹಜವೆಂದೂ ಅವಶ್ಯವೆಂದೂ ಅವನಿಗೆ ತೋರಿರಲಾರದು. ಅಲ್ಲದೆ ಪೌರುಷಪ್ರಣಯಿಯಾದ ದುರ್ಯೋಧನನ ಪಾತ್ರಕ್ಕೆ ಅದು ಮೆರುಗು ಕೊಡುವಂಥದೇನೂ ಅಲ್ಲ.

ಅಶ್ವತ್ಥಾಮನು ಕೃತಸಂಕಲ್ಪನಾಗಿ ತೆರಳಿದ ಮೇಲೆ, ನಿದ್ದೆಯಿಲ್ಲದ ರಾತ್ರಿಯಲ್ಲಿ ಆಲದ ಮರವೊಂದರ ಮೇಲೆ ಕಾಗೆಗಳ ಕೊತ್ತವನ್ನು ಭೀಕರವಾಗಿ ಕೊಂದಿಕ್ಕಿದ ಗೂಗೆಯೊಂದರ ಚರ್ಯೆ ಉಪಾಂಶುವಧೆಗೆ ಅವನನ್ನು ಪ್ರೇರಿಸಿತು ಎನ್ನುವುದು ಮುಂದಿನ ಘಟನೆ. ಇದು ಮೂಲದಲ್ಲಿಯೇ ಹೃದಯಂಗಮವಾಗಿದೆ. ಪಂಪ ರನ್ನರಲ್ಲಿ ಇದು ಬಂದಿಲ್ಲ. ಹಗಲೆಚ್ಚರ, ಇರುಳುನಿದ್ದೆ ಇವು ಪ್ರಕೃತಿ; ವಿಪರೀತ ವರ್ತನೆಯನ್ನು ತೋರುವ ಗೂಗೆ ವಿಕೃತಿಗೆ ಪ್ರತೀಕ. ಗುರುಸುತನು ತನ್ನನ್ನು ಗೂಗೆಯು

ಸ್ಥಾನದಲ್ಲಿ ಕಲ್ಪಿಸಿಕೊಂಡು, ಅಸಹಾಯರಾಗಿ ಅನವಧಾನ ಸ್ಥಿತಿಯಲ್ಲಿ ಮಲಗಿದ್ದ ಪಾಂಡುಪುತ್ರರಾದಿಯಾದವರನ್ನು ಘಾತಿಸಿದ್ದು ಒಂದು ಅಕ್ಷಮ್ಯವಾದ ಘೋರಕಾರ್ಯ; ರಾಕ್ಷಸೀವೃತ್ತಿಗೆ ಅನುಗುಣವಾದ ಪಾಪಕಾರ್ಯ. ತನ್ನ ವಿಚಾರವನ್ನು, ತನಗೆ ಪ್ರೇರಣೆಯಾದ ಸನ್ನಿವೇಶದೊಂದಿಗೆ ಕೃಪ ಕೃತವರ್ಮರೊಂದಿಗೆ ತಿಳಿಸಿ, "ಈ ನಿದರುಶನದಿಂದ ಪಾಂಡವ। ಸೇನೆಯನು ಕಗ್ಗೊಲಿಯೊಳಗೆ ಕೊಲಲೇನು ಹೊಲ್ಲೆಹ ಮಾವ?" ಎಂಬುದಾಗಿ ಪ್ರಶ್ನಿಸಿ, ಅವರ ಸಲಹೆಯನ್ನು ನಿರೀಕ್ಷಿಸಿದಾಗ, ಅವನು ಎಂತಹ ಅಧಃಪಾತದಲ್ಲಿದ್ದಾನೆ ಎಂಬುದು ಅರಿವಾಗುತ್ತದೆ. ಕುಲೀನಬ್ರಾಹ್ಮಣನಾಗಿ ಅವನಲ್ಲಿ ಇಂತಹ ನೀಚವಿಚಾರ ಹೇಗೆ ಹುಟ್ಟಿತು? ಕ್ಷತ್ರಧರ್ಮವನ್ನು ಈಗ ಹಿಡಿದಿರುವನೆಂದು ಇಟ್ಟುಕೊಂಡರೂ, ಈ ಹೇಯರೀತಿಯ ಕೊಲೆಗೆಲಸಕ್ಕೆ ಅವನ ಮನಸ್ಸು ಹೇಗೆ ಒಡಂಬಟ್ಟಿತು?—ಈ ಪ್ರಶ್ನೆಗಳು ಸಹಜ. "ವಿಜಯಶಾಲಿಗಳೂ ಬಲಿಷ್ಠರೂ ಉತ್ಸಾಹಿಗಳೂ ಆದ ಪಾಂಡವರನ್ನು ಹೀಗೆ ಕಪಟರೀತಿಯಿಂದ ಕೊಲ್ಲದಿದ್ದರೆ, ತಾನು ದುರ್ಯೋಧನನ ಎದುರಿನಲ್ಲಿ ಮಾಡಿದ ಪಾಂಡವ ವಧೆಯ ಪ್ರತಿಜ್ಞೆಯನ್ನು ಪೂರೈಸುವುದು ತನ್ನಿಂದ ಆಗದ ಕೆಲಸ" ಎಂಬುದು ಅವನಿಗೆ ಚೆನ್ನಾಗಿ ಮನವರಿಕೆಯಾಗಿದ್ದಿತು. ಇದು ವ್ಯಾಸರ ಮಾತು (ಅ. ೧–೪೫, ೪೬). ಇದೊಂದು ಹತಾಶ ವಿಚಾರ. ಕೃಪ ಕೃತವರ್ಮರಿಗೆ ಇದು ಒಪ್ಪಿಗೆಯಾಗುವಂತಹುದಲ್ಲ. "ಪಾಂಡುಸುತರಿಗೆ ವಾಸುದೇವನ ಕಾಹು ಘನ" ಎಂಬುದನ್ನು ಅವರು ಬಲ್ಲರು. "ಮಜಿಹಿನಲಿ ಮುಡುಹುವುದು ಧರ್ಮದ। ಹೊಜಿಗೆಯಲ್ಲದು" ಎಂಬುದು ಅವರ ನಿಲವು. ಅಶ್ವತ್ಥಾಮ ತನ್ನ ಪಟ್ಟು ಬಿಡುವಂತಿರಲಿಲ್ಲ. ಅಸಂಭಾವಿತ ಕ್ರೂರಕಾರ್ಯಕ್ಕೆ ಹೇಸದ ಅವನು "ವಿವಾದ ನಿಮ್ಮೊಡನೇಕೆ ಜನ ಪರಿ। ವಾದ ಭಯವೆಮಗಿಲ್ಲ" ಎಂದು ಧೈರ್ಯವಾಗಿಯೇ ತನ್ನ ಆಶಯವನ್ನು ಸ್ಪಷ್ಟಪಡಿಸುತ್ತಾನೆ. ಯುದ್ಧದ ಜವಾಬ್ದಾರಿ ಅವನದು ಎಂಬುದರಿಂದಾಗಿ ಇವರು ಅದಕ್ಕೆ ಒಪ್ಪಬೇಕಾಗುತ್ತದೆ. ಎರಡು ಬಾಗಿಲುಗಳ ಕಾಹಿನಲ್ಲಿ ಅವರು ನಿಲ್ಲುತ್ತಾರೆ.

ಅಶ್ವತ್ಥಾಮ ಪಾಂಚಾಲರ, ಪಾಂಡುಪುತ್ರರ ವಧೆಗೆ ಧಾವಿಸುವ ಮುನ್ನ ಒಂದು ಮಹಾಭೂತವನ್ನು ಎದುರಿಸಬೇಕಾಗಿ ಬರುತ್ತದೆ. ಇಲ್ಲಿ ಕುಮಾರವ್ಯಾಸ ಮೂಲದ ಪ್ರಸಂಗವನ್ನು ಸಂಗ್ರಹಿಸಿದ್ದಾನೆ. ಪಂಪ ರನ್ನರು ಇದನ್ನು ಕೈಬಿಟ್ಟಿದ್ದಾರೆ. ನಟ್ಟಿರುಳು ನೃಪವೀಥಿಯಲ್ಲಿ ಕಾಣಿಸಿಕೊಂಡ, ರೌದ್ರಾಭಿರತಿಯಲ್ಲಿ ರಂಜಿಸಿದ, ಈ ಭೂತ ಯಾವುದು? ಅದು ಏಕೆ ಕಾಣಿಸಿಕೊಂಡಿತು? ವ್ಯಾಸರು "ತತ್ರ ಭೂತಂ ಮಹಾಕಾಯಂ ಚಂದ್ರಾರ್ಕಸದೃಶದ್ಯುತಿಮ್" ಎಂದು ಮುಂತಾಗಿ ಅದನ್ನು ಬಣ್ಣಿಸಿರುವರಾದರೂ ಅಲ್ಲಿ ಶೈವ ವೈಷ್ಣವ ತೇಜೋಲಕ್ಷಣಗಳನ್ನು ಕಾಣಿಸಿರುವರಾದರೂ ಅದು ದೈವಿಕವೇ ಆಸುರಿಯೇ ಸ್ಪಷ್ಟವಾಗದು. ಮೂಲದ ಸೂಚನೆಯ ಎಳೆಗಳನ್ನು ಪಡೆದು ಕುಮಾರವ್ಯಾಸ, "ಇದು ವಿರೂಪಾಕ್ಷನ ಮನಃಕ್ಷೋಭದ ವಿಕಾರವಲಾ" ಎಂದು ಅಶ್ವತ್ಥಾಮನ ಬಾಯಲ್ಲಿ ಹೇಳಿಸುವ ಮೂಲಕ, ಅದು ದೈವಿಕವೆಂದೇ ಮನಗಂಡಂತಿದೆ.

ಅದನ್ನು ಅಸ್ತ್ರಶಸ್ತ್ರಗಳಿಂದ ಎದುರಿಸುವುದು ವಿಫಲವಾದ ಮೇಲೆ, ತನ್ನ ನೀಚಸಂಕಲ್ಪದ, ದುಷ್ಪ್ರವೃತ್ತಿಯ ದೆಸೆಯಿಂದ ಅದು ಹೀಗೆ ತನ್ನೆದುರು ನಿಂತಿದೆ ಎಂಬುದಾಗಿ ಅವನು ಭಾವಿಸಿದನಂತೆ. ಈ ಸ್ವಗತ ಕುಮಾರವ್ಯಾಸ ಭಾರತದಲ್ಲಿಲ್ಲ. ಅಧೈರ್ಯ ಅನಿರ್ಧಾರಗಳ ಮನಃಸ್ಥಿತಿಯನ್ನು ಆತನ ವಿಚಾರ ಬಿಂಬಿಸುವುದೆಂದು ತಿಳಿದು ಕವಿ ಅದನ್ನು ಕೈಬಿಟ್ಟಿರಬಹುದು. ಅದರಿಂದ ಪಾರಾಗಲು ಅಶ್ವತ್ಥಾಮ ಶಿವಸಂಪ್ರೀತಿಯ ಅಂಗವಾಗಿ ಕೈಕೊಂಡ "ಸರ್ವಾಂಗಯಜ್ಞ"ದ ವಿವರಗಳು ಮೂಲದಲ್ಲಿ ಪುರಾಣ ಮಾರ್ಗದಲ್ಲಿ ವಿಸ್ತಾರವಾಗಿಯೇ ಬಂದಿವೆ. ಬಹುವಿಧದ, ಬಹುರೂಪದ ಭೂತವ್ರಾತ ನೆರೆದುದನ್ನು ತಿಳಿಸುವ ಸಂಕ್ಷಿಪ್ತಪದ್ಯವೊಂದರ ಹಿನ್ನೆಲೆಯಲ್ಲಿ ಕವಿ ಕುಮಾರವ್ಯಾಸ ಆ ಯಜ್ಞದ ವಿವರಗಳನ್ನು ಇನ್ನೂ ಅಡಗಿಸಿ ಹೇಳಿದ್ದಾನೆ; ಆದರೆ ಪೂರ್ಣಾಹುತಿಗೆ ತನ್ನ ಒಡಲನ್ನೇ ಒಪ್ಪಿಸಿದ ಆ ರೌದ್ರವ್ರತದ ವರ್ಣನೆ "ಸೆರೆ ನರಂಗಳ ದರ್ಭೆ ಮಿದುಳಿನ ಚರು .... " ಎಂಬ ಒಂದೇ ಪದ್ಯದಲ್ಲಿ (೯-೨೨) ಅತ್ಯಂತ ಸಮರ್ಥವಾಗಿ ಘನೀಭವಿಸಿದೆ.

ಪರಶಿವನು ಪ್ರತ್ಯಕ್ಷನಾಗಿ ಮೊದಲು ತನ್ನ ಪಾಂಚಾಲ ಪಕ್ಷಪಾತದ ಹಿನ್ನೆಲೆಯನ್ನು ಸೂಚಿಸಿ, ಬಳಿಕ ಅಶ್ವತ್ಥಾಮನ ಪೂಜೆಗೆ ಒಲಿದು, ಅವನ ದೇಹದಲ್ಲಿ ತನ್ನ ನಿಜಾಂಶದಿಂದ ಪ್ರವೇಶಿಸುತ್ತಾನೆ, ಒಂದು ದಿವ್ಯಖಡ್ಗವನ್ನೂ ಕೊಡುತ್ತಾನೆ ಎನ್ನುವುದು ವ್ಯಾಸರ ನಿರೂಪಣೆಯಲ್ಲಿದೆ. ಪಿನಾಕಿ ಈ ರುದ್ರಭಕ್ತನ ಹೊಟ್ಟೆಯಲ್ಲಿ ಹೊಕ್ಕುದು ಸಾಲದೆ, ವಧಸಮರ್ಥವಾದ ಖಡ್ಗವನ್ನೂ ಕೊಟ್ಟನಲ್ಲ; ಇದು ಕಾಲೋಚಿತವಾಯಿತೇ? ಧೃಷ್ಟದ್ಯುಮ್ನ ಶಿಖಂಡಿಗಳಂತಹವರ ವಧೆಗೆ ಅದು ಒದಗುವುದು ಅವಶ್ಯವಿತ್ತು ಎಂಬುದು ಇದಕ್ಕೆ ಉತ್ತರವಾಗಬಹುದಾದರೂ, ನಿಶ್ಶಸ್ತ್ರರೂ ನಿರಪರಾಧಿಗಳೂ ಅನರ ಹತಿಗೆ ಸಿಕ್ಕು ಅಳಿದುದಕ್ಕೆ ಸಮಾಧಾನವೇನು? ಆನೆ ಕುದುರೆಗಳು ಸತ್ತು ಗಿಜಿಗಿಜಿಯಾದುದಕ್ಕೆ, ಹೆಂಗಸರು ಮಕ್ಕಳ ಗೋಳಾಟಕ್ಕೆ ನಿಷ್ಕೃತಿಯೇನು? ಹೇಗೋ ಪಾಂಡವರೂ ಕೃಷ್ಣ ಸಾತ್ಯಕಿಯರೂ ಉಳಿದುಕೊಂಡರೆಂಬುದಕ್ಕೆ ಹರ್ಷಿಸಬೇಕು.

"ರಿಪುವ್ರಜದ ಮಾರಣಾಧ್ವರ ಕ್ರಿಯೆಯ ನೀ ಕೈಕೊಳಿಸು ಹೋಗು" ಎಂದು ಪರಶಿವನು ಅಶ್ವತ್ಥಾಮನನ್ನು ಹರಸಿ ಕಳಿಸಿಕೊಡುವಾಗ, ಹಳೆಯ ಕೊಳಚೆಯೆಲ್ಲಾ ಕೊಚ್ಚಿ ಹೋಗಬೇಕೆನ್ನುವುದೇ ದೈವಸಂಕಲ್ಪವಿದ್ದೀತು! ಸೇರಿದ್ದ ಕೀಳು ಸುಟ್ಟು ಬಂಗಾರ ಶುದ್ಧವಾಗುವ ಹಾಗೆ ಇದು.

ಮುಂದಿನದು ಧೃಷ್ಟದ್ಯುಮ್ನ ಮೊದಲಾದವರ ಕಗ್ಗೊಲೆಯ ಕಥೆ. ಎಂದಿನಂತೆ ಮೂಲದ ನಿರೂಪಣೆ ಸೌಪ್ತಿಕಪರ್ವದ ೮ನೆಯ ಅಧ್ಯಾಯವನ್ನು ತುಂಬಿ ತುಳುಕಿದೆ. ಪಂಪ ರನ್ನರು ವರ್ಣನಾತ್ಮಕ ವಿವರಗಳಿಗೆ ಹೋಗದೆ ಕೆಲವು ಗದ್ಯದ ಸಾಲುಗಳಲ್ಲಿ, ಚಿಟಿಕೆಯ ಚಪ್ಪರಹೆಂಬಂತೆ ಹೇಳಿ ಮುಗಿಸಿದ್ದಾರೆ. ದ್ರೋಣರ ವಧೆಗೆ ಅನುಗುಣವಾದುದು ಧೃಷ್ಟದ್ಯುಮ್ನನ ಕೊಲೆ ಎನ್ನುವುದು ಅಶ್ವತ್ಥಾಮನ ಪರವಾದ

ಸಮರ್ಥನೆಯಾಗಬಹುದು. ಆದರೆ ಕೊಲೆಗೆ ಕೊಲೆ ಎಂದೂ ಮದ್ದಾಗದು! "ಶಸ್ತ್ರ ಘಾತದಿಂದ ತಲೆ ತೆಗೆದರೆ ವೀರಸ್ವರ್ಗ ಸಿಕ್ಕುತ್ತದೆ" ಎಂದು ಅಂಗಲಾಚಿದರೂ ಆ ಕೋರಿಕೆಯನ್ನು ತಿರಸ್ಕರಿಸಿ ಅಶ್ವತ್ಥಾಮನು ಬಿಲ್ಲಿನ ಹಗ್ಗವನ್ನು ಕೊರಳಿಗೆ ಉರುಳಾಗಿ ಹತ್ತಿಸಿ ಕೊಂದುಹಾಕುತ್ತಾನೆ. ಎಂಥ ವೀರನಿಗೆ ಎಂಥ ಮರಣ! ತಂದೆಯ ತಲೆ ತೆಗೆದುದಕ್ಕೆ ಮಗ ಒಡ್ಡಿದ ಸೇಡಿನ ಬಲೆಯೇ ಆಯಿತು, ಆ ಕೊರಳಿಗಿಕ್ಕಿದ ಉರುಳು! ಈ ಚಿತ್ರ ಸಂಕ್ಷಿಪ್ತವಾದರೂ ಮಾರ್ಮಿಕವಾದದ್ದು. ಅನಂತರದ ಸರದಿಯಲ್ಲಿ ಶಿಖಂಡಿ ಯುಧಾಮನ್ಯು ಸೃಂಜಯಾದಿಗಳೂ ಪಾಂಡವ ಕುಮಾರರಾದ ಪ್ರತಿವಿಂಧ್ಯಾದಿಗಳೂ ಹತರಾಗುತ್ತಾರೆ. ಮೂಲದಲ್ಲಿ ಇವರೆಲ್ಲ ಹೇಗೋ ನಿದ್ದೆ ತಿಳಿದೆದ್ದು ಹೋರಾಡಿ ಮಡಿದರೆಂಬುದಾಗಿ ವರ್ಣಿಸಿದೆ; ಆದರೆ ಕುಮಾರವ್ಯಾಸ ಭಾರತದಲ್ಲಿ ಪಾಪದ ಪಶು ಗಳನ್ನು ಕೊಚ್ಚಿಹಾಕಿದಂತೆ ಇವರ ಕೊಲೆಯ ಬಣ್ಣನೆಯಿದೆ. ಇದು ಹೆಚ್ಚು ಸಹಜ. ಅಲ್ಲದೆ ಇಲ್ಲಿ ಯುದ್ಧವಿವರಗಳು ಮಿತವಾಗಿವೆ; ಭೂತಪ್ರೇತಗಳ ರಕ್ತಮಾಂಸ ಲೋಲುಪ್ತಿಯ ವಿಜೃಂಭಣೆಗೆ ಕವಿ ಕಡಿವಾಣಹಾಕಿರುವುದು ಮೆಚ್ಚತಕ್ಕದ್ದಾಗಿದೆ.

ಅಶ್ವತ್ಥಾಮ ಪಾಳೆಯದಲ್ಲಿದ್ದವರನ್ನೆಲ್ಲಾ ಕೊಂದುದು ನಿಜ. ಆದರೆ ಕಾಣ ಸಿಗದ ಪಾಂಡವರಿಗಾಗಿ ಹುಡುಕಲಿಲ್ಲವೇ, ಚಡಪಡಿಸಲಿಲ್ಲವೇ? ಮೂಲದಲ್ಲಿ ಅಂತಹ ಸೂಚನೆಗಳೇನಿಲ್ಲ. ವಾಸುದೇವನ ಕಣ್ಣೆದುರಿನಲ್ಲಿಯೇ ಪಾಂಚಾಲರನ್ನೂ ಪಾಂಡವ ರನ್ನೂ ಕೊಲ್ಲುವುದಾಗಿ ದೊರೆಯೆದುರು ಪ್ರತಿಜ್ಞೆಮಾಡಿ ಬಂದವನು ಆ ಬಗ್ಗೆ ಏನೂ ಪ್ರಯತ್ನಮಾಡಿದಂತೆ ತೋರುವುದಿಲ್ಲ. ತನ್ನ ಸಾಹಸಕೃತ್ಯಗಳನ್ನು ಕೃಪ ಕೃತವರ್ಮ ರಲ್ಲಿಯೂ ಆ ಬಳಿಕ ದುರ್ಯೋಧನನಲ್ಲಿಯೂ ಹೇಳಿಕೊಳ್ಳುವಾಗ ಈ ಕೊರೆಯಾದ ಕೆಲಸ ಅವನನ್ನು ಬಾಧಿಸದೆ ಇದ್ದುದು ಆಶ್ಚರ್ಯ. ಮೂಲದಲ್ಲಿ, ಪಾಂಚಾಲಾದಿಗಳ ಹನನವನ್ನು ಆವರೆಗೆ ಅವನಿಗೆ ಮಾಡಲಾಗದಿದ್ದುದು ಪಾಂಡವರ ಭೀತಿಯಿಂದಲೇ ಎಂದೂ ಅವರೂ ಕೃಷ್ಣ ಸಾತ್ಯಕಿಗಳೂ ಇಲ್ಲದ ವೇಳೆ ಸಾಧಿಸಿ ಅದನ್ನು ಮಾಡಿರುವ ನೆಂದೂ ಸಂಜಯ ಧೃತರಾಷ್ಟ್ರನ ಪ್ರಶ್ನೆಗೆ ಉತ್ತರವಾಗಿ ತಿಳಿಸುತ್ತಾನೆ (೮-೧೪೪-೪೬). ಅವನು ಭೀರುವೆಂದೇ ಇದರಿಂದ ತಿಳಿಯುತ್ತದೆ.

ಪಂಪನು "ಪಂಚಪಾಂಡವರಂ ಕೊಂದು" (ಒಂದು ಪ್ರತಿಯಲ್ಲಿ "ಪಾಂಡವರೆ ಗೆತ್ತು" ಎಂಬ ಮಾತು ನಡುವೆ ಸೇರಿದೆ) ಎಂದೂ ರನ್ನನು "ಪಾಂಡವರ ಶಂಕೆಯಿಂ.... ಪಂಚಪಾಂಡವರ ತಲೆಗಳಂ" ಎಂದೂ ಇದನ್ನು ಕುರಿತಿದ್ದಾರೆ. ಕುಮಾರವ್ಯಾಸ ವ್ಯಾಸರನ್ನೇ ಅನುಸರಿಸಿದರೂ, "ಪಾಳೆಯದೊಳಜಿಸಿದನು ಪಾಂಡು ನೃ। ಪಾಲ ತನುಜರನವರು ಕೆಡುವರೆ। ಮೇಲುಗಾಹಿನ ವೀರನಾರಾಯಣನ ಕರುಣದಲಿ" ಎಂಬ ಒಂದು ಹೆಚ್ಚಿನ ಮಾತಿನಿಂದ (೯-೪೪) ಪಾಂಡವವಧೆಗೆ ಅವನು ಯತ್ನಿಸಿದನೆಂಬ ಸೂಚನೆ ನೀಡಿದ್ದಾನೆ. ಇದು ಕಥಾಗತಿಗೆ, ಪಾತ್ರದ ಸ್ವಭಾವ ಸಂಕಲ್ಪಗಳಿಗೆ ತಕ್ಕ ಮೇಲ್ಪಾಡು. ಪಾಂಡವಭ್ರಮೆಯಿಂದ ಪಾಂಡುಪುತ್ರರನ್ನು ಅಶ್ವತ್ಥಾಮನು ವಧಿ

ಸಿದನೆಂಬ ಪಂಪ ರನ್ನರ ನಿರೂಪಣೆಗಿಂತ ಇದು ಮೇಲಾದುದು; ಕೃಷ್ಣನ ಕೈವಾಡ ವೆಂಬ ಘನವಾದ ಆಶಯಕ್ಕೆ ಸಹಾಯಕವಾದುದು.

ಈ ಕೊಲೆಯ ಕೊಳ್ಳಿಯ ವಾರ್ತೆಗೆ ದುರ್ಯೋಧನನ ಪ್ರತಿಕ್ರಿಯೆಯೇನು? "ಅಶ್ವತ್ಥಾಮಾ, ನೀನು ಕೃಪ ಕೃತವರ್ಮರನ್ನು ಕೂಡಿಕೊಂಡು ಇಂದು ನನಗಾಗಿ ಮಾಡಿದಷ್ಟು ಕಾರ್ಯವನ್ನು ಭೀಷ್ಮರಾಗಲಿ, ಕರ್ಣನಾಗಲಿ, ನಿನ್ನ ತಂದೆಯಾಗಲಿ ಮಾಡ ಲಿಲ್ಲ. ಆ ಅಲ್ಪನಾದ ಸೇನಾಪತಿ (ಧೃಷ್ಟದ್ಯುಮ್ನ) ಶಿಖಂಡಿಯೊಂದಿಗೆ ಹತನಾದು ದರಿಂದ ಈಗ ನಾನು ಇಂದ್ರಸಮಾನನೆನಿಸಿಕೊಳ್ಳುವೆನು. ನಿಮಗೆ ಒಳ್ಳೆಯದಾಗಲಿ. ನಾವು ಸ್ವರ್ಗದಲ್ಲಿ ಮತ್ತೆ ಸೇರೋಣ" (೯-೫೨-೫೫) : ಹೀಗೆ ವ್ಯಾಸರು ಅವನ ಪ್ರತಿ ಕ್ರಿಯೆಯನ್ನು ತಿಳಿಸಿದ್ದಾರೆ. ಈ ಮಾತಿಗೆ ವ್ಯಾಖ್ಯಾನ ಬೇಕಿಲ್ಲ. ಆವರೆಗಿನ ಅವನ ಪಾಂಡವ ವಿನಾಶದ ಫಲ ಏನಾಯಿತು? ಅಶ್ವತ್ಥಾಮನ ಅಕಾರ್ಯದ ಬಗೆಗೆ, ಮಕ್ಕಳು ಮರಿಗಳೆನ್ನದೆ ಪಾಳೆಯುವನ್ನೆಲ್ಲ ಸವರಿದ ಬಗೆಗೆ ಅವನಿಗೆ ಹೇಸಿಕೆಯಾಗಲಿಲ್ಲವೇ? ಭೀಷ್ಮಾದಿಗಳ ಬಗೆಗೆ, ಪ್ರಾಣಸ್ನೇಹಿತನಾದ ಕರ್ಣನ ಬಗೆಗೆ ಹಾಗೆ ಅನುದಾರವಾದ ಟೀಕೆಯನ್ನು ಮಾಡಲು ಅವನಿಗೆ ಮನಸ್ಸಾದರೂ ಹೇಗೆ ಬಂದಿತು? ಈ ವಿಷಯದಲ್ಲಿ ಪಂಪ ರನ್ನರ ದುರ್ಯೋಧನ ಮಾನವಸಹಜವಾಗಿ ನಡೆದುಕೊಂಡುದು ಕಾಣುತ್ತದೆ. ಪಾಂಡವರ ಮಕ್ಕಳನ್ನು ಕೊಂದು ಪಾಂಡವರೆಂದೇ ಭ್ರಮಿಸಿದನಲ್ಲಾ, ಈ ಅಶ್ವ ತ್ಥಾಮ; ಬಾಲವಧೆಯ ಪಾತಕವನ್ನು ತನ್ನ ತಲೆಗೆ ತಂದುಕೊಂಡನಲ್ಲಾ ಎಂದು ಅವನು ಮರುಗುತ್ತಾನೆ. ಪಂಪನ ಭಾವವನ್ನು ರನ್ನ ಬಣ್ಣದುಂಬಿ ಬೆಳಸಿದ್ದಾನೆ. ಇಲ್ಲಿ ದುರ್ಯೋಧನನಿಗೆ ಆ ಮೊದಲಿನ ರೋಷ ದ್ವೇಷಗಳು ಉಳಿದಿದ್ದಂತೆ ತೋರುವು ದಿಲ್ಲ. "ದೈವದ ಮುಂದೆ ನಾವಲ್ಲ" ಎಂಬ ಭಾವ ಬಲಿದ ಹಾಗೆಯೇ, ಅವನು ಮೆದು ಗೊಂಡ ಹಾಗೆಯೇ ಕಾಣುತ್ತದೆ.

ಕುಮಾರವ್ಯಾಸನ ಚಿತ್ರಣ ಹೆಚ್ಚು ಉತ್ಸಾಹಜನಕವಾದುದು, ನಾಟಕೀಯ ವಾದುದು. ಅಶ್ವತ್ಥಾಮ ಭೀರು ಹೇಗೋ ಹಾಗೆಯೇ ಮುಗ್ಧನಿರಬೇಕು. "ಆತ್ಮ ಸ್ತಾವಕರು ನಾವಲ್ಲ" ಎಂದು ರಣಸಂಗತಿಯನ್ನು ಕೃಪನ ಮೂಲಕ ಕೌರವನಿಗೆ ಹೇಳಿ ಸುತ್ತಾನೆ. ಮಾತು ಕಿವಿದಾಗುತ್ತಿದ್ದಂತೆಯೇ, ಅವನು "ಬಲ್ಲೆನದನು" ಎಂದಷ್ಟೇ ಹೇಳಿ, "ಅಸದಳದ ಕೃಪೆಯಲಿ ಬಸಿದು ಬೀಳುವನಸುರಾರಿ" ಎಂದು ದಿಟವನ್ನೇ ನುಡಿದನು. ಕೃಷ್ಣಮಹಿಮೆಯನ್ನು ಅವನು ಸಹ ಬಲ್ಲವನೇ. ಆದರೆ ಮೂಲ ಭಾರತದಲ್ಲಿಯ ಹಾಗೆಯೇ ಇಲ್ಲಿ ಸಹ ಅವನ ಸಾಹಸವನ್ನು ಕೊಂಡಾಡಿ ಅವನನ್ನು ಅಗ್ಗಳನೆಂದು ಮೆಚ್ಚುತ್ತಾನೆ. ಆದರೆ ನಾವು ಇದನ್ನು ಮೆಚ್ಚುವುದು ಕಷ್ಟ! ಹೀಗಿದ್ದೂ ಅವಕಾಶ ಸಿಕ್ಕರೆ ಪಾಂಡವರನ್ನು ಕೊಂದೇ ಬರುತ್ತೇನೆ ಎಂದು ಅಶ್ವತ್ಥಾಮ ಮತ್ತೆ ಉತ್ಸಾಹಿಸಿದಾಗ, ಅವನು ತಕ್ಷಣವೇ "ಸಾಕದಂತಿರಲಿನ್ನು ವೈರ। ವ್ಯಾಕರಣ ಪಾಂಡಿತ್ಯದಲ್ಲಿ ವಿವೇಕಶೂನ್ಯರು ನಾವು" ಎಂದು ಹೇಳಿ ಅವನನ್ನು ಸುಮ್ಮನಾಗಿಸು

ತ್ತಾನೆ. "ಇನ್ನು ಲೋಕದಾಟ ಸಾಕು" ಎಂಬುದಾಗಿ ತತ್ತ್ವಜ್ಞಾನಿ ತಿಳಿಯುವಂತೆ ಇಲ್ಲಿ, ಅವನ ವಿವೇಕ ಪಳಚ್ಚನೆ ಮಿಂಚುವಂತೆ ತೋರುತ್ತದೆ. ಇದು ತತ್ತ್ವಜ್ಞಾನಿಯಾದ ಕುಮಾರವ್ಯಾಸನ ದರ್ಶನ.

ಮುಂದೆ ಭೀಮ ಅಶ್ವತ್ಥಾಮನ ಬೆನ್ನಟ್ಟಿ ನಡೆದಾಗ, ಅಶ್ವತ್ಥಾಮನ ಶುಶಿಕಾಸ್ತ್ರದ ಘಾತಿಯಿಂದ ಉತ್ತರೆಯ ಗರ್ಭವನ್ನು ಕಾಪಾಡಿದ ಕೃಷ್ಣಮಹಿಮೆಯ ವರೆಗೆ ಕೆಲವು ಪ್ರಕ್ಷುಬ್ಧಕರ ಘಟನೆಗಳ ವಿವರಗಳು ಬರುತ್ತವೆ. ಈ ಸಂದರ್ಭದಲ್ಲಿ ದ್ರೌಪದಿ ಅಶ್ವತ್ಥಾಮನನ್ನು ಕ್ಷಮಿಸಿದ ಪರಿ ಅನನ್ಯಸಾಧಾರಣವಾದುದು. "ಅಹಹ ಗುರು। ನಂದನನ ಕೊಲಬಾರದಕಟೇ। ನಂದನರ ಮರಣದ ಮಹಾವ್ಯಥೆಯೀತನಳಿವಿನಲಿ। ಕೊಂದು ಕೂಗದೆ ಕೃಪೆಯನಬಲಾ। ವೃಂದ ಸಮಸುಖದುಃಖಿಗಳು, ಸಾರು" ಎಂದು ಆಕೆ ಭೀಮಾರ್ಜುನರ ಕೈ ತಡೆದಳಂತೆ. ಇದು ಮೂಲದಲ್ಲಾಗಲಿ, ಪಂಪ ರನ್ನರಲ್ಲಾಗಲಿ ಕಾಣದೊರೆಯದ ಮಾತು. ಇದು ವ್ಯಾಖ್ಯಾನವನ್ನು ಮೀರಿ ಬೆಳೆಯುವ ಮಾತು. ಇಂಥ ಮಾತುಗಳನ್ನು ಕವಿದರ್ಶನದ ಸೆಳಕುಗಳೆನ್ನಬಹುದು.

ರಸದೃಷ್ಟಿ

ಕುಮಾರವ್ಯಾಸ ಭಾರತದಲ್ಲಿ ಸಾಂಪ್ರದಾಯಿಕ ವಿಮರ್ಶ ಸೂತ್ರಗಳನ್ನು ಅನ್ವಯಿಸಿ ನೋಡಿದರೆ ವಿವಿಧ ರಸಗಳನ್ನು ಪೋಷಿಸುವ ಕಾವ್ಯಸಂದರ್ಭಗಳು ವಿವಿಧವಾಗಿ ಕಂಡುಬರುತ್ತಿವೆ ಎಂದು ಸೂಚಿಸಿ, ಅವನ್ನು ಪ್ರತ್ಯೇಕಿಸಿ ತೋರಿಸುವುದು ಸಾಧ್ಯವಿದೆ. ಆದರೆ ಕಾವ್ಯವಸ್ತು ದಾಯಾದ್ಯಕಲಹದ ವಿಪುಲ ಯುದ್ಧಸಂದರ್ಭಗಳಿಂದ ಕೂಡಿರುವುದು, ಪ್ರಧಾನರಸ ವೀರವೆಂದೋ ವೀರ ರೌದ್ರ ಸಮಾಯುಕ್ತವೆಂದೋ ತಿಳಿಯಲು ಅವಕಾಶ ಮಾಡಿಕೊಡುತ್ತದೆ. ಇವುಗಳ ನೆರಳಿನಲ್ಲೇ ಅರಳತಕ್ಕವು ಭಯಾನಕ ಬೀಭತ್ಸಗಳು. ಆದಿಪಂಚಕದ ಕೀಚಕ ಜರಾಸಂಧಾದ್ಯರ ಹನನ ಸಂದರ್ಭಗಳಲ್ಲಿ ಹೀಗೆ ಸುಳಿದು ಹಾಗೆ ಸರಿಯುವ ವೀರರಸ ಯುದ್ಧಪಂಚಕಗಳ ನಾನಾ ಸಂಗ್ರಾಮಘಟ್ಟಗಳಲ್ಲಿ ನೊರೆಗಟ್ಟಿ ಹರಿಯುವುದನ್ನು ಕಾಣಬಹುದು. ಸಂಗ್ರಾಮ ಚಿತ್ರಗಳು ಒಂದರಂತೆ ಒಂದಿಲ್ಲ; ನವನವೀನವೂ ವೈವಿಧ್ಯಮಯವೂ ಆದವು. ವೀರರಸ ಚಿತ್ರಣದಲ್ಲಿ ಕುಮಾರವ್ಯಾಸನೇ ಪ್ರಾಯಃ ಸರ್ವಶ್ರೇಷ್ಠ. ನಿದರ್ಶನಾರ್ಥವಾಗಿ ಭೀಷ್ಮಾರ್ಜುನ ಸಂಗ್ರಾಮ (ಭೀಷ್ಮ), ಭಗದತ್ತನನ್ನು ಮರ್ದಿಸಿ ಸುಪ್ರತೀಕ ಗಜವನ್ನು ಅರ್ಜುನನು ಮುರಿದ ಸಂದರ್ಭ, ಅಭಿಮನ್ಯುವಿನ ಹೋರಾಟ, ಭೀಮ-ದ್ರೋಣ ಹಾಗೂ ಕರ್ಣ-ಭೀಮರ ಕಾಳಗ, ಘಟೋತ್ಕಚನ ಇರುಳುಗಾಳಗ, ದ್ರೋಣರು ಸಹ ಇರುಳುಸಮರದಲ್ಲಿ ಮೆರೆದ ಉಗ್ರಪ್ರತಾಪದ ಘನಸಂಗ್ರಾಮ (ದ್ರೋಣ), ಕರ್ಣ-ಧರ್ಮರಾಯ ಹಾಗೂ ಕರ್ಣ-ಭೀಮಸೇನರ ಹೋರಾಟಗಳು, ಭೀಮನು ಏಕಾಂಗಸಾಹಸಿಯಾಗಿ ಕುರುಬಲವನ್ನು ಕಲಕಿದ ಸಂದರ್ಭ, ದುಶ್ಶಾಸನ ವಧೆ, ಕರ್ಣಾರ್ಜುನರ ಹೋರಾಟ (ಕರ್ಣ), ಶಲ್ಯ-ಧರ್ಮರಾಯರ ಕಾಳಗ (ಶಲ್ಯ) ಮತ್ತು ಭೀಮ-ದುರ್ಯೋಧನರ ಸಂಗ್ರಾಮ (ಗದಾ) ಇವನ್ನು ಇಲ್ಲಿ ಸೂಚಿಸ

ಬಹುದು. ದುಶ್ಶಾಸನ ವಧೆಯ ಸಂದರ್ಭದಲ್ಲಿ ಭೀಮಸೇನ ರಕ್ತಪಾನ ಮಾಡಿದ ದೃಶ್ಯ ಬೀಭತ್ಸಮಯವಾದುದು. ಹಾಗೆಯೇ ಅಶ್ವತ್ಥಾಮನು ಉಪಾಂಶು ವಧೆಗೆ ತೆರಳಿದ ಸಂದರ್ಭ ಭಯಾನಕವನ್ನು ಭುಲ್ಲಯಿಸುವಂತಹುದು. ವಾಸ್ತವವಾಗಿ ಮಹಾಭಾರತದ ಕಥಾವಸ್ತುವನ್ನು ವೀರವೂ ಅದನ್ನು ಪೋಷಿಸಿ ರೌದ್ರ ಭಯಾನಕ ಬೀಭತ್ಸಗಳೂ ತೆಕ್ಕೆಹಾಕಿಕೊಂಡಿವೆಯೆನ್ನಬಹುದು. ಆ ಕಾರಣದಿಂದಲೇ ಮೃದುರಸ ಗಳಾದ ಶೃಂಗಾರ, ಕರುಣ ಹಾಗೂ ಹಾಸ್ಯಗಳಿಗೆ ಇಲ್ಲಿ ಅವಕಾಶ ಕಡಮೆಯೆನ್ನು ವಂತಾಗಿದೆ. ಪಾಂಡು–ಮಾದ್ರಿಯರ, ಅರ್ಜುನ–ಊರ್ವಶಿಯರ, ಕೀಚಕ–ದ್ರೌಪದಿ ಯರ ಸಂಬಂಧವಾದ ಶೃಂಗಾರ ಸನ್ನಿವೇಶಗಳು "ವಿರಹಿಗಳ ಶೃಂಗಾರ" ಎಂಬುದಾಗಿ ಒಂದರ್ಥದಲ್ಲಿ ಹೇಳಬಹುದಾದರೂ ಇವನ್ನು ರಸಸ್ಥಾನಗಳೆಂದು ಗುರುತಿಸುವಂತಿಲ್ಲ; ಇವು ವಿಷಮಪರಿಣಾಮದ ಪ್ರಣಯಸಂದರ್ಭಗಳೆಂದು ಮಾತ್ರವೇ ಹೇಳಬಹುದಾ ದವು. ಆದರೆ ಸುಭದ್ರಾಪರಿಣಯದ ಭಾಗವನ್ನು ಶೃಂಗಾರದ ಒಂದು ರಸಸ್ಥಾನ ವೆಂದೇ ತಿಳಿಯಬಹುದು. ಕೇಶಾಕೃಷ್ಟಿ ವಸ್ತ್ರಾಕರ್ಷಣಗಳ ಅಪಮಾನದಿಂದ ನಲುಗಿದ ದ್ರೌಪದಿ ಸಹಾಯಕ್ಕೆಂದು ಇಟ್ಟ ಮೊರೆ, ಅಭಿಮನ್ಯುವಧೆಯಿಂದ ಜರ್ಜರಿತವಾಗಿ ಧರ್ಮರಾಯಾರ್ಜುನರೂ ತಾಯಿ ಸುಭದ್ರೆಯೂ ಪ್ರಕಟಿಸಿದ ಪುತ್ರಶೋಕ, ಕರ್ಣಾವಸಾನ, ಯುದ್ಧಾಂತದಲ್ಲಿ ಏಕಾಕಿಯಾಗಿ ಉಳಿದ ದುರ್ಯೋಧನನ ಪರಿಸ್ಥಿತಿ — ಇವು ಕರುಣ ರಸಸ್ಥಾನಗಳೆಂಬುದು ವಿದಿತವೇ ಇದೆ. ವಿರಾಟಪರ್ವದೊಳಗಿನ ಉತ್ತರನ ಪೌರುಷ ಒಂದು ಮನೋಜ್ಞವಾದ ಹಾಸ್ಯರಸ ಸ್ಥಾನವೆಂದು ಎಲ್ಲರೂ ಬಲ್ಲರು; ಇದರ ಜೊತೆಗೆ ದ್ರೌಪದೀ ಸ್ವಯಂವರದಲ್ಲಿ ಬ್ರಾಹ್ಮಣರು ಮತ್ತು ಸಖಿಯರು ನುಡಿದ ಅಪಹಾಸೋಕ್ತಿಗಳ ಲಲಿತಹಾಸ್ಯವನ್ನು ಮರೆಯುವಂತಿಲ್ಲ. ಕಿರಾತಾರ್ಜುನೀಯದ ಶಬರಶಂಕರಲೀಲಾವಿಲಾಸವೂ ಕುರುಕುಲಾಸ್ಥಾನದಲ್ಲಿ ಒಮ್ಮೆ, ರಣಾಂಗಣದಲ್ಲಿ ಒಮ್ಮೆ ಕೃಷ್ಣ ಪ್ರಕಟಿಸಿದ ವಿಶ್ವರೂಪದರ್ಶನವಿಭವವೂ ಅದ್ಭುತದ ನೆಲೆಗಳಾಗಿರು ವಂತೆ, ಕೃಷ್ಣಭಕ್ತರು ಎಡೆದೊರೆತಂತೆ ಕೈವಾರಿಸುವ ಕೃಷ್ಣಮಹಿಮಾ ಸ್ತುತಿಯ ಕಾವ್ಯಭಾಗಗಳು ಭಕ್ತಿರಸದ ಒರತೆಗಳೆಂಬಂತೆ ಅಲ್ಲಲ್ಲಿ ಮೈದೋರುತ್ತವೆ.

ಹೀಗೆ ರತಿಯಿಂದ ಶಮದ ವರೆಗೆ, ನಿರ್ವೇದದಿಂದ ವಿತರ್ಕದ ವರೆಗೆ ಸುಳಿದು ಸುತ್ತುವ ಸಮೃದ್ಧ ಭಾವವಿಶೇಷಗಳಿಂದ ಕುಮಾರವ್ಯಾಸ ಭಾರತ ಕನ್ನಡಿಗರ ಭಾವದ ಹಸಿವು ಹಿಂಗಿಸಲು ಸಮರ್ಥವಾದ ಆಕರಗ್ರಂಥವಾಗಿದೆಯೆಂದೇ ತಿಳಿಯಬಹುದು. ಯಾವುದೇ ಭಾವವಿಶೇಷ ತನಗೆ ಅನುಕೂಲ ಪರಿಸ್ಥಿತಿಯಲ್ಲಿ ರಸವಾಗಿ ಹೊಮ್ಮ ಬಹುದು; ತನಿರಸದ ಉಕ್ಕಂದವಾಗುವಂತೆಯೇ ಶೃಂಗಾರ–ಹಾಸ್ಯ, ಶೃಂಗಾರ–ರೌದ್ರ, ಕರುಣ–ಭಕ್ತಿ, ವೀರ–ರೌದ್ರ, ರೌದ್ರ–ಬೀಭತ್ಸ ಹೀಗೆ ಅನುಕೂಲ ವಿರುದ್ಧಗಳೆಂಬ ಭೇದವಿಲ್ಲದೆ ವಿಮಿಶ್ರವಾಗಿಯೂ ಕಾಣಿಸಿಕೊಳ್ಳಬಹುದು. ದ್ರೌಪದೀ ಸ್ವಯಂವರ, ಸುಭದ್ರಾಪರಿಣಯ, ಅರ್ಜುನೋರ್ವಶೀಯ, ದ್ರೌಪದೀವಸ್ತ್ರಾಪಹರಣ, ಕರ್ಣಾರ್ಜುನ

ನಾದ್ಯರ ಸಂಗ್ರಾಮ, ದುಶ್ಶಾಸನ ವಧೆ—ಇತ್ಯಾದಿ ಸಂದರ್ಭಗಳನ್ನು ಅವಲೋಕಿಸಿದರೆ ಇದು ತಿಳಿಯುತ್ತದೆ.

ವರ್ಣನೆಗಳು

ಮಹಾಕಾವ್ಯ ಅಷ್ಟಾದಶವರ್ಣನಗಳಿಂದ ನಿಬದ್ಧವಾದುದು ಎಂಬ ಸಾಂಪ್ರದಾಯಿಕ ವಿಮರ್ಶಸೂತ್ರ ಕುಮಾರವ್ಯಾಸ ಭಾರತದಂತಹ ಕೃತಿಗೆ ಅನ್ವಯಿಸುವುದಿಲ್ಲ ಎಂದೇನೂ ತಿಳಿಯಬೇಕಾಗಿಲ್ಲ. ಅವೆಲ್ಲ ಯಥೋಚಿತ ಪ್ರಮಾಣದಲ್ಲಿ ಇಲ್ಲಿಯೂ ಉಂಟು. ಆದರೆ ಪ್ರಾಚೀನ ಮಾರ್ಗಕಾವ್ಯಗಳಲ್ಲಿ ಕಂಡುಬರುವಂತೆ ಇವು ಮೂಲ ಅಥವಾ ಮುಖ್ಯ ಕಥೆಯನ್ನೇ ಮರೆಸುವ ಮಟ್ಟಿಗೆ ದಟ್ಟೈಸುವುದಿಲ್ಲ ಎನ್ನುವುದು ಸಮಾಧಾನದ ಸಂಗತಿ. ಇದಕ್ಕೆ ಕಾರಣಗಳು ಎರಡು: ಒಂದು—ಮಹಾಭಾರತದ ಕಥೆಯು ಹರವು ಒಳಕೊಂಡಿರುವ ಬಹುಸಂಖ್ಯೆಯ ಕಥಾಪ್ರಘಟ್ಟಕಗಳನ್ನೂ ಘಟನೆಗಳನ್ನೂ ಸಂಗ್ರಹವಾಗಿ ನಿರೂಪಿಸಬೇಕಾಗಿರುವ ವಿಪುಲ ಪಾತ್ರಪ್ರಪಂಚದ ವಿದ್ಯಮಾನಗಳನ್ನು ವಿಶದವಾಗಿ ಚಿತ್ರಿಸಬೇಕಾಗಿರುವ ಅಗತ್ಯ; ಎರಡು—ವರ್ಣನೆಗಾಗಿ ವರ್ಣನೆಗಳನ್ನು ತಂದು, ಬೆಳಸಿ, ರಸಿಕರನ್ನು ರಂಜಿಸಬೇಕೆಂಬ ಕಾವ್ಯದೃಷ್ಟಿ ಕವಿಗೆ ಇಲ್ಲದಿರುವುದು. ಹೀಗಾಗಿ ವರ್ಣನೆಗಳಿಗೆ ಇಲ್ಲಿ ಪ್ರಾಶಸ್ತ್ಯವಿಲ್ಲ. ಇಲ್ಲಿಯ ವರ್ಣನೆಗಳಿಗೆ ವೈವಿಧ್ಯವೇನೋ ಉಂಟು; ಸ್ವಾರಸ್ಯವೂ ಉಂಟು. ಆದರೆ ಇವು ಉಚಿತಕ್ಕೆ ತಕ್ಕಷ್ಟು ಎಂಬಂತೆ ಬರುವ ಬಿಡಿಚಿತ್ರಗಳು; ಬಳ್ಳಿಯಾಗಿ ಹಬ್ಬತಕ್ಕವಲ್ಲ, ಹೂವಾಗಿ ಅರಳುವಂಥವು. ಕಥೆಯ ಕುಡಿಬಳ್ಳಿಗಳು ಅರಳಿಸಿದ ಅರಳುಗಳು, ಈ ವರ್ಣನೆಗಳು. ಪ್ರಕೃತಿಯ ಸಕಲ ಪದಿಪದಾರ್ಥಗಳ, ಮಾನವವ್ಯಕ್ತಿವಿಸ್ತಾರದ ಎಲ್ಲ ಮುಖಗಳನ್ನೂ ಇವು ಒಳಕೊಳ್ಳುತ್ತವೆ, ಬೆಳಗುತ್ತವೆ

ವರ್ಣನೆಗಳಲ್ಲಿ ಸಹಜವಾಗಿ ಯುದ್ಧವರ್ಣನೆಗೆ ಪ್ರಾಶಸ್ತ್ಯ. ಉದ್ಯೋಗಪರ್ವವೊಂದನ್ನು ಬಿಟ್ಟು ಉಳಿದೆಲ್ಲ ಪರ್ವಗಳಲ್ಲಿಯೂ ಇದಕ್ಕೆ ಎಡೆ ದೊರೆತಿದೆ. ಕವಿಗೆ ಯುದ್ಧಚಿತ್ರಗಳನ್ನು ಬಿಡಿಸುವುದರಲ್ಲಿ ಅನ್ಯಾದೃಶವಾದ ಉತ್ಸಾಹ. ಈ ಉತ್ಸಾಹದ ಸೆಲೆ ಯಾವುದೋ, ಬಣ್ಣನೆಯ ಕೌಶಲದ ನೆಲೆ ಯಾವುದೋ ನಮಗೆ ತಿಳಿಯದು. ಯುದ್ಧಸನ್ನಾಹದಿಂದ ಶಸ್ತ್ರಸಂಧಾನದ ವರೆಗೆ ಕೃತಕತೆಯಿಂದ ಜಡವಾಗದೆ, ಪುನರುಕ್ತಿಗಳಿಂದ ಹೊರೆಯಾಗದೆ ಈ ಯುದ್ಧಚಿತ್ರಗಳು ಪುಂಖಾನುಪುಂಖವಾಗಿ ಸಾಗುವುವು. ಉದ್ಯೋಗಪರ್ವದ ಕೃಷ್ಣಸಂಧಾನ ಭಾಗದಿಂದ ಮಂತ್ರಾಲೋಚನೆ, ದೌತ್ಯ, ರಣಪ್ರಯಾಣ, ಯುದ್ಧ ಮತ್ತು ನಾಯಕಾಭ್ಯುದಯಗಳವರೆಗೆ ವರ್ಣನಾಂಗಗಳು ಪುಷ್ಟವಾಗಿ ಬೆಳೆಯುತ್ತ ಹೋಗುವುವು. ಜೊತೆಜೊತೆಗೇ ಯುದ್ಧವೀರರ ಧರ್ಮಸಂಕಟಗಳು, ಒಳತೋಟಿಗಳು ಬೇರೊಂದು ರೀತಿಯ ಪ್ರತಿಯುದ್ಧಚಿತ್ರಗಳನು ಒದಗಿಸುವುದು ಮನೋಜ್ಞವಾದುದಾಗಿದೆ.

ವರ್ಣನೆಗಳಲ್ಲಿ ಶೃಂಗಾರಮೂಲವಾದ ವಿಪ್ರಲಂಭ, ವಿವಾಹ ಮತ್ತು

ಕುಮಾರೋದಯಗಳೂ ಅವುಗಳಿಗೆ ಹಿನ್ನೆಲೆಯಾಗಿ ಬರುವ ಉದ್ಯಾನ ಸಲಿಲಕ್ರೀಡಾದಿಗಳೂ ಕುಮಾರವ್ಯಾಸ ಭಾರತದಲ್ಲಿ ಬಹು ಸ್ವರಸವಾಗಿ ಬಂದಿವೆಯೆನ್ನಬೇಕು. ದ್ರೌಪದೀ ಸ್ವಯಂವರ, ಸುಭದ್ರಾಪರಿಣಯಗಳ ಮತ್ತು ಕೌರವ–ಪಾಂಡವರ ಬಾಲಕ್ರೀಡೆಗಳ (ಆದಿ) ನಿರೂಪಣೆಯಲ್ಲಿಯೂ ಘೋಷಯಾತ್ರೆಯ ಸಂದರ್ಭದ ಕಾಂತಾಜನ ಕೋಲಾಹಲದಲ್ಲಿಯೂ (ಅರಣ್ಯ ೧೭, ೧೮) ಇವುಗಳನ್ನು ಹಿತಮಿತವಾಗಿ ಕಾಣಬಹುದಾಗಿದೆ. ಸ್ವಯಂವರ ಸಮಯದಲ್ಲಿ ಕವಿ ಚಿತ್ರಿಸುವ ದ್ರೌಪದಿಯ ದೇಹಲಾವಣ್ಯ ವರ್ಣನೆಯಂತೂ ಅನುಪಮವಾದುದು. ಈ ಯಾವುದೇ ಮೃದು ಲಲಿತ ಸಂದರ್ಭವೂ ಗ್ರಾಮ್ಯ, ಅಶ್ಲೀಲ ಅಥವಾ ಅಸಹಜ ಎಂದು ಆಕ್ಷೇಪವೆತ್ತುವಂತಿಲ್ಲ. ಶೃಂಗಾರದೊಂದಿಗೆ ಹಾಸ್ಯ ಹೇಗೆ ಮಧುರವಾಗಿ ಒಡಬೆರೆಯುತ್ತದೆ ಯೆನ್ನುವುದನ್ನು ಈ ಒಂದೊಂದೂ ಸನ್ನಿವೇಶದಲ್ಲಿಯ ವರ್ಣನಾಂಶಗಳಿಂದ ತಿಳಿಯಬಹುದು.

ಇತರ ವರ್ಣನೆಗಳಲ್ಲಿ, ಪ್ರಕೃತಿವರ್ಣನೆಗೆ ಕವಿ ಉದಾಸೀನನೆಂಬಂತಿರುವುದು ನಿಜವೇ. ಸೂರ್ಯೋದಯ ಸೂರ್ಯಾಸ್ತಗಳ ವರ್ಣನೆ ಪಂಪನ ಭಾರತದಲ್ಲಿಯ ಹಾಗೆಯೇ ಕಥಾಂಶದೊಂದಿಗೆ ಅದೊಂದು ರೀತಿಯಲ್ಲಿ ತಳುಕು ಹಾಕಿಕೊಳ್ಳುತ್ತದೆ (ಭೀಷ್ಮ ೧–೨೮, ೭–೪೮, ೧೦–೪೨; ದ್ರೋಣ ೪–೭೯; ಕರ್ಣ ೨–೧, ೨೬–೩೧); ಚಂದ್ರೋದಯದ ವರ್ಣನೆಯೂ ಅಷ್ಟೆ (ವಿರಾಟ ೨–೫೦,೫೧). ಬೇಟೆಯ (ಅರಣ್ಯ ೧೩–೧೫–೩೧) ಮತ್ತು ಇಂದ್ರಕೀಲ ವನಾಂತರದ ವರ್ಣನೆ ಸ್ವಲ್ಪದರಲ್ಲಿಯೇ ಮುಗಿಯುತ್ತದೆ (ಅರಣ್ಯ ೪–೩೫–೩೮). ಋತುವಿಲಾಸದ ವರ್ಣನೆಗೆ ಬಹುಶಃ ಉಚಿತ ವಿಸ್ತಾರವನ್ನು ಕೊಡಲು ಕವಿ ಕೃಪಣನೇ ಸರಿ. ಪಾಂಡು–ಮಾದ್ರಿಯರ ವಿಷಮ ಸಮಾಗಮದ ಹಿನ್ನೆಲೆಯಾಗಿ ಬರುವ ವಸಂತದ ವರ್ಣನೆಯನ್ನೂ (ಆದಿ ೫–೫–೧೦) ಸುಭದ್ರಾಪರಿಣಯದ ಹಿನ್ನೆಲೆಯಾಗಿ ಬರು ವರ್ಷರ್ತು ವರ್ಣನೆಯನ್ನೂ (ಆದಿ ೧೯–೧೮–೨೦) ಗಮನಿಸಿದರೆ ಇದು ತಿಳಿಯುತ್ತದೆ. ಆದರೆ ವರ್ಣನೆಗೆ ವಸ್ತು ಯಾವುದೇ ಇರಲಿ, ಎಂದಿನಂತೆ ಕವಿಸಹಜವಾದ ಶಬ್ದಾರ್ಥ ಮೂಲದ ಅಲಂಕಾರವೈಖರಿ ಪರಿಪರಿಯಾಗಿ ತನ್ನ ಬೆಡಗನ್ನು ಸೂಸದಿರದು.

ವರ್ಣನೆಗಳ ವಿಷಯದಲ್ಲಿ ಕುಮಾರವ್ಯಾಸನ ಹಿತಮಿತವಾದ ಅಭಿರುಚಿ ಮೆಚ್ಚತಕ್ಕುದೇ ಸರಿ. ಸಹಜವಾಗಿ ಮಾತುಗಾರನಾದ ಆತ ಇಲ್ಲಿ ಸಂಯಮಿ. ಈ ಸಂಯಮಿಗೆ ಕೈತಡೆಯುದಾಗುವ ಎಡೆಗಳೆಂದರೆ ದೇವತಾಸ್ತುತಿಯ ಭಾಗಗಳು, ನೀತಿಬೋಧೆಯ ನಿರ್ವಚನಗಳು. ಕಿರಾತಾರ್ಜುನ ಲೀಲಾಭಾಗದ ಶಿವಸ್ತುತಿಯನ್ನಾಗಲಿ (ಅರಣ್ಯ ೬), ಕೃಷ್ಣಭಕ್ತರಾದ ದ್ರೌಪದಿಯೂ ಭೀಷ್ಮಾರ್ಜುನಾದ್ಯರೂ ಮಾಡುವ ಕೃಷ್ಣಮಹಿಮಾಸ್ತವಗಳನ್ನಾಗಲಿ (ಸಭಾ ೯–೧೪; ಭೀಷ್ಮ ೩) ಕ್ರಮವಾಗಿ ವ್ಯಾವಹಾರಿಕ ಪಾರಮಾರ್ಥಿಕ ನಯಗಳನ್ನು ಉಪದೇಶಿಸುವ ವಿದುರನೀತಿಯ ಹಾಗೂ ಸನತ್ಸುಜಾತೀಯದ ನಿರೂಪಣೆಗಳನ್ನಾಗಲಿ (ಉದ್ಯೋಗ ೩, ೪) ಗಮನಿಸಿದರೆ ಇದರ

ತಥ್ಯ ಮನವರಿಕೆಯಾಗುತ್ತದೆ. ದುರ್ಯೋಧನ ಶಿಶುಪಾಲರು ಕೃಷ್ಣನನ್ನು ಉದ್ದೇಶಿಸಿ ಮಾಡಿದ "ನಿಂದಾಸ್ತುತಿ"ಗಾದರೂ ಇತಿಮಿತಿಗಳ ಕಟ್ಟುಪಾಡಿಲ್ಲ; ಹಾಗೆಯೇ ಸಂಗ್ರಾಮ ವಿವರಗಳಿಗೆ ಸಹ.

ಪಾತ್ರರಚನೆ

ಕುಮಾರವ್ಯಾಸ ಭಾರತದ ಪಾತ್ರಪ್ರಪಂಚ ವಿಸ್ತಾರವಾದುದು; ವೈವಿಧ್ಯಮಯವಾದುದು. ಅಣ್ಣತಮ್ಮಂದಿರ ಮಕ್ಕಳ ನಡುವೆ ಆಸ್ತಿಹಂಚಿಕೆಯ ಸಂಬಂಧವಾಗಿ ಉಂಟಾದ ವೈಮನಸ್ಯದಲ್ಲಿ, ಅಣ್ಣನ ಮಕ್ಕಳು ತಮ್ಮನ ಮಕ್ಕಳನ್ನು ಹೇಗೆ ಕಾಡಿದರು, ಅಪಮಾನಿಸಿದರು ಹಾಗೂ ಮುಗಿಸಿಬಿಡಲು ಯತ್ನಿಸಿದರು ಎಂಬ, ಸಂಧಾನದಿಂದ ಆಗದುದನ್ನು ಸಾಹಸದಿಂದ ಹೇಗೆ ತಮ್ಮನ ಮಕ್ಕಳು ಸಾಧಿಸಿಕೊಂಡರು ಎಂಬ ವಸ್ತುವಿನ ಈ ಸಾಮಾನ್ಯಕಥೆಗೆ ಮಹತ್ತ್ವ ಪ್ರಾಪ್ತವಾಗಿರುವುದು ಇಲ್ಲಿಯ ಪಾತ್ರಗಳ ನಡೆನುಡಿಗಳಿಂದ ಎನ್ನುವುದು ತಿಳಿದೇ ಇದೆ. ಈ ಕಥೆಯೂ ಪಾತ್ರಗಳೂ ಸರ್ವಕಾಲಿಕ, ಸರ್ವಸಾಮಾನ್ಯ ಎನ್ನುವ ಮಟ್ಟಿಗೆ ಹುಟ್ಟಿ ಬೆಳೆದು ಕೊನೆಗೊಳ್ಳುವುವು. ಅವುಗಳಲ್ಲಿ ನಾವು ನಮ್ಮನ್ನೇ ಕಾಣುತ್ತೇವೆ; ಇಷ್ಟಪಡುತ್ತೇವೆ, ದ್ವೇಷಿಸುತ್ತೇವೆ. ಇವನ್ನು ಹೋರಾಟದ ದೃಷ್ಟಿಯಿಂದ ಪಾಂಡವ-ಕೌರವ-ಅನುಬಂಧಿ ಪಕ್ಷದವು ಎಂದೂ ಸ್ವಭಾವದ ದೃಷ್ಟಿಯಿಂದ ಗುಣತ್ರಯಾತ್ಮಕ ಎಂದೂ ಪ್ರಭಾವದ ದೃಷ್ಟಿಯಿಂದ ಪ್ರಮುಖ-ಅಪ್ರಮುಖ ಎಂದೂ ವಿಭಜಿಸಬಹುದು. ಹಾಗೆಯೇ ಪುರುಷ-ಸ್ತ್ರೀ, ದೈವ-ಮಾನುಷ-ರಾಕ್ಷಸ, ಉಚ್ಚ-ನೀಚ, ಕ್ರಿಯಾಶೀಲ-ಪ್ರಾಸಂಗಿಕ ಎಂಬ ವಿಭಜನೆಗಳೂ ಸಾಧ್ಯ. ಹೋರಾಟದ ದೃಷ್ಟಿಗೆ ಅನುಸಾರವಾಗಿ ನೋಡಿದರೆ: ೧. ಪಾಂಡವ ಪಕ್ಷ: ಯುಧಿಷ್ಠಿರ ಭೀಮ ಅರ್ಜುನ, ಕುಂತಿ ದ್ರೌಪದಿಯರು (ಪ್ರಮುಖರು); ಪಾಂಡು ನಕುಲ ಸಹದೇವ, ದ್ರುಪದ ಧೃಷ್ಟದ್ಯುಮ್ನ ಅಭಿಮನ್ಯು ಘಟೋತ್ಕಚ ಉತ್ತರಕುಮಾರ, ವಿರಾಟರಾಜ ಸಾತ್ಯಕಿ ಶಿಖಂಡಿಗಳು; ಹಿಡಿಂಬೆ ಸುಭದ್ರೆ ಸುದೇಷ್ಣೆಯರು (ಅಪ್ರಮುಖರು). ೨. ಕೌರವ ಪಕ್ಷ: ಧೃತರಾಷ್ಟ್ರ ದುರ್ಯೋಧನ ದುಶ್ಶಾಸನ ಕರ್ಣ ಶಕುನಿ, ಭೀಷ್ಮ ದ್ರೋಣ ವಿದುರ ಶಲ್ಯ ಅಶ್ವತ್ಥಾಮರು ಮತ್ತು ಗಾಂಧಾರಿ (ಪ್ರಮುಖರು); ಸಂಜಯ ಕೃಪ ಕೃತವರ್ಮ ಭೂರಿಶ್ರವ ಜಯದ್ರಥ ಮತ್ತು ಭಾನುಮತಿ (ಅಪ್ರಮುಖರು). ೩. ಅನುಬಂಧಿ ಪಕ್ಷ: ಶಂತನು ವ್ಯಾಸ ವಿಚಿತ್ರವೀರ್ಯ ಕೃಷ್ಣ ಬಲರಾಮ ಪರಶುರಾಮ ಹನುಮಂತ ಇಂದ್ರ ನಾರದ ಮಹಾದೇವ ಜರಾಸಂಧ ಕೀಚಕ ಶಿಶುಪಾಲ ಏಕಲವ್ಯ ಅಧಿರಥ ಅಂಗಾರಪರ್ಣ ಚಿತ್ರಸೇನರು; ಅಂಬೆ ಊರ್ವಶಿ ಸುದೇಷ್ಣೆಯರು.

ಈ ಪಾತ್ರಗಳು ಹೊರತಾಗಿಯೂ ಕೆಲವು ಪಾತ್ರಗಳುಂಟು. ಅವು ಬಲು ಮಟ್ಟಿಗೆ ಪ್ರಾಸಂಗಿಕವಾದವು. ಈ ಪಾತ್ರಗಳ ಗುಣಶೀಲಗಳ ಬಗೆಗೆ ಮುಂದೆ ಕೆಲವಂಶಗಳನ್ನು ಗುರುತಿಸಬಹುದು:

ಕುಮಾರವ್ಯಾಸ ಭಾರತದ ನಾಯಕವ್ಯಕ್ತಿ ಕೃಷ್ಣನೇ ಯುಧಿಷ್ಠಿರನೇ ಎಂಬ, ಭೀಷ್ಮ ದ್ರೋಣರ, ದುರ್ಯೋಧನ ಕರ್ಣರ, ಯುಧಿಷ್ಠಿರಾದಿ ಕೌಂತೇಯರ ಪಾತ್ರ ಚಿತ್ರಣ ಸಮರ್ಪಕವೇ ಎಂಬ ವಿಷಯದಲ್ಲಿ ಕೆಲಮಟ್ಟಿಗೆ ಚರ್ಚೆ ನಡೆದಿದೆ. ಈ ಚರ್ಚೆ ನಿರರ್ಥಕವಲ್ಲವಾದರೂ, ಕಂಡುಕೊಳ್ಳುವ ಉತ್ತರಗಳು ಸಹೃದಯರ ಅನುಭವಗಳಿಗೆ ತಕ್ಕಂತೆ, ವಿಮರ್ಶಕರ ವಿಶ್ಲೇಷಣೆಗಳಿಗೆ ತಕ್ಕಂತೆ ಬಹುವಿಧವಾಗಿ ಇರಬಹುದು. ಪಾತ್ರಗಳ ನಡೆನುಡಿಗಳಲ್ಲಿ ಕಂಡುಬರುವ ವಿಸಂಗತಿಗಳಿಗೆ, ವೈಪರೀತ್ಯಗಳಿಗೆ ಜೀವನದ ಜಟಿಲತೆ ಕುಟಿಲತೆಗಳೂ ಮಾನವಮನಸ್ಸಿನ ನಿಗೂಢವ್ಯಾಪಾರಗಳೂ ಸಂದರ್ಭಗಳ ಒತ್ತಡಗಳೂ ಅನಿರ್ವಚನೀಯವಾದ ವರ್ತನೆಗಳೂ ಕಾರಣಗಳೆಂಬುದನ್ನು ಮರೆಯು ವಂತಿಲ್ಲ ಮನುಷ್ಯಪ್ರಪಂಚದ ವಿವಿಧಾನುಭವಗಳ, ಸ್ವಭಾವವಿಶೇಷಗಳ ಗಾಢ ಪರಿಚಯವಿದ್ದ ಕುಮಾರವ್ಯಾಸ ದೊಡ್ಡದಾದ ಭಾರತಕಥೆಯ ಹರವಿನಲ್ಲಿ ಕಾಣಿಸಿ ಕೊಳ್ಳುವ ಹಲವಾರು ವ್ಯಕ್ತಿಗಳ ನಡೆನುಡಿಗಳನ್ನು ಸಂದರ್ಭೋಚಿತವಾಗಿಯೇ, ಸಹಜವಾಗಿಯೇ ಚಿತ್ರಿಸಿರುವನೆಂದು ಹೇಳಬಹುದು. ಈ ವ್ಯಕ್ತಿಗಳ ವ್ಯಾಪ್ತಿ ಗೊಲ್ಲರ ಹುಡುಗನಿಂದ ವ್ಯಾಸಮಹರ್ಷಿಯ ವರೆಗೆ ನಾನಾ ಸ್ತರಗಳಿಗೆ ಪ್ರತೀಕಗಳಾಗಿವೆ. ಇಲ್ಲಿ ಪುತ್ರಮೋಹದ ಧೃತರಾಷ್ಟ್ರ, ಅಸೂಯೆ ದುರಾಸೆ ಹಠಮಾರಿತನಗಳ ದುರ್ಯೋಧನ, ಜೋಳದ ಪಾಳಿಗೆ ಬಲಿಯಾದ ಕರ್ಣ, ನೀಚಬುದ್ಧಿಯ ಸಲಹೆಗಾರ ಶಕುನಿ, ವಂಶ ಕ್ಷಯವನ್ನು ತಪ್ಪಿಸಲಾಗದೆ ಕೊಳಲಾಡಿದ ಭೀಷ್ಮ ದ್ರೋಣರು, ಸಾತ್ತ್ವಿಕ ಮನೋ ಧರ್ಮದ ಧರ್ಮರಾಯ, ಭ್ರಾತೃಭಕ್ತಿ ಅಪಮಾನಗಳ ಎಳತಟಕ್ಕೆ ಸಿಕ್ಕಿ ಹಿಂಸೆಪಡುವ ಭೀಮಾರ್ಜುನಾದಿಗಳು, ಏಕಾಕಿಯಾಗಿಯೇ ನೀತಿಯ ನಿಲುಮೆಯನ್ನು ಎತ್ತಿ ಹಿಡಿ ಯುವ ವಿದುರ, ಕುಲಮದದಿಂದ ಬೀಗುವ ಶಲ್ಯ, ಮಾನಸಂರಕ್ಷಣೆ ಮಾಡಿಕೊಂಡು ಆತ್ಮಗೌರವದಿಂದ ಬಾಳಲು ಹಂಬಲಿಸುವ ದ್ರೌಪದಿ, ಮಾತಿನ ಮಲ್ಲನಾದ ಉತ್ತರ ಕುಮಾರ, ಹಡೆದ ಮಕ್ಕಳಿಂದ ಸುಖಕಾಣದೆ ತರಹರಿಸುವ ಕುಂತಿ ಗಾಂಧಾರಿಯರು, ಯಾವ ನೀಚಕಾರ್ಯಕ್ಕೂ ಹೇಸದೆ ಮುಂದಾಗುವ ದುಶ್ಶಾಸನ—ಇಂತಹವರು ಕಾವ್ಯ ಭೂಮಿಕೆಯಲ್ಲಿದ್ದರೂ ನಮ್ಮವರಾಗಿಯೇ ಕಂಡುಬರುತ್ತಾರೆ. ಅವರ ಚರ್ಯೆಗಳಲ್ಲಿ, ಹಿರಿಯನಾಗಿಯೂ ತಮ್ಮನ ಮಕ್ಕಳ ವಿಚಾರದಲ್ಲಿ ನಿಸ್ಸಹಾಯನಾಗಿ ನಡೆದುಕೊಂಡ ಧೃತರಾಷ್ಟ್ರ, ಸತ್ತ್ವಶಾಲಿ ವ್ಯಕ್ತಿಯಾಗಿಯೂ ಎರಡು ಸಲ ಜೂಜಾಡುವ ದೌರ್ಬಲ್ಯ ವನ್ನು ತೋರಿಸಿದ ಧರ್ಮರಾಯ, ಕೊನೆಯತನಕ ಒಳ್ಳೆಯತನದ ಸೆಳಕನ್ನೇ ಹೊಳೆ ಯಿಸದ ದುರ್ಯೋಧನ, ಅಣ್ಣತಮ್ಮಂದಿರ ಮಕ್ಕಳನ್ನು ಸರಿದಾರಿಗೆ ತಂದು ಒಗ್ಗೂಡಿ ಸಲು ಯಾವ ಹಿರಿತನವೂ ವಿವೇಕವೂ ವಿದ್ಯೆಯೂ ಸಹಾಯಕ್ಕೆ ಬಾರದ ಹಾಗೆ ನಿಷ್ಕ್ರಿಯರಾಗಿ ಹೋದ ಭೀಷ್ಮದ್ರೋಣಾದಿಗಳು, ಸಲಹಿದಾತನ ಸಮಯಕ್ಕೆಂದು ಬಾಳನ್ನು ಮುಡಿಪುಮಾಡಿ ಆ ಸಮಯವನ್ನು ಅನುಚಿತ ಔದಾರ್ಯ ಪ್ರತಿಜ್ಞೆಗಳಿಂದ ದುರ್ಬಲಗೊಳಿಸಿದ ಕರ್ಣ, ಸ್ವಶಕ್ತಿಯಲ್ಲಿ ನಂಬುಗೆಯಿದ್ದೂ ಅಪಮಾನವನ್ನುಂಡೂ ಮೂಗುಚ್ಚೆಗಳಾಗಿ ನಡೆದುಕೊಂಡ ಭೀಮಾರ್ಜುನರು, ಮಾತಿನ ಮಲ್ಲನೂ ಸ್ವಭಾವ

ಭೀರುವೂ ಆದ ವ್ಯಕ್ತಿ ಒಂದು ಘಟ್ಟದ ಬಳಿಕ ವಿವೇಕಿಯೂ ವಿನಯಶಾಲಿಯೂ ಆಗಿ ಪರಿವರ್ತಿಸಿದನೆಂಬ ಉತ್ತರಕುಮಾರ—ಇವರ, ಇಂತಹ ಕೆಲವರ, ಚರ್ಯೆಗಳು ಸರಿಯೇ ತಪ್ಪೇ ಎಂಬುದಾಗಿ ನಾವು ಆಯಕಟ್ಟಿನ ಸಂದರ್ಭಗಳಲ್ಲಿ ಯೋಚಿಸುವಂತಾಗುತ್ತದೆ. ಹಾಗೆ ಅವರು ನಡೆದದ್ದು, ನುಡಿದದ್ದು ಸ್ವಾಭಾವಿಕ, ಸಂಭಾವ್ಯ ಎಂದು ಸಮರ್ಥಿಸುವುದು ಸಾಧ್ಯವಾಗುವಂತಿದ್ದರೆ, ಸರಿಯೆಂದು ಒಪ್ಪಬೇಕಾಗುತ್ತದೆ. ನಮ್ಮ ಸಮರ್ಥನೆಗೆ, ಲೌಕಿಕವ್ಯವಹಾರದ ನಯ ನೀತಿಗಳನ್ನೇ ಅವಲಂಬಿಸಿರುವುದು ಸಾಧ್ಯವಿಲ್ಲ; ಭಾರತೀಯ ಸಂಸ್ಕೃತಿ ಬೆಳಸಿಕೊಂಡು ಬಂದ ಶ್ರದ್ಧೆ ವಿಶ್ವಾಸಗಳನ್ನೂ ಲಕ್ಷಿಸಬೇಕಾಗುತ್ತದೆ; ದೈವಪ್ರಭಾವವನ್ನು ಒಪ್ಪಿಕೊಳ್ಳಬೇಕಾಗುತ್ತದೆ; ನ್ಯಾಯ ಧರ್ಮಗಳ, ಪಾಪ ಪುಣ್ಯಗಳ ಸ್ವರೂಪದ ಸೂಕ್ಷ್ಮತೆಗಳನ್ನೂ ಧರ್ಮಸಂಕಟದ ಕಾರಣಗಳನ್ನೂ ಒತ್ತಡಗಳನ್ನೂ ಮನವರಿಕೆ ಮಾಡಿಕೊಳ್ಳಬೇಕಾಗುತ್ತದೆ; ಜೊತೆಗೆ ಕವಿಯ ಒಲವುಗಳನ್ನೂ ದೌರ್ಬಲ್ಯಗಳನ್ನೂ ಪರಿಗಣಿಸುವುದೂ ಅಗತ್ಯ.

ಮಹಾಭಾರತದ ಪಾತ್ರಗಳು ಸಹ ಕಥೆಯ ಹಾಗೆಯೇ ಕಾಲದಿಂದ ಕಾಲಕ್ಕೆ ಬೆಳೆಯುತ್ತ, ಬದಲಾಯಿಸುತ್ತ ಹೋಗಿ ಕುಮಾರವ್ಯಾಸ ಭಾರತದಲ್ಲಿ ಈಗ ಇರುವ ರೀತಿಯಲ್ಲಿ ಕಂಡುಬರುತ್ತಿವೆ. ಮೂಲಕತೆಯ ಸರಳತೆ ರೂಕ್ಷತೆಗಳು ಇಲ್ಲಿ ಸಹಜವಾಗಿಯೇ ಸಂಕೀರ್ಣವೂ ನಾಗರಿಕವೂ ಆಗಿ ಪರಿಣಮಿಸಿರುವುದಲ್ಲದೆ, ಮಾನವೀಯ ಭಾವನೆಗಳ ಮಿಡಿತಗಳನ್ನು ಮೇಲಿಂದ ಮೇಲೆ ಕೇಳಬಹುದಾಗಿದೆ. ಸಕಲ ವಿದ್ಯಮಾನಗಳೂ, ಒಳ್ಳೆಯದಿರಲಿ ಕೆಟ್ಟದ್ದಿರಲಿ, ದೈವಾಯತ್ತವಾದುದು ಎಂಬ ಮೂಲಭೂತವಾದ ಭಾರತೀಯ ಸಂಸ್ಕೃತಿಯ ಶ್ರದ್ಧೆಯಿಂದ, ಕೃಷ್ಣಮಹಿಮೆಯ ಅರ್ಪಣಬುದ್ಧಿಯ ಭಾಗವತದೃಷ್ಟಿಯಿಂದ ಕುಮಾರವ್ಯಾಸ ತನ್ನ ಎಲ್ಲ ಪಾತ್ರಗಳನ್ನೂ ನವೀಕರಿಸಿದ್ದಾನೆ, ಮೆರೆಯಿಸಿದ್ದಾನೆ. ಆದರಿಂದಾಗಿ ಭೀಷ್ಮ ವಿದುರರು ಮಾತ್ರವೇ ಅಲ್ಲದೆ ಕರ್ಣ ದುರ್ಯೋಧನರು ಸಹ ಕೃಷ್ಣಪ್ರಭಾವದ ಕೂಸುಗಳಾಗಿದ್ದಾರೆ. ಮಾನವೀಯವಾದ ನೆಲೆ ಮತ್ತು ಮೌಲ್ಯಗಳ ದೃಷ್ಟಿಯಿಂದ ಕಥಾನಾಯಕ ಯುಧಿಷ್ಠಿರನೇ; ಪಾಂಡವಾಗ್ರಜನಾದ ಆತನ ನಡೆನುಡಿಗಳೇ ಪಾಂಡವರೆಲ್ಲರ ಹಾಗೂ ಅವರ ಅನುಬಂಧಿಗಳ ಕಾರ್ಯಚಟುವಟಿಕೆಗಳನ್ನು ನಿಯಂತ್ರಿಸುತ್ತವೆ ಇಲ್ಲವೆ ಪ್ರೇರಿಸುತ್ತವೆ. ಆದರೆ ಯುಧಿಷ್ಠಿರನೂ ಸೇರಿದಂತೆ ಸಕಲ ಜೀವರಾಶಿಗಳ ಕಾರ್ಯಚಟುವಟಿಕೆಗಳನ್ನೂ ನಿಯಂತ್ರಿಸುವ ಪರಾಶಕ್ತಿಯೇ ಕೃಷ್ಣಶಕ್ತಿ. ಕೃಷ್ಣಭಕ್ತಿಯ ಬಲದಿಂದಲೇ, "ಪಾಂಡವಜೀವಿ ಹರಿಯೆಂಬೀ ಪ್ರತಿಜ್ಞೆಯ ಭಾವ ಸಂದುದು ಧರ್ಮಜನ ಪಟ್ಟಾಭಿಷೇಕದಲಿ." ಆದುದರಿಂದ ಕೃಷ್ಣನೇ ಕಥಾನಾಯಕನೆಂದರೂ ಸಲ್ಲುತ್ತದೆ. ಅವನು ಪಾತ್ರಧಾರಿಯೂ ಹೌದು, ಸೂತ್ರಧಾರನೂ ಹೌದು. ಕಥೆ ಪಾತ್ರಗಳ ಮೇಲೆ ಕೃಷ್ಣನ ಕೈವಾಡ ಅದೃಶ್ಯವೂ ಅತೀತವೂ ಆದ ಶಕ್ತಿಯೊಂದರ ಕೈವಾಡದ ಹಾಗೆ ಅಲ್ಲ; ಪುರಾಣ ಪ್ರಪಂಚದ ಶುದ್ಧ ದೈವಸ್ವರೂಪದ್ದಲ್ಲ; ಸ್ವಾಮಿ, ಗುರು, ಬಂಧು, ಮಿತ್ರ ಎಂಬ ಸಂಬಂಧಗಳ ಮಾನವಾಕೃತಿ ತಳೆದೂ ಅಸಾಮಾನ್ಯವ್ಯಕ್ತಿಯಾಗಿ ಮೆರೆಯುವ ದೇವ

ಮಾನವ ಶಕ್ತಿಗೆ ಅನುಗುಣವಾದುದಾಗಿದೆ. ಈತ ಅಘಟಿತ ಘಟನೆಗಳನ್ನು ಆಗ ಮಾಡಿಸಬಲ್ಲ; ಎಳೆಯ ಮಗುವಿನಂತೆ ಕಣ್ಣೀರು ಸುರಿಸಬಲ್ಲ. ಈತನು ಮಾನವಾಕೃತಿಯ ಮಹಾವಿಷ್ಣುವೆಂದರೂ ಸರಿಯೆ. ಸುಭದ್ರಾರ್ಜುನ ವಿವಾಹ, ಜರಾಸಂಧ ವಧೆ, ದ್ರೌಪದಿಯ ಮಾನಸಂರಕ್ಷಣೆ, ಕಪಟದ್ಯೂತದಲ್ಲಿ ಸೋತು ಕಾಡು ಸೇರಿದ ಪಾಂಡವರ ಪಾಡಿಗೆ ತೋರಿಸಿದ ಸಹಾನುಭೂತಿ ಮತ್ತು ನೀಡಿದ ಸಾಂತ್ವನ, ಅರ್ಜುನರಥಸಾರಥ್ಯದ ಔದಾರ್ಯ, ಪಾಂಡವ ರಾಯಭಾರ, ವಿದುರಾತಿಥ್ಯ ಸ್ವೀಕಾರ, ಕರ್ಣಭೇದ ಕೌಶಲ, ಅರ್ಜುನನ ಮನಸ್ಸಿನ ವಿಷಾದವನ್ನು ಕಳೆದು ಯುದ್ಧದ ಅನಿವಾರ್ಯತೆಯನ್ನು ಮನವರಿಕೆ ಮಾಡಿದುದು, ಭೀಷ್ಮ ಭಗದತ್ತ ಜಯದ್ರಥ ದ್ರೋಣ ಕರ್ಣ ದುರ್ಯೋಧನ ಮತ್ತು ಅಶ್ವತ್ಥಾಮರ ದೆಸೆಯಿಂದ ಘಟಿಸಿದ ಪಾಂಡವವಿಪತ್ಕರವಾದ ಯುದ್ಧಕ್ಲೇಶಗಳನ್ನು ಉಚಿತವಾದ ಉಪಾಯಗಳಿಂದ ದಾಟಿದುದು—ಇವುಗಳಲ್ಲಿ ಕೃಷ್ಣನ ದೇವಮಾನವ ಶಕ್ತಿ ಹೇಗೆ ಕೆಲಸ ಮಾಡಿತೆಂಬುದನು ಕಾಣಬಹುದು. ವಿಮರ್ಶಿಸಿದರೆ ಆತನ ಪಾಂಡವಪಕ್ಷಪಾತ, ಕೌರವರ ಅನ್ಯಾಯ ಅಧರ್ಮಗಳಿಂದಾಗಿ ಉಂಟಾಗಲಿದ್ದ ಧರ್ಮಗ್ಲಾನಿಯನ್ನು ತಪ್ಪಿಸಲು ಒಪ್ಪಿಕೊಂಡ ಧರ್ಮಪಕ್ಷಪಾತವೆಂದೇ ತಿಳಿಯುತ್ತದೆ. ದುಷ್ಟನಿಗ್ರಹದ ಜೊತೆಗೆ ಒಡನಾಟದ ನಿರಪರಾಧಿಗಳ ಹನನವೂ ಆಗುವುದು ಬಹುಶಃ ಅನಿವಾರ್ಯವೇ ಇದ್ದೀತು.

ನಾಯಕ ಪ್ರತಿನಾಯಕರೆನ್ನಬಹುದಾದ ಯುಧಿಷ್ಠಿರ ದುರ್ಯೋಧನರ ಬಗೆಗೆ **ಕೆಲವು ಮಾತುಗಳು :**

ಧರ್ಮನಿಷ್ಠ, ಸತ್ಯಸಂಧ, ಸಾತ್ತ್ವಿಕಶಿರೋಮಣಿ, ರಾಜನೀತಿಜ್ಞ, ಭಾಗವತೋತ್ತಮ, ಸಂಯಮಶಾಲಿ, ಪರಾಕ್ರಮಿ, ಕಾರುಣ್ಯಹೃದಯಿ, ಬಂಧುಪ್ರಿಯ, ಭ್ರಾತೃವತ್ಸಲ ಮುಂತಾದ ಹಲವು ಗುಣಾತಿಶಯದ ಪ್ರಶಂಸೋಕ್ತಿಗಳಿಂದ ಕೂಡಿದವನು ಯುಧಿಷ್ಠಿರ. ಇವುಗಳಲ್ಲಿ ಒಂದೊಂದು ಉಕ್ತಿಯನ್ನೂ ಪುಷ್ಟೀಕರಿಸುವ ನಿದರ್ಶನಗಳು ಒಂದಕ್ಕಿಂತ ಹೆಚ್ಚಾಗಿ ಉಂಟು. ಇಂದ್ರಕೀಲದತ್ತ ತೆರಳಿದ ಅರ್ಜುನನಿಗೆ ಅವನು ನೀಡಿದ ಹಿತೋಕ್ತಿಗಳಿಂದ, ದ್ಯೂತದಲ್ಲಿ ಸರ್ವನಾಶವಾದರೂ ಸತ್ಯಚ್ಯುತನಾಗದೆ ಕಷ್ಟಗಳನ್ನು ಭರಿಸಿದ ಸಹಿಷ್ಣುತೆಯಿಂದ, ಪರಮಶತ್ರುಗಳಾದ ಕೌರವರ ವಿಷಯದಲ್ಲಿಯೂ ಸಜ್ಜನಿಕೆಯ ನಡೆನುಡಿಗಳನ್ನು ಬಿಡದೆಹೋದುದರಿಂದ, ಅಜಗರ ಪ್ರಸಂಗದಲ್ಲಿಯೂ ಯಕ್ಷಪ್ರಶ್ನೆಯ ಸಂದರ್ಭದಲ್ಲಿಯೂ ಸಮುಚಿತವಾಗಿ ಉತ್ತರಗಳನ್ನು ನೀಡಿದುದರಿಂದ, ರಾಜಸೂಯಾದಿ ಸನ್ನಿವೇಶಗಳಲ್ಲಿ ಪ್ರಕಟಿಸಿದ ಕೃಷ್ಣಭಕ್ತಿಯಿಂದ, ದುರ್ಯೋಧನಾದಿಗಳು ಕೆರಳಿಸಿದರೂ ತಮ್ಮಂದಿರೂ ಪತ್ನಿಯೂ ಉದ್ರೇಕಗೊಂಡರೂ ಶಾಂತಮನಸ್ಕತೆಯನ್ನು ತೋರಿದುದರಿಂದ, ಶಲ್ಯಾದಿಗಳನ್ನೇ ನಿಗ್ರಹಿಸಿದುದರಿಂದ, ದುರ್ಯೋಧನನನ್ನು ಗಂಧರ್ವರ ಕೈಯಿಂದ ಬಿಡಿಸುವಾಗ ಭಾನುಮತಿಯ ಹಾಗೂ ಜಯದ್ರಥನ ವಧೆಯ ಪೂರ್ವದಲ್ಲಿ ದುಶ್ಶಳೆಯ ಬಗೆಗೆ ವ್ಯಕ್ತಪಡಿಸಿದ ಭಾವನೆಗಳಿಂದ, ಧೃತರಾಷ್ಟ್ರ ಕುಂತಿ ಮೊದಲಾದವರ ಬಗೆಗೆ ಪ್ರಕಟಿಸಿದ ಗೌರವಭಾವ

ದಿಂದ, ತಮ್ಮಂದಿರನ್ನು ನಡೆಸಿಕೊಂಡ ರೀತಿಯಿಂದ ಇದನ್ನು ನಾವು ಅರ್ಥಮಾಡಿಕೊಳ್ಳಬಹುದು. ಇಷ್ಟಾಗಿ ಈ ಗುಣಸಂಪನ್ನ ರಾಜ್ಯಕೋಶಾದಿಗಳನ್ನೇ ಅಲ್ಲದೆ ಒಡಹುಟ್ಟಿದವರನ್ನೂ ಹೆಂಡತಿಯನ್ನೂ ಪಣವಾಗಿಟ್ಟು ಸೋತನಲ್ಲ. ಈ ಬುದ್ಧಿಗೇಡಿತನಕ್ಕೆ ಏನೆನ್ನಬೇಕು? ಶಕುನಿಯ ಕುತಂತ್ರವನ್ನೂ ವಿದುರನ ಎಚ್ಚರಿಕೆಯನ್ನೂ ಅಲಕ್ಷಿಸಿದನೇಕೆ? ಸಭೆಯಲ್ಲಿ ದ್ರೌಪದಿಗೆ ಅವಮಾನವಾಗುತ್ತಿದ್ದಾಗ ಬಾಯಿ ಕಟ್ಟಿದಂತೆ ಸುಮ್ಮನಿದ್ದುದೇಕೆ? ಸತ್ಯಪಾಲನೆ ದೊಡ್ಡದೇ, ಹೆಂಡತಿಯ ಮಾನಹಾನಿ ದೊಡ್ಡದೇ? ಇದಕ್ಕೆ "ದೈವದ ಪಾಶ ದೊಡ್ಡದು" ಎಂಬುದೇ ಸಮಾಧಾನವೇ? ಕುಮಾರವ್ಯಾಸ ಅಶ್ವತ್ಥಾಮ ಹತ್ತನೆಂಬ ಧರ್ಮವಾರ್ತೆಯ ಪ್ರಸಂಗವನ್ನು ಪರಿಣಾಮಕಾರಿಯಾಗಿ, ಸಹಜವಾಗಿ ಚಿತ್ರಿಸಿಲ್ಲವೆಂಬುದು ದಿಟವಾದರೂ ದ್ರೋಣನಿಗೆ ಉಂಟಾದ ಭ್ರಾಂತಿ ಸಮರ್ಥನೀಯವಾಗಿ ತೋರದಿದ್ದರೂ ಯುಧಿಷ್ಠಿರನಿಗೆ ವ್ಯಾವಹಾರಿಕದ ಸೋಂಕು ಹತ್ತದ ಹಾಗೆ ಎಚ್ಚರವಹಿಸಿದಂತೆ ಕಾಣುತ್ತದೆ.

ಕುಮಾರವ್ಯಾಸ ಭಾರತದಲ್ಲಿ ದುರ್ಯೋಧನನನ್ನು ಪ್ರತಿನಾಯಕನೆನ್ನಬಹುದು. ಅವನು ಸಕಲ ದೈತ್ಯಗಳ, ದೌರ್ಬಲ್ಯಗಳ ಸಂಕೇತವಂತೆ ಇದ್ದಾನೆ. ಅವನ ಹುಟ್ಟು ತಾಯಿಯ ಅಸೂಯೆಯ ಫಲ; ಅವನ ಬೆಳವಣಿಗೆ ತಂದೆಯ ಮೋಹಾಂಧತೆಯ ಫಲ. ಅವನು ಕಷ್ಟನಷ್ಟಗಳ ಅನುಭವವಿಲ್ಲದೆ ಬೆಳೆದವನು ಎಂಬುದರಿಂದಾಗಿ, ರಾಜ್ಯದ ಸಿರಿಸಂಪತ್ತುಗಳ ನಡುವೆ ಕೆಟ್ಟವರ ಕೆಳೆತನದಲ್ಲಿ ಕೊಬ್ಬಿ ಬೆಳೆದವನು ಎಂಬುದರಿಂದಾಗಿ, ದುರ್ಗುಣಗಳು ಹಿಂಡುಹಿಂಡಾಗಿ ಅವನನ್ನು ಆಶ್ರಯಿಸಿದವು. ಹಾಗೆಯೇ ಬಾಲ್ಯಕಾಲದಲ್ಲಿಯೇ ಪಾಂಡವರ ಬಗೆಗೆ ಅವನಿಗೆ ಅಸೂಯೆ ಹುಟ್ಟಿತು; ಅವರ ಏಳಿಗೆಯನ್ನು ಸಹಿಸದೆ, ಅವರಿಗೆ ಕೇಡನ್ನೇ ಬಯಸುವ ಪರಮಕುಟಿಲ ಪ್ರವೃತ್ತಿ ತುಂಬಿಕೊಂಡಿತು; ಅವರ ರಾಜ್ಯಭೋಗಗಳ ಹಕ್ಕುಗಳನ್ನು ಮನ್ನಿಸುವುದೆಂಬ ಹಿರಿಯರ, ಹಿತವರ ನೀತಿಯ ಮಾತುಗಳನ್ನು ತುಚ್ಛೀಕರಿಸುವ ಹಠಮಾರಿತನ ಬೆಳೆಯಿತು; ಅಲ್ಲದೆ ಹಿರಿಯರನ್ನು ಹೇಸದೆ ಅವಮಾನಿಸುವ ಧೂರ್ತತೆ ಅವಿನಯಗಳು ಅಧಿಕಗೊಂಡುವು ಎಲ್ಲವೂ ತನ್ನದೇ, ಎಲ್ಲವೂ ತನಗೇ ಇರಲಿ ಎಂಬ ಲೋಭ ದುರಾಸೆ ಮಹತ್ವಾಕಾಂಕ್ಷೆಗಳಿಂದ ಅವನು ಗರ್ವಾಂಧನಾಗಿ ಪಾಂಡವರನ್ನು ದ್ಯೂತ ಘೋಷಯಾತ್ರೆ ಗೋಗ್ರಹಣ ಮತ್ತು ಕುರುಕ್ಷೇತ್ರಯುದ್ಧಗಳ ಮೂಲಕ ನಿರಂತರವಾಗಿ ಅವಮಾನಿಸಲೂ ನಾಶಮಾಡಲೂ ಯತ್ನಗಳನ್ನು ನಡೆಸತೊಡಗಿದನು. ದ್ಯೂತ ಚತುಷ್ಪಯದಲ್ಲಿ ಒಬ್ಬನಾಗಿ ಅವನು ಭೀಷ್ಮ ದ್ರೋಣ ವಿದುರ ಮುಂತಾದವರೊಂದಿಗೆ ಅಸಭ್ಯರೀತಿಯಲ್ಲಿ ನಡೆಯುವಲ್ಲಿ, ಸಭೆಯಲ್ಲಿ ದ್ರೌಪದಿಯನ್ನು ಅಸಹ್ಯರೀತಿಯಲ್ಲಿ ನಡೆಸಿಕೊಳ್ಳುವಲ್ಲಿ, ಅವನ ಕಣ್ಣೆದುರು ಇದ್ದ ಧ್ಯೇಯವೆಂದರೆ ಪಾಂಡವವಿನಾಶವೊಂದೇ.

ಇಂತಹ ದುರ್ಯೋಧನ ಕಲಾಪ್ರೇಮಿ, ಸಭ್ಯನೆಂದು, ವಿನಯಶಾಲಿಯೆಂದು, ಪರಗುಣಪ್ರಶಂಸಕನೆಂದು, ಒಳ್ಳೆಯ ಸ್ನೇಹಿತನೆಂದು ಕಾಣುತ್ತಾನೆ. ಭೀಷ್ಮ

ದ್ರೋಣಾದ್ಯರೊಂದಿಗೆ ವಿನಯದಿಂದ ನಡೆದುಕೊಂಡ ಸಂದರ್ಭಗಳಿವೆ. ಶತ್ರುಪಕ್ಷದ ವೀರರನ್ನು ಘಾತಿಸುವಲ್ಲಿ ತನ್ನ ಸಾಹಸ ಪರಾಕ್ರಮಗಳನ್ನು ಮೆರೆದ ಸಂದರ್ಭಗಳಿವೆ. ಅವನ ಗುಣಾತಿಶಯಗಳು ನಟನೆಯೋ, ಸಹಜವೇ? ಮಾನವಪ್ರಕೃತಿಯಲ್ಲಿ, ಪ್ರಮಾಣ ಭೇದವೇನೇ ಇದ್ದರೂ ಒಳಿತು ಕೆಡುಕುಗಳೆರಡೂ ಸ್ವಾಭಾವಿಕವೇ. ದುರ್ಯೋಧನನು ತುಂಬ ಕೆಡುಕನಾಗಿ ನಡೆದುಕೊಂಡರೂ ಆಗಾಗ ಅವನಲ್ಲಿ ಒಳಿತಿನ ಅಂಶಗಳು ಮಿಂಚಬಹುದು. ಅವು ಕ್ಷಣಸಂಚಾರಿಗಳು ಮಾತ್ರ ಎನ್ನುವುದು ದೌರ್ಭಾಗ್ಯದ ಸಂಗತಿ. ಕರ್ಣನೊಂದಿಗೆ ಅವನ ಸ್ನೇಹ ಸ್ವಾರ್ಥವಿರಹಿತವಲ್ಲ ಎಂದರೂ ಸ್ವಾರ್ಥವನ್ನು ಹಿಂದಿಕ್ಕಿ ಸಹಜಮೈತ್ರಿ ಪ್ರಕಟಗೊಳ್ಳುವುದೂ ಈ ಸಮ್ಮಿಶ್ರಸ್ವರೂಪದ ಮಾನವಪ್ರಕೃತಿಯ ಪ್ರಭಾವದಿಂದಲೇ. ಕೌರವ ಪಾಂಡವರು ಕರ್ಣನನ್ನು ತಂತಮ್ಮ ಉದ್ದೇಶಗಳ ಸಲುವಾಗಿ ಎಳೆದಾಡಿದ್ದೇ ಕರ್ಣನ ದುರ್ವಿಧಿಯಾಯಿತು. ದುರ್ಯೋಧನ ಕರ್ಣರ ಪಾತ್ರ ಚಿತ್ರಣದಲ್ಲಿ ಕುಮಾರವ್ಯಾಸನು ಬಲುಮಟ್ಟಿಗೆ ಪಂಪನ ಪ್ರಭಾವಕ್ಕೆ ಸಿಕ್ಕಿ ಅವುಗಳನ್ನು ಹದಗೊಳಿಸಲು, ಮೆರುಗೊಳಿಸಲು ಯತ್ನಿಸಿರುವಂತೆ ತೋರುವುದು. ಆದ್ದರಿಂದಲೇ ಅವರಲ್ಲಿ ಸಾಂದ್ರವಾಗಿ ಮಾನವೀಯತೆಯ ಅಂಶಗಳು ಗೋಚರಿಸುತ್ತಿರುವುದು; ಹಾಗೆಂದೇ ವಿಸಂಗತಿಗಳಿಗೂ ಅವಕಾಶವಾಗಿರುವುದು. ದುರ್ಯೋಧನ ಕರ್ಣರು ಎರಡು ಮೌಲ್ಯಗಳ ಪ್ರತೀಕಗಳಾಗಿ ಪರಿಣಮಿಸದೆ, ಎರಡು ಮೌಲ್ಯಗಳನ್ನು ಆರಾಧಿಸುವ ಹಾಗೂ ಅವನ್ನು ಅನುಷ್ಠಿಸಲು ಪ್ರಾಮಾಣಿಕವಾಗಿ ಪ್ರಯತ್ನಿಸುವ ಧೀರವ್ಯಕ್ತಿಗಳಾಗಿ ಪರಿಣಮಿಸಿದ್ದಾರೆ. ಅವರು ತಮ್ಮ ಪ್ರಯತ್ನದಲ್ಲಿ ಸೋತು ಗೆದ್ದವರು ಎನ್ನಬಹುದಾಗಿದೆ. ಅವರಲ್ಲಿ ದುರ್ಯೋಧನನು "ಕಾವನಾತನೆ ಕೊಲುವನಾತನೆ, ಸಾವೆನಾತನ ಕೈಯ ಬಾಯಲಿ" ಎಂದು ಮುಂತಾಗಿ, ಕರ್ಣನು "ಬೇಡುವೆನು ಹರಿದರುಶನವ ಕಡೆ ವೇಳೆಯೊಳಗೆನ್ನಂತ್ಯಕಾಲಕೆ" ಎಂದು ಮುಂತಾಗಿ ಕೃಷ್ಣಪ್ರಭಾವವನ್ನು ಮಾನ್ಯ ಮಾಡುವುದು—ಕುಮಾರವ್ಯಾಸನ ಭಾಗವತದೃಷ್ಟಿಯ ಫಲವಾದ ಶ್ರದ್ಧೆಯಿಂದಾಗಿಯೋ ಹೊರತು ಆಯಾ ವ್ಯಕ್ತಿಗಳ ಚರ್ಯೆಗೆ ಅನುಗುಣವಾದ ವಿಶ್ವಾಸದಿಂದ ಎಂದು ಎದೆತಟ್ಟಿ ಹೇಳುವಂತಿಲ್ಲ. ವಾಸ್ತವವಾಗಿ ಧರ್ಮಭೀರುಗಳಾದ ಭೀಷ್ಮ ವಿದುರರಂತೆಯೋ ಯುಧಿಷ್ಠಿರಾದಿ ಪಾಂಡವರಂತೆಯೋ ತಮ್ಮ ಬದುಕಿನ ನಾನಾ ಘಟ್ಟಗಳಲ್ಲಿ ಕೃಷ್ಣನನ್ನು ನೆಚ್ಚಿ, ನೆನೆದು ಅವನ ಪ್ರೀತಿಗೆ ತಮ್ಮನ್ನು ಅರ್ಹರನ್ನಾಗಿ ಮಾಡಿಕೊಳ್ಳುವುದು ಅವರಿಂದ ಆಗಲಿಲ್ಲವೆಂದೇ ಹೇಳಬೇಕು. ಕೃಷ್ಣನಿಗಾದರೋ ಒಲಿದವರನ್ನು ಉಜ್ಜೀವಿಸುವ ಬಗೆ ಬಲುಹು. ದುರ್ಯೋಧನ ಕರ್ಣನನ್ನು ಎಷ್ಟರಮಟ್ಟಿಗೆ ಒಲಿದವನೆನ್ನಬೇಕು? ಅವರನ್ನು ಅವರ ಲೋಪದೋಷಗಳಿಂದ, ಅತಿರೇಕಗಳಿಂದ ಪರಿಶುದ್ಧಗೊಳಿಸಿ ಒಲಿದನೆನ್ನೋಣವೇ? ಅವರ ನಡೆನುಡಿಯ ವಿಕಾರಗಳಿಗೆಲ್ಲ ಅವನ ಕೈವಾಡವೇ ಕಾರಣವೆನ್ನೋಣವೇ? ಬಹುಶಃ ಕುಮಾರವ್ಯಾಸನ ಮನಸ್ಸಿನಲ್ಲಿ ಈ ಭಾವವೇ ಇದ್ದಿರಬೇಕು. ಮೂಲಭಾರತದಲ್ಲಿ ಅಸ್ಫುಟವಾಗಿ ಇದ್ದಿರಬಹುದಾದ ಈ ಸಂಭಾವನೆಯನ್ನು ಈತನು ಧಾರಾಳವಾಗಿ ಮಾಡಿರುವಂತೆ ತೋರುತ್ತದೆ. "ಹಳಹು

ವುವು ಹಾಹೆಗಳು ಸೂತ್ರವ। ನಲುಗಿದೊಡೆ ತತ್ಪುಣ್ಯಪಾಪಾ। ವಳಿಗಳಾ ಹಾಹೆಗಳಿಗುಂಟೇ ಸೂತ್ರಧರನಿರಲು॥ ಕೊಲುವನನ್ಯರನನ್ಯರಿಂದವೆ। ಕೊಲಿಸುವನು ಕಮಲಾಕ್ಷನಲ್ಲದೆ ಉಳಿದ ಜೀವಮಾತ್ರಕೇ ಸ್ವಾತಂತ್ರ್ಯವಿಲ್ಲ॥" ಎಂಬ ಮಾತನ್ನು ಕೃಷ್ಣನ ವಿಶ್ವರೂಪದರ್ಶನದ ಅನಂತರದಲ್ಲಿ ದುರ್ಯೋಧನನೇ ನುಡಿದಿದ್ದಾನಲ್ಲವೇ? ಈ ಭಾಗದಲ್ಲಿ ಬರುವ ಅವನ ಮಾತುಗಳು (ಉದ್ಯೋಗ ೯-೬೯—೭೫) ಇಡಿಯ ಭಾರತದ ಉದ್ದೇಶವನ್ನೇ ಸಾರುವಂತಿವೆ. ಇಲ್ಲಿ ದುರ್ಯೋಧನ ಜ್ಞಾನಿಯಾಗಿ, ಕ್ರಾಂತದರ್ಶಿಯಾಗಿ ಕಾಣುವುದು ಎಷ್ಟರಮಟ್ಟಿಗೆ ಕಾವ್ಯಸಂದರ್ಭದಲ್ಲಿ ಸಮರ್ಥನೀಯ ಎಂಬ ಪ್ರಶ್ನೆಗೆ ಅವಕಾಶವಿದ್ದೇ ಇದೆ ಈ ಬಗೆಯ ತಿಳಿವಳಿಕೆಯಿದ್ದವನು ಹಾಗೇಕೆ ನಡೆದನೆಂಬುದು ನಮಗೆ ಅರ್ಥವಾಗದು. ಇಲ್ಲಿಯೂ ದುರ್ಯೋಧನನ ಮಾತುಗಳು, ದುರ್ಯೋಧನನ ಮಾತುಗಳಲ್ಲ; ಭಾಗವತೋತ್ತಮನಾದ ಕುಮಾರವ್ಯಾಸನ ಮಾತುಗಳು ಎಂದೇ ಹೇಳಬೇಕಾಗುವುದು. ಕೃಷ್ಣಭಕ್ತಿಯ "ಭ್ರಮೆ" ವಿದುರನನ್ನು ಹೇಗೋ ಹಾಗೆ, ಕವಿಯನ್ನೂ ಕಾಡಿ ಕಂಗೆಡಿಸಿದುದರ ಫಲವಿದು!

ಭಾಷೆ ಶೈಲಿಗಳು

ಕುಮಾರವ್ಯಾಸ ಕನ್ನಡ ಭಾಷೆಯ ಬಳಕೆಯ ವಿಷಯದಲ್ಲಿ ತೋರಿಸಿರುವ ಕೌಶಲವೂ ಪ್ರೌಢಿಮೆಯೂ ಅನನ್ಯವಾದುವು. ಅವನ ಪ್ರತಿಭೆ ಅದರ ಸಾರ ಸತ್ತ್ವಗಳನ್ನು ಹೀರಿ ಹೊಮ್ಮಿಸುವಲ್ಲಿ ಕೃತಕೃತ್ಯವಾಗಿದೆ. ಅವನು ಅದರ ಜೀವನಾಡಿಯನ್ನು ಮಿಡಿದು ನೋಡುವುದರಲ್ಲಿ, ರಹಸ್ಯಗಳನ್ನು ಭೇದಿಸುವಲ್ಲಿ ಅದ್ಭುತವಾದ ಭಾಷಿಕ ಸಾಮರ್ಥ್ಯವನ್ನು ಪ್ರಕಟಿಸಿದ್ದಾನೆ. ಭಾವವಾಹಕವಾದ ಕನ್ನಡ ಮಾತಿಗೆ ಎಂತಹ ನಮ್ಯಗುಣವುಂಟೆಂಬುದನ್ನು, ಎಷ್ಟು ವಿಧದ ವಿಲಾಸ ವೈಖರಿಗಳು ಸಾಧ್ಯವೆಂಬುದನ್ನು, ಏನು ನಾದಗಳೂ ಧ್ವನಿಗಳೂ ಹೊಮ್ಮಬಹುದೆಂಬುದನ್ನು, ಯಾವ ಫಲ ಪ್ರಯೋಜನಗಳು ಲಭ್ಯವೆಂಬುದನ್ನು ತಿಳಿಯಬೇಕಾದರೆ ಅವಶ್ಯವಾಗಿ ಕುಮಾರವ್ಯಾಸ ಭಾರತವನ್ನು ನೋಡಬೇಕಾಗುತ್ತದೆ. ಆಡುಮಾತಿನ ಭಂಗಿ ಭಣಿತಗಳಿಂದ ತೊಡಗಿ ಪಂಡಿತಮಂಡಲಿಯ ಚತುರೋಕ್ತಿವಿನ್ಯಾಸಗಳ ವರೆಗೆ ಅದರ ವಿಶ್ವರೂಪದರ್ಶನವನ್ನು ಇಲ್ಲಿ ಮಾಡಬಹುದು. ಆ ಕಾರಣದಿಂದಲೇ ಕಥೆ ಕಣ್ಣೆದುರು ಕಟ್ಟಿ ನಿಲ್ಲುತ್ತದೆ; ವರ್ಣನೆಗಳು ವ್ಯಾಮನಗಳನ್ನು ಮರಸುತ್ತವೆ; ಪಾತ್ರಗಳು ಸಜೀವವಾಗಿ ಸಶಕ್ತವಾಗಿ ಅಭಿನಯಿಸುತ್ತವೆ. ಸಂದರ್ಭ ಸನ್ನಿವೇಶಗಳಿಗೆ ತಕ್ಕಂತೆ ಭಾಷೆ ಬಣ್ಣಗೂಡುತ್ತದೆ; ಶೈಲಿ ಕಥನಪರ, ವರ್ಣನಶೀಲ, ನಾಟಕೀಯ ಹಾಗೂ ಸಂಬೋಧನಾತ್ಮಕ ಆಗುತ್ತದೆ. ಎಂದರೆ ಕಥೆ, ವರ್ಣನೆ ಹಾಗೂ ಪಾತ್ರಗಳ ಅಗತ್ಯಕ್ಕೆ ಅನುಗುಣವಾಗಿ ಭಾಷೆ ಸ್ಪಂದಿಸುತ್ತದೆ.

ಕುಮಾರವ್ಯಾಸ ಭಾರತ ದೇಶ್ಯ ಮತ್ತು ತದ್ಭವಗಳು ತುಂಬಿ ಸೂಸುವ ನಡುಗನ್ನಡದಲ್ಲಿ ರಚಿತವಾಗಿದೆ. ಕಠಿನವಾದ ಹಾಗೂ ಒತ್ತಕ್ಷರಗಳಿಂದ ದಟ್ಟೈಸಿದ

ಪ್ರೌಢ ಸಂಸ್ಕೃತಶಬ್ದಗಳ ಗೊಡವೆಗೆ ಅಷ್ಟಾಗಿ ಹೋಗದೆ, ಅಂತಹ ಶಬ್ದಗಳ ದೊಡ್ಡ ದೊಡ್ಡ ಸಮಾಸಪದಗಳನ್ನು ಸಾಮಾನ್ಯವಾಗಿ ಹೆಣೆಯದೆ, ದೇಶ್ಯ ಮತ್ತು ತದ್ಭವ ಶಬ್ದಗಳಿಗೆ ಕವಿ ಕೊಟ್ಟಿರುವ ಪ್ರಾಶಸ್ತ್ಯ ಅತಿಶಯವಾದುದು. ಇದರಲ್ಲಿ ಹಿಂದಿನಿಂದ ಬಳಕೆಯಾಗಿ ಬಂದವು ಇವೆ; ತನ್ನ ಕಾಲದಲ್ಲಿ ನುಡಿಯುತ್ತಿದ್ದವು ಇವೆ; ಹೊಸದಾಗಿ ರೂಪಿಸಿಕೊಂಡವು ಇವೆ. ಬಿಡಿಮಾತುಗಳಿವೆ; ಸಮಾಸ ಶಬ್ದಗಳಿವೆ. ಒಂದೆರಡು ಅಕ್ಷರಗಳ ಬಿಡಿಮಾತುಗಳುಂಟು; ಎರಡು ಮೂರು ಶಬ್ದಗಳು ಬೆಸೆದ ಸಮಾಸಗಳುಂಟು. ಇಲ್ಲಿ ತದ್ಧಿತನಾಮಗಳೂ ಸಮಾಸಗಳೂ ಆಶ್ಚರ್ಯಕರವಾಗಿ ಹೆಣೆದು ನಿಲ್ಲುವುದನ್ನು ಕಾಣುವುದೇ ಒಂದು ಸ್ವಾರಸ್ಯ. ಹಾಗೆಯೇ ಸಲಕ್ಷಣ ರೂಪಗಳಿವೆ; ವಿಲಕ್ಷಣ ರೂಪಗಳಿವೆ.

“ಸಾಧಾರಣ ಪದ, ಗಂಭೀರ ಪದ, ಅಚ್ಚಗನ್ನಡ, ಗಹನ ಸಂಸ್ಕೃತ, ತಲೆ ಕೆದರಿಕೊಂಡಿರುವ ಒರಟುನುಡಿ, ಸಿಸ್ತಾಗಿ ಶೃಂಗರಿಸಿಕೊಂಡಿರುವ ನಾಜೋಕು ಪದ, ಭಾವವನ್ನು ಮುಚ್ಚುಮರೆಯಿಲ್ಲದೆ ಸ್ಪಷ್ಟಪಡಿಸುವ ಸರಳ ಗ್ರಾಮ್ಯ, ಭಾವವನ್ನು ಒಳಗೆ ಹುದುಗಿಸಿಕೊಂಡಿರುವ ನಾಗರಿಕ ವಚನ, ನಿರ್ಮಲವಾದ ತಿಳಿಬಣ್ಣದ ಉಕ್ತಿ, ರಂಗುರಂಗಿನ ಥಳಥಳಿಸುವ ಮಾತು, ಜೊಬ್ಬೆಗೈದು ಅಬ್ಬರಿಸುವ ಪರಾಕ್ರಮವಾಕ್ಕು, ಮೆಲ್ಲಗೆ ಉಸುರುವ ಮೃದುವಾದ ನುಡಿಬಳ್ಳಿಯಂತೆ ಅಲುಕಿ ಬಳುಕುವ ಕೋಮಲವಾಣಿ, ಅರಳಿಯ ಮರದಿಂದ ನೀಳವಾದ ಉನ್ನತ ವಚನ—ಹೀಗೆ ಭಾಷಾಪ್ರಪಂಚದ ಅನೇಕ ವರ್ಣದ ಅನೇಕ ಕಸಬಿನ ಅನೇಕ ವಯಸ್ಸಿನ ಸಾಮಾಜಿಕರು ನಮ್ಮ ಮುಂದೆ ಮೆರೆವಣಿಗೆ ನಡೆಯುವುದರಿಂದ ನಾವು ಮುಗ್ಧರಾಗುತ್ತೇವೆ” (“ಕುಮಾರವ್ಯಾಸ ಪ್ರಶಸ್ತಿ”, ಪು. ೩೪೨).

ಕೃತಿಯಲ್ಲಿ ಪ್ರಾಶಸ್ತ್ಯ ದೇಶ್ಯ ಮತ್ತು ತದ್ಭವಗಳಿಗೆ ಎಂದರೂ, ಶಬ್ದಕೋಶ ವ್ಯಾಕರಣಗಳ ದೃಷ್ಟಿಯಿಂದ ಇಲ್ಲ ದೇಶ್ಯ–ಅನ್ಯದೇಶ್ಯ, ಸಂಸ್ಕೃತ–ಪ್ರಾಕೃತ, ತತ್ಸಮ–ತದ್ಭವ, ಗ್ರಾಮ್ಯ–ಶಿಷ್ಟ ಎಂಬ ಭೇದಭಾವವಿಲ್ಲದ ಅದೊಂದು ಬಗೆಯ ಕದಂಬ ಕಾಂತಿಯನ್ನು ಸೂಸುತ್ತ, ವಿಚಿತ್ರ ವೈಖರಿಯನ್ನು ಮೆರೆಯುತ್ತ ‘ಸಮಗ್ರಭಾಷೆ’ಯ ಪ್ರಯೋಗ ಇಲ್ಲಿ ಕಂಡುಬರುತ್ತದೆ. ಕವಿಯ ಜೀವಿತಕಾಲದಲ್ಲಿ ಸ್ವಲ್ಪಮಟ್ಟಿಗೆ ಮರಾಠಿ ಪ್ರಭಾವವನ್ನು ಒಳಕೊಂಡು ಧಾರವಾಡ ಪ್ರಾಂತದಲ್ಲಿ ಪ್ರಚಲಿತವಿದ್ದ ಕನ್ನಡ ಮಾತು ಮಾತ್ರವೇ ಕೃತಿಯ ಮೂಲಸಿಧಿ ಎನ್ನುವಂತಿಲ್ಲ. ಅದನ್ನೂ ಒಳಕೊಂಡು ಕವಿ ಬಹುಗುಣವಾಗಿ ಆರ್ಜಿಸಿದ, ಆವಿಷ್ಕರಿಸಿದ ಭಾಷೆಯ ಸಂಪತ್ತು ಇಲ್ಲಿಯದು. ಕಾವ್ಯಭಾಷೆಯಾಗಿ ಇಲ್ಲಿ ಕಾಣದೊರೆಯುವ ಭಾಷೆಯ ಅಲಂಕಾರ ಚಮತ್ಕಾರಗಳು ಹಳೆಯ ಮುತ್ತೈದೆಯ ಹೊರೆಯ ಸಿಂಗಾರದಂತಲ್ಲ; ಹಿತಮಿತವಾಗಿ ಕೃತಿಯ ಸತ್ತ್ವವೆಂಬ ಸಹಜ ರೂಪೈಶ್ವರ್ಯವನ್ನು ಬೆಳಗತಕ್ಕವು. ದೇಸಿ ಪ್ರಚುರತೆ, ಧಾರಾನಾಹಿತ್ವ ಹಾಗೂ ಪರಿಣಾಮಶಕ್ತಿ ಮುಪ್ಪುರಿಗೊಂಡಿರುವ ಈ ಕೃತಿಯಲ್ಲಿ ಅಚ್ಚಗನ್ನಡದ ಕೆಚ್ಚು ಹುಚ್ಚುಗಳು ತಾನೆತಾನಾಗಿ ತುಂಬಿಕೊಂಡಿವೆ. ಅವನ್ನು ಸಮರ್ಥಿಸುವ ಹಾಗೆ ಗಾದೆ ಸಾಮತಿಗಳು, ನುಡಿಗಟ್ಟುಗಳು, ಉದ್ಗಾರಗಳು, ಪರಾಕುಗಳು,

ಬೈಗುಳಗಳು, ಇನ್ನೂ ಬೇರಾದ ನುಡಿಕಾರಗಳು ಎರಚಾಡಿರುವ ಜಾಣ್ ಸೂಸಿ, ಸಾಹಿತ್ಯದ ಸುಗ್ಗಿ ಸಬ್ಬವೇ ಆಗಿದೆ. ವಿಶಿಷ್ಟ ರಚನೆಯು ಪದವಿನ್ಯಾಸಗಳು ಕನ್ನಡ ನುಡಿಯ ಬೆಡಗನ್ನು ಹಿಂದಿಲ್ಲ, ಮುಂದಿಲ್ಲವೆಂಬಂತೆ ಮೆರಸಿ, ಕನ್ನಡದ ನುಡಿಗಡಣದ ಕೋಶ ಹಿಗ್ಗಿದೆ. ಹೂವು ಹೊಳೆ ಪರ್ವತ ಸಮುದ್ರ ಮಿಂಚು ಗುಡುಗು ಎಳೆಯ ಮಗುವಿನ ಅಳು ರಾಕ್ಷಸನ ಬೊಬ್ಬೆ ಹೀಗೆ ಎಲ್ಲ ಬಗೆಯ ವಿವಿಧತೆಗಳ ಭಾವಪ್ರಪಂಚ ನಾದಪ್ರಪಂಚಗಳಿಗೂ ಇಲ್ಲಿ ಮಾತುಗಳಿವೆ, ಮಿಡಿತಗಳಿವೆ.

೧. ಕೆಲವು ವಿಶಿಷ್ಟ ಶಬ್ದಗಳು: "ಅಲಗಣಸು" (ಆದಿ ೫-೬), "ಮೇಗಾಳಿ" (ಆದಿ ೧೦-೧೦), "ದಸಣ" (ಆದಿ ೧೦-೧೪, ಅರಣ್ಯ ೨೨-೩೦, ಗದಾ ೧೧-೩೪), "ಬಲ್ಲಾಳದಡ್ಡಿ" (ಆದಿ ೧೨-೧೧), "ನವಾಯಿ" (ಆದಿ ೧೨-೧೮), "ತವಲಾಯಿ" (ಆದಿ ೧೨-೧೬, ಸಭಾ ೫-೪೫, ಕರ್ಣ ೮-೩೩), "ಹೂಡೆ" (ಅರಣ್ಯ ೬-೧೦), "ಪಾಯಖಾನೆಯ" (ಅರಣ್ಯ ೭-೯೬), "ಬಾಸ್ಕಳಗೆಡೆ" (ವಿರಾಟ ೬-೨೪), "ವಡ್ಡಂತಿ" (ವಿರಾಟ ೭-೧೩), "ಒಪ್ಪಲಿಗೆ" (ದ್ರೋಣ ೨-೫೩), "ಪವಿಸಣ" (ದ್ರೋಣ ೧೦-೫೩), "ಜತ್ತರಟ್ಟೆ" (ಕರ್ಣ ೨-೧೧), "ಚೀಲಾಯ" (ಕರ್ಣ ೨೫-೩೧), "ಜೋಳವಾಳಿ" (ಕರ್ಣ ೨೭-೯).

೨. ಕೆಲವು ವಿಶಿಷ್ಟ ನಾಮರೂಪಗಳು: -ಗಾರ: "ಮುಚ್ಚಿಯಿಚ್ಚಿಗಾರ" (ವಿರಾಟ ೪-೭); -ತನ: "ತಿಖಂಡಿತನ" (ಅರಣ್ಯ ೮-೫೨), "ರಾಘವತನ" (ಅರಣ್ಯ ೨೨-೨೪), "ಬಿಲಿಯುಕಾಱತನ" (ದ್ರೋಣ ೫-೨೮), "ಬಾಲತನ" (ದ್ರೋಣ ೫-೩೧); -ದಲೆ: "ಮುರಳುದಲೆ" (ದ್ರೋಣ ೧೪-೪೬), "ಎಡಹುದಲೆ" (ಗದಾ ೩-೯); -ಪಣ: "ಸಾಮರ್ಥ್ಯಪಣ" (ಸಭಾ ೧೨-೨೯), "ಜಾಣಪಣ" (ವಿರಾಟ ೭-೪೫), "ವೀರಪಣ" (ಗದಾ ೫-೩೩), "ಚಟುಳಪಣ" (ಗದಾ ೯-೧), "ಶೌರ್ಯಪಣ" (ಗದಾ ೧೦-೧೭); -ಮಯ: "ಕಡಿಯಮಯ", "ಹೆಣಮಯ" (ಭೀಷ್ಮ ೯-೧೧), "ಕೈಮಗಳಮಯ" (ಗದಾ ೨-೧೭); -ತನಿಹ, ತನಿಹತನ: "ಹೆಣದಿನಿಹ" (ಗದಾ ೩-೧೦), "ನೆತ್ತರುಗುಡುಹಿತನ" (ಕರ್ಣ ೨೦-೪).

೩. ಸಂಸ್ಕೃತೋಕ್ತಿಗಳ ಕನ್ನಡರೂಪ: "ನೂಱುಮಡುಗೆಡಹಿ" (ಅರಣ್ಯ ೭-೮೪), "ಮುಖಮಯ್ಯ" (ಅರಣ್ಯ ೮-೨೭), "ಪನ್ನಗನ ಹಿರಿಮಂಚದಾತ" (ಉದ್ಯೋಗ ೨-೪೮), "ಕಮಲಗಣ್ಣನ ದೇವ" (ಉದ್ಯೋಗ ೮-೬೩), "ಹಾವು ಹಳವಿಗೆಯಾದ ರಾಯ (ಉದ್ಯೋಗ ೮-೪೬), "ಕೊಡನ ಮಗ (ದ್ರೋಣ ೪-೩೮), "ಗರುಡಿಯೊಡೆಯ" (ದ್ರೋಣ ೮-೫೬), "ಹರಹಿಡಿಮಂಬು" (ದ್ರೋಣ ೧೪-೩೭), "ಕೋಲಗುರು" (ದ್ರೋಣ ೧೮-೪೭), "ನದಿಯ ಮಗ" (ಕರ್ಣ ೨೫-೪೦), "ಬಂಡಿಯ ಬೋವ" (ಕರ್ಣ ೨೬-೧೫).

೪. ಮಣಿಪ್ರವಾಳ ಪದ್ಯ ರಚನೆ: "ನರನ್ನಪಾಲ ತ್ರಾಹಿ....ಕರುಣಿಸು" (ವಿರಾಟ ೧೦-೧೭), "ನೀವು ಮನು ಪ್ರಾಣಾಹಿ ರಯಂಬಿರಿ" (ಉದ್ಯೋಗ ೯-೧೭).

"ಶಾಪಾದಪಿ ಶರಾದಪಿಯೆಂಬ" (ದ್ರೋಣ ೧೮ ಸೂ), "ಕಿಂ ಗಹನವೀ ರಣವು" (ಶಲ್ಯ ೩-೭೯).

೫. ಛಂದಸ್ಸಿನ ಸೌಕರ್ಯಕ್ಕೆ ವಿರೂಪಗೊಂಡ ರೂಪಗಳು : "ವೀರನಾರಯಣ" (ಆದಿ ೧-೧), "ಸೋಪನ" (ಉದ್ಯೋಗ ೩-೯), "ದುರಿಯೋಧನ" (ಉದ್ಯೋಗ ೧೦-೩೪), "ಪ್ರಾಮಾಣಿಕರು" (ಉದ್ಯೋಗ ೪-೧೦೦), "ಕೋಟ್ಯಾನುಕೋಟಿ" (ದ್ರೋಣ ೫-೧), "ದುರಾಭಿಮಾನ/ದುರಾಭಿಘಾತ (ದ್ರೋಣ ೮-೫೮), "ಅತಿ-ಸಾಹಸಿ" (ಕರ್ಣ ೧೯-೩೧) ಇ.

೬. ಸರಣಿಯ ಷಷ್ಠ್ಯಂತ ಪದಗಳಿಂದ ಸಮಾಸಗಳನ್ನು ರಚಿಸುವುದು: "ಅಸಿಯ ನಡುವಿನ ಸಿಮ್ನ ನಾಭಿಯ। ಮಸುಳ ಬಾಸೆಯ .... ಬಿಸಜಗಂಧಿಯ ರೂಪನಭಿವರ್ಣಿಸುವಡರಿದೆಂದ" (ಆದಿ ೧೩-೧೩). ಇಲ್ಲಿ 'ಬಿಸಜಗಂಧಿ' ಎಂಬ ವಿಶೇಷ್ಯಪದಕ್ಕೆ 'ಅಸಿಯ ನಡುವಿನ' ಇ ಷಷ್ಠ್ಯಂತಗಳು ವಿಶೇಷಣಗಳಾಗಿ ಬಂದಿವೆ (ಇಂತಹ ರಚನೆಯ ಒಂದು ಪದಶ್ರೇಣಿಗೆ ನೋ. ಆದಿ ೧೩-೩೦ ಊ ೩೫). ಇತರ ತ್ರವೂ ಇಂತಹ ರಚನೆಯುಂಟು (ದ್ರೋಣ ೧೬-೨೧, ೩೭ ಇ.). ಹೀಗೆಯೇ "ಸಕಲ ಲೋಕದ ಬೀದಿ ವಿಸಟಂಬರಿ" (ಭೀಷ್ಮ ೩-೬೪), "ಮುಚಿಗೊರಳು-ಗೊಯ್ಯು" (ದ್ರೋಣ ೭-೧೭), "ಮನದಿಂ ಮುಂದು ಹೆಜ್ಜೆಯ ತವಕಿಗರು" (ಕರ್ಣ ೮-೩೧), "ಕ್ಷತ್ರಶೌರ್ಯದ ಹಾನಿ ಹರಿಬ" (ಕರ್ಣ ೧೭-೩೪) ಎಂಬಂತಹವೂ ಕುತೂಹಲಕರ ಸಮಾಸವೈಖರಿಗಳೇ.

೭. ಪುಂ. ಸ್ತ್ರೀ ಬಹುವಚನ, ಕರ್ತೃವಿಗೆ ನಪುಂ. ಏಕವಚನದ ಕ್ರಿಯೆಯನ್ನು ಯೋಜಿಸುವುದು: "ಗಿಳಿಯ ಮೆಲುನುಡಿಯ ವಿನೋದದಿ। ಕೆಲರು ...ಣಾಧ್ವನಿಯ ರಹಿಯಲಿ। ಕೆಲರು .... ಚೆಲುವಿನ ಚದುರೆಯರು ಕಂಗೊಳಿಸಿತಬ-...ಯ ಮಣಿಯ ಮಂಚದ ಸುತ್ತುವಳಿಯುದಲಿ ॥" (ಸಭಾ ೧೪-೪೭). "ಬಿರುದ ...ಂಜಿಸಿತು" (ದ್ರೋಣ ೮-೧೧), "ಸಂದಣಿಸಿತತಿರಥರು" (ಕರ್ಣ ೧೧-೩೨), ಕೂಡೆ ಮಕ್ಕಳಸಿಕ್ಕೆ ತಂದೆಗ। ಕೋಡುತಿದೆ .... ಜಾಱುತಿದೆ ಅಣ್ಣಂದಿರಾದವರು" ಕರ್ಣ ೨೪-೧೮), "ಅಸಿಬರಳಿದುದು" (ಗದಾ ೨-೨೦).

೮. ಸಮುಚ್ಚಯಗಳಿಂದ ಪದ್ಯದ ಆಶಯವನ್ನು ಮನ್ನಡಸುವುದು: "....ಂದು ದುರ್ಯೋಧನಗೆ ನಾನಾ। ಛಂದದಲಿ ಬೋಧಿಸಿ" (ಆದಿ ೮-೫೪); "....ನೆ ಕಳಿಂಗಾದಿಗಳು ತಂತ। ವ್ಯಾಸುಮತನ ಹೇಳಿದರು" (ಆದಿ ೮-೫೬); "....ನಲು ಭುಗಿಲೆಂದಳು" (ವಿರಾಟ ೩-೩)

೯. ಯಮಳ ಮತ್ತು ಪ್ರತಿಧ್ವನಿ ಶಬ್ದಗಳು: "ಮುಯಿ ಮುಟ್ಟು" (ಆದಿ ...೨-೧೮), "ನುಗ್ಗು ನುಸಿ" (ಆದಿ ೧೧-೩೮), "ಗುಡಿ ಗೂಡಾರ" (ಆದಿ ೧೨-೬), ...ಮರಗ", "ಹೇಳಮೇಳ" (ಅರಣ್ಯ ೬-೭೫), "ಮೃಗಗಗ" (ಅರಣ್ಯ ೧೦-೧೧), ...ದುಕಸರಿಕೆ" (ವಿರಾಟ ೩-೫೮), "ನೀತಿಗೀತಿ" (ವಿರಾಟ ೩-೭೧), "ತಾರು

ತಟ್ಟು" (ವಿರಾಟ ೧೧-೨೪), "ಸುರರು ಗಿರರು" (ಉದ್ಯೋಗ ೨-೨), "ಉಬ್ಬು ಗೊಬ್ಬು" (ಭೀಷ್ಮ ೧-೩೭), "ವಾಣಿಕೇಣಿ" (ಭೀಷ್ಮ ೮-೧೫), "ಓರೆಪೋರೆ" (ಗದಾ ೬-೧೩).

೧೦. ನುಡಿಗಟ್ಟುಗಳು : "ಕಾಲುಮೆಟ್ಟು" (ಆದಿ ೮-೧), "ಗಡ್ಡದು-ಪಾಧ್ಯ" (ಆದಿ ೧೫-೨೦), "ಮಟ್ಟೆಯ ಮದನ" (ಆದಿ ೧೫-೨೧), "ಈರೆಲೆಯಾಗು" (ಅರಣ್ಯ ೮-೩೬), "ಜೀಣಮುಸುಡು" (ವಿರಾಟ ೨-೪೦), "ಉಂಡಾಡಿ ಭಟ್ಟ" (ಉದ್ಯೋಗ ೧-೩೯), "ಕಡ್ಡಿಗೆ ಬಗೆ" (ದ್ರೋಣ ೫-೭೮), "ಮುರಿದ ಕಡ್ಡಿ" (ದ್ರೋಣ ೬-೩೩), "ಜಗಭಂಡ" (ದ್ರೋಣ ೧೦-೪೩), "ಪಲಾಯನ ಸೂಜಿಕಾಜಿ" (ದ್ರೋಣ ೧೭-೨೮), "ಸರ್ಪರಜ್ಜುಭಯ" (ದ್ರೋಣ ೧೭-೪೪), "ಬಡಿಹೋರಿ" (ಕರ್ಣ ೨-೧೮), "ಭರತಭಾಷೆ" (ಕರ್ಣ ೨೪-೫೨), "ಭಯಜ್ವರ" (ಗದಾ ೫-೨೭).

೧೧. ಗಾದೆ ಮಾತುಗಳು : "ಹಾವು ಹಲಬರ ನಡುವೆ ಸಾಯದು" (ಸಭಾ ೧೫-೨೮), "ಹೋದ ಮಾರಿಯು ಕರೆದು ಮನೆಯೊಳಗಾದರಿಸಿದರುಂಟೆ" (ಅರಣ್ಯ ೨೦-೩೨), "ಬಡವರ ಕೋಪ ವೌಡಿಗೆ ಮೃತ್ಯು" (ವಿರಾಟ ೨-೨೯), "ಕೆಲಬರು ಗಳಿಸಿದೊಡೆ ಕೆಲರುಂಡು ಜಾರುವರು" (ವಿರಾಟ ೩-೪೫), "ಮುಳಿದು ಬಗುಳುವ ನಾಯ್ಗೆ ಚಂದ್ರಮನಳುಕುವನೆ" (ಉದ್ಯೋಗ ೯-೫೧), "ಹುಲು ಸರವಿ ಹಾವ ಹುದು ಹುತ್ತಿನ। ತಲೆಯಲಿರಜ್ಞರಿಗೆ" (ಉದ್ಯೋಗ ೧೦-೨೪), "ಕೋಡಗದ ಮೊಗಸಿರಿಗೆ ಕಾವಲಿಯೋಡು ಕನ್ನಡಿಯಾಯ್ತು" (ಕರ್ಣ ೯-೧೫), "ಅಗಡು ಮಕ್ಕಳ ತಾಯ್ಗೆ ತಪ್ಪದು ಬೆಗಡು ಬೇಗೆ" (ಗದಾ ೧೧-೪೭).

೧೨. ಬೈಗುಳು ಮತ್ತು ಅಂತಹ ಮಾತುಗಳು : "ಎನ್ನ ಮಕ್ಕಳು। ಕೊಂದು ಹಿಂಡೆಯ ಕೂಳನುಂಬರೆ ಹೇಸುವವರಲ್ಲ" (ಆದಿ ೮-೭೩), "ನಿಮ್ಮಯ ಹೆಂಡಿರನು ಬಳುವಳಿಯ ಕೊಡಿ ಹಾರುವನ ಹೆಂಡತಿಗೆ" (ಆದಿ ೧೫-೪೦), "ನೆರೆ ಘಟಾಗ್ನಿಯೊಳುರುಹದಿದ್ದರೆ। ಕೆರಹು ನಿಮ್ಮಯ ಬಾಯಲಿ" (ಸಭಾ ೧೦-೫೨), "ಹುಟ್ಟಿದೆಯೊ ಹಾಪರಕೆ ಕ್ಷತ್ರಿಯಬೀಜವೋ ನೀನು" (ವಿರಾಟ ೬-೧೭), "ವೈರಿ-ಭಟರಿಗೆ ಹೆಂಡಿರಾಗಲು ಹೋಗಿರೈ" (ದ್ರೋಣ ೬-೨೩), "ಏತಕೇ ಸೂಳೆಯರು ಕ್ಷತ್ರಿಯ ಜಾತಿಯಲಿ ಜನಿಸಿದರು" (ಕರ್ಣ ೧೫-೩೭), "ಜಯಲಕ್ಷ್ಮಿ ಬೊಡ್ಡಿಯ ಕೊಬ್ಬ ನಿಲಿಸುವೆನು" (ಕರ್ಣ ೨೩-೨೬), "ಬಕನ ಧರ್ಮಸ್ಥಿತಿಯವೊಲು ದೇವಕಿಯ ಮಗ ಕಾದಿಹನಲೇ" (ಗದಾ ೮-೬೦).

೧೩. ವಿರಳವಾಗಿ ವಿಸ್ತೃತ ಸಂಸ್ಕೃತ ಸಮಾಸಗಳ ರಚನೆ : "ಮಧ್ಯಕಟಿ ಜಾನ್ವಂಘ್ರಿಮಿತ" (ಆದಿ ೫-೧೨), "ಮಹಾಸನ್ನಾಹಚಾಪಸಸ್ಫುರಿತತೂಣೀಬದ್ಧ ಕಂಪಿತಖಡ್ಗಪಾಣಿಗಳು" (ಆದಿ ೭-೬೫), "ಉದ್ಧಾಮಮುನಿಜನರಚಿತಮಂತ್ರ-ಸ್ತೋಮಪುಷ್ಪಲಪೂತಪೂರ್ಣಜಲಾಭಿಷೇಚನ" (ಸಭಾ ೧೪-೬೬), "ಹಸ್ತಕಲಿತ ಸುದರುಶನೋರ್ಧ್ವಗ। ಭಸ್ತ್ರಿಲವಶವಿಂತಾರ್ಕಪರಿವೃಢವಿಸ್ತರಣ" (ವಿರಾಟ

೧೦–೩೪), "ಸ್ಫುರದಮಂದೋದ್ಭಿನ್ನ ಭಾಸ್ವ। ತ್ಕಿರಣಗರ್ಭಕಳಾಪಭದ್ರಾ। ಕರಣ ಕಳಿತಧ್ವಾಂತ ಬಿಂಬ ಕಳಂಬಸಂತತಿ" (ಕರ್ಣ ೨೩–೨), "ಚಟುಳ ಹಯಖುರ ಖಂಡಿತೋರ್ವೀನಿಟಿಲನಿರ್ಗತಬಹಳಧೂಳೀಪಟಲಧೂಸರಸಕಲಜಗದಸುರಾಂ" (ಭೀಷ್ಮ ೩–೩).

೧೪. ಅರಿಸಮಾಸಗಳೆಂಬಂತಹ ಶಬ್ದಸಮುಚ್ಚಯಗಳು : "ಹೊಂಗೆಲಸಮಯ ಕವಚ" (ವಿರಾಟ ೫–೪೪), "ಕಡುಮಾನ್ಯ" (ಉದ್ಯೋಗ ೨–೨೬), "ಶರವಳೆ" (ಉದ್ಯೋಗ ೩–೧೦೨), "ನಯನುಡಿ" (ಉದ್ಯೋಗ ೯–೭), "ಪಯಚಕ್ರಗತಿ" (ಭೀಷ್ಮ ೪–೨೫), "ಬಿಲುವಿದ್ಯಾಚಮತ್ಕೃತಿ" (ದ್ರೋಣ ೯–೯), "ಹುಲಿಮುಖ" (ಕರ್ಣ ೭–೩೧), "ರಣದವಕಿಗ" (ಕರ್ಣ ೧೯–೩೪).

೧೫. ಪ್ರಾಕೃತಿಕ ಸಾಂಸ್ಕೃತಿಕ ಪ್ರಾಮುಖ್ಯದ ಕೆಲವು ಶಬ್ದಗಳು : "ಶುಕ ಮರಾಳ ಮಯೂರ ಟಿಟ್ಟಿಭ .... " ಮುಂತಾಗಿ ೩೪ ಹಕ್ಕಿಗಳ ಹೆಸರುಗಳನ್ನು ಹೇಳಿದೆ (ಆದಿ ೨೦–೫೨, ೫೩) ; "ಆಳಿನೇಱಿಕೆ ಹಿಡಿಗವಡೆ ಗುಱಿಯಾಳು ಚೆಂಡಿನ ಹೊಣಕೆ .... " ಎಂಬುದಾಗಿ ಕೌರವ ಪಾಂಡವರು ಆಡಿದ ಸುಮಾರು ೧೪ ಮಕ್ಕಳಾಟಗಳನ್ನು ಹೇಳಿದೆ (ಆದಿ ೬–೧, ೨).

ಅಲಂಕಾರ ಶಾಸ್ತ್ರದ ಪರಿಭಾಷೆಯಲ್ಲಿ ಪರಿಶೀಲಿಸಿದಾಗ, ಕುಮಾರವ್ಯಾಸ ಭಾರತದಲ್ಲಿ ಉಪಮೆ, ರೂಪಕ, ದೃಷ್ಟಾಂತ, ಉತ್ಪ್ರೇಕ್ಷೆ, ಅತಿಶಯೋಕ್ತಿ, ಅಪ್ರಸ್ತುತ ಪ್ರಶಂಸೆ, ಪರ್ಯಾಯೋಕ್ತಿ, ಸಂಶಯ, ಸ್ವಭಾವೋಕ್ತಿ—ಮೊದಲಾದ ಅಲಂಕಾರ ಪ್ರಭೇದಗಳಿಗೆ ಲಕ್ಷ್ಯಗಳು ಕಂಡುಬರುತ್ತವೆಯೆಂದು ತಿಳಿಯಲಾಗಿದೆ. ಈಗ ಗುರುತಿಸಿರುವುದಲ್ಲದೆ ಇನ್ನೂ ಹಲವಾರು ಪ್ರಭೇದಗಳನ್ನು ಗುರುತಿಸಬಹುದಾಗಿದೆ. ಇವುಗಳಲ್ಲಿ ಉಪಮೆ ರೂಪಕಗಳೂ ಉತ್ಪ್ರೇಕ್ಷೆ ದೃಷ್ಟಾಂತಗಳೂ ವಿಶೇಷವಾಗಿ ಕಂಡುಬರುವಂತೆ ತೋರುತ್ತದೆ. ಅದರಲ್ಲಿಯೂ ರೂಪಕಗಳಿಗೆ ಅತಿಶಯಪ್ರಾಶಸ್ತ್ಯ. ಅದರಿಂದಾಗಿ, ಈ ಕವಿಯನ್ನು "ರೂಪಕಸಾಮ್ರಾಜ್ಯದ ಚಕ್ರವರ್ತಿ" ಎಂದು ಸಹಜವಾಗಿಯೇ ಕರೆಯಲಾಗಿದೆ.

ಕುಮಾರವ್ಯಾಸ ಭಾರತದಲ್ಲಿ ಕಥೆ ಸಾಗುವುದಾಗಲಿ, ವರ್ಣನೆ ವಿಸ್ತರಗೊಳ್ಳುವುದಾಗಲಿ, ಪಾತ್ರಗಳ ಮಾತು ವರ್ತನೆಗಳಾಗಲಿ ರೂಪಕಗಳ ಮೂಲಕವೇ ನಡೆಯುವುವು. ಅಭೇದ ಮತ್ತು ತಾದ್ರೂಪ್ಯ, ಮಾಲಾ ಮತ್ತು ಪರಂಪರಿತ—ಹೀಗೆ ರೂಪಕ ಪ್ರಭೇದಗಳೆಲ್ಲಕ್ಕೂ ಇಲ್ಲಿ ಸ್ಥಾನವಿದೆ. ಕವಿ ತಾನು ಹೇಳಬೇಕಾದುದನ್ನೆಲ್ಲ ರೂಪಕಗಳ ಮೂಲಕವೇ ಕಾಣುತ್ತ, ಕಂಡರಿಸುತ್ತ ಹೋಗುವ ಅನನ್ಯ ಪ್ರತಿಭಾಶಾಲಿಯಾಗಿದ್ದಾನೆ. ಅದು ಅವನ ಕಾವ್ಯಾಭಿವ್ಯಕ್ತಿಯ ಯುಕ್ತಿ, ಜೀವಶಕ್ತಿ.

"ಪ್ರಜ್ಞಾಸಾಗರಂಗಳು ಮಥ್ಯಕಟಿಜಾನ್ವಂಘ್ರಿ ಮಿತವಾಯ್ತು" (ಆದಿ ೫–೧೨), "ಸುಮತಿಸ್ಖಲಿತ ಕೆಂದೂಳಿಯಲಿ ಮಾಸಿದ ಮನದ ಮಡಿವರ್ಗ (ಆದಿ

೧೩–೪೬), "ಮುನಿಯ ಮಾತಿನ ಬಲೆಗೆ ಸಿಲುಕಿತು । ಜನಪತಿಯ ಚೈತನ್ಯಮೃಗ" (ಸಭಾ ೧–೯೩), "ಪರಿಣತರ ನುಡಿಗಳನು ಕಿವಿಯೋ । ಕರಿಸಿದವು ದುಱುದುಂಬಿಗಳ ಬಾ । ಹಿರರ ನುಡಿಗಳನಡಿಗಡಿಗೆ ಕುಡಿದು ತೇಗಿದವು" (ಸಭಾ ೧೦–೩), "ಕುರುರಾಜ ವಂಶಚ್ಛೇದ ಧೀರಕುಠಾರ" (ಅರಣ್ಯ ೪–೪), "ಹಾಲಾಹಲವ ನೊಣನೆಂಜಲಿಸುವುದೆ ?" (ಅರಣ್ಯ ೬–೧೧), ಯಮಸುತಂಗೞುಹುವೆನೆ ಧರ್ಮ । ಕ್ಷಮೆಯು ಗರ ಹೊಡೆದಿಹುದು" (ವಿರಾಟ ೩–೩೩), "ನಾಯ್ಗಳ । ವೀಸ ಬಡ್ಡಿಯಲಸುವ ಕೊಂಬೆನು" (ವಿರಾಟ ೩–೭೦), ತರುಣಿಯರು ಪರಿಮಳದ ಜಂಗಮಾಭರಣಿಯರು (ಉದ್ಯೋಗ ೨–೨೫), "ಧರಣಿ ನುಂಗುವಳಿಬ್ಬರನು ಸಂ । ಗರವ ಜಯಿಸದ ನೃಪನ ದೇಶಾಂ । ತರವ ಚರಿಸದ ಪಂಡಿತನನು" (ಉದ್ಯೋಗ ೩–೨೨), "ಮಾರಿಗೌತಣವಾಯ್ತು ನಾಳಿನ । ಭಾರತವು" (ಉದ್ಯೋಗ ೧೦–೨೦), "ಬೆದಱು ತವನಿಧಿಯಾಯ್ತು" (ಭೀಷ್ಮ ೧೦–೧೩), "ಹದ್ದು ಕಾಗೆಯ ಮನೆಗೆ ಬಾಣಸವಿದ್ದುದೋ ಗಜ" (ದ್ರೋಣ ೩–೪೩), "ಗರುಡನಾರೋಗಣೆಯ ಬೋನಕೆ । ಮರಳಿ ಪಡಿಸಣವೇಕೆ ?" (ದ್ರೋಣ ೧೦–೫೩), "ಆಳು ಕುದುರೆಯ ಬಿದ್ದನಲಿ ಬೇಸರಿಸಿದನು ಪಿತೃಪತಿಯ ಪರಿಜನವ" (ಕರ್ಣ ೧೧–೩೮), "ಕಲಿತನಕೇಸು ಮೊಲೆಗಳು ಮೂಡಿದುವಲಾ ಪಾರ್ಥ" (ಕರ್ಣ ೨೬–೩೧), "ಹೊಡೆಸೆಂಡನಾಡಿದನಹಿತಮೋಹರವ" (ಶಲ್ಯ ೩–೧೧), "ಜವನ ಸಿವಡಿಗೆ ಹತ್ತಿದರು ನಿನ್ನವರು ಮಕ್ಕಳು ನೂಱು" (ಗದಾ ೩–೨೪), "ನಿನ್ನ ಭುಜಬಲ ವಾಗುರೆಯ ವೇಢೆಯಲಿ ಬೀಳದು ಕೃಷ್ಣ ಬುದ್ಧಿಮೃಗ" (ಗದಾ ೮–೬೨).

ಅನ್ಯ ಅಲಂಕಾರಗಳ ಪರಿಶೀಲನೆ, ವಿಸ್ತೃತ ಅಧ್ಯಯನದ ವಿಷಯ. ಮಾದರಿಗೆ ಕೆಲವು : (೧) ಉಪಮೆಗೆ : "ತಪೋಧನಕಳಭರಿಗೆ ಸೃಣಿಯೆನಲು ಮೆಱೆದುದು ರೂಪವಂಗನೆಯ" (ಆದಿ ೧೩–೨೩), "ಕಾರಿರುಳ ಪಟ್ಟಣಕೆ ಚಂದ್ರನ । ತೋರಣವ ಬಿಗಿದಂತೆ ದಾಡೆಗ । ಳೋರಣದ ಹೊಳಹುಗಳ" (ಉದ್ಯೋಗ ೧೧–೨೮). (೨) ದೃಷ್ಟಾಂತಕ್ಕೆ : "ಗರುಡನ ತರವಳಿಕೆಯಲಿ ಹಾವು ಕನ್ನವ । ಕೊರೆದು ಬದುಕುವುದೇ" (ವಿರಾಟ ೮–೭೩), "ಹುಲುಸರವಿ ಹಾವಹುದು ಹುತ್ತಿನ । ತಲೆಯಲಿರಲಜ್ಞರಿಗೆ ಹಿಸುಣರ ಬಳಕೆ ಹೊಗುವುದು" (ಉದ್ಯೋಗ ೧೦–೨೪). (೩) ಮಾಲಾರೂಪಕಕ್ಕೆ : "ಬೆಱಗು ಬೆಳೆದುದು ಮನದ ಮಿಡುಕಿನ । ಮಱಕ ಮುಂದಲೆಗೊಟ್ಟುದಱಿವಿನ । ಸೆಱಗು ಹಾಱಿತು ಲಜ್ಜೆ ಬೆಳಗಿತು ಬಟ್ಟ ಬೀದಿಯಲಿ । ಉಱುಬಿತಪದೆಸೆ ರಾಜ್ಯಲಕ್ಷ್ಮಿಯ । ತುಱುಬು ಕೈದೊಳಸಾಯ್ತು....." (ಸಭಾ ೧೪–೨೮). (೪) ಉತ್ಪ್ರೇಕ್ಷೆಗೆ : "ಜಗದ ನಿಡುನಿದ್ರೆಯಲಿ ಮೋಹರ । ದೆಗೆದ ಮುಗಿಲೋ ಮೇಣಖಿಳ ಕುಲ । ದಿಗಿಭವೆಂಟೊಂದಾಯ್ತೊ ಕೈಕಾಲ್ ಮೂಡಿತೋ ನಭಕೆ ...." (ದ್ರೋಣ ೩–೯). (೫) ಶ್ಲೇಷೆಗೆ : "ಹೊತ್ತುಗಳೆಯದೆ । ಹೆಱಿಸಿರೇ ನಾರಿಯನು ನಿಮ್ಮಯ ಬಾಣಗರ್ಭಿಣಿಯ" (ಭೀಷ್ಮ ೯–೩೪), "ರಾಯ ಕೇಳೈ ಮತ್ತೆ ಕರ್ಣರ ।

ಸಾಯುನವ" (ಕರ್ಣ ೨೪-೧), "ಅಳಿಕುಳಾಳಿಕೆಯುಟ್ಟ ಸೀರೆಯುನೂರುಮಧ್ಯದಲಿ। ಸುಲಿಸಿದರು ಧಾರ್ಮಿಕರು (ಗದಾ ೧೧-೬೨). (೬) ಅತಿಶಯೋಕ್ತಿಗೆ: "ಏಸು ಭಕ್ಷ್ಯೋದನದ ಪರ್ವತ। ರಾಶಿ ದಧಿ ಘೃತ ದುಗ್ಧ ಮಧು ವಾರಾಸಿಯೊಡ್ಡಣೆ ಮೆಱೆ-ದುದಿಂದ್ರಪ್ರಸ್ಥ ನಗರಿಯುಲಿ॥" (ಸಭಾ ೧೧-೫). (೭) ಅರ್ಥಾಂತರನ್ಯಾಸಕ್ಕೆ: "....ಉಳಿದಮದೀಚೆಯುಲೀಸು ಬಲವಿವ। ನುಳಿದನೊಬ್ಬನೆ ದೈವಗತಿಗಾ। ರಳಲಿ ಮಾಡುವುದೇನು ?" (ಗದಾ ೬-೨). (೮) ವ್ಯಾಜಸ್ತುತಿಗೆ: "ಇವನು ಗಡ ಚಿಕ್ಕಂದು ಮೊಲೆಗೊ। ಟ್ಟವಳ ಹಿಂಡಿದ ಗಂಡ ಬಂಡಿಯು। ಜವೞಗಾಲಲಿ ಮುರಿದ-ನಲ್ಲೈ...." (ಸಭಾ ೧೦-೧೩). (೯) ಸ್ವಭಾವೋಕ್ತಿಗೆ: "ಏನು ಹೇಳೈ ಕರ್ಣ ಚಿತ್ತ। ಗ್ಲಾನಿ ಯಾವುದು ಮನಕೆ ಕುಂತೀ। ಸೂನುಗಳ ಬೆಸಕೈಸಿಕೊಂಬುದು ಸೇರದೇ ನಿನಗೆ...." (ಉದ್ಯೋಗ ೧೦-೧೩). (೧೦) ಅಪ್ರಸ್ತುತ ಪ್ರಶಂಸೆಗೆ: "ನರರಿಗೆ। ನಂಜು ಪಥ್ಯವೆ ಗಿಳಿಯು ಮರಿಗಳು ಮಂಜರನ ಮೇಲ್ವಾಯ್ದು ಬದು-ಕುವವೇ...." (ಸಭಾ ೧೦-೮). (೧೧) ವಿರೋಧಾಭಾಸಕ್ಕೆ: "ಊರು ಬೇಡಿದೆವೈದ ನೀನೆರ। ಡೂರುಗಳನೇ ಕೊಟ್ಟೈಯ್ಯ" (ಗದಾ ೮-೮).

"ವಿದ್ಯಾಪರಿಣತರಲಂಕಾರ"ವೂ ಆದ ಕುಮಾರವ್ಯಾಸ ಭಾರತದಲ್ಲಿ ಶಬ್ದ ಮತ್ತು ಅರ್ಥ ಎರಡು ರೀತಿಯು ಅಲಂಕಾರಗಳ ಸೊಬಗೂ ಉಂಟು. ಶಬ್ದಾಲಂಕಾರಗಳಲ್ಲಿ, ಅನುಪ್ರಾಸವಿರಚನೆ ಕುಮಾರವ್ಯಾಸನ ಒಂದು ಶೈಲಿಲಕ್ಷಣವೇ ಆಗಿದೆ. ವೃತ್ತಿ (ವರ್ಣ), ಛೇಕ ಮತ್ತು ಲಾಟ ಎಂಬ ಮೂರು ಬಗೆಗಳಿಗೂ ಇಲ್ಲಿ ಎಡೆಯಿದೆ. ಅರ್ಥ ಗುಣವನ್ನು ಪೋಷಿಸಲೆಂದಲ್ಲದೆ, ಶ್ರುತಿಕಟುವಾದ, ರಸಪುಷ್ಟಿ ಧ್ವನಿರಮ್ಯತೆಗಳಿಗೆ ಒದಗದ, ಬರಿಯು ಶಬ್ದಕೋಲಾಹಲವಾಗಿ ಭೋರಿಡುವ ಅನುಪ್ರಾಸ ಬಳಕೆಯಾಗುವುದು ತೀರ ವಿರಳ.

ವೃತ್ತ್ಯನುಪ್ರಾಸ ಬಿಡಿವ್ಯಂಜನದ ಅಸಕೃದಾವೃತ್ತಿಯಾಗಿದ್ದು, ಕವಿಗೆ ಈ ವಿಧವೇ ಹೆಚ್ಚು ಪ್ರಿಯುವಾದುದು. ಕಾವ್ಯದ ನರನಾಡಿಗಳಲ್ಲೆಲ್ಲ ತುಂಬಿ ಸೂಸುವುದೂ ಇದೇ. ಸ್ವರೂಪ ನಿರ್ದೇಶನಕ್ಕೆ ಕೆಲವು ನಿದರ್ಶನಗಳು:

"ಸುಳಿವ ಸುತ್ತಣ ಸಾಲಭಂಜಿಕೆ। ಗಳಲಿ ಸೂತ್ರಿಸಿ ರಚಿಸಿದರು...." (ಆದಿ ೧೨-೧೫); "ನಿರವಧಿಕ ನಿರ್ಮಾಯು ನಿಸ್ಪೃಹ। ನಿರುಪಮಿತ ನಿರ್ದ್ವಂದ್ವ ನಿರ್ಗುಣ। ನಿರವಯುವ...." (ಅರಣ್ಯ ೬-೮೯); "ಪಳಹರದ ಪಲ್ಲವದ ಪಸರದ। ಪಳಿಯು ಪಟ್ಟೆಯು...." (ವಿರಾಟ ೪-೩೦); "ಹಲಗೆಯುಲಿ ಹೆತ್ತಿಸಿದ ಹಾವಿನ। ಹಳವಿಗೆಯು ಹೊಂದೇರ ನೃಪಮಂ। ಡಳಿಯು ಮಧ್ಯದೊಳಾತ...." (ಭೀಷ್ಮ ೩-೧೫); "ಚೂಣಿ ತಲೆಯೊತ್ತಿದುದು ಹರಣದ। ವಾಣಿ ಕೇಣಿಯು ಕುಹಕವಿಲ್ಲದೆ। ಗೋಣುಮಾರಿಗ-ಳೋಲಗದ ಹಣರುಣವ ನೀಗಿದರು॥ ಹೂಣಿಗರು ಹುರಿಬಲಿದು ಹಾಣಾ ಹಾಣಿಯುಲಿ ಹೊಯ್ದಾಡಿದರು...." (ಭೀಷ್ಮ ೮-೧೫); "ನಿದ್ರಾಸಮುದ್ರವ। ಮುಳುಗಿ

ಝೊಮ್ಮಿನ ಝಾಡಿಯಲಿ ಝೊಂಪಿಸಿದುದರಿ ಜಾವ...." (ದ್ರೋಣ ೧೭-೧೨); "ಚಿತ್ರದ। ಚಳಗತಿಯ ಚೇತನದ ಚಡ್ಡಣೆಯ ಚಡಾಳದಲಿ" (ಗದಾ ೬-೨೨).

ಇಲ್ಲಿ ಆವೃತ್ತಿಗೊಂಡಿರುವ ಬಿಡಿಯಕ್ಷರಗಳು ಯಾವುವು ಎನ್ನುವುದು ತಮ್ಮಿಂದ ತಾವೇ ತಿಳಿಯುತ್ತವೆ. ಇವು ಸಹಜಸ್ಫೂರ್ತವಾದವು; ಮಿತವ್ಯಾಪ್ತಿಯವು.

ಛೇಕಾನುಪ್ರಾಸ ಎರಡು ಅಥವಾ ಎರಡಕ್ಕಿಂತ ಹೆಚ್ಚು ವ್ಯಂಜನಗಳು ಅವ್ಯಪೇತವಾಗಿ ಅಥವಾ ವ್ಯಪೇತವಾಗಿ ಎರಡುಸಲ ಸಂಯೋಜನಗೊಳ್ಳುವ ರಚನೆ. ಒಂದು ನಿದರ್ಶನ: "ಎಲೆಲೆ ಕವಿಕವಿ ಬೆರಸುಬೆರಸಿ। ಟ್ಟಳಿಸು ತಿವಿತಿವಿ ಭಲರೆ ಭಲರೆ। ಬಲರೆ ಹಿಂಚದಿರಿನ್ನು ಹೊಯ್‌ಹೊಯ್ ಚೂಣಿಗರನೆನುತ...." (ಭೀಷ್ಮ ೪-೩).

ಹೀಗೆಯೇ ಪದ ಅಥವಾ ಪದಾಂಶಗಳಲ್ಲಿ ಸಮಾನಾರ್ಥವೇ ಹೊರಡುವಂತೆ ಆವೃತ್ತಿಗೊಳ್ಳುವ ಲಾಟಾನುಪ್ರಾಸವೂ ಇದ್ದು, ಇದಕ್ಕೆ ಕುಮಾರವ್ಯಾಸ ಭಾರತದಲ್ಲಿ ಪ್ರಚುರತೆಯೂ ಇದೆ: "ಈತನಾರೈ ಪಾಂಡುನಂದನ। ನೀತ ಕಾಣಿರೆ ಪಾಂಡುವಿನ ಸುತ। ನೀತನೇ ದಿಟ ಪಾಂಡುವಿನ ಮಗನೀತನೇಯೆನುತ॥ ಪೂತು ಧರ್ಮಜ ಪೂತು ಧರ್ಮಜ ಪೂತು ಧರ್ಮಜಯೆನುತ...." (ಸಭಾ ೭-೪೦).

ವಿವಿಧರೀತಿಯ ಅನುಪ್ರಾಸಗಳು ಸಮ್ಮಿಶ್ರಗೊಳ್ಳುವುದನ್ನು ಎದುರುಗೊಳ್ಳು ವಿರಳವೇನಲ್ಲ. ಉದಾಹರಣೆಗೆ: "ಕಣೆಕಣೆಯ ಹಳಚಿದುವು ಮಾರ್ಗಣೆ। ಕಣೆಯ ಕಡಿದುವು ಕವಿಯ ಕಣೆ ಕಿಱು। ಗಣೆಯ ಮುಕ್ಕುಳಿಸಿದುವು ಹೆಕ್ಕಳಿಸಿದುವು ಹಂದೆಗರ...." (ಭೀಷ್ಮ ೪-೧೪).

ಈಗ ಯಮಕದ ಬಗೆಗೆ ನೋಡೋಣ: ಸಹಜಕವಿಗಳ ರಚನೆಗಳಲ್ಲಿ ಅನಾಯಾಸವಾಗಿ ಅನುಪ್ರಾಸಭೇದಗಳು ವಿಜೃಂಭಿಸಬಹುದಾದರೂ, ಯಮಕಗಳ ಬಳಕೆ ವಿರಳವೇ. ಕೆಲಮಟ್ಟಿನ ಪ್ರಯತ್ನಶೀಲತೆ ಬಹುಶಃ ಇದರ ಕಾರಣ. ಕುಮಾರವ್ಯಾಸ ಅಪ್ರಯತ್ನದಿಂದ ತಂದಿರುವ ಒಂದೆರಡು ನಿದರ್ಶನಗಳನ್ನು ಗಮನಿಸೋಣ:

ಅರ್ಜುನ ಇಂದ್ರಕೀಲ ಪರ್ವತದತ್ತ ತೆರಳಿದಾಗ ಉಂಟಾದ ಶುಭಶಕುನಗಳನ್ನು ಕವಿ ವರ್ಣಿಸುವಾಗ (ಅರಣ್ಯ ೪-೩೪),

ನೀಲಕಂಠನ ಮನದ ಬಯಕೆಗೆ। ನೀಲಕಂಠನೆ ಬಲಕೆ ಬಂದುದು
ಮೇಲುಪೋಗಿನ ಸಿದ್ಧಿ ದೈತ್ಯಾಂತಕನ ಬುದ್ಧಿಯಲಿ
ಕಾಲಗತಿಯಲಿ ಮೇಲೆ ಪರಂಗ। ಕಾಲಗತಿಯನು ಕಾಬೆನ್ನೈಸಲೆ
ಶೂಲಧರನೇ ಬಲ್ಲನೆನುತೈತಂದನಾ ಪಾರ್ಥ ॥

ಎಂಬುದಾಗಿ ವರ್ಣಿಸಿ, "ನೀಲಕಂಠ" ಮತ್ತು "ಕಾಲಗತಿ" ಶಬ್ದಗಳ ಬಳಕೆಯಲ್ಲಿ ತಂದಿರುವ ಅರ್ಥಚಮತ್ಕಾರ ಹೃದ್ಯವಾಗಿದೆ.

ಹೀಗೆಯೇ, "ಕಾಲವೆಂಬುದು ರವಿಯ ಗಾಲಿಯ। ಕಾಲಗತಿಯೈಸಲೆ" (ಅರಣ್ಯ ೭-೭೨), "ಆವುದಭಿಮತವೇನು ಹದ ಸಹ। ದೇವ ನೀ ಹೇಳೆನಲು ಬಿನ್ನಹ। ದೇವ ಸೇರದು ಸಂಧಿ ಸಂಗರವೆಮಗೆ ಸೇರುವುದು" (ಉದ್ಯೋಗ ೬-೧೪),

"ಕರ್ಣ ಕರ್ಣಕಠೋರಸಾಹಸ। ನಿರ್ಣಯಿಸು....ಕುರುಬಲ! ಕರ್ಣಧಾರನು ನೀನು ವಿಶ್ವ ವಿ। ಕರ್ಣ ನೀನೇ ರಕ್ಷಿಸೆಂದುದು ನಿಖಿಳ ಪರಿವಾರ॥" (ದ್ರೋಣ ೧-೧೭); "ಸಾಕು ದೈತ್ಯನ ಕೆಡಹು ಸೇನೆಯು। ಸಾಕು ಸುಭಟರು ಬಾಯು ಬಿಡುತಿದೆ ...." (ದ್ರೋಣ ೧೬-೨೩), "ಹರಿಗೆ ಕೈಮುಗಿದೆಱಗಿ ತೇರಿನ। ಹರಿಗಳಿಗೆ ವಂದಿಸಿ...." (ಕರ್ಣ ೨೧-೧೯)—ಇಂತಹವನ್ನೂ ನೋಡಬಹುದು.

ಕುಮಾರವ್ಯಾಸ ಭಾರತದಲ್ಲಿ ಕೆಲವೊಮ್ಮೆ ಅನುದ್ದೇಶಿತವಾಗಿ ಎಂಬಂತೆ ವರ್ಣ ಚಿತ್ರಗಳ ಚಮತ್ಕಾರಗಳು ಕಾಣಿಸಿಕೊಳ್ಳುವುದುಂಟು. ಇಂತಹ ಕಡೆ ರಸಭಾವಗಳ ಗತಿಗೇನೂ ಭಂಗವಿಲ್ಲ.

ಯಕ್ಷಪ್ರಶ್ನೆಯ ಭಾಗದಲ್ಲಿ, ತಮ್ಮಂದಿರ ಪಾಡಿಗೆ ಧರ್ಮರಾಯ ಮರುಗಿದು ದನ್ನು ವರ್ಣಿಸುವಾಗ ಬಂದಿರುವ—"ಮುಸುಕನರೆದೆಱೆದವರ ಮೊಗ। ದುಸುರುಗಳ ಸಾಲಿಸಿದನಕಟಾ...." (ಅರಣ್ಯ ೨೩-೩೨) ಎಂಬ ಪದ್ಯವನ್ನೂ ದ್ರೋಣರನ್ನೆದುರಿ ಸುವ ಭೀಮನ ಪೌರುಷವನ್ನು ನಿರೂಪಿಸುವಾಗ ಬಂದಿರುವ—"ಫಡಫಡಾರೋ ಧರ್ಮಪುತ್ರನ। ಹಿಡಿವವರು ಬಾಯ್ಬಡಿಕರ್ಯೆ...." (ದ್ರೋಣ ३-೬೭) ಎಂಬ ಪದ್ಯ ವನ್ನೂ "ಅತಾಲವ್ಯ"ದ ನಿದರ್ಶನಗಳೆನ್ನಬಹುದು.

ಹಾಗೆಯೇ, ಸುಪ್ರತೀಕಗಜದ ಹೋರಾಟವನ್ನು ಕುರಿತ—"ಸುತ್ತ ಮೆಱೆ ದವು ಮೇಲೆ ಪಲ್ಲವ। ಸತ್ತಿಗೆಯ ಸಾಲುಗಳು ಬಿರುದಿನ...." (ದ್ರೋಣ ३-೬) ಎಂಬ ಪದ್ಯವನ್ನು "ನಿಮೂರ್ಧನ್ಯ"ದ ನಿದರ್ಶನವನ್ನಾಗಿ ತೋರಿಸಬಹುದು.

ಸಮಗ್ರ ಕಾವ್ಯದಲ್ಲಿ ಇಂತಹ ವರ್ಣಚಿತ್ರಗಳ ಪದ್ಯಗಳು ಸಾಕಷ್ಟು ಇರಬಹು ದೆಂದು ತೋರುವುದು. ಅವನ್ನು ಗಾಢವಾದ ಪರಿಶೀಲನೆಯಿಂದ ಕಂಡುಕೊಳ್ಳ ಬೇಕಾಗುತ್ತದೆ.

ಪ್ರಹೇಳಿಕೆಯ ವಿಭಾಗಕ್ಕೆ ಶುದ್ಧವಾಗಿ ಸೇರದ ಒಂದು ಗುಂಪಿನ ರಚನೆಗಳು ಪ್ರಶ್ನೋತ್ತರಗಳು. ಕುಮಾರವ್ಯಾಸ ಭಾರತದ ಅರಣ್ಯಪರ್ವದೊಳಗಿನ ಅಜಗರ ಪ್ರಸಂಗ ಮತ್ತು ಯಕ್ಷಪ್ರಶ್ನೆಯ ಸನ್ನಿವೇಶದಲ್ಲಿಯ ಹಲವು ಪದ್ಯಗಳು ಈ ತೆರನಾದವು (ಪ. ೧೩-೪೯—೫೯; ೨೩-೩೮—೪೫).

ಕುಮಾರವ್ಯಾಸನಿಗೆ ಚಿತ್ರಕಾವ್ಯದ ಚಮತ್ಕಾರಗಳ ಅರಿವಿದ್ದಿತು ಎಂಬುದನ್ನು ತಿಳಿಯುವ ಸಾಕ್ಷ್ಯಗಳು ಆತನ ಕಾವ್ಯದಲ್ಲಿಯೇ ಉಂಟು. ಪ್ರಹೇಳಿಕೆಯ ಪ್ರಭೇದ ಗಳಲ್ಲಿ ಒಂದಾದ ಪಾರಿಹಾರಿಕೆ ಅಥವಾ ಯೋಗಮಾಲೆಯೆಂಬುದರ ಲಕ್ಷ್ಯವಾಗಿ "ವೇದ ಪುರುಷನ ಸುತನ ಸುತನ ಸ। ಹೋದರನ..." (ಆದಿ ೧-೨೩) ಎಂಬುದೂ ಸಂಖ್ಯಾತವೆಂಬುದರ ಲಕ್ಷ್ಯವಾಗಿ "ಒಂದಱಿಂದೆರಡಹುದನಱಿ ಮೂ। ಱಂದವನು ತಿಳಿ ನಾಲ್ಕಱಲಿ...." (ಉದ್ಯೋಗ ३-३) ಎಂಬುದೂ ಈಗಾಗಲೇ ಪರಿಚಿತವಾಗಿವೆ. ಅಲ್ಲದೆ "ಸಲೆ ಸಮಸ್ತದನಂತಪದ್ಯವ। ಫಳಿಲನನ್ವಯಿಸುವ। .... ಹಲವುಪಮೆ ಉತ್ಪ್ರೇಕ್ಷೆ ರೂಪಕ। ಸುಲಲಿತಾಲಂಕೃತಿ ಚಮತ್ಕೃತಿಗಳ ಚತುರ್ಭಾಷಾವಿಶಾರದ

ಕವಿಗಳ" ಬಗೆಗೆ ಅವನು ತಿಳಿಸುವಾಗ (ಉದ್ಯೋಗ ೮-೩೭) ಸಮಸ್ಯಾಪೂರ್ತಿಯ ಕಾವ್ಯವಿನೋದವನ್ನು ಉಲ್ಲೇಖಿಸಿದ್ದಾನೆ. ಕರ್ಣಾರ್ಜುನರ ಯುದ್ಧದಲ್ಲಿ, ವಿಧಿ ವಿಲಾಸದಿಂದ ಕರ್ಣನ ರಥ ಭೂಮಿಯಲ್ಲಿ ಹೂತುಹೋಗಿ ಎತ್ತಲು ಬಾರದ ಸ್ಥಿತಿಯೊ ದಗಿದಾಗ ಕರ್ಣನು "ಈಗಳಿದು ತಾನೇನು ವಿಧಿ ಬ । ರೆದೋಗಟೆಯೊ" ಎಂದು ಮರುಗಿದನೆಂದು ತಿಳಿಸುವಲ್ಲಿ (ಕರ್ಣ ೨೬-೧೪) ಒಗಟು ಹಾಗೂ ಭೀಮ ದುರ್ಯೋ ಧನರ ಗದಾಯುದ್ಧದ ವೈಖರಿಯನ್ನು ಬಣ್ಣಿಸುವಾಗ "ಚಿತ್ರದ । ಚಳಗತಿಯ ಚೇತ- ನದ ಚದ್ಮಹೆಗಳ ಚಡಾಳದಲಿ" ಎಂದೂ "ಗೋಮೂತ್ರಕದ ಚಿತ್ರದ । ಝಾಡಪದವ- ಧಾನದ ವಿಧಾನದ" ಎಂದೂ (ಗದಾ ೬-೨೨, ೨೪) ತಿಳಿಸುವಲ್ಲಿ ಗತಿಚಿತ್ರ—ಇವುಗಳ ಉಲ್ಲೇಖವಿರುವವನ್ನೂ ಗಮನಿಸಬಹುದಾಗಿದೆ.

ಛಂದಸ್ಸು

ಮಹಾಕಾವ್ಯದ ಛಂದಃಪ್ರಕಾರವಾಗಿ ಭಾಮಿನೀಷಟ್ಪದಿ ಎಷ್ಟು ಸಮರ್ಥವಾಗಿ ಪ್ರಯೋಗವಾಗಬಹುದು, ಎಂತಹ ವೈಭವ ವಿಲಾಸಗಳನ್ನು ಮೆರೆಯಬಹುದು ಎಂಬು ದಕ್ಕೆ ಕುಮಾರವ್ಯಾಸ ಭಾರತವನ್ನು ತಪ್ಪದೆ ನೋಡಬೇಕಾಗುತ್ತದೆ ಹ್ರಸ್ವಬಂಧ ಗಳಾದ ಶರ ಕುಸುಮಗಳಿಗೂ ದೀರ್ಘಬಂಧಗಳಾದ ಪರಿವರ್ಧಿನಿ ವಾರ್ಧಕಗಳಿಗೂ ನಡುವೆ ನಿಲ್ಲುವ ಈ ಪ್ರಭೇದದಲ್ಲಿ ಉಳಿದೆಲ್ಲ ಷಟ್ಪದಿಪ್ರಭೇದಗಳ ಛಂದೋಗತಿಯನ್ನೂ ಕಾಣಬಹುದಾಗಿದೆ. ೩/೪ರ ತನಿಲಯದ ಭೋಗ/ಶರ, ಪರಿವರ್ಧಿನಿಗಳ ಏಕತಾನತೆಗೆ ಹೊರತಾಗಿ ೩·೪ರ ಮಿಶ್ರಲಯದ ವೈವಿಧ್ಯಮಯ ನರ್ತನಗತಿಯನ್ನು ಭಾಮಿನಿಯಲ್ಲಿ ನಾವು ಎದುರುಗೊಳ್ಳುತ್ತೇವೆ. ಈ ಮಿಶ್ರಲಯ ಬಹುಬೇಗ ಪಂಚಮಾತ್ರಾಲಯ ಗತಿಗೆ ಹೊಂದಿಕೊಳ್ಳುವುದರಿಂದ ಕಥನರೀತಿಗೆ ಅದು ಸುಕರವಾಗಿದೆ. ಇದರಲ್ಲಿ ಸಾಮಾನ್ಯವಾಗಿ ಎರಡು ಪದ್ಯಾರ್ಧಗಳ ಕೊನೆಗೆ ಪೂರ್ಣಯತಿಸ್ಥಾನಗಳು ಏರ್ಪಟ್ಟು, ಅವುಗಳ ಹಿಂದಣ ಎರಡೂ ಖಂಡಗಳಲ್ಲಿ ವಿವಿಧ ಗಣಪರಿವೃತ್ತಿಗಳ ಮೂಲಕ ಉಪಗಣ ಗಳು ರಚಿತವಾಗಿರುತ್ತವೆ. ಅದರಿಂದ ಲಯವೈಚಿತ್ರ್ಯಗಳುಂಟಾಗಿ ಶ್ರವಣಮಧುರ ವಾದ ಗಮಕ ಸಾಧ್ಯವಾಗುತ್ತದೆ.

ಕುಮಾರವ್ಯಾಸ ಭಾರತದಲ್ಲಿ ೩·೪ರ ನಿಯತಲಯ ಹೀಗಿರಬಹುದು: (೧) ಏನು. ಹೇಳೈ. ಕರ್ಣ. ಚಿತ್ತ.। ಗ್ಲಾನಿ. ಯಾವುದು. ಮನಕೆ. ಕುಂತೀ....(ಉದ್ಯೋಗ ೧೦-೧೩); (೨) ಅಡಸಿ. ಹೊಕ್ಕವ. ಕೃಪನ. ರಥವನು.। ಕಡಿದು. ಬಿಸುಟನು.... (ದ್ರೋಣ ೬-೧೭).

ಕೆಲವೊಮ್ಮೆ ಪಾದಮಧ್ಯ/ಪಾದಾಂತ ವಿಶ್ರಾಂತಿಯ ರಚನೆಯಿಂದ ಈ ನಿಯತ ಲಯ ಸ್ಫುಟವಾಗಿಯೇ ತೋರಬಹುದು:

ಎರೆಯ ಮಂಕಿಯೊ ಕಳಿತ ಮೆಒಕ್ಕೆಯೊ
ಹುರಿಯ ಬಲೆಯೋ ರಾಗ ಸನ್ನೆಯೊ
ಸವಿಯ ಗೊರೆಯೋ ಠಕ್ಕಿನುಂಡೆಯೊ ಸವಿಯ ಚಿತ್ರಕವೊ ॥ (ಆದಿ ೯-೭೬)

ಇನ್ನು ಕೆಲವೊಮ್ಮೆ ಸಂಧಿಯಾದ ಪದಗಳಿಂದಲೂ ನಿಯತಲಯ ಸಾಗುವುದು ಸಾಮಾನ್ಯ :

ಧರ್ಮ.ವಾವುದು. ಮೇಣು. ಜಗದೊಳ.
ಧರ್ಮ.ವಾವುದು. ರಾಜ.ಮಂತ್ರದ.
ಧರ್ಮ.ವಾವುದು. ಮಾರ್ಗ.ವಾವುದ.ಮಾರ್ಗ.ವೆಂದೇ. ನು ॥

(ಉದ್ಯೋಗ ೪-೮೪)

ವಿಶಿಷ್ಟವಾದ ಒಂದು ಸಂದರ್ಭಕ್ಕೆ ಹೆಚ್ಚಿನ ಕಳೆಯನ್ನು ಕೊಡುವಂತೆ ಈ ಲಯ ಒದಗುವುದು ಸಾಧ್ಯ. ಕೃಷ್ಣನು ಕೌರವನ ಆಸ್ಥಾನಕ್ಕೆ ಪಾಂಡವರಾಯಭಾರಿಯಾಗಿ ಬಂದ ಪರಿ :

ದೇವ. ಬಂದನು. ತನ್ನ. ನೆನೆವರ.
ಕಾವ. ಬಂದನು. ದೈತ್ಯ. ಕುಲವನ.
ದಾವ. ಬಂದನು .... (ಉದ್ಯೋಗ ೯-೫೨)

೩.೪ರ ನಿಯತಲಯ ಪದ್ಯವನ್ನು ಪೂರ್ತಿ ವ್ಯಾಪಿಸುವಂತೆ ಬರುವುದು ಸಾಮಾನ್ಯವಾಗಿ ಇಲ್ಲ. ಹಾಗೆ ಬರುವುದಾದರೆ, ಅದು ಕವಿಯ ದೌರ್ಬಲ್ಯವನ್ನು ತೋರಿಸುವ ಲಕ್ಷಣವೆನ್ನಬೇಕು. ಸಮೃದ್ಧವಾಗಿ ಗಣಪರಿವೃತ್ತಿಗಳನ್ನು ತರುವುದು ಸಾಧ್ಯವಾದಲ್ಲಿ, ಭಾಮಿನಿಯ ಹೊಳಪು ಹೊಗರುಗಳು ಮಿಗಿಲಾಗಿ ಹೊಮ್ಮುತ್ತವೆ. ಕುಮಾರವ್ಯಾಸನಿಗೆ, ಉಸಿರಾಟದಂತೆ ಸಹಜವಾದ ಕ್ರಿಯೆಯಿದು. ಆ ಗಣಪರಿವೃತ್ತಿಗಳು ಪಾದಾದಿಯಿಂದ ತೊಡಗಿ ಪದ್ಯಾರ್ಧದ ವರೆಗೆ ೨ರಿಂದ ೭/೮ರ ವರೆಗೆ ಹಾಗೂ ೫.೫, ೨.೩ ೫, ೨.೫.೩, ೩.೨.೫, ೪.೬, ೬.೪, ೩.೭, ೭.೩ ಎಂಬುದಾಗಿ ಹೆಣಿಗೆಗಳನ್ನು ಹೆಣೆದುಕೊಳ್ಳುತ್ತ ಸಾಗುವುದು. ಹೀಗೆ ಸಾಗಬೇಕಾದರೆ ೩.೪ರ ಮಿಶ್ರಲಯುವಷ್ಟರಿಂದಲೇ ಹೆಣಿಗೆಗಳು ಸಾಧ್ಯವಾಗದು ; ೩.೪.೩ರ ಮಿಶ್ರಲಯುಗಳು ವಿವಿಧವಾಗಿ ಪರಿವೃತ್ತಿಗಳನ್ನು ಪಡೆದು ಉಪಗಣಗಳನ್ನು ರಚಿಸಿಕೊಳ್ಳುವುದು ಆವಶ್ಯ. ೩.೪ರ ಯಾಂತ್ರಿಕ ಗಣವಿಭಜನೆಗೆ ಅಡ್ಡಿಯಾಗದೆ, ಹಿಂದಿನ ಗಣದ ಪದ ಪದಾಂಶಗಳು ಮುಂದಿನ ಗಣದ ಪದ ಪದಾಂಶಗಳೊಡನೆ ತಳುಕುಹಾಕಿಕೊಂಡು ಸಾಗುವುದೀಗ ಸಾಮಾನ್ಯ. ಮುಖ್ಯ ಗಣವಿಭಜನೆಯಲ್ಲಿ, ೩ರ ಗಣದಲ್ಲಿ ᴗ– ಎಂಬ, ೪ರ ಗಣದಲ್ಲಿ ᴗ–ᴗ ಎಂಬ ರಚನೆ ಬರಬಾರದು. ಉದಾಹರಣೆಗೆ, ಕೆಲವು ಪರಿವೃತ್ತಿಗಳಿಂದಾದ ಉಪಗಣಗಳ ವ್ಯವಸ್ಥೆ :

ಸಿಂಗಿಯನು. ಬಿತ್ತಿದೆನು. ಪಾಂಡವರ+ಅಂಗದಲಿ. ತತ್ಫಲದ. ಬೆಳಸಿನ (೫.೫); ಆ. ನದಿಯ. ತೀರದಲಿ (೨.೩.೫); ಎಲೆ. ನಪುಂಸಕ. ಗಂಡು. ವೇಷದ (೨.೫.೩); ನಾಳೆ. ನಾ. ಕಳುಹುವೆನು (೩.೨.೫); ಆ. ಗರುವೆ. ಹೊಕ್ಕಳು. ಮಹಾಹಿಯ (೪.೬); ನಳಿನನಾಭ. ಮುಕುಂದ (೬.೪); ಮೀರಿ. ತಳಸಂಚದೊಳು (೩.೭); ಶ್ರೀರಮಾವರ. ದೈತ್ಯ. ಕುಲ (೭.೩).

ಈಗ ಈ ಲಕ್ಷ್ಯವನ್ನು ನೋಡೋಣ :

ಕೊರಳ ಸೆರೆ. ಹಿಗ್ಗಿದುವು.* ದೃಗುಜಲ.
ಉರವಣಿಸಿ. ಕಡುನೊಂದನು.*+ಅಕಟಾ.
ಕುರುಪತಿಗೆ. ಕೇಡಾದುದೆ.+ಎಂದನು. ತನ್ನ. ಮನದೊಳಗೆ* ॥
ಹರಿಯು ಹಗೆ. ಹೊಗೆದೋರದೆ.*+ಉರುಹದೆ.
ಬರಿದೆ ಹೋಹುದೆ.* ತನ್ನ. ವಂಶವನು.+
ಅರುಹಿ. ಕೊಂದನು.* ಹಲವು. ಮಾತೇನು.* ಎಂದು ಚಿಂತಿಸಿದ ॥

(ಉದ್ಯೋಗ ೧೦–೧೧)

ಇಲ್ಲಿ ಅರ್ಥದ ಮೇಲೆ ಲಕ್ಷ್ಯವಿಟ್ಟು, ಯತಿಗೆ ಎಡೆಮಾಡಿ, ಗಣಗಳನ್ನು ವಿಭಜಿಸಿ ತೋರಿಸಿದೆ. ಹೀಗೆ ಮಾಡಿದರೆ, ಮುಖ್ಯಲಯದಲ್ಲಿ ವಿವಿಧವಾಗಿ ಗಣಪರಿವೃತ್ತಿಗಳು ಏರ್ಪಟ್ಟು, ನಿಯಮಿತ ಗಣರಚನೆ ಅಲ್ಲಲ್ಲಿ ಬೇರಾದಂತೆಯೂ ಮಾತ್ರಾಪ್ರಾಬಲ್ಯ ಹಿಗ್ಗಿದಂತೆಯೂ ತೋರುವುದು ಸಹಜ. (ಗಣಗಳನ್ನು ಮಾತ್ರಾಪ್ರಾಬಲ್ಯದ ಏರುಪೇರು
^
ಗಳಾಗದಂತೆ ಈ ರೀತಿ ತೋರಿಸಲೂ ಬಹುದು : ನೊಂದನಕಟಾ. ; ಕೇಡಾದು
^ ^ ^ ^
ದೆಂದನು ; ದೋರದುರುಹದೆ ; ವಂಶವನರುಹಿ; ಮಾತೇನೆಂದು) .ಉದ್ಧೃತಪದ್ಯದ ಗಣಪರಿವೃತ್ತಿಗಳು ಒಂದು ವಾಚನದಲ್ಲಿ ಹೀಗಿರಬಹುದು : ೫.೫ ; ೪ (೫). ೫.೫ (೬) ; ೪ (೫). ೫.೬.೪.೩.೫ ; ೫.೫ ; ೪.೩.೪ ; ೩.೫.೩.೪ ; ೩.೫ ; ೩.೫. ಅರ್ಥಾನ್ವಯಗಳನ್ನು ರೂಪಿಸುವಾಗ ಬೇರೆ ಬೇರೆ ಗಮಕಗಳಿಗೆ ತಕ್ಕಂತೆ ಗಣಪರಿವೃತ್ತಿಗಳು ಬೇರೆ ಬೇರೆಯಾಗಿಯೂ ಏರ್ಪಡಬಹುದು. ಈ ಸಾಧ್ಯತೆ ಶರ ಕುಸುಮ ಭೋಗಗಳಲ್ಲಿ ಇರಲಾರದು. ಎರಡು ಯತಿಗಳ ನಡುವಣ ಅರ್ಥಖಂಡಗಳನ್ನು ಬೇರ್ಪಡಿಸಿ ಪ್ರತ್ಯೇಕವಾದ ಪಾದಗಳನ್ನು ಬರೆಯಲೂಬಹುದು.

ಪಾದಾದಿಯಲ್ಲಿ ೨ ಮಾತ್ರೆಗಳ ಗಣ ವಿಭಜನೆಯಲ್ಲಿ ∪– ಎಂಬ ರಚನೆ ಉಪಗಣ ವ್ಯವಸ್ಥೆಯಲ್ಲಿ ಸಾಮಾನ್ಯ :

∪ – ∪ – ∪ –
"ಹಾ. ಯುಧಿಷ್ಠಿರ ರಾಯ", "ಇದು ಕಣಾ ಧರ್ಮಜನ", "ಆ ಮಹಾ ಮೃತ್ಯುವನು" ಎಂಬಂತೆ ಬರಬಹುದು. ಹಾಗೆಯೇ "ಉರಗಬಲ. ದುರವಣೆಯೊ. ವಾರಿದ (೫)। ತರುಗಳುಪ. ಶಾಖೆಗಳೊ. ಕಾಲನ (೫)। ಹರಮರಿಯೊ." ಎಂಬಂತಹ ರಚನೆಗಳಲ್ಲಿ ಹ್ರಸ್ವಪಾದಗಳಲ್ಲಿ ೩ನೆಯ ಗಣ ೪ರಿಂದ ೫ ಮಾತ್ರೆಗಳ ಪ್ರಮಾಣಕ್ಕೆ ಹಿಗ್ಗಿ ಒಂದು ಗಣವಾಗುವ ಪ್ರವೃತ್ತಿಯೂ ತುಂಬ ಸಾಮಾನ್ಯ. ಸಿರಿ ನೆಲೆಯೆ (೨.೩). ಜವ್ವನ. ನೆಲೆಯೆ. (೪.೩). ವ್ಯೆ। ಸಿರಿ. ನೆಲೆಯೆ (೪.೩). ತನು ನೆಲೆಯೆ (೨.೩). ಖಂಡೆಯ। ಸಿರಿ. ನೆಲೆಯೆ (೬.೪)—ಎಂಬಂತಹ ರಚನೆಗಳು ೩.೪ರ ನಿಯತಲಯವನ್ನು ಹೇಗೆ ಯತಿಸ್ಥಾನವನ್ನು ಹಿಡಿದು ಒಡೆಯಬಲ್ಲುವೆಂಬು

ದನ್ನು ತೋರಿಸಿಕೊಡುತ್ತವೆ. ೩–೬ನೆಯ ಪಾದಗಳಲ್ಲಿ, ಸಾಮಾನ್ಯವಾಗಿ ಕೊನೆಯ ಗಣಗಳಲ್ಲಿ –UUU, UU–U, UUUUU, – –U ಎಂಬ ವಿನ್ಯಾಸದ ಯಾವುದಾದರೂ ಪಂಚಮಾತ್ರಾಗಣ ಬರುತ್ತದೆ.

ಕುಮಾರವ್ಯಾಸನ ಭಾಮಿನಿಯ ರಚನೆಯಲ್ಲಿಯ ಕೆಲವು ವೈಶಿಷ್ಟ್ಯಗಳನ್ನು ಇಲ್ಲಿ ಗುರುತಿಸಬಹುದಾಗಿದೆ :

ಹ್ರಸ್ವಪಾದಗಳಲ್ಲಿ, ಆಯಾ ಪದ್ಯಾರ್ಥಗಳನ್ನು ಪ್ರತ್ಯೇಕವಾಗಿ ಗಮನಿಸಿದಾಗ ಮೊದಲ ಪಾದದ ಕೊನೆಯ ೪ ಮಾತ್ರೆಗಳ ಗಣವನ್ನು ಅಖಂಡವಾದ ಅನಾಗತಗಣವೆಂದು ತಿಳಿಯುವುದಾದರೆ ಒಂದು ಸಮತೋಲವಾದ ವಿನ್ಯಾಸ ಅದರ ಪೂರ್ವಾಪರ ಭಾಗಗಳಲ್ಲಿರುತ್ತದೆ :

(೧) (i) ಬಂದರೇ ಪಾಂಡವರು ಸುದ್ದಿಯ। ತಂದರೇ ನಿನ್ನವರು .... (ಭೀಷ್ಮ ೧–೨೦) ; (ii) ಹಲಗೆಯೈ ಕುರುಭೂಮಿ ಕೌರವ। ಕುಲದ ತಲೆ ಸಾರಿಗಳು .... (ದ್ರೋಣ ೧೦–೪೯).

(೨) ಹ್ರಸ್ವಪಾದಗಳಲ್ಲಿ ಆದ್ಯಂತ ಪ್ರಾಸ ವ್ಯವಸ್ಥೆ ಸಾಧ್ಯ : (೧) "ಮಂತ್ರವುಳ್ಳವನವನೆ ಹಿರಿಯನು। ಮಂತ್ರವುಳ್ಳವನವನೆ ರಾಯನು...." (ಸಭಾ ೧–೪೯) (೨) ಸತ್ಯವುಳ್ಳರೆ ಧರಣಿ ಸಾರುಗು। ಸತ್ಯವುಳ್ಳರೆ ಪದವಿ ಸಾರುಗು...." (ಸಭಾ ೧–೫೦) (೩) "ಕೋಪವೆಂಬುದನರ್ಥ ಸಾಧನ। ಕೋಪವೇ ಸಂಸಾರ ಬಂಧನ ...." (ಉದ್ಯೋಗ ೩–೧೧೩).

೩ ಪರಿಷ್ಕರಣಗಳು

ಈವರೆಗೆ ಕುಮಾರವ್ಯಾಸ ಭಾರತದ ಸು. ೧೨೦ ಹಸ್ತಪ್ರತಿಗಳು ನಮ್ಮ ಗಮನಕ್ಕೆ ಬಂದಿವೆ. ಮದರಾಸು ವಿಶ್ವವಿದ್ಯಾನಿಲಯದ ಹಸ್ತಪ್ರತಿಭಂಡಾರದವೂ ಸೇರಿದಂತೆ ಒಟ್ಟು ೭೬ ಹಸ್ತಪ್ರತಿಗಳು ಕನ್ನಡ ಅಧ್ಯಯನ ಸಂಸ್ಥೆಯ ಹಸ್ತಪ್ರತಿಭಂಡಾರದಲ್ಲಿ ನಿಕ್ಷೇಪಗೊಂಡಿವೆ. ಬೆಂಗಳೂರು ವಿ.ವಿ.ದಲ್ಲಿ ೧೬, ಕರ್ನಾಟಕ ವಿ.ವಿ.ದಲ್ಲಿ ೪, ಉಸ್ಮಾನಿಯ ವಿ.ವಿ.ದಲ್ಲಿ ೪, ಮಂಗಳೂರು ವಿ.ವಿ.ದಲ್ಲಿ ೧, ಮೈಸೂರು ಅರಮನೆಯ ಸರಸ್ವತೀ ಭಂಡಾರದಲ್ಲಿ ೪, ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ೫, ಕೆಳದಿ ವಸ್ತುಸಂಗ್ರಹಾಲಯದಲ್ಲಿ ೭—ಹೀಗೆ ಇತರ ೪೧ ಹಸ್ತಪ್ರತಿಗಳ ಸುಳಿವು ದೊರೆಯುತ್ತದೆ. ಖಾಸಗಿಯವರ ಸಂಗ್ರಹಗಳಲ್ಲಿಯೂ ಸಾಕಷ್ಟು ಇರಬಹುದು. ನಿದರ್ಶನಕ್ಕೆ ಕನ್ನಡ ಅಧ್ಯಯನ ಸಂಸ್ಥೆಯ ಸಂಶೋಧನ ವಿದ್ಯಾರ್ಥಿ (೧೯೮೮) ಎಂ. ವಿ. ವರದರಾಜನ್ ಅವರ ಸ್ವಂತಸಂಗ್ರಹದಲ್ಲಿ ೭ ಹಸ್ತಪ್ರತಿಗಳಿವೆಯೆಂದು ಅವರು ತಿಳಿಸಿದ್ದಾರೆ. ಇವುಗಳಲ್ಲೆಲ್ಲ, ಈಗ ದೊರೆಯುವ ಮಾಹಿತಿಯಂತೆ ಕನ್ನಡ ಅಧ್ಯಯನ ಸಂಸ್ಥೆಯ

ಕೆ. ೨೦೫ನೆಯ ಹಸ್ತಪ್ರತಿಯೇ ಕಾಲದ ದೃಷ್ಟಿಯಿಂದ ಪ್ರಾಚೀನತಮವಾದುದು (ಕ್ರಿ.ಶ. ೧೫೫೪). ಅನಂತರದಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನದೂ (ಕ್ರಿ. ಶ.೧೫೩೨/೭೬), ಕೆಳದಿ ವಸ್ತುಸಂಗ್ರಹಾಲಯದ್ದೂ (ಸು. ೧೬–೧೭ ನೆಯ ಶತಮಾನ) ಹಳೆಯವೆಂದು ಹೇಳಲಾಗಿದೆ. ಇವನ್ನು ಬಿಟ್ಟರೆ, ಉಳಿದುವೆಲ್ಲ ಬಹುಶಃ ೧೮ ಇಲ್ಲವೆ ೧೯ನೆಯ ಶತಮಾನದಲ್ಲಿ ಲಿಖಿತವಾದುವೆಂದು ಪ್ರಕಟವಾಗಿರುವ ಅವುಗಳ ವಿವರಗಳಿಂದ ತಿಳಿಯುತ್ತದೆ. ೧೮ ನೆಯ ಶತಮಾನದ ಹಿಂದಿನ ಕಾಲದಲ್ಲಿ ಲಿಖಿತವಾದ ಹಸ್ತಪ್ರತಿಗಳು ಏಕೆ ಅತ್ಯಲ್ಪ ಸಂಖ್ಯೆಯಲ್ಲಿ ಮಾತ್ರವೇ ದೊರೆಯುತ್ತಿವೆಯೋ ತಿಳಿಯದು. ಹಾಗೆಯೇ, ಕವಿ ಬದುಕಿದ್ದ ಕಾಲಕ್ಕೆ (ಸು. ೧೪೦೦) ಹತ್ತಿರವಾದ ಹಸ್ತಪ್ರತಿಗಳು ಯಾವುವೂ ಕಣ್ಣಿಗೆ ಬೀಳುತ್ತಿಲ್ಲ. ಗದುಗಿನ ಸುತ್ತಮುತ್ತ ಶೋಧಿಸಿ ನೋಡಿದರೆ ಪ್ರಯೋಜನವಾಗುವುದೇನೋ ನೋಡಬೇಕು.

ದಶಪರ್ವಗಳು ಪೂರ್ತಿಯಾಗಿ ದೊರೆತಿರುವ ಕುಮಾರವ್ಯಾಸ ಭಾರತದ ಹಸ್ತಪ್ರತಿಗಳು ಈಗ ದೊರೆತಿರುವವು ೧೫ ಮಾತ್ರ; ಉಳಿದವು ಪರ್ವಗಳ ಮಟ್ಟಿಗೆ, ಇಲ್ಲವೆ ನೀತಿಸಂಗ್ರಹಗಳಾಗಿ ಭಾಗಶಃ ಇರುವಂಥವು. ಇವುಗಳಲ್ಲಿ ಶಕಟರೇಫ ಪ್ರಯೋಗವಾಗಿರುವ ಹಸ್ತಪ್ರತಿಗಳು ಸು. ೧೬; ಕಾಗದದ ಪ್ರತಿಗಳು ವಿರಳವಾದವು (ಉದಾ. ಕೆ. ಎ. ೩೨೮ : ಕ. ಅ. ಸಂ.) ; ಬಹುಶಃ ೨ ಮಾತ್ರ.

ಒಂದೆರಡು ವಿಶೇಷಾಂಶಗಳನ್ನು ಇಲ್ಲಿ ಹೇಳಬಹುದು : ಈಚೆಗೆ "ಕ" ಪ್ರತಿಯೆಂದು ವ್ಯವಹರಿಸುತ್ತಿರುವ ಕನ್ನಡ ಅಧ್ಯಯನ ಸಂಸ್ಥೆಯ ಕೆ. ೨೦೫ನೆಯ ಹಸ್ತಪ್ರತಿ ಕಾಲದ ದೃಷ್ಟಿಯಿಂದ ಅತಿಪ್ರಾಚೀನವೆಂಬುದರಿಂದ, ಇದರಲ್ಲಿ ಱಕಾರದ ಪ್ರಯೋಗವಿದ್ದು ಅದರ ಬಳಕೆ ಸರಿಯಾಗಿರುವುದರಿಂದ, ಕೆಲವು ಕಡೆ ಗ್ರಂಥಪಾತವಿದ್ದೂ ಈ ಪ್ರತಿಯ ಪಾಠಕ್ಕೂ ಉಳಿದ ಪ್ರತಿಗಳ ಪಾಠಕ್ಕೂ ಬಹಳ ವ್ಯತ್ಯಾಸಗಳಿದ್ದೂ, ಇದನ್ನೇ ಹೆಚ್ಚು ವಿಶ್ವಾಸಾರ್ಹವಾದ ಹಸ್ತಪ್ರತಿಯೆಂದು ತಿಳಿದು, ಮೈ. ವಿ. ವಿ. ದ ಈಚಿನ ಬಿಡಿ ಪರ್ವಗಳ ಸಂಪಾದನೆಯಲ್ಲಿ ಆಧಾರಪ್ರತಿಯಾಗಿ ಇದನ್ನು ಸ್ವೀಕರಿಸಿರುವುದು ಕಂಡುಬರುತ್ತದೆ. ಮ ಪ್ರತಿಯೆಂಬುದು (ಸು.೧೮೦೦) ಇದಕ್ಕೆ ತುಂಬ ಹತ್ತಿರವಾದುದರಿಂದ, ಗ್ರಂಥಪಾತಗಳನ್ನು ತುಂಬಲು ಇದು ನೆರವು ನೀಡಿದೆ; ಚ ಪ್ರತಿಯೆಂಬುದು ಸಹ (ಕೆ. ಎ. ೫೭) ಈ ಪ್ರತಿಯನ್ನು ಹಲವೆಡೆ ಹೋಲುವುದೆನ್ನಲಾಗಿದೆ. ಚ ಪ್ರತಿಯೆಂಬುದು ಮಂಗಳೂರಿನಲ್ಲಿ ೧೮೫೧ರಲ್ಲಿ ಅಚ್ಚಾದ ಕಲ್ಲಚ್ಚಿನ ಪ್ರತಿಯೇ. ೧೯೩೩ ರಿಂದ ಮುಂದಿನ ವರ್ಷಗಳಲ್ಲಿ ಸಿದ್ಧವಾದ ಮೈಸೂರು ವಿ.ವಿ. ದ ಪ್ರಾಚ್ಯಕೋಶಾಗಾರ ಮತ್ತು ಕನ್ನಡ ಅಧ್ಯಯನ ಸಂಸ್ಥೆಯ ಎಲ್ಲ ಬಿಡಿ ಪರ್ವಗಳ ಪ್ರಕಟನೆಯಲ್ಲಿಯೂ ಕ ಪ್ರತಿಯನ್ನು ಆಧಾರಪ್ರತಿಯಾಗಿಟ್ಟುಕೊಂಡು, ಪರಿಷ್ಕರಣಗಳನ್ನು ಸಿದ್ಧಗೊಳಿಸಿದೆಯಷ್ಟೆ; ಹೀಗೆ ಮಾಡುವಾಗ ಅಲ್ಲಿಯ ಗ್ರಂಥಪಾತಗಳನ್ನು ಮ ಪ್ರತಿಯಿಂದಲೋ ಅಥವಾ ಮತ್ತಾವುದಾದರೂ ವಿಶ್ವಾಸಾರ್ಹಪ್ರತಿಯಿಂದಲೋ ತುಂಬಿರುವುದು ಕಾಣುತ್ತದೆ. ಕ ಪ್ರತಿಯನ್ನು

ಆಧಾರವಾಗಿಟ್ಟುಕೊಂಡರೂ, ಇತರ ಎಲ್ಲ ಪ್ರತಿಗಳಲ್ಲಿಯೂ ಸಮಾನವಾಗಿ ದೊರೆಯುವ ಪದ್ಯಗಳನ್ನು ಮೂಲಪಾಠವಾಗಿ ಅಂಗೀಕರಿಸಿ, ಕೆಲವು ಪ್ರತಿಗಳಲ್ಲಿ ಮಾತ್ರವೇ ದೊರೆಯುವ ಪದ್ಯಗಳನ್ನು ಪ್ರಕ್ಷೇಪಗಳೆಂದು ಭಾವಿಸಿರುವುದು ಕಾಣುತ್ತದೆ. ಈ ಸಂಪಾದನ ತತ್ತ್ವದ ಸಾಧುತ್ವವನ್ನು ಇನ್ನೂ ಸವಿಮರ್ಶವಾಗಿ ಸಮರ್ಥಿಸಬೇಕಾಗಿದೆ; ಆದರೆ ಇರುವುದರಲ್ಲಿ ಇದು ಒಳ್ಳೆಯ ಕ್ರಮವೇ. ಹೀಗಿದ್ದೂ, ಕನ್ನಡ ಅಧ್ಯಯನ ಸಂಸ್ಥೆಯ ಆದಿಪರ್ವದ (೧೯೭೧) ಸಂಪಾದನೆಯಲ್ಲಿ ಈ ಕ್ರಮವನ್ನು ಏಕೆ ಕೈಬಿಟ್ಟಿದೆಯೋ ತಿಳಿಯದು. ಇದು ಕಾರಣವಾಗಿ, ಪೀಠಿಕಾಸಂಧಿಯ ೧೬ ಪದ್ಯಗಳ ಸ್ಥಾನದಲ್ಲಿ ಕ ಪ್ರತಿಯ ೧೦ ಪದ್ಯಗಳಷ್ಟೇ ಮೂಲಪಾಠವಾಗಿ ಅಂಗೀಕೃತವಾಗಿದ್ದು, ಸಂಪ್ರದಾಯ ಒಪ್ಪಿಕೊಂಡುಬಂದ ಉಳಿದ ಹಲವು ಹಸ್ತಪ್ರತಿಗಳಲ್ಲಿಯ ಪ್ರಚಲಿತಪದ್ಯಗಳ ಲೋಪದಿಂದ ಗಮಕಿಗಳಿಗೂ ಕಾವ್ಯಪ್ರೇಮಿಗಳಿಗೂ ನಿರಾಶೆಯುಂಟಾಗಿದೆ.

ಕಾಲದ ಪ್ರಾಚೀನತೆ, ಶುದ್ಧಪಾಠ, ಶಕಟರೇಫದ ಸರಿಯಾದ ಬಳಕೆ, ಸಂಕ್ಷೇಪ ಪಾಠ ಇವುಗಳ ದೃಷ್ಟಿಯಿಂದ ಕ ಪ್ರತಿಯ (ಕೆ. ೨೦೫) ಪ್ರಾಮಾಣ್ಯ, ಉಪಯುಕ್ತತೆ ಹೆಚ್ಚಿರುವುದು ನಿಜ. ಪರ್ವಗಳ ಆರಂಭ ಅಂತ್ಯಗಳಲ್ಲಿ ಕೆಲವು ಚಿತ್ರಗಳನ್ನು ಬರೆದಿರುವುದೂ ಈ ಪ್ರತಿಯ ಒಂದು ವಿಶೇಷ. ಕನ್ನಡ ಸಾಹಿತ್ಯ ಪರಿಷತ್ತಿನ ಕ್ರಿ. ಶ. ೧೫೩೨/೭೬ ರ ಹಸ್ತಪ್ರತಿಯೊಂದಿಗೆ ಇದನ್ನು ಗಾಢವಾಗಿ ತುಲನೆಮಾಡಿ ಪರಸ್ಪರ ಸಂಬಂಧವನ್ನು ಅವಶ್ಯವಾಗಿ ವಿಶದಪಡಿಸಬೇಕಾಗಿದೆ. ಇವುಗಳಿಗೆ ಭಿನ್ನ ಮಾತೃಕೆಗಳಿರುವುದು ವಿದಿತವಾಗಿ, ಪಾಠಸಾಮ್ಯವೂ ಗೋಚರವಾದರೆ ಕುಮಾರವ್ಯಾಸ ಭಾರತದ ಸಂಪಾದನೆಗೆ ಬೇರೊಂದು ನೆಲೆಗಟ್ಟನ್ನು ನಾವು ರೂಪಿಸಿಕೊಳ್ಳಬಹುದು. ಆಗ ಸಂಕ್ಷೇಪ ಮತ್ತು ಅಧಿಕಪಾಠಗಳ ಸಂದಿಗ್ಧತೆಯೂ ಕೊಂಚಮಟ್ಟಿಗೆ ಪರಿಹಾರವಾಗಬಹುದು. ಈ ಎರಡು ಪ್ರತಿಗಳ ಜೊತೆಗೆ, ಶಕಟರೇಫದ ಬಳಕೆಯಿರುವ ಪ್ರತಿಗಳನ್ನೂ ಸಾಮಾನ್ಯರೇಫವಿದ್ದೂ ಹಳೆಯವೂ ಶುದ್ಧವೂ ಆದ ಕೆಲವು ಪ್ರತಿಗಳನ್ನೂ ಈಚಿನದಾದರೂ ಪ್ರಾತಿನಿಧಿಕವಾದ ಗ ಪ್ರತಿಯಂತಹ (೧೮೪೧) ಒಂದೆರಡು ಪ್ರತಿಗಳನ್ನೂ ಒಗ್ಗೂಡಿಸಿ, ಪಾಠಸಂಕಲನ ಮಾಡಿ, ಇವನ್ನು ಕೃತಿಸಂಪಾದನೆಗೆ ಅಧಿಷ್ಠಾನವಾಗಿಟ್ಟುಕೊಳ್ಳುವುದು ಆಗ ಸಾಧ್ಯವಾದೀತು. ಉಳಿದ ಪ್ರತಿಗಳನ್ನು ಯಥೋಚಿತವಾಗಿ ಮಾತ್ರ ಆಗ ಬಳಸಬಹುದಾಗಿದೆ. ಗದುಗಿನ ಸುತ್ತಮುತ್ತ ಹಳೆಯ ಹಸ್ತಪ್ರತಿಗಳು ಹೊಸದಾಗಿ ದೊರೆಯುವುದಿದ್ದರೆ, ಹೆಚ್ಚಿನ ಪ್ರಯೋಜನವುಂಟೆಂದು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ಆ ಪ್ರಯತ್ನವೇ ಈವರೆಗೆ ಸರಿಯಾಗಿ ನಡೆದ ಹಾಗೆ ತೋರುವುದಿಲ್ಲ.

ಇತರ ಹಸ್ತಪ್ರತಿಗಳಲ್ಲಿ ನ ಪ್ರತಿಯ ಒಂದು ವಿಶೇಷವನ್ನಿಲ್ಲಿ ಹೇಳಬೇಕು. ಇಲ್ಲಿ ಆದಿಪರ್ವ ಪೂರ್ತಿ ಪ್ರತಿಸಂಧಿಯ ಆರಂಭದಲ್ಲಿ, ಆ ಪದ್ಯಗಳನ್ನು ವಾಚಿಸಲು ಸೂಕ್ತವೆಂದು ತೋರಿದ ರಾಗಗಳನ್ನು ಬರೆದಿರುವುದು ಕಾಣುತ್ತದೆ. ಇದು ಪ್ರಕ್ಷೇಪವೇ ಇದ್ದರೂ, ಇದರಿಂದ ಕುಮಾರವ್ಯಾಸ ಭಾರತದ ವಾಚನಸಂಪ್ರದಾಯ

ವೊಂದು ಹಿಂದಿನಿಂದ ಇದ್ದದು ತಿಳಿಯುತ್ತದೆ. ಈ ತೆರನ ಸೂಚನೆಗಳು ಕೆಲವು ವೀರಶೈವ ಗ್ರಂಥಗಳಲ್ಲಿಯೂ ಕಂಡುಬಂದಿವೆ. ಹಸ್ತಪ್ರತಿಗಳ ರೂಪದಲ್ಲಿರುತ್ತಿದ್ದ ಕುಮಾರವ್ಯಾಸ ಭಾರತ ಮುದ್ರಿತವಾಗತೊಡಗಿದ್ದು ೧೯ ನೆಯ ಶತಮಾನದ ಮಧ್ಯ ಭಾಗದಿಂದ. ಮಂಗಳೂರಿನ ಜರ್ಮನ್ ಮಿಶ್ಯನ್ ಪ್ರೆಸ್ ಕುಮಾರವ್ಯಾಸ ಭಾರತದ ಮೊದಲ ೪ ಪರ್ವಗಳನ್ನು ಕಲ್ಲಚ್ಚುಮುದ್ರಣ ಮಾಡಿಸಿ ಹೊರತಂದ ವರ್ಷವಾದ ೧೮೫೧, ಈ ಗ್ರಂಥದ ಮುದ್ರಣಕಾರ್ಯದ ಅಂಕುರಾರ್ಪಣೆಯ ವರ್ಷ. ಬಳಿಕ, ಬೆಂಗಳೂರಿನಲ್ಲಿದ್ದ ಹೊಳಕಲ್ಲು ನರಸಿಂಹಯ್ಯನವರ ವಿಚಾರದರ್ಪಣ ಮುದ್ರಾಕ್ಷರ ಶಾಲೆ ಮೊದಲೈದು ಪರ್ವಗಳನ್ನು ಕೂಡಿಸಿ, "ಕನ್ನಡ ಭಾರತದೊಳ್ ಆದಿಪಂಚಕವು" ಎಂಬುದನ್ನು ೧೮೬೫ ರಲ್ಲಿ ಹೊರತಂದಿತು. ಇದೇ ವರ್ಷ (೧೮೬೫) ಇದೇ ಮುದ್ರಾಕ್ಷರ ಶಾಲೆಯಿಂದ "ಕನ್ನಡ ಭಾರತ ದಶಪರ್ವ"ವನ್ನು ತಂದುದೇ ಈ ಗ್ರಂಥದ ಮೊದಲ ಸಮಗ್ರ ಪರಿಷ್ಕರಣವಾಯಿತು. ಮತ್ತೆ ಇದೇ ಮುದ್ರಾಕ್ಷರಶಾಲೆ ೧೮೬೫ ರಲ್ಲಿ "ಕನ್ನಡ ಭಾರತವು" ಪ್ರಕಟಿಸಿತು. ೧೮೭೭ ರಲ್ಲಿ ಸಿದ್ಧಾಂತಿ ಸುಬ್ರಹ್ಮಣ್ಯ ಶಾಸ್ತ್ರಿ ಮತ್ತು ಸ. ತಿರುವೇಂಕಟಾಚಾರ್ಯ ಇವರ ಸಂಯುಕ್ತಸಂಪಾದಕತ್ವದಲ್ಲಿ ಮದರಾಸಿನ ಸಂಸ್ಕೃತೀನಿಲಯ ಮುದ್ರಾಕ್ಷರಶಾಲೆ "ಕನ್ನಡ ಭಾರತ (ಆದಿ ಪಂಚಕವೂ, ಯುದ್ಧ ಪಂಚಕವೂ)" ಹೊರತಂದಿತು. ೧೮೮೦ ರಲ್ಲಿ ಮದರಾಸಿನ ಸರಸ್ವತೀ ವಿಲಾಸ ಮುದ್ರಾಕ್ಷರಶಾಲೆ "ಕರ್ಣಾಟ ಭಾರತ ಕಥಾಮಂಜರಿ" ಎಂಬ ನಿಜನಾಮ ದಲ್ಲಿ ಒಂದು ಸಚಿತ್ರ ಪರಿಷ್ಕರಣವನ್ನು ಸಿದ್ಧಪಡಿಸಿತು. ೧೮೮೭ ರಲ್ಲಿ ಸಿದ್ಧಾಂತಿ ಸುಬ್ರಹ್ಮಣ್ಯಶಾಸ್ತ್ರಿಗಳು ತಾತ್ಪರ್ಯಸಹಿತವಾಗಿ "ಯುದ್ಧಪಂಚಕವು" ಎಂಬುದನ್ನು ಸಂಪಾದಿಸಿ, ಶ್ರೀನಿವಾಸಕವಿ ರಚಿತ ಸ್ತ್ರೀಪರ್ವಸಹಿತವಾಗಿ ಬೆಂಗಳೂರಿನ ವೆಲನಾಡು ಬಿ. ಸುಬ್ಬಯ್ಯ ಅಂಡ್ ಸನ್ಸ್ ಅವರ ಮೂಲಕ ಪ್ರಕಟಿಸಿದರು. ಮುಂದಿನ ವರ್ಷವೇ ೧೮೮೮) ಬೆಂಗಳೂರಿನ ವಾಗೀಶ್ವರೀ ಮುದ್ರಾಕ್ಷರಶಾಲೆ "ಕನ್ನಡ ಮಹಾ ಭಾರತದಲ್ಲಿ ಪ್ರಥಮಾದಿ ದಶಪರ್ವಗಳು" ಎಂಬುದನ್ನು ಹೊರತಂದಿತು.

ಈವರೆಗೆ ೧೯ನೆಯ ಶತಮಾನದ ಉತ್ತರಾರ್ಧದಲ್ಲಿ ಪ್ರಕಟಗೊಂಡ ಕುಮಾರ ವ್ಯಾಸ ಭಾರತದ ಪರಿಷ್ಕರಣಗಳನ್ನು ಕುರಿತು ಹೇಳಿತಷ್ಟೇ! ಈಯುವಧಿಯಲ್ಲಿ ಬಿಡಿ ಯಾಗಿ ಪರ್ವಗಳು ಪ್ರಕಟವಾದುದೂ ಕಾಣುತ್ತದೆ. ೧೮೭೭ ರಲ್ಲಿ ವಿರಾಟಪರ್ವ ಉದ್ಯೋಗಪರ್ವಗಳು (ಸಂ. ಸಿದ್ಧಾಂತಿ ಸುಬ್ರಹ್ಮಣ್ಯಶಾಸ್ತ್ರಿ) ಮದರಾಸಿನ ಸರಸ್ವತೀ ವಿಲಾಸ ಮುದ್ರಾಕ್ಷರಶಾಲಾದಿಂದ, ೧೮೮೪ ರಲ್ಲಿ ವಿರಾಟಪರ್ವವು ಬಳ್ಳಾರಿಯ ಚಿ. ಅಪ್ಪಾಸಾಮಿ ಮೊದಲಿಯಾರ್ ಮೂಲಕ, ೧೮೮೭ ರಲ್ಲಿ ಇದೇ ಪರ್ವ ಮದರಾಸಿನ ಶಿವಲಿಂಗಂ ಶೆಟ್ಟಿಯವರ ಮೂಲಕ, ಅದೇ ವರ್ಷ(೧೮೮೭) ಭೀಷ್ಮಪರ್ವ ಸೇರಿ "ಕೃಷ್ಣಸಂಧಾನವು" ಬೊಂಬಾಯಿಯ ಭಾರತೀಪ್ರೆಸ್ ಮೂಲಕ ಬೆಳಕು ಕಂಡವು.

ಈಗ ೨೦ ನೆಯ ಶತಮಾನದ ಪರಿಷ್ಕರಣಗಳು : ೧೯೦೯ರಲ್ಲಿ ನಂಜನಗೂಡು

ಶ್ರೀಕಂಠಶಾಸ್ತ್ರಿಗಳು ಸಂಪಾದಿಸಿ, ಮೈಸೂರಿನ ಶ್ರೀವಾಣೀವಿಲಾಸ ಬುಕ್‌ಡಿಪೋ ಹೊರ ತಂದ "ಕನ್ನಡ ಮಹಾಭಾರತ, ದಶಪರ್ವ" ಈ ಸರಣಿಯನ್ನು ಆರಂಭಿಸಿದಂತೆ ತೋರುತ್ತದೆ. ೧೯೧೬ರಲ್ಲಿ ಬೆಂಗಳೂರು ವಾಜಪೇಯಂ ಗೋವಿಂದಯ್ಯನವರ "ಕನ್ನಡ ಮಹಾಭಾರತ ದಶಪರ್ವವು", ಟಿ. ಎನ್. ಕೃಷ್ಣಯ್ಯಶೆಟ್ಟರ ಬುಕ್‌ಡಿಪೋ ೧೯೨೫ ರಲ್ಲಿ ಹೊರತಂದ ತಿಮ್ಮಣ್ಣನ ಭಾರತವೂ ಸೇರಿದಂತೆ ಅಷ್ಟಾದಶ ಪರ್ವಗಳು, ೧೯೨೮ ರಲ್ಲಿ ಭಾರತೀ ಸಂಪಂಗಿರಾಮು ಅವರು ಸಂಪಾದಿಸಿ ಬೆಂಗಳೂರಿನ ಸರಸ್ವತೀ ರತ್ನಾಕರ ಬುಕ್‌ಡಿಪೋ ಪ್ರಕಟಿಸಿದ "ಶ್ರೀಮನ್ಮಹಾಭಾರತ ದಶಪರ್ವವು", ೧೯೩೬ ರಲ್ಲಿ ಬೆಂಗಳೂರಿನ ಚಿಕ್ಕಪೇಟೆ ಬುಕ್‌ಡಿಪೋ ಹೊರತಂದ ಇದೇ ಶೀರ್ಷಿಕೆಯ ಮತ್ತೊಂದು ಪರಿಷ್ಕರಣ ಹೊರಬಂದ ಮೇಲೆ ಈ ಗ್ರಂಥದ ಪೇಟೆಮುದ್ರಣಗಳ ಯುಗ ಬಲು ಮಟ್ಟಿಗೆ ಮುಗಿದಂತೆ ತೋರುತ್ತದೆ. "ಮಹಾಭಾರತದ ಆದಿಪರ್ವದೊಳಗಣ ಜತುಗೃಹ ಪರ್ವವು" (೧೯೧೫) ಬೆಂಗಳೂರು ನವರತ್ನ ಅಂಡ್ ಸನ್ಸ್ ಅವರಿಂದಲೂ, "ಮಹಾಭಾರತದೊಳಗಿನ ಸಂಭವ ಪರ್ವ" (೧೯೨೦) ಬಿ. ಕೃಷ್ಣಪ್ಪನವರಿಂದ ಸಂಪಾದಿತವಾಗಿ ಮೈಸೂರಿಂದಲೂ ಪ್ರಕಟವಾದ ಬಿಡಿಭಾಗಗಳ ಪ್ರಕಟನೆಯನ್ನೂ ಇಲ್ಲಿಯೇ ಹೇಳಿ ಮುಗಿಸಿ ಬಿಡಬಹುದು.

ಮೈಸೂರು ವಿಶ್ವವಿದ್ಯಾನಿಲಯದ ಓರಿಯೆಂಟಲ್ ಲೈಬ್ರರಿ ಹಾಕಿಕೊಂಡ ಯೋಜನೆಯನ್ವಯ ಕುಮಾರವ್ಯಾಸ ಭಾರತದ ಪರ್ವಗಳು "ಕರ್ಣಾಟಕ ಮಹಾಭಾರತ"ದ ಭಾಗಗಳಾಗಿ೧೯೧೨ ರಿಂದ ಒಂದು ರೀತಿಯಲ್ಲಿ ವ್ಯವಸ್ಥಿತವಾಗಿ ಬರತೊಡಗಿದುವು. ಆದಿಪರ್ವದ ಮೊದಲ ಭಾಗವಾಗಿ ಸಂಭವ ಪರ್ವ (೧೯೧೨), ಎರಡನೆಯ ಭಾಗವಾಗಿ ಜತುಗೃಹಾದಿ ಪರ್ವಗಳು (೧೯೧೩), ಸಭಾಪರ್ವ (೧೯೧೫), ಅರಣ್ಯಪರ್ವ (೧೯೧೮) ಇವು ಪಂಡಿತ ವಿ. ಶ್ಯಾಮಾಚಾರ್ಯರಿಂದ, ವಿರಾಟಪರ್ವ (೧೯೨೦), ಉದ್ಯೋಗಪರ್ವ (೧೯೨೨) ಇವು ಡಾ. ಆರ್. ಶ್ಯಾಮಶಾಸ್ತ್ರಿಗಳಿಂದ ಸಂಪಾದಿತವಾದವು. ಇಲ್ಲಿಗೆ ಆದಿಪಂಚಕ ಮುಗಿಯಿತು. ಬಳಿಕ ಪ್ರಾಚ್ಯಕೋಶಾಗಾರದ ಕಾರ್ಯನಿರ್ವಾಹಕ ಸಮಿತಿ ಸಂಪಾದಕ ಮಂಡಲಿಯೊಂದನ್ನು ನಿಯೋಜಿಸಿ, ಯುದ್ಧಪಂಚಕದ ಜವಾಬ್ದಾರಿಯನ್ನು ಅದಕ್ಕೆ ಒಪ್ಪಿಸಿತು. ಡಿ. ಶ್ರೀನಿವಾಸಾಚಾರ್–ಡಿ.ಎಲ್. ನರಸಿಂಹಾಚಾರ್ ಅವರಿಂದ ಭೀಷ್ಮಪರ್ವವೂ (೧೯೩೩), ಎಂ. ಎಸ್. ಬಸವಲಿಂಗಯ್ಯ–ಎನ್. ಅನಂತರಂಗಾಚಾರ್ ಅವರಿಂದ ದ್ರೋಣಪರ್ವವೂ (೧೯೩೬), ಎನ್. ಅನಂತರಂಗಾಚಾರ್ ಅವರಿಂದ ಕರ್ಣಪರ್ವ (೧೯೪೦) ಮತ್ತು ಶಲ್ಯಗದಾಪರ್ವಗಳೂ (೧೯೪೩) ಸಂಪಾದಿತವಾದವು. ಹೀಗೆ ಯುದ್ಧಪಂಚಕದ ಕೆಲಸ ಮುಗಿಯಿತು. ಇಲ್ಲಿಗೆ ೧೯೧೨–೪೩ ರ ನಡುವೆ, ಎಂದರೆ ೩೦ ವರ್ಷಗಳ ಅವಧಿಯಲ್ಲಿ, ೧೦ ಪರ್ವಗಳ ಕುಮಾರವ್ಯಾಸ ಭಾರತ ವಿಶ್ವವಿದ್ಯಾನಿಲಯದ ವಿದ್ವಾಂಸರ ಪರಿಶ್ರಮದ ಫಲವಾಗಿ ಹೊಸ ಆಕಾರ, ಹೊಸ ರೀತಿಯ ಸಂಪಾದನೆಗಳ ಪ್ರಯೋಜನವನ್ನು ಪಡೆದುಕೊಂಡಿತು.

ಅನಂತರದಲ್ಲಿ ತುಂಬ ಅತೃಪ್ತಿಕರವಾಗಿ ಸಂಪಾದಿತವಾಗಿದ್ದ ಆದಿ ಪಂಚಕ
ಪುನಸ್ಸಂಪಾದಿತವಾದುದನ್ನೂ, ತೃಪ್ತಿಕರವಾಗಿದ್ದ ಯುದ್ಧಪಂಚಕ ಪುನರ್ಮುದ್ರಿ
ವಾದುದನ್ನೂ ನಾವು ಗಮನಿಸುತ್ತೇವೆ. ಹೀಗೆ ಪುನಸ್ಸಂಪಾದಿತವಾದುದರ ವಿವ
ವೆಂದರೆ : ಕೆ. ಆರ್. ಶೀಷಗಿರಿಯವರು ಆದಿಪರ್ವವನ್ನು (೧೯೭೧, ೭೮), ಎಸ್
ಬಸಪ್ಪನವರು ಸಭಾಪರ್ವವನ್ನು (೧೯೭೧), ಸಿ. ಪಿ. ಕೃಷ್ಣಕುಮಾರ್ ಅವರು
ಅರಣ್ಯಪರ್ವವನ್ನು (೧೯೭೬), ಎಸ್. ಎನ್. ಕೃಷ್ಣಜೋಯಿಸರು ವಿರಾಟ ಮತ್ತು
ಉದ್ಯೋಗಪರ್ವಗಳನ್ನು (೧೯೭೫, ೧೯೫೫) ಸಂಪಾದಿಸಿ, ಉದ್ಯೋಗಪರ್ವ
ಹೊರತಾಗಿ ಉಳಿದುವೆಲ್ಲ ಕನ್ನಡ ಅಧ್ಯಯನ ಸಂಸ್ಥೆಯ ಮೂಲಕ ವ್ಯವಸ್ಥಿತವಾಗಿ
ಹೊರಬಂದುವು. ಹೀಗೆಯೇ ಪುನರ್ಮುದ್ರಿತಗೊಂಡ ಯುದ್ಧಪಂಚಕದ ವಿವ
ವೆಂದರೆ: ಭೀಷ್ಮಪರ್ವ – ಸಂ. ಡಿ. ಎಲ್. ನರಸಿಂಹಾಚಾರ್ (೧೯೫೦), ದ್ರೋಣ
ಪರ್ವ – ಸಂ. ಎನ್ ಅನಂತರಂಗಾಚಾರ್ (೧೯೫೧, ೭೮, ೭೧), ಕರ್ಣಪರ್ವ –
ಸಂ. ಎನ್. ಅನಂತರಂಗಾಚಾರ್ (೧೯೫೨, ೬೯, ೭೦), ಶಲ್ಯಗದಾಪರ್ವಗಳು –
ಸಂ. ಎನ್. ಅನಂತರಂಗಾಚಾರ್ (೧೯೪೭, ೭೦).

"ಕರ್ಣಾಟಭಾರತ ಕಥಾಮಂಜರಿ" ಎಂಬ ನಿಜನಾಮದೊಂದಿಗೆ ೧೯೫೮ರಲ್ಲಿ
ಮೈಸೂರು ಸಂಸ್ಥಾನದ (ಇಂದಿನ ಕರ್ನಾಟಕ) ಸಾಹಿತ್ಯ ಮತ್ತು ಸಂಸ್ಕೃತಿ ಅಭಿವೃದ್ಧಿ
ಇಲಾಖೆ ದಶಪರ್ವಗಳ ಕುಮಾರವ್ಯಾಸ ಭಾರತವನ್ನು ಒಂದು ಸಂಪುಟವಾಗಿ ಹೊ
ರೀತಿಯಲ್ಲಿ ಪ್ರಕಟಿಸಿದ್ದು, ಈ ಗ್ರಂಥದ ಪ್ರಕಟನೆಯಲ್ಲಿ ಒಂದು ಮುಖ್ಯವಾದ ಘಟ್ಟ
ವೆಂದು ಹೇಳಬಹುದು. ಈ ಪರಿಷ್ಕರಣದ ಸಂಪಾದಕರು ಕುವೆಂಪು ಮತ್ತು ಮಾಸ್ತಿ
ವೆಂಕಟೇಶ ಅಯ್ಯಂಗಾರ್ ಅವರು ಕಡಿಮೆಬೆಲೆಯಲ್ಲಿ (ಪ್ರತಿಗೆ ೨ ರೂ) ಹೆಚ್ಚು
ಪ್ರತಿಗಳನ್ನು ಮುದ್ರಿಸಿದ್ದು (೪೦,೦೦೦), ಈ ಗ್ರಂಥದ ಪ್ರಚಾರವೂ ವ್ಯಾಸಂಗವು
ಹೆಚ್ಚುವುದಕ್ಕೆ ಅವಕಾಶ ಮಾಡಿತು. ಈಚೆಗೆ ಮೈಸೂರು ವಿ.ವಿ. ಪ್ರಸಾರಾಂಗದಿಂ
ಎರಡು ಸಲ (೧೯೭೪, ೮೪), ಮೊದಲನೆಯ ವಿಶ್ವಕನ್ನಡ ಸಮ್ಮೇಳನ ಸಂದರ್ಭದಲ್ಲಿ
ಒಂದು ಸಲ (೧೯೮೫), ಹೀಗೆ ಇದರ ೩ ಪುನರ್ಮುದ್ರಣಗಳಾಗಿವೆ.

ಪೂರ್ವೋಕ್ತ ಪರಿಷ್ಕರಣಗಳ ವಿಚಾರವಾಗಿ ಈಗ ಕೆಲವು ಮಾತುಗಳನ್ನು ಹೇ
ಬಹುದು :

ಮಂಗಳೂರಿನ ಕಲ್ಲಚ್ಚುಪ್ರತಿಯು ಯಾವ ಹಸ್ತಪ್ರತಿಯನ್ನು ಆಧರಿಸಿ ಸಿದ್ಧವಾ
ದೆಯೋ, ಸೂಚನೆಗಳೇನೂ ಇಲ್ಲದಿರುವುದರಿಂದ, ತಿಳಿಯುವ ಹಾಗಿಲ್ಲ. ಕನ್ನ
ಅಧ್ಯಯನ ಸಂಸ್ಥೆಯು ಈ ಪ್ರತಿಯನ್ನು (ಕೆ. ೨೦೫) ಇದು ಹೋಲುವುದೆಂಬ ಸೂಚ
ವ್ಯಕ್ತವಾಗಿದ್ದು (೧೯೫೮ರ ಜನಪ್ರಿಯ ಆವೃತ್ತಿ) ಇಲ್ಲಿಯೂ ಅಲ್ಲಿಯೂ ಕಡಿಮೆ
ಪದ್ಯಗಳು ಒಂದೊಂದು ಸಂಧಿಯಲ್ಲಿ ಕಂಡುಬರುವುದರಿಂದ ಈ ಮಾತು ನಿಜವಿ
ಬಹುದು. ಈ ಕಲ್ಲಚ್ಚುಪ್ರತಿಯನ್ನು ಇತರ ಪ್ರಚಲಿತಪ್ರತಿಗಳೊಂದಿಗೆ ಹೋಲಿ
ದರೂ ಈ ಮಾತು ನಿಲ್ಲುವಂತೆ ತೋರುತ್ತದೆ. ೧೮೭೫ ರ ಪರಿಷ್ಕರಣದ ಸಿದ್ಧತೆಯು

ಈ ಕಲ್ಲಚ್ಚು ಪ್ರತಿ ನೆರವಾಗಿರಬಹುದಾದರೂ, ಮೊದಲ ಸಲ ಓಲೆಯ ಹಸ್ತಪ್ರತಿ ಮಾತೃಕೆಯಾಗಿ ಇದು ಸಿದ್ಧವಾಗಿರಬೇಕು. ತೆಲುಗು ಅಕ್ಷರಗಳು ಮಿಶ್ರಣಗೊಂಡು ಸಿದ್ಧವಾದ ಯುದ್ಧಪಂಚಕದ ಮುಖಪುಟದಲ್ಲಿ "ಪಂಡಿತರಿಂದ ಪರಿಷ್ಕರಿಸಲ್ಪಟ್ಟು" ಎಂದು ಜಾಹೀರಾಗಿರುವುದು, ಅದನ್ನೇ ಸೂಚಿಸುತ್ತಿರಲೂ ಬಹುದು. ಅನಂತರದ ಕೆಲವು ಪ್ರಚಲಿತ ಪ್ರತಿಗಳಿಗೆ ೧೮೫೧ ರ ಸಂಕ್ಷಿಪ್ತಪ್ರತಿಗಿಂತ ೧೮೬೫ ರ ವಿಸ್ತೃತ ಪ್ರತಿಯೇ ಮುಖ್ಯ ಆಧಾರವಾಗಿ, ಅದೇ ಮುಂದಿನ ಎಲ್ಲ ಪ್ರಚಲಿತ ಮುದ್ರಿತಪ್ರತಿಗಳಿಗೂ ಕವಿಪಾಠವಾಗಿ ಪರಿಣಮಿಸಿದಂತೆ ತೋರುತ್ತದೆ. ಇಂದಿಗೆ ಕೂಡ ಹೆಚ್ಚು ಪ್ರಚಾರದಲ್ಲಿರುವ ಸಾಮಾನ್ಯ, ಜನಪ್ರಿಯ ಕವಿಪಾಠ ಸಿದ್ಧವಾದುದು ಬಹುಶಃ ಹೀಗೆ. ಆದರೆ ೧೮೬೫ ರ ಪರಿಷ್ಕರಣಕರ್ತರ ಹೆಸರು ಮಾತ್ರ ಕಾಲಗರ್ಭದಲ್ಲಿ ಹುದುಗಿ ಹೋಗಿದೆ.

ಒಂದಾನೊಂದು ಪ್ರಚಲಿತ ಪ್ರತಿಯಲ್ಲಿ "ಪೂರ್ವದ ಪ್ರೆಂಟೇಡು ಪುಸ್ತಕಗಳಿಗಿಂತಲೂ ಜಾಸ್ತಿಯಾಗಿ ಹಾಕಿರುವದು ವುದ್ಯೋಗ ಪರ್ವದಲ್ಲಿ ೮ನೇ ಸಂಧಿಯಲ್ಲಿ ೩೫ ಪದದ ಲಾಗಾಯಿತು ೬೧ ಪದದ ವರಿವಿಗೂ ಅಸ್ಥಿನ್ಯಾದಿ ಸ್ತ್ರೀಗಳ ವರ್ಣನೆಯು ಮತ್ತೆ ಅದೇ ಸಂಧಿಯಲ್ಲಿ ೭ನೇ ಪದದ ಲಾಗಾಯಿತು ೭೫ ನೇ ಪದದ ವರಿವಿಗೂ ಶ್ರೀ ಕೃಷ್ಣಮೂರ್ತಿ ದುರ್ಯೋಧನನ ಆಸ್ಥಾನಕ್ಕೆ ಬಂದ ವರ್ಣನೆಯೂ ಕೆಲವು ಕಡೆ ಬಿಟ್ಟು ಯಿದ್ದ ಗ್ರಂಥಗಳನ್ನು ಶೇರಿಸಿ ಪರಿಶೋಧಿಸಲ್ಪಟ್ಟಿರುತ್ತೆ"—ಎಂಬುದಾಗಿ ಹೇಳಿದ್ದರೂ, ನಾನು ಗಮನಿಸಿದ ನಾಲ್ಕೈದು ಪ್ರಚಲಿತ ಪ್ರತಿಗಳಲ್ಲಿಯೂ ಉದ್ಯೋಗ ಪರ್ವದಲ್ಲಿ ಒಂದೇ ಬಗೆಯಾಗಿ ೧೧ ಸಂಧಿ ೬೭೩ ಪದ್ಯಗಳೇ ಇವೆ. ಇದರಿಂದ ಶ್ರುತವಾಗುವ ಒಂದು ಮುಖ್ಯವಾದ ವಿಚಾರವೆಂದರೆ, ಈ ಪ್ರಚಲಿತ ಪ್ರತಿಗಳು ಎಂದರೆ ಪೇಟೆ ಅಥವಾ ಅಂಗಡಿಮುದ್ರಣಗಳು ಒಂದು ಗುಂಪಾಗಿ ವ್ಯವಸ್ಥೆಗೊಳ್ಳುವುದು. ಸ್ವಲ್ಪ ಹೋಲಿಸಿ ನೋಡಿದರೆ, ಪರ್ವ ಮತ್ತು ಸಂಧಿಗಳ ಪದ್ಯಸಂಖ್ಯೆಯಲ್ಲಿ ಮಾತ್ರವೇ ಅಲ್ಲದೆ, ಗ್ರಂಥಪಾಠದಲ್ಲಿಯೂ ಒಂದು ತೆರನ ಐಕ್ಯವನ್ನೇ ಕಾಣುತ್ತೇವೆ. ಸಂಯೋಜಕ ಸ್ವಾಲಿತ್ಯಗಳ ಮೂಲಕ ಇದನ್ನು ಮನಗಾಣಬಹುದು. ವಿಶಿಷ್ಟಸ್ಖಾಲಿತ್ಯಗಳಿಗೇನೂ ಕೊರತೆಯಿಲ್ಲ. ಐಕ್ಯವನ್ನು ಒಂದೆರಡು ಉದಾಹರಣೆಗಳ ಮೂಲಕ ಇಲ್ಲಿ ವಿಶದಪಡಿಸಬಹುದಾಗಿದೆ.

ಸುಸಂಪಾದಿತವಾದ ಉದ್ಯೋಗಪರ್ವ (ಸಂ. ಎಸ್.ಎನ್. ಕೃಷ್ಣಜೋಯಿಸ್) ದಿಂದ, ಒಂದು ಪದ್ಯ (ಸಂ. ೩-ಪ. ೪೬).

> ಬಿಸುಟು ಕಳೆವುದು ನೀತಿಶಾಸ್ತ್ರವ । ನುಸಿರದಾಚಾರಿಯನ ವೇದ
> ಪ್ರಸರವಿಲ್ಲದ ಋತ್ವಿಜನ ರಕ್ಷಿಸದ ಭೂಭುಜನ
> ಒಸೆಯದಬಲೆಯನೂರೊಳಾಡುವ। ಪಶುವ ಕಾಯ್ವನನಡವಿಗುಱಿಯಹ
> ನುಸಿಯು ನಾ [ಪಿತ] ನಿಂತಜುವರನು ರಾಯ ಕೇಳೆಂದ ॥

ಈ ಪದ್ಯವು ಅಲ್ಲಲ್ಲಿ ಪಾಠಭೇದಗಳಿಂದ ಕೂಡಿದೆ. "ನೀತಿ" ಎಂಬೆಡೆಗೆ

"ಧರ್ಮ" (ಖ. ಝ. ಟ. ಬ), "ವೇದ" (ಗ. ಡ), "ಋತ್ವಿಜನ ರಕ್ಷಿಸದ" ಎಂಬೆಡೆಗೆ "ದ್ವಿಜನ ರಕ್ಷಿಸದಿರ್ಪ" (ಗ. ಜ. ಡ. ಪ. ಯ), "ಕಾಯ್ವನ" ಎಂಬೆಡೆಗೆ "ಕಾವವ" (ಖ. ಚ. ಟ. ಬ), "ಕಾವನ" (ಗ. ಠ. ಡ.), "ಕೊಲುವನ (ಣ. ಯ. ರ.) "ಗುಱಿಯಹ ನುಸಿಯನಾ [ಪಿತ] ನಿಂತಱುವರನು ರಾಯ" ಎಂಬೆಡೆಗೆ "ಗುಱಿಯಹ ನುಸಿಗದಾಯಿಗನನಿಂತಱುವರನು ರಾಯ" (ಖ), "ಯೊಳಹರ್ನಿಶಿಯೊಳಾಡುವ ನರನನೆಲೆ ಧೃತರಾಷ್ಟ್ರ" (ಗ,ಡ,ಣ,ಯ), "ಯೊಳಗಿಹ ನಿಶಿಯೊಳಾಡುವನಾವನೆಲೆ ಧೃತರಾಷ್ಟ್ರ" (ಜ,ಯ), "ಗುಱಿಯಹ ನುಸಿಯದಾಳ್ದನ ಬಿಡುವುದೈ ಭೂಪಾಲ" (ಟ), "ಯೊಳು ಹಮ್ಮಿಸದಲಾಡುವ ನಾಸ್ತಿಕರನೆಲೆ ಭೂಪ" (ನ), "ಗುಱಿಯಹ ನುಸಿಯಲಾಯಿವರಿಂತಱುವರನು ರಾಯ" (ಬ)–ಹೀಗೆ ಪಾಠಾಂತರಗಳು ಕಂಡು ಬರುತ್ತವೆ.

ಈ ಪದ್ಯದ ಪಾಠ ನಾನು ಗಮನಿಸಿರುವ ನಾಲ್ಕೈದು ಪೇಟೆಮುದ್ರಣಗಳಲ್ಲಿ ಈ ರೀತಿಯಾಗಿದೆ:

ಬಿಸುಟು ಕಳವುದು ನೀತಿಶಾಸ್ತ್ರವ । ನುಸುರದಾಚಾರಿಯನ ವೇದ
ಪ್ರಸರವಿಲ್ಲದ ಋಷಿಜನವ ರಕ್ಷಿಸದ ಭೂಭುಜನ
ಒಸೆಯದಬಲೆಯನೂರೊಳಾಡುವ । ಪಶುವ ಕಾಯ್ದನನಡವಿಗುರಿಯಹ
ನುಸಿಯೆ ನಾಪಿಕನಿಂತರುವರನು ರಾಯ ಕೇಳೆಂದ ॥

ಕೆಲವು ಅಲಕ್ಷಿಸಬಹುದಾದ ಮುದ್ರಣಸ್ಖಾಲಿತ್ಯಗಳನ್ನು ಬಿಟ್ಟರೆ, ಈ ಪಾಠಸಾಮ್ಯ ಪೇಟೆಮುದ್ರಣಗಳನ್ನೆಲ್ಲ ಒಂದು ಗುಂಪು ಮಾಡುತ್ತದೆ (೧೯೦೯ರ ಒಂದು ಪ್ರತಿಯಲ್ಲಿ "ನಾಪಿಕ" ಎಂಬೆಡೆಯಲ್ಲಿ ಸರಿರೂಪವಾದ "ನಾಪಿತ" ಎಂಬುದೇ ಇದೆ). ಇತ್ತೀಚಿನ ಸಂಪಾದಿತ ಜನಪ್ರಿಯ ಆವೃತ್ತಿಯಲ್ಲಿಯೂ (೧೯೫೮, ೭೪) ಒಂದು ತಪ್ಪು ಪದಚ್ಛೇದದ (ನಾಪಿತ–ನಾ ಪಿತ) ಹೊರತು ಇದೇ ಪಾಠವೇ ಕಂಡುಬರುತ್ತದೆ. ಗಮನಿಸಬೇಕಾದ ಸಂಗತಿಯೆಂದರೆ, ಪೂರ್ವೋಕ್ತವಾದ ೧೪ ಹಸ್ತಪ್ರತಿಗಳಲ್ಲಿರುವುದಕ್ಕಿಂತ ಬೇರೆಯಾದ ಪಾಠಗಳು ("ಋಷಿಜನ" "ಕಾಯ್ದನ") ಈ ಗುಂಪಿನಲ್ಲಿ ತೋರುತ್ತಿರುವುದು. ಹಾಗಾದರೆ ಪ್ರಚಲಿತ ಪ್ರತಿಗಳಿಗೆ ಬಹುಶಃ ಆಧಾರವಾಗಿರಬಹುದಾದ ಪ್ರಾಚೀನತಮ ಮುದ್ರಿತಪ್ರತಿಗೆ ಮಾತೃಕೆ ಬೇರೆಯೇ ಇರಬಹುದೇ, ಇದ್ದರೆ ಆ ಪ್ರತಿ ಯಾವುದು? ಇದರ ಶೋಧ ಕುಮಾರವ್ಯಾಸ ಭಾರತದ ಸವಿಮರ್ಶ ಪರಿಷ್ಕರಣಕ್ಕೆ ಅತ್ಯವಶ್ಯವಾಗಿ ಬೇಕಾದುದು.

ಇನ್ನೊಂದು ಪದ್ಯವನ್ನು ಸಹ ಇದೇ ಪರ್ವದಿಂದ ಗಮನಿಸಬಹುದು (ಸಂ. ೧೦–ಪ. ೨೩):

ಮಸೆದುದಿತ್ತಂಡಕ್ಕೆ ಮತ್ಸರ । ವಶವುಸಂಗರವೀಗ ನೀತಿಯ
ನುಸಿರಿವಡೆ ಮನಗಾಣನೇ ಕೌರವಮಹೇಶ್ವರನು
ವಿಷಮನದ ಕಟ್ಬಾಳು ಮಂತ್ರವ । ನೆಸಗಲಾಗದು ತನ್ನ ವೀರಕೆ
ಮುಸುಕಹುದು ಮುರವೈರಿ ಸಂಧಿಯನಱಿಯೆ ನಾನೆಂದ ॥

ಈ ಪದ್ಯದಲ್ಲಿ, "ನೀತಿಯು" ಎಂಬೆಡೆಗೆ "ಸಂಧಿಯು" (ಗ.ಟ.ಡ.ದ.ನ.ಪ), "ವಿಷಮನದ" ಎಂಬೆಡೆಗೆ "ವಿಷಮವಹ" (ಗ.ಟ), ವಿಶಸನದ (ಠ ಡ.ಣ.ನ.ಪ), "ಮಸುಳಹುದು" ಎಂಬೆಡೆಗೆ "ನುಸುಳಹುದು" (ಟ.ಡ.ಣ.ಪ.ಬ) ಹೀಗೆ ಪಾಠಾಂತರಗಳಿವೆ.

ಈ ಪದ್ಯದ ಪಾಠ ನಾನು ಗಮನಿಸಿರುವ ನಾಲ್ಕೈದು ಪೇಟೆ ಮುದ್ರಣಗಳಲ್ಲಿಯೂ ಕೆಲವು ಅಲಕ್ಷಿಸಬಹುದಾದ ಮುದ್ರಣಸ್ಖಾಲಿತ್ಯಗಳನ್ನು ಬಿಟ್ಟರೆ, ಈ ಮುಂದೆ ಉದ್ಧರಿಸಿರುವ ರೀತಿಯಲ್ಲಿಯೇ ಇದೆ:

ಮಸೆದುದಿತ್ತಂಡದಲಿ ಮತ್ಸರ। ಪಸರಿಸಿತು ತಾನೀಗ ನೀತಿಯ
ನುಸುರಿದರೆ ಮನಗಾಣನೇ ಕೌರವಮಹೀಶ್ವರನು
ವಿಷಮವದು ಕಟ್ಟಾಳು ಮಂತ್ರದೊ। ಳೆಸಗಲಾಗದು ತನ್ನ ವೀರತೆ
ನಸುಳಹುದು ಮುರವೈರಿ ಸಂಧಿಯನರಿಯೆ ನಾನೆಂದ ॥

ಇಲ್ಲಿಯಾದರೂ ೯ ಹಸ್ತಪ್ರತಿಗಳ ಪಾಠಕ್ಕಿಂತ ಭಿನ್ನವಾಗಿರುವ ಈ ಪದ್ಯಪಾಠ, ಪೇಟೆ ಮುದ್ರಣಗಳನ್ನೆಲ್ಲ ಒಂದು ಗುಂಪುಮಾಡಿ, ಅವುಗಳ ಮಾತೃಕೆಯ ಬಗೆಗೆ ಕುತೂಹಲವುಂಟುಮಾಡುತ್ತದೆ.

ಹೀಗೆಯೇ ಡಿ. ಎಲ್. ನರಸಿಂಹಾಚಾರ್ಯರು "ಲಿಪಿಕಾರರ ತಿದ್ದುಪಡಿಗಳು" ಎಂಬುದಾಗಿ ತೋರಿಸಿರುವ ಉದಾಹರಣೆಗಳ ಕ್ಲಿಷ್ಟಪಾಠಗಳೆಲ್ಲ ಸರಳಪಾಠಗಳಾಗಿ ಸಮಾನರೂಪದಲ್ಲಿ ಈ ಎಲ್ಲ ಪ್ರಚಲಿತಪ್ರತಿಗಳಲ್ಲಿಯೂ ಕಂಡುಬರುತ್ತಿರುವುದನ್ನು ಇಲ್ಲಿ ಹೇಳಬೇಕು. ಪಾಠಗ್ರಂಥಿಗಳೂ ಹಾಗೆಯೇ ಸಮಸ್ಯೆಗಳಾಗಿ ಇಲ್ಲಿ ಕಂಡುಬರುತ್ತವೆ. ಈ ಗುಂಪಿನ ಎಲ್ಲ ಪ್ರತಿಗಳಲ್ಲಿಯೂ ಆದಿಪರ್ವದ ಪೀಠಿಕಾಸಂಧಿಯಲ್ಲಿ ೧೬ ಪದ್ಯಗಳೇ ಇವೆ. ಇವುಗಳನ್ನು ಒಗ್ಗೂಡಿಸುವ ಕೆಲವು ಅನ್ಯಸಾಕ್ಷ್ಯಗಳೆಂದರೆ, ಸಂಪಾದನೆಯ ಅಭಾವ, ಪಾಠಾಂತರಗಳನ್ನು ಸೂಚಿಸದಿರುವುದು, ಱಕಾರವನ್ನು ಅಲಕ್ಷಿಸಿರುವುದು, ಸೂಕ್ತ ಪದಚ್ಛೇದಗಳಿಲ್ಲದೆ ಪದ್ಯಗಳನ್ನು ಅನುಸ್ಯೂತವಾಗಿ ಅಚ್ಚುಮಾಡಿರುವುದು, ಸಾಮಾನ್ಯವಾಗಿ ಒಂದೇ ಆಕೃತಿಯ ಪುಸ್ತಕವಾಗಿ ಮುದ್ರಿಸಿರುವುದು ಎನ್ನಬಹುದು.

ಮೈಸೂರು ಸರ್ಕಾರದ ಪ್ರಾಚ್ಯಕೋಶಾಗಾರದಲ್ಲಿ ಕುಮಾರವ್ಯಾಸಭಾರತದ ಪರ್ವಗಳ ಪ್ರಕಟನೆಯ ಸರಣಿ ೧೯೧೩ ರಲ್ಲಿ ತೊಡಗಿತು. ಮೊದಲ ಮೂರು ಪರ್ವಗಳನ್ನು ಸಂಪಾದಿಸಿದ ವಿ. ಶ್ಯಾಮಾಚಾರ್ಯರು ಆದಿಪರ್ವದ ಮೊದಲ ಸಂಪುಟದ ಅವತರಣಿಕೆಯಲ್ಲಿ, ಕೋಶಾಗಾರದ ಹಸ್ತಪ್ರತಿಗಳನ್ನು ಪ್ರಚಲಿತ ಮುದ್ರಿತಪ್ರತಿಗಳನ್ನು ಹೋಲಿಸಿ ನೋಡುವಾಗ, ಮುದ್ರಿತ ಪ್ರತಿಗಳಲ್ಲಿ "ಕವಿರಚಿತ ಗ್ರಂಥವು ಸಂಪೂರ್ಣವಾಗಿ ಪ್ರಕಟವಾಗಿರುವುದಿಲ್ಲ" ಎಂಬುದರಿಂದಾಗಿ ಹೊಸ ಪರಿಷ್ಕರಣದ ಯೋಜನೆಗೆ ತೊಡಗಿತು ಎಂದಿದ್ದಾರೆ. ಅಲ್ಲದೆ ಕೆಲವು ಪರ್ವಗಳಲ್ಲಿ ಮುದ್ರಿತ ಪ್ರತಿಗಳಲ್ಲಿರುವುದಕ್ಕಿಂತ ಹಸ್ತಪ್ರತಿಗಳಲ್ಲಿ ಹೆಚ್ಚಿನ ಸಂಧಿಗಳುಂಟೆಂದೂ ಸಂಧಿಗಳಲ್ಲಿ

ಮಾತ್ರವಲ್ಲದೆ ಅವುಗಳಲ್ಲಿಯೂ ಪದ್ಯಗಳ ಸಂಖ್ಯೆಯಲ್ಲಿ ಸಹ ವ್ಯತ್ಯಾಸಗಳುಂಟೆಂದೂ ಗಮನಿಸಿ, "ಹೀಗೆ ಮುದ್ರಿತ ಪ್ರತಿಗಳಲ್ಲಿ ತೋರಿಬರುವ ಅಸಂಪೂರ್ಣತೆಯು ಭಾಷಾಭಿಮಾನಿಗಳಲ್ಲಿ ಬಹುಜನಗಳಿಗೆ ಸಾಮಾನ್ಯವಾಗಿ ಕಂಡುಬಂದುದರಿಂದ ಪ್ರಾಚೀನವಾದ ಪುಸ್ತಕಗಳನ್ನನುಸರಿಸಿ ಸಂಪೂರ್ಣವಾಗಿ ಸರಿಯಾದ ಮುದ್ರಣವು ಆವಶ್ಯಕವೆಂಬ ಅಭಿಪ್ರಾಯದಿಂದ ಈ ಪುಸ್ತಕದ ಮುದ್ರಣಕಾರ್ಯವು ಆರಂಭಿಸಲ್ಪಟ್ಟಿತು" ಎಂದು ತಿಳಿಸಿರುವುದರಿಂದ ಅವರ ಉದ್ದೇಶ ಸ್ಪಷ್ಟವಾದಂತೆ ಆಗಿದೆ. ಅದೆಂದರೆ, ಸಂಧಿಗಳೂ ಸಂಧಿಗಳಲ್ಲಿಯ ಪದ್ಯಗಳೂ ಅಧಿಕವಾಗಿರುವ ಕುಮಾರವ್ಯಾಸ ಭಾರತವನ್ನು ಮುದ್ರಿಸುವುದು.

ಕೋಶಾಗಾರದ ಕೆ. ೨೫೧, ಕೆ. ೫೭, ಕೆ. ೨೦೫ ಇವು ಮುದ್ರಿತಪ್ರತಿಗಳಿಗೆ ಹತ್ತಿರವಾದವೆಂದೂ ಅವುಗಳಿಂದ ಬೇರೆಯಾದ ಏಳು ಹಸ್ತಪ್ರತಿಗಳು ತಾವು ಪ್ರಚುರಪಡಿಸುತ್ತಿರುವ ಪರಿಷ್ಕರಣಕ್ಕೆ ಆಧಾರವಾಗಿದೆಯೆಂದೂ ಶ್ಯಾಮಾಚಾರ್ಯರು ತಿಳಿಸಿದ್ದಾರೆ. ಇವುಗಳಲ್ಲಿಯ ಪಾಠಭೇದಗಳು ಅವರ ದೃಷ್ಟಿಯಲ್ಲಿ ಗೌಣವಾದವು. ಅವರು ಮೊದಲನೆಯ ಆದಿಪರ್ವದ ಸಂಪಾದನೆಯಲ್ಲಿ ಅನುಸರಿಸಿದ ವಿಧಾನವೇ ಮುಂದಿನ ಪರ್ವಗಳ ಸಂಪಾದನೆಯಲ್ಲಿಯೂ ಅನುಸರಿಸಲ್ಪಟ್ಟಂತೆ ತೋರುವುದು. ಅದೆಂದರೆ: "ಕೆಲವೆಡೆಗಳಲ್ಲಿ ಕೆಲವು ಪದ್ಯಗಳೇ ಹೆಚ್ಚಾಗಿರುವುವು. ಹಾಗೆ ಹೆಚ್ಚಾಗಿರುವ ಪದ್ಯಗಳು ಹೇಳಿದ ವಿಷಯಗಳನ್ನೇ ಹೇಳುವುವು. ಅವುಗಳಲ್ಲಿ ಅನೇಕ ಪುಸ್ತಕಗಳಲ್ಲಿ ಕಂಡು ಅತ್ಯಂತ ಸಂಗತವಾಗಿ ಇರುವುದನ್ನು ಪುಸ್ತಕ ಮಧ್ಯದಲ್ಲಿ ಸೇರಿಸಿ ಉಳಿದ ಏನೋ ಒಂದು ರೀತಿಯಿಂದ ಹೊಂದಿಸಿಕೊಳ್ಳಬಹುದಾದ ಪುಸ್ತಕಾಂತರ ಪಾಠಗಳನ್ನು ಆಯಾ ಪುಟಗಳ ಕೆಳಭಾಗದಲ್ಲಿ ಪುಸ್ತಕದ ಚಿಹ್ನದೊಡನೆ ತೋರಿಸಿದೆ. ಹೇಗೂ ಹೊಂದದೆ ಇರುವ ಪಾಠಭೇದಗಳನ್ನು ಬಿಟ್ಟಿದೆ ಮತ್ತು ಅಲ್ಲಲ್ಲಿ ಸಂಧಿ ಇಲ್ಲದೆಯೂ ಅಪಸಂಧಿಯಾಗಿಯೂ ಇರುವ ಪಾಠಗಳು ಇರುವುವು. ಅಂತಹ ಸ್ಥಳಗಳಲ್ಲಿ ಯಾವುದಾದರೊಂದು ಪುಸ್ತಕದಲ್ಲಿ ಕಂಡುಬಂದ ಯುಕ್ತಪಾಠವು ಅನುಸರಿಸಲ್ಪಟ್ಟಿದೆ ಮತ್ತು ಪೂರ್ವೋತ್ತರಾನುಗುಣ್ಯದಿಂದ ಆಲೋಚಿಸಲಾಗಿ ಯಾವ ಪುಸ್ತಕಪಾಠವೂ ಹೊಂದದೆ ಇರುವ ಸ್ಥಳಗಳಲ್ಲಿ ಸಂದರ್ಭವನ್ನು ಅನುಸರಿಸಿ ಬಹು ಸ್ವಲ್ಪವಾಗಿ ಸ್ವತಂತ್ರ ಶೋಧನೆಯೂ ಮಾಡಲ್ಪಟ್ಟಿದೆ. ಅಂತು ನಿರ್ಮೂಲವಾಗಿಯೂ ಅನಾವಶ್ಯಕವಾಗಿಯೂ ಅಸಂಗತವಾಗಿಯೂ ಯಾವ ಶೋಧನೆಯೂ ಮಾಡಲ್ಪಟ್ಟಿರುವುದಿಲ್ಲ."

ಆದಿಪರ್ವದ "ಸಂಭವಪರ್ವ"ದ ಅವತರಣಿಕೆಯಲ್ಲಿ ತಮ್ಮ ಸಂಪಾದನ ಕ್ರಮವನು ನಿರೂಪಿಸುತ್ತ ಮೇಲೆ ಹೇಳಿರುವುದರ ಜೊತೆಗೆ, ಈಗ ಸಾಮಾನ್ಯವಾಗಿ ಅಧಿಕ ಪಾಠವೆಂದು ತಿಳಿದಿರುವ, ಸಂಸ್ಕೃತ ಮೂಲಭಾರತದಲ್ಲಿಯೂ ಇಲ್ಲದ ಮತ್ಸ್ಯಾವತಾರ ಚರಿತ್ರೆ ಮತ್ತು ಐರಾವತ ಕಥೆ ಇವನ್ನು ಕಪಿಕೃತವೆಂದೇ ತಿಳಿಯಲು ಅವರು ಕೊಟ್ಟಿರುವ ಸಮರ್ಥನೆಯನ್ನು ಗಮನಿಸಿದರೆ, ತೀರ ಪುನರುಕ್ತಿಗಳಂತೆ ತೋರುವ ಕೆಲಕೆಲವು ಪದ್ಯಗಳನ್ನಷ್ಟೇ ಬಿಟ್ಟು, ವಿಸ್ತಾರದ ಹಸ್ತಪ್ರತಿಗಳಿಗೆ ಅವರು ಪ್ರಾಶಸ್ತ್ಯ

ವಿಸ್ತೃತವು ವಿದಿತವಾಗುತ್ತದೆ. ಇದರಿಂದಾಗಿ ಭಿನ್ನ ಪಾಠಸಂಪ್ರದಾಯಗಳ ಪ್ರಕ್ಷೇಪಗಳೂ ಕವಿಪಾಠಗಳೇ ಆಗಿಬಿಟ್ಟಿರುವುದು ಕಾಣುತ್ತದೆ.

ಎರಡನೆಯ ಭಾಗವಾದ ಜತುಗೃಹಾದಿ ಪರ್ವಗಳ ಅವತರಣಿಕೆಯಲ್ಲಿ, "ಈ ಪುಸ್ತಕದಲ್ಲಿ ಪ್ರಕಟಿಸಿರುವ ಪಾಠವು ಪ್ರಾಯಿಕವಾಗಿ ಬೆಂಗಳೂರು ಮೊದಲಾದ ಸ್ಥಳಗಳಲ್ಲಿ ಮುದ್ರಿತವಾದ ಪುಸ್ತಕಗಳಂತೆಯೂ ಚ ಛ ಜ ಗುರ್ತುಗಳುಳ್ಳ ಪುಸ್ತಕಗಳಂತೆಯೂ ಇರುತ್ತದೆ" ಎಂದೂ "ಮೊದಲನೆಯ ಸಂಚಿಕೆಯ ಮುದ್ರಣಸಮಯದಲ್ಲಿ ಶೋಧನಕ್ಕಾಗಿ ಉಪಯೋಗಿಸಲ್ಪಟ್ಟ, ಬಹುಪುಸ್ತಕಗಳಲ್ಲಿ ಈವರೆಗೆ ಗ್ರಂಥವು ಇರಲಿಲ್ಲವಾಗಿ ಕೆಲವು ಪುಸ್ತಕಗಳ ಆಧಾರದ ಮೇಲೆ ಮುದ್ರಣಕಾರ್ಯವು ನಡೆದಿರುವುದು" ಎಂದೂ ಹೇಳಿರುವುದು ನೋಡಿದರೆ ಮೊದಲ ಭಾಗಕ್ಕೆ ಗೌಣವಾಗಿದ್ದ ಹಸ್ತಪ್ರತಿಗಳು ಇಲ್ಲಿ ಪ್ರಮುಖವಾಗಿ ಪರಿಣಮಿಸಿವೆ. ಅಲ್ಲಿಯ ನಾಲ್ಕು ಪ್ರತಿಗಳಲ್ಲಿದ್ದ ಹರಿಶ್ಚಂದ್ರ ಮತ್ತು ಯಯಾತಿಗಳ ಕಥೆಗಳನ್ನು ಅನೇಕ ಪುಸ್ತಕಗಳಲ್ಲಿರಲಿಲ್ಲವೆಂಬ ಕಾರಣಕ್ಕೆ ಇಲ್ಲಿ ಮೂಲಪಾಠದಿಂದ ಹೊರಗಿಟ್ಟಿದೆ. ಕ ಪ್ರತಿ (ಕೆ. ೨೦೫) ಯನ್ನು ಅವಲಂಬಿಸಿ ಸಿದ್ಧವಾದ ೧೯೭೧ ರ ಆದಿಪರ್ವದಲ್ಲಿ ೨೦ ಸಂಧಿಗಳೂ ಪ್ರಾಚ್ಯಕೋಶಾಗಾರದ ಆದಿಪರ್ವದಲ್ಲಿ ೩೭ ಸಂಧಿಗಳೂ ಇರುವುದೇ ಪಾಠಗಳ ಸಂಕ್ಷೇಪ ವಿಸ್ತಾರಗಳ ತೊಡಕು ಯಾವ ರೀತಿಯದು ಎಂಬುದನ್ನು ಸ್ವಲ್ಪ ಹೇಳುತ್ತದೆ.

ಸಭಾಪರ್ವದ ಸಂಪಾದನೆಗೆ ಆದಿಪರ್ವದ ಎರಡನೆಯ ಭಾಗಕ್ಕೆ ಬಳಸಿದ ಹಸ್ತಪ್ರತಿಗಳನ್ನೇ ಬಳಸಿದೆ ಹಾಗೂ ಪಾಠಗಳು ಬಲುಮಟ್ಟಿಗೆ ಮುದ್ರಿತ ಪುಸ್ತಕಗಳ ಪಾಠಗಳಿಗೆ ಅನುಸಾರವಾಗಿಯೇ ಇವೆಯೆಂದು ಶ್ಯಾಮಾಚಾರ್ಯರು ತಿಳಿಸಿದ್ದಾರೆ. ಅರಣ್ಯಪರ್ವದಲ್ಲಿ ಸಂಪಾದನೆಗೆ ಆದಿಪರ್ವದ ಮೊದಲ ಭಾಗಕ್ಕೆ ಬಳಸಿದ ಹಸ್ತಪ್ರತಿಗಳನ್ನೇ ಬಳಸಿದೆ; ಆದರೆ ಕೆಲವನ್ನು ಬಿಟ್ಟು, ಹೊಸ ಪ್ರತಿ (ಡ) ಯೊಂದನ್ನು ಸೇರಿಸಿಕೊಂಡಿದೆ. ಇಲ್ಲಿಯೂ ಅಧಿಕ ಪದ್ಯಗಳನ್ನು ಒಪ್ಪಿದೆ. ಟಿ.ಎಸ್. ಸುಬ್ಬರಾಯಶಾಸ್ತ್ರಿಗಳ ಕೈವಾಡದ ವಿರಾಟಪರ್ವದಲ್ಲಿ ಶೋಧನೆಗೆ ಆದಿಪರ್ವದ ಶೋಧನೆಗೆ ಬಳಸಿದ ಹಸ್ತಪ್ರತಿಗಳಲ್ಲಿ ಆರನ್ನು (ಕ ಖ ಚ ಜ ಝ ಟ) ಒಪ್ಪಿದೆ. "ಬಹುಪುಸ್ತಕಾನುಸಾರಿಯಾಗಿ ಅಥವಾ ಶುದ್ಧವಾಗಿ ಅಥವಾ ಸರಸವಾಗಿರುವ ಪಾಠಗಳು ಮೇಲುಗಡೆಯಲ್ಲಿಡಲ್ಪಟ್ಟವೆ. ಪಾಠಾಂತರಗಳೂ ಲೇಖನಾದಿ ದೋಷಗಳನ್ನು ಹೋಗಲಾಡಿಸಿ ಸರಿಪಡಿಸಿ ಕೆಳಭಾಗದಲ್ಲಿ ಬರೆಯಲ್ಪಟ್ಟವೆ" ಎಂಬುದರಿಂದ ಇಲ್ಲಿ ವಾಚನಸೌಕರ್ಯವೇ ಲಕ್ಷ್ಯವಾಗಿರುವಂತಿದೆ. ಇದೇ ಕೈವಾಡದ ಉದ್ಯೋಗಪರ್ವದ ಶೋಧನೆಯಲ್ಲಿ ವಿರಾಟಪರ್ವದ ಶೋಧನೆಗೆ ಬಳಸಿದ ಹಸ್ತಪ್ರತಿಗಳ ನೆರವನ್ನೇ ಪಡೆದಿದೆ. ಪ್ರಜಾಗರಪರ್ವದ ಉಪವಿಭಾಗದಲ್ಲಿ ನೀತಿಪದ್ಯಗಳ ಹೆಚ್ಚು ಕಡಮೆಗಳನ್ನು ಬಹು ಪುಸ್ತಕಾನುಸರಣೆಯಿಂದ ಬದಲಾಯಿಸಿ ಆನುಪೂರ್ವಿಯು ಕಲ್ಪಿಸಲ್ಪಟ್ಟದೆಯೆಂದೂ ಸಾಂಕರ್ಯ ಅಪ್ರಸ್ತುತತ್ವಾದಿ ದೋಷಗಳು ಇರುವ ಸಾಧ್ಯತೆಯುಂಟೆಂದೂ ಅವತರಣಿಕೆಯಲ್ಲಿ ವಿಜ್ಞಾಪಿಸಲಾಗಿದೆ.

ಇದು ಆದಿಪಂಚಕದ ಸಂಪಾದನೆ ನಡೆದಿರುವ ದಾರಿ. ಪಾಠಶೋಧನೆಗೆ

ಸುಮಾರು ಹತ್ತು ಪ್ರತಿಗಳನ್ನು ಬಳಸಿದೆ. ಇವುಗಳಲ್ಲಿ ಪ್ರಾಚೀನವಾದ ಕೆ. ೨೦೫ ರ ಜೊತೆಗೆ ಈಚಿನ ಕಾಲದವೂ ಇವೆ. ಆಧಾರಪ್ರತಿಯನ್ನು ಗೊತ್ತುಮಾಡಿಕೊಳ್ಳುವಲ್ಲಿ ಒಂದು ಬಗೆಯ ಗೊಂದಲ ಕಾಣುತ್ತದೆ. ಬಹು ಪುಸ್ತಕಾನುಸರಣೆಯಿಂದ ಹೆಚ್ಚು ಸಂಧಿ, ಹೆಚ್ಚು ಪದ್ಯಗಳ ಸಂಯೋಜನೆ ಇಲ್ಲಿಯ ವಿಧಾನವಾಗಿದೆ. ಹೀಗೆ ಮಾಡುವಾಗ ಅಲ್ಪಸಂಖ್ಯೆಯ ಹಸ್ತಪ್ರತಿಗಳಲ್ಲಿ ಕಂಡುಬರುವ ಹೆಚ್ಚಿನ ಪದ್ಯಗಳನ್ನಷ್ಟೇ ಪ್ರಕ್ಷೇಪವೆಂದು ಗುರುತಿಸಿದೆ; ಸಂದಿಗ್ಧತೆ ತೋರಿದಾಗ ಅಡಿಟಿಪ್ಪಣಿಯಲ್ಲಿ ವಿರಳವಾಗಿ ಪದ್ಯಗಳನ್ನು ತೋರಿಸಿದೆ. ಕಥಾಸಾಮಂಜಸ್ಯವನ್ನು ಲಕ್ಷಿಸಿ ಸರಸವೂ ಶುದ್ಧವೂ ಆದ ಪದ್ಯಗಳನ್ನು ಮೂಲಪಾಠವೆಂದು ಪರಿಗಣಿಸಿದೆ. ಕೆ. ೨೦೫ ಉಪಲಬ್ಧ ಪ್ರತಿಗಳಲ್ಲೆಲ್ಲ ಪ್ರಾಚೀನವಾದುದಾಗಿದ್ದರೂ ಅದಕ್ಕೆ ಪ್ರಾಶಸ್ತ್ಯ ಕೊಡದೆ, ಸುಮಾರು ೧೯ನೆಯ ಶತಮಾನದಲ್ಲಿ ಲಿಖಿತವಾದ ಹಸ್ತಪ್ರತಿಗಳನ್ನೇ ಹೆಚ್ಚಾಗಿ ಬಳಸಿದ್ದು ಕಾಲಕಾಲಕ್ಕೆ ಗ್ರಂಥಶರೀರವನ್ನು ಹೊಕ್ಕಿದ ಪ್ರಕ್ಷೇಪಗಳೆಲ್ಲ ಕವಿಪಾಠವೆಂಬ ಹೆಸರಿನಲ್ಲಿ ಬರುವಂತಾಯಿತು ಎನ್ನಬಹುದು. ವಿರಾಟ ಮತ್ತು ಉದ್ಯೋಗಪರ್ವಗಳ ಸಂಪಾದನೆಯಲ್ಲಿ ಕೆ. ೭೦ (೧೮೪೧) ನ್ನು ಮುಖ್ಯವಾಗಿ ಅನುಸರಿಸಿದೆಯೆಂಬುದನ್ನು ಪುನಸ್ಸಂಪಾದನೆ ಮಾಡಿದ ಎಸ್. ಎನ್. ಕೃಷ್ಣಜೋಯಿಸರು ಗಮನಿಸಿರುವುದನ್ನು ಇಲ್ಲಿ ಉಲ್ಲೇಖಿಸಬಹುದಾಗಿದೆ. ಹೀಗಾಗಿ ಪ್ರಾಚ್ಯಕೋಶಾಗಾರದ ಆದಿಪಂಚಕದ ಮೊದಲ ಪರಿಷ್ಕರಣಗಳ ಸಂಪಾದನೆ ನಿರ್ದುಷ್ಟವೆಂದು ತಿಳಿಯುವಂತಿಲ್ಲ.

ಸುಮಾರು ಹತ್ತು ವರ್ಷಗಳ ಮೌನದ ಬಳಿಕ ಯುದ್ಧಪಂಚಕದ ಪ್ರಕಟನೆ ಕ್ರಮವಾಗಿ ಮೊದಲಾಯಿತು. ಹೊಸ ಸಂಪಾದಕಮಂಡಲಿ ವ್ಯವಸ್ಥೆಗೊಂಡು ಡಿ. ಎಲ್. ನರಸಿಂಹಾಚಾರ್ಯರ ವಿಶೇಷ ಪರಿಶ್ರಮದಿಂದ ಭೀಷ್ಮಪರ್ವ ಹೊರಬಂದಿತು. ಮೊದಲು ಗಮನಿಸಬೇಕಾದ ಸಂಗತಿಯೆಂದರೆ, ಹಸ್ತಪ್ರತಿಗಳಿಗೆ ಹೊಸ ಸಂಕೇತಾಕ್ಷರಗಳನ್ನು ಕೊಟ್ಟುದು. ಈ ಪರ್ವ ೮ ಹಸ್ತಪ್ರತಿಗಳ ನೆರವಿನಿಂದ ಸಂಪಾದಿತವಾಗಿದ್ದು, ಪ್ರಾಚ್ಯಕೋಶಾಗಾರದ ಆದಿಪಂಚಕದ ಮೊದಲ ಪರಿಷ್ಕರಣಗಳಿಗೆ ಬಳಸಿದ ಮೂರು ಹಸ್ತಪ್ರತಿಗಳ ಉಪಯುಕ್ತತೆಯನ್ನು ಮನಗಂಡು ಅವನ್ನು ಹಾಗೆಯೇ ಸಹಾಯಕ್ಕೆ ಎತ್ತಿಕೊಂಡಿದೆ (ಕೆ. ೨೦೫, ೭೦, ೨೫೧). ಜೊತೆಗೆ ಎರಡು ಹೊಸ ಪ್ರತಿಗಳನ್ನೂ (ಕೆ. ೧೬೩, ೩೭೫) ಸೇರಿಸಿಕೊಂಡಿದೆ ಈಗಾಗಲೇ ಗಮನಿಸಿರುವಂತೆ (ಭಾಗ ೨ ನೋಡಿ), ಕೆ. ೨೦೫ (ಕ. ಪ್ರತಿ) ಯನ್ನು, ಅದರಲ್ಲಿ ಬಹುಶಃ ಲೋಪಗಳೂ ಆದೇಶಗಳೂ ಹೆಚ್ಚಾಗಿರದೆ ಕವಿಪಾಠದ ಸುಳುಹುದೋರುತ್ತಿದೆಯೆಂಬ ಕಾರಣದಿಂದ, ಆಧಾರಪ್ರತಿಯಾಗಿಟ್ಟುಕೊಂಡು, ಶೋಧನೆಗೆ ಇಟ್ಟುಕೊಂಡ ಉಳಿದ ಏಳು ಪ್ರತಿಗಳಲ್ಲಿ ಸಮಾನವಾಗಿ ದೊರೆಯುವ ಗ್ರಂಥಶರೀರವನ್ನು ಮೂಲಪಾಠದ ಹಾಗೂ ಸಂಧಿ ಮತ್ತು ಪದ್ಯ ಸಂಖ್ಯೆಗಳ ನಿರ್ಣಯಕ್ಕಾಗಿ ಯಥೋಚಿತವಾಗಿ ಬಳಸಿಕೊಂಡಿರುವಂತೆ ತೋರುತ್ತದೆ. ಹೀಗೆ ಮಾಡುವಾಗ ಇಲ್ಲಿಯೂ ಒಂದು ರೀತಿ ಬಹು ಪುಸ್ತಕಾನುಸರಣೆಯ ವಿಧಾನವನ್ನು ಅನುಸರಿಸಿದಂತೆ ತಿಳಿಯುವುದು. "ಕೆಲವು

ಪ್ರತಿಗಳಲ್ಲಿ ಮಾತ್ರ ದೊರೆಯುವ ಪಾಠಗಳಲ್ಲಿ ಸೂಕ್ತವಾಗಿ ಕಂಡುಬಂದವುಗಳನ್ನು ಒಂದೆರಡು ಪದ್ಯಗಳಾಗಿದ್ದರೆ ಪುಟದಡಿಯಲ್ಲಿಯೂ ಅನೇಕ ಪದ್ಯಗಳಾಗಿದ್ದರೆ ಕೊನೆಯಲ್ಲಿ ಪರಿಶಿಷ್ಟವಾಗಿಯೂ ಕೊಟ್ಟಿದೆ" ಎಂಬುದು ಸಹ ಆದಿಪಂಚಕದ ಮೊದಲ ಪರಿಷ್ಕರಣಕರ್ತರ ಕ್ರಮವೇ ಆಗಿದೆ.

ದ್ರೋಣಪರ್ವದ ಸಂಪಾದನೆಯಲ್ಲಿ, ಸಂಸ್ಥೆಯ ಒಂದು ಪ್ರತಿಯ ಹೊರತು (ಕೆ. ೩೭೫) ಉಳಿದುವೆಲ್ಲ ಭೀಷ್ಮಪರ್ವದ ಸಂಪಾದನೆಗೆ ಬಳಸಿದವೇ. ಆದರೆ ಹೊರಗಿನಿಂದ ಬಂದ ಬೇರೆ ಐದು ಪ್ರತಿಗಳ ಸಹಾಯವನ್ನೂ ಸೇರಿಸಿಕೊಂಡಿದೆ (ಚ,ತ,ನ,ಪ,ಬ). ಕರ್ಣಪರ್ವದ ಸಂಪಾದನೆಗೆ ದ್ರೋಣಪರ್ವದ ಸಂಪಾದನೆಗೆ ಬಳಸಿದವುಗಳ ಜೊತೆಗೆ ಇನ್ನೂ ಎರಡು ಹಸ್ತಪ್ರತಿಗಳನ್ನು (ಕೆ. ೫೪೧; ಫ ಪ್ರತಿ) ಉಪಯೋಗಿಸಿದೆ. ಶಲ್ಯ ಗದಾಪರ್ವಗಳ ಸಂಪಾದನೆಯಲ್ಲಿ ಸಂಸ್ಥೆಯ ಐದು ಪ್ರತಿಗಳನ್ನೂ (ಕೆ. ೨೦೫, ೫೪೧, ೭೦, ೨೫೧, ೧೬೩), ಚ ಮತ್ತು ನ ಬಿಟ್ಟು ಹೊರಗಿನ ನಾಲ್ಕು ಪ್ರತಿಗಳನ್ನೂ (ಫ, ತ, ಪ, ಬ), ಹೀಗೆ ಒಟ್ಟು ೯ ಪ್ರತಿಗಳನ್ನು ಬಳಸಿದೆ. ಹೆಚ್ಚು ಪ್ರತಿಗಳನ್ನು ಹೀಗೆ ಕಾಲಕಾಲಕ್ಕೆ ಒದಗಿಸಿಕೊಂಡು ಸಂಪಾದನೆಗೆ ತೊಡಗಿದರೂ ಬಹುಶಃ ಆಧಾರಪ್ರತಿಯನ್ನು ಗೊತ್ತುಮಾಡಿಕೊಳ್ಳುವಲ್ಲಿ ಮತ್ತು ಆಯ್ದುಕೊಂಡ ಹಸ್ತಪ್ರತಿಗಳಲ್ಲಿ ದೊರೆಯುವ ಸಮಾನಪಾಠವನ್ನೇ ಮೂಲಪಾಠವಾಗಿ ಇಟ್ಟುಕೊಳ್ಳುವಲ್ಲಿ ಅನುಸರಿಸಿರುವ ಕ್ರಮ ಸೂಕ್ತವಾದುದೆಂದೇ ತೋರುತ್ತದೆ.

ಯುದ್ಧಪಂಚಕದ ಸಂಪಾದನೆಗೆ ಏರ್ಪಟ್ಟ ಸಂಪಾದಕ ಮಂಡಲಿ ಮತ್ತು ಪರ್ವಗಳ ಸಂಪಾದಕರು ಹೆಚ್ಚು ವಿಚಕ್ಷಣೆಯಿಂದ ಸಂಪಾದನಕಾರ್ಯವನ್ನು ನಿರ್ವಹಿಸಿ, ಪ್ರಾಚೀನವೂ ಶುದ್ಧವೂ ಆದ ಹಸ್ತಪ್ರತಿಗಳನ್ನು ಅವಲಂಬಿಸಿದರೆಂದು ಇದರಿಂದ ತಿಳಿಯುತ್ತದೆ.

ಯುದ್ಧ ಪಂಚಕದ ಸಂಪಾದನೆಯಲ್ಲಿ ಅನುಸರಿಸಿದ ಮೇಲ್ಪಂಕ್ತಿಯನ್ನೇ ಬಲುಮಟ್ಟಿಗೆ ಅನುಸರಿಸಿ ಆದಿಪಂಚಕದ ಪುನಸ್ಸಂಪಾದನೆಯಾಗಬೇಕೆಂದು ಸಹಜವಾಗಿಯೇ ತೋರಿ, ಎಸ್. ಎನ್. ಕೃಷ್ಣಜೋಯಿಸರ ಸಂಪಾದಕತ್ವದ ಉದ್ಯೋಗಪರ್ವದ ಪ್ರಕಟನೆಯೊಂದಿಗೆ (೧೯೫೫) ಈ ಸರಣಿ ಆರಂಭವಾಯಿತು. ೧೮ ಹಸ್ತಪ್ರತಿಗಳನ್ನು ಆಯ್ದುಕೊಂಡು (ಕೆ. ೨೦೫, ೫೪೧, ೭೦, ೨೬೬, ೧೩೮, ೨೫೧, ೩೭೫, ೫೪೦, ೩೦೫, ೧೬೩, ೨, ಕೆಎ ೨೨೮, ಚ ಮತ್ತು ಪ, ಸರಸ್ವತೀ ಭಂಡಾರದ ಬ, ಮ, ಯ, ರ), ಕೆ. ೨೦೫ ರ ಪ್ರಾಚೀನತಮ ಹಸ್ತಪ್ರತಿಯನ್ನು (ಕ ಪ್ರತಿ) ಆಧಾರಪ್ರತಿಯಾಗಿಟ್ಟುಕೊಂಡು ಸಂಪಾದನಕಾರ್ಯವನ್ನು ನಿರ್ವಹಿಸಿದೆ. ಮುದ್ರಿತಪಾಠವನ್ನು ಎಂದರೆ ಪ್ರಾಚ್ಯಕೋಶಾಗಾರದ ಉದ್ಯೋಗಪರ್ವದ ಮೊದಲ ಪರಿಷ್ಕರಣದ (೧೯೨೨) ಪಾಠಭೇದಗಳನ್ನು ಸಹ ನಿರ್ದೇಶಿಸಿರುವುದು ಇಲ್ಲಿ ಒಂದು ವಿಶೇಷ. ಬಳಿಕ ಸಭಾಪರ್ವ (ಮಾರ್ಚ್ ೧೯೭೧) ದ ಪ್ರಕಟನೆ ಬಂದಿತು. ಹತ್ತು ಪ್ರತಿಗಳನ್ನು ಆಯ್ದುಕೊಂಡು (ಕೆ. ೨೦೫, ೫೪೧, ೭೦, ೩೦೫, ೨, ೪೬೬, ಕೆಎ ೫೭, ಮತ್ತು ಸರಸ್ವತೀ

ಭಂಡಾರದ ಬ, ಮ, ಯ, ರ). ಕೆ ೨೦೫ ನ್ನೇ ಮುಖ್ಯಪ್ರತಿಯಾಗಿಟ್ಟುಕೊಂ
ಸಂಪಾದನೆ ಮಾಡಿದೆ, ಇಲ್ಲಿ. ಗ್ರಂಥಕರ್ತರ ಕೆ. ೨೦೫ ರ ಅನುಸಾರವಾಗಿರುವುದರಿಂ
ಭೀಮನು ಪುರುಷಾಮೃಗವನ್ನು ತಂದ ಕಥಾಂಶದ ಒಂದು ಹೆಚ್ಚಿನ ಸಂಧಿ ಇವ
ಅದ್ಯೂಯು ಇತರ ಎಲ್ಲ ಹಸ್ತಪ್ರತಿಗಳಲ್ಲಿಯೂ ಪ್ರಕ್ಷೇಪವೆಂದು ತೋರಗೊಟ್ಟಿರುವು
ಕಾಣುತ್ತದೆ. ಆದಿಪರ್ವ (ನವೆಂಬರ್ ೧೯೬೧) ದ ಸಂಪಾದನೆಗೆ ಆಯ್ಕೆ ಮಾ
ಕೊಂಡಿರುವುದು ೧೭ ಹಸ್ತಪ್ರತಿಗಳನ್ನು. ಅವರ ಇವುಗಳಲ್ಲಿ ಅಂತಿಮವಾಗಿ ಉ
ಕೊಂಡದ್ದು ಐದು ಪ್ರತಿಗಳನ್ನು (ಕೆ. ೨೦೫, ೨೧೮, ೨ ಮತ್ತು ಸರಸ್ವ
ಭಂಡಾರದ ಬ, ರ) ಕೆ ೨೧೮, ೨ ಈ ಎರಡು ಪ್ರಾಚ್ಯಕೋಶಾಗಾರದ ಆದಿಸಂಚ
ಶೋಧನೆಗೆ ಬಳಸಿದವೇ. ಈ ಪ್ರತಿ ತೋರು ಉಳಿದವು ಯುದ್ಧಸಂಚ
ಶೋಧನೆಗೆ ಬಳಸಿದವಲ್ಲ. ಈ ಪ್ರತಿಯನ್ನು ಆಧಾರಪ್ರತಿಯಾಗಿಟ್ಟುಕೊಂಡುದರಿಂ
ಪ್ರಚಲಿತ ಪ್ರತಿಗಳ ಮೂಲಕ ಪರಿಚಿತಗಳಾಗಿರುವ ಹಿರಿಶಾಸಂಧಿಯು ಕೆಲವು ಪ
ಗಳು ಇಲ್ಲಿ ಪ್ರಕ್ಷೇಪಗಳೆಂದು ದೂರವುಳಿಯುವಂತಾಗಿದೆ. ಅವು ದಿಟವಾಗಿ ಪ್ರಕ್ಷೇ
ಗಳೇ ಎನ್ನುವುದು ನಿರ್ಧರವಾಗಬೇಕಾದರೆ, ಕುಮಾರವ್ಯಾಸಭಾರತದ ಸಂಪಾದ
ಪ್ರಮಾಣಭೂತವೂ ಪ್ರಾಚೀನವೂ ಆದ ಹೆಚ್ಚಿನ ಹಸ್ತಪ್ರತಿಗಳು ದೊರೆತು ಪಾಠ
ತುಲನೆ ನಡೆಯಬೇಕಾಗುತ್ತದೆ. ವಿರಾಟಪರ್ವದ ಸಂಪಾದನೆಗೆ (೧೯೬೫) ಎಂದಿನ
ಕೆ ೨೦೫ ನ್ನು ಆಧಾರಪ್ರತಿಯಾಗಿಟ್ಟುಕೊಂಡು, ಒಟ್ಟು ೨೦ ಪ್ರತಿಗಳ ಸಹಾಯವನ
ಪಡೆದಿದೆ (ಕೆ ೨೦೫, ೯೮, ೧೨೧೮, ೧೨೧೭, ೯೪೮, ೧೩೪೪, ೩೦೧, ೫೪
೭೦, ೨೬೬, ೫೪೦, ೩೦೫, ೧೬೩. ೨, ೨೫೦, ಕೆಎ ೫೮೭ ಮತ್ತು ಸರಸ್ವ
ಭಂಡಾರದ ಬ, ಮ, ಯ, ರ) ತಮತಮಗೆ ತೋರಿದಂತೆ ಪ್ರತಿಕಾ
ಮಾರ್ಪಾಡುಗಳ ಸೇರ್ಪಡೆಗಳಿಂದಾಗಿ ಸಂಧಿಸಂಖ್ಯೆಯಲ್ಲಿ ವ್ಯತ್ಯಾಸಗಳುಂಟಾ
ಎಂಬ ಸಂಪಾದಕರ ಮಾತು ಒಟ್ಟು ಗ್ರಂಥಕ್ಕೆ ಅನ್ವಯಿಸುವ ಮಾತು. ಕೆ ೨
ರಲ್ಲಿಯೂ ಪ್ರಕ್ಷೇಪಗಳುಂಟೆಂದು ಅವರು ಭಾವಿಸಿರುವುದನ್ನು, ಹಾಗೆ ಪದ್ಯಗಳ
ಗುರುತಿಸಿರುವುದನ್ನು ಗಮನಿಸಬೇಕಾಗಿದೆ. ಇನ್ನು ಕೊನೆಯದಾಗಿ ಅರಣ್ಯಪರ್ವ
(೧೯೬೬) ಕೂಡ ಕೆ ೨೦೫ ಆಧಾರಪ್ರತಿಯಾಗಿ, ಇತರ ಎಂಟು ಪ್ರತಿಗಳ (ಕೆ ೬
೨೬೬, ೨೫೦, ೨೫೧, ೫೪೦. ೨. ಕೆಎ ೫೭, ಮತ್ತು ಸರಸ್ವತೀ ಭಂಡಾರದ ಮ
ನೆರವು ಪಡೆದಿದೆ. ಸಂಪಾದಕರು ಕೆ ೨೦೫ ರ ಆಧಾರದ ಮೇಲೆ ಇತರ ಹಸ್ತಪ್ರತಿ
ವಿವಿಧ ಕಥಾಭಾಗಗಳ ನಿರೂಪಣೆಯಿರುವ ಕೆಲವು ಸಂಧಿಗಳನ್ನು ಪ್ರಕ್ಷಿಪ್ತಗಳ
ವರ್ಜಿಸಿದ್ದಾರೆ. "ಈ ಪ್ರತಿ ಪಾಠವಿಷಯದಲ್ಲಿ ಸಂಪೂರ್ಣ ವಿಶ್ವಸನೀಯವಾ
ದಿದ್ದರೂ, ಆಗಮಲೋಪಗಳ ವಿಷಯದಲ್ಲಿ ನಂಬಿಕೆಗೆ ಯೋಗ್ಯವಾದುದು. ಅದರಲ್ಲಿ
ಪದ್ಯಗಳಾಗಲಿ ಸಂಧಿಗಳಾಗಲಿ—ಮುಖ್ಯವಾಗಿ ಸಂಧಿಗಳು—ಪ್ರಕ್ಷಿಪ್ತವೆಂದು ಸುಲಭವಾ
ನಿರ್ಣಯಿಸಬಹುದು. ಆ ನಿರ್ಣಯಕ್ಕೆ "ಮ" ಪ್ರತಿಯ ಬೆಂಬಲವೂ ಇದೆ." ಇ
ಅವರ ವಿಚಾರ. "ದ್ರೋಣಪರ್ವದಲ್ಲಿ ಬರುವ ಅಭಿಮನ್ಯುಸಂಬಂಧವಾ

ೋಕಗೀತೆ (ದಗಳೆ)ಯ ವಿನಾ ಮತ್ತಾವ ಪ್ರಕ್ಷೇಪವೂ "ಕ" ಪ್ರತಿಯಲ್ಲಿಲ್ಲ. ಂತೆಯೇ ಅದರಲ್ಲಿ ಕೆಲವೇ ಕೆಲವು ಪದ್ಯಗಳು ಬಿಟ್ಟು ಹೋಗಿದ್ದು, ಅವು "ಮ" ರದಂತೆ ಇತರ ಕೆಲವು ಪ್ರತಿಗಳಲ್ಲಿ ಸಿಗುತ್ತವೆ" ಎಂದೂ ಅವರು ತಿಳಿಸಿದ್ದಾರೆ.

ಹೀಗೆ ಭೀಷ್ಮಪರ್ವದ ಮೊದಲ ಪರಿಷ್ಕರಣದ ಕಾಲದಿಂದೀಚೆಗೆ (೧೯೬೩) ಕುಮಾರವ್ಯಾಸ ಭಾರತದ ಸಂಪಾದನೆಯಲ್ಲಿ ಈಗ ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ರುವ "ಕ" ಪ್ರತಿಯೊಂದು ಕೆ. ೨೦೫ ನೆಯ ನಂಬರಿನ ಹಸ್ತಪ್ರತಿ ಪ್ರಾಶಸ್ತ್ಯ ಗಳಿಸಿದೆ. ಉಳಿದ ಕೆಲವು ಹಸ್ತಪ್ರತಿಗಳು ಆದಿಪರ್ವದ ಮೊದಲ ಪರಿಷ್ಕರಣದ ಕಾಲದಿಂದೀಚೆಗೆ (೧೯೧೨) ಉಪೇಕ್ಷಿತವಾಗಿ ಬಳಕೆಗೆ ಸಲ್ಲುತ್ತಲೇ ಇವೆ. ಇವುಗಳಲ್ಲಿ ಕೆ ೬೦, ೨೫೧, ೨೬೬, ೨, ಕೆಎ ೫೭ ಈ ಕೆಲವು ತಮ್ಮ ಉಪಯುಕ್ತತೆಯನ್ನು ಉದ್ದಕ್ಕೆ ಉಳಿಸಿಕೊಂಡಿವೆ; ಹಾಗೆಯೇ ಈಚೆಗೆ ದೊರಕಿಸಿಕೊಂಡ ಅರಮನೆಯ ಸರಸ್ವತೀ ಭಂಡಾರದ ಕೆಲವು ಹಸ್ತಪ್ರತಿಗಳು ಸಹ. ಕೆ. ೬೦ (ಗ ಪ್ರತಿ) ಹೆಚ್ಚು ಪದ್ಯಗಳನ್ನು ಒಳಕೊಂಡಿರುವ ಪ್ರತಿಯಾದರೂ, ಈಚಿನ ಕಾಲದ್ದಾದರೂ (೧೮೪೧), ಎಂಟು ಹಸ್ತ ಪ್ರತಿಗಳ ಒಂದು ಗುಂಪನ್ನು ಪ್ರತಿನಿಧಿಸಬಲ್ಲ ಹಸ್ತಪ್ರತಿಯೊಂದು ಅದರ ಸ್ವರೂಪವನ್ನು ಉದ್ಯೋಗಪರ್ವದ ಎರಡನೆಯ ಪರಿಷ್ಕರಣದ (೧೯೫೫) ಸಂಪಾದಕರು ನಿರೂಪಿಸಿ ದ್ದಾರೆ. ಹೀಗೆಯೇ ಕೆ. ೨೦೫ ಮತ್ತು ಸರಸ್ವತೀ ಭಂಡಾರದ ೪೬೬ (ಮ) ಸಹ ಸಮೀಪ ಸಾದೃಶ್ಯವುಳ್ಳದೆಂದೂ ಕೆ. ೨೦೫ ರ ಪರಂಪರೆಯಲ್ಲಿ ಗ, ಪ, ಬ ಪ್ರತಿಗಳು ಬಂದಿರಬೇಕೆಂದೂ ವ್ಯಕ್ತಪಟ್ಟಿದೆ. ಇಂತಹ ಸೂಚನೆಗಳು ಕುಮಾರವ್ಯಾಸ ಭಾರತದ ಸವಿಮರ್ಶಪರಿಷ್ಕರಣದ ಸಂಪಾದನೆಗೆ ಉಪಯುಕ್ತವಾದುವೆಂದು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ.

ಕುಮಾರವ್ಯಾಸ ಭಾರತದ ಸಂಪಾದನೆಯಲ್ಲಿ ಮುಂದಿನ ಘಟ್ಟವೆಂದರೆ, ಮೈಸೂರು ಸಂಸ್ಥಾನದ ಸಾಹಿತ್ಯ ಮತ್ತು ಸಂಸ್ಕೃತಿ ಅಭಿವೃದ್ಧಿ ಇಲಾಖೆಯ ಜನ ಪ್ರಿಯ ಪ್ರತಿಯದು (೧೯೫೮). "ಜನಸಾಮಾನ್ಯರನ್ನು ದೃಷ್ಟಿಯಲ್ಲಿಟ್ಟುಕೊಂಡು" ಸಂಪಾದಿತವಾಗಿರುವ ಈ ಪರಿಷ್ಕರಣಕ್ಕೆ ಕೆ ೨೦೫ರ ಓಲೆಪ್ರತಿ, ಕೆಎ ೫೭ರ ಕಲ್ಲಚ್ಚು ಪ್ರತಿ ಇವುಗಳ ಜೊತೆಗೆ ಪ್ರಚಲಿತ ಮುದ್ರಿತಪ್ರತಿ (೧೯೨೫)ಯನ್ನೂ ಸೇರಿಸಿಕೊಂಡಿ ರುವುದಲ್ಲದೆ, ಪ್ರಾಚ್ಯಕೋಶಾಗಾರದ ವಿಚಕ್ಷಣೆಯ ಸಂಪಾದಕತ್ವದ ಯುದ್ಧ ಪಂಚಕ ವನ್ನು ಸಹ ಸೇರಿಸಿಕೊಂಡಿದೆ. ಇದರಿಂದಾಗಿ ಈ ಪರಿಷ್ಕರಣವು ಪ್ರಚಲಿತ ಮುದ್ರಿತ ಪ್ರತಿಗಳ ಹಾಗೂ ಸಂಪಾದಿತ ಪ್ರತಿಗಳ ಒಂದು ಸಮ್ಮಿಶ್ರಪಾಠವಾಗಿ ಪರಿಣಮಿಸಿದೆ. ಫಲವಾಗಿ ಬೇರೊಂದು ರೀತಿಯ ಪ್ರಚಲಿತ ಮುದ್ರಿತ ಪ್ರತಿ ಅಥವಾ ಪೇಟೆಮುದ್ರಣ ವಾಗಿದೆ. ಹೀಗೆ ಹೇಳಲು 'ಜ'ವನ್ನು ಬಳಸದಿರುವುದೂ ಒಂದು ಕಾರಣವಾಗಿದೆ. ಅಲ್ಲಲ್ಲಿ ಶುದ್ಧ ಪಾಠವನ್ನು ನಿರ್ಣಯಿಸುವಲ್ಲಿ ಅವರು ಕೆ ೨೦೫ರ ಸಹಾಯವನ್ನು ಪಡೆ ದಿರಬಹುದಾದರೂ ಗ್ರಂಥಶರೀರದ ವಿಷಯದಲ್ಲಿ ಅದರ ಸಂಕ್ಷಿಪ್ತರೂಪವನ್ನು ಮಾನ್ಯ ಮಾಡದೆ, ಪ್ರಚಲಿತ ಪ್ರತಿಗಳ ವಿಸ್ತೃತ ರೂಪವನ್ನು ಯಾವುದೋ ಒಂದು ಇತಿಮಿತಿ

ಗಳ ಪರಿಧಿಯಲ್ಲಿ ಮಾನ್ಯಮಾಡಿರುವುದು ಕಾಣುತ್ತದೆ. ಹೀಗೆ ಪ್ರಕ್ಷೇಪಗಳ ಸೇರ್ಪಡೆಯ ದೃಷ್ಟಿಯಿಂದ ಈ ಪರಿಷ್ಕರಣ ಪೂರ್ತಿಯಾಗಿ ಮುಕ್ತವಾಗಿರದಿದ್ದರೂ, ಶುದ್ಧ ಪಾಠಗಳ ದೃಷ್ಟಿಯಿಂದ ಹಿಂದಿನ ಪ್ರಚಲಿತ ಮುದ್ರಣಗಳಿಗಿಂತ ಹೆಚ್ಚು ವಿಶ್ವಸನೀಯವಾಗಿರುವುದಂತೂ ನಿಶ್ಚಯ. ಆದರೆ ಇಲ್ಲಿಯ ಶುದ್ಧಪಾಠವೇ ಕವಿಪಾಠವೆಂಬುದಕ್ಕೆ ಖಚಿತ ವಿಧಾನಗಳು ನಿರ್ಣಯವಾಗಬೇಕಾಗಿದೆ.

ತೋರಣ ನಾಂದಿಯ ಈ ಮಾತುಗಳು ಕುಮಾರವ್ಯಾಸಭಾರತದ ಸಂಪಾದನೆ ಎಷ್ಟು ಜಟಿಲವಾದುದು, ಎಷ್ಟು ವ್ಯಾಪಕವಾದ ಕಾರ್ಯವಿಧಾನವನ್ನು ಸಿರೀಕ್ಷಿಸುವಂತಹುದು ಎನ್ನುವುದನ್ನು ಸ್ಪಷ್ಟವಾಗಿ ತಿಳಿಸುತ್ತವೆ: "ಒಟ್ಟಿನಲ್ಲಿ ನಾವು ಸಿದ್ಧಗೊಳಿಸಿರುವುದು ಜನಪ್ರಿಯಪ್ರತಿ ಮಾತ್ರ. ಸಂಶೋಧಿತ ವಿಶುದ್ಧಪ್ರತಿ ಬರದ ತನಕ ಕುಮಾರವ್ಯಾಸನ ಪ್ರತಿಭೆಯ ನಿಜಸ್ವರೂಪದ ಸಂಪೂರ್ಣದರ್ಶನವಾಗುವುದಿಲ್ಲ. ಹಾಗೆ ಮಾಡಲು ಅತ್ಯಂತ ಪ್ರಾಚೀನವಾದ ಹಾಗೂ ಗದುಗಿನ ಸುತ್ತಮುತ್ತಣ ಪ್ರದೇಶದಲ್ಲಿ ದೊರೆಯಬಹುದಾದ ಪ್ರತಿಗಳನ್ನೆಲ್ಲಾ ಸಂಗ್ರಹಿಸಬೇಕು. ೧೪–೧..ನೆ ಶತಮಾನದ ಶಾಸನಗಳನ್ನೆಲ್ಲಾ ಸಂಗ್ರಹಿಸಿ ಅಭ್ಯಸಿಸಬೇಕು. ಇದು ಒಂದೆರಡು ದಶಕದ ನಾಲ್ಕಾರು ವಿದ್ವಾಂಸರ ಕೆಲಸ."

"ಕುಮಾರವ್ಯಾಸ ಭಾರತ"ವನ್ನು ರಚಿಸಿದ ಕವಿ ತನ್ನ ಕಾವ್ಯದ "ಪ್ರತಿ ಪರ್ವವನ್ನು ಎಷ್ಟು ಸಂಧಿಗಳಾಗಿ ವಿಭಾಗಮಾಡಿದ್ದನೋ, ಪ್ರತಿಸಂಧಿಯಲ್ಲಿ ಎಷ್ಟು ಪದ್ಯಗಳನ್ನು ಬರೆದಿದ್ದನೋ ಖಚಿತವಾಗಿ ಹೇಳಲಾಗುವುದಿಲ್ಲ. ಇದರಿಂದ ಪ್ರಕ್ಷೇಪಕಾರರಿಗೆ ಒಳ್ಳೆಯ ಅವಕಾಶ ಉಂಟಾಯಿತು" ಎಂಬುದಾಗಿಯೂ, "ಕನ್ನಡ ಭಾರತದಲ್ಲಿ ಇರುವ ಪ್ರಕ್ಷೇಪಗಳನ್ನು ಗೊತ್ತುಮಾಡಲು ಆ ಗ್ರಂಥದ ಹಸ್ತಪ್ರತಿಗಳ ಪ್ರಗಾಢವೂ ಶಾಸ್ತ್ರೀಯವೂ ಆಗಿರುವ ಅಭ್ಯಾಸವನ್ನು ಇನ್ನು ಮುಂದೆ ಯಾರಾದರೂ ಮಾಡಬೇಕಾಗಿದೆ. ಮೈಸೂರು ಓರಿಯಂಟಲ್ ಲೈಬ್ರರಿಯಿಂದ ಮುದ್ರಿತವಾಗಿರುವ ಆ ಗ್ರಂಥದ ಯುದ್ಧಪಂಚಕದ ಪ್ರತಿ ಪರ್ವದ ಅಂತ್ಯದಲ್ಲಿ ಕಾಣಿಸಿರುವ ಪರಿಶಿಷ್ಟಗಳನ್ನು ಸದ್ಯಕ್ಕೆ ಅವಲೋಕಿಸುವುದು ಸಾಕು" ಎಂಬುದಾಗಿಯೂ, "ಕನ್ನಡದ ಕಾವ್ಯಗಳಲ್ಲಿ ಕುಮಾರವ್ಯಾಸನ ಭಾರತದ ಕೆಲವು ಹಸ್ತಪ್ರತಿಗಳು ಮಿಶ್ರಪಾಠ ಸಂಪ್ರದಾಯಗಳ ಸೀಗೆಯ ಮೆಳೆಯಾಗಿವೆ. ಆ ಗ್ರಂಥದ ಸಂಪಾದನೆ ಮಾಡಬಯಸುವವರು ಈ ವಿಷಯವನ್ನು ಗಮನಿಸಬೇಕಾಗಿದೆ" ಎಂಬುದಾಗಿಯೂ ಡಿ. ಎಲ್. ನರಸಿಂಹಾಚಾರ್ಯರು ತಿಳಿಸಿರುವ ಕೆಲವು ಎಚ್ಚರಿಕೆಯ ಮಾತುಗಳು ("ಕನ್ನಡ ಸಂಪಾದನೆ", ೧೯೭೦, ಪು. ೧೦೬, ೧೧೬, ೧೪೫) ಸಹ ಈ ಗ್ರಂಥದ ಸಂಪಾದನೆ ಎಷ್ಟು ಗುರುತರವಾದ ಕಾರ್ಯ ಎಂಬುದನ್ನೇ ಹೇಳುತ್ತವೆ.

ಮಿಶ್ರಪಾಠ ಸಂಪ್ರದಾಯಗಳ ತೊಡಕು ಬಿಡಿಸಿ, ಪ್ರಕ್ಷೇಪಗಳನ್ನು ಸವರಿಹಾಕಿದರೆ ಕುಮಾರವ್ಯಾಸ ಭಾರತದ ಸಂಪಾದನೆಯಲ್ಲಿ ಮುಂದಿನ ದಾರಿ ಬಹುಶಃ ಅಷ್ಟೇನೂ ಕಷ್ಟವಾಗದು. ಆಗ ಕಾಲದ ದೃಷ್ಟಿಯಿಂದ ಪ್ರಾಚೀನವಾದ, ಪ್ರದೇಶದ ದೃಷ್ಟಿ

ಯಿಂದ ಪ್ರಾತಿನಿಧಿಕವಾದ, ಶಕಟರೇಫದ ಸರಿಯಾದ ಬಳಕೆಯಿರುವ, ಸುಲಭಪಾಠ ಗಳಿಗಿಂತ ಕಠಿನಪಾಠಗಳನ್ನು ಮನ್ನಿಸುವ, ಗ್ರಂಥಪಾತಗಳಿಲ್ಲದಿರುವ, ಸುಶಿಕ್ಷಿತ ಲಿಪಿಕಾರಲೇಖ್ಯವಾಗಿರುವ ಹಸ್ತಪ್ರತಿಗಳನ್ನೆಲ್ಲ ಒಗ್ಗೂಡಿಸಿಕೊಂಡು ಪಾಠಸಂಕಲನಾದಿ ವಿಧಾನಗಳಿಂದ ಮೂಲಪಾಠದ ಹೊಲಬು ಹಿಡಿಯಲು ಪ್ರಯತ್ನಿಸಬಹುದು. ಈಗಿನ ಅಂದಾಜಿನಂತೆ ಸು. ೧೨೦ ಹಸ್ತಪ್ರತಿಗಳಿರುವುದು ನಮಗೆ ತಿಳಿದಿದೆ. ಇನ್ನೂ ಶೋಧಿ ಸಿದರೆ, ಸಾಕಷ್ಟು ಹಸ್ತಪ್ರತಿಗಳು ದೊರೆಯಬಹುದು. ಇವನ್ನೆಲ್ಲ ಒಗ್ಗೂಡಿಸಿಕೊಂಡು ಎಷ್ಟರಮಟ್ಟಿಗೆ ಶಕ್ಯವೋ ಅಷ್ಟರಮಟ್ಟಿಗೆ ಪೀಳಿಗೆಯನ್ನು ಕಂಡುಹಿಡಿಯುವುದಾಗ ಬೇಕು; ಇಲ್ಲವೆ ಪರಸ್ಪರವಾದ ಸಂಬಂಧಗಳಾದರೂ ವಿಶದಪಡುವಂತೆ ತುಲನೆಮಾಡಿ ಗುಂಪುಗಳನ್ನು ವಿಂಗಡಿಸಿಕೊಳ್ಳಬೇಕು. ಅನಂತರದಲ್ಲಿ ಹೆಚ್ಚು ಉಪಯೋಗಕ್ಕೆ ಬಾರದವನ್ನು ವರ್ಜಿಸಿ, ಒಂದು ಕನಿಷ್ಠ ಮಿತಿಗೆ ಹಸ್ತಪ್ರತಿಗಳ ಸಂಖ್ಯೆಯನ್ನು ಇಳಿಸಿ ಕೊಂಡರೆ, ಪಾಠಸಂಕಲನ ಮೂಲಪಾಠವನ್ನು ಗೊತ್ತುಮಾಡುವಲ್ಲಿ ಉದ್ದೇಶಿತ ಲಕ್ಷ್ಯಕ್ಕೆ ಸಹಾಯಕವಾಗುತ್ತದೆ. ಕನಿಷ್ಠಮಿತಿಗೆ ಇಳಿಸಿಕೊಂಡ ಹಸ್ತಪ್ರತಿಗಳಲ್ಲಿ ಅತ್ಯಂತ ವಿಶ್ವಾಸಾರ್ಹವೆಂದು ತೋರಿದುದನ್ನು ಆಧಾರಪ್ರತಿಯಾಗಿಟ್ಟುಕೊಂಡು, ಇತರ ಪ್ರತಿಗಳ ಪಾಠಭೇದಗಳನ್ನು ಅಡಿಟಿಪ್ಪಣಿಗಳಲ್ಲಿ ಪ್ರತ್ಯೇಕವಾಗಿ ಸೂಚಿಸ ಬಹುದು.

ಪ್ರಸ್ತುತ ಪರಿಷ್ಕರಣವಾದ ಎಂ. ವಿ. ಸೀತಾರಾಮಯ್ಯನವರ ಸಂಪಾದಕತ್ವದ "ಕುಮಾರವ್ಯಾಸಭಾರತ ಸಂಗ್ರಹ"ದ ಬಗೆಗೆ ಈಗ ಕೆಲವು ಮಾತುಗಳು :

ಈ ಸಂಗ್ರಹವನ್ನು ಬಿ. ಎಂ. ಶ್ರೀಕಂಠಯ್ಯ—ಟಿ. ಎಸ್. ವೆಂಕಣ್ಣಯ್ಯ ಇವರು ಜೊತೆಗೂಡಿ ಸಿದ್ಧಪಡಿಸಿದ್ದರೆನ್ನಲಾದ ಕುಮಾರವ್ಯಾಸಭಾರತಸಂಗ್ರಹವನ್ನು ಮುಖ್ಯವಾದ "ಆಧಾರಪ್ರತಿಯನ್ನಾಗಿಟ್ಟುಕೊಂಡು, ಬೇರೆ ಕೆಲವು ಹಸ್ತಪ್ರತಿಗಳನ್ನೂ ಮುದ್ರಿತ ಪ್ರತಿಗಳನ್ನೂ ಸಂದರ್ಭೋಚಿತವಾಗಿ ಬಳಸಿ ಸಿದ್ಧಪಡಿಸಲಾಗಿದೆ. ಇವುಗಳ ವಿವರವನ್ನು ಸಂಪಾದಕೀಯ ಸಹಾಯಕರ ಪ್ರತ್ಯೇಕವಾದ ಟಿಪ್ಪಣಿಯ ಭಾಗದಿಂದ ತಿಳಿದುಕೊಳ್ಳಬಹುದಾಗಿದೆ. ಎಂ.ವಿ.ಸೀ. ಅವರು "ಆಧಾರಪ್ರತಿ"ಯನ್ನೂ ಒಳ ಕೊಂಡ ಹಾಗೆ ತಾವು ಪರಿಶೀಲಿಸಿದ ಯಾವುದೇ ಪ್ರತಿಯನ್ನೂ ತಮ್ಮ ವಿವೇಚನೆಯ ಒರೆಗಲ್ಲಿನ ಮೇಲೆ ವಿಶದವಾಗಿ ಪರೀಕ್ಷಿಸಿಯೇ ಸಂಪಾದನಕಾರ್ಯವನ್ನು ಕೈಕೊಂಡಿದ್ದಾರೆ. ಪದ್ಯಗಳ ಆಯ್ಕೆ, ಆನುಪೂರ್ವಿ ಮತ್ತು ಪಾಠಗಳ ನಿಷ್ಕರ್ಷೆ ಮೂರಕ್ಕೂ ಈ ಮಾತು ಅನ್ವಯಿಸುತ್ತದೆ. ಈ ದೃಷ್ಟಿಯಿಂದ, ವಿಶೇಷವಾಗಿ ಜನಪ್ರಿಯ ಆವೃತ್ತಿ ಗಳಾಗಿ ಪ್ರಚಲಿತವಾಗಿರುವ ಕನ್ನಡ ಅಧ್ಯಯನ ಸಂಸ್ಥೆಯ ಬಿಡಿಪರ್ವಗಳು ಹಾಗೂ ಕುವೆಂಪು–ಮಾಸ್ತಿ ಸಂಪಾದಕತ್ವದ ಸಮಗ್ರಕೃತಿ–ಇವುಗಳಲ್ಲಿ ಸಿದ್ಧವಾಗಿರುವ ಗ್ರಂಥ ಪಾಠವನ್ನು ಹೆಚ್ಚಿನ ವಿಚಕ್ಷಣೆಯಿಂದಲೂ ಧೈರ್ಯದಿಂದಲೂ ಪರಿಷ್ಕರಿಸಿ, ವೈಯಕ್ತಿಕ ಜವಾಬ್ದಾರಿಯ ವಿಶಿಷ್ಟಸ್ವರೂಪದ ಗ್ರಂಥಪಾಠವೊಂದನ್ನು ಒದಗಿಸಲು ಅವರು

ಯತ್ನಿಸಿರುವುದು ನಮ್ಮ ಗಮನವನ್ನು ಸೆಳೆಯುತ್ತದೆ. ಹಾಗೆಂದೇ ಈ ಸಂಗ್ರಹಕ್ಕೆ ಕುಮಾರವ್ಯಾಸಭಾರತದ ಸಂಪಾದನೆಗಳಲ್ಲಿ ತನ್ನದೇ ಆದ ಒಂದು ಸ್ಥಾನವಿದೆ.

ಕುಮಾರವ್ಯಾಸಭಾರತದ ಪರಿಷ್ಕರಣಕಾರ್ಯದ ಕ್ಲೇಶಗಳನ್ನು ಬಲ್ಲವರಿಗೆ ಎಂ. ವಿ.ಸೀ. ಅವರ ಪರಿಶ್ರಮ ಸಾಮರ್ಥ್ಯಗಳು ಏನೆಂಬುದು ಅರ್ಥವಾಗುತ್ತದೆ. ಅವರು ಸಂಗ್ರಹಗ್ರಂಥವಾಗಿಯೂ ಪಾಠಾಂತರಗಳನ್ನು ಸೂಚಿಸುವ ಹೊಸ ಪ್ರಕ್ರಮವನ್ನು ಬಹುಶಃ ಮೊದಲ ಸಲ ರೂಢಿಸಿದ್ದಾರೆ; ತಾವು ಸ್ವೀಕರಿಸಿದ ಪಾಠ ಯಾವುದು ಎಂಬುದನ್ನು ಪ್ರತ್ಯೇಕವಾಗಿಯೇ ಹಲವೆಡೆ ತೋರಿಸಿದ್ದಾರೆ. ಪದ್ಯಗಳ ಆಯ್ಕೆ, ಆನುಪೂರ್ವಿ ಮತ್ತು ಪಾಠನಿಷ್ಕರ್ಷೆಯಲ್ಲಿ ಗಮನಾರ್ಹವಾದ ವಿಶೇಷ ಸಂಗತಿಗಳನ್ನು ತಿಳಿಸಬೇಕೆಂದು ತೋರಿದಾಗ, ಅವನ್ನೂ ವಿವರಿಸಿದ್ದಾರೆ. ಜೊತೆಗೆ ಅಭ್ಯಾಸಿಗಳಿಗೂ ಗಮಕಿಗಳಿಗೂ ಅನುಕೂಲವಾಗುವಂತೆ, ಶಬ್ದಾರ್ಥಗಳನ್ನೂ, ಸಣ್ಣಪುಟ್ಟ ವಿವರಣೆಗಳನ್ನೂ ನೀಡಿದ್ದಾರೆ. ಪದ್ಯಗಳ ಆಯ್ಕೆ, ಆನುಪೂರ್ವಿ ಮತ್ತು ಪಾಠನಿಷ್ಕರ್ಷೆಯಲ್ಲಿ ಅವರಿಗೆ "ಆಧಾರ ಪ್ರತಿ"ಯೇ ವಿಶೇಷವಾಗಿ ಸಹಾಯಕವಾಗಿರುವುದರಿಂದ, ಆ ಸಂಬಂಧವಾದ ಅಂಶಗಳಲ್ಲಿ ಸಂಪಾದನೆಯ ಯಶಸ್ಸಿಗೆ "ಆಧಾರ ಪ್ರತಿ"ಯ ಸಂಪಾದಕರೂ ಪಾಲುದಾರರಾಗಿದ್ದಾರೆ ಎಂದು ತಿಳಿಯಬೇಕಾಗಿದೆ; ಅವರ ಕವಿಪೂಜೆಯನ್ನು ಕೃತಜ್ಞತೆಯಿಂದ ಸ್ಮರಿಸಬೇಕಾಗಿದೆ.

ಎಂ.ವಿ.ಸೀ. ಅವರ ಸಂಪಾದನಕಾರ್ಯದ ಬಗೆಗೆ ಇಲ್ಲಿ ಕೆಲವಂಶಗಳನ್ನು ಬರೆಯಬಹುದು. ಹಾಗೆ ಬರೆಯುವಾಗ, ಪದ್ಯಗಳ ಆಯ್ಕೆ ಆನುಪೂರ್ವಿಗಳ ಮಟ್ಟಿಗೆ ಸಂಪಾದಕರ ಸ್ವಾತಂತ್ರ್ಯವನ್ನು ನಾವು ಒಪ್ಪಬೇಕಾದುದು ಅನಿವಾರ್ಯವೆಂದಿಟ್ಟುಕೊಂಡರೂ, ಇಲ್ಲಿ ಆಯಾ ಸಂಪಾದಕರ ಅಗತ್ಯ ಅಭಿರುಚಿಗಳಿಗೆ ಅನುಸಾರವಾಗಿ ಸಂಕ್ಷೇಪ ವಿಸ್ತಾರಗಳು ಸ್ವಾಭಾವಿಕವೇ ಆದರೂ, ಕೆಲವು ಉತ್ಕೃಷ್ಟವಾದ ಪದ್ಯಗಳು (ಉದಾ.ಗೆ: "ಮುನಿಪತಿಯು ಮಾತಿನ ಬಲೆಗೆ...."—ಸಭಾ ೧-೯೩, "ಸುರನಗರಿ ನಡುಗಿತ್ತು...."—ದ್ರೋಣ ೮-೧೧ ಇ.) ಪ್ರಸ್ತುತ ಸಂಗ್ರಹದಲ್ಲಿ ಬಿಟ್ಟುಹೋಗಬಾರದಿತ್ತು ಎಂದು ಕೆಲವರಿಗಾದರೂ ತೋರದಿರದು. ಹೀಗೆಯೇ ಪಾಠನಿಷ್ಕರ್ಷೆಯಲ್ಲಿಯೂ ಸಂದಿಗ್ಧತೆಗಳಿಗೆ ಅವಕಾಶವುಂಟು. ಇವುಗಳ ಪರಿಹಾರ ಕುಮಾರವ್ಯಾಸಭಾರತದ ಸವಿಮರ್ಶ ಪರಿಷ್ಕರಣದಿಂದ ಮಾತ್ರ ಸಾಧ್ಯ. ಅಲ್ಲಿಯವರೆಗೆ ಈ ಕೃತಿಯು ಪಾಠಸಂಯೋಜನೆ ತಾತ್ಕಾಲಿಕ ಮತ್ತು ಸನ್ಮಿಶ್ರ ರೀತಿಯದು. ಬೆಳೆಯುತ್ತಿರುವ ಗ್ರಂಥಗಳ ಪಾಠಪರಿಷ್ಕರಣದ ತತ್ತ್ವಗಳನ್ನು ಕುಮಾರವ್ಯಾಸಭಾರತದ ಕೃತಿಗೆ ಸಹ ಅನ್ವಯಿಸಬೇಕಾಗಬಹುದು. ಪ್ರಸ್ತುತ, ಹಲವೆಡೆಗಳಲ್ಲಿ ಎಂ.ವಿ.ಸೀ. ಸಂಗ್ರಹ ಉತ್ತಮ, ಸಂಭಾವ್ಯ ಕವಿಪಾಠಗಳನ್ನು ಕೊಡುವುದರಲ್ಲಿ ಕೃತಕೃತ್ಯವಾಗಿದೆ. ಕೆಲವೆಡೆ ಆಗಿಲ್ಲ. ಕವಿಶೈಲಿಯ ಹಾಗೂ ಕವಿಸಹಜ ಭಾಷೆಯ ಧೋರಣೆಯನ್ನು ಎಚ್ಚರದಿಂದ ಗಮನಿಸದೆ ಕೆಲವೆಡೆ ಪಾಠಗಳನ್ನು ಸ್ವೀಕರಿಸಿದ್ದಾರೆ,

ಇನ್ನು ಕೆಲವೆಡೆ ಯೋಗ್ಯಪಾಠಗಳು ಪ್ರತ್ಯಂತರಗಳಲ್ಲಿ ದೊರೆಯುತ್ತಿದ್ದರೂ ಅನಗತ್ಯವಾಗಿ ಊಹಾತ್ಮಕ ಪರಿಷ್ಕರಣಗಳನ್ನು ಮಾಡಿದೆ. ಅಲ್ಲದೆ, ಡಿ.ಎಲ್.ಎನ್. ಅವರು "ಕನ್ನಡ ಗ್ರಂಥ ಸಂಪಾದನೆ"ಯಲ್ಲಿ ಚರ್ಚಿಸಿರುವ ಹಾಗೂ ಪರಿಷ್ಕರಿಸಿರುವ ಈ ಕೃತಿಯ ಪಾಠಗಳನ್ನು ಏಕೆ ಗಮನಿಸಿಲ್ಲವೋ, ತಿಳಿಯದು. ಈಗ ಕೆಲವು ನಿದರ್ಶನಗಳ ಆಧಾರದಿಂದ ಈ ಹೇಳಿಕೆಗಳನ್ನು ಪರೀಕ್ಷಿಸಬಹುದಾಗಿದೆ. ಈ ಪರಿಶೀಲನೆ ಪರ್ವಾನುಕ್ರಮದಲ್ಲಿದ್ದು, ಪಾಠಪರಿಶೀಲನೆಯ ಉಲ್ಲೇಖಭಾಗದಲ್ಲಿ ಮೊದಲನೆಯದು ಸಾಮಾನ್ಯವಾಗಿ ಕ ಅ ಸಂ.—ಕುಮಾ. ಪ್ರತಿಗಳದು, ಎರಡನೆಯದು ಎಂ.ವಿ.ಸೀ. (ಹಾಗೂ ಭಾಗಶಃ ಆಧಾರಪ್ರತಿಯ ಸಂಗ್ರಹಕರ್ತರು) ಅಂಗೀಕರಿಸಿದ್ದು ಇಲ್ಲವೆ ಸೂಚಿಸಿದ್ದು ಆಗಿರುತ್ತವೆ:

ಆದಿ: ೧–೫ ಚಾರು ಕವಿತೆಯ–ಜಾರ ಕವಿತೆಯ (೨ ಕವಿಶೈಲಿಗೆ ಅನುಗುಣವಾದ ಸಂಭಾವ್ಯ ಪಾಠ). ೧–೯ ಲೆಕ್ಕಿಪನೆ–ಬಗೆವನೇ (೨ ಕ. ಪ್ರತಿಯದಾದ್ದರಿಂದ ಸಂಭಾವ್ಯ). ೧–೧೨ ಗೆಲಿದನ–ಗೆಲಿದನ (ರೂಪಶುದ್ಧಿಗೆ ಗೆಲಿದ[ವ] ಅವಶ್ಯ). ೨–೪ ನಖಸಾಳವಗ್ಗದ–ಗಳಗಾಣ ವೆಗ್ಗಳ (೨ ಬಹುಶಃ ಸರಿ; ಗಳಗಾಳ/ಗಳಗಾಣ= ಗಂಟಲ ಗಾಣ; ನೋ. ಕ.ಗ್ರಂ.ಸಂ. ಪು. ೧೩೦). ೨–೧೪ ಸಹಗಮನದಲಿ–ಸಹಗಮನ[ವೇ] (೧ ಕವಿಶೈಲಿಗೆ ಸಹಜ). ೨–೧೭, ೨೩ ನೂಱಾಱು–[ನೂಱ್ಱೈದು], ೨–೨೯ ನೂಱಱುವರನು–ನೂಱ್ಱೈವರನು (೧ ಸಂಭಾವ್ಯ; ಕವಿ ದುಶ್ಶಳೆ ಸೇರಿದಂತೆ ಕೌರವರು ೧೦೧ ಜನರನ್ನೂ ಐವರು ಪಾಂಡವರನ್ನೂ ಸೇರಿಸಿ ಹೀಗೆಂದಿರಬಹುದು). ೨–೨೩ ತಂದೆಡೆಯಾಡಿ–[ಕಂಡೆ]ಡೆಯಾಡಿ (೧ ಸಹಜ). ೨–೨೫ ಶಾವೊಂದಾಗುತಾತನ–ಶಾವೊಂದಾಗಿ ಭೀಮನ, ವೈಮುಱಿಸಿ ಭೀಮನ–ವೈಮುಱಿಸಿ[ಯಾತನ] (೧ ಕಥಾಗತಿಗೆ ಅನುಸಾರವಾದವು). ೨–೨೬ ಕೇಳ ನೀವೆಂದ–[ಎಂದನಾ ಭೀಮ] (೨ನೆಯದಕ್ಕೆ ಸಮರ್ಥನೆಯಿಲ್ಲ). ೨–೨೭ ಬೆಳೆದುದು–[ಬ]ಳೆದುದು (ನ.ಗ.ದಲ್ಲಿ ಬಳೆ–ಬೆಳೆ ಧಾತುಗಳ ಅರ್ಥವ್ಯತ್ಯಾಸ ಉಳಿದಿಲ್ಲ; ಆದ್ದರಿಂದ ತಿದ್ದು ಅನಗತ್ಯ). ೨–೪೬ ನೀನನುನಾಯಕನೊ–ನೀ[ನುಪ]ನಾಯಕನೊ (೨ ಯಾದೃಚ್ಛಿಕ; ೧ ಗ್ರಾಹ್ಯ). ೨–೬೦ ಸಿಕ್ಕಿರ್ದ–ಸಿ[ಲ್ಕಿ]ರ್ದ (ನ.ಗ.ದಲ್ಲಿ ಸಿಲ್ಕು>ಸಿಕ್ಕು ಆಗಿದೆ; ತಿದ್ದು ಅನಗತ್ಯ; ನೋ. ಅರಣ್ಯ ೨೦–೧, ದ್ರೋಣ ೧–೬೩). ೩–೭೯ "ವೈರಿಘಟಕುಲದಾವಗೆಯುಸಿಡಿಸುವಿರಿ" ಒಳ್ಳೆಯ ಪಾಠಸಂಯೋಜನೆ; ಆದರೆ ನಿಮ್ಮ–[ನಿನ್ನ] ಇಲ್ಲಿ ತಿದ್ದು ಅನಗತ್ಯ. ೩–೮೦ ಸಹದಾಯಾದ ವಿಷಯದಲಿ–[ಸಮುದಾಯಭಾಗದಲಿ] (ಅ.ಕ. ಆಧರಿಸಿ [ದಾ]ಯಾದ್ಯ ಮಾರ್ಗದಲಿ ಆಗಬಹುದು; ತಿದ್ದು ಹೆಚ್ಚು). ೩–೮೪ ನೆರವಿಗದುವಾವಗೆಯ–ನೆರವಿಗದು [ಏ]ವಗೆಯ (ಪಾಠಕ್ಲೇಶ ಉಳಿದಿದೆ; ನೋ. ಕ ಗ್ರಂ ಸಂ. ಪುಟ ೧೩೦). ೩–೮೬ ಚಾರಿ–[ತೀರು?] (ಪಾಠಕ್ಲೇಶ ಹೋಗಿಲ್ಲ; ಱ ಕಾರ ಪ್ರಾಸ ಬೇಕು). ೪–೧೦೨ ಕೇಸರಿ–ಕೇ[ಸು]ರಿ (೨ ಸರಿ). ೫–೧೦೨ ಕಷ್ಟವೆ ಗರುವೆಯುಹುದೌ–ನೀ ನಿಷ್ಕರುಣಿಯುಹುದೌ (ಪಾಠ

ಸಂಯೋಜನೆ ತೃಪ್ತಿಕರವಲ್ಲ; ನೋ. ಕ ಗ್ರಂ ಸಂ. ಪು. ೧೩೧). ೫-೧೩೧ ಮೆತ್ತಿ-[ಎ]ತ್ತಿ (೧ ಕವಿಶೈಲಿಗೆ ಸಹಜ). ೫-೧೩೫ ಮಹೀಸುರನ ಮಾತಾಡಿಸಿದ ನಂದರಸ-[ಪ್ರವಾಸಿತಾ]ಧ್ವಶ್ರಮನ ("ಪರಾಸಿತಾಧ್ವಶ್ರಮನ" ಸಂಭಾವ್ಯ; ಪರಾಸ್ತ>ಪರಾಸಿತ; ನೋ. ಕ ಗ್ರಂ ಸಂ. ಪು. ೧೩೧-೩೨). ೫-೧೪೫ ನುಡಿಸಿದನು ನರನ-ನರನ ಕೆಗದೆಚ್ಚ (ಶ್ರೀ. ಸೂಚನೆಯನ್ನು ಗ್ರಹಿಸುವ ಅಗತ್ಯವಿರಲಿಲ್ಲ). ೬-೧೫೯ ಮೇಳವಣೆಗಳ ಪಾಟಿ-ಮೇಳವಣೆಗಳ ಪೇಟಿ ([ಮೇ]ಳವಣೆಗಳ ಪೇಟಿ; ಕ ಗ್ರಂ ಸಂ. ಪು. ೧೩೨). ೬-೧೬೩ ಕಾಮಿಸಿದರೆಯುಂ ನಿಮಿಷಕೆ-ಕಾಮಿಸಿದ[ಡೆ ನಿಮೇಷಕೆ] (೧ ಸಂಭಾವ್ಯ; ಕಾಮಿಸಿದ[ಡೆ]ಯುಂ ಇದ್ದೀತು; ಅರಣ್ಯ ೮-೧೦೩). ೬-೧೮೧ ಶರಾಸನಾಕರುಷಣದಿ-ಶರಾಸನಾಕ[ರ್ಷಣ]ದಿ (೧ ಕವಿಶೈಲಿಗೆ ಸಹಜ; ನೋ. ದೃಗುವಾರಿ, ಅರಣ್ಯ ೨-೮; ಲಾಭೋತ್ಕರುಷ, ಅರಣ್ಯ ಸೂ. ೭; ಅಬುಜಿನೀರಮಣ, ಭೀಷ್ಮ ೮-೧).

ರೂಪ, ಅರ್ಥಗಳು: ೨-೧೯ "ಸೂಜುಳ್" "ಸೂರುಳ್" ಇರಬೇಕು; ೨-೩೭ "ಸೀಗುರಿ" ಚಾಮರವಲ್ಲ, ಒಂದು ವಿಧವಾದ ಛತ್ರಿ. ೫-೧೨೦ ತಗೆ=ಕವಿ, ಆವರಿಸು ಅಲ್ಲ; ತಡೆ, ಸಿರೋಧಿಸು. ೭-೨೩೪ ಜಿನುಗು=ಮಾತಿನ ಮಳೆಗರೆ ಅಲ್ಲ, ಗೊಣಗಾಡು; ನೋ. "ಜಿನುಗು ಜಿನುಂಗು ಅಸಹ್ಯಾವ್ಯಕ್ತಧ್ವನೌ" (ಶಮಧಾ). ೭-೨೩೫ ಸವಡಿಮಾರಿ-ಚೌಡಿ, ಚವುಡಿ (=ಚಾಮುಂಡಿ) ಇರಲಾರದು; ಮಹಾಮಾರಿ ಇರಬಹುದು. ಸವಡಿ=ಎರಡು, ಜೋಡಿಗೆ ಕುಮಾರವ್ಯಾಸ ಭಾರತದಲ್ಲಿ ಪ್ರಯೋಗಗಳಿವೆ. ೯-೨೮೮ "ಸಮಾ[ಶ] ವಿಸ್ತಾರವನು" "ಸಮಾಸ ವಿಸ್ತಾರವನು" ಇರಬಹುದು; ಸಂಕ್ಷೇಪ ಮತ್ತು ವಿಸ್ತಾರ ಬಹುಶಃ ಆಶಯ.

ಸಭಾ: ೧-೯ ಮುರನರಕರಾಳನ-ಮುರನರಕರಾ[ಳ್ಗಳ] (೨ ಸಮರ್ಥನೀಯ). ೨-೧೪ ಮಾಡವೆ ಮಿಗೆ-ಮಾಡಿದು[ದಾ] (೧ರ ಅರ್ಥ ಸಹಜ; ಟಿಪ್ಪಣಿ ತಪ್ಪಾಗಿರುವಂತಿದೆ). ೪-೬೭ ಕಾರ್ಮುಕ-ಮಾರ್ಗಣ (೧ ಸಂಭಾವ್ಯ). ೬-೧೨೩ ಝುಳವಟಿಯು-ಜಲವಟಿಯು (೨ ಸಂಭಾವ್ಯ; ಆದರೆ "ಜಲವಟಿಯು" ಇದ್ದೀತು. ನೋ. ಕರ್ಣ ೭-೧೨). ೬-೧೩೮ ಮಣಿಖಟಿಲ-[ಖ]ಣಿಖಟಿಲ (೨ ಸರಿ; ನೋ. ದ್ರೋಣ ೧೮-೪). ೬-೧೮೭ ಗುಜುಜಿನ-ಜೂಬಿನ (ಕಠಿನಪಾಠದ ಆಯ್ಕೆ ದೃಷ್ಟಿಯಿಂದ ೨ ಸಂಭಾವ್ಯ).

ರೂಪ, ಅರ್ಥಗಳು: ೨-೧೭ ರವಣ-ಪರಿಹಾಸ, ವಿನೋದ ಆಗದು; ಸಾರ, ತಿರುಳು, ಸಾಧನ ಆದೀತು. ೨-೨೦ ರಣದರ್ಥಿ-ರಣದ[ರ್ತಿ] (ಅರ್ಥಿ-ಯಾಚಿಸುವವನು, ಬೇಡುವವನು ಆದ್ದರಿಂದ ೧ ಆಗಬಹುದು; ಆಗ ಪ್ರಾಸವೂ ಶುದ್ಧ. ಆದರೆ ೨ರ ಸಾಧ್ಯತೆಯೂ ಉಂಟು). ೨-೨೭ ಬೇರೆ ಬೇರೆ ಸಂಧಿಗಳ ಸೂಚನಾಪದ್ಯಗಳ ಸೇರಿಕೆ ಸರಿಯಾಗಲಿಲ್ಲ. ಪ್ರಾಸವೈಷಮ್ಯವೂ ಉಂಟು. ಅ. ಟಿ. ಸೂಚನೆಗಳಲ್ಲಿ ಮೊದಲಿನದು ೨-೨೭ಕ್ಕೆ ಅನ್ವಯಿಸುತ್ತದೆ; ಎರಡನೆಯದನ್ನು ಕೈಬಿಡಬೇಕು.

ಅಲ್ಲದೆ ೨-೨೬ರ ಆದಿಗ* ಚಿಹ್ನೆ ಅನಗತ್ಯ. ಅದು ಪ್ರಚಲಿತ ಪಾಠದಲ್ಲಿ ೨-೧೫೯ರ ಪದ್ಯವಾಗಿದೆ. ೪-೭೫ ವಧು-ರಾಜ್ಯಲಕ್ಷ್ಮಿ (?) (ವಧು-ಪತ್ನಿ ಎಂದೇ ಗ್ರಾಹ್ಯ. ಇದು ಮುಂದಾಗಲಿರುವುದರ ಮುನ್ಸೂಚನೆಯ ಮಾತು; ನಾಟಕೀಯ ವ್ಯಂಗ್ಯದ ಒಂದು ಒಳ್ಳೆಯ ಲಕ್ಷ್ಯ. ೫-೮೫ ಬೆಳ್ವಾಳ ಹಬ್ಬುಗೆ-"ಹರಡಿದ ಬಿಳಿಯ ಬಲೆ (?)" ಇರಲಾರದು; "ಹುರುಳಿಲ್ಲದವರ ಉಬ್ಬಟೆ" ಎಂದು ಪ್ರಾಯಃ ಅರ್ಥ. ೫-೯೫ ಕೂಳಿ-ಕುಳಿ, ಗುಂಡಿ(?) ಬೇಕಿಲ್ಲ. ಆದರೆ ಅರ್ಥ ರೂಪಕವಾಗಿ ಗ್ರಾಹ್ಯವಾಗಬೇಕು. ಬೇಳಂಬ-ವಿಚಾರ, ಚಿಂತೆ (?) ಎಂದಿದೆ; (ಪ್ರಾ.) ವೇಲಂಬೋ-ಬೇಳಂಬ (= ವಿಡಂಬನೆ, ಹಾಸ್ಯ). ಬಾಳಿಕೆಯ ಬೇಳಂಬ=ಹಾಸ್ಯಾಸ್ಪದವಾದ ಬದುಕು ಇದ್ದೀತು. ೬-೧೫೨ ಆದುದು-ಆಯಿತು, ಒದಗಿತು (?) ಎಂದಿದೆ; ಆದರೆ ತಡೆಯಿತು, ನಿರ್ವಾಹಗೊಂಡಿತು ಆಗಬೇಕು (ಧಾ. ಆನ್/ಆನು: ಆಂತುದು>ಆತುದು). ೬-೧೮೫ ಮಾದುದು (ಮಾಯ್-ಧಾ.) ಕಣ್ಮರೆಯಾಯಿತು, ಅದೃಶ್ಯವಾಯಿತು ಎಂದಿದೆ; ಆದರೆ ತಪ್ಪಿತು, ನಿಂತಿತು, ತಡೆಗೊಂಡಿತು ಎಂದು ಆಗಬೇಕು (ಧಾ. ಮಾಣ್: ಮಾಣ್ದುದು>ಮಾಂದುದು>ಮಾದುದು); ಆದರೆ ಉದ್ಯೋಗ ೪-೧೮೪ರಲ್ಲಿ ಸರಿಯಾಗಿ ಗುರುತಿಸಿದೆ.

ಅರಣ್ಯ: ೨-೧೭ ಹಾದರವಿಲ್ಲದಂತಿರೆ-ಬಾಧಕವಿಲ್ಲದಂತಿರೆ (ಕವಿಶೈಲಿಗೆ ೧ ಸಹಜ; ಸರ್ವತ್ರ ಪಾಠವೂ ಇದೇ). ೨-೩೦, ೩೧ [ವಿಕಾರದಲಿ], [ಯಿವನಾರೋ] ಸಂಗ್ರಹದ ಸೌಕರ್ಯಕ್ಕೆ ಮಾಡಿರುವಂತಿದೆ; ಆದರೆ ತಿದ್ದು ಅನಗತ್ಯ. ೨-೩೩ ಭವತ್ತ್ವೋವನ ನೆಜ-ಭವತ್ತ್ವೋವನ[ವೆ]ಜ (೧ ಸರಿ; ನೆಜ=ಮೀಸಲು, ಸೇವೆ, ಭೋಗ ಅನುಭವಕ್ಕೆ ಬಿಟ್ಟುದು; ನೋ. ಕ.ನಿ., ಪು.೪೯೫೬). ೨-೪೯ ಉತ್ತರಾರ್ಧ ಬಹುಶಃ "ನೋಯೆ ನೊಂದನು ಮೀಜಿ ಮುನಿದಡಪಾಯವಾದುದೆಯುಕಟ-ಕಟ". ೨-೭೫ "ಕುಲಾಲಚಕ್ರದ ಪರಿ ಬವಣಿಗೆಯ ಪಾಡಿನಲಿ" ಎಂಬುದಾಗಿ ಪಾಠವೂ ಪರಿಚ್ಛೇದವೂ ಇದ್ದೀತು. ೩-೧೮೪ ಏನು ಬಿಜಯಂಗೈದಿರಿತ್ತಲು-ಏ[ನಿ] ಬಿಜಯಂಗೈದಿರಿತ್ತಲು (೨ರ ಆಯ್ಕೆ ಸರಿ; ಪ್ರತಿಗಳ ಸಮರ್ಥನೆಯುಂಟು; ಆದ್ದರಿಂದ ತಿದ್ದು ಅನಗತ್ಯ). ೫-೧೬೪ ತೋಜಬೇಕೆಂದ-ತೋಜಬೇಕೆಂ[ದು] (೨ ಸರಿ). ೬-೨೩೩ ಲೋಗನೇ ತಾನೆನುತ-ಲೋಗನೇ [ನಾ]ನೆನುತ (ಪ್ರ. ಪು. ರಚನೆ ಸಹಜವಾದ್ದರಿಂದ ೧ ಸರಿ).

ರೂಪ ಅರ್ಥಗಳು: ೨-೩೪ ಪಾರಿವದ-ಹಸುರಿನ (?); ಆದರೆ "ಪಾರಿವಾಳದ ಬಣ್ಣದ" ಎಂದು ಡಿ.ಎಲ್.ಎನ್. (ಪಂಪದೀ. ಪು ೩೪೦). ೨-೩೫ "ಬೆಳ್ವಾಲವಲೆಗಳ ಮಯಣದಂಟಿನ" ಎಂಬ ಪ್ರಚಲಿತ ಪಾಠವೇ ಹೆಚ್ಚು ಸಂಭಾವ್ಯ. ಪ್ರಾಸಕ್ಕಾಗಿ "ಬೆಳ್ವಾರ" "ಬೆಳ್ವಾಲ" ಆಗಿರಬೇಕು. ಬೆಳ್ವಾರವಲೆ-ಒಂದು ಬಗೆಯ ಬಲೆ ಎಂಬ ಗ್ರಹಿಕೆಯೇ ಸೂಕ್ತ. ೩-೮೬ "ಕೂಳಿಗಳ" ಸ್ವೀಕಾರ ಅಂತಸ್ಸಂಭಾವ್ಯತೆಯ ದೃಷ್ಟಿಯಿಂದ ಸಮರ್ಥನೀಯ; (ಮೀನು ಹಿಡಿಯುವ) ಬುಟ್ಟಿಗಳು ಎಂದು

ಅರ್ಥ; “ಕರ್ಮದ ಕೂಳಿಗಳು” ಒಂದು ರೂಪಕ. ೫-೧೭೩ ತಳಿ ಕಟಕಟಿಯುಳ್ಳ; ಮರದ ದಿಮ್ಮಿಗಳಿಂದ ರಚಿಸಿದ ಸುತ್ತುಗೋಡೆ (ನೋ. ಬರಡಗೆ, ಡಿ ಎಲ್.ಎಸ್., ಪ್ರ. ಕ. ೪೨-೧). ೫-೧೮೬ ಮೈಗುಡಿಯಿಡಿದ-ಪುಲಕವೆದ್ದ. ೬-೨೩೦ ಅವನಿಪ ಬಂಧ ಕೃತಿ-“ಜಯದ್ರಥನಿಂದ” ಎಂಬೆಡೆ “ಚಿತ್ರಸೇನನಿಂದ” ಎಂದಿರಬೇಕು.

ವಿರಾಟ: ೧-೪ ಕಟ್ಟಲೇಱಿದರು-ಕಟ್ಟ ನೇಱಿದರು (೨ ಸರಿ). ೧-೧೦ ಬಱಿದೊಱೆಯಾಯ್ತು-ಬ[ಱು]ದೊಱೆಯಾಯ್ತು ಸಂಭಾವ್ಯ (ಇಲ್ಲಿಯೇ “ಕಲ-ಮೊಳೆ[ವೋ]ಯ್ತು ಭಯಬೀಜ” ಎಂದಿರುವುದನ್ನೂ ದ್ರೋಣ ೧-೨೦ರ “ನುಡಿಗೆ ಮೊಳೆ ಹೊಮ್ಮುತಿದೆ” ಎಂದಿರುವುದನ್ನು ಗಮನಿಸಿ ಆದಿ ೧೦-೧೮ರ ಪಾಠ ವನ್ನು ಪುನಾರಚಿಸುವುದು ಸಾಧ್ಯವೇ ಎಂದು ನೋಡಬಹುದು). ೧-೫೭ ಮಾಯ ವೇಷ-ಮಾ[ಯೆ] ವೇಷ (ಬಹುಶಃ ೨ ಸರಿ). ೨-೭೨ ಕರ್ಣ ದುಶ್ಯಾಸನ-[ಶಲ್ಯ] ದುಶ್ಯಾಸನ (೩ನೆಯ ಪಾದದಲ್ಲಿ ‘ಕರ್ಣ’ ಎಂದಿರುವುದರಿಂದ ಇಲ್ಲಿ ತಿದ್ದು ತಂದಿರ ಬಹುದು; ಆದರೆ ಅದು ಅನಾವಶ್ಯಕ). ೨-೧೧೨ ನಾಟಕವಿದ್ಯವಲ್ಲಿಂದ-ನಾಟ್ಯದ ವಿದ್ಯೆಯಲ್ಲಿಂದ (೧ ಸಂಭಾವ್ಯ; ನಾಟಕ=ನಾಟ್ಯ). ೨-೧೨೩ ಗಾಂಡಿವವ ಜೇವಡಿಸಿ-ಗಾಂಡೀವ[ವನು ಮಿಡಿದು] (ಗಾಂಡೀವ, ಗಾಂಡಿವ ಎರಡೂ ಸಾಧುರೂಪ ಗಳೇ; ನೋ. ಕರ್ಣ ೨೪-೨೪; ೧ ಸರಿ; ತಿದ್ದು ಅನಗತ್ಯ).

ರೂಪ, ಅರ್ಥಗಳು: ೨-೭೫ ಧೂಳಿಗೋಟೆಯು ಕೊಂಡರು-ಸತ್ತು ಸ್ವರ್ಗಸ್ಥ ರಾದರು ಎಂದು ತಿಳಿದರೆ ಸಾಕು.

ಉದ್ಯೋಗ: ೩-೮೦ ಹೊಱವಂಡುತ್ತ-[ತಾ ಹೊಱವಡುತ] (ಶಬ್ದರೂಪ ವಿಲಕ್ಷಣವಾಗಿ ತೋರಿದರೂ ಮೊದಲಿನದೇ ಸಂಭಾವ್ಯ; ಪೊಱಮಡು> ಹೊಱ-ವ[ಂ]ಡು). ೩-೮೫ “ಅಱಿವು ಮಯಣಾಮಯದ....” ಒಂದು ಪಾಠಕ್ಲೇಶದ ಭಾಗ; ಪರಿಷ್ಕಾರ ಪೂರ್ತಿ ತೃಪ್ತಿಕೊಡುವಂತಿಲ್ಲ (ನೋ. ಕ ಗ್ರಂ ಸಂ. ಪುಟ ೨೦೯-೧೦). ೩-೧೧೧ ಈ ಕೃಪನನೀ-ಈ ಕೃಪನ [ಈ] (೨ನೆಯದು ಬಹುಶಃ ಸರಿ). ೪-೧೩.೧ ವಿಜಯನಗಡುಬಾಣಕೆ-ವಿಜಯನ [ಅಡಗ] ಬಾಣಕೆ (ಎರಡೂ ಸಂಭಾವ್ಯ ಗಳಾಗಿ ತೋರುವುದಿಲ್ಲ; ಅ.ದ “ಪಾಂಡವರಡಗು ಬಾಣಕೆ” ಪರಿಶೀಲನಾರ್ಹ; “ಅಗಡುಬಾಣ” ಕವಿಶೈಲಿಗೆ ಸಹಜವಾದುದು). ೪-೧೭೬ ವಿಸಸನದ ಕಟ್ಟಾಳು-ವಿಶಸನದ ಕಟ್ಟಾಳು (ಸ-ಶ ಪ್ರಾಸ ಸಾಧ್ಯ; ೨ ಸಂಭಾವ್ಯ; ವಿಶಸನ-ಯುದ್ಧ; ನೋ. ಪಂಪಭಾ. ೧೨-೬ ವ.; ನೋ. ಕ ಗ್ರಂ ಸಂ. ಪು. ೧೩೩).

ರೂಪ, ಅರ್ಥಗಳು: ೩-೯೬ ಜಠರದಗ್ರಿಯರು-ಹೊಟ್ಟೆ ಮುಂದಾಗಿರುವ ವರು ಎಂದಿದೆ; ಆದರೆ “ಹಿಗ್ಗಿದ ಜಠರದ” ಎಂಬುದರಲ್ಲಿ ಅದು ವಿವಕ್ಷಿತ. “ಅಗ್ರಿ ಯರು” ಎಂಬ ಮಾತಿಗೆ ಇದು ವಿಶೇಷಣ. ಅಗ್ರಿಯರು-ಶ್ರೇಷ್ಠರು, ಪ್ರಥಮವರ್ಣ ದವರು. ೩-೧೪೫ “ಮೋಹು” “ಮೋದು”ವಿಗೆ ಸಂಬಂಧಿಸಿಲ್ಲ; ಮೋಪು> ಮೋಹು ಸೋಕು, ಸ್ಪರ್ಶಿಸು. ೫-೧೮೬ ಪತಿಕರಿಸು-ಎದುರಿಸು (?) ಅಲ್ಲ; “ಕುಳವಱಿದವರ

ಪತಿಕರಿಸಿ" ಎಂಬುದನ್ನು ಒಪ್ಪಿ, ಅದಕ್ಕೆ "ಅಂಗೀಕರಿಸಿ, ಸಹಾನುಭೂತಿಯಿಂದ ಕಂಡು" ಎಂದು ಹೇಳಬಹುದು.

ಭೀಷ್ಮ : ೧-೪೫ ಅಹಿಂಸಾ ಪರಮಧರ್ಮವೆ-ಅಹಿಂ[ಸೆಯೆ] ಪರಮ ಧರ್ಮವು ("ಅಹಿಂಸಾ ಪರಮೋ ಧರ್ಮಃ" ಎಂಬ ಸೂಕ್ತಿಯ ಉದ್ಧೃತಿಯೆಂಬುದರಿಂದ ೧ ಸಂಭಾವ್ಯ). ೧-೬೩ ಸಸಿದರಳೆ-ಸಸಿ[ದ]ರಳೆ (೧ ಸರಿ ; ಧಾ. ಸಸಿ= ಕಾರ್ಪಾಸಶೋಧನ, ಹತ್ತಿಯನ್ನು ಎಕ್ಕುವುದು ಅಥವಾ ಬಿಡಿಸುವುದು ಆದ್ದರಿಂದ ಸಸಿದರಳೆ=ಎಕ್ಕಿದ ಹತ್ತಿ. ನೋ. ಪಂಪಭಾ. ೩-೫) ೨-೬೮ ಬೆನ್ನಲೆವ-ಬೆನ್ನಗಿವ (೧ ಸಹಜ). ೫-೧೪೦ ನವುಗೆ-[ನ]ನಗೆ (ಬಹುಶಃ [ತ]ನಗೆ).

ರೂಪ, ಅರ್ಥಗಳು : ೧-೨೫ ಸರಳಿಸು-ವ್ಯರ್ಥಮಾಡು, ಲಘುವಾಗಿ ಪ್ರಯೋಗಿಸು ; ಆದರೆ ಬಾಣ ತೂಡು, ಬಾಣ ಬಿಡು ಎಂದಾಗಬೇಕು. ಇದು ಕರ್ಣನ ಪ್ರತಿಜ್ಞೆಗೆ ಅನುಗುಣವಾದುದು. ೨-೭೮ ನಾಯಕವಾಡಿಗಳು-ಬಹುಶಃ ದಳಪತಿ, ಸೇನಾನಾಯಕ ಇರಬೇಕು ; ನೋ. ದ್ರೋಣ ೫-೨೫ (ನೋ. ಕನಿ., ಪು. ೪೪೯೯). ೫-೧೨೨ ಬಾಣ-ಬಾನು, ಆಕಾಶ ಬಹುಶಃ ಸರಿಯಲ್ಲ ; ರೂಢಿಯ ಅರ್ಥವೇ ಸಾಕು ; "ಬಾಣದ ಮುಗಿಲು" ಒಂದು ರೂಪಕ.

ದ್ರೋಣ : ೧-೧ ಊಹೆದೆಗಹು-ಊಹೆದೆಗಹು (ಊಹೆ[ದ]ಗಹು ಸೂಕ್ತ). ೨-೬೭ ತೊಡೆಯೊಳೊದಜಿಸುತ-ತೊಡೆಯೊಳೊದಜಿಸುತ (ತೊಡೆಯೊಳೊದ[ವಿ]ಸುತ ಸೂಕ್ತ). ೨-೯೬ ವೀರ ನಿರ್ವಹಣ-ವೀರ[ನಿರ್ವಹಣ] (ಸಂ. ಚಿಹ್ನಗಳು ಬೇಕಾಗಿಲ್ಲ ; ಅರ್ಥದಲ್ಲಿ ಪ್ರಶ್ನೆಯಿದೆ. ಆದರೆ "ಅಂತ್ಯ, ಕೊನೆ. ಸಾವು" ಎಂದು ಇಟ್ಟು, "ವೀರನು ಸಾಯುವುದು ವಿಪತ್ತವೇನಲ್ಲ" ಎಂದು ಹೇಳಬಹುದು.

ರೂಪ, ಅರ್ಥಗಳು : ೨-೪೪ ಕೆತ್ತು ಕೊಳ್ಳು-ಅಡ್ಡಗಟ್ಟು, ತಡೆಗಟ್ಟು (?); ಆದರೆ ಕವಿದಿರು, ಮುಚ್ಚಿಕೊಂಡಿರು (ಧಾ. ಕಿಜು>ಕೆತ್ತು) ಆಗಬಹುದು. ೨-೪೭ ಸಾಧು (=ಸಾದು) ಜವಾಜಿ ("ಸಾಧು" ಅಪಲಿಖಿತ ; ಸಾಂದು>ಸಾದು). ೨-೭೬

ಕರ್ಣ : ೨-೨೯ ವರಸಿಭಾರಿಯು ಬಳವಿನಲಿ ವರಸಿಖಾರಿಯು ಬಿಳಿದಿನಲಿ ("ವರ ಸಿ[ಖಾ]ರಿಯ ಬಿಳಿದಿನಲಿ" ಸಂಭಾವ್ಯ. ಮರಾ. ಸಿಖಾರಿ=ಬಿಳಿಯ ವಸ್ತ್ರ. ಕವಿಯ ಇತರ ಪ್ರಯೋಗಗಳಿಗೆ ನೋ. ಕಪ. ಪು. ೪೫೪೮, ೪೬೨೨). ೩-೭೪ ಬಿರುದುಗಹಳೆಯ ದನಿಯ ಘಾಯದ-ಬಿರು[ದು]ಗಹಳೆಯ ದನಿಯಘಾಟದ (ಪಾಠ "ಬಿರುದುಗಹಳೆಯ ದನಿಯ[ಘಾ]ಟದ" ಎಂದು ತೋರುತ್ತದೆ.) ೩-೯೫ ದಂತಶ್ರೇಣಿ ತವೆ ಪಾವನವೆ-ದಂತಶ್ರೇಣಿಯಾ ಬಾಚಣಿಗೆ (೧ ಸಂಭಾವ್ಯ). ೩-೯೬ ಉಡಿಗೆಯ ಳದನ-ಉಡಿಗೆ[ಯೊಳ]ದನ (ಅ.ಪ "ಉಡಿಗೆಯುಡಿದನ" ಸಂಭಾವ್ಯ). ೪-೧೧೩ ಹಡಪಿಗ ಚವರ ಬಾಹೆಯ-ಹಡಪಿಗ ಚವು[ಪಾ]ಹಿಯ (ಆದ ಹಡಪಿಗ ಚವುರ ಚಾಹಿಯ ಸಮರ್ಥನೀಯ ; ಇತರತ್ರ ಶಲ್ಯ ೧-೮, ಗದಾ ೨-೨, ೩-೧೬ರಲ್ಲಿ

ಮತ್ತು ಪಂಪಭಾ. ೪-೮೭ರಲ್ಲಿ "ಚಾಹಿ" ರೂಪವುಂಟು. ಚಾಹಿ=ಛತ್ರಿ ಎಂದು ಬಹುಶಃ ಅರ್ಥ. ನೋ. ಕನಿ. ಪು. ೨೮೧೦). ೪-೧೬೬ ಚಕ್ಷುಶ್ರವನಿವಸು-ಚಕ್ಷುಶ್ರವನ ಸುತ (೧ ಸರಿ ; ಚಕ್ಷುಶ್ರವ-ತಕ್ಷಕನ ಮಗ ಎಂಬುದಕ್ಕೆ ಆಧಾರ ? ಚಕ್ಷುಶ್ರವ=ಹಾವು). ೪-೧೮೬ ಆಳಿವನಘಾಟವೆ-ಆಳುತನದಾಟವ (೧ ಸರಿ ; ಅಘಾಟ ಕಠಿನಪಾಠ ; ಗದಾ ೫-೫೦ರಲ್ಲಿ ಸಹ ಬಂದಿರುವುದರಿಂದ ಅಂತಸ್ಸಂಭಾವ್ಯತೆಯೂ ಉಂಟು. ಈ ವ್ಯಕ್ತಿಯೇನು ಅತಿಶಯುವಾದವನೇ ?—ಎಂದು ಅರ್ಥ).

ರೂಪ, ಅರ್ಥಗಳು : ೩-೮೯ ಸುಱಿದು-ಹೊಯ್ದುಕೊಂಡು ; ಆದರೆ ಸುಱಿ-ಲೇಹನೇ (ಶಮಧಾ) ಎಂದಿರುವುದರಿಂದ ನೆಕ್ಕು, ಚಪ್ಪರಿಸು ಆಗಬೇಕು. ೩-೧೦೯ ಸರಿಗೇರಿದ, ಕಳನೇರಿದಾತನ ಇವುಗಳಲ್ಲಿ "ಏಱು" ಎಂದು ರೂಪವಿರಬೇಕು. ೪-೧೬೯ ನೀರೊಳಸುವೆನು ನೆತ್ತರಲಿ-ಧಾರಾಕಾರವಾಗಿ ರಕ್ತವನ್ನು ಸುರಿಸಿಬಿಡುತ್ತೇನೆ (?) ; ಆದರೆ ರಕ್ತದಲ್ಲಿ ಸೂತಕಸ್ನಾನ ಮಾಡಿಸುತ್ತೇನೆ ಎಂದರ್ಥ (ನೋ. ಪಂಪಭಾ. ೧೨-೨೨೦; ಗದಾಯು. ೬-೨೮ ವ). ೪-೧೬೯ ಆಯತಿಕೆ-ಅವಕಾಶ(?); ಗೌರವ, ಯೋಗ್ಯತೆ, ಸಾಮರ್ಥ್ಯ ಎಂದು ಆಗಬಹುದು. ೪-೧೭೫ ಪಂತದ ಪಾಡು-ಹೋರಾಟದ ಸ್ಥಿತಿಗತಿ, ನಿಯಮ ಎಂಬುದಕ್ಕಿಂತ ನಡೆವಳಿಕೆ, ಪದ್ಧತಿ ಅಥವಾ ಧರ್ಮದ ರೀತಿ ಸೂಕ್ತ (ನೋ. ಕನಿ. ಪು ೫೦೬೦-೬೨).

ಶಲ್ಯ : ೧-೨೧ ಮಹಾರಥರ-ಮಹಾರಥ[ರು] (ತಿದ್ದು ಅನಗತ್ಯ). ಹೊದಱು ತಳಿತುದು-ಹೆದಱಿ ಹೊಕ್ಕರು (೧ ಸರಿ ; ಕವಿಶೈಲಿಗೆ ಸಹಜವಾದ್ದು, "ಸೈನ್ಯ ಮತ್ತೆ ಒಗ್ಗೂಡು" ಎಂಬುದು ಆಶಯ ; ಇದರ ಪ್ರತಿಶಬ್ದ "ಹೊದಱ ಹರೆಗಡಿ" ಎಂದು : ನೋ. ಗದಾ ೨-೨೬), ಲಗ್ಗವರೆ ಮೌನದಲಿ-ಲಗ್ಗ ವರಮೌನದಲಿ (೧ ಸರಿ).

ರೂಪ, ಅರ್ಥಗಳು : ೧-೫ ಬೊಪ್ಪನ ಭಾವ-ಪಾಂಡುವಿನ ಭಾವನಾದ ಶಲ್ಯ ಎಂದಾಗಬೇಕು (ಪಾಂಡುಪತ್ನಿ ಮಾದ್ರಿ ಶಲ್ಯನ ಸೋದರಿ). ೧-೬ ನೆಱವಣಿಗೆ-ಬೆಂಬಲ, ಸಹಾಯ (?); ಸಮಗ್ರತೆ, ಸಮಗ್ರಸಾಮರ್ಥ್ಯ ಎಂದು ಗ್ರಾಹ್ಯ. ೧-೧೦ ಕಳಶಸಿಂಧ-ಸಂದೇಹದೊಂದಿಗೆ ಅರ್ಥ ಸೂಚಿಸಿದೆ; ಸಂಸ್ಕೃತಭಾರತದಲ್ಲಿ ದ್ರೋಣನಿಗೆ ಯಜ್ಞವೇದಿಯನ್ನು ಧ್ವಜವಾಗಿ ಹೇಳಿದೆ; ಕುಮಾರವ್ಯಾಸ ಪಂಪನನ್ನು ಅನುಸರಿಸಿ (ಕುಂಭಧ್ವಜ: ಪಂಪಭಾ. ೧೧-೫೬) ದ್ರೋಣನನ್ನು "ಕಳಶಸಿಂಧ" ಎಂದಿರುವಂತೆ ತೋರುತ್ತದೆ.

ಗದಾ : ೨-೨೦ ಚಮರ ಚಾಹಿ-ಛತ್ರ ಚಾಮರ (೧ ಸರಿ; ನೋ. ಕರ್ಣ ೪-೧೧೩ರ ಟಿಪ್ಪಣಿ). ೨-೧೩ ಉಸುರುದೆಗಹಾದುದೆ-ಉಸುರುದೆಗೆವಂತಾಯ್ತು (ಬಹುಶಃ ಪಾಠ "ಉಸುರು[ದ]ಗಹಾದುದೆ" ; ಉಸಿರು ನಿಲ್ಲುವಂತಾಗು, ಉಸಿರು ಸಿಕ್ಕಿಕೊಳ್ಳು : ಉಸುರು+ತಗಹು+ಆಗು). ೨-೧೫ ನಿರರ್ಥಕೆ ಒದಱಿದಡೆ-ನಿರರ್ಥಕೆ ಒದಱದಿರು (ಬಹುಶಃ ಪಾಠ ಅ.ದಂತೆ : ನಿರರ್ಥಕಕೊದಱದಿರು. ಇದು ಕವಿಶೈಲಿಗೆ ಸಹಜವಾದ್ದು. ನೋ. ದ್ರೋಣ ೧೪-೫, ಕರ್ಣ ೯-೧೭, ಗದಾ ೨-೨೭).

೨–೧೯, ೨೧ ಒಂದೇ ಆಶಯದವು; ಒಂದನ್ನು ಕೈಬಿಡಬಹುದಾಗಿತ್ತು. ೨–೩೦ ಧುರಪಥ–ಧುರಪಥ (ದರುಪದ: ಕ ಗ್ರಂ ಸಂ. ಪು. ೧೯೧; ಬಹುಶಃ ದುರಪದ ಎಂದೂ ಇದ್ದೀತು. ಇದರ ಅರ್ಥ ನಾಂದಿ, ಪಲ್ಲವಿ; ಆಲಂ. ಆರಂಭ). ೩–೪೬ ಹೇರು–ಹೋರು (೨ ಸರಿ). ೩–೫೦ ಆಳ್ವಿವು–ಅಳಿವು (೧ ಸರಿ). ೪–೫೯ ಪಾಂಡವ–ಪಾಂಡ[ವರು] (೧ ಸರಿ; "ಮಮ ಪ್ರಾಣಾ ಹಿ ಪಾಂಡವಾಃ" ಎಂಬುದು ಸುಕರಗೊಂಡಿದೆ ೧ರಲ್ಲಿ). ೪–೬೨ ನಿಲುಕಿದರು–[ತಳ]ಕಿದರು (ಬಹುಶಃ ಪಾಠ ತಳುಕಿದರು; ನೋ. ಅರಣ್ಯ ೯–೮೩; ತಳ್ಕು > ತಳುಕು). ೪–೬೫ ಘಟನೆಯೊಳು–ಘಟ್ಟಣೆಗೆ (೨ ಕವಿಶೈಲಿಗೆ ಅನುಗುಣ). ೪–೬೮ ಕುರುಪತಿಯು–ಕುರುಪತಿ[ಯುಂ] (೨ ಬಹುಶಃ ಸರಿ). ೪–೭೯ ಸೂಚ್ಯಾಗ್ರ–ಸೂಚ್ಯಗ್ರ (೨ ಶುದ್ಧ). ಹಿಂದಣಪರಾಥವನು–ಹಿಂದಣಪಕಾರವನು (೧ ಬಹುಶಃ ಸರಿ). ಮಡದಿಂದ–ಮದದಿಂದ (೧ ಸರಿ; ನೋ. ೫–೧೧೦). ಕಳಚಿದನು–ಕಳೆದನಾ (೨ ಬಹುಶಃ ಸಹಜ). ೪–೯೪ ತೊಡೆಗಳ ಹಣಿದವಾಡಲಿ–ತೊಡೆಯಲಿ ಹಣಿದವಾಗಲಿ (೨ ಬಹುಶಃ ಸರಿ). ೫–೧೦೮ ಭಾರಿಸಿತಿದೇನು–[ಬಾರಿ]ಸಿತೇನು (೧ ಕವಿಶೈಲಿಗೆ ಸಹಜ; "ಭಾರಣೆಯೆನೆ ಬಲು-ಭಾರಂ" ಭಾರನಿ., ಪ. ೫೯). ೫–೧೦೯ ವೇಢೆಯಲಿ–ವೇ[ಡೆ]ಯಲಿ (೧ ಕವಿಶೈಲಿಗೆ ಸಹಜವಾದ್ದು; ನೋ. ೫–೧೧೬). ೫–೧೧೬ ವಾಗುರಿ–ವಾಗುರಿ (ಆ.ದ ವಾಗುರೆ ಗ್ರಾಹ್ಯ; ಸಂ. ವಾಗುರಾ > ವಾಗುರೆ). ೫–೧೧೮ ಚಟುಳಪಟ–ಪಟುಳಪಣ (೧ ಸರಿ; ಕವಿಶೈಲಿಗೆ ಸಹಜವಾದ್ದು; "ಪಟುಳ" ರೂಪ ವಿಚಾರಾರ್ಹ; ಚಟುಳಪಣ = ವೇಗ, ತ್ವರೆ, ಚುರುಕು). ೫–೧೧೯ ಉಕ್ಕಡಕೆ ಕಳವಳಿಸಿ ಹಾಯಿದರೊವ್ಮೆ–ಉಕ್ಕದಕೆ ಕಳವಳಿಸಿ ಹೊಯ್ದರದೊವ್ಮೆ (೧ ಸರಿ; ರಚನೆ ಸಹಜ). ಮತ್ತಂತೆಲೆ ಮಿಡುಕದಾಲಿಸಿ–ಮತ್ತಂ ತಲೆಮಿಡುಕದಾಲಿಸಿ (೧ ಸರಿ; ನೋ. ದ್ರೋಣ ೧೭–೧೨; ಅಲ್ಲದೆ ಪಂಪಭಾ. ೬–೫೯ ವ., ಧರ್ಮಾಮೃ ೩–೯೨, ಯಶೋಧ ೪–೭, ಕುರಾಸಾಂ. ೨–೯೬, ಎಇ-xvi, ೩೨೯). ೫–೧೨೩ ಕಗ್ಗೊಲೆ–ಕ[ಳ್ಗೊ]ಲೆ (೧ ಸರಿ; ನೋ. ಆದಿ ೯–೩೨, ದ್ರೋಣ ೧೭–೧೨, ಗದಾ ೯–೭). ೫–೧೨೬ ಇಲ್ಲಿ ಪ್ರಚಲಿತ ಪ್ರತಿಗಳ ಪಾಠವಾದ "ಪೂತ್ಕೃತಿಯು ನಾಸಾಪುಟದ, ವೈಕಕ್ಷಕದ ವಿಷಧರ ಪತಿಯು ವಾಸುಗಿಯು" ಎಂಬುದೇ ಉಚಿತವಾದ ಪಾಠವೆಂದು ತೋರುತ್ತದೆ. "ವೈಕಕ್ಷಕದ" ಕಠಿನಪಾಠವಾದ್ದರಿಂದ ಸ್ವೀಕಾರಯೋಗ್ಯ. ಸಂಸ್ಕೃತ ಮೂಲದಲ್ಲಿ "ನಾಗ-ಯಜ್ಞೋಪವೀತಿನಮ್" ಮತ್ತು "ತಸ್ಯಾಸ್ಯಾನ್ನಾಸಿಕಾಭ್ಯಾಂ ಚ....ಪ್ರಾದುರಾಸ-ನ್ಮಹಾರ್ಚಿಷಃ" ಎಂಬ ಮಾತುಗಳ ಅನುವಾದವನ್ನಿಲ್ಲಿ ಕಾಣಬಹುದು (ಸೌಪ್ತಿಕ ೬–೪, ೮). ೬–೧೬೮ ಹೊಲಸಿದ–ಹೊಲಸಿ[ನ] (ಪೊಲೆ+ಸು="ಪೊಲಸು" ಧಾತುವಾಗಿ ೧ರಲ್ಲಿ ಬಳಸಿದಂತಿದೆ). ೭–೧೮೩, ೮೪ ಪ್ರಚಲಿತ ಪ್ರತಿಗಳಲ್ಲಿಲ್ಲದಿರುವುದರಿಂದ ಬಿಡಬಹುದಾಗಿತ್ತು.

ರೂಪ, ಅರ್ಥಗಳು : ೨-೯ ಎಡಹುದಲೆ-"ಕಾಲಿಗೆ ತೊಡರಿಕೊಂಡು ಮುಗ್ಗರಿಸಿ ಬೀಳುವಂತೆ ಮಾಡುವ ರುಂಡಗಳು" ಎಂದಿದೆ; ಆದರೆ ಎಡಹುವಿಕೆ, ಅಡಚಣೆ ಎಂಬರ್ಥದಲ್ಲಿ ಎಡಹು+ದಲೆ ಎಂದಾಗಿದೆ. "ದಲೆ" ಭಾ.ನಾ. ಪ್ರತ್ಯಯು (ನೋ. ಡಿ.ಎಲ್.ಎನ್., ಪೀಠೀ., ಪು ೭೯೫). ೨-೧೪ ಜಂಗಳವ ಜಾಱು-ಕೃಶವಾಗುವಿಕೆ (?); ಆದರೆ ಓಡಿಹೋಗು, ಪಲಾಯನಮಾಡು ಇದ್ದೀತು. (ಸಂ. ಜಂಘಾಲ> ಜಂಗಲ/ಜಂಗಳ; ನೋ. "ಜಂಘಾಳತನ" ಕರ್ಣ ೧೬-೨೧). ೨-೧೭ ಲಜ್ಜೆಯಭಿಮತ ಜಾತಿಗೆಡದು-(?); ಆದರೆ ಅಭಿಮಾನ, ಆತ್ಮಗೌರವ ತಮ್ಮತನವನ್ನು ಬಿಡವು. ೨-೨೬ ಸುಶರ್ಮ-"ತ್ರಿಗರ್ತದೇಶದ ರಾಜ" ಸರಿ; ಆದರೆ "ಕರ್ಣನ ಮಗ (?)" ಎಂಬುದಕ್ಕೆ ಆಧಾರವಿಲ್ಲ, ಬಿಡಬಹುದು. ೨-೨೭ ಭೂತನಿಕರ- "ಪಿಶಾಚಿಗಳ ಸಮೂಹ" ಎಂಬರ್ಥವೇ ಸಂಗತ. ೩-೪೨ ಬೇಳಂಬ-ಉಪಹತಿ, ಹೊಡೆತ" ಎಂದಿದೆ; ಆದರೆ ವಿಡಂಬನೆ, ಅಪಹಾಸ್ಯ ಸೂಕ್ತ. ೩-೪೬ ತಿಗುರ ತವಕ- "(ಸುಗಂಧದ್ರವ್ಯವನ್ನು) ಲೇಪಿಸುವಲ್ಲಿ ಆತುರ" ಎಂದಿದೆ; ಆದರೆ "ಗೆಲಿದನು ತಿಗುರ ತವಕದಲಿ" ಎಂಬುದರ ಆಶಯ "ಉತ್ಸಾಹದಿಂದ ಲೇಪನದ್ರವ್ಯಗಳನ್ನು ಹಚ್ಚಿಕೊಂಡನು" ಎಂದು. ೪-೫೬ ಬಿಡೆಯಱಿದು-"(ಕದನ ಭೂಮಿಯಲ್ಲಿ ಗದಾಯುದ್ಧಕ್ಕೆ) ಬಿಡಬೇಕಾದ ಸ್ಥಳವನ್ನು ಅರಿತುಕೊಂಡು" ಎಂದಿದೆ; ಆದರೆ ಇಲ್ಲಿ "ಬಿಡೆ" ಚೆನ್ನಾಗಿ ಎಂಬರ್ಥದ ಅವ್ಯಯು. ೪-೬೨ ಅೞವು (<ಅೞ್ವು<ಅಟ್ವು). ೪-೭೦ ಪಡವಾಗು-ವಶವಾಗು ಎಂದಿದೆ; ಆಶ್ರಯು, ನೆಲೆ ಅರ್ಥದ ಪಡವು+ಆಗು (ಹಿಂ. ಮರಾ. ಪಡಾವ್). ೫-೧೧೯ ತಲೆವಿಡುಕದೆ-"ತಲೆಯಲ್ಲಾಡಿಸದೆ" ಎಂದಿದೆ; ನೋ. "ಎಲೆವಿಡುಕು" ಟಿಪ್ಪಣಿ. ೫-೧೩೯ ಸೋಮ ಪ್ರಬದ್ಧಕರು-(?); ಆದರೆ ಸೋಮಕರು ಮತ್ತು ಪ್ರಭದ್ರಕರು ಇಲ್ಲಿ ಉದ್ದೇಶಿತ (ನೋ. ಸೌಪ್ತಿಕ ೮-೪೪, ೪೬ ಇ.). ಸೋಮವಂಶದ ಕ್ಷತ್ರಿಯರಾಜರು ಇಲ್ಲವೆ ಪಾಂಚಾಲದ ಸೋಮಕರಾಜನ ವಂಶದವರು ಇಲ್ಲಿ "ಸೋಮ" ಆಗಿದೆ; ಬಹುಶಃ "ಪ್ರಭದ್ರಕರು" ಎಂಬುದರ ಅಪಲಿಖಿತ "ಪ್ರಬದ್ಧಕರು". ಪ್ರಭದ್ರಕರೂ ಪಾಂಚಾಲದೇಶದ ಕ್ಷತ್ರಿಯರು. ೫-೧೪೧ ಭೋಜ-ಕೃತವರ್ಮ. ಗೌತಮ-(ಕೌರವ ಪಕ್ಷದ) ಪುರೋಹಿತ (?); ಭೋಜ-ಕೃತವರ್ಮ ಎಂಬುದು ಸರಿ; ಇವನು ಭೋಜವಂಶದ ಹೃದಿಕನ ಮಗ; ವಂಶವನ್ನು ಹಿಡಿದು ಇಲ್ಲಿ ಭೋಜನೆಂದಿದೆ. ಗೌತಮ-ಕೃಪ; ಇವನು ಗೌತಮ ಗೋತ್ರದ ಶರದ್ವಂತನ ಮಗ; ವಂಶವನ್ನು ಹಿಡಿದು ಇಲ್ಲಿ ಗೌತಮನೆಂದಿದೆ. ೭-೧೭೮ ಮೇಲುವರ್ಣ-"ಬ್ರಾಹ್ಮಣ" ಎಂದಿರಬೇಕು.

ಡಾ. ಟಿ. ವಿ. ವೆಂಕಟಾಚಲ ಶಾಸ್ತ್ರೀ
ಪ್ರಾಧ್ಯಾಪಕ
ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ, ಮೈಸೂರು-6

ಮೈಸೂರು
೨೬-೮-೧೯೯೦

ಪಾಠ ಪರಿಷ್ಕರಣ

ಕುಮಾರವ್ಯಾಸ ಭಾರತದ ಸಂಗ್ರಹವೊಂದನ್ನು ಪ್ರಕಟಿಸಬೇಕೆಂಬ ಆಸೆ ಪ್ರೊ : ಎಂ. ವಿ. ಸೀತಾರಾಮಯ್ಯನವರಿಗೆ ಬಹುಕಾಲದಿಂದಲೂ ಇತ್ತು. ಈ ಕಾರ್ಯ ಪ್ರತಿಷ್ಠಾನದ ಮೂಲಕವೇ ಆಗಬೇಕೆಂಬುದೂ ಅವರ ಹಂಬಲವಾಗಿತ್ತು. ಎಂ.ವಿ.ಸೀ. ಯವರ ಈ ಹಂಬಲಕ್ಕೆ ದೊಡ್ಡ ಬೆಂಬಲ ದೊರೆತದ್ದು ಪ್ರೊ : ಎಚ್. ಎಂ. ಶಂಕರ ನಾರಾಯಣರಾಯರ ಮೂಲಕ ಪ್ರತಿಷ್ಠಾನಕ್ಕೆ ದಾನವಾಗಿ ಬಂದ ಹಸ್ತಪ್ರತಿಯಿಂದ. ಇದು ಬಿ. ಎಂ. ಶ್ರೀ. ಮತ್ತು ಟಿ. ಎಸ್. ವೆಂಕಣ್ಣಯ್ಯನವರು ಜೊತೆಸೇರಿ ಮಾಡಿದ ಸಂಗ್ರಹವೆಂದು ಹೇಳಲಾದರೂ ಅಲ್ಲಲ್ಲಿ ಎ.ಆರ್.ಕೃ. ಮತ್ತು ಡಿ. ಎಲ್. ಎನ್. ರವರ ಕೈಬರಹವೂ ಇದೆ. ಇದನ್ನು ಮುಖ್ಯ ಆಧಾರ ಪ್ರತಿಯಾಗಿಟ್ಟುಕೊಂಡು ಈಗಾಗಲೇ ಪ್ರಕಟವಾಗಿರುವ ಹಾಗೂ ಪ್ರತಿಷ್ಠಾನದಲ್ಲಿ ಉಪಲಬ್ಧವಿರುವ ಓಲೆಗರಿ ಪ್ರತಿಯನ್ನು ಸೇರಿಸಿಕೊಂಡು ಗದುಗಿನ ಭಾರತದ ಸಂಗ್ರಹವೊಂದನ್ನು ಪ್ರತಿಷ್ಠಾನದ ಮೂಲಕ ಹೊರತರಬೇಕೆಂದು ತೀರ್ಮಾನಿಸಲಾಗಿತ್ತು.

ನಿಯೋಜಿತ ಸಂಗ್ರಹದ ಪ್ರಕಟನ ಕಾರ್ಯಕ್ಕೆ ರಾಜ್ಯ ಸರ್ಕಾರದ ಆರ್ಥಿಕ ನೆರವನ್ನು ಕೇಳತಕ್ಕದ್ದೆಂದು ಪ್ರತಿಷ್ಠಾನದ ಕಾರ್ಯಕಾರಿ ಸಮಿತಿ ನಿರ್ಣಯಿಸಿತ್ತಲ್ಲದೆ, ಸಂಗ್ರಹ ಕಾರ್ಯದ ರೂಪರೇಷೆಗಳನ್ನು ಗೊತ್ತುಪಡಿಸಲು ಒಂದು ಸಂಪಾದಕ ಮಂಡಲಿ ಯನ್ನೂ ರಚಿಸಿತ್ತು. ವಿದ್ವಾಂಸರನ್ನೊಳಗೊಂಡಿದ್ದ ಈ ಮಂಡಳಿಯು ಒಂದೆರಡು ಸಲ ಸಭೆ ಸೇರಿ ಸಂಗ್ರಹ ಕಾರ್ಯಕ್ಕೆ ಮೂರ್ತರೂಪವನ್ನು ನೀಡಲು ಕೆಲವು ಸಲಹೆ ಸೂಚನೆಗಳನ್ನು ನೀಡಿತ್ತು. ಸರ್ಕಾರದಿಂದ ಯೋಜನೆಗೆ ಅನುಮೋದನೆ ದೊರಕದ ಕಾರಣ ಸಂಪಾದಕ ಮಂಡಲಿಯನ್ನು ವಿಸರ್ಜಿಸಬೇಕಾಯಿತು.

ಪ್ರೊ : ಎಂ. ವಿ. ಸೀತಾರಾಮಯ್ಯನವರು ಈ ಯೋಜನೆಯ ಗಾತ್ರ ಮತ್ತು ಸ್ವರೂಪವನ್ನು ಬದಲಾಯಿಸಿ ಕೇಂದ್ರ ಸರ್ಕಾರಕ್ಕೆ ಕಳಿಸಿದರು. 1987ರಲ್ಲಿ ಕೇಂದ್ರ ಸರ್ಕಾರ ಮಂಜೂರು ಮಾಡಿದ ಅನುದಾನದಿಂದ ಕುಮಾರವ್ಯಾಸ ಭಾರತದ ಈ ಸಂಗ್ರಹವನ್ನು ಪ್ರಕಟಿಸಲು ಸಾಧ್ಯವಾಯಿತು. ಯೋಜನೆಯ ಅವಧಿಯೊಳಗೇ ಕಾರ್ಯ ಮುಗಿಸಬೇಕಾಗಿದ್ದುದರಿಂದ ಎಂ. ವಿ. ಸೀ. ಯವರೇ ಸಂಪಾದನಾ ಕಾರ್ಯದ ಪೂರ್ಣ ಹೊಣೆ ಹೊತ್ತರು. ಮೊದಲು ಪದ್ಯಗಳ ಆಯ್ಕೆಯ ಕಾರ್ಯ ನಡೆಯಿತು. ಇದಕ್ಕಾಗಿ ಕುವೆಂಪು ಮತ್ತು ಮಾಸ್ತಿ ವೆಂಕಟೇಶ ಅಯ್ಯಂಗಾರ್ಯರು ಸಂಪಾದಿಸಿರುವ ಕರ್ಣಾಟಕ ಭಾರತ ಕಥಾ ಮಂಜರಿ; ಪೇಟೆ ಮುದ್ರಣದ ಕೆಲವು ಪ್ರತಿಗಳು, ಕನ್ನಡ ಅಧ್ಯಯನ ಸಂಸ್ಥೆ ಬಿಡಿ ಬಿಡಿಯಾಗಿ ಪ್ರಕಟಿಸಿರುವ ಪರ್ವಗಳ ಪ್ರತಿಗಳನ್ನು ಅವಲೋ ಕಿಸಲಾಯಿತು. ಪ್ರತಿಷ್ಠಾನದ ಹಸ್ತಪ್ರತಿ ಭಂಡಾರದಲ್ಲಿರುವ ಓಲೆಗರಿ ಗ್ರಂಥವೂ

ಸಹಾಯಕ್ಕೆ ಬಂದಿತು. ಅನಂತರ ಬಿ. ಎಂ. ಶ್ರೀ. ಮುಂತಾದವರಿಂದ ಭಾಗಶ
ಸಿದ್ಧಪಡಿಸಲ್ಪಟ್ಟಿದ್ದ ಪ್ರಸ್ತುತ ಹಸ್ತಪ್ರತಿಯನ್ನೂ ಪರಿಶೀಲಿಸಲಾಯಿತು.

ಬಿ. ಎಂ. ಶ್ರೀ. ಯವರ ಸಂಗ್ರಹದಲ್ಲಿ ಪ್ರಾರಂಭದ ಪೀಠಿಕಾ ಸಂಧಿಯ
ಗಣೇಶನ ಪ್ರಾರ್ಥನಾ ಪದ್ಯವನ್ನು ಕೈಬಿಡಲಾಗಿದೆ. ಅಲ್ಲದೆ ಮೂಲದ ಗದ್ಯಾನ
ಕ್ರಮಣಿಕೆಯಲ್ಲಿ ಪದ್ಯಗಳು ಅಲ್ಲಲ್ಲಿ ಹಿಂದುಮುಂದಾಗಿವೆ. ಅಂದರೆ ಒಂದ
ಪರ್ವದ ಸಂಧಿಗಳು ಪದ್ಯಗಳಲ್ಲಿ ಕೊನೆಯದು ಮಧ್ಯ ಬರುತ್ತದೆ, ಪ್ರಾರಂಭದ
ಕೊನೆಯದಾಗುತ್ತದೆ. ಹೀಗೆ ಮಾಡಿದ್ದರೂ ಯಾವುದೇ ಅನೌಚಿತ್ಯ ಉಂಟಾಗ
ದಿರುವುದು ಶ್ರೀಯವರ ಅಗ್ಗಳಿಕೆ. ಒಮ್ಮೊಮ್ಮೆ ಒಂದು ಪದ್ಯದ ಸಾಲನ್ನು ತೊಡೆದ
ಅಲ್ಲಿ ಮತ್ತೊಂದು ಪದ್ಯದ ಸಾಲನ್ನು ಸೇರಿಸಿರುತ್ತಾರೆ. ಇಂಥ ಸಂದರ್ಭದ
ಅನೌಚಿತ್ಯ ಕಂಡುಬರುತ್ತದೆ. ಕವಿಕಾಲದ ನಿಷ್ಕರ್ಷೆಯ ಬಗ್ಗೆ ಅನುಮಾನ ಬಂದಾ
ಸ್ವಾತಂತ್ರ್ಯವಹಿಸಿ ತಾವೇ ಒಂದು ಪಾಠವನ್ನು ಸೂಚಿಸುತ್ತಾರೆ. ಈ ಸೂಚನೆ
ಯಾವುದೇ ಪ್ರತಿಯಲ್ಲೂ ಆಧಾರ ದೊರೆಯುವುದಿಲ್ಲ. ಘಟನೆಗಳಿಗೆ ಸಂಬಂ
ಕಲ್ಪಿಸುವ ಸಲುವಾಗಿ ಒಂದು ಸಂಧಿಯ ಸೂಚನಾ ಪದ್ಯವನ್ನು ಮತ್ತೊಂದ
ಸಂಧಿಯ ಸೂಚನಾ ಪದ್ಯದೊಡನೆ ಸೇರಿಸಿ ಇದನ್ನ ಸ್ವತಂತ್ರ ಪದ್ಯವೆಂದು ಪರಿಗಣಿ
ದ್ದಾರೆ. ಒಮ್ಮೊಮ್ಮೆ ಪಾಠಸ್ವೀಕಾರ ಸಂದರ್ಭದಲ್ಲಿ ಅರ್ಥಪೂರ್ಣ ಟೀಕೆಗಳೊಡ
ತಮ್ಮ ಒಲವನ್ನು ವ್ಯಕ್ತಪಡಿಸುವುದುಂಟು. ಆದರೆ ಬಹುಶಃ ಸಂದರ್ಭಗಳ
ಯಾವ ಟೀಕೆಟಿಪ್ಪಣಿಯೂ ಇಲ್ಲದೆ ಸರಿ (√) ಗುರುತನ್ನು ಮಾತ್ರ ಹಾಕಿದ್ದಾರೆ
ಇಂಥ ಕಡೆಗಳಲ್ಲಿ ಆಗಾಗ ಅಭಾಸಗಳೂ ತಲೆದೋರಿವೆ. ಶ್ರೀಯವರ
ಪರಿಶೀಲಿಸಿರುವ ಹಸ್ತಪ್ರತಿಯಲ್ಲಿ ರಕಟೇಫದ ಉಲ್ಲೇಖವಿಲ್ಲ; ರಕಟೇ
ಇರಬೇಕಾದ ಕಡೆಗಳಲ್ಲಿ ರೇಫದ ಬಳಕೆಯಾಗಿದೆ. ಆದರೆ ಶ್ರೀಯವರು ರಕಟ
ರೇಫವನ್ನು ಸೂಚಿಸಿದ್ದಾರೆ. ಇದೊಂದು ಉತ್ತಮ ಸಂಗ್ರಹಕಾರ್ಯ. ಆದರೆ ಈ
ಸಂಪಾದನಾಕಾರ್ಯ ಭೀಷ್ಮಪರ್ವದಿಂದ ಮುಂದಕ್ಕೆ ನಡೆದಿಲ್ಲ. ಇದನ್ನೇ ಆಧಾ
ಪ್ರತಿಯನ್ನಾಗಿ ಪರಿಗಣಿಸಿ ಇಲ್ಲಿನ ಅನೇಕ ಒಳ್ಳೆಯ ಅಂಶಗಳನ್ನು ಪ್ರಸ್ತುತ ಸಂಗ್ರಹದ
ಕೃತಜ್ಞತೆಯಿಂದ ಸ್ವೀಕರಿಸಲಾಗಿದೆ.

ಕುಮಾರವ್ಯಾಸ ಜನಪ್ರಿಯ ಕವಿಯೂ ಹೌದು, ಕ್ಲಿಷ್ಟ ಕವಿಯೂ ಹೌದು
ಇಂಥ ಕವಿಯ ಕಾವ್ಯವನ್ನು ಮೂಲಕ್ಕೆ ಅಪಚಾರವಾಗದಂತೆ ಸಂಗ್ರಹಿಸುವುದು ಕಷ್ಟ
ಸಾಧ್ಯ. ಈಗಾಗಲೇ ಕುಮಾರವ್ಯಾಸ ಭಾರತದ ಅನೇಕ ಪರ್ವಗಳ ಸಂಗ್ರಹಗಳ
ಪ್ರಕಟವಾಗಿದ್ದರೂ ಅವುಗಳಲ್ಲಿ ಹಲವು ವಿದ್ಯಾರ್ಥಿಗಳಿಗೆಂದು ಪಠ್ಯ ದೃಷ್ಟಿಯನ್ನಿಟ್ಟು
ಕೊಂಡು ಮಾಡಿದ ಕಾರ್ಯವೆಂದರೆ ತಪ್ಪಾಗಲಾರದು. ಇಲ್ಲಿ ಶಾಸ್ತ್ರೀಯ ಸಂಪಾದನಾ
ಕಾರ್ಯವನ್ನಾಗಲಿ ಸಮರ್ಪಕ ಸಂಗ್ರಹವನ್ನಾಗಲಿ ಅರಸುವುದು ಉಚಿತವಲ್ಲ. ಅದ

ುದ್ರಣಗೊಂಡಿರುವ ಬಿಡಿಪರ್ವಗಳು ಪಾಠಾಂತರಗಳನ್ನೊಳಗೊಂಡಿವೆ. ಅದೇನೇ ರಲಿ, ಕಾಲಕಾಲಕ್ಕೆ ಲಿಪಿಕಾರರ ಕೈಚಳಕದಿಂದ ಸ್ಥಿತ್ಯಂತರ ಪಡೆದಿರುವ ಪದ್ಯಗಳಲ್ಲಿ ವಿಯ ಪಾಠವನ್ನು ನಿರ್ಧರಿಸಲು ನಮ್ಮಲ್ಲಿ ಸಾಕಷ್ಟು ಸಾಧನಗಳು ಇಲ್ಲವೆಂದೇ ೇಳಬೇಕು. ಈ ದಿಸೆಯಲ್ಲಿ ಪ್ರಸ್ತುತ ಸಂಗ್ರಹವು ಒಂದು ತೋರುಬೆರಳಾಗಿರ ೇಕೆಂದು ಸಂಪಾದಕರು ಆಶಿಸಿದ್ದರು. ಜನಪ್ರಿಯ ಕವಿಯ ಶ್ರೇಷ್ಠ ಕಾವ್ಯಸುಧೆಯು ನಸಾಮಾನ್ಯರಿಗೂ ದೊರೆಯಬೇಕು, ಅಷ್ಟೇ ಅಲ್ಲ, ಇದು ಪಂಡಿತರಿಗೂ ಕಿಂಚಿತ್ ್ರಮಾಣದಲ್ಲಿ ಉಪಯುಕ್ತ ಕೃತಿಯಾಗಬೇಕೆಂಬುದೂ ಎಂ. ವಿ. ಸೀ. ಯವರ ಯಕೆಯಾಗಿತ್ತು.

ಈ ಸಂಗ್ರಹ ಕಾರ್ಯ ಪೂರ್ಣಗೊಳ್ಳಲು ಎರಡು ವರ್ಷಗಳು ಬೇಕಾದವು. ದಿನಕ್ಕೆ ೂರು–ನಾಲ್ಕು ತಾಸುಗಳ ಕಾಲ ಕೂತಾಗ ಏಳೆಂಟು ಪದ್ಯಗಳ ಪರಿಷ್ಕರಣವಾಗು ತ್ತು. ತೊಡಕುಗಳು ಸಂಭವಿಸಿದಾಗ ಇದರ ಸಂಖ್ಯೆ ಇಳಿಯುತ್ತಿತ್ತು. ಯಾವ ಧಾರವೂ ಇಲ್ಲದೆ ಕವಿಯ ಪಾಠವನ್ನು ತಿದ್ದಲು ಎಂ. ವಿ. ಸೀ. ಯವರು ಒಪ್ಪುತ್ತಿರ ಲ್ಲ. ಆಧಾರಪ್ರತಿಯಲ್ಲಿ ಅಲ್ಲಲ್ಲಿ ಕೆಲವು ತಿದ್ದುಪಾಟುಗಳನ್ನು ಸೂಚಿಸಿದ್ದರೂ ಂ. ವಿ. ಸೀ. ಯವರಿಗೆ ಆ ತಿದ್ದುಪಾಟನ್ನು ಒಪ್ಪುವುದು ಕಷ್ಟವಾಗುತ್ತಿತ್ತು. ವೊಮ್ಮೆ ಎರಡಕ್ಷರದ ಒಂದು ಪದದ ನಿರ್ಣಯಕ್ಕೂ ಹೆಚ್ಚಿನ ಕಾಲ ವ್ಯಯವಾಗು ತ್ತು. ಕನ್ನಡದ ಆಕರಗಳು ತೃಪ್ತಿಕೊಡದೆ ಹೋದಾಗ ಮೂಲ ಸಂಸ್ಕೃತ ಭಾರತ ನ್ನೂ ಅವಲೋಕಿಸುತ್ತಿದ್ದರು. ಇಲ್ಲಿಯೂ ಸಮಾಧಾನಕಾರಕ ಅಂಶಗಳು ದೊರೆಯ ದ್ದಾಗ ಪ್ರಶ್ನಾರ್ಥಕ ಚಿಹ್ನೆಯೊಂದಿಗೆ ಊಹಾಪಾಠ ಸಿದ್ಧವಾಗುತ್ತಿತ್ತು.

ಮೊದಲು ಒಂದು ಪದ್ಯದ ಕೆಳಭಾಗದಲ್ಲಿ ಪಾಠಾಂತರಗಳನ್ನು ಕೊಟ್ಟು, ಆ ಪದ್ಯದ ಣ ಪದಗಳಿಗೆ ಅರ್ಥವನ್ನು ಕೊನೆಯಲ್ಲಿ ಕೊಡಬೇಕೆಂದು ತೀರ್ಮಾನಿಸಿದ್ದರೂ ಈ ಮವನ್ನು ಅನುಸರಿಸಲಾಗಲಿಲ್ಲ, ಪದ್ಯ ಪ್ರಕಟವಾಗಿರುವ ಪುಟದಲ್ಲೇ ಮೊದಲು ಠಾಂತರ, ಅನಂತರ ಅಲ್ಲೇ ಅರ್ಥಗಳನ್ನು ಕೊಡಬೇಕೆಂದು ತೀರ್ಮಾನಿಸಿದರು. ಮಾನ್ಯ ಓದುಗನಿಗೆ ಪಾಠಾಂತರಗಳ ಗೊಡವೆ ಬೇಕಿಲ್ಲ. ಆತನಿಗೆ ಬೇಕಾದುದು ದ್ಯ, ಅದರ ಭಾವಾರ್ಥ ಮತ್ತು ಅಂತರಾರ್ಥ. ಪದ್ಯವನ್ನು ಓದುವಾಗ ಒಂದು ದ ಅರ್ಥ ತಿಳಿಯದೆ ಹೋದಾಗ ಓದುಗ ಪದದ ಅರ್ಥಕ್ಕಾಗಿ ಕೊನೆಯ ಪುಟ ನ್ನು ತಿರುವಿ ಹಾಕಬೇಕು. ಹೀಗಾದಾಗ ಓದುಗನಿಗೆ ಕಾಲವ್ಯಯದ ಜೊತೆಗೆ ಸಂಗವಾಗುವ ಸಾಧ್ಯತೆಗಳೂ ಇರುತ್ತವೆ. ಆದ್ದರಿಂದ ಪದ್ಯ ಪ್ರಕಟಗೊಂಡಿರುವ ದ ಅಡಿಭಾಗದಲ್ಲೇ ಮೊದಲು ಪಾಠಾಂತರ, ಆಮೇಲೆ ಅರ್ಥಗಳನ್ನು ಡುವುದು ಸೂಕ್ತವೆಂದು ಎಂ. ವಿ. ಸೀ. ಯವರು ಅಭಿಪ್ರಾಯಪಟ್ಟು ಆ ಕ್ರಮ ೇ ಕೊನೆಯವರೆಗೂ ಅನುಸರಿಸಿದರು.

ಗದುಗಿನ ಭಾರತದ ಅನೇಕ ಪದ್ಯಗಳ ಕೆಲವು ಪದಗಳಿಗೆ ನಿಘಂಟಿನ ಅರ್ಥ ಸರಿಹೊಂದುವುದಿಲ್ಲ. ಕೆಲವು ಸಾಲುಗಳು ಸುಲಭವಾಗಿರುವಂತೆ ಕಂಡರೂ ಅವನ್ನು ವ್ಯಾಖ್ಯಾನಿಸುವುದು ಕಷ್ಟಸಾಧ್ಯ. ಹಲವು ಪದಗಳಿಗೆ ಆ ಪದ್ಯದ ಹಿಂದುಮುಂದಿನ ಪದ್ಯಗಳನ್ನು ಪರಿಶೀಲಿಸಿ ಸನ್ನಿವೇಶವನ್ನು ಗ್ರಹಿಸಿ ಅರ್ಥವನ್ನು ನಿರ್ಣಯಿಸಬೇಕಾಗುತ್ತದೆ. ನಮ್ಮ ಬದುಕಿಗೆ ಹತ್ತಿರವಾಗಿರುವ ದಿನನಿತ್ಯದ ಸಂಗತಿಗಳೂ ಕವಿಯ ಕಾವ್ಯಜಾಲಕ್ಕೆ ಸಿಕ್ಕಿ, ಸಿಕ್ಕಾಗಿ ಕಂಡರೂ ಜಾಣ್ಮೆಯಿಂದ ಯೋಚಿಸಿದಾಗ ಅದರ ಸೊಗಸು ಮನದಟ್ಟಾಗಿ ಕವಿಯ ಪ್ರತಿಭೆಯ ಹೊಳವು ಶ್ರೀಸಾಮಾನ್ಯನಿಗೂ ಅವನವನ ಅನುಭವ, ಸಂಸ್ಕಾರಗಳಿಗೆ ಅನುಗುಣವಾಗಿ ತಿಳಿಯುತ್ತದೆ. ಈ ತಿಳಿವಿಗೆ ದಾರಿಮಾಡಿ ಕೊಡಲು ನಾವು ಶ್ರಮಿಸಬೇಕು ಎಂಬುದೂ ಎಂ.ವಿ.ಸೀ. ಯವರ ಉದ್ದೇಶವಾಗಿತ್ತು. ಪದಗಳಿಗೆ ಅರ್ಥಕೊಡುವ ಸಂದರ್ಭ ಬಂದಾಗ ಶ್ರೀ ಸಾಮಾನ್ಯ ಎಂ.ವಿ.ಸೀ. ಯವರ ಕಣ್ಣೆದುರಿಗೆ ನಿಲ್ಲುತ್ತಿದ್ದ. ಸಾಮಾನ್ಯ ಓದುಗರ ಬಗ್ಗೆ ಎಂ.ವಿ.ಸೀ.ಯವರ ಕಳಕಳಿ ಎಷ್ಟಿತ್ತೆಂದರೆ ವ್ಯಾಕರಣದ ಪರಿಚಯವಿರದ ಈ ಜನ ಸಂಧಿ, ಸಂಯುಕ್ತ ಪದಗಳು ಬಂದಾಗ ಅವನ್ನು ತಪ್ಪುತಪ್ಪಾಗಿ ಬಿಡಿಸಿಕೊಂಡು ಓದಿ ಗೊಂದಲಕ್ಕೊಳಗಾಗುವುದನ್ನು ತಪ್ಪಿಸಲು ಪದವಿಭಾಗವನ್ನು ಕೊಡಲೂ ತಯಾರಿದ್ದರು. ಆದರೆ ಇದು ಒಂದು ರೀತಿಯಲ್ಲಿ ಅನೌಚಿತ್ಯವಾಗುವುದೆಂದು ಅವರು ಈ ಮಾರ್ಗವನ್ನು ಕೈಬಿಟ್ಟರು.

ಪ್ರಸ್ತುತ ಸಂಗ್ರಹವು ಪಂಡಿತ ಪಾಮರರಿಬ್ಬರಿಗೂ ಪ್ರಿಯವಾಗಬೇಕೆಂಬ ಎಂ. ವಿ. ಸೀ. ಯವರ ಇಚ್ಛೆಯನ್ನು ಬಹುಮಟ್ಟಿಗೆ ಪೂರೈಸಿದೆ ಎಂಬುದು ನಮ್ಮ ಭಾವನೆ.

ಈ ಸಂಗ್ರಹಕ್ಕೆ ವಿದ್ವತ್ಪೂರ್ಣ ಪ್ರಸ್ತಾವನೆಯನ್ನು ಬರೆಯಲು ಎಂ. ವಿ. ಸೀ. ಯವರು ತುಂಬಾ ಶ್ರಮವಹಿಸಿ ವಿಷಯ ಸಂಗ್ರಹಿಸಿದ್ದರು, ಚಿಂತನೆ ನಡಸಿದ್ದರು. ಈವರೆಗೆ ಕುಮಾರವ್ಯಾಸನ ಬಗ್ಗೆ ಬಂದಿರುವ ಎಲ್ಲಾ ವಿಮರ್ಶಾ ಗ್ರಂಥಗಳನ್ನೂ ಪರಿಶೀಲಿಸಿದ್ದರು. ಮೂಲ ಸಂಸ್ಕೃತ ಭಾರತದ ಮೇಲೂ ಕಣ್ಣಾಡಿಸಿದ್ದರು. ಆದರೆ ಎಂ. ವಿ. ಸೀ. ಯವರ ಅಧ್ಯಯನ, ಯೋಚನೆಯ ಫಲ ಈ ಸಂಗ್ರಹಕ್ಕೆ ದೊರಕದಾಯಿತು. ಸಂಪಾದಕರಿಗೆ ಸಹಾಯಕರಾಗಿ ಕಾರ್ಯನಿರತರಾಗಿದ್ದಾಗ ಆಗಾಗ ನಡೆದ ಚರ್ಚೆ, ಪಾಠಾಂತರಗಳನ್ನು ನಿಷ್ಕರ್ಷಿಸುವಾಗ ತಲೆದೋರಿದ ಗೊಂದಲ, ಒಂದು ಪದಕ್ಕೆ ಅರ್ಥ ನಿರ್ಣಯಿಸಬೇಕಾದ ಸಂದರ್ಭದಲ್ಲಿ ನಡೆದ ವಾದವಿವಾದ ಇತ್ಯಾದಿ ಅಂಶಗಳನ್ನು ನೆನಪಿನಲ್ಲಿಟ್ಟುಕೊಂಡು ಎಲ್ಲವನ್ನೂ ದಾಖಲಿಸುವುದು ನಮ್ಮ ಮಿತಿಗೆ ಮೀರಿದ ಕಾರ್ಯವಾಗಿದೆ. ಅಲ್ಲದೆ ಈ ಪಾಲಿನ ಕರ್ತವ್ಯ ನಮ್ಮದಾಗುತ್ತದೆಂಬ ಕಲ್ಪನೆಯ ಲವಲೇಶವೂ ನಮ್ಮಲ್ಲಿರಲಿಲ್ಲ. ಸುಮಾರು ಎರಡು ವರ್ಷಗಳ ದೀರ್ಘ ಕಾಲ ಆ ಹಿರಿಯ ಪ್ರಬುದ್ಧ ಚೇತನದ ಸಮ್ಮುಖದಲ್ಲಿ ಕುಳಿತು ಮಹಾಕವಿಯ

ಕಾವ್ಯದ ಒಳಗುಹೊರಗುಗಳಲ್ಲಿ ವಿಹರಿಸಿ ಅನಿರ್ವಚನೀಯ ಆನಂದವನ್ನು ಪಡೆದಿದ್ದೇವೆ. ನಮ್ಮ ಅನುಭವದ ಕೆಲವು ತುಣುಕುಗಳಿಗೆ ಅಭಿವ್ಯಕ್ತಿ ನೀಡಲು ಇಲ್ಲಿ ಯತ್ನಿಸಿದ್ದೇವೆ, ಅಷ್ಟೆ.

ಇಂಥ ಮಹತ್ಕಾರ್ಯದಲ್ಲಿ ನಾವೂ ಭಾಗಿಗಳಾಗಲು ಅವಕಾಶ ಮಾಡಿಕೊಟ್ಟದ್ದಕ್ಕಾಗಿ ಪೂಜ್ಯ ಎಂ. ವಿ. ಸೀತಾರಾಮಯ್ಯನವರಿಗೂ, ಪ್ರತಿಷ್ಠಾನಕ್ಕೂ ನಾವು ಆಭಾರಿಗಳಾಗಿದ್ದೇವೆ.

ಮುಖಪುಟದಲ್ಲಿ ಮುದ್ರಿಸಿರುವ ವೀರನಾರಾಯಣ ವಿಗ್ರಹ ಯುಗಟಿಯ ದೇವಸ್ಥಾನದ್ದು. ಯುಗಟಿಯಲ್ಲಿ ಕುಮಾರವ್ಯಾಸನ ಅಸ್ತಿತ್ವವನ್ನು ಕುರಿತು ಇತ್ತೀಚೆಗೆ ನಡೆದ ಚರ್ಚೆಯ ಹಿನ್ನೆಲೆಯಲ್ಲಿ ಸಂಪಾದಕರು ಪ್ರತಿಷ್ಠಾನದ ಲೋಚನದಲ್ಲಿ ತಮ್ಮ ಅಭಿಪ್ರಾಯವನ್ನು ನೀಡಿದ್ದ ಸಂದರ್ಭದಲ್ಲಿ ಈ ಪಡಿಯಚ್ಚನ್ನು ಮುದ್ರಿಸಿ, ಈ ಗ್ರಂಥದ ಮುಖಪುಟದಲ್ಲಿ ಮುದ್ರಿಸಬೇಕೆಂದು ಆಶಿಸಿದ್ದರು. ಈ ಭಾವಚಿತ್ರವನ್ನು ನಮಗೆ ಒದಗಿಸಿಕೊಟ್ಟ ತರೀಕೆರೆಯ ಮಾನ್ಯ ಮಿತ್ರರನ್ನೂ ನಾವು ಇಲ್ಲಿ ನೆನೆಯುತ್ತೇವೆ.

ಎನ್. ಎಸ್. ರಾಮಸ್ವಾಮಿ ಅಯ್ಯರ್
ವಿ. ವೆಂಕಟರಾವ್
ಸಂಪಾದಕೀಯ ಸಹಾಯಕರು

ಸಂಕೇತಾಕ್ಷರಗಳ ವಿವರ

ಅ : ಕನ್ನಡ ಅಧ್ಯಯನ ಸಂಸ್ಥೆ ಪ್ರಕಟಿಸಿರುವ ಬಿಡಿ ಪರ್ವಗಳು.

ಆ : ಆಧಾರಪ್ರತಿ ; ಬಿ.ಎಂ.ಶ್ರೀ. ಮುಂತಾದವರು ಸಿದ್ಧಮಾಡಿದ್ದ ಕಾಗದದ ಪ್ರತಿ. (ಅಸಮಗ್ರ) ಪ್ರತಿಕಾರರು ಓ. ವೆಂಕಟರಾವ್. ಇದರ ಮೂಲ ನಮೂದಿಸಿಲ್ಲ.

ಓ : ಆಧಾರ ಪ್ರತಿಯಲ್ಲಿ ಉಲ್ಲೇಖಿಸಿರುವ ಓರಿಯಂಟಲ್ ಗ್ರಂಥಾಲಯ ಪ್ರತಿ.

ಕುವಮಾ : ಕುವೆಂಪು, ಮಾಸ್ತಿಯವರ ಸಂಪಾದಕತ್ವದಲ್ಲಿ ಪ್ರಕಟವಾಗಿರುವ ಜನಪ್ರಿಯ ಆವೃತ್ತಿ.

ಕ : ಆಧಾರ ಪ್ರತಿಯಲ್ಲಿ ನಮೂದಿಸಿರುವ ಪಾಠ.

k : ಆಧಾರ ಪ್ರತಿಯಲ್ಲಿ ಉಲ್ಲೇಖಿಸಿರುವ ಕಿಟ್ಟೆಲ್ ಅವರ ಸೈಕ್ಲೊಸ್ಟೈಲ್ ಪ್ರತಿ.

ಪ್ರ : ಪ್ರತಿಷ್ಠಾನದ ಹಸ್ತಪ್ರತಿ ಭಂಡಾರದಲ್ಲಿರುವ ಹಸ್ತಪ್ರತಿ ಓ/೬೯-೧,೨.

ಪೇ : ಪೇಟೆ ಮುದ್ರಣದ ಪ್ರತಿ.

ಸ : ಆಧಾರ ಪ್ರತಿಯಲ್ಲಿ ಉಲ್ಲೇಖಿಸಿರುವ ಸರಸ್ವತೀ ಭಂಡಾರದ ಪ್ರತಿ. ಇದಕ್ಕೆ "ಅ" ಪ್ರತಿಯಲ್ಲಿ "ರ" ಎಂಬ ಸಂಕೇತಾಕ್ಷರ ಇದೆ. "ಆ" ಪ್ರತಿಯಲ್ಲಿ "ಏ" ಎಂದು ಸೂಚಿಸಿದೆ.

ಸರ್ವತ್ರ : ಸಂಪಾದಕ ವರ್ಗ ನೋಡಿರುವ ಎಲ್ಲ ಪ್ರತಿಗಳಲ್ಲೂ ಇರುವ ಪಾಠ.

* : ಈ ಚಿಹ್ನೆ ಇರುವ ಕಡೆ ಶಿಥಿಲ ದ್ವಿತ್ವ.

[ ] : ಈ ಕಂಸದಲ್ಲಿರುವುದು ಸಂಪಾದಕರ ಪಾಠಪರಿಷ್ಕರಣ.

ಸ್ವೀಪಾ : ಸ್ವೀಕೃತಪಾಠ. ಅದರ ಮುಂದೆ ( ) ಕಂಸದಲ್ಲಿ ಯಾವ ಪ್ರತಿಯಿಂದ ಎಂದು ಸೂಚಿಸಿದೆ.

ಪರಿವಿಡಿ

—o—

ಕುಮಾರವ್ಯಾಸ ಭಾರತ ಸಂಗ್ರಹ

ಆದಿಪರ್ವ

ಪೀಠಿಕೆ ೧

ಶ್ರೀವನಿತೆಯುರಸನೆ ವಿಮಲ ರಾ-
ಜೀವಪೀಠನ [1]ಪಿತನೆ[1] ಜಗಕತಿ
ಪಾವನನೆ ಸನಕಾದಿಸಜ್ಜನನಿಕರದಾತಾರ ।
ರಾವಣಾಸುರಮಥನ ಶ್ರವಣಸು-
ಧಾವಿನೂತನಕಥನಕಾರಣ
ಕಾವುದಾನತಜನವ ಗದುಗಿನ ವೀರನಾರಯಣ ॥ ೧ ॥

*ಗಜಮುಖನೆ ಮೆಱೆವೇಕದಂತನೆ
ನಿಜಗುಣಾನ್ವಿತ ಪರಶುಧಾರನೆ
ರಜತಗಿರಿಗೊಡೆಯನ ಕುಮಾರನೆ ವಿದ್ಯೆವಾರಿಧಿಯೆ ।
ಅಜನು ಹರಿರುದ್ರಾದಿಗಳು ನೆಱೆ
ಭಜಿಸುತಿಹರನವರತ ನಿನ್ನನು
ತ್ರಿಜಗ[1]ವಂದಿತ[1]ಗಣಪ ಮಾಳ್ಪುದು ಮತಿಗೆ ಮಂಗಳವ ॥ ೨ ॥

ಪಾಠಾಂತರ :—

೧. 1 ಜನಕ (ಕ).

ಶಬ್ದಾರ್ಥ :—

[ಆನತ-ಬಾಗಿದ, ನಮಸ್ಕರಿಸಿದ].

೨. 1 ಪೂಜಿತ (ಕ).

[ಅಜ-ಬ್ರಹ್ಮ].

ವಿ. ಸೂ. :—

*ಗಣಪತಿ ಪ್ರಾರ್ಥನೆ ಯನ್ನು 'ಆ' ಪ್ರತಿಯಲ್ಲಿ ಸೇರಿಸಿಕೊಂಡಿಲ್ಲ, ಇಲ್ಲಿ ಸೇರಿಸಿಕೊಂಡಿದೆ.

ಶರಣ[1]ಸಂಗ[1]ವ್ಯಸನ ಭುಜಗಾ-
ಭರಣ ಅಮರಕಿರೀಟಮಂಡಿತ-
ಚರಣ ಚಾರುಚರಿತ್ರ ನಿರುಪಮ[2]ಫಾಲ[2]ಶಿಖಿನೇತ್ರ ।
ಕರಣನಿರ್ಮಲಭಜಕರಘಸಂ-
ಹರಣ ದಂತಿಚಮೂರು[3]ಚರ್ಮಾಂ-
ಬರನೆ[3] ಸಲಹುಗೆ ಭಕ್ತಜನರನು ಪಾರ್ವತೀರಮಣ ॥ ೧ ॥

ವಾರಿ[1]ಜಾನನೆ[1] ಸಕಲಶಾಸ್ತ್ರವಿ-
ಚಾರ[2]ದು[2]ದ್ಭವೆ ವಚನರಚ[3][ನಾ
ಕಾ][3]ರೆ ಶ್ರುತಿಪೌರಾಣದಾಗಮಸಿದ್ಧಿದಾಯಕಿಯೆ ।
ಶೌರಿ ಸುರಪತಿ ಸಕಲಮುನಿಜನ
ಸೂರಿಗಳಿಗನುಪಮದ ಯು[4]ಕ್ತಿ[4]ಯೆ
ಶಾರದೆ[5]ಯೆ ನರ್ತಿಸುಗೆ[5] ನಲಿದೊಲಿದೆನ್ನ ಜಿಹ್ವೆಯಲಿ ॥ ೨ ॥

ವೀರನಾರಾಯಣನೆ ಕವಿ ಲಿಪಿ-
ಕಾರಕುವರವ್ಯಾಸ ಕೇಳುವ
ಸೂರಿಗಳು ಸನಕಾದಿಗಳು ಜಂಗಮಜನಾರ್ದನರು ।
[1]ಜಾರ[1] ಕವಿತೆಯು ಬಳಕೆಯಲ್ಲ ವಿ-
ಚಾರಿಸು[2]ವೊಡ[2]ಳವಲ್ಲ ಚಿತ್ತವ-
ಧಾರು ಹೋ ಸರ್ವಜ್ಞರಾದರು ಸಲುಗೆ ಬಿನ್ನಪವ ॥ ೩ ॥

---

೧. [1]ಸುಜನ (ಕ). [2]ಭಾಳ (ಅ, ಆ. ಕುಮಾ), ಸ್ವೀಪಾ (ಓ). [3]ಚರ್ಮಾವರಣ (ಆ), ಸ್ವೀಪಾ (ಕ, ಕುಮಾ, ಪ್ರ).

[ಫಾಲ-ಹಣೆ ಅಘ-ಪಾಪ. ಚಾರು-ಮನೋಹರವಾದ. ದಂತಿ-ಆನೆ. ಚಮೂರು-ಜಿಂಕೆ. ಚರ್ಮಾಂಬರ-ಚರ್ಮವನ್ನೇ ಬಟ್ಟೆಯನ್ನಾಗಿ ಹೊಂದಿರುವವನು, ಶಿವ].

೨. [1]ಜಾಸನೆ (ಪ್ರಕ ಕುಮಾ). [2]ದೋ (ಅ, ಆ), ಸ್ವೀಪಾ (ಕ). [3]ನೋದ್ಧಾ (ಆ ಕುಮಾ), ಕಾರು (ಪ್ರ). [4]ಕುತಿ (ಅ ಆ ಕುಮಾ), ಸ್ವೀಪಾ (ಓ). [5]ಯ ನರ್ಚಿಸುವೆ (ಕ).

[ಶೌರಿ-ಕೃಷ್ಣ, ವಿಷ್ಣು. ಸೂರಿ-ವಿದ್ವಾಂಸ. ಜಿಹ್ವೆ-ನಾಲಿಗೆ. ಆನನ-ಮುಖ].

೩ [1]ಚಾರು (ಪ್ರ ಕುಮಾ), ಜಾರು (ಅ). [2]ವರ (ಪ್ರ).

[ಜಾರ-ಹಾದರದ, ವ್ಯಭಿಚಾರಿ. ಚಿತ್ತ-ಮನಸ್ಸು. ಜಂಗಮ-ವಿರಕ್ತ, ಅಯ್ಯ].

ದುರಿತಕುಲಗಿರಿವಜ್ರದಂಡನು
ಧರೆ[1]ಗೆ[1] ಜಂಗಮ[2]ಮುಕುತಿ[2] ಕವಿವಾ-
ರಿರುಹದಿನಮಣಿ ನಿಖಿಲಯತಿಪತಿದಿವಿಜವಂದಿತನು ।
ತರಳ[3]ನನು ತನ್ನವನೆನುತ[3] ಪತಿ
ಕರಿಸಿ ಮಗನೆಂದೊಲಿದು [4]ಕರುಣದಿ[4]
ವರವನಿತ್ತನು ದೇವ ವೇದವ್ಯಾಸ[5]ಗುರು[5]ರಾಯ || ೬ ||

*ತಿಳಿಯ ಹೇಳುವೆ ಕೃಷ್ಣಕಥೆಯನು
ಇಳೆಯ ಜಾಣರು ಮೆಚ್ಚುವಂತಿರೆ
ನೆಲೆಗೆ ಪಂಚಮ ಶ್ರುತಿಯನೊಱೆವೆನು ಕೃಷ್ಣ ಮೆಚ್ಚಲಿಕೆ ।
ಹಲವು ಜನ್ಮದ ಪಾಪರಾಶಿಯ
ತೊಳೆವ ಜಲವಿದು ಶ್ರೀಮದಾಗಮ-
ಕುಲಕೆ ನಾಯಕ ಭಾರತಾಕೃತಿ ಪಂಚಮ ಶ್ರುತಿಯ || ೭ ||

ಹಲಗೆಬಳಹವ ಪಿಡಿಯದೊಂದ-
ಗ್ಗಳಿಕೆ ಪದವಿಟ್ಟ[1]ಳ[1]ಪದೊಂದ-
ಗ್ಗಳಿಕೆ ಪರರೊಡ್ಡವದ ರೀತಿಯ ಕೊಳ್ಳದಗ್ಗಳಿಕೆ ।
ಬಳಸಿ ಬರೆಯಲು ಕಂಠಪತ್ರ[2]ದೊ-
ಳು[2]ಲುಹುಕೆಡದಗ್ಗಳಿಕೆ ಯೆಂಬೀ
ಬಲುಹು ಗದುಗಿನ ವೀರನಾರಾಯಣನ ಕಿಂಕರಗೆ || ೮ ||

ತಿಣಿಕಿದನು ಫಣಿರಾಯ ರಾಮಾ-
ಯಣದ ಕವಿಗಳ ಭಾರದಲಿ ತಿಂ-
ತಿಣಿಯ ರಘುವರಚರಿತೆಯಲಿ ಕಾಲಿಡಲು ತೆಱಪಿಲ್ಲ !

---

೬. [1]ಯ (ಕುಮಾ ಅ), ಸ್ವೀಪಾ (ಪ್ರ ಕ). [2]ಮೂರ್ತಿ (ಕ ಕುಮಾ). [3]ತನ್ನವನೆಂದುಮಿಗೆ (ಅ). [4]ಕೃಪೆಯಲಿ (ಪ್ರ). [5]ಮುನಿ (ಕ ಓ).
[ದಿನಮಣಿ–ಸೂರ್ಯ. ಪತಿಕರಿಸು–ದಯೆತೋರು, ಪ್ರೀತಿಸು. ಉಲುಹು–ಧ್ವನಿ, ಕೂಗು. ಬಲುಹು–ಕೆಚ್ಚು. ಸಾಮರ್ಥ್ಯ].

೮. [1]ಳು. [2]ದ ಉ (ಕುಮಾ), ಸ್ವೀಪಾ (ಪ್ರ ಕ ಅ).
[ದಿವಿಜ–ದೇವತೆ. ತರಳ–ಬಾಲಕ. ಅಗ್ಗಳಿಕೆ–ದೊಡ್ಡಸ್ತಿಕೆ].

---

* 'ಅ' ಪ್ರತಿಯಲ್ಲಿ ಈ ಪದ್ಯ ಇಲ್ಲ. ಇದನ್ನು 'ಕುಮಾ' ಪ್ರತಿಯಿಂದ ಸ್ವೀಕರಿಸಿದೆ.

ಬಣಗುಕವಿಗಳ [1]ಬಗೆವನೇ[1] ಸಾ-
ಕೆಣಿಸದಿರು ಶುಕರೂಪನಲ್ಲ[2]ದೆ[2]
ಕುಣಿಸಿ ನಗನೇ ಕವಿ ಕುಮಾರವ್ಯಾಸನುಳಿದವರ ॥ ೯ ॥

ಅರಸುಗಳಿಗಿದುವೀರ ದ್ವಿಜರಿಗೆ
ಪರಮವೇದದ ಸಾರ ಯೋಗೀ-
ಶ್ವರರ ತತ್ತ್ವವಿಚಾರ ಮಂತ್ರಿಜನಕ್ಕೆ ಬುದ್ಧಿಗುಣ ।
ವಿರಹಿಗಳ ಶೃಂಗಾರ ವಿದ್ಯಾ-
ಪರಿಣತರ[1]ಲಂಕಾರ[1]ಕಾವ್ಯಕೆ
ಗುರುವೆನಲು ರಚಿಸಿದ ಕುಮಾರವ್ಯಾಸ ಭಾರತವ ॥ ೧೦ ॥

ವೇದ ಪಾರಾಯಣದ ಫಲ ಗಂ-
ಗಾದಿ ತೀರ್ಥಸ್ನಾನ ಫಲ ಕೃ-
ಚ್ಛ್ರಾದಿ ತಪಸಿನ ಫಲವು ಜ್ಯೋತಿಷ್ಟೋಮಯಾಗ ಫಲ ॥
ಮೇದಿನಿಯನೊಲಿದಿತ್ತ ಫಲ ವ-
ಸ್ತ್ರಾದಿ ಕನ್ಯಾದಾನ ಫಲವಹು-
ದಾದರಿಸಿ ಭಾರತದೊಳೊಂದಕ್ಷರವ ಕೇಳ್ದರಿಗೆ ॥ ೧೧ ॥

ವೇದಪುರುಷನ ಸುತನ ಸುತನ ಸ-
ಹೋದರನ ಹೆಮ್ಮಗನ ಮಗನ ತ-
ಳೋದರಿಯ ಮಾತುಳನ ಮಾವನನತುಳ ಭುಜಬಲದಿ ॥
ಕಾದಿ ಗೆಲಿದನನಣ್ಣನವ್ವೆಯ
ನಾದಿನಿಯ ಜಠರದಲಿ ಜನಿಸಿದ-
ನಾದಿಮೂರುತಿ ಸಲಹೊ ಗದುಗಿನ ವೀರನಾರಯಣ ॥ ೧೨ ॥

---

೯. [1]ಲೆಕ್ಕಿಪನೆ (ಕುಮಾ ಆ ಓ), (ಸ್ವೀಪಾ. ಕ). [2]ವೆ (ಕುಮಾ ಅ), (ಸ್ವೀಪಾ. ಕ).
[ತಿಂತಿಣಿ–ಸಮೂಹ. ಶುಕ–ಕೃಷ್ಣದ್ವೈಪಾಯನನ ಮಗ. ತೆರವು–ದಾರಿ, ಮಾರ್ಗ. ಬಣಗು–ಅಲ್ಪ, ಕ್ಷುದ್ರ].

೧೦. [1]ಸುಪ್ರೌಢ (ಅ), (ಸ್ವೀಪಾ. ಓ).
[ಪರಿಣತ–ಪ್ರೌಢ, ಪಕ್ವ].

೧೧–೧೨ ಈ ಪದ್ಯಗಳನ್ನು ಹೊಸದಾಗಿ ಸೇರಿಸಿದೆ. ೧೨ ಈ ಪದ್ಯವು ಅನೇಕ ಪ್ರತಿಗಳಲ್ಲಿ ದೊರೆಯುವುದಿಲ್ಲ. 'ಕುಮಾ' ಪ್ರತಿಯಲ್ಲಿ ಮಾತ್ರ ಇರುತ್ತದೆ.

ಸಿರಿಕೆ ೨

೧. ಪಾಂಡವರು ಹಸ್ತಿನಾಪುರಕ್ಕೆ ಬಂದದ್ದು

ಸೂಚನೆ

*ಭರತ ವಂಶದೊಳೈದು ಮಿಗೆ ನೂ-
ರ್ವರು ಕುಮಾರರು ಪಾಂಡು ಧೃತರಾ-
ಷ್ಟ್ರರಿಗೆ ಜನಿಸಿವರಮಲ ಮುನಿ ಮಂತ್ರೋಪದೇಶದಲಿ
ವರಮುನಿಯ ಶಾಪದಲಿ ಸರಿದನು
ಸುರರ ನಗರಿಗೆ ಪಾಂಡು ಹಸ್ತಿನ
ಪುರಕೆ ತಂದರು ಪರಸು ಮುನಿಗಳು ಪಾಂಡುನಂದನರ

ಸುತವಿನೋದದ ಸಿರಿಗೆ ಅಮರಾ-
ವತಿಯ ಸಿರಿ ತೊತ್ತೆಂದು ವಿಮಲ-
ವ್ರತತಪೋಲಕ್ಷ್ಮಿಗೆ ವಿಲಾಸಿನಿಮುಕ್ತಿವಧುವೆಂದು ।
ಯತಿಪದಾಂಬುಜನಿತ್ಯಸೇವಾ-
ಸತಿಗೆ ದಾಸಿ ಜಗತ್ರಯಾ[1]ಧಿ
ಸ್ಥಿತ[1]ಪದವಿಯೆಂದುಬ್ಬಿದನು ಕಲಿ ಪಾಂಡು ವಿಪಿನದಲಿ ॥ ೧ ॥

ವರುಷ ಹದಿನಾಱೆಯ್ದು ಧರಣೀ-
ಶ್ವರನ ಹಿರಿಯು ಮಗಂಗೆ ಭೀಮಗೆ
ವರುಷ ಹದಿನೈದರ್ಜುನಗೆ ಹದಿನಾಲ್ಕು ಹದಿಮೂಱು ।
ಕಿಱಿಯರಿಬ್ಬರಿಗನಿಬರಾ ಮುನಿ-
ವರರಿನಧ್ಯಯನಾದಿವಿದ್ಯಾ
ನಿರತರಾದರು ಬಂದುದೊಂದು ವಸಂತಮಯಸಮಯ ॥ ೨ ॥

---

೧. [1]ದಿಸ್ಥಿತಿ (ಕುಮಾ ಅ), ಸ್ವೀಪಾ (ಕ ಓ k).
[ವಿಪಿನ–ಕಾಡು. ಸಿರಿ–ಐಶ್ವರ್ಯ. ನಿರತ–ಆಸಕ್ತ, ತಲ್ಲೀನವಾದ].

---

*'ಶ್ರೀ'ಯವರು ಮುಂದಿನ ಕಥೆಗೆ ಪೂರ್ವವೃತ್ತಾಂತವಾಗಿ ಸಂಕ್ಷೇಪವಾಗಿ ತಿಳಿಸುವ ಸಲುವಾಗಿ ನಾಲ್ಕನೇ ಸಂಧಿಯ ಸೂಚನಾಪದ್ಯವನ್ನೂ ಐದನೇ ಸಂಧಿಯ ಸೂಚನಾಪದ್ಯವನ್ನೂ ಒಂದುಗೂಡಿಸಿ ಒಂದು ಪದ್ಯವನ್ನಾಗಿ ಪ್ರಕರಣಾರಂಭದಲ್ಲಿ ಸೇರಿಸಬಹುದೆಂದು ಸೂಚಿಸಿದ್ದಾರೆ. ಅವರ ಸೂಚನೆಯನ್ನು ಸ್ವೀಕರಿಸಿದೆ.

ತೆಗೆದುದಗ್ಗದ ತಂಪು ನದಿಸರ-
ಸಿಗಳ ತಡಿಯಲಿ ಹಜ್ಜೆಯಾದುದು
ಹಗಲು ಹಾವಸೆ ಹರೆದು[1]ದೋಂಕರಿಸಿದುದು[1] [2]ಜಲ ಹಿಮವ[2] ।
ಸೊಗಸಿದವು ನೆಳಲುಗಳು ದೂರಕೆ
ಸೆಗಳಿಕೆಗಳೇಱಿದವು ತಂಗಾ-
ಳಿಗೆ ವಿಹಾರಿಸಿ ಮೈಯು ತೆತ್ತುದು ಕೂಡೆ ಜನನಿಕರ ॥ ೩ ॥

ಯೋಗಿಗೆತ್ತಿದ ಖಡುಗಧಾರೆ ವಿ-
ಯೋಗಿ[1]ಗೊಡ್ಡಿದ[1] ಸಬಳವಖಿಳ ವಿ-
ರಾಗಿಗಳ ಹೆಡತಲೆಯ ದಡಿ ನೈಷ್ಠಿಕರಿಗಲಗಣಸು ।
ಆಗಮಿಕರೆದೆಶೂಲ ಗರ್ವಿತ
[2]ರಾಗಿ[2]ಗಳ [3]ಗಳಗಾಣವೆಗ್ಗಳ[3]
ಭೋಗಿಗಳ ಕುಲದೈವವೆಸೆದುದು ಕುಸುಮಸಮಯ ॥ ೪ ॥

ಮೊಱೆವ ತಂಬಿಯ ಗಾಯಕರ ನಯ
ಸರದ ಕೋಕಿಲಪಾಠಕರ ಬಂ-
ಧುರದ ಗಿಳಿಗಳ ಪಂಡಿತರ ಮಾಮರದ ಕರಿಘಟೆಯ ।
ಅರಳಿ[1]ದಬುಜದ[1] ಸತ್ತಿಗೆಯ ಮಂ-
ಜರಿಯ ಕುಸುಮದ ಚಾಮರದ ಚಾ-
ತುರ ವಸಂತನೃಪಾಲ ನಡೆದನು ಪಾಂಡುವಿನ ಮೇಲೆ ॥ ೫ ॥

---

೩. [1]ದುದೊಕ್ಕರಿಸಿದುದು (ಅ), ಹೊಕ್ಕರಿಸು (ಕುಮಾ), ಸ್ವೀಪಾ (ಕ k)
[2]ಹಿಮಜಲವ (ಕ ಅ ಕುಮಾ), ಸ್ವೀಪಾ (ಕ).

[ಸೆಗಳಿಕೆ–ಉಷ್ಣ, ಕಾವು. ನಿಕರ–ಗುಂಪು. ಹಾವಸೆ–ಪಾಚಿ].

೪. [1]ಗೆತ್ತಿದ (ಕುಮಾ ಅ), ಸ್ವೀಪಾ (k). [2]ಗೂಗೆ (ಅ ಕುಮಾ), ಸ್ವೀಪಾ (ಅ.). [3]ನಖಿಸಾಳ ವಗ್ಗದ (ಅ ಕುಮಾ), ಸ್ವೀಪಾ (ಬಿ).

[ಸಬಳ–ದೊಣ್ಣೆ, ಬಡಿಗೆ, ಹೆಡತಲೆ–ತಲೆಯ ಹಿಂಭಾಗ. ದಡಿ–ಕೋಲು. ನೈಷ್ಠಿಕ–ನಿಷ್ಠೆಯುಳ್ಳವನು. ಅಲಗಣಸು–ಅಲಗುಳ್ಳ ಬಾಣದ ಹಿಳುಕು. ಕುಸುಮಸಮಯ–ವಸಂತ ಋತು].

೫. [1]ದಂಬುಜ (ಅ ಕುಮಾ), ಸ್ವೀಪಾ (ಅ).

[ನಯಸರ–ನುಣ್ದನಿ. ಕರಿಘಟೆ–ಆನೆಗಳ ಹಿಂಡು. ಕುಸುಮ–ಹೂ. ಪಾಠಕ–ಓದುವವನು, ವಾಚಿಸುವವನು. ಕೊಂಚೆ–ಕ್ರೌಂಚಪಕ್ಷಿ. ಚಾತುರ–ಚತುರ, ಜಾಣ. ನೃಪಾಲ–ರಾಜ].

ಪಸರಿಸಿತು ಮಧುಮಾಸ ತಾವರೆ
ಯೆಸಳದೋಣಿಯ ಮೇಲೆ ಹಾಯ್ದವು
ಕುಸುಮರಸದುಬ್ಬರದ ತೊಱೆಯನು ಕೂಡೆ ತುಂಬಿಗಳು ।
ಒಸ*ರ್ವ ಮಕರಂದದ [1]ತುಷಾರದ[1]
ಕೆಸಱೊಳದ್ದವು ಕೊಂಚೆಗಳು ಹಗ-
ಲೆಸೆವ ದಂಪತಿವಕ್ಕಿ ಸಾರಸರಾಜಹಂಸೆಗಳು ॥ ೬ ॥

ಆ ವಸಂತದೊಳೊಮ್ಮೆ ಮಾದ್ರೀ-
ದೇವಿ ವನದೊಳಗಾಡುತಿರ್ದಳು
ಹೂವಿನಲಿ ಸರ್ವಾಂಗಶೃಂಗಾರದ ವಿಲಾಸದಲಿ ।
ಆವಳಿವಳೂರ್ವಶಿಯೊ ರಂಭೆಯೊ
ದೇವವಧುಗಳ ಸುಳಿವೊ ತಾ[1]ನೆನ
ಲಾ[1]ವ ಚೆಲುವಿಕೆ ಶಿವಶಿವಾ ಯೆಂದರಸ ಬೆಱಗಾದ ॥ ೭ ॥

ಮಱೆದು ಹಿಂದೆಲ್ಲವನು ಕುಂತಿಯ-
ನಱಿಯಲೀಯದೆ ಮೆಲ್ಲಮೆಲ್ಲನೆ
ತುಱುಗಿದೆಳಲತೆ [1]ವನದೊ[1]ಳಾಡುವ [2]ಸತಿಯ[2] ಸಾರಿದನು ॥
ಸೆಱಗ ಹಿಡಿದರೆ ಬೇಡ ಬೇಡೆಂ-
ದೆಱಗಿದಳು ಚರಣದಲಿ ತರುಣಿಯ
ತುಱುಬ ಹಿಡಿದೆತ್ತಿದನು ಹೆಣಗಿದ[3]ನೊ[3]ಡನೆ [4]ಜೋಂ[4]ಪಿಸಿದ ॥ ೮ ॥

---

೬. [1]ಪರಾಗದ (ಅ).
[ಮಧುಮಾಸ–ಚೈತ್ರಮಾಸ. ತುಷಾರ–ಹಿಮ, ತುಂತುರು. ಮಕರಂದ–ಹೂವಿನ ರಸ, ಬಂಡು].

೭. [1]ನೇನಾ (ಅ).
[ತುಱುಬು–ಜಡೆ, ಮುಡಿ. ಹೆಣಗು–ಬಡಿದಾಟ, ಪ್ರಯತ್ನ].

೮. [1]ವನೆಯೊ (ಪ್ರ). [2]ವಧುವ (ಅ ಆ), ಸ್ವೀಪಾ (ಓ, k). [3]ರೊ (ಅ ಆ ಕುಮಾ), ಸ್ವೀಪಾ (ಕ). [4]ಜೊಂ (ಕ), ಝೋಂ (ಪ್ರ ಕುಮಾ).
[ಚರಣ–ಪಾದ].

ಆ ಸುಖದ ¹ಜೋಂಪಿನಲಿ¹ ಮುಱಿದವ್ರೋ-
ಲೋಸರಿಸಿದುದು ವದನ ಕಂಗಳು
ಸ್ವೈಸರಿಸಿದವು ತಕ್ಕೆ ಸಡಿಲಿತು ದೇಹ ಭಾರಿಸಿತು
ಸೂಸಿದುದು ನಿಟ್ಟುಸಿರು ರಾಣೀ-
ವಾಸದುರದಲಿ ಕದಪನಿಟ್ಟು ಮ-
ಹೀಶನೊಱಗಿದ ಹದನ ಕಂಡಳು ಕಾಂತೆ ಭೀತಿಯಲಿ ॥ ೯ ॥

ಅಕಟ ಪಾಂಡುಮಹೀಶ ವಿ-
ಷಕನ್ನಿಕೆಯನೆನ್ನನು ಮುಟ್ಟಿದೈ ಬೇ-
ಡಕಟ ಕೆಡಿಸದಿರೆನ್ನನೇ ತಾನಱಿಯೆನೇ ಹದನ ।
ಪ್ರಕಟಕುರುಕುಲತಿಲಕರೀ ಬಾ-
ಲಕರನಾರಿಗೆ ಕೊಟ್ಟೆ ತನ್ನೊಡ-
ನಕಟ ಮುನಿಸೈ ಮಾತನಾಡೆಂದೊಱಲಿದಳು ಮಾದ್ರಿ ॥ ೧೦ ॥

ಏನಿದೆತ್ತಣ ರಭಸ ಮಾದ್ರೀ-
ಮಾನಿನಿಯೊ ಹಾ ರಾಯನಾವೆಡೆ
ಹಾನಿ ಹಿರಿದುಂಟಱಿವೆನಂಗ¹ಸ್ಪಂದ¹ಶಕುನದಲಿ ।
ಏನು ಮಾರಿಯೊ ಶಿವಶಿವಾ ಎನು-
ತಾ ನಿತಂಬಿನಿ ಗಾಢಗತಿಯಲಿ
ಕಾನನವೊಳೈತಂದಳಕ್ಕೆಯ ಸರದ ಬಳಿವಿಡಿದು ॥ ೧೧ ॥

ಅರಸ ತನಗಱುಹದೆ ಸುರಸ್ತ್ರೀ-
ಯರಿಗೆ ಹರಿದೈ ನಿನ್ನ ವಧುಗಳ
ತುಱುಬ ಕೊಯ್ಯುವೆನವರ ತೊತ್ತಿರ ಮಾಡುವೆನು ತನಗೆ ।

---

೯. ¹ಜೊಮ್ಮಿನಲಿ (ಅ), ಝೊ....(ಕುಮಾ).
[ಜೋಂಪು–ಎಚ್ಚರತಪ್ಪು, ಮೈಮರೆವು. ಸ್ವೈಸರಿಸು–ಹಿಂದೆಗೆ. ಕದಪು–ಕೆನ್ನೆ. ಉರ–ಎದೆ. ಹದನ–ರೀತಿ, ಔಚಿತ್ಯ].

೧೦. [ಒಱಲು–ಗೋಳಾಡು].

೧೧. ¹ಸ್ಫುರಿತ (ಕುಮಾ), ಸ್ವೀಪಾ (ಕ ಅ).
[ನಿತಂಬಿನಿ–ಚೆಲುವೆ. ಕಾನನ–ಕಾಡು. ಅಕ್ಕೆಯ ಸರ–ಅಳುವಿನ ದನಿ].

ಅರಸಿ ನೀನೀ ಮಕ್ಕಳನು ¹ಸಂ-
ವರಿಸಿ¹ಕೊಂಡಿಹುದೆಂದು ಮಾದ್ರಿಯು
ಕರವ ಹಿಡಿದರೆ ಕುಂತಿಗೆಂದಳು ಕಾಂತೆ ವಿನಯದಲಿ ॥ ೧೨ ॥

ಮರುಳಲಾ ನೀವಕ್ಕ ನಿಮ್ಮೆಲ-
ವರು ಕುಮಾರರು ನಿಮ್ಮ ಕೈ¹ಯೆ¹ಡೆ
ಧರಣಿಪತಿ ನಿಡುನಿದ್ರೆಗೈದನು ನನ್ನ ತೋಳಿನಲಿ ।
ಸುರವಧುಗಳೊಡನಿರಲಿ ನಿನ್ನಯ
ಹರಿಬವೆನ್ನದು ನೋಡು ತನ್ನಯ
ಪರಿಯನೀತನ ನಿನಗೆ ಕೊಡೆನೆಂದಂಘ್ರಿಗೆರಗಿದಳು ॥ ೧೩ ॥

ಮುನಿಗಳೀಕೆಯ ತಿಳುಹಿ ಮಾದ್ರಿಗೆ
ಜನಪತಿಯ ಸಹಗಮನ¹[ವೇ]¹ ಮತ-
ವೆನಿಸಿ ಶವಸಂಸ್ಕಾರವನು ವೈದಿಕವಿಧಾನದಲಿ ।
ಮುನಿಗಳೇ ಮಾಡಿದರು ಮಾದ್ರೀ-
ವನಿತೆ ತನ್ನ ಕುಮಾರರಿಬ್ಬರ
ತನುಜ ನೀ ಸಲಹೆಂದು ಕೊಟ್ಟಳು ಧರ್ಮಜನ ಕರೆದು ॥ ೧೪ ॥

ಅರಸನಪಗತನಾದನಾ ನೃಪ
ನರಸಿ ಬಾಲಕಿ ಮಕ್ಕಳೈವರು
ಭರತಕುಲಜರು ನಾವು ತಪಸಿಗಳಿರ್ಪುದಾರಣ್ಯ ।
ಅರಿಗ¹ಳಾ¹ ರಾಕ್ಷಸರು ನಾವಿ-
ನ್ನಿರಿಸುವುದು ಮತವಲ್ಲ ಹಸ್ತಿನ-
ಪುರದೊಳೊಪ್ಪಿಸಿ ಬಹುದು ಮತವೆಂದುದು ಮುನಿ²ವ್ರಾತ² ॥ ೧೫ ॥

---

೧೨. ¹ಮುಂದಿರಿಸಿ (ಅ).
[ತುರುಬು–ಮುಡಿ, ಕೂದಲಿನ ಗಂಟು. ಸಂವರಿಸು–ಕಾಪಾಡು, ಸಲಹು].

೧೩. ¹ಲೆ (ಅ ಆ), ಸ್ವೀಪಾ (ಕುಮಾ).
[ಕೈಯೆಡೆ–ಕೈಗೊಪ್ಪಿಸಿದ್ದು, ನ್ಯಾಸ. ನಿಡುನಿದ್ರೆ–ಮರಣ, ಸಾವು. ಹರಿಬ–ಕರ್ತವ್ಯ. ಅಂಘ್ರಿ–ಪಾದ, ಚರಣ].

೧೪. ¹ದಲಿ (ಆ ಅ ಕುಮಾ). ಪರಿಷ್ಕರಣ : ಶ್ರೀ.

೧೫. ¹ಳೀ (ಅ ಆ), ಸ್ವೀಪಾ (ಕ ಕುಮಾ). ²ಸ್ತೋಮ (ಆ ಕುಮಾ). ಸ್ವೀಪಾ (ಕ, ಅ).
[ವ್ರಾತ–ಸಮೂಹ, ಸ್ತೋಮ. ಇಭಪುರಿ–ಹಸ್ತಿನಾವತಿ].

ಎಂದು ಕುಂತೀದೇವಿಸಹಿತಾ
ನಂದನರನೈವರನು ಮುನಿಗಳು
ತಂದರಿಭಪುರಿಗಾಗಿ ಭೀಷ್ಮಾದಿಗಳಿಗೀ ಹದನ ।
ಮುಂದೆ ಸೂಚಿ[1]ಸಲುತ್ಸವದಲಿದಿ[1]
*ರ್ವಂದರಸಿಬರು ಶುಭಮುಹೂರ್ತದೊ-
ಳಂದು ನಗರಿಯು ಹೊಗಿಸಿದನು ಪರಿತೋಷದಲಿ ಭೀಷ್ಮ ॥ ೧೬ ॥

---

೨. ಕೌರವ ಪಾಂಡವರ ವೈರ : ಶಸ್ತ್ರಾಭ್ಯಾಸ

ಕೇಳು ಜನಮೇಜಯಮಹೀಪತಿ
ಬಾಲಕರು [1][ನೂಱೈದು][1] ಮೆಱೆದರು
ಬಾಲಕೇಳೀವ್ಯಸನಿಗಳು ಹೊಱವಳಯದಲಿ ಪುರದ ।
ಆಳನೇಱಿಕೆ ಹಿಡಿಗವಡೆ ಗುಱಿ
ಯಾಳು ಚೆಂಡಿನ ಹೊಣಕೆ ಚಣಿಕೋ-
ಲಾಳುಗೊತ್ತಿನ ದಂಡೆಯುನೆ ನಾನಾವಿನೋದದಲಿ ॥ ೧೭ ॥

ಗುಡುಗು ಗುತ್ತಿನ ಚೆಂಡು ಗುಮ್ಮನ
ಬಡಿವ ಕತ್ತಲೆಗುದ್ದು [1]ಕಂಬದ
ಕಡೆಗೆ[1] ಕಣ್ಣುಮುಚ್ಚು[2]ಗವರಿ[2] ಹರಿ[3]ಲಗೆ[3] ಸಿಡುಗವಣೆ ।
ಕೆಡಹು ಕುಟ್ಟಿಗನಾದಿಯಾದವ-
ಗಡ ವಿನೋದದಲಾಡಿದರು ವಂ-
ಗಡದಲೈವರು ನೂರ್ವರಿವರಿತ್ತಂಡ ವೊಂದಾಗಿ ॥ ೧೮ ॥

---

೧೬. [1]ಸಿ ಕಳುಹಲವರಿದಿ (ಅ).
[ಹೊಗಿಸು-ಪ್ರವೇಶಿಸು. ಪರಿತೋಷ-ಅತ್ಯಂತ ಆನಂದ, ಹಿಗ್ಗು].

೧೭. [1]ನೂರಾರು-(ಅ ಅ ಕುಮಾ).
[ವ್ಯಸನಿಗಳು-ಅತ್ಯಾಸಕ್ತರು. ಹೊಣಕೆ-ಸ್ಪರ್ಧೆ, ಹುರುಡು].

೧೮. [1]ಗಂಬಗೆ ಗಡಣೆ (ಅ), ಗಂಬದತಡೆಗೆ (ಅ), ಸ್ವೀಪಾ (k). [2]ಗವಡೆ (ಕ ಅ).
[3]ಹಲಗೆ (ಅ), ಸ್ವೀಪಾ (ಅ).
[ಕುಟ್ಟಿಗ-ಲಾಗಹಾಕುವ ಆಟ. ಅವಗಡ-ಸಾಹಸ.]

ಅದಱೊಳೊಬ್ಬನೆ ಭೀಮನನಿಬರ
ಸದೆವ ತಾ ಸೋತೊಡೆ ವಿಭಾಡಿಸಿ
ಕೆದಱುವನು ಗೆದ್ದೋಡಿದೊಡೆ ಬೆಂಬತ್ತಿ ಹಿಡಿದೆಳೆದು ।
ಸದೆದು ಬಿಡುವನು ಮುನ್ನ ಭೀಷ್ಮಂ-
ಗೊದ[1]ಱಿ ದೂಱುವರನಿಬರೂ[1] ಮೇ-
ಳದಲಿ ಮಗುಳೊಂದಾಗಿ ಸಂಗಡವಹರು ಸೂಱುಳಿ[2]ದು[2] ॥ ೧೯ ॥

ಕೆಣಕಿ ದುರ್ಯೋಧನನ ನೆತ್ತಿಯ-
ನಣೆದು ಹಾಯ್ವನು ನಿಮ್ಮ ನೂರ್ವರ
ಬಣಗುಗಳಿಗೆಡಗಾಲ ತೊಡರಿಂದೆ ಬನ್ನಿ ನೀವೆನುತ ।
ಗುಣವ ನುಡಿದೊಂದಾಗಿ ಕೆಳೆಗೊಂ-
ಡಣಕಿಸದೆ ವೈಮಱಿಸಿ ಮಱೆಯಲಿ
[1]ಹಣಿ[1]ದು ಬಿಡುವ[2]ನು[2] ಭೀಮ[3]ನಾ[3] ದುರ್ಯೋಧನಾದಿ[4]ಗಳ[4] ॥ ೨೦ ॥

ಅಳುತ ಧೃತರಾಷ್ಟ್ರಂಗೆ ಭೀಮನು
ಕಳೆದ ಹಲುಗಳನೊಡೆದ ಮೊಳಕಾ-
ಲ್ಗಳನು ತೋಱಿಸಿ ದೂಱುವರು ದುರ್ಯೋಧನಾದಿಗಳು ।
ಮುಳುಮೊನೆಗಳಲಿ [1]ಗೀಱಿ[1] [2]ನೆತ್ತರ
ಕಳೆದು[2] ಹುಡಿಯಲಿ ಹೊರಳಿ ತಾ ಬಂ-
ದಳುತ ಧೃತರಾಷ್ಟ್ರಂಗೆ ಭೀಷ್ಮಗೆ ದೂಱುವನು ಭೀಮ ॥ ೨೧ ॥

---

೧೯. [1]ರಿದೂರುವನನಿಬರನು (ಕ ಅ). ಱಿ ಸಂತೈಸುವನು ತಾ (ಅ), ...ರು (**k**). [2]ತು (ಅ).

[ಸೂಱುಳ್ (ಳು)-ಶಪಥಮಾಡು. ಬಣಗು-ಅಲ್ಪ, ಕ್ಷುದ್ರ].

೨೦. [1]ದಣಿ (ಅ), ಸ್ವೀಪಾ (ಕ ಕುಮಾ). [2]ರು (ಅ ಕುಮಾ), ಸ್ವೀಪಾ (ಕ). [3]ನನು (ಅ), ಸ್ವೀಪಾ (ಅ.). [4]ಳು (ಅ ಕುಮಾ), ಸ್ವೀಪಾ (**k**).

[ಹಣಿ-ಹೊಡೆ, ಥಳಿಸು.]

೨೧. [1]ಬಿದಕಿ (ಕ **k**). [2]ನೆತ್ತರುಗಳೆದು (ಅ), ನೆತ್ತರಗಳೆದು (ಕುಮಾ).

[ಸೂಱುಳು-ಶಪಥ, ಪ್ರತಿಜ್ಞೆ. ಮುಳುಮೊನೆ-ಮೊನಚಾದ ತುದಿ. ನೆತ್ತರು-ರಕ್ತ].

ಆಕೆವಾಳರು ಭೀಷ್ಮವಿದುರರು
ಸಾಕು ನಿಮ್ಮೊಳು ನೂಱು [1]ನಾಲ್ವರ-
ಲೀ[1] ಕುಮಾರರು ಬೇಱೆ ನೀನಿಹುದೊಬ್ಬ ಬೇಱೆಂದು ।
ನೂಕಿ ಸೂಱುಳುಮಾಡಿ ಬಿಟ್ಟೊಡೆ
ನಾಕು ಜಾವದೊಳಿಹರು ಮಱುದಿನ-
ವಾ ಕುಮಾರರು ತಮ್ಮೊಳೊಂದಾಗಿಹ[2]ರು ಗೆಳೆಯಾಗಿ[2] ॥ ೨೨ ॥

ಒಂದುದಿನ [[1]ನೂಱ್ವರು[1]] [2]ಬಾಲಕ[2]
ರೊಂದು ಗೆಳೆಯಲಿ ಪುರದ ಹೊರಗಿಹು-
ದೊಂದು ತಾವು[3]ಪ್ರಮಾಣಕೋಟಿಯೆನಿಸಿಪ್ಪ ಪದಱೊಳಗೆ[3] ।
ಬಂದು ನಿಂದರು ಕೋಲ ಬಿಸುಟೀ
ವೃಂದ ಹತ್ತಿತು ಮರವ [4]ಕೋಲನು[4]
ತಂದು [5][ಕಂಡೆ][5]ಡೆಯಾಡಿ ಬಳಲಿದು ನೋಡಿದನು ಭೀಮ ॥ ೨೩ ॥

ಮರನ ಹಿಡಿದಲುಗಿದೊಡೆ ಬಿದ್ದರು
ಭರತಕುಲ[1][ಬಾ][1]ಲಕರು ನೂಱ್ವ-
ವರು ಮಹಾವಾತದಲಿ ತರುಫಲನಿಕರ ಬೀಳ್ವಂತೆ ।
ಶಿರವೊಡೆದು ಬೆನ್ನೊಡೆದು ಮೊಳಕಾಲ್
[2]ಮುಱಿದು[2] ಕೈಗಳು ಮುಱಿದು ನೆತ್ತರು
ಸುರಿದು ಧೃತರಾಷ್ಟ್ರಂಗೆ ದೂಱಿದರನಿಬರೀ ಹದನ ॥ ೨೪ ॥

---

೨೨. [1]ನಾಲ್ಕರು (ಅ ಅ), ನಾಲ್ವವರಾ (ಅ), ಸ್ವೀಪಾ (ಕ.). [2]ರೈದೆಗೆಳೆಯಾಗಿ (ಅ ಕ k).
[ಆಕೆವಾಳ-ಶೂರ, ಪರಾಕ್ರಮಿ].

೨೩. [1]ನೂರಾರು (ಅ ಕುಮಾ), ನೂಱರು (ಅ). [2]ಮಾನಿಸ (ಅ ಅ ಕುಮಾ), ಸ್ವೀಪಾ (ಪ್ರ). [3]ಪ್ರಮಾಣವೃಕ್ಷವ ಕಂಡು ನಡೆತರಲು (ಕುಮಾ). [4]ನಿವನ್ನೈ (ಕುಮಾ), ನೀತನೆ (ಅ), ಸ್ವೀಪಾ (ಸ). [5]ತಂದೆ (ಅ. ಕುಮಾ) ; ಹರಿದೆ (ಸೂಚಿತಪಾಠ : ಶ್ರೀ).

[ಪ್ರಮಾಣಕೋಟಿ-ಗಂಗಾನದಿಯ ಒಂದು ಆಳವಾದ ಮಡು. ಕೌರವನು ಬಾಲ್ಯದಲ್ಲಿ ಭೀಮನಿಗೆ ವಿಷಮಿಶ್ರಿತವಾದ ತಿಂಡಿಯನ್ನು ತಿನ್ನಿಸಿ, ಕೈಕಾಲು ಕಟ್ಟಿಸಿ ಇದೇ ಮಡುವಿನಲ್ಲಿ ಕೆಡವಿದ್ದನು].

೨೪. [1]ಪಾ (ಸರ್ವತ್ರ). ಪರಿಷ್ಕರಣ (ಶ್ರೀ). [2]ಮರಿದು (ಅ), ಜರಿದು (ಕುಮಾ), ಬಿರಿದು (ಅ), ಸ್ವೀಪಾ (ಪ್ರ).
[ಮಹಾವಾತ-ಬಿರುಗಾಳಿ. ತರು-ಮರ].

ದುರುಳನವನೊಡನಾಡಬೇಡೆಂ-
ದರಸನನಿಬರ ಸಂತವಿಟ್ಟನು
ಹಿರಿದು ಹೆಚ್ಚಿತು ಭೀಮದುರ್ಯೋಧನರಿಗತಿವೈರ ।
ಮರಳಿ ತಾ ವೊಂದಾ[1]ಗಿ ಭೀಮನ[1]
ಕರಸಿ ವಿವಿಧಕ್ರೀಡೆಯಲಿ ಮೈ-
ಮಱಿಸಿ [2][ಯಾತನ][2] ಕಟ್ಟಿಹಾಯ್ಕಿದರೊಂದು ಮಡುವಿನಲಿ ॥ ೨೫ ॥

ಮಡುವಿನಲಿ ಹಾಯ್ಕಿದಿರಿ ಹಾವಿನ
ಹೆಡೆಯ ಕೊಂಡೂಱಿದಿರಿ ಬಲುವಿಷ-
ದಡಿಗೆಗಳ ಮೆಲಿಸಿದಿರಿ ಬಲ್ಲಂದದ ವಿಕಾರದಲಿ ।
ಕೆಡಹಲನುಮಾಡಿದಿರಿ ನೂರ್ವರ
ಕಡಿದು ಶಾಕಿನಿಯರಿಗೆ ರಕುತವ
ಕುಡಿಸಿದಲ್ಲದೆ ಮುನ್ನ ಸಾವೆನೆ [1][ಎಂದನಾ ಭೀಮ][1] ॥ ೨೬ ॥

ಒಳಗೆ [1][ಬ][1]ಳೆದುದು ವೈರಶಿಖಿ ಕಡೆ-
ಗಳಕೆ ಹಾಯ್ದುದು ಜನನಿಜನಕರ
[2]ಮೆಲು[2]ನುಡಿಗಳಲಿ ನೂರ್ವರಿರ್ದರು ಶಕುನಿಮತವಿಡಿದು ।
ಬಲುಹುಗುಂದದೆ ಭೀಷ್ಮವಿದುರರ
ಬಳಕೆಯಲಿ ತಾವಡಗಿ ಗುಣದಲಿ
[3]ಕೆಲನು ಮೆಚ್ಚೆ ವಿಹಾರಿಸಿದರು[3] ಯುಧಿಷ್ಠಿರಾದಿಗಳು ॥ ೨೭ ॥

ಆಟದಲಿ ತೊಡಗಿದರು ಮೊದಲಲಿ
ತೋಟಿಯನು ಸಾಕೇತಗಳ ಕಾ-
ಲಾಟವನು ನಿಲಿಸುವೆನು ಶಸ್ತ್ರಾಸ್ತ್ರಪ್ರಸಂಗದಲಿ ।

---

೨೫. [1]ಗುತಾತನ (ಅ ಕುಮಾ), ಸ್ವೀಪಾ (ಅ ಕ). [2]ಭೀಮನ (ಸರ್ವತ್ರ).
[ದುರುಳ-ಕೆಟ್ಟ, ಸಂತವಿಡು-ಸಮಾಧಾನಪಡಿಸು].

೨೬. [1]ಕೇಳಿನೀವೆಂದ (ಸರ್ವತ್ರ), ಪರಿಷ್ಕರಣ : ಶ್ರೀ.
[ಮಡು-ಆಳವಾಗಿ ನೀರು ನಿಂತ ಸ್ಥಳ].

೨೭. [1]ಬೆ (ಸರ್ವತ್ರ). [2]ಬಲು (ಅ ಕುಮಾ), ಸ್ವೀಪಾ (ಪ್ರ ಕ). [3]ಕೆಲನ ಮೆಚ್ಚಿಸಿ ನಡೆದರಿವರು (ಅ ಕುಮಾ), ಸ್ವೀಪಾ (ಕ k).

ಆಟವಿಕರಿಂವದಿರಲಿ ಬಲಿದೊಳ-
ತೋಟಿ ಬಱಿದೇ ಬಿಡದು ಮೃತ್ಯುವಿ-
ನೂಟ ಮುಂದಿಹುದೆಂದು [1]ಕಱಿಕಱಿ[1]ಗುಂದಿದನು ಭೀಷ್ಮ ॥ ೨೮ ॥

ವರಮುಹೂರ್ತದೊ[1][ಳಿವರ][1] [2]ನೂಱೈ[2]-
ವರನು ಕೊಟ್ಟನು ಶಸ್ತ್ರವಿದ್ಯಾ
ಪರಿಣತರ ಮಾಡೆಂದು ದ್ರೋಣನ ಕೈಯಲಾ ಭೀಷ್ಮ ।
ಗರುಡಿ ಕಟ್ಟಿತು [3]ನೂಱ[3] ಯೋಜನ
ವರೆಯು ವಿಸ್ತಾರದಲಿ [4]ಕುಱಿಸಾ-
ವಿರವ[4] ಹೊಯ್ದರು ಪೂಜಿಸಿದರಾ [5]ಚತುರ[5]ಚಂಡಿಕೆಯ ॥ ೨೯ ॥

ರಾಯ ಬಲ್ಲೆ ಮುನ್ನ ಶಿಶುವನು
ತಾಯಿ ಬಿಸುಟಳು ಗಂಗೆಯಲಿ ರಾ-
ಧೇಯನಾದನು ರಾಧೆಯೆಂಬವಳೊಲಿದು [1]ಸಾಕಿದೊಡೆ[1] ।
ಆಯತಾಕ್ಷನು ಪರಶುರಾಮನೊ-
ಳಾಯುಧದ ಶ್ರಮಗಲಿತು ಬಳಿಕದು
ವಾಯವಾದೊಡೆ ಬಂದನಾ ಗಜಪುರಿಗೆ ಕಲಿಕರ್ಣ ॥ ೩೦ ॥

ಬಂದು ಹಸ್ತಿನಪುರಿಗೆ ರಾಧಾ-
ನಂದನನು ದುರ್ಯೋಧನನ್ನೈ-
ತಂದು ಕಂಡನು ಕೌರವೇಶ್ವರ [1]ಹಿರಿದು ಮನ್ನಿಸಿದ[1] ।
ಅಂದು ಮೊದಲಾಗವರ ಸಖ್ಯಕೆ
ಸಂದ ಕಾಣೆನು ಕರ್ಣಕುರುಪತಿ-
ಗೊಂದೆ ಜೀವನವೊಂದೆ ಮನ ಮತವೊಂದೆ ಕೇಳೆಂದ ॥ ೩೧ ॥

---

೨೮. [1]ಕರೆಕರೆ (ಕುಮಾ, ಪ್ರ).
[ಕಱಿಕಱಿ-ಚಿಂತೆ, ವ್ಯಸನ].

೨೯. [1]ವನ (ಅ), ಳಂದು (ಅ), ಳವರ (ಕುಮಾ) ; ಸ್ವೀಪಾ (ಪ್ರ). [2]ನೂರರು (ಆ ಕುಮಾ), ಸ್ವೀಪಾ (ಅ). [3]ನೂರು (ಅ. ಕುಮಾ), ಸ್ವೀಪಾ (ಅ). [4]ಸಾವಿರ ಕುರಿಯ (ಪ್ರ ಆ ಅ ಕುಮಾ), ಸ್ವೀಪಾ (ಕ). [5]ಚದುರ (ಕುಮಾ ಅ).

೩೦. [1]ಸಲಹಿದರೆ (ಕ ಅ), ಸಾಕಿದರೆ (ಕುಮಾ).
[ಆಯತಾಕ್ಷ-ವಿಶಾಲವಾದ ಕಣ್ಣುಳ್ಳವನು, ವಾಯ-ವ್ಯರ್ಥ].

೩೧. [1]ನಿವರಕಾಣಿಸಿದ (ಅ, ಕುಮಾ), ನವನ ಕಾಣಿಸಿದ (ಅ), ಸ್ವೀಪಾ (ಓ).
[ಮನ-ಮನಸ್ಸು. ಮತ-ಅಭಿಪ್ರಾಯ].

ಬೇಟೆ ಕರ್ಣನ ಕೂಡೆ ಹಗಲಿರು-
ಳಾಟ ಕರ್ಣನ ಕೂಡೆ ಷಡುರಸ-
ದೂಟ ಕರ್ಣನ ಕೂಡೆ ಶಸ್ತ್ರಾಭ್ಯಾಸವವಗೂಡೆ ।
[1]ಕೂಟ[1] ಮನವಲಿ ನಗೆಯು ಮಧುರದ
ನೋಟ ಕಣ್ಣನೊಳುಳಿದವರ ಕೂ-
ಡಾಟಗಳು ತಾವಿಬ್ಬರೊಂದೆನಿಸಿದರು ಜಗವರಿಯೆ ॥ ೩೨ ॥

ಒಂದು ದಿನವೊಡ್ಡೋಲಗಕೆ ಗುರು
ಬಂದು ಮನ್ನಿಸಿಕೊಂಡು ನಸುನಗು-
ತೆಂದನಾ ಧೃತರಾಷ್ಟ್ರಗಂಗಾಸೂನುವಿದುರರಿಗೆ ।
ಇಂದುಪರಿಯಂತರವು ನಿಮ್ಮಯ
ನಂದನರನೋದಿಸಿದೆನವರಭಿ-
ನಂದನೀಯರೊ ನಿಂದ್ಯರೋ ನೀವ್ ನೋಡಬೇಕೆಂದ ॥ ೩೩ ॥

ಸಕಲ [1]ಶಸ್ತ್ರಾಸ್ತ್ರದಲಿ[1] ಹಯಗಜ
ನಿಕರದೇಱಾಟದಲಿ ಲೋಕ-
ಪ್ರಕಟ[2]ಮಾರ್ಗಿಕತ್ವ[2] ಚತುರ್ದಶವಿದ್ಯಾವಿಧಿಯಲಿ ।
ಸಕಲಲಕ್ಷಣಗಣಿತಗಾರುಡ
[3]ವಿಕಟ[3]ಭರತಾದ್ಯಖಿಳಕಳೆಯಲಿ
ವಿಕಳರೋ ಸಂಪೂರ್ಣರೋ ನೀವ್ ನೋಡಬೇಕೆಂದ ॥ ೩೪ ॥

೩೨. [1]ತೋಟಿ (ಅ ಕುಮಾ), ಸ್ನೇಹ (ಅ).
[ಕೂಟ-ಸೇರಿಕೆ, ಒಟ್ಟಿಗೆ ಇರುವುದು. ಜಗ-ಪ್ರಪಂಚ].

೩೩. [ಓದಿಸು-ಓದು ಬರಹ ಕಲಿಸು, ವಿದ್ಯಾಭ್ಯಾಸ ಮಾಡಿಸು. ನಂದನ-ಮಗ].

೩೪. [1]ಶಸ್ತ್ರಂಗಳಲಿ (ಅ). [2]ರಮಾರ್ಗಣದಲಿ (ಅ). [3]ವಿಕರ (ಅ).

ಜೋಯಿಸನ ಕರೆದಖಿಳದಿವಸದೊ-
ಳಾಯಿದರು ಶುಭದಿನವನವಗೆ ಪ-
ಸಾಯದುಡುಗೊಱೆಸಹಿತ ಮನ್ನಿಸಿ ಮನೆಗೆ ಕಳುಹಿದರು ।
ರಾಯನಾಜ್ಞೆಯೊಳಿಭಪುರದ ಹೊಱ-
ಗಾಯತದ ಭೂಮಿಯಲಿ ವಾಸ್ತುವಿ-
ಧೇಯವೆನಲಳವಡಿಸಿದರು ಹನ್ನೆರಡು ಯೋಜನವ ॥ ೩೫ ॥

ಸಂದಣಿಸಿ ನೃಪರಾಣಿವಾಸದ
ಗೊಂದಣದ ದಂಡಿಗೆಗಳಿಳಿದವು
ಮುಂದೆ ಹೊಯ್ಕಂಬಿಗಳ ಜೋಡಿಯ ಜನಪಲಾಯನ[1]ದ[1] ।
ಬಂದರಾ ಗಾಂಧಾರಿಕುಂತಿಗ-
ಳಿಂದುಮುಖಿಯರ ಮೇಳದಲಿ ನಡೆ-
ತಂದುದಗಣಿತಪುರವಧೂನಿಕುರಂಬ [2]ನಲವಿ[2]ನಲಿ ॥ ೩೬ ॥

ಬಾಗಿಲಲಿ ಕಟ್ಟಿಗೆಯ ಕೈಗಳ-
ಲಾ ಗುರೂದ್ಭವಕೃಪರು ನಿಂದರು
ಸೀಗುರಿಯ ಸುಳಿವಿನ ತರಂಗದ ಸಾಲಸತ್ತಿಗೆಯ ।
ಸಾಗರದ ಗಳಗರ್ಜ[1]ನಾರ್ಭಟೆ[1]
ಹೋಗಲಿದಕದು ಪಾಡೆಯೆನೆ ಚಾ-
ಪಾಗಮಾಚಾರ್ಯನ ಗಡಾವಣೆ ಫಲ್ಲಿಸಿತು ಜನವ ॥ ೩೭ ॥

---

೩೫. [ಅಖಿಳ-ಎಲ್ಲ, ಸಮಸ್ತ. ಪಸಾಯ-ಉಡುಗೊಱೆ, ಸಂಭಾವನೆ. ಆಯತದ-ವಿಸ್ತಾರವಾದ. ವಾಸ್ತುವಿಧೇಯ-ವಾಸ್ತುಶಿಲ್ಪದ (ಕಟ್ಟಡ ನಿರ್ಮಾಣದ) ವಿಧಿ, ನಿಯಮ. ಅಳವಡಿಸು-ಒಳಗೊಳ್ಳುವಂತೆ ಮಾಡು].

೩೬. [1]ದ (ಕುಮಾ ಅ ಆ), ಸ್ತೋಮ (ಸ). [2]ವ್ರೊಗ್ಗಿ (ಆ ಕುಮಾ).
[ಸಂದಣಿಸು-ಗುಂಪುಗೂಡು. ಗೊಂದಣ-ಸಾಲಾಗಿರುವ. ಹೊಯ್ಕಂಬಿ-ಹೊಡೆಯಲು ಉಪಯೋಗಿಸುವ ಕೋಲು, ಬೆತ್ತ. ನಿಕುರುಂಬ-ಸಮೂಹ, ಗುಂಪು].

೩೭. [1]ನೋದ್ಭಟೆ (ಅ ಆ ಕುಮಾ), ಸ್ತೋಮ (ಕ).
[ಕಟ್ಟಿಗೆ-ದಂಡ. ಗುರೂದ್ಭವ-ಅಶ್ವತ್ಥಾಮ. ಸೀಗುರಿ-ಚಾಮರ. ಸತ್ತಿಗೆ-ಛತ್ರಿ. ಗಳಗರ್ಜನಾರ್ಭಟೆ-(ಕೊರಳಿನಿಂದ) ಗಟ್ಟಿಯಾಗಿ ಕೂಗುವ ಆರ್ಭಟೆ. ಪಾಡು-ಹೋಲಿಕೆ. ಚಾಪಾಗಮಾಚಾರ್ಯ-ದ್ರೋಣ, ಧನುರ್ವಿದ್ಯೆಯಲ್ಲಿ ಪಾರಂಗತ. ಗಡಾವಣೆ-ಸಡಗರ, ಸಂಭ್ರಮ. ಫಲ್ಲಿಸು (=ಗಲ್ಲಿಸು)-ಆಕ್ರಮಿಸು, ವ್ಯಾಪಿಸು].

ಮಸಗಿದಾನೆಯ [1]ಕುಂಭದಲಿ[1] ಝಾ-
ಡಿಸುವ ಕೇಸರಿಯಂತೆ ಜಂಭನ
ಜಸದ ಝಾಡಿಗೆ [2]ಬೆದಱಿದಿದಿರಹ[2] ವಜ್ರಧರನಂತೆ ।
ಪಸರಿಸಿದ ಪರಿವಾರಮಧ್ಯದೊ-
ಳಸಮಬಲ ಹೊಳಕಿದನು ಮೇಘದ
ಮುಸುಕನುಗಿದಿನನಂತೆ ವೈದೋಱಿ[3]ದನು ಕಲಿಭೀಮ ।   ॥ ೩೮ ॥

ಕೋಲ ಗುರು ಚಿತ್ತೈಸು ಕುರುಭೂ-
ಪಾಲ ಸಮ್ಮುಖನಾಗು ಹಿಡಿ ಮಾ-
ರ್ಕೋಲನೆನ್ನೊಡನೆನುತ ತಿವಿದನು ಭೀಮ ಕುರುಪತಿಯ ।
ಮೇಳವಿಸಿತೆರಡಂಕ ಬಂದಿಗೆ-
ಗೋಲ ಹೊಯ್ದಾಟದಲಿ ಬಳಿಕಾ-
[1]ಭೀಳ[1] ಗದೆಗಳ [2]ತುಡುಕಿ[2] [3]ತಱುಬಿ[3]ದರಧಿಕರೋಷದಲಿ   ॥ ೩೯ ॥

ಎಲೆಲೆ ಹಿಡಿಹಿಡಿ ಭೀಮನನು ತೆಗೆ
ಕೆಲಕೆ ದುರ್ಯೋಧನನನಿದು ಮಂ-
ಗಳದ [1]ಬೆಳೆಗಿಂಗಳದ[1] ಮಳೆ ಸುರಿದುದೆ [2]ಶಿವಾ ಎನುತ[2] ।
ಕಳವಳಿಸೆ ಭೀಷ್ಮಾದಿಗಳು ನೃಪ-
ತಿಲಕರಿಬ್ಬರ ನಡುವೆ ಹಾಯ್ದರು
ಕುಲಗಿರಿಗಳಂದದಲಿ ಕೃಪಗುರುಸುತರು ವಹಿಲದಲಿ   ॥ ೪೦ ॥

---

೩೮. [1]ಕಂಡದಲಿ (ಅ), ಕಂಧದಲಿ (ಅ), ಕಂಧರದಿ (ಪ್ರ); ಸ್ವೀಪಾ (ಕುಮಾ). [2]ವೇಡೆಗೆದರುವ (ಅ).

[ಜಸ-ಕೀರ್ತಿ. ಕೇಸರಿ-ಸಿಂಹ. ಜಂಭ-ಒಬ್ಬ ರಾಕ್ಷಸ. ವಜ್ರಧರ-ಇಂದ್ರ. ಹೊಳಕು-ಪ್ರಕಾಶಿಸು. ಉಗಿ-ಭೇದಿಸು. ಇನ-ಸೂರ್ಯ].

೩೯. [1]ಕೀಲು (ಅ ಕುಮಾ). ಪೀಳ (ಅ), ಸ್ವೀಪಾ (ಕಸಪ್ರ). [2]ಹಿಡಿದು (ಅ ಕುಮಾ) ಸ್ವೀಪಾ (ಕ ಸ ಅ). [3]ತುರುಬಿ (ಅ ಅ), ಸ್ವೀಪಾ (ಕುಮಾ).

[ಕೋಲು-ಬಾಣ. ಅಂಕ-ಯುದ್ಧದ, ಹೋರಾಟದ, ಪಕ್ಷ. ಬಂದಿಗೆಗೋಲು-ಒಂದು ಬಗೆಯ ಬಾಣ (?). ಅಭೀಳ-ಭಯಂಕರ. ತಱುಬು-ಅಡ್ಡಗಟ್ಟು].

೪೦. [1]ಬೆಳುದಿಂಗಳಿನ (ಅ). [2]ಮಹಾದೇವ (ಅ ಕುಮಾ), ಸ್ವೀಪಾ (ಕ ಸ ಅ).

[ಕೆಲ-ಪಕ್ಕ. ಇಂಗಳ-ಕೆಂಡ. ವಹಿಲ-ಬೇಗ, ಶೀಘ್ರ, ತ್ವರೆ. ಕುಲಗಿರಿ-ಕುಲ ಪರ್ವತ (ಇವು ಏಳು)].

ಈತನಾರರ್ಜುನನೆ ಹೋ ಹೋ
ಮಾತು ಮಾಣಲಿ ಮಾಣಲೆಂಬೀ
ಮಾತು ಹಿಂಚಿತು ¹ಮುಂಚಿ¹ ಮಹೋನ್ಮಾದೋತ್ಸವಾಸ್ಥಾನ ।
ಭೀತಕಳಕಳರಂಗದಲಿ ಪುರು-
ಹೂತಸುತ ವೈದೋಜಿಸಿದನು ಜನ-
ವೀತನನು ಕೊಂಡಾಡುತಿರ್ದುದು ರಾಯ ಕೇಳೆಂದ ॥ ೪೧ ॥

ನಿಲುವಿನಲಿ ¹ಸಂಸ್ಥಾನದಲಿ¹ ಕೈ-
ಚಳಕದಲಿ ಭಂಗಿಯಲಿ ಭರದಲಿ
ಉಳಿಯುತಿರ್ದೊಯ್ಯಾರದಲಿ ಮೋಹಾನುಮೋದಿತನಂದದಲಿ ।
ಅಳವಿಯಲಿ ಪರಿವಿ²ಡಿಯಲೂಹಾ²-
ಬಲದಲವಧಾನದಲಿ ಶಸ್ತ್ರಾ-
ವಳಿಯ ಸಾಂಗೋಪಾಂಗ ಧನುವನು ತೋರಿದನು ಪಾರ್ಥ* ॥ ೪೨ ॥

ಬಾಯಹೊಯ್ ಫಲುಗುಣನ ಹೊಗಳುವ
ನಾಯಿಗಳ¹ನೇ¹ನಾಯ್ತು ಕೌತುಕ-
ವಾಯಿತವನಿಪ ಸನ್ನಿವೇಶವೆ ನೋಡುನೋಡುತ ।
ಸಾಯಕದ ತೂಗುತ್ತ ಲಾಕ-
ರ್ಣಾಯತಾಂಬಕನೆಡಬಲದ ಕುರು-
ರಾಯನನುಜರ ²ಮೇಳಗಳಲಿ ³ಹೊಜವಂತೆ³ನಾ ಕರ್ಣ ॥ ೪೩ ॥

---

೪೧. ¹ಮುನ್ನ (ಅ, ಕುಮಾ, ಅ), ಸ್ಥಿಪಾ (ಸ).
[ಮಾಣು–ಬಿಡು, ನಿಲ್ಲು. ಪುರುಹೂತಸುತ–ಅರ್ಜುನ].

೪೨. ¹ಸ್ವಸ್ಥಾನದಲಿ (ಕುಮಾ). ²ಯಲಿ ಮಹಾ (ಅ).
[ಉಳಿ–ಕೈಚಳಕ].

೪೩. ¹ದೇ (ಅ). ²ಗಡಣ (ಅ). ³ನಡೆತಂದ (ಸ ಕ ಅ).
[ಸಾಯಕ–ಬಾಣ].

---

* ‘ಪ್ರ’ ಪ್ರತಿಯಲ್ಲಿ ಈ ಪದ್ಯ ಕಾಣುಬರುವುದಿಲ್ಲ.

ಆವ ವಿಧದಲಿ ಪಾರ್ಥ ತೋರಿಸಿದ-
ನಾವ ದಿವ್ಯಾಸ್ತ್ರಪ್ರಪಂಚವ
ಪಾವಕಾನಿಲವಾರುಣಾದಿಯನೊಪ್ಪದೆ ವಿರಚಿಸಿದ ।
ಆವಿಧಾನದಲಾ ವಿಹಾರದ-
ಲಾವಿಬಂಧದ[1][ಲಾತನಾ][1] ಬಾ-
ಣಾವಳಿಯ ಬಿನ್ನಾಣವನು ತೋರಿಸಿದನು ಕಲಿಕರ್ಣ ॥ ೪೪ ॥

ಸೆಣಸುವೊಡೆ ಬಾಯೆಂದು ಪಾರ್ಥನ
ಕೆಣಕಿದನು ಘನರೋಷ[1]ಶಿಖಿಯಲಿ[1]
ಕುಣಿ[illegible] ಕಂಗಳೊಳೊಗುವ ಕೆಂಪಿನಲಿ ।
ಕಣೆಕಣೆ[2]ಗಳಾಟದಲಿ[2] ಶರಖಂ-
ಡಣೆಯ ಕೋಲಾಟದಲಿ ಖಣಿಖಣಿ
ಖಣಿಲು[3]ಖಣಿರೆನೆ[3] ಮಸಗಲೆಚ್ಚಾಡಿದರು ಚಳಕದಲಿ ॥ ೪೫ ॥

ರಾಯಸಭೆ ಕಳವಳಿಸೆ ಹೋಹೋ
ಹೋ ಯಿದೇನೇನೆನುತ ಹಿಡಿದರು
ವಾಯುಸುತಕೃಪಗುರುಜದ್ರೋಣಾದ್ಯರು ಧನಂಜಯನ ।
ಆಯಿತೆಲವೋ ಕರ್ಣ ನೀ[1][ನುಪ]-
ನಾಯಕನೊ[1] ನೃಪಹಾರದಲಿ ಮೇಣ್
ನಾಯಕನೊ [2]ಮೇಣಾ[2]ವನೆಂದನು ಕೃಪನು ಖಾತಿಯಲಿ ॥ ೪೬ ॥

---

೪೪. [1]ಅರ್ಜುನನ (ಅ ಕುಮಾ), ಲೀತನಾ (ಅ).
[ಪಾವಕ-ಬೆಂಕಿ, ಆಗ್ನೇಯಾಸ್ತ್ರ. ಅನಿಲ-ವಾಯು, ವಾಯವ್ಯಾಸ್ತ್ರ. ವಾರುಣ-ವಾರುಣಾಸ್ತ್ರ. ವರುಣ-ಸಮುದ್ರರಾಜ. ವಿಬಂಧ-ವಿಶೇಷವಾದ ಬಂಧ (ಬಾಣ ಪ್ರಯೋಗದಿಂದ ಎದುರಾಳಿಯನ್ನು ಬಂಧಿಸುವ, ಕಟ್ಟಿಹಾಕುವ, ಬಾಣ ಪ್ರಯೋಗ (?)].

೪೫. [1]ಸುಖದಲಿ (ಅ ಪ್ರ). [2]ಯ ಕಾಳಾಟ (ಅ). [3]ಖಣ ಖಣ (ಕುಮಾ), ಘಲ್ಲೆನೆ (ಅ).
[ಸೆಣಸು-ಹೋರಾಡು. ಶಿಖಿ-ಬೆಂಕಿ, ಅಗ್ನಿ. ಒಗು-ಸುರಿ, ಉಕ್ಕು. ಕಣೆ-ಬಾಣ. ಶರಖಂಡಣೆ-ಬಾಣವನ್ನು ಕತ್ತರಿಸುವುದು. ಕೋಲಾಟ-ಬಾಣಪ್ರಯೋಗದ ಆಟ].

೪೬. [1]ನೀನು ನಾಯಕನೊ (ಅ ಕುಮಾ), ನೀನು ಸಹಾಯಕನೊ (ಓ), ಪರಿಷ್ಕರಣ (ಶ್ರೀ). [2]ನೀನಾ (ಕುಮಾ ಅ ಅ), ಸ್ವೀಪಾ (ಸ).
[ವಾಯುಸುತ-ಭೀಮ. ಗುರುಜ-ಅಶ್ವತ್ಥಾಮ. ನೃಪಹಾರ-ರಾಜರ ಶ್ರೇಣಿ, ಸಾಲು. ಮೇಣ್-ಅಥವಾ, ಇಲ್ಲವೆ].

ಈತನಾವನು ಕರ್ಣನೆಂಬವ-
ನೀತನರ್ಜುನನೊಡನೆ ತಾ ಮಾ-
ಱಾತು ಕೈಮಾಡಿಪನು ಕೈಕೊಳ್ಳನು ಧನಂಜಯನ ।
ಈತ ತಪ್ಪಲ್ಲೆನುತ ಮಿಗೆ ¹ಮು-
ಯ್ಯಾತ¹ನಾಧೃತರಾಷ್ಟ್ರನೀತನ
ಮಾತೆ ಕಂಡಳು ಕುಂತಿ ನೆನೆದಳು ಪೂರ್ವಸಂಗತಿಯ ॥ ೪೭ ॥

ಈತನರಸಲ್ಲೆಂದು ಕೃಪ ಪಳಿ-
ವಾತನೇ ತಪ್ಪೇನು ರಾಜ್ಯದೊ-
ಳೀತನರಸೆನಿಸುವೆನು ಕರೆ ನಮ್ಮಯ ಪುರೋಹಿತರ
ಶಾತಕುಂಭಾಸನವ ಮಂಗಳ-
ಜಾತವಸ್ತುವ ತರಿಸು ತರಿಸೆಂ-
ದಾತತತ್ಕ್ಷಣದಲಿ ಸುಯೋಧನನೆದ್ದು ರಭಸದಲಿ ॥ ೪೮ ॥

ತರಿಸಿ ಭದ್ರಾಸನದೊಳೀತಂ-
ಗರಸುಪದವಿಯೊಳಂಗದೇಶದ
ಸಿರಿಯನಿತ್ತನು ರಚಿಸಿದನು ಮೂರ್ಧಾಭಿಷೇಚನವ ।
ದರುಶನವನಿತ್ತಖಿಳಭೂಮೀ-
ಶ್ವರರು ¹ಕಂಡರು¹ ಪೂರ್ವಶೈಲದ
ತರಣಿಯಂತಿರೆ ಕರ್ಣನೆಸೆದನು ರಾಜತೇಜದಲಿ ॥ ೪೯ ॥

ಕೆಲರು ಭೀಮನನರ್ಜುನನ ಕೆಲ-
ಕೆಲರು ಕರ್ಣನ ಕೌರವೇಂದ್ರನ
ಕೆಲರು ಹೊಗಳುತ ಬಂದು ಹೊಕ್ಕರು ಹಸ್ತಿನಾಪುರವ ।
ಬಳಿಕಲಾ ಮಱುದಿವಸದಲಿ ಮ-
ಕ್ಕಳುಗಳೆಲ್ಲರ ಕರಸಿ ಗರುಡಿಯ
ನಿಳಯದಲಿ ಕುಳ್ಳಿರ್ದು ¹ನುಡಿದನು ಗುರು¹ ಕುಮಾರರಿಗೆ ॥ ೫೦ ॥

---

೪೭. ¹ಮೈಯ್ಯಾತ (ಅ ಆ ಕುಮಾ), ಸ್ವೀಪಾ (ಕ ಸ).
[ಪಾಳಿ-ಕೋಪ. ಮಾಱಾನು-ಎದುರಿಸು, ಪ್ರತಿಭಟಿಸು. ಮಿಗೆ-ಹೆಚ್ಚಾಗಿ. ಮುಯ್ಯಾತ-ಪ್ರತಿಸ್ಪರ್ಧಿ].

೪೮. [ಪಳಿ-ಹಳಿ, ನಿಂದಿಸು. ಶಾತಕುಂಭ-ಚಿನ್ನ (ಶಾತಕುಂಭಾಸನ-ಸ್ವರ್ಣಪೀಠ)].

೪೯. [ಭದ್ರಾಸನ-ಉತ್ತಮವಾದ ಪೀಠ. ಮೂರ್ಧಾಭಿಷೇಚನ-ಮಸ್ತಕಾಭಿಷೇಕ (ಪವಿತ್ರವಾದ ನದಿಗಳ ನೀರಿನಿಂದ ಶಿರಸ್ನಾನ ಮಾಡಿಸುವುದು). ಶೈಲ-ಬೆಟ್ಟ. ತರಣಿ-ಸೂರ್ಯ].

೫೦. ¹ಗುರುನುಡಿದನು (ಅ ಆ ಕುಮಾ); ಸ್ವೀಪಾ (ಸ).

ಕೇಳಿಬಲ್ಲಿರೆ ಗಂಗೆಯುತ್ತರ-
ಕೂಲದಲಿ ಪಾಂಚಾಲದೇಶ ನೃ-
ಪಾಲನಲ್ಲಿಗೆ ದ್ರುಪದನೆಂಬವನತುಳಭುಜಬಲನು ।
ಆಳುತನದಂಗದಲಿ ಪರರಿಗೆ
ಸೋಲನವನೊಟ್ಟೈಸಿ ದ್ರುಪದನೃ-
ಪಾಲಕನ ಹಿಡಿದೊಪ್ಪಿಸಿದೊಡೆಮಗಹುದು ಪರಿತೋಷ ॥ ೫೧ ॥

ಐಸಲೇ ಗುರುದಕ್ಷಿಣಾರ್ಥವಿ-
ದೇಸು ಘನ ತಂದೀವೆವೆಂದುಪ-
ಹಾಸದಲಿ ಕೈವೊಯ್ದು ತಮ್ಮೊಳು ನಗುತ ಕೌರವರು ।
ಆ ಸುಯೋಧನ ಕರ್ಣಸಹಿತ ಮ-
ಹೀಶತನುಜರು ಬೀಳುಕೊಂಡರು
ವಾಸಿಬಿದ್ದುದು ಪಾಂಡುಸುತ ಕೌರವಕುಮಾರರಿಗೆ ॥ ೫೨ ॥

ಆತುಕೊಂಡರು ಪಾಂಡುಸುತರಭಿ-
ಜಾತಸಮರವನಿವರ ಕೈಯಲಿ
ಮಾತುಹಲಪಿಲ್ಲೆನುತ ಹೊಕ್ಕರು [1]ಹೊಯ್ದು[1] ಪರಬಲವ ।
ಘಾತಿಗಾನುವರಿಲ್ಲ ದೊರೆಯೆನು-
ತಾತನನು ಮುತ್ತಿದರು ಗುರುಗಳಿ-
ಗೀತನೇ ದಕ್ಷಿಣೆಯೆನುತ ಹಿಡಿದರು ಮಹೀಪತಿಯ ॥ ೫೩ ॥

---

೫೧. [ಉತ್ತರಕೂಲ-ಉತ್ತರದಿಕ್ಕಿನ ದಡ. ಅತುಳ(ಲ)-ಎಣೆಯಿಲ್ಲದ, ಅಸಮಾನ. ಆಳುತನದಂಗ-ಪರಾಕ್ರಮದ ರೀತಿ. ಒಟ್ಟೈಸು-ಸ್ಪರ್ಧಿಸು, ಹುರುಡಿಸು].

೫೨. [ಐಸಲೇ-ಅಲ್ಲವೇ. ಏಸುಘನ-ಎಷ್ಟು ಹೆಚ್ಚಿನದು, ಏನು ಮಹಾ. ವಾಸಿ-ಪೈಪೋಟಿ, ಮೇಲಾಟ, ಸ್ಪರ್ಧೆ].

೫೩. [1]ಕೊಂದು (ಅ ಆ ಕುಮಾ), ಸ್ವೀಪಾ (ಸ).
[ಆತುಕೊಳ್ಳು-ಸ್ವೀಕರಿಸು, ಹಿಡಿದುಕೊ. ಅಭಿಜಾತ ಸಮರ-ಉತ್ತಮರೊಂದಿಗೆ ಯುದ್ಧ. ಪರಬಲ-ಶತ್ರುಸೈನ್ಯ. ಘಾತಿ-ಪೆಟ್ಟು, ಹೊಡೆತ. ಅನು-ಎದುರಿಸು, ತಾಳಿಕೊ. ದೊರೆ-ಸಮಾನ. ಮಹೀಪತಿ-ರಾಜ].

ಕೊಂಡುಬಂದರು ದ್ರೋಣನಿದಿರಲಿ
ದಿಂಡುಗೆಡಹಿದರೀತನನು ಕೈ-
ಕೊಂಡನೆಲವೋ ದ್ರುಪದ ನಿನ್ನ ಪೂರ್ವವನು ನೆನೆಯೆನುತ ॥
ಖಂಡಿಸುವನನು ಸಾಕು ಬಿಡಿ ಸಲೆ
ಚಂಡಿಯಾದನು ದರ್ಪವಿಷ 'ನಿ-
ನ್ನಿಂದ' ನಾ [illegible] ನಾಡುವೆನೆಂದನಾ ದ್ರೋಣ ॥ ೨೪ ॥

ಅರಸ ಕೇಳೈ ದ್ರುಪದನೀ ಪರಿ
ಪರಿಭವಕೆ ಗುರಿಯಾಗಿ ತನ್ನಯ
ಪುರವ ಹೊಗದೈತಂದು ಗಂಗಾತೀರವೀಥಿಯಲಿ ॥
ಧರಣಿಸುರರಲಿ ಪುತ್ರಕಾಮ್ಯಾ-
ಧ್ವರವ 'ವಿರಚಿಸಲಾ[ದ]' ಸಹೋದ್ರೇ-
ಕ್ಷರದ [illegible] ನಾನಾಗ್ರಹಾರದಲಿ ॥ ೨೫ ॥

ಅರಸ ಕೇಳೈ ಕೊಂಡವಧ್ಯದೊ-
ಳರಿಯ ಕರುವಿಟ್ಟ 'ಅಕವ್ರೋ' ಭಾ-
ಸುರ ಮಹಾನಳನಲ್ಲಿ ರೂಪಿನ ತಾನಿದೇನೆನಲು ॥
ಕರವಡಾಯುಧಚಾಪ 'ವರ್ಮೋ-
ತ್ಕರಸಹಿತ ರೌದ್ರಾಂಗನಾಗವ
ತರಿಸಿದನು ಪಾಂಚಾಲ [illegible] ಧುರದ ಸೊಕ್ಕಿನಲಿ ॥ ೨೬ ॥

---

೨೪. [illegible]

[ದಿಂಡುಗೆಡಹು-ಅಡ್ಡಬೀಳಿಸು [illegible], ಉಗ್ರನಾದವನು [illegible]].

೨೫. [illegible]

[ಪರಿಭವ-ಅವಮಾನ ಧರಣಿಸುರ-ಬ್ರಾಹ್ಮಣ, ದ್ವಿಜ. ಪುತ್ರಕಾಮ್ಯಾಧ್ವರ-ಪುತ್ರರನ್ನು ಪಡೆಯಲು ಇಷ್ಟಪಟ್ಟು ಮಾಡುವ ಯಾಗ, ಪುತ್ರಕಾಮೇಷ್ಟಿಯಾಗ. ಅಲ-ಸಮರ್ಥನು. ಸಹೋದ್ರೇಕ [illegible] ಉತ್ಕೃಷ್ಟರಾದವರು].

೨೬. [illegible]

[ವರ್ಮ-ಕವಚ].

ವೇದಿಮಧ್ಯವನೊಡೆದು ಮೂಡಿದ-
ಳಾದರಿಸೆ ಜನವಮುವು ಕಾಮುನ
ಕೈದುವೋ ತ್ರೈಲೋಕ್ಯಮೋಹನಮಂತ್ರದೇವತೆಯೋ ।
ಕಾದುವೊಡೆ ಕರೆ ಹರಿಹರಬ್ರ-
ಹ್ಮಾದಿಗಳಿಗೊರೆಯೆಂಬ ಪಾಂಕ್ಕತಿ-
ಯಾದುದಾ ಕಾವಂಗೆ ದ್ರುಪದಾತ್ಮಜೆಯು ಜನನದಲಿ ॥ ೫೭ ॥

ಮಗನು ಧೃಷ್ಟದ್ಯುಮ್ನ ದ್ರೌಪದಿ
ಮಗಳು ಭಾರದ್ವಾಜಸತ್ತ್ವದ
ಹಗೆಗೆ ಹುಟ್ಟಿದಾಯ್ತ್ತು ಸುತ ಹಿಗ್ಗಿದ ದ್ರುಪದಭೂಪಾಲ ।
ದುಗುಡದಲಿ ಕುರುರಾಯನೀ ದಾ-
ಯಿಗರ ಬಿರುದಿನ ಬಿಂಕದಂಕೆಯ
[1]ಬಿಗಿದ[1] ಬರಿಯನು ನೆನೆದು ಮರುಗಿದನರಸ ಕೇಳೆಂದ ॥ ೫೮ ॥

೩. ಶಕುನಿಯ ತಂತ್ರ

ಒಂದು ದಿವಸ ಸುಯೋಧನನು ನಿಜ-
ಮಂದಿರದೊಳೇಕಾಂತದಲಿ ಮನ-
ನೊಂದು ನುಡಿದನು ಶಕುನಿಕರ್ಣಜಯದ್ರಥಾದ್ಯರಿಗೆ ।
ಅಂದು ಭೀಮಾರ್ಜುನರು ದ್ರುಪದನ
ತಂದು ದಕ್ಷಿಣೆಯಿತ್ತು ಗುರುವಿಗೆ
ಸಂದರ್ಭ ಸಮರದಲಿ ಪರಿಭವವಾಯ್ತು [1]ನ[1]ಮಗೆಂದ ॥ ೫೯ ॥

---

೫೮. [1]ಲೊಗೆದ (ಅ).

೫೯. [1]ತ (ಅ ಕುಮಾ), ಸ್ವೀಬಾ (ಓ ಕ).
[ಸಮರ-ಯುದ್ಧ. ಪರಿಭವ-ಸೋಲು, ಅವಮಾನ].

ವನಜವನದಲಿ ತುಱುಚೆ ಕಬ್ಬಿನ
ಬನದಿ ಕಡಸಿಗೆ ಚೂತಮಯಕಾ-
ನನದಿ ಬೊಬ್ಬುಲಿ ಭೀಮಸೇನನ [1]ಬಿಡೆಯು[1] [2]ವೆನ್ನೊಡನೆ[2] ।
ಇನಿತು ಪಾರ್ಥ[3]ನೊಳಿಲ್ಲ[3] ಯಮಳರ
ಜಿನುಗಿನಲಿ ಜಾಜಿನು ಯುಧಿಷ್ಠಿರ
ಜನಪನಾಗಲಿ ವೇಣು ಮಾಣಲಿ ಭೀತಿಯಿಲ್ಲೆಂದ ॥ ೬೦ ॥

ಹುದು ನಡೆಯುದಿವರೊಡನೆ ನಮ್ಮಲಿ
ಕದನವೇ [1]ಕೈಗಟ್ಟು[1]ವುದು ಕಾ-
ದಿದೊಡೆ ಹೆಬ್ಬಲವಹುದು ದುರ್ಬಲ ಪ್ಲವಗತಿ ಬೇಜ಼ ।
ನದಿಗಳರಳಿಯ ಹಾಸು ನವವಿಷ
ವುದರದೀಪನಚೂರ್ಣವಾವಂ-
ಗದಲಿ ಸಾಪತ್ನರಲಿ ಸದರವ ಕಾಣೆ ನಾನೆಂದ ॥ ೬೧ ॥

ಹಬ್ಬುಗೆಯು ಹದಿನಾಲ್ಕುಲೋಕದ
[1]ಮಬ್ಬು[1]ಗಳನೀಡಾಡಿ ನಭದೊಳ-
ಗೊಬ್ಬನೇ ರವಿ ತೊಳಗಿ ಬೆಳಗುವವೋಲು ಪಾಂಡವರ ।
ಕೊಬ್ಬುಗಳ ನಿಲಿಸುವೆನು ಧರೆಯೊಳ-
ಗೊಬ್ಬನೇ ದುರ್ಯೋಧನನು ಮ-
ತ್ತೊಬ್ಬರಿಲ್ಲೆಂದೆನಿಸಿ ತೋಱುವೆನೆಂದನಾ ಕರ್ಣ ॥ ೬೨ ॥

ವಿದುರಭೀಷ್ಮಾದಿಗಳು ನಿನ್ನಯ
ಸದನದೊಳಗುಂಡುಟ್ಟು ಪರರ-
ಭ್ಯುದಯವನೆ [1]ಬಯಸುವರು ದೂಱುವರೆಮ್ಮನವರುಗಳ[1] ।

೬೦. [1]ಇರವು (ಅ ಕುಮಾ), ಸ್ವೀಪಾ (ಸ). [2]ತವೊಮ್ಮೆಳಗೆ (ಅ ಕುಮಾ), ಸ್ವೀಪಾ (ಸ). [3]ನಮೇಲೆ (ಅ ಕುಮಾ).

[ಕಡಸಿಗೆ-ಒಂದು ಕಹಿ ಔಷಧಿ ಗಿಡ. ಬೊಬ್ಬುಲಿ-ಜಾಲಿಗಿಡ. ಬಿಡೆಯ-ದಾಕ್ಷಿಣ್ಯ, ಸಂಕೋಚ].

೬೧. [1]ಕೈಕಟ್ಟು (ಸ), ಕೈದಟ್ಟು (ಅ).

[ಹುದು-ಒಡಬಾಳು. ಸಾಪತ್ನ=(ಸಾಪತ್ನ್ಯ)-ಮಲಮಕ್ಕಳು].

೬೨. [1]ಮೊಬ್ಬು (ಅ ಕುಮಾ).

೬೩. [1]ಹಾರುವರು ಬಗೆಯುರು ನಮ್ಮನವರುಗಳ (ಸ), ಬಯಸುವರು ಹಾರುವರೆಂದ ಮಾತುಗಳ (ಅ).

ಹದನ ನೀನೇ ಬಲ್ಲೆ ಸಾಕಿ-
ನ್ನದಱ ಮಾತೇಕರಸ ತನ್ನಯ
ಕದನವನು ಚಿತ್ತೈಸು ಸಾಕಿನ್ನೆಂದನಾ ಕರ್ಣ ॥ ೬೩ ॥

ಸಹಜವೀ ನುಡಿ ಕರ್ಣನಾಡಿ[1]ದು-
ದಹುದು[1] ಪಾಂಡವ[2]ರೈವರೂ[2] ಕಡು-
ಸಹಸಿಗಳು ಗೆಲಲರಿದು ಕುಹಕೋಪಾಯಮಾರ್ಗದಲಿ ।
ಅಹಿತರನು ಗೆಲಬಹುದು ಪರಿಕರ
ಸಹಿತವರುಗಳ ನಿಮ್ಮ ಚಿತ್ತಕೆ
ಬಹಡೆ ತನ್ನಭಿಮತವ [3]ಚಿತ್ತೈ[3]ಸೆಂದನಾ ಶಕುನಿ ॥ ೬೪ ॥

ಸೋದರರುಗಳು ನೀವು ನಿಮ್ಮೊಳು
ಭೇದಮಂತ್ರವ ಮಾಡುವುದು ಮ-
ರ್ಯಾದೆಯೇ ನಾವ್ ನಿಮ್ಮಡಿ[1]ಯಲ[1]ರಮನೆಯ ಸೇವಕರು ।
ವಾದಿಸುವರಿತ್ತಂಡ ಸರಿ ನಮ-
ಗಾದೊಡೆಯು ಕಂಡುದ ನುಡಿಯಬೇ-
ಕಾದರಿಸು ಮೇಣ್ ಮಾಣು ಬಿನ್ನಹವೆಂದನಾ ಶಕುನಿ ॥ ೬೫ ॥

ಮೊಳೆಯಲೇ ಮುಱು[1]ಕಿ[1]ಸಲು ಬೇಹುದು
ಬಲಿದ ಬಳಿಕದು ನಿನ್ನ ಹವಣೇ
ಇಳೆಯೊಳರ್ಥವನಿತ್ತು [1]ಹಗೆ[1]ಗಳ ಹೆಚ್ಚಿಸಿದಬಳಿಕ ।
ಗೆಲುವನಾವನು ದೇವದಾನವ
ರೊಳಗೆ ಭೀಮಾರ್ಜುನರ ಕೈಮನ-
ದಳವನ[3]ಱಿ[3]ದಱಿ[3]ದಱಿ[3]ಯದಂಡದಿ ಮರುಳಹರೆ ಎಂದ[3] ॥ ೬೬ ॥

---

೬೪. [1]ದನಹುದು (ಅ ಕುಮಾ). [2]ರೆಂಬವರು (ಅ ಆ ಕುಮಾ). [3]ನವಧರಿ (ಅ ಕುಮಾ).

೬೬. [1]ಡಿ (ಅ ಆ ಕುಮಾ), ಸ್ವೀಪಾ (ಪ್ರ ಸ ಓ k). [2]ರಿಪು (ಅ ಆ ಕುಮಾ) ಸ್ವೀಪಾ (ಓ). [3]ನರಿಯಾ ಭಾರವ್ನೈ ಮೇಲೆಂದನಾ ಶಕುನಿ (ಆ ಕುಮಾ), ದಳವನಱಿ[3]ಯಾ ಭಾರವಿದು ಮೇಲೆಂದನಾ ಶಕುನಿ (ಅ).

ಹಿಂದೆ ನೀನವರುಗಳ ನಾನಾ
ಚಂದದಲಿ ನೋಯಿಸಿದೆ ಮನದಲಿ
[illegible] [1]ಕುಂದದು[1] ಕಷ್ಟವ [illegible] ।
ಇಂದು ನೀನಾ ಪಾಂಡುಪುತ್ರರ-
ನಂದಗೆಡಿಸದೆ [illegible]
ಮುಂದೆ ಜಟ್ಟಿತು ರಾಜಕಾರ್ಯವನೆಂದನಾ ಶಕುನಿ ॥ ೬೭ ॥

ವಿಷವನುಣುವೆಂದಳುಕದುಪಭೋ-
ಗಿಸಲು ಕೊಲ್ಲದೆ ಬಿಡುವುದೇ ಕಡೆ-
[illegible] ।
ಶಿಶುವಿವನು ಸಾಮರ್ಥ್ಯಪುರುಷನೆ
[1]ನುಸಿ[1]ಕಣಾಯೆಂದುಳುಹಿದೊಡೆ ರ-
ಕ್ಕಸನಿವನು ಮುಂದಕ್ಕೆ [illegible]ದನಾ ಶಕುನಿ ॥ ೬೮ ॥

ವಿಗಡರುದ್ರನು ಲೋಚನಾಗ್ನಿಯೊ-
ಳೊಗುಮಿಗೆಯು ಕೋಪದಲಿ ಕಾಮನ
[illegible] ।
ಹೊಗೆಯು ಕಳೆ ಲಾಕ್ಷಾಭವನದಲಿ
ಹಗೆಗೆ ಹರಿವಹುದಲ್ಲದಿದ್ದೊಡೆ
[illegible] ರಾಜಕಾರ್ಯವಿದೆಂದನಾ ಶಕುನಿ *॥ ೬೯ ॥

ಇರುಬಿನಲಿ [1]ಸಿ[ಲ್ಕಿ]ರ್ದ[1] ಹುಲಿಯನು
ಮುಳಿದು ಕಳೆಯದೆ ತಳಪಟಕೆ ಬಿ-
[illegible] ।

---

೬೭. [1]ಕುಂದನು (ಅ ಆ).
[ಜಟ್ಟಿತು–ಉಗ್ರ, ಕಠೋರ].

೬೮. [1]ಪುಸಿ (ಅ ಆ ಕುಮಾ), ಹುಸಿ (ಪಿ).
[ತನು–ಮರ. ನುಸಿ–ಕ್ಷುದ್ರಕೀಟ].

೬೯. * ಆ ಪ್ರತಿಯಲ್ಲಿ ಈ ಪದ್ಯವನ್ನು [illegible]
ಅದನ್ನು ಇಲ್ಲಿ ಉಳಿಸಿಕೊಳ್ಳಲಾಗಿದೆ.

೭೦. [1]ಸಿಕ್ಕಿರ್ದ (ಅ ಆ ಕುಮಾ).

ಕಡುಬಡವ ಪಾಂಡವರಿಗೀಗಳೆ
²ಸೋಜಿಗ ನೀನೆ ಕೊಡುವಿದ್ದಡೆ
ಕಳೆದು ಬಿಸುಟದೆ ನಾಶ್ರಿ ಕೇಳೆಂದನಾ ಶಕುನಿ. ॥ ೧೮ ॥

ಎಂದು ದುರ್ಬೋಧೆಗಳ ನಾನಾ-
ಚಂದದಲಿ ಬೋಧಿಸಿ ಸುಸ್ನೇಹಿಯ-
ನಂದಗೆಡಿಸಿ ಸದ್ವಿವೇಕಮಂತ್ರೋಪಮಾರ್ಗವನು ।
ಒಂದುಗೂಡಿ ಸುಯೋಧನಂಗಾ-
ನಂದನೆನಿಸಿ ಕಳಿಂಗ ಲೋಕದ
ಕೊಂಡಷ್ಟು ಜನಮೋಹನಮಂತ್ರಶಾಲಿ ಕೇಳೆಂದ ॥ ೧೯ ॥

ಎಷ್ಟು ಬಹುಮಾನಾಪಮಾನವು
ನಿಷ್ಟು¹ರದಲ್ಲದೆ ಬೇರೆ ಇದ್ದುದು
ಸೊಮ್ಮು ಸಂಬಂಧದಲಿ ಹಿತವದ ಕಾಣೆ ನಾನಿನ್ನು ।
²ದುಷ್ಟತನದಿ ಪಾಂಡವರಿಗಿನ್ನು-
ಬಿಡದೆ ಸಜ್ಜನರು ನಿನಗೆ ಕೊಡದು-
ದೆಷ್ಟು ಸುಕ್ಷೇತ್ರದಲಿ ಫಲವೆಂದನು ಸುಯೋಧನನು ॥ ೨೦ ॥

ಎನೆ ¹ಕಳಿಂಗಾದಿಗಳು ದುಷ್ಟ-
ಮ್ಮಷುಮತವ ಹೇಳಿದರು ಕೌರವ-
ಜನಪನವರಿಗೆ ಕೇಡ ನಿಶ್ಚೈಸಿದನು ಮನದೊಳಗೆ ।
ಜನಕನಲ್ಲಿಗೆ ನಡುವಿರುಳು ಬಂ-
ದನುನಯದೊಳೀವಾರ್ತೆ ತೆಗೆದಂ-
ದನು ವೃಕೋದರನೊಳಗಿದ ಅರ್ಜುನನ ಸಾಹಸವ ॥ ೨೧ ॥

---

¹ಜ್ವಲಿ (ಅ). ²ನಮನಶ (ಅ) : ಈ ಪಾದದಲ್ಲಿ ಅಕ್ಷರಾಕ್ಷರವು ಛಂದೋಭಂಗವಾಗಿದೆ.
[ಹೇ...(ಸ³)ವು-ನಾಶ].
೧೯. [ಕಳಿಂಗ-ಶಕುನಿಯ ಇನ್ನೊಂದು ಹೆಸರು].
೨೦. ¹ದ್ವೈತಲಿ (ಅ). ²ದುರ್ಜನನು (ಅ).
[ಸೊಮ್ಮು-ಸ್ವಂತ, ಆಸ್ತಿ(ಯು)].
೨೧. ¹ಕಳಿಂಗನು ಕರ್ಣ (ಅ).
[ನಡುವಿರುಳು-ರಾತ್ರಿ. ವೃಕೋದರ—ಭೀಮ. ಅರ್ಜುನ—[illegible]].

ಅರಿಗಳುದ್ಭವವಿನ್ನು ಗಂಟಲ-
ನರಿವುದೆಮ್ಮನು ನೂಱುಮಕ್ಕಳ-
ನರಸ ಬಱಿದೇ ಹಡೆದು ಕೆಡಿಸಿದೆ ತಾಯ ಜೌವನವ ।
ಇರಲಿ [1]ಭೀಮಾರ್ಜುನರು ಹಸ್ತಿನ-[1]
ಪುರದೊಳೆಮ್ಮನಿಬರನು ದೇಶಾಂ-
ತರಕೆ ನೇಮಿಸು ಜೀಯ ನೂಕದು ಭೀಮನೊಡನೆಂದ || ೭೪ ||

ಅಕಟ ಮಗನೇ ಧರ್ಮಸುತ ಬಾ-
ಧಕನೆ ಭೀಮಾರ್ಜುನರ ಮತಿ ಕಂ-
ಟಕದೊಳೆಱಗದು ಮೀಱಿ ನಡೆಯರು ಧರ್ಮನಂದನನ ।
ಸಕಲರಾಜ್ಯಕೆ [1]ಪಾಂಡುವೇ ಪಾ-[1]
ಲಕನು ತನ್ನೊಳು ತಪ್ಪಿದನೆ ಬಿಡು
ವಿಕಳ[2]ಮತಿಗಳ[2] ಮಾತನೆಂದನು ಮಗಗೆ ಧೃತರಾಷ್ಟ್ರ || ೭೫ ||

ಬೊಪ್ಪ ಬಿನ್ನಹವವರ ಜನಕನು
ತಪ್ಪಿ ನಡೆಯನು ನಿಮಗೆ ನೀವಿ-
ನ್ನೊಪ್ಪಿಸುವುದಾ ಪಾಂಡುಸುತರಿಗೆ ರಾಜ್ಯವೈಭವವ ।
ಅಪ್ಪುದಿಳೆ ಧರ್ಮಜ[1]ಗೆ[1] ತಱುವಾ-
[2]ಯ[2]ಪ್ಪುದಾವಿಧಿಯಲ್ಲಿ ಸಂತ[3]ತಿ[3]
ತಪ್ಪದವರಿಗೆ ಸಲಲಿ ನೆಲನಿದು ಹೊಲ್ಲೆಹೇನೆಂದ || ೭೬ ||

ಜನ[1]ಪ[1] ಸುಖದಲಿ ನಿಮ್ಮ ತಮ್ಮನ
ತನುಜರೊಡನೆಯೆ ರಾಜ್ಯಮಾಡುವು-
[2]ದನುನಯುವಲಾ[2] ಬೀಳ್ಕೊಡುವುದು ನಮ್ಮ ನೂರ್ವರನು ।

೭೪. [1]ಭೀಮಾರ್ಜುನರುಗಳು ಗಜ (ಅ).
[ಅರಿ–೧. ಶತ್ರು, ೨. ಕತ್ತರಿಸು, ಕೊಯ್ಯು].

೭೫. [1]ಪಾಂಡುಪ್ರತಿಪಾ (ಅ). [2]ಮತಿಯುಗಳ (ಅ): ಯು ಅಧಿಕಾಕ್ಷರದಿಂದ ಛಂದೋ-
ಭಂಗವಾಗಿದೆ.

೭೬. [1]ನ (ಅ ಆ ಕುಮಾ). [2]ಯತ್ತ (ಅ). [3]ತ (ಅ).
[ಹೊಲ್ಲೆಹ–ತಪ್ಪು, ದೋಷ].

೭೭. [1]ಪ (ಅ ಆ ಕುಮಾ). [2]ದನುಗುಣವಲೇ (ಅ).

ಜನಪರುಂಟೋಳ್ಳಿಸಿಕೆರಾಬರಿ
ಕವಗಿರದೆ ಖಂಡೆಯುದ ಸಿರಿ ಕರೆ
ಜನಸಿಯಾನು [3]ಬೇಳಿಸ್ಸಂ[3]ಜಿವಿಸ್ಸೆ[4]ನೆಂದು[4] ಸಿಂದಿದ || ೭೭ ||

ಎಲೆ ಮಗನೆ ಎನ್ನಾಣೆ ಬಾ ಕುರು-
ಕುಲತಿಲಕ ನೀ ಹೋಗಲೆನ್ನೊಡ-
ಲೊಳಿವುದೇ ಮಜ್ಜಾಜಾನೆ [1]ಬಾರೈ ಕಂದ[1] [2]ಬಾರೆಂದು[2] ।
ಸೆಳೆದು ಬಿಗಿಯಪ್ಪಿದನು ಕಂಬನಿ-
ದುಳುಕಿದನು ಹೇಳಿನ್ನು ಮೇಲಣ
ಬಳಿಕೆಯಾನು ತ್ರಿಪುರಾಜಕಾರ್ಯಕೆ ಮಂತ್ರವೇನೆಂದ || ೭೮ ||

ಅವ ಶೆಜದಲಿ ವೈರಿ[1]ಘ[1]ಟಕುಲ-
[2]ಕಾವ[2]ಗೆಯುಸಿದಿಸುವಿರಿ ನಿಮ್ಮೊಳ-
ಗಾವು ಹೊಜಗೇ ಮಗನೆ ಸೊಗಸೆನೆ [ನಿನ್ನ][3] ವೈಭವಕೆ ।
ಸಾವದಾವಂಗದಲಿ ಮಿಗೆ ಸಂ-
ಭಾವಿಸುವುದಾ ತೆಜನ ನೀ ಹೇ-
ಳಾವು ಸೊಗಸುವೆವೆಂದು ನುಡಿದನು ಮಗಗೆ ಧೃತರಾಷ್ಟ್ರ || ೭೯ ||

ಕರಸಿ ಪಾಂಡುಕುಮಾರಕರನೀ-
ಧರೆಯು ಹಸುಗೆಯ ಮಾಡಿ[1]ಕೊಡಿ[1] ಕರಿ-
[2]ತುರಗ ರಥ ಭಂಡಾರವನು[2] [ಸಮಭಾಗದಲಿ][3] ।

---

[3]ಜಿಸಗೂ (ಕ). [4]ನೆಸುತ (ಅ).
[ಅನುನಯ-ಯೋಗ್ಯ. ಖಂಡೆಯ-ಕತ್ತಿ].

೭೮. [1]ಬಾ ಕುಮಾರಾಯ (ಸ). [2]ಬಾರೆನುತ (ಅ), ಬಾರೆನುತ (ಓ). [3]ಬುದ್ಧಿಯ (ಅ ಆ ಕುಮಾ), ಸ್ಪೀಪಾ (ಕ).

೭೯. [1]ಘ (ಕುಮಾ). [2]ದಾ (ಆ ಕುಮಾ). [3]ನಿಮ್ಮ (ಅ ಆ ಕುಮಾ).

೮೦. [1], [1]ಕೊಡು (ಅ ಕುಮಾ), (ಸ್ಪೀಪಾ ಅ). [2]ತುರಗಭಂಡಾರವನು (ಅ ಕುಮಾ), (ಸ್ಪೀಪಾ ಅ, ಕ). [3]ದಯಾದ್ಯಮಾರ್ಗದಲಿ (ಅ ಕ), ಸಹಭಾಗದ ವಿಭಯದಲಿ (ಅ ಕುಮಾ), ಹಸುಗೆಯದ ಭಾಗದಲಿ (ಸ).

ಇರವನವರಿಂಗೆ ವಾರಣಾವತ-
ಪುರದೊಳಗೆ ಪರುಠವಿಸಿ[4]ಕೊಡಿ[4] ತಾ-
ನುರುಹಿ ಸುಡುವೆನು ಬಳಿಕ ಲಾಕ್ಷಾಭವನ[5]ದಹನದ[5]ಲಿ ॥ ೮೦ ॥

ಅಹುದು ಮಗನೇ ಮಂತ್ರವಿದು ಮತ-
ವಹುದು ನಮಗೀ ಭೀಷ್ಮವಿದುರರು
ಕುಹಕಿಗಳು ಕೃತಭಿನ್ನವಾದೊಡೆ ಗಾವದು ಮೇಳಿ ।
ಗಹನಗತಿಯಲಿ ಗೂಢತರಸ-
ನ್ನಿಹಿತಕರ್ಮಕಲಾಪದಲಿ ರಿಪು-
ದಹನಸಿದ್ಧಿಯು ನೆನೆವುದೆಂದನು ಮಗಗೆ ಧೃತರಾಷ್ಟ್ರ ॥ ೮೧ ॥

ಜನಕನನು ಬೀಳ್ಕೊಂಡು ಕೌರವ-
ಜನಪ ತನ್ನರಮನೆಯ ಸಚಿವರೊ-
ಳನುಪಮಿತವಿಶ್ವಾಸಸೂಚಕನನು ಪುರೋಚನನ ।
[1]ನೆನೆ[ದು] ಕೌರವ[1]ರಾಜಕಾರ್ಯದ
ಘನವನರುಹಿ ಸಮಗ್ರಧನಸಾ-
ಧನವ ಜೋಡಿಸಿ [2]ಜಡಿತೆಯಲಿ ಕಳುಹಿದನು[2] ಗುಪ್ತದಲಿ ॥ ೮೨ ॥

ಧರಣಿಪತಿ ಕೇಳುತ್ತ ಹಸ್ತಿನ-
ಪುರದೊಳಗೆ ಕುಂತೀಕುಮಾರರ
ಕರಸಿ ಕಟ್ಟೇಕಾಂತದಲಿ ಧೃತರಾಷ್ಟ್ರಭೂಪಾಲ ।
ಬೆರಗುಬಿನ್ನಾಣದಲಿ ಮಕ್ಕಳ
ಮರುಳುಮಾಡಿದನೇನಹೇಳುವೆ
ನುರಿವನೆಯು ಬೀಡಾರದಲಿ ಬಿಡಿಸಲ್ಕೆ [1]ತನ್ನವರ[1] ॥ ೮೩ ॥

---

[4]ರಚನೆಯಲಿ (ಅ ಕುಮಾ), (ಸ್ವೀಪಾ ಕ ಸ ಓ).
[ಹಸುಗೆ–ವಿಭಾಗ, ಹಂಚಿಕೆ].

೮೨. [1]ನೆನೆದ ಕಾರ್ಯವ (ಅ). [2]ಕೊಟ್ಟು ಕಳುಹಿದನವನ (ಅ ಕುಮಾ).
[ಜಡಿತೆ–ವೇಗ, ತ್ವರಿತ].

೮೩. [1]ಮನದಂಡ (ಅ ಕುಮಾ).

ದುರುಳರೀ ಕೌರವರು ನೀವತಿ-
ಗರುವರವದಿರು ಪಾಪಕರ್ಮರು
ಪರಮಪುಣ್ಯರು ನೀವು ತನ್ನವದಿರು ಕುಮಂತ್ರಿಗಳು ।
ಎರಳೆ ತೋಳನ ಸಾದುಸುಣ್ಣದ
ನೆರವಿಗದು [1][ಏ]ವಗೆಯು[1] ಸೇರುವೆ-
ಯರಸ ನಿನ್ನೊಡನೆನ್ನ ಕುನ್ನಿಗಳೆನುತ ಬಿಸುಸುಯ್ದ ॥ ೮೪ ॥

ತಂದೆಯಿಲ್ಲದ ನಿಮಗೆ ಹಿತರಾ-
ರೆಂದು ಮಱುಗುವೆನೆನ್ನ ಮಕ್ಕಳು
ಕೊಂದು ಹಿಂಡೆಯಕೂಳನುಂಬೊಡೆ ಪೇಸುವವರಲ್ಲ ।
ಇಂದು ನಿಮಗವರಿಂದಲುಪಹತಿ
ಬಂದುದಾದೊಡೆ [1]ನಮ್ಮ[1] ತಲೆಯಲಿ
ನಿಂ[2]ದೆ[2] ಹೊ[3]ಱು[3]ವುದಕೀರ್ತಿ [4]ಕಿಲ್ಬಿಷ[4] ಮಗನೆ ಕೇಳೆಂದ ॥ ೮೫ ॥

ಬೇಱ ಮತವೆಮಗೇನು ಬೊಪ್ಪನ
[1][ತೀರು ?][1] ನಿಮ್ಮದು ನೀವು ಬೊಪ್ಪನ
ನೂಱುಮಡಿಯೆಮಗೊಳ್ಳಿದರು [2]ಬೇಱಿನ್ನು ಹಿತರುಂಟೇ[2] ।
ಬೇಱಿರಿಸಿ ಕೂಡಿರಿಸಿ [3]ನೀವೇ[3]
ತೋಱಿದುದೆ [4]ಪಥ[4] ನಿಮ್ಮ ನೇಮವ
ಮೀಱಬಲ್ಲೆವೆ ಎಂದು ಧರ್ಮಜ ನುಡಿದನರಸಂಗೆ ॥ ೮೬ ॥

---

೮೪. [1]ಪಾವಗೆಯು (ಅ ಆ ಕುಮಾ).
[ಎರಳೆ–ಜಿಂಕೆ. ಏವಗೆಯ–ಯಾವ ಬಗೆಯ].

೮೫. [1]ತನ್ನ (ಅ ಕುಮಾ), ಸ್ವೀಪಾ (ಅ). [2]ದು (ಅ ಆ ಕುಮಾ), ಸ್ವೀಪಾ (ಸ). [3]ಹೊರೆ (ಅ ಕುಮಾ). [4]ಬಲ್ಲೆನು (ಸ).
[ಉಪಹತಿ–ತೊಂದರೆ. ಹಿಂಡೆಯ ಕೂಳು–ಪಿಂಡದ ಅನ್ನ].

೮೬. [1]ಚಾರಿ (ಅ ಆ ಕುಮಾ), ಜಾರು (ಕ ಸ), ಚಾರು (ಪ್ರ). [2]ಬೇರುಂಟೆ ಹಿತರೆಮಗೆ (ಕ). [3]ನಿಮಗೆಱು (ಅ ಕುಮಾ). [4]ಮತ (ಅ ಕುಮಾ).
[ತೀರು–ತೀರ್ಮಾನ; ರೀತಿನೀತಿ].

ಕಂಡ ಮನವಮುನಿಸಿಲ್ಲಲೇ ನಾ-
ವೆಂದ ನುಡಿಗೊಡಬಡುವಿರಾಮೊಡೆ
ಮುಂದೆ ಪುರವಿದೆ ವಾರಣಾವತವಿಲ್ಲಿಗಜುವತ್ತು ।
ಸಂದ ನಾಡು ಸಮಸ್ತವಸ್ತುಗ-
ಳಿಂದ ಪೂರಿತ ಹಸ್ತಿನಾಪುರ-
ದಿಂದ 'ಮಿಗಿಲದು' ರಾಜಧಾನಿಸ್ಥಾನ ನಿಮಗೆಂದ ॥ ೮೭ ॥

ಧಾರಿಣೀಪತಿ ರತ್ನಮಯಭಂ-
ಡಾರಸಹಿತ ಗಜಾಶ್ವರಥಪರಿ-
ವಾರವನು ಮಾಡಿದನು ಹಸುಗೆಯನೆರಡುಭಾಗ'ವನು' ।
ಕೌರವರಿಗೊಂದಿವರಿಗೊಂದೆನ-
ಲೋರಣವಲಳವಡಿಸಿ ಬಹುವಿ-
ಸ್ತಾರದಲಿ ಭೀಷ್ಮಾದ್ಯರಹುದೆನಲಿವರ ಮನ್ನಿಸಿದ ॥ ೮೮ ॥

---

೪. ಅರಗಿನ ಮನೆಯ ಕಿಚ್ಚು—ಹಿಡಿಂಬವಧೆ

ಬಂದರೈವರು ಕುಂತಿಸಹಿತಾ-
ನಂದದಲಿ ವರವಾರಣಾವತ-
ಕಂದು ಪುರಜನ 'ಸಹಿತ' ಕನ್ನಡಿಕಲಶವಿಭವದಲಿ ।
ಬಂದು ತಾವಿದಿರಾಗಿ ಕುಂತೀ-
ನಂದನರ ಹೊಗಿಸಿದರು ಪಟ್ಟಣ-
ವಂದು ಮೆಱೆದುದು ಕೂಡೆ ಗುಡಿತೋರಣದ ರಚನೆಯಲಿ ॥ ೮೯ ॥

---

೮೭. 'ಘನವದು (ಅ ಸ ಓ).

೮೮. 'ದಲಿ (ಅ ಕ).

೮೯. 'ಕೂಡಿ (ಅ ಕುಮಾ), ಸ್ತ್ರೀಪಾ (ಅ).

ಬೀಡು ಕಾಣಿಕೆಯಿತ್ತು ಕಂಡುದು
[1]ನಾಡ[1] ಕಾಣಿಸಿದನು ಪುರೋಚನ
ಕೂಡೆ ಸಂದನು ಹಾಸುಹೊಕ್ಕಾ[2]ಗ[2]ವರ ಮನವಱಿದು ।
ನೋಡಿದನು ಯಮನಂದನನು ಮನೆ
ಮಾಡಿದಂದವನರಗಿನರಮನೆ
[3]ಗೂಡಿನಲಿ[3] ಬೇಳುವೆಯ ನೆನೆದರೆ ಜೊಪ್ಪನವರಿಂದ ॥ ೯೦ ॥

ಜನಪ ಕೇಳೈ ವಿದುರನಟ್ಟಿದ
[1]ಖನಕ[1] ಬಂದನು [2]ತನ್ನ[2] ಸಜ್ಜೆಯ
ಮನೆಯುಲತಿಗುಪ್ತದಲಿ ನೆಲ[3]ನೊಳು[3] ಸವೆಸಿದನು ಪಥವ ।
ಅನುದಿನದೊಳಾ ಬಾಹಿರನು ಕಿ-
ಚ್ಚಿನಲಿ ಚುಚ್ಚುವ ಸಂದುಕಟ್ಟನು
ನೆನೆಯುತಿರ್ದನು [4]ಖಳ[4]ಪುರೋಚನನೊಡೆಯನಾಜ್ಞೆಯಲಿ ॥ ೯೧ ॥

ಒಂದು ದಿನ ಹಬ್ಬದಲಿ ಭೂಸುರ-
ವೃಂದವುಂಡುದು ಪಂಚಪುತ್ರಿಕೆ
ಯೊಂದು ಬೇಡಿತಿಯೊಬ್ಬಳಿದ್ದಳು ಸುತರುಸಹಿತಲ್ಲಿ ।
ಅಂದಿಸಿರುಳು ಪುರೋಚನನು ತಾ-
ನೊಂದ ನೆನೆದೊಡೆ ದೈವಗತಿ ಬೇ-
ಱೊಂದ ನೆನೆದುದು ಕೇಳು ಜನಮೇಜಯಮಹೀಪಾಲ ॥ ೯೨ ॥

---

೯೦. [1]ನಾಡು (ಅ), ನಾಡೆ (ಕುಮಾ). [2]ಗ (ಕುಮಾ). [3]ಗೂಡುರಿವ (ಅ ಕುಮಾ), ಸ್ವೀಹಾ (ಓ, ಅ).
[ಬೇಳುವೆ-ಅಗ್ನಿಗೆ ಆಹುತಿ, ಹೋಮ, ಯಜ್ಞ, ಬಲಿ; ನಾಶಮಾಡುವ ಯೋಚನೆ].

೯೧. [1]ಕನಕ (ಸರ್ವತ್ರ). [2]ಯುವರ (ಅ ಕುಮಾ). [3]ದಲಿ (ಅ), ನೊಳು (ಕುಮಾ). [4]ತತ್ (ಸ).
[ಖನಕ-ಅಗೆಯುವವನು. ಬಾಹಿರ-ನೀಚ, ಹೀನಮನುಷ್ಯ].

ಕನಕ-ಪುರಾಣನಾಮಚೂಡಾಮಣಿ, ಪುರಾಣಭಾರತಕೋಶ ಈ ಗ್ರಂಥಗಳಲ್ಲಿ ಖನಕನ-ಕನಕನ ವಿವರ ಕೊಟ್ಟಿದೆ.

[1]ಅವ[ರು][1] ನಿದ್ರೆಯೊಳಱಿಯದಿರಲಾ
ಭವನಮುಖದಲಿ ಕಿಚ್ಚನೊಟ್ಟಿಸಿ
ಪವನಸುತ ಸಹಿ[2]ತಿ[2]ವರು ಹಾಯ್ದರು ಬಿಲದ ಮಾರ್ಗದಲಿ ।
ಅವರು ಬೆಂದರು ಮುನ್ನ ಬಳಿಕಾ
ಭವನಪಂಕ್ತಿಗಳುರಿದು ಕರಗಿದ-
ವವನಿಯಲಿ ಹೊನಲಾಯ್ತು ಪುರಜನವೈದೆ ಬೆಱಗಾಗೆ ॥ ೯೩ ॥

ಅಕಟ ಪಾಂಡವರಳಿದರೇ ಕೌ-
ಳಿಕದಿ ಕೌರವರಿಱಿದರೇ ಮತಿ-
ವಿಕಳರಿವದಿರು ಬೆಂದುಹೋದರು ಧರ್ಮದಲಿ ನಡೆದು ।
ಪ್ರಕಟಪಾಪರಿಗಹುದು ಸಾಮ್ರಾ-
ಜ್ಯಕವು [1]ಧರ್ಮಾತ್ಮಕರಿಗೀ[1]ಪರಿ
[2]ವಿಕಟಕೇಸುರಿ[2]ರಾಜ್ಯವೆಂದುದು ಪೌರಜನ ಮಱುಗಿ ॥ ೯೪ ॥

ಬಂದುದಾ ಸುರನದಿಗೆ ಕೌರವ-
ವೃಂದ ಪರಿಜನ[1]ಸಹಿತ[1] ಶೋಕಿಸಿ
ಮಿಂದು ಗಂಗಾತೀರದಲಿ ಬಳಿಕೂರ್ಧ್ವದೈಹಿಕವ ।
ಸಂದ ವಿಧಿಯಲಿ ಮಾಡಿ ಪರಮಾ-
ನಂದ ಮಿಗಲವರಿರ್ದ[2]ರಿತ್ತಲು[2]
ಇಂದುಕುಲಸಂಭವರ [3]ವಿಧಿಗಳನಿನ್ನು[3] ಕೇಳೆಂದ ॥ ೯೫ ॥

ಕೇಳು ಜನಮೇಜಯಧರಿತ್ರೀ-
ಪಾಲ ಯಮನಂದನನ ಪಾರ್ಥನ
ಕಾಲೊಡೆದು ಬಸಿವರುಣಜಲದಲಿ ಬಟ್ಟೆ ಕೆಸಱಾಯ್ತು ।

---

೯೩. [1]ಅವನು (ಅ ಆ ಕುಮಾ). [2]ತ (ಅ).

೯೪. [1]ಧರ್ಮಾತ್ಮರಿಗೆ ಯೀ (ಕುಮಾ). [2]ವಿಕಟತೆಯಸುರ (ಆ ಕುಮಾ), ವಿಕಟ ನಿಕರಕೆ (ಅ), ವಿಕಳಕೇಸುರಿ (ಓ) ; ಸ್ತ್ರೀಪಾ (k).
[ಕೌಳಿಕ–ಮೋಸ, ವಂಚನೆ].

೯೫. [1]ವೈದೆ (ಆ ಕುಮಾ). [2]ಚ್ಚೆಯಲಿಂ (ಸ). [3]ವಿಧಿಯನು ಮತ್ತೆ (ಅ ಆ ಕುಮಾ), ಸ್ತ್ರೀಪಾ (ಸ ಓ k).

ಮೇಲೆ ಯಮ[1]ಳರು ಕುಂತಿಯುಮದೇ[1]-
ವೇಳುವೆನು ಬೇಗದಲಿ ಕುರುಭೂ-
ಪಾಲ ಹಿಡಿಯಲಿ ಕೊಲಲೆನುತ ಕುಳ್ಳಿರ್ದರಡವಿಯಲಿ ॥ ೯೬ ॥

ಉರಿಯ ಮನೆಯಲಿ ಸಾಯಲೀಯದೆ
ಸೆಱಗ ಹಿಡಿದೆಳೆತಂದು ಕೊಯ್ದನು
ಕೊರಳನಕಟಾ ಭೀಮನೇ ಹಗೆಯೆಂದಳಾ ಕುಂತಿ ।
[1]ಅಱಸಿ[1] ಹಿಡಿಯಲಿ ದಾನವರು ನಿಂ-
ದಿರಿಕೆಯಲಿ ನುಂಗಲಿ ಕೃತಾರ್ಥರು
ಧರೆಯೊಳಾವೆಂ[2]ದೊಱಲಿದರು[2] ಮಾದ್ರೀಕುಮಾರಕರು ॥ ೯೭ ॥

ತಾಯೆ ನೀ ದಿಟ ನಾಗನಗರಿಯ
ರಾಯನರಸಿಯೆ ನಿನ್ನ ಮಕ್ಕಳು
ರಾಯರೆದೆದಲ್ಲಣರೆ ಭಾರಿಯ ಬಾಹುವಿಕ್ರಮರೇ ।
ಈಯವಸ್ಥೆಗೆ ಸೋಮವಂಶದ
ರಾಯತನ[1]ವೇಗುವುದೆ[1] ಹೇಳೌ
ತಾಯೆ ಹೇಳೆನ್ನಾಣೆ ಹೇಳೆಂದಳಲಿದನು ಭೀಮ ॥ ೯೮ ॥

ಔಕುವದು ಬಲುನಿದ್ರೆ ನಿದ್ರೆಯ
ನೂಕುವನು ಕಣ್ಣೆವೆಗಳಲಿ ನಸು
ತೂಕಡಿಕೆ [1]ತೋಱಿದೊಡೆ[1] ನ್ಯೃಗೆದಱುವನು ಕೈಯೊಡನೆ ।
ಸೋಕುವದು [2]ತನಿಮಱವೆ[2] ಮಱವೆಯ-
ನೋಕರಿಸುವುದು ಚಿತ್ತವೃತ್ತಿ ನಿ-
ರಾಕುಲಾಂತಃಕರಣನಾದನು ಬಳಿಕ ಕಲಿಭೀಮ ॥ ೯೯ ॥

---

೯೬. [1]ಳರ ಕುಂತಿಯುನದೇ (ಅ), ಳರು ಕುಂತಿಯರನೇ (ಅ ಕುಮಾ).
[ಬಟ್ಟೆ-ದಾರಿ. ಅರುಣಜಲ-ರಕ್ತ].

೯೭. [1]ಅರಸ (ಅ ಆ ಕುಮಾ). [2]ದೊದರಿದರು (ಆ ಕುಮಾ), ಸ್ವೀಪಾ (ಅ ಕ).

೯೮. [1]ವೆಂತಹುದು (ಆ ಕುಮಾ), ವೇನಹುದು (ಅ), ಸ್ವೀಪಾ-(ಸ).

೯೯. [1]ತೂಗಿದೊಡೆ (ಅ); ತೂಗುವುದು (ಓ). [2]ಮೈಮರವೆ (ಆ ಕುಮಾ),
ತನುಮರವೆ (ಅ); ಸ್ವೀಪಾ (ಕ ಸ k).

ಧರಣಿಪತಿ ಕೇಳೊಂದು ಮಾರಿಯು
ಮುರಿ[1]ವನಿವರಿಗೆ[1] ತದ್ವನಾಂತರ-
ದರಸು ದೈತ್ಯ ಹಿಡಿಂಬನೆಂಬವನತುಲಭುಜಬಲನು ।
ಮುರಿಮುರಿದು ಮೇಗಾಳಿಯಲಿ ಮೂ-
ಗರಳೆ ಮಾನವಗಂಧವಿದು ಗೋ-
ಚರಿಸಿತೆತ್ತಣದೋ ಮಹಾದೇವಸುತೆ ಬೆಱಗಾದ ॥ ೧೦೦ ॥

ತಾಯೆ ಬಾರೌ ತಂಗಿ ಗಂಧದ
ವಾಯುವಿದೆ ಹೊಸ[1]ಕಾಱ[1]ನಾಗಿ ನ-
ವಾಯ ಭೋಜನವಿಂದು ದೊರಕಿತು ಮನುಜಮಾಂಸದಲಿ ।
ಸಾಯಲವದಿರ ಬಡಿದು ತಾ ನವು-
ಗಾಯವಿದು ಕೃತಪುಣ್ಯಫಲವೆನೆ
ಮಾಯಕಾತಿ ಹಸಾ[2]ದವೆನುತ[2] [3]ಹಿಡಿಂಬಿ[3] ನಮಿಸಿದಳು ॥ ೧೦೧ ॥

ಬಂದಳವಳತಿರೌದ್ರರೂಪಿನೊ-
ಳೆಂದು ಕಂಡಳು ದೂರದಲಿ ಹರಿ-
ನಂದನನ ಸುಳಿದಲೆಯ ಕೆಮ್ಮೀಸೆಗಳ ಕರ್ಕಶದ ।
ಕೆಂದಳದ ಕೇ[1][ಸು][1]ರಿಯ ಕಂಗಳ
ಕುಂದ [2]ದಶನ[2]ಚ್ಛವಿಯಲಿರೆ ಮನ-
ಸಂದಳಾ ಖಳನನುಜೆ ಸೋತಳು ಭೀಮಸೇನಂಗೆ ॥ ೧೦೨ ॥

ಇವನ ರಮಣನ ಮಾಡಿಕೊಂಡೋ-
ಡುವೆನು ವಿಪಿನಾಂತರಕೆ ಮುನಿದವ-
ನಿವದಿರೈವರ ತಿನಲಿ ಮರದಡಿಯಲ್ಲಿ ಮಲಗಿದರ ।
ಇವನು ತನ್ನಯ ರೌದ್ರಮಯರೂ-
ಪವನು ಕಂಡೊಡೆ ಹೆದಱುವನಲಾ
ಯುವತಿಯಹೆನೆಂದಸುರೆ ಸುಳಿದಳು ದಿವ್ಯರೂಪಿನಲಿ ॥ ೧೦೩ ॥

---

೧೦೦. [1]ಮುನವರಿಗೆ (ಅ).
[ಮೇಗಾಳಿ-(ಬೇಟೆ ಪ್ರಾಣಿಯ) ಮೇಲಿಂದ ಬೀಸುವ ಗಾಳಿ].
೧೦೧. [1]ಗಾದ (ಅ ಕುಮಾ). [2]ಯ (ಅ). [3]ಹಿಡಿಂಬೆ (ಸ k).
[ನವಾಯ-ಹೊಸ ರೀತಿಯ, ನವೀನವಾದ].
೧೦೨. [1]ಸ (ಸರ್ವತ್ರ). [2]ವದನ (ಅ ಕುಮಾ), ಸ್ವೇಪಾ (ಸ ಅ).

ಭೀಮ ನೋಡನು ನುಡಿಸನೊಯ್ಯನೆ
ತಾಮರಸಮುಖಿ ಹೊದ್ದಿದಳು [1]ನಿ-
ಸ್ಸೀಮನೈ ನೀನಾರು[1] ಮಲಗಿದ ಮರ್ತ್ಯರಿವರಾರು ।
ಈ ಮಹಾರಣ್ಯದಲಿ ಬರವಿದು
ಕಾಮಿತವೆ ಕೋಮಲರಿಗೆನೆ ನಿ-
ಷ್ಕಾಮಮನದಲಿ ಸತಿಯ ನುಡಿಸಿದನಾರು ನೀನೆಂದು ॥ ೧೦೪ ॥

ವನ ಹಿಡಿಂಬನದಾ ಹಿಡಿಂಬಕ-
ನನುಜೆ ತಾನು [1]ಹಿಡಿಂಬಿ[1] ಈ ಕಾ-
ನನವಿದೆಮ್ಮಾಶ್ರಮವಗಮ್ಯವು ದಿವಿಜಮನುಜರಿಗೆ ।
ನಿನಗೆ ಕಾಮಿಸಿ ಬಂದೆನಣ್ಣನು
ಮುನಿದೊಡಿವದಿರ ತಿನಲಿ ನೀನೇ-
ಳೆನಗೆ ವಲ್ಲಭನಾಗು ಕೊಂಡೊಯ್ವೆನು ಹಿಮಾಚಲಕೆ ॥ ೧೦೫ ॥

ಅನುಜೆ ತಳುವಿದಳೆಂದು ರೋಷ-
ಸ್ತನಿತಗದ್ಗದಕಂಠನೊದೆದೆ-
ದ್ದನು ಮಹೀಮಂಡಲವನುಗ್ರಾಂಬಕನ ಡೊಂಬಿನಲಿ
ಅನಿಲಸುತನಿದಿರೆದ್ದನೀತನೆ
ದನುಜ ನಿನ್ನವನಾಯ್ತು ತಪ್ಪೇ-
ನೆನುತ ಹಳಚಿದೊಡಾ ಹಿಡಿಂಬಕ ಜಡಿದು ಬೊಬ್ಬಿಱಿದ ॥ ೧೦೬ ॥

ಒಱಲಬೇಡವೊ ಕುನ್ನಿ ಮೆಲ್ಲನೆ
ತಱುಬಿ ಕಾದುವುದೆಲವೊ ವೈಮಱಿ
ದೊಱಗಿದವರೇಳ್ವರು ಕಣಾ ಸತ್ತಂತೆ ಸಾರೆನುತ ।

---

೧೦೪. [1]ನಿಸ್ಸೀಮನೇ ನೀನಾರು (ಓ); ನಿಸ್ಸೀಮರ್ಕೈ ನೀವಾರು (ಅ).

೧೦೫. ಹಿಡಿಂಬೆ (ಅ ಸ), ಸ್ವೀಪಾ (ಕುಮಾ).
[ಅಗಮ್ಯ-ಪ್ರವೇಶಿಸಲು ಕಷ್ಟವಾದ].

೧೦೬. [ಉಗ್ರಾಂಬಕ-ರೌದ್ರವಾದ ಕಣ್ಣುಳ್ಳವನು. ಹಳಚು-ರಭಸದಿಂದ ತಾಗು. ಡೊಂಬು-ರೀತಿ. ಅನಿಲ-ವಾಯು].

[1]ತಱುಬಿ[1] ಹಿಡಿದಾ ಭೀಮು ಬೆನ್ನಿನೊ-
ಳೆಱಗಿದನು ಹೆಮ್ಮರನ ಹಾಯಿದು
ಮುಱಿದು ಹೊಯ್ದು ಹಿಡಿಂಬ ಕೊಡಹಿದನನಿಲನಂದನನ ॥ ೧೦೭ ॥

ಎದ್ದು ತಿವಿದನು ಖಳನ ಬದಿಯೊಳ-
ಗದ್ದದೀತನ ಮುಷ್ಟಿ ಮುರಿದೊಡ-
ನೆದ್ದು ನಿಮಿಷಕೆ ಸಂತವಿಸಿ ಹೆಮ್ಮರನ ಕೊಂಬಿನಲಿ ।
ಗೆದ್ದೆಯಿದೆಕೊಳ್ಳೆನುತ ಖಳನು-
ಬ್ಬೆದ್ದು ಹೊಯ್ದೊಡೆ ಮರಸಹಿತ ಹಿಡಿ-
ದುದ್ದಿ ನೆಲದೊಳಗೊರಸಿ ಕೊಂದನು ಕಲಿಹಿಡಿಂಬಕನ ॥ ೧೦೮ ॥

ಖಳ ಮಡಿಯಲವನನುಜೆ ಭೀಮನ-
ನೊಲಿಸಲಱಿಯದೆ ಕುಂತಿಗೆಲ್ಲವ
ತಿಳುಹಿ ನುಡಿದಳು ತನ್ನ ಪೂರ್ವಾಪರದ ಸಂಗತಿಯ ।
ಹಲವು ಪರಿಯಲಿ [1]ಇವರನವಳಂ-[1]
ಡಲೆದು ಭೀಮುಗೆ ಹೇಳಿಸಿದಳಾ
ಫಲುಗುಣನ ಕೈಯಿಂದ ಧರ್ಮಜನಿಂದ ನುಡಿಸಿದಳು ॥ ೧೦೯ ॥

ಆರು ನುಡಿಯಲು ಸರ್ವಥಾ ಖಳ-
ನಾರಿಯನು ಕೈಕೊಳ್ಳೆನೆಂದೇ
ವೀರ ಬಲಿದನು ಬಳಿಕ ವೇದವ್ಯಾಸಮುನಿ ಬಂದು ।
ಸಾರನಯದಲಿ ತೋಱಿ ತಿಳುಹಿ ಕು-
ಮಾರಸಂಭವವವಧಿಯೆಂದಾ
ನಾರಿಯನು ಗಂಟಿಕ್ಕಿದನು ಮುನಿ ಭೀಮಸೇನಂಗೆ ॥ ೧೧೦ ॥

ಎಲ್ಲಿಯುಪವನ ವರಸರೋವರ-
ವೆಲ್ಲಿ ಕೇಳೀಶೈಲ ಹಿಮಗೃಹ-
ವೆಲ್ಲಿ ರಮ್ಯೋದ್ಯಾನವೆಲ್ಲಿ ವಿಹಾರವನಭೂಮಿ ।

---

೧೦೭. [1]ತುಱುಬು (ಅ).

೧೦೮. [ಉದ್ದಿ-ಉಜ್ಜು, ತಿಕ್ಕು].

೧೦೯. [1]ಸತಿಯುನಿವಳಂ (ಕ k).
[ಅಂಡಲೆ-ಕಾಡು, ಪೀಡಿಸು].

ಅಲ್ಲಿಗಲ್ಲಿಗೆ ಹರಿದು ಮಾರುತಿ
ವಲ್ಲಭೆಯು ರಮಿಸಿದನು ಚೌಪಟ
ಮಲ್ಲ ಜನಿಸಿದ ಕಲಿಘಟೋತ್ಕಚನಾ ಹಿಡಿಂಬಿಯಲಿ ॥ ೧೧೧ ॥

ಮುಡಿದ ಸಮಯಕೆ ತನ್ನ ರಮಣಿಯ-
ನೊಡಬಡಿಸಿ ಹೈಡಿಂಬ¹ರಾಜ್ಯ-
ಕೊಡೆತನ¹ವ ನೆಜಿ² ಮಾಡಿ ನಿಲಿಸಿದನಾ ಘಟೋತ್ಕಚನ ।
ನಡೆದು ಬಂದರು ಶಾಲಿಹೋತ್ರನ
ನಡುವೆ ಕಂಡುಪಚರಿಸಿಕೊಂಡರು
ಕಡುವಲಭಿಮುಖ²ರಾಗಿ ನಡೆದರು² ವಿಪ್ರವೇಷದಲಿ ॥ ೧೧೨ ॥

---

೫. ಬಕಾಸುರವಧೆ

ಅವನಿಪತಿಕೇಳೇಕಚಕ್ರವ-
ನಿವರು ಹೊಕ್ಕರು ವಿಪ್ರನೊಬ್ಬನ
ಭವನದಲಿ ಮಾಡಿದರು ಬೀಡಾರವನು ವಿನಯದಲಿ ।
ಇವರು ಯಾಚಕ ¹ವೃತ್ತಿಯಾತಿ¹-
ಥ್ಯವನು ಕೈಕೊಂಡಲ್ಲಿ ಕಳೆವರು
ದಿವಸವನು ನೂಕಿದರು ಭಿಕ್ಷಾವಿಹಿತವೃತ್ತಿಯಲಿ ॥ ೧೧೩ ॥

ತಂದ ಭಿಕ್ಷಾಶನವನೈವರು
ನಂದನರು ತಾಯಿಗೆ ನಿವೇದಿಸ-
ಲಿಂದುಮುಖಿ ಭಾಗದ್ವಯವ ¹ಸಮಾನದಲಿ ಮಾಡಿ¹ ।

---

೧೧೦. [ಚೌಪಟ ಮಲ್ಲ-ನಾಲ್ಕು ಕಡೆಗೂ ಕಾದಾಡುವ ವೀರ].
೧೧೨. ¹ರಾಜ್ಯದ ಒಡೆತನ (ಅ ಕುಮಾ). ²ರಾದರಿಬರು (ಅ ಕುಮಾ).
[ಶಾಲಿಹೋತ್ರ-ಕಪಿಲಋಷಿಯ ಮಗ].
೧೧೩. ¹ವಿಷಯದಾತಿ (ಅ ಅ ಕುಮಾ), ಸ್ವೀಕಾ (ಕ).
೧೧೪. ¹ಮಾಡಿಯೆ ಕದನ್ನದಲಿ (ಪ್ರ k ಕ)...ಕದನ್ನವನು (ಕ).
[ಭಿಕ್ಷಾಶನ-ಭಿಕ್ಷಾನ್ನ. ನಿವೇದಿಸು-ಒಪ್ಪಿಸು].

ಒಂದು ಭಾಗ ವೃಕೋದರಂಗುಳಿ
ದೊಂದು ಭಾಗವ ತಾನು ನಾಲ್ವರು
ನಂದನರು ವಿನಿಯೋಗಿಸುವರವನೀಶ ಕೇಳೆಂದ ॥ ೧೧೪ ॥

ಸಿರಿಯು ಹೇಳ್ವೊಡೆ ಹಸ್ತಿನಾಪುರ-
ದರಸುಗಳ ಸಂತಾನ ಶೌರ್ಯದ
[1]ಪ[1]ರಿಯ [2]ಹೊಗಳ್ವಡೆ[2] ಶಕ್ರಸೂರ್ಯರ ತೇಜ[3]ಕೊ[3]ರೆವಿಂಗಿಲು ।
ತಿರಿದ ಕೂಳನು ತಾಯಿ ಹಸುಗೆಯು-
ಲೆರಡು ಭಾಗವ ಮಾಡಿ ಮಕ್ಕಳ
ಹೊರೆದಳಿನ್ನುಳಿದವರ ಪಾಡೇನರಸ ಕೇಳೆಂದ ॥ ೧೧೫ ॥

ಇರಲಿರಲು ಮಾಸಾಂತರದಲಾ
ನೆರೆಮನೆಯ ಶೋಕಾರ್ತರವ[1]ದು[1]-
ಬ್ಬರವ ಕೇಳಿದು ಕುಂತಿ ಸಾಯಂಕಾಲಸಮಯದಲಿ ।
ಭರದಿನೈತಂದಕಟ ಭೂಸುರ-
ವರ ನಿರೋಧವಿದೇನು ದುಃಖೋ-
ತ್ಕರುಷವಾಕಸ್ಮಿಕವದೆಂದಳು ಕುಂತಿ ವಿನಯದಲಿ ॥ ೧೧೬ ॥

ಹೇಳಬೇಹುದು ತನ್ನನಿಷ್ಟವ-
ನಾಳಿಗೊಳ್ಳದ ಸುಜನನಿಕರಕೆ
ಕೇಳಬೇಹುದು ದೀನರಹ ವಿಪ್ರೇಂದ್ರರುಪಹತಿಯ ।
ಹೇಳು ನೀನೆಲೆ ವಿಪ್ರ ತಾನಿದ
ಕೇಳಿ ದುಃಖಿತೆಯಾಗಲಾಗದೆ
ಹೇಳ್ "ನ ದುಃಖಃ ಪಂಚಭಿಸ್ಸಹ" ಯೆನ್ನದೇ ವಚನ ॥ ೧೧೭ ॥

---

೧೧೫. [1]ನಿ (ಕ). [2]ನೋಳ್ವೊಡೆ (ಅ), ನೋಳ್ಪರೆ (ಕುಮಾ), ಸ್ವೀಪಾ (ಪ್ರ ಕ k).
[3]ಕು (ಅ ಕುಮಾ), ಸ್ವೀಪಾ (ಪ್ರ ಕ k).

೧೧೬. [1]ದ (ಅ ಕುಮಾ).
[ನಿರೋಧ-ಅಡ್ಡಿ, ಪ್ರತಿಬಂಧಕ].

೧೧೭. [ಅನಿಷ್ಟ-ಅಪ್ರಿಯವಾದುದು. ಆಳಿಗೊಳ್ಳು-ಸಂಕಟಪಡಿಸು, ಕಷ್ಟಪಡಿಸು. ನಿಕರ-ಸಮೂಹ. ಉಪಹತಿ-ಹಿಂಸೆ, ತೊಂದರೆ. "ನ ದುಃಖಃ ಪಂಚಭಿಸ್ಸಹ"-ಐದು ಜನದೊಡನೆ ಹೇಳಿಕೊಂಡ ದುಃಖ ದುಃಖವಲ್ಲ, ದುಃಖವಾಗಿ ಉಳಿಯುವುದಿಲ್ಲ].

ತಾಯೆ ಕೇಳೇ ವಿಪ್ರಪುರದೊಳ-
ಗಾಯುವುಂಟಿನಗೆಂದು ರಕ್ಕಸ-
ನಾಯು ನೆಲಸಿಹನವನ ಕೊಳುಗುಳ ಶೈಲಶಿಖರದಲಿ ।
ಆಯದೊಬ್ಬನ ಮನೆಮನೆಗೆ ಮೇ-
ಲಾಯುಮಹಿಷದ್ವಯ ಸಹಿತ ನಿ-
ರ್ದಾಯದಲಿ ಹನ್ನೆರಡು ಕಂಡುಗದಕ್ಕಿಯೋಗರವ ॥ ೧೧೮ ॥

ಇನಿತುವನು ಮನೆಮನೆಗೆ ಬಾರಿಯ
ದಿನಕೆ ಕೆಕ್ಕೊಡೆ ತುಷ್ಟನಿಲ್ಲದ
ದಿನಕೆ ನುಂಗುವನೂರನೀ ಪರಿ ಹಲವು ಕಾಲದಲಿ ।
ಎನಗೆ ಬಂದುದು ¹ನಾರಿ¹ ನಾಳಿನ
ದಿನದ ಬಾರಿಯದಕ್ಕೆ ತನ್ನಯ
ತನುಜ ತಾನುಳಿದಂತೆ ಮಾನಿಸರಿಲ್ಲ ತವಗೆಂದ ॥ ೧೧೯ ॥

ಮಗನನೀವೆನೆ ಪಾರಲೌಕಿಕ-
ವಗಡಹುದಪಖ್ಯಾತಿ ತನ್ನನು
¹[ತಗವು]¹ ದೈಹಿಕದಲ್ಲಿ ಬಳಿಕೇನೂತಕಿಚ್ಛೇದ ।
²ಹಗೆಯು²ದೆನ್ನೊಡಲಸುರಘಾತಿಗೆ
ಮಿಗೆ ವಿಭಾಡಿಸಿ ಕೊಡುವೆನೆಂದೆನೆ
ನಗುತ ಕುಂತೀದೇವಿ ನುಡಿದಳು ವಿಪ್ರ ಕೇಳೆಂದು ॥ ೧೨೦ ॥

ತಿರುಗಿ ನಿಮ್ಮೂರೊಳಗೆ ಕೊಳನು
ತಿರಿದು ಸಲಹುವೆನೆನ್ನ ಮಕ್ಕಳು
ಧರೆಯನಾಳುವ ಸತ್ವಸಾಹಸಿಗಳಿದ್ದು ಫಲವೇನು ।

---

೧೧೮. [ಮಹಿಷ-ಕೋಣ. ಓಗರ-ಅನ್ನ].

೧೧೯. ¹ತಾಯೆ (ಅ ಕುಮಾ), ಸ್ತ್ರೀಯಾ (ಕ ಓ k ಪ್ರ).
[ಬಾರಿ-ಸರದಿ. ತನುಜ-ಮಗ. ಮಾನಿಸ-ಮನುಷ್ಯ].

೧೨೦. ¹ತೆಗೆವು (ಕ k ಓ), ತಗದು (ಅ), ತಗುದು (ಕುಮಾ). ²ಬಗೆಯುದೆ (ಅ ಕುಮಾ), ಬಗೆಯುದೊ (ಅ), ಸ್ತ್ರೀಯಾ (k).
[ತಗೆ-ಕಡು, ಅವರಿಸು. ವಿಭಾಡಿಸು-ನಾಶಪಡಿಸು].

[1]ಹೊರೆಯಲರಿಯೆನು[1] ದುರುಳನೆರಡೆಂ-
ಟರಿಯನ[2]ವನೊ[2]ಳಗೊಬ್ಬನುದರಕೆ
ನೆರಹಲಾರೆನು ಕೊಳನೆಂದಳು ಕುಂತಿ ನಸುನಗುತ ॥ ೧೨೧ ॥

ಎರವು ಮುಯ್ಯಮುಟ್ಟುಂಟು ವಸ್ತು-
ತ್ಕರದೊಳಗೆ ಭಾವಿಸಲು ಮಕ್ಕಳ
ನೆರವಕೊಟ್ಟವರುಂಟೆ ಮಾರಿಯ ನಾಲಗೆಯು ಸವಿಗೆ ।
ನೆರವಿ ನಗದೇ [1]ನಿಮ್ಮ[1]ನಿಹಪರ-
ನೆರಡರಲಿ ಕೇಡಹುದು [2]ನೀನಿ-
ಷ್ಕರುಣೆಯಹುದಾ[2] ತಾಯೆ ನೀ ಬಿಟ ಮನುಜೆಯಲ್ಲೆಂದ ॥ ೧೨೨ ॥

ಏನನಿತ್ತು ದಧೀಚಿ ಲೋಗರ
ಹಾನಿಯನು ಕಾಯಿದನು ಶಿಬಿ ತಾ-
ನೇನನಿತ್ತನು ಕೇಳಿದೈ ಜೀಮೂತವಾಹನನು ।
ಏನುಮಾಡಿದನೆಂದು ನೀನದ-
ನೇನುವನು ಕೇಳ್ದರಿಯಲಾ ಮ-
ತ್ಸೂನುವನು ನಿನ್ನವಸರಕೆ ಕೊಳ್ಳೆಂದಳಾ ಕುಂತಿ ॥ ೧೨೩ ॥

ಆವನರ್ಥ ಪರಾರ್ಥದಲಿ ಸಂ-
[1]ಜೀವನವ[1]ನೈದಿತು ಪರಾರ್ಥದೊ-
ಳಾವನಸು ನಿರ್ವಾಣ[2]ಗೊಂಡುದು[2] ಲೋಕವೂಱಱಲಿ ।

---

೧೨೧. ಹುರುಡನರಿವೆನು (ಸ), ಹೊರೆಯಲಾರೆನು (k ಕ). [2]ವನೊ (ಆ ಕುಮಾ); ಸ್ವೀಪಾ (ಸ).
[ದುರುಳ-ದುಷ್ಟ. ಎರಡೆಂಟರಿಯನು-ಎರಡಕ್ಕೂ ಎಂಟಕ್ಕೂ ಇರುವ ವ್ಯತ್ಯಾಸವನ್ನು ತಿಳಿಯದಷ್ಟು ಮೂಢ. ಉದರಕೆ ನೆರಹಲಾರೆನು-ಹೊಟ್ಟೆಗೆ ಹಾಕಲಾರೆನು].

೧೨೨. [1]ನಮ್ಮ (ಆ ಕುಮಾ ಓ), (ಸ್ವೀಪಾ ಕ k). [2]ಕಷ್ಟವು ಗನುವೆಯಹುದೌ (ಆ ಕುಮಾ), ಹೊರಮೋಳೆಯೆ ನೀ ಕಡುಗರುಣೆ ಯಾರೌ (ಆ), ಸ್ವೀಪಾ (ಓ k).
[ಎರವು-ಸಾಲ. ಮುಯ್ಯಮುಟ್ಟು-ಕೊಳುಕೊಡೆ. ವಸ್ತುತ್ಕರ-ಪದಾರ್ಥಗಳ ಸಮೂಹ. ನೆರವಿ-ಜನಸಮುದಾಯ].

೧೨೩. [ಸೂನು-ಮಗ. ಅವಸರ-ಸಮಯ].

೧೨೪. [1]ಜೀವಿನಿಯ (ಆ), ಜೀವನಿಯ (ಕುಮಾ); ಸ್ವೀಪಾ (ಕ k ಪ್ರ). [2]ಮಾಡುದು (ಆ ಕುಮಾ), ಸ್ವೀಪಾ (ಕ k ಪ್ರ).

ಆ ವಿರಿಂಚಿಪುರಂದರಾದಿಯ
ದೇವತತಿಗಿವರಿಬ್ಬರೇ ಸಂ-
ಭಾವನೀಯರು ಕೇಳು ಭೂಸುರ ಎಂದಳಾ ಕುಂತಿ || ೧೨೪ ||

ಬಲುಹಿನಲಿ ಭೂಸುರನ ಚಿತ್ತವ
ತಿಳುಹಿ ಬಂದಳು ಮನೆಗೆ ಭೀಮನ
ಕೆಲಕೆ ಕರೆದಳು ಹೇಳಿದ[1]ಳು[1] ಹೇರಾಳದೌತಣವ |
ಉಲಿದು ಮುದದಲಿ ಭೀಮ ಬಾಹ-
ಪ್ಪಳಿಸಿದನು ಯಮನಂದನಾದಿಗ-
ಳಳಲಿ ನುಡಿದರು ದೈತ್ಯಜಯಸಂಶಯದ [2]ಖೇ[2]ದದಲಿ || ೧೨೫ ||

ಮರುಳುಗಳು ನೀವೆಂದವರ ಚ-
ಪ್ಪರಿಸಿದನು ಕಲಿಭೀಮನಾ ನಡು-
ವಿರುಳು ತೊಡಗಿತು ವಿಪ್ರಭವನದ ಪಾಕವುರುರಭಸ |
ಹೊರೆದಳೆನ್ನನು ತಾಯಿ ಕುಂತಿಯು
ಹರಸುವೆನು ಪಾರಣೆಯ ಹೊತ್ತಿನೊ-
ಳರಸು ನಾಳಿನೊಳಾನೆನುತ ಹಿಗ್ಗಿದನು ಕಲಿಭೀಮ || ೧೨೬ ||

ನಳನಳಿಪ ಬಹುವಿಧದ ಭಕ್ಷ್ಯಾ-
ವಳಿಯ ಹೆಡಗೆಗಳೋರಣಿಸಿ ಮಂ-
ಡಳಿಸಿ ಹೂಡಿದ ಹಾಲುತುಪ್ಪದ ಹಲವು ಹರವಿಗಳ |
ಬಳಸಿ [1]ಮುಚ್ಚಿ[1]ದ ವಿವಿಧಶಾಕಾ-
ವಳಿಯ ಜೋನದ ಬಿಗಿದ ಕುಸಿಕಿಲ
ಕಳವೆಯಕ್ಕಿಯ ಕೂಳರಾಶಿಯ ಬಂಡಿ ಜೋಡಿಸಿತು || ೧೨೭ ||

---

೧೨೪. [ಅರ್ಥ-ಧನ. ಸಂಜೀವನ-ಒಳ್ಳೆಯ ಜೀವನ, ಸಾರ್ಥಕತೆ. ಅಸು-ಪ್ರಾಣ. ನಿರ್ವಾಣ-ನಂದುವುದು, ಆರುವುದು. ವಿರಂಚಿ-ಬ್ರಹ್ಮ. ಪುರಂದರ-ಇಂದ್ರ. ದೇವತತಿ-ದೇವತೆಗಳ ಸಮೂಹ. ಸಂಭಾವನೀಯ-ಗೌರವಕ್ಕೆ ಪಾತ್ರ].

೧೨೫. [1]ದು (ಅ), ಸ್ವೀಪಾ (ಕ k). [2]ಭೀ (ಅ ಕುಮಾ), ಸ್ವೀಪಾ (ಕ k).
[ಕೆಲ-ಪಕ್ಕ. ಹೇರಾಳ-ಭಾರಿಯಾದ, ದೊಡ್ಡ. ಅಳಲು-ದುಃಖಿಸು].

೧೨೬. [ಮರುಳು-ದಡ್ಡ, ಬೆಪ್ಪ. ಪಾಕ-ಅಡಿಗೆ].

೧೨೭. [1]ಮುತ್ತಿ (ಕ).
[ಶಾಕ-ಕಾಯಿಪಲ್ಯ, ತರಕಾರಿ. ಕುಸಿಕಿಲ್-ಚೀಲ, ಸಂಚಿ. ಕಳವೆ-ಬತ್ತ. ಕೂಳು-ಅನ್ನ].

ಬೆರಳ ದರ್ಭೆಯ ಹಱಿದು ಧೌತಾಂ-
ಬರವನುಟ್ಟನು ಬಿಗಿದು ಕುಂತಿಯ
ಚರಣರಜವನು ಕೊಂಡು [1]ಧರ್ಮಜನಂಘ್ರಿಗಭಿನಮಿಸಿ[1] ।
ಹರುಷ ಮಿಗೆ ಹರಿತಂದು ಬಂಡಿಯ
ಶಿರದ ಹಲಗೆಯನಡರಿದನು ಬಲು-
ಹುರಿಯ ಹಗ್ಗವ ಹಿಡಿದು [2]ಹೊಡೆ[2]ದನು ಹೂಡಿದೆತ್ತುಗಳ ॥ ೧೨೮ ॥

ಎಡೆಯಲೇ ಭಕ್ಷ್ಯಾದಿಗಳ ಬಱಿ
ಹೆಡಗೆಯುಳಿದವು ಕೂಳೊಳರ್ಧವ
ಹೊಡೆದು ಸುಱಿದನು ಹಾಲುತುಪ್ಪದ ಹರವಿಯೋರೆಯಲಿ ।
ಕುಡಿದು ಪಕ್ಕಲೆ ನೀರನೊಯ್ಯನೆ
ನಡಸಿ ತಂದನು ಕಂಡು ದನುಜನ
ನುಡಿದನೆಲವೋ ಕುನ್ನಿ ಕೂಳಿದೆ ತಿನ್ನು ಬಾರೆನುತ ॥ ೧೨೯ ॥

ಕಂಡು ಖಳ ಬೆಱಗಾದನಿವನು-
ದ್ದಂಡತನವಚ್ಚರಿಯಲಾ ಹರಿ
ಖಂಡಪರಶುಗಳೆಳುಕುವರು ತನ್ನೊಡನೆ [1]ತುಡುಕುವ[1]ಡೆ ।
ಬಂಡಿತುಂಬಿದ ಕೂಳನಿವನಿಂ-
ದುಂಡು ಬದುಕಲಿ ಊರ ಪಾರ್ವರ
ಹಿಂಡುವೆನು [2]ಯಿವ[2]ಸಹಿತೆನುತೆ ಹಲುವೊರೆದನವುರಾಃ ॥ ೧೩೦ ॥

ಮತ್ತೆ ಶೇಷಾನ್ನದಲಿ [1]ತೋಱುತ[1]
ತುತ್ತುಗಳ ತೂಗುತ್ತ ಮಾರುತಿ
[2][ಎ]ತ್ತಿ[2]ಕೊಂಡನು ಬಾಯೊಳವನನು ಬೆರಳ[3]ಲೇ[3]ಡಿಸುತ ।

---

೧೨೮. [1]ವಿಪ್ರವ್ರಜಕೆ ಕೈಮುಗಿದು (ಅ ಕ). [2]ಜಡಿದನು (ಅ ಆ ಕುಮಾ). ಸ್ವೀಪಾ (ಸ).

೧೨೯. [ಹೆಡಗೆ-ಕುಕ್ಕೆ, ಮಕ್ಕರಿ. ಹರವಿ-ಮಡಕೆ. ಸುಱಿ-ಹೀರು, ಕುಡಿ. ಪಕ್ಕಲೆ-ಚರ್ಮದ ಚೀಲ, ಪಕಾಲಿ].

೧೩೦. [1]ತೊಡಕುವೊ (ಅ), ಸ್ವೀಪಾ (k ಸ). [2]ಖಳ (ಆ ಸ).
[ಉದ್ದಂಡತನ-ಹೆಮ್ಮೆ, ಅಹಂಕಾರ. ಖಂಡಪರಶು-ಈಶ್ವರ. ತುಡುಕು-ಸೆಣಸು, ಹೋರಾಡು. ಪಾರ್ವ-ಹಾರುವ, ಬ್ರಾಹ್ಮಣ].

೧೩೧. [1]ತೋರಿಹ (ಓ k). [2]ಮುತ್ತಿ (ಅ ಕುಮಾ ಸ k), ಮೆತ್ತಿ (ಅ). [3]ನೇ (ಅ).

ಇತ್ತಲೆನ್ನಯ ಹಸಿವು ಹೆಚ್ಚಿದೆ
ತುತ್ತು ಹೊಗದೊಳಗಿವನ ತೊಡಗಲ-
ದೆತ್ತಲಕಟಾ ವಿಧಿಯೆನುತ ಮುರಿದೆದ್ದನಮರಾರಿ ॥ ೧೩೧ ॥

ಎರಡು ಕೈಯನು ಬಲಿದು ಮುಷ್ಟಿಯೊ
ಳೆಱಗಿದನು ಖಳ ಬೆನ್ನನೇನೆಂ-
ದಱಿಯನಿತ್ತಲು ಭೀಮ ಬಲುದುತ್ತುಗಳ ತೋಟಿಯಲಿ ।
ಮರನ ಮುಱಿದೆಱಗಿದೊಡೆ ಪುನರಪಿ
ಮುರಿದು ನೋಡಿದು ಬಹೆನು ನಿಲ್ಲೆನು-
ತರೆಗೆಲಸ ಪೂರೈಸಲೆಂದನು ನಗುತ ಕಲಿಭೀಮ ॥ ೧೩೨ ॥

ಸಿಕ್ಕಿದನು ಕಲಿಭೀಮನೆನೆ ಕೈ
ಯಿಕ್ಕಿ ಕೊಟ್ಟನು ಮೆಯ್ಯನಸುರನ
ಹೊಕ್ಕು ತಿವಿದನು ತಿರುಗಿ ಬದಿಯೆಲು ನುಗ್ಗುನುಸಿಯಾಗೆ ।
ಬಿಕ್ಕುಳಿ[1]ನ[1] ತಾಳಿಗೆಯ ಮೂಗಿನೊ-
ಳೊಕ್ಕ ರುಧಿರದ [2]ಖಳನ[2] ಬಿಗಿದುಱ[3]
ಡೊಕ್ಕರಿಸಲಸು ನೀಗಿತಸುರನ ತನುವ ನಿಮಿಷದಲಿ ॥ ೧೩೩ ॥

ಅರಸ ಕೇಳೈ ಕಲಿಬಕಾಸುರ-
ಮರಣಸಮನಂತರದೊಳಾಪುರ-
ವರದೊಳಿರ್ದರು ವಿಮಲವಿಪ್ರಸ್ತೋಮದೊಡಗೂಡಿ ।
ವರುಷ ತುಂಬಿತು ನಮ್ಮ ಹಸ್ತಿನ-
ಪುರವ ಹೊಱವಂಟೆಂದಿನಲಿ ಎಂ-
ದರಸ ಕುಂತೀದೇವಿಗೆಂದನು ಧರ್ಮಸುತ ನಗುತ ॥ ೧೩೪ ॥

---

೧೩೧. [ಪಡಿಸು-ಅಣಕಿಸು. ತೊಡಗ (ಕ)ಲು-ಜಗಳ, ಕದನ. ಹೊಗದೊಳಗೆ-ಹೋಗದೆ ಇರುವಷ್ಟರಲ್ಲಿ].

೧೩೩. [1]ಯ (ಅ ಕುಮಾ), ಸ್ವೀಪಾ (ಸ ಓ). [2]ಧಾರೆ (ಅ ಕುಮಾ).
[ಬದಿಯೆಲು-ಪಕ್ಕೆಯೆಲುಬು. ತಾಳಿಗೆ-ಗಂಟಲು. ರುಧಿರ-ರಕ್ತ. ಒಕ್ಕ-ಸುರಿದ. ಡೊಕ್ಕರಿಸು-ಗುದ್ದಿಗುದ್ದಿ ಸಾಯಿಸು].

ಆ ಸಮಯದಲಿ ಬಂದನೊಬ್ಬನು
ಭೂಸುರನು ಸಕುತೂಹಲನು ಬಹು-
ದೇಶಪರ್ಯಟನಪ್ರವಾಸಾಭ್ಯಾಸ ಶಿಕ್ಷೆಯಲಿ ।
ಗ್ರಾಸಯಾಚಕನಾಗಿ ತಮ್ಮ ನಿ-
ವಾಸದಲಿ [1]ಪರಿ[1]ತುಷ್ಟನಾದ [2][ಪ್ರ[2]
ವಾಸಿತಾ]ಧ್ವಶ್ರಮನ ನುಡಿಸಿದನರಸ[1] ವಿನಯದಲಿ ॥ ೧೩೫ ॥

ಎತ್ತಣಿಂ[1]ದೀ[1]ಬರವು ಬಳಿಕಿ-
ನ್ನೆತ್ತ ಗಮನವು ಪೂರ್ವಸುಕೃತವ
ಹೊತ್ತುದಿಂದಿನದಿವಸವಿದೆಲಾ ಸುಜನಸಂಸರ್ಗ ।
ಉತ್ತರೋತ್ತರಸಿದ್ಧಿಯಿಲ್ಲಿಂ-
ದಿತ್ತಲೆಮಗೆನೆ ಹಸ್ತಿನಾಪುರ-
ದತ್ತಣಿಂದವೆ ಬಂದೆವಾವುದು ದೇಶ ನಿಮಗೆಂದ ॥ ೧೩೬ ॥

ನಾವು ನಿಮ್ಮೋಪಾದಿಯಲಿ ತೀ-
ರ್ಥಾವಲೋಕನಪರರು ಭಿಕ್ಷಾ-
ಜೀವಿಗಳು ನೀವೇಸುದಿನ ಗಜಪುರವ ಹೊರವಂಟು ।
ಆವನಲ್ಲಿಗೆ ಪತಿ ಯುಧಿಷ್ಠಿರ-
ದೇವನೋ ದುರ್ಯೋಧನನೊ ಬಳಿ-
ಕಾವು[1]ದುಂಟು ವಿಶೇಷ[1] ಕೌರವಪಾಂಡುತನಯರಲಿ ॥ ೧೩೭ ॥

---

೧೩೫. [1]ಸಲೆ (ಅ ಕುಮಾ). [2]ಪರಾಸಿತಾಂತಶ್ರಮನ (ಅ); ಪರಾಸಿಕಾದ್ರ್ರಶ್ರಮನ ನುಡಿಸಿಡನ (ಕ); ಪ್ರಥವಾಸಿ ತತ್ವಶ್ರಮವ ನುಡಿಸಿದ (ಸ); ಪರಾಶಿತಾಧ್ವಶ್ರಮುವ ನುಡಿಸಿದನ (k); ಮಹೀಸುರನ ಮಾತಾಡಿಸಿದನಂದರಸ (ಅ ಕುಮಾ); ಸ್ವೀಪಾ (ಪ್ರ k).

[ಪರ್ಯಟನ-ಸುತ್ತಾಟ, ಸಂಚಾರ. ಪ್ರವಾಸ-ಪ್ರಯಾಣ. ಪ್ರವಾಸಿತಾಧ್ವಶ್ರಮ-ಪ್ರಯಾಣ ಮಾಡಿದ ಮಾರ್ಗಾಯಾಸ].

೧೩೬. [1]ದಲಿ (ಅ ಕುಮಾ).

೧೩೭. [1]ದತಿಶಯವುಂಟು (ಅ ಕ ಓ).

[ತೀರ್ಥಾವಲೋಕನ-ತೀರ್ಥಯಾತ್ರಾಸ್ಥಳದರ್ಶನ. ಏಸು-ಎಷ್ಟು. ಪತಿ-ಪ್ರಭು, ಸ್ವಾಮಿ].

ಮರುಳುಗಳೊ ನೀವ್ ಮೇಣು ನಮ್ಮನು
ಮರುಳುಮಾಡುವ ಪರಿಯೊ ಪಾಂಡವ-
ರರಗುಮನೆಯಲಿ ಬೆಂದರಿಂದು ಲೋಕಪ್ರಸಿದ್ಧವಲೇ ।
ಅರಸು ಕೌರವರಾಯನಾತನ
ಸಿರಿಯನಾತನ ಬಲುಹನಾತನ
ಪರಿಯನಭಿವರ್ಣಿಸುವೊಡಱಿಯೆನು ವಿಪ್ರ ಕೇಳೆಂದ ॥ ೧೩೮ ॥

ಅಕಟ ಪಾಂಡವರಳಿದರೇ ಬಾ-
ಧಕರೆ ಪರರಿಗೆ ಲೇಸಿನಲಿ ಕಂ-
ಟಕವು ದುಗ್ಧವಿಷಂಗಳಲಿ [1]ಹಾಲಿಂಗೆ[1] ಹಾನಿಯಲೆ ।
ವಿಕಳಪುಣ್ಯರು ನಿಲಲಿ ಕುರುರಾ-
ಜಕದೊಳಗೆ ಭೀಷ್ಮಾದಿವೃದ್ಧ-
ಪ್ರಕರ ಗುರುಸುತಗುರುಕೃಪಾದ್ಯರು ಕುಶಲರೇ ಎಂದ ॥ ೧೩೯ ॥

ಗುರು[1]ಕೃಪಾ[1]ದಿಸಮಸ್ತಪರಿಜನ-
ಪುರಜನಕೆ ಸುಕ್ಷೇಮ ದ್ರುಪದನ
ವರಕುಮಾರಿಯ ಮದುವೆ ಗಡ ಪಾಂಚಾಲ[2]ದೇಶ[2]ದಲಿ ।
ನೆರೆವುತಿದೆ ನಾನಾ ದಿಗಂತದ
ಧರಣಿಪತಿಗಳು ಭೂರಿಯಲಿ [3]ಮಿಗೆ[3]
ಭರಿತ[4]ದಕ್ಷಿಣೆ ಮೃಷ್ಟಭೋಜನವುಂಟು[4] ನಮಗೆಂದ ॥ ೧೪೦ ॥

---

೧೩೯. [1]ಹಾವಿಂಗೆ (ಅ ಆ ಕುಮಾ), ಸ್ವೀಪಾ (k).
[ಲೇಸು-ಒಳ್ಳೆಯದು. ಕಂಟಕ-ಮುಳ್ಳು, ವಿಘ್ನ. ದುಗ್ಧ-ಹಾಲು. ರಾಜಕ-ರಾಜಸಮೂಹ, ರಾಜ್ಯ. ಪ್ರಕರ-ಸಮೂಹ].

೧೪೦. [1]ಸುತಾ (ಅ ಕುಮಾ), ಸ್ವೀಪಾ (ಕ ಓ k). [2]ನಗರ (ಅ ಕುಮಾ), ಸ್ವೀಪಾ (ಕ ಓ k). [3]ಭರ (ಅ). [4]ದಕ್ಷಿಣೆಯುಂಟು ಭೋಜನಸಹಿತ (ಅ).
[ಭೂರಿ-ಉದಾರ, ಹೆಚ್ಚಾದ. ಮೃಷ್ಟ-ಮಧುರ, ರಸವುಳ್ಳ].

ಅವನು ಬಳಿಕ ನಿಜಪ್ರಯೋಜನ-
[1]ಭವನ[1]ಕೈದಿದನಖಿಳವಾರ್ತಾ-
ವಿವರಣವ್ಯಾಖ್ಯಾನಸಮನಂತರದ ಸಮಯದಲಿ ।
ಇವರು ತಮ್ಮೊಳಗೆಂದರವನೀ-
ದಿವಿಜಪುರದಲಿ ದೈನ್ಯವೃತ್ತಿಯ
ನಿವಹ ನಿಲಲಿ ನಿರೀಕ್ಷಿಸುವೆವಾ ದ್ರುಪದಪಟ್ಟಣವ ॥ ೧೪೧ ॥

ಗಮನಭರದಲಿ ಭಾರಿಯಧ್ವ-
ಶ್ರಮವ ನೋಡದೆ ಭೂಮಿನಭದಲಿ
ತಮದ ಚಾವಡಿಯಿಕ್ಕಿದೊಡೆ ಗತಿಚಾಪಳವ ಬಿಡದೆ ।
ದ್ಯುಮಣಿ ಕೈಸೆಜ್ಜೆಯಾ[1]ಗಲಟವೀ-
ಭ್ರಮಣದಲಿ ಬೆಳಗಡಗೆ[1] ಭೂಪೋ-
ತ್ತಮರು ಬಂದರು [2]ಗಹನ ಮಧ್ಯ[2]ದೊಳರ್ಧರಾತ್ರಿಯಲಿ ॥ ೧೪೨ ॥

ಮುಂದೆ ಪಾರ್ಥನ ಬೀಸುಗೊಳ್ಳಿಗ-
ಳಿಂದ [1]ತಮದೊಡ್ಡೋಡೆ ಬೆಳಗಿನ
ಹಿಂದೆ[1] ಕುಂತೀದೇವಿ ಧರ್ಮಜನಕುಲಸಹದೇವ ।
ಹಿಂದೆ ಭೀಮನ ಕೈಯಕೊಳ್ಳಿಯ
ಬಿಂದು ಬೆಳಗಿನಲನಿಬರಟವೀ-
ವೃಂದದಲಿ ಬರುತಿರ್ದರಿರು[2]ಳು ಮಹೀಶ[2] ಕೇಳೆಂದ ॥ ೧೪೩ ॥

---

೧೪೧. [1]ಭುವನ (ಅ).

[ಅವನೀದಿವಿಜ-ಭೂಸುರ, ಬ್ರಾಹ್ಮಣ. ನಿವಹ-ಸಮೂಹ].

೧೪೨. [1]ಗಲಾತಭ್ರಮಣದಲಿ ಬೆಳಕಾಗಿ (ಅ), ದವೊಲೀಶ್ರವಣವೇ ಬೆಳಗಾಗಿ (ಸ). [2]ಬಹಳಗಮನ (ಅ ಆ ಕುಮಾ), ಸ್ವೀಪಾ (ಸ).

[ಅಧ್ವಶ್ರಮ-ಮಾರ್ಗಾಯಾಸ. ನಭ-ಆಕಾಶ. ಗತಿಚಾಪಳ-ಗಮನದಲ್ಲಿ, ನಡಗೆಯಲ್ಲಿ, ಆಸಕ್ತಿ. ಅಟವೀ-ಅಡವಿ, ಕಾಡು. ಭ್ರಮಣ-ಅಲೆದಾಟ. ಗಹನ-ಕಾಡು].

೧೪೩. [1]ತಮದಾವಳಿ ಮುರಿಯೆ ಬಳಿಸಂದು (ಅ ಆ ಕುಮಾ). [2]ಳವನೀಶ (ಅ ಕುಮಾ), ಸ್ವೀಪಾ (ಕ ಸ k).

[ತಮ-ಕತ್ತಲು. ಒಡ್ಡು-ಮೊತ್ತ. ಇರುಳು-ರಾತ್ರಿ].

ಬರುತ ಕಂಡರು ಮುಂದೆ ಗಂಧ-
ರ್ವರ ವಧೂನಿಕುರುಂಬವನು ನೇ-
ವುರದ ಝಣಝಣರವದ ಕಂಕಣ[1]ಝಂಕೃತಿಧ್ವನಿಯ[1] ।
ಅರಳುಗಂಗಳ [2]ಹೊಳಹಿ[2]ನಲಿ ತಮ-
ದಿರುಳು [3]ಬೀತುದು[3] ಬೆಸೆವುದಾಗಳೆ
ಕುರುಳು ಕಾಳಿಕೆಯಿಂದ ತತ್ಕಾಂತಾಕದಂಬದಲಿ ॥ ॥ ೧೪೪ ॥

ನಾರಿಯರು ಕಂಡರು ಸುಲಜ್ಜಾ-
ಭಾರದಲಿ [1]ತಡಿಗಡರ[1] ಹಾಯಿದು
ಸೀರೆಗಳ [2]ಸೆರೆ[2]ವಿಡಿದರಂಗೋಪಾಂಗಲತೆಗಳಿಗೆ ।
ಅರಿವರು ನಡುವಿರುಳು ದರ್ಪವಿ-
ಕಾರದಲಿ ಕೈಕೊಳ್ಳರೆನುತಂ-
ಗಾರವರ್ಮನು* ಧನುವ ಕೊಂಡನು [3]ನರನ ತೆಗೆದೆಚ್ಚ**[3] ॥ ೧೪೫ ॥

ಕನಲಿ ಫಲುಗುಣನಾದೊಡಿದೆಕೊ-
ಳ್ಳೆನುತ ಕೊಳ್ಳಿಯೊಳಟ್ಟನಗ್ನಿಯ
ನೆನೆದು ಮಂತ್ರಿಸಲುರಿಮುಖದ [1][ಕ][1]ಬೊರ್ಗೆಯ [2]ಮ[2]ಬ್ಬಿನಲಿ ।
[3]ಕೊನರು[3]ಗಿಡಿಗಳ ತೆಗಡುರಿಯ ತೊಂ-
ಡಿನಲಿ ಮುತ್ತಿತು ರಥವನಾತನ
ಧನುವನಾತನ ತನುವನಾತನ ಸರಳ ಸಾರಥಿಯ ॥ ೧೪೬ ॥

---

೧೪೪. [1]ಝೇಂಕೃತಿಸ್ವನದ (ಅ ಕ k); ಝೇಂಕೃತಿಧ್ವನಿಯ (ಕುಮಾ). [2]ಬೆಳಗಿ (ಅ ಕುಮಾ), ಸ್ವೀಪಾ (ಕ ಸ). [3]ಬಿರಿವುದು (ಸ k); ಮುಚ್ಚುವುದು (ಅ ಕ). [ನಿಕುರುಂಬ, ಕದಂಬ-ಗುಂಪು, ಸಮೂಹ. ಬೀತುದು (ಧಾತು, ಬೀ)-ನಾಶವಾಯಿತು, ಕಳೆದುಹೋಯಿತು].

೧೪೫. [1]ತಡಿಗಡಿಗೆ (ಅ), ತಡಿಗಡೆಗೆ (ಕುಮಾ), ತಡಿಗಳಿಗೆ (ಸ). [2]ಮುಚ್ಚ (ಕ k). [3]ನುಡಿಸಿದನು ನರನ (ಅ ಅ ಕುಮಾ).

೧೪೬. [1]ಕಾಬೊರ್ಗೆ (ಆ ಅ ಕುಮಾ). [2]ಮೊಬ್ಬಿ (ಅ ಅ ಕುಮಾ), ಸ್ವೀಪಾ (ಕ ಸ). [3]ಹೊಸಲು (ಅ ಕುಮಾ), ಸ್ವೀಪಾ (ಕ k ಪ್ರ).

---

* ಅಂಗಾರವರ್ಮ — ಮೂಲ ಸಂಸ್ಕೃತ ಭಾರತದಲ್ಲಿ ಅಂಗಾರಪರ್ಣ ಎಂದು ಹೆಸರಿದೆ. ಈತ ಕಶ್ಯಪನಿಂದ ಮುನಿಯೆಂಬ ಹೆಂಡತಿಯಲ್ಲಿ ಜನಿಸಿದ ದೇವಗಂಧರ್ವರಲ್ಲಿ ಒಬ್ಬ. ಕುಬೇರನ ಆಪ್ತಮಿತ್ರ.

** ತೆಗೆದೆಚ್ಚ ಎನ್ನುವುದು ಪಾಠಾಂತರವಲ್ಲ. ಸಂಗ್ರಹ ಕಾರ್ಯದ ಅಗತ್ಯವನ್ನು ಅನುಲಕ್ಷಿಸಿ ಮುಂದಿನ ಒಂದು ಪದ್ಯದ ಮಾತನ್ನು ಇಲ್ಲಿ 'ಶ್ರೀ'ಯವರು ಸೇರಿಸಿದ್ದಾರೆ.

ಉರಿದುದಾ ರಥವವನ ಮೈಯಲಿ
ಕರಿಕುವರಿ[1]ದುದು ಹೊಯಿದು[1] ಹೊಕ್ಕನು
ಸರಸಿಯನು ಶಿಖಿಯೊಡನೆ ಹೊಕ್ಕುದು ನೀರನುಚಿ[3] ಸುಚಿ[3]ದು ।
ತರುಣಿ ಹಾಹಾ ಕೆಟ್ಟೆನೆಂದ-
ಬ್ಬರಿಸಲಾ ಗಂಧರ್ವನಂಗನೆ
ಹರಿದಳೆದಗೈಯಿಂದ ಸಂವರಿಸುತ್ತ ಬಿಡುಮುಡಿಯ ॥ ೧೪೭ ॥

ಬಂದು ಯಮನಂದನನ ಚರಣ-
ದ್ವಂದ್ವದಲಿ ಚಾಚಿದಳು ನೊಸಲನು
ತಂದ ಕರುಣಿಸು ಕಾಂತಭಿಕ್ಷವ [1]ಕರುಣಿಸೆನಗೆನಲು[1] ।
ಮುಂದುವರಿಯದಿರೆಲೆ ಧನಂಜಯ
ಕೊಂದರೆನ್ನಾಣೇಕೆಯರಸನ
ತಂದು[1]ಕೊಡು[ವುದು] ಬೇಗದುಪ[1]ಸಂಹರಿಸು ಶಿಖಿಶರವ ॥ ೧೪೮ ॥

ಎನೆ ಹಸಾದವೆನುತ್ತ ನಿಮಿಷದೊ-
ಳನಲ[1]ನನು ನಂದಿಸಿದನಿ[1]ತ್ತಲು
ಮನದ ದುಮ್ಮಾನದಲಿ [2]ಧೂಮಾವಿಷ್ಟ[2]ಮುಖನಾಗಿ ।
ಮನುಜರಲ್ಲಿವರಾರೊ ನೋಡುವೆ-
ನೆನುತ ಹತ್ತಿರೆ ಬಂದು ನೀವಾ-
ರಿಸಿತು ಸಾಹಸಮಲ್ಲ[3]ರೆನುತ[3]ರ್ಜುನನ ಬೆಸಗೊಂಡ ॥ ೧೪೯ ॥

---

೧೪೬. [ಕನಲು-ಕೋಪಗೊಳ್ಳು. ಕೊನರುಗಿಡಿ-ಹೆಚ್ಚುತ್ತಿರುವ ಕಿಡಿ. ತಗಡುರಿ-ದಟ್ಟವಾದ ಉರಿ. ತೊಂಡು-ಕಂಡಾಬಟ್ಟೆ ಹರಡುವಿಕೆ].

೧೪೭. [1]ತರಲೋಡಿ (ಅ ಕುಮಾ), ಸ್ವೀಪಾ (ಸ).

[ಕರಿಕುವರಿದುದು ಹೊಯಿದು-(ಉರಿಮೈಗೆ) ಅಪ್ಪಳಿಸಿ ಕಪ್ಪಿಟ್ಟಿತು. ಸಂವರಿಸು-ಸರಿಪಡಿಸು].

೧೪೮. [1]ತೊಡು ಬೇಗದಲಿ ಉಪ (ಅ ಕುಮಾ), ಕೊಡು ಬೇಗದೊಳಗುಪ (ಅ), ಸ್ವೀಪಾ (ಓ).

[ಉಪಸಂಹರಿಸು-ಹಿಂದಕ್ಕೆ ತೆಗೆದುಕೊ. ಶಿಖಿಶರ-ಆಗ್ನೇಯಾಸ್ತ್ರ].

೧೪೯. [1]ಬಾಣವನುಗಿದರಿ (ಅ ಸ ಕ k), ಬಾಣವತೆಗೆದ (ಓ). [2]ಲಜ್ಜಾವನತ (ಅ ಕುಮಾ), ಧೂಮಾಲಿಪ್ತ (k ಅ) ; ಸ್ವೀಪಾ (ಸ). [3]ರೆಂದ (ಅ ಕುಮಾ), ಸ್ವೀಪಾ (ಕ ಓ k).

[ಹಸಾದ (=ಪ್ರಸಾದ)-ಅಪ್ಪಣೆ. ಅನಲ-ಅಗ್ನಿ. ನಂದಿಸು-ಆರಿಸು. ಧೂಮಾವಿಷ್ಟ-ಹೊಗೆಯಿಂದ ಆವೃತ].

ಶಿವಶಿವಾದೊಡೆ ಯಮಪುರಂದರ
ಪವನ[1]ನಶ್ವಿನಿದೇವರಿಗೆ[1] ಸಂ-
ಭವಿಸಿದವರೇ ನೀವೆಮಗೆ ಸಂಭಾವನೀಯರಲಾ ।
ಇವೆ ಸಹಸ್ರ ತುರಂಗ ದಿವ್ಯೋ-
ದ್ಭವವನರ್ಘ್ಯಾಭರಣ ರತ್ನ-
ಪ್ರವರವಿವೆ ಕಾರುಣ್ಯದಲಿ ಕೈಕೊಂಬುದಿವನೆಂದ ॥ ೧೫೦ ॥

*ಇವು ಮದೀಯ ಸುವಸ್ತು ನಿನ್ನಯ
ಭವನದೊಳಗಿರಲೊಂದುಸಮಯದೊ-
ಳಿವನು ತರಿಸುವೆವೆಂದು ಬಳಿಕಂಗಾರವರ್ಮಂಗೆ ।
ಇವರು ವಿನಯವ ಮಾಡಿ ಗಮನೋ-
ತ್ಸವದಲಿರೆ ಗಂಧರ್ವ ನಸುನಗು-
ತಿವರಿಗೆಂದನು ಧರ್ಮಶಾಸ್ತ್ರದ ಸಾರಸಂಗತಿಯ ॥ ೧೫೧ ॥

---

೬. ದ್ರೌಪದೀಸ್ವಯಂವರ

ಗಮಿಸಿದರು ಬಳಿಕವರು ಧೌಮ್ಯಾ-
ಶ್ರಮಕೆ ಬಂದರು ಮುನಿಪನರ್ಘ್ಯಾ-
ದ್ಯಮಲಸತ್ಕಾರೋಚಿತವ ಕೈಕೊಂಡು ವಿನಯದಲಿ ।
ಎಮಗೆ ಪೌರೋಹಿತ್ಯದಲಿ ಸಂ-
ಕ್ರಮಿಸಬೇಕೆಂದೊಡಬಡಿಸಿ ಭೂ-
ರಮಣರಲ್ಲಿಂದೈದಿದರು ಪಾಂಚಾಲಪಟ್ಟಣವ ॥ ೧೫೨ ॥

---

೧೫೦. [1]ನಾ ಸತ್ಯರಿಗೆ ನೀವ್ (ಅ).
[ಸಂಭಾವನೀಯರು-ಗೌರವಾರ್ಹರು, ಪೂಜ್ಯರು. ತುರಂಗ-ಕುದುರೆ. ದಿವ್ಯೋದ್ಭವ-ದೇವಲೋಕದಲ್ಲಿ ಹುಟ್ಟಿದ. ಅನರ್ಘ್ಯ-ಅಮೂಲ್ಯ, ಬೆಲೆ ಕಟ್ಟಲಾಗದ. ಪ್ರವರ-ಅತಿ ಶ್ರೇಷ್ಠ].

೧೫೧. [ಮದೀಯ-ನನ್ನ].

---

* ಈ ಪದ್ಯವನ್ನು ಶ್ರೀಯವರು ಕೈಬಿಟ್ಟಿದ್ದರು. ಇದನ್ನು ಉಳಿಸಿಕೊಳ್ಳಲಾಗಿದೆ.

ಪುರದೊಳಗೆ ಹೇರಾಳಹಬ್ಬದ
ಹರಹಿನಲಿ ಬೀಡಾರ ಭಿಕ್ಷಾ-
ಚರಿತರಿಗೆ ದೊರಕುವುದೆ ಗುಡಿಗುಡಾರ[1]ಸಂತತಿಗೆ[1]
ಅರಸುಗಳು ನಾವಲ್ಲ ಭವನಾಂ-
ತರ[2]ವಿ[2]ದೇ ನಮಗೆಂದು ಘಟಬಂ-
ಧುರದ ಶಾಲೆಯ ಹೊಕ್ಕರಿವರು ಕುಲಾಲಭವನದಲಿ ॥ ೧೫೩ ॥

ಕೂಡೆ ಹೊಸಭಾಂಡದಲಿ ಭಿಕ್ಷವ
ಬೇಡಿ ತೊಳಲಿದರಿವರು ರಾಯರ
ಬೀಡು ಬಿಡುತಿರ್ದುದು ಬಹಳ ನಿಸ್ಸಾಳರಭಸದಲಿ ।
ಬೀಡಿವರಿಗಿದು ನೆಲನಿವರಿಗಿದು
ಮಾಡಿದರಮನೆ ಯಿವರಿಗಿದು ಕರು-
ಮಾಡವಿವರಿಗಿದೆಂದು ಪರುಠವಿಸಿದನು ಪಾಂಚಾಲ ॥ ೧೫೪ ॥

ಕೇರಿಕೇರಿಯ ಬೀದಿಗಳ ಪ-
ನ್ನೀರ ಚಳೆಯದ ಕಳಸಕನ್ನಡಿ-
[1]ಯೋ[1]ರಣದ ಸೂಸಕದ ಮುತ್ತಿನ ಮಕರ ತೋರಣದ ।
ಓರಣವ ಹೊಂಗೆಲಸದಖಿಳಾ-
ಗಾರಪಂಕ್ತಿಯ ಸೋಮವೀಥಿಯ
[2][ಸೂರ್ಯ][2]ವೀಥಿಯ [3]ಶೋಭೆ[3]ಯಲಿ ರಚಿಸಿದರು ಪಟ್ಟಣವ ॥ ೧೫೫ ॥

ಮೇಲುಕಟ್ಟಿನ ದಿವ್ಯಚಿತ್ರದು-
ಕೂಲನಿಚಯದ ಲಾಮಚದ ಬ-
ಲ್ಲೂಳದಡ್ಡಿಗಳೆಡೆಗೆಡೆಗೆ ರಂಜಿಸುವ ಪಟ್ಟಿಗಳ ।
ಮೇಲುವೊದಕೆಯ ಕರ್ಪುರದ ಹೊಂ-
ಬಾಳೆಗಳ ಮಲಯಜದ ಕಂಬದ
ಸಾಲುಗಳಲೊಪ್ಪಿದುದು ಚಪ್ಪರವೆರಡುಯೋಜನದ ॥ ೧೫೬ ॥

---

೧೫೩. [1]ಮಂಡವಿಗೆ (ಸ). [2]ವ (ಅ ಕುಮಾ), ಸ್ಥೀಪಾ (ಕ ಸ).
[ಘಟ-ಮಡಕೆ. ಬಂಧುರ-ಮನೋಹರ. ಕುಲಾಲ-ಕುಂಬಾರ].

೧೫೪. [ತೊಳಲು-ಅಲೆದಾಡು. ನಿಸ್ಸಾಳ-ಭೇರಿ. ಕರುಮಾಡ-ಉಪ್ಪರಿಗೆ].

೧೫೫. [1]ತೋ (ಅ ಆ ಕುಮಾ). [2]ಸೂರ (ಅ ಆ ಕುಮಾ). [3]ರಚನೆ (ಅ ಕುಮಾ).
[ಚಳೆಯ-ನೀರು ಚಿಮುಕಿಸುವುದು. ಓರಣ-ಸಾಲು. ಸೂಸಕ-ಕುಚ್ಚು].

ಕೀಲಿಸಿದ ಪಟ್ಟೆಗಳ ದಿವ್ಯದು-
ಕೂಲದಲಿ ¹ಕೊಂಬರಹದೆರೆ¹ಗಳ
ಜೋಳಿಕೆಯು ಕನ್ನಡಿಯು ತೋರಣವೆರಡುಪಕ್ಕದಲಿ ।
ಮೇಲುಮುತ್ತಿನ ಸೂಸಕದ ಸೇ-
ಸಾಳಚಮರಿ ¹ಕಥಾಯಿ¹ಗಳ ಸಂ-
ಮೇಳದಲಿ ಸಮುತಳಿಸಿದರು ವೈವಾಹಮಂಟಪವ ॥ ೧೫೭ ॥

ವಿವಿಧವೀಣಾವಾದ್ಯಕೋಮಲ-
ರವದ ಮಧುರಮೃದಂಗತತಿಗಳ
ರವಣೆಗಳ ನಟ್ಟುವಿಗರುಗ್ಗಡಣೆಯು ಗಡಾವಣೆಯು ।
ನವವಿಧದ ವೈತಾಳಿಕರ ವರ-
ಯುವತಿಯರ ಧಾರಣೆಯು ಭೂಷಣ-
ರವದ ಮೇಳವು ಮುತ್ತಿ ಮುಸುಕಿತು ಚಾರುಚಪ್ಪರವ ॥ ೧೫೮ ॥

ಸಾಳಗದ ಪ¹ವ್ಯೋಹಸದ¹ ಮಳೆ-
ಗಾಲವೋ ಗೀತವೊ ರಸಾಳಿಯ
ಕಾಲುವೆಯೊ ನವಕಾವ್ಯಬಂಧದ ಸಾರಸಂಗತಿಯೋ ।
ಅಲಿಗಳಿಗಾಯುಷ್ಯಫಲಜೀ-
ವಾಳವೋ ನರ್ತನವೊ ಸೊಗಸಿನ
ಮೇಳವಣೆಗಳ ¹ಪೇಟೆ¹ಯಾದುದು ಜನದ ಕಣ್ಮನಕೆ ॥ ೧೫೯ ॥

ತರಿಸು ಧನುವನು ಯಂತ್ರಮತ್ಸ್ಯವ-
ನಿರಿಸು ತಳುವದೆ ತಂಗಿಯನಲಂ-
ಕರಿಸು ದಂಡಿಗೆಯಿಂದೆ ತಾ ತೋಱಿಸು ಮಹೀಶ್ವರರ ।

---

೧೫೬. [ದುಕೂಲ-ರೇಶ್ಮೆ ವಸ್ತ್ರ. ಲಾಮಜ-ಲಾಮಂಚ; ಒಂದು ಬಗೆಯ ಸುಗಂಧದ ಬೇರು. ಮಲಯಜ-ಶ್ರೀಗಂಧ. ಬಲ್ಲಾಳದಡ್ಡಿ-ತಟ್ಟಿ, ತಡಿಕೆ, ಮರೆ].

೧೫೭. ¹ಯಡಾಳಿ (ಅ ಆ ಕುಮಾ), ಸ್ವೀಪಾ (ಕ ಸ).
[ಜೋಳಿಕೆ-ತುರಾಯಿ. ಕಥಾಯಿ-ಒಂದು ಬಗೆಯ ಬಟ್ಟೆ].

೧೫೮. [ರವಣೆ-ಧ್ವನಿ. ನಟ್ಟುವಿಗ-ನೃತ್ಯಮಾಡುವವನು. ಗಡಾವಣೆ-ಗಟ್ಟಿಯಾದ ಶಬ್ದ, ಕೋಲಾಹಲ. ವೈತಾಳಿಕ-ಹೊಗಳುಭಟ್ಟ, ಮಂಗಳ ಪಾಠಕ. ಚಾರು-ಮನೋಹರವಾದ].

೧೫೯. ¹ಪಾಟಿ (ಅ ಆ ಕುಮಾ), ಸ್ವೀಪಾ (k) (ಪೇಠೆ=ಪೇಟೆ).
[ಸಾಳಗ-ಒಂದು ರಾಗದ ಹೆಸರು. ಅಲಿ-ಕಣ್ಣು].

ವರನ ವರಿಸಲಿ ಲಗ್ನವಿದೆ ಹ-
ತ್ತಿರೆಯೆನುತ ಪಾಂಚಾಲಭೂಪತಿ
ಕರೆದು ಧೃಷ್ಟದ್ಯುಮ್ನನನು ಬೆಸಸಿದನು ಬೇಗದಲಿ ॥ ೧೬೦ ॥

ಅರಸನಾಜ್ಞೆಯು ಮೇಲೆ ಶತಸಾ-
ವಿರ ನಿತಂಬಿನಿಯರು ಕುಮಾರಿಯು
ಹೊರೆಗೆ ಬಂದರು ತಿಗುರಿದರು ಕುಂಕುಮದಲವಯುವವ ।
[1]ಭರದಿ[1] ಮಜ್ಜನಮಾಡಿ ನೂತನ-
ವರದುಕೂಲವನುಟ್ಟು ಸಖಿಯರ
[2]ತರದ[2]ನೆಲನುಗ್ಗಡಣೆಯುಲಿ ಬಂದಳು ನಿಜಾಲಯಕೆ ॥ ೧೬೧ ॥

ಹೊರೆಯ ಸಖಿಯರ ನೋಟ ಮೈಯಲಿ
ಹರಿದು ಬಳಲದು ಚಿತ್ರವೀಕೆಯ
ಧರಿಸಿ ಕುಸಿಯದು ಕಿವಿಗಳಿಗೆ ಮೆಲ್ನುಡಿಯು ಸವಿಸವಿದು ।
ಅರುಚಿಯಾಗದು ನಾಸಿಕವು ಮೈ-
ಪರಿಮಳದ [1]ಪೂರ[1]ದಲಿ ಗಂಧಾಂ-
ತರ[1]ವನಱಿ[3][1]ಯದು ರೂಪ[2]ನೇ[2]ನೆಂಬೆನು ನಿತಂಬಿನಿಯ ॥ ೧೬೨ ॥

ಮೊಲೆಗಳಲಿ ಸಿಲುಕಿದೊಡೆ ನೋಟಕೆ
ಬಳಿಕ ಪುನರಾವೃತ್ತಿಯೇ ಕಂ-
ಗಳಿಗೆ ಕಾಮಿಸಿದ[1][ಡೆ ನಿಮೇಷಕೆ][1] ಸಮಯವೆಲ್ಲಿಹುದು ।
ಲಲಿತ[2]ತನು[2]ಕಾಂತಿಗಳೊಳದ್ದರೆ
ಮುಳುಗಿ ತೆಗೆವವರಾರು ಜಘನ-
ಸ್ಥಳಕೆ ಮುರಿದರೆ ಮರಳುದಲೆ ಕಂಗಳಿಗೆ ಹುಸಿಯೆಂದ ॥ ೧೬೩ ॥

---

೧೬೦. [ತಳುವದೆ-ತಡಮಾಡದೆ, ವಿಳಂಬಮಾಡದೆ. ದಂಡಿಗೆ-ಪಲ್ಲಕ್ಕಿ].

೧೬೧. [1]ಅರಸಿ (ಅ ಆ ಕುಮಾ), ಸ್ವೀಪಾ (ಕ). [2]ಕ್ಕರದ (ಅ).
[ನಿತಂಬಿನಿ-ಸ್ತ್ರೀ. ಮಜ್ಜನ-ಸ್ನಾನ. ತರ-ಸಾಲು, ಸಮೂಹ. ತಿಗುರು-ಸುಗಂಧ ದ್ರವ್ಯವನ್ನು ಲೇಪಿಸು].

೧೬೨. [1]ಕೆನೆರೆ (ಅ ಕುಮಾ), ಸ್ವೀಪಾ (ಕ ಸ ಓ k). [2]ವೇ (ಅ ಕುಮಾ).
[ಧರಿಸು-ಹೊತ್ತುಕೊ. ಪೂರ-ಪ್ರವಾಹ].

೧೬೩. [1]ರೆಯು ನಿಮಿಷಕೆ (ಅ ಆ ಕುಮಾ). [2]ಮೈ (ಅ ಕುಮಾ), ಸ್ವೀಪಾ (k).
[ನಿಮೇಷ-ರೆಪ್ಪೆ ಹೊಡೆಯುವಷ್ಟು ಅತ್ಯಲ್ಪಕಾಲ. ಮುರಿ-ತಿರುಗು. ಮರಳುದಲೆ-ಹಿಂದಿರುಗುವುದು].

ಹೊಲಬುಗೆಡವೇ ಹೊಳೆವ ವಕ್ಷ-
ಸ್ಥಳದೊಳಗೆ ಜನದೃಷ್ಟಿ ನಳಿತೋ-
ಳ್ಗಳಲಿ ಸೆಳ್ಳುಗುರೋಳಿಯುಲಿ ಕೆಂದಳದ ಶೋಭೆಯಲಿ ।
ಸುಳಿದೊಡಲ್ಲಿಯೆ [1]ನಿಲವು[1] ದಶನಾ-
ವಳಿಯ ಬಿಂಬಾಧರದ ಕದಪಿನ
ಚೆಲುವಿಕೆಗೆ ನರರಾಲಿ ನೆಱೆಯವು [2]ಭೂಪ[2] ಕೇಳೆಂದ ॥ ೧೬೪ ॥

ಪರಿಮಳದ ಪರಮಾಣುಗಳ ಸಂ-
ವರಿಸಿ ಮುಕ್ತಾಫಲದ ಕೆಂದಾ-
ವರೆಯ ಮಱಿದುಂಬಿಗಳ ವರ್ಣಾಂತರವನಳವಡಿಸಿ ।
ಸರಸವೀಣಾಧ್ವನಿಯ ಹಂಸಿಯ
ಗರುವಗತಿಗಳ[1]ನಾಯ್ದು[1] ಮನ್ಮಥ-
ವರವಿರಿಂಚಿಯೆ ಸೃಜಿಸಿದನು ಪಾಂಚಾಲನಂದನೆಯ ॥ ೧೬೫ ॥

ನಾರಿಯನು ಸಂಸಾರಸುಖಸಾ-
ಕಾರಿಯನು ಜನನಯನಕಾರಾ-
ಗಾರಿಯನು ಮುಸಿಥೈರ್ಯಸರ್ವಸ್ವಾಪಹಾರಿಯನು ।
ಧೀರರಿಗೆ ಮಾಱಂಕವನು [1]ಮುನಿ[1]
ಪಾರಿಕಾಂಕ್ಷಿಯ ಚಿತ್ತಚೌರ್ಯವಿ-
ಹಾರಿಯನು ದ್ರೌಪದಿಯನಭಿವರ್ಣಿಸು[2]ವಡರಿದೆಂದ[2] ॥ ೧೬೬ ॥

ನಳಿನಮುಖಿಯರ ಸಕಲಸೃಷ್ಟಿಗೆ
ಕಳಸವಿದು ಸೌಂದರ್ಯವಸನದ
ವಿಲಸವಿದು ರತಿರಮಣವೈಭವರತ್ನಕೋಶವಿದು ।

---

೧೬೪. [1]ನಿಲುವು (ಅ ಆ ಕುಮಾ), ಸ್ವೀಪಾ (ಸ k). [2]ನೃಪತಿ (ಅ ಆ ಕುಮಾ), ಸ್ವೀಪಾ (ಸ ಓ).
[ಹೊಲಬು-ಹಾದಿ. ಓಳಿ-ಸಾಲು, ಪಂಕ್ತಿ. ದಶನ-ಹಲ್ಲು. ಬಿಂಬ-ತೊಂಡೆಹಣ್ಣು. ಅಧರ-ತುಟಿ. ಕದಪು-ಕೆನ್ನೆ].

೧೬೫. [1]ನುಯ್ದು (ಅ), ಸ್ವೀಪಾ (ಕ ಸ ಓ k).
[ಸಂವರಿಸು-ಸಿದ್ಧಪಡಿಸು, ಒಟ್ಟುಗೂಡಿಸು. ಮುಕ್ತಾಫಲ-ಮುತ್ತು. ವಿರಿಂಚಿ-ಬ್ರಹ್ಮ].

೧೬೬. [1]ವರ (ಅ ಆ ಕುಮಾ), ಸ್ವೀಪಾ (ಕ). [2]ವೊಡಾರೆಂದ (ಅ ಕುಮಾ), ಸ್ವೀಪಾ (ಓ k).
[ಕಾರಾಗಾರಿ-ಸೆರೆಮನೆಯಂತಿರುವವಳು. ಪಾರಿಕಾಂಕ್ಷಿ-ಸಂನ್ಯಾಸಿ, ಯತಿ].

ಲಲನೆಯರ ಸೀಮಂತಮಣಿ ಜಗ-
ದೊಳಗೆ ಚೆಲುವಿನ ಕಣಿ ತಪೋಧನ-
[1]ಕಲಭಗಿಗೆ[1] ಸೃಣಿ[2]ಯೆನೆ ರೂಪು ಮೆಱೆ[3]ದುದು ದ್ರುಪದ-
ನಂದನೆಯ[2] ॥ ೧೬೭ ॥

ಉಬ್ಬು ಮುರಿದುದು ರಾಯರೊಬ್ಬರ-
ನೊಬ್ಬರೀಕ್ಷಿಸಿ ಚೆಲುವಿನಲಿ ಸಿರಿ-
ಗೊಬ್ಬಿನಲಿ ಸಾಹಸಿಕೆಯಲಿ ಸೇನಾಸಮುದ್ರದಲಿ ।
ಒಬ್ಬರೊಬ್ಬರಸೂಯೆಯೊಬ್ಬರ-
ನೊಬ್ಬರಳುಕಿಸುವದಟುಗಂಗಳ
ಹಬ್ಬದಲಿ ಮನ[1]ಸಂಚ[1]ತಪ್ಪಿತಸಾಧ್ಯಚಿಂತೆಯಲಿ ॥ ೧೬೮ ॥

ಹೊಳೆಹೊಳೆದುದಾಭರಣರತ್ನಾ-
ವಳಿಯ ರುಚಿ ತನ್ಮಣಿರುಚಿಯ ಮು-
ಕ್ಕುಳಿಸಿತಂಗಚ್ಛವಿ ತದಂಗಪ್ರಭೆಯ[1]ಸಡ[1]ಹಾಯ್ದು ।
ಥಳಥಳಿಸಿದುದು [2]ನೃಪರ[2] ಮುಖಮಂ-
ಡಲದ ಕಾಂತಿಯನೊದೆದು ಕಂಗಳ
ಬೆಳಗು ವಿಸಟಂಬರಿದುದೇನೆಂಬೆನು ನಿತಂಬಿನಿಯ ॥ ೧೬೯ ॥

ಹೊಳೆವ ಕಂಗಳ ಬೆಳಗಿನಲಿ ಕ-
ತ್ತಲಿಸಿದವು ಕಾಮುಕರ ಮುಖ ತನು-
ವಳಯಕಾಂತಿಯ ತಂಪಿನಲಿ ಬಾಡಿದವು ಬುದ್ಧಿಗಳು ।
ಲಲಿತವಿಭ್ರಮದಿಂದಹಂಕೃತಿ-
ಶಿಲೆಗಳೊಡೆದುವು ಮೋಹನದ ಹೊ-
[1]ಯ್ಲೊ[1]ಳಗೆ ಹೊಳೆದಡಗಿದುವು ಚಿತ್ತ ಮಹಾಮಹೀಶ್ವರರ ॥ ೧೭೦ ॥

---

೧೬೭. [1]ಕುಲಕರಿಗೆ (ಅ ಆ), ಸ್ವೀಪಾ (ಓ k). [2]ಯೆನಲು ಮೆರೆದುದು ರೂಪವಂಗನೆಯ (ಆ ಕುಮಾ), ಸ್ವೀಪಾ (ಸ ಕ k).
[ವಸನ-ಬಟ್ಟೆ, ವಸ್ತ್ರ. ಸೀಮಂತಮಣಿ-ಬಯ್ತಲೆಯ ರತ್ನ. ಕಲಭ-ಆನೆಯ ಮರಿ. ಸೃಣಿ-ಅಂಕುಶ].

೧೬೮. [1]ಸಂಚು (ಆ ಕುಮಾ).
[ಸಂಚ-ಜಾಡು].

೧೬೯. [1]ನೊಡೆ (ಕ ಸ), ವದನ (ಅ ಆ ಕುಮಾ) ; ಸ್ವೀಪಾ (ಸ).
[ಅಂಗಚ್ಛವಿ-ದೇಹಕಾಂತಿ. ಅಡಹಾಯ್-ಅಡ್ಡವಾಗಿ ನುಗ್ಗು. ವಿಸಟಂಬರಿ-ಎಲ್ಲೆಲ್ಲೂ ವ್ಯಾಪಿಸು].

ಚೆಲುವಿಕೆಯ ಚೈತನ್ಯವೋ ಪರಿ-
ಮಳದ ಪುತ್ಥಳಿಯೋ ಲತಾಂಗಿಯ
ಸುಳಿವೊ ಲಾವಣ್ಯೈಕರಸಸಾಕಾರವಿಭ್ರಮವೋ ॥
ಲಲಿತಶೃಂಗಾರಾಬ್ಧಿಮಥನೋ-
ಚ್ಚಲಿತಸುಧೆಯೋ ಸಾಧಕರಿಗಿದು
ಫಲಿಸಿದೊಡೆ ಕೃತ[1]ಪುಣ್ಯಫಲವೆಂದುದು[1] ಸುರಸ್ತೋಮ ॥ ೧೭೧ ॥

ತಂದರಾ ಪಾಂಚಾಲೆಯನು ಹೊ-
ನ್ನಂದಣದಲಾಸ್ಥಾನಸೀಮೆಗೆ
ಮುಂದೆ ಸಿಂಹಾಸನದ ಸಾಲ ಮಹಾಮಹೀಶ್ವರರ ।
ಸಂದಣಿಯುಲವರವರನಿವರಿವ-
ರೆಂದು ವಿವರಿಸಬೇಕೆನುತ ನೃಪ-
ನಂದನನು ಹೊದ್ದಿದನು ಕಮಲಾನನೆಯ ದಂಡಿಗೆಯ ॥ ೧೭೨ ॥

ನೀಲ ಚಿತ್ರಾಯುಧನು ದಕ್ಷಿಣ
ಚೋಳ ಕೇರಳ ಪಾಂಡ್ಯ ಧರಣೀ-
ಪಾಲಕರೊಳೀ ಚಂದ್ರಸೇನ ಸಮುದ್ರಸೇನಕರು ।
ಲೋಲನಯನೆ ಕಳಿಂಗಧರಣೀ-
ಪಾಲನೀತನು ಚೇಕಿತಾನನೃ-
ಪಾಲನೀತನು ಭಾನುದತ್ತಮಹೀಶ ನೋಡೆಂದ ॥ ೧೭೩ ॥

ಕೆಲರು ಮಧುರಾಪಾಂಗದಲಿ ಕಂ-
ಗಳ ಮರೀಚಿಯ ಬೆಳಗಿನಲಿ ಕೆಲ-
ರೆಳನಗೆಯ ಮಿಂಚಿನಲಿ ಸಖಿಯರ ಮೇಳವಾತಿನಲಿ ।
ಲಲನೆ ನೋಡಿದಳೆಂದು ಸೊಗಸಿನ-
ಲೊಲಿವ ಸಖಿಯರಿಗೆಂದಳೆಂದೊಳ-
ಗೊಳಗೆ ಬೆಱಿತರು ಬಯಲಮಧುಪಿನ ಬಾಯಸವಿಗಳಲಿ ॥ ೧೭೪ ॥

---

೧೭೧. [1]ಕೃತ್ಯರಿವರೆಂ (ಅ ಕುಮಾ).
[ಮಥನ–ಕಡೆತ. ಸುಧೆ–ಅಮೃತ].

೧೭೨. [ಅಂದಣ, ದಂಡಿಗೆ–ಪಲ್ಲಕ್ಕಿ].

೧೭೪. [ಅಪಾಂಗ–ಕಡೆಗಣ್ಣನೋಟ. ಮರೀಚಿ–ಕಿರಣ, ರಶ್ಮಿ. ಬಯಲಮಧು–ಇಲ್ಲದ, ದೊರೆಯದ, ಜೇನು].

ಮಡಿಸಿದೆಲೆ ಬೆರಳೊಳಗೆ ಬಾಯೊಳ-
ಗಡಸಿದೆಲೆ ಬಾಯೊಳಗೆ ಸಚಿವರು
ನುಡಿಯು ಕೇಳರು ಸುಳಿಯು ಕಾಣರು ಲೋಚನಾಗ್ರದಲಿ ।
ಕಡುಮುಳಿದ ಕಂದರ್ಪಶರವವ-
ಗಡಿಸಿ ಕೈಗಳ[1]ನೊಡ್ಡಿ[1] ನೃಪರೆವೆ-
ಮಿಡುಕದಿರ್ದರು [2]ಬೆರಳಮೂಗಿನ ಹೊತ್ತ ದುಗುಡದಲಿ[2] ॥ ೧೭೫ ॥

ಜಗವನಿಂದ್ರಿಯಕರಣವಿಷಯಾ-
ದಿಗಳನೆಲ್ಲವನೆತ್ತಿ ಮುಖದಲಿ
ತೆಗೆದು ಶ್ರುತಿಶಿರದಮಲತತ್ವವನಱಸುವಂದದಲಿ ।
ಬಗೆಯು ಬಯಕೆಯು ಸೊಗಸು[1]ಗಳ[1] ದಾ-
ಯಿಗವನಱಸುತ ಕುಡಿತೆಗಣ್ಣಲಿ
ಮೊಗೆದು ಸೂಸಿದಳಂಬುಜಾನನೆಯಖಿಲನೃಪಜನವ ॥ ೧೭೬ ॥

ಕೇಳು ಜನಮೇಜಯನೃಪತಿ ಪಾಂ-
ಚಾಲೆ ಪೊಕ್ಕಳು ಭದ್ರಮಂಟಪ-
ಶಾಲೆಯನು ಮರಳಿದುದು ಮನ್ಮಥನೊಡ್ಡು ಸತಿಯೊಡನೆ ।
ಬಾಲೆಯನು ನಿಜರೂಪದರ್ಪದೊ-
ಳಾಳಲಱಿಯಿರೆ ಬಾಹುಬಲದಲಿ
ಸೋಲಿಸುವೊಡನುವಾಗಿಯೆಂದರು ಹೊಯ್ದು ಡಂಗುರವ ॥ ೧೭೭ ॥

ಇದೆ ಮಹಾಧನು ಬಾಣಪಂಚಕ-
ವಿದೆ ನಭೋಗ್ರದ ಯಂತ್ರ ಹೊಳೆವು-
ತ್ತಿದೆ ವಿಭಾಡಿಸಿ ಮೆಱೆವನಾವನು ಬಾಹುವಿಕ್ರಮವ ।

---

೧೭೫. [1]ನೋಡಿ (ಅ ಕುಮಾ). [2]ಹೊತ್ತ ದುಗುಡದ ಹೊಯ್ಲ ಬೆರಗಿನಲಿ (ಅ ಕ k). ಹೊತ್ತ ಬೆಱಗಿನ ಹೊಯಿಲ ದುಗುಡದಲಿ (ಸ).
[ಅಡಸು-ತುಂಬು, ತುರುಕು. ಕಂದರ್ಪ-ಮನ್ಮಥ. ಅವಗಡಿಸು-ತಾಗು. ಮಿಡುಕು-ಚಲಿಸು].

೧೭೬. [1] ಗರ (ಅ), ಸ್ವೀಪಾ (ಅ ಕುಮಾ).
[ಶ್ರುತಿಶಿರ-ಉಪನಿಷತ್ತು. ಕುಡಿತೆಗಣ್ಣು-ಬೊಗಸೆಗಣ್ಣು. ದಾಯಿಗ-ಪಾಲುದಾರ].

ಇದುವೆ ಕಬ್ಬಿನ ಬಿಲು ಶರಾವಳಿ
ಇದು ಕುಸುಮಮಯ ಯಂತ್ರವಬಲೆಯ
ಹೃದಯವಾತನೆ ರಮಣನಾತನೆ ಕುಸುಮಶರನೆಂದ ॥ ೧೭೮ ॥

ನೆರವಿಯಲಿ ನಾನಾ ದಿಗಂತದ
ಧರಣಿಪತಿಗಳ ಹಮ್ಮಿಕೆಯಲು-
ಬ್ಬರಿಸಿ ಹೊಕ್ಕರು ಬೇಱೆಬೇಱೊಬ್ಬೊಬ್ಬರುರವಣಿಸಿ ।
ಹರಗಿರಿಗೆ ಹುಲುರಕ್ಕಸರು ಮ-
ತ್ಸರಿಸುವಂತಾಯ್ತೆನನೆಂಬಿನು
ಧರೆಯ [1]ಮಿಡುಕದ[1]ಧನು ವಿಭಾಡಿಸಿ ಕೆಡಹಿತವನಿಪರ ॥ ೧೭೯ ॥

ಹಾರ ಹಱಿದುದು ಕರ್ಣಪೂರದ
ಚಾರುಮಣಿಗಳು ಸಡಿಲಿದವು ಪದ-
ವೀರ[1]ನೂಪುರ[1]ನೆಗ್ಗಿದವು ಕುಗ್ಗಿದವು ನೆನಹುಗಳು ।
ನಾರಿಯರ ಕೈಹೊಯ್ಲ ನಗೆಯ ನಿ-
ಹಾರ ಜಡಿದುದು ಮುಸುಕುದಲೆಯ ಮ-
ಹೀರಮಣರೋಸರಿಸಿ ಸಿಂಹಾಸನವ ಸಾರಿದರು ॥ ೧೮೦ ॥

ಐಸಲೇ ಸೌಭಾಗ್ಯವೆಮಗೆ ಶ-
ರಾಸನಾ[1]ಕ[ರ್ಷಣ][1][2]ದಿ ಮಿಗೆ[2] ಡೊ-
ಳ್ಳಾಸದಲಿ ಡಾವರಿಸಿ ಗಲಿದಳು ದ್ರುಪದಸುತೆ ನೃಪರ ।
ಲೇಸು ತಪ್ಪೇನಿದಕೆನುತ ಭ-
ದ್ರಾಸನವನಿಳಿದುಲಿವ ತೊಡರಿನ
ಗೋಸಣೆಯ [3]ಘುಲಿರು[3]ಗಳ ಮಗಧನೃಪಾಲನೈತಂದ ॥ ೧೮೧ ॥

---

೧೭೮. [ವಿಭಾಡಿಸು-ಭೇದಿಸು, ನಾಶಮಾಡು].

೧೭೯. [1]ಬಿಡದೀ (ಅ ಕುಮಾ), ಸ್ವೀಪಾ (ಸ).

೧೮೦. [1]ನೇವುರ (ಅ ಕುಮಾ).
[ಕರ್ಣಪೂರ-ಕಿವಿಯ ಒಡವೆ. ನೂಪುರ-ಕಾಲ್ಕಡಗ. ನಿಹಾರ-ಬಾಣ (?). ಓಸರಿಸು-ಹಿಂದೆಗೆ].

೧೮೧. [1]ಕರುಷಣ (ಸರ್ವತ್ರ) [2]ದೊಳಶಿ (ಅ ಕುಮಾ). [3]ಘುಳಿಲು (ಅ ಆ ಕುಮಾ), ಸ್ವೀಪಾ (ಕ).
[ಶರಾಸನ-ಬಿಲ್ಲು. ಕರ್ಷಣ-ಎಳೆಯುವುದು. ಡೊಳ್ಳಾಸ-ಮೋಸ. ತೊಡರು-ಅಡ್ಡಿ. ಗೋಸಣೆ-ಘೋಷಣೆ, ಕೂಗುವುದು. ಘುಲಿರು-ಶಬ್ದ].

ಈತ ಕುಸಿದತ್ತಿದೊಡೆ ಧನುಮಾ-
ಜಾತುದಿವನೌಕಿದೊಡೆ ಕಾರ್ಮುಕ-
ವೀತಸಾರೆಂದಱಿಯದಿವನಾಡೊತ್ತಿ ವ್ಯಬಲಿದು ।
ಘಾತಿಯಲಿ ಫಲ್ಲಿಸದೊಡಾ ಧನು
ಸೋತುದೆವೆಯುಂತರಕೆ [1]ತೆರಳದು[1]
ಧಾತುಗುಂದಿದನಳ್ಳಿಱಿದವಳ್ಳಿಗಳು ಮಾಗಧನ ॥ ೧೮೨ ॥

ಕೇಳಿದನು ಕಾಂತಾಕದಂಬದ
[1]ಗೋಳುಗಳ ಘೊಳ್ಳೆಂಬ[1] ನಗೆಗಳ
ಕಾಳುಮಾಡಿದನೇಕೆ ಧನು ತಾನೇಕೆ ಸುಡಲೆನುತ ।
ಬೀಳುವೆಯುಲುಡಿದಂಕದ ಪೊಲು-
ಬ್ಬಾಳುತನ [3]ಪೈಸರಿಸೆ[3] ಮುಸುಕಿನ
ಮೌಳಿ ಹಿಮ್ಮೆಟ್ಟಿದನು [4]ಖಡೆಯುವ ತಿರುಹಿ[4] ತಿಱುದೊಡೆಗೆ ॥ ೧೮೩ ॥

ಕೆರಳಿದನು ದಮಘೋಷನಂದನ-
ವರರೆ ದಿಟ್ಟನ ಧನು ವಿಭಾಡಿಸಿ
ತೆರಳಿಚಿತ್ರಲಾ ವಿಗಡಚಕ್ರಾಯುಧನ ಮಾಗಧನ ।
ಹರಿಬವೆನ್ನದು ಹೊಳ್ಳುಗಳೆವೆನು
ದುರುಳ ಧನುವನು ನಗುವ[1]ಕೈನೆ[1]ಯು-
[2][ರುರುಬ][2] ಕೊಯ್ವೆನೆನುತ ಕಲಿ ಶಿಶುಪಾಲನೆತ್ತಂದ ॥ ೧೮೪ ॥

---

೧೮೨. [1]ತೊಲಗದು (ಅ ಕುಮಾ).
[ಕಾರ್ಮುಕ-ಬಿಲ್ಲು].

೧೮೩. [1]ಘೋಳುಗಳ ಘೋಳೆಂಬ (ಅ ಕುಮಾ). [2]ದುಯೆ (ಆ ಕುಮಾ). [3]ಪ್ರಬ್ಬರಿಸೆ (ಬಿ), ಟಿಬ್ಬರಿಸಿ (ಅ k). [4]ಕಡೆಯುವ ತಿರುಗಿ (ಅ ಆ ಕುಮಾ), ಸ್ವೀಪಾ (k).
[ಪೈಸರಿಸು-ಹಿಂಜರಿ, ಹಿಮ್ಮೆಟ್ಟು. ಖಡೆಯ-ಖಂಡೆಯ, ಖಡ್ಗ. ಕಾಳುಮಾಡು-ಕೆಡಿಸು. ಬೀಳುವೆ-ಗಾಬರಿ, ಭ್ರಮೆ. ಉಡಿದ-ಭಂಗವಾದ, ಮುರಿದ. ಅಂಕ-ಪ್ರತಿಷ್ಠೆ. ಕದಂಬ-ಸಮೂಹ].

೧೮೪. [1]ಕನ್ನೆ (ಅ ಕುಮಾ). [2]ತುರುಬ (ಅ ಕುಮಾ), ದುರವ (ಅ ಸ k).
[ಕೈನೆ-ದಾಸಿ, ಪರಿಚಾರಿಕೆ. ದಮಘೋಷ-ಶಿಶುಪಾಲನ ತಂದೆ. ದುರುಬ-ಕರ್ತವ್ಯ. ಉರುಬು (ಉರ್ವು, ಉಬ್ಬು)-ಗರ್ವ, ಕೊಬ್ಬು].

ಇವನಲೇ ರಾವಣನು ಮುನ್ನಿನ
ಭವದೊಳಗೆ ತಪ್ಪಿಲ್ಲೆನುತ ಜನ-
ನಿವಹ ನಡುಗಿತು ಕೋಮಲಾಂಗಿಯ ಪುಣ್ಯವೆಂ¹ತೆ¹ನುತ ।
ಅವನಿಪತಿ ಕೇಳಣೆದನಿವ ಚಾ-
ಪವನು ಬೋಳೈಸಿದನು ಬಲುಹೋ
ಶಿವಯೆನುತ ನೀವರಿಸಿದನು ಡಾವರಿಸಿದನು ಧನುವ ॥ ೧೮೫ ॥

ಏನನೆಂಬೆನು ಧನು ಸಗಾಢದ
ಮಾನಭಂಗದ ಮೊದಲವನೆ¹ಯೀ¹
ಮಾನಿನಿಯುರುಪಹಾಸ್ಯವೀ ಜನರೀ ನೃಪಾಲಕರ ।
ಹೀನನುಡಿಗಳ ಕಂಡು ದೈತ್ಯಸ-
ಮಾನ ಮನದಲಿ ನೊಂದು ತಿರುಗಿದ-
ನೇನನೆಂಬೆನು ಸದೆದುದಾತನ ಗರ್ವವಿಭ್ರಮವ ॥ ೧೮೬ ॥

ಹಿಂಗಿದನು ಮಾದ್ರೇಶನೀ ಧನು
ಭಂಗಿಸಿತು ಮಾನ್ಯರನು ಜಡವಿದು
ಜಂಗಮತ್ವದಲೇನಹುದೊ ಜೋಂಪಿಸಿತಲ್ಲೆ ಜಗವ ।
ಅಂಗನಾಪಾಣಿಗ್ರಹಣ ರಾ-
ಯಂಗೆ ತಾನೀ ದುಷ್ಟಧನುವನು
ಭಂಗ¹ಪಡಿಸಿಯೆಬಿಡುವೆನೆನುತ್ತೈತಂದನಾ ಕರ್ಣ¹ ॥ ೧೮೭ ॥

ಈತನರ್ಜುನನಲ್ಲಲೇ ರೂ-
ಪಾತಿಶಯವುಳ್ಳಾತ ಯಂತ್ರವ-
ನೀತ ಗೆಲಿದೊಡೆ ಪುಣ್ಯವೈಸಲೆ ತಂಗಿಗೆನುಸಾರಿ ।

---

೧೮೫. ¹ದೆ (ಅ).
[ಅಣೆ-ಸಮೀಪಿಸು. ಬೋಳೈಸು-ಚಪ್ಪರಿಸು. ನೀವರಿಸು-ಸತ್ಕರಿಸು. ಡಾವರಿಸು-ಚಿಮ್ಮಿಸು].

೧೮೬. ¹ಯೆನೆ (ಅ ಕುಮಾ).

೧೮೭. ¹ಬಡಿಸದೆ ಬಿಡೆನೆನುತ ಕಲಿಕರ್ಣನೈತಂದ (ಅ ಕುಮಾ), ಸ್ವೀಪಾ (ಕ ಓ k).
[ಭಂಗಿಸು-ಅಪಮಾನಗೊಳಿಸು, ಕಡೆಗಣಿಸು. ಜಡ-ಚಲಿಸದೆ ಇದ್ದ ಕಡೆ ಇರುವದು, ಅಚೇತನ. ಜಂಗಮತ್ವ-ಚಲಿಸುವ, ತಿರುಗಾಡುವ, ಶಕ್ತಿ].

ಈತ ನರನಹುದೆನುತ ಲಲನಾ-
ಜಾತವಾತನನೀಕ್ಷಿಸುತ ಸಂ-
ಪ್ರೀತಿಯಲಿ ಕೊಂಡಾಡುತಿರ್ದುದು ರಾಯ ಕೇಳೆಂದ ॥ ೧೮೮ ॥

ತುಡುಕಿದನು ಚಾಪವನು ಮಹಿಯಿಂ
ಮಿಡುಕದಿರೆ ಮಂಡಳಿಸಿ ಜಾಡಿಸಿ
ಜಡಿದು ಜಱ[3]ದೌಂಕಿದನು ದಂಡೆಯನಿಕ್ಕಿ [1]ಕೋಪದಲಿ[1] ॥
ಹೊಡಕರಿಸಿ ಸತ್ವಾತಿಶಯವಿ-
ಮ್ಮಡಿಸೆ ಸರ್ಷಪಮಾತ್ರ ತಿರುವನು
ತೊಡಿಸ[2]ಲಾಱದೆ[2] ಹಿಂಗಿ ಮೌನದೊಳಿರ್ದನಾ ಕರ್ಣ ॥ ೧೮೯ ॥

ಕ್ಷಿತಿಪ ಕೇಳೈ ವಿಗಡಚಾಪ-
ವ್ಯತಿಕರಕೆ ದುರ್ಯೋಧನಾದಿ-
ಕ್ಷಿತಿಪತಿಗಳಂಜಿದುದ ಕಂಡನು ನಗುತ ಬಲರಾಮ ।
ಕೃತಕಧನುವನು ಮುಱಿದು ದ್ರುಪದನ
ಸುತೆಯ ಮುಂದಲೆವಿಡಿದು ತಹೆನು-
ದ್ಧತನಲಾ ಪಾಂಚಾಲನೆನುತಿಳಿದನು [1]ನಿಜಾ[1]ಸನವ ॥ ೧೯೦ ॥

ಹಲಧರನ ಮಸಕವನು ಕಂಡನು
ನಳಿನನಾಭವಿದೇ[1]ನಿ[1] ಪೀಠವ-
ನಿಳಿದಿರೆಲ್ಲಿಗೆ ಗಮನವಾವುದು ಕಾರ್ಯಗತಿ ನಿಮಗೆ ।
ತಿಳುಹಿಯೆನೆ ಬೇಱೇನು ಯಂತ್ರವ
ಕಳಚಿ ಬಿಸುಟು ಲತಾಂಗಿಯನು ಹಿಡಿ-
ದೆಳೆದು ತಹೆನೆನಲೈಸಲೇ ಕೇಳೆಂದನಸುರಾರಿ ॥ ೧೯೧ ॥

---

೧೮೯. [1]ಕೊಪ್ಪಿನಲಿ (ಸ, ಓ), ಸ್ವೀಪಾ (ಸ ಓ). [2]ಲರಿಯದೆ (ಅ ಕುಮಾ).
[ದಂಡೆಯನಿಕ್ಕು–ಮೊಣಕಾಲೂರಿ ಕುಳಿತುಕೊ. ಹೊಡಕರಿಸು–ಆಟೋಪವನ್ನು ತೋರಿಸು. ಸರ್ಷಪ ಮಾತ್ರ–ಲವಲೇಶವೂ (ಸರ್ಷಪ–ಸಾಸವೆ). ತಿರುವು–ಬಿಲ್ಲಿನ ಹೆದೆ. ಹಿಂಗು–ಹಿಮ್ಮೆಟ್ಟು, ಹಿಂದೆಗೆ].

೧೯೦. [1]ವರಾ (ಅ ಅ ಕುಮಾ), ಸ್ವೀಪಾ (k).
[ವ್ಯತಿಕರ–ಪ್ರಸಂಗ, ಸಂಗತಿ, ಗೊಡವೆ].

೧೯೧. [1]ನು (ಅ ಅ), ಸ್ವೀಪಾ (k).
[ಹಲಧರ–ಬಲರಾಮ (ನೇಗಿಲನ್ನು ಧರಿಸಿದವನು). ಮಸಕ–ಆವೇಗ, ರೋಷ. ಏನಿ (=ಏನಿಂ, ಏನಿರ್)–ಏನು].

ವಿನಹರು ನಿಮಗಿಂದು ಕುಂತೀ-
ಮಾನಿನಿಯರತ್ತೆಯರಲೇ ತ-
ತ್ಸೂನುಗಳು ವೈದುನರು ತತ್ಪತ್ನಿಯರು ತಂಗಿಯರು ।
ಸಾನುರಾಗವೆ [1]ಮತ್ತೆ[1] ಸಂಶಯ-
ವೇನಿದಕೆ ತಪ್ಪಿಲ್ಲ ಕುಂತೀ-
ಸೂನುಗಳು ದ್ರೌಪದಿಗೆ ರಮಣರು ನೋಡಿ ನೀವೆಂದ ॥ ೧೯೨ ॥

ಕ್ಷಿತಿಯೊಳವರಿಲ್ಲೆಂದು ದ್ರುಪದನ
ಸುತೆಗೆ ಪತಿ ಪರರೆಂದು ಯಂತ್ರ-
ಚ್ಯುತಿಗೆ ನೀವುಂಟೆಂದು ತೋಚಿತೆ ನಿಮ್ಮ ಚಿತ್ತದಲಿ ।
ಕ್ಷಿತಿಗೆ ಪಾಂಡವರಲ್ಲದಿಲ್ಲೀ
ಸತಿಗೆ ಪತಿ ಪರರಿಲ್ಲ ಕುಂತೀ-
ಸುತರನೀಗಳೆ ತೋರುವೆನು ವಸುದೇವಸಾಜೆಂದ ॥ ೧೯೩ ॥

ಈಕೆಯನು ಮೆಚ್ಚಿಸದು ರಾಜಾ-
ನೀಕ ಸೌಂದರ್ಯದಲಿ ಚಾಪ-
ವ್ಯಾಕರಣಪಾಂಡಿತ್ಯವೇ ಜೊಡೆ ಕಾಣೆ[1]ನಾನೀಗ[1] ।
ಈಕೆಗಿನ್ನಾರೊಡೆಯರೋ ಕುಂ-
ತೀ ಕುಮಾರಕರಿಲ್ಲಲೇ ನುಡ-
ಲೇಕೆ ನೆರಹಿದೆನಿವರನೆನುತಾ ದ್ರುಪದ ಚಿಂತಿಸಿದ ॥ ೧೯೪ ॥

ಅವನಿಪತಿಗಳು ಹೊಳ್ಳುವಾಜಿದ-
ರಿವರೊಳಿಲ್ಲಲೆ ದಕ್ಷಿಣೆಯು ಹಾ-
ರುವಮಹಾಜನವಿದೆ ಸಮುದ್ರಕೆ ಪಡಿ ಸಮುದ್ರವೆನೆ ।
ಇವರೊಳಗೆ ಮುಂಗೈಯ ಬಲುಹು-
ಳ್ಳವನು [1]ನೆಗಹಲಿ[1] ಧನುವನೀ ಯಂ-
ತ್ರವನು ಜಯಿಸಲಿ ಎಂದು ಧೃಷ್ಟದ್ಯುಮ್ನ ಸಾರಿಸಿದ ॥ ೧೯೫ ॥

. [1]ಮನಕೆ (ಅ ಕುಮಾ).
[ಸೂನು-ಮಗ].
. [1]ನಾನಿಡನು (ಅ), ನಾವಿದನು (ಕ).
[ಚಾಪವ್ಯಾಕರಣ-ಧನುರ್ವಿದ್ಯೆ. ನೆರಹು-ಒಟ್ಟುಗೂಡಿಸು, ಕಲೆಹಾಕು].
[1]ಜಗಿಯಲಿ (ಅ k).

ಎಂದು ಸಾಱಿದ ದನಿಯನಾ ದ್ವಿಜ-
ವೃಂದವಾಲಿಸಿ ನಮಗಿದೇಕರ-
ವಿಂದವದನೆಯು ತೊಡಕು ತೆಗೆ ನಾವಾರು ಧನುವಾರು ।
ಬಂದ ದಕ್ಷಿಣೆ ಮೃಷ್ಟಭೋಜನ-
ದಿಂದ ತುಷ್ಟರು ನಾವು ನಮಗದ-
ಱಿಂದ ಬಹ ದುಷ್ಕೀರ್ತಿ ಬರಲೆಂದುದು ಬುಧವ್ರಾತ ॥ ೧೯೬ ॥

ವಚನಶೂರರು ನಾವು ಪಾರ್ಥಿವ-
ನಿಚಯವೇ ಭುಜಶೂರರನಿಬರ-
ನಚಲಧನು ಭಂಗಿಸಿತು ನಮಗೀ ವಿದ್ಯೆ ವೈದಿಕವೆ ।
ಉಚಿತವಲ್ಲಿದು ನಮ್ಮ ಸಾಹಸ-
ರಚನೆಯನು ನೋಡುವೊಡೆ ಪಂಡಿತ-
ನಿಚಯವಿದಿರಲಿ ನಿಲಲಿ ತೋಱುವೆವಲ್ಲಿ ವಿಸ್ಮಯವ ॥ ೧೯೭ ॥

ಭರತದಲಿ ವೈದ್ಯದಲಿ ಕಾವ್ಯಸು-
ವಿರಚಿತಾಲಂಕಾರದಲಿ ಗಜ-
ತುರಗಲಕ್ಷಣದಲಿ ಸಮಾಹಿತಮಂತ್ರತಂತ್ರದಲಿ ।
ಸರಸಕವಿತಾರಚನೆಯಲಿ ವಿ-
ಸ್ತರದುಪನ್ಯಾಸದಲಿ ಭೂಪತಿ
ಕರಸಿ ನೋಡಲಿ ನಮ್ಮನೆಂದರು ಭೂಸುರವ್ರಾತ ॥ ೧೯೮ ॥

ಅಲ್ಲದಿರ್ದೊಡೆ ಶೋಧಿಸಿದ ತನಿ-
ಜೆಲ್ಲವಿಕ್ಕಿದ ಹೂರಿಗೆಯ ಮೆದೆ-
ಯಲ್ಲಿ ಕಱಿಯು ಸೇವಿಗೆಯು ಪರಿಪರಿಯ ಪಾಯಸದ ।

೧೯೫. [ಪೊಱಬ್ಬು [illegible] ನಿಷ್ಠುರೋಕ್ತಿಗಳನ್ನು ಹಣಿ-ಪ್ರತಿ. ನೆಗಹು-ಮೇಲಕ್ಕೆ ಎತ್ತು]

೧೯೬ [ವ್ರಾತ-ಸಮೂಹ]

೧೯೭. [ವೈದಿಕ-ವೇದಕ್ಕೆ ಸಂಬಂಧಿಸಿದ್ದು, ಶ್ರೌತ. ನಿಚಯ-ಸಮೂಹ].

೧೯೮. [ದ್ವಿಜರು ತಮಗಿದಕೆ (ಅ ಅ ಕ ಮಾ), ಸ್ವೀಕಾ (ಪ್ರ).
[ಭರತ-ಭರತಮುನಿಯ ನಾಟ್ಯಶಾಸ್ತ್ರ].

ಪುಲ್ಲಿಗೆಯು ತತ್ಸವಿಯು ಮಂಡಿಗೆ-
ಯುಲ್ಲಿ ನವಘೃತಸೂಪದಂಶಕ-
ದಲ್ಲಿ ನೋಡಲಿ ನಮ್ಮನೆಂದುದು [1]ದ್ವಿಜರುತವಾತಮಗೆ[1] ॥ ೧೯೯ ॥

ರಸದ ಹೊಳಲೇಪದಲಿ ಹುದುಗಿದ
ಮಿಸುನಿಯುಂತಿರೆ ಜೀವಭಾವ-
ಪ್ರಸರದೊಳಗವಲಂಬಿಸಿದ ಪರಮಾತ್ಮನಂದದಲಿ ।
ಎಸೆವ ವಿಪ್ರಾಕಾರದಲಿ ರಂ-
ಜಿಸುವ ಭೂಪತಿ ತತ್ಸಭಾಸ-
ದ್ವಿಸರಮಧ್ಯದೊಳಿರ್ದು ಕೇಳಿದ[1]ನಾ[1] ಮಹಾಧ್ವನಿಯ ॥ ೨೦೦ ॥

ನೋಡಿದನು ತಮ್ಮನನು ಸನ್ನೆಯ
ಮಾಡಿದೊಡೆ ಕೈಕೊಂಡನವನಿಪ-
ಗೂಡಿ ಕುಂತಿಗೆ ಭೀಮಸೇನಂಗೆಱಗಿ ಮನದೊಳಗೆ ।
ಕೂಡಿ ಕುಳ್ಳಿರ್ದಖಿಳವಿಪ್ರರ
ನೋಡಿ ಮೆಲ್ಲನೆ ಧೋತ್ರದರ್ಭೆಯ
ಗೂಡ ಸಂವರಿಸುತ್ತ ಸಭೆಯಿಂದೆದ್ದನಾ ಪಾರ್ಥ ॥ ೨೦೧ ॥

ಏನಿ ಸಿದ್ಧಿಯುಪಾಧ್ಯರೆದ್ದಿರಿ-
ದೇನು ಧನುವಿಂಗಲ್ಲಲೇ ತಾ-
ನೇನು ಮನದಂಗವಣೆ ಬಯಸಿದಿರೇ ನಿತಂಬಿನಿಯ ।
ವೈನತೇಯನ ಬೆಗಡಿಸಿದ ವಿಷ-
ವೇನು ಸದರವೊ ಹಾವಡಿಗರಿಗಿ-
ದೇನು ನಿಮ್ಮುತ್ಸಾಹವೆಂದುದು [1]ವಿಪ್ರಜನ ನಗುತ[1] ॥ ೨೦೨ ॥

---

೯. [1]ಭೂಸುರವ್ರಾತ (ಅ), ಧೂರ್ತವಟುನಿಕರ (ಅ ಕಾಮಾ), ಸ್ವೀಶಾ (ಪ್ರ).
[ಹೂರಿಗೆ-ಪೂರಿ. ಪರಡಿ-ಗೋಧಿಯ ಸೇವಿಗೆ ಪುಲ್ಲಿಗೆ-ಒಂದು ಬಗೆಯ ಭಕ್ಷ್ಯ; ಹೋಳಿಗೆ. ಸೂಪ-ಸಾರು, ತೊವ್ವೆ ದಂಶಕ-ಕಚ್ಚಿ ತಿನ್ನುವ ಪದಾರ್ಥ, ಉಪ್ಪಿನಕಾಯಿ].

೦. [1]ನೀ (ಅ ಕಾಮಾ).
[ರಸ-ಪಾದರಸ. ಮಿಸುನಿ-ಚಿನ್ನ. ಪ್ರಸರ-ವ್ಯಾಪನೆ. ವಿಸರ-ಗುಂಪು].

೨. [1]ಧೂರ್ತವಟುನಿಕರ (ಅ ಕಾಮಾ), ಬುಧ ಸ್ತೋಮ (ಪ್ರ).
[ಅಂಗವಣೆ-ಇಂಗಿತ, ಅಭಿಪ್ರಾಯ. ವೈನತೇಯ-ಗರುಡ. ಬೆಗಡಿಸು-ಹೆದರಿಸು].

ಕೆಲರು ಹೋಗದಿರೆಂದು ಜಱೆದರು
ಕೆಲರು ತಾನ್ ಏಬಲ್ಲನೆಂದರು
ಕೆಲರು ನುಡಿದರು ವಿಪ್ರಸಭೆಗಪಹಾಸ್ಯವಹುದೆಂದು ।
ಕೆಲರು ತಪ್ಪೇನೆಂದು ಕಳೆದರು
ಕೆಲರು ಭದ್ರಾಕಾರನೀತಂ-
ಗೞುಕುವುದು ಧನು ಭಾಗ್ಯಮುಖ[1]ನೆ[1]ಂದುದು ಬುಧಸ್ತೋಮ ॥ ೨೦೩ ॥

ತೊಟ್ಟ ಹೊಸಯಜ್ಞೋಪವೀತದ
ಮುಟ್ಟಿನೊಸಲಿನ ಕುಶೆಯ ಕರಡಿಗೆ
ಕಟ್ಟೆಯಿಱಿಕಿದ ಕಕ್ಷೆ ಬೆರಳಲಿ ಮುರಿದ ದರ್ಭೆಗಳ ।
ಉಟ್ಟ[1]ಬಾಸರ[1] ಬಳಲುಗಚ್ಚೆಯ
ಅಟ್ಟಹಾಸದ ಜನದ ನಗೆಗಳ
ನಟ್ಟುವಿಗನೋಸರಿಸಿ ಸಭೆಯಲಿ ಮೆಲ್ಲನೈತಂದ ॥ ೨೦೪ ॥

ತಿರುಗಿ ಕಂಡರು ಸಕಲಪೃಥ್ವೀ-
ಶ್ವರರು ಗಹಗಹಿಸಿದರಿದೇನಱಿ
ಮರುಳೊ ಜಡನೋ ವಿಪ್ರವೇಷಚ್ಛನ್ನ ಸುರಪತಿಯೋ ।
ಮರುಳುಗಳು ತಾವಕಟ ಮದನನ
ಸರಳ ಮೞುಮೊನೆಗಾವನಂತಃ-
ಕರಣ ನೆಱೆ ಕಳವಳಿಸದೆಂದರು ನೆರೆದ ಸಭೆಯೊಳಗೆ ॥ ೨೦೫ ॥

ಧನು ತನಗೆ ನೆಗಹಲ್ಕೆ ಕೃಷ್ಣಾ-
ಜಿನವೊ ಸಾಲಗ್ರಾಮದೇವರೊ
ವಿನುತ ತುಳಸಿಯೊ ಕುಶವೊ ದರ್ಭೆಯೊ ಸಮಿಧೆಗಳ ಹೊಱೆಯೋ ।

---

೨೦೩. [1]ವೆ (ಅ).
[ಭದ್ರಾಕಾರ–ಮಂಗಳಕರವಾದ ಆಕೃತಿ, ಮಂಗಳಾಂಗ].

೨೦೪. [1]ಬಾಸರು (ಅ), ಹಾಸರು (ಕ).
[ಬಾಸರ–ವಸ್ತ್ರ, ಬಟ್ಟೆ. ನಟ್ಟುವಿಗ–ನಾಟ್ಯಾಚಾರ್ಯ].

೨೦೫. [ವಿಪ್ರವೇಷಚ್ಛನ್ನ–ಬ್ರಾಹ್ಮಣವೇಷದಿಂದ ಮರೆಸಿಕೊಂಡವನು. ಸರಳು–ಬಾಣ. ಮೞುಮೊನೆ––ನಾಟಿಕೊಂಡು ಹೊರಗೆ ಕಾಣುವ ತುದಿ].

[1]ನನೆ[1]ದ ತಿಲವೋ ಮೇಣಿದೌಪಾ-
ಸನದ ಕೊಳವಿಯೊ ಬಣಗುವಿಪ್ರನ
ನೆನಹ ನೋಡಿರೆ ಘನವಲಾ ದ್ರೌಪದಿಯ ಸೌಭಾಗ್ಯ ॥ ೨೦೬ ॥

ಇತ್ತ ನೋಡೌ ತಾಯೆ ಹಾರುವ-
ರತ್ತ ಗಡ್ಡದುಪಾಧ್ಯರನು ತಾ-
ವೆತ್ತುವರು ಗಡ ಧನುವನೆಸುವರು ಗಡ ತಿಮಿಂಗಿಲನ ।
ಹೊತ್ತುಗಳೆವರೆ ಲೇಸು ಬಳಿಕಿ-
ನ್ನುತ್ತಮರಲಾ ವಿಪ್ರರೆನೆ ತಲೆ-
ಗುತ್ತಿ ನಾಚಿದಳುಂಗುಟ[1]ದಿ ಬರೆವು[ತ][1] ಮಹೀತಳವ ॥ ೨೦೭ ॥

ಎಲವೊ ಮಟ್ಟಿಯ ಮದನ ದರ್ಭೆಯ
ತಿಲದ ಮನ್ಮಥ ವಿಮಲಧೋತ್ರದ
ತಳಿರುಗಾಸೆಯ ಕಾಮ ಕೃಷ್ಣಾಜಿನದ ಕಂದರ್ಪ ।
ನಳಿನಮುಖಿಯನು ವರಿಸು ಬಾ ನಿನ-
ಗಳವಡುವನೆಲೆಯಕ್ಕ ಕೇಳೌ
[1]ತಲೆಯನೆತ್ತಿಯೆ ನೋಡಿ[1]ಯೆಂದರು ನಗುತ ಚಪಲೆಯರು ॥ ೨೦೮ ॥

ಅದೆ ಹಲಾಯುಧ ನೋಡು ವಿಪ್ರೌ-
ಘದಲಿ ಪಾರ್ಥನ ಬರವು ಮೇಘದ
ಹೊದಱುಗಳ ಹರಿದಶ್ವನಂತಿರೆ ವಿಪ್ರವೇಷದಲಿ ।

೨೦೬, [1]ನೆನೆ (ಅ ಆ ಕುಮಾ), ಸ್ವೀಪಾ (ಕ k).
[ಕುಶ, ದರ್ಭೆ–ಹೋಮ ಹವನಾದಿಗಳಲ್ಲಿ ಉಪಯೋಗಿಸುವ ಒಂದು ಬಗೆಯ ಪವಿತ್ರವಾದ ಹುಲ್ಲು. ಸಮಿಧೆ–ಸಮಿತ್ತು (ಹೋಮ ಸಾಮಗ್ರಿ: ಅತ್ತಿ, ಅರಳಿ ಮುಂತಾದ ಮರಗಳ ಒಣಗಿದ ಕೊನೆ). ಬಣಗು–ಕೈಲಾಗದ, ದುರ್ಬಲ, ಕೆಲಸಕ್ಕೆ ಬಾರದ].

೨೦೭. [1]ದೊಳೌಂಕುತ (ಅ); ದೊಳೌಕುತ (ಅ ಕುಮಾ), ಸ್ವೀಪಾ–ದಿ ಬರೆವುತ್ತ* (ಸ). (*ಛಂದೋಭಂಗವಾಗುವ ಪ್ರಯುಕ್ತ ಅಕ್ಷರವನ್ನು 'ತ' ಎಂದು ತಿದ್ದಿದೆ).
[ಎಸು–ಬಾಣಪ್ರಯೋಗ ಮಾಡು. ತಲೆಗುತ್ತು–ತಲೆಬಾಗು. ಉಂಗುಟ–ಕಾಲಿನ ಹೆಬ್ಬೆರಳು. ತಿಮಿಂಗಿಲ–ಮೀನು (ಮತ್ಸ್ಯಯಂತ್ರದ್ದು). ಮಹೀತಳ–ಭೂಮಿ, ನೆಲ].

೨೦೮. [1]ತಲೆವಿಡಿವೆಪಾವ್ನೋಡು (ಅ ಆ ಕುಮಾ), ಸ್ವೀಪಾ (ಪ್ರ).
[ಮಟ್ಟಿ–ಮಣ್ಣು. ತಿಲ–ಎಳ್ಳು].

ವಿದಿತವೇ ವಸುದೇವನಾಗೆಂ-
ದುದಕೆ ತಪ್ಪದಲೈ ಸಭಾಮ-
ಧ್ಯದಲಿ ಬರುತಿಪಾರ್ಥನರ್ಜುನನೆಂದನಸುರಾರಿ ॥ ೨೦೯ ॥

ಜನಪನೋ ಭೀಮಾದಿಗಳೊ ತ-
ಜ್ಜನನಿಯೋ ತಾವೆಲ್ಲ ಭೂಸುರ-
ಜನದ ಸಾನ್ನಿಧ್ಯದಲಿ ಸಭೆಯೊಳಗಿರ್ದರೆನೆ ಕೇಳ್ದು
ನಿನಗಿದೆಂತವರಱಿತವರಗಿನ
ಮನೆಗೆ ತಪ್ಪಿದರೆಂತು ಶಿವ ನೀ-
ನೆನಿತು ಮಾಯಾಶಿಕ್ಷನೆಂದನು ನಗುತ ಬಲರಾಮ ॥ ೨೧೦ ॥

ಅವನಿಪತಿ ಕೇಳತ್ತಲೀ ಪಾ-
ರ್ಥಿವರ ಪರಿಹಾಸವನು ಕಾಂತಾ-
ನಿವಹದಲಿ ನಿಬ್ಬರದ ನುಡಿಗಳನಾ ಮಹೀಸುರರ ।
ವಿವಿಧಕಟು ಮಧುರೋಕ್ತಿ ವಿನ್ಯಾ-
ಸವನು ಕೇಳುತ ಮುಗುಳುನಗೆಯಲಿ
ನವ ಮದದ್ವಿಪಗತಿಯ ಗರುವಾಯಿಯಲಿ ನಡೆತಂದ ॥ ೨೧೧ ॥

ಬರುತ ಭೀಷ್ಮದ್ರೋಣಕೃಪರಿಂ-
ಗೆಱಗಿದನು ಮನದೊಳಗೆ ಯಾದವ-
[1]ರರಸು[1] ಪಂಕ್ತಿಯ ಹರಿಯನಭಿವಂದಿಸಿದನಕ್ಷಿಯಲಿ ।
ಸುರಪತಿಗೆ ಗುಹಗಣಪದಿಕ್ಪಾ-
ಲರಿಗೆ ರುದ್ರಾದಿತ್ಯವಸುಮು-
ಖ್ಯರಿಗೆ ಮಣಿದನು ಬಂದನಗ್ಗದ ಚಾಪವಿದ್ಯೆಡೆಗೆ ॥ ೨೧೨ ॥

---

೨೦೯ [ಹಲಾಯುಧ ಬಲರಾಮ ವಿಪ್ರೌಘ-ಬ್ರಾಹ್ಮಣರ ಗುಂಪು. ಹೊದಱು-ಗು
ಜಮುಖ. ಹರಿದಶ್ವ-ಸೂರ್ಯ]

೨೧೧ [ನಿವಹ-ಗುಂಪು. ನಿಬ್ಬರದ (ನಿರ್ಭರದ)-ರಭಸದ. ಮದದ್ವಿಪ-ಮದಿಸಿದ
ಗಜ. ಗರುವಾಯಿ-ಠೀವಿ, ಬಿಂಕ].

೨೧೨. [1]ರರಸ (ಅ ಆ ಕುಮಾ. ಸ್ವೀಪಾ (ಪ್ರ ಸ k).
[ಪಂಕ್ತಿ-ಸಾಲು. ಗುಹ-ಷಣ್ಮುಖ. ಮಣಿ-ನಮಸ್ಕರಿಸು. ಅಗ್ಗದ-ಶ್ರೇಷ್ಠವ

ಹೊಯ್ದು ತಿರುವನು ಸೆಳೆದು ಶಿವಶಿ-
ಗೊಯ್ದು ಸಿದು ಹದವಿಕ್ಕಿಲಾ ಬಲು-
ಹೆಯ್ದುದಕಟಾ ಬಚ್ಚಿದೆ ಹೆದಚ್ಚಿತು ಮಾಗಧಾದಿಗಳು ।
ಕಯ್ದುಗೆದರಿದಚ್ಚಿಳಗೆ ಹೆಸರಿನ-
ಗೆಯ್ದು ಬೇಕೆಂದೈಸಲೇ ಎನು-
ತುಯ್ದು ಬಾಣವ ಕೊಂಡು ಯಂತ್ರದ ಹೊಳಹನೀಕ್ಷಿಸಿದ ॥ ೫೩ ॥

ತೂಗಿ ಶಿವಶಿವರಿಗುಗಿದು ಯಂತ್ರವ
ತಾಗಿಸಿದನಂಬಿನಲಿ ಪಾರ್ಥನ
ಲಾಗುವೇಗವನಾರು ಬಲ್ಲರು ಯಂತ್ರಭೇದದಲಿ ।
ಜಾಗು ಧಣುಧಣು ಭೂತು ಕಾರ್ಮುಕ-
ಯೋಗಸಿದ್ಧನೆ ಮುಪ್ಪುರಿ ಕೋದಂ-
ಡಾಗಮತ್ರಿಪುರಾರಿಯೊಂದುದು ವಂದಿಸಂದೋಹ ॥ ೫೪ ॥

ಅಯಿನುತ ಬೊಬ್ಬಿರಿದು ವಿಪ್ರನಿ-
ಕಾಯ ಕುಣಿದುದು ಕಮಲಮುಖಿ ನಿ-
ರ್ದಾಯದಲಿ ನೋಡಿದಳು ಹಾರುವಗೆನ್ನತ ಕರುಣದಲಿ ।
ಆ ಯುವತಿಜನಜಲಧಿ ಮಸಗಿತು
ಬಾಯಮೌನದ ಬೆರಳ ಮೂಗಿನ
ರಾಯರಿದ್ದರು ಬಿಗಿದ ಬೆರಗಿನ ಚಿತ್ತ ದುಗುಡದಲಿ ॥ ೫೫ ॥

ತೊಲತೊಲಗು ಮನ್ಮಥನ ಹೊಗರಿ-
ಟ್ಟಲಗು ಬರುತಿದೆ ಸಾರುಸಾರಿಂ-
ದುಲಿದು ಕಂಚುಕಿನಿಕರ ಹೊಯ್ದುದು ಮುಂದೆ ಸಂದಣಿಯ ।
ನಳಿನಮುಖಿ ದಂಡಿಗೆಯೊಳೈತಂ-
ದಿಳಿದಳೀತನ ಹೊರೆಯೊಳಾಗಳೆ
ಕಳಕಳದಲೊಳತೋಟಿ ಮಸಗಿತು ಹರುಷಲಕ್ಷ್ಮಿಯಲಿ ॥ ೫೬ ॥

---

೩. [ತಿರು-ಬಿಲ್ಲಿನ ಹೆದೆ. ಬಲುಹೆಯ್ದ ಮ (ಬಲುಹು + ಎಯ್ದ ಮ) - ಸಾಮರ್ಥ್ಯ ಸೇರದು, ಸಾಮರ್ಥ್ಯದ ಅಗತ್ಯವಿಲ್ಲ].

೪. [ಲಾಗಿ-ನೆಗೆ. ಲಾಗು-ಚಳಕ, ಕೌಶಲ ಕಾರ್ಮುಕಯೋಗ-ಧನುರ್ವಿದ್ಯೆ ಕೋದಂಡ, ಕಾರ್ಮುಕ-ಧನುಸ್ಸು, ಬಿಲ್ಲು ತ್ರಿಪುರಾರಿ-ಈಶ್ವರ]

೫. [ನಿಕಾಯ-ಸಮೂಹ. ನಿರ್ದಾಯದಲಿ-ಸುಲಭವಾಗಿ ಮಸಗು-ಹೆಚ್ಚು, ಉಬ್ಬು, ಅಧಿಕವಾಗು].

ಧರಣಿಪತಿ ಕೇಳ್ ಬಹುಳಲಜ್ಜಾ-
ಭರದ ಭಯದಲಿ ಬೆವರಿಡುತ ಕುಚ-
ಭರದಿ ನೇಲುದು ಜಾಱೆ ಜೋಡಿಸಿ ನಿಮಿರಿ ನಡೆನಡುಗಿ ।
ತರುಣಿ ನಿಜತನುಪರಿಮಳದಲುಱೆ
ಹೊರೆದ ಹೂವಿನ ದಂಡೆಯನು ನಿಜ-
ವರನ ಕೊರಳಲಿ ಹಾಯ್ಕಿದಳು ಜಯವೆನೆ ಸುರಸ್ತ್ರೀಯರು ॥ ೨೧೬ ॥

ಕೊರಳ ಹೂವಿನ ದಂಡೆಯಲಿ ನಿಜ-
ಕರದ ಭಾರಿಯ ಧನುವಿನಲಿ ತನು-
ಪರಿಮಳದ ನಿಟ್ಟಿಸಲುಗಂಗಳ ಕೆಲದ ಯುವತಿಯಲಿ ।
ವರನ ಪರಿ ಹೊಸತಾಯ್ತು ಹೊತ್ತನು
ಹರನ ಹಗೆ ಹಾರುವಿಕೆಯನು ನ-
ಮ್ಮರಸಿ [1]ಪಾರ್ವರಳು ಎಂದು ನುಡಿದರು[1] ನಗುತ ಚಪಲೆಯರು ॥ ೨೧೭ ॥

ಬಂದನೀತನು ಗತಿಯ ಗರುವಿಕೆ-
ಯಿಂದ ತರುಣಿಯ ಹೊರೆಗೆ ಬಾ ನೀ-
ನೆಂದು ಕರೆದನು ಸತಿಸಹಿತ ತಿರುಗಿದನು ವಹಿಲದಲಿ ।
ಇಂದುಮುಖಿಯನು ಕುಂಭಕಾಜನ
ಮಂದಿರದ ಹೊಱಗಿರಿಸಿ ಫಲುಗುಣ
ಬಂದು ವಂದಿಸಿದನು ಕುಂತಿಯ ಚರಣಕಮಲದಲಿ ॥ ೨೧೮ ॥

ತಾಯೆ ಬಿನ್ನಹವಿಂದು ಧರಣೀ-
ರಾಯರೆಲ್ಲರ ಗೆಲಿದು ತಂದೆನು
ನಾಯಕವಸನುಸಮಿತಮೌಲ್ಯವನವಾಲಮೌಕ್ತಿಕವ ।

೨೧೫. [ಪೊಗರಿಡು–ಹೊಳಪುಕೊಡು. ಹೊರೆ–ಸಮೀಪ. ಬಳತೋಟ–ಮನಸ್ಸಿನ ಹೊಯ್ದಾಟ, ತುಮುಲ].

೨೧೬. [ನೇಲುದು–ಮೇಲೆ ಹೊದೆಯುವ ವಸ್ತ್ರ. ಹೊರೆದ–ಲೇಪಿಸಿದ].

೨೧೭. [1] ನೆರೆ ಪಾರುವತಿಯೆಂದರು (ಅ ಆ ಕುಮಾ), ಸ್ತ್ರೀಪಾ (ಪ್ರ).
[ಹರನಹಗೆ–ಮನ್ಮಥ].

೨೧೮. [ಗರುವಿಕೆ–ಹಿರಿಮೆ. ಹೊರೆ–ಸಮೀಪ. ವಹಿಲ–ವೇಗ].

ತಾಯೆ ಚಿತ್ತೈಸಿದಿರೆಯೆನೆ ¹ಕಡ
ವಾಯ¹ದಳು ತನಿಹರುಷದಲಿ ಲೀ-
ಸಾಯಿತೈವರು ಕೂಡಿ ಭೋಗಿಪುದೆಂದಳಾ ಕುಂತಿ ॥ ೨೨೦ ॥

ಇಳಿದನಸ್ತಾಚಲಕೆ ರವಿ ನೃಪ-
ತಿಲಕರೈವರು ನಿಹಿತಕೃತ್ಯಾ-
ವಳಿಗಳನು ವಿಸ್ತರಿಸಿ ಕುಂತಿಯ ಚರಣಕಭಿನಮಿಸಿ ।
ಜಲರುಹಾಕ್ಷನ ನಾಮಕೀರ್ತನ-
ಲುಳಿತಪರಮಾನಂದರಸದಲಿ
ಮುಳುಗಿ ಮಾಡುತ್ತಿರ್ದರಂದು ಕುಲಾಲಭವನದಲಿ ॥ ೨೨೧ ॥

ಇವರು ಪಾರ್ಥಿವರೊಳಗೆ ಕೇಳ್ ಪಾಂ-
ಡವರು ನಿಸ್ಸಂದೇಹವೆಂದೇ
ನಿವಗೆ ನಾವೆನ್ನೆವೆ ವಿವಾಹದ ಪೂರ್ವಕಾಲದಲಿ ।
¹ಇವರ¹ನುಪಚರಿಸೇಳು ರಚಿಸು-
ತ್ಸವವನಾಯ್ತಿದೆ ಪೂರ್ವಗಿರಿಯಲಿ
ರವಿಯುದಯವೆಂದಾ ಪುರೋಹಿತ ತಿಳುಹಿದನು ನೃಪನ ॥ ೨೨೨ ॥

ಏಳಿ ಬಿಜಯಂಗೈವುದೆಂದು ನೃ-
ಪಾಲಕರನುಚಿತದಲಿ ನಿಜರಾ-
ಜಾಲಯಕೆ ತಂದನು ನಿರೀಕ್ಷಿಸುತನಿಬರಿಂಗಿತವ ।
ಮೇಲುಮೊಗದ ಗಭೀರಗತಿಯ ಭ-
ಡಾಳವನು ಕಂಡಿವರು ರಾಯರ
ಪೀಳಿಗೆಗಳಹುದೆಂದು ನಿಶ್ಚೈಸಿದನು ಮನದೊಳಗೆ ॥ ೨೨೩ ॥

---

೨೨೦. ¹ಕಡೆವಾಯಿ (ಅ ಕುಮಾ), ಸ್ವೀಪಾ (ಕ ಸ ಓ k ಪ್ರ).
[ನಾಯಕ-ಶ್ರೇಷ್ಠವಾದದ್ದು. ಮೌಲ್ಯ-ಬೆಲೆ. ಮೌಕ್ತಿಕ-ಮುತ್ತು. ಕಡಹಾಯು-ದಾಟು, ಪಾರಗಾಣು].

೨೨೧. [ತನಿ-ಪೂರ್ಣ, ನಿರ್ಮಲ. ಲುಳಿತ-ವ್ಯಾಪಿಸಿದ, ಹರಡಿದ].

೨೨೨. ¹ಅವರ (ಅ ಕುಮಾ). ಸ್ವೀಪಾ (ಅ).

೨೨೩. [ಭಡಾಳ-ರಭಸ, ಹೆಚ್ಚಳ, ಆಧಿಕ್ಯ. ಪೀಳಿಗೆ-ವಂಶ].

ಬಾಸಿಗದ ನೊಸಲಿನಲಿ ಮೆಱೆವ ಮ-
ಹೀಶರೈವರು ಮಂಟಪದ ನೆಲ-
ವಾಸಿನಲಿ ಕುಳ್ಳಿರ್ದರನುಪಮರಾಜತೇಜದಲಿ ।
ಆ ಸೊಸೆಯು ಸಂಗಾತ ಕುಂತಿ ವಿ-
ಲಾಸದಲಿ ಕುಳ್ಳಿರ್ದಳಾ ವಿ-
ನ್ಯಾಸವನು ಜನ ನೋಡುತಿರ್ದುದು ಬಿಗಿದ ಬೆಱಗಿನಲಿ ॥ ೨೨೪ ॥

ಸಾರಿದರು ಮೆಟ್ಟಕ್ಕಿಗಳ ಗುಡ-
ಜೀರಿಗೆಗಳೊದಗಿದವು ಲಗ್ನವಿ-
ಹಾರದಾಶೀ[1]ರ್ವಾದದಾಯತ[1]ರವದರಭಸದಲಿ ।
ಧಾರೆಯೆಱೆದನು ದ್ರುಪದ ಪಾಂಡುಕು-
ಮಾರರಿಗೆ ನಿಜ[2]ತನುಜೆಯನು[2] ವಿ-
ಸ್ತಾರಿಸಿತು ವೈವಾಹರಚನೆ ವಿಶಾಲವಿಭವದಲಿ ॥ ೨೨೫ ॥

ಬಂದನಲ್ಲಿಗೆ ಸಕಲಯಾದವ-
ವೃಂದಸಹಿತ ಮುರಾರಿ ಕುಂತೀ-
ನಂದನರು ಬರಲಿದಿರುಗಾಣಿಸಿಕೊಂಡನುಚಿತದಲಿ ।
ತಂದ ಬಹುವಿಧವಸ್ತು[1]ಭಾ[1]ರವ-
ನಂದು ಕೊಟ್ಟನು ಗಜರಥಾಶ್ವವ-
ನಿಂದುವದನೆಯ[2]ರನು[2] ವಿಚಿತ್ರಾಂಬರವಿಭೂಷಣವ ॥ ೨೨೬ ॥

ಮಗನೆ ಧರ್ಮಜ ಕೇಳು ಭೀಮಾ-
ದಿಗ[1]ಳು[1]ಹರಿಯೆಮ್ಮಣ್ಣದೇವನ
ಮಗನು ಸೋದರಮಾವನೀತನು ನಿಮಗೆ ವಸುದೇವ ।
ವಿಗಡರೀ ಯಾದವನೃಪರು ಬಂ-
ಧುಗಳು ನಿಮಗೆಂದೈವರನು ಕೈ
ನೆಗಹಿ ಕಮಲೋದರನ ಕೈಯಲಿ ಕೊಟ್ಟಳಾ ಕುಂತಿ ॥ ೨೨೭ ॥

---

೨೨೫. [1]ವರ್ಚನಗಳಗಾಯಕ (ಅ ಕ). [2]ಸುತೆಯನತಿ (ಆ ಕುಮಾ), ಸ್ವೀಪಾ (ಕ ಪ್ರ). [ಗುಡ–ಬೆಲ್ಲ. ಆಯತರವ–ವಿಸ್ತಾರವಾದ ಶಬ್ದ, ಅಪಾರ ಗದ್ದಲ].

೨೨೬. [1]ಶಾ (ಅ ಆ ಕುಮಾ, ಪ್ರ), ಸ್ವೀಪಾ (ಓ). [2]ರಿಗೆ (ಅ ಆ ಕುಮಾ), ಸ್ವೀಪಾ (ಕ ಸ k ಪ್ರ).

೨೨೭. [1]ಳೆ (ಅ ಆ ಕುಮಾ), ಸ್ವೀಪಾ (ಕ ಸ k ಪ್ರ). [ವಿಗಡರು–ಅಸಾಧಾರಣ ಪರಾಕ್ರಮಿಗಳು. ಕೈನೆಗಹು–ಕೈಯೆತ್ತು].

ವನದೊಳಪಗತನಾದನಿವರ-
ಯ್ಯನು ಕುಮಾರರ ಬಾಲ್ಯಕಾಲದೊ-
ಳೆನಗೆ ರಕ್ಷಾಭಾರ ಬಿದ್ದುದು ಪತಿಪರೋಕ್ಷದಲಿ ।
ಇನಿಬರನು ಗಜಪುರಿಗೆ ಕೊಂಡೊ-
ಯ್ದೆನು ಸುಯೋಧನನಿಂದ ವೈ[1]ರ-
ಧ್ವ[1]ನಿತವಾಯಿತು ಬಳಿಕ ಲಾಕ್ಷಾಭವನದಹನದಲಿ ॥ ೨೨೮ ॥

ಉರಿಯೊಳುಳಿದೆವು ನಿಮ್ಮ ಚರಣ-
ಸ್ಮರಣಬಲದಲಿ ಬಹಳವಿಪಿನಾಂ-
ತರದೊಳಗೆ ತೊಳಲಿದೆವು [1]ತಿರಿದೆವು ಹೊರೆದೆವೊ[1]ಡಲುಗಳ ।
ಬರಬರಲು [2]ತತ್ಸಕಲ[2] ದುಃಖೋ-
[3]ತ್ಕರ[3]ನಿವಾರಣ ದ್ರುಪದಕನ್ಯಾ-
ವರಣ [4]ನಿಮ್ಮೀ[4]ಯಂಘ್ರಿದರ್ಶನವೆಂದಳಾ ಕುಂತಿ ॥ ೨೨೯ ॥

ಇದಿರೊಳವನಿಪ ಭೀಮನೆಡವಂ-
ಕದಲಿ ಮಾದ್ರೀಸುತರು ಬಲವಂ-
ಕದಲಿ ದೇವಕಿಕುಂತಿವಸುದೇವಾದಿಯದುನಿಕರ ।
ಮುದದಿ[1]ನೈ[1]ವರ ರಮಣಿ ಬಲವಂ-
ಕದಲಿ ಕರುಣಾಳುವಿನ ವಾಮಾಂ-
[2]ಗ[2]ದಲಿ ಫಲುಗುಣನೊಪ್ಪೆ ಮೆಱೆದನು ದಾನವಧ್ವಂಸಿ ॥ ೨೩೦ ॥

ಆವುದೋ ಧರ್ಮಜನ ಭೀಮನ
ಭಾವಶುದ್ಧಿ ಧನಂಜಯನ ಸುಕೃ-
ತಾವಲಂಬನಸಾರವೆಂತುಟೊ ಶಿವಮಹಾದೇವ ।

---

೨೨೮. [1]ವ್ರಜ (ಅ ಕುಮಾ), ಸ್ವೀಪಾ (ಕ k ಪ್ರ).
[ಅಪಗತವಾಗು-ತೀರಿಹೋಗು, ನಿಧನಹೊಂದು. ಪತಿಪರೋಕ್ಷದಲಿ-ಗಂಡ ಇಲ್ಲದಿರುವಾಗ. ಧ್ವನಿತವಾಯಿತು-ಪ್ರಕಟವಾಯಿತು].

೨೨೯. [1]ಹೊರೆದೆವು ಸಾಯದೊ (ಅ ಕುಮಾ), ಸ್ವೀಪಾ (ಕ ಸ ಓ ಕೆ). [2]ತತ್ಸರ್ವ (ಅ ಕುಮಾ, ಪ್ರ), ಸ್ವೀಪಾ (ಕ). [3]ತ್ತರ (ಅ ಕುಮಾ), ಸ್ವೀಪಾ (ಕ k ಪ್ರ). [4]ನಿನ್ನೀ (ಅ ಕುಮಾ), ನಿಮ್ಮಡಿ (ಅ ಸ k ಪ್ರ).

೨೩೦. [1]ಯ್ಯೆ (ಅ ಕುಮಾ). [2]ಕ (ಅ ಆ ಕುಮಾ), ಸ್ವೀಪಾ (ಸ k).
[ವಂಕ-ಪಕ್ಕ. ವಾಮಾಂಗ-ದೇಹದ ಎಡಭಾಗ].

ತಾವು[1]ಗಾಣವು[1] ವೇದವುಪನಿಷ-
ದಾವಳಿಗಳೊಲ್ಲೈಸಿ ಕೃಷ್ಣ ಕೃ-
ಪಾವಿಲಾಸವ ನೋಡಿಯೆಂದನು ಸಕಲ [2]ಮುನಿ[2]ನಿಕರ ॥ ೨೩೦ ॥

---

೭. ರಾಜ್ಯವಿಭಾಗ

ಅರಸ ಚಿತ್ತೈಸಂದಿನೋಲಗ
ಹರಿದುದಾ ಪರಿಜನ ಬಿಟ್ಟುದು
ಪುರದ ಬಹಿರುದ್ಯಾನವೀಧಿಗಳೊಳಗೆ ಹರಹಿನಲಿ ।
ಕುರುನೃಪಾಲನ ಗುಪ್ತಚಾರರು
ಅರಿದರೀ ವಾರ್ತೆಯನು ಪುರದಲಿ
ಹರಹಿದರು ನೆಲೆ ಕೇಳಿದನು ಧೃತರಾಷ್ಟ್ರನೀ ಹದನ ॥ ೨೩೧ ॥

ಕೇಳಿ[1]ರೇ[1] ಹೇಳುವೆನು ಯಾದವ-
ರಾಳು ಬಂದುದು ಗಡ ಜನಾರ್ದನ
ಕೊಳುಹೋದನು ಗಡ ಯುಧಿಷ್ಠಿರಭೀಮಪಾರ್ಥರಿಗೆ ।
ಗಾಳಿ ಬೆಂಬಲವಾಗಲುರಿಯ ಧ-
ಹಾಳವನು ನಿಸ್ತರಿಸಬಹುದೆ ವಿ-
[2]ತಾ[2]ಳಿಸಿತಲ್ಲೈ ನಿಮ್ಮ ಗಾರುಡವೆಂದ [3]ಸಂಧನ್ಯಸ[3] ॥ ೨೩೨ ॥

ಎನಲು ಗರ್ಜಿಸುತರಸ ಮುರಿವು
ಜಿನುಗಿದೊಡೆ ಗಿರಿ ಜರಿವುದೇ ಯಮ-
ತನುಜಭೀಮಾರ್ಜುನರು ಹಿಡಿ[1][ದೊಡೆ][1] ಗಗನವಡಗುವದೇ ।

---

೨೩೦. [1]ಕಂಡವನೆ (ಗಂಡವನೆ ?) (ಸ k). [2]ಮುನ (ಅ ಕುಮಾ).

೨೩೧. [1]ಅ (ಅ ಆ ಕುಮಾ), ಸ್ವೀಸಾ (ಕ ಸ k).
[ಹದನು-ಸಮಾಚಾರ, ನಿಜಸ್ಥಿತಿ].

೨೩೨. [1]ರೈ (ಅ ಕುಮಾ), ದುದ (ಅ ಸ), ಸ್ತ್ರೀಸಾ (ಕ k). [2]ಕಾ (ಅ). [3]ನಾನ
(ಆ ಕುಮಾ).
[ಕೊಳುಹೋಗು-ವಶನಾಗು, ಸ್ವಾಧೀನನಾಗು; ಸೂರೆಹೋಗು; ಲೂಟಿಹೋ

೨೩೩. [1]ದಿರೆ (ಅ), ವರೆ (ಕ ಸ k), ವಡೆ (ಪ್ರ).

ದನುಜರಿಪುವಿನೊಳೀವಸಾದು ಬರ-
ಲನಿಮಿಷರು ನೆರವಾಗಿ ರಣದಲಿ
ಜವನ ಸೋಲಿಹೊಂದರು ಜಯದ್ರಥ ²ಕರ್ಣ ಸೌಬಲರು² ॥ ೨೩೪ ॥

ಇವರ ಬಲುಹಂಕಿರಲಿ ಪಾಕಿ-
ಸ್ಥವರ ಕರಸು ವಿರೋಧಬಂಧ-
ವ್ಯವಸ್ಥಿತಿಗೆ ಫಲವಿಲ್ಲ ಮೂಲಚ್ಛೇದಕರ್ಮವಿದು ।
ಅವರು ಮುನ್ನಿಹಬಲರು ಕೃಷ್ಣನ
ಸವಿಯ ನೀನೇ ಬಲ್ಲೆಯಿನ್ನೀ-
ಸವಡಿವರಿಂದು ಸೋಂಕಲೀಸಲ್ಲೆಂದನಾ ಭೀಷ್ಮ ॥ ೨೩೫ ॥

ಕರೆಸಿ ವಿದುರನ ಕಳುಹು ವಾರಣ
ಪುರದ ರಾಜ್ಯವಿಭಾಗವನು ವಿ-
ಸ್ತರಿಸಿಕೊಡು ಭಂಡಾರವನು ¹ದಾಯಾದವರ್ಗದಲಿ¹ ।
ನರಯುಧಿಷ್ಠಿರಭೀಮರನು ನೀ
ಬರಿಸು ನಿಮ್ಮವಗುಣವ ನೋಡದೆ
ಬೆರಸಿಕೊಡುನೀವು ಕೂಡಿಬದುಕುವುದೆಂದನಾ ಭೀಷ್ಮ ॥ ೨೩೬ ॥

ಕರಸಿಕೊಂಡಿ¹ರೇ¹ ನಿಮ್ಮ ಚಿತ್ತಕೆ
ಬರಿಸಿ ನಡಸುವೆನಿನ್ನು ಮಕ್ಕಳ
ದುರುಳತನದಿಂದಾದ ಹಿಂದಣ ಮಕ್ಕಳಾಟಿಕೆಯು ।
ಮುರಿದು ಕಳೆಯಲಿ ಪಾಂಡುನಂದನ-
ರಿರವಿಗರಿ ಬಾ ವಿದುರ ಭೀಷ್ಮನ
ಪರಮಮತವೇ ನಮ್ಮ ಮತ ಹೋಗೆಂದ²ನಂಧನೃಪ² ॥ ೨೩೭ ॥

. ²ಸೌಬಲಾದಿಗಳು (ಅ ಆ ಕುಮಾ). ಸ್ವೀಕಾ (ಓ ಪ್ರ).
[ಅನಿಮಿಷರು-ದೇವತೆಗಳು. ಜಸುಗು-ಮಾಡಿನ ಮಳೆಗರೆ (?)].

. [ವ್ಯವಸ್ಥಿತಿ-ವ್ಯವಸ್ಥಾನ. ಮೂಲಚ್ಛೇದ-ಬುಡಸಮೇತ ಕತ್ತರಿಸುವುದು. ಸವಡಿ-ಜೋಡಿ, ಜವಡಿ (= ಜಾಮಸಂಧಿ). ಸೋಂಕು-ಸ್ಪರ್ಶ, ಸಂಪರ್ಕ].

. ¹ಹಸುಗೆಯ ಮುನ್ನಿನಂದದಲಿ (ಸ k ಪ್ರ).
[ದಾಯಿಗ-ಹೊಂದಿದವನು, ಸಂಬಂಧವಿಲ್ಲದವನು].

. ¹ರೇ¹ (ಶ ಕುಮಾ), ಸ್ವೀಕಾ (ಕ). ²ಧೃತರಾಷ್ಟ್ರ (ಅ ಕುಮಾ), ಸ್ವೀಕಾ (ಕ ಸ ಓ k ಪ್ರ).

ಕೇಳು ಭೂಪತಿ ಹಲವು ಪಯಣದ
ಮೇಲೆ ಪಯಣದಲೈದಿದನು ಪಾಂ-
ಚಾಲಪುರವನು ಬಂದನರಮನೆಗಧಿಕಹರ್ಷದಲಿ ।
ಕೇಳಿದರು ಕೌಂತೇಯರೀತನ
ಲಾಲಿಸಿದರಿಂದಿ[1]ಗೊಂಡರುತ್ಪುಳ[1]-
ಕಾಳಿಯಲಿ ಮೈಮುಳು[2]ಗಿ[2] ತೆಗೆದಪ್ಪಿದರು ತಮತಮಗೆ ॥ ೨೩೮ ॥

ಕಳುಹಿದ[1]ರು[1] ಬೀಡಾರಕಾತನ
ಬಳಿಯ ಪರಿವಾರವನು ಮನ್ನಿಸಿ
ಬಳಿಕ ಮಱುದಿನ ಮೇಳವಿಸಿದರು ಮಂತ್ರಶಾಲೆಯಲಿ ।
ತಿಳುಹಿದನು ಧೃತರಾಷ್ಟ್ರಭೀಷ್ಮರ
ಲಲಿತಮತವನು ಬಂಧುವರ್ಗ-
ಸ್ಖಲಿತವನು ಸೈರಿಸುವುದೆಂದನು ವಿನಯದಲಿ ವಿದುರ ॥ ೨೩೯ ॥

ಕದಡು ತಿಳಿದುದು ಕಾರ್ಯಗತಿಗಾ-
ಸ್ಪದವ ಕೊಟ್ಟರು ಬಳಿಕ ಸುಮುಹೂ-
ರ್ತದಲಿ ಪಯಣವ ಮಾಡಿದರು ಪಾಂಚಾಲ[1]ಬಲ[1]ಸಹಿತ ।
ಯದುಶಿರೋಮಣಿವೆರಸಿ ಬಹುಪಯ-
ಣದಲಿ ಬಂದರು ಮೇಲೆ ಕೌರವ-
ರಿದಿರುಗೊಂಡರು ಕೂಡೆ ಹೊಕ್ಕರು ಹಸ್ತಿನಾಪುರವ ॥ ೨೪೦ ॥

ಕರಸಿದನು ಧೃತರಾಷ್ಟ್ರಭೂಪತಿ
ಮುರಹರನ ದ್ರುಪದನ ಯುಧಿಷ್ಠಿರ-
ನರವೃಕೋದರ ಭೀಷ್ಮಗುರುಕೃಪಕರ್ಣಶಕುನಿಗಳ ।
ಎರಡು ಭಾಗವ ಮಾಡಿ ವಿಶ್ವಂ-
ಭರೆಯ ರಾಜ್ಯವನುಭಯರಾಯರು
ಹೊರೆಹೊಗದೆ ಪಾಲಿಸಲಿ [1]ಧರ್ಮ[1]ದೊಳೆಂದನಂಧನೃಪ ॥ ೨೪೧ ॥

---

೨೩೮. [1]ರೈದಿತನುಪುಳ (ಅ ಕುಮಾ), ಗೊಂಡು ಹೃತ್ಪುಳ (ಅ ಕ), ಗೊಂಡು ತತ್ಪುಳ (ಪ್ರ), ರೈದಿದರು ಪುಳ (ಸ). [2]ಗೆ (ಅ ಕುಮಾ).
[ಉತ್ಪುಳಕಾಳಿ–ಮೇಲೆದ್ದು ಕಾಣಿಸಿಕೊಂಡ ರೋಮಾಂಚರಾಶಿ].

೨೩೯. [1]ನು (ಅ ಅ ಕುಮಾ ಪ್ರ), ಸ್ವೀಪಾ (k).
[ಲಲಿತಮತ–ಸಮಾಧಾನಕರವಾದ ಅಭಿಪ್ರಾಯ. ಸ್ಖಲಿತ–ಅಪರಾಧ, ತಪ್ಪು].

೨೪೦. [1]ದಳ (ಅ ಕುಮಾ), ಸ್ವೀಪಾ (ಕ ಸ ಓ k ಪ್ರ).

ಪುರ[1]ವ[1]ರೇಂದ್ರ*ಪ್ರಸ್ಥವರಸಂ-
ಗಿರವು ಧರ್ಮಸುತಂಗೆ ಹಸ್ತಿನ-
ಪುರ ಸುಯೋಧನಗುಭಯರಾಯರ ರಾಜಧಾನಿಗಳು ।
ಚರಮದಕ್ಷಿಣವಾಗಿ ಪೂರ್ವೋ-
ತ್ತರವಿಲಂಬಿತವಾಗಿ ಹಿಮಸಾ-
ಗರ[2]ಪರೀತಮಹೀತಳವ[2] ಸೀಳಿಸಿದರಿಂದಾಗಿ ॥ ೨೪೨ ॥

ವಾರಣಪ್ರತತಿಯು ಸಘಾಟದ
ವಾರುವಂಗಳ ಮಣಿಮಯದ ಹೊಂ-
ದೇರುಗಳನಾಭರಣವನು ತೆಗೆಸಿದರು ಸಮನಾಗಿ ।
ಕೌರವ[1]ರು ಪಾಂಡವರುಗಳ[1] [2]ಮನ-
ದೋರೆ[2]ಪೋರೆಯು ತಿಳುಹಿ ವೈರವಿ-
ಕಾರವನು ಬಿಡಿಸಿದರು ಭೀಷ್ಮಾದಿಗಳು ಹರುಷದಲಿ ॥ ೨೪೩ ॥

ಬಳಿಕ ಸುಮುಹೂರ್ತದಲಿ ಹೊಙಗುಡಿ
ಬಳಸಿ ಹೊಯ್ಯುವ ರಾಣಿವಾಸದ-
ನಿಳಯನಿಳಯದ ತಳಿಗೆದಂಬುಲವಂಗಳಾರತಿಯ ।
ಫಲಸಮೂಹದ ಕಾಣಿಕೆಯ ಕೈ-
ಕೊಳುತ ಗಾಂಧಾರಿಗೆ ಮಹೀಶನ
ಲಲನೆಯರಿಗಭಿನಮಿ[1]ಸಿ ಕಳುಹಿಸಿಕೊಂಡರುಚಿತದಲಿ[1] ॥ ೨೪೪ ॥

---

೪೧. [1]ಪಂಥ (ಅ), ಪಂಥ (ಅ ಕುಮಾ); ಸ್ವೀಪಾ (ಸ),
[ಪಿಸ್ತಂಭರೆ-ಭೂಮಿ. ಹೊರೆಹೊಗು-ಅತಿಕ್ರಮಿಸು (?)].
೪೨. [1]ಸು (ಸರ್ವತ್ರ). [2]ದ ಮಧ್ಯದ ಭೂಮಿಯನು (ಅ ಕುಮಾ).
[ಚರಮ-ಕೊನೆ, ಅಂತ್ಯ. ಹಿಮಸಾಗರಪರೀತ-ಹಿಮವತ್ಪರ್ವತದಿಂದ ಸಾಗರಪರ್ಯಂತ].
೪೩. [1]ರ ಪಾಂಡವರ (ಕ ಸ). [2]ಮನದೊಳಗೋರೆ (ಒ), ಮನಮನದೋರೆ (k).
[ಸಘಾಟದ-ವೇಗಶಾಲಿಯಾದ. ವಾರಣಪ್ರತತಿ-ಆನೆಗಳ ಸಮೂಹ. ವಾರುವ-ಕುದುರೆ. ಒರೆಪೋರೆ-ವಕ್ರತೆ. ಅಂಕುಡೊಂಕು-ಓರೆಕೋರೆ].
೪೪. [1]ಸಿದರು ಕೈಕೊಂಡು ಹರಕೆಗಳ (ಸ).
[ಹೊಙಗುಡಿ-ಹೊರಗಡೆಯ ಬಾವುಟ].

---

* ವರೇಂದ್ರ ಪಾಠ 'ಅ' ಪ್ರತಿಯ ಒಂದು ಪಾಠಾಂತರವಾಗಿ ದೊರಕುತ್ತದೆ.

ಕರಸಿ ಕುಂತೀದ್ರೌಪದಿಯರನು
ಕರುಣವಚನಾಮೃತದ ರಸದಲಿ
ಹೊರೆದು ಕೃತದಾಯಾದವಿಷಮವಿರೋಧವರ್ತನವ ।
ಅಱುಹಿ ಸುಯ್ಯಾನವ ಸಮಾಹಿತ-
[1]ಕಾ[1]ರದ ಬುದ್ಧಿಯ ಕಲಿಸಿ ಯಾದವ-
ರರಸ ಬಿಜಯಂಗೈದನಾ ದ್ವಾರಕಿಗೆ ಹರುಷದಲಿ ॥ ೨೪೫ ॥

೮. ಸುಭದ್ರಾಪರಿಣಯ

ನರನ ವಳಿತದೊಳೊಂದುಸಮಯದೊ-
ಳಿರುಳು ತಸ್ಕರಬಾಧೆಯಲಿ ಭೂ-
ಸುರರು ಬಾಯ್ವಿಡುತೈ[1]ದಿತಿಂ[1]ದ್ರಪ್ರಸ್ಥಪುರವರನ ।
ಮೊಱೆಯ ಬಾಯ್ಗಳ ಹು[2]ಲ್ಲ[2]ಕೈಗಳ
ಹಱಿದ ಮೈಗಳ ಸೆಕೆಯ ಸುಯ್ಗಳ
ತರದ ಬೈಗುಳ ಕಳಕಳವ ಕೇಳಿದನು ಕಲಿಪಾರ್ಥ ॥ ೨೪೬ ॥

ಕರಸಿ ವಿಪ್ರರ ಬಾಧೆಗಳನಾ-
ದರಿಸಿ ಕೇಳಿದು ಸಂತವಿಸಿ ಪರಿ-
ಹರಿಸಿಕೊಡುವೆನು ದುಷ್ಟ[1]ಪಾಟಚ್ಚರರುಪಪ್ಲವವ[1] ।
ಮರಳಿ ನೀವೆಂದವರ [2]ಬೀಳ್ಕೊ-
ಟ್ಟರಿವಿದಾರಣ[2] ಬಂದನಗ್ಗದ
ಶರಧನುವ ಕೊಳಲೆಂದು ರಾಯನ ಸಜ್ಜೆಯರಮನೆಗೆ ॥ ೨೪೭ ॥

---

೨೪೫. [1]ತ (ಅ ಕುಮಾ), ಸ್ವೀಪಾ (ಕ ಸ ಓ).
[ಸುಯ್ಯಾನ-ರಕ್ಷಣೆ. ಸಮಾಹಿತ-ಸಮಾಧಾನವಾದ, ಶಾಂತವಾದ].

೨೪೬. [1]ದೆಯಿಂ (ಅ ಕುಮಾ). [2]ಲ್ಲು (ಅ ಕುಮಾ), ಸ್ವೀಪಾ (ಅ ಪ್ರ).
[ವಳಿತ-ಅಧಿಕಾರಕ್ಕೆ ಸೇರಿದ ಪ್ರದೇಶ. ತಸ್ಕರ-ಕಳ್ಳ. ಹುಲ್ಲಕೈ-ಹುಲ್ಲುಹಿಡಿದ, ಶರಣಾಗತಿಯನ್ನು ಸೂಚಿಸುವ ಕೈ. ಹರಿ-ಕತ್ತರಿಸು].

೨೪೭. [1]ಚೋರ ಪರಿಪ್ಲವಪಟಳವ (ಸ), ದುಷ್ಟ ಕೋಟಿರವರಿಗಳನು ತಸ್ಕರರ (ಪ್ರ), ಪಾಟಚ್ಚರ ಪರಿಪ್ಲವವ (ಅ); ಸ್ವೀಪಾ (ಅ). [2]ಬೀಳ್ಕೊಂಡರಿನಿವಾರಣ (ಅ ಕುಮಾ), ಸ್ವೀಪಾ (ಅ ಪ್ರ).
[ಪಾಟಚ್ಚರ-ಚೋರ, ಕಳ್ಳ. ಪರಿಪ್ಲವ-ಉಪದ್ರವ. ಅರಿವಿದಾರಣ-ಶತ್ರುಗಳನ್ನು ಸೀಳುವವನು. ಸಜ್ಜೆ-ಶಯ್ಯೆ (ಸಜ್ಜೆಯರಮನೆ-ಮಲಗುವ ಅರಮನೆ)].

ಅರಸನರಸಿಯರೊಂದು ಮಂಚದೊ-
ಳಿರಲು ಕಂಡೊಡೆ ಭೂಪ್ರದಕ್ಷಿಣ
ವರುಷವೊಂದಱೊಳಿದಕೆ ಪ್ರಾಯಶ್ಚಿತ್ತವಿಧಿಯುಂಟು ।
ಧರಣಿಯುಮರರುಪಪ್ಲವವ ಪರಿ-
ಹರಿಸದಿರಲಾಪಾತಕಕೆ ಸಂ-
ಹರಣವುಂಟೇ ಶಾಸ್ತ್ರದೃಷ್ಟಿಯೊಳೆಂದು ಚಿಂತಿಸಿದ ॥ ೨೪೮ ॥

ಎನುತ ನರನೊಳಹೊಕ್ಕು ತನ್ನಯ
ಧನುಕರಂಗಳ ಕೊಂಡು ನುಡಿದನು
ಮುನಿವಚನಸಂಘಟಿತನೃಪದಂಪತಿವಿಲೋಕನದ ।
ಘನದುರಿತನಿಷ್ಕೃತಿಗೆ ವರುಷದೊ-
ಳೆನಗೆ ದೇಶಭ್ರಮಣವಾಯ್ತೆಲೆ
ಜನಪ ಚಿಂತಿಸಬೇಡೆನುತ ಹೊಱವಂಟನಾಪಾರ್ಥ ॥ ೨೪೯ ॥

ಪುರವ ಹೊಱವಂಟೆಂಟುತಿಂಗಳು
ಪರಿಹರಿಸಿತೀ ಕೃಷ್ಣರಾಯನ
ಪುರದೊಳಗೆ ನೂಕುವೆನು ವರ್ಷಾಕಾಲವಿಭ್ರಮವ ।
ವರುಷವೊಂದು ಸಮಾಪ್ತಿ ಬಳಿಕಿನೊ-
ಳರಸನಂಘ್ರಿವಿಲೋಕನಾನಿ-
ಸ್ತರಣವಹುದೆಂದಾತ ನಿಶ್ಚೈಸಿದನು ಮನದೊಳಗೆ ॥ ೨೫೦ ॥

ಅರಸ ಕೇಳ್ ಸಂನ್ಯಾಸಿವೇಷದ
ಪರಿಕರವನಳವಡಿಸಿ ಶೌರಿಯು
ಹೊಱಬಾಹೆಯಲಿ ಹೆಚ್ಚಿದ ಬನದ ಮಧ್ಯದಲಿ ।

---

೨೪೮. [ಸಂಹರಣ-ಪರಿಹಾರ].

೨೪೯. [ಮುನಿವಚನ ಸಂಘಟಿತ-ಋಷಿವಾಕ್ಯದಿಂದ ಸಂಭವಿಸಿದ. ನೃಪದಂಪತಿವಿಲೋಕನ-(ಮಲಗಿದ್ದ) ಅರಸು ಅರಸಿಯರನ್ನು ನೋಡಿದ್ದು. ದುರಿತನಿಷ್ಕೃತಿ-ಪಾಪಪರಿಹಾರ. ಭ್ರಮಣ-ಅಲೆಯುವುದು, ತಿರುಗಾಟ].

೨೫೦. ನೂಕು-ಕಳೆ. ವರ್ಷಾಕಾಲ ವಿಭ್ರಮ-ಮಳೆಗಾಲದಲ್ಲಿ ಅಲೆದಾಟ. ನಿಸ್ತರಣ-ದಾಟುವುದು, ಕಳೆದುಕೊಳ್ಳುವುದು, ವಿಮೋಚನ].

ಇರುಳು ಕಗ್ಗತ್ತಲೆಯೊಳೌಕುವ
[1]ಸ[3]ರಿವಳೆಗೆ ಸಲೆ ಸೇಡುಗೊಳುತು-
ಬ್ಬರಿಸಿ ಕೃಷ್ಣನ ನೆನೆವುತಿದ್ದನು ಮರನ [2]ಹೊಳಲಿನಲಿ[2] ॥ ೨೫೧ ॥

ದೇವನತ್ತಲು ಸತ್ಯಭಾಮಾ-
ದೇವಿಯರ ಮೇಳದಲಿ ಇರುತಿ-
ರ್ದಿ ವಿಲಾಸವ ನೆನೆದು ನಕ್ಕನು ಶಕ್ರನಂದನನ ।
ಆವಳೋ ನೆನಹಿನಲಿ ಸುಳಿದಳು
ಭಾವದಲಿ ಸುಮ್ಮಾನವೇನೆನೆ
ದೇವಿ ಬೇಱೊಂದಿಲ್ಲ ಮನ ನಿನ್ನಾಣೆ ಕೇಳೆಂದ ॥ ೨೫೨ ॥

ನರನ ಸೀ ಕೇಳ್ದಱಿಯಲಾ ಸೋ-
ದರದ ಮೈದುನನೆನಗೆ ಕುಂತಿಯು
ವರಕುಮಾರಕನಾತನೀ ದ್ವಾರಾವತಿಯು ಹೊಱಗೆ ।
ಮರನ ಹೊ[1]ಳಲನು[1] ಹೊಕ್ಕು ಸಿಕ್ಕಿದ
ನರಿಯುವೋಲೈದಾನೆ ನಾನುಪ-
ಚರಿಸಿ ಬಹೆನೆಂದೆನುತ ಮಂಚವನಿಳಿದನಸುರಾರಿ ॥ ೨೫೩ ॥

ಅರಸಿ ಕೇಳೀ ಬಂದ ಪಾರ್ಥನ
ಕರೆದು ಪಾಯಾಂತರದೊಳೀವೆನು
ಸರಸಿಜಾನನೆಯನು ಸುಭದ್ರೆಯನಿಂದು ತಪ್ಪಿದೊಡೆ ।
ಕರಸಿ ದುರ್ಯೋಧನಗೆ ಕೊಡಿಸುವ
ಭರವು ಬಲಭ[1]ದ್ರಂಗೆ[1] ಪಾರ್ಥನ
ಬರವು ಲೇಸಾಯ್ತೆನುತ ಹೊಱವಂಟನು ನಿಜಾಲಯವ ॥ ೨೫೪ ॥

---

೨೫೧. [1]ಪಿ (ಅ). [2]ಹೊಳ್ಳಿನಲಿ (ಅ ಆ ಕುಮಾ), ಹೊಳಲಲ್ಲಿ (ಸ), ಹೊಳಹಿನಲಿ (k), ಸ್ವೀಪಾ (ಪ್ರ k).
[ಹೊಱಬಾಹೆ-ಹೊರಪ್ರಾಂತ. ಸರಿವಳೆ-ಒಂದೇಸಮನಾಗಿ ಸುರಿಯುವ ಮಳೆ. ಹೊಳಲು-ಪೊಟ್ಟರೆ].

೨೫೨. [ಶಕ್ರನಂದನ-ಅರ್ಜುನ. ಸುಮ್ಮಾನ-ಹಿಗ್ಗು, ಸಂತೋಷ].

೨೫೩. [1]ಹೊಳ್ಳೊಳು (ಆ ಕುಮಾ), ಹೊಳಲಲಿ (k ಕ ಪ್ರ) ; ಸ್ವೀಪಾ (ಸ).
[ಐದಾನೆ-ಇದ್ದಾನೆ].

೨೫೪. [1]ದ್ರನದು (ಆ ಕುಮಾ), ಸ್ವೀಪಾ (ಪ್ರ ಕ ಸ k).

ಬಂದನಲ್ಲಿಗೆ ಫಲುಗುಣನ ಕಂ-
ಡೆಂದನೀ ಶೈಲದ ಸಮೀಪದೊ-
ಳಿಂದು ನಿಲು ಬಲಭದ್ರನೈತಹನುಚಿತವಚನದಲಿ ।
ಮಂದಿರಕೆ ಬರಹೇಳಿದೊಡೆ ಬಾ-
ಮುಂದೆ ನಿನ್ನಿಷ್ಟಾರ್ಥ ಸಿದ್ಧಿ ಫು-
ದೆಂದು ಪಾರ್ಥನ ಸಂತ[1]ಯಿ[1]ಸಿ ಮರಳಿದನು ಮುರವೈರಿ ॥ ೨೫೫ ॥

ಪರಮಹಂಸನ ಸುಳಿವು ಸಾಕ್ಷಾ-
ತ್ಸರಸಿಜಾಕ್ಷನ ಲೀಲೆ ಗಡ ನ-
ಮ್ಮರಸನಭ್ಯುದಯಪ್ರಪಂಚವಿದೆಂದು ನಗ[1]ರಿಯ[1]ಲಿ ।
ಹರಹಿದನು ಹರಿ ವಾರ್ತೆಯನು ತಾ-
ನಱಿಯದಂತಿರೆ ಬಳಿಕ ನೀಲಾಂ-
ಬರನು ಬಹಳೋತ್ಸವದೊಳೈದಿದನಾತನಿದ್ದೆಡೆಗೆ ॥ ೨೫೬ ॥

ವಂದಿಸಿದನಾ ಮುನಿಪತಿ[1]ಗೆ ನಲ-
ವಿಂದಲಾ[1]ಶೀರ್ವಾದ ಸಂಗತಿ-
ಯಿಂದ ವಿವರಿಸಿದನು ಚತು*ರ್ದಶವಿದ್ಯೆಗಳ [2]ಪರಿಯ[2] ।
ನಿಂದು ಮೂಗಿನ ಬೆರಳಿನಲಿ ಸಾ-
ನಂದ ಮಿಗೆ ಬೆಱಗಾಗಿ ನಮ್ಮಯ
ಮಂದಿರಕೆ ನೀವ್ ಬಿಜಯಮಾಡುವುದೆ[3]ಂದು[3] ಕೈಮುಗಿದ ॥ ೨೫೭ ॥

ನಾವು ಭಿಕ್ಷುಕರೆಮಗೆ ರಾಜಗೃ-
ಹಾವಲಂಬನವೇಕೆ ಶೈಲವ-
ನಾವಳಿಗಳಲಿ ವರನದೀತೀರದಲಿ ವಾಸಿಪೆವು ।

---

೨೫೫. [1]ಪಿ ಸಿ (ಅ ಆ ಕುಮಾ ಪ್ರ), ಸ್ವೀಪಾ (ಸ).
[ಶೈಲ-ಬೆಟ್ಟ].

೨೫೬. [1]ರದಲಿ (ಅ ಆ ಕುಮಾ), ಸ್ವೀಪಾ (ಪ್ರ ಕ).
[ಪರಮಹಂಸ-(ಬ್ರಹ್ಮಸಿದ್ಧಿಯನ್ನು ಪಡೆದ) ಸಂನ್ಯಾಸಿ. ನೀಲಾಂಬರ-ಬಲರಾಮ.

೨೫೭. [1]ಯನಭಿವಂದಿತಾ (ಅ ಆ ಕುಮಾ ಪ್ರ), ಸ್ವೀಪಾ (ಸ). [2]ಗತಿಯ (ಅ ಆ ಕುಮಾ ಪ್ರ), ಸ್ವೀಪಾ (ಸ). [3]ದೆನುತ (ಆ ಕುಮಾ), ಸ್ವೀಪಾ (ಕ ಸ ಓ k ಪ್ರ).
[ಚತುರ್ದಶವಿದ್ಯೆಗಳು–ಚತುರ್ವೇದಗಳು, ಶಿಕ್ಷಾ ವ್ಯಾಕರಣಾದಿ ವೇದಾಂಗಗಳು, ನ್ಯಾಯಶಾಸ್ತ್ರಗಳು, ಮೀಮಾಂಸೆಗಳು, ಧರ್ಮಶಾಸ್ತ್ರಗಳು, ಪುರಾಣಗಳು].

ಭಾವಿತಪ್ರಾರಬ್ಧಕರ್ಮಫ-
ಲಾವಳಿಯನುಪಭೋಗಿಸುತ ದೇ-
ಹಾವಸಾನವನೀಕ್ಷಿಸುತ್ತಿಹೆನೆಂದನಾ ಪಾರ್ಥ || ೧೫೮ ||

ಅಹುದು ನೀವೇಕಾಂತಭವನದೊ-
ಳಿಹುದು ಚಾತುರ್ಮಾಸವಿದು ಸಂ-
ನಿಹಿತವಾಯ್ತುದ ನೂಕೆ ಬಿಜಯಂಗೈವುದಿಚ್ಛೆಯಲಿ ।
ವಿಹಿತಚರಿತರು ನೀವಲಾ ನಿ-
ರ್ವಹಿಸುವೆನು ಶುಶ್ರೂಷೆಯನು ಕಿಂ-
ಗಹನಮಾಡದಿರೆಂದು ತಂದನು ಯತಿಯನರಮನೆಗೆ || ೨೫೯ ||

ಇವರನರಮನೆಯೊಳಗೆ ಕನ್ಯಾ-
ಭವನಮಧ್ಯದೊಳಿರಿಸಿ ಬಳಿಕಿನೊ-
ಳಿವರ ಶುಶ್ರೂಷೆಗೆ ಸುಭದ್ರಾದೇವಿಯನು ಕರಸಿ ।
ಇವರಪೂರ್ವಮಹಾತ್ಮಕರು ನೀ-
ನಿವರ ದೇವಾರ್ಚನಸಮಾಧಿ-
ಪ್ರವರದಲಿ ಬೆಸಸಿ[1]ತನು[1] ಮಾಡುವುದೆಂದು ನೇಮಿಸಿದ || ೨೬೦ ||

ಹೊಱಗೆ ಕೃಷ್ಣನ ಕರೆದಿವೆಲ್ಲವ-
ನಱುಹಿದೊಡೆ ಮುರುಳಾಡಿದನು ಮೈ-
ಮಱೆದು ತಂಗಿಯನೊಯ್ದು ಬಿಸುಟಿರೆ ಬಣಗುತಿರುಕನಲಿ ।
ಅರಸುಮಗಳನು ತೊತ್ತುಗೆಲಸಕೆ
ಪರುಠವಿಸಿದಿರೆ ಶಿವಶಿವಾ ನಾ-
ವಱಿಯೆವಲ್ಲಿಯು ಲೇಸು ಹೊಲ್ಲೆಹವೆಮ್ಮದಲ್ಲೆಂದ || ೨೬೧ ||

---

೨೫೮. [ಭಾವಿತ-ಸಂಭವಿಸುವ. ಪ್ರಾರಬ್ಧ ಕರ್ಮಫಲ-ಅದೃಷ್ಟದಂತೆ ನಡೆಯುವ ಕರ್ಮಫಲ].

೨೬೦. [1]ದುದ (ಅ), ದನು (ಅ ಕುಮಾ ಪ್ರ ಕ), ಸ್ವೀಪಾ (ಸ k).
[ಕಿಂಗಹನ-ಏನು ಮಹಾಗಹನ (ಕಷ್ಟಸಾಧ್ಯವಾದ) ವಿಚಾರ. ಬೆಸಸಿತನು-ಅಪ್ಪಣೆ ಮಾಡಿದ್ದನ್ನು!.

೨೬೧. [ಪರುಠವಿಸು-ನೇಮಿಸು, ಗೊತ್ತುಮಾಡು. ಹೊಲ್ಲೆಹ-ಕೆಟ್ಟದ್ದು].

ಮರುಳೆ ನೀ ಹೋಗಾರನಾರೆಂ-
ದಱಿಯೆ ಯತಿ ಸರ್ವಜ್ಞನೀತನು
ತಿರುಕನೇ ಸಾಕ್ಷಾತು ಲಕ್ಷ್ಮೀಕಾಂತಸನ್ನಿಭನು ।
ಬರಲಿ ಮಾಣಲಿ ಹಾನಿವೃದ್ಧಿಯು
[1]ಹೊಱಿಗೆ ನಮ್ಮದು[1] ಯತಿಮಹಾತ್ಮರ-
ನಱಿಯುದವರೇ ನಾವೆನುತ ಗಜಱಿದನು ಬಲರಾಮ ॥ ೨೬೨ ॥

ಆದೊ[1]ಡೊಳ್ಳಿತು[1] ತಂಗಿ ಬೆಸ[1]ಕೈ[1]-
ದಾದರಿಸಲೀ ಯತಿಪತಿಯು ನಿಮ-
ಗೀ ದುರಾಗ್ರಹವೇಕೆ ಕಾಂಬಿರಿ ಫಲವನಗ್ರದಲಿ ।
ಹೋದೆವಿದೆ ಮೌನದೊಳೆನುತ್ತಬು-
ಜೋದರನು ಹಿಂಗಿದನು ಹರಿಯು ವಿ-
ನೋದರಚನೆಯನೇನನೆಂಬೆನು ಭೂಪ ಕೇಳೆಂದ ॥ ೨೬೩ ॥

ಬಾಲಕಿಗೆ ಸಂನ್ಯಾಸಿದೇವರ
ಮೇಲೆ ಮನವಾಯ್ತವರಿಗೀಕೆಯ
ಮೆಲೆ ನೆಲಸಿತು ಚಿತ್ತ ಕಾಣೆನು ಜಪಸಮಾಧಿಗಳ ।
ಮೇಳವಿಸಿತನ್ಯೋನ್ಯರಾಗ ಚ-
ಡಾಳಿಸಿದುದಭಿಲಾಷೆ ಕಾಮನ
ಬೇಳುವೆಗೆ ಬೆಂಡಾದುದಿಬ್ಬರ ಧೈರ್ಯವಡಿಗಡಿಗೆ ॥ ೨೬೪ ॥

ಮಿಡುಕುವುದು ಬಾಯ್ ಚಿತ್ತವವಳಲಿ
ತೊಡಕಿಹುದು ಜಪಮಾಲೆ ಬೆರಳಲಿ
ನಡೆವುತಿಹುದಕ್ಷಿಗಳು ಮುಕ್ಕಳಿಸಿಹವು ಮಾನಿನಿಯು ।

---

೨೬೨. [1]ಹರಿಬವೆನ್ನದು (ಅ ಆ ಕುಮಾ), ಸ್ವೀಪಾ (ಸ ಪ್ರ).
[ಹೊಱಿಗೆ-ಭಾರ, ಹೊಣೆ. ಗಜಱು-ಗದರು].

೨೬೩. [1]ಗೈ (ಅ ಕುಮಾ), ಸ್ವೀಪಾ (ಅ ಸ ಓ k ಪ್ರ).
[ಅಬುಜೋದರ-ಪದ್ಮನಾಭ (ಕೃಷ್ಣ)].

೨೬೪. [ಬೇಳುವೆ-ಮಾಯೆ, ತಾಪ. ಬೆಂಡು-ಪೊಳ್ಳು].

ವೃಡನ ಪೂಜೆಗೆ ಕೈ ಸುಭದ್ರೆಯು
[1]ಹಿಡಿಹಿಸಲಿ[1] ಮನ ವರಸಮಾಧಿಯು
ತೊಡಹು ಹೊಱಗೊಳಗಿಂದುಮುಖಿ ನರನಾಥ ಕೇಳೆಂದ ॥ ೨೬೫ ॥*

ಸುಪತಿಯುನು ಶುಭದಿವಸ ಸುಮುಹೂ-
ರ್ತದಲಿರುಳು ವೈವಾಹವನು ಮಾ-
ಡಿಪರು ಹರಿ ವಸುದೇವ ದೇವಕಿಯುಗ್ರಸೇನನೃಪ ।
ಮದುವೆಯಾಯಿತು ಬಲನಱಿಯದಂ-
ದದಲಿ ಹೂಡಿದ ರಥವನೇಱಿಸಿ
ಮುದವಳಿಗೆ ಸಹಿತರ್ಜುನನ ಕಳುಹಿದನು ಮುರವೈರಿ ॥ ೨೬೬ ॥

ಹೇಳಿವೇ ನಾವ್ ಮುನ್ನ ನೀವ್ ನೀ-
ಲಾಳಕಿಯು ಕೆಡಿಸಿದಿರಲಾ ನೀ-
ವಾಳ ನೆರಹಿಪಡಿನ್ನು ಮಾಡುವುದೇನು ಕಡುಮುಳಿದು ।
[1]ಜಾಳವಿಸಿತ[1] ಪಕೀರ್ತಿಯುಕಟ [2]ವಿ-
ಟಾಳಿಸಿತು[2] ಯದುವಂಶವೆನೆ ಕರ-
ವಾಳ ಜಡಿದ್ಕೈದಿದನು ಹಲಧರನರ್ಜುನನ ರಥವ ॥ ೨೬೭ ॥

ಬಳಿಕ ಹರಿದನು ಕೃಷ್ಣನೀತನ
ಕೆಲಕೆ [1]ತೆಗೆ[1]ದನು ಬಹಳ ರೋಷವ
[2]ನಿಲಿಸಿರೇ[2] ಸಾಕಿನ್ನು ವಸುದೇವಂಗೆ ದೇವಕಿಗೆ ।

---

೨೬೫. [1]ಹಿಡಿಹಿಡಿಹಿನಲಿ (ಪ್ರ).

೨೬೭. [1]ಜಾಳಿಸಿದುದ (ಕುಮಾ ಪೇ ಪ್ರ). [2]ವಿಕಾಳಿಸಿತು (ಕುಮಾ ಪೇ) (ಪೇ = ಪೇಟೆಯ ಮುದ್ರಣ).
[ಜಾಳವಿಸಿತು-ಹೀಯಾಳಿಸಿತು, ಹಂಗಿಸಿತು. ವಿಟಾಳಿಸಿತು-ಅಪವಿತ್ರವಾಯಿತು, ಮಲಿನವಾಯಿತು, ಕಳಂಕಿತವಾಯಿತು. ಕರವಾಳ್, ಕರವಾಳು-ಕತ್ತಿ. ಜಡಿ-ಝಳಪಿಸು].

೨೬೮. [1]ಕರೆ (ಕುಮಾ ಪೇ). [2]ನಿಲಿಸಿದನು (ಪ್ರ).

---

* ೨೬೫ ರಿಂದ ಮುಂದೆ 'ಶ್ರೀ' ಸಂಗ್ರಹದ ಆಧಾರ ಪ್ರತಿಯ ಪು. 177-193ರ ವರೆಗೆ 17 ಹಾಳೆಗಳು ಹಸ್ತಪ್ರತಿಯಲ್ಲಿ ನಷ್ಟವಾಗಿರುವುದರಿಂದ ಅವರ ಆಯ್ಕೆಯ ಪದ್ಯಗಳನ್ನು ಇಲ್ಲಿ ಸೇರಿಸಿಕೊಳ್ಳಲಾಗಲಿಲ್ಲ. ಆದ್ದರಿಂದ, ಕನ್ನಡ ಅಧ್ಯಯನ ಸಂಸ್ಥೆಯ 'ಅ' ಪ್ರತಿಯಿಂದ ಈ ಆವೃತ್ತಿಯ ಸಂಪಾದಕಸಮಿತಿ ಉಚಿತಕಂಡ ಪದ್ಯಗಳನ್ನು ಆಯ್ಕೆ ಮಾಡಿಕೊಂಡಿದೆ. 'ಕುಮಾ' ಮತ್ತು 'ಪ್ರ' ಪ್ರತಿಗಳಿಂದ ಪಾಠಾಂತರಗಳನ್ನು ಕೊಟ್ಟು ಅಗತ್ಯಬಿದ್ದಾಗ ಮಾತ್ರ ಅವುಗಳ ಪಾಠವನ್ನು ಸ್ವೀಕರಿಸಿದೆ.

ಮುಳಿವುದೀತನ ದೋಷವಲ್ಲಿದು
ತಿಳಿದೆವಾವರ್ಜುನನು ಗಡ ನಾ-
[3]ವಳುಕ[3]ಲೇಕಿನ್ನೆನುತ ಬೋಧಿಸಿದನು ಹಲಾಯುಧನ ॥ ೨೬೮ ॥

ಹರಿಸಹಿತ ಬಲರಾಮನತ್ತಲು
ತಿರುಗಿದನು ಪವಮಾನಜವದಲಿ
ಪುರಕೆ ಬಂದನು ಪಾರ್ಥ ಪಯಣದಮೇಲೆ ಪಯಣದಲಿ ।
ಪುರದ [1]ಬಹಿರು[1]ದ್ಯಾನದಲಿ ಸಂ-
ವರಿಸಿ ರಥವನು ನಿಲಿಸಿ ನೆಳಲಲಿ
[2]ಪರಿಹೃತ[2]ಶ್ರಮನಾಗಿ ನಗುತ ಸುಭದ್ರೆಗಿಂತೆಂದ ॥ ೨೬೯ ॥

ಅರಮನೆಗೆ ನಡೆ ದ್ರುಪದನಂದನೆ
ಕರಸಿದರೆ ನೀ ಹೋಗು ನಿರುತವ-
ನಱುಹದಿರು ತುಱುಗಾಹಿಗಳ ಮಗಳೆಂದು ನುಡಿ ಸಾಕು ।
ಅರಸಿ ಮಿಗೆ ಮನ್ನಿಸುವಳಲ್ಲಿರು
ಕರಸಿಕೊಂಬೆನು ಬಳಿಕವೆಂದೀ
ಸರಸಿಜಾಕ್ಷಿಯ ಕಳುಹಿದನು ನಿಜರಾಜಮಂದಿರಕೆ ॥ ೨೭೦ ॥

ಕರಸಿ ಕಾಣಿಸಿಕೊಂಡು ಪಾಂಡವ-
ರರಸಿ ಬೆಸಗೊಳಲೀಕೆ ಪಾರ್ಥನ
ಪರುಠವದ ಮಾತುಗಳನೆಂದಳು ನಗೆಯ ಮೊಳೆ ಮಿನುಗೆ ।
ಸುರಭುಜಂಗನ ವಧುವೊ ನೀ ಮೇ-
ಣರಸು ಮಗಳೋ ತಂಗಿ ನೀ ಗೊ-
ಲ್ಲರ ಮಗಳೆ ಹುಸಿಯೆನುತ ತಲೆದೂಗಿದಳು [1]ಪಾಂಚಾಲಿ[1] ॥ ೨೭೧ ॥

---

೧೬೮. [3]ವಳುಪ (ಪ್ರ).
[ಅಳುಕು-ಸಂದೇಹಪಡು, ಶಂಕಿಸು].

೨೬೯. [1]ಬಹಿರೋ (ಕುಮಾ ಪೇ ಪ್ರ). [2]ಪರಿಗತ (ಕುಮಾ ಪೇ).
[ಪವಮಾನಜವ-ವಾಯುವೇಗ. ಪರಿಹೃತ-ಪರಿಹರಿಸಲ್ಪಟ್ಟ, ಹೋಗಲಾಡಿಸಲ್ಪಟ್ಟ].

೨೭೦. [ನಿರುತ-ನಿಜ. ತುರುಗಾಹಿ-ದನಕಾಯುವವನು].

೨೭೧. [1]ನೃಪರಾಣಿ (ಅ ಪ್ರ), ಸ್ತ್ರೀಪಾ (ಕುಮಾ).

ಅರಸ ಕೇಳೈ ದ್ರೌಪದಿಯು ಮನ
ಬರಿಸಿ ಬೇಱರಮನೆಯಲೀಕೆಯು-
ಸಿರಿಸಿವರು ಸೌಖ್ಯದಲಿ ಕಳೆದರು ಕಾಲವಿಭ್ರಮ[1]ವ[1] ।
ಇರಲಿರಲು ಪಾರ್ಥಗೆ ಸುಭದ್ರೆಗೆ
ವರ ಕುಮಾರಕ [2]ಜನಿಸಿದನು[2] ವಿ-
ಸ್ತರಣವಾಯ್ತಭಿಮನ್ಯುವಿನ ಜನನೋತ್ಸವಾಭ್ಯುದಯ ॥ ೨೬೨ ॥

ಜಾತಕರ್ಮದನಂತರದ ವಿ-
ಖ್ಯಾತನಾಮವಿಧಾನವನು ಸಂ-
ಪ್ರೀತಿಯಲಿ ಮಾಡಿದನು ಮುನಿ ಭೂಪತಿಯನುಜ್ಞೆಯಲಿ ।
ವೀತಭಯನಭಿಮನ್ಯುವೆನೆ ರಿಪು-
ಜಾತ ನಡುಗಿತು ಲೋಕ ಮೂಱಱೊ-
ಳೀತನುದಯದ ಕೀರ್ತಿ ಪಸರಿಸಿತರಸ ಕೇಳೆಂದ ॥ ೨೬೩ ॥

ಯಮಸುತಗೆ ಭೀಮಗೆ ಕಿರೀಟಿಗೆ
ಯಮಳರಿಗೆ ಸುಕುಮಾರಕರು ನಿಜ
ರಮಣಿಯಲಿ ಜನಿಸಿದರು [1]ಶ್ರುತ[1]ಸೋಮಕನು ಪ್ರತಿವಿಂಧ್ಯ ।
ವಿಮಲ *ಶ್ರುತಕೀರ್ತಿ ಪ್ರತಾಪೋ-
ತ್ತಮನು ಶ್ರುತಸೇನಾಖ್ಯನುರು ವಿ-
ಕ್ರಮ ಶತಾನೀಕಾಭಿಧಾನರು *ದ್ರುಪದ ತನುಜೆಯಲಿ ॥ ೨೬೪ ॥

ಇವರು ಕಳುಹಿದ ಹರುಷ ವಾರ್ತಾ-
ಶ್ರವಣ ರಸದಲಿ [1]ಮನಮುಳುಗಿ[1] ಯಾ-
ದವಶಿರೋಮಣಿ ರಾಮವಸುದೇವಾದಿಗಳು ಸಹಿತ ।
ಇವರ ಪುರಕೈತಂದರಿವರು-
ತ್ಸವದಲಿದಿರ್ಗೊಂಡೊಸಗೆಯಲಿ ಬಾಂ-
ಧವರ ಸಂಭಾವಿಸಿದರೈ ಯಮನಂದನಾದಿಗಳು ॥ ೨೬೫ ॥

---

೨೬೨. [1]ದ (ಅ), ಸ್ವೀಪಾ (ಕುಮಾ ಪ್ರ). [2]ನುದಿಸಿದನು (ಕುಮಾ ಪೇ).
[ಕಾಲವಿಭ್ರಮ-ಕಾಲಚಕ್ರದ ತಿರುಗುವಿಕೆ, ಕಾಲದ ಅವಧಿ].

೨೬೪. [1]ಸುತ (ಪ್ರ).
[ನೋಡಿ—ಪುರಾಣನಾಮ ಚೂಡಾಮಣಿ. ಪು. ೬೧೦. (ಧರ್ಮರಾಯನ ಮಗ ಪ್ರತಿವಿಂಧ್ಯ, ಭೀಮನ ಮಗ ಶ್ರುತಸೋಮ, ಅರ್ಜುನನ ಮಗ ಶ್ರುತಕೀರ್ತಿ, ನಕುಲನ ಮಗ ಶತಾನೀಕ ಮತ್ತು ಸಹದೇವನಮಗ ಶ್ರುತಸೇನ].

೨೬೫. [1]ಮುಳುಗಿ (ಅ), ಸ್ವೀಪಾ (ಪ್ರ ಕುಮಾ).

ಅರಸಸಹಿತ ಸಮಸ್ತ ಯಾದವ
ಪರಿಕರದ ಮೇಳದಲಿ ಯಾದವ-
ರರಸ ಬಿಜಯಂಗೈದು ಕುಂತೀಸುತರ ಭವನದಲಿ ।
ಅರಸಿಯರ ಸುಕುಮಾರವರ್ಗವ
ಕರಸಿ ಕಾಣಿಸಿಕೊಂಡು ದಿವ್ಯಾ-
ಭರಣ ವಸನಾದಿಯಲಿ ಮನ್ನಿಸಿದನು ಮಹೀಶ್ವರರ ॥ ೨೭೬ ॥

---

೯. ಖಾಂಡವವನ ದಹನ

ಅರಸ ಕೇಳೈ ಕೆಲವು ದಿನ ಸಂ-
ಚರಿಸಿ ಸೌಖ್ಯದೊಳಿರ್ದು ತಮ್ಮಯ
ಪುರಕೆ ಬಲಭದ್ರನನು ಯಾದವರಾಯ ದಳಸಹಿತ ।
ಹರಿ ಸಮಾಧಾನದಲಿ ಕಳುಹಿಸಿ
ನರನೊಡನೆ ವೈಹಾಳಿ ಮೃಗಯಾ
ವರ ವಿಹಾರದೊಳಿರ್ದನಿಂದ್ರಪ್ರಸ್ಥ ನಗರಿಯಲಿ ॥ ೨೭೭ ॥

ಹರಿಧನಂಜಯರೊಂದುದಿನ ಮೃಗ-
ಹರಣ ಕೇಳಿಕಲಾಪದಲಿ ಸಂ-
ಚರಿಸಿ ಬನದಲಿ ಬಹಳ ಮಾರ್ಗಶ್ರಮದ ಭಾರದಲಿ ।
ಬರುತ ನೀರಡಿಸಿದರು ಕಂಡರು
ಸರಸಿಯನು ರಥವಿಳಿದು ನೆಳಲಲಿ
ಪರಿಹೃತಶ್ರಮರಾಗೆ ಹರಿ ಹೊಕ್ಕನು ಸರೋವರವ ॥ ೨೭೮ ॥

---

೨೭೬. [ವಸನ-ವಸ್ತ್ರ, ಬಟ್ಟೆ].

೨೭೭. [ವೈಹಾಳಿ-ಕುದುರೆಯ ಮೇಲೆ ಕುಳಿತು ವಿಹಾರ. ಮೃಗಯಾ ವಿಹಾರ-ಬೇಟೆಯ ವಿನೋದ].

೨೭೮. [ನೀರಡಿಸು-ಬಾಯಾರಿಕೆ ಹೊಂದು].

ಆ ಸಮಯದಲಿ ಬಂದನೊಬ್ಬನು
ಭೂಸುರನು ಕಿಡಿಗಳ ತುಷಾರದ
ಮೀಸೆಗಡ್ಡದ ಸುಳಿವಲೆಯ ಕರ್ಬೊಗೆಯ ಜುಂಜುಗಳ ।
ಬಾಸರದ ಬಳಲುಡಿಗೆ ಮಟ್ಟೆಯ
ಧೂಸರದ ಮೈದೊಡಿಗೆ ಮೆಱೆಯೆ ವಿ-
ಲಾಸದಲಿ ನಡೆತಂದನರ್ಜುನದೇವನಿದ್ದೆಡೆಗೆ || ೨೭೯ ||

ಹರಸಿದನು ವೇದಾರ್ಥವನು ವಿ-
ಸ್ತರಿಸಿ ಕೊಂಡಾಡಿದನು ವಿಪ್ರನ
ಪರಮ [1]ಯೋಗ್ಯ[1]ತೆಗಾರು ಸರಿ ಪರಮೇಷ್ಠಿ ಹೊಱಗೆನುತ ।
ಬರವಿದೇನೆನಗೇನನುಗ್ರಹ
[2]ವರಿಸಿರೇ[2] ನಿಮ್ಮಿಷ್ಟವನು ಗೋ-
ಚರಿಸುವೆನು ನಿಮಗೆಂದು ನುಡಿದನು ಪಾರ್ಥ ವಿನಯದಲಿ || ೨೮೦ ||

ಪಾರ್ಥ ಕೇಳತಿಗಹನವೇ ಗ್ರಾ-
ಸಾರ್ಥಿಗಳು ನಾವಾದೆ[1]ವೆಮ್ಮ-
ಸ್ವಾರ್ಥ ಸಿದ್ಧಿ[1]ಯ ಘಟಿ[2]ಸು ಸಾಕು ಸಮಸ್ತ[2] ಫಲವಹುದು ।
ತೀರ್ಥವೇಕಿನ್ನತಿಥಿಯಿರಲು ಪ-
ರಾರ್ಥ [3]ಸಾಧಕ[3]ತನವೆ ಪರಮ
ಸ್ವಾರ್ಥವೆಂಬರು ಸುಜನರೆಂದನು ಕಪಟದ್ವಿಜ ನಗುತ || ೨೮೧ ||

---

೨೭೯. [ತುಷಾರ-ಹನಿ. ಜುಂಜು-ಒರಟಾದ ಗುಂಗುರು ಕೂದಲು. ಬಾಸರದ ಬಳಲುಡಿಗೆ-ಜೋತುಬಿದ್ದು ಉಟ್ಟಿರುವ ವಸ್ತ್ರ (ಕಚ್ಚೆಪಂಚೆ). ಮಟ್ಟೆ-ಮಣ್ಣು. ಧೂಸರ-ಧೂಳು. ಮೈದೊಡಿಗೆ-ಮೈಯ ಒಡವೆ].

೨೮೦. [1]ಪೂಜ್ಯ (ಅ), ಸ್ವೀಪಾ (ಪ್ರ). [2]ವರಿಸಿದರೆ (ಕುಮಾ ಪೇ).
[ವರಿಸು-ಅಪೇಕ್ಷಿಸು, ಆಯ್ದುಕೊ. ಗೋಚರಿಸು-ಕೈಗೂಡಿಸು].

೨೮೧. [1]ವೆಮ್ಮಯ ಸ್ವಾರ್ಥಸಿದ್ಧಿ (ಪ್ರ). [2]ಸಿತಲಾ ಸಮಗ್ರ (ಪ್ರ), ಸು ಸಾಕು ಸಮಗ್ರ (ಕುಮಾ ಪೇ). [3]ಸಾಧನ (ಕುಮಾ ಪೇ).
[ಗಹನ-ಕಷ್ಟಸಾಧ್ಯ. ಗ್ರಾಸಾರ್ಥಿ-ಆಹಾರವನ್ನು ಬೇಡುವವನು. ಘಟಿಸು-ಉಂಟುಮಾಡು. ತೀರ್ಥ-ತೀರ್ಥಯಾತ್ರೆ. ಪರಾರ್ಥಸಾಧಕತನ-ಇನ್ನೊಬ್ಬರಿಗೆ ಪ್ರಯೋಜನವನ್ನು ದೊರಕಿಸಿಕೊಡುವುದು. ಕಪಟದ್ವಿಜ-ಬ್ರಾಹ್ಮಣ ವೇಷಧಾರಿ].

ಕೊಟ್ಟೆನೆಂದನು ಪಾರ್ಥನಿವರೊಡ-
ಬಟ್ಟರೀ ನುಡಿಗೇಳಿ ದನುಜಘ-
ರಟ್ಟ ಬಂದನು ಹದನನಱಿದನು ಹವ್ಯವಾಹನನ ।
ಕೊಟ್ಟುದೇನು ಕಿರೀಟಿಯಿವರೀ
ಮುಟ್ಟಿದರೆ ಮುನಿವವರಲೇ ನೀ
ಕೊಟ್ಟುದುಣಬಡಿಸುವುದು ಭಾರವಿದೆಂದನಸುರಾರಿ ॥ ೨೮೨ ॥

[1]ಮೂರ್ಖ[1]ನಾದೈ ಪಾರ್ಥ ಬರ್ಹಿ-
ರ್ಮುಖರ ಬಾಣಸದಾತನೀತನು
ಸುಖವೆ ಹೇಳೈ ತಂದೆ ಖಾಂಡವವನದ ನಿರ್ದಹನ ।
ನಿಖಿಳ ನಿರ್ಜರ ಬಲ[2]ಸಹಿತ[2] ಶತ-
ಮುಖನೊಡನೆ ವಿಗ್ರಹವಲಾ ಸಂ-
ಮುಖಕೆ ಬಂದುದು ಭಂಗವೆಂದನು ನಗುತ ಮುರವೈರಿ ॥ ೨೮೩ ॥

ಭಂಗವೇಕೈ ಕೃಷ್ಣ ನಿರ್ಜರ-
ಪುಂಗವನ ಗೆಲಿದವನ ಬಾಣಸಿ-
ಗಂಗೆ ಬಾಣಸ ಮಾಡುವೆನು ಖಾಂಡವ ಮಹಾವನವ ।
ಅಂಗವಣೆಯನು ನೋಡು ನೀನೇ-
ಕಾಂಗದಲಿ ನಿರ್ವಹಿಸುವೆನು ಭಯ
ಭಂಗವುಂಟೇ ನಿನ್ನ ಕೃಪೆಯಿರಲೆಂದನಾ ಪಾರ್ಥ ॥ ೨೮೪ ॥

---

೨೮೨. [ದನುಜಘರಟ್ಟ-ರಾಕ್ಷಸರನ್ನು ಧ್ವಂಸಮಾಡುವವನು. ಹದನು-ಸಮಾಚಾರ. ಹವ್ಯವಾಹನ-ಅಗ್ನಿ. ಕಿರೀಟಿ-ಅರ್ಜುನ].

೨೮೩. [1]ಮುಖರ (ಕುಮಾ ಅ ಪೇ), ಸ್ವೀಪಾ (ಪ್ರ). [2]ದೊಡನೆ (ಅ ಪ್ರ), ಸ್ವೀಪಾ (ಕುಮಾ).

[ಬರ್ಹಿರ್ಮುಖ-ದೇವತೆ. ಬಾಣಸದಾತ-ಅಡಿಗೆಯವನು. ಶತಮುಖ-ಇಂದ್ರ. ನಿರ್ದಹನ-ಸುಡುವಿಕೆ. ವಿಗ್ರಹ-ಯುದ್ಧ. ಭಂಗ-ನಾಶ].

೨೮೪. [ನಿರ್ಜರಪುಂಗವ-ಇಂದ್ರ. ಅಂಗವಣೆ-ರೀತಿ. ನಿರ್ಜರ ಪುಂಗವನ ಗೆಲಿದವನು-ಇಂದ್ರನನ್ನು ಗೆದ್ದವನು (ಇಂದ್ರಜಿತು, ವಜ್ರಾಂಗ ?), ಅವನ ಬಾಣಸಿಗ-ಅಗ್ನಿ. ಬಾಣಸು-ಅಡಿಗೆ. ಏಕಾಂಗದಲಿ-ಒಂಟಿಯಾಗಿ].

ಮೆಚ್ಚಿದನು ಘೃತ[1]ಯೋನಿ[1] ಪೂತುರೆ
ನಿಚ್ಚಟನು ಸೀನೆನುತ [2]ಶಿಖಿಗಳ[2]
ಬಿಚ್ಚಲುದಿರ್ದವು ಚಾಪಮಾರ್ಗಣರಥತುರಂಗಚಯ ।
ಅಚ್ಚರಿಯನೇನೆಂಬೆನೈ ಸ-
ಪ್ತಾರ್ಚಿಯಿತ್ತನು [3]ವರವ[3]ನಿಂದ್ರನ
ಮುಚ್ಚುಮರೆಯೇಕಿನ್ನು ನಮಗುಣಬಡಿಸು ಸಾಕೆಂದ ॥ ೨೮೫ ॥

ಧರಣಿಪತಿ ಕೇಳಗ್ನಿಯಿತ್ತನು
ಹರಿಧನಂಜಯರಿಗೆ ರಥಂಗಳ-
ನುರು ಶರಾವಳಿ ದಿವ್ಯಧನು ಕೌಮೋದಕೀ ಗದೆಯು ।
ವರ ತನುತ್ರ ಸಿತಾಶ್ವವಕ್ಷಯ
ಶರ ನಿಷಂಗಾದಿಗಳನಿವರು-
ಬ್ಬರಿಸಿದರು ಹರುಷದಲಿ ನನೆದರು [1]ನಯನ[1]ವಾರಿಯಲಿ ॥ ೨೮೬ ॥

ದಾಳಿಯಿಟ್ಟನು ಸುರವನಕೆ ಸುರ-
ಜಾಲ ಜಡಿದುದು ಬೊಬ್ಬೆಯಲಿ ದೆ-
ಖ್ಖಾಳಿಸಿದುದುತ್ಪಾತಶತ ಖಾಂಡವದ ಮಧ್ಯದಲಿ ।
ಕೂಳಿಗಳ ಕುಡಿಮೀನವೊಲ್ವಿಹ-
ಗಾಳಿ ಹುದುಗಿತು ನಡುಗಿದರು ವನ-
ಪಾಲಕರು ಸಿಂದೊಣಗಿದವು ಹರಿಚಂದನಾದಿಗಳು ॥ ೨೮೭ ॥

---

೨೮೫. [1]ಯೋಗಿ (ಪ್ರ). [2]ಕಿಡಿಗಳ (ಕುಮಾ ಪೇ). [3]ವನವ (ಕುಮಾ ಪೇ).
[ಚಾಪ-ಬಿಲ್ಲು. ಮಾರ್ಗಣ-ಬಾಣ. ತುರಂಗಚಯ-ಕುದುರೆಗಳ ಸಮೂಹ. ಸಪ್ತಾರ್ಚಿ-ಅಗ್ನಿ. ಮುಚ್ಚುಮರೆ-ರಹಸ್ಯ, ಗೋಪ್ಯ, ಮರೆಸಿ ಇಡಬೇಕಾದದ್ದು. ಇಂದ್ರನ ಮುಚ್ಚುಮರೆ-ಇಂದ್ರನಿಂದ ಮರೆಸಿಡಬೇಕಾದದ್ದು].

೨೮೬. [1]ಪುಳಕ (ಅ ಪ್ರ), ಸ್ವೇದಾ (ಕುಮಾ).
[ತನುತ್ರ-ರಕ್ಷಾಕವಚ. ಸಿತಾಶ್ವ-ಬಿಳಿಯ ಕುದುರೆ. ಅಕ್ಷಯಶರನಿಷಂಗ-ಎಂದಿಗೂ ವ್ಯಯವಾಗದ ಬಾಣಗಳುಳ್ಳ ಬತ್ತಳಿಕೆ. ಉಬ್ಬರಿಸು-ಹಿಗ್ಗು. ನಯನವಾರಿ-ಕಣ್ಣೀರು].

೨೮೭. [ದೆಖ್ಖಾಳಿಸು-ಅತಿಶಯವಾಗು. ಉತ್ಪಾತ-ಅಪಶಕುನ. ಕೂಳಿ-ಮೀನು ಹಿಡಿಯುವ ಬುಟ್ಟಿ. ಹುದುಗು-ಅಡಗಿಕೊ. ಹರಿಚಂದನ-ಒಂದು ಬಗೆಯ ಶ್ರೀಗಂಧವೃಕ್ಷ].

ಹೈ ಸಮಗ್ರಾತಿಥ್ಯದಲಿ ನಿಮ-
ಗೀ ಸಮಸ್ತ ಪ್ರಾಣಿಸಹಿತ ಸು-
ರೇಶನುದ್ಯಾನವನು ಕೊಟ್ಟೆನು ಬಾಣಧಾರೆಯಲಿ ।
ನೀ ಸಮಾಧಾನದಲಿ ಸುಪುರೋ-
ಡಾಶವಿದೆ ಸಮಿದಾಜ್ಯಸಹಿತ ಸ-
ಮಾ[1][ಶ][1]ವಿಸ್ತಾರವನು ಕೊಂಬುದು ಭೀತಿ ಬೇಡೆಂದ ॥ ೨೮೮ ॥

ಎನುತ ಬಿಡೆ ತಿರುವಾಯನೊದೆದು-
ಬ್ಬಿನಲಿ ಬೊಬ್ಬಿರಿದಂಬು ಸುರಪನ
ವನವ ಮುತ್ತಿತು ಕೂಡೆ ಹೊತ್ತಿತು ಹೊಗೆಯು ಹೊರಳಿನಲಿ ।
ತನಿಗಿಡಿಯು ದಳ್ಳುರಿಯ ನಾಲಗೆ-
ಗೊನೆಯೊಳಲ್ಲಾಡಿದವು ಕಡು ಲಾ-
ಗಿನಲಿ [1]ಲಂಬಿಸಿ[1] ಚುಂಬಿಸಿದುದುರಿ ಲಲಿತನಂದನವ ॥ ೨೮೯ ॥

ಹೊಗೆಯು ಬಳಿಯಲಿ ತಳಿತ ಹುಯ್ಯಲ
ಬೆಗಡಿದೇನೋ ಕೇಳೆನುತ ಸಿರಿ-
ಮೊಗದ ಬೆಳಗಿನ ಸಾವಿರಾಲಿಗಳೊಗುವ ಕಿಡಿಗಳಲಿ ।
ಹಗೆಗಳಾರು ನಿವಾತಕವಚಾ-
ದಿಗಳೊ ತಾನಾರೆಂಬ ಶಕ್ರನ
ದುಗುಡವನು ದೇವಾಳಿ ಕಂಡುದು ದೂರಿದುದು ನರನ ॥ ೨೯೦ ॥

ನಿನಗೆ ಮಗನೇ ಪಾರ್ಥ ನಿನ್ನರ-
ಮನೆಯು [1]ಗೋಟನ ನಾಯಕನೆ[1] ಶಿಖಿ
ಅನುಜನೇ ಮುರವೈರಿ ನಿನಗನುಕೂಲರಾದರಲೇ ।

---

೨೮೮. [1]ಸ (ಅ ಕುಮಾ ಪ್ರ).
[ಪುರೋಡಾಶ-ಯಜ್ಞದಲ್ಲಿ ಅರ್ಪಿಸುವ ಅಕ್ಕಿ ಹಿಟ್ಟು, ಹವಿಸ್ಸು. ಸಮಿದಾಜ್ಯ (ಸಮಿತ್ತು + ಆಜ್ಯ)-ಸಮಿತ್ತು ಮತ್ತು ತುಪ್ಪ. ಸಮಾಶ (ಸಂ + ಅಶ)-ಒಳ್ಳೆಯ ಭೋಜನ, ಆಹಾರ].

೨೮೯. [1]ಬಂಧಿಸಿ (ಅ), ಸ್ವೀಪಾ (ಕುಮಾ ಪ್ರ).
[ತಿರುವಾಯ್-ಬಿಲ್ಲಿನ ಹೆದೆ. ಹೊರಳಿ-ಸಮೂಹ, ಮೊತ್ತ. ತನಿಗಿಡಿ-ಕಳಕಳಿಸುವ ಕಿಡಿ. ದಳ್ಳುರಿ-ಚಾಚಿದ ಉರಿ. ಲಾಗು-ನೆಗೆತದ ಆಧಿಕ್ಯ, ಹೆಚ್ಚಳ].

೨೯೦. [ತಳಿತ-ಉಂಟಾದ, ಕಾಣಿಸಿಕೊಂಡ. ಬೆಗಡು-ಭಯ].

೨೯೧. [1]ಬಾಣಸದಾತನೇ (ಕುಮಾ ಪೇ).

ಬನದ ಬೇಗೆಯೊ ಪರಿಭವಾಲಂ-
ಬನದ ಸೋಗೆಯೊ ಬಂದುದಿದೆ ಬಿಡು
ಮನೆಯ ಮನ್ನೆಯ ಗಂಡನಾಗೆಂದುದು ಸುರಸ್ತೋಮ ॥ ೨೯೧ ॥

ಐಸಲೇ ನಮ್ಮವರಲಾ ಹೋ
ಹೋ ಸುರರು[1] ಹೊಕ್ಕಳಿಸ[1]ದಿಱಿಯಾ
ಪೈಸನಾಹುತಿಗೊಳಲಿ ಪಾವಕ ನಮ್ಮ ಖಾಂಡವವ ।
ಈ ಸುರರಿಗಾ ನರರಿಗಂತರ-
ವೇಸು ಪೂತುರೆ ಕಾಲಗತಿಯೆನು-
ತಾ ಸುರೇಶ್ವರ ಖಾತಿಗೊಂಡನು ಕೃಷ್ಣಪಾರ್ಥರಿಗೆ ॥ ೨೯೨ ॥

ಕಾಹು ತೆಗೆಯಲಿ ಕಲ್ಪಮೇಘ-
ವ್ಯೂಹಗಳ ಬರಹೇಳು ಕಾಬೆನು
ಸಾಹಸವನಿದಱೊಳಗೆ ಕೃಷ್ಣಧನಂಜಯ ದ್ವಯದ ।
ಈ ಹದಕೆ [1]ಪಡಿಪ[ಚ್ಚ][1]ವಿಲ್ಲವ-
ಗಾಹಿಸಲಿ ಖಾಂಡವವ ಹುಲ್ಲೆಯ
ಹೂಹೆಗಳು ಹೆಬ್ಬುಲಿಗೆ ಹಾಯ್ದವೆನುತ್ತ ಗರ್ಜಿಸಿದ ॥ ೨೯೩ ॥

ಅರಸ ಕೇಳ್ಕಲ್ಪಾಂತ ಮೇಘಘೋ-
ತ್ಕರದ ಪಾಳೆಯುವೆತ್ತಿ ಬಿಟ್ಟುದು
ಧರಣಿಯಗಲಕೆ ದಾಳಿಯಿಟ್ಟವು ಸಿಡಿಲುಮಿಂಚುಗಳು ।
ಕರಿಯ ಬಱಿಕೈಗೆಣೆಯೆನಿಪ ನಿ-
ಷ್ಠುರದ ಧಾರಾಸಾರ [1]ತೆರಳಿಚಿ[1]
ಸುರಿದುದಾ ಖಾಂಡವದ ಸೀಮಾಸನ್ನಿವೇಶದಲಿ ॥ ೨೯೪ ॥

---

೨೯೧. [ಗೋಟು-ಮರದ ಸೌಟು. ಪರಿಭವ-ಸೋಲು, ಅವಮಾನ. ಮನ್ನೆಯ-ಮಾನ್ಯನಾದವನು, ಗೌರವಕ್ಕೆ ಪಾತ್ರನಾದವನು].

೨೯೨. [1]ಕಳವಳಿಸ (ಕುಮಾ ಪೇ).
[ಹೊಕ್ಕಳಿಸು-ಹಿಂದೆಗೆ, ಹಿಂಜರಿ (?). ಇಱಿ-ತಿವಿ, (ತಿವಿದು) ಕೊಲ್ಲು, ಗಾಯಗೊಳಿಸು, ಚುಚ್ಚು. ಪಾವಕ-ಅಗ್ನಿ. ಖಾತಿ-ಕೋಪ].

೨೯೩. [1]ಪುಚ್ಚ (ಅ), ಪಚ್ಚ (ಕುಮಾ ಪೇ), ಪು ಛ (ಪ್ರ).
[ಕಾಹು-ರಕ್ಷಣೆ, ಕಾವಲು. ಕಲ್ಪಮೇಘವ್ಯೂಹ-ಪ್ರಳಯಕಾಲದ ಮೇಘಗಳ ಸಮೂಹ, ಒಡ್ಡು. ಕಾಬೆನು-ಕಾಣುತ್ತೇನೆ. ಹದ-ಸ್ಥಿತಿ. ಪಡಿಪಚ್ಚ-ಎದುರಾಳಿ, ಪ್ರತಿಪಕ್ಷ. ಅವಗಾಹಿಸು-(ಸುರಿಮಳೆಯಿಂದ) ಮುಳುಗಿಸಿಬಿಡು. ಹೂಹೆ-ಮರಿ].

೨೯೪. [1]ಭೋರನೆ (ಅ), ಸ್ತೀಪಾ (ಪ್ರ ಕುಮಾ).

ಕಲಹವಿಂದ್ರನ ಕೂಡೆ ಕಲ್ಪದ
ಮಳೆಗಳಿವು ಮಾಣಿಸಿದವುಟವ
[1]ನೆಳೆ[1]ದವಣಲಿನ ತುತ್ತನರ್ಜುನ ಕಾಯ್ದುಕೊಳ್ಳೆನಲು ।
ಮಳೆಗೆ ಶರಪಂಜರವ ವಿರಚಿಸಿ
ಬಳಿಕ ವಾಯುವ್ಯಾಸ್ತ್ರದಲಿ ನಿ-
ಷ್ಖಲಿತ ಮೇಘವ್ರಜವನೆಚ್ಚನು ಪಾರ್ಥ ಪಹಿಲದಲಿ ॥ ೨೯೫ ॥

ಏನ ಹೇಳುವೆನರಸ ಪಾರ್ಥನ-
ನೂನ ಶಕ್ತಿಯನುಜುಬಿಡನು ಪವ-
ಮಾನ ಶರದಲಿ ಪುಷ್ಕಲಾವರ್ತಾದಿ ಘನಘಟೆಯು ।
ಭಾನು ತಿಮಿರಂಗಳಿಗೆ ಮೇಘ ಮ-
ಹಾನಿಲಂಗಳಿಗಾವುದಂತರ
ಸೋನೆ ತೆಗೆದುದು ಹೊಗೆದುದಾ ಖಾಂಡವ ಮಹೋದ್ಯಾನ ॥ ೨೯೬ ॥

ಹಾಱಲೂದಿತು ಮೇಘವನು ಕಿಡಿ
ತೂಱಲುಬ್ಬರಿ[1]ಸಿತು ಮಹಾಗ್ನಿಯು[1]-
ನೇಱಿಸಿತು ಖಾಂಡವದೊಳಾ ಬಿಱುಗಾಳಿ ಸುಳಿಸುಳಿದು ।
ಮೋಱೆಯೊಣಗಿದುದಮರರಿಗೆ ವೈ-
ಮಾಱಿಗಳ ಸುಡು[2]ಮೂಲೆ[2]ಯುವದಿರು
ಮೀಱಿದರಲಾಯೆನುತ ಸುರಪತಿ ತರಿಸಿದನು ಗಜವ ॥ ೨೯೭ ॥

---

೨೯೪. [ತೆರಳಿಚಿ—ಅಧಿಕವಾಗಿ, ಹೆಚ್ಚಾಗಿ. ಬಱಿಕೈ—ಕೇವಲ ಸೊಂಡಿಲು (ಜೋಡಿಸಿದ ಸೊಂಡಿಲು). ನಿಷ್ಠುರದ—ಬಿರುಸಾದ. ಧಾರಾಸಾರ (ಧಾರಾ+ಆಸಾರ)—ಒಂದೇ ಸಮನೆ ಸುರಿಯುವ, ಧಾರಾಕಾರವಾಗಿ ಸುರಿಯುವ, ಜಡಿಮಳೆ. ಸೀಮಾ ಸನ್ನಿವೇಶ—ಎಲ್ಲೆಕಟ್ಟಿನ ಪ್ರದೇಶ].

೨೯೫. [1] ನೆಳೆ (ಕುಮಾ ಪೇ).
[ಅಣಲು—ದವಡೆ ಒಳಬಾಯಿ. ನಿಸ್ಖಲಿತ—ವ್ಯರ್ಥವಾಗದ, ಹುಸಿಯಾಗದ. ಎಚ್ಚನು—ಪ್ರಯೋಗಮಾಡಿದನು. ಪಹಿಲ—ವೇಗ].

೨೯೬. [ಪುಷ್ಕಲಾವರ್ತ—ಪುಷ್ಕಲ, ಆವರ್ತವೇ ಮುಂತಾದ ಮೋಡಗಳ ಸಮೂಹ. ಭಾನು—ಸೂರ್ಯ. ತಿಮಿರ—ಕತ್ತಲೆ. ಸೋನೆ—ಜಡಿಮಳೆ. ತೆಗೆದುದು—ನಿಮ್ಮಿಟ್ಟಿತು. ಹೊಗೆದುದು—ಸುಟ್ಟು ಹೊಗೆಯಾಡಿತು].

೨೯೭. [1] ನಿಡುದು ವಹ್ನಿಯು (ಕುಮಾ ಪೇ). [2] ಮೋಱೆ (ಅ).
[ವೈಮಾಱಿ—ವೈಮನಿಕನು. ಮೂಲೆಯುವದಿರು—ಕೆಲಸಕ್ಕೆ ಬಾರದವರು].

ಮಸಗಿತಮರವ್ರಾತ ವಭ್ರವ
ಮುಸುಕಿದುದು ಝಲ್ಲರಿಗಳಿಂದ್ರನ
[1]ವಿಸಸನಕೆ[1] ಮೆಚ್ಚಿಸುವೆ ವಸುಗಳ[2]ನೆಂದು ತಮತಮಗೆ[2] ।
ಮುಸುಕಿದವು ಮೃಗರಾಜ ಸಿಂಹದ
ಮುಸುಕನುಗಿವಂದದಲಿ ಬಾಣ-
ಪ್ರಸರವನು ಹರಹಿದರು ಮುಂದೆ ಘನಂಜಯಾಚ್ಯುತರ ॥ ೯೮ ॥

ತುಱುಗಿ ಕೂರಂಬುಗಳು ಮೈಯಲಿ
ಮುಱಿದ[1]ವ[1]ರ್ಜುನನೆಸುಗೆಯಲಿ [2]ಕೈ[2]
ಮಱೆ[3]ದುದಮರ ನಿಕಾಯ ಕೆದಱಿತು ದೊರೆಯು ಮನ್ನಿಸದೆ ॥
ಮುರಿದುದೀ ಕೃಷ್ಣಾರ್ಜುನರ ಬೊ-
ಬ್ಬಿಱಿತಕವರೆದೆಯೊಡೆಯಲಿಂದ್ರನ
ಮಱೆಯು ಹೊಕ್ಕುದು ದೇವಸಂತತಿ ಭೂಪ ಕೇಳೆಂದ ॥ ೯೯ ॥

ನರರು [1]ಹರಹಿದ[1] ಹವ್ಯಕವ್ಯೋ-
ತ್ಕರ ಹವಿರ್ಭಾಗವನು ತಿಂದು-
ಬ್ಬರಿಸಿ ದೇವಸ್ತ್ರೀಕದಂಬದ ಖೇಳಮೇಳದಲಿ ।
ಇರವು ನಿಮಗೀ ರೌದ್ರ ಬಾಣ-
ಸ್ಫುರಿತ ಕರ್ಕಶ ವಿಸ್ಫುಲಿಂಗೋ-
ತ್ಕರ[2]ದೊಳಗೆ ನೀವೇಕೆ[2]ಯೆಂದನು ನಗುತ ಕಲಿಪಾರ್ಥ ॥ ೧೦೦ ॥

---

೯೮. [1]ವಿಷಮುಸಮುರಕೆ (ಪ್ರ). [2]ನೆಸುತ (ಕುಮಾ ಪೇ); ನೆಂದು ತಮುಗೆ (ಪ್ರ).
[ಮಸಗು-ರೋಷಗೊಳ್ಳು. ಅಭ್ರ-ಆಕಾಶ. ಝಲ್ಲರಿ-ಮಕರತೋರಣ ಅಥವಾ ಛತ್ರಿ. ಮುಸುಕು-ಕವಿ, ಮುಚ್ಚು. ಉಗಿ-ಹೊರತೆಗೆ, ತೆಗೆದುಹಾಕು].

೯೯. [1]ನ (ಅ), ಸ್ವೀಪಾ (ಪ್ರ). [2]ಮೈ (ಅ), ಸ್ವೀಪಾ (ಪ್ರ).
[ತುಱುಗು-ತುಂಬು, ಕೂಱಂಬು-ಹರಿತವಾದ ಬಾಣ. ಮುಱಿ-ತುಂಡಾಗು, ಕತ್ತರಿಸಿಹೋಗು. ಕೈಮಱೆ[3]-ವಿಸ್ಮಯಗೊಳ್ಳು, ಬೆರಗಾಗು. ನಿಕಾಯ-ಸಮೂಹ. ಕೆದರು-ಚೆದರು, ಚೆಲ್ಲಾಪಿಲ್ಲಿಯಾಗು. ಮುರಿ-ಹಿಮ್ಮೆಟ್ಟು, ಹಿಂತಿರುಗು].

೧೦೦. [1]ರಚಿಸಿದ (ಕುಮಾ ಪೇ), [2]ದರ್ಝಳ ನಿಮಗೇಕೆ (ಕುಮಾ ಪೇ).
[ಹವ್ಯಕವ್ಯ-ದೇವತೆಗಳಿಗೆ ಹಾಗೂ ಪಿತೃಗಳಿಗೆ ಅರ್ಪಿಸುವ ಪದಾರ್ಥಗಳು. ಖೇಳ-ಕ್ರೀಡೆ. ಮೇಳ ಕೂಟ. ಸ್ಫುರಿತ-ಚಿಮ್ಮುವ. ಕರ್ಕಶ-ಘೋರವಾದ. ವಿಸ್ಫುಲಿಂಗೋತ್ಕರ-ಬೆಂಕಿಯ ಕಿಡಿಗಳ ಸಮೂಹ].

ಮುರಿದ ನಿರ್ಜರ ಸೇನೆಗಭಯದ
ಕರವ ನೆಗಹಿ ಕರೀಂದ್ರನನು ಶಿರ
ಬಿರಿಯ[1]ಲಂಕುಶದಿಂದಲೊತ್ತಿ[1] ಮಹೋಗ್ರಕೋಪದಲಿ ।
ನರ ಮುರಾಂತಕರಿದಿರಿನಲಿ ಮದ-
ಕರಿಯ ಬಿಟ್ಟನು ಶಕ್ರನಾತನ
ಬಿರುದ ಸಂಭಾವಿಸಿದರಭ್ರದ ಸೂತಮಾಗಧರು ॥ ೨೦೧ ॥

ಮರುಳನೈ ನೀನಿವರನಾ[1]ರ್ಯೆ-[1]
ದಱಿಯಲಾ ನಾರಾಯ[2]ಣನು[2] ಮುರ-
ಹರನು ನರನಲ್ಲಾ ಧನಂಜಯನಿವರು ಕಿಱುಕುಳರೆ ।
ಮರಳು ನೀನೆಂದಿಂದ್ರನಾನೆಯ
ತಿರುಹಿದನು ಪರಮೇಷ್ಠಿಯಿತ್ತಲು
ಧರಣಿಪತಿ ಕೇಳನಲಕೇಳಿಯನಾ ವನಾಂತರದಲಿ ॥ ೨೦೨ ॥

ಜಂಬು ಚೂತ ಪಲಾಶ ವಟ ದಾ-
ಳಿಂಬ ಬಿಲ್ವ ತಮಾಲ ಚಂಪಕ
ನಿಂಬ ಬಕುಳ ಕಪಿತ್ಥ ಕುಟಜವಶೋಕ ಪುನ್ನಾಗ ।
ತುಂಬುರರಳಿ ಲವಂಗ ಪೂಗ ಕ-
ದಂಬ ಗುಗ್ಗುಳ ಸಾಲ ತಿಲಕೌ-
ದುಂಬರಾದಿ ದ್ರುಮಕುಲವನಾಲಿಂಗಿಸಿತು ವಹ್ನಿ ॥ ೨೦೩ ॥

---

೨೦೧. [1]ಲಂಕುಶ ಮೊನೆಯೊಳೊತ್ತಿ (ಕುಮಾ ಪೇ).
[ಸಂಭಾವಿಸಿದರು–ಹೊಗಳಿದರು. ಸೂತಮಾಗಧರು–ಹೊಗಳುಭಟರು].

೨೦೨. [1]ರೆಂ (ಕುಮಾ ಪೇ ಪ್ರ). [2]ಣನನು (ಅ ; ಈ ಪಾಠದಲ್ಲಿ 'ನ' ಅಧಿಕಾಕ್ಷರವಾಗಿದ್ದು, ಛಂದೋಭಂಗವಾಗಿದೆ).
[ಆರ್ಯೆ–ವಿಚಾರಮಾಡು. ಕಿಱುಕುಳ–ಅಲ್ಪನಾದವನು, ಕ್ಷುದ್ರಮನುಷ್ಯ, ಸಾಮಾನ್ಯ ಮನುಷ್ಯ. ಅನಲಕೇಳಿ–ಅಗ್ನಿಯ ಕ್ರೀಡೆ, ಬೆಂಕಿಯ ಆಟ].

೨೦೩. [ಜಂಬು–ನೇರಳೆ. ಪಲಾಶ–ಮುತ್ತುಗ. ವಟ–ಆಲ. ತಮಾಲ–ಹೊಂಗೆ. ಬಕುಳ–ಒಂದು ಜಾತಿಯ ಮರ (ನಾಗಕೇಸರ). ಕಪಿತ್ಥ–ಬೇಲ. ಕುಟಜ–ಬೆಟ್ಟ ಮಲ್ಲಿಗೆ. ಅಶೋಕ–ಒಂದು ಜಾತಿಯ ವೃಕ್ಷ. ಪುನ್ನಾಗ–ಸುರಹೊನ್ನೆ. ತುಂಬುರ–ಕಾಡುಮಾವಿನ ಮರ. ಪೂಗ–ಅಡಿಕೆಮರ. ಕದಂಬ–ಒಂದು ಜಾತಿಯ ವೃಕ್ಷ (ಕಡಹದ ಮರ). ಗುಗ್ಗುಳ–ಧೂಪದ್ರವ್ಯವನ್ನು ಕೊಡುವ ಒಂದು ಜಾತಿಯ ಮರ. ಸಾಲ–ಒಂದು ಜಾತಿಯ ಮರ (=ಮತ್ತಿ). ತಿಲಕ–ಒಂದು ಜಾತಿಯ ಮರ. ಔದುಂಬರ–ಖೂರಗದ ಮರ. ದ್ರುಮ–ಮರ. ವಹ್ನಿ–ಅಗ್ನಿ, ಬೆಂಕಿ].

ಕುರುಳ ತುಂಬಿಯು ತನಿಗೆವಱೆ ಮುಖ-
ಸರಸಿಜವ ಚುಂಬಿಸಿ ತಮಾಲದ
ತುಱುಬ ಹಿಡಿದಧರ ಪ್ರವಾಳವ ರಸವ[1]ನುಱೆ ಪೀರ್ದು[1] ।
ಉರು ಪಯೋಧರ ಬಿಲ್ವವನು ಹೊ-
ಯ್ವೊರಸಿ ಕದಳಿಯು ನುಣ್ದೊಡೆಯು ನಿ
ಟ್ಟೊರಸಿ ರಮಿಸಿತು ವನಸಿರಿಯು ಪಿಪ್ಪಲದಳಾಂಗದಲಿ ॥ ೧೦೪ ॥

ಧರಣಿಪತಿ ಕೇಳ್ ಶರಭ ಮೃಗಪತಿ
ಕರಿ ಕಳಭ ಶಾರ್ದೂಲ ಸೂಕರ
ಕರಡಿ ಕಾಸರ ಶಲ ಮೃಗಾವನ ಖಡ್ಗಿ ಗೋಮಾ'ಯು' ।
ಎರಳೆ ಮೊಲ ಸಾರಂಗ ಮೊರೆ ವಾ-
ನರ ಕುರಂಗ ಪ್ರಮುಖ ಮೃಗಕುಲ
ಉಱುಬಿ ಬಿದ್ದುದು ಪಳ್ಳುರಿಯು ಬೆಳ್ಳಾರವಲೆಗಳಲಿ ॥ ೧೦೫ ॥

ಶುಕ ಮರಾಳ ಮಯೂರ ಟಿಟ್ಟಿಭ
ಪಿಕ ಚಕೋರ ಕಪೋತ ವಾಯಸ
ಬಕ ಪದಾಯುಧ ಚಕ್ರವಾಕ ಕಳಿಂಗ ಕಲವಿಂಕ ।
ಕುಕಿಲ ಸಾರಸ ಕಾಕರಿಪು ಚಾ-
ತಕ ಭರದ್ವಾಜಾದಿ ಪಕ್ಷಿ
ಪ್ರಕರ ಬಿದ್ದುದು ಬಿಗಿದ ಕೇಸುರಿ ಕಣ್ಣವಲೆಗಳಲಿ ॥ ೧೦೬ ॥

---

೧೦೪. [1] ನೆರೆಸವಿದು (ಕುಮಾ ಪೇ).

[ತನಿಗೆವಱು-ಹೆಚ್ಚಾಗಿ, ಚೆಲ್ಲಾಪಿಲ್ಲಿಯಾಗಿ, ಚಿವರಿಸು. ಪ್ರವಾಳ-ಹವಳ, ಪಯೋಧರ-ಸ್ತನ, ಮೊಲೆ. ಕದಳಿ-ಬಾಳೆ. ಪಿಪ್ಪಲ-ಅರಳಿ. ವನಸಿರಿ-ವನಶ್ರೀ, ವನಲಕ್ಷ್ಮಿ. ದಳ-ಎಲೆ. ಅಂಗ-ಅವಯವ].

೧೦೫ [ಶರಭ-ಒಂದು ಕಾಲ್ಪನಿಕ ಉಗ್ರವಾದ ಪ್ರಾಣಿ. ಮೃಗಪತಿ-ಸಿಂಹ. ಕಳಭ-ಆನೆಮರಿ ಶಾರ್ದೂಲ-ಹುಲಿ. ಸೂಕರ-ಹಂದಿ. ಕಾಸರ-ಕಾಡುಕೋಣ. ಶಲ-ಮುಳ್ಳುಹಂದಿಯ ಮುಳ್ಳು. ಗೋಮಾಯು-ನರಿ. ಎರಳೆ, ಸಾರಂಗ, ಮರೆ, ಕುರಂಗ-ಬೇರೆ ಬೇರೆ ಜಾತಿಯ ಜಿಂಕೆಗಳು. ಉಱುಬಿ-ರಭಸದಿಂದ, ಬೇಗ ಬೇಗನೆ. ಬೆಳ್ಳಾರವಲೆ-ವಿಸ್ತಾರವಾಗಿ ಹರಡುವ ಬಲೆ].

೧೦೬ [ಶುಕ-ಗಿಣಿ ಮರಾಳ-ಹಂಸ. ಮಯೂರ-ನವಿಲು. ಟಿಟ್ಟಿಭ-ಒಂದು ಜಾತಿಯ ಪಕ್ಷಿ ಪಿಕ-ಕೋಗಿಲೆ ಚಕೋರ-(ಬೆಳದಿಂಗಳನ್ನು ಸೇವಿಸುತ್ತದೆ ಎನ್ನಲಾದ) ಒಂದು ಬಗೆಯ ಪಕ್ಷಿ ಕಪೋತ-ಪಾರಿವಾಳ. ವಾಯಸ-ಕಾಗೆ. ಬಕ-ಕೊಕ್ಕರೆ ಜಾತಿಯ ಪಕ್ಷಿ. ಪದಾಯುಧ-ಕೋಳಿಯ ಹುಂಜ. ಚಕ್ರವಾಕ-ಒಂದು ಬಗೆಯ

ಝುಳಕೆ ತಿಳಿಗೊಳದುದಕ ಕಾದು-
ಚ್ಚಳಿಸಿದವು ತನಿಗುದಿದು ಮತ್ಸ್ಯಾ-
ವಳಿಗಳಂಬುಜದೆಸಳು ಸೀದವು ತುಂಬಿಗಳು ಸಹಿತ ।
ಹಿಳಿದು ಸಿಡಿದವು ಚಾರು ಚಂದ್ರೋ-
ತ್ಪಲ ರಚಿತ ಸೋಪಾನ ರತುನಾ-
ವಳಿಯ ರಾಸಿಗಳದ್ದಿಲಾದವು ಬಿದ್ದ ಕಿಡಿಗಳಲಿ || ೩೦೭ ||

ಹೊಗೆಯ ಹಬ್ಬುಗೆ ಸತ್ಯಲೋಕವ-
ನುಗಿದುದುರಿನಾಲಗೆಯ ಗರವ-
ಟ್ಟಗೆಯ ತೊಳಲಿಕೆ ತೆರಳಿ[1]ಚಿ[1]ತು ತೆತ್ತೀಸ ಕೋಟಿಗಳ ।
ಹಗಲ ಕಡಿತಕೆ ಹೊಕ್ಕ[2]ದೊಕ್ಕಡೆ[2]
[3]ಮುಗಿಲು[3] ಕಾಣೆನು ದಿವ[4]ವ[4]ವೆತ್ತಣ
ಗಗನಮಣಿ ನಕ್ಷತ್ರ ಚಂದ್ರಮುರರಸ ಕೇಳೆಂದ || ೩೦೮ ||

ಅರಸ ಕೇಳ್ಳೈ ಮುನ್ನ ವಿತಳಕೆ
ಗರುಡಭಯುವಾಯ್ತೆಂದು ತಕ್ಷಕ-
ನಿರಿಸಿದನು ನಿಜಸುತನನಮರೇಶ್ವರನನುಜ್ಞೆಯಲಿ ।
ಇರಲಿರಲು ಸುತರಾದರಾತಂ-
ಗುರಗವಂಶದೊಳಶ್ವಸೇನಗೆ
ಹಿರಿದು ಹೆಚ್ಚಿತು ತಕ್ಷಕನ ಸಂತತಿ ವನಾಂತದಲಿ || ೩೦೯ ||

ಪಕ್ಷಿ. ಕಳಿಂಗ-ಒಂದು ಬಗೆಯ ನೀರುಹಕ್ಕಿ. ಕಲವಿಂಕ-ಗುಬ್ಬಚ್ಚಿ. ಕುಕಿಲ-ಕೋಗಿಲೆ. ಚಾತಕ-(ಮೊದಲ ಮಳೆಹನಿ ನೀರಿಗಾಗಿ ಕಾದು ಕುಡಿಯುವ) ಒಂದು ಬಗೆಯ ಕಾಲ್ಪನಿಕ ಪಕ್ಷಿ. ಭರದ್ವಾಜ-ಒಂದು ಬಗೆಯ ಪಕ್ಷಿ. ಕಾಕರಿಪು-ಗೂಬೆ. ಕೇಸುರಿ-ಕೆಂಪಾದ ಉರಿ. ಕಣ್ಣವಲೆ-ಹಗ್ಗದ, ನಾರಿನ, ಬಲೆ].

೩೦೮. [1]ಸಿ (ಅ), ಸ್ವೀಪಾ (ಪ್ರ). [2]ದೋಕಡೆ (ಅ ಕುಮಾ). [3]ಮುಗಿಲ (ಕುಮಾ ಪೇ ಅ), ಸ್ವೀಪಾ (ಪ್ರ). [4]ಸ (ಅ).

[ಉಚ್ಚಳಿಸು-ಹೊರಹೊಮ್ಮು. ತನಿಗುದಿ-ಚೆನ್ನಾಗಿ, ಪೂರ್ತಿಯಾಗಿ, ಕುದಿ. ಹಿಳಿ-ಬಿರಿ, ಒಡೆ. ಸೋಪಾನ-ಮೆಟ್ಟಲು. ಗರವಟ್ಟಿಗೆ-ಪಹರೆ, ಕಾವಲು. ತೊಳಲಿಕೆ-ತಿರುಗಾಟ, ಸುತ್ತಾಟ. ತೆರಳಿಚು-ಕದಲಿಸು, ಓಡಿಸು. ತೆತ್ತೀಸ ಕೋಟಿಗಳು-ಮೂವತ್ತುಮೂರು ಕೋಟಿ ದೇವತೆಗಳು. ಕಡಿತ-ನಾಶ, ಇಲ್ಲವಾಗುವುದು. ಗಗನಮಣಿ-ಸೂರ್ಯ].

೩೦೯. [ವಿತಳ-ಏಳು ಅಧೋಲೋಕಗಳಲ್ಲಿ ಒಂದು. ತಕ್ಷಕ-ಇಪ್ಪತ್ತೇಳು ನಾಗಕುಲಗಳ ರಾಜ. ಈತನ ತಂದೆ ಕಶ್ಯಪ, ತಾಯಿ ಕದ್ರು].

ಈ ಮಹಾವನವಹ್ನಿ ಭೂತ-
ಸ್ತೋಮಸಂಹೃತಿಕರ್ಮಶೌರ್ಯೋ-
ದ್ದಾಮನವಗಾಹಿಸುತ ಬರುತಿರೆ ಮುಂದೆ ಚೂಣಿಯಲಿ ।
ಧೂಮವಿಳಿದುದು ಹುತ್ತಿನಲಿ ನಿ-
ಸ್ಸೀಮಜನಿತಜ್ವಾಲೆಗಳ ಝಳ-
ವಾ ಮಹೋರಗಚಯವ ಚುಂಬಿಸಿತರಸ ಕೇಳೆಂದ ॥ ೩೧೦ ॥

ಉರಿಯುಗಂಟಲನೊದೆದು ಫಣಿ ವಿ-
ಕ್ಕುರವಣಿಸೆ ಹಾಹಾ ಧನಂಜಯ
ಹರಿವುತಿದೆ ಹಾವೊಂದು ಹೋದುದು ಬಾಯ ತುತ್ತಿನಗೆ ।
ತರಿಸಿಕೊಡು ಶರವೇಢೆಯನು ವಿ-
ಸ್ತರಿಸು ವಹಿಲದೊಳೆನಲು ವೈಶ್ವಾ-
ನರನ ಮಾತಿಗೆ ನಗುತ ಕೊಂಡನು ವಿಜಯ ಗಾಂಡಿವವ ॥ ೩೧೧ ॥

ಆವ ಶರಸಂಧಾನವೋ ಗಗ-
ನಾವಲಂಬಿಯು ಕೊರಳನೆಚ್ಚನು
ಪಾವಕನ ಮಧ್ಯದಲಿ ಬಿದ್ದುದು ಮುಂಡವಹಿಪತಿಯ ।
ಜೀವವುಳಿದುದು ಶಿರದಲಾತಂ-
ಗಾ ವಿಗಡ ಫಣಿ ನುಡಿದುದೆಲೆ ಗಾಂ-
ಡೀವಿ ಮಱಿಯದಿರೆನ್ನ ಹಗೆಯಲಿ ಮರಣ ನಿನಗೆಂದ ॥ ೩೧೨ ॥

ಎಂದು ಗಗನದೊಳುಲಿದು ಫಣಿಶಿರ-
ವಂದು ಹಾಯ್ದುದು ಧರೆಗೆ ರಾಧಾ-
ನಂದನನ ಬತ್ತಳಿಕೆಯಲಿ ಶರವಾಗಿ ಜಗವಱಿಯೆ ।

---

೩೧೦ [ಭೂತಸ್ತೋಮ-ಪ್ರಾಣಿಗಳ ಸಮೂಹ. ಸಂಹೃತಿಕರ್ಮ-ಸಂಹಾರಕಾರ್ಯ. ಉದ್ದಾಮ-ಶ್ರೇಷ್ಠ. ಅವಗಾಹಿಸು-ವ್ಯಾಪಿಸು, ಹರಡು. ನಿಸ್ಸೀಮ-ಮೇರೆ ಮೀರಿದ ಚಯ-ಸಮೂಹ. ಚುಂಬಿಸು-ಸೋಕು, ಸ್ಪರ್ಶಿಸು, ಮುತ್ತಿಡು].

೩೧೧ [ಉರವಣಿಸು-ರಭಸದಿಂದ ಮುನ್ನುಗ್ಗು. ವೇಢೆ-ಸುತ್ತುಗಟ್ಟುವಿಕೆ. ವಹಿಲ-ತ್ವರಿತ. ವೈಶ್ವಾನರ-ಅಗ್ನಿ. ವಿಜಯ-ಅರ್ಜುನನ ದಶನಾಮಗಳಲ್ಲಿ ಒಂದು].

೩೧೨. [ಮುಂಡ-ತಲೆಯಿಲ್ಲದ ದೇಹ. ವಿಗಡ-ಭಯಂಕರ, ಕ್ರೂರ. ಹಗೆ-ಶತ್ರು].

ಸಂದುದದು ಬಳಿಕಿತ್ತಲಿಂದ್ರನ
ನಂದನದ ಬೇಗೆಯಲಿ ಬದುಕಿತು
ಮಂದಪಾಲನ ಸುತಚತುಷ್ಟಯುವರಸ ಕೇಳೆಂದ ॥ ೩೧೩ ॥

ಮೆಚ್ಚಿಸಿದಪಿವು ವಹ್ನಿಸೂಕ್ತವ-
ನುಚ್ಚರಿಸಿ ತಜ್ಜ್ವಲನಮುಖವನು
ಬಿಚ್ಚಿ ಬದುಕಿದವಾ ಋಷಿಯ ಸಂತಾನಪಕ್ಷಿಗಳು ।
ಹೆಚ್ಚಿದುರಿಹಬ್ಬುಗೆಯ ಹೊಯ್ಲಲಿ
ಬೆಚ್ಚಿ ಮಯನರ್ಜುನನ ಹೊಗಳಿದು
ಕೆಚ್ಚಿನಲಿ ಬದುಕಿದನು ಧರಣೀಪಾಲ ಕೇಳೆಂದ ॥ ೩೧೪ ॥

ಖಗಚತುಷ್ಟಯ ಮಯಸಹಿತ ಉರಿ-
ಯುಗುಳಿತುಳಿದ ಸಮಸ್ತ ಭೂತಾ-
ಳಿಗಳನಾಹುತಿಗೊಂಡನಗ್ನಿ ಧನಂಜಯಾಜ್ಞೆಯಲಿ ।
ಗಗನದಿಂದಿಳಿತಂದು ಸುರಪತಿ
ಮಗನ ಮನ್ನಿಸಿ ಕೊಟ್ಟನಗ್ಗದ
ಗಗನಮಣಿಗೆಣೆಯೆನಿಪ ಮಕುಟವನೊಲಿದು ಪಾರ್ಥಂಗೆ ॥ ೩೧೫ ॥

ಹರಿಗೆ ವಂದಿಸಿ ಮಗನನೊಲಿದಾ-
ದರಿಸಿ [1]ಮರಳಿದ[1]ನಿಂದ್ರನಿತ್ತಲು
ಭರದಿನಿವರೈತಂದರಿಂದ್ರಪ್ರಸ್ಥಪುರವರಕೆ ।
ಧರಣಿಪತಿಗಾ ಖಾಂಡವದ ದ-
ಳ್ಳುರಿಯ ಹೋಮದ ಹೊಸಕಥೆಯ ವಿ-
ಸ್ತರಿಸಿ ಹೇಳಿದನಸುರರಿಪು ಭೀಮಾದಿಗಳು ನಲಿಯೆ ॥ ೩೧೬ ॥

---

೩೧೩. [ಸಲ್-ಸೇರು, ಪ್ರವೇಶಿಸು. ರಾಧಾನಂದನ-ಕರ್ಣ. ಬೇಗೆ-ದಹನ, ಸುಡುಬಿಸಿ. ಮಂದಪಾಲ-ಶಾರ್ಙಕ, ಪಕ್ಷಿರೂಪದ ಒಬ್ಬ ಋಷಿ. ಇವನ ನಾಲ್ಕು ಮಕ್ಕಳು ಜರಿತಾರಿ, ಸಾರಿಸೃಕ್ಕ, ದ್ರೋಣ ಮತ್ತು ಸ್ತಂಭಮಿತ್ರ ಎಂಬವರು. ಖಾಂಡವ ವನ ದಹನದ ಕಾಲದಲ್ಲಿ ಮಂದಪಾಲನು ಅಗ್ನಿಯನ್ನು ಸ್ತುತಿಸಿ ತನ್ನ ನಾಲ್ಕು ಮಕ್ಕಳನ್ನು ಅಗ್ನಿಯಿಂದ ರಕ್ಷಿಸಿದನು].

೩೧೪. [ವಹ್ನಿಸೂಕ್ತ-ಅಗ್ನಿಸ್ತೋತ್ರ. ಜ್ವಲನ-ಜ್ವಾಲೆ, ಉರಿ. ಬಿಚ್ಚಿ-ಬಿಡಿಸಿ, ನಿವಾರಿಸಿ. ಕೆಚ್ಚು-ಧೈರ್ಯ].

೩೧೫. [ಖಗ-ಪಕ್ಷಿ. ಭೂತಾಳಿ-ಪ್ರಾಣಿಗಳ ಸಮೂಹ. ಗಗನಮಣಿ-ಸೂರ್ಯ. ಮಕುಟ-ಕಿರೀಟ],

೩೧೬. [1]ಕಳುಹಿದ (ಅ ಪ್ರ), ಸ್ವಿಂಪಾ (ಕುಮಾ).

ಧಾರುಣೀಶ್ವರರೈವರನು ಸುಕು-
ಮಾರವರ್ಗವನಾ ಸುಭದ್ರಾ-
ನಾರಿಯನು ಪಾಂಚಾಲೆಯನು ತತ್ಸಕಲ ಬಾಂಧವರ ।
ಸೂರಿಗಳ ಸಚಿವಾದಿ ನೃಪ ಪರಿ-
ವಾರವನು ಪತಿಕರಿಸಿ ಬಂದನು
ದ್ವಾರಕಿಗೆ ಹರುಷದಲಿ ಗದುಗಿನ ವೀರನಾರಾಯಣ ॥ ೩೧೭ ॥

ಕೇಳು ಜನಮೇಜಯಧರಿತ್ರೀ-
ಪಾಲ ಖಾಂಡವವನದ ವಹ್ನಿ-
ಜ್ವಾಲೆ ತೆಗೆದುದು ಕೂಡೆ ಹೊಗೆದುದು [1]ಹೊದಳಿ ಹೊಸಮೆಳೆಯು[1] ।
ಮೇಲುಗಾಳಗದುಬ್ಬಿನಲಿ ಸಿರಿ-
ಲೋಲಸಹಿತರ್ಜುನನು ವಿಕ್ರಮ-
ದೇಳಿಗೆಯ ಪರಿತೋಷದಲಿ [2]ಮರಳಿದನು ಪುರವರಕೆ[2] ॥ ೩೧೮ ॥

———

೩೧೭. [ಸೂರಿ–ವಿದ್ವಾಂಸ, ಪಂಡಿತ. ಪತಿಕರಿಸು–ಉಪಚರಿಸು].

೩೧೮. [1]ಹೊಗರ ರಭುಳಜಡಿಯೆ (ಅ). [2]ತಿರುಗಿದನು ಪಟ್ಟಣಕೆ (ಅ ಕುಮಾ).
[ರಪಣ–ಐಶ್ವರ್ಯ, ಸಂಪತ್ತು].

ಸಭಾಪರ್ವ

ಸಂಧಿ ೧

೧. ನಾರದರಿಂದ ರಾಜಸೂಯದ ಉಪದೇಶ

ನಾಲಗೆಗಳಸುರಾರಿ[1]ಗುಣನಾ-
ಮಾಳಿಯಲಿ ತುಱುಗಿ[1]ದವು ಕಂಗಳು
ನೀಲಮೇಘಶ್ಯಾಮನಲಿ ಬೆಚ್ಚವು ವಿಕಾರದಲಿ ।
ಬಾಲಕೇಳೀಕಥನಸುಧೆಯೊಳ-
ಗಾಳಿ ಮುಳು[2]ಗಲು ಕಿವಿಗಳ[2]ನಿಬರು
ಸಾಲಭಂಜಿಕೆಯಂದವಾದರು ಕೃಷ್ಣವಿರಹದಲಿ ॥ ೧ ॥

ಮುರಹರನ ನೇಮದಲಿ ಮಯ ವಿ-
ಸ್ತರಿಸಿದನು ಹದಿನಾಲ್ಕು ತಿಂಗಳು
ವರ ಸಭಾಮಂಟಪವನನಿಬರಿಗಿವ ಕೃತಜ್ಞನಲಿ ।
ಕಿರಣಲಹರಿಯ ವಿವಿಧ ರತ್ನೋ-
ತ್ಕರದ ರಚನಾಶಿಲ್ಪವಿದು ದೇ-
ವರಿಗಸಾಧ್ಯವು ಶಿವ ಶಿವಾ ಎನೆ ಮೆಱೆದುದಾಸ್ಥಾನ ॥ ೨ ॥

ದ್ರುಪದ ಧೃಷ್ಟದ್ಯುಮ್ನಮತ್ಸ್ಯಾ-
ಧಿಪತಿ ಕೇಕಯಪಾಂಡವಾತ್ಮಜ-
ರು ಪತಿಕಾರ್ಯವಿಚಾರನಿಷ್ಠರು ಬಂದರೋಲಗಕೆ ।

---

೧. [1]ನಾಮಾವಳಿಗಳನು ಹೊಗಳಿದವು (ಪ್ರ); ...ತುಱುಕಿದವು (ಅ). ಗುಣ ಕಳುಹುಣ (ಅ ಕುಮಾ), ಸ್ಫೀತಾ (ಪ್ರ).
[ತುಱುಗು–ತುಂಬಿರು, ದಟ್ಟೈಸಿರು. ಬೆಚ್ಚವು–ಬೆರಗಿನವಾದವು. ಕೇಳಿ–ಕ್ರೀಡೆ, ಲೀಲೆ. ಸುಧೆ–ಅಮೃತ. ಅಳಿಮುಳುಗು–ಅದ್ದಿಮುಳುಗು, ಪೂರ್ತಿಯಾಗಿ ಮುಳುಗು. ಸಾಲಭಂಜಿಕೆ–ಬೊಂಬೆ, ವಿಗ್ರಹ. ಅನಿಬರು–ಅಷ್ಟು ಮಂದಿ].

೨. [ಮಯ–ರಾಕ್ಷಸರ ಶಿಲ್ಪಿ].

ನೃಪತಿ ಪದವೇನಮರಮುನಿವ-
ರುಪಚರಿತಮಂತ್ರಾರ್ಥಸಿದ್ಧಿಗೆ
ರವಣ ನಮಗುಂಟೇಗ ಬೆಸಸೆಂದರು ಯುಧಿಷ್ಠಿರಗೆ ॥ ೩ ॥

ಧರೆ ನಮಗೆ ವಶವರ್ತಿ ಖಂಡೆಯ-
ಸಿರಿ ನಮಗೆ ಸ್ಯಾವಳ ಯುಧಿಷ್ಠಿರ-
ನಂದನನ ನೆಲನಹುವನ್ನೃಗ ಭರತಾದಿಭೂಮಿಪರ ।
ಮೆಱಸಿತೆಂಬುದು ಲೋಕವೀ ನಿ-
ಬ್ಬರದ ಹೆಸರೆನ[1]ಗೆಮ್ಮ[1] ಬೊಪ್ಪನ
ಸಿರಿಯುನೇವಣ್ಣಿಸುವೆನೆಂದನು ಸುಯ್ದು ಯಮಸೂನು ॥ ೪ ॥

ಅಲ್ಲಿ ಸುರರಲಿ ಸುಪ್ರತಿಷ್ಠಿತ-
ನಲ್ಲ ಗಡ ಪಾಂಡುಕ್ಷಿತೀಶ್ವರ-
ನಿಲ್ಲಿ ನೃಪವರೇನು ಫಲ[1]ವೆಮಗಾದ[1] [2]ಸಂತತಿಗೆ[2] ।
ಇಲ್ಲಿ ರಚಿಸಿದ ರಾಜಸೂಯದಿ-
ನೆಲ್ಲವಹುದಯ್ಯಂಗೆ ಮಱಿವಿದು
ಮರ್ಲಭವು ಕೈಕೊಂಡೆವಾವ್ಪದು ಮಂತ್ರವಿದರೆಂದ ॥ ೫ ॥

ಪಿತನ ಪದಮುಪ್ರೀತಿಗುನ್ನತ-
ಗತಿಗೆ ನಿರ್ಮಳರಾಜಸೂಯ-
ಕ್ರತುವೆ ಸಾಧನನೆಂದು ಮುನಿಯುಪದೇಶಿಸಿದನೆನಗೆ ।
ಕ್ರತು ಮಹಾಕ್ರತು ಸಕಲಧರಣೀ-
ಪತಿಗಳರ್ಥವ ಗುಣವಲೀಯರು
ವ್ರತವೆನಗೆ ಸಂಕಲ್ಪವಾಯ್ತಿದಕೇನು ಹದನೆಂದ ॥ ೬ ॥

---

೩. [ರವಣ-ಐಶ್ವರ್ಯ, ಸಂಪತ್ತು].

೪. [1]ಗೆಂಮ (ಅ ಕುಮಾ).

[ಖಂಡೆಯ-ಕತ್ತಿ. ಸ್ಯಾವಳ-ಸ್ಯ ಹತ್ತಿರ, ಸಮೀಪ, ಸನ್ನಿಧಿ. ನೃಗ-ಸೂರ್ಯ
ವಂಶದ ಒಬ್ಬ ಅರಸು. ನಿಬ್ಬರ(ನಿರ್ಭರ)-ಅಧಿಕವಾದ, ತುಂಬಿರುವ, ಅತಿಶಯ
ವಾದ ಬೊಪ್ಪ-ತಂದೆ].

೫. [1]ನಾನದರ (ಅ ಕುಮಾ). [2]ಸನ್ನತಿಗೆ (ಅ ಕುಮಾ ಪ್ರ).

[ಮಱಿ--ಮರ್ತ್ಯ. ಮಂತ್ರ-ಉಪಾಯ, ಸಲಹೆ].

೬. [ಕ್ರತು-ಯಜ್ಞ. ಅರ್ಥ-ಧನ. ಗುಣವಲಿ-ಸಹಜಗುಣವಾಗಿ].

ನಕ್ಕನಸುರವಿರೋಧಿ ಮುನಿ ಹಾ
ಯಿಕ್ಕಿದನಲಾ ಬಲೆಯನಕಟಾ
ಸಿಕ್ಕಿದಿರಲಾ ಸ್ವಾಮಿದ್ರೋಹರು ಸದರವೇ ನೃಪರು ।
ಅಕ್ಕಜದ ಮುಖವಿದಱ ಚೂಣಿಗೆ
ಚುಕ್ಕಿಯಾ[1]ಯ್ತು ಮಹಾಮಹೀಂದ್ರರು[1]
ಮಕ್ಕಳಾಟಿಕೆಯಾಯ್ತು ಸುತ ತೂಗಿದನು ಸಿರಿಮುಡಿಯ ॥ ೭ ॥

ಮೊದಲಲೇ ನಿಮ್ಮವರು ನಿಮ್ಮ-
ಭ್ಯುದಯ[1]ದಲಿ[1] ನೇರುವರೆ ಕೌರವ-
ರದಱೊಳಗ್ಗದ ಕರ್ಣಶಕುನಿಜಯದ್ರಥಾದಿಗಳು ।
ಕುದುಕುಳಿಗಳೀಚೆಯಲಿ ಕಂಸನ
ಮದಮುಖನ ಪರಿವಾರವಿದೆ [2]ತೂ-
ಕ[2]ದಲಿ ಮಗಧನ ಹೊಱೆಯಲದನೇವಣ್ಣಿಸುವೆನೆಂದ ॥ ೮ ॥

ಕಾಲಯವನನು ದಂತವಕ್ರ ನೃ-
ಪಾಲರಲಿ ದುಱುದುಂಬಿ[1]ಗಳು[1] ಶಿಶು-
ಪಾಲ ಪೌಂಡ್ರಕರೆಂಬರಿಗೆ ಸಮುದಂಡಿಯೆಮ್ಮೊಡನೆ ।
ಖೂಳರಿಬ್ಬರು ಹಂಸಡಿಬಿಕರು
ಸಾಲುವನ ಮುರನರಕರಾ[2][ಳ್ಗಳ][2]
ಮೇಳವವನೇನೆಂಬೆನೈ ಭೂಪಾಲ ಕೇಳೆಂದ ॥ ೯ ॥

ಮಱೆಯದೇತಕೆ ರಾಜಸೂಯದ
ಹೊಱಿಗೆ ನಿನ್ನದು ರಾಣಿಕವನಾ-
ನಱಿಯೆನೆಮ್ಮರ್ಥಾಭಿಮಾನಪ್ರಾಣದೊಡೆಯನಲಿ ।

---

೭. [1]ಯಿತು ಮನ ಮಹೀಶನ (ಅ ಕುಮಾ).
[ಸದರ–ಸಲಿಗೆ, ಸುಲಭ. ಅಕ್ಕಜ–ಅಧಿಕ್ಯ, ಅತಿಶಯ. ಚೂಣಿ–ಮುಂಭಾಗ. ಚುಕ್ಕಿ–ಗುರಿ, ಧ್ಯೇಯ (?)].

೮. [1]ವನು (ಅ ಕುಮಾ). [2]ದೂರ (ಅ ಕುಮಾ).
[ಕುದುಕುಳಿ–ಅಸೂಯಾಪರ. ಮದಮುಖ–ಗರ್ವಿಷ್ಠ. ತೂಕ–ಅಧಿಕ್ಯ. ಹೊಱೆ–ಸಮೀಪ. ಮಗಧ (ಮಾಗಧ)–ಜರಾಸಂಧ].

೯. [1]ಯ್ಯೆ (ಅ ಕುಮಾ), ಸ್ವೀಪಾ (ಅ ಪ್ರತಿಯಲ್ಲಿಯ ಪಾಠಾಂತರ). [2]ಳನ (ಅ ಕುಮಾ), ಳಿನ (ಪೇ).
[ದುಱುದುಂಬಿ–ನೀಚ, ದುಷ್ಟ. ಮೇಳ–ಕೂಟ].

ಕೆಱಿಯರಿವದಿರು ರಾಜಸೂಯದ
ಕಱುಬರತಿಬಲ್ಲಿದರು ಕೃಪೆಯನು
ಮೆಱೆವುದೆಂದಸುರಾರಿಯಂಘ್ರಿಗೆ ಚಾಚಿದನು [1]ಹಣೆಯ[1] ॥ ೧೦ ॥

ಎತ್ತಿದನು ನಸುನಗುತ ರಾಯನ
[1]ನೆತ್ತಿಯನು[1] ಮುರವೈರಿ ಕರಸು ಮು-
ಹೂರ್ತಿಕರನಕ್ಷೋಹಿಣಿಯ ಬರಹೇಳು ದಳಪತಿಯ ॥
ಸುತ್ತಣರಸರಿಗೋಲೆಯುಡುಗೊಱೆ-
ಯಿತ್ತು ದೂತರ ಕಳುಹು ಬಳಿಕಿನೊ-
ಳುತ್ತರೋತ್ತರಸಿದ್ಧಿ ನಿನಗಹುದೆಂದನಸುರಾರಿ ॥ ೧೧ ॥

ಆಳುನಡೆಯಲಿ ಮಗಧರಾಯನ
ಮೇಲೆ ದಂಡು ಮುಕುಂದ ದಳಪತಿ
ಹೇಳಿಕೆಗೆ ಭೀಮಾರ್ಜುನರ ಬರಹೇಳು ಹೇಳೆನುತ ।
ಆಳು ಸಾಱಿದರವನಿಪತಿಗಳು
ಮೇಳವಿಸಿ ಹೊಱವಂಟು ದಳದೆ-
ಖ್ಖಾಳವನು ನೋಡಿದರು ನಡೆದರು ಪಯಣಗತಿಗಳಲಿ ॥ ೧೨ ॥

---

೧೦. [1]ಶಿರವ (ಅ ಆ ಕುಮಾ ಪ್ರ), ಸ್ವೀಪಾ (ಕ ಓ k).
[ರಾಣಿಕ–ಒಪ್ಪುವಂತಹ. ಕಱುಬರು–ಅಸೂಯಾಪರರು].

೧೧. [1]ಮಸ್ತಕವ (ಅ), ಸ್ವೀಪಾ (ಓ k ಅ).

೧೨. [ದೆಖ್ಖಾಳ–ಆಡಂಬರ, ವೈಭವ].

---

* ಈ ಪದ್ಯದಲ್ಲಿ ಹೇಳಿರುವ ಸಾಲ್ವ (=ಸಾಲುವ) ಒಬ್ಬ ಹೊರತಾಗಿ ಉಳಿದವರೆಲ್ಲರೂ ರಾಕ್ಷಸರು ಇಲ್ಲವೆ ರಾಕ್ಷಸಾಂಶದವರು; ಕೃಷ್ಣನ ಶತ್ರುಗಳು; ಅವನಿಂದ ಹತರಾಗುತ್ತಾರೆ. ಸಾಲ್ವ ಕೌರವಪಕ್ಷ ಸೇರಿ ಯುದ್ಧದಲ್ಲಿ ಮಡಿದ.

೨. ಜರಾಸಂಧನ ವಧೆ—ದಿಗ್ವಿಜಯ

ಜನಪ ಕೇಳೈ ಕೃಷ್ಣಭೀಮಾ-
ರ್ಜುನರು ವಿಮಳಸ್ನಾತಕವ್ರತ-
ಮುನಿಗಳಾದರು ನಡೆದು ಪಯಣದ ಮೇಲೆ ಪಯಣದಲಿ ।
ಜನದ ಕಾಣಿಕೆಗೊಳುತ ನಾನಾ-
ಜನಪದಂಗಳ ಕಳಿದು ಗಂಗಾ-
ವಿನುತನದಿಯನು ಹಾಯ್ದು [1]ನಡೆದರು[1] ಪೂರ್ವಮುಖವಾಗಿ ॥ ೧೩ ॥

ದೇಶ ಹಗೆವನದೆಂದು ಕಡ್ಡಿಯ
ಗಾಸಿ ಮಾಡಿದು[1][ದಾ][1] ಪಸೋದದ-
ಳೈಸುಪಡೆ ನಡೆತಂದು ಬಿಟ್ಟುದು ಗಿರಿಯ ತಪ್ಪಲಲಿ ।
ಆ ಸರೋ[1]ರುಹ[1]ಬಂಧು ಚರ[2]ಮದಿ[2]-
ಶಾಸತಿಯ ಚುಂಬಿಸೆ ಗಿರಿವ್ರಜ-
ದಾ ಶಿಖರವನು ಹತ್ತಿದರು ಹರಿಭೀಮಫಲುಗುಣರು ॥ ೧೪ ॥

ವೃಷಭಚರ್ಮನಿಬದ್ಧಭೇರಿಗ-
ಳೆಸೆ[1]ದವಕ್ಷತೆ[1]ಗಂಧಮಾಲ್ಯ-
ಪ್ರಸರದಲಿ ಶೈಲಾಗ್ರದಲಿ ಸಂಪನ್ನಪೂಜೆಯಲಿ ।
ಅಸುರರಿಪುಭೀಮಾರ್ಜುನರು ತ-
ದ್ವಿಷಮಭೇರೀತ್ರಯವ ಹೊಯ್ದು-
ಬ್ಬಿಸಿದರದುಭುತರವ [2]ಮುಸಗೆ ಕೆಡೆದುದು ಧರಿತ್ರಿಯಲಿ[2] ॥ ೧೫ ॥

---

೧೩. [1]ಬಂದರು (ಅ), ಸ್ವೀಪಾ (ಕ ಅ ಕುಮಾ).
[ಸ್ನಾತಕವ್ರತ-(ಬ್ರಹ್ಮಚರ್ಯಾಶ್ರಮವನ್ನು ಮುಗಿಸಿ) ಗೃಹಸ್ಥಾಶ್ರಮದ ವ್ರತವನ್ನು ಕೈಕೊಂಡವನು. ಜನಪದ–ನಾಡು, ದೇಶ, ರಾಜ್ಯ. ಕಳಿದು–ದಾಟಿ].

೧೪. [1]ಪೇ (ಸರ್ವತ್ರ). [2]ಜಪ (ಅ ಅ), ಸ್ವೀಪಾ (ಓ). [1]ಪಾ (ಅ ಆ ಕುಮಾ).
[ದೇಶಹಗೆವನದೆಂದು ಕಡ್ಡಿಯ ಗಾಸಿಮಾಡಿದುದು–ರಾಜ್ಯವು ಶತ್ರುವಿನದು ಎಂದು ತಿಳಿದು ಕಡ್ಡಿಯನ್ನು ಮುರಿದಷ್ಟೇ ಹಗುರವಾಗಿ ತಿಳಿದದ್ದು. ಪಡೆ–ಸೈನ್ಯ. ದಿಶಾಸತಿ–ದಿಕ್ಕಾಂತೆ. ಚರಮದಿಶಾ–ಪಶ್ಚಿಮದಿಕ್ಕು].

೧೫. [1]ದಿರಲುಪರ (ಕ). [2]ಮುಗಿಲು (ಅ ಕುಮಾ), ಮುಸಗೆ ಕೆಡಹಿದರು ಪಾತಿಯಲಿ (ಪ್ರ ಅ), ದರದ್ಭುತದೊಸಗೆಯೆನೆ ಕೆಡಹಿದರು ಪಾತಿಯಲಿ (ಪ್ರ ಅ).
[ಪ್ರಸರ–ಸಮೂಹ. ಸಂಪನ್ನ–ಪರಿಪೂರ್ಣವಾದ. ವಿಷಮ–ಅಸಾಧಾರಣ. ಮುಸುಗು–ವಿಜೃಂಭಿಸು. ಕೆಡೆ–ಬೀಳು].

ಇವರು ಗಿರಿಯಿಂದಿಳಿದು ರಾತ್ರಿಯೊ-
ಳವನ ನಗರಿಯ ರಾಜಬೀದಿಯ
ವಿವಿಧವಸ್ತುವ ಸೂಱೆಗೊಂಡರು ಹಾಯ್ದು ದಳದುಳವ ।
ತಿವಿದರಡ್ಡೈಸಿದರನುಬ್ಬಿದ
ತವಕಿಗರು [1]ಮಗಧೇಂದ್ರ[1]ರಾಯನ
ಭವನವನು ಹೊಕ್ಕರು ವಿಡಂಬದ ವಿಪ್ರವೇಷದಲಿ ॥ ೧೬ ॥

ಬವರಿಗರು ನೀವ್ ವಿಪ್ರವೇಷದ
ಜವನಿಕೆಯ ಜಾಣಾಯ್ಲತನದಿಂ-
ದವಗಡಿಸಿ [1]ಮಿಗೆ ಹೊಕ್ಕಿರ[1]ದ್ವಾರದಲಿ ನೃಪಸಭೆಯ ।
ನಿವಗಿದೇನೀ ವ್ಯಸನ ಕಪಟ
ವ್ಯವಹರಣೆ ಕೃತ್ರಿಮವೊ ಸಹಜವೊ
ರವಣ ಮತ್ತೇನುಂಟು ಹೇಳಿನ್ನಂಜಬೇಡೆಂದ ॥ ೧೭ ॥*

ಎಲವೊ ಧರೆಯುಲಧರ್ಮ[1]ಮಿತ್ರರ[1]
ತಲೆಯ ಚೆಂಡಾಡುವೆವು ಧರ್ಮವ-
ನೊಲಿದು ಕೊಂಡಾಡುವೆವು ಶಿಕ್ಷಾರಕ್ಷಣವ್ಯಸನ ।
ನೆಲೆ ನಮಗೆ ನೀನಱಿಯೆ ರಾಜಾ-
ವಳಿಯ ಬಿಡು ಫಡ [2]ಭಂಡ[2]ವಿದ್ಯೆಯ
[3]ಬಳಸುವಾ[3] ನಮ್ಮೊಡನೆ ಯೆಂದನು ದಾನವಧ್ವಂಸಿ ॥ ೧೮ ॥

---

೧೬. [1]ಮುದದಿಂದ (ಓ).

[ದಳದುಳ–ಸೂರೆ, ಕೊಳ್ಳೆ, ಮುತ್ತಿಗೆ. ವಿಡಂಬ–ಕಪಟ].

೧೭. [1]ಹೊಕ್ಕಿರಿಯಪ (ಕುಮಾ).

[ಬವರಿಗರು–ಯುದ್ಧಮಾಡುವವರು, ಕ್ಷತ್ರಿಯರು (ಬವರ–ಯುದ್ಧ). ಜವನಿಕೆ (ಯವನಿಕಾ)–ತೆರೆ. ಜಾಣಾಯ್ಲತನ–ಜಾಣತನ. ಅದ್ವಾರ–ದ್ವಾರವಲ್ಲದ ದ್ವಾರ, ಸರಿಯಲ್ಲದ ಬಾಗಿಲು. ರವಣ–ಪರಿಹಾಸ, ವಿನೋದ].

೧೮. [1]ಶೀಲರ (ಅ ಆ ಕುಮಾ), ಸ್ವೀಪಾ (ಪ್ರ ಕ k). [2]ಬಂ (ಅ). [3]ಬಳಸುವರೆ (ಅ). ಬಳಕೆಯಾ (ಪ್ರ).

[ವ್ಯಸನ–ಅಭ್ಯಾಸ, ವೃತ್ತಿ. ರಾಜಾವಳಿ–ರಾಜ (ವಂಶದ) ಧರ್ಮ, ಕ್ಷತ್ರಿಯಧರ್ಮ. ಭಂಡ–ನಾಚಿಗೆಗೆಟ್ಟ, ಲಜ್ಜೆಗೇಡಿ. ಬಳಸುವಾ–ಬಳಸುವೆಯಾ].

ಅಕಟ ನಿಮಗೀ ಸಮರವಾವ-
ಶ್ಯಕವೆ ನಮ[1]ಗ[1]ಖ್ಯಾತಿಯ[2]ಲ್ಲಲೆ[2]
ಸಕಲಜನವಱಿದಿರೆಯೆನುತ ನೋಡಿದನು ತನ್ನವರ ।
ಪ್ರಕಟವೈ ನಿನ್ನಾಳುತನ ಯದು-
ನಿಕರಕಾವಂಜುವೆವು ರಣನಾ-
ಟಕಪಲಾಯನ[3]ಪಂಡಿತರು[3] ನೀವೆಂದನಾ ಮಗಧ ॥ ೧೯ ॥

ಪಾರ್ಥ ನೀ ಮಗುವೆಮ್ಮೊಡನೆ ರಣ-
ದ[1][ರ್ತಿ][1]ಯಾದರೆ ಭೀಮಸೇನ ಸ-
ಮರ್ಥನಹನಾತಂಗೆ ಕೊಟ್ಟೆನು ಕಳನ ಕಾ[2]ೞೆ[2]ಗವ ।
ವ್ಯರ್ಥವಿದು ತಾ ಹೋಗಲಿನ್ನು ಪ-
ರಾರ್ಥ ಕಂಟಕವಾಗಲೇತಕೆ
ತೀರ್ಥವೈಸಲೆ ಶಸ್ತ್ರಧಾರೆಯಿದೆಂದನಾ ಮಗಧ ॥ ೨೦ ॥

ಅಂಕಕಿಬ್ಬರು [1]ತಿಗುರ[1] ತಿಲಕಾ-
ಲಂಕರಣಶೋಭೆಯಲಿ ರಣನಿ-
ಶ್ಶಂಕರನುವಾದರು [2]ಸಕ[2]ರ್ಪುರವೀೞೆ[3]ಯಂಗೊಂಡು[3] ।
ಬಿಂಕದುಬ್ಬಿನ ರೋಮಪುಳಕದ
ಮುಂಕುಡಿಯು ಸುಮ್ಮಾನದಂಕೆಯು
ಝುಂಕೆಗಳ ಭರ ಭುಲ್ಲವಿಸಿದುದು ಭೀಮಮಾಗಧರ ॥ ೨೧ ॥

---

೧೯. [1]ಗಾ (ಅ). [2]ಲ್ಲಿದು (ಆ ಕುಮಾ), ಸ್ವೀಪಾ (ಪ್ರ ಕ k). [3]ದೀಕ್ಷಿತರು (ಪ್ರ).
[ಆಳುತನ–ಪರಾಕ್ರಮ, ಶೌರ್ಯ].

೨೦. [1]ರ್ಥಿ (ಸರ್ವತ್ರ). [2]ಳ (ಆ ಕುಮಾ), ಸ್ವೀಪಾ (ಕ ಪ್ರ).
[ಅರ್ತಿ–ಪ್ರೀತಿ, ಬಯಕೆ, ಅಪೇಕ್ಷೆ. ಕಂಟಕ–ವಿಘ್ನ, ಅಡ್ಡಿ].

೨೧. [1]ತಿಗುರು (ಅ ಕ k), ಭಟರು (ಅ ಕುಮಾ), ಸ್ವೀಪಾ (ಪ್ರ). [2]ಸು (ಆ ಅ ಕುಮಾ). [2–3]ಸಮುರಸಾಧಕ ವೀಳೆಯವ ಕೊಳುತ. [3]ವ ಕೊಳುತ (ಕ ಓ k ಪ್ರ ಅ).
[ತಿಗುರು–ಸುಗಂಧದ್ರವ್ಯದ ಲೇಪ. ಅಂಕೆ–ಕಾಳೆಗ, ಯುದ್ಧ. ಝುಂಕೆ–ಅಬ್ಬರ, ಆರ್ಭಟ, ಗರ್ಜನೆ].

ಸಿಕ್ಕರೊಬ್ಬರಿಗೊಬ್ಬರುಱಿ ಕೈ-
ಮಿಕ್ಕು ಹರಿಯರು ಕೊಂಡ[1]ಠಾಣದ[1]
ಠಕ್ಕಿನಲಿ ಮೈಗೊಡರು ತಿರಿಮುರಿವುಗಳ ಮಂಡಿ[2]ಯಲಿ[2] ।
[3]ಎಕ್ಕಹತ್ತದುಹತ್ತದಲಿ[3] [4]ಸಲೆ
ಮಿಕ್ಕು[4] ಸತ್ರಾಣದಲಿ ಮಿಗೆ ಸರಿ-
ವೊಕ್ಕು [5]ಹಿ[5]ಡಿದರು ಬಿನ್ನಣದ [6]ಚೊಕ್ಕೆಯದ ಚಾಳಿ[6]ಯಲಿ ॥ ೨೨ ॥

*ಬರಸೆಳದು ಕರದಿಂದ ಮಾಗಧ-
ನೆರಡುಕಾಲನು ಹಿಡಿದು ಸೀಳಿದು
ಧರೆಗೆ ಬಿಸುಟನು ಸಂಧಿಸಿದವಾಸೀಳ್ ತತ್‌ಕ್ಷಣಕೆ ।
ಮರಳಿ ಪವನಜ ಹಿಡಿದು ಸೀಳುವ-
ನಿರದೆ ಮಗುಳವು ಸಂಧಿಸುವವೀ-
ಪರಿ ಹಲವು ಸೂಳಿನಲಿ ಭೀಮನೊಳೊದಗಿದನು ಮಗಧ ॥ ೨೩ ॥

ಮುರಮಥನನದನಱಿತು ನಿಜಕರ-
ವೆರಡ ಪಲ್ಲಟವಾಗಿ ಸಂಧಿಸ-
ಲರಿವಿದಾರಣ ಭೀಮ ನೋಡುತ ಮರಳಿ ಮಾಗಧನ ।
ಎರಡು[1]ಸೀಳನು ಮಾಡಿ[1] [2]ಹೊಯ್ದ[2]-
ಬ್ಬರಿಸಿ ಪಲ್ಲಟವಾಗಿ [3]ಸೇರಿಸಿ[3]
ತಿರುಗಿಸಿದನೇನೆಂಬೆನುನ್ನತ ಬಾಹು[4]ವಿಕ್ರಮವ[4] ॥ ೨೪ ॥

---

೨೨. [1]ಹೆಜ್ಜೆಯ (ಅ ಕುಮಾ). [2]ಗಳ (ಸರ್ವತ್ರ). [3]ಇಕ್ಕಿದರು ಗಳ (ಅ ಅ ಕುಮಾ). [3–4]ಎಕ್ಕ ಹತ್ತಾ ಹತ್ತಿಯಲಿ ಕೈಯಿಕ್ಕುವರು (ಪ್ರ). [5]ಬಡಿ (ಅ). [6]ಚೊಕ್ಕೆಯದ ಜೋಡಿ (ಅ ಕುಮಾ). ಜೋಕೆಯದ ಚಾಳಿ (ಪ್ರ)....ಚಾಳೆ (ಅ).

[ಠಾಣ–ಸ್ಥಾನ, ಸ್ಥಳ. ಠಕ್ಕು–ಮೋಸ, ವಂಚನೆ. ಎಕ್ಕಹತ್ತದುಹತ್ತ–ಏಕಹಸ್ತ ದ್ವಿಹಸ್ತ)=ಒಂದು ಕೈ ಎರಡು ಕೈ. ಸತ್ರಾಣದಲಿ–ಬಲವುಳ್ಳವರಾಗಿ. ಚೊಕ್ಕೆಯ–ಬಿನ್ನಾಣ, ಚಾತುರ್ಯ, ಮಲ್ಲಯುದ್ಧದಲ್ಲಿ ಒಂದು ಪಟ್ಟು. ಚಾಳಿ–ರೀತಿ, ಕ್ರಮ].

೨೪. [1]ಕಾಲ್ವಿಡಿ ಸೀಳಿ (ಕ); ಕಾಲನು ಸೀಳಿ (k). [2]ಹೊಯ್ದು (ಕ ಓ k): [3]ಸಂಧಿಸಿ (ಕ ಓ k). [4]ಸತ್ವದಲಿ (ಅ ಕುಮಾ), ಸ್ವೀಪಾ (ಪ್ರ ಕ ಓ ಅ k).

---

* ಈ ಪದ್ಯ ಸಭಾಪರ್ವ (ಪಂಡಿತ ಎಸ್. ಬಸಪ್ಪನವರಿಂದ ಸಂಪಾದಿತ)ದಲ್ಲಿ ಪರಿಶಿಷ್ಟದಲ್ಲಿ-ಪುಟ 316 ರಲ್ಲಿ ಇದೆ.

ಮುಱಿದು ಕೆಡಹಿದರರಿಯನಲ್ಲಿಯ
ಸೆಱೆಯ ಮನೆಗಳ ಹೊಕ್ಕು ರಾಯರ
ಸೆಱೆಗಳನು ಬಿಡಿಸಿ[1]ದರು[1] ನಾನಾದ್ವೀಪಪಾಲಕರ ।
ಮೆಱೆದು ಮಣಿಮಯರಶ್ಮಿವಳಯದ
ಮಿಱುಪ ರಥವನು ಕೊಂಡು ನಗರದ
ಹೊಱ[2]ವಳಯದಲಿ ಬಂದು[2] ಹೊಕ್ಕರು ತಮ್ಮ ಪಾಳೆಯವ ॥ ೨೫ ॥

*ತೇರುಗಳ ತೇಜಿಗಳನಾ ಭಂ-
ಡಾರವನು ಗಜಘಟೆಸಹಿತ ವಿ-
ಸ್ತಾರ ವಿಭವವನೊಪ್ಪುಗೊಂಡರು ಮಗಧನಂದನನ ।
ಧಾರುಣಿಯನವಗಿತ್ತು ಸಕಲ ಮ-
ಹೀರಮಣರನು ಕಳುಹಿ ಬಂದನು
ವೀರನಾರಾಯಣನು ಶಕ್ರಪ್ರಸ್ಥ ಪುರವರಕೆ ॥ ೨೬ ॥

*ಭೂಪತಿಯ ನೇಮದಲಿ ಜಂಬೂ-
ದ್ವೀಪನವಖಂಡದಲಿ ಸಕಳಮ-
ಹೀಪತಿಗಳನು ಗೆಲಿದು ಕಪ್ಪವ ತಂದನಾ ಪಾರ್ಥ ।
ಯಾಗಸಿದ್ಧಿಗೆ ನಡೆದು ಪೂರ್ವವಿ-
ಭಾಗದಲಿ ಭೂಮಿಪರ ಕೈಯಲಿ
ಸಾಗರೋಪಮ ಧನವ ಮೇಳೈಸಿದನು ಕಲಿಭೀಮ ॥ ೨೭ ॥

---

೨೫. [1]ದನು (ಅ ಕುಮಾ). [2]ಗೆ ಬಿಜಯಂಗೈದು (ಕ k ಓ ಪ್ರ).
[ಪಲ್ಲಟವಾಗಿ–ತಿರುಗು ಮುರುಗಾಗಿ, ಹಿಂದು ಮುಂದಾಗಿ. ಅರಿವಿದಾರಣ–ಶತ್ರುವನ್ನು ಸೀಳುವವನು, ಕೊಲ್ಲುವವನು].

---

* 'ಶ್ರೀ'ಯವರು, ಮೂರು ಮತ್ತು ನಾಲ್ಕನೆಯ ಸಂಧಿಗಳ ಸೂಚನಾ ಪಂಕ್ತಿಗಳನ್ನು ಸೇರಿಸಿ ಈ ಪದ್ಯವನ್ನು ಸಂಯೋಜಿಸಿದ್ದಾರೆ.

* 'ಶ್ರೀ'ಯವರು, ಐದು ಮತ್ತು ಆರನೆಯ ಸಂಧಿಗಳ ಸೂಚನಾ ಪದ್ಯಗಳ ಪಂಕ್ತಿಗಳನ್ನು ಸೇರಿಸಿ ಈ ಪದ್ಯವನ್ನು ಸಂಯೋಜಿಸಿದ್ದಾರೆ.

*ನಡೆದು ವಿವಿಧದ್ವೀಪಪತಿಗಳ
ಪಡೆದು ಕಪ್ಪವ ಕೊಂಡು ತೆಂಕಣ
ಕಡಲವಳಯದ ನೃಪರ ಗೆಲಿದನು ವೀರಸಹದೇವ ।
ನಕುಲ ಪಶ್ಚಿಮದೆಸೆಯ ಭೂಪಾ-
ಲಕರ ಗೆಲಿದನು ನೆರೆದ ರತ್ನ-
ಪ್ರಕರದಿಂದಳಕಾಪುರಿಗೆ ಮಿಗಿಲಾಯ್ತು ನೃಪನಗರ ॥ ೨೮ ॥

ಬಡಗಲುತ್ತರಕುರುಗಳತ್ತಲು
ಪಡುವಲುದಧಿ ವಿಭೀಷಣನ ಪುರ
ಗಡಿ ಕೃತಾಂತನ ದೆಸೆಗೆ ಮೂಡಲು ದಿನಪನುದಯಾದ್ರಿ ।
ಪೊಡವಿಯಿದಱಲಿ ಯಮಜನಾಣೆಗೆ
ನಡುಗುವುದು ರಾಯಂಗೆ ತೆತ್ತುದು
ಗಡ ಸುವಸ್ತುವನೇನಸಾಧ್ಯವೆ ಕೃಷ್ಣನೊಲಿದರಿಗೆ ॥ ೨೯ ॥

---

೩. ರಾಜಸೂಯಯಾಗ

ನೆರೆದುದರ್ಥವನಂತದವನೀ-
ಶ್ವರರು ವಶವಾದರು ಚತುಸ್ಸಾ-
ಗರದ ಮಧ್ಯದಲಾಣೆ ಸಂದುದು ಧರ್ಮನಂದನನ ।
ಕರಸಿ ಬೇಹವರನು ಮಹೀಶಾ-
ಧ್ವರಕೆ ಸಮಯವಿದೆಂದು ಪಾರಾ-
ಶರಿಯ ಧೌಮ್ಯರು ಮಂತ್ರಶಾಲೆಯೊಳೆಂದರವನಿಪಗೆ ॥ ೩೦ ॥

---

೨೯. [ಬಡಗಲುತ್ತರಕುರು–ಉತ್ತರದಿಕ್ಕಿನಲ್ಲಿರುವ ಉತ್ತರಕುರು ಎಂಬ ಪ್ರದೇಶ. (ಉತ್ತರಕುರು : ಮೇರುವಿನ ಉತ್ತರಭಾಗದ ದೇಶ). ಪಡುವಲುದಧಿ–ಪಶ್ಚಿಮ ಸಮುದ್ರ. ಕೃತಾಂತನದೆಸೆ–ದಕ್ಷಿಣದಿಕ್ಕು. ಯಮಜ–ಯುಧಿಷ್ಠಿರ].

೩೦. [ಅರ್ಥ–ಐಶ್ವರ್ಯ, ಸಂಪತ್ತು. ಆಣೆ–ಆಜ್ಞೆ. ಬೇಹವರು–ಆಪ್ತೇಷ್ಟರು. ಮಹೀಶಾಧ್ವರ–ರಾಜಸೂಯ ಯಾಗ. ಪಾರಾಶರಿಯ (=ಪಾರಾಶರ್ಯ)–ವೇದವ್ಯಾಸ].

---

* ಎರಡನೇ ಸಂಧಿಯ ಕಡೆಯ ಪದ್ಯವನ್ನು ಸೇರಿಸಿಕೊಳ್ಳಬೇಕೆಂದು ಸೂಚಿಸಿ, ಅನಂತರ ಕೈಬಿಟ್ಟಂತೆ ಕಾಣುತ್ತದೆ. ಈ ಪದ್ಯವನ್ನು ಸ್ವೀಕರಿಸಿರುತ್ತೆ.

ಕರೆಸಿದರು ಋತ್ವಿಕ್ಕುಗಳನ-
ಧ್ವರಿಯನಾದನು ಯಾಜ್ಞವಲ್ಕ್ಯನು
ವರಸುಮಿತ್ರಾಂಗಿರಸರುಗಳುದ್ಗಾತೃಹೋತೃಗಳು ।
ಪರಮಜೈಮಿನಿ ಕಣ್ವ ವರತಿ-
ತ್ತಿರಿಗಳಾಗ್ನೀಧ್ರಾದಿರಾಜಾ-
ಧ್ವರದಿಯೋಗಿಗಳಾಯ್ತು ವೇದವ್ಯಾಸನಾಜ್ಞೆಯಲಿ ॥ ೩೧ ॥

ಮಯನಮತದಲಿ ವಿಶ್ವಕರ್ಮನ
ನಯವಿವೇಕದಲಮಳಮಖ ಶಾ-
ಲೆಯನು ನಿರ್ಮಿಸಿದರು ಸುಲಕ್ಷಣಶಾಸ್ತ್ರಸೂತ್ರದಲಿ ।
ನಿಯತ ಪತ್ನಿಯಶಾಲೆ ಜನವೇ-
ದಿಯ ವರಾಂತರ್ವೇದಿ ಮಖವೇ-
ದಿಯ ಬಹಿರ್ವೇದಿಗಳನನುವಡಿಸಿದರು ವಹಿಲದಲಿ ॥ ೩೨ ॥

ದೇವ ನಿನ್ನಯ ಕರುಣದಲಿ ಸಕ-
ಳಾವನೀಪತಿವಿಜಯಬಹಳಾ-
ರ್ಥಾವಲಂಬನನೀಮಖಪ್ರಾರಂಭವಿಸ್ತಾರ ।
ಈ 'ವಿಜಯ'ವೈಭವವೆನಗೆ ಸಂ-
ಭಾವಿತನೆ ವರರಾಜಸೂಯಕೆ
ದೇವ ದೀಕ್ಷಿತನಾಗು ನೀನೆಂದೆಱಗಿದನು ಪದಕೆ ॥ ೩೩ ॥

---

೩೧. [ಋತ್ವಿಕ್–ಯಜ್ಞ ಮಾಡುವವನು. ಅಧ್ವರಿ (=ಅಧ್ವರ್ಯು)–ಋಗ್ವೇದಾನುಸಾರ ಯಜ್ಞ ಮಾಡುವವನು. ಉದ್ಗಾತೃ–ಯಜ್ಞದಲ್ಲಿ ಸಾಮವೇದವನ್ನು ಗಾನಮಾಡುವವನು. ಹೋತೃ–ಯಜ್ಞದಲ್ಲಿ ಮಂತ್ರಗಳನ್ನು ಹೇಳುವವನು. ರಾಜಾಧ್ವರ–ರಾಜಸೂಯ ಯಾಗ].

೩೨. [ಮಯ–ರಾಕ್ಷಸರ ಶಿಲ್ಪಿ. ವಿಶ್ವಕರ್ಮ–ದೇವತೆಗಳ ವಾಸ್ತುಶಿಲ್ಪಿ. ನಯವಿವೇಕ–(ವಾಸ್ತುಶಿಲ್ಪ ವಿದ್ಯೆಯ) ರೀತಿನೀತಿಗಳ ವಿವೇಚನೆ. ಮಖಶಾಲೆ–ಯಜ್ಞಶಾಲೆ. ವೇದಿ–ಜಗಲಿ. ವಹಿಲದಲಿ–ಬೇಗನೆ].

೩೩. 'ವಿಭವ (ಅ)
[ಸಂಭಾವಿತ–ಯೋಗ್ಯವಾದದ್ದು, ಅರ್ಹವಾದದ್ದು].

ಮಣಿದು ಹಿಡಿದೆತ್ತಿದನು ರಾಯನ
ಹಣೆಯುನನುಪಮಕರುಣನಿಧಿ ಕಡು-
ಗುಣಿಯೆ ಬಾ ಯೆನ್ನಾಣೆ ಬಾಯೆಂದಪ್ಪಿ ವೈದಡವಿ ।
ಗುಣವಹುದು ನಿನಗಿಂದುಕುಲ ದಿನ
ಮಣಿಯೆ ದೀಕ್ಷಿತನಾಗು ಮದವಾ-
ರಣನೆ ದೀಕ್ಷಿತನಾಗೆನುತ ಬೋಳೈಸಿದನು ಹರಸಿ ॥ ೩೪ ॥

ಹುದಿದ ನವನೀತಾನುಲೇಪದ
ಹೊದೆದ ಕೃಷ್ಣಾಜಿನದ ಹಸ್ತಾ-
ಗ್ರದಲಿಸೆವ ಸಾರಂಗಶೃಂಗದ ಯಾಜಮಾನ್ಯದಲಿ ।
ಉದಧಿಗೊರೆಗಟ್ಟುವ ಚತುರ್ವೇ-
ದದ ಮಹಾಘೋಷದಲಿ ಮುಖಕುಂ-
ಡದ ತದಂತರ್ವೇದಿಗೈತಂದನು ಮಹೀಪಾಲ ॥ ೩೫ ॥

ತ್ರಿದಿವವನು ತುಡುಕಿತು ಹವಿರ್ಗಂ-
ಧದ ಗಡಾವಣೆ ಧೂತಧೂಮದ
ತುದಿ ತಪೋಲೋಕದಲಿ ತಳಿತುದು ಸತ್ಯಲೋಕದಲಿ ।
ತ್ರಿದಶರುಚಿ ಬಾಯಾಡಿಸಿದರ-
ಗ್ಗದ ಧ್ರುವಾದಿಗಳನು ಸುತೃಪ್ತಿಯ
ಹೊದಜುದೇಗಿನ ಹೊಟ್ಟೆ ನೂಕಿತು ಹರಿಹಯಾದಿಗಳ ॥ ೩೬ ॥

---

೩೪. [ಮದವಾರಣ-ಮದ್ದಾನೆ (ಮದಿಸಿದ ಆನೆ). ಬೋಳೈಸು-ಸಂತೈಸು, ಸಮಾಧಾನ ಪಡಿಸು].

೩೫. [ಹುದಿದ-ಹರಡಿದ, ವ್ಯಾಪಿಸಿದ. ನವನೀತಾನುಲೇಪ-ಬೆಣ್ಣೆಯ ಬಳಿತ. ಕೃಷ್ಣಾಜಿನ-ಜಿಂಕೆಯ ಚರ್ಮ. ಸಾರಂಗ-ಚರ್ಮದ ಮೇಲೆ ಚುಕ್ಕಿಯುಳ್ಳ ಜಿಂಕೆ. ಶೃಂಗ-ಕೊಂಬು. ಉದಧಿ-ಸಮುದ್ರ. ಒರೆಗಟ್ಟು-ಸರಿಗಟ್ಟು, ಸಮಾನವಾಗು].

೩೬. [ತ್ರಿದಿವ-ಸ್ವರ್ಗ. ತುಡುಕು-ಬೇಗನೆ ಹಿಡಿ, ಮುಟ್ಟು. ಗಡಾವಣೆ-ಅಧಿಕ್ಯ, ಹೆಚ್ಚಳ. ಧೂತ-ಹರಡಿದ, ಹಬ್ಬಿದ. ತಪೋಲೋಕ-ಏಳು ಊರ್ಧ್ವಲೋಕಗಳಲ್ಲಿ ಒಂದು. ತಳಿತುದು-ಅರಳಿತು, ಹಿಗ್ಗಿತು. ತ್ರಿದಶ-ದೇವತೆ. ಧ್ರುವಾದಿಗಳು-ಬೇರೆ ಬೇರೆ ವರ್ಗದ ದೇವತೆಗಳು. ಹೊದಜುದೇಗು-ತೇಗುಗಳ ಪರಂಪರೆ, ಗುಂಪು ಗುಂಪಾಗಿ ಬಂದ ತೇಗು. ಹರಿಹಯ-ಇಂದ್ರ].

ಏಳುದಿನಪರಿಯಂತ ಗಳಿಗೆಗೆ
ಮೇಲೆಮೇಲಧ್ವರ[1]ದ ಲಕ್ಷ್ಮಿ[1] ಛ-
ಡಾಳಿಸಿತು ಜಾಳಿಸಿ ಚತುರ್ದಶಲೋಕಚೇತನವ ।
ಕೇಳಿದೈ ಜನಮೇಜಯಕ್ಷಿತಿ-
ಪಾಲ ಸುರಲೋಕದಲಿ ಪಾಂಡುವಿ-
ನೋಲಗಕೆ ಬಹ ಬಣಗು ಸುರರಿಗೆ ಸಮಯವಿಲ್ಲೆಂದ ॥ ೩೭ ॥

ಈತನಾರೈ ಪಾಂಡುನಂದನ-
ನೀತ ಕಾಣಿರೆ ಪಾಂಡುವಿನ ಸುತ-
ನೀತನೇ ದಿಟ ಪಾಂಡುವಿನ ಮಗನೀತನೇ ಎನುತ ।
ಪೂತು ಧರ್ಮಜ ಪೂತು ಧರ್ಮಜ
ಪೂತು ಧರ್ಮಜ ಯೆನುತ ರಾಜ-
ವ್ರಾತ ಹೊಗಳಿತು ನಹುಷನಳನೃಗದಶರಥಾದಿಗಳು ॥ ೩೮ ॥

ತಲೆಹೊಱೆಯುಲಡಕಿದರು ಹೆಗಲಲಿ
ಕೆಲರು ಶಿಷ್ಯರ ನೆತ್ತಿಯಲಿ ಕೆಲ-
ಕೆಲರು ಹೊಱಿಸಿತು ದೇಶದೇಶದ ಸಕಲ ಭೂಸುರರು ।
ಲಲಿತರತ್ನಾಭರಣಗೋಸಂ-
ಕುಲದ ಸೂಱೆಯನೇನನೆಂಬೆನು
ಸಲೆ ತಣಿದುದಾ ಸಕಲ ಜಾತಿ ಜನೇಶಯಜ್ಞದಲಿ ॥ ೩೯ ॥

ಸುರರಿಗಾದುದು ತುಷ್ಟಿ ಧರಣೀ-
ಸುರಮುನೀಂದ್ರ[1]ರು ವೈಶ್ಯ ಶೂದ್ರೋ-
ತ್ಕರರಿ[1]ಗಾ ಚಂಡಾಲಪರಿಯಂತಾಯ್ತು ಸತ್ಕಾರ ।
ಧರಣಿಪಾಲಕರಿದೆ ಚತುಸ್ಸಾ-
ಗರದ ತಡಿಪರಿಯಂತ ವಿಶ್ವಂ-
ಭರೆಯ ಮಾನ್ಯರ ಮನ್ನಿಸೆಂದನು ಭೂಪತಿಗೆ ಭೀಷ್ಮ ॥ ೪೦ ॥

---

೩೭. [1]ದಲಗ್ನಿ (ಅ).
[ಲಕ್ಷ್ಮಿ-ಯಶಸ್ಸು, ಕೀರ್ತಿ. ಛಡಾಳಿಸು-ರಭಸತೋರು. ಜಾಳಿಸು-ಸೋಲಿಸು, ಮೇಲುಗೈಯಾಗು].

೩೯. [ಗೋಸಂಕುಲ-ಹಸುಗಳ ಮಂದೆ].

೪೦. [1]ರಿಗಾಯ್ತು ಶೂದ್ರರ ನೆರವಿ (ಅ ಆ), ಸ್ವೀಪಾ (ಅ ಪ್ರ ಕ k).
[ವಿಶ್ವಂಭರೆ-ಭೂಮಿ].

೪. ಕೃಷ್ಣನಿಗೆ ಅಗ್ರಪೂಜೆ-ಶಿಶುಪಾಲವಧೆ

ಕೇಳು ಜನಮೇಜಯಧರಿತ್ರೀ-
ಪಾಲ ಮುನಿಮಧ್ಯದಲಿ ನಿಮ್ಮ ನೃ-
ಪಾಲ ಭೀಷ್ಮಗೆಂದನ[1]ಭ್ರಗಭೀ[1]ರನಾದದಲಿ ।
ಭಾಳನೇತ್ರಗೆ ಪಡಿಯೆನಿಪ ಭೂ-
ಪಾಲರಿದಱೊಳಗಗ್ರಪೂಜ್ಯನ
ಹೇಳೆನಲು ಗಾಂಗೇಯ ನುಡಿದನು ವೇದಸ[2]ಮ್ಮ[2]ತವ ॥ ೪೧ ॥

ಆರು ತಾರಾಗ್ರಹ[1]ಗಳೊಳಗ-
ರ್ಘ್ಯಾರುಹರು[1] ದಿನಕರನುಳಿಯೆ [2]ಬಳಿ-
ಕಾರು[2] [3]ಸುರಮುನಿನಿಕರ[3]ಸೇವ್ಯರು ಶೂಲಧರನುಳಿಯೆ ।
ಆರು ನಿರ್ಜರನಿವಹದಲಿ ಜಂ-
ಭಾರಿಯಲ್ಲದೆ ಮಾನನೀಯರ-
ದಾರು ಜಗದಲಿ ಕೃಷ್ಣನಲ್ಲದೆ ಪೂಜ್ಯತಮರೆಂದ ॥ ೪೨ ॥

ಗಿರಿಗಳಲಿ ಹೇಮಾದ್ರಿ ಘನಸಾ-
ಗರದೊಳಗೆ ದುಗ್ಧಾಬ್ಧಿ ದೇವಾ-
ಸುರನರೋರಗನಿಕರದಲಿ ನಾರಾಯಣನೆ ಮಿಗಿಲು ।
ಅರಸ ಸಂಶಯವೇಕೆ ಕೃಷ್ಣನ
ಚರಣವನು ತೊಳೆ ರಾಜಸೂಯಾ-
ಧ್ವರದ ಪೂಜಾಪಾತ್ರನೀ ಹರಿಯೆಂದನಾ ಭೀಷ್ಮ ॥ ೪೩ ॥

---

೪೧. [1]ಗಂಭೀರ (ಅ ಪ್ರ ಕುಮಾ), ಸ್ವೀಪಾ (ಕ k ಅ). ಸುಮ (ಅ ಕುಮಾ).
[ಅಭ್ರ-ಮೇಘ, ನೋಡ].

೪೨. [1]ದ ಮಧ್ಯದೊಳಾರು (ಅ ಕುಮಾ), ಸ್ವೀಪಾ (k ಓ ಪ್ರ ಅ). [2]ಬಳಿಕಾರಾರು (ಅ ಕುಮಾ). [3]ಸುರನಿಕರದಲಿ (ಅ ಕುಮಾ).

[ಅರ್ಘ್ಯಾರುಹರು (=ಅರ್ಘ್ಯಾರ್ಹರು)-ಪೂಜೆಗೆ, ಸತ್ಕಾರಕ್ಕೆ, ಅರ್ಹರಾದವರು. ನಿರ್ಜರ-ದೇವತೆ. ಜಂಭಾರಿ-ಇಂದ್ರ (ಜಂಭಾಸುರನ ಶತ್ರು)].

೪೩ [ಹೇಮಾದ್ರಿ-ಚಿನ್ನದ ಪರ್ವತ, ಮೇರುಪರ್ವತ. ದುಗ್ಧಾಬ್ಧಿ-ಕ್ಷೀರಸಾಗರ].

ವಿನಯುದಲಿ ಸಹದೇವ ಕೈಗೊ-
ಟ್ಟನುಪನ ತಂದನು ಪಿತಾಮಹ
ಜನಕ ಪಾಯುವಧಾರು ಗಂಗಾಜನಕನವಧಾರು ।
ದನುಜರಿಪುವವಧಾನವವಧಾ-
ನೆನುತ ವಿಮಳಮಹಾ[1]ರ್ಘ್ಯ[1]ಸಿಂಹಾ-
ಸನಕೆ ಬಿಜಯಂಗೈಸಿದರು ಕುಳ್ಳಿರ್ದನಸುರಾರಿ ॥ ೪೪ ॥

ತಂದು ಮಣಿಮಯಪಡಿಗದಲಿ ಗೋ-
ವಿಂದನಂಘ್ರಿಯ ತೊಳೆದು ಗಂಗೆಯು
ತಂದೆವೀಗಳೆ ತಾವೆನುತ ತಮ್ಮುತ್ತಮಾಂಗದಲಿ ।
ವಂದಿಸುತ ವೈದಿಕದ ಪರಿವಿಡಿ-
ಯಿಂದ ಮಧುಪರ್ಕಾದಿ ಪೂಜೆಗ-
ಳಿಂದ ಸತ್ಕರಿಸಿದರು ಸಚರಾಚರಜಗತ್ಪತಿಯ ॥ ೪೫ ॥

ಅವನಿಯಮರರ ಕಳಕಳವ ಪಾಂ-
ಡವರ ಸುಮ್ಮಾನವನು ನೃಪಕೌ-
ರವರ ಮಾತ್ಸರ್ಯೋಪಲಾಲಿತಹರ್ಷವಿಭ್ರಮವ ।
ಅವನಿಪಾಲರು ಕಂಡರೀಯು-
ತ್ಸವವ ಕಂಡಿರೆ ನೀವೆನುತ ತ-
ಮ್ಮವರೊಳೊಬ್ಬರನೊಬ್ಬರುಚಿ ನೋಡಿದರು ಬೆಱಗಾಗಿ ॥ ೪೬ ॥

ಕೆಲರು ಪಾಂಡವಮೈತ್ರಿಯಲಿ ಕೆಲ-
ಕೆಲರು ಕೃಷ್ಣನ ಬಲುಹಿನಲಿ ಕೆಲ-
ಕೆಲರು [1]ಬಂಧುತ್ವದಲಿ[1] ಕೆಲರನುಚಿತದ ಭೀತಿಯಲಿ ।

---

೪೪. [ಪಾಯವಧಾರು–ಪಾದವೆಚ್ಚರಿಕೆ. (ಅವಧಾರು--ಎಚ್ಚರಿಕೆಯ ಮಾತು)].

೪೫. [ಪಡಿಗ–(ಕೈಕಾಲು) ತೊಳೆದ ನೀರನ್ನು ಹಿಡಿಯುವ ಪಾತ್ರೆ. ಉತ್ತಮಾಂಗ–ಶಿರಸ್ಸು, ತಲೆ. ವೈದಿಕದ ಪರಿವಿಡಿ–ವೇದೋಕ್ತ ಕ್ರಮ. ಮಧುಪರ್ಕ–ಜೇನು, ಹಾಲು, ಮೊಸರು, ತುಪ್ಪ, ಸಕ್ಕರೆ–ಇವುಗಳ ಮಿಶ್ರಣದ ಪೂಜಾದ್ರವ್ಯ].

೪೬. [ಅವನಿಯಮರ–ಭೂಸುರ, ಬ್ರಾಹ್ಮಣ. ಮಾತ್ಸರ್ಯೋಪಲಾಲಿತಹರ್ಷ–ಹೊಟ್ಟೆಯ ಕಿಚ್ಚಿನಿಂದ ಪೋಷಿತವಾದ, ಕೂಡಿದ, ಸಂತೋಷ].

೪೭. [1]ಧೀರತ್ವದಲಿ (ಸರ್ವತ್ರ), ಸ್ವೀಪಾ (ಪ್ರ).

ಕೆಲರಿದೇಕೆಮಗೆಂದು ಧರಣೀ-
ವಳಯದವನಿಪರಿದ್ದ[2]ರವರೊಳು[2]
ಖಳಶಿರೋಮಣಿ ಮಸಗಿದನು ಭೂಪಾಲ ಕೇಳೆಂದ ॥ ೪೭ ॥

ಹೊತ್ತಿಕೆದೆ ಹೇರಾಳತಮದಲಿ
ಕೆತ್ತಿದವು ಮೀಸೆಗಳು ಕಂಗಳು
ಹೊತ್ತವರುಣಚ್ಛವಿಯನುಬ್ಬರಿಸಿದು[1]ದು ಗೋನಾಳಿ[1] ।
ಕೆತ್ತುದಱಿವಿನ ಕದ ಕಟಾಕ್ಷಿಸಿ
ಮಿತ್ತು ಮೊಲಿದಳು ರೋಷ ಮಿಗೆ ಹೊಗ-
ರೆತ್ತಿತೈ ಶಿಶುಪಾಲವೀರನ ವಚನಮಯುಖಡುಗ ॥ ೪೮ ॥

ಏನೆಲವೊ ಸಹದೇವ ವಸುಧೆಯ
ಮಾನನಿಧಿಗಳ ಮುಂದೆ ನಂದನ-
ಸೂನುವಿಗೆ ಸಿಂಹಾಸನ[1]ವೆ[1] ಮೇಲರ್ಘ್ಯಸತ್ಕೃತಿಯೆ ।
ನೀನಱಿಯದವ ನಿಮ್ಮ ಯಾಗಕೆ
ಹಾನಿಯಲ್ಲಾ ನಿಮ್ಮ ಹಿರಿಯರಿ-
ದೇನ ನೆಗಳಿದರಕಟ ಖೂಳರು ಪಾಂಡುಸುತರೆಂದ ॥ ೪೯ ॥

ಯದುಗಳಿವದಿರು ಮುನ್ನ ರಾಜ್ಯಾ-
ಸ್ಪದದ ಸಿಂಹಾಸನಕೆ ಬಾಹಿರ-
ರದಱೊಳೀತನ ಖೋಡಿಯನು ಜಗವೆಲ್ಲ ಬಲ್ಲುದಲೆ ।
ಇದು ಮಹಾಧ್ವರವಿಲ್ಲಿ ನೆರೆದಿ-
ರ್ದದು ಮಹಾಕ್ಷತ್ರಿಯರು ಗೋವರ-
ಸದೆಗನಿಲ್ಲಿ [1]ವಿಶಿಷ್ಟ[1]ನೇ ಸಹದೇವ [2]ಹೇ[2]ಳೆಂದ ॥ ೫೦ ॥

---

೪೭. [2]ರದಱೊಳು (ಅ ಅ), ಸ್ವೀಪಾ(ಕುಮಾ).

೪೮. [ಕೆತ್ತು-ಅದಿರು, ನಡುಗು. ಅರುಣಚ್ಛವಿ-ಕೆಂಪುಹೊಳಪು. ಗೊನಾಳಿ-ಗಂಟಲು (ಮಣಿ). ಮಿತ್ತು-ಮೃತ್ಯು. ಹೊಗರು-ಪ್ರಕಾಶ, ಕಾಂತಿ].

೪೯. [1]ದ (ಅ ಕುಮಾ), ಸ್ವೀಪಾ (ಕ).
[ಸತ್ಕೃತಿ-ಸತ್ಕಾರ, ಗೌರವ, ಸಂಭಾವನೆ. ನೆಗಳು-ಮಾಡು].

೫೦. [1]ಗೆ ಶ್ರೇಷ್ಠ (ಅ ಕುಮಾ), ಗೆ ಶಿಷ್ಟ (ಕ ಅ) ; ಸ್ವೀಪಾ (ಪ್ರ k). ಕೇ (ಅ ಅ ಕುಮಾ), ಸ್ವೀಪಾ (k ಪ್ರ).
[ಬಾಹಿರ-ಹೊರಗು. ಖೋಡಿ-ದುರುಳತನ, ದುಷ್ಟತನ. ಗೋವರಸದೆಗ-ದನಕಾಯುವರಲ್ಲಿ ನಿಕೃಷ್ಟನಾದವನು].

ತರಳರಿವದಿರು ಪಾಂಡುಸುತರಂ-
ತಿರಲಿ ನೀ ಸುಪ್ರೌಢನೆಂ[1]ತಾ[1]-
ದರಿಸಿದೈ ವಸುದೇವಸುತನಲಿ ಶಿಷ್ಟಯೋಗ್ಯತೆಯು ।
ಧರಣಿಪಾಲರ ಮಧ್ಯದಲಿ ಭಾ-
ಸ್ಕರನು ಗಡ ತುಱುಪಳ್ಳಿಕಾಱರ
ಪುರದ ಭಾಸ್ಕರನೀತನಲ್ಲಾ ಭೀಷ್ಮ ಹೇಳೆಂದ ॥ ೩೧ ॥

ಶಿವನ ಸರಿಮಂಚದಲಿ ಸರಸಿಜ-
ಭವನ ಸಮಗದ್ದುಗೆಗಳಲಿ ವಾ-
ಸವನ ತೊಡೆಸೋಂಕಿನಲಿ ಕುಳ್ಳಿಹರೀ ಮಹೀಶ್ವರರು ।
ಇವರ ಸ[1]ರಿ[1]ಸಕೆ ಸಲ್ಲದೀ ಯಾ-
ದವನನುದ್ಧದಲಿರಿಸಿ ಬಹುಮಾ-
ನವನು ಮಾಡಿದೆ ಭೀಷ್ಮ [2]ಯಾಗ[2]ವನಳಿದೆ ನೀನೆಂದ ॥ ೩೨ ॥

ಅಱಿಯದವರಾದರಿಸಿದೊಡೆ ನೀ-
ನಱಿಯಬೇ[1]ಡಾ[1] ನಿನ್ನ ಕುಂಡಿನ
ಕೊಱತೆಗಳನಾರಱಿ[2]ಯರೀ[2] ಭೂಪಾಲಮಧ್ಯದಲಿ ।
ಕುಱುಬರೂರಲಿ ಗಾಜು ಮಾಣಿಕ-
ವಱಿಯದವರಿಗೆ ಕೃಷ್ಣ ನೀ ಕಡು
ಬೆಱೆತೆಲಾ ನೆಱೆಮಱೆದಲಾ ನಿನ್ನಂತರವನೆಂದ ॥ ೩೩ ॥

ರಾಯ ನಿನಗಾವಿಂದು ದಿಟ ಸಿ-
ದ್ಧಾಯವನು ನಾವ್ ತೆತ್ತೆವಲ್ಲದೆ
ವಾಯುಜನ ಫಲುಗುಣನ ಬಿಲ್ಲಿನ ಬಲುಮೆಗಂಜಿದೆವೇ ।

---

೩೧. [1]ಪಾ (ಅ ಅ ಕುಮಾ), ಸ್ವೀಪಾ (ಪ್ರ ಕ k).
[ಶಿಷ್ಟಯೋಗ್ಯತೆ-ಮರ್ಯಾದಸ್ಥನ, ಗೌರವಾನ್ವಿತನ, ಅರ್ಹತೆ. ತುಱುಪಳ್ಳಿಕಾರ-ಹಸುಗಳಿರುವ ಹಳ್ಳಿಯ(ಗೋಕುಲದ)ವನು].

೩೨. [1]ರ (ಅ). [2]ಯಜ್ಞ (ಅ ಅ ಕುಮಾ), ಸ್ವೀಗಾ (ಪ್ರ ಕ k).
[ಸರಿಮಂಚ-ಸಮಾನವಾದ ಪೀಠ. ಗದ್ದುಗೆ-ಪೀಠ. ಸರಿಸ-ಸಮಾನ. ಅಳಿ-ನಾಶಪಡಿಸು, ಹಾಳುಮಾಡು].

೩೩. [1]ಡವೆ (ಅ ಕುಮಾ), ರದೆ ಪ್ರ). [2]ವರೈ (ಅ), ಯರೈ (ಪ್ರ),
[ಅಂತರ-(ಸ್ಥಾನಮಾನದ) ವ್ಯತ್ಯಾಸ, ಭೇದ].

ರಾಯ ಠಕ್ಕಿನ ನಿಧಿಯು ಠೌಳಿಯು
ಮಾಯಕಾಱನ ತಂದು ಮನ್ನಿಸಿ
ರಾಯರಭಿಮಾನವ ವಿಭಾಡಿಸಿ ಕೊಂ[1]ದ[1] ನೀನೆಂದ ॥ ೫೪ ॥

ಜರಡುಮಖವೀ ಮಖಕೆ ಹೋಲುವ
ಧರಣಿಪತಿಯಾ ಮಖಕೆ ಧರಣೀ-
ಶ್ವರಗೆ ಪಾಸಟಿ ಭೀಷ್ಮನೀ ಮಖ ಭೂಪ ಭೀಷ್ಮರಿಗೆ ।
ಸರಿಸ[1]ವಾ[1]ದನು ಕೃಷ್ಣನೀ ಮಖ
ಧರಣಿಪತಿ ಭೀಷ್ಮಂಗೆ ಕೃಷ್ಣಗೆ
ಸರಿಯ ಕಾಣೆನು ನಿಮ್ಮೊಳೊಬ್ಬರಿಗೊಬ್ಬರೆಣೆಯೆಂದ ॥ ೫೫ ॥

ಸೀಳಿವನ ಹೆಡತಲೆಯೊಳಗೆ ತೆಗೆ
ನಾಲಗೆಯನೆಲೆ ಕುನ್ನಿಗಳಿರಿದ
ಕೇಳುವರೆ ಪತಿನಿಂದೆಯನು ಪಾತಕಕೆ ಗುರುವಲ್ಲಾ ।
ಏಳೆನುತ ಕೃತವರ್ಮಸಾಂಬನೃ-
ಪಾಲಮೊದಲಾದಖಿಳಯಾದವ-
ಜಾಲವೆದ್ದುದು ಬಿಗಿದ ಬಿಲುಗಳ ಸೆಳೆದಡಾಯುಧದಿ ॥ ೫೬ ॥

ಕದಡಿ[1]ತಖಿಳಾ[1]ಸ್ಥಾನ [2]ಹಾ[2]ಯೆಂ-
ದೊದಱೆ ಋಷಿಗಳ ತಾಳಿಗೆಗಳೊಣ-
ಗಿದವು ಹಲ್ಲಣಿಸಿದವು ರಥಮಾತಂಗವಾಜಿಗಳು ।
ಕೆದಱೆತೀ[3]ಡೆ[3]ಯ [4]ಕಡೆ[4] ಸುನೀಥನ
ಸದೆದು ತೆಗೆ ಸುಂಟಿಗೆಯನೆನುತಲಿ
ಯದುನೃಪಾಲರು ಗಜಬಜಿಸಲೆಡೆ[5]ಹೊ[5]ಕ್ಕನಾ ಭೀಷ್ಮ ॥ ೫೭ ॥

---

೫೪. [1]ಡೆ (ಅ ಆ ಪ್ರ k), ಸ್ವೀಪಾ (ಕ).
[ಸಿದ್ದಾಯ–ತೆರಿಗೆ, ಕಂದಾಯ. ಠಕ್ಕು–ಮೋಸ, ವಂಚನೆ. ಠೌಳಿ–ಠಕ್ಕು, ವಿಭಾಡಿಸು–ನಾಶಮಾಡು, ಹಾಳುಮಾಡು].

೫೫. [1]ನಾ (ಅ ಆ ಕುಮಾ), ಸ್ವೀಪಾ (ಪ್ರ ಕ).
[ಜರಡು–ಜೊಳ್ಳು. ಮಖ–ಯಾಗ. ಪಾಸಟಿ–ಸಮಾನ. ಸರಿಸ–ಸಮಾನ].

೫೬. [ಹೆಡತಲೆ–ತಲೆಯ ಹಿಂಭಾಗ, ಹಿಂದಲೆ. ಕುನ್ನಿ–ನಾಯಿಮರಿ, ಅಲ್ಪನಾದವನು. ಅಡಾಯುಧ–ಒಂದು ಬಗೆಯ ಕತ್ತಿ].

೫೭. [1]ತಾಯಾ (ಅ ಕುಮಾ). [2]ಹೋ (ಅ ಕುಮಾ). [3]ಟೆ (ಅ). [4]ದೆಸೆ (ಅ ಕುಮಾ). [5]ಪೊ (ಅ ಪ್ರ), ವೊ (ಅ ಕುಮಾ) ; ಸ್ವೀಪಾ (ಕ k),

ಶಿವಶಿವಾ ತಪ್ಪಾಯ್ತು ನಮ್ಮು-
ತ್ಸವಕೆ ಬಂದವನಿಪನ ಗುಣದೋ-
ಷವನು ನಾವೀಕ್ಷಿಸುವುದನುಚಿತವೆಂದು ವಿನಯದಲಿ ।
ಅವನಿಪತಿ ಬೆಂಬತ್ತಿ [1]ಗಮನಕೆ[1]
ತವಕಿಸುವ ಶಿಶುಪಾಲಕನ ಹಿಡಿ-
ದವಚಿದನು ಮಧುರೋಕ್ತಿಯಲಿ ನುಡಿಸಿದನು ಬೋಳೈಸಿ ॥ ೫೮ ॥

ಎಲೆ ಮರುಳೆ ಭೂಪಾಲ ನೊರಜಿನ
ಕಳಕಳಕೆ ಕರಿ ಬೆಚ್ಚುವುದೆ [1]ಮಂ-
ಜಲಿಯ[1] ಮ[2]ಱ[2] ಮಿಡುಕಿದರೆ ಕಳವಳಿಸುವುದೆ ಕಲಿಸಿಂಹ ।
ಗಿಳಿಯ ಮುಙುಕಕೆ ಗಿಡಿಗ[3]ನಗಿ[3]ದ-
ವ್ವಳಿಸುವುದೆ ಹರಿಗಿವನು ಗಣ್ಯನೆ
ಗಳಹನಿವನೊಡನಾವುದನುನಯವೆಂದನಾ ಭೀಷ್ಮ ॥ ೫೯ ॥

ಎಲೆ ನಪುಂಸಕ ಭೀಷ್ಮ ಸುಡು ಬೈ-
ಗುಳಿನ ಭಂಡನು ನೀನಲಾ ಗೋ-
ಕುಲದ [1]ಗರುವ[1]ನ ಗುಣವ[2] ಗುಂಡಿತುಗೊಂಡೆ[2] ಬೇಸಱದೆ ।
ಹಳಿವಿನಲಿ ಹೆಮ್ಮೆಯನು ಕುಂದಿನ
ಕುಲದೊಳಗ್ಗಳಿಕೆಯನು ತಮದಲಿ
ಬೆಳಗ ಬಣ್ಣಿಸುತಿಹೆ ನಿರಂತರವೆಂದನಾ ಚೈದ್ಯ ॥ ೬೦ ॥

---

೫೭. [ತಾಳಿಗೆ–ಅಂಗುಳು, ಗಂಟಲು. ಹಲ್ಲಣಿಸು–ಸಜ್ಜುಮಾಡು, ಸಿದ್ಧಪಡಿಸು. ಸುನೀಥ–ಶಿಶುಪಾಲನ ಇನ್ನೊಂದು ಹೆಸರು. ಸದೆದು–ಬಡಿದು. ಸುಂಟಿಗೆ–ಮಾಂಸ, ಎದೆಗುಂಡಿಗೆ].

೫೮. [1]ಕದನಕೆ (ಪ್ರ k).

[ಗಮನಕೆ–ಹೊರಟುಹೋಗುವುದಕ್ಕೆ. ಅವಚು–ಅಪ್ಪಿಕೊ, ತಬ್ಬಿಕೊ. ಮಧುರೋಕ್ತಿ–ಸವಿಮಾತು].

೫೯. [1]ಮಂಡಳಿಯ (ಅ ಅ ಕುಮಾ ಪ್ರ), ಸ್ವೀಪಾ (ಓ). [2]ಗಜ (ಪ್ರ). [3]ನುಗಿ (ಅ ಕುಮಾ), ನಳಿ (ಪ್ರ) ; ಸ್ವೀಪಾ (ಕ k).

[ನೊರಜು–ಸೊಳ್ಳೆ. ಮಂಜಲಿ–ಬೆಕ್ಕು (ಮಂಜರ, ಮಂಜರಿ, ಮಂಜಲಿ). ಮುಙುಕ–ಮುಖವಿಕಾರ. ಅಗಿ–ಹೆದರು, ಭಯಪಡು. ಗಳಹ–ಹರಟುವವನು. ಅನುನಯ–ನಯವಾದ ಮಾತುಗಳಿಂದ ಒಲಿಸಿಕೊಳ್ಳುವುದು, ಸ್ನೇಹದ ರೀತಿನೀತಿ].

೬೦. [1]ಗರ್ವ (ಕುಮಾ). [2]ಗಂಡಿತುಗೊಂಡೆ (ಅ), ಕಂಡಿತು....(ಕುಮಾ), ಗುಂದಿತು.... (ಅ), ಗುಣಯಿಸಿಕೊಂಡೆ (ಪ್ರ).

ಹಕ್ಕಿಹರಿಣಿಯ ತಱಿದ ಗಡ ಕೈ-
ಯಿಕ್ಕಿದೊಡೆ [1]ಕಡು[1]ಗುದುರೆಯನು [2]ನೆಲ-[2]
ಕಿಕ್ಕಿದ[3]ನೆ ನೆಱಿ[3][3] ಹೇಳು ಹೇಳಾ ಕೃಷ್ಣ[4]ನಾಳ್ತನವ[4] ।
ಹೊಕ್ಕು ಹೆಬ್ಬಾವಿನ ಬಸುಱ ಸೀ-
ಳ್ದಿಕ್ಕಿದನೆ ಯಾದವನ ಪೌರುಷ-
ವಕ್ಕಜವಲಾ ಭೀಷ್ಮ ತೂಪಿಱಿಯೆಂದನಾ ಚೈದ್ಯ ॥ ೬೧ ॥

ಶಿವಶಿವಾ ಮುದುಗೂಗೆ ಮೆಚ್ಚದು
ರವಿಯನೆಲವೋ ಭೀಷ್ಮ ನಿಲು [1]ಯಾ-
ದವನ[1] [2]ಮರ್ದಿಸಿ[2] ನಿನಗೆ ಜೋಡಿಸುವೆನು [3]ಘಟಾನಳನ[3] ।
ಯುವತಿಯರು ಹಾರುವರು ಹುಲುಪಾಂ-
ಡವರು ಪತಿಕರಿಸಿದೊಡೆ ನೀವಿಂ-
ದೆನಗೆ ಮಾನ್ಯನೆ ಕೃಷ್ಣ ಸಿಂಹಾಸನವನಿಳಿಯೆಂದ ॥ ೬೨ ॥

---

೬೦. [ಗರುವ-ಶ್ರೇಷ್ಠ. ಗುಂಡಿತುಗೊಂಡೆ-ಗಂಭೀರವಾಗಿ ಸ್ವೀಕರಿಸಿದೆ, ಮಹತ್ತ್ವವುಳ್ಳ
ನ್ನಾಗಿ ಭಾವಿಸಿರುವೆ (?). ಹಳಿವು-ನಿಂದೆ, ದೋಷ. ಚೈದ್ಯ-ಶಿಶುಪಾಲ].

೬೧. [1]ಕಡ (ಅ). [2]ನೆರೆ (ಅ). [3]ನೆಸಿರಿ (ಅ). [4]ಪೌರುಷವ (ಪ್ರ).
[ಹರಿಣಿ-ಹೆಣ್ಣು ಜಿಂಕೆ. ಕಡುಗುದುರೆ-ಬಲಿಷ್ಠವಾದ ಕುದುರೆ. ಆಳ್ತನ-ಪರಾಕ್ರಮ, ಪೌರುಷ. ಅಕ್ಕಜ-ಆಶ್ಚರ್ಯ. ತೂಪಿಱಿ-ದೃಷ್ಟಿಪರಿಹಾರಾರ್ಥವಾಗಿ ಗಾಳಿಯಲ್ಲಿ ಬೂದಿ ಮುಂತಾದುವನ್ನು ಊದು].

೬೨. [1]ಮಾಧವ (ಅ ಕುಮಾ), ಸ್ವೀಪಾ (ಕ ಪ್ರ). [2]ಮರ್ದಿಸಿ (ಅ ಕುಮಾ), ಮನ್ನಿಸಿ (ಪ್ರ). [3]ಮಹಾನಳನ (ಅ ಕುಮಾ), ಸ್ವೀಪಾ (ಕ ಪ್ರ ಅ).
[ಘಟಾನಳ-ಮಡಕೆ ಮತ್ತು ಬೆಂಕಿ. ಪತಿಕರಿಸು-ಮನ್ನಿಸು, ಗೌರವಿಸು. ಎವಗೆ-ಎಮಗೆ (ನಮಗೆ)].

ವಿಶೇಷ ಟಿಪ್ಪಣಿ—

ಹಕ್ಕಿ : ಬಕಪಕ್ಷಿಯ ರೂಪದಲ್ಲಿ ಬಾಲಕೃಷ್ಣನನ್ನು ಕೊಲ್ಲಲು ಬಂದಿದ್ದ ಒಬ್ಬ ರಾಕ್ಷಸ. ಕೃಷ್ಣನಿಂದ ಹತನಾದ.

ಹೆಬ್ಬಾವಿನ....ಳ್ದಿಕಿದನೆ : ಅಘಾಸುರನೆಂಬ ರಾಕ್ಷಸನು ಕಂಸನಿಂದ ಪ್ರೇರಿತನಾಗಿ ಹೆಬ್ಬಾವಿನ ರೂಪದಲ್ಲಿ ಕಾಣಿಸಿಕೊಂಡು ಕೃಷ್ಣನನ್ನು ನುಂಗಿದನು. ಕೃಷ್ಣನು ಹಾವಿನ ಹೊಟ್ಟೆಯನ್ನು ಸೀಳಿಕೊಂಡು ಹೊರಬಂದನು.

'ಹರಿಣೀ' ಎಂಬ ಸುಂದರ ಸ್ತ್ರೀ ಜಾತಿ. ಅಂಥ ಸುಂದರಿಯ ರೂಪ ತಳೆದು ಬಂದ ಪೂತನಿ ಎಂಬ ರಾಕ್ಷಸಿ. ಬಾಲಕೃಷ್ಣನಿಗೆ ಸ್ತನ್ಯಪಾನ ಮಾಡಿಸಿದಾಗ, ಅವನು ಅವಳ ಪ್ರಾಣವನ್ನು ಹೀರಿಕೊಂಡನು. ಇವಳು ಕೂಡ ಕಂಸನಿಂದ ಪ್ರೇರಿತಳಾಗಿ ಬಂದವಳು.

ಎಂದು ಚಾಪವ ತರಿಸಿ ಚಪ್ಪರ-
ದಿಂದ ಹೊಱವಡುತವನಿಪಾಲಕ-
ವೃಂದವನು ಕೈವೀಸಿದನು ಕರೆ ಗೋಕುಲೇಶ್ವರನ ।
ಇಂದಲೇ ರಿಪುರುಧಿರಪಾನಾ-
ನಂದಕೃತಮುದಶಾಕಿನೀ ಸ್ವ-
ಚ್ಛಂದಲೀಲಾನೃತ್ಯದರ್ಶನವೆಂದನಾ ಚೈದ್ಯ ॥ ೬೩ ॥

ಹಲ್ಲಣಿಸಿದುದು ಯಾದವರ ಪಡೆ
ಘಲ್ಲಣೆಯ ಘರ್ಘರದ ಘೋಷದ
ಭುಲ್ಲಣೆಯ ಗಂಭೀರಭೇರಿಯು ಬಹಳ ರಭಸದಲಿ ।
ನಿಲ್ಲದಿಳೆ ಪದಹತಿಗೆನಲು ಬಲ-
ವೆಲ್ಲ ಭೀಮನ ಸನ್ನೆಯಲಿ ರಣ-
ಮಲ್ಲರೊಡ್ಡಿತು ಹೊಱಗೆ ನೃಪಮೋಹರದ ಬಾಹೆಯಲಿ ॥ ೬೪ ॥

ಮುನಿಗಳಂಜದಿರಂಜದಿರಿ ಪರಿ-
ಜನಕೆ ಗಜಬಜ ಬೇಡ ಯಾದವ-
ಜನಪರುಬ್ಬಟೆ ನಿಲಲಿ ಸೈರಿಸಿ ಪಾಂಡುಸುತರೆನುತ ।
ಮೊನೆನಗೆಯ ಸಿರಿಮೊಗದ ನೆಗಹಿದ
ಜನದಭಯಹಸ್ತಾಂಬುಜದ ಹರಿ
ವಿನುತಸಿಂಹಾಸನವನಿಳಿದಾ ಧುರಕೆ ಹೊಱವಂಟ ॥ ೬೫ ॥

ಅಂದಿನಲಿ ಶಿಶುಪಾಲಕನ ತಾಯ್
ಬಂದು ಮಗನಪರಾಧಶತದಲಿ
ಕಂದಲಾಗದು ಚಿತ್ತವೆಂದಳು ನಮ್ಮನನುಸರಿಸಿ ।
ಇಂದು ಖತಿಯಿಲ್ಲೆಮಗೆ ಸೈರಿಸ-
ಬಂದುದಿ[1]ಲ್ಲೆಮು[1]ಗೆರಡು ತಪ್ಪಿನೊ-
ಳೆಂದು ಮುರಹರ ನಗುತ ನುಡಿದನು ನಾರದಾದ್ಯರಿಗೆ ॥ ೬೬ ॥

---

೬೩. [ರುಧಿರ-ರಕ್ತ. ಶಾಕಿನೀ–ಒಂದು ಕ್ಷುದ್ರದೇವತೆ].

೬೪. [ಮೋಹರ–ಸೈನ್ಯ. ಬಾಹೆ–ಹೊರಗೆ].

೬೫. [ಧುರ–ಯುದ್ಧ. ಉಬ್ಬಟೆ–ಆಟೋಪ].

೬೬. [1]ಲ್ಲವ (ಅ ಕುಮಾ).

ಈ ಮಹಾಯಜ್ಞವನು ಕೆಡಿಸು[1]ವೆ-[1]
ನೀ ಮಹೀಶನ ಮುಳಿ[2]ವೆನೆಂದೀ
ವೈಮನಸ್ಯದಿ ಬಗೆದು ವೊನೆಮಾಡಿದನು ಸುಡಿಯೆರಡ ।
ತಾಮಸವ ತಳೆ[2]ದಖಿಳಭೂತ-
ಸ್ತೋಮತುಷ್ಟಿಯು ಕೀರ್ತಿ ಫಲಿಸಲಿ
ಈ ಮಹಾಶರಕೆನುತ ಕೊಂಡನು ದಿವ್ಯ[2]ಮಾರ್ಗಣ[2]ವ ॥ ೧೬ ॥

ಸೋತ[1]ನೈ[1] ಹರಿಯೆಂದು ಚೈದ್ಯನ
ಬೂತುಗಳು ಬಣ್ಣಿಸಿದರೀ ನಿ-
ರ್ಭೀತತೆಯಾದವನ್ನೈನ್ನವಿದ್ದುದು ಹರುಷಕೇಳಿಯಲಿ ।
ಈತ ರಾವಣ ಮುನ್ನ ಭುವನ-
ಖ್ಯಾತನೆಂದಮರರು ವಿಮಾನ-
ವ್ರಾತದಲಿ ನೆರೆ[3] ನೋಡುತಿರ್ದುದು ಸಮರಸಂಭ್ರಮವ ॥ ೧೭ ॥

ಧರಣಿಪತಿ ಕೇಳ್ ಕೃಷ್ಣ ಶಿಶುಪಾ-
ಲರ ಮಹಾಸಂಗ್ರಾಮಮಧ್ಯದೊ-
ಳುರಿದುದಿಳೆ ಹೊಗೆದುದು ದಿಶಾವಳಿಧೂಮಕೇತುಗಳು ।
ತರಣಿಮಂಡಲಮಾಲೆಗಳು ವಿ-
ಸ್ತರಿಸಿತಾಕಾಶದಲಪರ್ವದ-
ಲುರವಣಿಸಿದನು ರಾಹು ಚಂದ್ರಾದಿತ್ಯಮಂಡಲವ ॥ ೧೮ ॥

ಕಾದಿದರು ವಿವಿಧಾಸ್ತ್ರವಿದ್ಯಾ-
ಭೇದದಲಿ ರಥಭಂಗಚಾಪವಿ-
ಭೇದಶಸ್ತ್ರಾಸ್ತ್ರಘಸಂ[1]ಚ[1]ರಣ ಪ್ರಪಂಚದಲಿ ।
ಈ ದುರಾತ್ಮನ ನಿಲಿಸಿ ನಿಮಿಷದೊ-
ಳಾ ದಯಾಂಬುಧಿ ತುಡುಕಿದನು ತ್ರೈ-
ವೇದಮಯ ಮೂರ್ತಿತ್ರಯಾತ್ಮಕವರಸುದರ್ಶನವ ॥ ೨೦ ॥

---

೧೬. [1]ವ (ಅ). [2]ಕಾರ್ಮುಕ (ಸರ್ವತ್ರ), ಸ್ವೀಪಾ (ಓ).
[ಮಾರ್ಗಣ–ಬಾಣ].

೧೭. [1]ನೇ (ಅ), ನು (ಪ್ರ).
[ಬೂತು–ಭಂಡ, ನಾಚಿಕೆಗೇಡಿ].

೧೮. [ಅಪರ್ವ–ಅಕಾಲ].

೨೦. [1]ಹ (ಅ ಆ ಕುಮಾ), ಸ್ವೀಪಾ (ಪ್ರ k).

ಬೆಸಸಿದನು ಚಕ್ರವನು ಧಾರಾ-
ವಿಸರಧೂತಪರಿಸ್ಫುಲಿಂಗ-
ಪ್ರಸರತೇಜಃ[1][ಕಿ]ರಣಪರಿವೃತ[1]ನಮ್ಯಶತಭಾನು ।
ದೆಸೆದೆಸೆಗೆ ದುವ್ವಾಳಿಸುವ ಬೆಳ-
ಗೆಸೆಯೆ ಬಂದು ಸುನೀಥಕಂಠದ
ಬೆಸುಗೆ ಬಿಡಲೆಱ[2]ಗಿತ್ತು[2] ಹಾಯ್ದುದು ತಲೆ ನಭಸ್ಥಳಕೆ ॥ ೭೧ ॥

ಕೇಳು ಜನಮೇಜಯ ಧರಿತ್ರೀ-
ಪಾಲ ರಣಗಜಬಜದ ಘೋಳಾ-
ಘೋಳಿ [1]ಹಣಿದುದು[1] ಹಂತಿಗಟ್ಟಿತು ಮತ್ತೆ ನೃಪನಿಕರ ।
ಮೇಲಣಂತರ್ವೇದಿಗಳ ಮುನಿ-
ಪಾಳಿ ಮಂತ್ರಾಹುತಿಗೆ ಕವಿ[2]ವು[2]ರಿ-
ನಾಲಗೆಯ ಲಾವಣಿಗೆ ತಳಿದುದು ಯಜ್ಞಕುಂಡದಲಿ ॥ ೭೨ ॥

ಶ್ರುತಿವಿಧಾನ[1]ದಲ[1]ಮಳಪೂರ್ಣಾ-
ಹುತಿಯು ಪಾರಾಯಣದ ನಿಗಮ-
ಪ್ರತತಿಗಳ ಪರಿಪೂತಪರಿಮಳಮಯದಿಶಾವಳಿಯ ॥
ಕ್ರತುಸಮಾಪ್ತಿಯಲವಭೃಥದ ಭೂ-
ಪತಿಯ ವಿಮಳಸ್ನಾನಪುಣ್ಯೋ-
ಚಿತದಲೋಕುಳಿಯಾಡಿ ತಣಿದುದು ಲೋಕ ಸುರನರರ ॥ ೭೩ ॥

---

೭೦. [ತುಡುಕು–ತ್ವರೆಯಿಂದ ಹಿಡಿದುಕೊ. ಮೂರ್ತಿತ್ರಯ–ಬ್ರಹ್ಮ, ವಿಷ್ಣು, ಮಹೇಶ್ವರರು. ತ್ರೈವೇದ–ಮೂರು ವೇದಗಳು ಎಂದರೆ ಋಗ್ವೇದ, ಯಜುರ್ವೇದ, ಸಾಮವೇದ].

೭೧. [1]ಕರಣಪರಿಷ್ಕೃತ (ಪ್ರ), ಕಣಪರಿಷ್ಕೃತ (ಅ ಕುಮಾ). [2]ಗಿದುದು (ಅ ಕುಮಾ). [ಬೆಸಸು–ಅಪ್ಪಣೆಮಾಡು. ಧಾರಾವಿಸರ–ವಿಸ್ತಾರವಾದ ಅಲಗು. ಧೂತ–ಹರಡಿದ, ವ್ಯಾಪ್ತವಾದ. ಪರಿಸ್ಫುಲಿಂಗ–ಕಿಡಿ. ದುವ್ವಾಳಿಸು–ರಭಸದಿಂದ ಮುನ್ನುಗ್ಗು].

೭೨. [1]ತಳಿತುದು (ಅ), ತಣಿತುದು (ಕುಮಾ), ಮುಹಣಿತು (ಕ), ತಗ್ಗಿತು (ಓ); ಸ್ವೀಪಾ (ಪ್ರ k). [2]ದು (ಅ). [ಘೋಳಾಘೋಳಿ–ಗದ್ದಲ, ಗಲಭೆ, ಗಲಾಟೆ. ಹಣಿ–ಅಡಗು, ನಾಶವಾಗು, ತಗ್ಗು. ಹಂತಿಗಟ್ಟು–ಸಾಲುಗೂಡು, ಒಟ್ಟಾಗು. ಅಂತರ್ವೇದಿ–ಯಜ್ಞಶಾಲೆಯ ಒಳಭಾಗದ ಜಗಲಿ. ಲಾವಣಿಗೆ–ಮೊತ್ತ, ಸಮೂಹ. ತಳಿರ್–ಚಿಗಿ, ನೆಗೆ].

೭೩. [1]ರವಿ (ಅ ಕುಮಾ), ದೊಳ (ಪ್ರ). [ಪ್ರತತಿ–ಸಮೂಹ. ಪರಿಪೂತ–ಪವಿತ್ರವಾದ. ಕ್ರತು–ಯಾಗ. ನಿಗಮ–ವೇದ. ಅವಭೃಥ–ಯಾಗಸಮಾಪ್ತಿಯಲ್ಲಿ ಯಾಗದೀಕ್ಷಿತನು ಮಾಡುವ ಮಂಗಳಸ್ನಾನ].

ಕರಸಿದನು ಹರಿ ಪಾಂಡುಪುತ್ರರ-
ನರಸಿಸಹಿತೇಕಾಂತಭವನದೊ-
ಳುರುತರಪ್ರೇಮೈಕರಸಸಂಸಿಕ್ತವಚನದಲಿ ।
ಭರಿತವಾಯಿತೆ ರಾಜಸೂಯಾ-
ಧ್ವರಸದಾಹುತಿತೃಪ್ಯಮಾಣಾ-
[1]ಮ[1]ರಮಹೀಶ್ವರವಿಭವವಿಳಸಿತಪಾಂಡುಪದವೆಂದ ॥ ೭೪ ॥

*ನುಡಿಯದಿರಸತ್ಯವನು ರಾಜ್ಯವ
ಬಿಡು ವಿಭಾಡಿಸಿ ನಿನ್ನ ವಧುವಿನ
ಮುಡಿಗೆ ಹಾಯ್ದರೆ ನೀನಧರ್ಮದ ತಡಿಯನಡರದಿರು ।
ಒಡಲುಗೂಡಿ ಸಮಸ್ತಧನವಿದು
ಕೆಡುವುದಗ್ಗದ ಮೋಕ್ಷ[1]ಲಕ್ಷ್ಮಿ[1]ಯ
ಮುಡಿಗೆ ಹಾಯ್ದೊಡೆ ಸತ್ಯವೊಂದನೆ ನಂಬು ನೀನೆಂದ ॥ ೭೫ ॥

ದೇವ ನಿಮ್ಮಡಿಯಂಘ್ರಿಕಮಲವ-
ನಾವ ನೆನೆ[1]ವ[1]ನವಂಗೆ ತುಸವ-
ಲ್ಲಾ ವಿರಿಂಚಾದ್ಯಮರಪದವಿದು [2]ನಿಗಮ[2]ಸಿದ್ಧವಲೇ ।
ನಾವು ಸಾಕ್ಷಾದಮಳಮೂರ್ತಿಸು-
ಧಾವಸೇಚನಧೂತಕಿಲ್ಬಿಷ-
ರಾವುದರಿದೈ ಬೊಪ್ಪನವರಿಗೆ ಶಕ್ರಪದವೆಂದ ॥ ೭೬ ॥

---

೭೪. [1]ವ (ಅ).
[ಸಂಸಿಕ್ತ-ಬಹು ಆರ್ದ್ರವಾದ, ತೊಯ್ದ. ಸದಾಹುತಿ (ಸತ್ + ಆಹುತಿ)-ಒಳ್ಳೆಯ ಆಹುತಿ. ತೃಪ್ಯಮಾಣ-ತೃಪ್ತಿಹೊಂದಿದ].

೭೫. [1]ಲಕುಮಿ (ಅ).
[ತಡಿ-ತೀರ, ದಡ. ಅಡರು-ಹತ್ತು, ಏರು. ವಿಭಾಡಿಸಿ-ಆಕ್ರಮಣಮಾಡಿ, ಅತಿಕ್ರಮಿಸಿ. ವಧು-ರಾಜ್ಯಲಕ್ಷ್ಮಿ (?)].

೭೬. [1]ದ (ಅ ಕುಮಾ ಪ್ರ), ಸ್ವೀಪಾ (ಅ). [2]ನಿಮಗೆ (ಅ), ಸ್ವೀಪಾ (ಪ್ರ ಅ ಕುಮಾ).
[ಸುಧಾ-ಅಮೃತ. ಅವಸೇಚನ-ಚಿಮುಕಿಸುವಿಕೆ. ಧೂತ-ತೊಳೆಯಲ್ಪಟ್ಟ, ಪರಿಶುದ್ಧವಾದ. ಕಿಲ್ಬಿಷ-ಕೊಳೆ, ಕಳಂಕ. ಅರಿದು-ಅಸಾಧ್ಯ. ಬೊಪ್ಪ-ತಂದೆ (ಇಲ್ಲಿ, ಪಾಂಡು). ಶಕ್ರಪದ-ಇಂದ್ರಪದವಿ. ತುಸವಲ್ಲಾ-ಅಲ್ಪವಲ್ಲವೇ].

---

* ಈ ಪದ್ಯವು ಅ ಕುಮಾ ಪ್ರತಿಗಳಲ್ಲಿ (11ನೇ ಸಂಧಿಯ 31ನೇ ಪದ್ಯವಾಗಿ) ಮುಂದೆ ಬಂದಿದೆ.

*ರಾಜವರ್ಗವನವರವರ ನಿಜ-
ತೇಜವಾಸ್ಯೋಚಿತದ ಗಜರಥ-
ವಾಜಿವಿವಿಧಾಭರಣವಸನವಧೂಕದಂಬದಲಿ ।
ರಾಜಸೂಯಕ್ರತುಸಮಾಪ್ತಿಯೊ-
ಳಾ ಜನಾರ್ದನಮುಖ್ಯರನು ಯಮ-
ರಾಜಸುತ ಕಳುಹಿದನು ಹೊಕ್ಕರು ತಮ್ಮ ನಗರಗಳ ॥ ೭೭ ॥

**ಭೂಮಿ ಲಂಬದ ನಿಖಿಲ ಭೂಪ-
ಸ್ತೋಮಸಹಿತ ಸುಯೋಧನನು ಹೃ-
ತ್ತಾಮಸದ [1]ಚಾವಡಿಯ ಝಾಡಿಯ[1] ರೋಷಪಾವಕನ ।
ಧೂಮಮುಖನೈತಂದು ಗಜಪುರ
ಸೀಮೆಯಲಿ ಪಾಳೆಯವ [2]ಬಿಟ್ಟನು[2]
ವೈಮನಸ್ಯದಲಿರುಳು ಹೊಕ್ಕನು ಹಸ್ತಿನಾಪುರವ ॥ ೭೮ ॥

---

೫. ದುರ್ಯೋಧನನ ಮತ್ಸರ

ಕೇಳು ಜನಮೇಜಯ ಧರಿತ್ರೀ-
ಪಾಲ ಕೌರವರಾಯನಿತ್ತಲು
ಮೇಲುಮುಸುಕಿನ ಹೊತ್ತ ದುಗುಡದ ಹೊಗರ ಹೊಗೆಮೊಗದ ।
ತಾಳಿಗೆಯ ನಿದ್ರ್ರವದ ಮತ್ಸರ-
ದೇಳಿಗೆಯಲಿಕ್ಕಡಿಯ ಮನದ ನೃ-
ಪಾಲ ಹೊಕ್ಕನು ನಡುವಿರುಳು ನಿಜರಾಜಮಂದಿರವ ॥ ೭೯ ॥

---

೭೭. [ವಸನ-ವಸ್ತ್ರ, ಬಟ್ಟೆ. ಕದಂಬ-ಸಮೂಹ].

೭೮. [1]ಝಾಡಿಯ ರೂಢಿಯ (ಅ). [2]ಬಿಡಿಸಿದು (ಅ ಕುಮಾ).
[ಲಂಬ-ಉದ್ದ. ಹೃತ್ತಾಮಸ-ಹೃದಯದ ಕತ್ತಲೆ, ಅಜ್ಞಾನ. ಚಾವಡಿ-ಆಶ್ರಯಸ್ಥಾನ, ನೆಲೆವೀಡು. ಪಾವಕ-ಅಗ್ನಿ. ಧೂಮಮುಖ-ಹೊಗೆಯುಳ್ಳ (ಎಂದರೆ ಕಪ್ಪಾದ) ಮುಖ].

---

* ಈ ಪದ್ಯದಲ್ಲಿ, ೧೧ನೇ ಸಂಧಿಯ 9ನೆಯ ಪದ್ಯದ ಪೂರ್ವಾರ್ಧವನ್ನೂ ಅದೇ ಸಂಧಿಯ ಸೂಚನಾ ಪದ್ಯಾರ್ಧವನ್ನೂ ಒಂದುಗೂಡಿಸಿದೆ.

** ಈ ಪದ್ಯವನ್ನು (11-36) ಮೊದಲು ಸ್ವೀಕರಿಸಿ, ಆಮೇಲೆ ಕೈಬಿಡಲಾಗಿತ್ತು. ಇಲ್ಲಿ ಉಳಿಸಿಕೊಂಡಿದೆ.

ಭಾನುಮತಿ ಬರೆ ಮುರಿದ ಮುಸುಕಿನ
ಮೌನಿ ನೂಕಿದನಿರುಳನುದಯದ-
ನೂನಮಂಗಳಪಟಹಶಂಖಧ್ವನಿಯು ಮಾಣಿಸಿದ।
ಭಾನುವಿಂಗರ್ಘ್ಯಾದಿಕೃತ್ಯವ-
ನೇನುವನು ಮನ್ನಿಸದೆ ಚಿತ್ತದೂ-
ಳೇನ ನೆನೆದನೊ ಭೂಪನಿದ್ದನು ಖತಿಯ ಭಾರದಲಿ || ೮೦ ||

ಅಕಟ ಕೌರವರಾಯ ರಾಜ-
ನ್ಯಕಶಿರೋಮಣಿ ಯಿರಲು ಧರೆ ರಾ-
ಜಕವಿಹೀನವಿಡಂಬವಾಯ್ತೇ ಶಿವಶಿವಾ ಎನುತ।
ಸಕಲದಳನಾಯಕರು ಮಂತ್ರಿ-
ಪ್ರಕರ ಚಿಂತಾಂಬುಧಿಯೊಳದ್ದಿರೆ
ಶಕುನಿ ಬಂದನು ಕೌರವೇಂದ್ರನ ರಾಜಮಂದಿರಕೆ || ೮೧ ||

ಕರೆದು ಬಾಗಿಲವರ್ಗೆ ತನ್ನಯ
ಬರವನಱುಹಿದೊಡವರು ರಾಯನ
ಹೊರಗೆ ಬಂದರು ನುಡಿದರಂಗೈತಳದ ಬಾಯ್ಗಳಲಿ।
ಅರಸ ಬಿನ್ನಹ ಮಾವದೇವರು
ದರುಶನಾರ್ಥಿಗಳೆನಲು ಮನದಲಿ
ಕುರುನೃಪತಿ ಚಿಂತಿಸುತ ಬರಹೇಳೆಂದು ನೇಮಿಸಿದ || ೮೨ ||

ಹೊಕ್ಕನೀತನು ಕೌರವೇಂದ್ರನ
ನೆಕ್ಕಟಿಯಲಿರೆ ಕಂಡು ನುಡಿಸಿದ-
ನಕ್ಕಜದ ರುಜೆಯೇನು ಮಾನಸವೋ ಶರೀರಜವೋ।

---

೭೯. [ದುಗುಡ–ದುಃಖ. ಹೊಗರು–ಕಾಂತಿ; ಹೊರಹೊಮ್ಮುವಿಕೆ, ಛಾಯೆ (?). ತಾಳಿಗೆ–ಗಂಟಲು. ನಿರ್ದ್ರವ–ದ್ರವವಿಲ್ಲದಿರುವಿಕೆ, ಒಣಗಿರುವುದು. ಇಕ್ಕಡಿ–ಇಬ್ಭಾಗ].

೮೦. [ಮುರಿದ–ಬಳಸಿದ, ಸುತ್ತುಗಟ್ಟಿದ. ಅನೂನ–ಊನವಿಲ್ಲದ, ಪೂರ್ತಿಯಾದ. ಪಟಹ–ನಗಾರಿ. ಮಾಣಿಸು–ಬಿಡಿಸು. ಖತಿ–ದುಃಖ, ಕೋಪ].

೮೧. [ರಾಜನ್ಯಕ–ರಾಜಸಮೂಹ. ಅದ್ದು–ಮುಳುಗು].

೮೨. [ಹೊರೆ–ಸಮೀಪ].

ಮುಕ್ಕುಳಿಸಿಕೊಂಡಿರದಿರಾರಿಗೆ
ಸಿಕ್ಕಿದೆಯೊ ಸೀಮಂತಿನಿಯರಿಗೆ
ಮಕ್ಕಳಾಟಿಕೆ ಬೇಡ ನುಡಿ ಧೃತರಾಷ್ಟ್ರನಾಣೆಂದ ॥ ೮೩ ॥

ಮಾವ ನೀವ್ ಮರುಳಾದಿರೇ ನನ-
ಗಾವ ರುಜೆಯಿಲ್ಲಂಗನೆಯರುಪ-
ಜೀವಿಯೇ ನೀವಱಿಯಿರೇ ಹಿಂದೀಸುಕಾಲದಲಿ ।
ನೋವು ಬೇರಿಲ್ಲೆನಗೆ ನಿಳಯಕೆ
ನೀವು ಬಿಜಯಂಗೈವುದಂತ-
ರ್ಭಾವವಹ್ನಿಯನೇಕೆ ಬೆದಕುವಿರೆಂದನಾ ಭೂಪ ॥ ೮೪ ॥

ಹೇಳು ಹೇಳೇನೇನು ಪಾಂಡುನೃ-
ಪಾಲಪುತ್ರರ ವಿಭವವಹ್ನಿ-
ಜ್ವಾಲೆಯಲಿ ಮನ ಬೆಂದುದೇ ಶಿವಶಿವ ವಿಚಿತ್ರವಲಾ ।
ಪಾಲಕನೆ ಧರ್ಮಜನು [1]ಮಿಗೆ[1] ಕ-
ಟ್ಟಾಳುಗಳೆ ಭೀಮಾರ್ಜುನರು ಬೆ-
ಳ್ಳಾಳಹಬ್ಬುಗೆಯೈಸಲೇ ಪಾಂಡವರ ಸಿರಿಯೆಂದ ॥ ೮೫ ॥

ಲೇಸು ಬಿಜಯಂಗೈಯಿ ನೀವೆ-
ನ್ನಾಸಱಗ್ನಿಯನೇಕೆ ಕೆಣಕುವಿ-
ರಾಸುರವಿದೇಕೆನ್ನೊಡನೆ ಸೈರಿಸುವುದುಪಹತಿಯ ।
ಈಸು ನುಡಿವರೆ ಮಾವ ಎನುತ ಮ-
ಹೀಶ ಕಂಬನಿದುಂಬಿ ನೆನಹಿನ
[1]ಬೇಸಱ[1]ಕೆ ಬಿಸುಸುಯ್ದು ಧೊಪ್ಪನೆ ಕೆಡೆದನವನಿಯಲಿ ॥ ೮೬ ॥

---

೮೩. [ಎಕ್ಕಟಿ-ಏಕಾಂತ. ರುಜೆ-ರೋಗ. ಮುಕ್ಕುಳಿಸು-ಹೊರಹಾಕು. ಸೀಮಂತಿನಿ-ಸ್ತ್ರೀ].

೮೪. [ಈಸು-ಇಷ್ಟು. ವಹ್ನಿ-ಬೆಂಕಿ].

೮೫. [1]ಸಲೆ (ಅ ಕುಮಾ).
[ಬೆಳ್ಳಾಳ ಹಬ್ಬುಗೆ-ಹರಡಿದ ಬಿಳಿಯ ಬಲೆ (?). ಬೆಳ್ಳಾಳ್-ಹಳ್ಳಿಯ ಮನುಷ್ಯ, ಬೆಪ್ಪ, ರೈತ (?)].

೮೬. [1]ಬೇಸರ (ಅ ಕುಮಾ ಪ್ರ).
[ಅಸಱು-ಜುಗುಪ್ಸೆ, ಆಲಸ್ಯ. ಆಸುರ-ಬೇಸರ. ಉಪಹತಿ-ನೋವು, ಉದ್ವೇಗ, ಆಘಾತ. ಕೆಡೆ-ಬೀಳು].

ಎತ್ತಿದನು ಕಣ್ಣವೆಯ ಕಿಱುವನಿ
ಮುತ್ತುಗಳ ಕೇವಣಿಯ ಶಕುನಿ ನೃ-
ಪೋತ್ತಮನೆ ಬಾ ಕಂದ ಬಾ [1]ಎನುತ ಕುಳ್ಳಿರಿಸಿ[1] ।
ಕಿತ್ತು ಬಿಸುಡುವೆನಹಿತರನು ನಿನ-
ಗಿತ್ತೆನಿಂದ್ರಪ್ರಸ್ಥಪುರವನು
ಹೆತ್ತ ತಾಯ್‌ಗಾಂಧಾರಿ [2]ಸಂತಸಬಡಲಿ[2] ಬಳಿಕೆಂದ ॥ ೮೭ ॥

ಮಾವ ಕೇಳತಿಬಲರು ಫಲುಗುಣ-
ಪಾವಮಾನಿಗಳೈಪ[1]ರವದಿರ[1]
ಜೀವಸಖ ಗೋವಿಂದನನಿಬರ ಗೆಲವು ಗೋಚರವೆ ।
ಸಾವುದಲ್ಲದೆ ತನಗೆ ಬೇಱಿ-
ನ್ನಾವ ಪರಿಯಲಿ ಸಮತೆ ಸೇರದು
ಜೀವಿತವ್ಯವನಮರನಿಕರದೊಳಱಿಸಿಕೊಳ್ಳೆಂದ ॥ ೮೮ ॥

ಗೆಲುವೆ ನಾನಂಜದಿರು ಪಾಂಡವ-
ರಳಬಳವ ನಾನಱಿವೆ ನೃಪನ-
ಗ್ಗಳದ ಧರ್ಮಜ್ಞನು ವಿಶೇಷದ್ಯೂತಲೋಲುಪನು ।
ಗೆಲುವ ಮೋಡಿಯನಱಿಯನಾತನ
ನೆಲೆಯ ಬಲ್ಲೆನು ಜೂಜುಗಾಱರ
ಕುಲಶಿರೋಮಣಿ ತಾನೆಯೆಂದನು ಶಕುನಿ ಕೌರವಗೆ ॥ ೮೯ ॥

ಎನ್ನ ಬಹುಮಾನಾವಮಾನವು
ನಿನ್ನದೈಸಲೆ ಮಾವ ನೀ ಸಂ-
ಪನ್ನ ಕೃತ್ರಿಮವಿದ್ಯನಾದೊಡೆ [1]ತೊಡಚು[1] ಸಾಕಿದನು ।
ಅನ್ನಿಗರಿ[2]ಗುಸುರ[2]ದಿರು ನಮ್ಮವ-
ರೆನ್ನದಿರು ವಿದುರಾದಿಗಳನುಪ-
ಪನ್ನಮಂತ್ರವನಱುಹು ಬೊಪ್ಪಂಗೆಂದ[3]ನಾ ಭೂಪ[3] ॥ ೯೦ ॥

---

೮೭. [1]ಯೆಂದಪ್ಪಿ ಕೌರವನ (ಅ ಕುಮಾ). [2]ಸಂತೋಷಿಸಲಿ (ಅ ಕುಮಾ).
[ಕೇವಣಿ–ಪೋಣಿಸುವಿಕೆ].

೮೮. [1]ರಿಗೆತಾ (ಅ ಕುಮಾ).
[ಜೀವಿತವ್ಯ–ಜೀವಂತವಾಗಿರುವುದು].

೮೯. [ಅಳಬಳ–ಸಾಮರ್ಥ್ಯ, ಶಕ್ತಿ. ಮೋಡಿ–ಕೈಚಳಕ, ಕೈವಾಡ].

೯೦. ರಚಿಸು (ಅ ಕ ಓ ಪ್ರ k). [2]ಗರುಹ (ಅ ಕುಮಾ). [3]ನವನೀತ (ಅ ಕುಮಾ).

ನೀನಱಿಹು ನಿಮ್ಮಯ್ಯ ಮತಗೊ-
ಟ್ಟಾ ನರೇಂದ್ರರ ಕರಸಿಕೊಟ್ಟೊಡೆ
ಮಾನನಿಧಿಯೇ ಸಕಲಧರೆಯನು ಸೇರಿಸುವೆ ನಿನಗೆ ।
ನೀನೆ ಹೋಗೀ ಯೆನ್ನ ಕಡುದು-
ಮ್ಮಾನವನು ಬೊಪ್ಪಂಗೆ ನುಡಿದರೆ
ತಾನೆ ಕರಸುವನಱಿಹುವೆನು [1]ಜನಕಂಗೆ ನಿಜಮತವ[1] ॥ ೯೧ ॥

ಅಹುದು ಬಳಿಕೇನೆನುತ ಬಂದನು
ಕುಹಕಮತಿ ಧೃತರಾಷ್ಟ್ರನರಮನೆ-
ಗಿಹಸಮಯದಲಿ [1]ಕಂಡನಂದೇಕಾಂತಭವನದಲಿ[1] ।
ಬಹಳ ಖೇದವ್ಯಸನದಲಿ ದು-
ಸ್ಸಹಮನೋವ್ಯಥೆಯಲಿ ಕುಮಾರಕ-
ನಿಹುದನಱಿಯಿರೆ ನೀವೆನುತ ಬಿಸುಸುಯ್ದನಾ ಶಕುನಿ ॥ ೯೨ ॥

ಕರಸಿದನು [1]ದುರ್ಯೋಧ[1]ನನನಾ-
ದರಿಸಿ ಕಟ್ಟೇಕಾಂತದಲಿ ಮೂ-
ವರು ವಿಚಾರಿಸಿದರು ನಿಜಾನ್ವಯಮೂಲನಾಶನವ ।
ಭರತಕುಲನಿರ್ವಾಹಕನೆ ಬಾ
ಕುರುಕುಲಾನ್ವಯದಿನಪ ಬಾ ಎ-
ನ್ನರಸ ಬಾ [3]ಎನ್ನಾನೆ[3] ಬಾ ಎಂದಪ್ಪಿದನು ಮಗನ ॥ ೯೩ ॥

ದುಗುಡವೇಕೈ ಮಗನೆ ಹಿರಿಯೋ-
ಬಗವನೀಯೆ ಗಡೇಕೆ ವೈಹಾ-
ಳಿಗಳ ಬೇಟೆಗಳವನಿಪಾಲ ವಿನೋದಕೇಳಿಗಳ ।

---

೯೦. [ತೊಡಚು-ತೊಡಗಿಸು, ಸಯೋಜಿಸು. ಅನ್ನಿಗರು-ಬೇರೆಯವರು, ಅನ್ಯರು. ಉಪಪನ್ನ ಮಂತ್ರ- ಯೋಗ್ಯವಾದ ಆಲೋಚನೆ].

೯೧. [1]ಬಳಿಕೆಂದನಾನೃಪತಿ (ಅ ಆ ಪ್ರ ಕ k).

೯೨. [1]ಹೊಕ್ಕನಂದೇಕಾಂತಮಂದಿರವ (ಅ ಕುಮಾ).
[ಕುಹಕಮತಿ-ಮೋಸಮಾಡುವ ಬುದ್ಧಿಯುಳ್ಳವನು. ಏಕಾಂತಭವನ-ರಹಸ್ಯಾಲೋಚನೆಯ ಮನೆ].

೯೩. [1]ದುರಿಯೋ (ಆ ಕುಮಾ). [2]ದೀಪ (ಆ ಕುಮಾ). [3]ಯೆನ್ನಾಣೆ (ಅ).
[ಅನ್ವಯ-ವಂಶ. ದಿನಪ-ಸೂರ್ಯ].

ಬಗೆಯೆ ಗಡ ಬಾಂಧವರ ಸಚಿವರ
ಹೊಗಿಸೆ ಗಡ ನಿನ್ನರಮನೆಯನೀ
ಹಗಲು ನಿನಗೇಕಾಯ್ತು ಕತ್ತಲೆಯೆಂ[1]ದು ಬೆಸಗೊಂಡ[1] ॥ ೯೪ ॥

ಹೇಳಲಮ್ಮೆನು ನೀವು ಧರ್ಮದ
ಕೂಳಿಯಲಿ ಸಿಲುಕಿದವರೆನ್ನನು
ಖೂಳನೆಂಬಿರಿ ಕಷ್ಟನೆಂಬಿರಸೂಯನೆಂಬಿರಲೇ ।
ಸಾಲಭಂಜಿಕೆಯಾಯ್ತು [1]ತನ್ನಯ[1]
ಬಾಳಿಕೆಯ [2]ಬೇಳಂಬ[2]ವೇತಕೆ
ಕೇಳುವಿರಿ ನೀವೆಂದು ಸುಯ್ದನು ತುಂಬಿ ಕಂಬನಿಯ ॥ ೯೫ ॥

ಏನನೆಂಬೆನು ಬೊಪ್ಪ ಕುಂತೀ-
ಸೂನುಗಳ ಸಾಮರ್ಥ್ಯಪಣವನು
ದಾನವಾರಿಯ ಹಾಸುಹೊಕ್ಕನ [1][ಸ ?][1]ಖ್ಯಸಂಗತಿಯ ।
ತಾ ನಪುಂಸಕನಾದಪರಿಯನ-
ದೇನ ವಿಸ್ತರಿಸುವೆನು ಲಜ್ಜಾ-
ಮಾನಿನಿಗೆ [2]ತನ್ನೊಕ್ಕತನವಿಂ[ದು]ಳಿದು[2]ಹೋಯ್ತೆಂದ ॥ ೯೬ ॥

ನೆಗೆದ ಬುಗುಟಿದೆ ಹಣೆಯುಲವರೋ-
ಲಗದ ಸಭೆಯಲಿ ನನೆದ ಸೀರೆಯ
ತೆಗೆಸಿಕೊಟ್ಟರು ತಂದು ಮಡಿವರ್ಗದ ನವಾಂಬರವ ।

---

೯೪. [1]ದನಂಧನೃಪ (ಅ ಕುಮಾ).
[ಓಲಗ-ರಾಜಸಭೆ. ವೈಹಾಳಿ-ಕುದುರೆ ಸವಾರಿ (ಯ ಪ್ರದರ್ಶನ). ಕೇಳಿ-ಕ್ರೀಡೆ, ಆಟ. ಬಗೆ-ಆಲೋಚಿಸು, ಮನಸ್ಸಿಗೆ ತಂದುಕೋ. ಹೊಗಿಸು-ಪ್ರವೇಶ ಮಾಡಿಸು, ಬರಗೊಡು. ಬೆಸಗೊಳ್ಳು-ಪ್ರಶ್ನಿಸು].

೯೫. [1]ನಮ್ಮಯ (ಅ). [2]ಬೆಳ್ಳಂಬ (ಅ), ಸ್ವೀಪಾ (ಕ ಓ k ಅ).
[ಕೂಳಿ-ಮೀನುಹಿಡಿಯುವ ಬುಟ್ಟಿ, ಬಲೆ, ಕುಳಿ, ಗುಂಡಿ (?). ಖೂಳ-ಕ್ರೂರಿ, ದುಷ್ಟ, ನೀಚ. ಅಸೂಯ-ಅಸೂಯೆ, ಹೊಟ್ಟೆಕಿಚ್ಚು ಪಡುವವನು. ಸಾಲ ಭಂಜಿಕೆ-ಸಾಲು ಬೊಂಬೆಗಳು. ಬೇಳಂಬ-ವಿಚಾರ, ಚಿಂತೆ (?); ವ್ಯರ್ಥವಾದ ಇರುವಿಕೆ, ನಿಷ್ಕ್ರಿಯತೆ (?)].

೯೬. [1]ಸೌ (ಸರ್ವತ್ರ). [2]....ದಿಳಿದು (ಕುಮಾ) ; ತನುಮಾನಬಳಿಕಾ ಸೂರೆ (ಪ್ರ).
[ಪಣ-ಬಾಜಿ. ಒಕ್ಕತನ-ಕೂಡಿ ಬಾಳುವಿಕೆ].

ಬೆಗಡುಗೊಳಿಸಿದರೆನ್ನನವರೋ-
ಲಗದ ಸೂಳೆಯರವರ ಸೂಳಿನ
ನಗೆಯ ನೆನೆನೆನೆದೆನ್ನ ಮನ ಜರ್ಝರಿತವಾಯ್ತೆಂದ ॥ ೯೭ ॥

ಇದಕೆ ಕಾರಣವೇನು ಹಣೆನೊಂ-
ದುದಕದೇನು ನಿಮಿತ್ತವೆನ[1]ಲರಿ[1]
ಸದನದಲಿ ಮಯನಿತ್ತ ಸಭೆ[2]ಯಲಿ[2] ದೇವರಱಿಯಿರಲೆ ।
ಮುದದಿನಾ ಧರ್ಮಜನು ಘನ ಸಂ-
ಪದದಲೋಲಗವಿತ್ತನಾ ದ್ರೌ-
ಪದಿ ನಿಜಾನುಜ ಸಚಿವ ಮಂತ್ರಿ ಪಸಾಯಿತರು ಸಹಿತ ॥ ೯೮ ॥

ಆ ಮಹಾಸಭೆ ದೇವನಿರ್ಮಿತ-
ರಾಮಣೀಯಕವಿವಿಧರತ್ನ-
ಸ್ತೋಮತೇಜಃಪುಂಜ[1]ಭಂಜಿತ[1]ನಯನ[2]ರಶ್ಮಿಯಲಾ[2] ।
ಸಾಮದಲಿ ನಮ್ಮನು ಯುಧಿಷ್ಠಿರ-
ಭೂಮಿಪತಿ ಕರಸಿದನು ತನ್ನು-
ದ್ದಾಮವಿಭವವನೆನಗೆ ತೋಱಲು ತತ್ಸಭಾಸ್ಥಳಕೆ ॥ ೯೯ ॥

ಸ್ಥಳವೆ ಜಲರೂಪದಲಿ ಜಲವೇ
ಸ್ಥಳದ ಪಾಡಿನಲಿದ್ದುದದು ಕೆಲ-
ಬಲನ ಭಿತ್ತಿಯ ಕಂಬಕಂಬದ ನಡುವೆ ಭಿತ್ತಿ[1]ಗಳ[1] ।
ಹೊಳಹನೇ ಕಂಡೆನು ವಿವೇಕದ
ಕಳಿವು ಚಿತ್ತದ ಸೇಱ[3][2]ಮಹಾಳದೊ-
ಳು[2]ಳಿದವಕ್ಷಿಗಳಿಂತು ಸೋತೆನು [3]ತಾತ[3] ಕೇಳೆಂದ ॥ ೧೦೦ ॥

---

೯೭. [ನೆಗೆದ ಬುಗಟು–ಮೇಲೆದ್ದ, ಉಬ್ಬಿಕೊಂಡ, ಬೋರೆ. ಸೀರೆ–ಉಡುವ ವಸ್ತ್ರ, ಧೋತ್ರ. ನವಾಂಬರ–ಹೊಸಬಟ್ಟೆ. ಬೆಗಡುಗೊಳಿಸು–ಬೆರಗುಗೊಳಿಸು, ಚಕಿತಗೊಳಿಸು. ಸೂಳೆ–ಅಂತಃಪುರದ ವೇಶ್ಯೆ. ಸೂಳು–ಸರದಿ].

೯೮. [1]ಲಾ (ಕುಮಾ). [2]ಯನು (ಅ ಕುಮಾ), ಸ್ವೀಪಾ (ಪ್ರ).
[ಪಸಾಯಿತ–ಸಾಮಂತರಾಜ].

೯೯. [1]ರಂಜಿತ (ಅ ಪ್ರ). [2]ವೀಧಿಯಲಿ (ಅ ಕುಮಾ), ಸ್ವೀಪಾ (ಕ k ಪ್ರ).
[ಸಾಮ–ಸಾಮೋಪಾಯ].

೧೦೦. [1]ಗಳು (ಅ ಆ ಕುಮಾ), ಸ್ವೀಪಾ (ಓ). [2]ಮಹಾರದೊಳ (ಅ ಅ ಕುಮಾ), ಸ್ವೀಪಾ (ಪ್ರ). [3]ತಂದೆ (ಅ), ಸ್ವೀಪಾ (ಕ k ಪ್ರ).

ಮುಂದೆ ವಿಮಲಸ್ಫಟಿಕ ಭೂಮಿಯ-
ನೊಂದು ಠಾವಿನೊಳೀಕ್ಷಿಸುತ ಕೊಳ-
ನೆಂದು ಬಗೆದೆನು ನಿಂದು ಸಂವರಿಸಿದೆನು ಮುಂಜೆರಗ ।
ಅಂದು ದ್ರೌಪದಿಸಹಿತ ನಾರೀ-
ವೃಂದ ಕೈಗಳಹೊಯ್ದು ಮಿಗೆ ಘೊ-
ಳ್ಳೆಂದು ನಕ್ಕುದು ನೊಂದು ತಲೆವಾಗಿದೆನು ಲಜ್ಜೆಯಲಿ ॥ ೧೦೧ ॥

ಸಿಂಗಿಯನು ಬಿತ್ತಿದೆನು ಪಾಂಡವ-
ರಂಗದಲಿ ತತ್ಫಲದ ಬೆಳಸಿನ
ಸಿಂಗಿಯಲಿ ತಾ ಸಾವೆನಲ್ಲದೊಡಗ್ನಿ[1]ಭವನ[1]ದಲಿ ।
ಭಂಗಿ[2]ಸಿದೆನಾ[2]ಫಲದೊಳೆನ್ನನು
ನುಂಗಬೇಹುದು ವಹ್ನಿ ವೇಣೀ
ಗಂಗೆಯಲಿ ಬಿದ್ದೊಡಲ ನೀಗುವೆನೆನುತ ಬಿಸುಸುಯ್ದ ॥ ೧೦೨ ॥

ಕೇಳಿದನು ಬಿಸುಸುಯ್ದನಕಟ ವಿ-
ಕಾಳಿಸಿತೆ ಕೌರವನ ಬುದ್ಧಿ ವಿ-
ಟಾಳಸಂಗತಿಯಾಯ್ತಲಾ ಪಿಸುಣಾರ ಕೆರಳಿಚದು ।
ಕೇಳು ಮಗನೇ ಧರ್ಮಪುತ್ರನ
ಮೇಲೆ ಮುನಿವರೆ ರಾಜಋಷಿ ನರ-
ಪಾಲಮಾತ್ರನೆ ಶಿವಮಹಾದೇವೆಂದ[1]ನಂಧನೃಪ[1] ॥ ೧೦೩ ॥

---

೧೦೦. [ಪಾಡು-ಸ್ಥಿತಿ. ಭಿತ್ತಿ-ಗೋಡೆ. ಹೊಳಹು-ಪ್ರತಿಫಲನ. ಕಳಿವು-ನಾಶ. ಮಹಾಳ-ಅಮಾವಾಸ್ಯೆ, ಅಮಾವಾಸ್ಯೆಯ ಕತ್ತಲೆ, ಕಣ್ಣುಗತ್ತಲೆ (?)].

೧೦೧. [ಮುಂಜೆರಗು-ವಸ್ತ್ರದ ಮುಂಭಾಗದ ತುದಿಯಂಚು. ಸಂವರಿಸು-ಒಟ್ಟುಗೂಡಿಸು, ಒಟ್ಟುಗೂಡಿಸಿ ಹಿಡಿದುಕೊ].

೧೦೨. [1]ಕುಂಡ (ಅ ಕುಮಾ). [2]ಸುವೆ (ಅ ಕುಮಾ).

[ಸಿಂಗಿ (=ಶೃಂಗಿ)-ಒಂದು ಬಗೆಯ ವಿಷ(ದ ಮೂಲಿಕೆ). ಭಂಗಿಸು-ನಾಶಪಡಿಸು].

೧೦೩. [1]ನಾಭೂಪ (ಅ ಕುಮಾ).

[ವಿಕಾಳಿಸು-ವಿಕಲವಾಗು, ಪಲ್ಲಟವಾಗು. ವಿಟಾಳ-ಮಲಿನ, ಕಲುಷಿತ, ಅಸಹ್ಯದ, ಹೊಂದಿಕೆಯಾಗದ. ಪಿಸುಣ-ಕೊಂಡೆಯ, ಚಾಡಿ].

ಪಾಂಡುವಿನ ಮಕ್ಕಳುಗಳವರಾ
ಪಾಂಡುವಿನಲೆನ್ನಲ್ಲಿ ಭೇದವ
ಕಂಡೆಲಾ ನೀನವರಿಗೇನಪ್ರಾಪ್ತವೇ ಧರಣಿ ।
ಉಂಡು ಬದುಕುವ ಬಹಳ ಭಾಗ್ಯರ
ಕಂಡಸೂಯಂಬಡುವ ಖಡ್ಡರ
ಭಂಡರೆನ್ನದೆ ಲೋಕ ನಿನಗಿದು ಸಾವ್ಯವಲ್ಲೆಂದ ॥ ೧೦೪ ॥

ಅಹುದು ಬೊಪ್ಪ ವೃಥಾಭಿಮಾನದ
ಕುಹಕಿ ಹೋಗಲಿ ನಿಮ್ಮ ಚಿತ್ತಕೆ
ಬಹ ಕುಮಾರರ ಕೂಡಿ ನಡೆವುದು ಪಾಂಡುನಂದನರ ।
ಮಹಿಯು ಹಂಗಿಂಗೋಸುಗ[1]ರ[1]ಬಿ-
ನ್ನಹವ ಮಾಡಿದೆನೆನಗೆ ಭಂಡಿನ
ರಹಣಿ ಬಂದು[2]ದೆ[2] ಸಾಕಲೇ ಸೊಗಸಾಯ್ತು ಲೇಸೆಂದ ॥ ೧೦೫ ॥

ಆ ಯುಧಿಷ್ಠಿರಸಹಿತ ನೀನೇ
ರಾಯನಾಗಿರು ಮೇಣು ನಮ್ಮಾ
ತಾಯಿ ಸಂತಸಬಡಲಿ ದುಶ್ಯಾಸನನ ಪಟ್ಟದಲಿ ।
ರಾಯತನವೆಮಗಿಂದ್ರಲೋಕದ
ಲಾಯುದಲಿ ದಿಟವೆಂದು ನುಡಿವರು
ಜೋಯಿಸರು ಸಾಕವರ ವಚನ ನಿರರ್ಥವಲ್ಲೆಂದ ॥ ೧೦೬ ॥

ಕರಗಿದಳು ಗಾಂಧಾರಿ ಕಂಬನಿ-
ದುಱುಗಲಲಿ ಧೃತರಾಷ್ಟ್ರನೆದೆ ಜ-
ರ್ಝರಿತವಾದುದು ಮಗನ ಮಾತಿನ ಮುಸಲಹತಿಗಳಲಿ ।
ಸುರಿವ ನಯನಾಂಬುಗಳ ಮೂಗಿನ
ಬೆರಳ ತೂಗುವ ಮಕುಟದವನೀ-
ಶ್ವರನು ಮೌನದೊಳಿದ್ದನೊಂ[1]ದರೆಗಳಿಗೆ ಪರಿಯಂತ[1] ॥ ॥ ೧೦೭ ॥

---

೧೦೪. [1]ಳಾರಾ (ಅ ಆ ಕುಮಾ), ಸ್ವೀಪಾ (ಪ್ರ ಕ k).
[ಖಡ್ಡ-ತಿಳಿಗೇಡಿ, ಮೂರ್ಖ. ಭಂಡ-ಚಂಡಿಹಿಡಿಯುವವ, ಮೊಂಡ].

೧೦೫. [1]ವೆ (ಅ). [2]ದು (ಅ), ಸ್ವೀಪಾ (ಕ).
[ಮಹಿ-ಭೂಮಿ. ಹಂಗು-ಋಣ. ಓಸುಗರ-ಓಸ್ಕರ. ಭಂಡು-ಅಗೌರವದ ಕಾರ್ಯ, ನಡತೆ, ನೀಚತನ. ರಹಣಿ-ಹೊಂದಿಕೆ, ಸಂಬಂಧ, ಆರೋಪ].

೧೦೭. [1]ದುವಿಗಳಿಗೆ ಮಾತ್ರದಲಿ (ಅ ಕುಮಾ), ಅರೆಗಳಿಗೆ ಮಾತ್ರದಲಿ (ಪ್ರ), ಸ್ವೀಪಾ (ಕ k).

ಏನ ನೆನೆದ್ಯೆ ಮಗನೆ ಕುಂತೀ-
ಸೂನುಗಳ ರಾಜ್ಯಾಪಹಾರದೊ-
ಳೇನು ಬುದ್ಧಿವಿಲಾಸವಾವುದು ಕಾರ್ಯಗತಿ ನಿನಗೆ ।
ದಾನದಲಿ ಮೇಣ್ ಸಾಮದಲಿ ಭೇ-
ದಾನುಮತದಲಿ ದಂಡದಲಿ ನೀ-
ವೇನ ನಿಶ್ಚೈಸಿದಿರಿ ಹೇಳನ್ನಂಜಬೇಡೆಂದ ॥ ೧೦೮ ॥

ನೀವು [1]ಚಿತ್ತೈಸಿದೊಡೆ[1] ನೆತ್ತದೊ-
ಳಾವು ಸೋಲಿಸಿಕೊಡುವೆವವರನು
ನೀವು ಕರಸುವುದಿಲ್ಲಿಗುಚಿತಪ್ರೀತಿವಚನದಲಿ ।
ನಾವು ಜಾಣರು ಜೀಯ [2]ಜೂಜಿನ[2]
ಜೀವಕಳೆಯಲಿ ಧರ್ಮಸುತನಿದ-
ನಾವ ಹವಣೆಂದರಿಯನಾತನ [3]ಜೈಸಬ[3]ಹುದೆಂದ ॥ ೧೦೯ ॥

ಅಹುದು ತಪ್ಪೇನಿದುವೆ ಸಾಧನ-
ವಹುದು ವಿದುರನ ಬುದ್ಧಿಗಭಿಮತ-
ವಹಡೆ ಕರಸುವೆವೈಸಲೇ ಬೆಸಸುವೆನು ವಿದುರಂಗೆ ।
ಕುಹಕವಾತನಲಿಲ್ಲ[1]ವಾಡುವ-
ನಿ[1]ಹಪರತ್ರದ ಹಿತವನಿದ ನಿ-
ರ್ವಹಿಸಿಕೊಡುವೊಡೆ ಮಂತ್ರವೆಂದನು ಮಗಗೆ ಧೃತರಾಷ್ಟ್ರ ॥ ೧೧೦ ॥

ಖೂ[1]ಳನ[1]ಲಿ ಸತ್ಕಲೆಗಳನು [2]ನೆಱೆ[3][2]
ಕೇಳದ[3]ವನಲಿ[3] ಮಂತ್ರಬೀಜವ-
ನಾಲಿಯಿಲ್ಲದವಂಗೆ ರೂಪವಿಳಾಸವಿಭ್ರಮವ ।

೧೦೭. [ತುಱುಂಗಲು–ಮೊತ್ತ, ಸಮೂಹ, ತುಂಬಿರುವಿಕೆ, ಆಧಿಕ್ಯ, ಅತಿಶಯ, ಹೆಚ್ಚಳ. ಮುಸಲಹತಿ–ಒನಕೆಯ ಪೆಟ್ಟು].

೧೦೯. [1][ಚಿತ್ತೈಸಿದರೆ (ಪ್ರ ಅ), ಚಿತ್ತವಿಸಿದೊಡೆ (ಕುಮಾ)]. [2]ನೆತ್ತದ (ಕ k ಅ). [3]ಜಯಿಸ (ಅ ಕುಮಾ).
[ಹವಣು–ಉಪಾಯ, ಹಂಚಿಕೆ. ನೆತ್ತ–ಪಗಡೆ ಆಟ].

೧೧೦. [1]ನೋಡುವನಿ (ಅ ಕುಮಾ), ನೋಡುವಡಿ (ಓ).
[ಇಹಪರತ್ರ–ಇಹಲೋಕ, ಪರಲೋಕ. ಮಂತ್ರ–ಆಲೋಚನೆ].

೧೧೧. [1]–[3]ರ (ಅ ಕುಮಾ). [2]ಕಿವಿ (ಅ ಪ್ರ ಕ k).

ಹೇಳುವಂತಿರೆ ನಿಮ್ಮ ವಿದುರನ
ಕೇಳಿಸಿದರಾಕಾರ್ಯಗತಿಗೆ ವಿ-
ತಾಳವಾಗದೆ [4]ಬೊಪ್ಪ ಎಂದನು ನಗುತ ಕುರುರಾಯ[4] ‖ ೧೧೧ ‖

ನೀ ಕರುಣದಲಿ ನಮ್ಮ ಸಲಹುವೊ-
ಡಾಕು[1]ಠಾ[1]ರರ ಕರಸಿಕೊಟ್ಟೊಡೆ
ಸಾಕು ಮತ್ತೊಂದಿಹುದಲೇ ಪಾಂಚಾಲನಂದನೆಯ ।
ನೂಕಿ ಮುಂದಲೆವಿಡಿದು ತೊತ್ತಿರೊ-
ಳಾಕೆಯನು ಕುಳ್ಳಿರಿಸಿದಂದು ವಿ-
ಶೋಕನಹೆನಾ ದಿವಸದಲಿ ಕೃತಕೃತ್ಯ [2]ತಾ[2]ನೆಂದ ‖ ೧೧೨ ‖

[1]ಪೋಗಿ ನೀವೆಂದವರ[1] ಕಳುಹಿ[2]ತ-
ದಾಗಮುನಯತ್ನೈಕ[2] ಚಿಂತಾ-
ಸಾಗರದೊಳೋರಂತೆ ಮುಳುಗಿದನಂದು ಧೃತರಾಷ್ಟ್ರ ।
ಈಗಳಿನ[3]ಸುವಿಗ[3]ಳುಪಿ ಮೇಲಣ
ತಾಗನಱಿಯನು ಕಂದನಿದಕಿ-
ನ್ನೇಗುವೆನು ಗಾಂಧಾರಿ [4]ಹೇಳೆಂದರಸ ಬಿಸುಸುಯ್ದು[4] ‖ ೧೧೩ ‖

---

೧೧೧. [4]ರಾಯ ಚಿತ್ತೈಸೆಂದನಾಭೂಪ (ಕ), ರಾಯ ಚಿತ್ತೈಸೆಂದನವನೀಶ (k), ರಾಯ ಚಿತ್ತೈಸೆಂದನಾ ಕುರುಪತಿಯು (ಪ್ರ).

[ಅಲಿ-ಕಣ್ಣುಗುಡ್ಡೆ, ಕಣ್ಣು, ದೃಷ್ಟಿ, ನೋಟ. ವಿತಾಳ-ಅಡೆತಡೆ, ಪ್ರತಿಬಂಧ].

೧೧೨. [1]ಮಾ (ಅ ಆ ಕುಮಾ ಪ್ರ), ಸ್ವೀಪಾ (ಕ k). [2]ನಹೆ (ಅ).

೧೧೩. [1]ಪೋಗುನೀನೆಂದವನ (ಆ ಕುಮಾ), ಹೋಗು—(ಅ ಪ್ರ). [2]ದನಾಗಮುನ ದೊಳಗಧಿಕ (ಆ ಕುಮಾ), ಯವರಾಗಮದ ಯತ್ನೇಕ (ಪ್ರ), ಸ್ವೀಪಾ (k). [3]ಸುಖಕ (ಅ), ಸುಖಗ (ಪ್ರ). [4]ನೀ ಹೇಳೆಂದನಾ ಭೂಪ (ಆ ಕುಮಾ), ಸ್ವೀಪಾ (k ಪ್ರ ಅ).

[ತದಾಗಮುನಯತ್ನೈಕ ಚಿಂತಾಸಾಗರದೊಳು.-ಅವರ (ಪಾಂಡವರ) ಬರವಿನ ಪ್ರಯತ್ನವೆಂಬ ಒಂದೇ ಚಿಂತಾಸಮುದ್ರದಲ್ಲಿ. ಓರಂತೆ-ಒಂದೇ ಸಮನಾಗಿ. ಅಳುಪು-ಆಸೆಪಡು. ತಾಗು-ಹೊಡೆತ, ಪೆಟ್ಟು, ಪರಿಣಾಮ. ಏಗುವೆನು-ಏನುಮಾಡಲಿ ?].

ಅವರು ಕಪಟವನಱಿಯರೀತನ
ಹವಣ ನೀನೇ ಕಂಡೆ ಕರಸಿದೊ-
ಡವರು ನಿಲ್ಲರು [1]ಗೋರಿ[1]ಯಲಿ ಬಳಿಸಂದ ಮೃಗದಂತೆ ।
ನವಗೆ ಬಹುದಪಕೀರ್ತಿಯೀ[2]ನಿ-
ನ್ನ[2]ವನ ಕುಹಕವ ಲೋಕವಱಿಯದು
ಶಿವಶಿವಾ ಎಂದಳಲಿ ಮಱುಗಿದನಂದು ಧೃತರಾಷ್ಟ್ರ ॥ ೧೧೪ ॥

*ಮುಱಿವೆನೇ ಮುನಿದಿವರು ನೂರ್ವರು
ತೊಱೆವರೆನ್ನನು ತೊಡಕಿಸುವೆನೇ
ತಱಿದು ಬಿಸುಡುವರವರು ಕೌರವಶತಕವನು ಬಳಿಕ ।
ಹೊಱಗೊಳಗೆ ಹದನಿದು ನಿಧಾನಿಸ-
ಲಱಿಯೆನೆನ್ನಸು[1]ವಿಂಗೆ[1] ಹೃದಯದ
ಸೆಱೆ ಬಿಡದು ಶಿವಶಿವಯೆನುತ ಮಱುಗಿದನು ಧೃತರಾಷ್ಟ್ರ ॥ ೧೧೫ ॥

**ಏಕೆ ನಿಮಗೀ ಚಿಂತೆಯಿಂದೆರ-
ಡೌಕಿದವು ದುಷ್ಕಾರ್ಯಸಂಧಿ ವಿ-
ವೇಕ[1]ನಿಕಷ[1]ದಲೊರೆದು ಮೋಹರಿಸೊಂದು ಬಾಹೆಯಲಿ ।
ಈ ಕುರುವ್ರಜನೂಱ ಹಿಡಿ ಕುಂ-
ತೀಕುಮಾರರ ಬಿಡು ತನೂಜರ
ನೂಕು ಹಿಡಿ ಪಾಂಡವರನೆಂದಳು ಪತಿಗೆ ಗಾಂಧಾರಿ ॥ ೧೧೬ ॥

---

೧೧೪. [1]ತೋಹೆ (ಓ). [2]ಗಿನ್ನಿ (ಅ), ಗಿನ್ನ (ಅ ಕುಮಾ); ಸ್ವಿಪಾ (ಪ್ರ).
[ಗೋರಿ–ಒಂದು ಬಗೆಯ ಚೀಟಿ; ಆಕರ್ಷಣೆ, ಸೆಳೆತ, (ಮೃಗವನ್ನು ಆಕರ್ಷಿಸಲು ಬಳಸುವ ಹಾಡು). ಮೃಗ–ಜಿಂಕೆ. ಅಳಲಿ ಮಱುಗಿದನು–ದುಃಖಪಟ್ಟು ಬೇಗುದಿಗೊಂಡನು].

೧೧೫. [1]ವಿನಲಿ (ಅ ಕುಮಾ), ಸ್ವೀಪಾ (k ಪ್ರ).
[ಮುಱಿ–ಹಾಳುಮಾಡು, ಭಗ್ನಗೊಳಿಸು. ತೊಡಕಿಸು–ಸಿಲುಕಿಸು. ಹದನು–ಸಂಗತಿ, ಸಮಾಚಾರ. ನಿಧಾನಿಸು–ಯೋಚಿಸು, ಬಗೆಹರಿಸು].

೧೧೬. [1]ನಿಕರ (ಕುಮಾ).
[ನಿಕಷ–ಒರೆಗಲ್ಲು, ಕಸೋಟಿ. ಒರೆ–ಪರೀಕ್ಷಿಸಿನೋಡು. ಮೋಹರಿಸು–ಒಟ್ಟುಗೂಡಿಸು]

---

* ಈ ಪದ್ಯವು ಕ ಮತ್ತು ಅ ಪ್ರತಿಗಳಲ್ಲಿ ಕಂಡುಬರುವುದಿಲ್ಲ.

** ೧೧೬ ಮತ್ತು ೧೧೮ನೇ ಪದ್ಯಗಳು 'ಅ' ಪ್ರತಿಯಲ್ಲಿ ಇಲ್ಲ. ಪದ್ಯ ೧೧೬ 'ಕ' ಪ್ರತಿಯಲ್ಲಿ ಇಲ್ಲ.

ಐಸಲೇ ತಾನಾದುದಾಗಲಿ
ಲೇಸ ಕಾಣೆನು ನಿನ್ನ ಮಕ್ಕಳ
ವಾಸಿಗಳ ವಿಸ್ತಾರ ಮೊಱೆಯಲಿ ಹಲವು ಮಾತೇನು ।
ಆ ಸಭೆಯ [1]ಸರಿಸ[1]ದ ಸಭಾವಿ-
ನ್ಯಾಸಶಿಲ್ಪಿಗರಾರೆನುತ ಧರ-
ಣೀಶ ಕರಸಿದನುರುಸಭಾನಿರ್ಮಾಣಕೋವಿದರ ॥ ೧೧೭ ॥

*ಮಾಡಿತಗ್ಗದ ಸಭೆ ಸುಧರ್ಮೆಯ-
ನೇಡಿಸುವ ಚೆಲುವಿನಲಿ ಪುರದಲಿ
ರೂಢಿಸಿತು ಬಳಿಕಂಧನೃಪನೇಕಾಂತಭವನದಲಿ ।
ಕೂಡಿಕೊಂಡು ಕುಲಾವಘಾತದ
ಕೇಡುಗರ ಕಲ್ಪನೆಯ ಕಲುಷದ
ಜೋಡಿಯನೆ ನಿಶ್ಚೈಸಿ ವಿದುರಂಗಱುಹಿದನು ಕರಸಿ ॥ ೧೧೮ ॥

ವಿದುರ [1]ನೋಡೈ[1] ಪಾಂಡವರ ಸಂ-
ಪದಕೆ ಸರಿಯೋ ಮಿಗಿಲೊ ಸಭೆ ತಾ-
ನಿದು ವಿಶೇಷವಲಾ ಸಮಸ್ತಕ್ಷತ್ರ[2]ವಿಭವ[2]ದಲಿ ।
ಇದಱೊಳೋಲಗವಿತ್ತು ಹರ್ಷಾ-
ಸ್ಪದರು ಕುರುನೃಪರಲಿ ಸುಖದ್ಯೂ-
ತದಲಿ ರಮಿಸಲಿ ಕರೆದು ತಾ ಕುಂತೀಕುಮಾರಕರ ॥ ೧೧೯ ॥

———

೧೧೭. [1]ಸರಸ (ಅ).

[ಐಸಲೇ–ಹೌದಲ್ಲವೇ. ಲೇಸು–ಮೇಲ್ಮೆ. ವಾಸಿ–ಕೀರ್ತಿ, ಪ್ರಸಿದ್ಧಿ. ಸರಿಸ–ಸಮೀಪ. ವಿನ್ಯಾಸ–ನಕ್ಷೆ, ರಚನಾ ರೀತಿ. ಕೋವಿದ–ಪ್ರವೀಣ].

೧೧೮. [ಸುಧರ್ಮೆ–ದೇವಸಭೆ. ಏಡಿಸು–ತಿರಸ್ಕರಿಸು. ಅವಘಾತ–ಅಪಘಾತ; ಅನಿರೀಕ್ಷಿತವಾದ ಪೆಟ್ಟು].

೧೧೯. [1]ಕೇಳೈ (ಅ ಕುಮಾ), ಸ್ವೀಪಾ (ಕ k). [2]ಭವನ (ಕ k ಅ).

೬. ದ್ಯೂತದಲ್ಲಿ ಧರ್ಮರಾಯನ ಸೋಲು

ಶುಭಮುಹೂರ್ತ [1]ವಿಶೇಷ[1]ಲಗ್ನದೊ-
ಳಿಭಪುರಿಯ ಹೊಱವಂಟು ಸುರಸಂ-
ನಿಭನು ಬಂದನು ಹಲವು ಪಯಣದಲಿವರ ಪಟ್ಟಣಕೆ ।
ರಭಸ ಮಿ[2]ಗ[2]ಲಿದಿ*ರ್ಗೊಂಡು ತಂದರು
ಸಭೆಗೆ ಮಾನ್ಯಯಥೋಪಚಾರ-
ಪ್ರಭವಸತ್ಕಾರದಲಿ ಕೇಳ್ದರು ಕುಶಲಸಂಗತಿಯ ॥ ೧೨೦ ॥

ಧರಣಿಪತಿ ಬೆಸಸಿದನು ನೀವೈ-
ವರು ಕುಮಾರರು ರಾಜಸೂಯಾ-
ಧ್ವರಮಹಾವ್ರತದೇಕಭುಕ್ತಾ[1]ದಿ[1]ಯಲಿ ಬಳಲಿದಿರಿ ।
ವರಸಭೆಯ ರಚಿಸಿದರು ಹಸ್ತಿನ-
ಪುರಿಗೆ ಬಿಜಯಂಗೈದು ವಿಭವೋ-
ತ್ಕರದ ವಿಮಳದ್ಯೂತದಲಿ ರಮಿಸುವುದು ನೀವೆಂದು ॥ ೧೨೧ ॥

ಕರಸುವನು ಧೃತರಾಷ್ಟ್ರ ಗಡ ನ-
ಮ್ಮರಸನಲಿ ಧೃತರಾಷ್ಟ್ರನಲಿ ನಮ-
ಗೆರಡು ಮನವೇ ಭಾವಭೇದವೆ ಪಾಂಡುಬೊಪ್ಪ[1]ರ[1]ಲಿ ।
ವರವೆ ದೊರಕಲಿ ಶಾಪವೇ ಮೇಣ್
ಬರಲಿ ಭಯವಿ[2]ಲ್ಲೆಮಗೆ[2] ಬೊಪ್ಪನ
[3]ಕರು[3]ಣಕೃತಿಗೆ ಹಸಾದವೆಂದನು ಧರ್ಮ[4]ಸುತ ನಗುತ[4] ॥ ೧೨೨ ॥

ಬಿಗಿದಱ[3]ಂಜೆಯ ಹೊಮ್ಮಿಣಿಯ ಹೊರ-
ಜಿಗಳ [1]ಜೋ[1]ಡಿಯ ಪಕ್ಕಘಂಟೆಯ
ಝುಗೆಯ ಮೊಗರಂಬದ ನವಾಯಿಯ ಮಣಿಯ [2]ಜಲ[2]ವಟೆಯ ।

---

೧೨೦. [1]ವಿಳಾಸ (ಅ ಕುಮಾ), ಸ್ವೀಪಾ (ಕ ಓ k). [2]ಗಿ (ಅ ಕುಮಾ), ಸ್ವೀಪಾ (ಕ k).
[ಮಿಗು-ಹೆಚ್ಚಾಗು, ಅಧಿಕವಾಗು. ಪ್ರಭವ-ಉಂಟಾದ].

೧೨೧. [1]ಠಿ (ಅ), ಧಿ (ಕ k) ; ಸ್ವೀಪಾ (ಓ).
[ಏಕಭುಕ್ತ-ಒಪ್ಪತ್ತಿನ ಊಟ. ರಮಿಸು-ನಲಿ, ಸಂತೋಷಪಡು].

೧೨೨. [1]ನ (ಅ ಆ ಕುಮಾ), ಸ್ವೀಪಾ (ಕ k). [2]ಲ್ಲೆಮ್ಮ (ಆ ಕ). [3]ಕರಣ (ಅ ಕುಮಾ ಆ), ಸ್ವೀಪಾ (k). [4]ನಂದನನು (ಕುಮಾ), ಸ್ವೀಪಾ (ಕ ಓ k ಆ).
[ಕರುಣಕೃತಿ-ದಯೆಯಿಂದ ಕೂಡಿದ ಕೆಲಸ. ಹಸಾದ-ಪ್ರಸಾದ].

೧೨೩. [1]ಝಾ (ಅ ಪ್ರ). [2]ಝುಳ (ಅ ಪ್ರ).

ಬಿಗಿದ ಕೂರಂಕುಶದ ಮಾವಂ-
ತಿಗನ ಸನ್ನೆಗೆ ಕುಸಿದ ದಂತಿಯು
ಹೆಗಲ ಹೊಂಗದ್ದುಗೆಗೆ ಬಿಜಯಂಗೈದ[3]ನಾ ಭೂಪ[3] ॥ ೧೨೩ ॥

ಭೂರಿಭೇರೀವಾದ್ಯರವ ಕೈ-
ವಾರಿಗಳ ಕಳಕಳದೊಳಡಗಿತು
ನಾರಿಯರ ನೇವುರದ ಮೊಳಗಿನೊಳದ್ದುದಾ ರಭಸ ।
ಆರು ಹೊಗಳುವರಾ ವಿಭವವಿ-
ಸ್ತಾರ[1]ಪವಣನು[1] ಪಯಣಗತಿಯುಲಿ
ಭೂರಮಣನೈತಂದು ಹೊಕ್ಕನು ಹಸ್ತಿನಾಪುರವ ॥ ೧೨೪ ॥

ಬಂದು ಧೃತರಾಷ್ಟ್ರನ ಪದಾಬ್ಜಕೆ
ವಂದಿಸಿದೊಡೆನ್ನಾನೆ ಬಾರೈ
ತಂದೆ ಬಾರೆಂದೆಳೆದು ಕುಳ್ಳಿರಿಸಿದನು ಮಂಚದಲಿ ।
ನಂದನರು ಭೀಮಾರ್ಜುನಾದಿಗ-
ಳಂದು ಪರಿವೇಷ್ಟಿಸಿದರಿತ್ತಲು
[1]ಕಂದು[1]ಹೃದಯದ ಕೌರವೇಂದ್ರನ [2]ಹವಣ[2] ಕೇಳೆಂದ ॥ ೧೨೫ ॥

ಕರಸಿದನು ಶಕುನಿಯನು ಕರ್ಣಂ-
ಗಱುಹಿದನು ಸೈಂಧವನನೆಕ್ಕಟಿ-
ಗರೆದು ಹೇಳಿದ ಕೃತ್ರಿಮದ ಹಾಸಂಗಿಗಳ [1]ತರಿಸಿ[1] ।

---

೧೨೩. [3]ನವನೀಶ (ಅ ಪ್ರ).

[ಜ[3]ಂಚೆ-ಆನೆಯ (ಕಿವಿಗಳ ಪಕ್ಕದಲ್ಲಿ ಜೋಲಬಿಡುವ) ಜೂಲ, ಉದ್ದನೆಯ ಗೊಂಡೆ. ಹೊಮ್ಮಿಣಿ-ಚಿನ್ನದ (ಎಳೆಗಳ) ಹಗ್ಗ. ಝುಗೆ-ಹೊಳವು. ಮೊಗರಂಬ-ಆನೆ ಕುದುರೆಗಳ ಮುಖಕ್ಕೆ ಹಾಕುವ ಬಟ್ಟೆ, ಮುಖವಾಡ. ನವಾಯಿ-ಹೊಸತನ, ನಾವೀನ್ಯ, ಚೆಲುವು, ಬೆಡಗು. ಕೂರಂಕುಶ-ಹರಿತವಾದ ಅಂಕುಶ. ಜಲವಟೆ (=ಜಲವಟ್ಟಗೆ)-ಒಂದು ಬಗೆಯ ಕೊರಳ ಹಾರ, ಕಂಠಾಭರಣ].

೧೨೪. ಪಣವನು (ಅ ಕುಮಾ), ಸ್ವೀಪಾ (ಕ ಅ).

[ನೇವುರ (=ನೂಪುರ)-ಅಂದುಗೆ. ಪವಣ (ಣು) (=ಪ್ರಮಾಣ)-ಅಳತೆ].

೧೨೫. [1]ಕುಂದು (ಪ್ರ). [2]ಹದನ (ಅ ಪ್ರ ಕುಮಾ).

[ಪರಿವೇಷ್ಟಿಸಿದರು-ಬಳಸಿಕೊಂಡರು, ಸುತ್ತುಗಟ್ಟಿದರು. ಕಂದು-ಕಪ್ಪಾದ, ಕಳಂಕವುಳ್ಳ. ಹವಣು-ಹವಣಿಸಿಕೊಂಡದ್ದು, ಸಿದ್ಧತೆ, ಏರ್ಪಾಡು, ಯೋಜನೆ].

೧೨೬. [1]ರಚಿಸಿ (ಅ ಕುಮಾ).

ಹರಸಿಕೊಂಡ[2]ನು[2] ಗಣಪ ಯಕ್ಷೇ-
ಶ್ವರಿ ಕಳಾವತಿ ದುರ್ಗಿ ಭುವನೇ-
ಶ್ವರಿಗಳಿಗೆ ವಿವಿಧೋಪಚಾರದ [3]ಬಲಿ[3]ವಿಧಾನದಲಿ ॥ ೧೨೬ ॥

ಚಿತ್ರವಿಸಿದಿರೆ ಬೊಪ್ಪ ಮಯನಿವ-
*ರ್ಗಿತ್ತ ಸಭೆಯಿದು ದೇವನಿರ್ಮಿತ-
ವೆತ್ತ ಮಾನವಕರ್ಮವೆತ್ತಲು ಸರಿಸವಲ್ಲದಕೆ ।
ಇತ್ತ ನಿಮ್ಮಡಿ ಮಾಡಿಸಿದ ಸಭೆ-
ಯುತ್ತ ಬಿಜಯಂಗೈದು ನೋಡಿದೊ-
ಡುತ್ತಮವಲಾ ಎಂದನಾ ದುರ್ಯೋಧನನು ನಗುತ ॥ ೧೨೭ ॥

ಅಲ್ಲಿ ವಿಮಳೋದ್ಯಾನವೀಥಿಗ-
ಳಲ್ಲಿ ತಾವರೆಗೊಳ[1]ನ[1] ರಚನೆಗ-
ಳಲ್ಲಿ ಹಂಸಮಯೂರಮಧುಕರ ಶುಕಪಿಕಾ[2]ದಿಗಳು[2] ।
ಅಲ್ಲಿ ಕೇಳೀಶೈಲ ಹಿಮಗೃಹ-
ವಲ್ಲಿ ವಿವಿಧವಿಳಾಸರಚನೆಗ-
ಳಲ್ಲಿ ಹೊಯ್ಕಯ್ಯೆನಿಸಿ ಮೆರೆ[3]ದುದು ಪಾಂಡವರ ಸಭೆ[3]ಗೆ[3] ॥ ೧೨೮ ॥

ಸ್ಥಳವನೇ ಜಲವೆಂದು ನಿರ್ಮಳ-
ಜಲವನೇ ಸ್ಥಳವೆಂದು ಬಾಗಿಲ
ನೆಳಲ ಭಿತ್ತಿಯ ಹಾಯ್ದು ಬಾಗಿಲ ಭಿತ್ತಿಯೆಂ[1][ದಱಿ]ದು[1] ।

---

೧೨೬. [2]ರು (ಅ ಕುಮಾ ಪ್ರ), [3]ಬಲ (ಅ ಕುಮಾ), ಬಹು (ಪ್ರ).
[ಸೈಂಧವ-ಸಿಂಧು ದೇಶದ ರಾಜ; ಜಯದ್ರಥ. ಎಕ್ಕಟ-ಏಕಾಂತ. ಕೃತ್ರಿಮದ-ಮೋಸದ. ಹಾಸಂಗಿ-(ಪಗಡೆ ಆಟದ) ದಾಳ; ಪಗಡೆ ಆಟದ ಮಣೆ, ಹಾಸು].

೧೨೭. [ಸರಿಸ-ಸಮಾನ].

೧೨೮. [1]ದ (ಅ ಕುಮಾ). ನೀಕ (ಅ ಕುಮಾ), ಸ್ವೀಪಾ (ಕ ೬). ಯ (ಅ ಕುಮಾ).
[ಕೇಳೀಶೈಲ-ಕ್ರೀಡೆಗೋಸ್ಕರ ನಿರ್ಮಿಸಿದ ಬೆಟ್ಟ. ಹಿಮಗೃಹ-ತಂಪಾದ ಮನೆ, ಶೈತ್ಯಾಗಾರ. ಹೊಯ್‌ಕಯ್-ಎಣೆ, ಸರಿಸಮಾನ].

೧೨೯. [1]ದಿಳಿದು (ಅ ಕುಮಾ), ದುಳಿದು (ಅ ಪ್ರ) ; ಸೂ ಪಾ (ಬಿ. ಎಂ. ಶ್ರೀ).

ಕಳವಳಿಸುವನೆ ಧರ್ಮಸುತನಾ
ಕೊಳ[2]ನ[2]ನೇ ಕೊಳನೆಂದು ಬಾಗಿಲ
ನೆಳಲ ಹೊಗಳುತ ಬಂದು ಹೊಕ್ಕನು ಬಹಳ ಚೌಕಿಗೆಯ ॥ ೧೨೯ ॥

ಒಂದು ಕಡೆಯಲಿ ಕವಡಿಕೆಯ [1]ಜೋ-
ಡೊಂದು[1] [2]ಕಡೆಯಲಿ[2] ಗದ್ಯಪದ್ಯವ-
ದೊಂದು [3]ಕಡೆಯಲಿ[3] ವಾರವಧುಗಳ ಸಾರಸಂಗೀತ ।
ಒಂದು[4]ಕಡೆಯಲಿ[4] ತರ್ಕಗೋಷ್ಠಿಯ-
ದೊಂದು[5]ಕಡೆಯಲಿ[5] ಕೌರವೇಂದ್ರನ
ವುಂದೆ ಜಡಿದುದು ರಭಸ ಹಾಸಂಗಿಗಳ ಸಾರಿಗಳ ॥ ೧೩೦ ॥

ಆಡಲ[1]ಱಿಯ[1]ನು ಗಡ ಯುಧಿಷ್ಠಿರ-
ನಾಡುವೊಡೆ ಬರಹೇಳು ಮೇಣ್ ತಾ
ನೋಡುತಿರಲಾನಾಡುವೆವು ಸಭೆಯಲಿ ವಿನೋದ[2]ದಲಿ[2] ।
ಖೋಡಿಯಿಲ್ಲದ ಸರಸನೆತ್ತವ-
ನಾಡಲಱಿಯದ ನೃಪತಿ ಮೃಗವೆಂ-
ದಾಡುತಿಹರ[3]ಱಿ[3]ದ[3]ವರು [4]ನಾ[4]ವಲ್ಲೆಂದನಾ ಶಕುನಿ ॥ ೧೩೧ ॥

ಅರಸ ಕೇಳ್ ಕಾಳೆಗಕೆ ಜೂಜಿಗೆ
ಕೆರದೊಡೋಸರಿಸಿದೊಡೆ ಬಳಿಕವ
ಗರುವನೇ ಕ್ಷತ್ರಿಯರೊಳಗೆ ನೃಪ[1]ಧರ್ಮ[1] ನೀನಱಿಯಾ ।

---

೧೨೯. [2]ವ(ಅ ಕುಮಾ), ಸ್ವೀಪಾ (ಕ k ಪ್ರ).
[ಭಿತ್ತಿ-ಗೋಡೆ. ನೆಳಲು-ಛಾಯೆ, ಆಕೃತಿ, ಪ್ರತಿಚಿತ್ರ. ಚೌಕಿಗೆ-ಒಳ ಅಂಗಣ, ತೊಟ್ಟಿ].

೧೩೦. [1]ಜೂಜೊಂದು ಅ ಅ ಕುಮಾ), ಸ್ವೀಪಾ (ಪ್ರ k). [2]ದೆಸೆಯಲಿ (ಪ್ರ). [3]ಮುಖದಲಿ (ಪ್ರ k), ದೆಸೆಯಲಿ (ಅ). [4]ಮಯ್ಯಾಲಿ (ಕ k ಅ). [5]ಕೆಲದಲಿ (ಅ ಕ k).
[ಜೋಡು-ಜೊತೆ. ವಾರವಧು-ವೇಶ್ಯಾ ಸ್ತ್ರೀ. ಸಾರಿ-ಪಗಡೆಯ ಕಾಯಿ].

೧೩೧. [1]ರಿವ (ಸರ್ವತ್ರ). [2]ವಲೆ (ಬಿ) ; ವಲಾ (ಪ್ರ k ಅ). [3]ರಿವ (ಅ ಕುಮಾ), ರಿತ (ಪ್ರ). [4]ತಾ (ಅ ಕುಮಾ)
[ಖೋಡಿ-ವಂಚನೆ, ಮೋಸ. ಮೃಗ-ಜಿಂಕೆ].

೧೩೨. [1]ನೀತಿ (ಕ k ಅ),

ಕರೆದೆವಾವ್ ಜೂಜಿಂಗೆ ಬೇಕೇ
ಧರಣಿಪತಿ ಬಾ ರಾಜಧರ್ಮವ-
ನೊರಸುವೊಡೆ ನಿಲ್ಲೆಂದುಪೇಕ್ಷಿಸಿ ನುಡಿದನಾ ಶಕುನಿ ॥ ೧೩೨ ॥

ಭೂರಮಣ ಕೇಳಖಿಳನೃಪಸಂ-
ಹಾರಬೀಜದ ಕರ್ಮಫಲಸಂ-
ಸ್ಕಾರವಳ್ಳಿಯನಿಜಿದು ನೂಕಿತು ಧರ್ಮನಂದನನ ।
ಧೀರನಲ್ಲಾ ಧರ್ಮಶಾಸ್ತ್ರವಿ-
ಚಾರಸಾರಜ್ಞಾನ[1]ದೃಷ್ಟಿ[1]ಯೊ-
ಳೋರೆಯುಂಟೇ ದ್ಯೂತಕೇಳಿಗೆ ಮಾಡಿದನು ಮನವ ॥ ೧೩೩ ॥

ವ್ಯಸನತೃಷ್ಣೆ[1]ಯು[1] ಕೀಳು ಚಿತ್ತದ
ಮಿಸುನಿಯೊಳು ಬೆರಸಿತು ಸುಬುದ್ಧಿಯ
ರಸವು ಹಾಜಿತು ಹುದಿದ ರಾಗದ್ವೇಷವಹ್ನಿಯಲಿ ।
ಮುಸುಡ ತಿರುಹಿತು ತಿಳಿವು ಲಜ್ಜೆಯು
ದೆಸೆಗೆ ದುರ್ಘಟವಾಯ್ತು ಪರಿಭವ-
ದೊಸಗೆಯನು ಸೂಚಿಸಿತು ಲಕ್ಷ್ಮಿಗೆ ಧರ್ಮಜನ ಹೃದಯ ॥ ೧೩೪ ॥

ಹಲವುಮಾತಿನಲೇನು ಭೂಪತಿ-
ತಿಲಕ ಸಿಲುಕಿದನವದಿರೊಡ್ಡಿದ
ಬಲೆಗೆ ಬಂದನು ನೆತ್ತಸಾರಿಯ ಗುಜಿಯ ಗದ್ದುಗೆಗೆ ।
ಕೆಲದಲನುಜರು ವಾಮದಲಿ ಮಣಿ-
ವಳಯಮಂಚದಲಂಧನೃಪನಿದಿ-
ರಲಿ ಸುಯೋಧನಕರ್ಣಶಕುನಿಜಯದ್ರಥಾದಿಗಳು ॥ ೧೩೫ ॥

---

೧೩೨. [ಒರಸು-ನಾಶಮಾಡು, ಅಳಿಸಿಹಾಕು].

೧೩೩. [1]ನಿಷ್ಠೆ (ಅ ಕುಮಾ).
[ಅಳ್ಳಿ-ಪಕ್ಕೆ. ಓರೆ-ಹೆಚ್ಚುಕಡಿಮೆ, ವ್ಯತ್ಯಾಸ].

೧೩೪. [1]ಯು (ಅ ಕುಮಾ).
[ಕೀಳು-ಕಳಪೆ ಬಂಗಾರ. ಮಿಸುನಿ-ಚಿನ್ನ. ಹುದಿ-ಕೂಡಿಕೊ. ಪರಿಭವ-ಸೋಲು. ಒಸಗೆ-ಶುಭ (ವ್ಯಂಗ್ಯ)].

ಹಲಗೆಯಿಕ್ಕಿತು ಹೊನ್ನಸಾರಿಗ-
ಳಿಳುಹಿದವು ಹೇಳೊಡ್ಡವನು ಕಳ-
ಕಳವ ನಿಲಹೇಳೆನುತ [1]ಹಾಸಂಗಿಗಳ ಹೊಸೆಹೊಸೆದು[1] ।
ನೆಲಕೆ ಹಾಯ್ಕಿದನಡಿಗಡಿಗೆ ಮಂ-
ಡಳಿಸಿ ಸಾರಿಯ ಹೂಡಿ ಕುರುಪತಿ
ಗೆಲಿದ ಹೋಗೆಂದೊದಱುತಿದ್ದನು [2]ತೊಡೆಯನಪ್ಪಳಿಸಿ[2] ॥ ೧೩೬ ॥

ಆಟವಾರಂಭಿಸದು ಬಱಿಬೊ-
ಬ್ಬಾಟವೇಕೈ ವಿಜಯಸಿರಿ ವಾ-
ಚಾಟರಿಗೆ ಮೆಚ್ಚುವಳೆ ತೋಱಾ ದ್ಯೂತಕೌಶಲವ ।
ತೋಟಿ ಬೇಕೇ [1]ಕೈಯ ಹೊಯ್[1] ಬೂ-
ತಾಟ [2]ಬೇಡೆನೆ[2] ಧರ್ಮನಂದನ-
ನಾಟವೊಳ್ಳಿತು ಬಲ್ಲೆನೆಂದನು ಶಕುನಿ ನಸುನಗುತ ॥ ೧೩೭ ॥

[1]ದುಗನ[1] ಹಾಯಿಕು ತನಗೆ [2]ಹಾಯ್ಕಿ-
ತ್ರಿಗನ[2]ನೆಂಬಬ್ಬರದ ಹಾಸಂ-
ಗಿಗಳ ಬೊಬ್ಬೆಯ ಸಾರಿಗಳ [3][ಖ]ಣಿಖಟಿಲ[3]ನಿಸ್ವನ[4]ದ[4] ।

---

೧೩೬. [1]ಮಿಗೆ ಗರ್ಜಿಸಿದನಾ ಶಕುನಿ (ಆ), ಸ್ವೀಪಾ ('ಆ' ಬಿಟ್ಟು ಎಲ್ಲ ಪ್ರತಿಗಳಲ್ಲಿ). [2][ಈ ಪದ್ಯದಲ್ಲಿ "ಹಾಸಂಗಿಗಳ ಹೊಸೆ ಹೊಸೆದು ನೆಲಕೆ ಹಾಯ್ಕಿದನು" ಎಂಬ ಕ್ರಿಯೆ ಮತ್ತು ಮುಂದಿನ ಕ್ರಿಯೆಗಳಿಗೆ ಕರ್ತೃ ಇಲ್ಲ. ಆದ್ದರಿಂದ, ಮುಂದಿನ ಒಂದು ಪದ್ಯದಲ್ಲಿ "ಬೊಬ್ಬಿರಿದನಾಶಕುನಿ" ಎಂಬ ಪದಗಳನ್ನು ಮಾರ್ಪಡಿಸಿ "ಶಕುನಿ ಬೊಬ್ಬಿ:[3]ದ" ಎಂಬ ಪಾಠವನ್ನು "ಶ್ರೀ"ಯುವರು ಸೂಚಿಸಿದ್ದಾರೆ. ಈ ಮಾರ್ಪಾಟಿನಿಂದ ಪಗಡೆ ಆಟವಾಡುತ್ತಿದ್ದವನು ಶಕುನಿ ಎಂದು ಸ್ಪಷ್ಟಪಡುತ್ತದೆ. ಆದರೆ, ಈ ಮಾರ್ಪಾಟಿಗೆ ಪ್ರಸ್ತುತ ಪದ್ಯಕ್ಕೆ ಸಂಬಂಧಪಟ್ಟಂತೆ ಯಾವ ಪ್ರತಿಯಲ್ಲಿಯೂ ಆಧಾರವಿಲ್ಲದ್ದರಿಂದ "ಶ್ರೀ"ಯವರ ತಿದ್ದುಪಾಟನ್ನು ಸ್ವೀಕರಿಸಿಲ್ಲ].

[ಹಲಗೆ-ಪಗಡೆ ಆಟದ ಮಣೆ. ಒಡ್ಡ (ಡ್ಡು)-ಪಣ, ಬಾಜಿ].

೧೩೭. [1]ಕೈದುಗೊಳು (ಕ k ಅ). [2]ವೇತಕೆ (ಆ ಕುಮಾ).

[ವಾಚಾಟ-ಅತಿಯಾಗಿ ಮಾತಾಡುವವನು; ವಾಚಾಳಿ. ತೋಟಿ-ಹೋರಾಟ, ಜಗಳ. ಬೂತಾಟ-ಭಂಡತನದ ಆಟ, ಮೋಸದ ಆಟ].

೧೩೮. [1]ದ್ವಿಗುಣ (ಪ್ರ). [2]ಹಾಯಿಕು ತ್ರಿಗುಣ (ಪ್ರ). [3]ಮಣಿಖಟಿಲ (ಆ ಕುಮಾ), ಕಟಕಟಿತ (ಅ ಓ ಕ). [4]ವ (ಅ ಆ ಕುಮಾ ಪ್ರ), ಸ್ವೀಪಾ (ಕ).

ಉಗಿವ ಸೆಱೆಗಳ ಬಳಿದುಹಾರದ
ಬಿಗುಹುಗಳ ಬೀದಿಗಳ [5]ಕಳಿ[5]ಸಾ-
ರಿಗಳ ಧಾಳಾಧೂಳಿ ಮಸಗಿತು ಭೂಪ ಕೇಳೆಂದ || ೧೩೮ ||

ಸೋತೆಯರಸಾ ನಿನಗೆ ಜೂಜಿನ
ಭೀತಿಯುಂಟೇ ಮಾಣು ಮೇಣ್ ನಿ-
ರ್ಭೀತನೇ ನುಡಿ ಮೇಲಣೊಡ್ಡವ ಹಲವು ಮಾತೇನು |
ಕಾತರಿಸಬೇಡೆನಲು ಫಡ [1]ಪಣ[1]-
ಭೀತನೇ ತಾನಕಟೆನುತ ಕುಂ-
ತೀತನುಜನೊಡ್ಡಿದನು ಸಾವಿರ ಮತ್ತಗಜಘಟೆಯ || ೧೩೯ ||

ಫಡ ದರಿದ್ರನೆ ತಾನು ತನ್ನಯ
ಮಡದಿಯರ ಕೆಳದಿಯರು ಸಾವಿರ-
[1]ಮಡಿ[1] ಸುಯೋಧನರಾಜಭವನದ ವಾರನಾರಿಯರ |
ನುಡಿಯಬೇಕೇ ಧರ್ಮಸುತ ನಿ-
ಮ್ಮಡಿಗಳೊಡ್ಡಿದ ಬಳಿಕ ಗೆಲಿದವ-
[2]ರೊಡೆಯರ್ಕೈ[2]ಸಲೆ ಹಾಯ್ಕು ಹಾಯ್ಕೆಂದೊದರಿದನು ಶಕುನಿ || ೧೪೦ ||

ಅರಸ ಸೋ[1]ತೆಯಲಾ ಜಯೋದಯ[1]
ಮರಳಿತಿತ್ತಲು ಮನಕೆ ಭೀತಿಯ
ಬೆರಕೆಯುಳ್ಳೊಡೆ ಬಿಟ್ಟು[2]ನಿಲು[2] ಪೈಸರ[3]ಕಿದೇ[3] [4]ಸಮಯ[4] |
ಅರಸುಪಂಥದ ವಾಸಿ ಮನಕು-
ಬ್ಬರಿಸುವೊಡೆ ಪಣವೇನು ಹೇಳೈ
ಧರಣಿಪಾಲ ಯೆನುತ್ತ ಱಿಂಗಣಗುಣಿದನಾ ಶಕುನಿ || ೧೪೧ ||

---

೧೩೮. [5]ತಳಿ (ಅ ಕುಮಾ), ಕಳ (ಪ್ರ), ಸ್ವೀಪಾ (ಕ ಓ k).
[ದುಗ–ಎರಡು. ಇತ್ತಿಗ–ಆರು. ಕಳಿಸಾರಿ–ಹಣ್ಣಾದ ಕಾಯಿ ಅಥವಾ ಕೊಂದ ಕಾಯಿ. ದುಹಾರ–ಎರಡರಷ್ಟು, ಇಪ್ಪಟ್ಟು. ಬೀದಿ–ಕಾಯಿ ನಡೆಸುವ ಮನೆಗಳ ಸಾಲು. ಉಗಿವ ಸೆರೆ–ಕಟ್ಟಿಹಾಕಿದ ಕಾಯಿಗಳ ಸೆರೆ ಬಿಡಿಸುವುದು. ಧಾಳಾಧೂಳಿ–ಗೊಂದಲ, ಕಳಕಳ].

೧೩೯. [1]ರಣ (ಅ ಕ), ಧನ (ಓ), ಪ್ರಾಣ (ಪ್ರ).

೧೪೦. [1]ನುಡಿ (ಅ ಪ್ರ). [2]ರೊಡವೆಯ್ಯೆ (ಅ ಕುಮಾ), ಸ್ವೀಪಾ (ಕ ಓ k ಪ್ರ).

೧೪೧. [1]ತೈನಾರಿಯರ ಜಯ (ಅ ಕುಮಾ), ಸ್ವೀಪಾ (ಅ ಕ ಓ k ಪ್ರ). [2]ಕಳೆ (ಅ ಕುಮಾ). [3]ಕೆ (ಅ ಕುಮಾ). [4]ಸಮಯವಿದು (ಅ ಕುಮಾ).
[ಪೈಸರ–ಒಮ್ಮೆಟ್ಟುವುದು, ಹಿಂಜರಿಕೆ. ವಾಸಿ–ಕೀರ್ತಿ, ಪ್ರಸಿದ್ಧಿ. ಱಿಂಗಣ ಗುಣಿ–ಕುಣಿ ಕುಣಿದು ಬೀಳು].

ಸೋಲ ಮೆಚ್ಚಿದುದವರನೊಡ್ಡದ
ಮೇಲೆ ಹೇಱಿದುದೊಡ್ಡವೀಗಳು
ಮೇಲುಗೈ ನೀನಾದೆ ಕುಸಿದರು ಪಾಂಡುನಂದನರು ।
ಸೋಲವಿದು ಕಾಲಾಂತಕನ ಮೈ-
ಸಾಲ ಸಾಱಿದೆನಕಟ ಸಾಕಿ-
ನ್ನೇಳು ಕೌರವನೃಪತಿ ಯೆಂದನು ಖಾತಿಯುಳಿ ವಿದುರ ॥ ೧೪೨ ॥

ಖೂಳನೆಂಬೆನೆ ಸಕಲಕಲೆಗಳ
ಬಾಳುಮನೆ ಗಡ ನಿನ್ನ ಬುದ್ಧಿ ವಿ-
ಶಾಲಮತಿ ನೀನೆಂಬೆನೇ ಜಗದಜ್ಞರಧಿದೈವ ।
ಕೇಳಿದೊಡೆ ಮೇಣಹಿತಹಿತವನು
ಹೇಳುವುದು ಪಾಂಡಿತ್ಯ ನಿನ್ನನು
ಕೇಳಿದವರಾರೆಂದು ಜಱಿದನು ಕೌರವರ ರಾಯ ॥ ೧೪೩ ॥

ಗುರುಗಳುಸುರರು [1]ಭೀಷ್ಮನೆಮ್ಮನು
ಕೆರಳನೀ[1] ಕೃಪ ನುಡಿಯನಯ್ಯನ
ಕೊರಳು ಕೊಂಕದು ಬಾಹ್ಲಿಕನ ಮನ ನೋಯದಿನ್ನಬರ ।
ಹಿರಿಯರವರೇನಜ್ಞರೇ ನೀ
[2]ಪರಮತತ್ವಜ್ಞಾನಿಯೇ ಕಾ-
ತರಿಸದಿರು ನೀನೆಂದು ಟೆಕ್ಕರಿಗಳೆ[2]ದನಾ ಭೂಪ ॥ ೧೪೪ ॥

ಎಲವೊ ಸೌಬಲ ವಿತ್ತವೀಸಱ-
ಲಳಿದುದೇ ನೀ ನಗುವವೋಲ್ ನ-
ಮ್ಮೊಳಗು ಡಿಳ್ಳವೆ ರಪಣವಿದೆಲಾ ಬಹಳ ಭಂಡಾರ ।
ಸುಳಿಸು ಹಾಸಂಗಿಗಳ ಮೋಹರ-
ಗೊಳಿಸು ಸಾರಿಯನೊಂದು ರೇಖೆಯ
ಬಳಿಯಲೊಂದೇ ಕೋಟಿಧನವೆಂದೊದಱಿದನು ಭೂಪ ॥ ೧೪೫ ॥

---

೧೪೨. [ಮೈಸಾಲ-ಸಾಲಕ್ಕೆ ವ್ಯಕ್ತಿಯ ಹೊಣೆ. ಖಾತಿ-ದುಃಖ].

೧೪೩. [ಬಾಳುಮನೆ-ವಾಸಸ್ಥಾನ, ತವರುಮನೆ. ಅಹಿತ-ಅಪ್ರಿಯ. ಹಿತ-ಪ್ರಿಯ].

೧೪೪. [1]ಭೀಷ್ಮರೆಮ್ಮನು ತೆರಳಿಚರು (ಅ), ಭೀಷ್ಮರೆಮ್ಮನು ಕೆರಳಿಚರು (ಕುಮಾ), ಭೀಷ್ಮರೇಕೆಮ್ಮನು ಕೆರಳಿಚರು (ಪ್ರ). [2]ಪರಿಣತನೆ ನಿಸ್ಪೃಜ್ಞಶಠನೆಂದರಿಯೆವೇ ನಾವೆಂದು ವಿದುರನ ಜರೆದ (ಅ ಕ ಓ k ಪ್ರ).
[ಟೆಕ್ಕರಿಗಳೆ-ಹೀಯಾಳಿಸು, ಕಡೆಗಣಿಸು].

ದುಗುಣಕಿಕ್ಕಿದನರಸನಾಚೆಗೆ
ತೆಗೆಧನವ ಮೂಱಿಂದು ನಾಲ್ಕ-
ಕ್ಕುಗಿದನವನಿಪಸ್ವೈದ [1]ಕ[1]ಳೆದನು ಬಹಳವನು ಶಕುನಿ ।
ತೆಗೆದನಿಮ್ಮಡಿಗರಸನವನಾ
ತ್ರಿಗುಣಪಂಚಕಸಪ್ತನವ[2]ಕ[2]
ಪ್ರಗುಣವೆಂದಸು ಶಕುನಿ ಸೋಲಿಸಿದನು ಮಹೀಪತಿಯ ॥ ೧೪೬ ॥

ನಕುಲಸಹದೇವಾರ್ಜುನರ ಮಣಿ-
ಮಕುಟಕರ್ಣಾಭರಣಪದಕಾ-
ದಿಕಸಮಸ್ತಾಭರಣ ಪೋಡ್ಡಿತು ಹಲಗೆಯೊಂದರಲಿ ।
ವಿಕಟಮಾ[1]ಯಾ[1] ವಿಷಮಕರ್ಮವ-
ನಕಟ ಬಲ್ಲನೆ ಸಾಧುಜನಸೇ-
ವಕನು ಸೋತ[2]ನಸಾಧ್ಯವಾವುದೊ[2] ವಿಧಿಯ [3]ಗಡಣೆಯಲಿ[3] ॥ ೧೪೭ ॥

ಖಿನ್ನನಾದನು ರಾಜ್ಯಲಕ್ಷ್ಮಿಯ
ಬೆನ್ನ ಕಂಡನು [1]ಬಳಿಚಿ[1]ಹೋದ ನಿ-
ಜೋನ್ನತಿಯಲವಸೀಸಸಿಪ್ಪನು ಮುಱಿದ ಮಹಿಮೆಯಲಿ
ಇನು ಪಣವೇನೋ ವಿರೋಧಿಗ-
ಳೆನ್ನ ಭಂಗಿಸಿ ನುಡಿದರಿದಕಿ-
ನ್ನೆನ್ನಸಿಕ್ಕೀ ದ್ಯೂತವಿಜಯವ ಸಾಧಿಸುವೆನೆಂದ ॥ ೧೪೮ ॥

---

೧೪೫. [ವಿತ್ತ-ಹಣ, ಸಿರಿ, ಐಶ್ವರ್ಯ. ಈಸರಲಿ-ಇಷ್ಟರಲ್ಲಿ. ಡಿಳ್ಳ-ಭೀತಿ. ರಪಣ-ಪಣ. ಮೋಹರ-ಗುಂಪು. ಬದರಿ ಕೂಗಿ ಹೇಳು, ಸಾರಿಹೇಳು].

೧೪೬. [1]ಕಳೆ (ಅ). [2]ಮ (ಅ), ಸ್ವೀಪಾ (ಓ).
[ದುಗುರ್ಣ-ಎರಡುಪಟ್ಟು, ಎರಡರಷ್ಟು. ಉಗಿ-ಹೊರಕ್ಕೆ ಹಾಕು, ಬಿಸುಡು (?) ತ್ರಿಗುಣ-ಮೂರುಪಟ್ಟು. ಪ್ರಗುಣ-ಹಲವುಪಟ್ಟು].

೧೪೭. [1]ಯುದ (ಅ). [2]ನು ಸಾಧ್ಯವಹುದೇ (ಅ ಕುಮಾ), ಸ್ವೀಪಾ (ಕ). [3]ಮುಳಿಸಿನಲಿ (ಅ ಕುಮಾ), ಸ್ವೀಪಾ (ಕ).
[ಹಲಗೆಯೊಂದರಲಿ-ಒಂದು ಪಗಡೆಯಾಟದಲ್ಲಿ. ಗಡಣೆ (=ಗಣನೆ)-ಎಣಿಕೆ, ಲೆಕ್ಕ].

೧೪೮. [1]ಬಳಚಿ (ಅ ಕುಮಾ), ಕಳಚಿ (ಓ).
[ಬಳಿಚಿಹೋಗು-ಜಾರಿಬೀಳು, ಬಿದ್ದುಬಿಡು].

ಹರಿಬದಲಿ ತನ್ನಖಿಳವಸ್ತೂ-
ತ್ಕರವ ಮರಳಿಚುವನು ಮಹೀಪತಿ
ಕಿಱಿಯ ತಮ್ಮನನೊಡ್ಡಿದನು ಮಾದ್ರೀಕುಮಾರಕನ ।
ಅರಸದಾಯವೆ ಬಾ ಜಯಾಂಗದ
ಸಿರಿಯೆ ಬಾ ಕುರು[1]ರಾಜವಂಶೋ-[1]
ತ್ಕರುಷಸಿದ್ಧಿಯೆ ಬಾ ಯೆನುತ ಗರ್ಜಿಸಿದನಾ ಶಕುನಿ ॥ ೧೪೯ ॥

ಏನ ಬಣ್ಣಿಸುವೆನು ವಿಕಾರಿಗ-
ಳೇನ ನೆನೆಯರು ಕಪಟವಿಧದಲಿ
ಮಾನನಿಧಿ ತಾ ಸೋತನನುಜದ್ವಯಮಹಾಧನವ ।
ಗ್ಲಾನಿ ಚಿತ್ತದೊಳಿಲ್ಲ ಲೇಸು ಮ-
ನೋನುರಾಗ[1]ದೆ[1] ಭೀಮಪಾರ್ಥರು
ತಾನಿದೊಮ್ಮೆಗೆ ಬದುಕಿದರು [2]ನಿವಗೆಂದನಾ[2] ಶಕುನಿ ॥ ೧೫೦ ॥

ಭೇದಮಂತ್ರವ ಮಾಡಿ ನಮ್ಮನು
ಭೇದಿಸುವ ಗಡ ಸುಬಲಸುತನಕ-
ಟೇ ದುರಾತ್ಮನ ನೋಡಿರೈ ಸಭ್ಯರು ಶಿವಾ ಯೆನುತ ।
ಆ ದುರಾಗ್ರಹಿ ಲೋಕಜನಪರಿ-
ವಾದಪದನಿರ್ಭೀತನಕ್ಷವಿ-
ನೋದಕರ್ದಮಮಗ್ನನೊಡ್ಡಿದನಾ ಧನಂಜಯನ ॥ ೧೫೧ ॥

---

೧೪೯. [1]ರಾಯರಾಜೋ (ಅ ಆ ಕುಮಾ), ಸ್ವೀಪಾ (k).
[ಹರಿಬ–ಕಾರ್ಯ, ಕರ್ತವ್ಯ, ಹೊಣೆಗಾರಿಕೆ. ಉತ್ಕರುಷ (=ಉತ್ಕರ್ಷ)–ಮೇಲ್ಮೆ, ಏಳಿಗೆ, ಅಭಿವೃದ್ಧಿ].

೧೫೦. [1]ಪೆ (ಅ ಕುಮಾ), ಸ್ವೀಪಾ (ಅ). [2]ಬಳಿಕೆಂದನಾ (ಅ).
[ವಿಕಾರಿ–ಕೆಟ್ಟ ಮನಸ್ಸಿನವನು, ದುಷ್ಟ. ಗ್ಲಾನಿ–ಚಿತ್ತಕ್ಷೋಭೆ, ಮನಸ್ಸು ಕಲಕಿರುವುದು].

೧೫೧. [ಸುಬಲಸುತ–ಶಕುನಿ (ಸುಬಲ: ಗಾಂಧಾರಿಯ ತಮ್ಮ). ಸಭ್ಯ–ಸಭಾಸದ, ಸಭೆಯಲ್ಲಿ ಇರುವವನು. ದುರಾಗ್ರಹಿ–ಕೆಟ್ಟ ಹಟಗಾರ, ಛಲಗಾರ. ಲೋಕಜನ ಪರಿವಾದಪದ ನಿರ್ಭೀತ–ಲೋಕದ ಜನರ ನಿಂದೆಗೂ (ಲೋಕನಿಂದೆಗೂ) ಹೆದರದವನು. ಅಕ್ಷವಿನೋದಕರ್ದಮಮಗ್ನ–ಪಗಡೆಯಾಟದ ವಿನೋದವೆಂಬ ಕೆಸರಿನಲ್ಲಿ ಮುಳುಗಿದವನು].

ಸೋಲಿರರಸರೆ ಮತ್ತೆ ಹೇಳೀ
ದ್ಯೂತಶಿಖಿಗಾಹುತಿಯನೆನೆ ಕುಂ-
ತೀತನುಜನೊಡ್ಡಿದನು ವಿಗಡ ಬಕಾಸುರಾಂತಕನ ।
ಆತುದೊಂದರೆಗಳಿಗೆ ಸೌಬಲ
ಸೋಲ ಧರ್ಮಜ ಗೆಲಿದ ಧರ್ಮಜ
ಸೋಲ ಸೌಬಲ ಗೆಲಿದನೆಂಬವೊಲಾಯ್ತು ಘನರಭಸ ॥ ೧೫೨ ॥

ಆ ಹಲಗೆ ಸೋಲುದು ಯುಧಿಷ್ಠಿರ-
ನೂಹೆ ಮುಱಿದುದು ಮುಂದುಗೆಟ್ಟನು
ರಾಹು ಹಿಡಿದ ಹಿಮಾಂಶುಮಂಡಲದುಳಿದ ಕಳೆಯಂತೆ ।
ತೋಹಿನಲಿ [1]ತುಟ್ಟಿ[1]ಸಿದ ಮೃಗದ ವೊ-
ಲೂಹೆಯುಳಿದುದು ಯಂತ್ರಸೂತ್ರದ
ಹಾಹೆಯಂತಿರೆ ನೃಪತಿ ಸೋತನು ಹಗೆಗೆ ತನುಧನವ ॥ ೧೫೩ ॥

ಜನಪ ಮಾಱಿದೆ ಭೀಮಸೇನಾ-
ರ್ಜುನರು ಸಹಿತೊಡಹುಟ್ಟಿದರ ನಿ-
ರ್ಧನಿಕನಾಗಿಯು ಮತ್ತೆ ಬಿಡವೇ ದ್ಯೂತದುರ್ವ್ಯಸನ ।
ಎನಲು ಶಕುನಿಯ ಜಱಿದು ತಾನೇ
ಧನವಲಾ [1]ಸಾಕೊಂದು[1] ಹಲಗೆಯೊ-
ಳೆನಗೆ ಜಯ[2]ವಿದೆ[2] ದಾಯ[3]ವೆಂದನು[3] ಧರ್ಮನಂದನನು ॥ ೧೫೪ ॥

ತೆಗೆದು ಸಾರಿಯ ಹೂಡಿ ಹಾಸಂ-
ಗಿಗಳ ಹೊಸೆದನು ಶಕುನಿ ಧರ್ಮಜ
ಹೊಗಳು ಕೌಣೆಯನು [1]ವಚನಿಸೊ[1]ಡ್ಡವಸಿದು ವಿನೋದವಲೇ ।

---

೧೫೨. [ವಿಗಡ–ಅಸಾಧಾರಣ ಬಲಶಾಲಿ, ಪ್ರಚಂಡ. ಬಕಾಸುರಾಂತಕ–ಭೀಮ. ಆತುದು–ಆಯಿತು, ಒದಗಿತು ?].

೧೫೩. [1]ತೊಟ್ಟಿ (ಆ ಕುಮಾ), ತುಷ್ಟಿ (ಅ), ಸ್ವೀಪಾ (ಓ k).
[ಹಿಮಾಂಶು–ಚಂದ್ರ. ತೋಹು–ಬೇಟೆಯನ್ನು ಆಕರ್ಷಿಸುವ ಸ್ಥಳ. ತುಟ್ಟಿಸಿದ–ಶಕ್ತಿಗುಂದಿಸಿದ, ನಡುಕಹುಟ್ಟಿಸಿದ. ಹಾಹೆ–ಬೊಂಬೆ].

೧೫೪. [1]ಸಾಕೆಂದು (ಅ). [2]ವೀ (ಅ ಕುಮಾ), ಸ್ವೀಪಾ (ಕ k). [3]ವೆಂದೊಡ್ಡಿದ (ಆ ಕುಮಾ), ಸ್ವೀಪಾ (ಆ ಕ k). [4]ಜನನಾಥ (ಆ ಕುಮಾ), ಸ್ವೀಪಾ (ಆ ಕ k).

೧೫೫. [1]ಹೆಸರಿಸೊ (ಅ).

ಬಗೆ[2][ವೊ]ಡೊಂ[2]ದೇ ಹಲಗೆ ಮೇಲಣ
ದುಗುಣ ಸಲ್ಲದು ಜೂಜುಗಾಱರ
ವಿಗಡತನವಲ್ಲೆಂದು ನೃಪತಿಗೆ ಸೂಸಿದನು ನಗೆಯು ॥ ೧೫೫ ॥

ಲಲಿತರಾಗದ ರಸದ ಗೋರಿಯು
[1]ಬಲುಗಡಿ[1]ಯು ಮೃಗದಂತೆ ವಿಷಯುದ
ಕುಳಿಯೊಳಗೆ ಕಾಲ್ದೊಡಕಿ ಬಿದ್ದ ಸುಯೋಗಿಯಂಬದಲಿ ।
ಕಲಿತ ವಿಕಳಾವೇಶದಲಿ ವಿ-
ಹ್ವಲಿತವಿವಿಧಶ್ರೋತ್ರನಯುಸಂ-
ಚಲಿತನೆಂದನು ಶಕುನಿ ನೀ ನುಡಿ ಒಡ್ಡವೇನೆಂದು ॥ ೧೫೬ ॥

ಧರಣಿಪತಿ ಕೇಳ್ ನಿನ್ನ ಧಾರುಣಿ
ಕುರುಪತಿಯು ನೆಲನೊಡ್ಡ ನಿಮ್ಮಾ
ಯೆರ[1]ಡು ತಂಡದೊ[1]ಳಾರು ಸೋತರು ಸೋತ ಭೂಪತಿಗೆ ॥
ವರುಷ ಹನ್ನೆರಡಱಲಿ ವನದೊಳ-
ಗಿರವು ಮೇಣಜ್ಞಾತವೊಂದೇ
ವರುಷ ಹದಿನಾಲ್ಕಱಲಿ ಹೊಗುವುದು ತಮ್ಮ ಪಟ್ಟಣವ ॥ ೧೫೭ ॥

ಮಱ[3]ಯೊಳಿಹುದಜ್ಞಾತವಾಸದೊ-
ಳಱ[3]ದರಾದೊಡೆ ಮತ್ತೆ ವನದಲಿ
ಚರಿಸುವುದು ಹನ್ನೆರಡು ವರುಷವು ಸತ್ಯಭಾಷೆಯಲಿ ।
[1]ಮುಱ[3]ದು[1]ತಪ್ಪಿದ ನೃಪನನೀಶ್ವರ-
[2]ನಿಱ[3]ವ[2]ನೈಸಲೆ ರಾಜಧರ್ಮವ
ಮೆಱ[3][3][ವೊಡಾ][3]ಡುವುದೊಡ್ಡವೀ ಪರಿಯೆಂದನಾ ಶಕುನಿ ॥ ೧೫೮ ॥

---

೧೫೫. [2]ವವೊಂ (ಅ), ವಡೊಂ (k ಕುಮಾ ಅ), ವುದೊಂ (ಕ ಓ).
[ಹೊಗಳು-ಹೇಳು. ಹೊಣೆ-ಪಣ. ವಿಗಡತನ-ಮೋಸ, ವಂಚನೆ].

೧೫೬. [1]ಬಲುಸವಿ (ಆ ಕುಮಾ), ಬಲುಗಡಿ (ಓ), ಬಲುಗುಡಿ (ಕ ಅ); ಸ್ವೀಪಾ (k).
[ಗೋರಿ-ಆಕರ್ಷಣೆ. ಬಲುಗುದಿ-ಬಲವಾದ ತಡೆಗಟ್ಟು, ಅಡ್ಡಗಟ್ಟು. ವಿಷಯ-ಇಂದ್ರಿಯ ಸುಖ. ಕಲಿತ-ಸೇರಿದ, ಕೂಡಿಕೊಂಡ. ವಿಕಳ-ವಕ್ರ ವಿಹ್ವಲಿತ-ಕಳವಳಗೊಂಡ. ವಿವಿಧ ಶ್ರೋತ್ರನಯುಸಂಚಲಿತ-ಬೇರೆ ಬೇರೆ ಹೇಳಿಕೆಗಳನ್ನು ಕಿವಿಯಿಂದ ಕೇಳಿ ಚಂಚಲವಾದ ಮನಸ್ಸುಳ್ಳವನು].

೧೫೭. [1]ಡರಸುಗಳೊ (ಆ ಕುಮಾ), ಸ್ವೀಪಾ (ಅ ಕ ಓ k ಪ್ರ).
[ಅಜ್ಞಾತ-ಯಾರಿಗೂ ತಿಳಿಯದಂತೆ ಇರುವುದು].

೧೫೮. [1]ಮರೆದು (ಅ ಪ್ರ). [2]ನರಿವ (ಅ), ಸ್ವೀಪಾ (ಪ್ರ k). [3]ವಂಾ (ಅ), ವಡೊ (k).

ಹೇಳನೇನದನವರು ರಚಿಸಿದ
ಬೇಳುವೆಯುನಾ ಶಕುನಿಯೊಡ್ಡಿದ
ಕಾಲು[1]ಕುಣಿಕೆ[1]ಯೊಳಾರು ಬೀಳರು ನೃಪತಿ ನಿಮಿಷದಲಿ ।
ಬೀಳುಗೊಟ್ಟನು ತನ್ನನಾ ಜನ-
ಜಾಲವಿದ್ದುದು ಬಿಗಿದ ಚಿಱಗಿನೊ-
ಳಾಲಿಸುವಿರೇ ಜೀಯ [2]ಧನ[2]ವೇನೆಂದನಾ ಶಕುನಿ ॥ ೧೫೯ ॥

ಎಲವೊ ಸೌಬಲ ಸಾಕಿದೊಂದೇ
ಹಲಗೆ ಸರ್ವಸ್ವಾಪಹಾರವ-
ನಿಳುಹುವೆನು ನೀಲಾಳಕಿಯನೊಡ್ಡುವೆನು ಬಾಲಕಿಯ ।
ಉಳಿದ ಧನವೆಮ್ಮೈವರಿಗೆ [1]ನಿ-
ಸ್ಖಲಿತ[1]ವಿದು ಹೂಡೆನಲು ಹರುಷದ
ಲಳಿಯ ಚೌಪಟಮಲ್ಲ ಸಾರಿಯ ಸಾಲ ಜೋಡಿಸಿದ ॥ ೧೬೦ ॥

ನ್ಯಾಯವೆಮ್ಮದು ಮುನ್ನ ಸೋತಿರಿ
ಜೀಯ ನಿಮ್ಮೊಡಹುಟ್ಟಿದರುಸಹಿ-
ತಾಯತಾಕ್ಷಿಯು ಬಳಿಕ ಸೋತಿರಿ ಬಲುಹಮಾಡೆನೆಲೇ ।
ರಾಯನೊಲಿದುದ ಮಾಡಲಾವ-
ನ್ಯಾಯವರ್ತಿಗಳಲ್ಲಲೇ ಬೆಸ-
ಸಾ ಯುಧಿಷ್ಠಿರ ಯೆನುತ ಕೈಗಳ ಮುಗಿದನಾ ಶಕುನಿ ॥ ೧೬೧ ॥

ಗೆಲಿದುಕೊಟ್ಟೆನು ಸಕಲಚಾತು-
ರ್ಬಲವನಾ ಭಂಡಾರಸಹಿತ-
ಗ್ಗಳಿಯರೈವರ ಕಮಲಮುಖಿಯನು ರಾಜ್ಯಸಿರಿಸಹಿತ

---

೧೫೯. [1]ಕಣ್ಣಿ (ಅ). [2]ಪಣ (ಅ ಕುಮಾ).
[ಬೇಳುವೆ–ಕುತಂತ್ರ, ಮಾಯೆ, ಮೋಸಗಾರಿಕೆ].

೧೬೦. [1]ನಿಶ್ಚಲಿತ (ಅ).
[ನೀಲಾಳಕಿ–ಕಪ್ಪು ಮುಂಗುರುಳಿನವಳು (=ದ್ರೌಪದಿ). ನಿಸ್ಖಲಿತ–ಸ್ಥಿರ, ಖಂಡಿತ. ಲಳಿ–ಆವೇಗ, ಆವೇಶ, ಉತ್ಕರ್ಷ. ಚೌಪಟಮಲ್ಲ–ನಾಲ್ಕು ಕಡೆಗೂ ಕಾದಾಡುವ ವೀರ].

೧೬೧. [ಆಯತಾಕ್ಷಿ–ವಿಶಾಲವಾದ ಕಣ್ಣುಳ್ಳವಳು].

ಕಲಶವಿಟ್ಟೆನು ಕೊಟ್ಟಭಾಷೆಗೆ
ಎಲೆ ಸುಯೋಧನ ಯೆಂದು ನಯನಾಂ-
ಗುಲಿಯ ಸಂಕೇತದಲಿ ಸನ್ನೆಯ ಮಾಡಿದನು ಶಕುನಿ ॥ ೧೬೨ ॥

ವಿದುರ ಬಾ ನಮ್ಮಾಕೆಯಾ ದ್ರೌ-
ಪದಿಯ ಕರೆ ಬೆಸಗೊಂಬೆ ತೊತ್ತಿರ-
ಸದನವಿಚ್ಛೆಯೊ ರಾಣಿವಾಸದ ಮನೆಯಪೇಕ್ಷಿತವೋ ।
ಬೆದಱಬೇಡಿನ್ನಬುಜಮುಖಿಗಾ-
ವುದು ಮನೋರಥವೆಮ್ಮೊಳುಂಟೆಂ-
ಬುದ ಲತಾಂಗಿಯ ಕರೆವುದೆಂದನು ಕೌರವರ ರಾಯ ॥ ೧೬೩ ॥

ಸಿಡಿಲ ಪೊಟ್ಟಣಗಟ್ಟಿ ಸೇಕವ
ಕೊಡುವರೇ ಹರನೇತ್ರವಹ್ನಿಯೊ-
[1]ಳಡಬಳವ[1] ಸುಡಬಗೆ[2]ವರೇ[2] ಮರುಳೇ ಮಹೀಪತಿಯೇ ।
ಹೆಡತಲೆಯ ತುಱಿಸುವರೆ ಹಾವಿನ-
ಹೆಡೆಯಲಕಟಾ ಪಾಂಡುಪುತ್ರರ
ಮಡದಿ ತೊತ್ತಹಳೇ ಶಿವಾ ಯೆಂದಳಲಿದನು ವಿದುರ ॥ ೧೬೪ ॥

ಕಾಳಕೂಟದ [1]ಮಡುವಿನಲಿ[1] ಜಲ-
ಕೇಳಿಯೇ ಕಾಲಾಂತಕನ ದಂ-
ಷ್ಟ್ರಾಳಿಯಲಿ ನವಿಲುಯ್ಯಲೆಯ ನೀವಾಡಲಾಪಿರಲೇ ।
ಕಾಲರುದ್ರನ ಲಳಿಯ ನಾಟ್ಯದ
ಕೇಳಿಕೆಗೆ ನೀವ[2]ಳ್ತಿ[2]ಕಾಱರೆ
ಹೋಲದೋ ಶಿವಯೆನುತ ಕಂಬನಿದುಂಬಿದನು ವಿದುರ ॥ ೧೬೫ ॥

---

೧೬೨. [ಅಗ್ಗಳೆಯರು-ಶ್ರೇಷ್ಠರು. ನಯನಾಂಗುಲಿಯ ಸಂಕೇತ-ಕಣ್ಣು ಮತ್ತು ಬೆರಳುಗಳ ಮೂಲಕ ಸಂಜ್ಞೆ].

೧೬೩. [ತೊತ್ತಿರ-ದಾಸಿಯರ (ತೊತ್ತು-ದಾಸಿ). ಸದನ-ಮನೆ, ನಿವಾಸ. ಮನೋರಥ-ಇಷ್ಟ].

೧೬೪. [1]ಳಿಡಬಲ (ಅ). [2]ದೆಲಾ (ಅ ಕುಮಾ).
[ಸೇಕ-ಕಾವು, ಶಾಖ. ಅಡಬಳ-ಅಡಗು, ಮಾಂಸ. ಹರನೇತ್ರವಹ್ನಿ-ಶಿವನ ಹಣೆಗಣ್ಣ ಅಗ್ನಿ. ಹೆಡತಲೆ-ತಲೆಯ ಹಿಂಭಾಗ. ಅಳಲು-ವ್ಯಥೆಪಡು].

೧೬೫. [1]ತೊರೆಗಳಲಿ (ಅ ಕುಮಾ), ಸ್ತೀಪಾ (ಪ್ರ k ಅ). [2]ತೀ (ಪ್ರ ಕುಮಾ ಅ).
[ಕಾಳಕೂಟ-ಉಗ್ರವಾದ ವಿಷ. ಕಾಲಾಂತಕ-ಯಮ. ದಂಷ್ಟ್ರ-ದಾಡೆ, ಕೋರೆ ಹಲ್ಲು. ಕೇಳಿಕೆ-ವಿನೋದ. ಅಳ್ತಿಕಾಱ-ಪ್ರೇಮಿ, ಪ್ರೀತಿಸುವವನು].

ಸೋಲಿಸಿದೆ ನೀನೀಗಲೀ ನರ-
ಪಾಲರನು ಜೂಜಿನಲಿ ಮೇಲಣ
ಕಾಳೆಗದ ಕಳನೊಳಗೆ ಕವಿತಹ ಕೋಲ ತೋಹಿನಲಿ ।
ಸೋಲವೊಂದಕೆ ನೂಱು ನೂಱಱ
ಮೇಲೆ ಸಾವಿರ ಸಾವಿರದ ಮೈ-
ಸಾಲ ಲಕ್ಷವನಂತವಾಗಿಯೆ ತೆಗೆವ[1]ರವರೆಂ[1]ದ ॥ ೧೬೬ ॥

ಎಳೆದು ತರಿಸಾ ದ್ರೌಪದಿಯನೀ
ಕಳಕಳಕೆ ಕೈಗೊಟ್ಟಮೇಲ-
[1]ಸ್ಖ[1]ಲಿತರಿಹರ[2]ತಿಸ[2]ಮತೆಯಲಿ ತತ್ಸಮಯಪರಿಯಂತ ।
ಬಳಿಕ ನೂರ್ವರ ಸತಿಯ[3]ರಳ್ಕೆ[3]ಯ
ಕಳಕಳ[4]ದ[4] ಬಿಡುಮುಡಿಯ ಬಸುಱಿನ
ತಳವ ಬಿಱುವೊಯ್ಲುಗಳ [5]ಭಂಗಿಯ[5] ಕಾಬರಿವರೆಂದ ॥ ೧೬೭ ॥

ತಮ್ಮ ಬಾರ್ಯೆ ಹೋಗು ದಿಟ ನೀ-
ನಮ್ಮವರೆ ಹಿಡಿದೆಳೆದು ತಾ ನೃಪ-
ರೆಮ್ಮ ಕಿಂಕರರೈವರಿವರಿದ್ದೇನ ಮಾಡುವರು ।
ತಮ್ಮ ಕರ್ಮವಿಪಾಕಗತಿ ನೆಱೆ
ತಮ್ಮನೇ [1]ಕಾಡು[1]ವುದು ಧರ್ಮವಿ-
ದೆಮ್ಮ ಕಾರಣವಲ್ಲ ನೀ ಹೋಗೆಂ[2]ದು ನೇಮಿಸಿದ[2] ॥ ೧೬೮ ॥

---

೧೬೬. [1]ರಿದನೆಂ (ಅ).

[ತೋಹು–ಸಾಲು].

೧೬೭. [1]ಶ್ಚ (ಓ). [2]ಕ್ಷ (ಅ ಕುಮಾ). [2]ಕ್ಕೆ (ಅ ಕುಮಾ (ಪ್ರ). [4]ವ (ಅ ಕುಮಾ'. [5]ಭಂಗವ (ಅ ಕುಮಾ), ಸ್ವೀಪಾ (ಪ್ರ k ಅ).

[ಕಳಕಳ–ಗಜಬಜ. ಬಿಡುಮುಡಿ–ಬಿಚ್ಚಿದ ತುರುಬು. ಬಸುಱಿನ ತಳ–ಕಿಬ್ಬೊಟ್ಟೆ. ಬಿಱುವೊಯ್ಲು–ರಭಸದ ಹೊಡೆತ].

೧೬೮. [1]ಕೆಡಿಸು (ಸರ್ವತ್ರ), ಸ್ವೀಪಾ (ಓ). [2]ದನಾ ಭೂಪ (ಅ ಕುಮಾ), ಸ್ವೀಪಾ (ಪ್ರ ಕ k ಅ).

[ಕಿಂಕರ–ಸೇವಕ. ಕರ್ಮವಿಪಾಕಗತಿ–ಪೂರ್ವಜನ್ಮದ ಕರ್ಮಗಳ ಪರಿಣಾಮದ ಫಲ].

ಹರಿದನವ್ವ ಬೀದಿಯಲಿ ಬಿಡುದಲೆ-
ವೆರಸಿ ಸತಿಯರವುನೆ[1]ಗೆ[1] ಬಾಗಿಲ
ಚರರು ತಡೆದೊಡೆ ಮೆಟ್ಟಿದನು ತಿವಿದನು ಕಠಾರಿಯಲಿ ।
ತರುಣಿಯರು ಕಂಡಂಜಿ ಹೊಕ್ಕರು
ಸರಸಿಜಾಕ್ಷಿಯ ಮಱ[3]ಯನೀ ಖಳ-
ನುರುವಣಿಸಿದನು ರಾಹು ತಾರಾ[2]ಧಿಪನ[2] ತಗು*ಳ್ವಂತೆ ॥ ೧೬೯ ॥

ಗಿಳಿಯ ಮೆಲುನುಡಿಗಳ ವಿನೋದದೆ
ಕೆಲರು ವೀಣಾಧ್ವನಿಯ ರಹಿಯಲಿ
ಕೆಲರು [1]ಸರಸ[1][2]ಸುಗಂಧ[2]ಸಂಗೀತದ ಸಮಾಧಿಯಲಿ ।
ಕೆಲರು ನೆತ್ತದಲವುಳಮುಕ್ತಾ-
ವಳಿಯ ಚೆಲುವಿನ ಚದುರೆಯರು ಕಂ-
ಗೊಳಿಸಿತಬಲೆಯ ಮಣಿಯ ಮಂಚದ ಸುತ್ತುವಳಯದಲಿ ॥ ೧೭೦ ॥

ಸಕಳಶಕ್ತಿಪರೀತವಮಳಾಂ-
ಬಿಕೆಯ ವೋಲ್ ವರಮಂತ್ರದೇವೀ-
ನಿಕರಮಧ್ಯದಿ ಶೋಭಿಸುವ ಸಾವಿತ್ರಿಯಂದದಲಿ ।
ವಿಕಟರಶ್ಮಿನಿಬದ್ಧರತ್ನ-
ಪ್ರಕರಮಧ್ಯದ ಕೌಸ್ತುಭದ ವೋಲ್
ಚಕಿತಬಾಲಮೃಗಾಕ್ಷಿ ಮೆಱೆದಳು ಯುವತಿಮಧ್ಯದಲಿ ॥ ೧೭೧ ॥

ಬಂದನಿವನಬುಜಾಕ್ಷಿಯಿದಿರಲಿ
ನಿಂದನೆಲೆಗೇ ಗರುವತನವಿದು
ಹಿಂದೆ ಸಲುವದು ಸಲ್ಲದಿದು ಕುರುರಾಜಭವನದಲಿ ।

---

೧೬೯. [1]ಯ (ಅ ಕುಮಾ), ಸ್ವೀಪಾ (ಪ್ರ ಅ). [2]ಗಣವ (ಅ ಪ್ರ), ಸ್ವೀಪಾ (ಅ ಕುಮಾ).
[ಹರಿ-ಓಡು. ತಾರಾಧಿಪ-ಚಂದ್ರ. ತಗುಳ್-ಬೆನ್ನಟ್ಟು, ಅಟ್ಟಿಸಿಕೊಂಡು ಹೋಗು].

೧೭೦. [1]ಸಾರ (ಪ್ರ ಅ). [2]ಸುರಂಗ (ಕ k ಅ), ಸುಸಂಗ (ಓ).
[ರಹಿ-ಸೊಗಸು, ಬೆಡಗು, ವೈಖರಿ. ಸಮಾಧಿ-ಪರವಶತೆ].

೧೭೧. [ಪರೀತ-ಕೂಡಿಕೊಂಡ. ವಿಕಟ-ಅಸಾಧಾರಣವಾದ. ನಿಬದ್ಧ-ಕೂಡಿದ. ಕೌಸ್ತುಭ-ಶ್ರೇಷ್ಠವಾದ ರತ್ನ. ಚಕಿತ-ಬೆದರಿದ. ಚಕಿತ ಬಾಲಮೃಗಾಕ್ಷಿ-ಬೆದರಿದ ಜಿಂಕೆಮರಿಯ ಕಣ್ಣುಳ್ಳವಳು].

ಇಂದು [1]ಮೆಱೆವರೆ[1] ಸಮ್ಮ ತೊತ್ತಿರ
ಮುಂದೆ ಮೆಱೆ ನಡೆ ಮಂಚದಿಂದಿಳಿ-
ಯೆಂದು ಜಱೆದನು ಕೌರವಾನುಜನಾ ಮಹಾಸತಿಯ ॥ ೧೬೩ ॥

ಆ ಮಹೀಶಕ್ರತುವರದೊಳು-
ದ್ದಾಮಮುನಿಜನರಚಿತಮಂತ್ರ-
ಸ್ತೋಮಪುಷ್ಕ[1]ರ[1]ಪೂತಪುಣ್ಯಜಲಾಭಿಷೇಚನದ ।
ಶ್ರೀಮುಡಿಗೆ ಕೈಯಿಕ್ಕಿದನು ವರ-
ಕಾಮಿನೀನಿಕುರುಂಬವಕಟಕ-
ಟಾ ಮಹಾಸತಿ ಶಿವಶಿವಾಯೆಂದೊಱಲಿತಲ್ಲಲ್ಲಿ ॥ ೧೬೪ ॥

ಕೆದರಿದವು ಸೂಸಕದ ಮುತ್ತುಗ-
ಳುದುರಿದವು ಸೀಮಂತಮಣಿಗಳ
ಹೊದಱು ಮುಱಿದವು ಕರ್ಣಪೂರದ ರತ್ನದೋಲೆಗಳು ।
ಸುದತಿಯುರು ಗೋಳಿಡುತ ಬರೆ ಮೆ-
ಟ್ಟಿದನು ತಿವಿದನು ಕಾಲಲಡಬಿ-
ದ್ದುದು ಸಖೀಜನವೆಳೆದು ಝಾಡಿಸಿ ಜಱಿದು ಝೋಂಪಿಸಿದ ॥ ೧೬೫ ॥

ಬೆದಱುಗಂಗಳ ಬಿಟ್ಟ ಮಂಡೆಯ
ಹುದಿದ ಹಾಹಾರವದ ತೊಡಕಿದ
ಪದಯುಗದ ಮೇಲುದಿನ ಬೀದಿಯ ಧೂಳಿಧೂಸರದ ।
ವದನ ಕಮಳದ ಖಳನ ವಾಮಾಂ-
ಗದಲಿ ಬಾಗಿದ ತನುಲತೆಯ ವರ
ಸುದತಿ ಬಂದಳು ರಾಜಸಭೆಗೆ ನೃಪಾಲ ಕೇಳೆಂದ ॥ ೧೬೬ ॥

---

೧೬೩. [1]ಮರೆನಡೆ (ಅ ಕುಮಾ), ಸ್ವೀಪಾ (ಅ ಕ ಓ k).
[ಗರುವತನ-ಶ್ರೇಷ್ಠತೆ].

೧೬೪. [1]ಲ (ಅ ಕುಮಾ), ಸ್ವೀಪಾ (ಓ ಅ).
[ಮಹೀಶಕ್ರತುವರ-ಶ್ರೇಷ್ಠವಾದ ರಾಜಸೂಯ ಯಾಗ. ಪುಷ್ಕರ-ಸರೋವರ. ಪೂತ-ಪವಿತ್ರವಾದ. ಶ್ರೀಮುಡಿ-ಮಂಗಳಕರವಾದ ಮುಡಿ. ಕಾಮಿನೀ ನಿಕುರುಂಬ-ಸ್ತ್ರೀ ಸಮೂಹ].

೧೬೫. [ಸೂಸಕ-ಕುಚ್ಚು. ಸೀಮಂತಮಣಿ-ಬೈತಲೆಯ ರತ್ನಗಳು. ಹೊದಱು-ಗುಂಪಲು. ಮುಱಿ-ಕಿತ್ತುಹೋಗು. ಕರ್ಣಪೂರ-ಕಿವಿಯ ಆಭರಣ. ಅಡಬೀಳು-ಅಡ್ಡಬೀಳು].

ಅಹಹ ಪಾಂಡವರಾಯಪಟ್ಟದ
ಮಹಿಳೆಗೀ ವಿಧಿಯೇ ಮಹಾಕ್ರತು..
ವಿಹಿತಮಂತ್ರಜಲಾಭಿಷಿಕ್ತಕಚಾ[2]ಗ್ರೆಗ[1]ದು ವಿಧಿಯೇ ।
ಮಿಹಿರಬಿಂಬವ ಕಾಣದೀ ನೃಪ-
ಮಹಿಳೆಗಿದು ವಿಧಿಯೇ ವಿಧಾತನ
ಕುಹಕವೈಸಲೆ ಶಿವಶಿವಾ ಯೆಂದರು ಸಭಾ[2]ಸದ[2]ರು ॥ ೧೭೬ ॥

ವ್ಯಾಕುಲವನಿದ ಕಾಂಬ ಕಣ್ಣುಗ-
ಳೇಕೆ ರಾಜಕುಮಾರಿಯಾಕೆಯು
ಶೋಕರಸವನು ಕುಡಿವ ಕರ್ಣದ್ವಯವಿದೇಕೆಮಗೆ ।
ಏಕೆ ವಿಧಿ ನಿರ್ಮಿಸಿದನೋ ನಾ-
ವೇಕೆ ಸಪ್ರಾಣರೊ ಶಿವಾಯೆಂ-
ದಾ ಕುಠಾರರ ಬೈದುದಾ ಸಭೆಯುಲಿ ಬುಧವ್ರಾತ ॥ ೧೭೭ ॥

ಲಲಿತಬುದ್ಧಿ[1]ಗಳೇಕೆ ನಾವೇ[1]
ಲಲನೆಯರು ಸತಿ ದಿಟ್ಟೆಯೆನ್ನದಿ-
ರೆಲೆ ಸುಯೋಧನ ರಾಜಸಭೆಯಿದು ದೋಷರಹಿತವಲೆ ।
ಗೆಲವಿದೆಂತುಟೊ ತನ್ನ ಸೋಲಿದು
ಬಳಿಕ ಸೋತೊಡೆ ಧರ್ಮಗತಿಯನು
ತಿಳಿದು ಹೇಳಲಿ ತತ್ಸಭಾಸದರೆಂದಳಿಂದುಮುಖಿ ॥ ೧೭೮ ॥

---

೧೭೫. [ಮಂಡೆ-ತಲೆಗೂದಲು. ತುಡಿದ-ಸೇರಿದ. ತೊಡಕು-(ಒಂದಕ್ಕೊಂದು) ತೊಡರಿಕೊಳ್ಳು, ಮೇಲುದು-ಮೇಲು ಹೊದಿಕೆ. ಧೂಳಿ-ಧೂಳು. ಧೂಸರದ-ವ್ಯಾಪಿಸಿದ. ವಾಮಾಂಗ-ಶರೀರದ ಎಡಭಾಗ. ತನುಲತೆ-ಬಳ್ಳಿಯಂತೆ (ಕೋಮಲವಾದ) ಶರೀರ].

೧೭೬. [1]ಗ್ರಕಿ (ಅ ಕುಮಾ), ಸ್ವೀಸಾ (ಅ ಕ ಓ k). [2]ಜನ (ಅ ಕುಮಾ), ಸ್ವೀಸಾ (ಅ ಕ ಓ k).

[ಕಚ-ಕೂದಲು. ಮಿಹಿರಬಿಂಬ-ಸೂರ್ಯಬಿಂಬ. ವಿಧಾತ್ರ-ಬ್ರಹ್ಮ. ಕುಹಕ-ವಿನೋದ, ಕುಚೇಷ್ಟೆ].

೧೭೭. [ವ್ಯಾಕುಲ-ವ್ಯಥೆ, ದುಃಖ ಕುಠಾರರು-ಕೊಡಲಿಯಂತೆ ಘಾತುಕರು. ಬುಧವ್ರಾತ-ವಿದ್ವಾಂಸರ ಸಮೂಹ, ವಿವೇಕಿಗಳ ಸಮೂಹ].

೧೭೮. [1]ಗಳೀಗ ನೋಡಿಸಿ (ಕುಮಾ).

[ಲಲಿತಬುದ್ಧಿಗಳು-ಸೂಕ್ಷ್ಮ ಬುದ್ಧಿಯುಳ್ಳವರು. ದಿಟ್ಟೆ-ಗಟ್ಟಿಗಿತ್ತಿ ; ಧೈರ್ಯಶಾಲಿನಿ].

ಹಿರಿಯರಿಲ್ಲದ ಸಭೆ ಮನುಷ್ಯರ
ನೆರವಿಯದು ಸಭೆಯಲ್ಲ ಮೂರ್ಖರು
ಹಿರಿಯರಲ್ಲ ಯಥಾರ್ಥಭಾಷಣಭೀತಚೇತನರು ।
ಹಿರಿಯರಿದೆ ಸಾಮಾಜಿಕರು ಸ-
ಚ್ಚರಿತರಿದೆಲಾ ಸ್ತ್ರೀಮತವನು-
ತ್ತರಿಸ[1]ಬಾರ[1]ದೆ ಧರ್ಮ[2]ಮಾರ್ಗ[2]ದೊಳೆಂದಳೆಂದುಮುಖಿ ॥ ೧೭೯ ॥

ಚಪಳೆ ಫಡ [1]ನೋಡಿ[1]ವಳು ಹಲಬರ-
ನುಪಚರಿಸುವುದನಱಿಯಲಾದುದು
ದ್ರುಪದನಂದನೆ ನಡೆ ವಿಳಾಸಿನಿಯರ [2]ವಿಧಾನ[2]ದಲಿ ।
ಕೃಪಣನೇ ಕುರುರಾಯ ನಿನಗಿ-
ನ್ನಪದೆಸೆಯ [3]ಹೊಲೆ[3] ಹೋಯ್ತು ರಾಯನ
ವಿಪುಳವಿಭವವನನುಭವಿಸು ನಡೆ ಯೆಂದನಾ ಕರ್ಣ ॥ ೧೮೦ ॥

ನೊಂದನೀಮಾತಿನಲಿ ಮಾರುತ-
ನಂದನನು ಸಹದೇವನನು ಕರೆ-
ದೆಂದನಗ್ನಿಯ ತಾ ಯುಧಿಷ್ಠಿರನೃಪನ ತೋಳುಗಳ ।
ಮಂದಿ [1]ನೋಡಲು[1] ಸುಡುವೆನೇಳೇ-
ಳೆಂದು ಜಱಿದೊಡೆ ಹಿಡಿದು ಮಾದ್ರೀ-
ನಂದನನ ನಿಲಿಸಿದನು ಫಲುಗುಣ ನುಡಿದನನಿಲಜನ ॥ ೧೮೧ ॥

ಏನಿದೇನೈ ಭೀಮ ನಿಲು ಯಮ-
ಸೂನು ಶಿವಶಿವ ಗುರುವಲಾ ನಮ-
ಗೀ ನಿತಂಬಿನಿಯಾದಿಯಾದ ಸಮಸ್ತವಸ್ತುಗಳು ।

---

೧೭೯. [1]ಲಾಗ (ಅ ಕುಮಾ), ಸ್ವೀಪಾ (ಓ ಕ k). [2]ಶಾಸ್ತ್ರ (ಅ ಕುಮಾ), ಸ್ವಿಪಾ (ಓ ಕ k).

[ನೆರವಿ-ಗುಂಪು, ಸಮೂಹ. ಯಥಾರ್ಥ ಭಾಷಣ ಭೀತ ಚೇತಸರು-ನಿಜವನ್ನು ನುಡಿಯಲು ಹೆದರುವ ಮನಸ್ಸುಳ್ಳವರು. ಮತ-ಅಭಿಪ್ರಾಯ].

೧೮೦. [1]ಹೋಗಿ ((ಅ ಕುಮಾ), ಸ್ವೀಪಾ (ಅ ಕ k). [2]ವಿಲಾಸ (ಅ k), ನಿವಾಸ (ಕ). [3]ಹೊರೆ (ಕ).

[ಚಪಳೆ-ಚಂಚಲ ಮನಸ್ಸುಳ್ಳವಳು. ಹೊಲೆ-ಮೈಲಿಗೆ, ದೋಷ].

೧೮೧. [1]ಮೆಚ್ಚಲು (ಅ).

ಈ ನರೇಂದ್ರಗೆ ಸರಿಯೆ ಕುಂತೀ-
ಸೂನುವೇ ಪ್ರಾಣಾರ್ಥದಿಂದಸ-
[1]ಮಾ[1]ನನೈ ನವುಗೀತನೇ ಗತಿಯೆಂದನಾ ಪಾರ್ಥ ॥ ೧೮೨ ॥

ತನ್ನ ಸೋತಾಗಲೆ ಮಹೀಪತಿ-
ಯನ್ಯನಾದನು ಸತಿಗೆ [1]ತನ್ನಿಂ[1]
ಮುನ್ನ ಸೋತೊಡೆ ತನ್ನ ಧನವೈಸಲೆ ವಿಚಾರಿಸಲು ।
ಅನ್ಯನನ್ಯಳ ಸೋತ ಗಡ ತಾ
ತನ್ನ ಧನವೆಂದರಸ ಶಕುನಿಯು
-ಬಿನ್ನಣಕೆ[2] [3]ಬೆಳ್ಳಾ[3]ದನೆಂದು ವಿಕರ್ಣ [4]ಖತಿಗೊಂಡ[4] ॥ ೧೮೩ ॥

ಘಡ ವಿಕಾರವೆ ನಮ್ಮೊಡನೆ ಬಾ-
ಯ್ಬಡಿಕತನವೇ ಕುರುಮಹೀಪತಿ-
ಯೊಡನೆ ಹುಟ್ಟಿದೆಯಾದಕಾರಣ ಬಿಟ್ಟೆ[1]ನೀ[1]ಸಜಿಲಿ ।
ನುಡಿದರೇ ಭೀಷ್ಮಾದಿಗಳು ನೀ-
ನೊಡಬಡಿಸಲೆಂತಜಿವೆ ಧರ್ಮದ
ಕಡೆವೊದಲ [2]ಕೈವಾರ[2] ನಿನಗೇಕೆಂದನಾ ಕರ್ಣ ॥ ೧೮೪ ॥

ಏಕಪತಿ ಬಹುಸತಿಯು[1]ರಂತಿ[1]ದು
ಲೋಕಪದ್ಧತಿ[2]ಮಾ[2]ದುದದು ತಾ-
ನೇಕಸತಿ ಬಹುಪತಿಗಳಿದು ವೈದಿಕವಿರುದ್ಧವಲೇ ।
[3]ಲೌಕಿಕದ ವೈದಿಕದಧರ್ಮವ[3]-
ನೀ ಕುಮಾರ್ಗಿಗಳಲ್ಲಿ ಕಂಡೆವು
ನೀ ಕುರುವ್ರಜದೊಳಗೆ ಜನಿಸೆ ವಿಕರ್ಣ ಹೋಗೆಂದ ॥ ೧೮೫ ॥

---

೧೮೨. [1]ಘಾ (ಅ ಕುಮಾ), ಸ್ವೀಪಾ (ಅ).
[ಪ್ರಾಣಾರ್ಥದಿಂದ ಅಸಮಾನ-ಪ್ರಾಣ ಮತ್ತು ಐಶ್ವರ್ಯದೊಂದಿಗೆ ಹೋಲಿಸಿದರೆ ಅಸಮಾನನಾಗಿದ್ದಾನೆ].

೧೮೩. [1]ತನ್ನಂ (ಅ), ಸ್ವೀಪಾ (ಸರ್ವತ್ರ). [2]ಚಿ (ಅ). [3]ಬೆಂಡಾ (ಕ ಅ). [4]ಗರ್ಜಿಸಿದ (ಓ ಕ k ಅ).
[ಬಿನ್ನಣ-ಬುದ್ಧಿವಂತಿಕೆ, ಜಾಣತನ. ಬೆಳ್ಳ-ಬೆಪ್ಪ. ಖತಿ-ಕೋಪ].

೧೮೪. [1]ಪೀ (ಅ ಕುಮಾ), ಸ್ವೀಪಾ (ಕ k). [2]ಕೈವಾಗ (ಕ), ಕೈಗಾವೇ (k).
[ಕೈವಾರ-ಹೊಗಳಿಕೆ].

೧೮೫. [1]ರೆಂಬು (ಅ ಆ ಕುಮಾ). [2]ಯಾ (ಅ ಕುಮಾ). [3]ಲೌಕಿಕ ವ್ಯವಹಿತದ ಕರ್ಮವ (ಅ ಕುಮಾ), ಸ್ವೀಪಾ (ಕ k ಓ).

ಹಾರಪದಕಕಿರೀಟಮಣಿಕೇ-
ಯೂರಕರ್ಣಾಭರಣವೆಂಬಿವು
ಭಾರವಲ್ಲಾ ತೆಗೆಯುಪೇಳ್ದಾಕ್ಷಿಣ್ಯವೇಸಿದಕೆ ।
ನಾರಿಗೀ ವಸ್ತ್ರಾಭರಣ ಶೃಂ-
ಗಾರವೇಕಿನ್ನಿವನು ತೆಗೆ ಕೈ-
ವಾರ[1]ವೇಕೆಮಗೆಂದು[1] ದುಶ್ಶಾಸನಗೆ [2]ನೃಪ ನುಡಿದ[2] ॥ ೧೮೬ ॥

ತೆಗೆದು ಬಿಸುಟರು ಹಾರಪದಕಾ-
ದಿಗಳನಿವರೈವರು ದುಕೂಲವ-
ನುಗಿದು ಹಾಯ್ಕಿದರಿದ್ದರಿವರೊಂದೊಂದು ವಸ್ತ್ರದಲಿ ।
ಹೊಗೆವೊಗದ ಕಿಡಿಗಣ್ಣ ಕೆಮ್ಮಾ-
ಸೆಗಳ [1]ಜೂಬಿನ[1] ಜುಂಜುಗೇಶದ
ವಿಗಡನೆದ್ದನು ಬಂದು ಹಿಡಿದನು ದ್ರೌಪದಿಯ ಸೆಱಗ ॥ ೧೮೭ ॥

ಅಳುಕಿದನೆ ಸುಡಲವನ ಮೇಲುದ
ಸೆಳೆದನುನ್ನತಕುಚವ ನಳಿತೋ-
ಳ್ಗಳಲಿ ಮುಚ್ಚಿದಳಬಲೆ ಬೆಚ್ಚಿದಳವನ ನಿಷ್ಠುರಕೆ ।
ಕಳ[1]ವ[1]ಳಿಸಿದಳು ಬೆರಳಿನಲಿ ದೃಗು-
ಜಲವ [2]ಬಿದಿರುತ[2] ನೋಡಿದಳು ನೃಪ-
ತಿಲಕನನು ಭೀಮಾರ್ಜುನರ ಮಾದ್ರೀಕುಮಾರಕರ ॥ ೧೮೮ ॥

---

೧೮೫. [ಮಾದುದು (ಮಾಯ್-ಧಾ), ಕಣ್ಮರೆಯಾಯಿತು, ಅದೃಶ್ಯವಾಯಿತು. ವ್ರಜ-ಸಮೂಹ].

೧೮೬. [1]ವಿದಕೇಕೆಂದು (ಅ ಕುಮಾ), ವೇನಮಗೆಂದು (ಕ ಅ). [2]ನೇಮಿಸಿದ (ಅ ಅ ಕುಮಾ), ಸ್ವೀಪಾ (ಓ).
[ಕೇಯೂರ-ತೋಳುಬಂದಿ].

೧೮೭. [1]ಗುಂಜುರಿನ (ಆ ಅ ಕುಮಾ), ಸ್ವೀಪಾ (ಕ).
[ದುಕೂಲ-ರೇಷ್ಮೆ ವಸ್ತ್ರ. ಜೂಬು-ದಿಗಿಲುಹುಟ್ಟಿಸುವಿಕೆ, ಭಯಾನಕತೆ. ಜುಂಜುಗೇಶ-ಕೆದರಿದ ಕೂದಲು].

೧೮೮. ಕ (ಅ). [2]ಮಿಡಿವುತ (ಕ), ಮಿಡಿಯುತ (ಅ), ಬಿದುರುತ (ಕುಮಾ).
[ಅಳುಕು-ಹಿಂದೆಗೆ. ನಿಷ್ಠುರ-ಕಠಿಣತೆ. ದೃಗುಜಲ-ಕಣ್ಣೀರು. ಬಿದಿರು-ಮಿಡಿ, ಜಾರಿಸು, ಕೊಡಹು].

ಮುರಿದವನಿಬರ ಮೋಱೆ ಮಹಿಪನ
ಕೊರಲ ಕೊಂಕಿನಲಿದ್ದರಾ ಸೋ-
ದರರು ಸಾರವನಲ್ಲಿ ಕಾಣದೆ ಭೀಷ್ಮಗುರುಕೃಪರ ।
ಮರಳಿ ನೋಡಿದಳಕಟ ಗಂಗಾ-
ವರಕುಮಾರದ್ರೋಣಕೃಪ[1]ರೇ[1]
ಸೆಱಗ ಬಿಡಿಸಿರೆ ತಂದೆಗಳಿರೆಂದೊಱಲಿದಳು ತರಳೆ ॥ ೧೮೯ ॥

ಕ್ರೂರ[1]ನೀ[1] ದುಶ್ಶಾಸನನು ಗಾಂ-
ಧಾರಿ ಬಿಡಿಸೌ ಸೆಱಗ ಸೊಸೆಯು-
ಲ್ಲಾರು ಹೇಳೌ ತಂಗಿಯಲ್ಲಾ [2]ನೀನು[2] ಭಾನುಮತಿ ।
ವೀರ ಸೈಂಧವನರಸಿ ರಾಜಕು-
ಮಾರಿ ನೀ ನಾದಿನಿಯಲಾ ಖಳ-
ರೌರವದೊಳದ್ದುವನು [3][ತೆಗ][3]ಸೆಂದೊಱಲಿದಳು ತರಳೆ ॥ ೧೯೦ ॥

ಪತಿಗಳೆನ್ನನು ಮಾಱಿ ಧರ್ಮ-
ಸ್ಥಿತಿಯ ಕೊಂಡರು ಭೀಷ್ಮಮೊದಲಾ-
ದತಿರಥರು ಪರಹಿತವ ಬಿಸು[1]ಟರನರ್ಥ[1]ಭೀತಿಯಲಿ ।
ಸುತನ ಸಿರಿ ಕಡುಸೊಗಸಲಾ ಭೂ-
ಪತಿಗೆ ಗಾಂಧಾರಿಗೆ [2][ಅ][2]ನಾಥೆಗೆ
ಗತಿಯ ಕಾಣೆನು ಶಿವಶಿವಾ ಯೆಂದೊಱಲಿದಳು ತರಳೆ ॥ ೧೯೧ ॥

---

೧೮೯. [1]ರರ (ಅ).

[ಮುರಿದವು-ಪಕ್ಕಕ್ಕೆ ತಿರುಗಿಕೊಂಡವು].

೧೯೦. [1]ನಿವ (ಅ ಕುಮಾ), ಸ್ವೀಪಾ (ಅ k). [2]ನಿಮಗೆ (ಅ ಕುಮಾ), ನಿನಗೆ (ಅ), ಸ್ವೀಪಾ (k). [3]ಬಿಡಿ (ಅ ಕುಮಾ), ತೆಗೆ (ಕ ಓ k ಅ).

[ರೌರವ-ಒಂದು ನರಕ. ಅದ್ದು-ಮುಳುಗು].

೧೯೧. [1]ಟರುವಥ್ಯ (ಅ), ಟಹರರ್ಥ (ಓ ಅ), ರುವ್ಯರ್ಥ (ಕುಮಾ), ಸ್ವೀಪಾ (ಕ k). [2]ಯ (ಸರ್ವತ್ರ).

[ಅನರ್ಥಭೀತಿ-ಪ್ರಯೋಜನವು ತಪ್ಪಿಹೋಗುವುದೆಂಬ ಭೀತಿ].

ವೈದೆಗೆದುವೀ ಪ್ರಾಣವಾಯುಗ-
ಳೈದು ಬಳಿಕೆನಗಾರು ಮಱುಗುವ-
ರೈದೆತನವೊಂದುಳಿಯ[1]ಲಳಿದವು[1] ವಿಶ್ವ ಮಹಿಮೆಗಳು ।
ಬೈದು ಫಲವೇನಿನ್ನು ನಿನ್ನಯ
ಮೈದುನರ ಮರುಳಾಟಕೆನ್ನನು
ಕಾಯ್ದುಕೊಳ್ಳೈ ಕೃಷ್ಣಯೆಂದೊಱಲಿದಳು [2]ಲಲಿತಾಂಗಿ[2] ॥ ೧೯೨ ॥

ಸುಲಿವರೊಡೊಳಗುಟ್ಟ ಸೀರೆಯ-
ನೆಲೆ ಮುರಾಂತಕ ರಕ್ಷಿಸೈ ಶಶಿ-
ಕಳೆಗೆ ಸದರವೆ ರಾಹು ರಚಿಸಿದ ತುಟಿಯು ತೋಟಿ[1]ಯುದು[1] ।
ಸೆಳ[2]ಯು[2]ರಸುವನು ಖಳರು ಸೀರೆಯ
[3]ಸೆಳೆ[ದೊ]ಡುಳಿವೆನೆ[3] ಕೃಷ್ಣ ಕರುಣಾ-
ಜಲಧಿಯೇ ಕೈಗಾಯಬೇಕೆಂದೊಱಲಿದಳು ತರಳೆ ॥ ೧೯೩ ॥

ಹೊಲಬುದಪ್ಪಿದ ಹುಲ್ಲೆ ಬೇಡ[1]ರ[1]
ಬಲೆಗೆ ಬಿದ್ದಂತಾದೆನೈ ಬಲು-
ಹಳುವುದಲಿ ತಾಯ್ಬಿಸುಟ ಶಿಶು[2]ನಾ[2]ನಾದೆ[3]ನೈ[3] ಹರಿಯೆ ।
ಕೊಲುವವೈ ಕಾಗೆಗಳಕಟ ಕೋ-
ಗಿಲೆಯು ಮಱಿಯನು ಕೃಷ್ಣ ಕರುಣಾ-
ಜಲಧಿಯೇ ಕೈಗಾಯಬೇಕೆಂದೊಱಲಿದಳು ತರಳೆ ॥ ೧೯೪ ॥

---

೧೯೨. [1]ಉಳಿವುದು (ಅ ಕುಮಾ), ಉಳಿದವು (ಅ), ಸ್ವೀಪಾ (ಕ k). [2]ನಳಿನಾಕ್ಷಿ (ಕ), ತರಳಾಕ್ಷಿ (ಅ).

[ಮೈದೆಗೆ-ಕಣ್ಮರೆಯಾಗು, ಹೊರಟುಹೋಗು. ಐದೆತನ-ಸತೀತ್ವ, ಸೌಮಂಗಲ್ಯ].

೧೯೩. [1]ಯಲಿ (ಕ), ಯಿದು (k). [2]ವ (ಆ ಕುಮಾ), ಸ್ವೀಪಾ (k ಅ). [3]ಸುಲಿದರುಳಿಯೆನು (ಆ ಕುಮಾ), ಸ್ವೀಪಾ (ಕ ಓ k ಅ).

[ಸುಲಿ–ಸೆಳೆ, ಬಿಚ್ಚು. ಸದರ–ಸಲಿಗೆ. ತೋಟಿ–ಗೊಡವೆ, ಗೋಜು, ಸಂಬಂಧ. ಅಸು–ಪ್ರಾಣ. ಕೈಗಾಯು–ಕಾಪಾಡು, ರಕ್ಷಿಸು].

೧೯೪. [1]ನ (ಅ ಆ ಕುಮಾ), ಸ್ವಿಪಾ (ಕ). [2]ತಾ (ಆ ಕುಮಾ). [3]ನೆಲೆ (ಆ ಕುಮಾ).
[ಹೊಲಬು-ದಾರಿ. ಹಳುವ-ಕಾಡು].

ಗತಿವಿಹೀನರಿಗಕಟ ನೀನೇ
ಗತಿಯು[1]ಲಾ[1] ಗೋವಿಂದ ರಿಪುಬಾ-
ಧಿತರಿಗಬಲರಿಗಾರ್ತರಿಗೆ ನೀ ಪರಮಬಂಧುವಲಾ ।
ಸತಿಪಶುದ್ವಿಜಬಾಧೆಯಲಿ ಜೀ-
ವಿತವ ತೊಱೆ[3]ವರು ಗರುವ[2]ರದು[2] ಹಿಂ-
[3]ಗಿತೆ[3] ಸುಯೋಧನಸಭೆಯೊಳೆಂದೊಱಲಿದಳು ಲಲಿತಾಂಗಿ ॥ ೧೯೫ ॥

ಕ್ರೂರದುರ್ಯೋಧನನು ದ್ರುಪದಕು-
ಮಾರಿ ಪಾಂಚಾಲಿಯನು ಸಭೆಯಲಿ
ಸೀರೆಯನು ಸುಲಿಯಲ್ಕೆ ಕಾಯ್ಕೆ ಕೃಷ್ಣಯೆಂದೆನುತ ।
ನಾರಿಯೊ[1]ಱಲಿದಳಾಕೆಯು[1]ಟ್ಟಾ-
ಸೀರೆ ಸೆಳೆಯಲು ಬಳಿಕಲಕ್ಷಯ-
ಸೀರೆಯಾಗಲಿಯೆಂದ ಗದುಗಿನ ವೀರನಾರಯಣ ॥ ೨೯೬ ॥

ಉಗಿದು ಹಾಯ್ಕುವ ಖಳನ ನಿಡುದೋ-
ಳುಗಳು ಬಳಲಿದುವಳ್ಳಿ ಹೊಯ್ದುವು
ಡಗೆಯು ಡಾವರವಾಯ್ತು ಬಹಳ ಸ್ವೇದಜಲ ಜಡಿಯೆ
ತೆಗೆದು ನಿಂದನು ಸೀರೆಯೊಟ್ಟಲು
ಗಗನವನು ಗಾಹಿಸಿತು ಗರುವೆಯು
ಬಗೆಗೆ ಬೀಸರವಿಲ್ಲ ಬೆಱಗಾ[1]ಗಿದ್ದುದಾ[1]ಸ್ಥಾನ ॥ ೧೯೭ ॥

ಎಲೆಗೆ ನಿನ್ನವರೇನ ಮಾಡುವ-
ರೊಲೆಯೊಳಡಗಿದ ಕೆಂಡವಿವರ-
ಗ್ಗಳಕೆ ನಂದಿದು[1]ದೆ[1]ನುತ ಮುಂಜೆಱಗೆತ್ತಿ ಮಾನಿನಿಗೆ ।

೧೯೫. [1]ಲ್ಯೆ (ಅ ಆ ಕುಮಾ), [2]ತನ (ಅ). [3]ಗಿತು (ಅ).
[ಗರುವರು–ಶ್ರೇಷ್ಠರು. ಹಿಂಗು-ನಾಶವಾಗು, ಬತ್ತಿಹೋಗು].

೧೯೬. [1]ರಲುತ್ತಿಹಳುವು (ಅ ಕುಮಾ), ಸ್ವೀಪಾ (ಕ ಓ k ಅ).

೧೯೭. [1]ಯಿತುಮುಹಾ (ಅ), ದುದುಮುಹಾ (ಕುಮಾ) ; ಸ್ವೀಪಾ (ಅ).
[ಉಗಿ–ಸೆಳೆ, ಕಳಚು. ಅಳ್ಳಿ–ಪಕ್ಕೆ. ಹೊಯ್‌-ಬಡಿದುಕೊಳ್ಳು. ಡಗೆ–ಧಗೆ. ಡಾವರ–ಹಿಂಸೆ, ತೊಂದರೆ, ಕೋಟಲೆ. ಸ್ವೇದಜಲ–ಬೆವರುನೀರು. ಒಟ್ಟಲು–ರಾಶಿ. ಗಾಹಿಸು–ಮುಳುಗಿಸು. ಗರುವೆ–ಉತ್ತಮಳು. ಬೀಸರ–ಹಾನಿ, ನಾಶ].

೧೯೮. [1]ವೆ (ಅ).

ಖಳನು ತೊಡೆಗಳ ತೋಱಿಸಿದೊಡತಿ-
ಮುಳಿದು ಕೊಟ್ಟಳು ಶಾಪವನು ನಿ-
ನ್ನಳಿವು ತೊಡೆಯಲಿ ಮುಗಿವುದೆಂದಳು ಮುಗುದೆ ಖಾತಿಯಲಿ
॥ ೯೮ ॥

ಕಡಲ ತೆರೆಗಳ ತಱುಬಿ ತುಡುಕುವ
ವಡಬನಂ[1]ತಿರೆ[1] ಮೇಘಪಟಲವ-
ನೊಡೆದು [2]ಚಿಮ್ಮು[2]ವ ಸಿಡಿಲಿನಂ[3]ತಿರೆ[3] ಸಭೆಯೊಳಡಹಾಯ್ದು ।
ಕುಡಿ ಕುಠಾರನ ರಕುತವನು ತಡೆ-
ಗಡಿ ಸುಯೋಧನನೂರುಗಳನಿ-
ಮ್ಮಡಿಸಿ ಮುನಿಯಲಿ ಧರ್ಮಸುತನೆನುತೆದ್ದನಾ ಭೀಮ ॥ ೯೯ ॥

ಉರಿವ ಕೋಪಾಗ್ನಿಯಲಿ ಕರ್ಣನ
ಶಿರದ ಭಾಂಡದಲಿವನ ಸೊರೆನೆ-
ತ್ತರಿನಲಿವನಗ್ರಜನ ಕೊಬ್ಬಿದ ನೆಣನ ಕೊಯ್ದೊಯ್ದು ।
ದುರುಳ ಶಕುನಿಯ ಕಾಳಿಜದೊಳೊಡ-
ವೆರಸಿ ಕು[1]ದಿ[1]ಸಿ ಮಹೋಗ್ರ ಭೂತದ
ನೆರವಿಗುಣ[2]ಬಡಿಸು[2]ವೆನು ಸತಿ ಕೇಳೆಂದನಾ ಭೀಮ ॥ ೧೦೦ ॥

ಕೊಂಬೆನೇ ಧರ್ಮಜನ ಧರ್ಮದ
ಡೊಂಬನೀ ಮುದುಗುರುಡನಿಕ್ಕಿದ
ನಂಬುಗೆಯು ವಿಷವೈಸಲೇ ತಲೆಗೇಱಿತಗ್ರಜನ ।

---

೯೮. [ನಂದು-ನಾಶವಾಗು, ಕೊನೆಗಾಣು. ಮುಂಜೆಱಗು-ಸೆಱಗಿನ ಮುಂಭಾಗ. ಮುಳಿ-ಕೋಪಗೊಳ್ಳು. ಮುಗುದೆ-ಮುಗ್ಧೆ, ನಿಷ್ಕಪಟಿಯಾದವಳು].

೯೯. [1]-[3]ದದಿ (ಅ ಕುಮಾ), ಸ್ವೀಪಾ (ಪ್ರ k). [2]ಸೂಸುವ (ಅ ಕುಮಾ), (ಕ k ಪ್ರ).

[ತಱುಬು-ಅಟ್ಟಿಸಿಕೊಂಡು ಹೋಗು. ತುಡುಕು-ಬೇಗನೆ ಹಿಡಿದುಕೊ. ವಡಬ-ವಡಬಾನಲ (ಸಮುದ್ರದಲ್ಲಿ ಅಡಗಿದೆಯೆನ್ನಲಾದ ಪ್ರಳಯಕಾಲದ ಅಗ್ನಿ). ಪಟಲ-ತೆರೆ. ಕುಠಾರ-ಕೊಡಲಿ(ಯಂತಿರುವವನು). ತಡೆಗಡಿ (ತಡಂಗಡಿ, ತಡಗಡಿ)-ಸಂಪೂರ್ಣವಾಗಿ ಕತ್ತರಿಸು].

೧೦೦. [1]ಡಿ (ಅ ಪ್ರ), ಸ್ವೀಪಾ (ಕ ಓ k ಅ ಕುಮಾ). [2]ಲಿಕ್ಕು (ಅ ಕುಮಾ), ಸ್ವೀಪಾ (ಪ್ರ ಕ ಅ).

ಡೊಂಬಿಗರ ಡಾವರಿಗರಿವದಿರ
ತಿಂಬೆನೀಗಳೆ ತರುಣಿ ಕೇಳೆನು-
ತಂಬುಜಾಕ್ಷಿಯ ಸಂತವಿಟ್ಟನು ಕುರುಳ[1]ನೇವರಿಸಿ[1] ॥ ೨೦೧ ॥

ಮುಡಿಯ ನೀ ಕಟ್ಟೆಲೆಗೆ ಸತಿಯೆನೆ
ನುಡಿದಳಾ ಕಾಂತಂಗೆ ವಚನವ
ಮುಡಿಯ ಕಟ್ಟುವ ಕಾಲವೀ ದುಶ್ಶಾಸನನ ಶಿರವ ।
ಕೆಡಹಿ ಶಾಕಿನಿಯರಿಗೆ ರಕುತವ
ಕುಡಿಸಿ ತಣಿಯಲು ಕರುಳ ದಂಡೆಯ
ಮುಡಿವ ವ್ರತವೆನೆ ಭೀಮನೆನ್ನದು ಕೇಳು ನಿರ್ವಾಹ ॥ ೨೦೨ ॥

ಇಳಿದನರ್ಜುನನಾ ಸಭಾವನಂ-
ಡಳದ ವೇದಿಯನಹಹ ಧರ್ಮಜ-
ನುಳಿವನೇ ನುಡಿಯೆಡಹಿದೊಡೆ ಸಿಗು[1]ಅರ್ಳ್ಗ[1] ಸದ್ಗುಣಕೆ ।

---

೨೦೧. [1]ನೇರಿಸುತ (ಪ್ರ ಕುಮಾ), ಸೂಚಿತಪಾಠ ('ಶ್ರೀ')–ನೇಜರಿಸುತ.

[ಡೊಂಬು–ಸೋಗು, ಕಪಟಾಚಾರ. ಡಾವರಿಗ–ಕಾಟ ಕೊಡುವವನು, ಉಪದ್ರವಿ, ಹಿಂಸೆ ಕೊಡುವವನು. ಸಂತವಿಡು–ಸಂತೈಸು, ಸಮಾಧಾನಪಡಿಸು. ನೇವರಿಸು–ಸವರು, ಸರಿಪಡಿಸು].

೨೦೨. * ಈ ಪದ್ಯವು 'ಅ' ಪ್ರತಿಯಲ್ಲಿ ಹೀಗಿದೆ. (ನೋಡಿ ಪರಿಶಿಷ್ಟ, ಪುಟ 341, ಪದ್ಯ ಸಂಖ್ಯೆ ೧).

ಮುಡಿಯ ಕಟ್ಟೆಲೆ ನಾರಿ ಭಾಷೆಯ । ನುಡಿಯು ತನ್ನದು ಬೇಡವೆಂದೆನೆ ।
ನುಡಿದ ನುಡಿಗಳುಳುವೆನೆ ಯೀ ದುಶ್ಶಾಸನನ ಶಿರವ ।
ಕೆಡೆಯೊದೆದು ತಾ ಕರುಳ ದಂಡೆಯ । ಮುಡಿವುದೇ ವ್ರತವೆನಗೆ ನಿಮ್ಮಡಿ ।
ನುಡಿಯಲಂಜುವೆನೆನಲು ಬಳಿಕಿಂತೆಂದನಾ ಭೀಮ ।

ಅದೇ ಪದ್ಯ 'ಪ್ರ' ಪ್ರತಿಯಲ್ಲಿ ಹೀಗಿದೆ :—

ಮುಡಿಯ ಕಟ್ಟೆಲೆ ಸತಿಯೆನಲು ನೋಡಿದಳು ಕಾಂತನ ವದನವನು
ತಾ ಮುಡಿಯ ಕಟ್ಟುವ ಕಾಲವೀ ದುಶ್ಶಾಸನನ ಶಿರವಾ ।
ಕೆಡಹಿ ಶಾಕಿನಿಯರಿಗೆ ರಕ್ತವ ಕುಣಿಸಿ ದಣಿಯಲು ಕರುಳದಂಡೆಯ
ಮುಡಿವನಕ ವಿಂದೆನಗೆ ನೀ ಕೇಳಧಿಕ ನಿರ್ವಾಹಾ ।

(ಈ ಪದ್ಯವನ್ನು ಯಥಾವತ್ತಾಗಿ ನಕಲುಮಾಡಿದೆ).

೨೦೩. [1]ರೆಳ್ದ (ಅ), ರೇಳೆ (ಪ್ರ) ; ಸ್ವೀಪಾ (ಅ ಕುಮಾ).

ಕಳ[2]ವಳ[2]ದ [3]ಕಾಲುವೆಯು ಕಾಹುರ-
ಕೊ[3]ಳಗುಗೊಡದಿರು ಭೀಮ [4]ಹಗೆ[4]ಗಳ
ಹಿಳಿ[5][ವ್ರೋ][5]ಡಿದು ಹೊತ್ತಲ್ಲೆನುತ ಹಿಡಿದನು ವೃಕೋದರನ ॥ ೨೦೩ ॥

ಮಾಣಲದು ಕೌರವರ ನೂರ್ವರ
ಗೋಣ ಬನಕಾಳೆಗದೊಳೆನ್ನಯ
ಕೇಣಿ ತನ್ನಯ ಗದೆಗೆ ದುರ್ಯೋಧನನ ತೊಡೆಗಳಿಗೆ ।
ವಾಣಿಯವು ದುಶ್ಶಾಸನನ ತನಿ
ಶೋಣಿತವ ತಾ ಕುಡಿಯದಿರೆ ನಿ-
ಸ್ತ್ರಾಣೆ ಸೈರಣೆಗಿದುವೆ [1]ಫಲವೆಂ[1]ದೊದಱಿದನು ಭೀಮ ॥ ೨೦೪ ॥

ಬರಸಿ[1]ರೈ[1] ಭಾಷೆಯನು ದೇವಾ-
ಸುರರ ಸಾಕ್ಷಿಯೊಳಾಯ್ತು ಕರ್ಣನ
ಕೊರಳಿಗೆನ್ನಯ ಬಾಣಕುಂಗುರವುಡಿಕೆಯಿಂದಿನಲಿ ।
ಸುರನರೋರಗರಱಿ[2]ದಿ[2]ರೆ ದ-
ಬ್ಬರಿಸಿದನು ಕಲಿಪಾರ್ಥ ಶಕುನಿಯ
ಶಿರಕೆ ಕೊ[3]ಟ್ಟೆ[3]ನು ಸಂಚಕಾರವನೆಂದ ಸಹದೇವ ॥ ೨೦೫ ॥

---

೨೦೩. [2]ಕಳ (ಅ). [3]ಕಾಹುರದ ಕಾಲುವೆಗೊ (ಸರ್ವತ್ರ). [4]ರಿಪು (ಅ), ಸ್ವೀಪಾ (ಪ್ರ ಅ ಕುಮಾ). [5]ವಡಿ (ಅ ಕುಮಾ), ವರಿ (ಅ).

[ವೇದಿ-ಜಗಲಿ, ವೇದಿಕೆ. ನುಡಿಯೆಡಹು-ಮಾತಿಗೆ ತಪ್ಪು. ಸಿಗುರೇಳು-ದೋಷ ತಟ್ಟು, ಹಾನಿಯಾಗು. ಕಾಹುರ-ಕಾಡಿನ ತೊರೆ, ಪ್ರವಾಹ. ಹಿಳಿ-ಹಿಂಡು, ನಾಶಪಡಿಸು].

೨೦೪. [1]ಹೋಗೆಂ (ಅ).

[ಮಾಣಲಿ-ಹೋಗಲಿ. ಗೋಣು-ಕೊರಳು. ಕೇಣಿ-ಗುತ್ತಿಗೆ. ಗೋಣ ಬನಕಾಳೆಗ-ಗೋಣುಗಳ ವನದಲ್ಲಿ ಕಾದಾಡುವ ಕಾಳೆಗ (ಪರಸ್ಪರ ಕೊರಳು ಕತ್ತರಿಸುವ ಕಾಳಗ). ವಾಣಿಯ-ವಾಣಿಜ್ಯ-ವ್ಯಾಪಾರ. ತನಿಶೋಣಿತ-ಅಪ್ಪಟ ರಕ್ತ].

೨೦೫. [1]ದೈ (ಅ). [2]ವಿ (ಅ). [3]ಟ್ಟ (ಅ).

[ಉಡಿಕೆ-ಉಡುಗೆ ಉಂಗುರ ಉಡಿಕೆ-ಮದುವೆಯ ಕಾಲದಲ್ಲಿ ವಧೂವರರಿಗೆ ಲಗ್ನದ ಗುರುತಾಗಿ ಕೊಡುವ ಉಂಗುರ ಮತ್ತು ಉಡುಗೆ. ಸಂಚಕಾರ-ಮುಂಗಡವಾಗಿ ಕೊಡುವ ಹಣ].

ಕಳೆದು ಬಿಸುಟರು ಮತ್ತೆ ರತ್ನಾ-
ವಳಿಯ ವಿವಿಧಾಭರಣವನು ಪರಿ-
[1]ಲುಳಿತ[1] ಕೃಷ್ಣಾಜಿನವ ಹೊದೆದರು ಹಾಯ್ಕಿ ಹಚ್ಚಡವ ।
ನಳಿನಮುಖಿ [2]ನಳನಳಿಪ[2] ಮುಕ್ತಾ-
ವಳಿಯಲಂಕಾರವನು[3]ಗಿದು[3] ಸಭೆ-
ಯೊಳಗೆ ಬಿಸುಟಳು ನಿಂದಳಬಲೆ ನಿಜಾ[4]ಭಿ[4] ರೂಪದಲಿ ॥ ೨೦೬ ॥

ಸಾಲದೇ [1]ನಿ[1]ಮಗಿನ್ನು ಕೌರವ-
[2]ರೋ[2]ಲಗದ ಫಲವಾಯ್ತಲಾ ವನ-
ಮಾಲೆ ಕೊರಳಿಂಗಲ್ಲ ಚರಣಾಭರಣವಾಯಿತಲೇ ।
ಬೀಳುಕೊ[3]ಳಿ[3]ರೇ ಬೊಪ್ಪನವರನು
ಮೇಲೆ ಮೋಹದ ತಾಯಲಾ ನಡೆ
[4]ವೇಳೆ[4] ಕಳುಹಿಸಿಕೊಂಬೆವೆಂದನು ಭೂಪತಿಗೆ ಭೀಮ ॥ ೨೦೭ ॥

ಬಂದರಿವರರಮನೆಗೆ ನೇಮವೆ
ಯೆಂದು ಪದಕೆಱಗಿದೊಡೆ [1]ಕಣುನೀ-
ರಿಂದ[1] [2]ನನೆ[2]ದನು ತಂದೆಮಕ್ಕಳ [3]ಬಿಟ್ಟು[3] ಬದುಕುವನೇ ।
ಇಂದುಮುಖಿ ಮಱುಗಿದಳು ನಾವಿ-
ನ್ನೆಂದು ಕಾಂಬೆವು ನಿಮ್ಮನಕಟಕ-
ಟೆಂದಳತಿ ಮೋಹಿತೆಯಲಾ ಕುಂತೀಕುಮಾರರಿಗೆ ॥ ೨೦೮ ॥

---

೨೦೬. 'ಅ' ಪ್ರತಿಯಲ್ಲಿ ಈ ಪದ್ಯ ಕಂಡುಬರುವುದಿಲ್ಲ.
[1]ಲಲಿತ (ಅ ಆ ಕುಮಾ), ಸ್ವೀಪಾ (ಪ್ರ). [2]ಬಹುವಿಧದ (ಅ ಪ್ರ).
[3]ನಿಡು (ಪ್ರ). [4]ನು (ಪ್ರ).

[ಪರಿಲುಳಿತ–ಹರಡಿದ, ಬಿಚ್ಚಿದ. ಕೃಷ್ಣಾಜಿನ–ಜಿಂಕೆಯ ಚರ್ಮ. ಮುಕ್ತಾವಳಿ–ಮುತ್ತಿನ ಸರ. ಉಗಿ–ಕಳಚು].

೨೦೭. [1]ನ (ಅ). [2]ನೋ (ಅ). [3]ಡಿ (ಅ). [4]ಯೇಳಿ (ಅ), ಹೇಳಿ, (ಅ ಕುಮಾ); ಸ್ವೀಪಾ (ಪ್ರ).

೨೦೮. [1]ಕಣ್ಣೀರಿಂದ (ಪ್ರ); ಕಂಬನಿಯಿಂದ (ಅ). [2]ನೆನೆ (ಅ); ನನ (ಪ್ರ).
[3]ಬಿಸುಟು (ಅ ಪ್ರ).

[ನನೆ–ನೆನೆ, ತೊಯ್ದುಹೋಗು].

ಇವರು ಕಳುಹಿಸಿಕೊಂಡರಾ ನೃಪ-
ಭವನವನು ಹೊಱವಂಟರೊಡನು-
ತ್ಸವವಿಹೀನರು ವಿದುರಭೀಷ್ಮದ್ರೋಣಗೌತಮರು ।
ಅವನಿಪತಿ ದುರ್ಯೋಧನಾದಿಗ-
ಳವನ ಸಹಭವರುಳಿಯೆ ಬಂದುದು
ವಿವಿಧ ಜನದೊತ್ತೊತ್ತೆ ಮುಸಗಿತು ರಾಜಬೀದಿಯಲಿ ॥ ೨೦೯ ॥

ಫಲ[1]ಕುಜ[1]ದ ಪಲ್ಲವದ ಪದಕರ
ತಳದ ವಿಪುಳ ತಮಾಲ[2]ಕೇಶದ[2]
ಲಲಿತ ಕೇತಕಿನಖದ [3]ದಾಡಿಮದಂತಪಂಕ್ತಿಗಳ[3] ।
ನಳಿನನಯನದ ಮಧುಪಕುಲಕುಂ-
ತಳದ ವನಸಿರಿ ಸವತಿಯಾದಳು
ಜಲಜಮುಖಿ ಪಾಂಚಾಲಿಗೆಂದನು ಧೌಮ್ಯಮುನಿ ನಗುತ ॥ ೨೧೦ ॥

ಮುಂದಣಾತನು ಪಾರ್ಥನಾಥನ
ಹಿಂದೆ ಭೂಪತಿ ಧರ್ಮಪುತ್ರನ
ಹಿಂದೆ ಮಾದ್ರೀತನಯರಿಬ್ಬರ ಹಿಂದೆ ಪಾಂಚಾಲಿ ।
ಹಿಂದೆ ಕುಂತೀದೇವಿಯಾಕೆಯ
ಹಿಂದಣಾತನು ಭೀಮಸೇನಂದಾ
ಮಂದಿ ತೋಱಿದುದೊಬ್ಬರೊಬ್ಬರಿಗವರಸೀಕ್ಷಿಸುತ ॥ ೨೧೧ ॥

---

೨೦೯. [ಒತ್ತೊತ್ತೆ–ಸಮ್ಮರ್ದ; ಗುಂಪು, ಸಮೂಹ. ಮುಸಗು–ವಿಜೃಂಭಿಸು, ಅಧಿಕವಾಗು].

೨೧೦. [1]ಕುಚ (ಕ). [2]ಪತ್ರದ (ಅ ಕುಮಾ). [3]ಭುಜಪತ್ರದ ನವಾಂಬರದ (ಅ ಕುಮಾ). [ಫಲಕುಜ–ಹಣ್ಣುಬಿಡುವ ಮರ. ಪಲ್ಲವ–ಚಿಗುರು. ಪದಕರತಳ–ಅಂಗಾಲು, ಅಂಗೈ. ತಮಾಲ–ಹೊಂಗೆ. ಕೇಶ–ಕೂದಲು. ಕೇತಕಿನಖ–ತಾಳೆಹೂವಿನ ಮುಳ್ಳಿನಂಥ ಉಗುರು. ದಾಡಿಮ–ದಾಳಿಂಬೆ. ಕುಂತಳ–ಕೂದಲು].

ಪುರವ ಹೊಱವಂಟವರು ಗಂಗಾ-
ವರನದಿಯ ತೀರದಲಿ ನಿಂದರು
ಪರಿಜನವ ಕಳುಹಿದರು ಧೃತರಾಷ್ಟ್ರನ ಪಸಾಯಿತರ ।
ಗುರುಜನಕೆ ಪೊಡವಂಟು ಬೀಳ್ಕೊಂ-
ಡರು ನದೀಜದ್ರೋಣಕೃಪರನು
ಕರೆದು ಕುಂತಿಯ ನಿಲಿಸಿದರು ವಿದುರನ ನಿವಾಸದಲಿ ॥ ೨೧೨ ॥

ಮುನಿಪ ಜಪಿಸುತ ನಡೆದನಗ್ನಿಯ
ವಿನುತ ಸೂಕ್ತವನೆತ್ತುಗೈದುವಿ-
ನನಿಲಜನು ದುಗುಡದಲಿ ಫಲುಗುಣ ಯಮಳರೊಂದಾಗಿ ।
ವನಿತೆಯನು ನಡುವಿಟ್ಟು ಹೊಱವಂ-
ಟನು ಯುಧಿಷ್ಠಿರ ನೃಪತಿ ನಿಯತದಿ
ನೆನೆಯುತಿದ್ದನು ವೀರನಾರಾಯಣನ ಪದಯುಗವ ॥ ೨೧೩ ॥

———

೨೧೨. [ಪಸಾಯಿತ–ಉಡುಗೆ ತೊಡಿಗೆಗಳ ಅಧಿಕಾರಿ. ಪೊಡವಂಟು (ಧಾ : ಪೊಡಮಡು, ಪೊಡವಡು)–ನಮಸ್ಕರಿಸಿ, ಅಡ್ಡಬಿದ್ದು. ನದೀಜ–ಗಂಗಾಪುತ್ರ, ಭೀಷ್ಮ].

೨೦೩. [ಮುನಿಪ–ಧೌಮ್ಯಮುನಿ. ಎತ್ತುಗೈದುವಿನ–(ಕೈಲಿ) ಆಯುಧವನ್ನು ಎತ್ತಿ ಹಿಡಿದಿರುವ (ಕೈದು–ಆಯುಧ)].

ಅರಣ್ಯಪರ್ವ

ಪೀಠಿಕೆ ೪

೧. ಅರಣ್ಯದಲ್ಲಿ ಓಲಗ

ಕೇಳು ಜನಮೇಜಯಧರಿತ್ರೀ-
ಪಾಲ ಗಂಗಾತೀರದಲಿ ಭೂ-
ಪಾಲಕರು ಗುರು ಭೀಷ್ಮ ವಿದುರಾದ್ಯಖಿಳ ಬಾಂಧವರ ।
ಬೀಳುಗೊಟ್ಟರು ಗಜಪುರದ ಜನ-
ಜಾಲವನು ಕಳುಹಿದರು ಗಂಗಾ-
ಕೂಲದುತ್ತರ ಭಾಗದಲಿ ಮಾಡಿದರು ವಿಶ್ರಮವ ॥ ೧ ॥

ತಳಿತು ಬಿಟ್ಟುದು ಕೂಡೆ ಹರಹಿನ
ಹಳುವ[1]ದೊಳ್ ದ್ವಿ[1]ಜವರ್ಗ ರಚಿಸಿದ
ತಳಿರಗುಡಿಗಳ ಪರ್ಣಶಾಲೆಯ ಭದ್ರಭವನಿಕೆಯ ।
ಮೆಳೆಯ ಮಂಟಪ ಹೊದಱುದುಱು[2]ಗಲ[2]
ನೆಳಲ ಚೌಕಿಗೆ ವಿಪುಳ[3]ವಟ[3]ಸಂ-
ಕುಲದೊಳೋಲಗಶಾಲೆ ಮೆಱೆದುದು ಧರ್ಮನಂದನನ ॥ ೨ ॥

ಏನನೆಂಬೆನು ಜೀಯ ಕಡುದು-
ಮ್ಮಾನದಲಿ ಹೊಱವಂಟು ಬಂದನು
ದಾನವಾಂತಕನೈದಿದವು ದಂಡಿಗೆಗಳರಸಿಯರ ।

---

೧. [ಕೂಲ-ದಡ, ತೀರ. ವಿಶ್ರಮ-ವಿಶ್ರಾಂತಿ].

೨. [1]ದಲಿ ಬುಧ (k). [2]ಗಲು (ಅ ಕುಮಾ). [3]ಪಱಿ (ಕ), ವರ (ಓ).
[ಭದ್ರಭವನಿಕೆ-ಮಂಗಳಕರವಾದ ಪರ್ಣಶಾಲೆಯ ಚಿಕ್ಕಮನೆ. ಹೊದಱುದುಱುಗಲು-ದಟ್ಟವಾಗಿ ಬೆಳೆದ ಪೊದೆ. ಚೌಕಿ-ಒಳ ಅಂಗಳ. ವಟಸಂಕುಲ-ಆಲದ ಮರದ ಸಮೂಹ].

ಆ ನಿಖಿಳನೃಪವರ್ಗ ಯಾದವ-
ಸೇನೆ ಕವಿದುದು ಪಾಂಡುಪುತ್ರರ
ಕಾನನವ ಕರುಣಾಳು ಹೊಕ್ಕನು ಹಲವು ಪಯಣದಲಿ ॥ ೩ ॥

ಇವರು ಬಂದರು ನಿಖಿಳಭೂಸುರ-
ಸಿವಹಸಹಿತಿದಿರಾಗಿ ವರಬಾಂ-
ಧವ[1]ರಿಗ[1]ಭಿವಂದ್ಯರಿಗೆ ತತ್ಸಮರಿಗೆ ಕನಿಷ್ಠರಿಗೆ ।
ಅವ[2]ರವರಿಗ[2]ವರುಚಿತಸತ್ಕಾ-
ರವನು ಮಾಡಿ ಮುರಾರಿಯಂಘ್ರಿಯ-
ನವಿರಳಾಶ್ರುಗಳಿಂದ ನಾದಿದರರಸ ಕೇಳೆಂದ ॥ ೪ ॥

ಬೇಱ[3]ಬೇಱ[3]ವರನು ತೆಗೆದು ಮು-
ರಾರಿಯಪ್ಪಿದನಡಿಗಡಿಗೆ ದೃಗು-
ವಾರಿಗಳನೊರಸಿದನು ಪೀತಾಂಬರದ ಸೆಱಗಿನಲಿ ।
ಸಾರು ಸಾರೆನಲುಗ್ಗಡಣೆಯು ವಿ-
ಕಾರವಿನ್ನೇಕೆನುತ ರಾಯನ-
ನಾರಿ ಬಂದಳು ಕವಿದು ಬಿದ್ದಳು ಹರಿಯ ಚರಣದಲಿ ॥ ೫ ॥

ಶ್ರುತಿಗಳಿಗೆ ವೈದೋಱ[3] ಸುಪತಿ-
ವ್ರತೆಯರಿಗೆ ಗೋಚರಿಸೆ ಯತಿಸಂ-
ತತಿಯ ನಿರ್ಮಳಸಾರಸಮ್ಯಗ್‌ಜ್ಞಾನದೀಧಿತಿಗೆ ।
ಮತಿಗೊಡದಮಹಿಮಾಂಬುನಿಧಿ ಯೆನ-
ಗತಿಶಯವನೇ ಮಾಡಿ ಲಜ್ಜಾ-
ಸ್ಥಿತಿಯನುಳುಹಿದ ದೈವ ನೀ ವೈದೋಱಿದೈ ತನಗೆ ॥ ೬ ॥

---

೩. [ದುಮ್ಮಾನ-ದುಗುಡ, ದುಃಖ. ದಾನವಾಂತಕ-ಶ್ರೀಕೃಷ್ಣ. ದಂಡಿಗೆ-ಪಲ್ಲಕ್ಕಿ. ಕವಿ-ಆವರಿಸು, ತುಂಬಿಕೊಳ್ಳು].

೪. [1]ರೊಳ (ಅ ಕುಮಾ), ಸ್ವೀಪಾ (ಕ k ಅ). [2]ರಿಗವರ (ಅ ಕುಮಾ), ಸ್ವೀಪಾ (ಕ k ಅ).
[ಅವಿರಳಾಶ್ರು-ಒಂದೇಸಮನೆ ಸುರಿಯುವ ಕಣ್ಣೀರು. ನಾದು-ತೋಯಿಸು, ತೊಳೆ].

೫. [ದೃಗುವಾರಿ-ಕಣ್ಣೀರು. ಉಗ್ಗಡಣೆ-ಕೂಗಾಟ].

೬. [ಶ್ರುತಿ-ವೇದ. ಸಮ್ಯಕ್‌ಜ್ಞಾನ-ಪರಿಪೂರ್ಣವಾದ ಜ್ಞಾನ, ತಿಳಿವಳಿಕೆ. ದೀಧಿತಿ-ಕಾಂತಿ, ಪ್ರಕಾಶ. ಮತಿಗೊಡು-ಪುನಸ್ಸುಕೊಡು. ಮಹಿಮಾಂಬುನಿಧಿ-

ಪತಿಗಳಿವರಂಜಿದರು ಧರ್ಮ-
ಸ್ಥಿತಿಯನರಿದವರಳುಕಿದರು ತತ್-
ಪಿತೃ ಪಿತಾಮಹ ಗುರುಗಳಡಗಿದರವನಿಯ[1]ನು[1] ಬಗಿದು ।
ಗತಿವಿಹೀನೆಗೆ ಕೃಷ್ಣ ನೀನೇ
ಗತಿಯೆನುತ ಬಾಯ್ಬಿಡಲು ಲಜ್ಜಾ-
ಸ್ಥಿತಿಯನುಳುಹಿದ ದೈವ ನೀ ಮೈದೋಱಿದೈ ತನಗೆ ॥ ೭ ॥

ಏಳು ತಾಯೆ [1]ಮಹಾಸತಿಯೆ[1] ಪಾಂ-
ಚಾಲಿ ನೊಂದೌ ತಂಗಿಯೆನುತ ಕೃ-
ಪಾಳು ಕಂಬನಿದೊಡೆದು ಕೊಡಹಿದನವಯವದ ರಜವ ।
ಮೇಲುಮುಚ್ಚ್ಳ[2]ದೆಱ[32]ದ ತನುವಿನ
ಹೇಳಿಗೆಯ ಶೋಕಾಹಿಯಂತಿರೆ
ಲೋಲಲೋಚನೆಯಳಲು ಮಿಗೆ ಹೆಕ್ಕಳಿಸಿತಡಿಗಡಿಗೆ ॥ ೮ ॥

ಮುಡಿಯ ಸಂವರಿಸಬಲೆ ಸೀರೆಯ-
ನುಡು ನವಾಂಬರವಿದೆ [1]ನಿ[1]ರೋಧವ
ಬಿಡು ಸುಯೋಧನರಾಜಸಂತತಿಯುರಿದುದಿನ್ನೇನು ।
ಕೆಡಿಸಿಕೊಂಡರು ನಾಯ್ಗಳಿನ್ನದ
ನುಡಿದು ಫಲವೇನಕಟ ಕೈಕೊಂ-
ಡಡವಿಯನುಭವ ಸವೆಯೆ ಸೈರಿಪುದೆಂದನಸುರಾರಿ ॥ ೯ ॥

ಮಹಿಮಾಸಾಗರ. ಮೈದೋಱು-ಪ್ರತ್ಯಕ್ಷನಾಗು, ಕಾಣಿಸಿಕೊ. ಲಜ್ಜಾಸ್ಥಿತಿಯನುಳುಹಿದ ದೈವ-ನಾಚಿಕೆಪಡಬೇಕಾದ ಸ್ಥಿತಿಯನ್ನು ಹೋಗಲಾಡಿಸಿದ ದೈವ, ದೇವರು].

೭. [1]ಲಿ (ಅ ಕುಮಾ).
[ಬಗಿ-ಅಗೆತೋಡು. ಅವನಿ-ಭೂಮಿ].

೮. [1]ಸರೋಜಮುಖಿ (ಅ ಕುಮಾ), ಸ್ವೀಪಾ (ಓ ಅ). [2]ತೆರ (ಅ), ತೆರೆ (ಕುಮಾ).
[ರಜ-ಧೂಳು. ತನು-ಶರೀರ. ಹೇಳಿಗೆ-ಪೆಟ್ಟಿಗೆ; (ಹಾವಿನ) ಬುಟ್ಟಿ. ಶೋಕಾಹಿ-ಶೋಕವೆಂಬ ಸರ್ಪ. ಲೋಲಲೋಚನೆ-ಚಂಚಲವಾದ ಕಣ್ಣುಳ್ಳವಳು. ಹೆಕ್ಕಳಿಸು-ಹೆಚ್ಚು].

೯. [1]ವಿ (ಅ ಕುಮಾ).
[ಮುಡಿ-ತುರುಬು. ಸಂವರಿಸು-ಸರಿಪಡಿಸು, ನೇರ್ಪಡಿಸು. ನವಾಂಬರ-ನೂತನ ವಸ್ತ್ರ. ನಿರೋಧ-ಅತಂಕ. ಸವೆ-ಕಳೆದುಹೋಗು].

ತುಱುಬ ಕಟ್ಟುವ ಹದನ ನಿಮ್ಮಡಿ
ಯಱಿಯದೆಂಬೆನೆ ಸಕಲ ಸಚರಾ-
ಚರದ ಚೇತನರೂಪ ದೇಹಿನಿಕಾಯಕೃತಸಾಕ್ಷಿ ।
ತಱಿದು ದುಶ್ಯಾಸನನ ವಕ್ಷದೊ-
ಳೊಱೆವ ರಕುತದೊಳದ್ದಿ ಕಟ್ಟುವ
ತುಱುಬನಱಿಯಾ ಕೃಷ್ಣ ಯೆಂದಳು ಕಮಲಮುಖಿ ನಗುತ ॥ ೧೦ ॥

ಆಯಿತೇಳೌ ತಂಗಿ ನೀ ಪಿರಿ-
ದಾಯಸವನನುಭವಿಸಲುದಿಸಿದೆ
ರಾಯನಾಡಿದ ಭಾಷೆ ಸಲಲಿ ವನಪ್ರವಾಸದಲಿ ।
ವಾಯುತನುಜನ ಕೈಯಲೇ ನಿ-
[1]ನ್ನಾಯತಿಕೆಯಹುದಾ[1] ಪ್ರತಿಜ್ಞೆಗೆ
ತಾಯೆ ತಾ ಹೊಣೆಯೆಂದು ಕೊಟ್ಟರು ಸತಿಗೆ ನಂಬುಗೆಯ ॥ ೧೧ ॥

ಸಂತವಿಸಿ ಪಾಂಡವರನಾ ಮುನಿ-
ಸಂತತಿಯ ಮನ್ನಿಸಿ ಮಹೀಭಾ-
ರಾಂತರವ[1]ನಿಳುಹಲ್ಕೆ[1] ಭಾರತಪಾರಿಶೇಷಕವ ।
ಅಂತರಾತ್ಮಕನೊಲವು ಮಿಗೆ ಜಗ-
ದಂತರಂಗ ಸ್ಥಾಯಿಲಕ್ಷ್ಮೀ-
ಕಾಂತ ಬಿಜಯಂಗೈದು ಹೊಕ್ಕನು ದ್ವಾರಕಾಪುರಿಯ ॥ ೧೨ ॥

---

೧೦. [ಹದನು-ಸಂದರ್ಭ. ದೇಹಿ-ದೇಹವುಳ್ಳವರು. ನಿಕಾಯ-ಸಮೂಹ. ಕೃತ-ಕರ್ಮ, ಮಾಡಿದುದು (ಮನುಷ್ಯರು ಮಾಡಿದ ಕರ್ಮಗಳನ್ನು ಸಾಕ್ಷಿರೂಪದಲ್ಲಿ ನೋಡುವ ಜೀವಾತ್ಮ). ವಕ್ಷ-ಎದೆ. ಒಱೆ-ಸುರಿ].

೧೧. [1]ನ್ನಾಯಸಕೆ ಹೊಣೆಯಾ (ಅ).
[ಆಯತಿಗೆ-ಮೇಲ್ಮೆ, ಘನತೆ].

೧೨. [1]ನಿಶ್ಚೈಸಿ (ಅ ಕುಮಾ). [2]ವಾರಿಶೌಚಕದ (ಅ), (ಸ್ವೀಪಾ) (ಅ ಕುಮಾ).
[ಮಹೀಭಾರಾಂತರ-ಬೇರೆಯಾದ ಭೂಭಾರ. ಪಾರಿಶೇಷಕ-ಉಳಿದದ್ದು. ಭಾರತ-ಭರತವಂಶ].

೨. ಇಂದ್ರಕೀಲ ವಿಜಯ

ಕೇಳು ಜನಮೇಜಯ ಧರಿತ್ರೀ-
ಪಾಲ ಪಾಂಡುಕುಮಾರರಟವಿಯ
ಪಾಳಿಯಲಿ ಪರುಠವಿಸಿದರು ಪದಯುಗಪರಿಭ್ರಮವ ।
ಲೋಲಲೋಚನೆ ಸಹಿತ ತತ್ಕುಲ-
ಶೈಲದಲಿ ತದ್ವಿಪಿನದಲಿ ತತ್-
ಕೂಲವತಿಗಳ ತೀರದಲಿ ತೊಳಲಿದರು ಬೇಸಱದೆ ॥ ೧೩ ॥

ಮೂದಲಿಸಿದಳು ದ್ರುಪದತನುಜೆ ವೃ-
ಕೋದರನನರ್ಜುನನನವನಿಪ-
ನಾದಿಯಾದೈವರನು ಕೌರವನೃಪನ ಪತಿಕರಿಸಿ ।
ಆದೊಡಿದೆ ಕುರುರಾಜವಂಶ-
ಚ್ಛೇದ ಧೀರ ಕುಠಾರವೆನುತ ವೃ-
ಕೋದರನು ತೂಗಿದನು ಗದೆಯನು ಗಾಢಕೋಪದಲಿ ॥ ೧೪ ॥

ಏಕಿದೇಕೆ ವೃಥಾ ನಿಶಾಟ-
ವ್ಯಾಕರಣ ಪಾಂಡಿತ್ಯವಕಟ ವಿ-
ವೇಕರಹಿತನೆ ನೀ ವೃಕೋದರ ದ್ರುಪದಸುತೆಯಂತೆ ।
ಸಾಕು ಸಾಕೈ ತಮ್ಮ ಸತ್ಯವೆ
ಸಾಕು ನಮಗೆ ಮದೀಯ ಪುಣ್ಯ-
ಶ್ಲೋಕತೆಯನುಳುಹೆಂದು ಗಲ್ಲ ಹಿಡಿದನನಿಲಜನ ॥ ೧೫ ॥

ಆ ಸಮಯದಲಿ ಬಂದನಗ್ಗದ
ಭೂಸುರಶ್ರೀಕಂಠನೋ ಪ-
ದ್ಮಾಸನನ ಪಲ್ಲಟವೊ ಕಮಲಾಂಬಕನ ಚುಂಬಕವೊ ।

---

೧೩. [ಅಟವಿ–ಅಡವಿ, ಕಾಡು. ಪಾಳಿ–ಸರದಿ. ಪರಿಭ್ರಮ–ಸುತ್ತಾಟ, ತಿರುಗಾಟ. ಕುಲಶೈಲ–ಕುಲಪರ್ವತ (ಕುಲಪರ್ವತಗಳು ಏಳು: ಮಹೇಂದ್ರ, ಮಲಯ, ಸಹ್ಯ, ಶಕ್ತಿಮಾನ್, ಯಕ್ಷವಂತ, ವಿಂಧ್ಯ, ಪಾರಿಯಾತ್ರ). ಕೂಲವತಿ–ನದಿ].

೧೪. [ಪತಿಕರಿಸು–ಮೆಚ್ಚು, ಸ್ವೀಕರಿಸು].

೧೫. ನಿಶಾಟ ವ್ಯಾಕರಣ ಪಾಂಡಿತ್ಯ–ರಾಕ್ಷಸರಂತೆ ರಾತ್ರಿಯಲ್ಲಿ ತಿರುಗಾಡುವ ಬಲ್ಮೆ. ಮದೀಯ–ನಮ್ಮ. ಪುಣ್ಯಶ್ಲೋಕತೆ–ಪುಣ್ಯವಂತರೆಂದು ಹೊಗಳಿಸಿಕೊಳ್ಳುವಿಕೆ].

ಭಾಸುರಕ್ರತುಶತದ ರೂಪ ವಿ-
ಳಾಸವೋ ಶ್ರುತಿಕೋಟಿ ಕನ್ಯಾ-
ವಾಸಭವನವೊ ದೇವ ವೇದವ್ಯಾಸಮುನಿರಾಯ ॥ ೧೬ ॥

ಒಡಲು ಬೀಳಲಿ ಮೇಣು ತಮ್ಮದಿ-
ರಡವಿಯಲಿ ಹಾಯಿಕ್ಕಿ ಹೋಗಲಿ
ಮಡದಿ ಮುನಿಯಲಿ [1]ಕು[1]ಸಿದು ಬೀಳಲಿ ಧರಣಿ ಕುರುಪತಿಗೆ।
ಎಡೆಯಲುಳಿವಿವರಾಗುಹೋಗಿನ
ಗೊಡವೆ ಯೆನಗಿಲ್ಲೆನ್ನ ಸತ್ಯದ
ನುಡಿಗೆ [2]ಬಾಧಕ[2]ವಿಲ್ಲದಂತಿರೆ ಕರುಣಿಸುವುದೆಂದ ॥ ೧೭ ॥

ಬಾಧೆಯುಂಟೇ ನಿನ್ನ ಸತ್ಯಕೆ
ಸಾಧಿಸುವುದವಧಿಯನು ನಿನ್ನ ವಿ-
ರೋಧಿಗಳಿಗೆ ನಿವಾಸವಹುದು ಕೃತಾಂತಲೋಕದಲಿ।
ಅಧಿಪತ್ಯಭ್ರಮಿತರಲಿ ರಾ-
ಜ್ಯಾಧಿಯಲಿ ಕ[1]ಡ[1]ಗೊಂಡಿರಖಿಲ ವಿ-
ರೋಧವನು ಕಡನನು ಸವೃದ್ಧಿಕವಾಗಿ ಕೊಡಿಯೆಂದ ॥ ೧೮ ॥

ಪಾರ್ಥನೈದುವುದಿಂದ್ರಕೀಲದೊ-
ಳರ್ಥಿಸಲಿ ಶಂಕರನನಖಿಳ-
ಸ್ವಾರ್ಥಸಿದ್ಧಿಗೆ ಬೀಜವಿದು ಬೇಱೊಂದ ಬಯಸದಿರು।
ವ್ಯರ್ಥರವದಿರು ನಿನ್ನ ಹಗೆಯು ಕ-
ದರ್ಥನದೊಳಿನ್ನೇನು ಜಗಕೆ ಸ-
ಮರ್ಥನೊಬ್ಬನೆ ಶಂಭು ಕೃಪೆಮಾಡುವನು ನಿನಗೆಂದ ॥ ೧೯ ॥

---

೧೬. [ಪಲ್ಲಟ-ವ್ಯತ್ಯಾಸ, ಪ್ರತಿರೂಪ. ಚುಂಬಕ-ಅಯಸ್ಕಾಂತ, ಆಕರ್ಷಕ ಲೋಹ (ವಿಷ್ಣುವನ್ನೇ ಆಕರ್ಷಿಸುವ ಚುಂಬಕ ಶಕ್ತಿಯುಳ್ಳ ವ್ಯಕ್ತಿ). ಕ್ರತು-ಯಾಗ. ಶ್ರುತಿಕೋಟಿ-ಅಪಾರವಾದ ವೇದರಾಶಿ].

೧೭. [1]ಬ (ಸರ್ವತ್ರ), ಸ್ವೀಪಾ (ಪ್ರ). [2]ಹಾದರ (ಸರ್ವತ್ರ), ಸ್ವೀಪಾ (ಪ್ರ).

೧೮. [1]ಡೆ (ಸರ್ವತ್ರ).
[ಕೃತಾಂತ-ಯಮ. ಅಧಿಪತ್ಯಭ್ರಮಿತರು-ಅಧಿಪತ್ಯ ಮಾಡಬೇಕೆಂಬ ಭ್ರಮೆಯುಳ್ಳವರು, ಕೌರವರು. ರಾಜ್ಯಾಧಿ-ರಾಜ್ಯಕ್ಕೆ ಸಂಬಂಧಪಟ್ಟ ತೊಂದರೆ, ಕ್ಲೇಶ. ಕಡ-ಸಾಲ. ಸವೃದ್ಧಿಕ-ಹೆಚ್ಚಾಗಿ].

೧೯. [ಅರ್ಥಿಸು-ಬೇಡು. ಕದರ್ಥನ-ನಿಷ್ಪ್ರಯೋಜನಗೊಳಿಸುವುದು].

ಮುಗ್ಗದಿರು ಮಾಯೆಯಲಿ ಮದದಲಿ
ನೆಗ್ಗದಿರು ರೋಷದ ವಿಡಂಬದ-
ಲಗ್ಗಳಿಯತನದಿಂದಹಂಕೃತಿಭರದಿ ಮೊಱೆಯದಿರು ।
ಅಗ್ಗಿಸದಿರಾತ್ಮನನು ಲೋಭದೊ-
ಳೊಗ್ಗದಿರು ಲಘುವಾಗದಿರು ಮಿಗೆ
ಹಿಗ್ಗದಿರು ಹೊಗಳಿಕೆಗೆ ಮನದಲಿ ಪಾರ್ಥ ಕೇಳೆಂದ ॥ ೨೦ ॥

ಬಿಗಿದ ಬತ್ತಳಿಕೆಯನು ಹೊನ್ನಾ-
ಯುಗದ ಖಡುಗಕಠಾರಿಚಾಪವ
ತೆಗೆದನಳವಡೆ ಕಟ್ಟಿ ಬದ್ದುಗೆದಾರಗೊಂಡೆಯವ ।
ಮುಗುಡಹರುಷದ [1]ಹುಗಿಲ ತಲೆ[1]ಯೊ-
ತ್ತುಗಳಿಗಿಟ್ಟೆಡೆಯಾಗಿ ಗುಣಮಾ-
ಳಿಗಳ ಮಣಿ ಕಲಿಪಾರ್ಥ ಬೀಳ್ಕೊಂಡನು ನಿಜಾಗ್ರಜನ ॥ ೨೧ ॥

ಅರಸ ಕೇಳೈ ಬರುತ ಭಾರತ-
ವರುಷವನು ದಾಂಟಿದನು ತಂಪಿನ
ಗಿರಿಯ ತಪ್ಪಲನಿಳಿದನಾ ಹರಿವರುಷಸೀಮೆಯಲಿ ।
ಬೆರಸಿದನು ಬಳಿಕುತ್ತರೋತ್ತರ
ಸರಣಿಯಲಿ ಸೈನಡೆದು ಹೊಕ್ಕನು
ಸುರ[1]ನಿವೇಶವ[1]ನಿಂದ್ರಕೀಲಮಹಾ[2]ವನಾಂತರವ[2] ॥ ೨೨ ॥

---

೨೦. [ನೆಗ್ಗು–ಜಜ್ಜಿಹೋಗು. ಮುಗ್ಗು–ಮುಗ್ಗರಿಸು, ಕೆಟ್ಟುಹೋಗು. ಅಗ್ಗಳಿಯತನ–ಶ್ರೇಷ್ಠತ್ವ. ಭರ–ರಭಸ. ಅಗ್ಗಿಸು–ನಾಶಪಡಿಸು. ಒಗ್ಗು–ಹೊಂದಿಕೊ. ಲಘುವಾಗು–ಹಗುರವಾಗು].

೨೧. [1]ಮುಗಿಲತಲೆ (ಅ ಕುಮಾ), ಹುದಿದತಲೆ (k), ಹುಗಿಲದಲೆ (ಓ).

[ಹೊನ್ನಾಯುಗ–ಬಂಗಾರದ ಹಿಡಿ. ಬದ್ದುಗೆದಾರ–ಸೊಂಟದ ಪಟ್ಟಿ. ಗೊಂಡೆಯ–ಕುಚ್ಚು. ಹುಗಿಲತಲೆ–ಹೊಯ್ದಾಟಕ್ಕೆ ಸಿಕ್ಕಿದ ಆಲೋಚನೆ, ಚಿಂತೆ. ಇಟ್ಟೆಡೆ–ನೆಲೆ].

೨೨. [1]ರಸೇವ್ಯವ (ಆ ಅ ಕುಮಾ), ಸ್ವೀಪಾ (ಪ್ರ k). [2]ಮಹೀಧರವ (ಕ ಓ ಅ).

[ಭಾರತವರುಷ, ಹರಿವರುಷ–ಜಂಬೂದ್ವೀಪದ ನವಖಂಡಗಳಲ್ಲಿ ಎರಡು. ಸರಣಿ–ಶ್ರೇಣಿ. ಸೈನಡೆ–ವೇಗವಾಗಿ ನಡೆ].

ಗಿಳಿಯ ಮೃದುಮಾತುಗಳ ಮಱಿಗೋ-
ಗಿಲೆಯ ಮಧುರಧ್ವನಿಯ ಹಂಸೆಯ
ಕಳರವದ ಗಱಿನವಿಲ ಕೇಕಾರವದ ನಯಸರದ ।
ಮೆಲುದನಿಯ ಪಾರಿವದ ತುಂಬಿಯ
ಲಲಿತಗೀತದ ವನದ ಸಿರಿ ಬಗೆ-
ಗೊಳಿಸಿತ್ತೈ ಪೂರ್ವಾಭಿಭಾಷಣದಲಿ ಧನಂಜಯನ ॥ ೨೩ ॥

[1]ಸೊಂಪೆಸೆವ[1] ಕೋಗಿಲೆಯ ಸರ ದೆಸೆ
[2]ತಂಪಿಡುವ[2] ತಂಬೆರಲ ಹೂವಿನ
ಜೊಂಪವನು ಝೋಂಪಿಸುವ ಮಱಿದುಂಬಿಗಳ ಮೇಳವದ ।
[3]ಪೆಂಪೊಗುವ[3] ತಾವರೆಗೊಳಂಗಳ
ಕಂಪಿನೊದವಿನ ಬನದ ಸೊಗಸಿನ
ಸೊಂಪು ಸೆಳೆದುದು ಮನವನೀತನನರಸ ಕೇಳೆಂದ ॥ ೨೪ ॥

ಮುಗುಳುಗಂಗಳ ಮೇಲುಗುಡಿದೋ-
ಳುಗಳ ಮಿಡುಕುವ ತುಟಿಯ ತುದಿಗಾ-
ಲುಗಳ ಹೊಱಿಗೆಯ ತಪದ ನಿಱಿಗೆಯ ನಿಷ್ಪ್ರ[1]ಕಂಪ[1]ನದ ।
ಬಿಗಿದ ಬಿಲ್ಲಿನ ಬೆನ್ನ ಬತ್ತಳಿ-
ಕೆಗಳ ಕಿಗ್ಗಟ್ಟಿನ ಕಠಾರಿಯ
[2]ಹೊಗರಡಾಯ್ದದ[2] ಹೊಸತಪಸಿ ತೊಡಗಿದನು ಬಲುತಪವ ॥ ೨೫ ॥

---

೨೩. [ನಯಸರ–ಮಧುರಧ್ವನಿ. ಬಗೆಗೊಳಿಸು–ಮನಸ್ಸನ್ನು ಸೆಳೆ. ಪೂರ್ವಾಭಿಭಾಷಣ–ಮೊದಲಿನಲ್ಲಿ ಹೇಳುವ ಸೊಗಸಾದ ಮಾತು].

೨೪. [1]ಸುಂಪೆಸೆವ (ಅ). [2]ಕಂಪಿಹುವ (ಅ), ತಂಪೆಸೆವ (ಕುಮಾ). [3]ಹೊಂಪೊಗುವ (ಅ), ಹೆಂಪೊಗೆವ (ಅ), ಸ್ವೀಪಾ (ಕುಮಾ).
[ತಂಬೆಲರು–ತಂಗಾಳಿ. ಜೊಂಪ–ಗೊಂಚಲು. ಝೋಂಪಿಸು–ಮುತ್ತಿಕೊ, ಆವರಿಸು. ಮೇಳ–ಗುಂಪು, ಹಿಂಡು. ಪೆಂಪು–ಮೇಲ್ಮೆ, ಹೆಚ್ಚುಗಾರಿಕೆ].

೨೫. [1]ಪಂಚ (ಕ). [2]ಹೆಗಲ ಕಡುಗದ (ಅ), ಹೆಗಲಡಾಯುಧ (ಓ ಕುಮಾ), ಹೊಗರಡಾಯುಧ (ಕ); ಸ್ವೀಪಾ (k).
[ಮುಗುಳುಗಂಗಳ–ಮೊಗ್ಗಿನಂತೆ ಮುಚ್ಚಿಕೊಂಡ ಕಣ್ಣುಗಳ. ಮೇಲುಗುಡಿದೋಳು–ಬಾವುಟದಂತೆ ಮೇಲಕ್ಕೆ ಎತ್ತಿದ ತೋಳು. ಮಿಡುಕು–ಅಲುಗಾಡು. ಹೊರಿಗೆ–ಧರಿಸಿರುವಿಕೆ, ಹೊತ್ತುಕೊಂಡಿರುವಿಕೆ. ನಿರಿಗೆ–(ತಪದ) ಕ್ರಮ. ನಿಷ್ಪ್ರಕಂಪನ–ಸ್ವಲ್ಪವೂ ನಡುಗದಿರುವ ಸ್ಥಿತಿ. ಬಿಗಿ–ಕಟ್ಟು. ಕಿಗ್ಗಟ್ಟು–ಕೆಳಗೆ ಕಟ್ಟಿಕೊಂಡಿರುವ. ಹೊಗರು–ಕಾಂತಿ. ಅಡಾಯ್ದ–ಕುಡುಗೋಲಿನಂಥ ಕತ್ತಿ].

ತಾನೆ ಶಿವನೋ ಮೇಣು ಶಿವನ
ಧ್ಯಾನ ತನ[1]ಗ[1]ದ್ವೈತದನುಸಂ-
ಧಾನವಿದು ಜವನಿಕೆಯೊ ಜೀವಾತುಮನ ಜಂಜಡಕೆ।
ಧ್ಯಾನವೋ ಮೇಣ್ [2]ಧ್ಯೇಯ[2]ವೋ ತದ್-
ಧ್ಯಾನಕರ್ತೃವೊ ತ್ರಿಪುಟರಹಿತನೊ
ತಾನು ಮೇಣೆನಲಾಯ್ತು ಚಿತ್ತದ ಶುದ್ಧಿಯರ್ಜುನನ ॥ ೨೬ ॥

ಮೇಲೆ ಮೇಲೀತನ ತಪೋಗ್ನಿ-
ಜ್ವಾಲೆ ಜಡಿದುದು ತಡೆದುದಭ್ರ-
ಸ್ಥಾಳಿಯಲಿ ಸ್ವೈವರಿವ ಸೂರ್ಯಾಚಂದ್ರಮಪ್ರಭೆಯ।
ಥಾಳಿಸುವ ಪರಿಧೌತಮಾನ ಕ-
ರಾಳತೇಜೋಗರ್ಭತಪಧೂ-
ಮಾಳಿಯಲಿ ಮೇಘಾಳಿ [1]ಮುಸುಕಿ[1]ದುದರಸ ಕೇಳೆಂದ ॥ ೨೭ ॥

ಕೆದಱಿದವು ಜಡೆಯಕ್ಷಮಾಲೆಗ-
ಳುದುರಿದವು ಕರದಲಿ ಕಮಂಡಲ-
ವದಱಿದವು [1]ಹಳಿವಾ[1]ಯ್ತು ಹರಿಣಾಜಿನ ಮುನೀಶ್ವರರ।
ಕದಡಿತಂಗವಿಭೂತಿ ಕಡುಗೋ-
ಪದಲಿ ಹರಿದನು ಹರಗಿರಿಯ ಹ-
ತ್ತಿದರು ಕಂಡರು ರಾಜಮೌಳಿಯ ರಾಜಮಂದಿರವ ॥ ೨೮ ॥

---

೨೬ [1]ವ (ಅ), ಸ್ವೀಪಾ (ಓ). [2]ಧೈರ್ಯ (ಅ ಉಮಾ), ಧ್ವೈತ(ಓ); ಸ್ವೀಪಾ (ಕ).
[ಅದ್ವೈತದನುಸಂಧಾನ-'ಅಹಂ ಬ್ರಹ್ಮಾಸ್ಮಿ' ಎಂಬ ತತ್ವದ ಗಾಢ ಚಿಂತನ. ಜವನಿಕೆ ತೆರೆ ಜಿವಾತುಮ-ಜೀವಾತ್ಮ ಅಂದರೆ ಪ್ರತಿಯೊಂದು ಜೀವಿಯಲ್ಲೂ ಸಾಕ್ಷಿರೂಪದಲ್ಲಿ ನೆಲಸಿರುವ ಪರಮಾತ್ಮ. ಧ್ಯೇಯ-ಧ್ಯಾನದ ಗುರಿ, ವಸ್ತು. ತ್ರಿಪುಟ-ಧ್ಯಾನ, ಧ್ಯೇಯ, ಧ್ಯಾನಿ ಅಥವಾ ಜ್ಞಾನ, ಜ್ಞೇಯ, ಜ್ಞಾತೃ—ಈ ಮೂರರ ಬೇರ್ಪಡಿಸಲಾಗದ ಸಂಗಡಿಕೆಗೆ 'ತ್ರಿಪುಟ' ಎಂದು ವೇದಾಂತದ ಪರಿಭಾಷೆ].

೨೭ [1]ಮುಸಗಿ (ಅ ಕುಮಾ ಅ). ಸ್ವೀಪಾ (ಕ).
[ಸ್ವೈವರಿ-ರಭಸದಿಂದ ಮುಂದುವರಿ. ಪರಿಧೌತ-ಚೆನ್ನಾಗಿ ಬೆಳಗಲ್ಪಟ್ಟ].

೨೮. [1]ಳುವಾ (ಅ ಕುಮಾ), ಳುಗಾ (ಅ) ; ಸ್ವೀಪಾ (ಓ).
[ಅಕ್ಷಮಾಲೆ-ಜಪಸರ. ಹಳಿವು-ನಿಂದೆ. ಹರಿಣಾಜಿನ-ಜಿಂಕೆಯ ಚರ್ಮ, ಕೃಷ್ಣಾಜಿನ. ಹರಗಿರಿ-ಕೈಲಾಸಪರ್ವತ. ರಾಜಮೌಳಿ-ಚಂದ್ರಮೌಳಿ, ಈಶ್ವರ].

ಶಾಂತಿಯೋ ಮನೆ ನಿಮ್ಮ ಚರಣದ
ಚಿಂತೆಯೋ ಮನೆವಾರ್ತೆ ವರವೇ-
ದಾಂತ ತತ್ವರಹಸ್ಯಮನನಾದಿಗಳು ಸರ್ವಸ್ವ ।
ದಾಂತಿಯೋ ಸುಖಭೋಗ ಮಾಯಾ-
ಶ್ರಾಂತಿಯೋ ಮಾಹಾತ್ಮ್ಯಯಿವು ಋಷಿ
ಸಂತತಿಗೆ ವರ್ತನವಲೇ ವೈದಿಕವಿಧಾನದಲಿ ॥ ೨೯ ॥

ಹೋದ ಹೊಲಬಿಲ್ಲಿವಡಿಕೊಳಗೆ ದು-
ರ್ಭೇದ ತಪವೇ ಕೊಗೆಯುತಿದೆ ಹೊ-
ಳ್ಳಾದುದೆಮ್ಮ ಸಮಾಧಿ ಸೈರಣೆ ಶಮದಮಾದಿಗಳು ।
ಕಾದುದಾ ವನಭೂಮಿ ತರುಗು-
ಲ್ಮಾದಿಗಳು ಕಟ್ಟೊಣಗಲಾದವು
ತೀದು[1]ದೆಮ್ಮಯ ನಿತ್ಯವಿಧಿಯೊಬ್ಬನ [ವಿಕಾರದಲಿ][1] ॥ ೩೦ ॥

ರಾಯನೋ ಮೇಣವನು ರಾವುತ
[1]ನಾಯಕ[1]ನೊ ಋಷಿಯಲ್ಲ ಋಷಿಗೇ-
ಕಾಯುಧಂಗಳ ಗೊಡವೆ ನಮಗೇಕದಟ ಬೂತಾಟ ।
ಸಾಯಕದ ಬತ್ತಳಿಕೆ ಚಾಪವ-
ಡಾಯುಧದ ಕುಶೆವೆರಳ ಜಡೆಗಳ-
ನಾಯತದಲನುಚಿತದ ಸಂಗದ ತಪಸಿ [2][ಯಿವನಾರೋ][2] ॥ ೩೧ ॥

---

೨೯. [ಮನೆವಾರ್ತೆ–ಗೃಹಕೃತ್ಯ. ದಾಂತಿ–ದಮನ, ಸಂಯಮ, ನಿರೋಧ. ಶ್ರಾಂತಿ–ನಿಗ್ರಹ, ತಡೆಗಟ್ಟುವಿಕೆ].

೩೦. [1]ದೆಮ್ಮಯನಿತ್ಯವಿಧಿಯೊಬ್ಬನದೆಸೆಯಲಿಂದು (ಅ ಕುಮಾ), ದೊಬ್ಬನ ದೆಸೆಯಲೆಮ್ಮನಿತ್ಯವಿಧಿಯೆಂದ (ಅ).

[ಹೊಲಬು–ಹಾದಿ, ದಾರಿ. ಹೊಳ್ಳು–ಟೊಳ್ಳು, ನಿಷ್ಪ್ರಯೋಜಕ. ಗುಲ್ಮ–ಪೊದೆ].

೩೧. [1]ಪಾಯಕ (ಅ ಕುಮಾ). [2]ಯಿಹನೆಂದ (ಅ), ಯಹನೆಂದ (ಅ ಕುಮಾ).

[ರಾವುತ–ಕುದುರೆ ಸವಾರ. ಸಾಯಕ–ಬಾಣ. ಅನಾಯತ–ಅಲ್ಪ, ಸಣ್ಣದು. ಕುಶೆ–ದರ್ಭೆ].

ಆಡಿದೊಡೆ ನಾವ್ ಮುನಿಗಸೂಯೆಯು
ಮಾಡಿದವರಿದ ನಿಮ್ಮಡಿಗೆ ನಾ-
ವಾಡದಿರ್ದೊಡೆ ಬಿಸಿಲರಾಶಿಯನುರಿಯ ಸೂತಕವ ।
ಕೂಡಿತೆಮ್ಮಯ ನಿತ್ಯವಿಧಿ ತಪ-
ಗೇಡಿಯನು ಬಿಡವೆಬ್ಬಿಸೆವುಗೆಡೆ-
ಮಾಡಿಕೊಡಬೇಕೆಂದು ಮೆಯ್ಯಿಕ್ಕಿತು ಮುನಿಸ್ತೋಮ ॥ ೩೨ ॥

ಅಱಿದೆನಾನಂಜದಿರಿ ಹುಯ್ಯಲ
ಬಱಿದೆ ತಂದಿರಿ ನಿಮ್ಮ ಗೆಲವಿಂ-
ಗೆಱಗುವವನವನಲ್ಲ ಬೇಱಿಹುದಾತನಂಗವಣೆ ।
ಅಱುಹಲೇಕೆ ಭವತ್ತಪೋವನ-
[1][ವೆ]ಱ[3][1] ನಿಮಗೆ ನಾನವನನೆಬ್ಬಿಸಿ
ತೆಱಹ ಮಾಡಿಸಿಕೊಡುವೆನೆಂದನು [2]ತ್ರೈಪುರಧ್ವಂಸಿ[2] ॥ ೩೩ ॥

ತೆಗೆದು ತಲೆಮಾಲೆಯನು [1]ಹಸುರಂ-
ಗಿಗಳ[1] ತೊಟ್ಟನು ಸುತ್ತ[2]ವ[2]ರೆ ಹೀ-
ಲಿಗಳ ಹರಹಿನ ಪಾರಿವದ ಚಲ್ಲಣವ[3]ವೆಂಠಣಿಸಿ[3] ।
ಬಿಗಿಜಡೆಯ ಶಶಿ ಮು[4]ಸು[4]ಕೆ ಪತ್ರಾ-
ಳಿಗಳ ಕಟ್ಟಿ ಕಿರಾತವೇಷದ
ವಿಗಡ ದೇವರದೇವ ಕೊಂಡನು ಚಾಪಮಾರ್ಗಣವ ॥ ೩೪ ॥

---

೩೨. [ಸೂತಕ–ಮೈಲಿಗೆ (ನಿತ್ಯವಿಧಿ ತಪ್ಪಿದುದರಿಂದ ಉಂಟಾದ ಮೈಲಿಗೆ). ಎಡೆ–ಅವಕಾಶ. ಮೆಯ್ಯಿಕ್ಕು–ನಮಸ್ಕರಿಸು].

೩೩. [1]ನೆರೆ (ಅ ಕುಮಾ), ನೆಱ[3] (ಕ ಓ k ಅ). [2]ನಗುತ ಶಶಿಮೌಳಿ (ಆ ಕುಮಾ). ನಗುತ ಮದನಾರಿ (ಅ) ; ಸ್ವೀಪಾ (ಓ).
[ಅಂಗವಣೆ–ವಿಧಾನ, ಉದ್ದೇಶ. ಎಱ[3] (ಎರೆ ?)–ಎಡೆ, ಭೂಮಿ].

೩೪. [1]ಹಾರಂಗಿಗೆಯ (ಕ), ಹಸುರಂಗಿಗೆಯ (ಅ). [2]ಬ (ಆ ಕುಮಾ), ಸ್ವೀಪಾ (ಓ k) [3]ನಳವಡಿಸಿ (ಆ ಕುಮಾ), ಸ್ವೀಪಾ (ಕ ಓ k). [4]ಖ (ಆ ಕುಮಾ),
[ಪಾರಿವದ–ಹಸುರಿನ (?). ವೆಂಠಣಿಸು–ಅಳವಡಿಸು, ತೊಡು. ಮುಸುಕೆ–ಮುಚ್ಚಿಹೋಗುವಂತೆ. ಮಾರ್ಗಣ–ಬಾಣ].

ಚಾಳಿಸಿದ ಹದವಿಲ್ಲುಗಳ ಬಡಿ-
ಗೋಲುಗಳ ಸಂಕಲೆಯು ನಾಯ್ಗಳ
ಕೋಲುವಲೆಗಳ [1]ಕಣ್ಣವಲೆ ದಡಿವಲೆಯು ನಿಡುವಲೆಯು[1] ।
ಕಾಲುಗಣ್ಣಿಯು ಹೆಬ್ಬಲೆಯು ಬೆ-
ಳ್ಳಾ[2]ಲಹೊಜು[32] [3]ಗಳೆಗಳಂ[3]ಟಿನ
[4]ಗಾಳಿಗೊಂ[4]ಬಿನ ಬೇಟೆಗಾಱರು ಬಳಸಿದರು ಶಿವನ ॥ ೩೫ ॥

ಶ್ರವಣಮನನದ ಬೀಸುವಲೆ ಶಾಂ-
ಭವಸುವೇ[1]ದದ[1] ದೀಕ್ಷೆಗಳ ಬಲು-
ಗವಣೆಗಳ ಪಶುಪಾಶಬಂಧದ ಬೋಳೆಯಂಬುಗಳ ।
ನವವಿಧಾಮಳ ಭಕ್ತಿಗಳ ರಣ-
ದವಕದೀಹದ ಹುಲ್ಲೆಗಳ ಮೃಗ
ಭವವಿದಾರಣ ಸುಭಟರೈದಿತು ಶಿವನ [2]ನೇಮದಲಿ[2] ॥ ೩೬ ॥

ಇಂಬಿನಲ್ಲಿಹ ಮೂಕದಾನವ-
ನೆಂಬನೊಬ್ಬನು ತನ್ಮಹಾದ್ರಿನಿ-
ತಂಬವನದ ನಿಕುಂಜ[1]ದಲಿ[1] ನಿರ್ಭಯವಿಹಾರದಲಿ ।
ಚುಂಬಿಸಿತು ಬಲುರಭಸ[2]ವದು[2] ವಿಲ-
ಯಾಂಬುಧಿಯು ಕಳಕಳವನಮರರ
ಕಿಂಬೆನೀಕ್ಷಣವೆನುತ ಖಳನಾಲಿಸಿದ ನಾ[3]ಲ್ದೆಸೆ[3]ಯು ॥ ೩೭ ॥

---

೩೫. [1]ಸಿಡಿವಲಯು, ಮಿಡಿವಲೆಯು, ದಡಿವಲೆಯ (ಅ ಕುಮಾ), ಸ್ವೀಪಾ (ಓ). [2]ರವಲೆಗಳ (ಅ ಕುಮಾ), ಸ್ವೀಪಾ (ಕ k). [3]ಮಯಣದಂ (ಅ ಕುಮಾ), ಸ್ವೀಪಾ (ಕ ಓ k ಅ). [4]ಮೇಲುಕೊಂ (ಅ ಕುಮಾ), ಸ್ವೀಪಾ (ಕ k ಪ್ರ). [ಚಾಳಿಸು–ಚಲಿಸು. ಸಂಕಲೆ (=ಶೃಂಖಲೆ)–ಸರಪಳಿ. ಕಣ್ಣವಲೆ–ಹಗ್ಗದ ಬಲೆ. ದಡಿವಲೆ–ಕೋಲಿಗೆ ಕಟ್ಟಿದ ಬಲೆ. ನಿಡುವಲೆ–ಉದ್ದನೆಯ ಬಲೆ. ಬೆಳ್ಳಾಲ–ಬಿಳಿಯ ಬಲೆ. ಗಳೆಗಳಂಟಿನ–ಅಂಟುಸವರಿದ ಗಣೆ, ಬಿದಿರುಕೋಲು. ಗಾಳಿಗೊಂಬು–ಊದುವ ಕೊಂಬು].

೩೬. [1]ದಾ (ಅ ಕುಮಾ, ಪ್ರ). [2]ಬಳಸಿನಲಿ (ಅ).
[ಶಾಂಭವ–ಈಶ್ವರನಿಗೆ ಸಂಬಂಧಿಸಿದ. ಬಲುಗವಣೆ–ಬಲವಾದ ಕವಣೆಕಲ್ಲು. ಬೋಳೆಯಂಬು–ಒಂದು ಬಗೆಯ ಬಾಣ. ದೀಹ–ಬೇಟೆಗೆ ಲಕ್ಷ್ಯವಾಗಿರಿಸಿದ ಮೃಗ. ಭವ–ಹುಟ್ಟು. ವಿದಾರಣ–ಸೀಳುವುದು, ನಾಶಮಾಡುವುದು].

೩೭. [1]ನಲಿ (ಅ ಆ ಕುಮಾ), ಸ್ವೀಪಾ (ಪ್ರ). [2]ವೆನೆ (ಅ ಕುಮಾ). [3]ಧ್ವನಿ (ಸರ್ವತ್ರ), ಸ್ವೀಪಾ (ಕ).

ಹಂದಿಯಾದನು ದನುಜನಾಗಿರಿ-
ಕಂದರವ ಹೊಱವಂಟು ಬೇಂಟೆಯ
ಮಂದಿಯೊಳಗಡಹಾಯ್ದ ನೆತ್ತಿದನಡ್ಡಬಿದ್ದವರ ।
ಹಂದಿಯೋ [1]ತಡೆ[1] ನಾಯ್ಗಳನು [2]ಬಿಡು[2]
ಹಿಂ[3]ದ[3] ಹಿಡಿ ಕೆಡೆಗುತ್ತು ಕೈಕೊ-
ಳ್ಳೆಂದು ಗಜಬಜಿಸಿತ್ತು ಗಾವಳಿ ಗಹನಮಧ್ಯದಲಿ ॥ ೩೮ ॥

ಎಳವೆೞ[3]ಯ ನಡುವಿರ್ದ ರಾಹುವೊ-
[2]ಲಳವಡುವ ದಾಡೆಗಳ[1]ದೊಯ[1]ವಿಗೆ[2]
ಬೆಳೆದ [3]ನೀಲಾಚಲಕೆ ಸರಿಯೆಂದೆನಿಪ ಹೇರೊಡಲ[3] ।
ಮುಳಿದು [4]ಗರ್ಜಿಸಿ ಕಿಡಿಸುರಿವ ಕಂ-[4]
[5][ಗಳ ಸ][5][6]ರೌದ್ರಾಟೋಪದಲಿ[6] ಕೆ-
ಕ್ಕಳಿಸಿ[7]ದೆಕ್ಕಲ[7] ನೋಡುತಿರ್ದುದು ದೇವಸಂತತಿಯ ॥ ೩೯ ॥

ಕೂಡೆ ಕಟ್ಟಿತು ಭೂತಗಣ ದನಿ-
ಮಾಡಿ ಜಡಿ[1]ದುಪ್ಪ[1]ರಿಸಿ ಮೋಱ[3]ಯ
ನೀಡಿ ನಾಯ್ಗಳು ತುಡುಕಿದವು ತಿರುಗಿದೊಡೆ ಹಿಮ್ಮಡಿಯ ।
ಝಾಡಿಸುತ ಕವಿದೆತ್ತಲೊಂದೇ
ದಾಡೆ ಬರೆ[2]ದುದು[2] ನೂಱು ಗಾಯವ
ನೋಡುತಿರ್ದುದು ಸೇನೆ ಕಂಡನು ಶೂಲಿ ಸೂಕರನ ॥ ೪೦ ॥

---

೩೭. [ಇಂಬು–ಆಸರೆ, ಎಡೆ. ನಿತಂಬ–ತಪ್ಪಲು. ನಿಕುಂಜ–ಮೆಳೆ, ಸಮೂಹ, ಗುಂಪು, ತೋಪು. ಚುಂಬಿಸು–ಸೋಕು, ಮುಟ್ಟು].

೩೮. [1]ಬಿಡು (ಅ ಕ). [2]ಬಿಡಿ (ಅ ಕುಮಾ), ತಡೆ (ಅ k), ಕಡೆ (ಕ). [3]ದೆ (ಅ ಕುಮಾ, ಸ್ವಿಪಾ (ಪ್ರ ಕ k).
[ಕಂದರ–ಕಣಿವೆ. ಹಿಂದಹಿಡಿ–ಬಾಲವನ್ನು ಹಿಡಿದುಕೊ. ಕೆಡೆಗುತ್ತು–ಕೆಳಕ್ಕೆ ಬೀಳುವಂತೆ ಗುದ್ದು. ಗಾವಳಿ–(ಬೇಡರ) ಗುಂಪು. ಗಹನ–ಕಾಡು].

೩೯. [1]ಲೊಗು (ಅ), ದೊಗು (ಕುಮಾ). [2]ಚಲನೆವಡೆದಿರ್ದಂಜನಾದ್ರಿಯೊ (ಅ). [3]ಬೀಳದ ಮೇಘವೋ ಕಾರೊಡಲ ಸೂಕರನೊ (ಅ). [4]ಘುಡುಘುಡಿಸುತ್ತ ಕಿಡಿಕಂ (ಅ). [5]ಗಳಲಿ (ಅ). [6]ಕಾರ್ಬೊಗೆಯುಸಿರಿನಲಿ (ಅ). [7]ದಿಕ್ಕೆಲ (ಅ ಕುಮಾ), ಸ್ವಿಪಾ (ಅ).
[ಎಳವೆೞ[3]–ಬಾಲಚಂದ್ರ. ದೊಯ (ದ್ವಯ)–ಎರಡು. ಹೇರೊಡಲು–ದೊಡ್ಡ ದೇಹ. ಕೆಕ್ಕಳಿಸು–ಕೋಪದಿಂದ ದುರುಗುಟ್ಟಿಕೊಂಡು ನೋಡು. ಎಕ್ಕಲ–ಕಾಡುಹಂದಿ].

ಇದುವೆ ಸಮಯವಲಾ ಎನುತ ಶೂ-
ಲಿದನು ಬಾಣವನುಗಿದು ಪೂರಾ-
ಯದಲಿ ತೂಗಿ ಪಿನಾಕಿ ಯೆಚ್ಚನು ಮೂಕದಾನವನ ।
ಒಡೆದು ಹಾಯ್ದುದು ಬಾಣ ಗಱಿದೋ-
ಱಿದುದು ಬದಿಯಲಿ ಕೆಡಹಿ [1]ಘೀ[1]ಳಿಡು-
ತದು ಧನಂಜಯನತ್ತ [2]ಹರಿ[2]ದುದು ಹೊತ್ತ ಕಣೆಸಹಿತ || ೪೧ ||

ಕಂಡನರ್ಜುನನೀ ವರಾಹನ
ದಂಡಿ ಲೇಸಲ್ಲೆನುತ [1]ಬಾಣವ
ಗಾಂಡಿವದೊಳಳವಡಿಸಿ[1] ಬೊಬ್ಬಿಱಿದೆಚ್ಚನಾ ಖಳನ ।
ದಿಂಡುಗೆಡೆದುದು ಕಾಲ ಕೊಡಹು[2]ತ
ಗಂಡಶೈಲದವೋಲು ಭೂತವ
ದಿಂಡುದಱಿದಾ[2] ಹಂದಿ ಬಿದ್ದುದು ಪಾರ್ಥನಿದಿರಿನಲಿ || ೪೨ ||

ಬಂದನೀಶ್ವರ ನಾವು ಕೆಡಹಿದ
ಹಂದಿ ನಮ್ಮದು ತೆಗೆಯ ಎನೆ ನರ-
ನೆಂದನೆಮ್ಮಂಬಿನಲಿ ಬಿದ್ದುದು ಸಾರು ನೀನೆನಲು ।
ಬಂದುದೇಕಾಮಿಷವಿರೋಧದ
[1]ಕಂದು[1] ಪಾರ್ಥನ ಚಿತ್ತದಲಿ ಬಾ-
ಲೇಂದುಧರನೆಂದೆತ್ತ ಬಲ್ಲನು ಕೆಣಕಿದನು ಶಿವನ || ೪೩ ||

---

೪೦. [1]ದುಬ್ಬ (ಅ), ದಬ್ಬ (ಆ ಕುಮಾ), ಸ್ಕೀಜಾ (k ಪ್ರ). [2]ತುದು (ಅ).
[ಸೂಕರ-ಹಂದಿ. ಶೂಲಿ-ಈಶ್ವರ].

೪೧. [1]ಗೋ (ಅ ಕುಮಾ). [2]ಹೋ (ಅ ಕುಮಾ), ಹಾಯ್ (ಅ)
[ಪೂರಾಯ-ಹೆಚ್ಚಾದ, ಪೂರ್ಣಪ್ರಮಾಣದ, ವಿಶೇಷವಾದ. ಪಿನಾಕಿ-ಈಶ್ವರ. ಬದಿ-ಪಕ್ಕ. ಹರಿ-ವೇಗವಾಗಿ ಓಡು].

೪೨. [1]ಶರದಲಿ ಗಾಂಡಿವವ ಧನಿಮಾಡಿ (ಕ), ಶರವನು ಗಾಂಡಿವದ ಮೈಗೂಡಿ (ಪ್ರ k). [2]ವಗಂಡಶೈಲವೊ ಭೂತನಿಕರವ ದಿಂಡುಗೆಡಹಿದ (k). [3]ದರಿಯುವ (ಅ ಕುಮಾ), ಗೆಡಹಿದ (ಪ್ರ), ದಿದುಹಿದ (ಅ).
[ದಂಡಿ-ಸರಿಸಮನಾದ. ದಿಂಡುಗೆಡೆ-ದಿಂಡಿನಂತೆ ಬೀಳು. ಗಂಡಶೈಲ-ಬೆಟ್ಟದಿಂದ ಉರುಳಿಬಿದ್ದ ದೊಡ್ಡ ಬಂಡೆ. ದಿಂಡುದರಿ-ದಿಂಡು ಕತ್ತರಿಸುವಂತೆ ಕತ್ತರಿಸು, ತುಂಡುಮಾಡು].

೪೩. [1]ಕುಂದು (ಅ ಕುಮಾ ಪ್ರ).
[ಕಂದು-ಕಳಂಕ, ಕಪ್ಪು. ಆಮಿಷ-ಒಡ್ಡಿದ ಆಸೆ. ಸಾರು-ಹೋಗು].

ಎಲೆ ಕಿರಾತ ಮದೀಯ ಬಾಣದ
ಬಲಿಗೆ ನೀ ಮೃಗವಾಗದಿರು ನಿ-
ನ್ನಳವ ಮೆಱೆಯಾ ಬನದ ನರಿನೊಲಹುಲ್ಲೆ [1]ಹಕ್ಕಿಯಲಿ[1] ।
ಗೆಲಿದ ಗರುವನು ನೀನು ನಿನ್ನ-
ಗ್ಗಳಿಕೆಗೆಗಾವಂಜುವೆವು [2]ನಿನ್ನೀ-
ದಳಕೆ[2] ಪತಿಯುಂಟಾದೊಡಾತನ ಕೊಂಡು ಬಾ ಯೆಂದ ॥ ೪೪ ॥

ಎನಲು ನಕ್ಕನು ಶಂಭು ಭಕ್ತನ
ಮನದ ಧೃತಿಯನು ಭುಜಬಲವನಾ-
ತನ ಪರಾಕ್ರಮಲಕ್ಷ್ಮಿಯನು ಪಾರ್ವತಿಗೆ ತೋಱಿಸುತ ।
ನೆನೆದು ನುಡಿದನಿದೇನು ತಮ್ಮಡಿ
ನಿನಗೆ ತಪದಲಿ ಖಡ್ಗವೇಕೀ
ಧನುಶರಾವಳಿಯೇಕೆ ನಿನ್ನಂಗವಣೆ ಯೇನೆಂದ ॥ ೪೫ ॥

ಕಟಕಿಯೇಕೆ ಪುಳಿಂದ ನಾವು-
ಬ್ಬಟೆಯ ತಪಸಿಗಳೆಂಬುದಿದು ಪರಿ-
*ಸ್ಫುಟವಲೇ ತಪ್ಪೇನು ನಿನ್ನೊಡನೆಂದು ಫಲವೇನು ।
ಜಟೆಮೃಗಾಜಿನ ಭಸ್ಮದೊಡನು-
ತ್ಕಟ ಧನುಶ್ಶರಖಡ್ಗದಲಿ ಧೂ-
ರ್ಜಟಿಯಿಹನು ನಾವವರ ಶಿಷ್ಯರು ಶಬರ ಕೇಳೆಂದ ॥ ೪೬ ॥

ಮಂಜು ಮುಸುಕಿದೊಡೇನು ಪರ್ವತ-
ವಂಜುವುದೇ ಹಾಲಾಹಲವ ನೊಣ-
ನೆಂಜಲಿಸುವುದೆ ವಡಬಶಿಖಿ ನನೆವುದೆ ತುಷಾರದಲಿ ।

---

೪೪. [1]ಹರಿಣನ (ಅ ಆ ಕುಮಾ ಪ್ರ), ಸ್ವೀಪಾ (ಓ). [2]ನೀನೀ ಬಲಕೆ (ಪ್ರ k). [ಮದೀಯ-ನನ್ನ. ಮೃಗ-ಬಲಿಪಶು].

೪೫. [ತಮ್ಮಡಿ-ತಪಸ್ವಿ. ಅಂಗವಣೆ-ಇಚ್ಛೆ, ಅಭಿಪ್ರಾಯ, ಆಶಯ].

೪೬. [ಕಟಕಿ-ವ್ಯಂಗ್ಯ, ಚುಚ್ಚುಮಾತು. ಪುಳಿಂದ-ಶಬರ, ಬೇಡ. ಉಬ್ಬಟೆ-ಆಡಂಬರ, ಆಟಾಟೋಪ, ಆಷಾಢಭೂತಿತನ. ಪರಿಸ್ಫುಟ-ಬಲು ಸ್ಪಷ್ಟ. ಧೂರ್ಜಟಿ-ಈಶ್ವರ].

ಕಂಜನಾಳದಿ ಕಟ್ಟುವಡೆವುದೆ
ಕುಂಜರನು ನರಶರದ ಜೋಡಿನ
ಜುಂಜುವಳೆಯಲಿ ಜಾಹ್ನವೀಧರ ಜಾಱುವನೆ ಯೆಂದ ॥ ೪೭ ॥

ಎನುತ ಕೊಂಡನು ಧನುವನಾ ಪಾ-
ರ್ಥನ ಶರೌಘವನೆಚ್ಚೊಡೀಶನ
ವೊನೆಗಣೆಯಲಕ್ಕಾಡಿದವು ಬಾಡಿದವು ಬಳಿಸರಳು ।
ಕನಲಿ ಕಿವಿವರೆಗುಗಿದು ಫಡ ಹೋ-
ಗೆನುತ ಮಗುಳೆಚ್ಚನು ಧನಂಜಯ-
ನನಿತು ಶರವನು [1]ಸವಱಿ[1] ಮದನವಿರೋಧಿ ಮಗುಳೆಚ್ಚ ॥ ೪೮ ॥

ಈಡಿಱಿದವೊಂದೊಂದಱಲಿ ಹೊಗೆ
ಝಾಡಿ ಝಳಪಿ[1]ಸುವು[1]ರಿಗಳಲಿ ಸರ-
ಳೋಡಿದವು ಗಾಂಡಿವವನೊದೆದು ಮಹೇಶನಿದಿರಿನಲಿ ।
ಕಾಡಿದೊಡೆ ಕಾರುಣ್ಯನಿಧಿ ಕೊಂ-
ಡಾಡುತಿರ್ದನು ಪಾರ್ಥನಂಬಿನ
ಮೂಡಿಗೆಯ ಸಂವರಣೆ ಸವೆದುದು ಸವೆಯದಾಟೋಪ ॥ ೪೯ ॥

ಅಂದು ಖಾಂಡವವನದ ದಹನದಿ
ಬಂದುದಕ್ಷಯಬಾಣ[1]ಬಾಣಧಿ[1]
[2]ನಿಂ[2]ದು ಬಱತು[3]ದೆ[3] ಬಹಳಜಲನಿಧಿ ಬತ್ತುವಂದದಲಿ ।

---

೪೭. [ಹಾಲಾಹಲ-ಭಯಂಕರವಾದ ವಿಷ. ಎಂಜಲಿಸು-ನೆಕ್ಕು. ವಡಬಶಿಖಿ-ಬಡಬಾನಲ, ಸಮುದ್ರದ ತಳದಲ್ಲಿ ಇರುವುದೆಂದು ಹೇಳಲಾದ ಬೆಂಕಿ. ಕಂಜನಾಳ-ತಾವರೆಯ ದಂಟು. ಕುಂಜರ-ಆನೆ. ಜುಂಜುವಳೆ-ತುಂತುರು ಮಳೆ. ಜಾಹ್ನವೀಧರ-ಗಂಗಾಧರ, ಶಿವ].

೪೮. [1]ಕಡಿದು (ಅ ಆ ಕುಮಾ), ಸ್ವೀಪಾ (ಪ್ರ k).
[ಶರೌಘ-ಬಾಣಗಳ ಸಮೂಹ. ಅಕ್ಕಾಡು-ನಾಶವಾಗು. ಬಳಿಸರಳು-ಅಮೋಘವಾದ ಬಾಣ, ಬೆಂಬತ್ತುವ ಬಾಣ. ಕನಲು-ಕೋಪಗೊಳ್ಳು. ಉಗಿ-ಸೆಳೆ. ಸವಱು-ಕತ್ತರಿಸು, ಕಡಿದುಹಾಕು].

೪೯. [1]ಸೆಲು (ಅ ಕುಮಾ), ಸಿಲು (ಅ).
[ಈಡಿಱಿ-ಸಮ ಸಮವಾಗಿ ತಾಗು. ಮೂಡಿಗೆ-ಬತ್ತಳಿಕೆ. ಸಂವರಣೆ-ಸಿದ್ಧತೆ, ಸಜ್ಜು. ಸವೆ-ತೀರಿಹೋಗು].

ಇಂದುಮೌಳಿಯು ಸೇವೆಗಿಂದು ಪು-
ಳಿಂದ ಕಂಟಕನಾದನೇ ಹಾ
ಯೆಂದು ಗರ್ಜಿಸಿ ಚಾಪದಿಂದಪ್ಪಳಿಸಿದನು ಶಿವನ ॥ ೫೦ ॥

ಕಳಚಿದನು ದಂಡೆಯ[1]ಲಿ[1] ಗಾಯ[2]ವ-
ನ[2]ಳುಕಿದನಲಾ ಎನುತ ಮಗುಳ-
ಪ್ಪಳಿಸಿದನು ಮೇಲ್ವಾಯ್ದು ಹೊಯ್ದನು ಜಱಿ[3]ದು ಝೋಂಪಿಸುತ।
ಮೆಲುನಗೆಯಲರ್ಜುನನ ಚಾಪವ
ಸೆಳೆದುಕೊಂಡನು ತನ್ನ ಭಕ್ತನ
[3]ಬ[3]ಳವಿಗೆಯ ಮಾಡಿದನುಘೇಯೆಂದುದು ಸುರಸ್ತೋಮ ॥ ೫೧ ॥

ತಿಳಿವನುಗಿದಡಿಗಿಕ್ಕಿ ಮಱವೆಯ
ಕಳಕ[1]ಳಿಕೆ[1] ಮೇ[2]ಲ್ವಾಯ್ದು[2] ತಾಮಸ-
ಜಲನಿಧಿಯ ತಾಯ್ಮಳಲ ಮುಟ್ಟಿತು ಮನ ಧನಂಜಯನ।
ಸೆಳೆದನೊಱ[3]ಯಲಡಾಯುಧವ ಬೀ-
ಳೆಲವೊ ಶಬರಯೆನುತ್ತ ಹೊಯ್ದನು
ತಳಿರೆಲೆಯ ತಳೆದ[3]ಳವೆಱ[3]ಯ ನೆಲೆವನೆಯ ಪಶುಪತಿಯ ॥ ೫೨ ॥

---

೫೦. [1]ವಿದುತಾ (ಅ ಆ ಕುಮಾ), ಸ್ವೀಪಾ (ಓ k ಪ್ರ). [2]ಇಂ (ಅ), ಸ್ವೀಪಾ (ಪ್ರ ಕುಮಾ). [3]ದು (ಆ ಅ ಕುಮಾ), ಸ್ವೀಪಾ (ಕ).
[ಬಾಣಧಿ–ಬತ್ತಳಿಕೆ. ಬಱತುದೆ–ಮುಗಿದುಹೋಯಿತಲ್ಲಾ. ಕಂಟಕ–ವಿಘ್ನ].

೫೧. [1]ನು (ಅ). [2]ದಲ (ಆ ಕುಮಾ). [3]ಬೆ (ಅ ಆ ಪ್ರ ಕುಮಾ), ಸ್ವೀಪಾ (ಓ).
[ಕಳಚು–ನಿವಾರಿಸು. ದಂಡೆ–ಗುರಾಣಿ: ಗಾಯವಾಗುವುದನ್ನು ಗುರಾಣಿಯಿಂದ ನಿವಾರಿಸಿಕೊಂಡನು. ಅಳುಕು–ಹೆದರು. ಮಗುಳು–ಮತ್ತೆ, ಮರಳಿ. ಬಳವಿಗೆ–ಏಳಿಗೆ, ಅಭಿವೃದ್ಧಿ].

೫೨. [1]ಳವೆ (ಅ ಕುಮಾ), ಸ್ವೀಪಾ (ಅ k). [2]ಲಾಯ್ತು (ಅ ಆ), ಸ್ವೀಪಾ (ಕ ಕುಮಾ). [3]ಳವರೆ (ಅ), ಳೆವೆರೆ (ಅ ಕುಮಾ), ಲೆವೆರೆ (k) ; ಸ್ವೀಪಾ (ಕ ಓ).
[ತಿಳಿವು–ಪ್ರಜ್ಞೆ. ಉಗಿದು–ಹೊರಕ್ಕೆ ಹಾಕಿ. ಕಳಕಳಿಕೆ–ಪ್ರಭಾವ, ಪರಿಣಾಮ. ತಾಮಸ ಜಲನಿಧಿ–ತಮೋಗುಣವೆಂಬ ಸಮುದ್ರ. ತಾಯ್ಮಳಲು–ಅತ್ಯಂತ ತಳಭಾಗದ ಮರಳು. (ತಾಮಸ ಜಲನಿಧಿಯ... ಧನಂಜಯನ....ಅರ್ಜುನನ ಮನಸ್ಸು ಅವನ ತಮೋಗುಣದ ಅತ್ಯಂತ ಆಳವನ್ನು ಸೋಕಿತು ಎಂದರೆ ತಮೋ ಗುಣವು ಅತ್ಯಂತ ಉತ್ಕರ್ಷಕ್ಕೆ ಬಂದಿತು). ಎಳವೆಱ[3]–ಬಾಲಚಂದ್ರ. ನೆಲೆವನೆ–ಆಶ್ರಯ].

*ಆಯುಧದ ಬರಿಮುಷ್ಟಿಯುಳಿಯಲ-
ಡಾಯುಧವ ಶಿವ ಕೊಂಡನೀತನ
ಬಾಯಹವಣಿನ ತುತ್ತಹುದೆ ತ್ರಿಪುರಾರಿಯೊಡ್ಡವಣೆ ।
ರಾಯ ಕೇಳೈ ಪಾರ್ಥನುಬ್ಬಟೆ
ಬೀಯದೀಸಜ ಮೇಲೆ ಮತ್ತೆ ವಿ-
ಡಾಯಿಯಾಯ್ತು ಚಪಲತನದ ವಿವೇಕ ಮಡಮುರಿಯೆ ॥ ೫೩ ॥

*ಮರ[1]ನ[1] ಹೆಗ್ಗೊಂಬುಗಳಲಿಟ್ಟನು
ಕಿರುಹಿ ಕಲ್ಗುಂಡುಗಳ ಮಳೆಯಲಿ
ಹರನ [2]ನಾದಿದ[2]ನೇನನೆಂಬೆನು ಪಾರ್ಥನುರವಣೆಯ ।
ಸರಳಸಾರದಲಿನಿತುವನು ಕ-
ತ್ತರಿಸಿ ಕರುಣಾವನಧಿ ನುಡಿದನು
ಮರು[3]ಳೆ[3] ತಮ್ಮಡಿ ಕೈದುವುಳ್ಳೊಡೆ ಕೊಂಡು ಬಾ ಯೆಂದ ॥ ೫೪ ॥

ಕೈದುವೇಕೆ ಪುಳಿಂದ ನಮ್ಮೊಡ-
ನೈದಿಸಾ ಭುಜಯುದ್ಧದಲಿ ಬಲು-
ಗೈದುವಿದೆಲಾ ಮುಷ್ಟಿ ನಿನಗಡುಪಾಯ ಚೊಕ್ಕೆಯವ ।

೫೩. [ಬರಿಮುಷ್ಟಿ-ಕೇವಲ ಹಿಡಿಕೆ. ಬಾಯಹವಣಿನ ತುತ್ತು-ನುಂಗಲು ಸಾಧ್ಯವಾದ ಪ್ರಮಾಣದ ತುತ್ತು ಎಂದರೆ ಸಹಿಸಿಕೊಳ್ಳಬಹುದಾದದ್ದು. ಒಡ್ಡವಣೆ-ಸನ್ನಾಹ. ಉಬ್ಬಟೆ-ಆಟೋಪ. ಬೀಯದು-ನಾಶವಾಗಲಿಲ್ಲ, ಮುಗಿಯಲಿಲ್ಲ. ಈಸರ ಮೇಲೆ-ಇಷ್ಟರ ಮೇಲೆ. ಚಪಲತನ-ಯುದ್ಧಮಾಡಬೇಕೆಂಬ ಚಪಲವು. ವಿಡಾಯಿಯಾಯ್ತು-ಹೆಚ್ಚಿತು. ಮಡಮುರಿ-ಹಿಮ್ಮೆಟ್ಟು].

೫೪ [1] ದ (ಅ). [2] ಮುಸುಕಿಡ (ಪ್ರ ಅ), ಸ್ವೀಪಾ (ಕುಮಾ). [3] ಳು (ಅ).
[ಹೆಗ್ಗೊಂಬು-ದೊಡ್ಡಕೊಂಬೆ. ಇಟ್ಟನು-(ಧಾ. ಇಡು) ಹೊಡೆದನು. ನಾದು-ತೋಯಿಸು. ಉರವಣೆ-ರಭಸ. ಸಾರ-ಸತ್ವ. ಕೈದು ಆಯುಧ].

೫೫. [ಐದಿಸು-ಸೇರಿಸು. ಬಲುಕೈದು-ಬಲವಾದ ಆಯುಧ. ಅಡುಪಾಯಚೊಕ್ಕೆಯ-ಮಲ್ಲಯುದ್ಧದ ಪಟ್ಟುಗಳು. ಐದಿ-ಬಂದು].

** 'ಅ' ಪ್ರತಿಯ ಸಂಗ್ರಹದಲ್ಲಿ ಈ ಎರಡು ಪದ್ಯಗಳೂ ಇಲ್ಲ. ಈ ಪ್ರಸಂಗದ ಘಟನೆಗಳ ಸರಣಿಯ ಅನುಪೂರ್ವಿಯಲ್ಲಿ ಕೊರತೆ ಕಂಡುಬಂದದ್ದರಿಂದ ಈ ಪದ್ಯಗಳನ್ನು ಸೇರಿಸಿಕೊಳ್ಳಲಾಗಿದೆ. ವಾಸ್ತವವಾಗಿ ಮೇಲಿನ ಎರಡನೆಯ ಪದ್ಯವನ್ನು ಸೇರಿಸಿಕೊಳ್ಳಬಹುದೆಂಬ ಸೂಚನೆ 'ಅ' ಹಸ್ತಪ್ರತಿಯಲ್ಲಿ ಮೊದಲು ಇದ್ದು ಅಮೇಲೆ ಕೈಬಿಡಲಾಗಿದೆ. ಈ ಎರಡು ಪದ್ಯಗಳಿಗೆ 'ಕುಮಾ' ವನ್ನು ಅಧಾರಪ್ರತಿಯಾಗಿ ಇಟ್ಟುಕೊಂಡಿದೆ.

ಕಾಯ್ದುಕೊಳ್ಳನುವಾಗು ನಿನ್ನವ-
ರ್ರೈದಿ ನೋಡಲಿ ಎನುತ ಭುಜವನು
ಹೊಯ್ದು ನಿಂದನು ಪಾರ್ಥನುಱೆ ಬೆಱಗಾಗೆ ಭೂತಗಣ ॥ ೫೫ ॥

ಈತ ನರನೆಂಬವ ಕಣಾ ಸಂ-
ಗಾತಿ ನಾರಾಯಣ ಋಷಿಗೆ ತಾ-
ವೀತಗಳು ಹರಿ[1]ಯಂ[1]ಶಭೂತರು ಭಕ್ತರಿವರೆಮಗೆ ।
ಈತನೆಮ್ಮಯ ಪಾಶುಪತ ವಿ-
ಖ್ಯಾತ ಬಾಣವ ಬೇಡಿ ತಪದಲಿ
ವೀತರಾಗದ್ವೇ[2]ಷನಾ[2]ದನು ಕಾಂತೆ ಕೇಳೆಂದ ॥ ೫೬ ॥

ಕೊಡುವೆನೀತಂಗೆಮ್ಮ ಶರವನು
ಮಡದಿ ಮತ್ತೆಯು ನೋಡು ಪಾರ್ಥನ
ಕಡುಹನೆನುತಿದಿರಾತು ಬಾಹಪ್ಪಳಿಸಿ ಬೊಬ್ಬಿಱಿದು ।
ಹಿಡಿದರಿಬ್ಬರು ಕೈಗಳನು ಹೊ-
ಕ್ಕೊಡನೆ ಹತ್ತಾಹತ್ತಿಯಲಿ ಮಿಗೆ
ಜಡಿತೆಯಲಿ ಚಾಳೈಸಿದರು ಬಹುವಿಧಧ ಬಿನ್ನಣವ ॥ ೫೭ ॥

ನಿನಗೆ ನಾ ಬೆಱಗಾದೆ ನೀನಿಂ-
ದೆನಗೆ ಮೆಚ್ಚಿದೆ ದೇವದಾನವ-
ಜನರೆನಗೆ ಪಾಡಲ್ಲ ನೀ ಹಲ್ಲಣಿಸಿದೈ ನಮ್ಮ ।
ಇವನೊ ಮೇಣ್ ದೇವೇಂದ್ರನೋ [1]ಹರ-[1]
ತನುಜನೋ ಹರಿಯೋ ಮಹಾದೇ-
ವನೊ ಕಿರಾತನೊ ನೀನೆನುತ ಮತ್ತೆಱಗಿದನು ಶಿವನ ॥ ೫೮ ॥

---

೫೬. [1]ವಂ (ಕುಮಾ), ಸ್ವೀಪಾ (ಅ). [2]ಷಿಯಾ (ಕುಮಾ), ಸ್ವೀಪಾ (ಅ).
[ಹರಿಯಂಶಭೂತರು–ವಿಷ್ಣುವಿನ ಅಂಶದಿಂದ ಹುಟ್ಟಿದವರು. ವೀತರಾಗದ್ವೇಷ–ಪ್ರೀತಿ ಮತ್ತು ಹಗೆತನಗಳನ್ನು ಬಿಟ್ಟವನು].

೫೭. [ಕಡುಹು-ಸಾಮರ್ಥ್ಯ, ಪರಾಕ್ರಮ. ಇದಿರಾತು-ಎದುರಾಗಿ ನಿಂತು; ಪ್ರತಿಭಟಿಸಿ. ಹತ್ತಾಹತ್ತಿ (=ಹಸ್ತಾಹಸ್ತಿ)-ಕೈಗಳಿಂದ ಒಬ್ಬರನ್ನೊಬ್ಬರು ಹೊಡೆದಾಡುವುದು. ಜಡಿತೆ–ಹೊಡೆತ. ಚಾಳೈಸು–ಪ್ರಯೋಗಿಸು, ಪ್ರದರ್ಶಿಸು. ಬಿನ್ನಣ (ವಿಜ್ಞಾನ)–ಕೌಶಲ್ಯ].

೫೮. [1]ಹರಿ (ಪ್ರ).
[ಪಾಡು–ಈಡು, ಸರಿಸಮಾನ. ಹಲ್ಲಣಿಸು–ಎದುರಿಸು, ಪ್ರತಿಭಟಿಸು. ಇನ–ಸೂರ್ಯ. ಹರತನುಜ–ಕುಮಾರಸ್ವಾಮಿ, ಷಣ್ಮುಖ].

ಗಾಯವನು ಮನ್ನಿಸುತ ಶಿವ ಪೂ-
ರಾಯದಲಿ ಮೆಟ್ಟಿದನು ಪಾರ್ಥನ
ಬಾಯೊಳೊಕ್ಕುದು ರುಧಿರ ನಾಸಿಕದೆರಡು ಬಾಹೆಯಲಿ ।
ನೋಯನೊಂದನು ಮಿಾಱಿ ಮುನಿ[1]ದಡ[1]-
ಪಾಯವಾ[2]ದು[2]ದೆ[3][ಅ]ಕಟಕಟ[3] ತ-
ಪ್ಪಾಯಿತೇ ತಪ್ಪಾಯ್ತೆನುತ ಮಱುಗಿದನು ಮದನಾರಿ ॥ ೫೯ ॥

ಬಿರಿದುದೀತನ ಗರ್ವಗಿರಿ ಮಡ-
ಮುರಿದುದೀತನ ಶಕ್ತಿ ಸಲೆ ಟೆ-
ಬ್ಬರಿಸಿತಿಂದ್ರಿಯವರ್ಗ ನೆಗ್ಗಿತು ನೆನಹಿನೊಡ್ಡವಣೆ ।
ಹರಿದುದಂ[1]ಗ[1]ಸ್ವೇದಜಲ ಕಾ-
ಹುರ[2]ಕೆ[2] ಕಾಲ್ವೊಳೆಯಾಯ್ತು ಮತಿ ನಿ-
ಬ್ಬರದ ಬೆಱಗಿನ [3]ಬೇಗೆಯಲಿ[3] ಬೆಂಡಾದನಾ ಪಾರ್ಥ ॥ ೬೦ ॥

ಈತ ದಿಟಕೆ ಪುಳಿಂದನೇ ವಿ-
ಖ್ಯಾತ ನರ ತಾನಲ್ಲಲೇ ದಿಟ
[1]ಜಾತಿ[1]ಪಾರ್ಥನೆ ತಾ ನಿಧಾನಿಸೆ ಶಬರನಿವನಲ್ಲ ।
ಈತ ಪಲ್ಲಟವಾದನೋ ಮೇಣ್
ಶ್ವೇತತುರುಗನ ಪಲ್ಲಟವೊ ಕುಂ-
ತೀತನುಜ ತಾನಲ್ಲ ನಿಶ್ಚಯವೆ[2]ಂದು[2] ಚಿಂತಿಸಿದ ॥ ೬೧ ॥

---

೫೯. [1]ಯಲ (ಆ ಅ ಕುಮಾ), ಸ್ವೀಪಾ (k). [2]ನು (ಅ). [3]ಅಟಕಟಾ (ಅ), ಯಕಟಕಟ (ಅ), ದಕಟಕಟಾ (ಕುಮಾ).

[ಮನ್ನಿಸುತ-ಸಹಿಸುತ್ತ. ಪೂರಾಯ-ಪೂರ್ಣವಾಗಿ. ಒಕ್ಕುದು-ಸುರಿಯಿತು. ರುಧಿರ-ರಕ್ತ. ಬಾಹೆ-ಹೊರಭಾಗ].

೬೦. [1]ತಃ (ಅ ಅ), ಸ್ವೀಪಾ (ಕ ಓ ಕುಮಾ). [2]ತೆ (ಅ ಅ ಕುಮಾ), ಸ್ವೀಪಾ (ಓ). [3]ಬೇಟದಲಿ (ಆ ಕುಮಾ), ವೇಢೆಯಲಿ (ಅ), ವೇಧೆಯಲಿ (ಕ), ಬಿದೆಯಲಿ (ಓ), ಬೇನೆಯಲಿ (k); ಸ್ವೀಪಾ (ಪ್ರ).

[ಟೆಬ್ಬರಿಸು-ಕುಗ್ಗಿಹೋಗು. ನೆಗ್ಗು-ನಾಶವಾಗು. ಒಡ್ಡವಣೆ-ಸ್ಥಿತಿ. ಸ್ವೇದ ಜಲ-ಬೆವರಿನ ನೀರು. ಕಾಹುರ-ದೊಡ್ಡ ಪ್ರವಾಹ. ಕಾಲ್ವೊಳೆ-ಚಿಕ್ಕ ಪ್ರವಾಹ. ನಿಬ್ಬರ (ನಿರ್ಭರ)-ರಭಸ. ಬೇಗೆ-ತಾಪ].

೬೧. [1]ಜಾತ (ಅ ಕುಮಾ), ಸ್ವೀಪಾ (ಕ ಓ k ಪ್ರ). [2]ನುತ (ಸರ್ವತ್ರ), ಸ್ವೀಪಾ (ಪ್ರ).
[ಶ್ವೇತತುರಗ-ಅರ್ಜುನ (ಬಿಳಿಕುದುರೆಯನ್ನೇರಿದವನು)].

ಅಱಿದನೇ ಶಿವನೆಂದು [1]ದೈವ[1]ದ
ಸರಿಯು ಬಲುಹನು ಕಂಡೊಡೆಯುು ದಿಟ-
ವಱಿಯುಬಹುದೇ [2]ರಹಸ್ಯಮಾಯಾ ಗೋಪಿಕಾತ್ಮಕನ[2] ।
ಅಱುಹಿಕೊಡವೇ ವೇದಶಿರವೆ-
ಚ್ಚಱಿಸಿ ತನ್ನನಖಂಡ ಚಿನ್ಮಯ-
ನಱಿವು ತಾನೆಂದಾವನಱಿವನು ಭೂಪ ಕೇಳೆಂದ ॥ ೬೨ ॥

ಏಕೆ ಚಿಂತೆ ವೃಥಾ ಮನೋವ್ಯಥೆ
ಕಾಕಲಾ ನಾನಜ್ಞನಾಗೆ ಪಿ-
ನಾಕಿ ಮಾಡುವುದೇನು ಮಱೆವೊಗುವೆನು ಮಹೇಶ್ವರನ ।
ಈ ಕಿರಾತನ ಹರಿಬವನು ಬಳಿ-
ಕೇಕಸಿಮಿಸಕೆ [1]ತೆಗೆ[1]ವೆನೆನುತ ವಿ-
ವೇಕಸಿರಿಯು ಕಟಾಕ್ಷ[2]ವಿತ್ತ[2]ಕೆ ಮಾಱಿದನು ಮನವ ॥ ೬೩ ॥

ಮಣಲ ಲಿಂಗವ ಮಾಡಿದನು ನಿ-
ರ್ಗುಣನ ಸಗುಣಾರಾಧನೆಯ ಮ-
ನ್ನಣೆಗಳಲಿ ವಿಸ್ತರಿಸಿದನು ವಿವಿಧಾಗಮೋಕ್ತದಲಿ ।
ಕಣಗಿಲೆಯ ಬಂದುಗೆಯ ಕಕ್ಕೆಯ
[1]ಸಣಪಸಿರಿಸದ ಕುಸುಮದಲಿ[1] ರಿಪು-
ಗಣಭಯಂಕರನರ್ಚಿಸಿದನಂಧಾಸುರಾಂತಕನ ॥ ೬೪ ॥

---

೬೨. [1]ಶೈವ (ಅ ಪ್ರ). [2]ಸದಸ್ವಮಾಯಾ ಗೋಪಿಕಾತ್ಮಕನ (ಅ), ಸದಾತ್ಮಮಾಯಾ ಗೋಪಿಕಾತ್ಮಜನ (ಪ್ರ), ರಹಸ್ಯ ಮಾಯಾಗೋಪಿಕಾತ್ಮಜನ (ಅ) ; ಸ್ವೀಪಾ (ಕುಮಾ).

[ಸರಿ-ಸಮಾನ, ಎಣೆ. ದಿಟವ-ಸತ್ಯವನ್ನು. ರಹಸ್ಯ ಮಾಯಾಗೋಪಿಕಾತ್ಮಕನ-ರಹಸ್ಯವಾಗಿ ಮಾಯೆಯ ಮುಸುಕಿನಲ್ಲಿ ಅಡಗಿಕೊಂಡಿರುವ ಆತ್ಮನನ್ನು. ವೇದಶಿರ-ಉಪನಿಷತ್ತು. ಅಖಂಡಚಿನ್ಮಯ-ಪರಿಪೂರ್ಣ ಚೈತನ್ಯಸ್ವರೂಪಿ].

೬೩. [1]ಗೆಲು (ಸರ್ವತ್ರ), ಸ್ವೀಪಾ (ಕ). [2]ಚಿತ್ತ (ಕುಮಾ).

[ಕಾಕು-ಅನುಚಿತ, ವ್ಯರ್ಥವಾದದ್ದು. ಹರಿಬ-ತೊಂದರೆ, ಕಷ್ಟ. ವಿವೇಕಸಿರಿ-ವಿವೇಕಲಕ್ಷ್ಮಿ. ಕಟಾಕ್ಷವಿತ್ತ-ಕಡೆಗಣ್ಣ ನೋಟವೆಂಬ ಸಂಪತ್ತು, ಐಶ್ವರ್ಯ].

೬೪. [1]ಸಣಬ ಸರಿಸದ ಕುಸುಮದಲಿ (ಅ ಕುಮಾ), ಸಣ ಶಿರೀಸದ ಕುಸುಮದಲಿ (ಓ ಅ), ಬಿರಿಮುಗುಳ ದಾಸಣದ ಕುಸುಮದಿ (ಕ) ; ಸ್ವೀಪಾ (k).

[ಬಂದುಗೆ-ಬಂಧೂಕಪುಷ್ಪ, ಬಾಗೆಹೂ. ಕಕ್ಕೆ-ಗೊಂಚಲು ಗೊಂಚಲಾಗಿ ಬಿಡುವ ಒಂದು ಬಗೆಯ ಕಾಡ ಹೂವು. ಸಣದ ಸಿರಿಸ-ಸಣ್ಣ (ಸೂಕ್ಷ್ಮ, ಕೋಮಲವಾದ) ಶಿರೀಷ ಪುಷ್ಪ].

ಕಾಣಬಹುದೋ ಶಬರ ನಿನ್ನೀ-
ಪ್ರಾಣವೆನ್ನಾಧೀನವಱಿಯಾ
ಸ್ಥಾಣುವಿನ ಬಲುಹುಂಟು ಹಿಂಡುವೆನಿನ್ನು ನಿನ್ನಸುವ ।
ಗೋಣ ಮುಱಿವೆನು [1]ಮಿಡುಕಿ[1]ದೊಡೆ ಶಿವ-
ನಾಣೆ ಬಾ ಸಮ್ಮುಖಕೆ ಹಾಣಾ-
ಹಾಣೆಗಿನ್ನನುವಾಗೆನುತಲೆವೆಯಿಕ್ಕದೀಕ್ಷಿಸಿದ ॥ ೬೫ ॥

ಕಂಡನರ್ಜುನನಾ ಕಿರಾತನ
ಮಂಡೆಯುಲಿ ತಾ ಮುಳಲ ಲಿಂಗದ
ಮಂಡೆಯುಲಿ ಪೂಜಿಸಿದ ಬಹುವಿಧಕುಸುಮಮಂಜರಿಯ ।
ಕಂಡನಿತ್ತಲು ಮುರಿದು ಪುನರಪಿ
ಕಂಡನೀ ಶಬರಂಗಿದೆತ್ತಣ
ದಂಡಿಯೋ ಹಾಯೆನುತ ಸೈವೆಱಗಾದನಾ ಪಾರ್ಥ ॥ ೬೬ ॥

ಶಿವನಲಾ ಸಾಕ್ಷಾಚ್ಚಕುರ್ದಶ
ಭುವನಕರ್ತುವಲಾ ಕಿರಾತ-
ವ್ಯವಹರಣೆಯುಲಿ ಸುಳಿದುದಸ್ಮದನುಗ್ರಹಾರ್ಥವಲಾ ।
[1]ಎವಗೆ ನಿರಶನ[1]ತಪದ ಪಿತ್ತದ
ಬವಣೆ ತಲೆಗೇಱಿದುದಲಾ ಶಿವ
ಶಿವ [2]ಶಿವದ್ರೋಹವಿದೆನುತ ಮಱುಗಿದನು[2] ಕಲಿಪಾರ್ಥ ॥ ೬೭ ॥

---

೬೫. [ಸ್ಥಾಣು-ಈಶ್ವರ. ಬಲುಹು-ಸಾಮರ್ಥ್ಯ. ಗೋಣು-ಕೊರಳು, ಕುತ್ತಿಗೆ. ಮಿಡುಕು-ಚಲಿಸು, ಅಲ್ಲಾಡು. ಹಾಣಾಹಾಣಿ-ಹಣಾಹಣಿ, ಉಗ್ರವಾದ ಮಲ್ಲ ಯುದ್ಧ. ಎವೆಯಿಕ್ಕು-ರೆಪ್ಪೆಹೊಡೆ].

೬೬. [ಮಂಡೆ-ತಲೆ. ಮುರಿದು-ಹಿಂತಿರುಗಿ. ದಂಡಿ-ಸಾಮರ್ಥ್ಯ. ಸೈವೆಱಗಾಗು-ಬಹಳ ಆಶ್ಚರ್ಯಪಡು].

೬೭. [1]ಎವಗಿದನಶನ (ಆ ಕುಮಾ), ಸ್ವೀಪಾ (ಕ ೬ k). [2]ಮಹಾದೇವೆನುತ ಮಱುಗಿದ; ನಂದು (ಆ ಕುಮಾ), ಹರದ್ರೋಹಾಯ್ತೆನುತ ಮಱುಗಿದನು (ಅ) ಸ್ವೀಪಾ (ಪ್ರ).
[ಕಿರಾತವ್ಯವಹರಣೆ-ಕಿರಾತನಂತೆ ನಡೆದುಕೊಂಡದ್ದು. ಅಸ್ಮತ್-ನನ್ನ. ಬವಣೆ-ಬುದ್ಧಿವಿಕಾರ].

ಹೃದಯವಿಬ್ಬಗಿಯಾಯ್ತು ಕಂಗಳು
ಬೆದರಿದವು ವೈವ[1][ರ್ಣ್ಯ][1]ದಲಿ ತನು
ಗದಗದಿಸಿತಡಿಗಡಿಗೆ ಜಡಿದುದು ರೋಮ [2]ಪುಳಕದಲಿ[2] ।
ಉದುರಿದವು ನೇತ್ರಾಂಬು ಬಿಂಕದ
ಬೆದರಿಕೆಯ ಮೂರ್ಛೆಯ ತಿಳಿವಿನ
ಮುದದ [3]ಖೇದದ[3] [4]ಘಾತಿ[4]ಘಾತಿಗೆ ಪಾರ್ಥ[5]ನೊಳಗಾದ[5] ॥ ೬೮ ॥

ಲೋಕಪಾವನ ಮಾಯೆ ಈ ಜಗ-
ದಾಕೆವಾಳರಪಾರು ಚಂದ್ರದಿ-
ವಾಕರಗ್ರಹರಾಶಿ ತಾರೆಗಳಾರ ತೇಜದಲಿ ।
ಲೋಕರಚನಾರಕ್ಷೆ ಸಂಹೃತಿ-
[1]ಯಾ ಕರಣ[1] ತಾನಾರದೀ ಜಗ-
ದೇಕದೈವದ ಕೂಡೆ [2]ಕೋಟಿ[2]ಯೆ ಶಿವಶಿವಾ ಎಂದ ॥ ೬೯ ॥

ಗಾಹು ಹತ್ತಾಹತ್ತಿ ಗಡ ನಿ-
ರ್ದೇಹನೊಡನೆ ಮಹಾಶರೌಘಕೆ
ಮೋಹು ಗಡ ಜೀವನ[1]ಕೆ[1] ಮೃತ್ಯುಂಜಯನ ಸೀಮೆಯಲಿ ।
ಆಹ ಮೂದಲೆ ಗಡ ಸುನಿಗವು-
ವ್ಯೂಹದೂರನ ಕೂಡೆ ಹರನೊಡ-
ನಾಹವಕೆ ಸಮಜೋಳಿ ನಾವ್ ಗಡ ಶಿವಶಿವಾಯೆಂದ ॥ ೭೦ ॥

---

೬೮. [1]ರ್ಣ (ಸರ್ವತ್ರ). [2]ಹರುಷ (ಅ ಆ ಕುಮಾ), ಸ್ವೀಪಾ (ಕ ಓ). [3]ಭೇದದ (ಅ ಕುಮಾ), ಸ್ವೀಪಾ (ಕ ಓ k). [4]ಗಾಯ (ಅ ಕುಮಾ), ಸ್ವೀಪಾ (ಕ ಓ k ಪ್ರ). [5]ಬೆಂಡಾದ (ಅ ಕ).

[ಇಬ್ಬಗಿ–ಎರಡು ಸೀಳು. ವೈವರ್ಣ್ಯ–ಬಣ್ಣಗುಂದುವುದು, ಬಿಳಿಚಿಕೊಳ್ಳುವುದು. ರೋಮಪುಳಕ–ಮೈನವಿರೇಳುವುದು. ನೇತ್ರಾಂಬು–ಕಣ್ಣೀರು. ಮುದ–ಸಂತೋಷ. ಖೇದ–ದುಃಖ].

೬೯. [1]ಯಾಕರಣ (ಅ ಕುಮಾ ಪ್ರ), ವ್ಯಾಕರಣ (ಅ). [2]ದಂಡಿ (ಅ ಕುಮಾ ಪ್ರ).
[ಆಕೆವಾಳ–ಶೂರ, ಪರಾಕ್ರಮಿ. ರಚನಾ–ಸೃಷ್ಟಿ, ನಿರ್ಮಾಣ. ರಕ್ಷೆ–ಸ್ಥಿತಿ, ಪಾಲನೆ, ಕಾಪಾಡುವಿಕೆ. ಸಂಹೃತಿ–ಲಯ, ನಾಶ. ಕರಣ–ಸಾಧನ, ಕಾರ್ಯ ಕರ್ತ. ಕೋಟಿ–ಕಾದಾಟ, ಕದನ].

೭೦. [1]ವು (ಅ ಕುಮಾ), ಸ್ವೀಪಾ (ಕ k).

ಹೂಡಿ ಜಗವನು ಜಗದ ಜೀವರ
ಕೂಡಿ ಬೆರಸಿ ಸಮಸ್ತವಿಷಯಡೊ-
ಳಾಡಿ ಸೊಗಸುವನಾ[1]ವ[1]ನುಪಭೋಗ ಪ್ರಪಂಚದಲಿ ।
ಹೂಡದಳಿಯುದ ಗಮಿಸಿ ಮರಳದ
ಕೂಡದಗಲದ ನಿತ್ಯತೃಪ್ತನಿ-
ರೂಢನೊಡನೆಚ್ಚಾಡಿದೆವಲಾ ಶಿವಶಿವಾ ಎಂದ ॥ ೬೧ ॥

ಸೇವ್ಯನನು ಸತ್ಕೃತಿಗಳಲಿ ದ್ರ-
ಷ್ಟವ್ಯನನು ದೃಢಚಿತ್ತದಲಿ ಮಂ-
[1]ತ[1]ವ್ಯನನು ಶ್ರೋ[2]ತ[2]ವ್ಯನನು [3]ಸಂಕೀರ್ತಿ[3]ತವ್ಯನನು ।
[4]ಅವ್ಯಯ[4]ನನಕ್ಷಯನನಭವನ-
ನವ್ಯಥನನಜ್ಞಾನದಲಿ [5]ಯೋ-
ದ್ಧವ್ಯನೆಂ[5]ದೇ ಸೆಣಸಿದೆವಲಾ ಶಿವಶಿವಾಯೆಂದ ॥ ೬೨ ॥

---

೬೦. [ಗಾಹು-ಕಪಟ, ಮೋಸ. ಹಸ್ತಾಹಸ್ತಿ-ಮುಷ್ಟಿಯುದ್ಧ. ನಿರ್ದೇಹಿ-ಆಕಾರವಿಲ್ಲದವನು, ನಿರ್ಗುಣಿ, ಪರಮಾತ್ಮ. ಶರೌಘ-ಬಾಣಗಳ ಸಮೂಹ. ಮೇಹು-ಮೇವು. ನಿಗಮವ್ಯೂಹದೂರ-ವೇದಗಳ ಸಮೂಹಕ್ಕೆ ಸಿಲುಕದವನು. ಆಹವ-ಯುದ್ಧ. ಸಮಜೋಳಿ-ಸರಿಜೋಡಿ].

೬೧. [1]ತ (ಅ ಕುಮಾ), ಸ್ವೀಪಾ (ಪ್ರ ಅ).

[ಹೂಡಿ-ಸೃಷ್ಟಿಸಿ. ವಿಷಯ-ಇಂದ್ರಿಯ ಗೋಚರವಾದ ವಸ್ತುಗಳು. ಉಪಭೋಗ ಪ್ರಪಂಚ-ಸುಖಾಸುಖವದ ಪ್ರಪಂಚ. ಹೂಡದ-ಅಳಿಯುದ-ಹುಟ್ಟುಸಾವುಗಳಿಲ್ಲದ. ಗಮಿಸಿ-(ಲೋಕಕ್ಕೆ) ಆಗಮಿಸಿ. ಅಳಿಯದ-ಹೊರಟುಹೋಗದ, ಅವಿನಾಶಿಯಾದ. ಕೂಡದ-ಅಗಲದ, ಬೆರತು ಬೇರಾಗದ, ನಿರ್ಲಿಪ್ತನಾದ. ನಿರೂಢ-ನಿರ್ದಿಷ್ಟ ನೆಲೆಯುಲ್ಲದವನು. ಎಚ್ಚಾಡು-ಬಾಣಪ್ರಯೋಗಮಾಡಿ ಹೋರಾಡು].

೬೨. [1]ತ್ರ (ಅ ಪ್ರ). [2]ತ್ರ (ಅ ಪ್ರ). [3]ಸತ್ಕೀರ್ತಿ (ಅ ಪ್ರ). [4]ಅವ್ಯಥ (ಕುಮಾ), [5]ಚೇತವ್ಯ (ಅ), ವ್ಯಾಧೌವ್ಯ (ಪ್ರ), ಯೋಗವ್ಯ (ಕುಮಾ); ಸ್ವೀಪಾ (ಓ k ಅ).

[ದ್ರಷ್ಟವ್ಯ-ನೇತ್ರೇಂದ್ರಿಯ ಗೋಚರನಾದವನು, ಕಣ್ಣಿಗೆ ಕಾಣತಕ್ಕವನು. ಸೇವ್ಯನನು-ಎಲ್ಲರಿಂದಲೂ ಸೇವಿಸಲ್ಪಡತಕ್ಕವನು ಎಂದರೆ ಪೂಜ್ಯನು. ಸತ್ಕೃತಿಗಳಲಿ ದ್ರಷ್ಟವ್ಯ-ಎಲ್ಲೆಲ್ಲಿ ಸತ್ಕಾರ್ಯಗಳು ನಡೆಯುತ್ತವೆಯೋ ಆ ಕಾರ್ಯಗಳ ರೂಪದಲ್ಲಿ ಗೋಚರಿಸತಕ್ಕವನು. ದೃಢಚಿತ್ತದಲಿ ಮಂತವ್ಯ-ಸ್ಥಿರವಾದ, ಏಕಾಗ್ರವಾದ ಮನಸ್ಸಿನಿಂದ ಮನನ ಮಾಡಬೇಕಾದವನು. ಶ್ರೋತವ್ಯನನು, ಸಂಕೀರ್ತಿತವ್ಯನನು-ಸಂಕೀರ್ತನಗೊಂಡಾಗ, ಸಂಕೀರ್ತನಗಳ ಮೂಲಕ ಶ್ರೋತ್ರೇಂದ್ರಿಯದ

ಈ ಪರಿಯಲರ್ಜುನನ ಮನದನು
ತಾಪವನು ಕಾಣುತ್ತ ಶಾಬರ
ರೂಪರಚನೆಯ ಕೆಱೆಯ ಮಱೆಯಲಿ ಮೆಱೆವ ಚಿನ್ಮಯನ ।
ರೂಪನವ್ಯಾಹತ ನಿಜೋನ್ನತ
ರೂಪರಸದಲಿ ನರನ ಚಿತ್ತದ
ತಾಪವಡಗಲು ತಂಪನೆಱೆವನು ತರುಣಶಶಿಮೌಳಿ ॥ ೭೩ ॥

ಶ್ರುತಿಗಳುಪನಿಷದಾನ್ಯಖಿಳದೇ-
ವತೆಯರಾಕಲ್ಪಿತ ಕಿರಾತಾ-
ಕೃತಿಯನುಳಿದರು ಶೂಳದರೀಶನ ಸುತ್ತುವಳಯದಲಿ ।
ಸ್ಮಿತ ಮಧುರ ಮುಖಕಾಂತಿ ಕಲ್ಲೋ-
ಲಿತ ಕಟಾಕ್ಷಚ್ಛವಿಯಲೀಶನ
[ದ್ಯು]ತಿಯಲೀಡಿಱಿವೆಡದಲೆಸೆದರು ಗೌರಿದೇವಿಯರು ॥ ೭೪ ॥

ಹರಹಿನಲಿ ಹೊದಱಿದ್ದು ಹರುಷದ
ಹೊರಳಿಯಲಿ ಹೊಡಕರಿಸಿ ಚಿತ್ತವ
ತಿರುಹಿ ಹಿಡಿದನು ಮನಕೆ ಬುದ್ಧಿಯ ಹಮ್ಮುಹಮ್ಮುಗೆಯ ।
ಕೊರಳುಗೊಳಿಸಿ ಕುಲಾಲಚಕ್ರದ
ಪರಿಭವಣೆಗೆಯ ಪಾಡಿನಲಿ ಕಾ-
ತರಿಸುತವನಿಗೆ ವೈಯು[1]ನಿತ್ತನು[1] [2]ಚಾಚಿ[2] ಭುಜಯುಗವ ॥ ೭೫ ॥

---

೭೨. ಅನುಭವಕ್ಕೆ ಬರತಕ್ಕವನು. ಅವ್ಯಯ-ಅವಿನಾಶಿ. ಅಕ್ಷಯ-ಕ್ಷಯಿಸದವನು. ಅಭವ-ಹುಟ್ಟಿಲ್ಲದವನು. ಅವ್ಯಥ-ಆಧಿವ್ಯಾಧಿಗಳಿಗೊಳಗಾಗದವನು. ಯೋದ್ಧವ್ಯ-ಯುದ್ಧಮಾಡಲು ತಕ್ಕವನು. ಸೆಣಸು-ಹೋರಾಡು].

೭೩. [ಶಾಬರ ರೂಪರಚನೆ- ಬೇಡನ ರೂಪ ವಿನ್ಯಾಸ. ಚಿನ್ಮಯನ ರೂಪು-ಚಿತ್‌ಸ್ವರೂಪನಾದವನ ಆಕಾರ. ಅವ್ಯಾಹತ-ಪ್ರತಿಬಂಧಕವಿಲ್ಲದ. ರೂಪರಸ-ರೂಪದ ಸೌಂದರ್ಯ].

೭೪. [ಆಕಲ್ಪಿತ-ಕಲ್ಪಿತವಾದ, ಧರಿಸಿದ ಉಳಿ-ಬಿಟ್ಟುಬಿಡು. ಸ್ಮಿತ-ಮುಗುಳುನಗೆ. ಕಲ್ಲೋಲಿತ-ಅಲೆಯಲೆಯಾಡ. ಕಟಾಕ್ಷಚ್ಛವಿ- ಕಡೆಗಣ್ಣನೋಟದ ಕಾಂತಿ. ದ್ಯುತಿ-ಕಾಂತಿ. ಈಡಿರಿ-ವ್ಯಾಪಿಸು. ಎಸೆ-ಪ್ರಕಾಶಿಸು].

೭೫. [1]ಕೊಟ್ಟನು (ಅ k). [2]ನೀಡಿ (ಸರ್ವತ್ರ), ಸ್ವೀಪಾ (ಓ).
[ಹರಹು-ವಿಸ್ತಾರ, ವ್ಯಾಪನೆ. ಹೊದಱಿದ್ದು-ದಟ್ಟವಾಗಿ. ಹೊರಳಿ-ರಾಶಿ. ಹೊಡಕರಿಸು-ವ್ಯಕ್ತವಾಗು, ಪ್ರಕಟಗೊಳ್ಳು. ಬುದ್ಧಿಯ-ವಿವೇಕದ. ಹಮ್ಮುಹಮ್ಮುಗೆಯ-ವಿಸ್ತಾರವನ್ನು. ಕೊರಳುಗೊಳಿಸಿ-ಸೇರಿಸಿ. ಕುಲಾಲಚಕ್ರ-

ಕ್ಷಮಿಸುವುದು ಸರ್ವೇಶ ಸರ್ವೋ-
ತ್ತಮ ವೃಥಾ ಸುಭಟಾಭಿಮಾನ-
ಭ್ರಮಿತನನು ಮೋಹಾಂಧಕನ ಸಜಲಾವಗಾಹದಲಿ ।
ಸ್ತಿಮಿತನನು ದುರ್ಬೋಧ¹ಭೇ¹ದ-
ಭ್ರಮಿತನನು ಕಲ್ಯಾಣಪದನಿ-
ರ್ಗಮಿತನನು ಕಾರುಣ್ಯನಿಧಿ ಕೈಗಾಯಬೇಕೆಂದ ॥ ೭೬ ॥

ಅಱಿದಱಿದು ಮತಿಗೆಟ್ಟ ಮಾನವ-
ಕುಱಿಯಲಾ ನೆಱೆ ಕಂಡು ಕಂಡೆ-
ಚ್ಚಱದ ಖೂಳನಲಾ ವಿವೇಕದ ಮೂಗುಮಾಱಿಯಲಾ ।
ಬಱಿಮನದ ಬಾಹಿರನೊಳೆನ್ನಲಿ
ಮಱೆವುದಪರಾಧವನು ನಿನ್ನನೆ
ಮೆಱೆವುದೈ ಕಾರುಣ್ಯನಿಧಿ ಕೈಗಾಯಬೇಕೆಂದ ॥ ೭೭ ॥

ಪರಮಹಂಸ ಪರಾತ್ಮ ಪರಮೇ-
ಶ್ವರ ಪರಬ್ರಹ್ಮೈಕವಿಗ್ರಹ
ಪರಮಶಿವ ಪರತತ್ವರೂಪ ಪರಾತ್ಪರಾನಂದ ।
ಪರಮಗುಣ ಪರಶಕ್ತಿ ವಾಗೀ-
ಶ್ವರ ಪರಾರ್ತಿಹರೇಶ ಪರಶಂ-
ಕರ ಪರಂಜ್ಯೋತಿಯೆ ಪರೋತ್ತಮ ಕರುಣಿಸುವುದೆಂದ ॥ ೭೮ ॥

---

೭೫. ಕುಲಾಲಚಕ್ರ-ಕುಂಬಾರನ ಚಕ್ರ. ಪರಿಭವಣೆ-ಸುತ್ತುವಿಕೆ. ಪಾಡು-ಸ್ಥಿತಿ. ಕಾತರಿಸು-ತಕಿಸು. ವಳಿವನಿಗೆ-ಭೂಮಿಗೆ. ಮೈಯನಿತ್ತನು-ದೀರ್ಘದಂಡ ನಮಸ್ಕಾರ ಮಾಡಿದನು, ಅಡ್ಡಬಿದ್ದನು].

೭೬. ¹ವೇ (ಸರ್ವತ್ರ). ²ಬೋ (ಓ).
[ಸುಭಟಾಭಿಮಾನಭ್ರಮಿತ-ಮಹಾ ಶೂರನೆಂಬ ಗರ್ವದಿಂದ ಭ್ರಾಂತನಾದವನು. ಮೋಹಾಂಧಕೂಪಜಲಾವಗಾಹಸ್ತಿಮಿತ- ಮೋಹವೆಂಬ ಕತ್ತಲಿದಿದ ಬಾವಿಯ ನೀರಿನಲ್ಲಿ ಮುಳುಗಿ ಅಲ್ಲಿಯೇ ನೆಲಸಿದವನು. ದುರ್ಬೋಧ ಭೇದ ಭ್ರಮಿತ-ಅನೇಕ ವಿಧವಾದ ಬೋಧನೆಗಳಿಂದ ಭ್ರಾಂತನಾದವನು. ಕಲ್ಯಾಣಪದನಿರ್ಗಮಿತ-ಶುಭಪ್ರದವಾದ ಸ್ಥಿತಿಯಿಂದ ಹೊರಬಂದವನು. ಕೈಗಾಯಿ-ಸಲಹು, ಕಾಪಾಡು].

೭೭. [ಎಚ್ಚಱದ-ಎಚ್ಚರಗೊಳ್ಳದ. ಖೂಳ-ನೀಚ. ವಿವೇಕದ ಮೂಗುಮಾಱಿ-ವಿವೇಕಶೂನ್ಯ. ಬಱಿಮನದಬಾಹಿರ-ವಿಚಾರಶೂನ್ಯನಾಗಿ ನಿನ್ನಿಂದ (ಈಶ್ವರನಿಂದ) ಹೊರಗಾದವನು. ನಿನ್ನನೆ ಮೆಱೆ-ದಯಾಮೂರ್ತಿಯಾದ ನೀನು ನಿನ್ನ ದಯಾಪೂರ್ಣ ಸ್ವರೂಪವನ್ನು ಪ್ರಕಾಶಪಡಿಸು].

ದೇವ ಸುರದನುಜೇಶವಂದಿತ
ದೇವ ಮನುಮುನಿನಿಕರಪೂಜಿತ
ದೇವ ತತ್ತ್ವಾಕಾರ ಭಾವಿಪೊಡತಿನಿರಾಕಾರ ।
ದೇವ ಸಾಕಾರದಲಿ ನಿಜಭ-
ಕ್ತಾವಳಿಯನುದ್ಧರಿಪ ಶಿವ ಮಾ-
ದೇವ ಕರುಣಿಸಿದೈಯನಾಥಂಗೆಂದನಾಪಾರ್ಥ ॥ ೭೯ ॥

ಧರಣಿಪತಿ ಕೇಳೀಶನೀತನ
ಹೊರೆಗೆ ಬಿಜಯಂಗೈದು ಪಾರ್ಥನ
ಶಿರವ ಹಿಡಿದೆತ್ತಿದನು ಬಿಗಿಯಪ್ಪಿದನು ಬರಸೆಳೆದು ।
ಮರುಳುಮಗನೆ ಮಹಾತಪಸ್ಸಂ-
ಚರಣೆಯಲಿ ನೊಂದೈಯೆನುತ ಕಡು-
[ಕ]ರುಣಿ ಕರುಣಾಮೃತಸಮುದ್ರದೊಳದ್ದಿದನು ನರನ ॥ ೮೦ ॥

ಸಲಿಸುವೆನು ನೀ ಬೇಡಿದುದ ನಿ-
ಸ್ಖಲಿತವಂಜದಿರಿನ್ನು [1]ಬೇಡೆನೆ[1]
ಸುಲಭ ನೀ ಭಕ್ತರಿಗೆ ಭಯವಿನ್ನೇಕೆ [ನನ]ಗೆನುತ
ಸಲಿಸು ಪಾಶುಪತಾಸ್ತ್ರವನು ವೆ-
ಗ್ಗಳದ [2]ಬ್ರಹ್ಮ[2][3]ಶಿರಾ[3]ಸ್ತ್ರವನು ಕೈ-
ಗೊಳಿಸುವುದು ಕೃಪೆಯುಳ್ಳೊಡೆಂದನು ನಗುತ ಕಲಿಪಾರ್ಥ ॥ ೮೧ ॥

---

೭೮. [ಪರಮಹಂಸ-ಪರಬ್ರಹ್ಮಸ್ವರೂಪಿ. ಪರಾತ್ಮ-(ಜೀವಾತ್ಮನಲ್ಲದ) ಪರಮಾತ್ಮ. ಪರಬ ಹ್ಮೈಕವಿಗ್ರಹ-ಪರಬ್ರಹ್ಮನೇ ಆದ ಮೂರ್ತಿ. ಪರಾರ್ತಿಹರ-ಪರರ (ಭಕ್ತರ) ಕ್ಲೇಶವನ್ನು ಕಳೆಯುವವನು].

೭೯. [ದನುಜೇಶ-ರಾಕ್ಷಸೇಶ್ವರ (ರಾವಣ). ಮನು-ಮಾನವ. ನಿಕರ-ಸಮೂಹ].

೮೦. [ಹೊರೆ-ಸಮೀಪ. ಬರಸೆಳೆದು-ಬರುವಂತೆ ಸೆಳೆದು. ಸಂಚರಣೆ-ಆಚರಣೆ].

೮೧. [1]ಸಾಕೆನೆ (ಆ ಕುಮಾ ಪ್ರ), ಸ್ವೀಪಾ (ಕ). [2]ಬೊಮ್ಮ (ಆ ಕುಮಾ), ಸ್ವೀಪಾ (ಕ ಓ k). [3]ಶಿರೋ (ಅ ಆ ಕುಮಾ), ಶರಾ (ಪ್ರ); ಸ್ವೀಪಾ (k). [ನಿಸ್ಖಲಿತ-ಖಂಡಿತ. ವೆಗ್ಗಳ-ಶ್ರೇಷ್ಠ. ಬ್ರಹ್ಮಶಿರಾಸ್ತ್ರ-ಶ್ರೇಷ್ಠವಾದ ಬ್ರಹ್ಮಾಸ್ತ್ರ. ಕೈಗೊಳಿಸು-ಸ್ವಾಧೀನಗೊಳಿಸು].

ಸರಸಿಯಲಿ ಮಿಂದಾಚಮನವಿ-
ಸ್ತರಣೆಯೆಲ್ಲವ ಮಾಡಿ ಶೂಲಿಯ
ಚರಣದಲಿ ವೈಯಿಕ್ಕಿ ನಿಂದನು ಭಾವಶುದ್ಧಿಯಲಿ।
ಸರಳಸಾಂಗೋಪಾಂಗಮಂತ್ರೋ-
ಚ್ಚರಣ ಸಂಹೃತಿ ಮೋಕ್ಷವನು ವಿ-
ಸ್ತರಿ[1]ಸಿ ಸ[1]ರಹಸ್ಯದಲಿ ಕೊಟ್ಟನು ಪಾಶುಪತಶರವ ॥ ೮೨ ॥

ಸರಳ ಸಾಂಗೋಪಾಂಗವನು ನಿನ-
ಗಱುಹಿದೆನು ನೀನಿನ್ನು ಶಕ್ರನ
ಪುರಕೆ ನಡೆ ನಿಮ್ಮುತ್ತರೋತ್ತರಕಾರ್ಯಗತಿಗಳಿಗೆ।
ಹರಿ ಸಹಾಯನು ನಮ್ಮ ಸತ್ವದ
ಪರಮರೂಪಾತ್ಮನು ಕಣಾ ನೀ-
ನಱಿದಿರೆಂದು ಮಹೇಶ ಬೀಳ್ಕೊಟ್ಟನು ಧನಂಜಯನ ॥ ೮೩ ॥

೩. ಇಂದ್ರನೋಲಗ—ಊರ್ವಶಿಯ ಶಾಪ

ಅರಸ ಕೇಳೈ ಹತ್ತುಸಾವಿರ
ತುರಗನಿಕರದ ಲಳಿಯ ದಿವ್ಯಾಂ-
ಬರದ ಸಿಂಧದ ಸಾಲಸತ್ತಿಗೆಗಳ ಪತಾಕೆಗಳ।
ಖರರುಚಿಯ ಮಾಱಂಕವೋ ಸುರ-
ಗಿರಿಯ ಸೋದರವೋ ಮೃಗಾಂಕನ
ಮಱುದಲೆಯೊ [1]ತಾನೆನಲು[1] [2]ರಥ[2] ಹೊಳೆದಿಳಿದುದಂಬ[3]ರದಿ[3] ॥ ೮೪ ॥

---

೮೨. [1]ಸುಕ (ಅ ಕುಮಾ), ಸ್ವೀಪಾ (ಓ k ಅ ಪ್ರ).
[ಭಾವಶುದ್ಧಿ–ಮನಶ್ಶುದ್ಧಿ, ಚಿತ್ತಶುದ್ಧಿ. ಸರಳ–ಬಾಣಕ್ಕೆ ಸಂಬಂಧಿಸಿದ. ಸಂಹೃತಿ–ಬಂಧ. ಮೋಕ್ಷ–ವಿಮೋಚನೆ].

೮೩. [ಶಕ್ರ–ಇಂದ್ರ].

೮೪. [1]ಮೇಚನಲು (ಅ ಅ ಕುಮಾ), ಸ್ವೀಪಾ (ಕ k ಪ್ರ). [2]ಹೊಳೆ (ಕ k). [3]ವ (ಅ ಕ k).
[ಲಳಿ–ಉತ್ಸಾಹ, ರಭಸ. ಅಂಬರ–ಬಟ್ಟೆ, ವಸ್ತ್ರ; ಆಕಾಶ. ಸಿಂಧ–ಬಾವುಟ; ಧ್ವಜ. ಸತ್ತಿಗೆ–ಛತ್ರಿ. ಖರರುಚಿ–ಸೂರ್ಯ. ಮಾಱಂಕ–ಪ್ರತಿಸ್ಪರ್ಧಿ. ಸುರಗಿರಿ–ಮೇರುಪರ್ವತ. ಮೃಗಾಂಕ–ಚಂದ್ರ. ಮಱುದಲೆ–ಇನ್ನೊಂದು ರೂಪ; ಪ್ರತಿರೂಪ; ಪ್ರತಿಬಿಂಬ].

ಏನಿದಚ್ಚರಿ ಮೇಲೆಮೇಲೆ ನ-
ವೀನದರ್ಶನವೆನ್ನ [1]ಪುಣ್ಯೋ-
ತ್ಥಾನ[1]ವೈಸಲೆ ಯೆನುತ ನರನಿದಿ[2]ರ್ಗೊಂಡ[2]ನಾ ರಥ[3]ವ[3] ।
ನೀನಹೈ ಕಲಿಪಾರ್ಥನೆಂಬ ಮ-
ಹಾನರೇಶ್ವರನೆನುತ ಮಿಗೆ ಸ-
ನ್ಮಾನಿಸುತ ಸುರಪತಿಯ ಸಾರಥಿ ನಿಲಿಸಿದನು ರಥವ || ೮೫ ||

ಏಳು ಫಲುಗುಣ ಹರಿವರೂಥದ
ಮೇಲೆ ಬಿಜಯಂಗೈವ ಬಹಳ ಫ-
ಲಾಳಿಯಿದೆಲಾ ನಿನ್ನ ಪುಣ್ಯದ್ರುಮದ ಬೇರೊಡೆದು ।
ಸಾಲಕುಜಿದಜಿಹಿಗಳ ಕರ್ಮದ
[1]ಕೂಳಿಗಳ[1] ಜಡಜಂಝು[2]ಪೂಗರ[2]
ಜಾಲದವರನಿಮಿಷರ ಪುರಿ ವಶವಾಯ್ತು ನಿನಗೆಂದ || ೮೬ ||

ಬಲ್ಲರಾರದನಶ್ವಮೇಧದ
ಮಲ್ಲರನು ಕೃತರಾಜಸೂಯರು
ಬಲ್ಲರೇ ಕಡೆಬೀಡ ಕೋಟೆಯ ಗುಡಿಯ ಬೊಡ್ಡಿಯರ ।
ಎಲ್ಲಿಯಮರಾವತಿ ನರಾಧಮ-
ರೆಲ್ಲಿ ನಾನೀಶ್ವರನ ಕರುಣದ
ಭುಲ್ಲವಣೆಯಲಿ ಭಾಗ್ಯ[1][ನೈ]ಸಲೆ ಯೆಂವನಾ[1] ಪಾರ್ಥ || ೮೭ ||

---

೮೫. [1]ಪುಣ್ಯಸ್ನಾನ (ಅ ಕುಮಾ), ಪುಣ್ಯಾಮಾನ (ಆ ಕ); ಸ್ವೀಪಾ (ಪ್ರ k). [2]ರಾದನಾ (ಅ ಕುಮಾ), ಸ್ವೀಪಾ (ಪ್ರ). [3]ಕೆ (ಅ ಕುಮಾ).

[ಪುಣ್ಯೋತ್ಥಾನ-ಪುಣ್ಯದ ಉದಯ (ಪುಣ್ಯೋದಯ). ಸುರಪತಿ-ದೇವೇಂದ್ರ. ಸುರಪತಿಯ ಸಾರಥಿ-ಮಾತಲಿ],

೮೬. [1]ಕೂಲಿಗರ (ಅ ಆ ಕುಮಾ), ಸ್ವೀಪಾ (ಪ್ರ k). [2]ಹಾರದ (ಆ ಕ).

[ಹರಿವರೂಥ-ಇಂದ್ರನ ರಥ. ಫಲಾಳಿ-ಫಲಸಮೂಹ, ಫಲರಾಶಿ. ಪುಣ್ಯದ್ರುಮ-ಪುಣ್ಯ (ವೆಂಬ) ವೃಕ್ಷ. ಸಾಲಕುಜಿದಜಿಹಿಗಳು-ಸಾಲು ಸಾಲಾಗಿ ಕುರಿ (ಬಲಿಪಶು)ಗಳನ್ನು ಕತ್ತರಿಸಿ ಯಾಗಮಾಡುವವರು, ಆ ಯಾಗದ ಫಲಾನುಭವಿಗಳು(?). ಕರ್ಮದ ಕೂಳಿಗಳು-ಸತ್ಕರ್ಮಗಳನ್ನು ಆಚರಿಸಿದುದರಿಂದ ಉಂಟಾಗುವ ಫಲಾನುಭವಿಗಳು (?). ಜಡ ಜಂಝುಪೂಗರಜಾಲದವರು-ಜಡಸ್ವಭಾವವುಳ್ಳ ತಪಸ್ವಿಗಳ ಸಮೂಹದವರು. ಅನಿಮಿಷಪುರಿ-ಸ್ವರ್ಗ].

೮೭. ನೆಂದನು ನಗುತ ಕಲಿ (ಆ ಕುಮಾ), ರೈಸಲೆಯೆಂದನಾ (ಕ ಓ k ಅ).

ಎನುತ ತೇರಿನೊಳೊಂದು ಕಾಲಿ-
ಟ್ಟನು ಧನಂಜಯನಿಂದ್ರಕೀಲದ
ವನಕೆ ಕೈಮುಗಿದೆಱಗಿ ನುಡಿದನು ಮಧುರವಚನದಲಿ ।
ಮುನಿಜನವೆ ಪರ್ವತವೆ ಪಂಕಜ-
ವನವೆ ತರುಲತೆಗುಲ್ಮಖಗಮೃಗ-
ವನಚರ[1]ರೆ[1] ನಾ ಹೋಗಿಬಹೆನೇ ನಿಮ್ಮನುಜ್ಞೆಯಲಿ ॥ ೮೮ ॥

ಇಳಿದು ರಥವನು ದಿವಿಜರಾಯನ
ನಿಳಯವನು ಹೊಕ್ಕನು ಕಿರೀಟಿಯು-
ನಳವಿಯಲಿ ಕಂಡಿದಿರು ಬಂದನು ನಗುತ ಶತಮನ್ಯು ।
ಸೆಳೆದು ಬಿಗಿಯಪ್ಪಿದನು ಕರದಲಿ
ತಳುಕಿ ಕರವನು ತಂದು ತನ್ನಯ
ಕೆಲದೊಳಗೆ ಕುಳ್ಳಿರಿಸಿದನು ಸಿಂಹಾಸನಾರ್ಧದಲಿ ॥ ೮೯ ॥

ನೂಱುಪಶುಗೆಡಹಿಗೆ ಸುರೇಂದ್ರನು
ಮಾಱುವನು ಗದ್ದುಗೆಯ ಬಱಿದೇ
ಸೂಱೆಗೊಂಡನು ಸುರಪತಿಯ ಸಿಂಹಾಸನದ ಸಿರಿಯ ।
ಮೂಱುಯುಗದರಸುಗಳೊಳೀತಗೆ
ತೋಱಲೆಣೆಯಿಲ್ಲೆನಲು ಶಕ್ರನ
ನೂಱುಮಡಿ ತೇಜದಲಿ ತೊಳತೊಳಗಿದನು ಕಲಿಪಾರ್ಥ ॥ ೯೦ ॥

[ಅಶ್ವಮೇಧದ ಮಲ್ಲರು–ಅಶ್ವಮೇಧಗಳನ್ನು ಮಾಡಿ ಗಟ್ಟಿಗರೆನಿಸಿಕೊಂಡವರು. ಕೃತರಾಜಸೂಯರು–ರಾಜಸೂಯವನ್ನು ಮಾಡಿದವರು. ಕಡೆಬೀಡ....ಬೊಡ್ಡಿಯರು–ಯಾರಿಗೂ ಪ್ರವೇಶವಿಲ್ಲದಂಥ ಸ್ವರ್ಗದ ಅಂತಃಪುರದ ಸೂಳೆಯರು. ಭುಲ್ಲವಣೆ–ಅಧಿಕ್ಯ. ಐಸಲೇ–ಅಲ್ಲವೇ ?].

೮೮. [1]ವೆ (ಸರ್ವತ್ರ), ರೆ (k).
[ಗುಲ್ಮ–ಪೊದೆ, ಪೊದರು. ವನಚರ–ಬೇಡ].

೮೯. [ದಿವಿಜರಾಯ–ಇಂದ್ರ. ಕಿರೀಟಿ–ಅರ್ಜುನ. ಅಳವಿ–ಸ್ನೇಹ, ವಿಶ್ವಾಸ. ಶತಮನ್ಯು–ನೂರು ಯಾಗಗಳನ್ನು ಮಾಡಿದವನು, ಇಂದ್ರ. ಕರದಲಿ ತಳುಕಿ ಕರವನು–ಕೈಗೆ ಕೈ ಸೇರಿಸಿ ಎಂದರೆ ಹಸ್ತಲಾಘವವನ್ನು ಕೊಟ್ಟು. ಕೆಲ–ಪಕ್ಕ].

೯೦. [ನೂಱುಪಶುಗೆಡಹಿ–ಯಾಗದಲ್ಲಿ ನೂರು ಪಶುಗಳನ್ನು ಬಲಿಕೊಟ್ಟವನು. ಗದ್ದುಗೆ–ಸಿಂಹಾಸನ. ಬಱಿದೇ–ಬಹು ಸುಲಭವಾಗಿ].

ನುಸಿಗಳಿವದಿರು ಮರ್ತ್ಯರೆಂಬವ-
ರೊಸಗೆಯುಮರಾವತಿಯೊಳೇನಿದು
ಹೊಸತಲಾ ಬಂದಾತನಾರೋ ಪೂತುರೇ ಯೆನುತ ।
ವಸುಗಳಾದಿತ್ಯರು ಭುಜಂಗಮ-
ವಿಸರ ಗಂಧರ್ವಾದಿದೇವ-
ಪ್ರಸರ ಬಂದುದು ಕಾಣಿಕೆಗೆ ಪುರುಹೂತನಂದನನ ॥ ೯೧ ॥

ಉಗಿದರೋ ಕತ್ತುರಿಯ ತವಲಾ-
ಯಿಗಳ ಮುಚ್ಚುಳ[1]ನೆ[1]ನೆ ಕವಾಟವ
ತೆಗೆಯೆ ಕವಿದರು ದಿವ್ಯಪರಿಮಳಸಾರ ಪೂರವಿಸೆ ।
ಹೊಗರಲಗುಹೊಳವುಗಳ ಕಡೆಗ-
ಣ್ಣುಗಳ ಬಲುಗರುವಾಯಿ ಮುಸುಕಿನ
ಬಿಗುಹುಗಳ ಬಿರುದಂಕಕಾತಿಯರಿಂದ್ರನೋಲಗವ ॥ ೯೨ ॥

ರಸದ ಸಂಸ್ಥಾಪನೆಯ ಭಾವದ
ಬೆಸುಗೆಗಳ ಹಸ್ತಾಭಿನಯದೃ-
ಕ್ಪ್ರಸರಣದ [1]ಗತಿ[1]ಸಾತ್ವಿಕಾಂಗಿಕಸುಗತಿವಿಭ್ರಮದ ।
ವಿಷಮಸಮಕರಣದ ಕಳಾಸದ
ಕುಸುರಿಗಳ ವರಲಾಸ್ಯತಾಂಡವ-
ವೆಸೆದುದೈ ರಂಭಾದಿನರ್ತಕಿಯರಲಿ ಹೊಸತೆನಿಸಿ ॥ ೯೩ ॥

---

೯೧. [ನುಸಿ–ಸಣ್ಣ ಹುಳು. ಒಸಗೆ–ಹಬ್ಬ. ವಸುಗಳು–ಅಷ್ಟವಸುಗಳು. ಆದಿತ್ಯರು–ದ್ವಾದಶಾದಿತ್ಯರು. ಭುಜಂಗಮ–ಸರ್ಪ ಪಾತಾಳವಾಸಿ. ವಿಸರ, ಪ್ರಸರ–ಗುಂಪು. ಪುರುಹೂತನಂದನ–ಇಂದ್ರನ ಮಗ, ಅರ್ಜುನ. ಕಾಣಿಕೆ–ಕಾಣ್ಕೆ–ನೋಟ].

೯೨. [1]ವೆ (ಅ ಕುಮಾ).

[ಉಗಿ–ತೆಗೆ. ಕವಲಾಯಿ–ಭರಣಿ ಕವಾಟ–ಬಾಗಿಲು, ಕದ. ಪೂರವಿಸು–ತುಂಬು, ವ್ಯಾಪಿಸು. ಹೊಗರಲಗು–ಕಾಂತಿಯುತವಾದ (ಹೊಳೆಯುವ) ಕತ್ತಿ. ಹೊಳಹು–ಪ್ರಕಾಶ. ಗುರುವಾಯಿ–ಬೆಡಗು, ಠೀವಿ. ಬಿಗುಹು–ಬಿಗಿ, ಗತ್ತು. ಬಿರುದಂಕಕಾತಿಯರು–ಶ್ರೇಷ್ಠರಾದ, ಹೆಸರುವಾಸಿಯಾದ, ಸ್ತ್ರೀಯರು. ಓಲಗ–ಸಭೆ, ಆಸ್ಥಾನ].

೯೩. [1]ವರ (ಅ ಕುಮಾ), ಸ್ವೀಪಾ (ಪ್ರ ಅ ಕ ಓ).

[ದೃಕ್ಪ್ರಸರಣ–ನೋಟದ ಹರಡುವಿಕೆ, ದೃಷ್ಟಿಕ್ಷೇಪ. ಗತಿ–ಚಲನವಲನ. ಅಭಿನಯವು 'ಆಂಗಿಕ'(ಅಂಗಚಲನೆಗಳು), 'ವಾಚಿಕ'(ಮಾತಿಗೆ ಸಂಬಂಧಪಟ್ಟವು),

ಈಯಮಾನುಷನೃತ್ಯ ವಾದ್ಯಸು-
ಗೇಯರಸದಲಿ ಮುಳುಗಿ ಕರಣದ-
ಲಾಯ ತೊಡಕದೆ ಪಾರ್ಥನಿದ್ದನು ಧೈರ್ಯಶಿಖರದಲಿ ।
ಈ ಯುವತಿ ತಾನಾವಳೋ ಕುಸು-
ಮಾಯುಧನ ಖಂಡೆಯವಲಾ ಮರ್ಝು
ಮಾಯೆಯೆನುತೂರ್ವಶಿಯನೆವೆಯಿಕ್ಕದೆ ನಿರೀಕ್ಷಿಸಿದ ॥ ೯೪ ॥

ಅರಸ ಕೇಳಾರೋಗಿಸಿದರಿ-
ಬ್ಬರು ಸಮೇಳದಲಿದ್ದು ಬೀಳ್ಕೊಂ-
ದರಮನೆಗೆ ಕಳುಹಿದನು ಪವಡಿಸುವಡೆ [1]ನಿಜಾತ್ಮಜ[1]ನ ।
ಸುರಪನಿತ್ತಲು ಚಿತ್ರಸೇನನ
ಕರಸಿದನು ಫಲುಗುಣನ ಭಾವವ-
[1]ನರಿಯಹಿದನು[1] ನಮ್ಮೂರ್ವಶಿಯ ಕಳುಹೆಂದು ನೇಮಿಸಿದ ॥ ೯೫ ॥

ತಾಯೆ ಚಿತ್ತೈಸರಮನೆಯ ಸೂ-
ಳಾಯಿತನು ಬಂದೈದನೆನೆ ಕಮ-
ಲಾಯತಾಂಬಕಿ ಚಿತ್ರಸೇನನ ಕರೆಸಿದಳು [1]ಬಳಿಕ[1] ।
ತಾಯೆನುತ ವಸ್ತ್ರಾಭರಣದ ಪ-
ಸಾಯವಿತ್ತಳು ಪರಿಮಳದ ತವ-
ಲಾಯಿಗಳ ನೂಕಿದಳು ವರಕತ್ತುರಿಯ ಕರ್ಪುರದ* ॥ ೯೬ ॥

---

೯೩. 'ಆಹಾರ್ಯಕ' (ವೇಷಭೂಷಾದಿಗಳ ರಚನೆ), 'ಸಾತ್ವಿಕ' (ರೋಮಾಂಚಾದಿಗಳ ಪ್ರದರ್ಶನ) ಎಂದು ನಾಲ್ಕು ವಿಧ. ಕುಮಾರವ್ಯಾಸನು 'ಸಾತ್ವಿಕ' ಮತ್ತು 'ಆಂಗಿಕ' ಇವೆರಡನ್ನು ಮಾತ್ರ ಹೆಸರಿಸಿದ್ದಾನೆ. ಕರಣ-ಅಭಿನಯದ ಒಂದು ಭಂಗಿ. ಕಳಾಸ-ನೃತ್ಯಗತಿಗಳಲ್ಲಿ ಒಂದು ಪ್ರಕಾರ. ಕುಸುರಿ-ಸೂಕ್ಷ್ಮ ವಿವರ. ಲಾಸ್ಯ-ಸ್ತ್ರೀಯರು ಮಾಡುವ ನಾಟ್ಯ. ತಾಂಡವ-ಪುರುಷರು ಮಾಡುವ ನಾಟ್ಯ].

೯೪. [ಅಮಾನುಷ-ಅಲೌಕಿಕ, ದಿವ್ಯ. ಕರಣದಲಿ-ಇಂದ್ರಿಯಗಳಲ್ಲಿ. ಆಯತೊಡಕದೆ-ಪ್ರಮಾಣವು ಸಿಲುಕಿಕೊಳ್ಳದೆ ಎಂದರೆ ನೃತ್ಯ, ವಾದ್ಯ, ಗಾನ ಇವುಗಳ ರಸಭಾವದಲ್ಲಿ ಮುಳುಗಿದ್ದರೂ ಅವುಗಳಿಂದ ವಿಚಲಿತನಾಗದಿದ್ದವನು ಕುಸುಮಾಯುಧ-ಮನ್ಮಥ. ಖಂಡೆಯ-ಕತ್ತಿ].

೯೫. [ಆರೋಗಿಸು-ಊಟಮಾಡು. ಸಮೇಳದಲಿ-ಸಹಪಂಕ್ತಿಯಲ್ಲಿ. ಪವಡಿಸು-ನಿದ್ರಿಸು, ಮಲಗು].

೯೬. [1]ನಗುತ (ಕುಮಾ ಪ್ರ), ಸ್ವೀಪಾ (ಅ).
[ಸೂಳಾಯಿತ-ರಾಜದೂತ. ಬಂದೈದನು-ಬಂದಿದ್ದಾನೆ. ಪಸಾಯ-ಬಹುಮಾನ, ಉಡುಗೊರೆ].

ವನಜಲೋಚನೆ ಮಾಡಿದಳು ಮ-
ಜ್ಜನವನನುಳ ದುಕೂಲ ಪರಿಮಂ-
ಡನದಲೆಸೆದಳು ವಿವಿಧ ರತ್ನಾಭರಣಶೋಭೆಯಲಿ ।
ತನತನಗೆ ಭರಣಿಗಳಲನುಲೇ-
ಪನವ ತಂದರು ವಿಳಸದ[1]ಲಿ[1]ವಾ-
ಸನೆಯ ಕುಸುಮದ ಮೊಗ್ಗೆಯಲಿ ರಚಿಸಿದರು ಸಿರಿಮುಡಿಯ* ॥ ೯೭ ॥

ಲೋಕವಶ್ಯದ ತಿಲಕವೋ ಜಗ-
ದೇಕ ರತ್ನವೊ ವಿಗಡ ಮುನಿ ಚಿ-
ತ್ತಾಕರುಷಣದ ಮಂತ್ರವಾದವೊ ಋಷಿತಪಃಫಲವೊ ।
ಲೋಕಸೌಂದರ್ಯೈಕ ಸರ್ಗವೊ
ನಾಕಸುಖ ಸಾಕಾರವೊ ರೂ-
ಪೈಕ ತಾಣವೊ ಚಿತ್ರವಾಯ್ತೂರ್ವಶಿಯ ಬರವಿನಲಿ* ॥ ೯೮ ॥

ತುರಗಮೇಧದ ರಾಜಸೂಯದ
ವರಮಹಾಕ್ರತುಕಾಜಿರೀಕೆಯ
ಚರಣದುಂಗುಟದುದಿಯ ಕಾಂಬರೆ ಫೂತು ಫಲುಗುಣನ ।
[1]ಹೊರೆದ ಸುಕೃತವದೆಂತೊ[1] ತಾನಿ-
ದ್ದರಮನೆಗೆ ಸತಿ ಬಂದಳೇನ-
ಚ್ಚರಿಯೆನುತ ಹೊಗಳಿದರು ಮಾಗಧರಿಂದ್ರನಂದನನ ॥ ೯೯ ॥

---

೯೭. [1]ಧಿ (ಕುಮಾ), ಸ್ತೀಪಾ (ಅ).

[ಮಜ್ಜನ–ಸ್ನಾನ. ದುಕೂಲ–ರೇಷ್ಮೆಯ ವಸ್ತ್ರ. ಪರಿಮಂಡನ–ವಿಶೇಷವಾದ ಅಲಂಕಾರ. ಅನುಲೇಪನ–ಸುಗಂಧ ದ್ರವ್ಯ].

೯೮. [ಲೋಕವಶ್ಯದ ತಿಲಕ–ಲೋಕವನ್ನು ವಶಮಾಡಿಕೊಳ್ಳುವ ಶಕ್ತಿಯುಳ್ಳವರಿಗೆ ತಿಲಕಸ್ವರೂಪಳಾದವಳು. ವಿಗಡಮುನಿಚಿತ್ತಾಕರುಷಣದ ಮಂತ್ರವಾದವೊ–ಅಸಾಧಾರಣವಾದ ಮುನಿಗಳ ಚಿತ್ತವನ್ನು ಆಕರ್ಷಿಸುವ ಸಾಮರ್ಥ್ಯವುಳ್ಳ ಮಂತ್ರೋಚ್ಚಾರಣೆಯಂತಿರುವವಳು. ಲೋಕಸೌಂದರ್ಯೈಕಸರ್ಗ–ಲೋಕದ ಸೌಂದರ್ಯವೆಲ್ಲ ಸೇರಿ ಆಗಿರುವ ಸೃಷ್ಟಿ. ನಾಕಸುಖಸಾಕಾರ–ಸ್ವರ್ಗದ ಸುಖವೇ ಮೂರ್ತಿವೆತ್ತಂತಿರುವವಳು. ತಾಣ–ಸ್ಥಾನ. ಚಿತ್ರ–ಆಶ್ಚರ್ಯಕರ. ಬರವು–ಆಗಮನ].

೯೯. [1]ಪರಮಪುಣ್ಯವದೇನು (ಅ ಆ ಕುಮಾ), ಸ್ತೀಪಾ (ಕ).

[ತುರಗಮೇಧ–ಅಶ್ವಮೇಧ. ಕ್ರತು–ಯಜ್ಞ. ಕಾಂಬರೆ–ಕಾಣಲು ಸಾಧ್ಯವಿಲ್ಲ. ಹೊರೆದ–ಕಾಪಾಡಿಕೊಂಡುಬಂದ. ಮಾಗಧರು–ಹೊಗಳುಭಟ್ಟರು].

ಜನಮನದ ಸಂಕಲೆವನೆಯೊ ಲೋ-
ಚನಮೃಗದ ತಡೆವೇಂಟೆಕಾತಿಯೊ
ಮನುಮಥನ ಸಂಜೀವನೌಷಧಿಯೋ ಮಹಾದೇವ ।
ಮನಸಿಜನ ಮಾಜಿಂಕ ಕಾಮುಕ-
ಜನದ ಜೀವಾರ್ಥಕ್ಕೆ ವಿಭುವೆಂ-
ದೆನಿಸಿದೂರ್ವಶಿ ಬಂದಳರ್ಜುನದೇವನರಮನೆಗೆ ॥ ೧೦೦ ॥

ಬಂದಳೂರ್ವಶಿ ಬಳ್ಳಿಮಿಂಚಿನ
ಮಂದೆಯಲಿ ಮುರಿದಿಳಿವ [1]ಮಜ[3]ಮುಗಿ-
ಲಿಂದುವೊಲು[1] ದಂಡಿಗೆಯನಿಳಿದಳು ರಾಜಭವನದಲಿ ।
ಮುಂದೆ ಪಾಯವಧಾರು ಸಖಿಯರ
ಸಂದಣಿಯ ಸಿಂಜಾರವದ ಸೊಗ-
ಸಿಂದ ಶಬ್ದಬ್ರಹ್ಮ ಸೋತುದು ಸೊರಹಲೇನೆಂದ ॥ ೧೦೧ ॥

ಬಾಗಿಲಲಿ ಬಾಗಿಲಲಿ ನಿಂದರು
ಸೋಗೆಗಣ್ಣಬಲೆಯರು ಸೆಜ್ಜೆಯ
ಬಾಗಿಲಲಿ ಚಾಮರದ [1]ಛತ್ರ[1]ದ ಚಪಲೆಯರು ಸಹಿತ ।
ಆ ಗರುವೆ ಹೊಕ್ಕಳು ಮಹಾಹಿಯ
ಭೋಗತಲ್ಪದ ಹರಿವೊಲಿಹ ಶತ-
ಯಾಗಸುತನನು ಕಂಡಳಂಗನೆ ಮಣಿಯ ಮಂಚದಲಿ ॥ ೧೦೨ ॥

---

೧೦೦. [ಸಂಕಲೆ-ಸಂಕೋಲೆ. ಸಂಕಲೆವನೆ-ಸರಪಣಿಯಿಂದ ಬಿಗಿದು ಇಟ್ಟಿರುವ ಮನೆ (ಸೆರೆಮನೆ). ಲೋಚನಮೃಗ-ನೋಡುವವರ ಕಣ್ಣೆಂಬ ಜಿಂಕೆ. ತಡೆವೇಂಟೆಕಾತಿ-ತಡೆದು ಬೇಟೆಯಾಡುವವಳು. ಸಂಜೀವನೌಷಧಿ-ಪುನರುಜ್ಜೀವನಗೊಳಿಸುವ ಔಷಧಿ. ಮಾಜಿಂಕ-ಪ್ರತಿಸ್ಪರ್ಧಿ, ಎದುರಾಳಿ. ಕಾಮುಕಜನದ ಜೀವಾರ್ಥಕ್ಕೆ ವಿಭು-ಕಾಮುಕರ ಜೀವವೆಂಬ ಸಂಪತ್ತಿಗೆ ಒಡೆಯಳು].

೧೦೧. [1]ಮರಿಮುಗಿಲಂದದಲಿ (ಅ ಕುಮಾ), ಸ್ವೀಪಾ (k, ಅ).

[ಮಂದೆ-ಗುಂಪು, ಸಮೂಹ. ಮುರಿದಿಳಿವ-ತಿರುಗಿ ಇಳಿಯುವ. ಮಜ[3]ಮುಗಿಲಿಂದು-ಮರೆಮಾಡಿರುವ ಮೋಡದ ಹಿಂದೆ ಅಡಗಿರುವ ಚಂದ್ರ. ದಂಡಿಗೆ-ಪಲ್ಲಕ್ಕಿ, ಮೇನೆ. ಪಾಯವಧಾರು-ಪಾದವೆಚ್ಚರಿಕೆ. ಸಂದಣಿ-ಗುಂಪು. ಸಿಂಜಾರವ-ಕಾಲ್ಗೆಜ್ಜೆಗಳ ಮಧುರ ಧ್ವನಿ. ಶಬ್ದಬ್ರಹ್ಮ-ಓಂಕಾರನಾದ. ಸೊರಹು-ಗಳಹು, ಹರಟು].

೧೦೨. [1]ಹಡಪ (ಅ ಆ ಕುಮಾ), ಸ್ವೀಪಾ (ಕ).

ಎಳೆಯ ಬೆಳುದಿಂಗಳ ವೊಲೀಕೆಯ
ಥಳಥಳಿಪ ಮುಖಚಂದ್ರಮನ ತಂ-
ಬೆ[1]ಲರು[1] ಸುಳಿವುದು ಸಾರತರಪರಿಮಳದ [2]ಹರಹಿನಲಿ[2] ।
ತಿಳಿದುದೀತನ ನಿದ್ರೆ ಕರಣಾ-
ವಳಿಯ ಪರಮಪ್ರೀತಿರಸದಲಿ
ಮುಳುಗಿ ಸುಖಭಾರದಲಿ ಭುಲ್ಲವಿಸಿದನು ಕಲಿಪಾರ್ಥ ॥ ೧೦೩ ॥

ಏ[ನಿ] ಬಿಜಯಂಗೈದಿರಿತ್ತಲು
ಮಾನನಿಧಿ ಕುಳ್ಳಿರಿ ಸುರೇಂದ್ರನ
ಮಾನಿನಿಯರಭಿವಂದನೀಯರು ನಾವ್ ಕೃತಾರ್ಥರಲಾ ।
ಏನು ಬೆಸ[1]ನೆ[1]ನಗೇನು ಹದ ನಿಮ-
ಗಾನು ಮಗನುಪಚಾರವೇಕೆ ಮ-
ಸೋನುರಾಗದಲಱಿಹಿಯೆಂದನು ಪಾರ್ಥನೂರ್ವಶಿಗೆ ॥ ೧೦೪ ॥

ನುಡಿಗೆ ಬೆಱಗಾದಳು ಮನೋಜನ
ಸಡಗರಕೆ ತೆಕ್ಕೆದಳು ಪಾರ್ಥನ
ನಡವಳಿಗೆ ಮೆಚ್ಚಿದಳು ಬೆಚ್ಚಿದಳಂಗಜಾಸ್ತ್ರದಲಿ ।
ಕಡುಗಿದಳು ಖಾತಿಯಲಿ [1]ಲಜ್ಜೆಯ[1]
ಬಿಡೆಯದಲಿ ಭಯಗೊಂಡಳೂರ್ವಶಿ
ಮಿಡುಕಿದಳು ವಿವಿಧಾನುಭಾವದ ರಸದ ಭಂಗಿಯಲಿ ॥ ೧೦೫ ॥

---

೧೦೨. [ಸೋಗೆಗಣ್ಣಬಲೆ-ನವಿಲಿನ ಕಣ್ಣನಂಥ ಕಣ್ಣುಳ್ಳ ಸ್ತ್ರೀ. ಸೆಜ್ಜೆ-ಶಯ್ಯಾಗೃಹ. ಗರುವೆ-ಶ್ರೇಷ್ಠಳು. ಮಹಾಹಿ-ಮಹಾಸರ್ಪ, ಆದಿಶೇಷ. ಭೋಗತಲ್ಪ-ಹೆಡೆಯ ಕೆಳಗಿನ ಹಾಸುಗೆ ಅಥವಾ ಭೋಗಿಸುವ ಹಾಸುಗೆ. ಹರಿ-ವಿಷ್ಣು. ಶತಯಾಗಸುತ-ಇಂದ್ರನ ಮಗ, ಅರ್ಜುನ].

೧೦೩. [1]ಳಗು (ಅ ಆ ಕುಮಾ), ಸ್ವೀಪಾ (ಕ). [2]ಪೂರದಲಿ (ಅ ಆ ಕುಮಾ), ಸ್ವೀಪಾ (ಓ).
[ತಂಬೆಲರು-ತಂಗಾಳಿ. ಕರಣಾವಳಿ-ಪಂಚೇಂದ್ರಿಯಗಳು. ಭುಲ್ಲವಿಸು-ಹಿಗ್ಗು].

೧೦೪. [1]ಸೆ (ಅ ಕುಮಾ).
[ಏನಿ-ಏನಿರ್, ಏನಿಂ; ಮಧ್ಯಮಪುರುಷ ಬಹುವಚನದ ಸಂಕ್ಷಿಪ್ತ ರೂಪ. ಬೆಸನು-ಅಪ್ಪಣೆ. ಹದ-ಸಮಾಚಾರ].

೧೦೫. [ಮನೋಜ-ಮನ್ಮಥ. ತೆಕ್ಕು-ಬೆದರು. ಅಂಗಜಾಸ್ತ್ರ-ಮನ್ಮಥನ ಬಾಣ. ಕಡುಗು-ಕುದಿ, ಬಿರುಸಾಗು, ಕಠಿನವಾಗು. ಖಾತಿ-ಕೋಪ. ಬಿಡೆಯ-ಲಜ್ಜೆ, ಸಂಕೋಚ. ಮಿಡುಕು ಸಂವೇದನೆಪಡು. ಅನುಭಾವ-ಮನಸ್ಸಿನ ಸ್ಥಿತಿಯನ್ನು ಸೂಚಿಸುವ ವಿವಿಧ ಚಿಹ್ನೆಗಳು. ಭಂಗಿ-ರೀತಿ].

ವಿಕಳಮತಿಯೋ ಮೋಣಿವ ನಪುಂ-
ಸಕನೊ ಜಡನೋ ಶ್ರೋತ್ರಿಯನೊ ಬಾ-
ಧಕನೊ ಖಳನೋ ಖೂಳನೋ ಮಾನವವಿಕಾರವಿದೋ ।
ವಿಕಟತಪಸಿನ ದೇವದೈತ್ಯರ
ಮಕುಟವಾಂತುದು ವಾಮ[1]ಪಾದ[1]ವ
ನಕಟ ಕೆಟ್ಟೆನಲಾ ಯೆನುತ ಕರಗಿದಳು [2]ಕಮಲಾ[2]ಕ್ಷಿ ॥ ೧೦೬ ॥

ಎಲವೊ ರಾಯನ ಹೇಳಿಕೆಯಲಂ-
ಡಲೆದನೆನ್ನನು ಚಿತ್ರಸೇನಕ-
ನಲುಗಿ ನಟ್ಟವು ಕಾಮಶರವೆನ್ನಂತರಂಗದಲಿ ।
ಒಲಿದು ಬಂದಬಲೆಯರ ಟೆಕ್ಕರಿ-
ಗಳೆವುದೇ ವಿಟಧರ್ಮವಕಟಾ
ತಿಳಿಯಲಾ ತಾನಾವಳೆಂಬುದನೆಂದಳಿಂದುಮುಖಿ ॥ ೧೦೭ ॥

ಶಿವಶಿವೀ ಮಾತೇಕೆ ಕಾಮನ
ಬವಣೆಯಲಿ ನೀವಜಿಯದಿರಿ ವಾ-
ಸವನ ನೇಮವು ಚಿತ್ರಸೇನನ ನುಡಿಗಳಂತಿರಲಿ ।
ಎಮ[1]ಗ[1]ಕರ್ತವ್ಯದಲಿ ಮನಸಂ-
ಭವಿಸುವುದೆ ನೀವೆಮ್ಮ ವಂಶೋ-
ದ್ಭವಕೆ ಜನನಿಯಲಾ ಯೆನುತ [2]ವಿನಯದಲಿ ನರ ನುಡಿದ[2] ॥ ೧೦೮ ॥

---

೧೦೬. [1]ಚರಣ (ಅ ಕ ಓ). [2]ನಳಿನಾ (ಅ ಕುಮಾ), ಸ್ವೀಪಾ (ಓ).
[ವಿಕಳಮತಿ-ಭ್ರಾಂತಿಗೊಂಡ ಬುದ್ಧಿ. ಜಡ–ಮಂದಬುದ್ಧಿಯುಳ್ಳವನು. ಶ್ರೋತ್ರಿಯ–ವೇದಸಂಪನ್ನ. ಬಾಧಕ-ಹಿಂಸೆಯನ್ನುಂಟುಮಾಡುವವನು. ಖಳ–ನೀಚ. ಖೂಳ ದುಷ್ಟ. ವಿಕಟತಪಸಿನ....ವಾಮಪಾದವನು–ಘೋರವಾದ ತಪಸ್ಸು ಮಾಡಿದ ದೇವತೆಗಳ ಮತ್ತು ರಾಕ್ಷಸರ ಕಿರೀಟವು (ನನ್ನ) ಎಡಪಾದವನ್ನು ಧರಿಸುವುದು].

೧೦೭. [ಅಂಡಲೆ–ಕಾಡು, ಪೀಡಿಸು. ಟೆಕ್ಕಂಗಳೆ–ತಿರಸ್ಕರಿಸು. ವಿಟಧರ್ಮ–ಕಾಮುಕರು ಅನುಸರಿಸಬೇಕಾದ ರೀತಿನೀತಿ].

೧೦೮. [1]ಗೆ (ಅ ಕುಮಾ), ಸ್ವೀಪಾ (ಓ). [2]ಕೈಮುಗಿದು ಪೊಡಮಟ್ಟ (ಓ).
[ಬವಣೆ–ಕೋಟಲೆ. ವಾಸವ-ಇಂದ್ರ. ನೇಮ–ಅಪ್ಪಣೆ. ಅಕರ್ತವ್ಯ-ಕರ್ತವ್ಯ ವಲ್ಲದ್ದು. ಸಂಭವಿಸು-ಹುಟ್ಟು, ತೊಡಗು].

ಮೊಱೆಯ ಮಾತಂತಿರಲಿ ಸಾಕದ
ಮಱೆದು ಕಳೆ ಮಾನಿನಿಯರಿಚ್ಛೆಯ-
ನಱಿಯದವನು ಸುರೇಂದ್ರನಾಗಲಿ ಚಂದ್ರನಾಗಿರಲಿ।
ಕುಱಿಕಣಾ ಫಡ ಖೂಳ ನೀನೆಂ-
ತಱಿವೆಯೆನೆ ನಡನಡುಗಿ ಕೈಮುಗಿ-
ದೆಱಗಿ ಮಗುಳೀಮಾತನೆಂದನು ಪಾರ್ಥನೂರ್ವಶಿಗೆ ॥ ೧೦೯ ॥

ಇದು ಮನುಷ್ಯಶರೀರ ತದ್ಧ-
ರ್ಮದಲಿ ತನ್ನವಸಾನಪರಿಯಂ-
ತಿದಱೊಳವ್ಯಭಿಚಾರದಲಿ ವರ್ತಿಸಿದ ಬಳಿಕಿನಲಿ।
ತ್ರಿದಶರಲ್ಲಿಗೆ ಬಂದರಾ ಮಾ-
ರ್ಗದಲಿ ನಡೆವುದು ದೇವತಾದೇ-
ಹದಲಿ ಬಲವತ್ತರವು ದೇಹವಿಶೇಷವಿಧಿಯೆಂದ ॥ ೧೧೦ ॥

ಅಹುದಹುದಲೇ [1]ಶ್ರೌತ[1]ಪಥದಲಿ
ಬಹಿರಿ ನೀವೇ ಸ್ಮಾರ್ತವಿಧಿಸಂ-
ನಿಹಿತರೆಂಬುದನಱಿಯದೇ ಮೂಜಗದ ಜನವೆಲ್ಲ।
ಮಹಿಳೆಯೊಬ್ಬ[2]ಳೊಳ್ಳೆ[2]ವರೊಡಗೂ-
ಡಿಹರು ನೀವೇನಲ್ಲಲೇ ನಿ-
ಸ್ಪೃಹರು ನೀವ್ ನಮ್ಮಲ್ಲಿ ಹರಹರ ಯೆಂದಳಿಂದುಮುಖಿ ॥ ೧೧೧ ॥

---

೧೦೯. [ಮೊಱೆ-ರಕ್ತಸಂಬಂಧ. ಮಗುಳ್-ಮತ್ತೆ].

೧೧೦. [ಅವಸಾನ-ಮರಣ, ಸಾವು. ಅವ್ಯಭಿಚಾರ-ವ್ಯಭಿಚಾರ (ಪರಸ್ತ್ರೀಸಂಗ) ಮಾಡದಿರುವುದು. ತ್ರಿದಶರು-ದೇವತೆಗಳು ಬಲವತ್ತರ-ನಿರ್ಬಂಧ. ದೇಹವಿಶೇಷವಿಧಿ-ದೇವತಾದೇಹವಾಗಿದ್ದರೆ ಅದಕ್ಕೆ ಅನ್ವಯಿಸುವ ವಿಶಿಷ್ಟವಾದ ನಡವಳಿಕೆಯ ಕ್ರಮ].

೧೧೧. [1]ಶಾಸ್ತ್ರ (ಓ). [2]ಳಿಗೈ (ಅ).
[ಶ್ರೌತಪಥ-ವೈದಿಕಧರ್ಮ ಮಾರ್ಗ. ಸ್ಮಾರ್ತವಿಧಿಸನ್ನಿಹಿತರು-ಸ್ಮೃತಿಗಳಲ್ಲಿ ಹೇಳಿರುವ ವಿಧಿಗಳಿಗೆ ಅನುಸಾರವಾಗಿ ನಡೆಯುವವರು. ನಿಸ್ಪೃಹರು-ಆಶಾರಹಿತರು].

ಕಾಯ ನೇಮದಲಂದು ಕಮಲದ-
ಳಾಯತಾಕ್ಷಿಯು [1]ಕೂಟ[1]ವೈವರಿ-
ಗಾಯಿತದು ತಪ್ಪೇನು ಜನನಿಯ ನುಡಿಯಲಂಘ್ಯವಲೇ ।
ಕಾಯಸೌಖ್ಯಕೆ ಕಾಮ[2]ತತ್ತ್ವ[2] ವಿ-
ಡಾಯಿ[3]ತಪ್ಪದೆ[3] ವೇಡೆಗೊಂಡು ನ-
ವಾಯಿಯಲಿ ದುರ್ಗತಿಗೆ ದುಪ್ಪಾಳಿಸುವನಲ್ಲೆಂದ ॥ ೧೧೨ ॥

ತಾಯ ನೇಮದಲೈವರಿಗೆ ಕಮ-
[1]ಳಾಯತಾಕ್ಷಿ[1]ಯು ಕೂಟವೇ ಸುರ-
ರಾಯ ನಿಮ್ಮಯ್ಯ[2]ನಲೆ[2] ಲಂಘ್ಯವೆ ನಿನಗೆ ಪಿತೃವಚನ ।
ರಾಯನಟ್ಟಲು ಬಂದೆನೀ ಕುಸು-
ಮಾಯುಧನ ಕಗ್ಗೋಲೆಯ [3]ತಿವಜುವು[3]-
ಪಾಯವನು ನೀ ಬಲ್ಲೆ ಯೆಂದಳು ವನಿತೆ ವಿನಯದಲಿ ॥ ೧೧೩ ॥

ಕಾಡಲಾಗದು ನಿಮ್ಮೊಡನೆ ಮುರಿ-
ದಾಡಲಮ್ಮೆನು ಮನಕೆ ಧೈರ್ಯದ
ಜೋಡತೊಟ್ಟದಿರಾಗಿ ನಿಲೆ ನನೆಯಂಬು ನಾಂಟುವವೇ ।
ಖೋಡಿಯೇಕಿದಕವ್ವೆ ಮಕ್ಕಳ
ನೋಡಬಂದೊಡೆ ಜೇಜಿ[3] ಕಷ್ಟವ-
ನಾಡುವರೆ ಬಲ್ಲವರು ಬಿಜಯಂಗೈಯಿ ನೀವೆಂದ ॥ ೧೧೪ ॥

---

೧೧೨. [1]ಸಂಗ (ಅ ಕ ಪ್ರ). [2]ಸುಖದ (ಅ ಆ ಕುಮಾ), ಸ್ವೀಪಾ (ಓ k). [3]ತಕುವಕೆ (ಅ ಆ ಕುಮಾ), ಸ್ವೀಪಾ (ಓ).
[ಅಲಂಘ್ಯವು-ಮೀರತಕ್ಕದ್ದಲ್ಲ. ಕಾಯಸೌಖ್ಯ-ದೇಹಸುಖ. ಕಾಮತತ್ತ್ವವಿಡಾಯಿ-ಕಾಮಶಾಸ್ತ್ರದ ರೀತಿ ನೀತಿಗಳ ವೈಖರಿ. ವೇಡೆಗೊಳ್ಳು-ಆಕ್ರಮಣಕ್ಕೆ ಒಳಗಾಗು, ವಶವಾಗು. ನವಾಯಿ-ಹೊಸತನ. ದುಪ್ಪಾಳಿಸು-ಮುನ್ನುಗ್ಗು. (ದೇಹಸುಖಕ್ಕಾಗಿ ಕಾಮತತ್ತ್ವದ ಬೆಂಬಲವನ್ನು ಪಡೆದು ನನಗೆ ಸಲ್ಲದ ಹೊಸ ರೀತಿಯಲ್ಲಿ ದುರ್ಗತಿಗೆ ಮುನ್ನುಗ್ಗುವವನು ನಾನಲ್ಲ)].

೧೧೩. [1]ಲಾ (ಅ), ಸ್ವೀಪಾ (ಅ ಕುಮಾ ಪ್ರ). [2]ನುವಿ (ಸರ್ವತ್ರ). [3]ಕೆದರು (ಆ ಪ್ರ ಕುಮಾ), ಕಳಚು (ಓ); ಸ್ವೀಪಾ (ಅ ಕ).
[ಲಂಘ್ಯವೆ-ಮೀರತಕ್ಕದ್ದೇ? ಕುಸುಮಾಯುಧ-ಮನ್ಮಥ. ಕಗ್ಗೋಲೆ-ಘೋರವಾದ ಕೊಲೆ. ತಿವಜು-ನಿವಾರಿಸು, ತಡೆಗಟ್ಟು].

೧೧೪. [ಮುರಿದಾಡು-ತಿರುಗಿ ಆಡು, ಎದುರಾಡು. ಅಮ್ಮೆನು-ಸಮರ್ಥನಲ್ಲ. ಜೋಡು-ಕವಚ. ನನೆಯಂಬು-(ಮನ್ಮಥನ) ಹೂಬಾಣ. ಖೋಡಿ-ಸಂಶಯ, ತಪ್ಪು, ಅಪರಾಧ, ಕಳಂಕ].

ತುಳುಕಿತದ್ಭುತರೋಷ ಸುಯ್ಲಿನ
ಝುಳ[1]ಹೊ[1]ಡೆದು ಮೂ[2]ಗು[2]ತಿಯು ಮುತ್ತಿನ
ಬೆಳ[3]ಗು[3] [4]ಕ[4]ಂದಿತು ಕುಂದಿತಮಳಚ್ಛವಿ ಮುಖಾಂಬುಜದ ।
ಹೊಳೆಹೊಳೆವ ಕೆಂದಳದ ಸೆಳ್ಳುಗು-
[5]ಗರ್[5]ಳ ಮಯೂಖದ ಮಣಿಯ ಮುದ್ರಿಕೆ-
ಗಳ ಮರೀಚಿಯುಲಿಸೆದುದೆತ್ತಿದ ಹಸ್ತವೂರ್ವಶಿಯ ॥ ೧೧೫ ॥

ನರಮೃಗಾಧಮ ನಿಮ್ಮ ಭಾರತ-
ವರುಷಭೂಮಿಯೊಳೊಂದು ವರುಷಾಂ-
ತರ ನಪುಂಸಕನಾಗಿ ಚರಿಸು ನಿರಂತರಾಯದಲಿ ।
ಹರಿಯ ಮಱೆಹೊಗು ಹರನ ನೀನನು-
ಸರಿಸು ನಿಮ್ಮಯ್ಯಂಗೆ ಹೇಳಿದು
ನಿರುತ ತಪ್ಪದು ಹೋಗೆನುತ ಮೊಗದಿರುಹಿದಳು [1]ಚಪಳೆ[1] ॥ ೧೧೬ ॥

ಅರಸ ಕೇಳೈ ಚಿತ್ರಸೇನನ
ಕರಸಿ ಊರ್ವಶಿ ಪಾರ್ಥ ಮಾಡಿದ
ದುರುಳತನವನು ದೂಱಿದೊಡೆ ಸುರಪತಿಯು ಸಂತೈಸಿ ।
ಸುರಪತಿಗೆ ಗಂಧರ್ವನಿವರಿ-
ಬ್ಬರ [1]ವಿ[1]ರೋಧನಿಬಂಧನವನೆ-
ಚ್ಚಱಿಸಲರ್ಜುನನರಮನೆಗೆ ಬಂದನು ಬಲಧ್ವಂಸಿ ॥ ೧೧೭ ॥

---

೧೧೫. ವೊ (ಅ), ಸ್ವೀಪಾ (ಪ್ರ ಅ ಕುಮಾ). [2]ಕು (ಅ ಅ), ಸ್ವೀಪಾ (ಪ್ರ ಕುಮಾ). [3]ಕು (ಅ ಕುಮಾ), ಸ್ವೀಪಾ (ಪ್ರ ಕ). [4]ಕು (ಅ ಕುಮಾ), ಸ್ವೀಪಾ (ಅ ಕ). [5]ರೊ (ಅ ಕುಮಾ), ಸ್ವೀಪಾ (ಪ್ರ ಅ).

[ಅಮಳಚ್ಛವಿ–ಪರಿಶುದ್ಧವಾದ ಕಾಂತಿ. ಕೆಂದಳ–ಕೆಂಪಾದ ಅಂಗೈ. ಸೆಳ್ಳುಗುರ್–ಚೂಪಾದ ಉಗುರು. ಮಯೂಖ–ಕಿರಣ, ರಶ್ಮಿ. ಮುದ್ರಿಕೆ–ಉಂಗುರ. ಮರೀಚಿ–ಕಾಂತಿ. ಎಸೆ–ಮೆರೆ].

೧೧೬. [1]ತರಳೆ (ಕ ಓ k ಪ್ರ).

[ನಿರಂತರಾಯದಲಿ–ಯಾವ ಅಡೆತಡೆಯೂ ಇಲ್ಲದೆ. ನಿರುತ–ಸತ್ಯ, ನಿಶ್ಚಯ].

೧೧೭. [1]ನಿ (ಅ ಕುಮಾ ಅ), ಸ್ವೀಪಾ (ಓ ಪ್ರ).

[ದುರುಳತನ–ದುಷ್ಟತನ, ಬಲಧ್ವಂಸಿ–ಇಂದ್ರ].

ಎಲೆ ಕಿರೀಟಿ ವೃಥಾ ಮನೋವ್ಯಥೆ
ತಳಿತುದೇಕೂರ್ವಶಿಯು ಶಾಪದ-
ಲಳುಕಿದೈ ತಕ್ಕೊ ೃಥ ನಿನಗುಪಕಾರವಾಯ್ತು ಕಣಾ ।
ಹಳುವದಲಿ ಹನ್ನೆರಡುವರುಷದ
[1]ಕಳ[1]ಹಿನಜ್ಞಾತದಲಿ ವರುಷವ
ಕಳೆವೊಡಿದು ಸಾಧನವೆಯಾಯ್ತು ಶಿಖಂಡಿತನವೆಂದ ॥ ೧೧೮ ॥

ಎಂದು ಪಾರ್ಥನ ಸಂತವಿಟ್ಟು ಪು-
ರಂದರನು ತನ್ನರಮನೆಗೆ ನಡೆ-
ತಂದನರ್ಜುನಸಹಿತ ವಿವಿಧವಿನೋದವಿಭವದಲಿ ।
ಅಂದು ಶಿಖಿಪವನಾದಿಗಳು ನಲ-
ವಿಂದ ಕೊಟ್ಟರು ಶರವನಮರೀ-
ವೃಂದ ಸೂಸಿತು ಸೇಸೆಯನು ಜಯರವದ ರಭಸದಲಿ ॥ ೧೧೯ ॥

ಅರಸ ಕೇಳೈ ಪಾರ್ಥನಿದ್ದನು
ವರುಷವೈದಱೊಳಿಂದ್ರಭವನದ
ಸಿರಿಯ ಸಮ್ಮೇಳನದ ಸಗಾಢದ [1]ಸೌಮನಸ್ಯ[1]ದಲಿ ।
ನರನ ಹದನೇನೋ ಧನಂಜಯ-
ನಿರವದೆಲ್ಲಿ ಕಿರೀಟಿ ನಮ್ಮನು
ಮಱದು ಕಳೆದನಲಾ ಎನುತ ಯಮಸೂನು ಚಿಂತಿಸಿದ ॥ ೧೨೦ ॥

---

೧೧೮. [1]ತಲ (ಅ ಅ ಕುಮಾ), ಸ್ವೀಪಾ (ಓ).

[ತಳಿತುದೇಕೆ-ಉಂಟಾಯಿತೇಕೆ, ಕಾಣಿಸಿಕೊಂಡಿತೇಕೆ. ಅಳುಕು-ಹೆದರು. ಹಳುವ-ಕಾಡು. ಕಳಹು-ಕಳೆಯುವಿಕೆ. ಸಾಧನ-ಉಪಾಯ. ಶಿಖಂಡಿತನ-ನಪುಂಸಕತ್ವ].

೧೧೯. [ಸಂತವಿಡು-ಸಮಾಧಾನಮಾಡು. ಪುರಂದರ-ಇಂದ್ರ. ಅಮರೀವೃಂದ-ದೇವತಾ ಸ್ತ್ರೀಯರ ಸಮೂಹ. ಸೂಸು-ಚೆಲ್ಲು. ಸೇಸೆ-ಮಂತ್ರಾಕ್ಷತೆ].

೧೨೦. [1]ಸಾರಸೌಖ್ಯ (ಕ ಓ k ಅ).

[ಸಿರಿಯ....ಸೌಮನಸ್ಯದಲಿ-ಸಂಪತ್ತಿನ ಕೂಟದ ಗಾಢವಾದ ಮನಃಪ್ರಸನ್ನತೆಯಲ್ಲಿ. ಹದನು-ಸಮಾಚಾರ].

ಮಱೆದನೋ ನಮ್ಮನಿಬರನು ದಿಟ
ಮಱೆಯಲುಚಿತವಲೇ ಸುರೇಂದ್ರನ
ಸೆಱಗು ಸೋಂಕುವ ಸಲುಗೆ[1]ಯುಂಟೇ[1] ಮರ್ತ್ಯಜಾತಿಯಲಿ ।
ಉಱುವ ಸುರಪದಸಾರಸೌಖ್ಯದೊ-
ಳಱಿಯನೋ ನಮ್ಮಾ ಪ್ರವಾಸದ
ಸೆಱಗೆ ನರನಂಘೈಸನೆಂದವನೀಶ ಚಿಂತಿಸಿದ ॥ ೧೨೧ ॥

ಅರಸ ಕೇಳ್ ಹಿಮದ ಹೊಯ್ಲಿನ
ಸರಸಿಜಕೆ ರವಿಯಂತೆ ಶಿಶಿರದ
ಸರಿದಲೆಯ ವನದಲಿ ವಸಂತನ ಬರವಿನಂದದಲಿ ।
ಸುರವಿಮಾನಶ್ರೇಣಿಗಳ ನವ-
ಪರಿಮಳದ ಪೂರದಲಿ ಭಾರತ-
ವರುಷಕಿಳಿದನು ಪಾರ್ಥ ಬಂದನು ಧರ್ಮಜನ ಹೊರೆಗೆ ॥ ೧೨೨ ॥

---

*೪. ದೂರ್ವಾಸಾತಿಥ್ಯ

ಕೇಳು ಜನಮೇಜಯ ಧರಿತ್ರೀ-
ಪಾಲ ಪಾಂಡುಕುಮಾರಕರು ವಿಪಿ-
ನಾ[1]ಲಯ[1]ದೊಳನುಭವಿಸಿದರು ಸಂವತ್ಸರಾಷ್ಟಕವ ।
ಲೀಲೆ ಮಿಗೆಯೈತಂದು ಯಮುನಾ
ಕೂಲದಲಿ ವರತೀರ್ಥ ಸೇವಾ
ಶೀಲರಿದ್ದರು ಸಕಲ ಮುನಿಜನಸಹಿತ ಹರುಷದಲಿ ॥ ೧೨೩ ॥

---

೧೨೧. [ಸೆಱಗು-ವಸ್ತ್ರದ ಅಂಚು. ಉಱುವ-ಶ್ರೇಷ್ಠವಾದ. ಸುರಪದ-ದೇವತೆಗಳ ಪದವಿ. ಅಂಘೈಸು-ಅಪೇಕ್ಷಿಸು, ಇಷ್ಟಪಡು].

೧೨೨. [ಶಿಶಿರದ, ಸರಿದಲೆಯ (ಸರಿದ + ಅಲೆಯ) ವನದಲಿ-ಶಿಶಿರಋತುವಿನ ಕಳೆದುಹೋದ ಹಿಂಸೆಯ ವನದಲ್ಲಿ. ಬರವು-ಆಗಮನ. ಪೂರ-ಪ್ರವಾಹ. ಭಾರತವರುಷ-ಭರತಖಂಡ, ಭರತ ಭೂಮಿ. ಹೊರೆ-ಸಮೀಪ].

೧೨೩. [1]ನಾಂತರ (ಕುಮಾ ಪ್ರ), ಸ್ವೀಪಾ (ಅ).
[ಸಂವತ್ಸರಾಷ್ಟಕ-ಎಂಟುವರುಷಗಳು. ಕೂಲ-ತೀರ].

---

* ನಾವು ಆಧಾರವಾಗಿಟ್ಟುಕೊಂಡಿರುವ "ಅ" ಹಸ್ತಪ್ರತಿಯಲ್ಲಿ ಧೂರ್ವಾಸಾತಿಥ್ಯ ಪ್ರಕರಣವನ್ನು ಮೊದಲು ಬಿಟ್ಟುಬಿಡಲಾಗಿತ್ತು. 'ಶ್ರೀ' ಯವರ ಸೂಚನೆಯಂತೆ

ಆ ಸುಯೋಧನನೇಕಛತ್ರ ವಿ-
ಳಾಸದುರ್ವೀ ರಾಜ್ಯಪದ ವಿ-
ನ್ಯಾಸ ವಿಭವದ ಸುಖದ [1]ಸುಗ್ಗಿಯ[1]ನನುಭವಿಸುತಿರಲು ।
ಭೂಸುರವ್ರಜ[2]ನಿಕರ[2] ವರ ವಿ-
ನ್ಯಾಸ ಮುನಿಜನ ಸಹಿತ ವರದೂ-
ರ್ವಾಸ ಮುನಿಪತಿ ಬಂದು ಹೊಕ್ಕನು ಹಸ್ತಿನಾಪುರವ ॥ ೧೨೪ ॥

ಷಡುರಸಾನ್ನದಲಾದರಣೆಯಿಂ-
ದುಡುಗೊರೆಗಳಿಂ ತುಷ್ಟಿಬಡಿಸಿದ
ಪೊಡವಿಪಾಲಕ ಋಷಿಗಳಷ್ಟಾಶೀತಿ ಸಾವಿರವ ।
ಕಡು ಸುಖದ ಸಂನ್ಯಾಸಿವೇಷದ
ಮೃಡನು ಮುದದಲಿ ಕೌರವನ ವೈ-
ದಡವಿ ಮೆಚ್ಚಿದೆ ಮಗನೆ ಬೇಡೊಲಿದುದನು ನಿನಗೆಂದ ॥ ೧೨೫ ॥

ಅರಸ ಕೇಳಂಗೈತಳದಲಿಹ
ಪರುಷವನು ಕಲ್ಲೆಂದು ಟಿಕ್ಕೆಯ
ಹರಳಿನಲಿ ಹರುಷಿಸುವ ಮೂಢ ಮನುಷ್ಯರಂದದಲಿ ।
ಅರಸ ಕೌರವನೆಂದನಿನಿಬರು
ವೆರಸಿ ಪಾಂಡವರರಸಿಯುಣಲೊಡ-
ನಿರದೆ ಕವಳವ ಬೇಡಿಯಭ್ಯಾಗತರು ನೀವೆಂದ ॥ ೧೨೬ ॥

---

೧೨೪. [1]ಸೌಖ್ಯವ (ಕುಮಾ), ಸ್ವೀಪಾ (ಪ್ರ). [2]ವೆರಸಿ (ಪ್ರ).
[ಏಕಛತ್ರವಿಲಾಸ–ಚಕ್ರವರ್ತಿಪದವಿಯ ವೈಭವ. ಉರ್ವೀ–ಭೂಮಿ].

೧೨೫. [ಅಷ್ಟಾಶೀತಿ ಸಾವಿರ–88,000. ಮೃಡ–ದೂರ್ವಾಸ (ಅತ್ರಿಮಹರ್ಷಿಯಿಂದ ಅನಸೂಯೆಯಲ್ಲಿ ಶಂಕರನ ಅಂಶದಿಂದ ಜನಿಸಿದವನು)].

೧೨೬. [ಪರುಷ–ಸ್ಪರ್ಶಶಿಲೆ (ಆ ಶಿಲೆಯು ಸೋಕಿದ್ದೆಲ್ಲ ಚಿನ್ನವಾಗುತ್ತದೆಂದು ಪ್ರತೀತಿ). ಟಿಕ್ಕೆ–ಗಾಜಿನ ಮಣಿ. ಹರಳು–ಕಲ್ಲು ಚೂರು. ಕವಳ–ಒಂದು ತುತ್ತು, ಊಟ. ಅಭ್ಯಾಗತರು–ಕರೆಯದೆ ಬಂದ ಅತಿಥಿಗಳು].

ಆ ಪ್ರಕರಣದ 50 ಪದ್ಯಗಳಲ್ಲಿ 33 ಪದ್ಯಗಳನ್ನು ಆಯ್ದು ಇಲ್ಲಿ ಕೊಟ್ಟಿದೆ. ಈ ಪ್ರಕರಣದಲ್ಲಿ ನಾವು ನೋಡಿದ ಪ್ರತಿಗಳಲ್ಲಿ ಹೊಂದಾಣಿಕೆಯಿಲ್ಲದ ಪಾಠಾಂತರಗಳು ಇರುವುದರಿಂದ ಅವುಗಳನ್ನು ಕೊಡುವ ಗೋಜಿಗೆ ಹೋಗಿಲ್ಲ. ತೀರಾ ಅಗತ್ಯವಾದೆಡೆಗಳಲ್ಲಿ ಮಾತ್ರ ಕೊಟ್ಟಿರುತ್ತದೆ.

ಅಗಡು ಕೌರವನೊಡ್ಡಿದನಲಾ
ವಿಗಡವನು ಮುನಿಯುಗ್ರರೋಷದ
ಸೆಗಳಿಕೆಗೆ ಪಾಂಡವರು ಸವಿದುತ್ತಾದರಕಟೆನುತ ।
ದುಗುಡದಲಿ ಗಾಂಗೇಯ ವಿದುರಾ-
ದಿಗಳು ಮನೆಯೊಳಗಿತ್ತ ಕೌರವ
ನಗುತ ಕರ್ಣಾದಿಗಳ ಗಡಣದಿ ಹೊಕ್ಕನರಮನೆಯ ॥ ೧೨೭ ॥

ಮರುದಿವಸ ಷಡಿಯುಂಡ ಸಮಯವ-
ನಱಿದು ಮುನಿಪತಿ ಬರಲು ಕಪಟದ-
ನಿಱಿಗೆಯನು ಬಲ್ಲನೆ ಯುಧಿಷ್ಠಿರನೆದ್ದು ಸಭೆಸಹಿತ ।
ಕಿರಿದೆಡೆಯಲಿದಿರಾಗಿ ಭಕುತಿಯ
ಹೊಱಿಗೆಯಲಿ ಕುಸಿವಂತೆ ನೃಪ ಬಂ-
ದೆಱಗಿದನು ಮುನಿವರಗೆ ತನ್ನನುಜಾತರೊಡಗೂಡಿ ॥ ೧೨೮ ॥

ದೇಶ ಕಾನನ ವಸನ ವಲ್ಕಲ
ಭೂಸುರವ್ರಜ ಆತ್ಮ[1]ಜನ[1]ವು ಪ-
ಲಾಶಪರ್ಣವು ಪಾತ್ರೆ ಭೋಜನ ಕಂದಮೂಲಫಲ ।
ಈ ಸರಿತ್ಪಾನೀಯ ಮಜ್ಜನ
ವಾಸವೇ [2]ಗುರು[2]ಭವನ ರಾಜ್ಯ ವಿ-
ಲಾಸವೆಮ್ಮದು ಜೀಯ ಚಿತ್ತೈಸೆಂದ ಯಮಸೂನು ॥ ೧೨೯ ॥

---

೧೨೭. ಅಗಡು-ಕ್ರೂರಿ, ದುಷ್ಟ. ವಿಗಡ-ಕ್ರೂರವಾದ ಉಪಾಯ. ಸೆಗಳಿಕೆ-ತಾಪ, ಕಾವು. ಗಡಣ-ಸಮೂಹ].

೧೨೮. [ಅಱಿ-ತಿಳಿ. ನಿಱಿಗೆ-ರೀತಿ, ಕ್ರಮ. ಹೊಱಿಗೆ-ಹೊರೆ, ಭಾರ. ಕುಸಿ-ಬಾಗು. ಎಱಗು-ನಮಸ್ಕರಿಸು. ಅನುಜಾತರು-ತಮ್ಮಂದಿರು].

೧೨೯. [1]ಬಲ (ಪ್ರ ಅ). [2]ಗೃಹ (ಪ್ರ ಅ).
[ವಸನ-ಬಟ್ಟೆ. ವಲ್ಕಲ-ನಾರುಮಡಿ. ಭೂಸುರವ್ರಜ-ಬ್ರಾಹ್ಮಣರ ಸಮೂಹ. ಪಲಾಶಪರ್ಣ-ಮುತ್ತುಗದ ಎಲೆ. ಕಂದಮೂಲ ಫಲ-ಗಡ್ಡೆ ಗೆಣಸು ಮತ್ತು ಹಣ್ಣು. ಸರಿತ್-ನದಿ. ಪಾನೀಯ-ಕುಡಿಯುವ ನೀರು. ಮಜ್ಜನ-ಸ್ನಾನ. ಗುರುಭವನ-ದೊಡ್ಡಮನೆ. ವಿಲಾಸ-ವೈಭವ, ಸೊಗಸು].

ಧಾರುಣೀಪತಿ ಹೇಳಬಹುದುಪ-
ಚಾರವೇಕಿದು ರಾಜ್ಯಪದ ವಿ-
ಸ್ತಾರವಾದುದು ರಾಜಋಷಿ ನಿನಗಾರು ಸರಿಯಿನ್ನು ।
ಸಾರೆ[1]ಯಾಯ್ತು[1] ಸಮಯ [2][ಕ್ಷು-
ಧಾರ್ತವಹ್ನಿಯ][2] ವಿವಿಧ ಪೀಡಾ-
ಕಾರಕುಂಟೆ ಚಿಕಿತ್ಸೆಯೆಂದನು ಮುನಿ ನೃಪಾಲಂಗೆ ॥ ೧೩೦ ॥

ಆವ ಜನ್ಮದ ಸುಕೃತಫಲ ಸಂ-
ಭಾವಿಸಿದುದೊ ನಿಮ್ಮ ಬರವನ-
ದಾವ ಪಡೆವನು ಕೊಟ್ಟೆನೆಂದನು ನೃಪತಿ ಕೈಮುಗಿದು ।
ಆ ವಿಗಡ ಮುನಿ ಬಳಿಕನುಷ್ಠಾ-
ನಾವಲಂಬನಕತ್ತ ಯಮುನಾ
ದೇವಿ[1][ಯೆಡೆ][1] ಹೊಗಲಿತ್ತ ನೃಪ ಕರಸಿದನು ದುರುಪದಿಯ ॥ ೧೩೧ ॥

ಅರಸಿಯಾರೋಗಿಸಿದ ಭಾವವ
ಬರವಿನಲಿ ನೃಪನಱಿದು ಅರಸನ
ಹರುಷವಡಗಿತು ಧೈರ್ಯ ಸುಕ್ಕಿತು ಉ[1][ಕ್ಕೆ][1] ನಯನಾಂಬು ।
ಉರಿಹೊಡೆದ ಕೆಂದಾವರೆಯವೋಲ್
ಕರುಕುವಡೆದುದು ಮುಖ ಕಪೋಲಕೆ
ಕರವನಿಟ್ಟನು ಮುಂದುಗೆಟ್ಟು ಮಹೀಶ ಚಿಂತಿಸಿದ ॥ ೧೩೨ ॥

---

೧೩೦. [1]ಯಾಯಿತು ಸಮಯವೆಮ್ಮ (ಅ). [2]ಕ್ಷುಧಾರಫಲವಹ (ಅ), ಕುಧಾರವಹ್ನಿಯ (ಆ ಕುಮಾ).

[ಸಾರೆಯಾಯ್ತು-ಸಮೀಪವಾಯಿತು, ಹತ್ತಿರವಾಯಿತು. ಕ್ಷುಧಾರ್ತವಹ್ನಿ-ಹಸಿವಿನ ಪೀಡೆಯಿಂದ ಉಂಟಾದ (ಜಠರದ) ಅಗ್ನಿ. ಪೀಡಾಕಾರ-ಹಿಂಸೆಯ ಸ್ವರೂಪ].

೧೩೧. [1]ಯರ (ಕುಮಾ).

[ಸಂಭಾವಿಸು-ಉಂಟಾಗು. ಅನುಷ್ಠಾನಾವಲಂಬನ-ನಿತ್ಯಕರ್ಮಗಳ ಆಚರಣೆ. ಯಮುನಾದೇವಿಯೆಡೆ ಹೊಗಲು-ಯಮುನಾ ನದೀತೀರಕ್ಕೆ ಹೋಗಲು].

೧೩೨. [1]ಕ್ಷ (ಕುಮಾ).

[ಸುಕ್ಕು-ಉಡುಗು. ನಯನಾಂಬು-ಕಣ್ಣೀರು. ಕರುಕುವಡೆ-ಕಪ್ಪಾಗು].

ತುಡುಕಿ ಸುರಪನ ಸಿರಿಯ ಶರಧಿಯ
ಮಡುವಿನಲಿ ಹಾಯ್ಕಿದನು ರೋಷವ
ಹಿಡಿದರೀಗಳೆ ಸುಟ್ಟು ಬೊಟ್ಟಿಡುವನು ಜಗತ್ರಯವ ।
ಮೃಡ ಮುನಿದು ಕೋಪಿಸಲಿ ಶಾಪವ
ಕೊಡಲಿ ನಾನದಕಂಜೆನೆನ್ನಯ
ನುಡಿಗನೃತ ಸಂಭಾವಿಸಿತಲಾ ಕೆಟ್ಟೆ ನಾನೆಂದ ॥ ೧೩೩ ॥

ಬೞಿಯ ನುಡಿಯೇಕಕಟ ನಿಮ್ಮಯ
ಹೊೞಿಗೆವಾಳನು ಕೃಷ್ಣನಾತನ
ಮೞಿಯ ಹೊಕ್ಕರಿಗುಂಟೆ ದೋಷ ದರಿದ್ರ ಮೃತ್ಯುಭಯ ।
ಮೞಿದಿರ್ದೈ ಸೆಳೆಸೀರೆಯಲಿ ಸತಿ
ಯೊೞಲಲಕ್ಷಯವಿತ್ತು ತನ್ನನು
ಮೆೞಿದ ಮಹಿಮಾರ್ಣವನ ಭಜಿಸುವುದೆಂದನಾ ಧೌಮ್ಯ ॥ ೧೩೪ ॥

ನಾಮವನು ನಂಬಿದ ಮಹಾತ್ಮನ
ನಾಮವನು ನೆನೆದವರು ಪಡೆವರು
ಕಾಮಿತವನೆಲೆ ನಿಮ್ಮ ನೆಲೆ ನಿಮಗೞಿಯಬಾರದಲೆ ।
ನಾಮ ನಿಮ್ಮಲಿ ಕೃಪೆ ವಿಶೇಷವು
ಕಾಮಿನಿಗೆ ಕರಗುವನು ಕೃಷ್ಣನು
ಈ ಮಹಿಳೆ ಭಜಿಸುವುದು ಬೇಗದಲೆಂದನಾ ಧೌಮ್ಯ ॥ ೧೩೫ ॥

ಶ್ರೀರಮಾವರ ದೈತ್ಯಕುಲ ಸಂ-
ಹಾರ ಭಕ್ತಜನಾರ್ತಿಹರ ಭವ-
ದೂರ ಸಕಲ ಚರಾಚರಾತ್ಮಕ ದುಷ್ಟಕಂಸಹರ ।
ಚಾರುಗುಣ ಗಂಭೀರ ಕರುಣಾ-
ಕಾರ ವಿಹಿತವಿಚಾರ ಪಾರಾ-
ವಾರ ಹರಿ ಮೈದೋರೆನುತ ಹಲುಬಿದಳು ಲಲಿತಾಂಗಿ ॥ ೧೩೬ ॥

---

೧೩೩. [ಅನೃತ-ಸುಳ್ಳು].

೧೩೪. [ಹೊೞಿಗೆವಾಳ-ಹೊಣೆಹೊತ್ತವನು. ಒೞಲು-ರೋದಿಸು. ಮಹಿಮಾರ್ಣವ-ಮಹಿಮಾಸಮುದ್ರ].

೧೩೫. [ಕಾಮಿತ-ಇಷ್ಟಾರ್ಥ].

೧೩೬. [ಆರ್ತಿ, ಆರ್ತಿ-ದುಃಖ. ಭವದೂರ-ಹುಟ್ಟಿಲ್ಲದವನು. ಚಾರು-ಮನೋಹರವಾದ. ಪಾರಾವಾರ-ಸಮುದ್ರ. ಹಲುಬು-ಗೋಳಾಡು].

ಹಿಂದೆ ನಾನಾಪಾಯದಿರುಬಿನ
ಬಂಧನವ ಬಿಡಿಸಿದೆಯಲ್ಲೆ ಗೋ-
ವಿಂದ ಶರಣಾನಂದಕಂದ ಮುಕುಂದ ಗುಣವೃಂದ ।
ಇಂದು ರುದ್ರನು ತಪ್ಪ ಸಾಧಿಸ
ಬಂದರೆಮ್ಮನು ಕಾವರಾರೆಲೆ
ತಂದೆ ನೀನೇ ಗತಿಯೆನುತ ಹಲುಬಿದಳು ಲಲಿತಾಂಗಿ ॥ ೧೩೭ ॥

ಅಱಸುವೆನೆ ಪರಿಪೂರ್ಣ ಕೇಳೆಂ-
ದಱುಹುವೆನೆ ಸರ್ವಜ್ಞ ಸಾಕೆಂ-
ದೊಱಲಲಾರೆನು ತಾಯಿ ನೀ ನಿಮಗಾವು ಶಿಶುಗಳಲೆ ।
ಕುಱುಹುದೋರೈ ಕೃಷ್ಣ ಕರುಣವ
ಕಱೆದು ಕಳೆಯುಲು ಭಕುತರಾರ್ತಿಯ-
ನಱೆವ ವಿಪುಳ ಘರಟ್ಟರಾರುಂಟೆಂದಳಿಂದುಮುಖಿ ॥ ೧೩೮ ॥

ಅವನಿಪತಿ ಕೇಳಖಿಳ ನಿಗಮ-
ಸ್ತವಕೆ ತಾನೆಡೆಗುಡದ ಮಹಿಮಾ-
ರ್ಣವನನೇಸು ಭವಂಗಳಲಿ ಭಜಿಸಿದರೊ ನಿನ್ನವರು ।
ಯುವತಿಯಕ್ಕೆಯ ಸೈರಿಸದೆ ಯಾ-
ದವ ಶಿರೋಮಣಿ ಸುಳಿದನಾ ಪಾಂ-
ಡವರು ಕಂಡರು ದೂರದಲಿ ಖಗರಾಜಕೇತನವ ॥ ೧೩೯ ॥

---

೧೩೭. [ಇರುಬು-ಇಕ್ಕಟ್ಟು. ರುದ್ರ-ದೂರ್ವಾಸಮುನಿ].

೧೩೮. [ಅಱಸುವೆನೆ ಪರಿಪೂರ್ಣ-ಹುಡುಕೋಣವೆಂದರೆ ನೀನು ಎಲ್ಲೆಲ್ಲೂ ತುಂಬಿ ಕೊಂಡಿರುವೆ. ಕೇಳು ಎಂದು ಅರುಹುವೆನೆ ಸರ್ವಜ್ಞ-(ನನ್ನ ಮೊರೆಯನ್ನು ಕೇಳು) ಎಂದು ತಿಳಿಸೋಣವೆಂದರೆ ನೀನು ಎಲ್ಲವನ್ನೂ ಬಲ್ಲವನಾಗಿದ್ದೀಯೆ. ಸಾಕು ಎಂದು ಒಱಲಲಾರೆನು-ನಮ್ಮನ್ನು ಕಾಪಾಡು ಎಂದು ನಾನು ನಿನ್ನನ್ನು ಕುರಿತು ಗೋಳಿಡಲಾರೆ. ಆವು-ನಾವು. ಕುರುಹುದೋರು-ನಿನ್ನ ಇರವಿನ ಗುರುತನ್ನು ತೋರಿಸು. ಕಱೆದು-ಸುರಿಸಿ. ಭಕುತ...ಘರಟ್ಟ-ಭಕ್ತರ ದುಃಖವನ್ನು ತಿಳಿದು ನಾಶಮಾಡಬಲ್ಲವನು].

೧೩೯. [ನಿಗಮಸ್ತವ-ವೇದಗಳ ಸ್ತೋತ್ರ. ಏಸು-ಎಷ್ಟು. ಭವ-ಜನ್ಮ. ಅಕ್ಕೆ, ಅಱ್ಕೆ-ರೋದನ, ಅಳುವಿಕೆ. ಖಗರಾಜಕೇತನ-ಗರುಡಧ್ವಜ].

ಧ್ಯಾನಗೋಚರನಾಗಿ ವನಿತೆಯ
ಮಾನಸದಲಿಹ ಪರಮಹಂಸನು
ಮಾನುಷಾಕೃತಿಯಾಗಿ ತೋರಿದ ಬಾಹ್ಯರಚನೆಯಲಿ ।
ಮಾನಿನಿಯ ಮೈದಡಹಿ ಚಿಂತೆಯ-
ದೇನು ತಂಗಿ ಲತಾಂಗಿ ಹೇಳೌ
ಮೌನಮುದ್ರೆಯದೇನೆನಲು ಕಂದೆರದಳಿಂದುಮುಖಿ ॥ ೧೪೦ ॥

ಉಬ್ಬಿದಳು ಹರುಷದಲಿ ದುಗುಡದ
[1]ಮು[1]ಬ್ಬು ಮುಱಿದುದು ಪುಳಕವಾರಿಯೊ-
ಳೊಬ್ಬುಳಿಯೊಳೊಡಹಾಯ್ದು ನಿಂದವು ನಯನವಾರಿಗಳು ।
ಸಭ್ಯತಾಲತೆ ಹೂತು ಹಸರಿಸಿ
ಹಬ್ಬಿ ಫಲವಾದಂತೆ ಕಾಯುವ
ನಿಬ್ಬರದಲೀಡಾಡಿದಳು ಹರಿಪದಪಯೋಜದಲಿ ॥ ೧೪೧ ॥

ಧರಣಿಯನು ಬಿಡದಳೆದು ಹೆಚ್ಚಿದ
ಚರಣವಿದು ಸುರನದಿಯ ಸೃಜಿಸಿದ
ಚರಣವಿದು ಕಲ್ಲಾದಹಲ್ಯಾಶಾಪ ನಿರುಹರಣ ।
ಚರಣವಿದು ಕಾಳಿಂಗಮರ್ದನ
ಚರಣವಿದು ಶಕಟಪ್ರಭಂಜನ
ಚರಣವಿದೆಲಾಯೆನುತ ಕೊಂಡಾಡಿದಳು ಹರಿಪದವ ॥ ೧೪೨ ॥

[1]ಸ್ತೋತ್ರಕೀಗಳು[1] ಸಮಯವೇ ಹೇ-
ಳೀತಕೇ ಸ್ತುತಿ ತಂಗಿ ಚಿತ್ತದೊ-
ಳಾತುರವಿದೇನೆನುತ ಹಿಡಿದೆತ್ತಿದನು [2]ಮಸ್ತಕವ[2] ।

---

೧೪೦. [ಮಾನಸ-ಮನಸ್ಸು].

೧೪೧. [1]ಕೊ (ಕುಮಾ), ಸ್ವೀಪಾ (ಅ).
[ಮುಬ್ಬು-ಕತ್ತಲೆ. ಮುಱಿ-ನಾಶವಾಗು. ಒಬ್ಬುಳಿ-ರಾಶಿ, ಒಟ್ಟಲು. ಒಡಹಾಯ್ದು-ಜೊತೆಯಲ್ಲಿ ಕೂಡಿಕೊಂಡು. ನಯನವಾರಿ-ಕಣ್ಣೀರು. ಸಭ್ಯತಾಲತೆ-ಸಜ್ಜನಿಕೆಯ ಬಳ್ಳಿ. ನಿಬ್ಬರ-ನಿರ್ಭರ, ರಭಸ].

೧೪೨. [ಅಳೆದು-ಎರಡು ಪಾದಗಳಿಂದ ಅಳೆದು. ಸುರನದಿ-ಗಂಗೆ. ಸೃಜಿಸು-ಸೃಷ್ಟಿಸು. ನಿರುಹರಣ-ನಿರ್ಹರಣ, ಪೂರ್ತಿಯಾಗಿ ನಿವಾರಣೆ ಮಾಡುವ. ಶಕಟ ಪ್ರಭಂಜನ-ಶಕಟಾಸುರನನ್ನು ಧ್ವಂಸಮಾಡಿದ].

೧೪೩. [1]ಗಾಥಗಳಿಗಿದು (ಅ). [2]ಬಾಲಕಿಯ (ಅ).

ಬೀತ ತರು ಶುಕನಿಕರಕೀವುದೆ
ಔತಣವ ಸಲೆ ತುಷ್ಟಿಬಡಿಸುವ
ನೀತಿಯನು ನೀ ಬಲ್ಲೆಯೆಂದಳು ಕಮಲಮುಖಿ ನಗುತ ॥ ೧೪೩ ॥

ಶೌರಿ ಕೇಳ್ ಸಾಕ್ಷಾತು ಶಿವನವ-
ತಾರವಹ ದೂರ್ವಾಸಮುನಿ ಪರಿ-
ವಾರ ಸಹಿದೈತಂದೊ[1][ಡಭ್ಯಾಗತೆ][1]ಯ ನೃಪನಿತ್ತ ।
ತೀರಿತಕ್ಷಯದನ್ನವಿಂದು [2]ಮು-
ಹಾ ಋಷಿಯು ಘನರೋಷವಹ್ನಿಗು-
ಪಾರ ನಿನ್ನಯ ಮೈದುನನ ತನುವೆಂದಳಿಂದುಮುಖಿ[2] ॥ ೧೪೪ ॥

ನಾವು ಹಸಿದೈತಂದರೀ ಪರಿ
ದೇವಿ ನಾನಾ ದೂರ ದೂರುವು-
ದಾವುದುಚಿತವು ಹೇಳೆನಲು ನಡನಡುಗಿ ಕೈಮುಗಿದು ।
ದೇವ ನಿಮ್ಮಯ ಹಸಿವು ಕಳೆವೊಡೆ
ಭಾವಶುದ್ಧಿಯ ಭಕುತಿ ಬೇಹುದು
ನಾವು ಚಂಚಲಚಿತ್ತರೆಂದಳು ಕಮಲಮುಖಿ ನಗುತ ॥ ೧೪೫ ॥

ಮಾತುಗಳು ಸೊಗಸುವುವೆ ಹಸಿವಿಂ-
ದಾತುರರಿಗೆಲೆ ತಂಗಿ ತಾರೌ
ಪ್ರೀತಿ[1]ಯಿಂದೊ[1]ಲಿದಿತ್ತುದೇ [2]ಕ್ಷುಧೆಗಮೃತಪುಂಜವದು[2] ।
ಏತಕೇ ಜಂಜಡವೆನಲು ಜಲ-
ಜಾತಮುಖಿ ಕಂಪಿಸುತ ಕುಮುದಾ-
ರಾತಿ ಕೊಟ್ಟಾ ಸ್ಥಾಲಿಯನು [3]ತಡವಿದಳು ಕರದಿಂದ[3] ॥ ೧೪೬ ॥

---

೧೪೩. [ಬೀತ-ಹಣ್ಣು ಬಿಡದ, ನಿಷ್ಫಲವಾದ. ತುಷ್ಟಿ-ತೃಪ್ತಿ].

೧೪೪. [1] ಡಾಭ್ಯಾಗ್ಯತೆ (ಕುಮಾ), ಡಭ್ಯಾಗತ (ಅ). [2] ಮುರಾರಿ ಮುನಿಯೂಟಕ್ಕೆಯೇನ್ನೆ ಪಾರಣೆಯ ಮಾಡುವನು ನಿನ್ನಯ ಮೇಣದೈವರನು (ಅ).

[ಶೌರಿ-ಕೃಷ್ಣ. ಅಭ್ಯಾಗತೆ-ಅಭ್ಯಾಗತರಿಗೆ ನೀಡುವ ಸತ್ಕಾರ. ಉಪಾರ-ಉಪಾಹಾರ].

೧೪೬. [1] ವಿದರೊ (ಕುಮಾ), ಸ್ನೇಹಾ (ಅ). [2] ಸುಧೆ ನಮಗೆ ಪಥ್ಯವಿದು (ಅ). [3] ತಂದಿತ್ತಳಿದೆಯೆನುತ (ಅ).

[ಕ್ಷುಧೆ-ಹಸಿವು. ಪುಂಜ-ಮೊತ್ತ, ರಾಶಿ. ಜಂಜಡ-ತೊಂದರೆ, ಕಷ್ಟ. ಕುಮುದಾರಾತಿ-ಸೂರ್ಯ. ಸ್ಥಾಲಿ-ಗುಂಡಾಕಾರದ ಪಾತ್ರೆ].

ತುಳುಕಿತದ್ಭುತರೋಷ ಸುಯ್ಲಿನ
ಝುಳ[1]ಹೊ[1]ಡೆದು ಮೂ[2]ಗು[2]ತಿಯ ಮುತ್ತಿನ
ಬೆಳ[3]ಗು[3] [4]ಕ[4]ಂದಿತು ಕುಂದಿತಮಳಚ್ಛವಿ ಮುಖಾಂಬುಜದ ।
ಹೊಳೆಹೊಳೆವ ಕೆಂದಳದ ಸೆಳ್ಳುಗು-
[5]ರ್ಗ[5]ಳ ಮಯೂಖದ ಮಣಿಯ ಮುದ್ರಿಕೆ-
ಗಳ ಮರೀಚಿಯಲೆಸೆದುದೆತ್ತಿದ ಹಸ್ತವೂರ್ವಶಿಯ ॥ ೧೧೫ ॥

ನರಮೃಗಾಧಮ ನಿಮ್ಮ ಭಾರತ-
ವರುಷಭೂಮಿಯೊಳೊಂದು ವರುಷಾಂ-
ತರ ನಪುಂಸಕನಾಗಿ ಚರಿಸು ನಿರಂತರಾಯದಲಿ ।
ಹರಿಯ ಮಱಿಹೊಗು ಹರನ ನೀನನು-
ಸರಿಸು ನಿಮ್ಮಯ್ಯಂಗೆ ಹೇಳಿದು
ನಿರುತ ತಪ್ಪದು ಹೋಗೆನುತ ಮೊಗದಿರುಹಿದಳು [1]ಚಪಳೆ[1] ॥ ೧೧೬ ॥

ಅರಸ ಕೇಳೈ ಚಿತ್ರಸೇನನ
ಕರಸಿ ಊರ್ವಶಿ ಪಾರ್ಥ ಮಾಡಿದ
ದುರುಳತನವನು ದೂಱಿದೊಡೆ ಸುರಪತಿಯ ಸಂತೈಸಿ ।
ಸುರಪತಿಗೆ ಗಂಧರ್ವನಿವರಿ-
ಬ್ಬರ [1]ವಿ[1]ರೋಧನಿಬಂಧನವನೆ-
ಚ್ಚಱಿಸಲರ್ಜುನನರಮನೆಗೆ ಬಂದನು ಬಲಧ್ವಂಸಿ ॥ ೧೧೭ ॥

---

೧೧೫. ವೊ (ಅ), ಸ್ವೀಪಾ (ಪ್ರ ಅ ಕುಮಾ). [2]ಕು (ಅ ಅ), ಸ್ವೀಪಾ (ಪ್ರ ಕುಮಾ). [3]ಕು (ಅ ಕುಮಾ), ಸ್ವೀಪಾ (ಪ್ರ ಕ). [4]ಕು (ಅ ಕುಮಾ), ಸ್ವೀಪಾ (ಅ ಕ). [5]ರೊ (ಅ ಕುಮಾ), ಸ್ವೀಪಾ (ಪ್ರ ಅ).

[ಅಮಳಚ್ಛವಿ–ಪರಿಶುದ್ಧವಾದ ಕಾಂತಿ. ಕೆಂದಳ–ಕೆಂಪಾದ ಅಂಗೈ. ಸೆಳ್ಳುಗುರ್–ಚೂಪಾದ ಉಗುರು. ಮಯೂಖ–ಕಿರಣ, ರಶ್ಮಿ. ಮುದ್ರಿಕೆ–ಉಂಗುರ. ಮರೀಚಿ–ಕಾಂತಿ. ಎಸೆ–ಮೆರೆ].

೧೧೬. [1]ತರಳೆ (ಕ ಓ k ಪ್ರ).

[ನಿರಂತರಾಯದಲಿ–ಯಾವ ಅಡೆತಡೆಯೂ ಇಲ್ಲದೆ. ನಿರುತ–ಸತ್ಯ, ನಿಶ್ಚಯ].

೧೧೭. [1]ನಿ (ಅ ಕುಮಾ ಅ), ಸ್ವೀಪಾ (ಓ ಪ್ರ).

[ದುರುಳತನ–ದುಷ್ಟತನ, ಬಲಧ್ವಂಸಿ–ಇಂದ್ರ].

ಎಲೆ ಕಿರೀಟಿ ವೃಥಾ ಮನೋವ್ಯಥೆ
ತಳಿತುದೇಕೂರ್ವಶಿಯ ಶಾಪದ-
ಲಳುಕಿದ್ದೆ ತತ್ಕಾರ್ಯಾರ್ಥ ನಿನಗುಪಕಾರವಾಯ್ತು ಕಣಾ ।
ಹಳುವದಲಿ ಹನ್ನೆರಡುವರುಷದ
[1]ಕಳ[1]ಹಿನಜ್ಞಾತದಲಿ ವರುಷವ
ಕಳೆವೊಡಿದು ಸಾಧನವೆಯಾಯ್ತು ಶಿಖಂಡಿತನವೆಂದ ॥ ೧೧೮ ॥

ಎಂದು ಪಾರ್ಥನ ಸಂತವಿಟ್ಟು ಪು-
ರಂದರನು ತನ್ನರಮನೆಗೆ ನಡೆ-
ತಂದನರ್ಜುನಸಹಿತ ವಿವಿಧವಿನೋದವಿಭವದಲಿ ।
ಅಂದು ಶಿಖಿಪವನಾದಿಗಳು ನಲ-
ವಿಂದ ಕೊಟ್ಟರು ಶರವನಮರೀ-
ವೃಂದ ಸೂಸಿತು ಸೇಸೆಯನು ಜಯರವದ ರಭಸದಲಿ ॥ ೧೧೯ ॥

ಅರಸ ಕೇಳೈ ಪಾರ್ಥನಿದ್ದನು
ವರುಷವೈದಱೊಳಿಂದ್ರಭವನದ
ಸಿರಿಯ ಸಮ್ಮೇಳನದ ಸಗಾಢದ [1]ಸೌಮನಸ್ಯ[1]ದಲಿ ।
ನರನ ಹದನೇನೋ ಧನಂಜಯ-
ನಿರವದೆಲ್ಲಿ ಕಿರೀಟಿ ನಮ್ಮನು
ಮಱೆದು ಕಳೆದನಲಾ ಎನುತ ಯಮಸೂನು ಚಿಂತಿಸಿದ ॥ ೧೨೦ ॥

---

೧೧೮. [1]ತಲ (ಅ ಆ ಕುಮಾ), ಸ್ವೀಪಾ (ಓ).
[ತಳಿತುದೇಕೆ-ಉಂಟಾಯಿತೇಕೆ, ಕಾಣಿಸಿಕೊಂಡಿತೇಕೆ. ಅಳುಕು-ಹೆದರು. ಹಳುವ-ಕಾಡು. ಕಳಹು-ಕಳೆಯುವಿಕೆ. ಸಾಧನ-ಉಪಾಯ. ಶಿಖಂಡಿತನ-ನಪುಂಸಕತ್ವ].

೧೧೯. [ಸಂತವಿಡು-ಸಮಾಧಾನಮಾಡು. ಪುರಂದರ-ಇಂದ್ರ. ಅಮರೀವೃಂದ-ದೇವತಾಸ್ತ್ರೀಯರ ಸಮೂಹ. ಸೂಸು-ಚೆಲ್ಲು. ಸೇಸೆ-ಮಂತ್ರಾಕ್ಷತೆ].

೧೨೦. [1]ಸಾರಸೌಖ್ಯ (ಕ ಓ k ಅ).
[ಸಿರಿಯ....ಸೌಮನಸ್ಯದಲಿ-ಸಂಪತ್ತಿನ ಕೂಟದ ಗಾಢವಾದ ಮನಃಪ್ರಸನ್ನತೆಯಲ್ಲಿ. ಹದನು-ಸಮಾಚಾರ].

141

ಬೇರು ನೀರುಂಡಾಗ [ತ]ಣಿಯುವೆ
ಭೂರುಹದ ಶಾಖೋಪಶಾಖೆಗ-
ಳೋರಣೆಯು ನಿಜದೇಹ[1]ಚೇತನರೂಪ[1]ನೆಂದೆನಿಪ ।
ಶ್ರೀರಮಣ ಸಂತುಷ್ಟನಾದೊಡೆ
ಬೇರೆ ಭೋಜನವೆಮಗೆ ಬೇಹುದೆ
ಭೂರಮಣ ಕೇಳೆನುತ [2]ನಗುತಿಂ[2]ತೆಂದನಾ ಮುನಿಪ ॥ ೧೫೩ ॥

ಮೃಷ್ಟ ಭೋಜನದಿಂದ ನಾವ್ ಸಂ-
ತುಷ್ಟರಾಗೊಲಿದುದನು ಚೇಡೆನೆ
ದುಷ್ಟ ಕೌರವ ನಮ್ಮನಟ್ಟಿದ ಧೂರ್ತವಿದ್ಯೆಯಲಿ ।
[1]ಕಷ್ಟವೇ ಕೈಗಟ್ಟಿತಲ್ಲದೆ[1]
ಕೆಟ್ಟರೇ ಪಾಂಡವರು ಹರಿಪದ
ನಿಷ್ಠರನು ನಿಲುಕುವನೆ ದುರ್ಜನನೆಂದನಾ ಮುನಿಪ ॥ ೧೫೪ ॥

ಎಂದು ಹರಿಯನು ಹೊಗಳಿ ನಾನಾ
ಚಂದದಲಿ ಪಾಂಡವರ ತಿಳುಹಿ ಮು-
ನೀಂದ್ರ ತನ್ನಾಶ್ರಮಕೆ ಸರಿದನು ತಾಪಸರು ಸಹಿತ ।
ಅಂದು ಕುಂತೀನಂದನರಿಗಾ-
ನಂದ ಸುಖವನು ಕಱೆದು ದೇವ ಮು-
ಕುಂದ ಬಿಜಯಂಗೈದು ಹೊಕ್ಕನು ದೋರಕಾಪುರಿಯ ॥ ೧೫೫ ॥

---

೧೫೩. [1]ವಂಗೋಪಾಂಗ (ಕುಮಾ), ಸ್ವೀಪಾ (ಅ). [2]ಮತ್ತಿಂ (ಕುಮಾ), ಸ್ವೀಪಾ (ಅ).
[ತಣಿ–ತೃಪ್ತಿಪಡು. ಭೂರುಹ–ಮರ. ಓರಣೆಯ–ಒಪ್ಪವಾದ. ಬೇಹುದೆ–ಬೇಕೆ].

೧೫೪. [1]ಕೈಗೂಡಿದರೆ ಮಿಗೆ ವ್ರತ (ಅ).
[ಮೃಷ್ಟಭೋಜನ–ಸವಿಯೂಟ. ಧೂರ್ತವಿದ್ಯೆ–ನೀಚತನದ ವಿದ್ಯೆ, ದುರ್ವಿದ್ಯೆ. ಕೈಗಟ್ಟು–ಸೋಲು].

೧೫೫. [ತಿಳುಹಿ -ಸಮಾಧಾನಪಡಿಸಿ. ಕಱೆದು–ಸುರಿಸಿ].

೫. ಘೋಷಯಾತ್ರೆ

ಅರಸ ಕೇಳೈ ಹಸ್ತಿನಾಪುರ-
ವರಕೆ ಕಾಮ್ಯಕವಸದಿನೊಬ್ಬನು
ಧರಣಿಸುರನೈತಂದು ಕರ್ಣಾದಿಗಳ [1]ಮನೆಗಳ[1]ಲಿ ।
ಇರಲಿರಲು ಧೃತರಾಷ್ಟ್ರಭೂಪತಿ
ಕರಸಿ ಬೆಸಗೊಂಡನು ಯುಧಿಷ್ಠಿರ-
ನಿರವನಟವೀತಟಪರಿಭ್ರಮ[2]ಣೈಕ[2]ಭೀಷಣವ ॥ ೧೫೬ ॥

ಈ ವಿಧಿಯೆ ಪಾಂಡವರಿಗಕಟಾ
ಸಾವು [1]ಬಾ[1]ರದು ತನಗೆ [2]ತಾವು-
ಸ್ನಾನ ನೋಹಿಯನಳಿದೆನೋ[2] ಭವಭವಸಹಸ್ರದಲಿ ।
ಈ ವಿಲಾಸವನೀ ವಿಭವಸಂ-
ಭಾವನೆಯನೀ ಪದವನೀ ಪು-
ತ್ರಾವಳಿಯ ಸುಡಲೆನುತ ಮಿಗೆ ಮಱುಗಿದನು ಧೃತರಾಷ್ಟ್ರ ॥ ೧೫೭ ॥

ಅಳಲುವೀ ಧೃತರಾಷ್ಟ್ರನುರು ಕಳ-
ಕಳವ ಕೇಳಿದು ಕರ್ಣಶಕುನಿಗ-
ಳುಲಿದು ತಂಬುಲ ಸೂಸೆ ನಕ್ಕರು ಹೊಯ್ದು ಕರತಲವ ।
ಖಳಶಿರೋಮಣಿಗಳು ಮಹೀಶನ
ನಿಳಯಕೈತಂದರು [1]ವಿ[1]ಲೋಚನ-
ಜಲವ ಸೆಱಗಿನೊಳೊರಸಿ ನುಡಿದರು ಖೇದವೇಕೆನುತ ॥ ೧೫೮ ॥

೧೫೬, [1]ಭವನದ (ಅ ಕ ಓ k). [2]ಭೂರಿ (ಅ ಕ k).

[ಅಟವೀತಟ–ಕಾಡಿನ ಅಂಚು. ಪರಿಭ್ರಮಣ–ಅಲೆದಾಟ. ಭೀಷಣ–ಭಯಂಕರ].

೧೫೭. [1]ಸೇ (ಅ ಆ ಕುಮಾ), ಸ್ವೀಪಾ (ಪ್ರ). [2]ತಾಗುವ ನೋವ ನೋಂತೆನೆ ಶಿವಶಿವಾ (ಅ).

[ಸೇರದು–ಬಾರದು. ನೋಹಿ–ವ್ರತ. ಭವಭವಸಹಸ್ರ–ಸಾವಿರಾರು ಜನ್ಮ ಜನ್ಮಾಂತರಗಳು. ಸಂಭಾವನೆ–ಗೌರವ. ಪದ–ಪದವಿ].

೧೫೮. [1]ಸು (ಆ ಕುಮಾ), ಸ್ವೀಪಾ (ಪ್ರ).

[ಅಳಲು–ದುಃಖಪಡು. ಉರು–ಹೆಚ್ಚಾದ. ಕಳಕಳ–ಶಬ್ದ. ಉಲಿದು–ಕೇಕೆ ಹಾಕಿ. ಕರತಲ–ಅಂಗೈ. ವಿಲೋಚನ ಜಲ–ವಿಶೇಷವಾದ ಕಣ್ಣೀರು. ಖೇದ–ಖಿನ್ನತೆ, ದುಃಖ, ವ್ಯಸನ].

ಖೇದವೇಕೆಂದೇನು ಮಕ್ಕಳು
ಬೀದಿಗಱುವಾದರು ವನಾಂತದ-
ಲಾದ ಚಿತ್ತವ್ಯಥೆಯು ಕೇಳಿದು ಬೆಂದುದೆನ್ನೊಡಲು ।
ಆ ದಿವಾಕರನಂತೆ ನಿಚ್ಚಲು
ಕಾದುದುದಯಾಸ್ತಮಯದಲಿ ದನು-
ಜಾದಿ ಖಳರೊಡ[1]ನಡವಿಗೋಟಲೆಯೆಂದು[1] ಬಿಸುಸುಯ್ದ ॥ ೧೫೯ ॥

ವಿಷಯಲಂಪಟರಕ್ಷಲೀಲಾ-
ವ್ಯಸನಕೋಸುಗ ಒತ್ತೆಯಿಟ್ಟರು
ವಸುಮತಿಯನನ್ಯಾಯವುಂಟೇ ನಿನ್ನ ಮಕ್ಕಳಲಿ ।
ಉಸುರಲಮ್ಮದೆ ಸತ್ಯವನು ಪಾ-
ಲಿಸಲು ಹೊಕ್ಕರರಣ್ಯವನು ತ-
ದ್ವ್ಯಸನ ಫಲಭೋಗಿಗಳಿಗಳಲುವಿರೇಕೆ ನೀನೆಂದ ॥ ೧೬೦ ॥

ಬೇವು ತಾ ಪರಿಪಕ್ವವಾದೊಡೆ
ಹಾವುಮೆಕ್ಕೆಗೆ ಸಾಕ್ಷಿ ಗಡ ಧ-
ರ್ಮಾವಮಾನ[1]ದ ಕಲಿ[1]ಗೆ ಕಾಮಾದಿಗಳ [2]ನೆರವು[2]ಗಡ ।
ಆ ವಿಡಂಬದ ಶಕುನಿಕರ್ಣರು
ಜೀವಸಖರೈ ತಮ್ಮೊಳಗೆ ದು-
ರ್ಭಾವಭೀಕರಹೃದಯ ನುಡಿದನು ಕರ್ಣನರಸಂಗೆ ॥ ೧೬೧ ॥

---

೧೫೯. [ಬೀದಿಗಱು–ಬೀದಿಯ ಕರು ; ಅನಾಥರು, ಬೀದಿಪಾಲಾದವರು. ನಿಚ್ಚಲು–ನಿತ್ಯವೂ. ಕಾದುದು–ಉರಿಯಿತು. ಅಡವಿಗೋಟಲೆ–ಕಾಡಿನ ಕಷ್ಟಪರಂಪರೆ],

೧೬೦. [ವಿಷಯಲಂಪಟರು–ಇಂದ್ರಿಯ ಸುಖಲೋಲುಪರು. ಅಕ್ಷಲೀಲೆ–ಪಗಡೆಯಾಟ. ವ್ಯಸನ–ದಶ್ಚಟ. ವಸುಮತಿ–ಭೂಮಿ. ಅಮ್ಮದೆ–ಸಮರ್ಥರಾಗದೆ. ಫಲಭೋಗಿ–ಫಲವನ್ನು ಅನುಭವಿಸುವವನು].

೧೬೧. [1]ದಕವಿ (ಅ ಕುಮಾ), ನಕರಿಂ (ಅ); ಸ್ವೀಪಾ (ಪ್ರ). [2]ವಿ (ಅ ಕುಮಾ), ಸ್ವೀಪಾ (ಕ k).

[ಹಾವುಮೆಕ್ಕೆ–ಒಂದು ಜಾತಿಯ ಕಹಿ ಹಣ್ಣು ಬಿಡುವ ಗಿಡ. ಧರ್ಮಾವಮಾನದ–ಅಧಾರ್ಮಿಕ ಎಂಬ ಅವಮಾನಕ್ಕೆ ಗುರಿಯಾದ. ಕಲಿ–ಶೂರ. ದುರ್ಭಾವಭೀಕರ ಹೃದಯ–ಕೆಟ್ಟ ಭಾವನೆಯಿಂದ ಭಯಂಕರವಾದ ಹೃದಯವುಳ್ಳವನು].

ಈ [1]ಸುಖದ[1] ಸುಗ್ಗಿಯಲಿ ನಿನ್ನನ-
ರೇಸು ಹೆಚ್ಚುಗೆಯಾಗಿ ಬದುಕಿದ-
ರೈಸುವನು ನೀ ನೋಡಿ ಹಿಗ್ಗದೆ ಪಾಂಡುನಂದನರು ।
ಗಾಸಿಯಾದರು ಗಟ್ಟಬೆಟ್ಟದ
ಪೈಸರದೊಳೆಂದಳಲಿ ಮಱುಗುತ
ಸೂಸಿದೈ ಸಾಹಿತ್ಯಭಾಷೆಯನೆಂದನಾ ಕರ್ಣ ॥ ೧೬೩ ॥

ಸೊಗಸು ತಳಿತುದು ತರಳಮನ ತಳ-
ಮಗುಚಿದಂತಾಯ್ತವರೊಲವು ಕಾ-
ಡಿಗೆಯು ಕೆಸಱೊಳಗದ್ದ ನೀಲದ ಸಱೆಗೆ ಸರಿಯಾಯ್ತು ।
[1]ಮುಗುಳು[1]ಗಂಗಳ ಬಾಷ್ಪಬಿಂದುವ-
ನುಗುರು [2]ಕೊನೆ[2]ಯಲಿ ಮಿಡಿದು ಕರ್ಣನ
ಹೊಗಳಿದನು ಬಳಿಕೇನು ಸಿಂಗಿಯುಲುಂಟೆ ಸವಿಯೆಂದ ॥ ೧೬೪ ॥

ಹೋಗಲಾ ಪಾಂಡವರ ಚಿಂತೆಯ
ನೀಗಿದೆನು ನೀವಿನ್ನು ನೆನೆವು-
ದ್ಯೋಗವೇನೆನೆ ನಗುತ ನುಡಿದರು ಕರ್ಣಶಕುನಿಗಳು ।
ಈಗಳೀ ವಿಭವದ ವಿಲಾಸದ
ಭೋಗದಗ್ಗಳಿಕೆಗಳ ಭುಜದ-
ರ್ಪಾಗಮವನವರಿದ್ದ ವನದಲಿ ತೋಱಬೇಕೆಂ[1][ದು][1] ॥ ೧೬೫ ॥

---

೧೬೩. [1]ಸಿರಿಯ (ಅ ಆ ಕುಮಾ), ಸ್ವೀಪಾ (ಪ್ರ ಓ).

[ಏಸು-ಎಷ್ಟು. ಐಸು-ಅಷ್ಟು. ಪೈಸರ-ಪರಿಸರ, ಪ್ರದೇಶ. ಸಾಹಿತ್ಯಭಾಷೆ-ಆವೇಶದ, ಉದ್ರೇಕದ, ಭಾಷೆ].

೧೬೪. [1]ಮುಗಳು (ಕುಮಾ), ಒಗುವ (ಕ), ಅಗುಳು (k). [2]ಮೊನೆ (ಕ k ಪ್ರ ಅ).

[ತರಳ ಮನ-ಮುಗ್ಧ ಮನಸ್ಸು. ತಳಮಗುಚು-ಕಲಕು. ಕಾಡಿಗೆ-ಕಣ್ಣಿಗೆ ಹಚ್ಚುವ ಕಪ್ಪು. ಕೆಸಱು-ಬಗ್ಗಡ. ನೀಲದ ಸಱೆ-ನೀಲದ ಕಲ್ಲು. ಮುಗುಳು ಗಂಗಳು-ಮೊಗ್ಗಿನಂತೆ ಮುಚ್ಚಿಕೊಂಡಿರುವ ಕಣ್ಣುಗಳು ಎಂದರೆ ಕುರುಡುಕಣ್ಣುಗಳು. ಸಿಂಗಿ-ಘೋರವಾದ ವಿಷ. ಸವಿ-ಸಿಹಿ, ರುಚಿ].

೧೬೫. [1]ದ (ಸರ್ವತ್ರ).

ನಾಡೊಳಗೆ ತುಱುಹಟ್ಟಿಯಲಿ ಹೊಲ-
ನಾಡಿ ಹೆಚ್ಚಿನ ಗೋಕದಂಬವ
ನೋಡುವುದು ನೆವ ಕುರುಪತಿಯು ಗಾಢದ ಸಘಾಡಿಕೆಯು ।
ನೋಡಿ ನಸಿಯಲಿ ಪಾಂಡುಸುತರವ-
ರಾಡುಗಾಡಿನ ಹೊಲನ ಹೊರೆಯಲಿ
ಕೂಡೆ ತನುಪರಿಮಳದಲರಮನೆಯಂಗನಾನಿವಹ ॥ ೧೬೫ ॥

ಸಿರಿಗೆ ಸಫಲತೆಯಹು[1][ದ ನಾ][1]ನಿದ-
ನಱಿಯೆ ನೀವವರಿದ್ದ ವಿಪಿನಾಂ-
ತರಕೆ ಗಮಿಸುವುದುಚಿತವೇ ಮನಮುನಿಸು ನೆಟ[2]ಮಸೆದು[2] ।
ಕೆರಳಿದೊಡೆ ಕಾಳಹುದು ಭೀಮನ
ದುರುಳತನವೀ ಕೌರವೇಂದ್ರನ
ಹುರು[3]ಡು[3] ಹುರಿಯೇಱುವುದು [4]ಮತವಲ್ಲೆಂದನಂಧನೃಪ[4] ॥ ೧೬೬ ॥

ಪರಿಮಿತದಲೀ ವಾರ್ತೆ ನೆಗಳಿದು-
ದರಮನೆಯಲಿದನೈದೆ ಕೇಳಿದು
ಗುರುವಿದುರಗಾಂಗೇಯಕೃಪರಳಲಿದರು ತಮ್ಮೊಳಗೆ ।
ಕರಸಿ ನುಡಿದರು ಕರ್ಣ ಸೌಬಲ
ಕುರುಪತಿಗಳಿಗೆ ಘೋಷಯಾತ್ರಾ-
ಭರವನಱಿದೆವು ಹೋಹುದನುಚಿತವೆಂದರಸಿಬರಿಗೆ ॥ ೧೬೭ ॥

---

೧೬೫. [ತುಱುಹಟ್ಟಿ-ಗೋಶಾಲೆ. ಹೊಲನಾಡಿ-ಸ್ವೇಚ್ಛೆಯಾಗಿ ತಿರುಗಾಡಿ. ಕದಂಬ-ಸಮೂಹ. ಗಾಢದ ಸಘಾಡಿಕೆ-ಅತಿಶಯವಾದ ವೈಭವ. ನಸಿ-ಕೃಶವಾಗು].

೧೬೬. [1]ದುನಾ (ಅ ಕುಮಾ); ದುತಾ (ಅ). [2]ಬಲಿದು (ಅ ಕುಮಾ), ಸ್ವೀಪಾ (ಪ್ರ k ಕ). [3]ಳು (ಅ ಕುಮಾ), ಸ್ವೀಪಾ (ಪ್ರ ಕ ಓ k). [4]ನಮಗಭಿಮತ ವದಲ್ಲೆಂದ (ಪ್ರ ಅ).
[ವಿಪಿನ-ಕಾಡು. ಮಸೆದು-ತೀವ್ರವಾಗಿ. ಹುರುಡು-ಸ್ಪರ್ಧೆ, ಅಸೂಯೆ. ಹುರಿಯೇಱು-ಉತ್ಸಾಹ, ಹುರುಪು, ಹೆಚ್ಚಾಗು].

೧೬೭. [ನೆಗಳಿದುದು-ಉಂಟಾಯಿತು, ಹಬ್ಬಿತು, ಪ್ರಸಿದ್ಧವಾಯಿತು. ಘೋಷಯಾತ್ರೆ-ಗೊಲ್ಲಹಳ್ಳಿಗೆ, ತುರುಹಟ್ಟಿಗೆ, ಕೈಗೊಳ್ಳುವ ಯಾತ್ರೆ. (ಘೋಷ-ಗೊಲ್ಲರಹಳ್ಳಿ)].

ಸಾಱಿದೆವು ನಿಮ್ಮೊಡನೆ ಬಾರೆವು
ದೂಱಲಾಗದು ನಮ್ಮನಿನಿಬರ
ಮೀಱಿ [1]ನಡೆದರೆ[1] ಭಂಗ ತಪ್ಪದು ಹೋಗಬೇಡೆನಲು ।
ದೂಱ ತಾರೆವು ನಿವಗೆ ನಾವ್ ಕೈ-
ಮೀಱಿ ನಡೆಯೆವು ಕಾರ್ಯಗತಿಯಲಿ
ಜಾಱುಜಡಿತೆಯ ಮಾಡೆವೆಂದನು ಕೌರವರ ರಾಯ ॥ ೧೬೮ ॥

ಕೇಳು ಜನಮೇಜಯ ಧರಿತ್ರೀ-
ಪಾಲ ತುಱುಪಳ್ಳಿಗಳ ನೋಡಿ ವ-
ನಾಳಿ ತಪ್ಪದೆ ಬೇಂಟೆಯಾಡಿ ಸಮಸ್ತಬಲಸಹಿತ ।
ಲೀಲೆ ಮಿಗಲಾಪಾಂಡವರ ವನ-
ವೇಲೆಯಲಿ ನಿಸ್ಸಾಳರಭಸದ
ಸೂಳಸಂಕೇತದಲಿ ನೃಪ ಬಿಡಿಸಿದನು ಪಾಳೆಯವ ॥ ೧೬೯ ॥

ಅರಸ ಕೇಳ್ಕೈ ಕೌರವೇಶ್ವರ-
ನರಸಿಯರು ಲೀಲೆಯಲಿ ಶತಸಾ-
ವಿರ ಸಖೀಜನಸಹಿತ ಹೊರವಂಟರಾ ವನಾಂತರಕೆ ।
ಸರಸಿಜದ ನಿಜಗಂಧದಲಿ ತನು-
ಪರಿಮಳವ ತಕ್ಕೈಸಿ ವನದಲಿ
ತರಳೆಯರು ತುಂಬಿದರು ಮಱಿದುಂಬಿಗಳ ಡೊಂಬಿನಲಿ ॥ ೧೭೦ ॥

---

೧೬೮. [1]ದೊಡೆರಣ (ಆ ಅ ಕುಮಾ ಪ್ರ). ಸ್ವೀಪಾ (ಅ....ಅಡಿ ಟಿಪ್ಪಣಿ). [2]ಬಾಜಿ (ಓ k).
[ಸಾಱು–ಪ್ರಕಟವಾಗಿ, ಗಟ್ಟಿಯಾಗಿ, ಹೇಳು. ಭಂಗ–ಅಪಜಯ; ಅವಮಾನ. ಜಾಱು–ತಪ್ಪಿನಡೆ. ಜಡಿತೆ–ಕೈಮಾಡುವುದು, ಆತುರಮಾಡುವುದು, ಹಿಂದೆ ಮುಂದೆ ನೋಡದೆ ಮುನ್ನುಗ್ಗುವುದು].

೧೬೯. [ವನವೆ–ವನದ (ಕಾಡಿನ) ಎಲ್ಲೆಕಟ್ಟು. ನಿಸ್ಸಾಳ–ಒಂದು ಬಗೆಯ ಚರ್ಮ ವಾದ್ಯ, ಭೇರಿ. ಸೂಳು–ಸರದಿ, ಹೊತ್ತು ಗೊತ್ತು].

೧೭೦. [ತಕ್ಕೈಸು–ಸೇರಿಸು, ಬೆರಸು. ಡೊಂಬು–ವಂಚನೆ, ಮೋಸ].

ಕರಸಿದನು ನೃಪ ವಾರಿಕೇಳಿಗೆ
ವರ ವಧೂವರ್ಗವನು ಕೇಳಿದು
ಠಿರುಗಿ[1]ತಂಗಜ[1]ದಟ್ಟು ಝುಣಝುಣ ರವದ ರಭಸದಲಿ ।
ಸರಿದಿಳಿವ ನಿರಿಯೊಂದು ಕೈಯಲಿ
ಸುರಿವರಳ ಮುಡಿಯೊಂದು ಕೈಯಲಿ
ಭರದ ಗಮನಸ್ವೇದಜಲ ಮಘಮಘಿಸೆ ದೆಸೆದೆಸೆಗೆ ॥ ೧೭೧ ॥

ಅರಸ ಕೇಳೈ ವಾರಿಕೇಳಿಗೆ
ಕುರುಪತಿಯ ನೇಮದಲಿ ಶತಸಾ-
ವಿರಸರೋಜಾನನೆಯರೈದಿತು ವನವನಂಗಳಲಿ ।
ಪರಿಮಳದ ಪಸರಣದ ಪದ್ಮಾ-
ಕರಸಹಸ್ರದ ಸಾಲ ಸುಮನೋ-
ಹರ ಮಹೋದ್ಯಾನವನು ಕಂಡೈತಂದರಬಲೆಯರು ॥ ೧೭೨ ॥

ತವಗ ತಳಿ ಮುಳುವೇಲಿ ಬಾಗಿಲ
ಜವಳಿಕದ ಬೀಯಗದಲಿದ್ದುದು
ದಿವಿಜವನವುದ್ದಂಡತರ ಪರಿಮಳದ ಪೂರದಲಿ ।
ಯುವತಿಯರ ದಳ ನೂಕಿತುದಕೋ-
ತ್ಸವವೃಥಾಕೇಳಿಯಲಿ ಕನಕೋ-
ದ್ಭವಕವಾಟವನೊದೆದು ಕರೆದರು ಕಾಹಿನವರುಗಳ ॥ ೧೭೩ ॥

---

೧೭೧. [1]ತಿಪ್ಪಿಯ (ಅ ಕ ಪ್ರ), ತೀಚಿಯ (ಅ); ಸ್ವೀಪಾ (ಓ ಕುಮಾ),
[ವಾರಿಕೇಳಿ–ಜಲಕ್ರೀಡೆ. ಅಂಗಜದಟ್ಟು–ಮನ್ಮಥನ ಸೈನ್ಯ. ನಿರಿ–ನೆರಿಗೆ. ಭರದ ಗಮನ ಸ್ವೇದಜಲ–ವೇಗವಾಗಿ ಚಲಿಸಿದುದರಿಂದ ಹೊರಟ ಬೆವರು].

೧೭೨. [ಪದ್ಮಾಕರ–ಸರೋವರ].

೧೭೩. [ತವಗ–ಜಗಲಿ. ತಳಿ–ಕಟಕಟಿ. ಜವಳಿಕದ–ಜೋಡಿಕದ. ಬೀಯಗ–ಬೀಗ. ದಿವಿಜವನ–ದೇವತೆಗಳ ವನ. ಉದ್ದಂಡತರ–ಅತ್ಯಧಿಕವಾದ. ಪೂರ–ಪ್ರವಾಹ. ಉದಕೋತ್ಸವ–ಜಲಕ್ರೀಡೆ. ವೃಥಾ–ವ್ಯರ್ಥವಾದ. ಕನಕೋದ್ಭವ ಕವಾಟ–ಚಿನ್ನದಿಂದ ಮಾಡಿದ ಕದ. ಕಾಹಿನವರು–ರಕ್ಷಕರು, ಕಾವಲಿನವರು].

ಹೊಗಬಹುದೆ ಗಂಧರ್ವರಾಯನ
ಮಗನ ವನವಿದು ನೋಡಿದೊಡೆ ದೃ-
ಗ್ಯುಗಳದೆವೆ ಸೀವುದು ಕಣಾ ಫಡ ಹೋಗಿಹೋಗೆನೆ ।
ತೆಗೆ ವಿಕಾರವೆ ನಮ್ಮೊಡನೆ ತೆಗೆ
ತೆಗೆ ಕದನ ಗಂಧರ್ವನಾರಿಗೆ
ಮಗನದಾವವನೆನುತ ಹೊಕ್ಕರು ತಳಿಯ ಮುಱಿಯೊಡೆದು ॥ ೧೭೪ ॥

ತಿನ್ನಡಗ ಕೊಯ್ನೆಣನ ಮನುಜರ
ಬೆನ್ನಲುಗಿ ತನಿಗರುಳನಕಟಾ
ಕುನ್ನಿಗಳಿರುದ್ಯಾನವನವನು ಕೆಡಿಸಿ ಕಳೆದಿರಲಾ ।
ಮುನ್ನ ಮುಱಿದವರಾರೆನುತ ¹ವಿ-
ತ್ಪನ್ನರನು¹ ತೊಲಗಿಸುತ ಸುರಪನ
ಮನ್ನಣೆಯ ಗಂಧರ್ವಬಲ ಬೆರಸಿದುದು ಪರಬಲವ ॥ ೧೭೫ ॥

ಗಾಯವಡೆದರು ಕೆಲರು ನೆಲದಲಿ
ಲಾಯನೀಡಿತು ಕೆಲಬರಿಗೆ ಪೂ-
ರಾಯದೆಸುಗೆಗೆ ಹಸುಗೆಯಾದರು ಭಟರು ದೆಸೆದೆಸೆಗೆ ।
ಆಯುಧದ ಮೆದೆಯೊಟ್ಟಿತಾಕ-
ರ್ಣಾಯತಾಸ್ತ್ರನ ಕೆಣಕಿ ಖೇಚರ-
ರಾಯದಳ ಸುಗ್ಗಾಯ್ತು ದೊರೆ ಹೊಕ್ಕನು ಮಹಾಹವವ ॥ ೧೭೬ ॥

---

೧೭೪. [ಹೊಗು-ಒಳಕ್ಕೆ ಹೋಗು, ಪ್ರವೇಶಿಸು. ದೃಗ್ಯುಗಳ-ಎರಡುಕಣ್ಣು. ಎವೆ-ರೆಪ್ಪೆ. ಸೀಯು-ಬೆಂದುಹೋಗು. ವಿಕಾರ-ದುರ್ನಡತೆ, ದುರಾಚಾರ. ಮುಱಿಯೊಡೆ-ಮುರಿಯುವಂತೆ ಒಡೆ].

೧೭೫. ¹ಲಾಪನ್ನರನು (ಬಿ), ಸಂಪನ್ನಬಲ (ಕ), ವಿಪನ್ನರನು (k), ಸಂಪನ್ನರನು (ಅ). [ಅಡಗು-ಮಾಂಸ. ನೆಣ-ಕೊಬ್ಬು. ಉಗಿ-ಹೊರಕ್ಕೆ ತೆಗೆ. ತನಿಗರುಳು-ಪುಷ್ಟವಾದ, ದಿಂಡಾದ, ಕರುಳು. ವಿತ್ಪನ್ನರು-ಕಾರಣರಾದವರು].

೧೭೬. [ಲಾಯನೀಡು-ಆಶ್ರಯವನ್ನು ಕೊಡು (ಮಲಗು, ಬೀಳು). ಪೂರಾಯ-ಸಂಪೂರ್ಣವಾದ. ಎಸುಗೆ-ಬಾಣಪ್ರಯೋಗ. ಹಸುಗೆಯಾಗು-ಭಾಗವಾಗು, ಹಂಚಿಹೋಗು. ಮೆದೆ-ರಾಶಿ. ಆಕರ್ಣಾಯತಾಸ್ತ್ರ-ಕಿವಿಯವರೆಗೂ ಬಾಣವನ್ನು ಸೆಳೆದವನು (ಕರ್ಣ). ದೊರೆ-ದೊರೆಯಾದ ದುರ್ಯೋಧನ. ಆಹವ-ಯುದ್ಧ].

ಅರಸ ಕೇಳೀಚೆಯಲಿ ಕೌರವ-
ರರಸ ಬಂದನು ಸರ್ವದಳಸಹಿ-
ತೆರಡು ಬಲದುಬ್ಬರದ ಬೊಬ್ಬೆಗೆ ಬಿರಿದುದವನಿತಳ ।
ವರವೃಕೋದರ ನಕುಲ [1]ಸಹದೇ-
ವರು[1] ಕುತೂಹಲ[2]ದಿಂದ[2] ಸುತ್ತಣ
ಮೊಱಡಿಗಳ ಮೇಲಿದ್ದು ನೋಡಿದ[3]ರಾ ಮಹಾಹವವ[3] ॥ ೧೭೭ ॥

ಮುಱಿದು ದಳ ಸಂವರಿಸಿ ಪಡಿಮುಖ-
ಕುಱುಬಿದುದು ದುರ್ಯೋಧನಾನುಜ-
ರಱಸಿದರು ಗಂಧರ್ವನಾವೆಡೆ ತೋಱುತೋಱೆನುತ ।
ತಱುಬುವುದು ಜಯವೆಮ್ಮ ಮನದಲಿ
[1]ಮಱುಗು[1]ವುದು ಮತ್ತೆಮ್ಮ ತಪ್ಪೇ-
ನಿಱಿದ ಸಹಸವ ತೋಱೆನುತ ಬೆರಸಿದರು ಪರಬಲವ ॥ ೧೭೮ ॥

ಅರರೆ ದೊರೆದೊರೆ ಡೊಂಬಿಯಲಿ ಡಾ-
ವರಿಸುವರ ಹೊಯ್ ಹೊಯ್ಯೆನುತ ಖೇ-
ಚರರ ಕಂಬಿಗಳಾಡಿದವು ಸುತ್ತಲು ಸುಯೋಧನನ ।
ಅರಸರಂಜದಿರಂಜಬೇಡೆನು-
ತುರವಣಿಸಿ ಕೌರವನರೇಂದ್ರನ
ಕರದ [1]ಧನುವನು ಕಳೆದು[1] ಕೊಂಡನು ಖಚರಪತಿ ನಗುತ ॥ ೧೭೯ ॥

---

೧೭೭. [1]ಮೊದಲಾಗಿರೆ (ಅ). ಮೊದಲಾದರು (ಕುಮಾ). [2]ರಿವರು (ಅ), ವಿವರ (ಕುಮಾ). [3]ರೀಮಹಾದ್ಭುತವ (ಅ ಪ್ರ).
[ಮೊಱಡಿ-ಗುಡ್ಡ, ಸಣ್ಣ ಬೆಟ್ಟ].

೧೭೮. [1]ಅರುಬು (ಅ ಅ ಕುಮಾ), ಸ್ವೀಪಾ (ಪ್ರ k).
[ಸಂವರಿಸು-ಸಿದ್ಧಮಾಡಿಕೊ. ಪಡಿಮುಖ-ಶತ್ರುಸೈನ್ಯ (ಎದುರುಸೈನ್ಯದ ಮುಂಭಾಗ). ಉಱುಬು-ರಭಸದಿಂದ ಮೇಲೆ ಬೀಳು. ತಱುಬು-ಅಟ್ಟಿಕೊಂಡು ಹೋಗು. ಮಱುಗು-ವ್ಯಥೆಪಡು].

೧೭೯. [1]ಕೈದುವನೀಸಿ (ಅ k), ಕೈದುವನಿಡಿಸಿ (ಪ್ರ).
[ಡಾವರಿಸು-ಶೌರ್ಯವನ್ನು ತೋರಿಸು. ಕಂಬಿ-ದೊಣ್ಣೆ].

ಹಯದ ಪಡಿವಾಘೆಯಲಿ ಬಾಹು-
ದ್ವಯುವ ಬಿಗಿದನು ತನ್ನ ರಥದಲಿ
ಜಯವಿಹೀನನ ತಂದು ಕುಳ್ಳಿರಿಸಿದನು ಕೌರವನ ।
ಭಯಭರಿತದುಶ್ಶಾಸನನ ದು-
ರ್ಜಯನ ಚಿತ್ರಾಂಗದವಿಕರ್ಣನ
ನಯವಿದೂರರ ತಂದನಿಪ್ಪತ್ತೈದು ಸಹಭವರ ॥ ೧೮೦ ॥

[1]ಗಾಳಿಯುಱಿಯದು ರವಿಯ ಕಿರಣಕೆ[1]
ಬಾಲೆಯರು ಗೋಚರವೆ ದಡ್ಡಿಯು
ಮೇಲು ಬೀಯುಗದಂಗರಕ್ಷೆಯ ಕಂಚುಕಿ[2]ವ್ರಜದ[2] ।
[3]ಮೇಳದವರೇ[3]ನಾಯ್ತೊ ಬೀದಿಯ
ಗಾಳುಮಂದಿಯ ನಡುವೆ ಕುರುಭೂ-
ಪಾಲನರಸಿಯರಳುತ ಹರಿದರು ಬಿಟ್ಟ ಮಂಡೆಯಲಿ ॥ ೧೮೧ ॥

ಅರಸಿಯರು ಸಖಿಯರು ಕುಮಾ[1]ರಿಯ-[1]
ರರಸನನುಜರ ಹೆಂಡಿರನಿಬರು
ವೆರಸಿ ಬಂದಳು ಭಾನುಮತಿ ಯಮತನುಜನಾಶ್ರಮಕೆ ।
ಕರುಣಿ ರಕ್ಷಿಸು ಸೋಮವಂಶೋ-
ದ್ಧರಣ ರಕ್ಷಿಸು ಸತ್ಯಧರ್ಮದ
ಸಿರಿಯೆ ರಕ್ಷಿಸೆನುತ್ತ ಧೊಪ್ಪನೆ [2]ಕೆಡೆದ[2]ಳಂಘ್ರಿಯಲಿ ॥ ೧೮೨ ॥

---

೧೮೦. [ಪಡಿ–ಪ್ರತಿ. ವಾಘೆ–ಲಗಾಮು. ಜಯವಿಹೀನ–ಸೋತವನು. ನಯವಿದೂರರು–ನೀತಿಬಾಹಿರರು, ನೀತಿಭ್ರಷ್ಟರು. ಸಹಭವರು–ಒಡಹುಟ್ಟಿದವರು].

೧೮೧. [1]ಗಾಳಿಯುರಿದುದು ರವಿಯ ಕಿರಣಕೆ (ಅ), ಗಾಳಿ ಮೇಘದ ರವಿಯ ಚಂದ್ರರ ತೋರಿಕೆಗೆ (ಪ್ರ); ಸ್ವೀಪಾ (ಕ ಓ k ಕುಮಾ). [2]ಜನದ (ಅ ಕುಮಾ), ಸ್ವೀಪಾ (ಪ್ರ ಕ ಓ k). [3]ಮೇಳವವದೇ (ಅ ಆ ಕುಮಾ), ಸ್ವೀಪಾ (ಪ್ರ).
[ದಡ್ಡಿ–ತೆರೆ, ಪರದೆ. ಕಂಚುಕಿ–ರಾಣಿವಾಸದ ದ್ವಾರಪಾಲಕ. ವ್ರಜ–ಸಮೂಹ. ಮೇಳದವರು–ನೃತ್ಯಕೂಟದವರು. ಗಾಳುಮಂದಿ–ಅಲ್ಪರು. ಹರಿದರು–ಓಡಿದರು. ಬಿಟ್ಟಮಂಡೆ–ಕೆದರಿದ ತಲೆ].

೧೮೨. [1]ರಕ (ಅ ಕುಮಾ), ಸ್ವೀಪಾ (ಕ k ಪ್ರ). [2]ಬಿದ್ದ (ಅ ಕುಮಾ), ಸ್ವೀಪಾ (ಕ ಓ k).
[ಕೆಡೆ–ಬೀಳು].

ನಾದಿದಳು ನೃಪನಂಘ್ರಿಯನು ನಯ-
ನೋದಕದ ಧಾರೆಯಲಿ ಭಾಳವ
ತೀದು ತಿಲಕದ ಗಂಧದಲಿ ಬೈತಲೆಯ [1]ಮುತ್ತಿನಲಿ[1] ।
ಆದರಿಸಿ ನವಕುಸುಮದಲಿ ಘನ-
ರೋದನಧ್ವನಿಮಂತ್ರದಲಿ ನೃಪ-
ಪಾದಪೂಜೆಯ ರಚಿಸುವವೊಲೊಪ್ಪಿದಳು ಭಾನುಮತಿ ॥ ೧೮೩ ॥

ಖಳರು ಕೌರವರಿಂದು ಸಜ್ಜನ-
ಕುಲಶಿರೋಮಣಿ ನೀನು ಕರುಣಾ-
ಜಲಧಿ ನಿನಗಪರಾಧಿಗಳು ನಾವಹೆವು ಜಗವಱಿಯೆ ।
ಹುಳಿಗೆ ಹಾಲಳುಕಿದೊಡೆ ಹಾಲಿನ
ಜಲಧಿ ಕೆಡುವುದೆ ಜೀಯ ನಿನ್ನವ-
ರೆಳಸಿಕೊಂಡರು ಕಾಯಬೇಕೆಂದೊಱಲಿದಳು ತರಳೆ ॥ ೧೮೪ ॥

ರಾಯರಿಗೆ ಬಿನ್ನಹವ ಮಾಡೌ
ತಾಯೆ ಕೇಳೌ ದ್ರೌಪದಿಯೆ ಹಿರಿ-
ದಾಯಸವಪಡಿಸಿದನು ಕುರುಪತಿ ನಿನ್ನ ಮೈದುನನು ।
ನೋಯಿಸಲು [1]ಸಿರಿಗಂಧ[1] ನಿಜಗುಣ-
ದಾಯತವ ಬಿಡದಂತೆ ನೀವೇ
ಕಾಯಬೇಹುದು ಪತಿಯನೆಂದೊಱಲಿದಳು ಭಾನುಮತಿ ॥ ೧೮೫ ॥

ಚುಂಬಿಸಿತು ಕಡುಶೋಕ ಮಿಡಿದನು
ಕಂಬನಿಯನುಗುರಿನಲಿ ಘನಕರು-
ಣಾಂಬುನಿಧಿ ಸೀಗುರಿಸಿ ಮೈ[1]ಗುಡಿಯಿಡಿದ[1] ರೋಮದಲಿ ।

---

೧೮೩. [1]ಮುತ್ತುಗಳ (ಅ ಕುಮಾ).
[ನಾದು–ತೋಯಿಸು].

೧೮೫. [1]ಶ್ರೀಗಂಧ (ಅ), ಸಿರಿಖಂಡ (ಕುಮಾ) ; ಸ್ವೀಪಾ (ಅ).
[ಆಯತ–ಯೋಗ್ಯತೆ].

೧೮೬. [1]ಗೂಡಿರಿದ (ಅ ಕುಮಾ), ಗುಡಿಯಿರಿ (ಅ) ; ಸ್ವೀಪಾ (ಪ್ರ).

ಹಂಬಲಿಸಬೇಡಕಟ ಕುರುಪತಿ-
ಯೆಂಬನಾರೌ ಬೊಪ್ಪನವರೇ-
ನೆಂಬರೇಳೌ ತಾಯೆ ಎನುತೆತ್ತಿದನು ಭಾವಿನಿಯು ॥ ೧೮೬ ॥

ಭೀಮ ಬಾ ಕುರುರಾಜಕುಲಚೂ-
ಡಾಮಣಿಯು ತಾ ಹೋಗು ಕದನೋ-
ದ್ದಾಮದರ್ಪನ ತಾ ನಿಜಾನ್ವಯಕುಮುದಚಂದ್ರಮನ ।
ತಾ ಮನೋವ್ಯಥೆ ಬೇಡ ನೃಪಚಿಂ-
ತಾಮಣಿಯು ತಾ [1]ಹೋಗೆನಲು ಕರ[1]-
ತಾಮರಸವನು ಮುಗಿದು ಬಿನ್ನಹಮಾಡಿದನು ಭೀಮ ॥ ೧೮೭ ॥

ತಮ್ಮ ಸಂಕಟಕಿವರು ವಿನಯುವ-
ನೆಮ್ಮ ಬಿನ್ನಹಮಾಡುತಿರ್ದೊಡೆ
ನಿಮ್ಮಡಿಗೆ ಪರಿತೋಷವೇ ಕರ್ತವ್ಯವಿಷಯದಲಿ ।
ಎಮ್ಮ ಮನ ಮುಂಚುವುದು ಕಾರ್ಯದ
ಹಮ್ಮುಗೆಯು ನೀವಱಿಯಿರೇ ತಮ-
ತಮ್ಮ ದುಷ್ಕೃತ ತಮಗೆ ಫಲಿಸಿದೊಡೇನು ನಿಮಗೆಂದ ॥ ೧೮೮ ॥

ಅನುಜ ಕೇಳಪಕಾರಿಜನದಲಿ
ನೆನೆವುದುಪಕಾರವನು ಗುಣಹೀ-
ನನಲಿ ಗುಣವನು ತೋಱುವದು ಗರುವರಿಗೆ ತೊಡಿಗೆಯದು ।
ಅನುಜನಲ್ಲಾ ನಮಗೆ ಕೌರವ-
ಜನಪನವರಪರಾಧಶತವನು
ನೆನೆವೊಡಿದು ಹೋತ್ತೇ ಮಹಾದೇವೆಂದನಾ ಭೂಪ ॥ ೧೮೯ ॥

---

೧೮೬. [ಚುಂಬಿಸಿತು-ಆವರಿಸಿತು, ಮುತ್ತಿತು. ಮಿಡಿ-ಕೊಡಹು, ಒದರು. ಸೀಗು-
ರಿಸು-ಮಾಲು, ವಾಲು, ಬಾಗು. ಮೈಗುಡಿಯಿಡಿದ-ಮೈ ಕುಡಿಬಿಟ್ಟು ತುಂಬಿದ
ರೀತಿಯಲ್ಲಿ ಕಾಣುವ (?)].

೧೮೭. [1]ಯೆನಲು ಕರಯುಗ (ಆ ಕುಮಾ), ಸ್ವೀಪಾ (k ಪ್ರ).

೧೮೮. [ಪರಿತೋಷ-ಸಂತೋಷ. ಮುಂಚು-ಮುಂದಾಗು. ಹಮ್ಮುಗೆ-ತೊಡಗುವುದು,
ಹಮ್ಮಿಕೊಳ್ಳುವುದು].

೧೮೯. [ತೊಡಿಗೆ-ಭೂಷಣ, ಒಡವೆ].

ಭರತವಂಶದೊಳವರ ಭಂಗವೆ
ನಿರುತವೆಮ್ಮದು ನಮ್ಮ ಭಂಗ-
ಸ್ಫುರಣವವರದು ತಾವಱಿಯರಾವಱಿವೆವೀ ಹದನ ।
ಪರರ ಕಲಹಕೆ ನಾವು ನೂಱೈ-
ವರುಗಳಂತಃಕಲಹಕದು ನೂ-
ರ್ವರು ವಿಚಾರಿಸಲೈವರಾವೆಂದನು ಮಹೀಪಾಲ ॥ ೧೯೦ ॥

ಆರಿಗಾರುಪಕಾರಿಗಳು ಮೇ-
ಣಾರಿಗಾರಪಕಾರಿಗಳು ತಾ-
ನಾರಿಗಾರುಂಟವರ[1]ವರ ಕೃತ[1]ಕರ್ಮಸಂಸ್ಕಾರ ।
ಹೋರಿಸುವುದಳಿಸುವುದು ಸೌಖ್ಯಕೆ
ಸೇರಿಸುವುದಿದಕಹಿತಹಿತರಿಂ-
ದಾರ ಮುಱಿವುದು ಮನ್ನಿಸುವುದೈ ಭೀಮ ಹೇಳೆಂದ ॥ ೧೯೧ ॥

ಅದಱಿನಾಚೆಯ ಭವದ ದುಷ್ಕೃತ
ವೊದಗಿತೀ ಜನ್ಮದಲಿ ವನವಾ-
ಸದ ಪರಿಕ್ಲೇಶಾನುಭವಕಿವರೇನ ಮಾಡುವರು ।
ಒದಗಿ[1]ದುತ್ಸವದಲ್ಲಿ[1] ಪರರ-
ಭ್ಯುದಯವನು ಬಯಸುವುದು ಪರರಿಗೆ
ಮುದವನಾಚರಿಸುವದು ಧರ್ಮಜ್ಞರಿಗೆ ಗುಣವೆಂದ ॥ ೧೯೨ ॥

ಎಣಿಸಲೇಕಿದನದನು ಕೌರವ-
ಗಣ ಮರಳಿ ಬಂದಲ್ಲದಾರೋ-
ಗಣೆಯ ಮಾಡೆನು ಪಾರ್ಥ ನೀ ನುಡಿ ನಿನ್ನ ಹವಣೇನು ।

---

೧೯೦. [ಭಂಗಸ್ಫುರಣ-ಅವಮಾನದ ಪ್ರಕಟನೆ].

೧೯೧. [1]ದುಷ್ಕೃತ (ಅ).

[ಹೋರು-ಕಾದಾಡು, ಹೋರಾಡು. ಮುಱಿ-ಭಂಗಿಸು ; ಕೊನೆಗಾಣಿಸು].

೧೯೨. [1]ಉತ್ಸಾಹದಲಿ (ಅ).

[ಉತ್ಸವ-ಸಂಭ್ರಮ, ಸಡಗರ. ಮುದ-ಸಂತೋಷ].

ರಣದೊಳರಿಗಳ ಮುಱಿದು ಕುರುಧಾ-
ರಿಣಿಪತಿಯು ತಹುದುಂಟೆಯೆನೆ ಬಿಲು-
ಗಣೆಗಳನು [1]ತೀಡಿದನು[1] ಫಲುಗುಣ ಹೂಡಿದನು ರಥವ ॥ ೧೯೩ ॥

ಮುಱಿದು ಚೆಲ್ಲಿದ ಸಕಲಕುರುಬಲ
ನೆರೆದುದರ್ಜುನನೊಡನೆ ಸೂಟಿಯೊ-
ಳರಿಭಟನ ಬೆಂಬತ್ತಿದನು ಫಡ ನಿಲ್ಲುನಿಲ್ಲೆನುತ ।
ಸೆಱೆಯು ಬಿಡು ಗಂಧರ್ವಲೋಕವ-
ನುರುಹುವೆನು ಹಿಂದಿಕ್ಕಿಕೊಂಬನ
ಶಿರವ ಚೆಂಡಾಡುವೆನೆನುತ [1]ತೆಗೆ[1]ದೆಚ್ಚನಾಪಾರ್ಥ ॥ ೧೯೪ ॥

ಬಿಡು ಸೆಱೆಯುನವಗಡೆಯತನವೆ-
ಮ್ಮೊಡನೆ ಸಲ್ಲದು ಸೂಳೆಯರ [1]ಸುಧೆ-[1]
ಗುಡಿಹಿಗಳ [2]ಸರ[2]ವಾದಿಗಳ ಸೇರುವೆಯುಲೊಪ್ಪುವುದು ।
ಫಡಯೆನುತ ನಾರಾಚದಲಿ ಬಲ-
ನೆಡನ ಕೀಲಿಸಿ [3]ಹಿಂಗುಡಿ[3]ಯ ಮುಂ-
ಗುಡಿಯು ಕಟ್ಟಿದನಂಬಿನಲಿ ಖಚರಾಧಿಪನ ರಥವ ॥ ೧೯೫ ॥

---

೧೯೩. [1]ತಿದ್ದಿದನು (ಅ ಕುಮಾ), ತಿರುಹುತ್ತ (ಅ); ಸ್ವೀಪಾ (k ಪ್ರ).
[ಆರೋಗಣೆ-ಊಟ. ಕಣೆ-ಬಾಣ. ತೀಡು-ತಿಕ್ಕ, ಉಜ್ಜು ಸಿದ್ಧಪಡಿಸು].

೧೯೪. [1]ಕವಿ (ಅ ಕುಮಾ, ಅ), ಸ್ವೀಪಾ (ಪ್ರ k).
[ಚೆಲ್ಲು-ಚೆದರು. ಸೂಟಿ-ರಭಸ, ವೇಗ. ಹಿಂದಿಕ್ಕಿಕೊಳ್ಳು-ಮರೆಮಾಡಿಕೊ].

೧೯೫. [1]ಸುರೆ (ಅ ಅ ಕುಮಾ), ಸ್ವೀಪಾ (ಪ್ರ k). [2]ರಸ (ಅ ಕುಮಾ), ಸ್ವೀಪಾ (ಪ್ರ). [3]ಬಿಂಗಡೆ (ಅ), ಬಿಂಕಡಿ (ಪ್ರ), ಹಿಂಕಡಿ (k), ಹಿಂಗಲಿ (ಕ ಅ); ಸ್ವೀಪಾ (ಕುಮಾ).
[ಅವಗಡೆಯತನ-ದುಡುಕು, ಸಾಹಸ, ಪರಾಕ್ರಮ. ಸೂಳೆಯರು-ದೇವಲೋಕದ ವೇಶ್ಯೆಯರು. ಸುಧೆಗುಡಿಹಿ-ಅಮೃತ ಕುಡಿಯುವವನು. ಸರವಾದಿ-ಸಂಗೀತಜ್ಞ, ಗಾನಮಾಡುವವನು. ನಾರಾಚ-ಬಾಣ. ಹಿಂಗುಡಿ, ಮುಂಗುಡಿ-ಸೈನ್ಯದ ಹಿಂಭಾಗ, ಮುಂಭಾಗ. ಖಚರಾಧಿಪ-ಗಂಧರ್ವರ ರಾಜ (ಚಿತ್ರಸೇನ)].

ತಿರುಗಿ ಕಂಡನು ಖಚರಪತಿ ನಿ-
ಷ್ಠುರವಿದೇನೈ ಪಾರ್ಥ ನೀ ಕಡು-
ಮರುಳೊ [1]ಮೂಢನೊ[1] [2]ಜಡನೊ ಶೌರ್ಯ[2]ಭ್ರಾಂತಿವಿಹ್ವಲನೋ ।
ಧುರದ ಕೌತುಕಗರಳ[3]ಮೂರ್ಚ್ಛಾಂ-
ತರಿತ[3]ಹೃದಯನೊ ನಿಲ್ಲು ಚಾಪದ
ಶರವನುಪಸಂಹರಿಸಿ ನಮ್ಮಯ ಮಾತ ಕೇಳೆಂದ ॥ ೧೯೬ ॥

ಹುಲಿಯು ಮುಱಿದೊತ್ತಿದೊಡೆ ಪಶುಸಂ-
ಕುಲಕೆ ಸಂಕಟವೇನು ವಾಯಸ-
ಕುಲವ ಕೈಮಾಡಿದೊಡೆ ಕೋಟಲೆಯೇನು ಕೋಗಿಲೆಗೆ ।
ಖಳರ ಕೊಪ್ಪರಿಸಿದೊಡೆ ಸುಜನರ
ತಲೆಗೆ ವೇದನೆಯೇನು ಕೌರವ-
ಕುಲವ[1]ಕಟ್ಟಿ[1]ದೊಡೇನು ಜಠರದ ಶೂಲೆ ನಿನಗೆಂದ ॥ ೧೯೭ ॥

ಹೋದ ಮಾರಿಯ ಕರೆದು ಮನೆಯೊಳ-
ಗಾದರಿಸಿದವರುಂಟೆ ನೀರಲಿ
ನಾದ ಕೆಂಡವನುರುಹಿ ಮುಡಿದವರುಂಟೆ ಮಂಡೆಯಲಿ ।
ಕೈದು ಮುಱಿದೊಡೆ ಹಗೆಗೆ ತನ್ನಯ
ಕೈದ ಕೊಟ್ಟವರುಂಟೆ ಕುರುಪತಿ
ತೀದೊಡೀತನ [1]ಬಿಡಿಸಿ[1]ಕೊಂಬಿರೆ ಲೇಸುಲೇಸೆಂದ ॥ ೧೯೮ ॥

---

೧೯೬. [1]ಮೂರ್ಖನೊ (ಅ). [2]ಜಡನೊ ಪಿತ್ತ (ಅ ಕುಮಾ), ಸ್ವೀಪಾ (ಪ್ರ k). [3]ಮೂರ್ಛಾತರಳ (ಅ ಪ್ರ k).
[ಧುರದ....ಹೃದಯ-ಯುದ್ಧದ ಬೆರಗು ಅಥವಾ ವಿಸ್ಮಯ ಎಂಬ ವಿಷದ ಪರಿಣಾಮವಾಗಿ ಉಂಟಾದ ಮೈಮರೆಯುವಿಕೆಗೆ ಒಳಗಾದ ಹೃದಯವುಳ್ಳವನು. ಉಪಸಂಹರಿಸು-ಹಿಂತೆಗೆದುಕೊ].

೧೯೭. [1]ಅದ್ದಿ (ಅ ಕುಮಾ), ಸ್ವೀಪಾ (ಪ್ರ ಕ k ಓ).
[ಮುರಿ-ಅಡಗಿಸು. ವಾಯಸ-ಕಾಗೆ. ಕೊಪ್ಪರಿಸು-ದಂಡಿಸು. ಶೂಲೆ-ನೋವು].

೧೯೮. [1]ಕರೆದು (ಅ ಪ್ರ).
[ನಾದ-ತೊಯ್ದ. ಉರುಹಿ-(ಮತ್ತೆ) ಹೊತ್ತಿಸಿ. ಕೈದು-ಆಯುಧ. ತೀದೊಡೆ (ತೀರ್ದೊಡೆ)-ತೀರಿಹೋದರೆ].

ನಟರಲಾ [1]ನೀವ್ ಸುರಪುರದ[1]ಚಾ-
ವಟಿಯರ್ಕೈ ಚತುರೋಕ್ತಿಗಳಲಟ-
ಮಟಿಸಿದರೆ [2]ನಾ[2] ಮರಳುವೆನೆ ಬಿಡು ಬಿಡು ಸುಯೋಧನನ ।
ಕಟು ಮಧುರವುರಿ ಶೀತವತಿ ಸಂ-
ಕಟವು ಸುಖ ವಿಷವಮೃತವಾವುದು
ಘಟಿಸಿತಗ್ರಜನಾಜ್ಞೆಯದು [3]ನಮ[3]ಗೆಂದನಾ ಪಾರ್ಥ ॥ ೧೯೯ ॥

ಧರ್ಮವಾಗಲಿ ಮೇಣು ಜಗದಲ-
ಧರ್ಮವಾಗಲಿ ರಾಜ[1]ಮಂತ್ರ[1]ದ
[2]ಮರ್ಮ[2]ವಾಗಲಿ ನೀತಿಬಾಹಿರವಾಗಲದು ಮೇಣು ।
ಧರ್ಮಪುತ್ರನ ಬೆಸನು ವೈದಿಕ-
ಧರ್ಮವೆಮಗದು ರಾಜಮಂತ್ರದ
ನಿರ್ಮಲಿನ ಮತಮೆಮಗೆ ಬೇಱ[3]ೊಂದಿಲ್ಲ [3]ಮತ[3]ವೆಂದ ॥ ೨೦೦ ॥

ಬಿಡುವೆಯಾದೊಡೆ ನೃಪನ ಸೆಱ[3]ಯನು
ಬಿಡಿಸುವೆನು ಮೇಣಲ್ಲದಿರ್ದೊಡೆ
ಬಿಡಿಸುವೆನು ನಿ[1]ನ್ನುಸುರ[1]ಸೆಱ[3]ಯನು ನಿನ್ನ ದೇಹದಲಿ ।
[2]ನು[2]ಡಿಗೆ ತೆಱಹಿಲ್ಲೆಳೆನುತ ಕೈ-
ಗಡಿಯ[3]ಲೆ[3]ಚ್ಚನು ಕಾಲಕೂಟದ
ಕಡಲು ಕವಿವಂದದಲಿ ಕವಿದವು ಪಾರ್ಥನಂಬುಗಳು ॥ ೨೦೧ ॥

---

೧೯೯. [1]ನೀವ್ ಅಸುರಪುರ (ಕುಮಾ). [2]ತಾ (ಅ ಪ್ರ). [3]ತನ (ಅ), ಸ್ವೀಪಾ (ಪ್ರ).
[ಚಾವಟಿಯರು, ಚಾಪಟಿಯರು–ಕೊಬ್ಬಿದವರು, ಜಾರರು. ಚತುರೋಕ್ತಿ–ಬುದ್ಧಿವಂತಿಕೆಯ ಮಾತು. ಅಟಮಟ-ಸುಳ್ಳು. ಕಟು–ಕಹಿ. ಘಟಿಸು–ಉಂಟಾಗು, ಸಂಭವಿಸು].

೨೦೦. [1]ಮಾರ್ಗ (k). [2]ಧರ್ಮ (ಕ k ಪ್ರ), ನರ್ಮ (ಅ). [3]ಗತಿ (ಅ ಓ k ಪ್ರ).
[ಮರ್ಮ–ರಹಸ್ಯ. ಬೆಸನು–ಅಪ್ಪಣೆ, ಆಜ್ಞೆ. ನಿರ್ಮಲಿನ–ಪರಿಶುದ್ಧವಾದ. ಮತ–ಅಭಿಪ್ರಾಯ, ಆಶಯ].

೨೦೧. [1]ನ್ನಸುವ (ಅ). ಮ (ಅ), ಸ್ವೀಪಾ (ಅ k ಕುಮಾ ಪ್ರ). [3]ನೆ (ಅ k ಕುಮಾ ಪ್ರ).
[ಉಸುರು–ಪ್ರಾಣ. ತೆಱಹು–ಅವಕಾಶ. ಕೈಗಡಿ–ಕೈಚಳಕ, ಕರಕೌಶಲ. ಕಾಲಕೂಟ-ಘೋರವಿಷ. ಕವಿ–ಮುಚ್ಚು, ಆವರಿಸು].

ಕಡಿದನರ್ಜುನನಂಬನೀಸವ-
[1]ಗಡವೀದೇ[1]ಕೈ ಮರುಳೆ ಕೆಂಡವ
ಮಡಿಲೊಳಿಕ್ಕುವುದರ್ತಿಯೋ ಸಂಧಾನ ನಿಮಗೆಮಗೆ ।
ಬಿಡುವೆನಿನಿಬರ ಸೆಱೆಗಳನು ನಿ-
ನ್ನೊಡೆಯನಲ್ಲಿಗೆ ಕೊಂಡು [2]ಬಹೆನೆಂ-[2]
ದೊಡನೆ ಬಂದನು ಧರ್ಮರಾಯನ ಬಳಿಗೆ ಖಚರೇಂದ್ರ ॥ ೨೦೨ ॥

ಕೇಳು ಜನಮೇಜಯ ಧರಿತ್ರೀ-
ಪಾಲ ಕೌರವನೃಪನ ತಂದು ಕೃ-
ಪಾಳುವಿನ ಚರಣಾಗ್ರದಲಿ ಕೆಡಹಿದನು ಕಲಿಪಾರ್ಥ ।
ತೋಳ ಹಿಂಗಟ್ಟುಗಳ ಮೋಱೆಯ
ಕಾಳಿಕೆಯು ಬಿಡುದಲೆಯ ಸೀರೊ[1]ಱೆ[1]-
ವಾಲಿಗಳ ಕುರುಭೂಪನಿದ್ದನು ತಮ್ಮದಿರುಸಹಿತ ॥ ೨೦೩ ॥

ಕಳುಹಿದನು ಖೇಚರನನವನಿಪ-
ತಿಲಕ ನೋಡಿದನೀತನನು ನಿಜ-
ಲಲನೆಯನು ಕರೆದನು ಸುಯೋಧನ ನೊಂದನಕಟೆನುತ ।
ನಳಿನಮುಖಿ ಹೆಡಗೈಯ ಬಿಡು ಕಲು-
ನೆಲನು ಹಾಸಿಕೆ ಹಂಸ[1]ತೂಲ[1] [2]ದ
*ತ*ಳಿಕಿನಲಿ ಪವಡಿಸುವಗೀ ವಿಧಿಯೇ ಶಿವಾ ಯೆಂದ[2] ॥ ೨೦೪ ॥

---

೨೦೨. [1]ಗಡಿಸಲೇ (ಕ). [2]ನಡೆಯೆಂ (ಕುಮಾ), ಸ್ವೀಪಾ (ಅ ಕ).
[ಈಸು–ಇಷ್ಟು. ಅವಗಡ–ತೊಂದರೆ, ಅಪಘಾತ. ಅರ್ತಿ–ಅಪೇಕ್ಷಣೀಯ].

೨೦೩. [1]ಗು (ಕ ಅ).
[ಕಾಳಿಕೆ–ಕಪ್ಪು. ಬಿಡುದಲೆ–ಕೆದರಿದ ತಲೆ. ಒಱೆ–ಸುರಿ. ಆಲಿ–ಕಣ್ಣುಗುಡ್ಡೆ].

೨೦೪. [1]ತಲ್ಪ (ಅ ಆ ಕುಮಾ), ಸ್ವೀಪಾ (k ಪ್ರ). [2]ದಡಕಿನಲಿ ಪರಿಸ್ತರಣವೇ ಮಹಾದೇವೆನುತ ಬಿಸುಸುಯ್ದ (k ಪ್ರ). *ಪ (ಅ), ಸ್ವೀಪಾ (ಕ).
[ಹೆಡಗೈ–ಹಿಂಗಟ್ಟಿದ ಕೈ. ಬಿಡು–ಬಿಡಿಸು. ಹಂಸತೂಲ–ಹಂಸದ ತುಪ್ಪುಳು. ತಳಿಕು–ಹಾಸು].

ಬಂದಳಬುಜಾನನೆ ಸುಯೋಧನ-
ನಂದವನು ನೋಡಿದಳು ಸುಯ್ದಳು
ಬೆಂದ ವಿಧಿ ಬಂಧನವ ತಂದುದೆ ಸಾರ್ವಭೌಮರಿಗೆ ।
ಒಂದು ಕೈ ಗಲ್ಲದಲಿ ಬಿಡಿಸಿದ-
ಳೊಂದುಕೈಯಲಿ [1]ತೋಳ[1] ಪಾಶವ-
ನಿಂದುಮುಖಿ ದುರ್ಯೋಧನನ ದುಶ್ಯಾಸ[2]ನಾದಿಗಳ[2] ॥ ೨೦೫ ॥

ಅರಸ ನೊಂದೈ ಮರ್ದನಕೆ ಮ-
ಲ್ಲರುಗಳಿಲ್ಲೆ ಮಗೊತ್ತುವವು ಕಲು-
ಹರಳು ಮಜ್ಜನ[1]ಮಾಡು[ವೆ]ಡೆ[1][2]ಶೀ[2]ತಾಂಬು ತಿಳಿಗೊಳ[3]ದ[3] ।
ಹರಿಣಶಾರ್ದೂಲಾದಿಚರ್ಮಾಂ-
ಬರವೆ ಸಮುಕಟ್ಟೆಮಗೆ ರತ್ನಾ-
ಭರಣವೇ ರುದ್ರಾಕ್ಷಿಯೆಂದಳು ನಗುತ [4]ನಳಿನಾಕ್ಷಿ[4] ॥ ೨೦೬ ॥

ಮಾನಿನಿಯು ಕಟಕಿಯು ಮಹಾಸ್ತ್ರಕೆ
ಮೌನವನು ಮಱೆಗೊಂಡು ಕಲುಷ-
ಧ್ಯಾನನಿದ್ದನು ಚಿತ್ತದಲಿ ಬೇಱೊಂದ ಚಿಂತಿಸುತ ।
ಭಾನುಮತಿ ಕೈಮುಗಿದಳೀ ಕ-
ರ್ಣಾನುಗತ ತಾಟಂಕಮುದ್ರೆಯು
ನೀನೆಲೈ ದಯಗೈದೆಯೆಂದೆಱಗಿದಳು ಚರಣದಲಿ ॥ ೨೦೭ ॥

---

೨೦೫. [1]ಭುಜದ (ಪ್ರ ಅ ಆ ಕುಮಾ), ಸ್ವೀಪಾ (ಕ). [2]ನನುಸಹಿತ (ಆ), ಸ್ವೀಪಾ (ಪ್ರ k).
[ಅಂದ-ಸ್ಥಿತಿ. ಪಾಶ-ಕಟ್ಟು, ಹಗ್ಗ].

೨೦೬. [1]ಭೋಗಿಸುವರ (ಆ), ಭೋಗಿಸುವರೆ (ಅ ಕುಮಾ); ಸ್ವೀಪಾ (ಪ್ರ ಓ k), [2]ಸಿ (ಅ ಆ ಕುಮಾ), ಸ್ವೀಪಾ (ಪ್ರ ಕ ಓ). [3]ನು (ಆ ಕುಮಾ), ಸ್ವೀಪಾ (ಅ ಓ). [4]ತರಳಾಕ್ಷಿ (ಆ ಕುಮಾ), ಸ್ವೀಪಾ (ಪ್ರ ಕ k).
[ಮರ್ದನ-ಮೈಯೊತ್ತುವುದು, ಮೈ ನೀವುವುದು. ಮಲ್ಲ-ಜಟ್ಟಿ. ಶೀತಾಂಬು-ತಣ್ಣೀರು. ಹರಿಣ-ಜಿಂಕೆ. ಶಾರ್ದೂಲ-ಹುಲಿ. ಸಮುಕಟ್ಟು-ಯೋಗ್ಯವಾದದ್ದು, ಉಚಿತವಾದದ್ದು].

೨೦೭. [ಕಟಕಿ-ಚುಚ್ಚುಮಾತು. ಮಱೆಗೊಳ್-ಆಶ್ರಯಿಸು. ಕಲುಷಧ್ಯಾನ-ದುರಾಲೋಚನೆ. ಕರ್ಣಾನುಗತ-ಕಿವಿಯಲ್ಲಿಯ. ತಾಟಂಕ-ಕಿವಿಯ ಆಭರಣ, ಓಲೆ. ಮುದ್ರೆ-ಉಂಗುರ].

ಎತ್ತಿದನು ರಾಣಿಯನು ನೃಪ ತಲೆ-
ಗುತ್ತಲೇಕೈ ನಿನಗೆ ಬಂದಾ-
ಪತ್ತು ನಮ್ಮದು ನಮ್ಮ ತೊಡಕಿನ ತೋಟಿಗಳು ನಿನಗೆ ।
ಹೆತ್ತ ತಾಯ್‌ಗಾಂಧಾರಿ ನದಿ ನಾ-
ವಿತ್ತಡಿಗ[1]ಳಿದಕ[1]ಕಟ ನೀ ದು-
ಶ್ಚಿತ್ತ[2]ನಹೆಯೇಕೆಂ[2]ದು ನುಡಿದನು ನೃಪತಿ ಕೌರವಗೆ ॥ ೨೦೮ ॥

ಭಟರ ಬೊಬ್ಬೆಗಳಡಗಿದವು ಬಾ-
ಯ್ದುಟಿಗಳಾಡವು ವಂದಿನಿಕರಕೆ
ಪಟಹಪಣವಮೃದಂಗವಿದ್ದವು ಮೌನದೀಕ್ಷೆಯಲಿ ।
ಚಟುಲಗಜಹಯರಥದವರು ಲಟ-
[1]ಕ[1]ಟಿಸದಿದ್ದರು ಕೌರವೇಂದ್ರನ
ಕಟಕ ದುಮ್ಮಾನದಲಿ ಬಂದುದು ಹಸ್ತಿನಾಪುರಕೆ ॥ ೨೦೯ ॥

ಹೊಗಲಿ ಪಾಳೆಯ ಪುರವನೆಂದು-
ಬ್ಬೆಗದ ಬೆಳೆಸಿರಿವಂತನೆತ್ತಿದ
ದುಗುಡದಲಿ ಕುಳ್ಳಿರ್ದನಾ ಸುರನದಿಯ ತೀರದಲಿ ।
ಹೊಗೆವ ವೋಜಿ[3]ಯ ನೆಲಕೆ ನಟ್ಟಾ-
ಲಿಗಳ ನಿಖಿಳೇಂದ್ರಿಯದ [1]ರೇ[1]ಚಕ
ಬಿಗಿಯೆ ಬೇಗೆಯ ಬೇಸಱಿನ [2]ಬಿಸು[2]ಗುದಿಯ ಸುಯ್ಲಿನಲಿ ॥ ೨೧೦ ॥

---

೨೦೮. [1]ಳಕಟ (ಅಕುಮಾ), ಸ್ವೀಪಾ (k). [2]ನಾಗದಿರೆಂ (ಅ ಕುಮಾ), ಸ್ವೀಪಾ (ಅ k). [ತಲೆಗುತ್ತು–ತಲೆತಗ್ಗಿಸು, ತಲೆಬಾಗು. ತೊಡಕು–ಕೋಟಲೆ. ತೋಟಿ–ಕಲಹ. ಇತ್ತಡಿಗಳು–ಎರಡು ದಡಗಳು].

೨೦೯. [1]ಲ (ಅ ಅ ಕುಮಾ), ಸ್ವೀಪಾ (ಕ k ಪ್ರ). [ಬೊಬ್ಬೆ–ಕೂಗಾಟ, ಗಲಭೆ. ವಂದಿನಿಕರ–ಹೊಗಳುಭಟರ ಸಮೂಹ. ಪಟಹ–ನಗಾರಿ. ಪಣವ–ತಮಟೆ. ಚಟುಲ–ಚುರುಕಾದ. ಕಟಕ–ಸೈನ್ಯ. ದುಮ್ಮಾನ–ಕೊರಗು, ಮನೋವ್ಯಥೆ].

೨೧೦. [1]ರೋ (ಅ ಓ k ಕುಮಾ). [2]ಬಿಸ (ಅ), ಸ್ವೀಪಾ (ಅ ಕುಮಾ ಪ್ರ). [ಪಾಳೆಯ–ಸೈನ್ಯದ ಪಾಳ್ಯ. ಉಬ್ಬೆಗ–ಉದ್ವೇಗ. ಉಬ್ಬೆಗದ ಬೆಳೆಸಿರಿವಂತ–ಬೆಳೆಯುತ್ತಿರುವ ಉದ್ವೇಗವೇ ಸಂಪತ್ತಾಗಿ ಉಳ್ಳವನು, ಅಪಾರವಾದ ಉದ್ವೇಗಕ್ಕೆ ಒಳಗಾದವನು. ಎತ್ತಿದ–ಪ್ರಕಟವಾದ. ಹೊಗೆವ–ದುಃಖದಿಂದ ಕಪ್ಪಿಡಿದ.

ತರಿಸಿ ಗಂಗಾಜಲವ ಗೋಮಯ-
ವೆರಸಿ ಕುಶೆ ಸಮ್ಮಾರ್ಜನೆಯ ವಿ-
ಸ್ತರಿಸಿ ಪರಿಕರಶುದ್ಧಿಯಲಿ ಪಸರಿಸಿದ ಬರ್ಹಿಯಲಿ ।
ನಿರಶನವ್ರತವೆಂದು ಮಂತ್ರೋ-
ಚ್ಚರಿತ ಸಂಕಲ್ಪದಲಿ ಕೌರವ-
ರರಸ ಪವಡಿಸಿದನು ಕೃತಪ್ರಾಯೋಪವೇಶದಲಿ || ೨೧೧ ||

ಈ ನಿರಾಹಾರವು ನಿರರ್ಥಕ
ಏನನೆಂಬೆನು ಜೀಯ ಮುಱಿದಭಿ-
ಮಾನ ಬೆಸುವುದೆ ಬಣ್ಣವಳಿವುದೆ ಬಂದ ದುರ್ಯಶದ ।
ಆ [1]ನದೀಸುತ ವಿದುರ[1]ರೆಂದುದ
ನೀನುಪೇಕ್ಷಿಸಿ ಕಳೆ[2]ದೆ[2] ಹೆಂಗುಸು
ನೀನಱಿಯೆಯೆನಬೇಡ ಚಿತ್ತೈಸೊಂದು ಬಿನ್ನಹವ || ೨೧೨ ||

ತಮ್ಮ ನೆಱ[3] [1]ವೊ[1]ಟ್ಟೈಸಿ ರಣದಲಿ
ನಮ್ಮ ಬಿಡಿಸಿದರವರು ನೀವಿ-
ನ್ನೆಮ್ಮ ಹಿಂದಣ [2]ಹಳಿ[2]ವ ನೋ[3]ಡದಿ[3]ರೆಂದು ಯಮಸುತನ ।
ನಮ್ಮ ನಗರಿಗೆ ಕರಸಿ ಧರೆಯನು
ತಮ್ಮ ಪಟ್ಟಣಸಹಿತ ಕೊಟ್ಟರೆ
ನಿಮ್ಮ[4]ನೀಗಲು[4] ಲೋಕ ಮೆಚ್ಚುವುದೆಂದಳಿಂದುಮುಖಿ || ೨೧೩ ||

---

೨೧೦. ನಿಖಿಳೇಂದ್ರಿಯದ ರೇಚಕ ಬಿಗಿಯೆ–ಎಂದರೆ ಎಲ್ಲಾ ಇಂದ್ರಿಯಗಳ ಉದ್ರೇಕವೂ ಅವನನ್ನು ಬಂಧಿಸಿದಂತಾಗಲು. ಬಿಸುಗುದಿ–ಬೇಗುದಿ, ಪರಿತಾಪ. ಸುಯ್ಲು–ನಿಟ್ಟುಸಿರು].

೨೧೧. [ಕುಶೆ–ಕುಶ ಎಂಬ ದರ್ಭೆಹುಲ್ಲು. ಸಮ್ಮಾರ್ಜನೆ–ಪ್ರೋಕ್ಷಣೆ; ಶುದ್ಧೀಕರಣಕ್ಕಾಗಿ ನೀರು ಚಿಮುಕಿಸುವುದು. ಬರ್ಹಿ–ದರ್ಭೆಯಂತಹ ಹುಲ್ಲು. ನಿರಶನ ವ್ರತ–ನಿರಾಹಾರವ್ರತ. ಪ್ರಾಯೋಪವೇಶ–ಆಮರಣಾಂತ ಉಪವಾಸ].

೨೧೨. [1]ನದೀಜದ್ರೋಣ. [2]ವೆ (ಕುಮಾ ಅ ಪ್ರ).
[ಬೆಸು–ಜೋಡಿಸು, ಕೂಡಿಸು; ಕೂಡಿಕೊಳ್ಳು, ಬೆಸೆ].

೨೧೩. [1]ಬ (ಕುಮಾ). [2]ಗುಣ (ಅ). [3]ಡಿದ (ಕುಮಾ). [4]ಡಿಗಳನು (ಅ ಪ್ರ).
[ನೆಱ[3]–ನೆರವು, ಸಹಾಯ. ಒಟ್ಟೈಸು–ಒಟ್ಟುಗೂಡಿಸು. ಹಳಿವು–ನಿಂದೆ; ದೋಷ, ಕುಂದುಕೊರತೆ].

ಮಱಿವ ಹಗೆಯೇ ನಾವು ಮಾಡಿ[1][ತ][1]-
ನಱಿಯೆಲಾ ಮೂದಲಿಸಿ [2]ಮರ್ಮವ[2]-
ನಿಱಿವ ಸುರಗಿ ಕಣಾ ಸದಾ ಪಾಂಚಾಲೆ ಪವನಜರು ।
ಮಱುಗಲೇತಕೆ ಭಾನುಮತಿ ನಿ-
ನ್ನುಱುವ ಮಗನಲಿ ರಾಜ್ಯ[3]ಭಾರವ[3]
ಹೊಱಿಸಿ ಬದುಕುವುದೆನ್ನ ಕಾಡದೆ ಹೋಗು ನೀನೆಂದ ॥ ೨೧೪ ॥

ಬಂದಳಾ ಗಾಂಧಾರಿ ಸೊಸೆಯರ
ವೃಂದಸಹಿತುರವಣಿಸಿ ಹೊಕ್ಕಳು
ನಿಂದು ನೋಡಿದಳಾತನಿರವನು ಕುಶೆಯ [1]ಹಕ್ಕೆಯು[1]ಲಿ ।
ಕಂದಿದಳು ಕಡು ಶೋಕ[2]ಶಿಖಿ[2]ಯುಲಿ
ಬೆಂದಳೇನೈ ಮಗನೆ ಹಾಸಿಕೆ-
ಯಂದ ಲೇಸಾಯ್ತೆನುತ ಕುಳ್ಳಿರ್ದಳು ಸಮೀಪದಲಿ ॥ ೨೧೫ ॥

ಏನು ದರ್ಭಾಸ್ತರಣ ಶಯನವಿ-
ದೇನು ಕಾರಣ ನಿರಶನವ್ರತ-
ವೇನು ಸಾಧಿಸಲಾ[1]ವು[1]ದೀ ಪ್ರಾಯೋಪವೇಶದಲಿ ।
ಏನು ಸಿದ್ಧಿಯಿದಕ್ಕೆ ಮೋಹಿದ
ಮೌನಮುದ್ರೆಯ [2]ಬಿಸುಟು[2] ಹೇಳೆ-
ನ್ನಾಣೆಯೆನುತವೆ ಹಣೆಯ ಹಣೆಯಲಿ ಚಾಚಿದಳು ಮಗನ ॥ ೨೧೬ ॥

---

೨೧೪. [1]ದ (ಅ ಕುಮಾ). [2]ವರ್ಮ (ಅ). [3]ಲಕ್ಷ್ಮಿಯ (ಅ ಪ್ರ).
[ಮಾಡಿತ-ಮಾಡಿದುದು. ಮೂದಲಿಸು-ಚುಚ್ಚುಮಾತನಾಡು. ಸುರಗಿ-ಕತ್ತಿ. ಉಱುವ-ಶ್ರೇಷ್ಠವಾದ].

೨೧೫. [1]ಹೊದರಿನ (ಅ), ಹರಹಿನ (ಪ್ರ). [2]ಶಿಖೆ (ಅ).
[ಹಕ್ಕೆ-ಹಾಸಿಗೆ, ಶಯ್ಯೆ. ಶಿಖಿ-ಅಗ್ನಿ, ಬೆಂಕಿ].

೨೧೬. [1]ದು (ಕುಮಾ), ಸ್ವೀಪಾ (ಪ್ರ ಅ). [2]ಬಿಡಿಸಿ (ಅ), ಬಿಟ್ಟು (ಪ್ರ).
[ದರ್ಭಾಸ್ತರಣ-ದರ್ಭೆಯ ಹಾಸು. ಅವುದು-ಆಗುವುದು. ಮೋಹು-ಕವಿ, ವ್ಯಾಪಿಸು].

ತಾಯೆ ಹೇಳುವುದೇನು ಪಾಂಡವ-
ರಾಯರುಳುಹಿದ[1]ರೊಡಲನಿನ್ನಿದ-[1]
ಆಯಸವ ನಾ ಹೇಳಲಱಿಯೆನು ಹೊಱಗೆ ಕೇಳುವುದು ।
ನೋಯಲೇತಕೆ ನಿಮಗೆ ಮಕ್ಕಳು
ತಾಯೆ ನೂ[2]ಱುಂಟ[2]ನಿಬರಲಿ ಕುಂ-
ದಾಯಿತೊಂದೈಸಲೆ ಮನೋವ್ಯಥೆಯೇಕೆ ನಿಮಗೆಂದ ॥ ೨೧೭ ॥

ಆ ಸಮಯದಲಿ ವಿಗತನಯನಮ-
ಹೀಶ ಬಂದನು ಜನಪದದ ವಿ-
ನ್ಯಾಸದುಗ್ಗಡಣೆಯಲಿ ವಿದುರನ ಹೆಗಲ ತೋಳಿನಲಿ ।
ಆಸಱಿನ ಬೇಗುದಿಯ [1]ಚಿಂತೆ[1]ಯ
ಬೇಸಱಿನ ಬಿಸುಸುಯ್ಲ ರಾಣೀ-
ವಾಸಕುಲವಿದಿರೆದ್ದುದಖಿಳಾಭರಣರಭಸದಲಿ ॥ ೨೧೮ ॥

ಸಾಕು ಮಗನೆ ದುರಂತಚಿಂತೆ ಯಿ-
ದೇಕೆ ಸಂಕಲ್ಪಾಭಿಯೋಗ-
ವ್ಯಾಕುಲತೆ ಬೇಡೇಳು ಪಾಲಿಸು ಸಕಲಭೂತಳವ ।
ಆ ಕುಮಾರರ ಕರಸಿ ಗುಣದಲಿ
ಸಾಕುವುದು ಜೀವೋಪಕಾರಕೆ
ಕಾಕ ನೆನೆಯದಿರೆನುತ ಮುಂಡಾಡಿದನು ನಂದನನ ॥ ೨೧೯ ॥

---

೨೧೭. [1]ಮೊಡಲನಿದನಿದ (ಅ), ಸ್ವೀಪಾ (ಕ). [2]ರೊಂದಿ (ಅ).
[ಅನಿಬರು-ಅಷ್ಟುಮಂದಿ. ಕುಂದಾಯಿತು-ಕಡಮೆಯಾಯಿತು].

೨೧೮. [1]ಬೆಂಕಿ (ಅ ಪ್ರ ಕುಮಾ), ಸ್ವೀಪಾ (ಕ ಓ ಅ).
[ವಿಗತನಯನ-ಕಣ್ಣು ಇಲ್ಲದವನು, ಕುರುಡ (ಧೃತರಾಷ್ಟ್ರ). ಜನಪದ-ಸಾಮಾನ್ಯ ಜನ. ಉಗ್ಗಡಣೆ-ಘೋಷಣೆ, ಕೂಗು. ಆಸಱು-ಆಯಾಸ].

೨೧೯. [ದುರಂತ-ಕೆಟ್ಟ ಪರಿಣಾಮದ. ಸಂಕಲ್ಪಾಭಿಯೋಗವ್ಯಾಕುಲತೆ-(ನಿನ್ನ ಆಮರಣಾಂತ ಉಪವಾಸದ) ಸಂಕಲ್ಪದ ಅಕಾರ್ಯದ ಆತಂಕ. ಕಾಕು-ಕೆಟ್ಟದ್ದು, ದುಷ್ಟವಾದದ್ದು. ಮುಂಡಾಡು-ಮುದ್ದಿಸು].

ಕಲಹ ಬೀದಿಯೊಳಾಯ್ತು ಕಟ್ಟಿದ-
ರಳಿವಿನೋದದಲಹಿತರಡಹೊ-
ಯ್ದೆಳೆದು ತಂದ[1]ನು ಪಾರ್ಥನೆಮ್ಮಯ[1] ತೋಳ ನೇ[2]ಣು[2]ಗಳ ।
ನಳಿನಮುಖಿ ಕಡು[3]ಮಹುಳಿ[3]ಯಲಿ ಮೂ-
ದಲಿಸಿ ಕೊಯ್ದಳು ತನಗೆ ಭಂಗದ-
ಲುಳಿವುದೆತ್ತಣ ಮಾತು ಕರುಣಿಸಿ ಬೊಪ್ಪ ನೀವೆಂದ ॥ ೨೨೦ ॥

ಹೊಕ್ಕು ರಾಯನ [1]ಕಂಡಿದೇನೀ[1]
ಹಕ್ಕೆಹುಲ್ಲಿನ[2]ಲಿರವು[2] ಹರಹರ
ಮಕ್ಕಳಾಟಿಕೆ[3]ಯೇನಿ[3]ದಗ್ಗದ ಸಾರ್ವಭೌಮರಿಗೆ ।
ಸಿಕ್ಕುವನು ಹಗೆ ತನಗೆ ತಾನೇ
ಸಿಕ್ಕುವನು ಹಗೆಗಳಿಗೆ ಲೋಕದೊ-
ಳಕ್ಕಜವೆ ಜಯ[4]ವ[4]ಜಯವೆಂದರು ಕರ್ಣಶಕುನಿಗಳು ॥ ೨೨೧ ॥

ಮೊದಲು ಧೃತರಾಷ್ಟ್ರಂಗೆ ತಾ ಜನಿ-
[1]ಸಿದುದು[1] ಬಳಿಕೀ ದೇಹ ಧರ್ಮಜ-
ನುದರದಿಂದವೆ ಬಂದುದಿನ್ನವರೊಡನೆ ಮತ್ಸರವೇ ।
ಅದು ನಿಲಲಿ ದುರ್ವಿಷಯವೈರಾ-
ಗ್ಯದಲಿ [2]ದೇಹವ[2] ಬಿಡುವೆನಲ್ಲದೆ
ಬೆದಱು ಭಂಗದೊಳಿಲ್ಲ ಬಿಜಯಂಗೈಯಿ ನೀವೆಂದ ॥ ೨೨೨ ॥

---

೨೨೦. [1]ರು ಭೀಮಪಾರ್ಥರು (ಅ ಪ್ರ). [2]ಳು (ಅ). [3]ಮೌಳಿ (ಪ್ರ ಕ k ಅ ಕುಮಾ).
[ಅಳಿವಿನೋದ-ಕುಚೇಷ್ಟೆಯ ವಿನೋದ. ಅಹಿತರು-ಶತ್ರುಗಳು. ನೇಣು-ಹಗ್ಗ. ಮಹುಳಿ (=ಮೌಳಿ, ಸಂ)-ಧಾರ್ಷ್ಟ್ಯ, ಮರ್ಯಾದೆ ಮೀರಿದ ನಡತೆ. ಭಂಗ-ಅವಮಾನ. ಉಳಿ-ಬದುಕಿದು].

೨೨೧. [1]ಕಂಡಿರೇನೀ (ಅ), ಕಂಡರನಿಬರು (ಅ ಓ); ಸ್ವೀಪಾ (ಕ). [2]ಮೇಲೆ (ಅ ಕ ಓ). [3]ಯಾವು (ಅ ಕುಮಾ), ಸ್ವೀಪಾ (ಅ ಓ). [4]ವಿ (ಅ ಕುಮಾ).
[ಅಗ್ಗ-ಶ್ರೇಷ್ಠ. ಅಕ್ಕಜ-ಆಶ್ಚರ್ಯ, ಬೆರಗು].

೨೨೨. [1]ಸಿದೆನು (k). [2]ಜೀವವ (ಕ).
[ದುರ್ವಿಷಯ-ದುರಾಲೋಚನೆಗೆ ವಸ್ತು. ಬೆದಱು-ಬೆದರಿಕೆ, ಭಯ. ಭಂಗ-ಅಪಮಾನ].

ಹರಿಬ ಬೇಕೇ ಮತ್ತೆ ಗಂಧ-
ರ್ವರಿಗೆ ದೂತರನಟ್ಟು ಭೀಮನ
ನರನೊಳುಸಂಧಾನವೇ ನಾಲ್ಕೆಂಟು ದಿವಸದಲಿ ।
ಧರೆಯೊಳವರಿರದಂತೆ ಧಟ್ಟಿಸಿ
ತೆರಳಿಚು[1]ವೆವಿ[1]ದಕಕಟ ದರ್ಭೆಯ
ಹರಹಿ ಹಕ್ಕೆಯನಿಕ್ಕಲೇಕೆಂದೊದಱಿದರು ಖಳರು ॥ ೨೨೩ ॥

[1]ಪುರ[1]ಜನದೊಳವರವರ ಮುಖ್ಯರ
ಕರಸಿದನು ದುಶ್ಯಾಸನನು ನಿಮ-
ಗರಸು ನೃಪನೀತಿಯಲಿ ಪಾಲಿಸುವನು ಮಹೀತಳವ ।
ಧರಯನಾತಂಗಿತ್ತೆವೆಮಗೀ
ಸುರನದೀತೀರದಲಿ ಕಾಶೀ-
ಶ್ವರನ ಸನ್ನಿಧಿಯಿರವು ಘಟಿಸಿದುದೆಂದನಾ ಭೂಪ ॥ ೨೨೪ ॥

ರಾಯನೀಪರಿ ನುಡಿದು ಜನಸಮು-
ದಾಯವನು ಕಳುಹಿದನು [1]ಸುಮನೋ-
ಭೂಯಸಾ[1]ಪೇಕ್ಷನು ಸಮಾಧಿಯೊಳಿರಲು ರಾತ್ರಿಯಲಿ ।
ದಾಯವಿದು ತಮಗೆಂದು ದೈತ್ಯನಿ-
ಕಾಯ ಬಂದು ರಸಾತಳಕೆ ಕುರು-
ರಾಯನನು ಕೊಂಡೊಯ್ದು ತಿಳುಹಿದರವರು ಸಾಮದಲಿ ॥ ೨೨೫ ॥

---

೨೨೩. [1]ವಠಿ (ಅ).
[ಹರಿಬ-(ಯುದ್ಧ) ಪ್ರಸಂಗ, ಕಾರ್ಯ. ಅನುಸಂಧಾನ-ಒಡಂಬಡಿಕೆ].

೨೨೪. [1]ಪರಿ (ಅ ಆ ಕುಮಾ), ಸ್ವೀಪಾ (ಓ).
[ನೃಪನೀತಿ-ರಾಜನೀತಿ].

೨೨೫. ಸೂನೋಪಾಸಾ (ಓ), ಸುಮನೋಪಾಯಸಾ (k ಅ ಪ್ರ).
[ಸುಮನೋಭೂಯ ಸಾಪೇಕ್ಷ-ದೇವತೆಗಳಂತೆ ಆಗಬೇಕೆಂಬ ಅಪೇಕ್ಷೆಯುಳ್ಳವನು. ದಾಯ-ಅನುಕೂಲವಾದ ಸಮಯ. ದೈತ್ಯನಿಕಾಯ-ರಾಕ್ಷಸರ ಸಮೂಹ. ರಸಾತಳ-ಪಾತಾಳಾದಿ ಏಳು ಅಧೋಲೋಕಗಳಲ್ಲಿ ಒಂದು. ಸಾಮ-ಸಾಮೋಪಾಯ, ಸಂಧಾನಮಾರ್ಗ],

ಸಾಯದಿರು ನಿನಗಿಂದು ಮೊದಲು ಸ-
ಹಾಯರಾವಾಹವಕೆ ರಿಪುಕೌಂ-
ತೇಯರಿಗೆ ಕೊಡಬೇಡವಿನ್ನು ತಿಲಾಂಶಭೂತಲವ ।
ಲಾಯಸಹಿತೀ ಗಜರಥಾಶ್ವನಿ-
ಕಾಯ ನಿನ್ನದು ದೈತ್ಯಸಚಿವಸು-
ಸಾಯತರು ನಿನ್ನವರು ಸಾವೆವು ನಿಮ್ಮ ಸಮರದಲಿ ॥ ೨೨೬ ॥

ಎಂದು ಭೂಪನ ತಿಳುಹಿ ಕಳುಹಲು
ಬಂದು ಮರಳಿ ಮಹೀತಳಕೆ ತ-
ನ್ನಿಂದುವದನೆಯ ಮಾತಿನಲಿ ನಿಂದವನು ತಾನಾಗಿ ।
ಬಂದನರಮನೆಗಖಿಳಜನವಾ-
ನಂದರಸದಲಿ ಮುಳುಗೆ ಪುರದಲಿ
ಸಂದಣಿಸಿದವು ಗುಡಿಗಳೊಸಗೆಯ ಲಳಿಯ ಲಗ್ಗೆ[1]ಯಲಿ[1] ॥ ೨೨೭ ॥

ಮತ್ತೆ ನೆಗ್ಗಿತು ನಯುವಧರ್ಮದ
ಕುತ್ತುದಲೆ ನೆಗಹಿದುದು ಸತ್ಯದ
ಬಿತ್ತು ಹುರಿದುದು ಪಟ್ಟಗಟ್ಟೆ[1]ದುದಾ[1] ಕೃತಘ್ನತೆಗೆ ।
ನೆತ್ತಿ[2]ಗ[2]ಣ್ಣಾಯ್ತಧಮ[3]ತೆಗೆ[3] ನಗೆ-
ಯೊತ್ತಿತಾಜಿಡಿ ಸುಜನಮಾರ್ಗವ
ಕೆತ್ತುದಟಮಟವೀ ಸುಯೋಧನ ಸೌಮನಸ್ಯದಲಿ ॥ ೨೨೮ ॥

---

೨೨೬. [ಆಹವ-ಯುದ್ಧ. ಲಾಯ-ಆನೆ, ಕುದುರೆಗಳನ್ನು ಕಟ್ಟುವ ಸ್ಥಳ. ಸಸಾಯತ-ವಸ್ತ್ರಾಭರಣಗಳಮೇಲಿನ ಅಧಿಕಾರಿ].

೨೨೭. [1] ಗಳ (ಅ ಕುಮಾ).
[ತಿಳುಹಿ-ಸಮಾಧಾನಪಡಿಸಿ. ಸಂದಣಿಸು-ಒಟ್ಟುಗೂಡು. ಗುಡಿ-ಧ್ವಜ, ಬಾವುಟ. ಒಸಗೆ-ಉತ್ಸವ, ಸಂಭ್ರಮ. ಲಳಿ-ಉಲ್ಲಾಸ, ಸಡಗರ, ಸಂತೋಷ. ಲಗ್ಗೆ-ಆಕ್ರಮಣ, ಮುತ್ತಿಗೆ (?)].

೨೨೮. [1] ತುಮಿಗೆ (ಓ ಅ). [2] ಕ (ಅ ಕುಮಾ), ಸ್ವೀಪಾ (ಕ ಅ). [3] ರಿಗೆ (k ಅ).
[ನಯ-ನೀತಿ. ನೆಗ್ಗು-ಪುಡಿಪುಡಿಯಾಗು. ಕುತ್ತುದಲೆ-ತಗ್ಗಿಸಿದ್ದ ತಲೆ, ತಗ್ಗಿಸಿರುವಿಕೆ. ನೆಗಹು-ಮೇಲಕ್ಕೆತ್ತು, ನೆಟ್ಟಗಾಗು. ಹುರಿ-ಸುಟ್ಟುಹೋಗು. ಪಟ್ಟಗಟ್ಟೆದುದು-ಮೇಲುಗೈಯಾಯಿತು. ಅಧಮತೆ-ನೀಚತನ. ನೆತ್ತಿಗಣ್ಣು-ಮೇಲುದೃಷ್ಟಿ; ಅಗ್ರಸ್ಥಾನ. ಆಜಿಡಿ-ಬಾಧೆ, ಹಿಂಸೆ, ಕಾಟ. ನಗೆಯೊತ್ತು-ಅಣಕವಾಡು, ಹಾಸ್ಯಮಾಡು. ಕೆತ್ತುದು-ಭಂಗಗೊಳಿಸಿತು. ಅಟಮಟ-ವಂಚನೆ, ಮೋಸ. ಸೌಮನಸ್ಯ-ಸುಮನಸ್ಕತೆ, ಒಳ್ಳೆಯ ಮನಸ್ಸು].

೬. ಜಯದ್ರಥಕೃತ ದ್ರೌಪದೀಹರಣ ಪ್ರಯತ್ನ

ಕೇಳು ಜನಮೇಜಯ ಧರಿತ್ರೀ-
ಪಾಲ ಲೆಕ್ಕಕೆ ಸಂದವಟವೀ
ಪಾಳಿಪರ್ಯಟನಪ್ರಬಂಧಕೆ ವರುಷ ಹನ್ನೊಂದು ।
ಮೇಲೆಮೇಲೌಕುವ ವಿಪತ್ಕ-
ಲ್ಲೋಲಕೋಲಾಹಲಿತಕಲುಷಕ-
ರಾಳ ಕಾಲಾಂಬುಧಿಯನೀಸಾಡಿದರು ಬೇಸಱದೆ ॥ ೩೧೯ ॥

ಸಿಂಧುದೇಶಕೆ ಬಂ[1]ದುದ[1]ವನಿಪ
ಬಂಧಕೃತಿ [2]ಬಳಿಕಾದ[2] ಬಿಡುಗಡೆ
ಅಂಧಭೂಪತಿಯಳಿಯ ಕೇಳಿದನಾ ಜಯದ್ರಥನು ।
ಅಂಧತೆಯನೇನೆಂಬೆನೈ ಪ್ರತಿ-
ಬಂಧಕರು ಬೇಡೆನಲು ನಯದಭಿ-
ಸಂಧಿಯಲಿ ಸೀವರಿಸಿ ಸಂವರಿಸಿದನು ಸೈನಿಕವ ॥ ೩೨೦ ॥

ಭರದ ಪಯಣದ ಮೇಲೆ ಪಯಣದ-
ಲುರವಣಿಸಿ ನಡೆತಂದು ಪಾಂಡವ-
ರರಸನಿಹ ವಿಮಲಾಶ್ರಮದ ವಿಪಿನೋಪಕಂಠದಲಿ ।
ಹರಹಿದವು ಗುಡಿ ಗಜಹಯದ ಮಂ-
[1]ದುರ[1]ರಚನೆ ರಹಿಯಾಯ್ತು ಬಿಟ್ಟನು
ಕುರುನೃಪಾಲನ ಮೈದುನನು ಭೂಪಾಲ ಕೇಳೆಂದ ॥ ೩೨೧ ॥

---

೩೧೯. [ಅಟವೀ ಪಾಳಿಪರ್ಯಟನ ಪ್ರಬಂಧ-ಕಾಡಿನಲ್ಲಿ ಸರದಿಯ ಪ್ರಕಾರ ಸುತ್ತಾಡುವ ಕಟ್ಟುಪಾಡು. ಔಕು-ಒಂದಾದಮೇಲೊಂದರಂತೆ ಒತ್ತಿಬರು. ವಿಪತ್ಕಲ್ಲೋಲ-ವಿಪತ್ತುಗಳ ಪರಂಪರೆ. ಕೋಲಾಹಲಿತ-ಗಲಭೆ ಗೊಂದಲಗಳಿಂದ ಕೂಡಿದ. ಕಲುಷ-ಕಶ್ಮಲಗೊಂಡ. ಕರಾಳ-ಭಯಂಕರವಾದ. ಕಾಲಾಂಬುಧಿ-ಕಾಲವೆಂಬ ಸಮುದ್ರ. ಬೇಸಱದೆ-ಬೇಸರಪಡದೆ].

೩೨೦. [1]ದನ (ಅ ಕುಮಾ). [2]ಯಲಿಬಳಿಕ (ಅ ಕುಮಾ).
[ಅವನಿಪಬಂಧಕೃತಿ-ರಾಜ ದುರ್ಯೋಧನನು ಜಯದ್ರಥನಿಂದ ಬಂಧನಕ್ಕೊಳಗಾದ ಕಾರ್ಯ. ಅಂಧತೆ-ಬುದ್ಧಿಗುರುಡು, ಅಜ್ಞಾನ, ಮುಂದುಗಾಣದಿರುವಿಕೆ. ಪ್ರತಿಬಂಧಕರು-ಬೇಡವೆಂದವರು, ತಡೆಯೊಡ್ಡಿದವರು. ನಯ-ನೀತಿ. ಅಭಿಸಂಧಿ-ಗುರಿ, ಉದ್ದೇಶ. ಸೀವರಿಸು-ಬೇಸರಿಸು, ತಾತ್ಸಾರಮಾಡು. ಸಂವರಿಸು-ಸಜ್ಜುಗೊಳಿಸು, ಒಟ್ಟುಗೂಡಿಸು, ಸಿದ್ಧಪಡಿಸು. ಸೈನಿಕ-ಸೈನ್ಯ].

ಹೆಗಲ ಹಿರಿಯುಬ್ಬಣಕಠಾರಿಯು
ಬಿಗಿದುಡಿಗೆ ರತ್ನಾಭರಣ ಝಗ-
ಝಗಿಸೆ ಝಣಝಣರವದ ರಭಸದ [1]ಖಡೆಯರಹಿ[1] ಮೆಱೆಯೆ ।
ಒಗುವ ಸಾದು ಜವಾಜಿ ಕತ್ತುರಿ-
ಯಗರು ಪರಿಮಳದಂಗವಟ್ಟದ
ವಿಗಡ ಹೊಕ್ಕನು ವನವನಾ ಪಾಂಚಾಲಿಯಾಶ್ರಮವ ॥ ೨೩೨ ॥

ತೊಲಗಿದುದು ಮುನಿನಿಕರವೀತನ
ಸುಳಿವ ಕಂಡು [1]ಸ[1]ತೇಜದಲಿ ಖಳ-
ತಿಲಕ ಬಂದನು ಪರ್ಣಶಾಲೆಯ ಮುಖದ ಮಂಟಪಕೆ ।
ಲಲನೆಯೊಳಹೊಗಲೊ[2]ಳಗೆ[2] ಹೊಕ್ಕನು
ನಳಿನಮುಖಿ ಬಂದವ ಜಯದ್ರಥ-
ನಳುಕಲೇಕೌ [3]ಲೋಗನೇ [ನಾ][3]ನೆನುತ ಮಂಡಿಸಿದ ॥ ೨೩೩ ॥

[1]ಬೆದಱಲೇ[1]ತಕೆ ನಮ್ಮ ನಾದಿನಿ
ಮದವಳಿ[2]ಗೆ[2] [3]ನಿನಗಾ[3]ದರೊಡಹು-
ಟ್ಟಿದನು ನೀನಹೆ ಎನಗೆ [4]ನಿನ್ನಲಿ[4] ಬೇಱೆ ಭಯವೇನು ।
ಸದನವಿದು ಪತಿಶೂನ್ಯ ತಾನೆಂ-
ಬುದು ಪತಿವ್ರತೆ[5]ಯ[5]ಲ್ಲಿಯನುಚಿತ-
ಹದನ ನೀನೇ ಬಲ್ಲೆಯೆಂದಳು ವನಿತೆ ವಿನಯದಲಿ ॥ ೨೩೪ ॥

---

೨೩೧. [1]ದಿರ (ಅ ಆ ಕುಮಾ), ಸ್ವೀಪಾ (k).
[ವಿಪಿನೋಪಕಂಠ–ಅರಣ್ಯದ ಅಂಚು, ಸೆರಗು. ಗುಡಿ–ಬಾವುಟ. ಮಂದುರ–ಲಾಯ. ರಹಿ–ಸೊಗಸು; ಆಡಂಬರ, ವೈಭವ].

೨೩೨. [1]ಖಡಿಯತತಿ (ಅ ಕುಮಾ), ಖಡೆಯತತಿ (ಅ); ಸ್ವೀಪಾ (k).
[ಉಬ್ಬಣ ಕಠಾರಿ–ಒಂದು ಹರಿತವಾದ, ಚೂಪಾದ ಆಯುಧ. ಖಡೆಯ ರಹಿ–ಕಾಲ್ಕಡಗಗಳ ಸೊಗಸು. ಒಗು–ಸುರಿ, ಜಿನುಗು, ಅಗರು–ಒಂದು ಸುವಾಸನಾ ದ್ರವ್ಯ, ಧೂಪ. ಅಂಗವಟ್ಟ–ದೇಹಸೌಷ್ಠವ].

೨೩೩. [1]ಸು (ಅ ಆ ಕುಮಾ ಪ್ರ), ಸ್ವೀಪಾ (ಕ). [2]ಡನೆ (ಅ ಕುಮಾ), ಳಗ (ಅ); ಸ್ವೀಪಾ (k ಪ್ರ). [3]ದ್ರೌಪದಿಯೇ ನೀ (ಅ ಕುಮಾ), ಲೋಗನೇ ನಾ (ಕ k ಅ ಪ್ರ).
[ಅಳುಕು–ಹಿಂಜರಿ, ಹಿಂದೆಗೆ. ಲೋಗ–ಅನ್ಯ, ಪರಕೀಯ. ಮಂಡಿಸು–ನಿವೇದಿಸು, ತಿಳಿಯಹೇಳು].

ಅಹ [1]ಪತಿವ್ರತೆಯೆಂಬುದಿದು[1] ಸಂ-
ನಿಹಿತವಲ್ಲಾ ನಿನಗೆ ಹಲಬರ
ಮಹಿಳೆ ಸತಿಯೆನಿಸುವೊಡೆ ಸೂಳೆಯರೇಕಪುರುಷರಲಿ ।
ವಿಹರಿಸುವ[2]ರೇ ಲೋಕ[2]ಧರ್ಮದ-
ರಹಣಿ [3]ರಹಿಸು[3]ವುದೈಸಲೇ ನಮ-
ಗಿಹುದು ಮತವಲ್ಲದೊಡೆ ಮಾಣಲೆನುತ್ತ ಮುರಿದೆದ್ದ ॥ ೨೩೫ ॥

ತರಳೆ [1]ತಲ್ಲಣಿಸಿದಳು[1] ತಳಿರೋ-
[2]ವರಿಯ ಹೊಗುತಿರಲಟ್ಟಿ[2] ಮೋಲುದ
ಬರಸೆಳೆದು ತುಱುಬಿಂಗೆ ಹಾಯ್ದನು [3]ಹಿಡಿದು[3] ಕುಸುಬಿದನು ।
ಒಱಲಿದಳು ಹಾ ಭೀಮ ಹಾ ನೃಪ-
ವರ ಧನಂಜಯ ಹಾ ಯೆನುತ ಕಾ-
ತರಿಸೆ ಕಮಲಾನನೆಯ [4]ಕಂಠವನವಚಿ[4] ಹೊರವಂಟ ॥ ೨೩೬ ॥

ಚೆಲ್ಲಿತೀ [1]ಋಷಿವರ್ಗ[1] ದೆಸೆದೆಸೆ-
ಗೆಲ್ಲ ಹರಿದುದು ಬಾಯ ಮೋಱೆಗಳ
ಪಲ್ಲವದ ಪಾಣಿಗಳ ಸೂಸುವ ಸಮಿಧೆಬರ್ಹಿಗಳ ।
ತಲ್ಲಣದ ಶೋಕಿನ ವಿಷಾದದ
ವಲ್ಲರಿಯ ಹೂದೊಡಚೆ[2]ಗಳ ಹೊ-
ಯ್ವಳ್ಳಿಗಳ ಮುನಿ[2]ಜನವ ಕಂಡರು ಪಾಂಡುನಂದನರು ॥ ೨೩೭ ॥

---

೨೩೪. [1]ಖೇದವೇ (ಪ್ರ). [2]ಗ (ಓ ಪ್ರ ಕುಮಾ). [3]ನೀನಾ (ಅ ಕುಮಾ ಪ್ರ), ಸ್ವೀಪಾ (ಅ k). [4]ನಿಮ್ಮಳಿ (ಅ). [5]ಯೆ (ಅ), ಯಿ (ಅ k); ಸ್ವೀಪಾ (ಕ ಓ ಕುಮಾ ಪ್ರ). [6]ವಿದು ವಿಚಾರವ ಬಲ್ಲೆ ನೀನೆಂದಳು ಸರೋಜಮುಖಿ (ಅ ಕುಮಾ), ಸ್ವೀಪಾ (ಅ k ಪ್ರ). ನಗುತ (k ಪ್ರ), ಸ್ವೀಪಾ (ಅ). [ಹದನು–ಸಮಾಚಾರ, ವಿಚಾರ, ಸಂಗತಿ. ಮದವಳಿಗೆ–ಮದುವಣಗಿತ್ತಿ; ಕನ್ಯೆ].

೨೩೫. [1]ಹ ಪಾತಿವ್ರತ್ಯವತಿ (ಅ ಕುಮಾ), ಸ್ವೀಪಾ (ಪ್ರ k ಅ). [2]ರವರೋಹಿ (ಕ k ಅ). [ಸಂನಿಹಿತ–ಸಮೀಪ, ಕೂಡಿಬರುವ. ರಹಣಿ–ರೀತಿ, ಕ್ರಮ. ರಹಿಸು–ಸೊಗಸು, ಸರ್ವಸಮ್ಮತವಾಗು. ಮುರಿದು–ಮೈಮುರಿದು].

೨೩೬. [1]ಮಿಗೆ ತಲ್ಲಣಿಸಿ (ಅ ಆ ಪ್ರ ಕುಮಾ), ಸ್ವೀಪಾ (ಕ). [2]ವರಿಗೆ ತೊಲಗಿದರಟ್ಟಿ (ಅ). [3]ಹೊಯ್ದು (ಅ ಕ). [4]ಕಂದವನೌಚಿ (ಅ ಅ), ಸ್ವೀಪಾ (ಓ). [ತಳಿರೋವರಿ–ಚಿಗುರುಗಿಡಗಳ ಮುಚ್ಚುಮರೆ. ಕುಸುಬು–ಹೊಡೆದು ಕೆಡವು].

೨೩೭. [1]ಮುನಿಯೂಥ (ಅ ಕುಮಾ), ಸ್ವೀಪಾ (ಪ್ರ ಅ). [2]ಕವಿತಹ ಕೊಲ್ಲಣದ (ಅ ಕ). [ಪಾಣಿ–ಕೈ. ಬರ್ಹಿ–ದರ್ಭೆ. ಸಮಿಧೆ–ಹೋಮಕ್ಕೆ ಅಗತ್ಯವಾದ (ಒಣಗಿದ) ಅರಳಿಕಡ್ಡಿ].

ಹೇಳಲವ್ಮೆವು ಜೀಯ ಸಿಂಧುನೃ-
ಪಾಲ ದಶಮುಖನಾದನಾ ಪಾಂ-
ಚಾಲಿ ಜಾನಕಿಯಾದಳಿಂದಿನ ರಾಜಕಾರ್ಯ[1]ದಲಿ[1] ।
ನೇಲೆ ರಾಘವತನವ ಕೋಟೆಯ
ಕೋಳ ಬಿಂಕವು ನಿಮ್ಮದೆನೆ ನರ-
ಪಾಲ[2]ನಾಜ್ಞೆಯಲಂದು ಹರಿದರು ಭೀಮಫಲುಗುಣರು[2] ॥ ೨೬೮ ॥

ಕಂಡರ[1]ಳ[1]ವಿಯಲವನನೆಲವೋ
ಭಂಡ ಫಡ ಹೋಗದಿರೆನುತ ಕೈ-
ಕೊಂಡು ಸುರಿದರು ಸರಳನಾ [2]ಬಿಂಗಳಿಯ[2] [3]ಸೇನೆಯಲಿ[3] ।
ಭಂಡರಿವದಿರು ತಾವು ಕಡುಹಿನ
ಖಂಡೆಯದ ಸಿರಿವಂತರಿವರು-
ದ್ದಂಡಭಟರೆನುತಾ ಜಯದ್ರಥ ನಿಲಿಸಿದನು [4]ರಥ[4]ವ ॥ ೨೬೯ ॥

[1][ನಿ][1]ಂದು ವಾಘೆಯ [2]ಕೊ[2]ಂಡು ರಥವನು
ಮುಂದೆ ದುವ್ವಾಳಿಸಿದನಿತ್ತಲು
ಹಿಂದೆ ನಿಂದುದು ಗಜರಥಾಶ್ವಪದಾತಿಚತುರಂಗ ।
ಇಂದುವದನೆಯ ಕೇರು ಹಾಯ್ದು[3]ದು[3]
ಮುಂದೆ ಹೊಳ್ಳುಗರಡ್ಡವಿಸಿದೊಡೆ
[4]ಹಿಂದೆ[4] ಹೊಲ್ಲೆಹವೇನೆನುತ ಹೊಕ್ಕೆಚ್ಚನಾ ಪಾರ್ಥ ॥ ೨೭೦ ॥

---

೨೬೮. [1]ವಿದು (ಅ ಅ ಕುಮಾ). [2]ನನುಜರು ನಗುತ ಹರಿದರು ದಿಟ್ಟ ಸೂರಿಯಲಿ (ಅ ಕ k).
[ಅಮ್ಮೆವು-ಸಮರ್ಥರಾಗೆವು; ಶಕ್ತರಲ್ಲ (ಧಾ. ಅಮ್ಮು, ಅಮ್ಮು). ಕೋಟೆ-ಕಲಹ, ಕದನ. ಕೋಳಬಿಂಕ-ಕೋಳಿನ ಹೆಮ್ಮೆ, ಬಲದ ಹೆಮ್ಮೆ].

೨೬೯. [1]ಡ (ಅ ಅ ಕುಮಾ), ಸ್ವೀಪಾ (k). [2]ವಂಗಡವ (ಪ್ರ). [3]ಮೋಹರಕೆ (ಅ ಪ್ರ). [4]ಬಲ (ಅ.ಅ ಕುಮಾ), ಸ್ವೀಪಾ (ಪ್ರ ಓ ಕೆ).
[ಅಳವಿ-ಹತ್ತಿರ, ಸಮೀಪ. ಬಿಂಗಳಿ-ಹಿಮ್ಮೆಟ್ಟು, ಪಲಾಯನಮಾಡು. ಕಡುಹು-ಸಾಮರ್ಥ್ಯ, ಪರಾಕ್ರಮ. ಖಂಡೆಯ-ಕತ್ತಿ, ಖಡ್ಗ].

೨೭೦. [1]ಎ (ಅ ಅ ಕುಮಾ). [2]ಕಂ (ಅ), ಸ್ವೀಪಾ. (ಅ ಕುಮಾ). [3]ಬಂದ (ಅ). [4]ಹಿಂದೆ (ಅ ಕುಮಾ ಪ್ರ), ಸ್ವೀಪಾ (ಅ).
[ವಾಘೆ-ಲಗಾಮು. ದುವ್ವಾಳಿಸು-ವೇಗವಾಗಿ ಓಡಿಸು, ಮುನ್ನುಗ್ಗಿಸು. ಹೊಳ್ಳುಗ-ಪೊಳ್ಳಾದ ವ್ಯಕ್ತಿ, ಅಪ್ರಯೋಜಕ, ಹೇಡಿ. ಹೊಲ್ಲೆಹ-ಕೇಡು, ಕೆಟ್ಟದ್ದು].

ಧನುವ ಕೊಂಡನು ಸರಳಸಾರದ-
ಲಸಿಲಜನ ಮುಸುಕಿದನು ಪಾರ್ಥನ
ಮೊನೆಗಣೆಯು ತಱಿದೊಟ್ಟೆ ಬೊಬ್ಬಿಱಿದನು ಜಯದ್ರಥನು |
ತನತನಗೆ ಸೈಂಧವನ ಬೆಂಗಾ-
ಹಿನ ಭಟರು ಭಾರಣೆಯಲೊದಗಿದ-
ರನಿಬರನು ನಿಮಿಷಾರ್ಧದಲಿ ನಿರ್ಮೈಸಿದನು ಪಾರ್ಥ || ೨೪೧ ||

ವೈರಿಬಾಹುದ್ವಯವ ಬದ್ದುಗೆ-
ದಾರದಲಿ ಕಟ್ಟಿದನು ನಾರೀ-
ಚೋರ ನಡೆನಡೆಯೆನುತ ತಿವಿದನು ಬಿಲ್ಲ ಕೊಪ್ಪಿನಲಿ |
ಕೌರವೇಂದ್ರನ ಮತವೊ ನಿನ್ನ ವಿ-
ಕಾರವೋ ಹೆಂಗಳ್ಳವಿದ್ಯೆಯ-
ನಾರು ಕಲಿಸಿದರೆನುತ ತಂದರು ಧರ್ಮಜನ ಹೊರೆಗೆ || ೨೪೨ ||

ಮಾನಧನರಿಗೆ ವಧೆಯೆನಿಪುದಭಿ-
ಮಾನಭಂಜನವಿವನು ಕಟ್ಟಭಿ-
ಮಾನಿ ಭಂಗಿಸಿ ಬಿಟ್ಟೊಡೀತಂಗಿದುವೆ ಮರಣ[1]ವಲಾ[1] |
ಈ ನುಡಿಯ ಸಲಿಸಿದೊಡೆ ಇವನಪ-
ಮಾನಹತನಿದು ಧರ್ಮ[2]ನಿಶ್ಚಯ-
ವೇನು ಸಂಶಯವಿಲ್ಲೆನುತ ನುಡಿದುದು ಮುನಿಸ್ತೋಮ[2] || ೨೪೩ ||

---

೨೪೧. [ಸರಳ ಸಾರ–ಬಾಣದ ಸತ್ತ್ವ, ಶಕ್ತಿ. ಮೊನೆಗಣೆ–ಚೂಪಾದ ಬಾಣ (ಕಣೆ–ಬಾಣ). ಬೆಂಗಾಹಿನ–ಬೆಂಗಾವಲಿನ. ಭಾರಣೆ–ಹೆಚ್ಚಳ, ಆಧಿಕ್ಯ ; ಅಧಿಕ ಸಂಖ್ಯೆ].

೨೪೨. [ಬದ್ದುಗೆದಾರ–ಸೊಂಟಕ್ಕೆ ಕಟ್ಟುವ ವಸ್ತ್ರ, ಬಟ್ಟೆಯ ಪಟ್ಟಿ. ಕೊಪ್ಪು–(ಬಿಲ್ಲಿನ) ತುದಿ, ಕೊನೆ. ಹೊರೆ–ಸಮೀಪ, ಹತ್ತಿರ].

೨೪೩. [1]ಫಲ (ಅ). [2]ಶಾಸ್ತ್ರವಿಧಾನಮತ ಚಿತ್ತೈಸಿಯೆಂದುದು ಸಕಲಮುನಿನಿಕರ (ಕ ಅ). [ವಧೆ–ಸಾವು, ಮರಣ. ಅಭಿಮಾನಭಂಜನ–ಮಾನಭಂಗ. ಭಂಗಿಸು–ಅವಮಾನಿಸು. ಅಪಮಾನಹತ–ಅವಮಾನದಿಂದ ಕೊಲ್ಲಲ್ಪಟ್ಟವನು].

ಬಿಟ್ಟರೀತನ ತೋಳ ಹಿಂಗೈ-
ಗಟ್ಟುಗಳನೆಲೆ ಕುನ್ನಿ ಹೋಗೆನೆ
ಕೆಟ್ಟಕೇಡದನೇನ ಹೇಳುವೆನಾ ಜಯದ್ರಥನ ।
ಬಿಟ್ಟದಿಂದುರುಳಿವೆನೊ ಹಾಸಱೆ[3]-
ಗಟ್ಟ ಹೊಗುವೆನೊ ಮಡುವನೆನುತಡಿ-
ಯಿಟ್ಟನಂತಃಕಲುಷಚಿತ್ತ ದುರಂತಚಿಂತೆಯಲಿ ॥ ೨೪೪ ॥

ಚಿಂತಿಸಿದೊಡೇನಹುದು ಹೊಗುವೆನು
ಕಂತುಮಥನನ ಮಱೆ[3]ಯನಿವದಿರ-
ಗಂತಕನು ತಾನಹೆನು ಗೆಲುವೆನು [1]ಮರಳಿ ಹರಿಬ[1]ದಲಿ ।
ಭ್ರಾಂತಿಯೇ ಬಿಡು ತನ್ನನೆನುತ ಪು-
ರಾಂತಕ[2]ಸ್ಥಾ[2]ನದಲಿ ವಿಮಲ-
ಸ್ವಾಂತನೇಕಾಗ್ರದಲಿ ಭಜಿಸಿದನಿಂದುಶೇಖರನ ॥ ೨೪೫ ॥

ಇವನ ನಿಷ್ಠೆಗೆ ಮೆಚ್ಚಿ ಗೌರೀ-
ಧವನು ಮೈದೋಱೆ[3]ದನು ರಾಜ
ಪ್ರವರ ಕೊಟ್ಟೆನು ಬೇಡು ಸಾಕು ಭವನ್ಮನೋರಥವ ।
ವಿವರಿಸೆನೆ ಕಂದೆಱೆ[3]ದು ಮುಂದಿಹ
ಶಿವನ ಕಂಡನು ಮೆಯ್ಯ ಚಾಚಿದ-
ನವನಿಯಲಿ ಜಯಜಯ ಮಹೇಶ ನಮಶ್ಶಿವಾಯೆನುತ ॥ ೨೪೬ ॥

---

೨೪೪. [ಹಾಸರೆಗಟ್ಟ-ಚಪ್ಪಡಿಗಲ್ಲು, ಕಲ್ಲುಬಂಡೆ, ಕಟ್ಟಕೊಂಡು. ಅಂತಃಕಲುಷಚಿತ್ತ-ಮಲಿನವಾದ, ಕಳಂಕವುಳ್ಳ, ಮನಸ್ಸಿನವನು].

೨೪೫. [1]ಬಳಿಕ ಬವರ (ಅ ಕುಮಾ), ಸ್ವೀಪಾ (ಅ ಕ k). [2]ಧ್ಯಾ (ಅ ಕುಮಾ), ಸ್ವೀಪಾ (ಅ ಕ k).

[ಕಂತುಮಥನ-ಈಶ್ವರ. ಮಱೆ[3]-ಆಶ್ರಯ. ಅಂತಕ-ಯಮ. ಹರಿಬ-ಪ್ರತೀಕಾರ, (ಸೇಡು ತೀರಿಸಿಕೊಳ್ಳುವ) ಕರ್ತವ್ಯ. ಪುರಾಂತಕ-ಈಶ್ವರ. ವಿಮಲಸ್ವಾಂತ-ಶುದ್ಧ ಮನಸ್ಸು].

೨೪೬. [ಪ್ರವರ-ಶ್ರೇಷ್ಠ. ಅವನಿ-ಭೂಮಿ].

ವರದನಾದ್ಯೆ ಶಂಭು ಕರುಣಾ-
ಕರ ಹಸಾದವು ಪಾಂಡುಸುತರೈವರನು
ದಿನವೊಂದರಲಿ ಗೆಲುವುದು ತನಗಭೀಷ್ಟವಿದು ।
ಕರುಣಿಸಾದರೆಯೆನಲು ನಕ್ಕನು
ಗಿರಿಸುತೆಯ ಮೊಗನೋಡಿ ಭಾರಿಯ
ವರವ[1]ನೇ ವರಿಸಿದನು[1] ಜಯದ್ರಥನೆಂದನಿಂದುಧರ ॥ ೨೪೭ ॥

ಪಾಶುಪತಶರವೆನ್ನ ಸತ್ವವಿ-
ಳಾಸವದೆ ಫಲುಗುಣನ ಕೈಯಲಿ
ವಾಸವಾಬ್ಜಭವಾದಿಬಿರುದರ ಬಗೆಯದಾಹವಕೆ ।
ಆ ಸುಭಟನೊಬ್ಬನನುಳಿಯೆ ಮಿ-
[1]ಕ್ಕೈ[1]ಸು ಪಾಂಡವರುಗಳನೊಂದೇ
ವಾಸರದಲವಗಡಿಸು ಹೋಗೆಂದನು ಮಖಧ್ವಂಸಿ ॥ ೨೪೮ ॥

---

೨೪೭. [1]ಹೆಸರಿಸಿದನು (k), ವಿವರಿಸಿದನು (ಅ ಕುಮಾ).
[ಹಸಾದ–ಪ್ರಸಾದ. ವರಿಸಿದನು–ಆಯ್ಕೆಮಾಡಿಕೊಂಡನು].

೨೪೮. [1]ಕ್ಕೇ (ಅ ಕುಮಾ), ಸ್ವೀಪಾ (ಅ).
[ವಾಸವ–ಇಂದ್ರ. ಅಬ್ಜಭವ–ಚತುರ್ಮುಖ ಬ್ರಹ್ಮ. ಐಸು–ಅಷ್ಟುಮಂದಿ. ವಾಸರ–ದಿವಸ. ಅವಗಡಿಸು–ಎದುರಿಸು, ಪ್ರತಿಭಟಿಸು. ಮಖಧ್ವಂಸಿ–(ದಕ್ಷ) ಯಜ್ಞವನ್ನು ಧ್ವಂಸಮಾಡಿದವನು : ಈಶ್ವರ].

ವಿರಾಟಪರ್ವ

ಪೀಠಿಕೆ ೫

೧. ಕೀಚಕನ ವಧೆ

ನೃಪತಿ ನಿಶ್ಚೈಸಿದನು ಮತ್ಸ್ಯಾ-
ಧಿಪನ ನಗರಿಯೊಳಲ್ಲಿ ಸೈರಿಸಿ
ಕೃಪಣತನದಲಿ ನೂಕಬೇಹುದು ನುಡಿದ ವತ್ಸರವ ।
ಗುಪಿತ ವೆಂತಳವಡುವುದಾಶ್ರಯ-
ದ ಪದಶೆಯನೆಂತಾನುವಿರಿ ನಿ-
ಷ್ಕೃಪೆಯೊಳೆಂತಾನೆಂಬೆನೆಂದನು ಧರ್ಮನಂದನನು ॥ ೧ ॥

ತೊಳಲಿದಿರಿ ಹನ್ನೆರಡು ವರುಷವು
ಹಳುವದಲಿ ಸೊಂಪಡಗಿಪರರೊಡ-
[1]ನುಳಿ[1]ಗೆಲಸ[2]ದೂಳಿಗ[2]ವಿದೆಂತೈ ಸಾರ್ವಭೌಮರಿಗೆ ।
ಬಳಲಿದಿರಿ ಹಿರಿದಾಗಿ ನಿಮ್ಮಾವ
ನಳಲಿಸಿದೆನೆನ್ನಿಂದ ಪಾಪಿಗ-
ಳೊಳರೆ ಭುವನದೊಳೆಂದು ಕುಂತೀಸೂನು ಬಿಸುಸುಯ್ದ ॥ ೨ ॥

ಒಡಲ ಬಳಿನೆಳಲಿಂಗೆ ಗತಿ ಬೇ-
ರ್ಪಡಿಸಿಹುದೆ ಸುಖದುಃಖವಿವು ನಿ-
ಮ್ಮಡಿಗಳಲಿ ತನು ನಾಲ್ಕಟಲಿ ಜೀವಾತ್ಮ ನೀವೆಮಗೆ ।

---

೧. [ಮತ್ಸ್ಯಾಧಿಪ–ವಿರಾಟರಾಜ. ಕೃಪಣತನ–ದೈನ್ಯಾವಸ್ಥೆ, ಅಸಹಾಯಕತೆ. ಗುಪಿತ–ರಹಸ್ಯ. ಅಪದಶೆ–ಹೀನಸ್ಥಿತಿ. ಆನು–ತಾಳು, ಸೈರಿಸು].

೨. [1]ನುಡಿ (ಪ್ರ). [2]ದೋಲಗ (ಪ್ರ ಕುಮಾ).
[ತೊಳಲು–ಅಲೆದಾಡು. ಹಳುವ–ಕಾಡು. ಉಳಿಗೆಲಸ–ಸಣ್ಣಪುಟ್ಟ ಕೆಲಸ. ಊಳಿಗ–ಸೇವೆ. ಅಳಲಿಸು–ದುಃಖಪಡಿಸು. ಒಳರೆ–ಇದ್ದಾರೆಯೆ].

ಅಡವಿಯೋ ಸಾಮ್ರಾಜ್ಯ ನಿಮ್ಮಡಿ-
ಯೊಡನಿರಲು ನೀವಿಲ್ಲದಾ ಪುರ-
ವಡವಿ ನಮಗಹುದೆಂದು ಬಿನ್ನವಿಸಿದರು ಭೂಪತಿಗೆ ॥ ೩ ॥

ಬಂದು ಮತ್ಸ್ಯಪುರೋಪಕಂಠದ
ನಂದನದ ಕೆಲಕಡೆಯುಲನಿಬರು
ನಿಂದು ನಾಲುಕು ದೆಸೆಯನೀಕ್ಷಿ[1]ಸಿ ನಿಜಸಿವಾಸದಲಿ[1] ।
ತಂದ ಚರ್ಮದಲಖಿಳಕೈದುವ-
ನೊಂದು ಹೆಣನಾಕಾರದಲಿ ಬಿಗಿ-
ದೊಂದು ಬನ್ನಿಯುಮರ[2]ನ[2] ತುದಿಯುಲಿ [3]ಕಟ್ಟಿ ನೇಜಿ[3]ದರು ॥ ೪ ॥

ಯುಮುನ ಮಗ ಸಂನ್ಯಾಸಿವೇಷದಿ
ಪವನಸುತ ಬಾಣಸಿನ ಮನೆಯುಲಿ
ದಿವಿಜರಾಯುನ ತನಯುನಿರ್ದ ಶಿಖಂಡಿವೇಷದಲಿ ।
ಜವಳಿಮಕ್ಕಳು [1]ಗೋ ಹಯುಂಗಳ[1]
ನಿವಹ[2]ಕಧಿಪರು[2] ಕಮಲಮುಖಿ ಕಾ-
ಲವನು ಕಳಿದಳು ರಾಯು[3]ನರಸಿಯು[3] ಕೆಳದಿಯುರ ಕೂಡೆ ॥ ೫ ॥

ಆ ಸುದೇಷ್ಣಾದೇವಿಯುರ ನಿಡು-
ಕೇಶವನು ಹಿಕ್ಕುವಳು ಮುದದಲಿ-
[1][ವಾಸ][1]ಮಲ್ಲಿಗೆಯುರಳ ದೆಖ್ಖಾಳವನು ಮುಡಿಸುವಳು ।
ಆ ಸತಿಯು ಮನವೊಲಿದು ನಡೆವಳು
ಲೇಸುಲೇಸೆಂದೆನಿಸಿ ಬಾಳುವ
ಬಾಸೆಯುನು ಸಲಿಸುತ್ತಲಿರ್ದಳು ಪತಿಗಳಾಜ್ಞೆಯುಲಿ ॥ ೬ ॥

---

೩. [ಬಳಿನೆಳಲು–ಹತ್ತಿರದ ಎಂದರೆ ಅನುಸರಿಸಿಕೊಂಡು ಹೋಗುವ ನೆರಳು. ಗತಿ–ಗಮನ, ನಡಿಗೆ].

೪. [1]ಸುತತುಳ ಭುಜಬಲರು (ಅ), ಸಿ ನಿಜವಿಲಾಸದಲಿ (ಓ). [2]ದ (ಅ), ಸ್ವೀಪಾ (ಕ). [3]ಕಟ್ಟಲೇರಿ (ಅ ಆ ಕುಮಾ), ಸ್ವೀಪಾ (ಪ್ರ k).
[ಪುರೋಪಕಂಠ–ಪಟ್ಟಣದ ಹೊರವಲಯು. ನೇಜ್–ತೂಗುಹಾಕು, ನೇತು ಹಾಕು].

೫. [1]ತುರಗಗೋವ್ರಜ (ಅ ಆ ಕುಮಾ), ಸ್ವೀಪಾ (ಓ k). [2]ರಾದರು (ಅ ಆ ಕುಮಾ), ಸ್ವೀಪಾ (ಓ). [3]ನೊಲುಮೆಯ (ಅ ಆ ಕುಮಾ); ಸ್ವೀಪಾ (ಓ k).
[ಬಾಣಸಿನ ಮನೆ–ಅಡುಗೆಯ ಮನೆ. ಶಿಖಂಡಿ–ನಪುಂಸಕ].

ಒಂದು ದಿವಸ ವಿರಾಟನರಸಿಯ
ಮಂದಿರಕ್ಕೋಲೈಸಲೆಂದೈ-
ತಂದನಾಕೆಯ ತಮ್ಮ ಕೀಚಕನತುಳ ಭುಜಬಲನು ।
ಹಿಂದೆಮುಂದಿಕ್ಕೆಲದ ಸತಿಯರ
ಸಂದಣಿಯ ಮಧ್ಯದಲಿ ಮೆಱೆವರ-
ನಿಂದವದನೆಯ ಕಂಡು ಕಾಣಿಕೆ[1]ಯಿತ್ತು[1] [2]ಪೊಡವಟ್ಟ[2] ॥ ೭ ॥

ಅವರ ಮಧ್ಯದಲಮಲತಾರಾ-
ನಿವಹದಲಿ ರೋಹಿಣಿಯವೊಲ್ ಸುರ-
ಯುವತಿಯರಲೂರ್ವಶಿಯವೊಲ್ ನದಿಗಳಲಿ ಜಾಹ್ನವಿಯ ।
ಅವಯವದ ಪರಿಮಳದ ಪಸರಕೆ
ಕವಿವ ತುಂಬಿಯ ಸಾರಸಂಗೀ-
ತವನು ಕೇಳುತ ಕಂಡನವ ಪಾಂಚಾಲನಂದನೆಯ ॥ ೮ ॥

ಜಗವ ಕೆಡಹಲು ಜಲಜ[1]ವಿಶಿಖ[1]ನು
ಬಿಗಿದ ಬಲೆಯಿವಳಲ್ಲಲೇ ಯೋ-
ಗಿಗಳ ಯತಿಗಳನೆಸಲು ಕಾಮನು ಮಸೆದ ಕೂರಲಗು ।
ಮುಗುದನಾದನು ಕಾಮನಂಬುಗ-
ಳುಗಿದವೆದೆಯಲಿ ನಟ್ಟ ದೃಷ್ಟಿಯ
ತೆಗೆಯಲಾರದೆ ಸೋತು ಕೀಚಕ ಪಾತಕವ ನೆನೆದ ॥ ೯ ॥

---

೬. [1]ವಾಸು (ಅ), ಸೂಸು (ಅ ಕುಮಾ).
[ಹಿಕ್ಕು-ಬಾಚು, ಸಿಕ್ಕುಬಿಡಿಸು. ಅಸು-ಹೆಚ್ಚಿನ ಪ್ರಮಾಣದ, ಅಷ್ಟೊಂದು. ವಾಸ-ಸೊಗಸಾದ; ಕಂಪುಳ್ಳ. ಅರಳು-ಹೂವು. ದೆಖ್ಖಾಳ-ಆಡಂಬರ, ಅತಿಶಯ. ಬಾಸೆ-ಭಾಷೆ, ಪ್ರತಿಜ್ಞೆ, ವಚನ].

೭. [1]ಗೊಟ್ಟು (ಅ ಅ ಕುಮಾ), ಸ್ವೀಪಾ (k ಪ್ರ). [2]ಹೊಡವಂಟ (ಅ ಪ್ರ), ಸ್ವೀಪಾ (ಅ ಕುಮಾ).
[ಅತುಳಭುಜಬಲ-ಅಸಾಧಾರಣ ತೋಳಬಲ (ಪರಾಕ್ರಮ) ಉಳ್ಳವನು. ಇಕ್ಕೆಲ-ಎರಡುಪಕ್ಕ. ಸಂದಣಿ-ಸಮೂಹ].

೮. [ತಾರಾನಿವಹ-ನಕ್ಷತ್ರಸಮೂಹ. ಜಾಹ್ನವಿ-ಗಂಗೆ. ಪಸರ-ಪ್ರಸಾರ; ಹರಡುವಿಕೆ].

೯. [1]ಸಂಭವ (ಪ್ರ).
[ಜಲಜವಿಶಿಖ-ಮನ್ಮಥ, ಪುಷ್ಪಬಾಣ. ಬಿಗಿ-ಕಟ್ಟಿಹಾಕು. ಎಸು-ಬಾಣವನ್ನು ಪ್ರಯೋಗಿಸು. ಕೂರಲಗು-ಹರಿತವಾದ ಕತ್ತಿ. ಉಗಿ-ಒಳಹೊಗು, ಪ್ರವೇಶಿಸು].

ಅಱಿವು ತಲೆಕೆಳಗಾಯ್ತು ಧೈರ್ಯದ
ನಿಱಿಗೆ ನಗೆಗೆಡೆಯಾಯ್ತು ಲಜ್ಜೆಯ
ಹೊಱಿಗೆ ಬಱಿದೊಱೆಯಾಯ್ತು ಕರಿವೊಳೆ[1][ವ್ರೋ][1]ಯ್ತು ಭಯಬೀಜ ।
ಮಱವೆ ಗಱಿಗಟ್ಟಿತು ಮನೋಭವ-
ನಿಱೆಗೆಲಸ ಬಲುಹಾಯ್ತು ಹೊಗಳುವ-
ಡಱಿಯೆನಾತನ ತನುವಿನಂತಸ್ತಾಪ[2]ದೇಳ್ಗೆಯನು[2] ॥ ೧೦ ॥

ಬೀಳುಕೊಂಡುದು ಲಜ್ಜೆ ಮಹಿಮೆಯ
ಕೀಲು ಕಳಚಿತು ದ್ರುಪದತನುಜೆಯ-
ನಾಲಿಯಲಿ ನುಂಗಿದನು ಮನದಲಿ ಸತಿಯ ಸೆಱೆವಿಡಿದು ।
ಕೇಳು ಬಿನ್ನಹವಕ್ಕ ನಿಮ್ಮಡಿ-
ಯೋಲೆಕಾತಿಯರೊಳಗೆ ಮೀಟಿನ
ಮೇಲುಗೈಯಿವಳಾವಳೆಂದಗ್ರಜೆಯ ಬೆಸಗೊಂಡ ॥ ೧೧ ॥

ಈಕೆ ಗಂಧರ್ವರ ರಮಣಿ ನ-
ಮ್ಮಾಕೆಯಾಗಿರೆ ಮಾನ್ಯವೃತ್ತಿಯೊ-
ಳೀಕೆಯನು ಸಲಹುವೆವು ಬಲ್ಲಿದರಿವಳ ವಲ್ಲಭರು ।
ಸಾಕು ಬೇಡಾರಕ್ಕೆ ನೀ ಹೋ-
ಗೀಕೆ ನಿನಗಹಳಲ್ಲ ನಿಂದಿರು
ಕಾಕನಾಡದಿರೆನುತ ಬೀಳ್ಕೊಟ್ಟಳು ನಿಜಾನುಜನ ॥ ೧೨ ॥

ಅಕ್ಕ ಮರುಳೌ ಚಿತ್ತವವಳಲಿ
ಸಿಕ್ಕ ಬೇರ್ವರಿಯಿತ್ತು ಬಱಿದೇ
ಮಿಕ್ಕ ಡಿಂಬಕೆ ಮದುವೆಯುಂಟೇ ಮನವ ಬೇಱಿರಿಸಿ ।

---

೧೦. [1]ಯೊ (ಅ ಆ ಕುಮಾ). [2]ದೀಪನವ (ಪ್ರ).
[ನಿಱಿಗೆ-ತೋರಿಕೆ, ಪ್ರದರ್ಶನ. ಹೊಱಿಗೆ-ಭಾರ, ಅಧಿಕ್ಯ. ಬಱಿದೊಱೆ-ಬತ್ತಿದ ಹೊಳೆ. ಕರಿವೊಳೆವೋಗು-ಮೊಳಕೆಯಲ್ಲೇ ಸುಟ್ಟು ಕರಿಕಾಗು. ಗಱಿಗಟ್ಟು-ಹುರುಪುಗೊಳ್ಳು. ಇಱಿ-ತಿವಿ, ನೋಯಿಸು. ಅಂತಸ್ತಾಪ-ಒಳಗಿನ ಬೇಗುದಿ. ತಾಪ-ಸುಡುವಿಕೆ].

೧೧. [ಅಲಿ-ಕಣ್ಣು ; ದೃಷ್ಟಿ. ಓಲೆಕಾತಿ-ಸೇವಿಕೆ. ಮೀಟು-ಉನ್ನತಿ, ಶ್ರೇಷ್ಠತೆ. ಅಗ್ರಜೆ-ಅಕ್ಕ].

೧೨. [ಮಾನ್ಯವೃತ್ತಿ-ಗೌರವಭಾವನೆ. ಬಲ್ಲಿದರು-ಬಲಿಷ್ಠರು, ಸಮರ್ಥರು. ವಲ್ಲಭರು-ಗಂಡಂದಿರು. ಕಾಕು-ಕೆಟ್ಟದ್ದು].

ಮತ್ಸ್ಯಳಾಟಿಕೆಯಾದೊಡಾಗಲಿ
ತಕ್ಕರಲ್ಲೆಂದೆನಲಿ ಸಲಹುವೊ-
ದಕ್ಷ ಸೈರಂಧ್ರಿಯನು ಸೇರಿಸಬೇಕು ತನಗೆಂದ ॥ ೧೩ ॥

ಸೊಗಸ[1]ವಿ[1]ತರರ ಮಾತು ಕಣ್ಣಗ-
ಳೊಗಡಿ[2][ಸುವುವೀದವರ][2] ರೂಹನು
ಹಗೆಗಳಾ[1]ಗಿಹವೀವವರ ನಾಮಗಳು ನಾಲಗೆಗೆ ।
ನೆಗಳಿಕೆಯು ಸಸಿಯಾದೆನೆನ್ನಯ
ಬಗೆಯು ಸಲಿಸೌ ಹಱಿದ ಕರುಳಿನ
ಮೃಗದ ಮಱಿಯನು [3]ಕಾಯ[3]ಬೇಕೆಂದೆಱಗಿದನು ಪದಕೆ ॥ ೧೪ ॥

ಅಲಿ ನೀರೇಱಿದವು ತಮ್ಮನ
ಮೇಲೆ ತಳೆತುದು ಮೋಹ ಕಾಲನ
ಪಾಳೆಯಕೆ ಕೈಗೊಟ್ಟಳಂಗನೆ ನೆಗಹಿದಳು ಖಳನ ।
ಏಳು ಭವನಕೆ ಹೋಗು ತರುಣಿಯ
ನಾಳೆ ನಾ ಕಳುಹುವೆನು ಪರಸತಿ
ಮೇಳ ಲೇಸಲ್ಲೆನುತ ಬೀಳ್ಕೊಟ್ಟಳು ನಿಜಾನುಜನ ॥ ೧೫ ॥

ಬಯಸಿದಳು ಮೃತ್ಯುವನು ಕಡುಪಾ-
ಪಿಯ ಮನೋಧರ್ಮವನು ಜನಮೇ-
ಜಯ ಮಹೀಪತಿ ಕೇಳು ಪಾಂಚಾಲಿಯನು ಕರೆಸಿದಳು ।
ನಯವಿಹೀನೆ ಸುಧೇಷ್ಣೆ ಬಂದಾ-
ಕೆಯನು ಬೆಸಸಿದಳೆಲೆಗೆ ಅನುಜಾ-
ಲಯವಲುತ್ತಮ ಮಧುವ ನೀ ಝುಡಿತೆಯಲಿ ತಹುದೆಂದು ॥ ೧೬ ॥

---

೧೩. [ಪೇರ್ವರಿ-ಪೇರೂರು, ನಾಟು. ತಿಂಬ-ಜೀವಿಪ್ಪವ. ತಕ್ಕರು-ಯೋಗ್ಯರಾದವರು. ಸೈರಂಧ್ರಿ-ರಾಣೀವಾಸದ ಊಳಿಗದವಳು].

೧೪. [1]ಬಿ (ಅ ಕುಮಾ), ಸ್ತ್ರೀಪಾ (ಕ ಪಿ k). [2]ಸವು ಮಿಕ್ಕವರ (ಅ ಕುಮಾ), ಸಿದವು ಉಳಿದವರ (k). [3]ಸಲಹ (ಅ ಕುಮಾ), ಸ್ತ್ರೀಪಾ (k).
[ಒಗಡಿಸು-ಓಕರಿಸು, ಅಸಹ್ಯಪಡು. ರೂಹು-ರೂಪು. ನೆಗಳಿಕೆ-ಕಾವು, ಬೇಗೆ, ತಾಪ. ಬಗೆ-ಇಷ್ಟ, ಮನಸ್ಸು. ಹಱಿದ-ಕತ್ತರಿಸಿದ, ಕಿತ್ತುಹೋದ. ಮೃಗ-ಜಿಂಕೆ.

೧೫. [ಅಲಿ-ಕಣ್ಣು. ತಳೆತುದು-ಉಂಟಾಯಿತು. ಕಾಲ-ಯಮ. ಕೈಗೊಡು-ನೆರವಾಗು. ನೆಗಹು-ಮೇಲಕ್ಕೆ ಎತ್ತು. ಮೇಳ-ಸಂಗ, ಕೂಡಿಕೆ].

೧೬. [ನಯವಿಹೀನೆ-ನೀತಿಯಿಲ್ಲದವಳು. ಮಧು-ಮದ್ಯ. ಝುಡಿತೆ-ಬೇಗ].

ದೇವಿ ಸೇವಿಸಲಱಿಯೆನೆಂದೊಡೆ-
ದಾವ ಧರ್ಮವು ಶಿವಶಿವಾ ಹದ
ಸಾವನವರಿಗೆ[1] ತಹುದು ಬದ್ಧವಿಘಾತಿಯೆಂದು ಬಲುಹು ।
ಸೇವಿಸುವುದೇ ಕಷ್ಟವೆಂಬುದು
ಕೋವಿದರ ಮತ ಶಿವಶಿವಾ ರಾ-
ಜೀವಲೋಚನ ಕೃಷ್ಣ ಬಲ್ಲನೆನುತ್ತ ಗಮಿಸಿದಳು ॥ ೧೬ ॥

ಮನುಮಥನ ಮದದಾನೆ ಕಂದ-
ರ್ಪನ ಮಹಾ ಮಂತ್ರಾಧಿದೇವತೆ
ಜನವು ಮರುಳಹ ಮದ್ದು ಸಂಸೃತಿಸುಖದ ಸಾಕಾರೆ ।
ಮನಸಿಜನ ಮಸೆದಲಗು ಮುನಿಮೋ-
ಹನತಿಲಕ ಲಾವಣ್ಯಸಾಗರ-
ಜನಿತಲಕ್ಷ್ಮಿ ಲತಾಂಗಿ ಬಂದಳು ಕೀಚಕನ ಮನೆಗೆ ॥ ೧೭ ॥

ಕುಡಿತೆಗಂಗಳ ಚಪಲೆಯುಂಗುರ-
ವಿಡಿಯ ನಡುವಿನ ಸೀಱ ಹಂಸೆಯ
ನಡೆಯ [1]ನಟನೆಯ[1] ಮೌಳಿಕಾತಿ ಪಯೋಜಪರಿಮಳದ ।
ಕಡುಚೆಲುವೆ ಬರಲವನ ತನು ನಡ-
ನಡುಗಿ ನಿಂದುದಿದಾವ ಹೆಂಗುಸು
ಪಡೆದಳೀ ಚೆಲುವಿಕೆಯ[2]ನೆಂದಡಿಗಡಿಗೆ ಬೆಱಗಾದ[2] ॥ ೧೮ ॥

---

೧೬. [ಹದ-ಸಂಗತಿ, ಸಮಾಚಾರ; ರೀತಿ, ಕ್ರಮ. ಬದ್ಧವಿಘಾತಿ-ದೃಢವಾದ, ತಪ್ಪಿಸಿಕೊಳ್ಳಲಾಗದ, ಪೆಟ್ಟು. ಕೋವಿದರು-ಬಲ್ಲವರು].

೧೭. [ಕಂದರ್ಪ, ಮನಸಿಜ-ಮನ್ಮಥ. ಸಂಸೃತಿಸುಖ-ಸಂಸಾರಸುಖ, ಕುಟುಂಬಸೌಖ್ಯ. ಅಲಗು-ಕತ್ತಿ. ಮೋಹನ ತಿಲಕ-(ಇತರರನ್ನು) ವಶಮಾಡಿಕೊಳ್ಳಬಲ್ಲ ತಿಲಕ; ವಶೀಕರಣ ತಿಲಕಚಿಹ್ನೆ].

೧೮. [1]ಗಮನದ (ಅ ಉಮಾ), ನಲಿವಿನ (ಕ); ಸ್ವೀಪಾ (k). [2]ನೆನುತೀಕ್ಷಿಸಿದನಂಗನೆಯ; ಸ್ವೀಪಾ (ಕ ಓ k ಪ್ರ).
[ಕುಡಿತೆ-ಬೊಗಸೆ (ಮುಷ್ಟಿ ಅಗಲವಾದ). ಉಂಗುರವಿಡಿಯ-ಉಂಗುರ ಹಿಡಿಸಬಹುದಾದಷ್ಟು ತೆಳ್ಳನೆಯ. ನಟನೆ-ಅನುಕರಣ. ಮೌಳಿಕಾತಿ-ಕಿರೀಟಪ್ರಾಯಳು, ಶ್ರೇಷ್ಠಳು. ಪಯೋಜ-ತಾವರೆ].

ಅರಿದು ನೆತ್ತರುಗಾಣದಲಗಿದು
ನೆಱೆಬಿಗಿಯೆ ವೈಬಾಸುಳೇಳದ
ಹುರಿಬಲಿದ ನೇಣ್ ಸೋಂಕಿದೊಡೆ ಹೊಗೆಮುಸಗದೆದೆಗಿಚ್ಚು ।
[1]ಅರಳುಗಂ[1]ಗಳ ಧಾರೆ ಯಾವನ
ಕೊರಳ ಕೊಯ್ಯದದಾವನ[2]ಱಿತವ[2]
ಹುರುಳುಗೆಡಿಸದಿದಾವ ನಿಲುವನು ಶಿವಶಿವಾಯೆಂದ ॥ ೨೦ ॥

ಖಳನ ಮನದಿಂಗಿತವನಾಗಳೆ
ತಿಳಿದು ಕಾಮಿನಿ ಬೆದಱಿದಳು ಕಳ-
ವಳಿಗ ಸೋತನು ಕೆಟ್ಟೆನೆಂದಳು ತನ್ನ ಮನದೊಳಗೆ ।
ತೊಲಗಿ ಹಿಂದಡಿಯಿಡಲು ಕೀಚಕ-
ನಳುಕದೈತಂದಬುಜವದನೆಯು
ಬಳಿಗೆ ಬಂದನು ನುಡಿಸಲಾಗದೆ ತರಳೆ ನೀನೆಂದ ॥ ೨೧ ॥

ನಿಲ್ಲೆಲೆಗೆ ಸೈರಂಧ್ರಿ ಕಾಮನ
ಬಲ್ಲೆಹದ ಬಲುಗಾಯ ತಾಕಿತು
ಬಲ್ಲೆ ನೀನೌಷಧಿಯ [1]ಬದುಕಿಸಿ[1]ಕೊಂಬುದೆನ್ನೊಡಲ ।
ಮೆಲ್ಲನಡಿಯಿಡು ಮಾತ ಮನ್ನಿಸು
ಚೆಲ್ಲೆಗಂಗಳನೆನ್ನ ಮುಖದಲಿ
ಚೆಲ್ಲಿ ಸಪ್ರಾಣಿಸಲುಬೇಹುದು ವಿಗತಜೀವನ[2]ನ[2] ॥ ೨೨ ॥

---

೨೦. [1]ಅರರೆಕಂ (ಅ ಕುಮಾ), ಚಪಲಕಂ (ಪ್ರ) ; ಸ್ವೀಪಾ (k). [2]ಱಿಕೆಯ (ಅ ಕುಮಾ), ಸ್ವೀಪಾ (ಕ ಓ k).

[ಬಾಸುಳು-ಬಾಸುಂಡೆ. ಹುರಿಬಲಿದ ನೇಣ್-ಚೆನ್ನಾಗಿ ಹೊಸೆದ ಹಗ್ಗ. ಹೊಗೆ ಮುಸಗದ-ಹೊಗೆ ಹರಡದ. ಅರಳು-ಹೂವು. ಅಱಿತ-ತಿಳಿವಳಿಕೆ, ಜ್ಞಾನ. ಇದಾವ (ಇದ+ಅವ) ನಿಲುವನು-ಇದನ್ನು (ಎಂದರೆ, ಇವಳ ಚೆಲುವನ್ನು) ಯಾವನು ತಾನೆ ಎದುರಿಸಬಲ್ಲನು ?].

೨೨. [1]ರಕ್ಷಿಸು (ಅ ಕುಮಾ). [2]ವ (ಅ ಕುಮಾ) ; ಸ್ವೀಪಾ (k).

[ಸಪ್ರಾಸುಣಿ-ಪ್ರಾಣವನ್ನು ಬರಿಸು, ಕೊಡು. ವಿಗತ-ಹೊರಟುಹೋದ].

೨೩. [ತಳಿ-ಚೆಲ್ಲು, ಚಿಮುಕಿಸು. ಸುಧೆ-ಅಮೃತ. ತೃಷ್ಣೆ-ಬಾಯಾರಿಕೆ. ಅಳಿಮನ-ಕುಗ್ಗಿದ ಮನಸ್ಸು. ಕಳಶಕುಚ-ಕಲಶದಂತೆ ಗುಂಡಾದ ಮೊಲೆ].

ಎಳನಗೆಯು ಬೆಳದಿಂಗಳನು ನೀ
ತಳಿದು ತಾಪವ ಕೆಡಿಸು ಮಧುರದ
ಮೆಲುನುಡಿಯ ಸುಧೆಯಿಂದ ತೃಷ್ಣೆಯನಕಟ ಪರಿಹರಿಸು ।
ಅಳಿಮನದ ಬಡತನವ ನಿನ್ನಯ
ಕಳಶಕುಚಲಕ್ಷ್ಮಿಯಲಿ ಕಳೆ ಮನ-
ದೊಲವನಿತ್ತಲು ತಿದ್ದ ಬೇಹುದು ಕಾಂತೆ ಕೇಳೆಂದ ॥ ೨೩ ॥

ತರುಣಿ ಬಾ ಕುಳ್ಳಿರು ಮದಂತಃ-
ಕರಣದೆಡರಡಗಿತ್ತು ಕಾಮನ
ದುರುಳತನಕಿನ್ನಂಜುವೆನೆ ನೀನೆನಗೆ ಬಲವಾಗೆ ।
ಬಿರುದ ಕಟ್ಟುವೆನಿಂದುವಿಗೆ ಮಧು-
ಕರಗೆ ಕೋಗಿಲೆಗೆಂದು ಖಳ[1]ನು[1]-
ಬ್ಬರಿಸಿ ನುಡಿಯಲು ಖಾತಿಗೊಂಡಿಂತೆಂದಳಿಂದುಮುಖಿ ॥ ೨೪ ॥

ಬಾಯಿ ಹುಳುವುದು ಬಯಲ ನುಡಿದೊಡೆ
ನಾಯಿತನ ಬೇಡೆಲವೊ ಕೆಡದಿರು
ರಾಯ[1]ನಂ[1]ಗನೆ ಕಳುಹೆ ಬಂದೆನು ಮಧುವ ತರಲೆಂದು ।
ಸಾಯಬೇಕೇ [2]ಬ[2]ಸಿದ ಶೂಲವ
ಹಾಯಿ ಹೋಗೆನೆ ನಿನ್ನ ಬೈಗುಳು
ನೋಯಿಸುವವೇ ತನ್ನನೆನುತವೆ ತುಡುಕಿದನು ಸತಿಯು ॥ ೨೫ ॥

---

೨೪. [1]ನ (ಕುಮಾ), ಸ್ವೀಪಾ (ಪ್ರ).
[ಮದಂತಃಕರಣ-ನನ್ನ ಮನಸ್ಸು. ಎಡರು-ಅಡ್ಡಿ, ತೊಂದರೆ. ಮಧುಕರ-ದುಂಬಿ. ಉಬ್ಬರಿಸಿ-ಉಬ್ಬಿ, ಉತ್ಸಾಹಗೊಂಡು].

೨೫. [1]ರಂ (ಅ ಕುಮಾ), ಸ್ವೀಪಾ (ಕ k ಓ). [2]ಹ (ಕುಮಾ).
[ಹುಳು-ಹುಳುಬೀಳು, ಹುಳುತುಹೋಗು. ಬಯಲು-ವ್ಯರ್ಥವಾದದ್ದು. ಬಸಿದ-ಹರಿತವಾದ, ಮೊನಚಾದ. ತುಡುಕು-ಹಿಡಿದುಕೊ].

೨೬. [1]ಮುರಿ (ಅ ಕುಮಾ ಪ್ರ). [2]ದರಗೆ (ಅ), ಸ್ವೀಪಾ (ಪ್ರ).
[ಒಡೆಮುರುಚು (ಮುರಿಚು)-ಒಡನೆಯೇ ತಿರುಗಿಸು. ಈಡಾಡು-ಕೆಡವು. ಡೆಂಡಣಿಸು-ಕಳವಳಿಸು, ತಳಮಳಿಸು. ಜಘನ-ಪೃಷ್ಠ. ಭರ-ಭಾರ. ಉಡಿ-ಕತ್ತರಿಸಿಹೋಗು, ತುಂಡಾಗು. ಸಭಾಗ್ಯತೆ-ಅದೃಷ್ಟದ ಪರೀಕ್ಷೆ].

ಕರವನೊಡೆ ಮುರುಚಿದಳು ಬಟ್ಟಲ
ಧರೆಯೊಳೀಡಾಡಿದಳು ಸತಿ ಮೊಗ-
ದಿರುಹಿ ಬಾಗಿಲ ದಾಂಟಿ ಭಯದಲಿ ನಡುಗಿ ಡೆಂಡಣಿಸಿ ।
ತರಳೆ ಹಾಯ್ದಳು ಮೊಲೆಯ ಜಘನದ
ಭರದಿ ಬಡನಡು[1]ವುಡಿ[1]ಯದಿಹುದೇ
ವರ ಸಭಾ[2]ಗ್ರತೆಗೆ[2]ನಲು ರಭಸದೊಳೋಡಿದಳು ಸಭೆಗೆ ॥ ೨೬ ॥

ಒಡನೆ ಬೆಂಬತ್ತಿದನು ತುಱುಬನು
ಹಿಡಿದು ತೊತ್ತಿನ ಮಗಳೆ ಹಾಯ್ದೊಡೆ
ಬಿಡುವೆನೇ ಫಡಯೆನುತ ಹೊಯ್ದನು ಕಾಲಲೊಡೆಮೆಟ್ಟಿ ।
ಕೆಡೆದು ರಕುತವ ಕಾಱಿ[3] ಹುಡಿಯಲಿ
ಮುಡಿ [1]ಮುಸುಕಿ[1] ಬಿಱುಗಾಳಿಯಲಿ ಸೈ-
ಗೆಡೆದ ಕದಳಿಯ ಕಂಭದಂತಿರೆ ಕಾಂತೆ ಹೊರಳಿದಳು ॥ ೨೭ ॥

ಆರಿಗುಸುರುವೆನಾರ ಸಾರುವೆ-
ನಾರಿಗೊಱಲುವೆನಾರಿಗಱುಹುವೆ-
ನಾರ ಬೇಡುವೆನಕಟ ಹೆಂಗಸುಜನ್ಮವನು ಸುಡಲಿ ।
ಘೋರಪಾತಕಿಯೆನ್ನವೊಲು ಮು-
ನ್ನಾರು ನವೆದವರುಂಟು ಮರಣವು
ಬಾರದೆಂದೊಱಲಿದಳು ಬಸಿಱನು ಹೊಯ್ದು ಶಶಿವದನೆ ॥ ೨೮ ॥

ಯಮಸುತಂಗಱುಹುವೆನೆ ಧರ್ಮ-
ಕ್ಷಮೆಯ ಗರ ಹೊಡೆದಿಹುದು ಪಾರ್ಥನು
ಮಮತೆಯುಳ್ಳವನೆಂಬೆನೇ ತಮ್ಮಣ್ಣನಾಜ್ಞೆಯಲಿ ।
ಭ್ರಮಿತನಾಗಿಹನುಳಿದರಿಬ್ಬರು
ರಮಣರಿವರೀ ನಾಯ ಕೊಲಲ-
ಕ್ಷಮರು ನಿಸ್ಸಂದೇಹವೆಂದಳು ತನ್ನ ಮನದೊಳಗೆ ॥ ೨೯ ॥

---

೨೭. [1]ಹೊರಳಿ (ಅ ಕುಮಾ), ಸ್ವೀಪಾ (ಪ್ರ k ಓ).
[ಬೆಂಬತ್ತು-ಬೆನ್ನಟ್ಟು. ಒಡೆಮೆಟ್ಟು-ಬಲವಾಗಿ ತುಳಿ. ಕೆಡೆ-ಬೀಳು. ಹುಡಿ-ಧೂಳು. ಮುಸುಕು-ಮುಚ್ಚಿಹೋಗು. ಸೈಗೆಡೆ-ತಟ್ಟನೆ ಬೀಳು. ಕದಳಿ-ಬಾಳೆ].

೨೮. [ಉಸುರು-ಹೇಳು ಸಾರು-ಸಮೀಪಿಸು, ಬಳಿಗೆ ಹೋಗು. ಒಱಲು-ಗೋಳನ್ನು ಹೇಳಿಕೊ, ಗೋಳಾಡು. ನವೆ-ಸವೆದುಹೋಗು, ಕೃಶವಾಗು].

೨೯. [ಧರ್ಮಕ್ಷಮೆ-ಧರ್ಮಕ್ಕಾಗಿ ಸಹನೆ. ಗರ-ಗ್ರಹ. ಅಕ್ಷಮರು-ಅಸಮರ್ಥರು].

ಎಲ್ಲರೊಳು ಕಲಿಭೀಮನೇ ಮಿಡು-
ಕುಳ್ಳ ಗಂಡನು ಹಾನಿಹರಿಬಕೆ
ನಿಲ್ಲದಂಗೈಸುವನು ಕಡು ಹೀಹಾಳಿಯುಳ್ಳವನು ।
ಖುಲ್ಲ[1]ನಾಯು[1]ಪಟಳವನಾತಂ-
ಗೆಲ್ಲವನು ಹೇಳುವೆನು ಬಳಿಕವ-
ನಲ್ಲಿ ಹುರುಳಿಲ್ಲದೊಡೆ ಕುಡಿವೆನು ಘೋರತರ ವಿಷವ ॥ ೩೦ ॥

ಕೆಲದಲೊಟ್ಟಿದ ಪತ್ರಶಾಕಾ-
ವಳಿಯ ಫಲರಾಶಿಗಳ ಕಳವೆಯ
ಹೊಳೆವುತಿಹ ರಾಜಾನ್ನದಕ್ಕಿಯ ಸಾಲ ಹರಿಯಣದ ।
ಕೆಲಬಲದ ಸಂಭಾರಚೂರ್ಣದ
[1]ತಳಿತ[1]ಬೋನದ ವಿವಿಧಭಕ್ಷ್ಯಾ-
ವಳಿಯ ಬಾಣ[2]ಸಿನೊ[2]ಳಗೆ ಬಂದಳು ಮತ್ತಗಜಗಮನೆ ॥ ೩೧ ॥

ಎಬ್ಬಿಸಲು ಭುಗಿಲೆಂಬನೋ ಮೇ-
ಣೊಬ್ಬಳೀತಕೆ ಬಂದೆ ಮೋಹಿಯ
ಮಬ್ಬಿದೇನೆಂದೆನ್ನ ಸಂತೈಸುವನೊ [1]ಈ ಕ್ಷಣಕೆ[1] ।
ತುಬ್ಬುವುದೊ ತಾ ಬಂದ ಬರವದು
ನಿಬ್ಬರವಲಾ ಜನದ ಮನಕೆ-
ನ್ನೆಬ್ಬಿಸಿಯೆ ನೋಡುವೆನೆನುತ ಸಾರಿದಳು [2]ಮಂಚವನು[2] ॥ ೩೨ ॥

---

೩೦. [1]ನಿವನು (ಅ ಕುಮಾ), ಸ್ವೀಪಾ (k).
[ಮಿಡುಕು–ಪರಾಕ್ರಮ, ಪೌರುಷ. ಹಾನಿ-ನಷ್ಟ, ಕೇಡು. ಹರಿಬ–ಕರ್ತವ್ಯ ಅಂಗೈಸು-ಎದುರಿಸು, ಪ್ರತಿಭಟಿಸು. ಹೀಹಾಳಿ–ಹುರುಡು. ಖುಲ್ಲ-ನೀಚ, ಕನಿಷ್ಠ. ನಾಯುಪಟಳ (ನಾಯ + ಉಪಟಳ)–ನಾಯಿಯ ಕಾಟ, ತೊಂದರೆ. ಹುರುಳು–ಸಾಮರ್ಥ್ಯ, ಬಲ, ಕೆಚ್ಚು].

೩೧. [1]ಲಲಿತ (ಅ ಕುಮಾ), ಸ್ವೀಪಾ (ಪ್ರ ಕ k). [2]ಸದೊ (ಅ ಕುಮಾ).
[ಒಟ್ಟು–ರಾಶಿಹಾಕು. ಪತ್ರ-ಎಲೆ. ಶಾಕ–ಸಸ್ಯ. ಕಳವೆ–ಬತ್ತ. ರಾಜಾನ್ನ–ಶ್ರೇಷ್ಠವಾದ ಅನ್ನ. ಹರಿಯಣ–ಹರಿವಾಣ, ತಟ್ಟೆ. ಸಂಭಾರ ಚೂರ್ಣ–ಮಸಾಲೆ ಪುಡಿ. ತಳಿತ–ಸಿದ್ಧವಾದ. ಬೋನ–ಭೋಜನ, ಊಟ. ಬಾಣಸು–ಅಡುಗೆಯ ಮನೆ].

೩೨. [1]ಸಾಮುದಲಿ (ಅ ಕುಮಾ), ಸ್ವೀಪಾ (ಪ್ರ k). [2]ವಲ್ಲಭನ (ಪ್ರ ಅ ಕುಮಾ), ಸ್ವೀಪಾ (ಕ).
[ಭುಗಿಲೆನ್ನು–ಕೋಪದಿಂದ ಆರ್ಭಟಿಸು. ಮಬ್ಬು–ಕಾಂತಿಹೀನತೆ. ತುಬ್ಬು–ಹೊರಪಡು, ಬಹಿರಂಗವಾಗು. ನಿಬ್ಬರ–ಸಹಿಸಲಾಗದುದು].

ಮೆಲ್ಲಮೆಲ್ಲನೆ ಮುಸುಕ ಸಡಿಲಿಸಿ
ಗಲ್ಲವನು ಹಿಡಿದಲುಗಲಪ್ರತಿ-
ಮಲ್ಲನೆದ್ದನು ನೋಡಿದನು ಪಾಂಚಾಲನಂದನೆಯು ।
ವಲ್ಲಭೆಯು ಬರವೇನು ಮು[1]ಸುಡ[1]ಲಿ
ತಲ್ಲಣವೆ ತಲೆದೋರುತಿದೆ ತಳು-
ವಿಲ್ಲ[2]ದಇಹಿ[2]ರುಳೇಕೆ ಬಂದೆ ಲತಾಂಗಿ [3]ನೀನೆಂ[3]ದ || ೩೩ ||

ನಿನ್ನೆ ಹಗಲಜ[3]ಯುಟ್ಟು ಕೀಚಕ-
ಕುನ್ನಿಯೊದೆದನು ರಾಜಸಭೆಯಲಿ
ನಿನ್ನ ವಂದಿಗರಿರಲು ಪರಿಭವವುಚಿತವೇ ತನಗೆ ।
ಎನ್ನನವ ಬೆಂಬಳಿಯು ಬಿಡ ನಾ-
ನಿನ್ನು ಬದುಕುವಳಲ್ಲ ಪಾತಕ
ನಿನ್ನ ತಾಗದೆ ಮಾಣದೆನಲಾ ಭೀಮ ಖತಿಗೊಂಡ || ೩೪ ||

ರಮಣ ಕೇಳುಳಿದವರು ತನ್ನನು
ರಮಿಸುವರು ಮಾನಾರ್ಥವೆನೆ ನಿ-
ರ್ಗಮಿಸುವರು ನೀನಲ್ಲದುಳಿದವರುಚಿತಬಾಹಿರರು ।
ಮಮತೆಯಲಿ ನೀ ನೋಡು ಚಿತ್ತದ
ಸಮತೆಯನು ಬೀಳ್ಕೊಡು ಕುಠಾರನ
ಯಮನ ಕಾಣಿಸಿ ಕರುಣಿಸೆಂದಳು ಕಾಂತೆ ಕೈಮುಗಿದು || ೩೫ ||

---

೩೩. [1]ಖದ (ಆ ಕುಮಾ ಪ್ರ), ಸ್ವೀಪಾ (ಕ). [2]ದುಸುರಿ (ಆ ಕುಮಾ), ಸ್ವೀಪಾ (ಕ ಓ k). [3]ಹೇಳೆಂ (ಆ ಕುಮಾ), ಸ್ವೀಪಾ (ಪ್ರ k).

[ಅಪ್ರತಿಮಲ್ಲ–ಅಸಮಾನಶೂರ. ಮುಸುಡು–ಮೋರೆ, ಮುಖ. ತಲ್ಲಣ–ತಳಮಳ, ಕಾತರ. ತಳುವಿಲ್ಲದೆ–ತಡಮಾಡದೆ. ಇರುಳು–ರಾತ್ರಿಯಲ್ಲಿ].

೩೪. [ಅಜ[3]ಯುಟ್ಟು-ಬೆನ್ನಟ್ಟು. ಕುನ್ನಿ–ನಾಯಿಮರಿ, ಕೀಳುಮನುಷ್ಯ. ವಂದಿಗರು–ಅಂಥವರು. ಪರಿಭವ–ಅಪಮಾನ. ಬೆಂಬಳಿ–ಬೆನ್ನಹತ್ತಿರವೇ ಇರುವುದು, ಬೆಂಬತ್ತುವುದು, ಹಿಂಬಾಲಿಸುವುದು. ಮಾಣ್-ಬಿಡು. ಖತಿ–ಸಿಟ್ಟು, ಕೋಪ].

೩೫. [ರಮಿಸು–ಉಪಭೋಗಿಸು, ಸಂತೋಷಪಡಿಸು. ಮಾನಾರ್ಥ–ಮಾನಹೋಗುವ ಸಂದರ್ಭ. ನಿರ್ಗಮಿಸು–ಹೊರಬೀಳು; ಕಳಚಿಕೊಳ್ಳು, ಜಾರಿಕೊಳ್ಳು. ಉಚಿತಬಾಹಿರರು–ಯೋಗ್ಯವಾದ ಕೆಲಸಕ್ಕೆ ಹೊರತಾದವರು. ಸಮತೆ–ಸಮಾಧಾನ ಸ್ಥಿತಿ. ಕುಠಾರ–ಕೊಡಲಿಯಂತಿರುವವನು, ಘಾತುಕ].

ಹೆಂಡತಿಯು ಹರಿಬದಲಿ ಯೊಬ್ಬನೆ
ಗಂಡುಗೂಸೇ ವೈರಿಯನು ಕಡಿ-
ಖಂಡವನು ಮಾಡುವನು ಮೇಣ್ ತನ್ನೊಡಲನಿಕ್ಕುವನು ।
ಗಂಡರೈವರು ಮೂಱುಲೋಕದ
ಗಂಡರೊಬ್ಬಳನಾಳಲಾಱಿರಿ
ಗಂಡರೋ ನೀವ್ [1]ಷಂಡರೋ[1] ಹೇಳೆಂದಳಂದುಮುಖಿ ॥ ೩೬ ॥

ಹೆಣ್ಣ ಹರಿಬಕ್ಕೋಸುಗವೆ ತ-
ಮ್ಮಣ್ಣನಾಜ್ಞೆಯ ಮೀಱಿ ಕುಂತಿಯ
ಚಿಣ್ಣ ಬದುಕಿದನೆಂದು [1]ಬಗುಳ್ವರು[1] ಕುಜನರಾದವರು ।
ಅಣ್ಣನವರಿಗೆ ದೂಱುವುದು ನಾ-
ವುಣ್ಣ[2]ದುರಿಯಿದು[2] ರಾಯನಾಜ್ಞೆಯ
ಕಣ್ಣಿಯಲಿ ಬಿಗಿವಡೆದು ಕೆಡೆದೆವು ಕಾಂತೆ ಕೇಳೆಂದ ॥ ೩೭ ॥

ಹೊದ್ದುವುದು ಫಲುಗುಣನ ಪಾದಕೆ
ಬಿದ್ದು ಯಮನಂದನನ ಮನವನು
ತಿದ್ದುವುದು ಸಹದೇವನಕುಲ[1]ರ ಕೈಯಲೆನಿಸುವುದು[1] ।
ಗೆದ್ದುಕೊಡುವರು ನಿನ್ನ ಪಾಲಿಸ-
ದಿದ್ದರಾದೊಡೆ ದೋಷವವರನು
ಹೊದ್ದುವುದು ನೀನೆನ್ನ ಬಱಿದೇ ಕಾಡಬೇಡೆಂದ ॥ ೩೮ ॥

ಜನನವೇ ಪಾಂಚಾಲರಾಯನ
ಮನೆ ಮನೋವಲ್ಲಭರದಾರೆನೆ
ಮನುಜಗಿನುಜರು ಗಣ್ಯ[1]ರೇ[1] ಗೀರ್ವಾಣರಿಂ ಮಿಗಿಲು ।

---

೩೬. [1]ಭಂ (ಅ ಕುಮಾ ಪ್ರ), ಸ್ವೀಪಾ (ಓ).
[ಕಡಿಖಂಡ–ಕತ್ತರಿಸಿದ ತುಂಡು, ತುಂಡು ತುಂಡು. ಷಂಡ-ನಪುಂಸಕ].

೩೭. [1]ನುಡಿದರು (ಅ ಕುಮಾ ಪ್ರ), ಸ್ವೀಪಾ (ಕ). [2]ದುರಿಯಿವು (ಅ ಕುಮಾ), ದುರಿಯೆವು (k), ದರಿಯೆವು (ಪ್ರ).
[ಚಿಣ್ಣ–ಹುಡುಗ. ಕುಜನ–ಕೆಟ್ಟ ಜನ. ಉಣ್ಣದುರಿಯಿದು–ಅನುಭವಿಸಲಾಗದ ಪರಿತಾಪ, ಸಂಕಷ್ಟ. ಕಣ್ಣಿ–ಹಗ್ಗ. ಬಿಗಿವಡೆದು–ಕಟ್ಟಲ್ಪಟ್ಟು. ಕೆಡೆ–ಕೆಳಕ್ಕೆ ಬೀಳು.]

೩೮. [ಹೊದ್ದು–ಸೇರು, ಕೂಡಿಕೊ. ತಿದ್ದು–ಮಾರ್ಪಡಿಸು. ಬಱಿದೆ–ವ್ಯರ್ಥವಾಗಿ].

೩೯. [1]ವೇ (ಅ ಕುಮಾ ಪ್ರ).

ಎನಗೆ ಬಂದೆಡರೀ ವಿರಾಟನ
ವನಿತೆಯರುಗಳ ಮುಡಿಯ ಕಟ್ಟುವ
ತನುವ ತಿಗುರುವ ಕಾಲ[1]ನೊತ್ತು[1]ವ ಕೆಲಸದುತ್ಸಾಹ ॥ ೩೯ ॥

ಹಗೆಗಳಿಗೆ ತಂಪಾಗಿ ಬದುಕುವ
ಮುಗುದರಿನ್ನಾರುಂಟು ಭಂಗಕೆ
ಹೆಗಲ ಕೊಟ್ಟಾನುವ ವಿರೋಧಿಗಳುಂಟೆ ಲೋಕದಲಿ ।
ವಿಗಡ ಬಿರುದನು [1]ಬಿಸುಟು[1] ಬಡಿಹೋ-
ರಿಗಳು ಪಾಂಡವರಂತೆ ಮೂಗು-
ರ್ಚಿಗಳದಿನ್ನಾರುಂಟೆನುತ ಮರುಗಿದಳು ನಳಿನಾಕ್ಷಿ ॥ ೪೦ ॥

ಧರೆಯ ಭಂಡಾರವನು ಪುರವನು
ಕರಿತುರಗರಥಪಾಯದಳವನು
ಕುರುಕುಲಾಗ್ರಣಿ ಸೆಳೆದುಕೊಂಡನು ನಿಮ್ಮ ಹೊಜವಡಿಸಿ ।
ದುರುಳಕೀಚಕಗೆನ್ನ ಕೊಟ್ಟಿರಿ
ಪರಿಮಿತದಲಿರವಾಯ್ತು ನಿಮ್ಮೈ-
ವರಿಗೆ ಲೇಸಾಯ್ತೆಕಟಯೆಂದಬುಜಾಕ್ಷಿ ಹಲುಬಿದಳು ॥ ೪೧ ॥

[1]ಆವ[1] ಭಾಗ್ಯಾಧಿಕ[2]ನೊ[2] ಕೌರವ-
[3]ಭಾವನಾಳಿದುದರಸುತನವದು[3]
ನೀವು ಕೃಷ್ಣನ [4]ಕೂರ್ಮೆಯಲಿ ಧರ್ಮದೊಳು ಸಿಲುಕಿಹಿರಿ[4] ।
ನೀವು ತಟತಟವಾಗಿ ಲೋಗರ-
ಸೇವೆಯಲಿ ಬೆಂದೊಡಲ [5]ಹೊರೆವಿರಿ[5]
ಸಾವವಳು ನಿಮಗಂಜಲೇಕೆಂದಬಲೆಯೊಜಲಿದಳು ॥ ೪೨ ॥

[ಮನೋವಲ್ಲಭರು–ಪ್ರಿಯರಾದವರು (ಮನಸ್ಸಿಗೆ ಒಡೆಯರು). ಗೀರ್ವಾಣ–ದೇವತೆ ಎಡರು–ಕಷ್ಟ, ವಿಪತ್ತು. ತಿಗುರು–ಸುಗಂಧ ದ್ರವ್ಯವನ್ನು ಲೇಪಿಸು, ಬಳಿ].

೪೦. [1]ಬಿಟ್ಟು (ಅ); ಸ್ವೀಪಾ (ಪ್ರ).
[ಭಂಗ–ಅಪಮಾನ. ತಂಪಾಗಿ–ತಟಸ್ಥವಾಗಿ; ಪ್ರತಿಭಟಿಸದೆ. ಅನು–ಸಹಿಸು, ತಾಳು. ಬಡಿಹೋರಿ–ಬಡಿಸಿಕೊಳ್ಳುವ ಗಂಡುದನ; ಸಾಧುಪ್ರಾಣಿ. ವಿಗಡ ಬಿರುದು–ಅಸಾಧಾರಣವಾದ, ಭಯಹುಟ್ಟಿಸುವ, ಬಿರುದು. ಮೂಗುರ್ಚಿ–ಮೂಗುದಾರ ಹಾಕಿಸಿಕೊಂಡಿರುವ ಪ್ರಾಣಿ; ಹೇಳಿದಹಾಗೆ ಕೇಳುವವನು].

೪೧. [ಪಾಯದಳ–ಪದಾತಿ ಸೈನ್ಯ, ಕಾಲಾಳು. ಪರಿಮಿತ–ಅಲ್ಪಾವಕಾಶ].

ಭೀಮ ಕೊಟ್ಟೈ ತನಗೆ ಸಾವಿನ
ನೇಮವನು ನಿಮ್ಮಣ್ಣನಾಜ್ಞೆ ವಿ-
ರಾಮವಾಗದೆ [1]ನಡೆಯಿ[1] ಧರ್ಮದ ಮೈಸಿರಿಯನಱಿ[3]ದು ।
ಕಾಮಿನಿಯು ಕೇಳಿಯಲಿ ನೆನೆವುದು
ತಾಮಸದಿ ತಾ ಮಿಱಿ [2]ನುಡಿದು[2]-
ದ್ದಾಮತೆಯ ಸೈರಿಸುವುದೆಂದೆಱಗಿದಳು ಚರಣದಲಿ ॥ ೪೩ ॥

ಎನಲು ಕಂಬನಿದುಂಬಿದನು ಕಡು-
ನನೆದುದಂತಃಕರಣ ರೋಷದ
ಘನತೆ ಹೆಚ್ಚಿತು ಹಿಂಡಿದನು ಹಗೆಗಳನು ಮನದೊಳಗೆ ।
ತನುಪುಳಕವುಬ್ಬ[1]ರಿಸೆ [ಬಿಮ್ಮನೆ[1]]
ವನಿತೆಯನು ತೆಗೆದಪ್ಪಿದನು [2]ಕಂ-
ಬನಿಯ ತೊಡೆದನು ಸೆಱಗಿನಲಿ ಕಲಿಭೀಮ ಮಾನಿನಿಯ[2] ॥ ೪೪ ॥

ತರುಣಿ ಕೀಚಕ ಕೌರವೇಂದ್ರರ
ಹರಣಕಿದೆ ಕೋ ಸಂಚಕಾರವ
ಕೆರಳಿದೊಡೆ [1]ಕಲಿ[1] ಭೀಮ ಬಗೆವನೆ ನೀತಿಗೀತಿಗಳ ।
ಕೆರಳಿಚಿದೆ ಯಿನ್ನೇನು ನಿನ್ನಯ
ಹರಿಬವೆನ್ನದು ನಾಯಿಜಾರನ
ಕರೆದು ಸಂಕೇತ[2]ವನು[2] ಸೂಚಿಸು ನಾಟ್ಯ[3]ಮಂಟಪವ[3] ॥ ೪೫ ॥

---

೪೨. [1]ಭಾ (ಅ ಕುಮಾ), ಸ್ವೀಪಾ (ಪ್ರ k). [2]ನು (ಅ ಕುಮಾ), ಸ್ವೀಪಾ (ಓ k ಪ್ರ). [3]ದೇವನರಸುಗಳೊಡೆಯತನವನು (ಅ ಕುಮಾ), ಸ್ವೀಪಾ (ಪ್ರ k). [4]ಕೂರ್ಮೆ ಧರ್ಮದಿ ಪಾಲಿಸಿದಿರೀಗ (ಅ ಕುಮಾ), ಸ್ವೀಪಾ (ಪ್ರ ಓ). [5]ದೆ (ಅ), ರು (ಕುಮಾ), ಸ್ವೀಪಾ (ಪ್ರ k).
[ಕೂರ್ಮೆ–ಪ್ರೀತಿ].

೪೩. [1]ಬದುಕಿ (ಅ ಪ್ರ ಕುಮಾ), ಸ್ವೀಪಾ (ಕ). [2]ನಡೆದು (ಪ್ರ).
[ಮೈಸಿರಿ–ಶ್ರೇಷ್ಠತೆ, ಉತ್ತಮಿಕೆ. ಕಾಮಿನಿ–ಸ್ತ್ರೀ. ಕೇಳಿ–ಕ್ರೀಡೆ].

೪೪. [1]ಸಿ ಮೆಲ್ಲನೆ (ಅ ಕುಮಾ), ಸಿ ದಿಮ್ಮನೆ (ಪ್ರ k). [2]ವರಲೋಚನ ಪಯೋಧಾರೆಗಳ ತೊಡೆದನು ಭೀಮ ಸೆಜಗಿನಲಿ (ಪ್ರ ಓ k).
[ತನುಪುಳಕ–ಮೈನವಿರೇಳುವುದು ; ದೇಹದ ರೋಮಾಂಚನ].

೪೫. [1]ಯಾ (ಅ), ಯಿಾ (ಕುಮಾ) ; ಸ್ವೀಪಾ (ಪ್ರ). [2]ದಲಿ (ಅ ಕುಮಾ ಪ್ರ) ; ಸ್ವೀಪಾ (ಕ). [3]ಮರಿದಿರವ (ಅ ಕುಮಾ), ಸ್ವೀಪಾ (ಪ್ರ ಓ ಕ k).

ಹರುಷವಲಿ ಹೆಚ್ಚಿದಳು ಪುರುಷರ
ಪುರುಷನಲ್ಲಾ ಭೀಮ ತನ್ನಯ
ಪರಮಸುಕೃತೋದಯವಲಾ ನೀನೊಬ್ಬನೆಂದೆನುತ ।
ಅರಸಿ ಕಾಂತನ ಬೀಳುಕೊಂಡಳು
[1]ಮರಳಿ[1]ದಳು ನಿಜಭವನಕೆತ್ತಲು
ತರಣಿ ತೆಗೆದನು ತಾವರೆಯ ಬಾಗಿಲಿನ ಬೀಯಗವ ॥ ೪೬ ॥

ಆ ದಿವಸವರಮನೆಗೆ ಬರುತ ವೃ-
ಕೋದರನ ವಲ್ಲಭೆಯ ಕಂಡನು
ಕೈತುಡುಕಲಂಜಿದನು ಮಾತಾಡಿಸಿದನಂಗನೆಯ ।
ಹೋದಿರುಳ ಯುಗವಾಗಿ [1]ನೂಕಿದೆ[1]
ನೀ ದಯಾಂಬುಧಿ ಕುಸುಮಶರ ಯಮ-
ನಾದನವ ನೀ ಬಲ್ಲೆಯೆಂದನು ಕೀಚಕನು ನಗುತ ॥ ೪೭ ॥

ಕುಸುಮಶರ ಯಮನಹನು ಅಮೃತವು
ವಿಷವಹುದು ಬಳಿಕಾಲಿಕಲುಗಳು
ಬಿಸಿಯಹವು ಬಾಂಧವರು ವೈರಿಗಳಹರು ನಿಮಿಷದಲಿ ।
ಒಸೆದರೊಲ್ಲದರಹರು ಲೋಗರ
ಶಶಿವದನೆಗಳುಪಿದ ದುರಾತ್ಮ[1]ರ[1]
ವಸುಧೆ ಹೊಜದೆಲೆ ಪಾಪಿ ಕೀಚಕ ಯೆಂದಳಂದುಮುಖಿ ॥ ೪೮ ॥

ಬಳಿಕ ನಿನ್ನ ಪುರಾಣಧರ್ಮವ
ತಿಳಿದುಕೊಂಡೆನಿದೊನ್ನು ನಿನ್ನಯ
ಲಲಿತಕರುಣಕಟಾಕ್ಷಕವಚವ ತೊಡಿಸಿ ತನ್ನೊಡಲ ।

---

೪೬. [1]ತಿರುಗಿ (ಅ ಕುಮಾ), ಸ್ವೀಪಾ (ಪ್ರ ಓ k).
[ಸುಕೃತ–ಪುಣ್ಯ. ತರಣಿ–ಸೂರ್ಯ].

೪೭. ಸವೆದುದು (ಅ ಕುಮಾ), ಸ್ವೀಪಾ (ಪ್ರ ಓ k).
[ವೃಕೋದರ–ಭೀಮ. ಕೈತುಡುಕು–ಬಲಾತ್ಕಾರದಿಂದ ಹಿಡಿದುಕೋ].

೪೮. [1]ನ (ಅ ಕುಮಾ), ಸ್ವೀಪಾ (ಪ್ರ k).
[ಒಸೆದರು–ಪ್ರೀತಿಸುವವರು. ಒಲ್ಲದರಹರು–ದ್ವೇಷದವರಾಗುತ್ತಾರೆ. ಲೋಗರು ಸಾಮಾನ್ಯಜನ. ಅಳುಪು–ಬಯಸು, ಆಸೆಪಡು. ವಸುಧೆ–ಭೂಮಿ].

ಅಳುಕದೆಸುವ ಮನೋಜನಂಬಿನ
[1]ಹಿ[1]ಳುಕ ಮುಱಿ ಡಿಂಗರಿಗನಹೆಸಂ-
ದಳಿಮನದಲಾ ಖೂಳನಬುಜಾನನೆಗೆ ಕೈಮುಗಿದ ॥ ೪೯ ॥

ಅಱಿದರಾದೊಡೆ ನಿನ್ನ [1]ಶತ್ರುಜ-
ದಱ[1]ವರೆನ್ನವರೆಲವೊ ಕೆಲಬಲ-
ನಱಿಯುದಂ[2]ತಿರೆ[2] ಬಂದು ನಾಟ್ಯದ ಗರುಡಿಯೊಳಗಿಹುದು
ನೆಱಿದು[3]ದಾಯುಷ[3] ನಿನಗೆ ಕತ್ತಲೆ
ಮಱಿಯೊಳಾಸ್ತೈತಹೆನು ಯೆನ್ನನು
ಮಱಿದು ಬಿಡೆ ನೀ [4][ಅ][4]ದುದಾಗಲಿ ಯೆಂದಳೆಂದುಮುಖಿ ॥ ೫೦ ॥

ಖಳ ಹಸಾದವ ಹಾಯ್ಕಿ ತನ್ನಯ
ನಿಳಯಕೈದಿದನಬುಜಬಾಂಧವ-
ನಿಳಿದನಸ್ತಾಚಲದ ತಪ್ಪಲ ತಾವರೆಯ ಬನಕೆ ।
ನಳಿನಮುಖಿ ನಲವೇಱಿ ಕಗ್ಗ-
ತ್ತಲೆಯ ಹಬ್ಬುಗೆಯೊಳಗೆ ಕಂಗಳ
ಬೆಳಗು ಬಟ್ಟೆಯ ತೋಱೆ ಬಂದಳು ಬಾಣಸಿನ ಮನೆಗೆ ॥ ೫೧ ॥

ಖಳನ ಮುಱಿಯೆಂದಬಲೆ ನೊಸಲಲಿ
ತಿಲಕವನು ರಚಿಸಿದಳು ಸೇಸೆಯ
ತಳಿದಳೇಱಿಸಿ ತಿಗುರ [1]ಗೆಲಿದಳು[1] ಹಿಣಿಲ ಹೊಸ ಪರಿಯ ।
ಬಲುಭುಜನ ಹರಸಿದಳು ಕಗ್ಗ-
ತ್ತಲೆಯ ಹಬ್ಬುಗೆಯೊಳಗೆ ನಾಟ್ಯದ
ನಿಳಯ ಮಧ್ಯದ ಮಣಿಯ ಮಂಚದ ಮೇಲೆ ಪವಡಿಸಿದ ॥ ೫೨ ॥

---

೪೯. [1]ಹು (ಕುಮಾ).
[ಕಟಾಕ್ಷಕವಚ–ಕಡೆಗಣ್ಣ ನೋಟದ ರಕ್ಷೆ. ಅಳುಕದೆ–ಹೆದರದೆ. ಎಸು–ಪ್ರಯೋಗ ಮಾಡು. ಹಿಳುಕು–ಬಾಣದ ಹಿಂಭಾಗ. ಡಿಂಗರಿಗ–ದಾಸ, ಸೇವಕ. ಅಳಿಮನ–ಕೆಟ್ಟ, ನೀಚ, ಮನಸ್ಸು].

೫೦. [1]ವಂಶವತರಿ (ಅ ಕುಮಾ), ಸ್ವೀಪಾ (ಪ್ರ ಕ). [2]ದದಿ (ಅ ಕುಮಾ). [3]ಹೋಯಿತು (ಕ). [4]ಯಾ (ಅ ಕುಮಾ).
[ನೆಱಿದುದು–ತುಂಬಿತು].

೫೧. [ಹಸಾದ (=ಪ್ರಸಾದ)–ಅಪ್ಪಣೆ, ಅನುಗ್ರಹ (ಹಸಾದವ ಹಾಯ್ಕು–(ನಿನ್ನ) ಅನುಗ್ರಹ ಎಂದು ಹೇಳಿ). ಬಟ್ಟೆ–ಮಾರ್ಗ, ದಾರಿ].

೫೨. [1]ಕಬರಿಯ (ಪ್ರ)

ಉರಿವ ಮಾರಿಯು ಬೇಟದಾತನು
ತುಱುಗಿದನು ಮಲ್ಲಿಗೆಯ ಮೊಗ್ಗೆಯ-
ನಿಱುಕಿ ತಾ ಪೂಸಿದನು ಸಾದು ಜವಾಜಿ ಕತ್ತುರಿಯ ।
ಮೆಱೆವ ಗಂಡುಡಿಗೆಯನು ರಚಿಸಿದ
ಸೆಱಗಿನೊಯ್ಯಾರದಲಿ ಸುರಗಿಯ
ತಿರುಹುತಿರುಳೊಬ್ಬನೆ ನಿಜಾಲಯದಿಂದ ಹೊಱವಂಟ ॥ ೫೩ ॥

ಕಾಲಪಾಶದಲೆಳಸಿ[1]ಕೊಂಡು[1] ಕ-
ರಾಳಮತಿ ಸುಡುಗಾಡಲೈತಂ-
ದಾಲಯವ ಹೊಕ್ಕನು ಕೃತಾಂತನ ಬಾಯ ಹೊಗುವಂತೆ ।
ಮೇಲೆಮೇಲವಕುನಶತಕವ-
ನಾಲಿಸದೆ ಸುಮ್ಮಾನದಲಿ ಕೇ-
ಡಾಳಿ ಬಂದನು ಮಂಚವಿದ್ದೆಡೆಗಾಗಿ [2]ತಡವರಿಸಿ[2] ॥ ೫೪ ॥

ವನಜಮುಖಿ ವೀಳೆಯವನನುಲೇ-
ಪನವ ಮಲ್ಲಿಗೆಯರಳ ತೊಡಿಗೆಯ-
ನನುಪಮಾಂಬರವಿವ ಮನೋಹರವಹರೆ ಚಿತ್ತೈಸು ।
ನಿನಗೆ ಪಾಸಟಿಯಾನು ಎನ್ನ ಮೊ-
ಲನಿಮಿಷರೊಳಾರುಂಟು ಚೆಲುವರು
ಮನುಜರೆನ್ನನು ಹೋಲುವರೆ ಸೈರಂಧ್ರಿ ಕೇಳೆಂದ ॥ ೫೫ ॥

[ಮುಱಿ-ಕೊನೆಗಾಣಿಸು, ಕೊಲ್ಲು. ನೊಸಲು-ಹಣೆ. ಸೇಸೆಯ ತಳಿದಳೇಱಿಸಿ-(ತಲೆಯಮೇಲೆ) ಮಂತ್ರಾಕ್ಷತೆಯ ಕಾಳನ್ನು ಚೆಲ್ಲಿದಳು. ತಿಗುರು-ಸುಗಂಧ ದ್ರವ್ಯ. ಗೆಲಿ-ಲೇಪಿಸು. ಹಿಣಿಲು-ಹೆರಳು, ಜಡೆ].

೫೩. [ಉರಿವ ಮಾರಿ-ಉರಿಮಾರಿಯಂತಹ ದ್ರೌಪದಿ. ಬೇಟದಾತ-ಕಾಮುಕ (ಇಲ್ಲಿ ಕೀಚಕ). ತುಱುಗು-ಸೆಕ್ಕಿಸಿಕೊ, ಮುಡಿದುಕೊ. ಇಱುಕು-ಒತ್ತು. ಪೂಸು-ಬಳಿ, ಲೇಪಿಸು. ಸುರಗಿ-ಕತ್ತಿ.

೫೪. [1]ಕೊಂಬ (ಅ ಕುಮಾ), ಸ್ವೀಪಾ (k). [2]ತವಕದಲಿ (ಓ).

[ಕಾಲಪಾಶ-ಯಮಪಾಶ. ಕರಾಳಮತಿ-ಕ್ರೂರಬುದ್ಧಿಯುಳ್ಳವನು. ಸುಡುಗಾಡು-ಸ್ಮಶಾನ. ಕೃತಾಂತ-ಯಮ. ಸುಮ್ಮಾನ-ಹಿಗ್ಗು. ಕೇಡಾಳಿ-ಕೇಡುಬಗೆಯುವವನು, ದುಷ್ಟ].

೫೫. [ಅನುಲೇಪನ-ಸುಗಂಧದ್ರವ್ಯದ ಲೇಪನ. ತೊಡಿಗೆ-ಆಭರಣ, ಒಡವೆ. ಅನುಪಮಾಂಬರ-ಎಣೆಯಿಲ್ಲದ ವಸ್ತ್ರ. ಪಾಸಟಿ-ಸಮಾನ, ಎಣೆ. ಅನಿಮಿಷರು-ದೇವತೆಗಳು].

ಎಲವೊ ಕೀಚಕ ನಿನ್ನ ಹೋಲುವ
ಚೆಲುವರಿಲ್ಲಂತಿರಲಿ ಲೋಕದ
ಲಲನೆಯರ ಪರಿಯಲ್ಲ ತನ್ನಯ ರೂಪು ಬೇಱೊಂದು ।
ಇಳೆಯೊಳೆನಗೆಣೆಯಿಲ್ಲ ನಿನಗಾ-
ನೊಲಿದು ಬಂದೆನು ತನ್ನ ಪರಿಯನು
ಬಳಿಕ ನೋಡಾ [1]ಬೆಡಗ[1] ತೋಱುವೆನೆಂದನಾ ಭೀಮ ॥ ೫೬ ॥

ಎಲೆಗೆ ಕಲುವ್ಯೆಯಾದೆ ಕಡು ಕೋ-
ಮಲತೆಯೆತ್ತಲು ಕರ್ಕಶಾಂಗದ
ಬಲುಹಿದೆತ್ತಲು ಮಾ[1][ಯೆ][1]ವೇಷವ ಧರಿಸಿದೆಯೊ ಮೋಣ ।
ತಿಳುಹೆನಲು ಕೇಳೆಲವೊ ಪರಸತಿ-
ಗಳುಪಿದಾತಂಗಮೃತವಿಷ ಕೋ-
ಮ[2]ಲತೆ[2] ಕರ್ಕಶವಹುದೆನುತ ತುಡುಕಿದನು ಮುಂದಲೆಯ ॥ ೫೭ ॥

ಚಪಳೆ ಫಡ ಹೋಗೆನುತ ಹಾಯ್ದನು
ಕೃಪಣಮತಿ ಮುಂಗೈಯ[1]ನ[1] ನಿಲಜ-
ನಪರಭಾಗಕೆ ಹಾಯ್ದು ಹಿಡಿದನು ಕೀಚಕನ ತುಱುಬ ।
ವಿಪುಳಬಲ ಕಳವಳಿಸಿದನು ಕಡು-
ಕುಪಿತನಾದನು ಹೆಂಗುಸಲ್ಲಿವ-
ನಪಸ[2]ದ[2]ನು ತೆಗೆ [3]ಕು[3]ಲಳನೆನುತೊಳಹೊಕ್ಕು ಹೆಣಗಿದನು ॥ ೫೮ ॥

---

೫೬. [1]ಬೇಗ (ಅ ಕುಮಾ), ಬೆಱಗ (ಕ), ಸ್ವೀಪಾ (ಪ್ರ k).
[ಎಣೆ-ಸಮಾನ. ಬೆಡಗು-ರಹಸ್ಯ, ಚಮತ್ಕಾರ, ಕೌಶಲ].

೫೭. [1]ಯ (ಅ ಕುಮಾ ಕ ಓ k). [2]ಲಿತ (ಅ), ಸ್ವೀಪಾ (ಪ್ರ ಓ k).
[ಕರ್ಕಶಾಂಗ-ಕಠಿಣವಾದ ದೇಹ. ಬಲುಹು-ಗಟ್ಟಿತನ. ಮಾಯೆವೇಷ-ಮೋಸದ ವೇಷ. ಅಳುಪು-ಆಸೆಪಡು. ತುಡುಕು-ಹಿಡಿದುಕೊ].

೫೮. [1]ಲ (ಅ ಕುಮಾ), ಸ್ವೀಪಾ (ಪ್ರ). [2]ರ (ಅ ಪ್ರ), ಸ್ವೀಪಾ (ಕ ಓ ಕುಮಾ).
[3]ಕ (ಅ ಕುಮಾ), ಸ್ವೀಪಾ (ಪ್ರ).
[ಚಪಳೆ-ಚಂಚಲೆ. ಕೃಪಣಮತಿ-ಬುದ್ಧಿಗೇಡಿ, ಮೂರ್ಖ. ಅಪರಭಾಗ-ಹಿಂಭಾಗ. ಅಪಸದನು-ಹೀನಕುಲದವನು, ಕೀಳಾದವನು].

ಎಱಗಿದೊಡೆ ಕೀಚಕನ ಗಾಯಕೆ
ತರವರಿಸಿ ಕಲಿಭೀಮ ಮಂಡಿಸಿ
ಮಱ[3]ವಡೆದು ಮುರಿದೆದ್ದು ರೋಷದಲೌಡನೊಡೆಯಗಿದು ।
ಬರಸಿಡಿಲು ಪರ್ವತದ ಶಿಖರವ-
ನೆಱಗುವಂತಿರೆ ಖಳನ ನೆತ್ತಿಯ-
ನೆಱಗಿದನು ರಣಧೀರನುನ್ನತ ಬಾಹುಸತ್ವದಲಿ ॥ ೫೯ ॥

ತಲೆಯ[1]ನೆದೆಯೊಳಗಿಕ್ಕಿ[1] ಕೈಕಾ-
ಲ್ಗಳನು ಬಸಿಱ[3]ೊಳು ಸೆಕ್ಕಿ [2]ಮಾರುತಿ[2]
ತೊಲಗಿದನು ತೋಱ[3]ವನು ರಮಣಿಗೆ ಕೀಚಕನ ಹವನ ।
ಖಳನು ಕಾಲನ ಕೋಣ ತುಳಿದಂ-
ತಿಳೆಯೊಳೊಱಗಿರೆ ಕಂಡು ಕಾಮಿನಿ
ಕಳಕಳಿಸಿದಳು ಭೀಮಸೇನನನಪ್ಪಿ ಮುಂಡಾಡಿ ॥ ೬೦ ॥

ಊರೊಳಗೆ ಗುಜುಗುಜಿಸಿ ವಾರ್ತಾ-
ಭಾರ ಮಸಗಿತು [1]ನೆರವಿ[1]ನೆರವಿಯೊ-
ಳಾರ ಬಾಯ್ಗಳೊಳಾದೊಡೆಯು ಜಪವಾಯ್ತು ಜನಜನಿತ ।
ಭೂರಿಚಿಂ[2]ತೆಯೊಳಾ[2] ವಿರಾಟನು
ಮಾರಿಯೋ ಸೈರಂಧ್ರಿಯೋ ಈ
ನಾರಿ ಯಿರಬೇಡೆಂದು ತನ್ನರಸಿಗೆ ನಿರೂಪಿಸಿದ ॥ ೬೧ ॥

ಆಳಲು ಕೈಮಿಗಲಾ ವಿರಾಟನ
ಲಲನೆ ಸೈರಂಧ್ರಿಯನು ಕರಸಿದ-
ಳೆಲೆ ಮಹಾತುಮೆ ತಾಯೆ ನಿಮಗಂಜುವೆವು ಶರಣೆನುತ ।

---

೫೯. [ತರವರಿಸು–ತಬ್ಬರಿಸು, ಆಶ್ಚರ್ಯಚಕಿತನಾಗು (?) ಮಂಡಿಸು–ಮೊಣಕಾಲೂರಿ ಕುಳಿತುಕೊ. ಮಱ[3]ವಡೆ-ಅಸರೆಹೊಂದು. ಮುರಿ–ಮೈಮುರಿ. ಔಡು–ಕೆಳತುಟಿ. ಅಗಿ–ಕಚ್ಚು].

೬೦. [1]ಅಟ್ಟಿಯೊಳದ್ದಿ (ಕ). [2]ದೂರಕೆ (ಅ ಕುಮಾ), ಸ್ವೀಪಾ (ಪ್ರ k).
[ಕಾಲ-ಯಮ. ಒಱಗು-ಸತ್ತುಮಲಗು. ಕಳಕಳಿಸು–ಹಿಗ್ಗು].

೬೧. [1]ನೆರೆದ (ಅ ಕುಮಾ), ಸ್ವೀಪಾ (ಪ್ರ k). [2]ಕಾತುರ (ಅ ಕುಮಾ), ಸ್ವೀಪಾ (ಪ್ರ k). [3]ಯ ಸತಿಗೆ ನೇಮಿಸಿದ (ಅ ಕುಮಾ), ಸ್ವೀಪಾ (ಪ್ರ k).
[ಮಸಗು–ವಿಜೃಂಭಿಸು; ಹರಡು, ವ್ಯಾಪಿಸು. ನೆರವಿ-ಜನರ ಗುಂಪು. ನಿರೂಪಿಸು–ಅಪ್ಪಣೆಮಾಡು].

ಹೊಳಲೊಳಿದ್ದೊಡೆ ಭೀತಿ ಘನ ನೀ-
ವೊಲಿದ ಠಾವಿಗೆ ಬಿಜಯಮಾಡುವು-
ದುಳುಹಬೇಹುದು ತಮ್ಮನೆನಲಿಂತೆಂದಳಿಂದುಮುಖಿ ॥ ೭೨ ॥

ಎಮ್ಮದೇನಪರಾಧ ದೇವಿಯೆ
ನಿಮ್ಮ ತಮ್ಮನು ತಪ್ಪಿ ನಡೆದೊಡೆ
ಎಮ್ಮ ರಮಣರು ಸೈರಿಸದೆ ಸೀಳಿದರು ದುರ್ಜನರ ।
ನಿಮ್ಮ ನಾವೋಲೈಸಿ ಮರಳಿದು
ನಿಮ್ಮ ಕೆಡಿಸುವರಲ್ಲ ಧೂರ್ತರು
ತಮ್ಮ [1]ಕತದಲಿ[1] ತಾವೆ ಕೆಟ್ಟರು ನೀತಿಬಾಹಿರರು ॥ ೭೩ ॥

ತಾವು ತಮ್ಮಿಂದಳಿದರದು ಸಾ-
ಕಾವು ನಿಮಗಂಜುವೆವು [1]ನಿಮ್ಮೊಳ-
ಗಾವು[ದೂ] ತಪ್ಪಿಲ್ಲ[1] ನೀವಿಲ್ಲಿರಲುಬೇಡೆನಲು ।
ನಾವು ಮುನ್ನಿಹರಲ್ಲ ನಿಮ್ಮಯ
ಸೇವೆಯಲಿ ಹದಿಮೂಱು ದಿವಸವು
ನೀವು ನೂಕಿದೊಡಿರದೆ ಮಾಣೆವು ದೇವಿ ಚಿತ್ತೈಸು ॥ ೭೪ ॥

---

೨. ಗೋಗ್ರಹಣ

ಕೇಳು ಜನಮೇಜಯ ಧರಿತ್ರೀ-
ಪಾಲ ಕೌರವದೂತರವನಿಯ
ಮೇಲೆ ತೊಳಲುತಲಱಸಿ ಕಾಣದೆ ಪಾಂಡುನಂದನರ ।
ಹೋಲು[1]ವೆಯನೊಳಗಾಗಿ ಹಿಡಿಯದೆ[1]
ಕಾಲ ಸವೆಯಲು ನಾಲ್ಕು ದಿಕ್ಕಿನ
ಮೂಲೆಯಮಟ್ಟಿತೆಂದು ಬಿನ್ನವಿಸಿದರು ಕುರುಪತಿಗೆ ॥ ೭೫ ॥

---

೭೨. [ಅಳಲು–ದುಃಖ. ಹೊಳಲು–ಪಟ್ಟಣ, ಊರು. ಠಾವು–ಸ್ಥಳ].

೭೩. [1]ಮತದಲಿ (ಅ ಕುಮಾ), ಕಥನದಿ (k), ಸ್ವೀಪಾ (ಓ).
[ಕತ–ಕಾರಣ].

೭೪. ನಿಮ್ಮಲಿ ಯಾವುದೂ (ಅ ಕುಮಾ), ಸ್ವೀಪಾ (ಪ್ರ k).
[ಅಳಿ–ನಾಶಹೊಂದು. ಮಾಣು–ಬಿಡು].

೭೫. [1]ವಿಕೆಯಿಂದಿಡಿಯಲಾರದೆ (ಅ), ವಿಕೆಯಿಂಬಿಡಿಯಲಾರದೆ (ಕುಮಾ),
ಸ್ವೀಪಾ (ಕ k).

ಒಂದು ವಾರ್ತೆಯಲಾ ತ್ರಿಗರ್ತಾ-
ನಂದಕರವಿದು ಜೀಯ ಕೀಚಕ-
ವೃಂದವನು ಗಂಧರ್ವರಿರುಳೈತಂದು ಖಾತಿಯಲಿ ।
ಕೊಂದುಹೋದರು ರಾವಣನ ವಿಧಿ-
ಯಿಂದು ಕೀಚಕಗಾಯಿತೆನೆ ಕೇ-
ಳ್ದೊಂದು ನಿಮಿಷ ಮಹೀಶ ಮೋನವ ಹಿಡಿದು [1]ಬೆಱಗಾದ[1] ॥೬೬॥

ಹೇಳು ಹೇಳಿನ್ನೊಮ್ಮೆ ಮತ್ಸ್ಯನ
ತೋಳು ಮುಱಿದುದೆ ಸುಭಟರೊಳು ಕ-
ಟ್ಟಾಳು ಕೀಚಕ[1]ನಳಿ[1]ದನೇ ಗಂಧರ್ವರಿಱಿದವರೇ ।
ಮೇಲಣವರಿಗೆ ಮರ್ತ್ಯರಿಗೆ ಕೈ-
ಕಾಲುಮೆಟ್ಟಿನ ತೋಟಿಯೇ [2]ತೆಗೆ[2]
ಹೋಲ[3]ದಿದು[3] ಹುಸಿ ಹೋಗೆನುತ ಮುಖದಿರುಹಿದನು ಭೂಪ ॥೬೭॥

ಅವನಿಪತಿ ಮೂಗಿನಲಿ ಕರಪ-
ಲ್ಲವವನಿಟ್ಟನು ತಲೆಯ ತೂಗಿದ-
ನವಳು ದ್ರೌಪದಿ ಖಳ[1]ನ[1] ಕೊಂದವ ಭೀಮ ಗಂಧರ್ವ ।
ದಿವಿಜಸತಿಯೆತ್ತಲು ವಿರಾಟನ
ಭವನದೋಲಗವೆತ್ತಲದು ಪಾಂ-
ಡವರ ಕೃತ್ರಿಮತಂತ್ರ ಮಱೆಯಿಱಿಗಾಱರವರೆಂದ ॥೬೮॥

---

೬೬. [ತ್ರಿಗರ್ತ–ದುರ್ಯೋಧನನ ಆಪ್ತ ಮಿತ್ರನಾದ ಸುಶರ್ಮ, ತ್ರಿಗರ್ತ ದೇಶದ ದೊರೆ. ಮೋನ-ಮೌನ].

೬೭. [1]ಮಡಿ (ಅ ಕುಮಾ), ಸ್ವೀಪಾ (ಕ k). [2]ತಕೆ (ಅ ಕುಮಾ), ಸ್ವೀಪಾ (ಕ k). [3]ದೊ (ಅ ಕುಮಾ), ಸ್ವೀಪಾ (ಓ ಕೆ).

[ಮತ್ಸ್ಯ–ಮತ್ಸ್ಯದೇಶದ ರಾಜ: ವಿರಾಟ. ಮೇಲಣವರು-(ಖೇಚರರಾದ) ಗಂಧರ್ವರು. ತೋಟಿ–ಕಲಹ, ಕದನ].

೬೮. [1]ರ (ಅ ಕುಮಾ), ಸ್ವೀಪಾ (ಕ ಓ k).

[ಕರಪಲ್ಲವ- ಬೆರಳು. ಮಱೆಯಿಱಿಗಾರರು–ಮರೆಯಲ್ಲಿ (ವೇಷಮರಸಿಕೊಂಡು) ಕೊಂದವರು].

ಪರಿಮಳದ ಕಡ್ಡೋಡುವನಿಲನ
ಹರಿವ ಹಜ್ಜೆಯ ಹತ್ತುವೊಡೆ ಮಧು-
ಕರನೆ ಬಲ್ಲುದು ಜೀಯ ಬಲ್ಲರೆ ನಿಮ್ಮವರ ಪರಿಯ ।
ಹರಿದ ಮಾತಿನ ಹದನು ¹ತಾನಿದು¹
ಚದರರಿಗಿದು ಗೋಚರಿಸುವುದೆ ಯೆಂ-
ದರಸನನು ಕೊಂಡಾಡಿದರು ಮಂತ್ರಿಗಳು ಕಮಕಮಗೆ ॥ ೧೯ ॥

ಅರಿ ವಿರಾಟನ ಪುರಕೆ ಹಾಯಿದು
ತುಱು ಸೆಱೆಯ ತೆಗೆಸಿದೊಡೆ ಪಾಂಡವ-
ರಿರ²ರು² ಧರ್ಮದ ಮೇರೆ ಮರ್ಯಾದೆಗಳ ಬಲ್ಲವರು ।
ಅರವರಿಸದಂಗೈಸುವರು ನಾ-
ವಱಿದುಕೊಂಬೆವು ಬಳಿಕ ವನದಲಿ
ವರುಷ ಹದಿಮೂಱಕ್ಕೆ ಕೊಡುವೆವು ಮತ್ತೆ ವೀಳೆಯವ ॥ ೨೦ ॥

ಬೀಡು ನಡೆಯಲಿ ಮುಂದೆ ಮತ್ಸ್ಯನ
ನಾಡಿನೊಳು ಕಟ¹ಕದಲಿ¹ ದೂತರು
ಕೂಡೆ ಸಾಱಲಿ ಕರೆಯಲಕ್ಷೌಹಿಣಿಯ ನಾಯಕರ ।
ಜೋಡಿಸಲಿ ಗುಡಿ²ಗಟ್ಟಿ ಪೆಂಡೆ² ಯು-
ಗೂಡಿ ಕೊಟ್ಟಿಗೆಬಂಡಿ³ನೆರೆ³ಯಲಿ
ನಾಡ ಬಿಟ್ಟಿಗಳೆಂದು ಕೌರವರಾಯ ನೇಮಿಸಿದ ॥ ೨೧ ॥

---

೧೯. ¹ಬಳಿಕಾ (ಅ ಕುಮಾ), ಸ್ವೀಕಾ (ಕ ಓ ಕೆ).
[ಹರಿ-ಓಡು. ಮಧುಕರ-ದುಂಬಿ. ಹರಿದ-ಹರಡಿದ].

೨೦. ¹ಸುವೆವು (ಅ ಕುಮಾ), ಸ್ವೀಕಾ (ಕ k). ²ಲು (ಅ ಕುಮಾ), ಸ್ವೀಕಾ (ಕ ಓ).
[ಅರವರಿಸು-ಕಡೆಗಣಿಸು, ಉಪೇಕ್ಷಿಸು. ಅಂಗೈಸು-ಮೇಲೆಬೀಳು, ಕಾದು; ಉದ್ಯೋಗಿಸು].

೨೧. ¹ಕಾಳಿ (ಅ ಕುಮಾ), ಸ್ವೀಕಾ (ಪ್ರ). ²ದಬ್ಬಿಜಂಪೆ (ಅ ಕುಮಾ), ಸ್ವೀಕಾ (ಕ ಓ). ³ನಡೆ (ಅ ಕುಮಾ), ಸ್ವೀಕಾ (k).
[ಬೀಡು-ಪಾಳೆಯ. ಕಟಕ-ರಾಜಧಾನಿ, ಪಟ್ಟಣ. ಗುಡಿಗಟ್ಟು-ಬಾವುಟವನ್ನು ಏರಿಸು. ಪೆಂಡೆಯ-ಬಿರುದಿನ ಬಳೆ. ಕೊಟ್ಟಿಗೆ ಬಂಡಿ-ಉಗ್ರಾಣದ ಧಾನ್ಯ ಮುಂತಾದುವನ್ನು ಹೊತ್ತ ಬಂಡಿ. ನೆರೆ-ಸೇರು, ಕೂಡಿಕೊ. ಬಿಟ್ಟಿಗಳು-ಪುಕ್ಕಟೆ ಕೆಲಸಮಾಡುವ ಆಳುಗಳು].

ಕೇಳು ಜನಮೇಜಯ ಸುಯೋಧನ-
ನಾಳು ಮುತ್ತಿತು ತುರುಗಳನು ಮೇ-
ಲಾಳು ಕವಿದುದು ಭೀಷ್ಮ ಕರ್ಣ ದ್ರೋಣ ಮೊದಲಾಗಿ।
ಕೋಲ ಸೂಟಿಯ ಸರಿವಳೆಗೆ ಗೋ-
ಪಾಲಪಡೆ ಮುಗ್ಗಿದುದು ಗೋವರ
ಸಾಲ ಹೊಯ್ದರು [ಶಲ್ಯ] ದುಶ್ಶಾಸನ ಜಯದ್ರಥರು ॥ ೭೨ ॥

ಕೇಳಿ ಬಿಸುಸುಯ್ದನು ವಿರಾಟ ನೃ-
ಪಾಲನಿಂದಿನಲಳಿದನೇ ಕ-
ಟ್ಟಾಳು ಕೀಚಕನೆಂದು ನೋಡಿದನಂದು ಕೆಲಬಲನ।
ಆಳು ಗಜಬಜಿಸಿತ್ತು ಹಾಯಿಕು
ವೀಳೆಯವನಿಂದೆನಗೆ ತನಗೆಂ-
ದೋಲಗದೊಳಬ್ಬರಣೆ ಮಸಗಿತು ಕದಡಿತಾಸ್ಥಾನ ॥ ೭೩ ॥

ಬೀಳುಕೊಂಡುದು ನುಡಿದವಧಿ ಯಿ-
ನ್ನಾಳುತನವನು ತೋಱಬೇಹುದು
ಕಾಲವನು ನೂಕಿದೆವು ಮಱೆದಿಹುದುಚಿತವಲ್ಲೆನುತ।
ಕಾಳಗಕ್ಕನುವಾಗಿ ಪಾರ್ಥನ
ಮೇಲಣಾಹವಕಿರಿಸಿ ತಮ್ಮಯ
ನಾಲುವರು ನಡೆದರು ವಿರಾಟನ ಕೂಡೆ ಬಲವಾಗಿ ॥ ೭೪ ॥

---

೭೨. [ಮೇಲಾಳು-ಸಮರ್ಥರು, ಶೂರರು, ಪರಾಕ್ರಮಿಗಳು. ಕೋಲು-ಬಾಣ. ಸೂಟಿ-ಚುರುಕು. ಸರಿವಳೆ-ಒಂದೇ ಸಮನಾಗಿ ಸುರಿಯುವ ಮಳೆ. ಮುಗ್ಗು-ಮುಗ್ಗರಿಸು; ನಿಷ್ಪ್ರಯೋಜಕವಾಗು; ನಾಶವಾಗು. ಗೋವರು-ಗೋಪಾಲರು. ಸಾಲು-ಶ್ರೇಣಿ. ಹೊಯ್-ಹೊಡೆ].

೭೩. [ಹಾಯಿಕು ವೀಳೆಯವನು-ಅಪ್ಪಣೆಯನ್ನು ಕೊಡು. ಅಬ್ಬರಣೆ-ಕೂಗಾಟ. ಕದಡು-ಕಲಕಿಹೋಗು].

೭೪. [ಬೀಳುಕೊಂಡುದು-ಮುಗಿದುಹೋಯಿತು. ಆಳುತನ-ಪರಾಕ್ರಮ, ಶೌರ್ಯ. ಆಹವ-ಯುದ್ಧ. ತಮ್ಮಯ-ತಾವು. ಬಲ-ಬೆಂಬಲ].

ವೋಲುದಳಕೆದಿರಾಗಿ [1]ತುಱು[ವ]ರ[1]-
ಗಾಳೆಗದೊಳೊಡೆವು[2]ಗ್ಗ[2] ಗೋವರು
ಧೂಳಿಗೋಟೆಯು ಕೊಂಡರಮರರ ರಾಜಧಾನಿಗಳ ।
ಸಾ[3]ಲೊಡೆ[3]ದು [4]ಥಟ್ಟೊಡ್ಡಿ[4]ದರು ಗೋ-
ಪಾಲನೊಬ್ಬನ ಹಿಡಿದು ಮೂಗಿನ
ಮೇಲೆ ಸುಣ್ಣವ ಬರೆದು ಬಿಟ್ಟರು ಹಗೆಯ ಪಟ್ಟಣಕೆ ॥ ೭೫ ॥

ಏಳು ಮನ್ನೆಯ ಗಂಡನಾಗು ನೃ-
ಪಾಲ ಕೌರವರಾಯ ತುಱುಗಳ
ಕೋಳುಹಿಡಿದನು ಸೇನೆ ಬಂದುದು ಧರಣಿಯಗಲದಲಿ ।
ದಾಳಿ ಬರುತಿದೆ ಕರಸಿಕೋ ನಿ-
ನ್ನಾಳುಕುದುರೆಯ ರಾಣಿವಾಸದ
ಗೂಳೆಯುವ ತೆಗೆಸೆಂದು ನುಡಿದನು ಬಿನ್ನಹದ ಬಿಱುಬ ॥ ೭೬ ॥

ಏನೆಲವೊ ತುದಿಮೂಗಿನಲಿ ಬಿಳು-
ಪೇನು ಧಗೆಹೊಯ್ದೇಕೆ ಬಂದೆ ಯಿ-
ದೇನು ನಿನ್ನಿನ ರಣವನಯ್ಯನು ಗೆಲಿದುದೇನಾಯ್ತು ।
ಏನು ಭಯಬೇಡಿನ್ನು ಕಲಹನಿ-
ಧಾನವಾರ್ತೆಯ[1]ದೇನೆನಲು[1] [2]ಕುರು-[2]
ಸೇನೆ ಬಂದುದು ತುಱುವ ಹಿಡಿದರು ಬಡಗದಿಕ್ಕಿನಲಿ ॥ ೭೭ ॥

---

೭೫. [1]ಬರೆ ಹರಿ (ಅ ಕುಮಾ), ಸ್ವೀಪಾ (ಪ್ರ: ತುಱುಹರಿ). [2]ರಿದು (ಅ ಕುಮಾ), ಸ್ವೀಪಾ (k ಪ್ರ). [3]ಲಿರಿ (ಅ ಕುಮಾ), ಸ್ವೀಪಾ (ಓ). [4]ಕಟ್ಟೊಡ್ಡಿ (ಅ ಕುಮಾ), ಸ್ವೀಪಾ (ಪ್ರ k).

[ಮೇಲುದಳ-ಉತ್ತಮವಾದ ಸೈನ್ಯ. ತುಱುವರಿಗಾಳೆಗ-ಹಸುಗಳು ಚೆಲ್ಲಾಪಿಲ್ಲಿಯಾಗಿ ಓಡಿದಂಥ ಕಾಳಗ. ಒಡಮುಗ್ಗ-ಚೆದರಿ ನಾಶವಾಗಿ. ಧೂಳಿಗೋಟೆಯ ಕೊಂಡರು-ಧೂಳಿನಲ್ಲಿ ಸಿಲುಕಿಕೊಂಡರು; ಧೂಳೀಪಟವಾದರು. ಅಮರರ ರಾಜಧಾನಿಗಳ ಕೊಂಡರು-ಸ್ವರ್ಗ ಸೇರಿದರು. ಸಾಲೊಡೆದು-ಸಾಲುಮುರಿದು. ಥಟ್ಟೊಡ್ಡು-ಸೈನ್ಯವನ್ನು ಒಡ್ಡು].

೭೬. [ಮನ್ನೆಯ ಗಂಡ-ಗೌರವಾನ್ವಿತನಾದ ಶೂರ. ಕೋಳುಹಿಡಿ-ಸೆರೆಹಿಡಿ. ದಾಳಿ-ಮುತ್ತಿಗೆ ಹಾಕಿದ ಸೈನ್ಯ. ಆಳು-ಸೈನಿಕರು. ಗೂಳೆಯ-ಸಮೂಹ, ಗುಂಪು. ತೆಗೆಸು-ವಿಸರ್ಜಿಸು, ಕಳುಹಿಸಿಬಿಡು. ಬಿಱುಬು-ಬಿರುಸು, ಕಾಠಿನ್ಯ].

೭೭. [1]ನೆನಲು (ಅ), ಸ್ವೀಪಾ (ಅ ಕುಮಾ). [2]ಕೌರವ (ಅ), ಸ್ವೀಪಾ (ಅ ಕುಮಾ).

[ಧಗೆಹೊಯ್ದು-ಆಯಾಸಗೊಂಡು. ನಿಧಾನ-ನಿಶ್ಚಯ, ತೀರ್ಮಾನ. ಬಡಗ-ಉತ್ತರ].

ಎನಿತು ಬಲ ಘನವಾದೊಡೇನದು
ನಿನಗೆ ಗಹನವೆ ಜೀಯ ಜಗದಲಿ
ದಿನಪನಿದಿರಲಿ ದಿಟ್ಟತನವೇ ತಮದ ಗಾವಳಿಗೆ ।
ಬಿನುಗುರಾಯರ ಬಿಂಕ ಗೋವರ
ವೊನೆಗೆ ಮೆಱೆದೊಡೆ ಸಾಕು ನಿಂದಿರು
ಜನಪ ತೋಱಿಸು ಕೈಗುಣವ ಕೌರವನ ಥಟ್ಟಿನಲಿ ॥ ೭೮ ॥

ಎಂದೊಡುಬ್ಬರಿಸಿದನು ತಾ ಕಲಿ-
ಯೆಂದು ಬಗೆದನು ಮೀಸೆಯನು ಬೆರ-
ಳಿಂದ [1]ಮುರಿವುತ ಮೊಳೆನಗೆಯ [ಮುಹುಳಿ]ಯಲಿ ಮೈಮುರಿದು[1] ।
ಸಂದಣಿಸೆ ರೋಮಾಂಚ ಕೆಲಬಲ-
ದಿಂದುಮುಖಿಯರ ನೋಡಿದನು ನಲ-
ವಿಂದ ನುಡಿದನು ತನ್ನ ಪೌರುಷತನದ ಪರಿಣತಿಯ ॥ ೭೯ ॥

ಹಿಡಿದು ರಾಜ್ಯವ ಕೊಂಡು ಹೆಂಗುಸ
ಬಡಿದು ಪಾಂಡವರಾಯರನು ಹೊಱ-
ವಡಿಸಿ ಕೊಬ್ಬಿದ ಭುಜಬಲವನೆನ್ನೊಡನೆ ತೋಱಿದನೆ ।
ಬಡ ಯುಧಿಷ್ಠಿರನೆಂದು ಬಗೆದನೆ
ಕಡುಗಿದೊಡೆ ಕೌರವನ ಕೀರ್ತಿಯ
ತೊಡೆವೆನಱಿಯನಲಾ ಎನುತ ಸುಕುಮಾರ ಖತಿಗೊಂಡ ॥ ೮೦ ॥

ಜವನ ಮೀಸೆಯ ಮುರಿದನೋ ಭೈ-
ರವನ ದಾಡೆಯನಲುಗಿದನೊ ಮೃ-
ತ್ಯುವಿನ ಮೇಲುದ ಸೆಳೆದನೋ ಕೇಸರಿಯ ಕೆಣಕಿದನೋ ।

---

೭೮. [ಗಹನವೇ-ದೊಡ್ಡದೇ. ದಿನಪ-ಸೂರ್ಯ. ತಮ-ಕತ್ತಲೆ. ಗಾವಳಿ-ಹಾವಳಿ. ಬಿನುಗು ಗರ್ವದ. ಮೊನೆ-ಯುದ್ಧ. ಥಟ್ಟು-ಸೈನ್ಯ].

೭೯. [1]ತಿರುಹುತ ಮುಗುಳುನಗೆ ಹರುಷಹಲಿ ಮೈಮರೆದ (ಆ ಕುಮಾ), ಸ್ವೀಪಾ (ಪ್ರ k).
[ಉಬ್ಬರಿಸು-ಹಿಗ್ಗು, ಸಂಭ್ರಮಿಸು. ಮುರಿ-ತಿರುಹು. ಮೊಳೆನಗೆ-ಕಿರುನಗೆ. ಮುಹುಳಿ-(ಜರ್ಬಿನಿಂದ)ಬೀಸಾಟ. ಸಂದಣಿಸು-ಗುಂಪಾಗು. ಪರಿಣತಿ-ಹೆಚ್ಚುಗಾರಿಕೆ.

೮೦. [ಕಡುಗು-ಉತ್ಸಾಹ ತೋರಿಸು. ತೊಡೆ-ಅಳಿಸಿಹಾಕು, ನಾಶಪಡಿಸು].

ಬವರವನು ತೊಡಗಿದನಲಾ ಕೌ-
ರವನಕಟ ಮರುಳಾದನೆಂದಾ
ಯುವತಿಯರ ಮೊಗನೋಡುತುತ್ತರ ಬಿರುದ ಕೆದಱಿದನು ॥ ೮೧ ॥

ಆರೊಡನೆ ಕಾದುವೆನು ಕೆಲಬರು
ಹಾರುವರು ಕೆಲರಂತಕನ ನೆರೆ-
ಯೂರವರು ಕೆಲರಧಮಕುಲದಲಿ ಸಂದು ಬಂದವರು ।
ವೀರರೆಂಬವರಿವರು ಮೇಲಿ-
ನ್ನಾರ ಹೆಸರುಂಟವರೊಳೆಂದು ಕು-
ಮಾರ ನೆಣಗೊಬ್ಬಿನಲಿ ನುಡಿದನು ಹೆಂಗಳಿದಿರಿನಲಿ ॥ ೮೨ ॥

ಅಱಿಯನೇ ಗಾಂಗೇಯನನು ತಾ-
ನಱಿಯದವನೇ ದ್ರೋಣ ಕುಲದಲಿ
ಕೊಱತೆಯೆನಿಸುವ ಕರ್ಣನೆಂಬವನೆನಗೆ ಸಮಬಲನೆ ।
ಬಱಿಯ ಬಯಲಾಡಂಬರದಿ [1]ತುಱು-
ಸೆಱ[3]ಯು[1] ಹಿಡಿದೊಡೆ ತನ್ನ ಹೆಂಡಿರ
ಸೆಱ[3]ಯು ತಾರದೆ ಮಾಣೆನೆಂ[2]ದುತ್ತರನು ಗರ್ಜಿಸಿದ[2] ॥ ೮೩ ॥

ನುಡಿದು ಫಲವೇನಿನ್ನು ಸಾರಥಿ
ಮಡಿದ[1]ನಂದಿನ[1] ಬವರದಲಿ ತಾ-
[2]ನು[2]ಡುಹನಾದೆನು ಶಿವಶಿವಾ ಇಂದೆನ್ನ ಕೈಮನಕೆ ।
ಗಡಣಿಸುವ ಸಾರಥಿಯನೊಬ್ಬನ
ಪಡೆದೆನಾದೊಡೆ ಕೌರವೇಂದ್ರನ
ಪಡೆಗೆ ಹಬ್ಬವ ಮಾಡುವೆನು ತೋಱುವೆನು ಕೈಗುಣವ ॥ ೮೪ ॥

---

೮೧. [ಕೆದಱು–ಕೊಚ್ಚಿಕೊ].

೮೨. [ಅಂತಕ–ಯಮ. ಸಂದುಬಂದವರು–ಪ್ರಸಿದ್ಧರಾದವರು. ನೆಣಗೊಬ್ಬು–ಅತಿಯಾದ ಹೆಮ್ಮೆ, ಸೊಕ್ಕು].

೮೩. [1]ಬರಿತುರುವ (ಅ ಕುಮಾ), ಸ್ವೀಪಾ (ಓ k ಪ್ರ). [2]ದನು ನಾರಿಯರ ಮುಂದೆ (ಅ ಕುಮಾ), ಸ್ವೀಪಾ (ಪ್ರ; k).
[ಕೊಱತೆ–ಕಡಮೆ, ಕುಂದು. ಬಱಿಯ ಬಯಲಾಡಂಬರ–ವ್ಯರ್ಥವಾದ ಟೊಳ್ಳು ಪ್ರದರ್ಶನ. ತುಱುಸೆಱ[3]–ಗೋವುಗಳನ್ನು ಸೆರೆಹಿಡಿಯುವುದು, ಗೋಗ್ರಹಣ. ಮಾಣ್–ಬಿಡು].

೮೪. [1]ನಿನ್ನಿನ (ಅ ಕುಮಾ), ಸ್ವೀಪಾ (k ಪ್ರ). [2]ಮು (ಅ), ಸ್ವೀಪಾ (ಪ್ರ).
[ಉಡುಹ–ಶಕ್ತಿಗುಂದಿದವನು, ಅಂಗಹೀನ. ಗಡಣಿಸು–ಒಪ್ಪು, ಎಣಿಕೆಗೆ ಬರು. ಹೊಂದಿಕೊಳ್ಳು].

ಸಾರಥಿಯು ಶಿವ ಕೊಟ್ಟನಾದೊಡೆ
ಮಾರಿಗುಬ್ಬಸವಾಗ[1][ಲ][1]ಂತಕ
ನೂರು ತುಂಬದೆ ದೊಳ್ಳು ನೂಕದೆ ರಣಪಿಶಾಚರಿಗೆ ।
ದೋರೆಗರುಳಲಿ ದಾನವಿಯರೊಡ-
ಲೇಱುಹತ್ತದೆ ಹಬ್ಬವಾಗದೆ
ಭೂರಿ ಬೇತಾಳರಿಗೆ ಹೋಹುದೆ ಬರಿದೆ ರಣವೆಂದ ॥ ೮೫ ॥

ಕೇಳಿದನು ಕಲಿಪಾರ್ಥನೀತನ
ಬಾಲಭಾಷೆಗಳೆಲ್ಲವನು ಸಾಂ-
ಚಾಲಿಗೆಕ್ಕಟಿ ನುಡಿದನಾವಿನ್ನಿಹುದು ಮತವಲ್ಲ ।
ಕಾಲ ಸವೆದುದು ನಮ್ಮ ರಾಜ್ಯದ
ಮೇಲೆ ನಿಲುಕಲುಬೇಕು ಕೌರವ-
ರಾಳು ನವಗೋಸುಗವೆ ಬಂದುದು ಕಾಂತೆ ಕೇಳೆಂದ ॥ ೮೬ ॥

ನರನ ಸಾರಥಿಯೆಂದು ನೀನು-
ತ್ತರೆಗೆ ಸೂಚಿಸಿ ತನ್ನನೀಗಳೆ
ಕರಸೆನಲು ಕೈಕೊಂಡು ದ್ರೌಪದಿ ಬಂದಳೊಲವಿನಲಿ ।
ತರುಣಿ ಕೇಳರ್ಜುನನ ಸಾರಥಿ
ವರಬೃಹನ್ನಳೆ ಖಾಂಡವಾಗ್ನಿಯ
ಹೊ[1]ರೆದ ಗಡ[1] ತಾನೆಂದು ಸತಿಯುತ್ತರೆಗೆ ಹೇಳಿದಳು ॥ ೮೭ ॥

---

೮೫. [1]ದ (ಅ ಕುಮಾ).
[ಮಾರಿ-ಮೃತ್ಯುದೇವತೆ. ಉಬ್ಬಸ-ಸಂಕಟ, ಕಷ್ಟ. ಅಂತಕನೂರು-ಯಮನ ಪಟ್ಟಣ, ಯಮಪುರಿ (ಸಂಯಮಿನಿ). ದೊಳ್ಳು-ಬೊಜ್ಜು ಹೊಟ್ಟೆ. ದೋರೆಗರುಳು-ಕೆಂಪಗಿರುವ ಕರುಳು, ಕೆಂಗರುಳು. ಏಱುಹತ್ತು-ಸಂತೋಷದಿಂದ ಅತಿಶಯವಾಗಿ ಉಬ್ಬು. ಭೂರಿ-ಹೆಚ್ಚಿನ ಸಂಖ್ಯೆಯ, ಅಪಾರ. ಬೇತಾಳ-ದೊಡ್ಡ ದೆವ್ವ, ರಣಭೂತ].

೮೬. [ಬಾಲಭಾಷೆ-ಹುಡುಗುಮಾತು. ಏಕ್ಕಟಿ-ಏಕಾಂತದಲ್ಲಿ, ಗುಟ್ಟಾಗಿ. ಮತವಲ್ಲ-ಸರಿಯಲ್ಲ. ಸವೆ-ಕಳೆ. ನಿಲುಕು-ತಲಪು, ಹೋಗಿ ಸೇರು. ಆಳು-ಸೈನ್ಯ].

೮೭. [1]ರದನಿವ (ಅ ಕುಮಾ), ಸ್ವೀಪಾ (ಪ್ರ ಓ k).
[ಹೊರೆದ-ರಕ್ಷಿಸಿದ, ಕಾಪಾಡಿದ].

ಬರವ ಕಂಡನು ಪಾರ್ಥನೀನು-
ತ್ತರೆ ಕುಮಾರಿ ಕಠೋರಗತಿಯಲಿ
ಬರವು ಭಾರಿಯ ಕಾರ್ಯವನು ಸೂಚಿಸುತಲಿದೆಯೆನಲು ।
ಬರವು ಬೇಱಿಲ್ಲೆನ್ನ ಮಾತನು
ಹುರುಳುಗೆಡಿಸದೆ ಸಲಿಸುವೊಡೆ ನಿಮ-
ಗಱುಹಿದಪೆನೆನೆ ಮೀಱಬಲ್ಲೆನೆ ಮಗಳೆ ಹೇಳೆಂದ ॥ ೮೮ ॥

ಪುರಕೆ ಹಾಯ್ದರು ಹಸ್ತಿನಾಪುರ-
ದರಸುಗಳು ಹೊಲನೊಳಗೆ ಶತಸಾ-
ವಿರದ ತುಱುಗಳ ಹಿಡಿದರಳಿ[1]ದುದು[1] ಗೋವಪಡೆ ಕಾದಿ ।
ಮರಳಿಚುವೊಡೆಮ್ಮಣ್ಣದೇವನ
ಧುರಕೆ ಸಾರಥಿಯಿಲ್ಲ ನೀವಾ-
ನರನ ಸಾರಥಿಯೆಂದು ಕೇಳಿದೆವೆಂದಳಿಂದುಮುಖಿ ॥ ೮೯ ॥

ಇನ್ನು ನೀವೇ ಬಲ್ಲಿರೆನೆ ನಡೆ
ನಿನ್ನ ಮಾತನು ಮೀಱಬಲ್ಲೆನೆ
ಮುನ್ನ ಸಾರಥಿಯಹೆನು ನೋಡುವೆನೆನುತ ವಹಿಲದಲಿ ।
ಬೆನ್ನಲಬಲೆಯನೈದಲಾ ಸಂ-
ಪನ್ನಬಲನೋಲಗಕೆ ಬರೆ ಹರು-
ಷೋನ್ನತಿಯಲುತ್ತರಕುಮಾರನು ಕರೆದು ಮನ್ನಿಸಿದ ॥ ೯೦ ॥

ಎಲೆ ಬೃಹನ್ನಳೆ ಕೆತ್ತುದೆನಗ-
ಗ್ಗಳೆಯರೊಳು ವಿಗ್ರಹವು ಸಾರಥಿ-
ಯಳಿದನೆನ್ನವ ನೀನು ಸಾರಥಿಯಾಗಿ ಸಮರದಲಿ ।
ಉಳುಹಬೇಹುದು ನೀ ಸಮರ್ಥನು
ಫಲುಗುಣನ ಸಾರಥಿಯಲೇ ನೀ-
ನೊಲಿದು ಮೆಚ್ಚಲು ಕಾದಿ ತೋಱುವೆನಹಿತಸೇನೆಯಲಿ ॥ ೯೧ ॥

---

೮೮. [1]ಕಾರಿಯವ ಸೂಚಿಸುವುದೆನೆ ನಗುತ (ಅ ಕುಮಾ), ಸ್ವೀಪಾ (ಓ k).
[ಕಠೋರಗತಿ-ಬಿರುಸಿನ, ವೇಗದ, ನಡಿಗೆ. ಹುರುಳುಗೆಡಿಸು-ವ್ಯರ್ಥಮಾಡು].

೮೯. [1]ದರು (ಅ), ಸ್ವೀಪಾ (ಕುಮಾ).
[ಮರಳಿಚು-ಮರಳಿಸು, ಹಿಂದಿರುಗಿಸು].

೯೦. [ವಹಿಲ-ಬೇಗ. ಬೆನ್ನಲಿ-ಹಿಂದುಗಡೆ. ಅಬಲೆ-ಉತ್ತರೆ. ಅಯ್ದು (=ಎಯ್ದು)-ಸೇರು, ಮುಟ್ಟು, ಬರು. ಸಂಪನ್ನ-ಪೂರ್ಣ].

ಭರತವಿದ್ಯಾವಿಷಯದಲಿ ಪರಿ-
ಚರಿಯತನ ನವಗಲ್ಲದೀ ಸಂ-
ಗರದ ಸಾರಥಿತನವ ಮಱೆದೆವು ಹಲವು ಕಾಲದಲಿ ।
ಅರಿಭಟರು ಭೀಷ್ಮಾದಿಗಳು ನಿಲ-
ಲರಿದು ಸಾರಥಿತನದ ಕೈಮನ
ಬಱಡರಿಗೆ ದೊರಕೊಂಬುದೇ ರಣ ಸೂಱೆಯಲ್ಲೆಂದ ॥ ೯೨ ॥

ಆನಿರಲು ಭೀಷ್ಮಾದಿಗಳು ನಿನ-
ಗೇನ ಮಾಡಲುಬಲ್ಲರಳುಕದೆ
ನೀನು ನಿಲು ಸಾಕೊಂದುನಿಮಿಷಕೆ ಗೆಲುವೆನ[1]ನಿಬರನು[1] ।
ತಾನದಾರೆಂದಱಿಯೆಲಾ ಗುರು-
ಸೂನುಕರ್ಣದ್ರೋಣರೆಂಬವ-
ರಾನಱಿಯದವರಲ್ಲ ಸಾರಥಿಯಾಗು ಸಾಕೆಂದ ॥ ೯೩ ॥

ವೀರನಹೆ ಬಳಿಕೇನು ರಾಜಕು-
ಮಾರನಿ[1]ಱಿವೊಡೆ[1] ಹರೆಯುವಲ್ಲಾ
ಸಾರಥಿತ್ವವ ಮಾಡಿ ನೋಡುವ ರಥವ ತರಿಸೆನಲು ।
ವಾರುವದ ಮಂದಿರದಲಾಯಿದು
ಚಾರು ತುರುಗಾವಳಿಯ ಬಿಗಿದನು
ತೇರ ಸಂವರಿಸಿದನು ರಥವೇರಿದನು ಕಲಿಪಾರ್ಥ ॥ ೯೪ ॥

---

೯೧. [ತೆತ್ತುದು-ಸಂಘಟಿಸಿತು, ಒದಗಿಬಂತು, ಸಂಭವಿಸಿತು. ಅಗ್ಗಳೆಯರು-ಶ್ರೇಷ್ಠರಾದವರು. ವಿಗ್ರಹ-ಯುದ್ಧ. ಅಹಿತ-ಶತ್ರು].

೯೨. [ಭರತವಿದ್ಯಾವಿಷಯ-ಭರತಮುನಿಯ ನಾಟ್ಯವಿದ್ಯೆಯ ವಿಚಾರ. ಪರಿಚರಿಯತನ-ಪರಿಚರ್ಯೆ, ಪರಿಚಾರಿಕೆ. ನವಗೆ-ನಮಗೆ. ಸಂಗರ-ಯುದ್ಧ. ಅರಿಭಟ-ಶತ್ರುಗಳಲ್ಲಿ ಶೂರ. ಕೈಮನ ಬಱಡರು-ಕೈಮನಗಳೆರಡೂ ಶಕ್ತಿಹೀನವಾಗಿರುವವರು. ಸೂಱೆ-ಸುಲಭವಾದುದು].

೯೩. [1]ನವರುಗಳ (ಅ ಕುಮಾ ಪ್ರ), ಸ್ವೀಪಾ (ಕ).
[ಗುರುಸೂನು-ಅಶ್ವತ್ಥಾಮ].

೯೪. [1]ರುವೋಡೆ (ಅ), ಸ್ವೀಪಾ (ಓ ಕುಮಾ).
[ಹರೆಯ-ಪ್ರಾಯ. ವಾರುವದ ಮಂದಿರ-ಕುದುರೆಯ ಲಾಯ. ಚಾರು-ಮನೋಹರವಾದ. ತುರುಗಾವಳಿ-ಕುದುರೆಗಳ ಸಮೂಹ. ಸಂವರಿಸು-ಸಜ್ಜುಗೊಳಿಸು, ಸಿದ್ಧಪಡಿಸು].

ಮಂಗಳಾರತಿ ಯೆತ್ತಿದರು ನಿಖಿ-
ಳಾಂಗನೆಯರುತ್ತರಗೆ ನಿಜಸ-
ರ್ವಾಂಗಶೃಂಗಾರದಲಿ ಹೊಳೆಯುತ ಬಂದು ರಥವೇಱೆ ।
ಹೊಂಗೆಲಸಮಯಕವಚವನು ಪಾ-
ರ್ಥಂಗೆ ಕೊಟ್ಟನು ಜೋಡು ಸೀಸಕ-
[1]ವಂಗದೊಳಗಳವಡಲು[1] ರಾಜಕುಮಾರನನುವಾದ ॥ ೯೫ ॥

ನರನು ತಲೆಕೆಳಗಾಗಿ ಕವಚವ
ಸರಿವುತಿರೆ ಘೊಳ್ಳೆಂದು ಕೈಹೊ-
ಯ್ದರಸಿಯರು ನಗೆ ನಾಚಿದಂತಿರೆ ಪಾರ್ಥ ತಲೆವಾಗಿ ।
ತಿರುಗಿ ಮೇಲ್ಮುಖವಾಗಿ ತೊಡಲು-
ತ್ತರೆ ಬಳಿಕ ನಸುನಗಲು ಸಾರಥಿ-
ಯಱಿಯ ತಪ್ಪೇನೆನುತಲುತ್ತರ ತಾನೆ ತೊಡಿಸಿದನು ॥ ೯೬ ॥

ನಸುನಗುತ ಕೈಕೊಂಡನರ್ಜುನ-
ನೆಸಗಿದನು ರಥವನು ಸಮೀರನ
ಮಿಸುಕಲೀಯದೆ ಮುಂದೆ ಮಿಕ್ಕವು ವಿಗಡವಾಜಿಗಳು ॥
ಹೊಸಪರಿಯ ಸಾರಥಿಯಲಾ ನಮ-
ಗಸದಳವು ಸಂಗಾತ ಬರಲೆಂ-
ದುಸುರದುಳಿದುದು ಹಿಂದೆ ಪುರದಲಿ ಚಾತುರಂಗಬಲ ॥ ೯೭ ॥

---

೯೫. [1]ದಂಗಿಗಳನಳವಡಿಸಿ (ಅ ಕುಮಾ), ಸ್ವೀಪಾ (ಓ k ಪ್ರ).
[ಹೊಂಗೆಲಸಮಯಕವಚ–ಚಿನ್ನದಿಂದ ಕುಸುರಿಕೆಲಸಮಾಡಿದ ಕವಚ. ಜೋಡು–ಕವಚ. ಸೀಸಕ–ತಲೆಗಾಪು, ಶಿರಸ್ತ್ರಾಣ].

೯೬. [ಕೈಹೊಯ್ದು–ಚಪ್ಪಾಳೆ ಹಾಕಿ, ಕೈತಟ್ಟಿ].

೯೭. [ಎಸಗು–ಓಡಿಸು, ನಡಸು. ಸಮೀರ–ಗಾಳಿ, ವಾಯು. ಮಿಸುಕು–ಅಲುಗು, ಸುಳಿ. ಈಯದೆ–ಅವಕಾಶ ಕೊಡದೆ. ಮಿಕ್ಕವು–ಮೀರಿದುವು. ವಿಗಡ–ಸಮರ್ಥವಾದ. ವಾಜಿ–ಕುದುರೆ. ಅಸದಳ–ಅಸಾಧ್ಯ].

ಗತಿಗೆ ಕುಣಿದವು ನಾಸಿಕದ ಹುಂ-
ಕೃತಿಯ ಪವನನ ಹಳಿವ ಲುಳಿಯಲಿ
ಗತಿಯ ಸಂಚಿತಪಂಚಧಾರಾ ಪ್ರೌಢವಾಜಿಗಳು ।
ವಿತತರಥಪದದಳಿತವಸುಧೋ-
ತ್ಪತಿತಧೂಳೀಪಟಲಪರಿಚುಂ-
ಬಿತದಿಶಾಮುಖನೈದಿದನು ಕುರುರಾಯಮೋಹರವ ॥ ೯೮ ॥

ಜಡಿವ ಖಡ್ಗದ ಕಿಡಿಯ ಸೇನೆಯ
[1]ಕಡುಹು[1]ಗಳ ಕೇಸುರಿಯ ಬಲದು-
ಗ್ಗಡದ ರಭಸದ ರೌದ್ರರವ ಛಟಛಟಿತನಿಸ್ವನದ ।
ಇಡಿದ ಧೂಳಿಯ ಧೂಮರಾಶಿಯ
ಪಡೆ ವಿರಾಟನ ಮಗನ ಕಂಗಳಿ-
ಗೊಡನೊಡನೆ ದಾವಾಗ್ನಿಯಂತಿರೆ ತೋಱಿತಿದಿರಿನಲಿ ॥ ೯೯ ॥

ಕಾಲಕೂಟದ ತೋಱಿಯೊ ಮಾರಿಯ
ಗೂಳೆಯವೊ ಮೃತ್ಯುವಿನ ಗಂಟಲ
ತಾಳಿಗೆಯೊ ಭೈರವನ ಥಟ್ಟೋ ಜವನ ಜಂಗುಳಿಯೋ ।

---

೯೮. [ಗತಿ-ಗಮನ. ಪವನ-ವಾಯು. ಹಳಿ-ತಿರಸ್ಕರಿಸು. ಲುಳಿ-ಚಾತುರ್ಯ, ಚಾಕಚಕ್ಯ. ಪಂಚಧಾರಾ-ಕುದುರೆಯ ಐದು ಬಗೆಯ ನಡಿಗೆಗಳು: ಅಸ್ಕಂದಿತ (ಎಳೆನಡಿಗೆ), ಧೌರಿತಕ (=ಬಿರುನಡಿಗೆ), ರೇಚಿತ (ಲಯಕ್ಕೆ ಸರಿಯಾಗಿ ನಡೆಯುವುದು, ಬಿಗುನಡಿಗೆ), ವಲ್ಗಿತ (ಕಾಲನ್ನು ಹಾರಿಸುತ್ತಾ ನಡೆಯುವುದು), ಪ್ಲುತ (ಕುಣಿಯುವಂತೆ ನಡೆಯುವುದು). ವಿತತ-ವಿಸ್ತಾರವಾದ. ರಥಪದದ-ರಥದ ಚಕ್ರದ ಮತ್ತು ಕುದುರೆಯ ಪಾದಗಳಿಂದ. ದಳಿತ-ತುಳಿಯಲ್ಪಟ್ಟ. ವಸುಧೋತ್ಪತಿತ-ಭೂಮಿಯಿಂದ ಮೇಲಕ್ಕೆ ಎದ್ದ. ಧೂಳೀಪಟಲ-ಧೂಳಿನತೆರೆ. ಪರಿಚುಂಬಿತ-ಪೂರ್ಣವಾಗಿ ಸೋಂಕಲ್ಪಟ್ಟ. ದಿಶಾಮುಖನು-ದಿಕ್ಕಿಗೆ ಮುಖ ಮಾಡಿಕೊಂಡಿರುವವನು (ಅರ್ಜುನನು). ಕುರುರಾಯ ಮೋಹರವ-ಕೌರವರ ಸೈನ್ಯವನ್ನು. ಐದಿದನು-ಸೇರಿದನು].

೯೯. [1]ತೊಡವು (ಕ), ತೊಡರು (ಓ k).

[ಜಡಿ-ಝಳಪಿಸು, ಬೀಸು. ಕಡುಹು-ಪ್ರತಾಪ, ಸಾಮರ್ಥ್ಯ. ಕೇಸುರಿ-ಕೆಂಪಾದ ಉರಿ. ಬಲ-ಸೈನ್ಯ. ಉಗ್ಗಡ (=ಉತ್ಕಟ)-ತೀವ್ರತೆ, ಉಗ್ರತೆ. ರೌದ್ರರವ-ಭಯಂಕರವಾದ ಶಬ್ದ. ನಿಸ್ವನ-ಶಬ್ದ. ಇಡಿದ-ತುಂಬಿದ. ದಾವಾಗ್ನಿ-ಕಾಡುಗಿಚ್ಚು, ಕಾಡಿನ ಬೆಂಕಿ].

ಕಾಲರುದ್ರನ ನೊಸಲ ವಹ್ನಿ-
ಜ್ವಾಲೆಯೋ ಕೌರವನ ಸೇನಾ-
ಜಾಲವೋ ಶಿವ ಯೆನುತ ಹೆದಱಿದನಂದು ಸುಕುಮಾರ ॥ ೧೦೦ ॥

ಹಸಿದ ಮಾರಿಯ [1]ಮಂದೆ[1]ಯಲಿ ಕುಱಿ
ನುಸುಳಿ [2]ಬದುಕುವುದೇ[2] ಬೃಹನ್ನಳೆ
ಎಸಗದರು ತೇಜಿಗಳ ತಡೆ ಚಮ್ಮಟಿಗೆಯನು ಬಿಸುಡು ।
ಮಿಸುಕಬಾರದು ಪ್ರಳಯಕಾಲನ
ಮುಸುಕನುಗಿವವರಾರು ಕೌರವ-
ನಸಮಬಲನೈ ರಥವ ಮರಳಿಚು [3]ಪುರಕೆ ಬೇಗೆಂದ[3] ॥ ೧೦೧ ॥

ಎಲೆ ಕುಮಾರಕ ಮೊದಲ ಚುಂಬನ-
ದೊಳಗೆ ಹಲುಬಿದ್ದಂತೆ ಕಾಳೆಗ-
[1]ದೊಳಗೆ ಬೆರೆಯದ[1] ಮುನ್ನ ಹಿಡಿದೈ ಸಮರಭೀತಿಯನು ।
ಅಳುಕಲಾಗದು ನಿಮ್ಮ ತಂದೆಯ
ಕುಲಕೆ ಕುಂದನು ತಾರದಿರು ಮನ-
ಗೆಲವಿನಲಿ ಕಾದೆನುತ ರಥವನು [2]ಹರಿಸಿದನು[2] ಪಾರ್ಥ ॥ ೧೦೨ ॥

---

೧೦೦. [ಕಾಲಕೂಟ–ಘೋರವಿಷ. ಮಾರಿ–ಮೃತ್ಯುದೇವತೆ. ಗೂಳೆಯ–ಬೀಡು ಬಿಡುವುದು. ತಾಳಿಗೆ–ನಾಲಿಗೆ. ಥಟ್ಟು–ಸೈನ್ಯ. ಜವ–ಯಮ. ನೊಸಲು–ಹಣೆ. ವಹ್ನಿ–ಅಗ್ನಿ].

೧೦೧. [1]ಕಟಕ (ಓ k). [2]ದಂತಾದೆನು (ಅ ಕುಮಾ), ಸ್ವೀಪಾ (ಪ್ರ ಓ k). [3]ಜಾಳಿಸುವೆನೆಂದ (ಅ ಕುಮಾ), ಸ್ವೀಪಾ (ಪ್ರ ಓ k).
[ನುಸುಳು–ತೂರಿಕೊಂಡು ಹೋಗು. ಎಸಗು–ಓಡಿಸು. ತೇಜಿ–ಕುದುರೆ. ಚಮ್ಮಟಿಗೆ–ಚಾವಟಿ. ಮಿಸುಕು–ಚಲಿಸು, ಅಲುಗು. ಪ್ರಳಯಕಾಲ–ಪ್ರಳಯ ಕಾಲದ ಯಮ. ಉಗಿ–ತೆಗೆ, ಸರಿಸು].

೧೦೨. [1]ಬೆಳಸಲರಿಯದ (ಅ). ದೊಳಗೆ ಬೆರಸದ (ಪ್ರ ಓ k), ಸ್ವೀಪಾ (ಕುಮಾ). [2]ಬೇಗ ಹರಿಸಿದನು (ಅ ಕುಮಾ), ಸ್ವೀಪಾ (ಪ್ರ ಓ k).
[ಅಳುಕು–ಹೆದರು. ಕುಂದು–ಕಳಂಕ. ಮನಗೆಲವು–ಮನೋದಾರ್ಢ್ಯ, ಗಟ್ಟಿಮನಸ್ಸು].

ಏಕೆ ಸಾರಥಿ ರಥವ ಮುಂದಕೆ
ನೂಕಿ ಗಂಟಲ ಕೊಯ್ವ ಸುಡುಸುಡು
ಕಾಕಲಾ ಕಣ್ಣೊಡೆ[1]ಯುತಿದೆ[1] ಕಾಣಾ ಮಹಾಬಲವ ।
ನಾಕನಿಳಯರಿಗರಿದು ನಿನಗೆ ವಿ-
ವೇಕವೆಳ್ಳನಿತಿಲ್ಲ[2]ತೆಗೆತೆಗೆ[2]
ಸಾಕು ವಾಘೆಯ ಮರಳಿ [3]ಸೆಳೆ[3] ತೇಜಿಗಳ ತಿರುಹೆಂದ ॥ ೧೦೩ ॥

ನುಡಿಯ ಕೇಳದೆ ಮುಂದೆ ಹತ್ತೆಂ-
ಟಡಿಯನರ್ಜುನ ರಥವ ಹರಿಸಲು
ಹಿಡಿದ ಬಿಲ್ಲಂಬುಗಳು ಬಿದ್ದವು ಕೈಯ [1]ನರ[1] ತೆಗೆದು ।
ಹಿಡಿ ಹಯವನಿಜ಼ಿಗಾರ ಸಾರಥಿ
ನುಡಿವವರು ನಾವ್ ಹಗೆಗಳೇ ನಿ-
ನ್ನೊಡೆಯರಲ್ಲಾ ಸ್ವಾಮಿ[2]ದ್ರೋಹಿಕೆ[2] ಲೇಸುಲೇಸೆಂದ ॥ ೧೦೪ ॥

ಎಂದೊಡರ್ಜುನ ನಗುತ ರಥವನು
ಮುಂದೆ ನಾಲ್ಕೆಂಟಡಿಯ ನೂಕಲು
ಕೊಂದನೀ ಸಾರಥಿಯೆನುತ ಸಂವರಿಸಿ ಮುಂಜೆಱಗ ।
ಬಂದು ಮೆಲ್ಲನೆ ರಥದ ಹಿಂದಕೆ
ನಿಂದು ಧುಮ್ಮಿಕ್ಕಿದನು ಬದುಕಿದೆ-
ನೆಂದು ನಿಟ್ಟೋಟದಲಿ ಹಾಯ್ದನು ಬಿಟ್ಟಮಂಡೆಯಲಿ ॥ ೧೦೫ ॥

---

೧೦೩. [1]ದವೇ (ಅ ಕುಮಾ), ದುದೇ (ಪ್ರ), ಸ್ವೀಪಾ (ಓ). [2]ಲಾ (ಅ). ನಿಲುಸಾಕು (ಪ್ರ), ಸ್ವೀಪಾ (ಕುಮಾ). [3]ಹಿಡಿ (ಅ ಕುಮಾ), ತೆಗೆ (ಪ್ರ), ಸ್ವೀಪಾ (ಕ ಓ). [ಕಾಕು–ಹಾಳು, ನಾಶ. ನಾಕನಿಳೆಯರು–ದೇವತೆಗಳು. ಅರಿದು–ಅಸಾಧ್ಯ. ವಾಘೆ–ಲಗಾಮು. ಸೆಳೆ–ಎಳೆದುಕೊ].

೧೦೪. [1]ನೆರೆ (ಅ), ನರೆ (ಕುಮಾ), ಸ್ವೀಪಾ (ಪ್ರ ಓ k). [2]ದುರುಹಿಕೆ (ಅ ಕುಮಾ), ದ್ರೋಹಿಕೆ (ಓ), ಸ್ವೀಪಾ (ಪ್ರ k).
[ನರತೆಗೆದು–ನರಗಳ ಶಕ್ತಿಯು ಹೊರಟುಹೋಗಿ. ಇಜ಼ಿಗಾಜ–ಶೂರ].

೧೦೫. [ಸಂವರಿಸು–ಸರಿಪಡಿಸಿಕೊ. ಮುಂಜೆಱಗು–ಸೆರಗಿನ ಮುಂಭಾಗ. ನಿಟ್ಟೋಟ–ಒಂದೇ ಓಟ. ಬಿಟ್ಟಮಂಡೆ–ಕೆದರಿದ ಕೂದಲು].

ನೋಡಿದನು ಕಲಿಪಾರ್ಥನೀ ಕೇ-
ಡಾಡಿ ಕೆದಱಿದ ಕೇಶದಲಿ ಕೆ-
ಟ್ಟೋಡುತಿರಲೆಲೆ ಪಾಪಿ ಹಾಯ್ದನು ಹಿಡಿಯಬೇಕೆನುತ ।
ಕೂಡೆ ಸೂಟಿಯೊಳಟ್ಟಲಿಳೆಯು-
ಲ್ಲಾಡಲಹಿಪತಿ ಹೆದಱಲಿತ್ತಲು
ನೋಡಿ ಕೌರವಸೇನೆ ಕೆಡೆದುದು ನಗೆಯ ಕಡಲೊಳಗೆ ॥ ೧೦೬ ॥

ಇತ್ತಲರ್ಜುನನುತ್ತರನ ಬೆಂ-
ಬತ್ತಿ ಬಂದನು ಹೋದೆಯಾದೊಡೆ
ಕಿತ್ತು ಬಿಸುಡುವೆ ನಿನ್ನ ತಲೆಯನು ನಿಲ್ಲುನಿಲ್ಲೆನುತ ।
ಮೃತ್ಯುವೋ ಸಾರಥಿಯೊ ಪಾಪಿಯು-
ನೆತ್ತಣಿಂದವೆ ಮಾಡಿಕೊಂಡೆನೆ-
ನುತ್ತ ಮರಳಿದು ನೋಡಿ ನಿಲ್ಲದೆ ಮತ್ತೆ ಸೈವರಿದ ॥ ೧೦೭ ॥

ಹಲುಗಿಱಿದು ಬಾಯೊಳಗೆ ಬೆರಳ-
ಟ್ಟಳುಕಿ ತಲೆವಾಗಿದನು ಸಾರಥಿ
ಕಳು[1]ಹಿ[1] ಕಳೆಯ್ಯ ನಿನ್ನ ಬಸುಱಲಿ ಮರಳಿ ಬಂದವನು ।
ಕೊಳುಗುಳದೊಳೀಯೊಡ್ಡ ಮುಱಿವ-
ಗ್ಗಳೆಯರುಂಟೇ ಲೋಗರಿಂದವೆ
ಕೊಲಿಸದಿರು ನೀ ಕುತ್ತಿಕೆಡಹು ಕಠಾರಿಯಿದೆ ಯೆಂದ ॥ ೧೦೮ ॥

ಮನದಲೊಡಲೊಡೆ[1]ವಂ[1]ತೆ ನಗುತ-
ರ್ಜುನನು ಗಜಱಿದನೆಲವೊ ಸಭೆಯಲಿ
ವನಜಮುಖಿಯರ ಮುಂದೆ ಸೊರಹಿದೆ ಬಾಯ್ಗೆ ಬಂದಂತೆ ।
ಅನುವರದೊಳೀನಾಯ್ತು ರಿಪುವಾ-
ಹಿನಿಯನಿಱಿಯದೆ ನಾಡ ನರಿಯುವೊ-
ಲೆನಗೆ ನೀ ಹಲುಗಿಱಿಯೆ ಬಿಡುವೆನೆ ಕಾದು ನಡೆಯೆಂದ ॥ ೧೦೯ ॥

---

೧೦೬. [ಸೂಟಿ–ಚುರುಕು. ಅಹಿಪತಿ–ಸರ್ಪರಾಜ, ಆದಿಶೇಷ. ಕೆಡೆ–ಬೀಳು].

೧೦೮. [1]ಹು (ಅ), ಸ್ವೀಪಾ (ಪ್ರ).
[ಕೊಳುಗುಳ–ಯುದ್ಧ. ಒಡ್ಡ–ಸೈನ್ಯವನ್ನು (ಒಡ್ಡು=ಸೈನ್ಯ). ಲೋಗರು–ಸಾಮಾನ್ಯರು. ಕುತ್ತು–ತಿವಿ].

೧೦೯. [1]ದಂ (ಅ), ಸ್ವೀಪಾ (ಪ್ರ k).

ಕೊಳುಗುಳದೊಳೋಡಿದೊಡೆ ಹಜ್ಜೆಗೆ
ಫಲ ಮಹಾಪಾತಕವು [1]ಮುಂದ-
ಕ್ಕೊಲಿದು[1] ಹಜ್ಜೆಯನಿಡಲು ಹಜ್ಜೆಯೊಳಶ್ವಮೇಧಫಲ ।
ಅಳಿದನಾದೊಡೆ ದೇವಲೋಕದ
ಲಲನೆಯರು ತೊತ್ತಿರು ಸುರೇಂದ್ರನು
ನೆಲನನುಘ್ಘಡಿಸುವನು ವೀರಸ್ವರ್ಗವಹುದೆಂದ ॥ ೧೧೦ ॥

ಧುರದಲೋಡಿದ ಪಾತಕವ ಭೂ-
ಸುರರು ಕಳೆದಪರಶ್ವಮೇಧವ
ಧರಣಿಯೊಳ್ ಪ್ರತ್ಯಕ್ಷವಾಗಿಯೆ ಮಾಡಬಹುದೆಮಗೆ ।
ಸುರರ ಸತಿಯರನೊಲ್ಲೆವೆಮಗೆ-
[1]ಮ್ಮ[1]ರಮನೆಯ ನಾರಿಯರೆ ಸಾಕೆ-
ಮ್ಮರಸುತನವೆಮಗಿಂದ್ರಪದ-ನೀ[2]ಬಿಟ್ಟು ಕಳುಹೆಂದ ॥ ೧೧೧ ॥

ಕಾದುವೆನು ಮಾಜಿ[1]ಡ್ಡಿನಲಿ ನೀ-
[1]ಚೋ[1]ದಿಸೆನ್ನಯ ರಥವ[2]ನಕಟಾ
ಹೇದೆತನವನು ಮಾಣು[2] ಸಾರಥಿಯಾಗು ಸಾಕೆನಲು ।

---

೧೦೯. [ಗಜಬು–ಗದರಿಸು. ಸೊರಹು–ಹರಟು. ಅನುವರ–ಯುದ್ಧ. ರಿಪುವಾಹಿನಿ–ಶತ್ರುಸೈನ್ಯ. ಇಜಿ–ಕೊಲ್ಲು. ನಾಡೆನರಿ–ತುಚ್ಛವ್ಯಕ್ತಿ, ದಡ್ಡ, ಕೀಳುಮನುಷ್ಯ. ಹಲುಗಿರಿ–ದೈನ್ಯದಿಂದ ಬೇಡು, ಅಂಗಲಾಚು].

೧೧೦. [1]ಮುಂದಣಿಗೊಲಿದು (ಅ ಕುಮಾ), ಸ್ವೀಪಾ (ಪ್ರ).
[ಒಲಿ–ಇಷ್ಟಪಡು, ಅಪೇಕ್ಷಿಸು. ತೊತ್ತಿರು–ದಾಸಿಯರು. ಉಘ್ಘಡಿಸು–ಪರಾಕು ಹೇಳು].

೧೧೧. [1]ನ್ನ (ಅ), ಸ್ವೀಪಾ (ಪ್ರ). [2]ವಿಯು (ಅ ಕುಮಾ), ಸ್ವೀಪಾ (ಪ್ರ ಓ k ಕ).
[ಧುರ–ಯುದ್ಧ. ಕಳೆ–ನಿವಾರಿಸು, ಹೋಗಲಾಡಿಸು].

೧೧೨. [1]ನ್ನೈ (ಅ ಕುಮಾ). ಸ್ವೀಪಾ (ಓ). [2]ಮನದಲಿ ಭೇದತನವನು ಬಿಟ್ಟು (ಅ ಕುಮಾ), ನಕಟಾ ಭೇದತನವನು ಬಿಟ್ಟು (ಅ), ನಕಟಾ ಹೇದೆತನವನು ಮಾದು (k), ಸ್ವೀಪಾ (ಪ್ರ). [3]ನಾಟಕ ವಿದ್ಯವಲ್ಲೆಂದ (ಅ ಕುಮಾ), ಸ್ವೀಪಾ (ಪ್ರ, k).

ಆದಿಯಲಿ ನೀನಾವ ರಾಯರ
ಕಾದಿ ಗೆಲಿದ್ದೆ ಹುಲುಬೃಹನ್ನಳೆ-
ಯಾದ ನಿನಗೀ ಕದನ [3]ನಾಟ್ಯದ ವಿದ್ಯೆಯಲ್ಲೆಂದ[3] ॥ ೧೧೨ ॥

ಹೇಡತನ ಬೇಡೆಲವೊ ರಣದೊಳ-
ಗೋಡಿಸುವೆನಹಿತರನು ಹರಣವ
ಹೂಡಿಸುವೆನಂತಕನ ನಗರಿಗೆ ಥಟ್ಟ[1]ನೊ[1]ಡೆಹೊಯ್ದು ।
ಕೋಡದಿರು ಕೊಂಕದಿರು ಧೈರ್ಯವ
ಮಾಡಿ ಸಾರಥಿಯಾಗೆನುತ ಕಲಿ-
ಮಾಡಿ ಕೊಂಡೊಯ್ದನು ಸಮೀಪದ ಶಮಿಯ [2]ಹೊರೆ[2]ಗಾಗಿ ॥೧೧೩॥

ಹೊಱಗೆ ತೊಗಲಲಿ ಬಿಗಿದು ಕೆಲಬಲ-
ನಱಿಯದಂದದಿ ಪಾಂಡುನಂದನ-
ರುಱುವ ಕೈದುವ [1]ನಿಱಿಸಿ[1]ದರು ಹೆಣನಲ್ಲ ತೆಗೆಯೆನಲು ।
ನೆಱಗನಳವಡಿಸಿಕ್ಕಿ ಭೀತಿಯ
ತೊಱೆದು ತುದಿಗೇಱಿದನು ನೇಣ್ಗಳ
ಹಱಿದು ಕೈದುವ [2]ಕಂಡು ಮಿಗೆಯಂ[2]ಜದನು ಭಯ ಹೊಡೆದು
॥ ೧೧೪ ॥

---

೧೧೨. [ಮೂಱಿಡುದ್ದು-ಪ್ರತಿಸೈನ್ಯ, ಎದುರಾಳಿ ಸೈನ್ಯ. ಚೋದಿಸು-ನಡೆಯಿಸು. ಮಾಣು-ಬಿಡು. ಹುಲು-ತೃಣಸಮಾನ].

೧೧೩. [1]ನಡೆ (ಅ ಕುಮಾ), ಸ್ವೀಪಾ (ಪ್ರ ಓ k). [2]ಪೊದೆ (ಅ), ಸ್ವೀಪಾ (ಪ್ರ ಓ k ಕುಮಾ).

[ಹೇಡತನ-ಅಂಜುಕುಳಿತನ. ಹರಣ-ಪ್ರಾಣ. ಹೂಡಿಸು-ಕಳುಹಿಸಿಕೊಡು. ಥಟ್ಟು-ಸೈನ್ಯ. ಒಡೆಹೊಯ್ದು-ಚದುರಿಸಿ ಕೊಂಡು, ಹೊಡೆದುಹಾಕಿ. ಕೋಡು-ಭಯಪಡು, ಹೆದರು. ಕೊಂಕು-ಹಿಂದೆಗೆ, ಹಿಂಜರಿ. ಕಲಿಮಾಡು-ಶೂರನನ್ನಾಗಿ ಮಾಡು, ಹುರಿದುಂಬಿಸು. ಪೊರೆಗಾಗಿ-ಬಳಿಗೆ, ಹತ್ತಿರಕ್ಕೆ].

೧೧೪. [1]ಕಟ್ಟಿ (ಅ ಕುಮಾ), ಸ್ವೀಪಾ (ಪ್ರ ಓ k). (ಸೂಚಿತಪಾಠ—ನೇಱಿದರು-'ಶ್ರೀ').
[2]ಬಿಟ್ಟು ಕಂಡಂ (ಅ ಕುಮಾ ಪ್ರ), ಸ್ವೀಪಾ (ಓ).

[ಕೆಲಬಲ-ಅಕ್ಕಪಕ್ಕ(ದವರು). ಉಱುವ-ಶ್ರೇಷ್ಠವಾದ. ಕೈದು-ಆಯುಧ. ನಿಱಿಸಿ-ಇರಿಸಿ. ನೇಣ್-ಹಗ್ಗ. ಮಿಗೆ-ಹೆಚ್ಚಾಗಿ].

ತುಡುಕಬಹುದೇ ದೋಷಿ ಹಾವಿನ
ಕೊಡನ ನಿನಗಿವು ಕೈದುಗಳೆ ಬರ-
ಸಿಡಿಲ ದಾವಣಿಯಾಗುತಿವೆ ಕೈಯಿಕ್ಕಲಂಜುವೆನು ।
ಬಿಡಿಸು ಸಾರಥಿಯೆನ್ನನೆನೆ ಫಡ
ನಡುಗದಿರು ಫಲುಗುಣನ ನೆನೆ ಕೈ-
ತುಡುಕು ಕೈವಶವಹವು ತೆಗೆ ಸಾಕೆಂದನಾ ಪಾರ್ಥ ॥ ೧೧೫ ॥

ಉಲಿದು ಸತ್ವದೊಳೌಂಕೆ ಕಾಯುವ
ಬಲಿದು ತೆಕ್ಕೆಯೊಳೊತ್ತಿ ಬೆವರಿದು
ಬಳಲಿ ನೀಡಿದನರ್ಜುನನ ಕರತಳಕೆ ಗಾಂಡಿವವ ।
ಬಲುಹಿನಿಂದವುಡೊತ್ತಿ ತೆಗೆತೆಗೆ-
ದುಳಿದ ಬಿಲುಗಳ ನೀಡಿ ಮರನನು
ಮಲಗಿ ಧಗೆಯಿಂದಳ್ಳೆವೊಯ್ದು ಕುಮಾರನಿಂತೆಂದ ॥ ೧೧೬ ॥

ಗಿರಿಯುನೆತ್ತಲುಬಹುದು ಬಿಲುಗಳ
[1]ತೆ[1]ರಳಿಚುವೊಡಾಱೆನು ಬೃಹನ್ನಳೆ
ಧರಿಸಲಾಪಯ್ ನೀ ಸಮರ್ಥನು ನಿನಗೆ ಶರಣೆನುತ ।
ಸರಳ ಹೊದೆಗಳ ದೇವದತ್ತವ
ಪರಶುತೋಮರಕುಂತವಸಿಮು-
ದ್ಗರಗದಾದಂಡಾದಿಶಸ್ತ್ರವ ತೆಗೆದು ನೀಡಿದನು ॥ ೧೧೭ ॥

---

೧೧೫. [ತುಡುಕು–ತ್ವರೆಯಿಂದ ಹಿಡಿದುಕೊ. ದೋಷಿ–(ಘೋರವಾದ) ಅಪರಾಧ ಮಾಡಿದವನು. ದಾವಣಿ–ಸೇರಿಕೆ, ಕೂಟ].

೧೧೬. [ಉಲಿ–ಶಬ್ದಮಾಡು. ತೆಕ್ಕೆಯೊಳು–ತಬ್ಬಿಕೊಂಡು. ಕರತಳ–ಅಂಗೈ. ಗಾಂಡೀವ–ಅರ್ಜುನನ ಬಿಲ್ಲಿನ ಹೆಸರು. ಅವುಡೊತ್ತಿ–ದವಡೆ ಮತ್ತು ತುಟಿಗಳನ್ನು ಅದುಮಿಕೊಂಡು. ಮಲಗು–ಒರಗಿಕೊ. ಧಗೆ–ಸೆಕೆ, ಬೇಗೆ ಅಳ್ಳೆ–(ಹೊಟ್ಟೆಯ) ಪಕ್ಕೆ].

೧೧೭. [1]ಕೆ (ಅ ಕುಮಾ), ಸ್ವೀಪಾ (ಪ್ರ ಓ ಕ k).
[ತೆರಳಿಚು–ಒಟ್ಟುಗೂಡಿಸು. ಆಪಯ್–ಸಮರ್ಥನಾಗಿದ್ದೀಯೆ. ಸರಳು–ಬಾಣ. ಹೊದೆ–ಬತ್ತಳಿಕೆ. ದೇವದತ್ತ–ಇಂದ್ರ ಅರ್ಜುನನಿಗೆ ಕೊಟ್ಟ ಶಂಖದ ಹೆಸರು. ಪರಶು–ಕೊಡಲಿ, ತೋಮರ, ಕುಂತ. ಮುದ್ಗರ–ಬಗೆ ಬಗೆಯ ಆಯುಧಗಳ ಹೆಸರುಗಳು. ಅಸಿ–ಕತ್ತಿ].

ಆರು ನೀನರ್ಜುನನೊ ನಕುಲನೊ
ಮಾರುತನ ಸುತನೋ ಯುಧಿಷ್ಠಿರ
ವೀರನೋ ಸಹದೇವನೋ ಮೇಣವರ ಬಾಂಧವನೊ ।
ಧೀರ ಹೇಳೈ ಬೇಡಿಕೊಂಬೆನು
ಕಾರಣವ ವಿಸ್ತರಿಸು ಪಾಂಡು ಕು-
ಮಾರರಾಯುಧತತಿಯ ನೀನೆಂತಱಿವೆ ಹೇಳೆಂದ ॥ ೧೧೮ ॥

ಆದೊಡಾನರ್ಜುನನು ಬಾಣಸಿ-
ಯಾದ ವಲಲನು ಭೀಮ ವರ ಯತಿ-
ಯಾದ ಕಂಕನು ಧರ್ಮಪುತ್ರನು ನಿಮ್ಮ [1]ಗೋಕುಲವ[1] ।
ಕಾದವನು ಸಹದೇವ ರಾವುತ-
ನಾದವನು ನಕುಲನು ವಿಳಾಸಿನಿ
ಯಾದವಳು [2]ಸ್ವೈರಂಧ್ರಿ[2] ರಾಣೀವಾಸವೆಮಗೆಂದ ॥ ೧೧೯ ॥

ನಂಬಿದೆನು ಲೇಸಾಗಿ ನಿಶ್ಚಯ-
ವಿಂಬುಗೊಂಡುದು ಪಾರ್ಥ ನಿನಗೀ-
ಡೊಂಬಿದೇಕೈ ಹುಲುಬೃಹನ್ನಳೆತನದ [1]ಬಹು[1]ರೂಪು ।
ಅಂಬುಜಾಕ್ಷನ ಸಾಹಸ ಪ್ರತಿ-
ಬಿಂಬವಲ್ಲಾ ನೀನು ನಿನ್ನ ವಿ-
ಡಂಬಿಸಿದ ರೂಹಿಂಗೆ ಕಾರಣವೇನು ಹೇಳೆಂದ ॥ ೧೨೦ ॥

---

೧೧೮. [ತತಿ–ಸಮೂಹ].

೧೧೯. [1]ಗೋವುಗಳ (ಪ್ರ). [2]ಸೈಳೇಂಧ್ರಿ (ಪ್ರ).

[ಬಾಣಸಿ (=ಬಾಣಸಿಗ)–ಅಡಿಗೆ ಮಾಡುವವನು. ರಾವುತ–ಕುದುರೆ ಸೈನಿಕ (ಇಲ್ಲಿ ಆನೆ ಕುದುರೆ ಕಟ್ಟುವ ಲಾಯಗಳ ಮೇಲ್ವಿಚಾರಕ). ವಿಳಾಸಿನಿ–ಸೊಗಸುಗಾತಿ. ರಾಣೀವಾಸ–ಅಂತಃಪುರ].

೧೨೦. [1]ಬಲು (ಪ್ರ).

[ಇಂಬುಗೊಳ್ಳು–ನೆಲೆ, ಎಡೆ,—ಪಡೆ. ಡೊಂಬು–ನಟನೆ, ತೋರಿಕೆ ಹುಲು–ತೃಣಪ್ರಾಯ, ಕೀಳು. ಅಂಬುಜಾಕ್ಷ–ನಾರಾಯಣ, ಕೃಷ್ಣ. ವಿಡಂಬಿಸು–ಅಣಕಿಸು, ಅನುಕರಿಸು].

ಇದುಕಣಾ ಧರ್ಮಜನ ಸತ್ಯಾ-
ಭ್ಯುದಯಕೋಸುಗ ಊರ್ವಶಿಯ ಶಾ-
ಪದಲಿ ಬಂದುದು ಹೊತ್ತು ನೂಕಿದೆನೊಂದು ವತ್ಸರವ ।
ಇದಕೆ [1]ನಿಜ್ಜೋ[1]ಡಾಯ್ತು ನಿರ್ವಿ-
ಘ್ನದಲಿ [2]ನೂಕಿದೆ[2]ವವಧಿಯನು ತ-
ನ್ನದಟುತನವನು ಭೀತಿಗೊಳ್ಳದೆ ನೋಡು ನೀನೆಂದ ॥ ೧೨೧ ॥

ಬಳೆಯ ನೆಗ್ಗೊತ್ತಿದನು ಕೌರವ-
ಬಲದ ಗಂಟಲಬಳೆಯ ಮುಱಿವ ಮೊ-
ಲಲಘುಸಾಹಸಿ ಪಳಿಯನುಟ್ಟನು ಮಲ್ಲಗಂಟಿನಲಿ ।
ತಲೆನವಿರ ಹಿಣಿಲಿಱಿದು ತಿಲಕವ
ಗೆಲಿದು ಕಿಗ್ಗಟ್ಟಿನ ಕಠಾರಿಯು
ಹೊಳೆವ ಗೊಂಡೆಯ ಮೆಱೆಯೆ ಗಂಡಂದವನು ಕೈಕೊಂಡ ॥ ೧೨೨ ॥

ರಾಯ ಧರ್ಮಜ ಬಾಳುಗೆನುತ ನಿ-
ಜಾಯುಧದ ಗುರುವಿಂಗೆಱಗಿ ಸುರ-
ರಾಯನಂದನನೊಲವಿನಲಿ ಗಾಂಡೀವ[1][ವನು ಮಿಡಿದು][1]* ।
ರಾಯಕುವರನ ಸೂತತನದ ವಿ-
ಡಾಯಿಯುಱಿಯಲುಬಹುದೆನುತ ಸಮ-
ರಾಯುತಾಸ್ತ್ರನು ಪಾರ್ಥ ಮೈದೋಱಿದನು ಪರಬಲಕೆ ॥ ೧೨೩ ॥

---

೧೨೧. [1]ನಂಜೋ (ಅ), ಸ್ವೀಪಾ, (ಕ ಕುಮಾ). [2]ದಾಂಟಿದೆ (ಪ್ರ ಓ k), ಮುಟ್ಟಿದೆ (ಕ).
[ವತ್ಸರ-ವರುಷ. ನಿಜ್ಜೋಡು-ಸರಿಯಾದ ಹೊಂದಿಕೆ. ನೂಕು-ಕಳೆ. ಅವಧಿ-ಗಡುವು. ಅದಟುತನ-ಪರಾಕ್ರಮ].

೧೨೨. [ನೆಗ್ಗೊತ್ತು-ಪುಡಿಪುಡಿಮಾಡು. ಗಂಟಲಬಳೆ-ಗಂಟಲ ಬಳೆಯಾಕಾರದ ಮೂಳೆ. ಅಲಘು ಸಾಹಸಿ-ಅಪಾರ ಪರಾಕ್ರಮಿ. ಪಳಿ-ವಸ್ತ್ರವಿಶೇಷ. ಮಲ್ಲಗಂಟು-ವೀರಗಚ್ಚೆ. ನವಿರು-ಕೂದಲು. ಹಿಣಿಲು-ಜಡೆ. ಇಱಿ-ಬಿಚ್ಚು. ಗೆಲಿ-ಇಡು. ಕಿಗ್ಗಟ್ಟು-ಸೊಂಟದ ಕಟ್ಟು. ಗೊಂಡೆಯ-ಕುಚ್ಚು. ಗಂಡಂದ-ಪುರುಷವೇಷ].

೧೨೩. *[1]ವಹೀವಡಿಸಿ (ಕುಮಾ), ವಹೋಡಿಸಿ (ಪ್ರ).
[ನಿಜ-ತನ್ನ. ಆಯುಧದ ಗುರು-ದ್ರೋಣಾಚಾರ್ಯ. ಸುರರಾಯ-ಇಂದ್ರ. ಮಿಡಿ-ಹೆದೆಯನ್ನು ಮೀಟು, ಜೇವೊಡೆ. ಸೂತತನ-ಸಾರಥ್ಯ. ವಿಡಾಯಿ-ಬೆಡಗು. ಸಮರಾಯುತಾಸ್ತ್ರನು-ಯುದ್ಧಕ್ಕೆ ಸಿದ್ಧವಾದ ಅಸ್ತ್ರವನ್ನು ಉಳ್ಳವನು. ಪರಬಲ-ಶತ್ರುಸೈನ್ಯ. ಮೈದೋಱು-ಕಾಣಿಸಿಕೊ].

---

* 'ವ' ಅಧಿಕಾಕ್ಷರವಾಗಿದ್ದು ಛಂದೋದೋಷವುಂಟಾದದ್ದರಿಂದ ತಿದ್ದುಪಡಿ ಮಾಡಲಾಗಿದೆ.

ತುರಗ[1]ಹೇಷಿತ[1] ರಥದ [2]ಚೀತ್ಕೃತಿ
ವರ[2]ಧನುಷ್ಟಂಕಾರ ಕಪಿಯು-
ಬ್ಬರಣೆ ಪಾರ್ಥನ ಬೊಬ್ಬೆ ನಿಷ್ಠುರದೇವದತ್ತರವ ।
ಅರರೆ ಹೊದಱಿದ್ದವು ಗಿರಿವ್ರಜ
ಬಿಱಿಯೆ ಜಲನಿಧಿ ಜಱಿಯೆ ತಾರಕೆ
ಸುರಿಯೆ ಸುರಕುಲ ಸರಿಯೆ [3]ಭೀತಿಯೊಳಹಿತಬಲ ಹರೆಯೆ[3] ॥ ೧೨೪ ॥

ಹಿಕ್ಕಿದವು [1]ಹಯಬಲ[ವ][1] ಸುಭಟರ-
ನೊಕ್ಕಿ ತೂಱಿದವಾನೆಗಳ ಸಾ-
ಲಿಕ್ಕಿ ನಟ್ಟವು ಬಹಳ ರಕ್ತದ ಕೆಸಱ ಕೈಗಳಲಿ ।
ಮುಕ್ಕಿದವು ಮಲೆತವರ ಮಾಂಸವ-
ನಿಕ್ಕಿದವು [2]ದ್ವಿಜಗಣಕೆ[2] [3]ಸತ್ರವ[3]-
ನಿಕ್ಕಿದವು ದಿಗುವಳಯದಲಿ ರಣಧೀರನಂಬುಗಳು ॥ ೧೨೫ ॥

ಕಾಲದಲಿ ಪರಿಪಕ್ವವಾದ ವಿ-
ಶಾಲಿತಸ್ಥಾವರದ ಜಂಗಮ-
ಜಾಲವನು ಕಾಲಾಗ್ನಿ ಕವಿಕವಿದಟ್ಟಿ ಸುಡುವಂತೆ ।
ಮೇಲೆಮೇಲೊಡಗವಿವ ಬಾಣ-
ಜ್ವಾಲೆಯಲಿ ಕುರುಸೈನ್ಯಕಾನನ-
ಮಾಲೆಯನು ಕಲಿಪಾರ್ಥಪಾವಕನುರುಹಿದನು ಮುಳಿದು ॥ ೧೨೬ ॥

---

೧೨೪. [1]ಗರ್ಜನೆ (ಅ ಕುಮಾ), ಸ್ವೀಪಾ (k ಪ್ರ). [2]ದನಿದುರ್ಧರ (ಕ). [3]ಭೀತಿಯ ಲಹರಿ ಬಲ ಹರಿಯೆ (ಅ), ಭೀತಿಯೊಳಖಿಳಬಲ ಬೆದರೆ (ಕ ಪ್ರ); ಸ್ವೀಪಾ (k ಓ). [ಹೇಷಿತ-ಕೆನೆತ. ನಿಷ್ಠುರ-ಭಯಂಕರವಾದ, ಬಿರುಸಾದ. ಹೊದಱೀಳು-ಸಾಮೂಹಿಕವಾಗಿ ಪ್ರಕಟಗೊಳ್ಳು. ಗಿರಿವ್ರಜ-ಪರ್ವತಗಳ ಸಮೂಹ. ಜಱಿ-ಸರಿ. ತಾರಕೆ-ನಕ್ಷತ್ರಗಳು. ಸರಿ-ಪಕ್ಕಕ್ಕೆ ಸರಿ. ಲಹರಿ-ತರಂಗ, ಅಲೆ. ಹರಿ-ಪ್ರವಹಿಸು, ಮುಂದುವರಿ].

೧೨೫. [1]ಬಲುಹಯವ (ಪ್ರ k). [2]ದ್ವಿಜಗಣಕೆ (ಪ್ರ k). [3]ಯಂತ್ರ (ಪ್ರ k). [ಹಿಕ್ಕು-ಚೆದರಿಸು, ಬೇರ್ಪಡಿಸು (?). ಒಕ್ಕು-ನಾಶಮಾಡು. ಮುಕ್ಕು-ಗಬಗಬನೆ ತಿನ್ನು, ಕಬಳಿಸು. ಮಲೆತವರ-ಎದುರಿಸಿದವರನ್ನು, ಪ್ರತಿಭಟಿಸಿದವರನ್ನು. ಇಕ್ಕು-ಇಡು, ಏರ್ಪಡಿಸು. ದ್ವಿಜಗಣ-ಪಕ್ಷಿಸಮೂಹ. ಸತ್ರ-ಛತ್ರ, ಭೋಜನಶಾಲೆ].

೧೨೬. [ಕಾಲದಲಿ ಪರಿಪಕ್ವವಾದ-ಆಯುಷ್ಯ ಮುಗಿಯುತ್ತ ಬಂದಿರುವ, ಕೊನೆಗಾಲ ಸಮೀಪಿಸಿರುವ. ಸ್ಥಾವರಜಂಗಮ-ಚರ ಅಚರ. ಕಾಲಾಗ್ನಿ-ಪ್ರಳಯಕಾಲದ ಅಗ್ನಿ. ಒಡಗವಿವ-ಒಡನೆ (ತಟ್ಟನೆ), ಕವಿಯುವ (ಮುತ್ತುವ). ಪಾವಕ-ಅಗ್ನಿ. ಉರುಹು-ಸುಡು. ಮುಳಿ-ಕೋಪಿಸು].

ಇತ್ತ ತುಱುಗಳ ಬಿಸುಟು ರಾಯನ
ತೆತ್ತಿಗರು ತಲ್ಲಣಿಸಿ ಹಾಯ್ದರು
ಹೊತ್ತಿದವು ಮುಸುಡುಗಳು ಸಂಗರವಿಜಯಗರ್ವಿತರ ।
ಸುತ್ತ ಗೋವರ ಸನ್ನೆಯಲಿ ಪುರ-
ದತ್ತ ಮುಂ[1]ತಾ[1]ದವು ಪಶುವ್ರಜ-
ವುತ್ತರನು ಮುಳುಗಿದನು ಪರಿತೋಷಪ್ರವಾಹದಲಿ ॥ ೧೨೭ ॥

ಬಿಗಿದ ಕೆಚ್ಚಲ ತೊರೆದುಗುವ ಹಾ-
ಲುಗಳ ಮಿಗೆ ಸೂಳೆದ್ದ ಬಾಲದ
ಮೊಗ ನೆಗಹಿ ದೆಸೆದೆಸೆಯ[1]ನಾಲಿಸಿ[1] ಬೆಚ್ಚಿ ಬಿಱುವರಿವ ।
ಆಗಿದು ಸರಳಿಸಿ ನಿಲುವ ಹೊಸಬರ
ಸೊಗಡಿಗವ್ವಳಿಸುತ್ತ ಗೋವರು
ತೆಗೆದ ಪಥದಲಿ ತೆಕ್ಕೆವರಿದವು ಹಿಂಡುಹಿಂಡಿನಲಿ ॥ ೧೨೮ ॥

[1]ಕೆಲೆದು[1] ಕಡೆಗಂದಿಗಳ ಬಾಲದ
ಬಳಿಗೆ ಮೂಗಿಟ್ಟಡಿಗಡಿಗೆ ಮನ
ನಲಿದು ನೋಱಿಯನೆತ್ತಿ ಸುಕ್ಕಿಸಿ ಮತ್ತೆ ಹರಿಹರಿದು ।
ಮಲೆತು ಕಾಲಲಿ ನೆಲನ ಕೆರೆದ-
ವ್ವಳಿಸಿ ಮತ್ತೊಂದಿದಿರುವರೆ ಬಲು-
ಸಲಗ ನೀಡಿಱಿದಾಡುತಿರ್ದುದು ಹಿಂಡುಹಿಂಡಿನಲಿ ॥ ೧೨೯ ॥

---

೧೨೭. [1]ದಾ (ಅ ಕುಮಾ).
[ತೆತ್ತಿಗ-ಸೇವಕ. ಸಂಗರ-ಯುದ್ಧ. ಮುಂತಾದವು-ಮುಂದಾಗಿ ಹೊರಟವು].

೧೨೮. [1]ನೋಡುತ (ಅ ಕುಮಾ ಪ್ರ); ಸ್ವೀಪಾ (ಕ).
[ಬಿಗಿದ-ಬಿಗಿತುಕೊಂಡ, ಸಂಕುಚಿತ. ತೊರೆದುಗು-ಕೆಚ್ಚಲಲ್ಲಿ ಹಾಲು ತುಂಬಿ ಸುರಿ. ಸೂಳೆದ್ದ-ಪದೇ ಪದೇ ಮೇಲಕ್ಕೆತ್ತಿದ. ನೆಗಹು-ಮೇಲಕ್ಕೆ ಎತ್ತು. ಆಲಿಸಿ-ಕಿವಿಗೊಟ್ಟು ಕೇಳಿ. ಬಿಱುವರಿವ-ಬಿರುಸಾಗಿ ಓಡುವ. ಅಗಿ-ಹೆದರು. ಸರಳಿಸು-ಹಾರು, ನೆಗೆ. ಸೊಗಡು-ಗಂಧ, ವಾಸನೆ. ಅವ್ವಳಿಸು-ಹಿಂದೆಗೆ, ಹಿಂಜರಿ. ತೆಗೆ-ಹೊರಡು. ತೆಕ್ಕೆವರಿ-ಗುಂಪುಗುಂಪಾಗಿ ಓಡು].

೧೨೯. [1]ಕೆಲವು (ಅ ಕುಮಾ ಪ್ರ); ಸ್ವೀಪಾ (ಕ).
[ಕೆಲೆ-ಗುಟುರುಹಾಕು. ಕಡೆಗಂದಿ-ಕಡೆಯ ಕರುವನ್ನು ಹಾಕಿದ ಹಸು. ಸುಕ್ಕಿಸು-ಮುರುಟಿಸು. ಮಲೆತು-ಕೊಬ್ಬಿ. ಕೆರೆ-ಗೋರಿ ಹಾಕು. ಇದಿರುವರೆ-ಎದುರು ಬಂದರೆ. ಬಲುಸಲಗ-ಕೊಬ್ಬಿದ ಗೂಳಿ. ನೀಡಿಱಿದು-ನುಗ್ಗಿ ತಿವಿದು. ಆಡು-ಕುಣಿದಾಡು, ವಿಹರಿಸು].

ತಿರುಗಿ ಕೆಂಧೂಳಿಡುತ ತುಱುಗಳು
ಪುರಕೆ ಹಾಯ್ದುವು ನಲವು ಮಿಗಲು-
ತ್ತರಕಿರೀಟಿಗಳಾಂತುಕೊಂಡರು ಮತ್ತೆ ಕಾಳೆಗವ ।
ಅರಸುಮೋಹರ ಮುಱಿದು ಹರಿಬವ
ಮರಳಿಚುವ ಮಿಡುಕುಳ್ಳ ವೀರರ
ಧುರಕೆ ಬರಹೇಳೆನುತ [1]ಬಾಣವ[1] ತೂಗಿದನು ಪಾರ್ಥ ॥ ೧೩೦ ॥

---

೩. ಅಭಿಮನ್ಯುವಿನ ವಿವಾಹ

ಕೇಳು ಜನಮೇಜಯ ಧರಿತ್ರೀ-
ಪಾಲ ಚರಿತಾಜ್ಞಾತವಾಸವ
ಬೀಳುಕೊಟ್ಟರು ಬಹಳ ಹರ್ಷದಲಿರುಳ ನೂಕಿದರು ।
ಮೇಲಣವರಭ್ಯುದಯವನು ಕೈ
ಮೇಳವಿಸಿ ಕೊಡುವಂತೆ ಮೂಡಣ
ಶೈಲಮುಖದಲಿ ಕೆಂಪು ಸುಳಿದುದು ಭಾನುಮಂಡಳದ ॥ ೧೩೧ ॥

ಏಳುಕುದುರೆಯ ಖುರಪುಟದ ಕೆಂ-
ಧೂಳಿಯೋ ಕುಂತೀಕುಮಾರಕ-
ರೇಳಿಗೆಯ ತನಿರಾಗರಸವುಬ್ಬರಿಸಿ ಪಸರಿಸಿತೋ ।
ಹೇಳ[1]ಲರಿದೆನಲಮರವರದಿಗು-[1]
ಬಾಲಕಿಯ ಬೈತಲೆಯ ಕುಂಕುಮ-
ಜಾಲವೋ ಮೇಣೆನಲು ದಿನಪನ ಚೂಣಿ ರಂಜಿಸಿತು ॥ ೧೩೨ ॥

---

೧೩೦. [1]ಬಿಲ್ಲನು (ಬಿ).
[ಕಿರೀಟಿ-ಅರ್ಜುನ. ಆಂತುಕೊಳ್ಳು-ಕೈಗೊಳ್ಳು. ಮೋಹರ-ಸೈನ್ಯ. ಮುಱಿದು-ನಾಶವಾಗಿ. ಹರಿಬ-(ಯುದ್ಧ)ಕಾರ್ಯ. ಮಿಡುಕು-ಸಾಮರ್ಥ್ಯ, ಪರಾಕ್ರಮ. ಧುರ-ಯುದ್ಧ].

೧೩೧. [ಚರಿತ-ಆಗಿಹೋದ, ನಡೆದುಹೋದ. ಕೈಮೇಳವಿಸಿ-ಕೈಕೂಡಿಸಿ].

೧೩೨. [ತನಿರಾಗರಸ-ಪರಿಪೂರ್ಣವಾದ ಪ್ರೇಮರಸ. ಅಮರವರದಿಗುಬಾಲಕಿ-ಇಂದ್ರ (ಅಮರವರ) ದಿಕ್ಕೆಂಬ (ಪೂರ್ವದಿಕ್ಕು) ಶ್ರೇಷ್ಠಳಾದ ವನಿತೆ. ಚೂಣಿ-ಸೈನ್ಯದ ಮುಂಭಾಗ].

ಸರಸಿಜದ ಪರಿಮಳಕೆ ತುಂಬಿಯು
[1]ಬರವ ಕೊಟ್ಟನು[1] ಚಂದ್ರಕಾಂತಕೆ
ಬೆಱಗನಿತ್ತನು ಜಕ್ಕವಕ್ಕಿಯು ಸೆಱೆಯ ಬಿಡಿಸಿದನು ।
ಕೆರಳಿ ನೈದಿಲ ಸಿರಿಯ ಸೂಱೆಯ
ಕರಿಸಿದನು ರಿಪುರಾಯರಾಜ್ಯವ-
ನೊರಸಿದನು ರವಿ ಮೂಡಣಾದ್ರಿಯೊಳಿತ್ತನೋಲಗವ ॥ ೧೩೩ ॥

ತಮದ ಗಂಟಲನೊಡೆದು [1]ಮೂಡುವ[1]
ದ್ಯುಮಣಿಮಂಡಲದಂತೆ ಜೀವ-
ಭ್ರಮೆಯ ಕವಚವ ಕಳೆದು ಹೊಳೆಹೊಳೆವಾತ್ಮನಂದದಲಿ ।
ವಿಮಲಬಹಳಕ್ಷತ್ರರಶ್ಮಿಗ-
ಳಮರಿ ದೆಸೆಗಳ ಬೆಳಗೆ ರಾಜೋ-
ತ್ತಮ ಯುಧಿಷ್ಠಿರದೇವನೆಸೆದನು ರಾಜತೇಜದಲಿ ॥ ೧೩೪ ॥

ಹರನ ನಾಲ್ಕು [1]ಮುಖದಮಧ್ಯ
ಸ್ಫುರಿತ[1]ದೀಶಾನ[2]ದವೊಲಾ[2] ಸೋ-
ದರಚತುಷ್ಟಯಮಧ್ಯದಲಿ [2]ಕಂಡನು[2] ಯುಧಿಷ್ಠಿರನ ।
ಅರಸಿಯನು ನಾಮಡಲಿ ವಿವಿಧಾ-
ಭರಣಮಣಿರಶ್ಮಿಗಳ ಹೊದಱಿನ
ಹೊರಳಿಯಲಿ ಕಣ್ಣಾಲಿ ಕೋರೈಸಿದವು ನಿಮಿಷದಲಿ ॥ ೧೩೫ ॥

---

೧೩೩. [1]ಧೞವ ಕೊಟ್ಟನು (ಪ್ರ k), ವರವನಿತ್ತನು (ಓ); ತೆಱವ ಕೊಟ್ಟನು (ಸೂಚಿತ ಪಾಠ-'ಶ್ರೀ').
[ಬರವು-ಆಗಮನ. ಬೆಱಗು-ಆಶ್ಚರ್ಯ, ವಿಸ್ಮಯ. ಜಕ್ಕವಕ್ಕಿ-ಚಕ್ರವಾಕ ಪಕ್ಷಿ. ಕೆರಳು-ಕೋಪಗೊಳ್ಳು, ಉದ್ರೇಕಗೊಳ್ಳು. ರಿಪುರಾಯ ರಾಜ್ಯ-(ಸೂರ್ಯನಿಗೆ) ಶತ್ರು ರಾಜನಾದ ಕತ್ತಲೆಯ ರಾಜ್ಯಭಾರ. ಒರಸು-ನಾಶಮಾಡು].

೧೩೪. [1]ದ ಹರುಷ (ಅ ಕುಮಾ); ಸ್ವೀಪಾ (k ಪ್ರ).
ದ್ಯುಮಣಿ-ಸೂರ್ಯ, ಜೀವಭ್ರಮೆಯ ಕವಚವ ಕಳೆದು ಹೊಳೆಹೊಳೆವಾತ್ಮನಂದದಲಿ- ಈ ಜಗತ್ತು ಸತ್ಯವೆಂಬುದಾಗಿ ಜೀವಾತ್ಮನು ಹೊಂದಿರುವ ಭ್ರಮೆಯ ಕವಚವನ್ನು ಅಂದರೆ ಅಜ್ಞಾನವನ್ನು ನಿವಾರಿಸಿಕೊಂಡು ಸ್ವಯಂ ಪ್ರಕಾಶಮಾನವಾಗಿ ಬೆಳಗುವ ಆತ್ಮನಂತೆ. ಕ್ಷತ್ರರಶ್ಮಿ-ತೇಜಸ್ಸಿನಿಂದ ಕೂಡಿದ ಕಿರಣಗಳು. ಅಮರು-ಆಕ್ರಮಿಸು].

೧೩೫. [1]ಮುಖ ಮಧ್ಯದಸ್ಫುರಿತ ದೀಶಾನನದೊಲಿರೆ (ಅ); ಸ್ವೀಪಾ (k ಪ್ರ). [2]ನೆಲಸಿಹ (k).

ವಲಲ ಕಂಕ ಬೃಹನ್ನಳೆಯು ಮೈ-
ಸುಳಿವ ಹೋಲುವರೆಂದು ಕೆಲಬರು
ಕೆಲರಿದೆತ್ತಣ ನರರು ತೆಗೆ ಸುರಲೋಕಪಾಲಕರು ।
ತಿಳಿಯಲರಿದೆವುಗೆಂದು ಕೆಲಬರು
ತಳವೆಳಗುಗೊಳುತಿರಲು ಮುಂದಿಯು
[1]ತೊಲಗ ನೂಕಿಸಿ[1] ತಂದೆಗುತ್ತರ ನಗುತ[2]ಲಿಂತೆಂದ[2] ॥ ೧೩೬ ॥

ತಾತ ಬಿನ್ನಹ ನಿನ್ನೆ ವೈರಿ-
ವ್ರಾತವನು ಗೆಲಿದಾತ[1]ನೀ ತೋ-
ರ್ಪಾತನೀತನ ಮುಂದೆ ಮೆಱೆವವ ಕೀಚಕಾಂತಕನು[1] ।
ಈತ ನಕುಲನು ವಾಮದಲಿ ನಿಂ-
ದಾತ ಸಹದೇವಾಂಕನನಿಬರಿ-
ಗೀತ ಹಿರಿಯನು ಧರ್ಮನಂದನನೆಂದು [2]ತೋಱಿದನು[2] ॥ ೧೩೭ ॥

ವರುಷವೊಂದಜ್ಞಾತವಾಸವ-
[1]ನುರುಳೆ[1] ನೂಕಿದರಿಲ್ಲಿ ಬಳಕೆಯು
ಹೊರೆಯು ಹೆಸರವು ಬೇಱ[3] ನಡೆವಳಿಯುಂಗವ[2]ಣೆ[2] ಬೇಱ[3] ।

---

೧೩೫. [ಹರನ ನಾಲಕು ಮುಖ-ಸದ್ಯೋಜಾತ, ವಾಮದೇವ, ಈಶಾನ, ಅಘೋರ, ತತ್ಪುರುಷ ಎಂಬ ಈಶ್ವರನ ಐದು ಮುಖಗಳು. ಮಧ್ಯಸ್ಫುರಿತದೀಶಾನ-ಮಧ್ಯದಲ್ಲಿ ಹೊಳೆಯುತ್ತಲಿರುವ ಈಶಾನ ಮುಖ. ಸೋದರ ಚತುಷ್ಟಯ-ನಾಲ್ವರು ತಮ್ಮಂದಿರು. ವಾಮ-ಎಡಭಾಗ. ಮಣಿರಶ್ಮಿ-ರತ್ನಗಳ ಕಾಂತಿ. ಹೊದರು-ಒತ್ತಾಗಿ ಹೆಣೆದುಕೊಂಡಿರುವ. ಹೊರಳಿ-ಸಮೂಹ].

೧೩೬. [1]ಕೆಲಕೆ ನೂಕಿಯೆ. (ಅ ಕುಮಾ); ಸ್ವೀಪಾ (ಕ k).
[2]ಕೈಮುಗಿದ (ಅ ಕುಮಾ); ಸ್ವೀಪಾ (ಕ).
[ಮೈಸುಳಿವು-ಮೈಯ ಗುರುತು. ಸುರಲೋಕಪಾಲಕರು-ದೇವತೆಗಳು. ಅರಿದು-ಅಸಾಧ್ಯ. ತಳವೆಳಗುಗೊಳು-ವಿಸ್ಮಯಗೊಳ್ಳು. ತೊಲಗನೂಕಿಸಿ-ತೊಲಗಿ ಹೋಗುವಂತೆ ಆಚೆಗೆ ನೂಕಿ].

೧೩೭. [1]ನೀ ತೋರ್ಪಾತನೀತನ ಮುಂದೆ ಮೆರೆವವ ಕೀಚಕಾಂತಕನು (ಕ ಕುಮಾ).
[2]ತೋರಿಸಿದ (ಅ ಕುಮಾ); ಸ್ವೀಪಾ (ಕ k).
[ತಾತ-ತಂದೆ. ವ್ರಾತ-ಸಮೂಹ. ಅಂಕ-ಹೆಸರು].

೧೩೮. [1]ನಿರದೆ (ಅ ಕುಮಾ); ಸ್ವೀಪಾ (ಕ ಓ k). [2]ದು (ಅ ಕುಮಾ); ಸ್ವೀಪಾ (ಓ k).

ಮರು[3]ಳ[3]ನಂತಿರೆ ಜಗಕೆ ತೋಱಿನೆ
ಪರಮತತ್ತ್ವಜ್ಞಾನಿ ನಮ್ಮಾ-
ಯರಸುತನ ಫಲವಾಯ್ತು ನಡೆಯೆಂದನು ಕುಮಾರಕನು ॥ ೧೩೮ ॥

ಶಿರವನೆತ್ತಿ ವಿರಾಟಭೂಪನ
ಕರೆದು ಹತ್ತಿರೆ ಪೀಠದಲಿ ಕು-
ಳ್ಳಿರಿಸಲೊಡೆಮುರುಚಿದನು ಕೆಲದಲಿ ಗದ್ದುಗೆಯ ಸರಿದು ।
ಪರಮಸುಕೃತವಲಾ ಧರಾಧೀ-
ಶ್ವರನ ದರ್ಶನವಾಯ್ತು ಧನ್ಯರು
ಧರೆಯೊಳ[1]ವ್ವಿಂದಾರು ಭಾಗ್ಯರು ಎಂದ ಮತ್ಸ್ಯನೃಪ[2] ॥ ೧೩೯ ॥

ದೇಶ ನಿಮ್ಮದು ನಗರ ಹೆಚ್ಚಿದ
ಕೋಶ ನಿಮ್ಮದು ನನ್ನ ಜೀವವಿ-
ಳಾಸ ನಿಮ್ಮದು [1]ಸಲಿಸ[1]ಬೇಹುದು ಬಿನ್ನಹದ ಹದನ ।
ಈ ಸಮಂಜಸ ದಿವಸದಲಿ ಸಿಂ-
ಹಾಸನದಲಭಿಷೇಕವನು ಭೂ-
ವಿಾಶ ವಿಸ್ತರಿಸುವೆನು ಚಿತ್ತೈಸೆಂದನಾ [2]ಮತ್ಸ್ಯ[2] ॥ ೧೪೦ ॥

ಎನಲು ನಗುತೆಂದನು ಮಹೀಪತಿ
ವಿನಯಮಧುರರಸಾಭಿಷೇಕವ-
ನೆನಗೆ ಮಾಡಿದೆ ಸಾಕು ಪುನರುಕ್ತಾಭಿಷೇ[1]ಚನವೆ[1] ।
ಜನವಿದೆಮ್ಮದು ನೀನು ನಮ್ಮಾ-
ತನು ಧರಿತ್ರಿಯಿದೆಮ್ಮದೆಂಬೀ
ನೆನಹು ತಾನುಪಚಾರ [2]ನಮಗೇಕೆಂ[2]ದನಾ ಭೂಪ ॥ ೧೪೧ ॥

---

೧೩೮. [3]ಳ (ಅ); ಸ್ವೀಪಾ (ಕುಮಾ).
[ಉರುಳೆ ನೂಕು-ಉರುಳುವಂತೆ ಕಳೆ. ಬಳಕೆಯ ಹೊರೆಯ-ಬಳಕೆಗೆ ಹತ್ತಿರವಾದ. ಅಂಗವಣೆ-ರೀತಿ, ವಿಧಾನ. ಮರುಳ-ದಡ್ಡ].

೧೩೯. [1]ಮಗಿನ್ನಾರು ಸರಿಯೆಂದನು ವಿರಾಟನೃಪ (ಅ ಕುಮಾ); ಸ್ವೀಪಾ (ಕ).
ಒಡೆ ಮುರುಚು-ಒಡೆಯುವಂತೆ ತಿರುಗಿಸು. ಗದ್ದುಗೆ-ಸಿಂಹಾಸನ].

೧೪೦. [1]ಸಲಹ (ಅ ಕುಮಾ); ಸ್ವೀಪಾ (k ಪ್ರ). [2]ಭೂಪ (ಅ ಕುಮಾ); ಸ್ವೀಪಾ (k ಪ್ರ).
[ಕೋಶ-ಭಂಡಾರ. ವಿಳಾಸ-ಸೌಖ್ಯ, ನೆಮ್ಮದಿ. ಸಮಂಜಸ-ಯೋಗ್ಯವಾದ, ಉಚಿತವಾದ].

ಎಂ[1]ದೊಡು[1]ತ್ತರನರಸನಂಘ್ರಿಯೊ-
ಳಂದು ಮುಕುಟವ ಚಾಚಿ ಬಿನ್ನಹ-
ವಿಂದು ನೇಮವ ಕೊಡಿ ಕುಮಾರಿಯುಮೀವೆನರ್ಜುನಗೆ ।
ಎಂದೊ[2]ಡೋಳೋಳೆಂದು[2] ನಸುನಗೆ-
ಯಿಂದ ಪಾರ್ಥನ ನೋಡೆ ಕೈಮುಗಿ-
ದೆಂದನಾತನು ಮನದ ನಿಶ್ಚಯವನು ಯುಧಿಷ್ಠಿರಗೆ ॥ ೧೪೨ ॥

ವರುಷವಿವಳಲಿ ನಾಟ್ಯವಿದ್ಯೆಯ
ಪರುಠವಿಸಿದೆನು ತಂದೆಯಂ[1]ತಿ[1]ರೆ
ತರುಣಿ [2]ಬಯಸಿದಳಾ ಪ್ರಕಾರದ ಶಿಷ್ಯನಿಷ್ಠೆಯಲಿ[2] ।
ಗುರುತನದ ಗರುವಾಯ[3]ಗೆಟ್ಟಿ-
ನ್ನರಸಿಯಾಗಲಿಯೆಂಬುದನುಚಿತ[3]
ವರಕುಮಾರಿಯ[4]ನೀವುದ[4]ಭಿಮನ್ಯುವಿಗೆ ಕೊ[5]ಡಿಯೆಂ[5]ದ ॥ ೧೪೩ ॥

ಎನಗೆ ನೀವೇನಾತನೇನು-
ತ್ತಮದೊಳಾಗಲಿ ಯೆನೆ ವಿರಾಟನ-
ನವನಿಪತಿ ಮನ್ನಿಸಿದನಿತ್ತ[1]ಸು[1] ನಗುತ ವೀಳೆಯವ ।
ಎಮಗೆ ಪರಮಸ್ವಾಮಿ ಯೆಮ್ಮು-
ತ್ತಮದ ನೆಲೆಯೆಮ್ಮೆಲ್ಲರಸು ಯಾ-
ದವಶಿರೋಮಣಿ ಕೃಷ್ಣನಭಿಮತವೆಮ್ಮ ಮತವೆಂದ ॥ ೧೪೪ ॥

---

೧೪೧. [1]ತವದು (ಅ ಕುಮಾ); ಸ್ವೀಕಾ (k). [2]ವಾಕವಿದೆಂ (ಓ); ಭಾವವೆಯಿಂ (k ಪ್ರ).
[ಪುನರುಕ್ತ-ಮತ್ತೆ ಹೇಳುವುದು, ಮಾಡುವುದು. ಧರಿತ್ರಿ-ರಾಜ್ಯ. ಪಿಸಪು-ಆಲೋಚನೆ].

೧೪೨. [1]ದಸು (ಅ ಕುಮಾ); ಸ್ವೀಕಾ (ಕ k). [2]ಡೇಳೆಂದು (ಅ); ಸ್ವೀಕಾ (k ಪ್ರ ಕುಮಾ).
[ನೇಮ-ಅಪ್ಪಣೆ, ಆಜ್ಞೆ].

೧೪೩. [1]ತೀ (ಅ ಕುಮಾ); ಸ್ವೀಕಾ (ಕ ಓ k ಪ್ರ).
[2]ಭಜಿಸಿದಳಾ ಪ್ರಕಾರ ರಹಸ್ಯ ದೇಶದಲಿ (ಅ ಕುಮಾ); ಸ್ವೀಕಾ (ಪ್ರ ಓ k).
[3]ಯುಕ್ತಲು ಅರಸಿಯೆಂಬುದಿದಾವಮತವೀ (ಅ ಕುಮಾ); ಸ್ವೀಕಾ (ಪ್ರ ಓ k).
[4]ನೀವೊಡ (ಅ), ನೀವದ (ಕುಮಾ); ಸ್ವೀಕಾ (ಪ್ರ ಓ k).
[5]ಡಲೆಂ (ಅ ಕುಮಾ); ಸ್ವೀಕಾ (ಕ k).
[ಪರುಠವಿಸು-ವಿವರವಾಗಿ ಬೋಧಿಸು. ಗರುವಾಯಿ-ದೊಡ್ಡತನ, ಘನತೆ].

೧೪೪. [1]ಲು (ಅ); ಸ್ವೀಕಾ (ಕ ಕುಮಾ).
[ಅಸು-ಪ್ರಾಣ. ಮತ, ಅಭಿಮತ-ಅಭಿಪ್ರಾಯ].

ಪೊಡವಿಯೊಡೆತನವೆಮಗೆ[1]ತಾ[1] ಕ-
ಟ್ಟೊಡೆಯ [2]ಶ್ರೀಪತಿ[2] ಕೃಷ್ಣನೊಡಬ-
ಟ್ಟೊಡೆ ವಿವಾಹ ನಿರಂತರಾಯವು ಚಿಂತೆ ಬೇಡೆನಲು ।
ಒಡಬಡಲಿ ಮೇಣಿರಲಿ ಗುರು ನಿ-
ಮ್ಮಡಿ ಮುರಾರಿಯ ತೋಱಿಸುವಿರಾ-
ದೊಡೆ ಕೃತಾರ್ಥನು ತಾನೆನುತ ಹಿಗ್ಗಿದನು ಮತ್ಸ್ಯನೃಪ ॥ ೧೪೫ ॥

ಪರಿಪರಿಯ ಪಾವುಡವ ಕಟ್ಟಿಸಿ
ಹರುಷದಲಿ ಬಿನ್ನಹದ ವೋಲೆಯ
ಬರಸಿದನು ವೇಗಾಯ್ಲದೂತರನಟ್ಟಿದನು ಭೂಪ ।
ಚರರು ಪಯಣದ ಮೇಲೆ ಪಯಣದ
ಭರದಿ ಬಂದರು ಕೃಷ್ಣರಾಯನ
ಪುರಕೆ ಪರಿತೋಷದಲಿ ಹೊಕ್ಕರು ರಾಜಮಂದಿರವ ॥ ೧೪೬ ॥

ಚರರಿಗುಡುಗೊಱೆ ಗಂಧ[1]ವ[1]ಖಿಲಾ-
ಭರಣ ಕತ್ತುರಿ ಕರ್ಪುರವನಿ-
ತ್ತರಿದಿಶಾಪಟ ಬೀಳು[2]ಕೊ[2]ಟ್ಟನು ರಾಯಸವ ಬರಸಿ ।
ಮರಳಿ ದೂತರು ಬಂದು ಮತ್ಸ್ಯನ
ಪುರವ ಹೊಕ್ಕರು ಕೃಷ್ಣರಾಯನ
ಕರುಣದಳತೆಯ ಬಿನ್ನವಿಸಿದರು ಪಾಂಡುತನಯರಿಗೆ ॥ ೧೪೭॥

---

೧೪೫. [1]ಮಗೆ (ಅ); ಸ್ವೀಪಾ (ಪ್ರ k). [2]ಕೃಷ್ಣನು (ಅ ಕುಮಾ); ಸ್ವೀಪಾ (ಪ್ರk). [ಕಟ್ಟೊಡೆಯ–ನಿಜವಾದ ಸ್ವಾಮಿ. ಒಡಬಡು–ಒಪ್ಪು. ನಿರಂತರಾಯ–ಅಡ್ಡಿಯಿಲ್ಲದ್ದು, ನಿರ್ವಿಘ್ನ. ನಿಮ್ಮಡಿ–ನಿಮ್ಮಗಳ, ನಿಮ್ಮ].

೧೪೬. [ಪಾವುಡ–ವಸ್ತ್ರ, ಉಡುಗೊರೆ. ಬಿನ್ನಹದ ಓಲೆ–ವಿಜ್ಞಾಪನಾ ಪತ್ರ. ವೇಗಾಯ್ಲ–ವೇಗವಾಗಿ ಹೋಗುವವನು].

೧೪೭. [1]ನಿ (ಅ ಕುಮಾ), ದ (ಪ್ರ); ಸ್ವೀಪಾ (ಕ). [2]ಗೊ (ಅ ಕುಮಾ); ಸ್ವೀಪಾ (ಕ). [ಅರಿದಿಶಾಪಟ–ಶತ್ರುಗಳನ್ನು ದಿಕ್ಕುದಿಕ್ಕಿಗೆ ಚೆದರುವಂತೆ ಮಾಡುವವನು. ರಾಯಸ–ಓಲೆ, ಪತ್ರ].

ಕಾಲ ಕೈಗೊಡುವೊಡೆ ಲೇಸಿನ
ಮೇಲೆ ಲೇಸುಗಳೊದಗುವವು ಭೂ-
ಪಾಲ ಕುಂತಿಯ ಸುತರ ಬಳವಿಗೆ ಮೊದಲ ಮಂಗಳವು ।
ಮೇಲೆ [1]ತಂಗಿಯ ಮಗನ[1] ಮದುವೆ ವಿ-
ಶಾಲ [2]ಶುಭ[2]ವದು ನಿಖಿಳಯಾದವ-
ಜಾಲ ಪಯಣವ ಮಾಡಲೆಂದಸುರಾರಿ ನೇಮಿಸಿದ ॥ ೧೪೮ ॥

ಕೊಳುಕೊಡೆಗೆ ತಪ್ಪೇನು ವಸುವಿನ
ಕುಲ ವಿರಾಟನು ಚಂದ್ರವಂಶಾ-
ವಳಿಯವರು ನೀವಾಭಿಜಾತ್ಯದೊಳಿಲ್ಲ ಹಳಿವುಗಳು ।
ಒಳುನುಡಿಗಳಲಿ ದೈವಶಕುನಾ-
ವಳಿಗಳಾದೊಡೆ ಹರುಷದಲಿ ಮಂ-
ಗಳಮುಹೂರ್ತವ ಮಾಡಿಯೆಂದನು ಕೃಷ್ಣ ನಸುನಗುತ ॥ ೧೪೯ ॥

ಒಸಗೆಯಲಿ ನಿಸ್ಸಾಳತತಿ ಗ-
ರ್ಜಿಸಿದವಖಿಳಜನಂಗಳುತ್ಸಾ-
ಹಿಸಿತು ಕನ್ಯಾವರಣವಾಯಿತು ವೈದಿಕೋಕ್ತಿಯಲಿ ।
ಹಸೆಯುಲಭಿಮನ್ಯುವನು ಸಿಂಗಾ-
ರಿಸಿತು ಯದುಪಾಂಚಾಲಮತ್ಸ್ಯ-
ಪ್ರಸರದಲಿ ಮೆಟ್ಟಕ್ಕಿ ಜೀರಿಗೆ ಬೆಲ್ಲವನುವಾಯ್ತು ॥ ೧೫೦ ॥

---

೧೪೮. [1]ಅನುಜೆಯ ಸುತನ (ಪ್ರ). [2]ಸುಖ (ಅ ಕುಮಾ; ಸ್ವೀಪಾ (ಕ ಓ k ಪ್ರ). [ಲೇಸು-ಒಳ್ಳೆಯದು, ಶುಭ. ಬಳವಿ-ಏಳಿಗೆ].

೧೪೯. [ಕೊಳುಕೊಡೆ-ಕೊಟ್ಟು(ಪ್ರತಿಯಾಗಿ) ತೆಗೆದುಕೊಳ್ಳುವುದು. ವಸು-ಜಮದಗ್ನಿಯ ಐವರು ಮಕ್ಕಳಲ್ಲಿ ಮೂರನೆಯವನು. ಅಭಿಜಾತ್ಯ-ಸತ್ಕುಲ. ಹಳಿವು-ನಿಂದೆ, ಕಳಂಕ].

೧೫೦. [ಒಸಗೆ-ಮಂಗಳಕಾರ್ಯ. ನಿಸ್ಸಾಳ-ಒಂದು ಬಗೆಯ ಚರ್ಮವಾದ್ಯ. ವರಣ-ವರಿಸುವುದು. ಮೆಟ್ಟಕ್ಕಿ-ವಧೂವರರು ವಿವಾಹ ಕಾಲದಲ್ಲಿ ಮೆಟ್ಟಿ ನಿಲ್ಲುವ ಅಕ್ಕಿಯ ಹರಹು. ಜೀರಿಗೆ ಬೆಲ್ಲ-ವಿವಾಹ ಕಾಲದಲ್ಲಿ ವಧೂವರರು ಪರಸ್ಪರ ಶಿರದ ಮೇಲೆ ಹಾಕುವ ಮಂಗಳದ್ರವ್ಯಗಳು. ಅನುವಾಗು-ಸಿದ್ಧವಾಗು].

ಇದು ಶುಭೌಘದ ಗರುಡಿ ಬಹುಸಂ-
ಪದದ ನೆಲೆವನೆ ಸೊಂಪಿನಾಗರ-
ವಿದು ಪರಾನಂದಪ್ರವಾಹದ ಜನ್ಮಭೂಮಿಯಿದು ।
ಮುದದ ಕೇಳೀಸ್ಥಾನ ವಿಮಲಾ-
ಭ್ಯುದಯದೋಲಗಸಾಲೆ ಲಕ್ಷ್ಮೀ-
ಸದನವೆನೆ ರಂಜಿಸಿದುದಭಿಮನ್ಯುವಿನ ವೈವಾಹ ॥ ೧೫೧ ॥

---

೧೫೧. [ಶುಭೌಘ-ಮಂಗಳಗಳ ಮೊತ್ತ. ಆಗರ–ಗಣಿ. ಪರಾನಂದ–ಅಲೌಕಿಕವಾದ ಆನಂದ. ಕೇಳಿ–ಕ್ರೀಡೆ. ಸದನ–ಮನೆ].

ಉದ್ಯೋಗಪರ್ವ

೧. ಅರ್ಜುನ ದುರ್ಯೋಧನರು ಕೃಷ್ಣನಲ್ಲಿಗೆ ಹೋದದ್ದು

ಒಂದುದಿನವೊಡ್ಡೋಲಗಕ್ಕೈ-
ತಂ¹ದು ನಿ¹ಖಿಳಾವನಿಯ ರಾಯರ
ಮಂದಿಯಲಿ ಮುರವೈರಿ ನುಡಿದನು ರಾಜ²ಮಂತ್ರವನು² ।
ಹಿಂದೆ ಜೂಜಿನ ವಿಲಗದಲಿ ಮನ-
ನೊಂದರಿವರಡವಿಯಲಿ ಧರೆಗಿ-
ನ್ನೆಂದು ಸೇರುವರೇನು ಹದನೀ ಪಾಂಡುತನಯರಿಗೆ ॥ ೧ ॥

ಕಳುಹುವುದು ಶಿಷ್ಟರನು ಧರಣೀ-
ತಳವ ಬೇಡಿಸು¹ವಲ್ಲಿ¹ ಸಾಮವ
ಬಳಸುವುದು ಭೀಷ್ಮಾದಿಗ²ಳಿಗ²ಟ್ಟುವುದು ವಿನಯದಲಿ ।
ತಿಳಿವುದಾತನ ³ನೆಲೆಯ³ನಲ್ಲಿಂ-
ಬಳಿಕ ನಯವಿಲ್ಲೆಂದೊಡಾಹವ-
ದೊಳಗೆ ಕೈದೋಱುವುದು ಮತವೆಂದನು ಮುರಧ್ವಂಸಿ ॥ ೨ ॥

---

೧. ¹ದನ (ಅ ಕುಮಾ), ಸ್ವೀಪಾ (ಪ್ರ ಕ ಓ k). ²ಕಾರಿಯವ (ಪ್ರ ಕ k ಅ).
[ವಿಲಗ–ಕಷ್ಟ, ತೊಂದರೆ].

೨. ¹ವುದು (ಅ), ಸ್ವೀಪಾ (ಸರ್ವತ್ರ). ²ಳಕ (ಅ ಕುಮಾ), ಸ್ವೀಪಾ (ಸರ್ವತ್ರ). ³ಮತವ (ಅ ಕ), ಹದನ (ಪ್ರ k).
[ಶಿಷ್ಟ–ಸಜ್ಜನ, ಯೋಗ್ಯ ಮನುಷ್ಯ. ಸಾಮ–ರಾಜಕಾರಣದ ನಾಲ್ಕು ಉಪಾಯಗಳಲ್ಲಿ ಒಂದು; ಸಂಧಾನ, ಸೌಮ್ಯಮಾರ್ಗದ ರಾಜಕಾರಣ. ನೆಲೆ–ಮನಸ್ಸಿನ ನೆಲೆ, ಮನಸ್ಸ್ಥಿತಿ. ನಯ–ನ್ಯಾಯ, ನೀತಿ].

ಮದುವೆಗೋಸುಗ ಬಂದೆನಾವಿ-
ನ್ನಿವಱ ನೋಲಗ ರಾಜಕಾರ್ಯದ
ಸದನನಟ್ಟುವುದಱುಹುವುದು ಬಹೆವಾವು ಕರಸಿದೊಡೆ ।
ಹದುಳವಿಹುದೆಂದಸುರರಿಪು ಕರು-
ಣದಲಿ ಕುಂತೀಸುತನಾ ದ್ರೌ-
ಪದಿಯನಭಿಮನ್ಯುವ ಸುಭದ್ರೆಯ ಹರಸಿ ಬೀಳ್ಕೊಂಡ ॥ ೩ ॥

ಓಲೆಯುಡುಗೊಱೆಸಹಿತ ಧರಣೀ-
ಪಾಲರಿಗೆ ಪಾಂಡವರು ಶಿಷ್ಟರು
ಕಾಳೆಗಕೆ [1]ನೆರ[1]ವಾಗಲೋಸುಗ ಕರೆದರಲ್ಲಲ್ಲಿ ।
ಆಳುಕುದುರೆಯು [2]ನೆರಹಿ[2] [3]ಬಂದರು[3]
ಮೂಲೆಯರಸುಗಳೆಲ್ಲ ಕುರುಭೂ-
ಪಾಲನಲ್ಲಿಗೆ ಕೆಲರು ಕೆಲಬರು [4]ಪಾಂಡವರ ಹೊರೆಗೆ[4] ॥ ೪ ॥

ಧರಣಿಯೆಡೆಗೆಡೆ ರಾಯಮೋಹರ
ತೆರಳಿತಿಬ್ಬರು ರಾಯರಿಗೆ ಕೈ-
ನೆರ[1]ವ ತೋಱಲು[1] ಕವಿದುಬಂದುದು ಕಾಹಿನಳತೆಗಳ ।
ಅರಿಗಳತಿ ಹೆಚ್ಚಿದರು ವ್ಯಾಮುಱಿ-
ದಿರಲು [2]ಮಹಿಮೆಗ[2]ಮಾನ್ಯವಹುದಿ-
ನ್ನುರುವಣಿಸಬೇಕೆಂದು ದುರ್ಯೋಧನನು ಚಿಂತಿಸಿದ ॥ ೫ ॥

---

೩. [ಹದುಳ-ಕ್ಷೇಮ, ನೆಮ್ಮದಿ].

೪. [1]ಬಲ-(ಪ್ರ ಓ ಕ k). [2]ಕೂಡಿ (ಅ ಕುಮಾ), ಸ್ವೀಪಾ (ಪ್ರ ಕ k). [3]ಬೆಸ (ಅ ಕುಮಾ), ದಿಕ್ಕಿನ (ಅ), ಸ್ವೀಪಾ (ಓ). [4]ಪಾಂಡುತನಯರಿಗೆ (ಸರ್ವತ್ರ ಸ್ವೀಪಾ (ಓ).

[ನೆರಹು-ಒಟ್ಟುಗೂಡಿಸು. ಹೊರೆ-ಹತ್ತಿರ, ಸಮೀಪ].

೫. [1]ವರದೋರಲು (ಅ ಕುಮಾ), ಸ್ವೀಪಾ (ಓ). [2]ಧರಣಿಗೆ (ಅ ಕುಮಾ ಸ್ವೀಪಾ (ಓ).

[ಎಡೆಗೆಡು-ನೆಲೆತಪ್ಪು, ಸ್ಥಳ ಬಿಟ್ಟು ಕದಲು. ಮೋಹರ-ಸೈನ್ಯ. ಕೈನೆರ ಬಿದ್ದ ಸಹಾಯ. ಅಮಾನ್ಯ-ಅಗೌರವ. ಉರವಣಿಸು-ಶೀಘ್ರವಾ ಬಿರುಸಿನಿಂದ, ಕಾರ್ಯದಲ್ಲಿ ತೊಡಗು].

ಹದನನಾಪ್ತರಿಗಱುಹಿದನು ಗು-
ಪ್ತದಲಿ ಕೃಷ್ಣನನೊಳಗುಮಾಡುವ
ಮುದದೆ ಬಂದನು ಕೌರವೇಂದ್ರನು ದ್ವಾರಕಾಪುರಿಗೆ ।
ಇದನು ಭೇದಿಸಿ ಬೇಹಿನವರಱು-
ಹಿದರು ಕುಂತೀಸುತರಿಗತಿವೇ-
ಗದಲಿ ಧರ್ಮಜನಳುಕಿ ಕಳುಹಿದನಿಂದ್ರನಂದನನ ॥ ೬ ॥

ಅಟ್ಟಿ ಬಳಲಿದ ಶ್ರುತಿಗೆ ಸರಿ ವ್ಯ-
ಗೊಟ್ಟ ತಾವಿದು ತಾಪಸರು ಜಪ-
ಗುಟ್ಟಿ ಜಿನುಗಿದಡವರನುಜ್ಜೀವಿಸಿದ ತಾವಿದಲಾ ।
ಹುಟ್ಟುಸಾವಿನ ವಿಲಗ [1]ಜೀವರ[1]
ಬಿಟ್ಟ ತಾವಿದು ಕಾಲಕರ್ಮದ
ಘಟ್ಟ ಮುಱಿವಡೆದೋಡಿದೆಡೆಯಿದು ಶಿವಶಿವಾಯೆಂದ ॥ ೭ ॥

ಹೊಗಳುತರ್ಜುನನಸುರರಿಪುವಿನ
ನಗರಿಗೈತಂದರಮನೆಯ ಹೊಗ-[1]
ಲಗಧರನು ಮಂಚದಲಿ ನಿದ್ರಾಂಗನೆಯ ಕೇಳಿಯಲಿ ।
ಸೊಗಸು ಮಿಗಲರೆದೆಱೆದ ಲೋಚನ-
ಯುಗಳ ಸಮತಳಿಸಿದ ಸುಷುಪ್ತಿಯ
ಬಿಗುಹಿನಲಿ ಪರವಶ್ಯನೆಸೆದನು ಭ್ರಾಂತಿಯೋಗದಲಿ ॥ ೮ ॥

---

೬. [ಒಳಗುಮಾಡು-ಒಳಹಾಕಿಕೊಳ್ಳು, ತನ್ನ ಕಡೆಗೆ ಮಾಡಿಕೊಳ್ಳು, ಸ್ವಾಧೀನ ಮಾಡಿಕೊಳ್ಳು. ಮುದ-ಸಂತೋಷ. ಭೇದಿಸಿ-ಗುಟ್ಟನ್ನು ಒಡೆದು. ಬೇಹಿನವನು-ಗುಪ್ತಚರ, ಗೂಢಚರ. ಅಳುಕು-ಶಂಕಿಸು, ಹೆದರು, ಭಯಪಡು].

೭. [1]ದವರನು (ಅ).
[ಅಟ್ಟಿ ಬಳಲಿದ-ಬೆಂಬತ್ತಿ ಆಯಾಸಗೊಂಡ (ಶ್ರಮಪಟ್ಟು ಅನ್ವೇಷಣೆ ಮಾಡಿದ). ಶ್ರುತಿ-ವೇದ. ವ್ಯಗೊಡು-ಪ್ರತ್ಯಕ್ಷವಾಗು. ಜಿನುಗು-ಕರಗಿಹೋಗು, ತಲ್ಲೀನವಾಗು, ಕೃಶವಾಗು. ಉಜ್ಜೀವಿಸು-ಪುನಃ ಜೀವಿಸುವಂತೆ ಮಾಡು, ಚೈತನ್ಯ ಕೊಡು. ಕಾಲ ಕರ್ಮದ ಘಟ್ಟ-ಕಾಲ ಕಳೆದಂತೆ ಸಂಚಿತವಾಗುವ ಕರ್ಮಗಳ ಗುಂಪು, ಕರ್ಮಜಾಲ. ಮುಱಿವಡೆದು-ಭಗ್ನವಾಗಿ, ನಾಶವಾಗಿ].

೮. [1]ಗೆ ಬರ (ಅ).
[ಹೊಗು-ಪ್ರವೇಶಿಸು. ಅಗಧರ-ಗೋವರ್ಧನ ಪರ್ವತವನ್ನು ಎತ್ತಿದವನು, ಕೃಷ್ಣ (ಅಗ-ಬೆಟ್ಟ). ಕೇಳಿ-ಕ್ರೀಡೆ, ಆಟ. ಸಮತಳಿಸು-(ಹೆಚ್ಚುಕಡಮೆಯಾಗದೆ) ಒಂದೇ ರೀತಿಯಾಗಿರು. ಸಮಸ್ಥಿತಿಯಲ್ಲಿರು. ಸುಷುಪ್ತಿ-ಗಾಢನಿದ್ರೆ. ಬಿಗುಹು-ಪರವಶತೆ. ಭ್ರಾಂತಿಯೋಗ-ಯೋಗನಿದ್ರೆ; ಅರೆಯೆಚ್ಚರ, ಅರೆನಿದ್ರೆ].

ಮುಕುಳಕರಪುಟನಾಗಿ ಭಯಭರ-
[1]ಭಕುತಿಯಲಿ ಕಲಿಪಾರ್ಥ[1]ನಬುಜಾಂ-
ಬಕನನೆಬ್ಬಿಸಲಮ್ಮದೊಯ್ಯನೆ ಚರಣಸೀಮೆಯಲಿ ।
ಅಕುಟಿಲನು ಸಾರಿದನು ಬಳಿಕೀ
ವಿಕಳ ದುರ್ಯೋಧನನು ನಿಗಮ-
ಪ್ರಕರಮೌಳಿಯ ಮೌಳಿಯತ್ತಲು ಸಾರ್ದು ಮಂಡಿಸಿದ ॥ ೯ ॥

ಇರಲು ನಿಮಿಷದೊಳಸುರರಿಪು ಮೈ-
ಮುರಿದನುಪ್ಪವಡಿಸಿದನಿದಿರಲಿ
ಸುರಪತಿಯ ಸೂನುವನು ಕಂಡನು ನಗೆಯ [1]ಮೊಳೆ[1] ಮಿನುಗೆ ।
ತಿರುಗಿ ನೋಡುತ ತಲೆಯ ದೆಸೆಯಲಿ
ಕುರುಕಲೇಶ್ವರ[2]ನಲಿ ವಿಕಾರದ-[2]
ಯಿರವ ಕಂಡಸಿದೇನಿದೇನೆಂದಸುರರಿಪು ನುಡಿದ ॥ ೧೦ ॥

ವೀಳೆಯವ ತಾ ಕೊಂಡು ಕುರುಭೂ-
ಪಾಲಪಾರ್ಥರಿಗಿತ್ತು ಲಕ್ಷ್ಮೀ-
ಲೋಲ [1]ನುಡಿಸಿದನು[1]ಭಯರಾಯರಿಗಿತ್ತ ಬರವೇನು ।
ಹೇಳಿರೈ ಬರವಘಟಿತವಲಾ
ಮೇಳವೇ [2]ಕಡು[2]ಮಾನ್ಯರೆಮ್ಮಾ-
ಯಾಲಯಕೆ ಬರವೇನೆನಲು ಕುರುರಾಯನಿಂತೆಂದ ॥ ೧೧ ॥

---

೯. [1]ಚಕಿತಚಿತ್ತ ಶರೀರ (ಪ್ರ ಓ ಕ k).
[ಮುಕುಳ ಕರಪುಟ-ಮೊಗ್ಗಿನಂತೆ ಕಾಣುವ ಮುಗಿದ ಕೈಗಳು. ಅಬುಜ-ಕಮಲ. ಅಂಬಕ-ಕಣ್ಣು. ಅಮ್ಮದೆ-ಸಮರ್ಥನಾಗದೆ. ಒಯ್ಯನೆ-ಬೇಗನೆ. ಚರಣಸೀಮೆ-ಪಾದಗಳ ಬಳಿ. ಅಕುಟಿಲ-ನಿಷ್ಕಪಟ. ವಿಕಳ-ವಕ್ರ, ಕೆಟ್ಟ, ಕಲಕಿದ, ಮನಸ್ಸಿನ. ನಿಗಮಪ್ರಕರ ಮೌಳಿಯ ಮೌಳಿ-ವೇದಗಳಿಗೆ ಕಿರೀಟಪ್ರಾಯನಾದ ಶ್ರೀಕೃಷ್ಣನ ಕಿರೀಟ. ಸಾರ್ದು-ಸೇರಿ, ಸಮೀಪಿಸಿ].

೧೦. [1]ಮೊನೆ (ಅ ಕುಮಾ), ಸ್ವೀಪಾ (ಪ್ರ ಕ ಓ k ಅ). [2]ನತಿವಿಕಾರತೆ (ಅ ಕುಮಾ), ನತಿವಿಕಾರಿತೆ (ಓ); ಸ್ವೀಪಾ (ಪ್ರ ಅ).
[ಉಪ್ಪವಡಿಸು-ನಿದ್ದೆಯಿಂದ ಮೇಲಕ್ಕೇಳು. ಸೂನು-ಮಗ]

೧೧. [1]ನುಡಿದನುವು (ಅ ಕುಮಾ), ಸ್ವೀಪಾ (ಪ್ರ ಕ ಓ k ಅ). [2]ಕೀ (ಪ್ರ).
[ಅಘಟಿತ-ಅಸಂಭವ. ಮೇಳ-ಒಟ್ಟುಗೂಡುವಿಕೆ].

ಯಾದವರು ಕೌರವರೊಳುಂಟೇ
ಭೇದ[1]ವಾವೈತಂದೊಡೆವ್ಮೊಳ್[1]-
ಗಾದ ಲಾಘವವೇನು ನಿಮ್ಮವೊಲಾರು ಸಖರೆಮಗೆ ।
ಸೋದರರ ಮನ ಕದಡಿ[2]ದವು[2] ದಾ-
ಯಾದವಿಷಯದಲಿನ್ನು ಧರಣಿಗೆ
ಕಾದುವೆವು ನಿಮ್ಮಿಬ್ಬರಿಗೆ ಬಲವಾಗಬೇಕೆಂದ ॥ ೧೨ ॥

ಕೌರವೇಶ್ವರ ಕೇಳು ಧರಣೀ-
ನಾರಿ[1] ಯಾರೊಡನೊಕ್ಕತನ[1]ವಿ-
ದ್ದಾರ ಮೆಚ್ಚಿದಳಾರ ಸಂಗಡ ವುರಿಯ ಹಾಯಿದಳು ।
ಭೂರಿ ಮಮಕಾರದಲಿ ನೃಪರು ವಿ-
ಚಾರಿಸದೆ ಧರೆ [2]ತ[2]ಮ್ಮದೆಂದೇ
ನಾರಕದ ಸಾಮ್ರಾಜ್ಯಕೈದುವರೆಂದು ಹರಿ ನುಡಿದ ॥ ೧೩ ॥

ನಾಡಿಗೋಸುಗ ಸೋದರರು ಹೊ-
ಯ್ದಾಡಿ ಹಜಿ[3]ಹಂಚಾದರೆಂಬುದ-
ನಾಡದಿಹುದೇ ಲೋಕ ಕಮಲಜನುಸುರಿಹನ್ನೆಬರ ।
ಬೇಡ[1]ಖತಿ[1] ನಿಮ್ಮೊಳಗೆ ನೀವ್ ಕೈ-
ಗೂಡಿ ಬದುಕುವುದೊಳ್ಳಿತಾವ್ ನೆಜಿ[3]
ನೋಡಿ ಸಂತಸಬಡುವೆವೆಂದನು ರುಕ್ಮಿಣೀರಮಣ ॥ ೧೪ ॥

---

೧೨. [1]ನಾವೈತಂದದೀಪರಿ (ಕ ಅ). [2]ಡಿತ್ತೈ (ಅ), ಸ್ವೀಪಾ (ಪ್ರ ಕ k ಅ ಕುಮಾ).
[ಲಾಘವ–ಹಗುರತನ].

೧೩. [1]ಯುನಿಬರಿಗೊಕ್ಕತನ (ಅ ಕುಮಾ), ಸ್ವೀಪಾ (ಓ ಅ). [2]ಯಿ (ಅ ಅ ಕುಮಾ), ಸ್ವೀಪಾ (ಕ ಓ k).
[ಒಕ್ಕತನ–ಕೂಡುಬಾಳುವೆ. ಉರಿಯ ಹಾಯಿ–ಅಗ್ನಿಪ್ರವೇಶ ಮಾಡು, ಸಹಗಮನ ಮಾಡು. ಭೂರಿ–ಅತಿಯಾದ. ಮಮಕಾರ–ಸ್ವಾರ್ಥ. ಐದು–ಸೇರು, ಹೋಗು].

೧೪. [1]ಕಟಿ (ಅ ಕುಮಾ), ಸ್ವೀಪಾ (ಓ ಕ).
[ಅನ್ನೆಬರ–ಅಲ್ಲಿಯವರೆಗೆ. ಖತಿ–ಕೋಪ].

ತಗರೆರಡ ಖತಿಗೊಳಿಸಿ ಬಲುಗಾ-
ಳೆಗವ ನೋಡುವರಂತೆ ನಿಮ್ಮನು
ತೆಗೆತೆಗೆದು [1]ಹುರಿ[1]ಮಾಡಿ [2]ಮಸೆ[2]ವರು ಖುಲ್ಲರಾದವರು ।
ನಗುತ ಹೆಱಹಿಂಗುವರು ಪಿಸುಣರು
ಜಗು[3][*ಳ್ವ][3]ರವದಿರು ಬಳಿಕ ಕಡೆಯಲಿ
ಹೊಗುವಿರೈ ನೀವಿಬ್ಬರಸರೇ[4]ರಿತಿಯ ಹಾದರಕೆ[4] ॥ ೧೫ ॥

ಅವಧರಿಸು ಮುರವೈರಿ ಧರ್ಮ-
ಶ್ರವಣಕೋಸುಗ ಬಾರೆವಾವ್ ಪಾ-
ರ್ಥಿವರ ಪಂಥದ ಕದನವಿದ್ಯಾಕಾಮನೆಮಗಾಯ್ತು ।
ನಿಮಗೆ ನಾವಿತ್ತಂಡ ಸರಿ ಪಾಂ-
ಡವರಿಗೆಯು ಮನದೊಲವಿನಲಿ ಕೌ-
ರವರಿಗೆಯು ಬಲವಾಗಬೇಕೆಂದನು ಸುಯೋಧನನು ॥ ೧೬ ॥

ಎನಲು ತಂಬುಲ ಸೂಸೆ ನಗುತ-
ರ್ಜುನನ ನೋಡಿದನಸುರರಿಪು ನಿ-
ನ್ನನುವ ಹೇಳೈ ಪಾರ್ಥ ಯೆನೆ ತಲೆವಾಗಿ ಕೈಮುಗಿದು ।
ಎನಗೆ ಮತ ಬೇಱೇನು ದುರ್ಯೋ-
ಧನನ ಮತವೇ ನನ್ನ ಮತ ನಿ-
ಮ್ಮನುನಯವೆ ನಯವೆಮ್ಮೊಳೇ ಸ್ವಾತಂತ್ರ್ಯವಿಲ್ಲೆಂದ ॥ ೧೭ ॥

---

೧೫. [1]ಕಲಿ (ಅ ಕುಮಾ), ಸ್ವೇಪಾ (ಕ). [2]ಬಿಸು (ಅ ಕುಮಾ), ಸ್ವೇಪಾ (ಪ್ರ ಕ k). [3]ಜಗುಳ (ಅ), ಬಗುಳದ (ಕುಮಾ ಓ k ಪ್ರ). ಬಗುಳುವ (ಕ). [4]ಸ್ವರ್ಗಾಂಗನೆಯ ಮನೆಯ (ಪ್ರ ಕ k).

[ಖತಿಗೊಳಿಸು–ರೇಗಿಸು, ಉದ್ರೇಕಿಸು. ಹುರಿಮಾಡು–ಉತ್ಸಾಹ ತುಂಬು. ಮಸೆ–ಚುರುಕುಗೊಳಿಸು. ಖುಲ್ಲರು–ನೀಚರು. ಹೆಱಹಿಂಗು–ಹಿಂದೆಗೆ. ಪಿಸುಣ–ಚಾಡಿಕೋರ. ಜಗುಳ್–ಜಾರಿಕೊಳ್ಳು].

೧೬. [ಪಾರ್ಥಿವ–ಕ್ಷತ್ರಿಯ. ಪಂಥ–ಪ್ರತಿಜ್ಞೆ; ಮಾರ್ಗ. ಕದನವಿದ್ಯಾಕಾಮ–ಯುದ್ಧವಿದ್ಯೆಯ ಅಪೇಕ್ಷೆ. ಇತ್ತಂಡ–ಎರಡು ಪಕ್ಷ].

೧೭. [ಅನು–ಅನುಕೂಲತೆ. ಮತ–ಅಭಿಪ್ರಾಯ. ಅನುನಯ–ರೀತಿ, ಕ್ರಮ, ಪ್ರೀತಿ, ಸ್ನೇಹ, ಪ್ರಿಯವಾದದ್ದು. ನಯ–ನೀತಿ].

ಅದೊಡಾವಿಹೆವ್ವೊಂದು [1]ದೆಸೆ[1]ಯಲಿ
ಕಾದುವವರಾವಲ್ಲ [2]ಬಲಸಹ[2]
ಯಾದವರು ಕೃತವರ್ಮ ನಾರಾಯಣ ಮಹಾಸೇನೆ ।
ಕಾದುವವ[3]ರವ[3]ರೊಂದು ದೆಸೆ ಯೆರ-
ಡಾದುದಿದಱೊಳು ಮಚ್ಚಿದುದ ನೀ-
ನಾದರಿಸಿ ವರಿಸೆಂದು ಪಾರ್ಥಂಗಸುರರಿಪು ನುಡಿದ ॥ ೧೮ ॥

ಮುರಮಥನ [1]ಚಿತ್ತೈಸು[1] ಕೌರವ-
ರರಸನತಿ ಸಿರಿವಂತನಿದ ಸಂ-
[2]ವ[2]ರಿಸಲಾಪನು ಬಹಳ ಯಾದವಸೈನ್ಯಸಾಗರವ ।
ಧರೆಯ ಸಂಪದವಿಲ್ಲದಡವಿಯ
ತಿರುಕರಾವಿನಿಬರನು ಸಲೆ ಸಂ-
[3]ವ[3]ರಿಸಲಾಪೆವೆ ಕೃಷ್ಣ [4]ನೀನೇ ಸಾಕು ನಮಗೆಂದ[4] ॥ ೧೯ ॥

ನಾವು ಬಡವರು ಬಡವರಿಗೆ ದಿಟ
ನೀವೆ ಬೆಂಬಲವೆಂಬ ಬಿರುದನು
ದೇವ ಕೇಳಿದು ಬಲ್ಲೆ[1]ವೆಂ[1]ದನು ಪಾರ್ಥ ಕೈಮುಗಿದು ।
ನೀವು ಸುಖದಲಿ ಪಾಂಡವರನು-
ಜ್ಜೀವಿಸುವುದೆಮಗುಳಿದ ಯದುಭೂ-
ಪಾವಳಿಯ ಕೃಪೆಮಾಡಬೇಕೆಂದನು ಸುಯೋಧನನು ॥ ೨೦ ॥

---

೧೮. [1]ಕಡೆ (ಅ ಪ್ರ ಕುಮಾ), ಸ್ವೀಪಾ (ಕ). [2]ಸೈನ್ಯದ (ಅ), ಬಲನಾ (ಓ). ಬಲಸೊಳು (ಕುಮಾ); ಸ್ವೀಪಾ (k ಪ್ರ). [3]ರಹ (ಅ).
[ದೆಸೆ–ಕಡೆ, ಪಕ್ಷ. ಬಲಸಹ–ಸೈನ್ಯದೊಂದಿಗೆ. ಮಚ್ಚು–ಇಷ್ಟಪಡು. ವರಿಸು–ಆಯ್ದುಕೊ].

೧೯. [1]ಬಿನ್ನಹವು (ಕ ಓ k ಅ ಪ್ರ). [2–3]ತ (ಅ ಕುಮಾ), ಸ್ವೀಪಾ (ಅ). [4]ನೀ ಸಾಕೆಂದನಾ ಪಾರ್ಥ (ಅ ಕ k ಪ್ರ).
[ಸಂವರಿಸು–ಕಾಪಾಡು, ರಕ್ಷಿಸು. ಇನಿಬರು–ಇಷ್ಟು ಜನರು. ಸಲೆ–ಚೆನ್ನಾಗಿ, ಪೂರ್ಣವಾಗಿ. ಅಪೆವೆ–ಶಕ್ತರಾಗುತ್ತೇವೆಯೆ].

೨೦. [1]ನೆಂ (ಅ ಕ ಓ).
[ಉಜ್ಜೀವಿಸು–ಚೈತನ್ಯ ತುಂಬು].

ಮಱೆಯ ಮಾತುಗಳೇಕೆ ಪಾಂಡವ-
ರೆಱಕ ನಿಮ್ಮಲಿ ಹಿರಿದು ಪಾರ್ಥಗೆ
ಮಱುಗುವಿರಿ [1]ಮಿಗಿಲಾಗಿ[1] ಮನವುಚ್ಚಂಟು ನಿಮ್ಮೊಳಗೆ ।
ಉಱುವ ಕಾರ್ಯಕೆ ಕಡೆಯಲಾವೇ
ಹೊಱ[2]ಗು[2] ಸಾಕಂತಿರಲಿ [3]ನೀವ್[3]ಹೊ-
ಕ್ಕಿಱಿಯಲಾಗದು [4]ಕೃಷ್ಣ ಯೆಂದನು ಕೌರವರ ರಾಯ[4] ॥ ೨೧ ॥

ಹಸುಳೆತನ ಮೊದಲಾಗಿ ಬಲುರ-
ಕ್ಕಸರೊಡನೆ ತಲೆಯೊತ್ತಿ ರಣದಾ-
ಯಸವ ಸೈರಿಸಿ ಹೊಯ್ದು ಕೊಂದೆವು ಕೋಟಿದಾನವರ ।
ಮಿಸುಕಲಾಱವು ಚಕ್ರ ಭಂಡಾ-
ರಿಸಿತು ಮುನ್ನಿನ ಜವ್ವನದ [1]ಭರ[1]
ಮುಸುಳಿತಾವುಂಡಾಡಿಭಟ್ಟರು ನೃಪತಿ ಕೇಳೆಂದ ॥ ೨೨ ॥

ಎನಲು [1]ಕರ[1] ಲೇಸೆಂದು ದುರ್ಯೋ-
ಧನನು ಕಳುಹಿಸಿಕೊಂಡು ಬಲರಾ-
ಮನನು ಕೃತವರ್ಮನನು ಕಂಡನು ನಿಖಿಳಯಾದವರ ।
[2]ಅನಿತು[2] ಬಲಸಹಿತೊಲವಿನಲಿ ಹ-
ಸ್ತಿನಪುರಿಗೆ ಹಾಯಿದನು ಬಳಿಕೀ
ದನುಜರಿಪು ನಸುನಗುತಲಿಂತೆಂದನು ಧನಂಜಯಗೆ ॥ ೨೩ ॥

---

೨೧. [1]ಹಿರಿದಾಗಿ (ಅ ಆ ಕುಮಾ), ಸ್ವೀಪಾ (ಪ್ರ k). [2]ಗೆ (ಅ), ಸ್ವೀಪಾ (ಅ ಓ ಕ ಕುಮಾ). [3]ನೀ (ಅ ಕುಮಾ), ಸ್ವೀಪಾ (ಅ ಕ). [4]ಮತ್ತೆಯಿದನೇ ಬೇಡಿ ಕೊಂಡವನು (ಅ ಓ).

[ಮಱೆಯ ಮಾತುಗಳು-ಕಪಟದ ಮಾತುಗಳು. ಎಱಕ-ಪ್ರೀತಿ. ಉಱುವ-ಶ್ರೇಷ್ಠವಾದ. ಹೊಕ್ಕಿಱಿ-ಮೋಸದಿಂದ ಕೊಲ್ಲು].

೨೨. [1]ಬಲ (ಅ ಕುಮಾ ಪ್ರ), ಸ್ವೀಪಾ (ಅ ಕ).
ತಲೆಯೊತ್ತು-ಕಾದಾಡು, ಯುದ್ಧಮಾಡು. ಮಿಸುಕು-ಕದಲು. ಭಂಡಾರಿಸು-ಆಯುಧಶಾಲೆಗೆ ಸೇರಿಹೋಗು. ಭರ-ಉತ್ಸಾಹ. ಮುಸುಳು-ಮಂಕಾಗು].

೨೩. [1]ಖರೆ (ಅ). [2]ವಿನುತ (ಅ ಕುಮಾ), ಸ್ವೀಪಾ (ಪ್ರ ಅ).
[ಕರ-ವಿಶೇಷವಾಗಿ, ಬಹಳ. ಹಾಯಿ-ವೇಗವಾಗಿ ಹೋಗು].

ಸುರಗಿಯನು ಬಿಸುಟೊಱೆಯನಂಗೀ-
ಕರಿಸಿದಂದದಲಾಹವದ [1]ಧರ-
ಧುರದ[1] ಯಾದವಬಲವನೊಲ್ಲದೆ ಮಂದಮತಿಯಾಗಿ ।
ಮರುಳೆ ಕಾದದ ಕಟ್ಟದೆಮ್ಮನು
ಬಱಿದೆ ಬಯಸಿದೆ ಯಿದನು ಕೇಳ್ದೊಡೆ
ಮರುಳುಗುಟ್ಟದೆ ಮಾ[2]ಣ[2]ರೇ ನಿಮ್ಮಣ್ಣತಮ್ಮದಿರು ॥ ೨೪ ॥

ಎನಲು ಗಹಗಹಿಸಿದನಿದಾರಿಗೆ
ಮನವ ಕದ್ದಾಡುವಿರಿ ನಿಜಶಿ-
ಷ್ಯನಲಿ ನಾಟಕದಿಂದ್ರಜಾಲವೆ ನಿಮ್ಮ ಗರುಡಿಯಲಿ ।
ಎನಗೆ ಶ್ರಮವುಂಟದು ನಿಲಲಿ ಯೆ-
ನ್ನನುಜರಗ್ರಜರಱಿಯರೇ ನಿ-
ಮ್ಮನುಪಮಿತ ಮಹಿಮಾವಲಂಬವನೆಂದನಾ ಪಾರ್ಥ ॥ ೨೫ ॥

ನಾವು ಬಱಿಗೈಯವರು ಬರಲೆಮ-
ಗಾವುದಲ್ಲಿಯು ಕೆಲಸ ಉಂಡುಂ-
ಡಾವು ಕುಳ್ಳಿಹರಲ್ಲ ಹಂಗಾಗಿರೆವು ಕ[1]ಟಕ[1]ದಲಿ ।
ದೇವನೆಂದೇ ನೀವು ಬಗೆವಿರಿ
ದೇವತನ[2]ವೆಮಗಿಲ್ಲವೆಂಬುದ-
ನಾವು ಬಲ್ಲೆವು[2] ಬಂದು ಮಾಡುವುದೇನು ಹೇಳೆಂದ ॥ ೨೬ ॥

ದೇವಮಾತ್ರವೆ ನೀವು ದೇವರ
ದೇವರೊಡೆಯರು ಹೊಗಳುವೊಡೆ ವೇ-
ದಾವಳಿಗಳಳವಲ್ಲ ಸಾಕಾ ಮಾತದಂತಿರಲಿ ।

---

೨೪. [1]ಧುರಭರದ (ಅ ಕುಮಾ ಪ್ರ). ಸ್ವೀಪಾ (ಅ ಓ). [2]ಣ್ಬ (ಅ).
[ಸುರಗಿ–ಕತ್ತಿ. ಒಱೆ–(ಕತ್ತಿಯ) ಕೋಶ. ಧರಧುರ–ಅರ್ಭಟ, ಕೋಲಾಹಲ. ಮರುಳುಗುಟ್ಟು–ಹುಚ್ಚ ಎನ್ನು. ಮಾಣ್–ಬಿಡು].

೨೫. [ಮನವ ಕದ್ದಾಡು–ನಿಜವಾದ ಅಂತರ್ಯವನ್ನು ಬಚ್ಚಿಡು. ಅನುಪಮಿತ–ಹೋಲಿಕೆಯಿಲ್ಲದ].

೨೬. [1]ಕದನ (ಅ ಕುಮಾ), ಸ್ವೀಪಾ (ಕ k ಪ್ರ ಅ). [2]ನಮ್ಮಲ್ಲಿ ಲವವಿಲ್ಲಾವು ಬಾರೆವು (ಅ), ಸ್ವೀಪಾ (ಪ್ರ ಓ k ಅ).
[ಕಟಕ–ಸೈನ್ಯ].

೨೭. [ಅಳವು–ಸಾಧ್ಯ, ಸಾಮರ್ಥ್ಯ, ಶಕ್ತಿ. ಭೃತ್ಯ–ಸೇವಕ].

ನಾವು ಭಕುತರು ಭಕುತಭೃತ್ಯರು
ನೀವು ಸಾರಥಿಯಾಗಿ ಭೃತ್ಯನ
ಕಾವುದೆಂದರ್ಜುನನು ಹಣೆಚಾಚಿದನು ಹರಿಪದಕೆ || ೨೭ ||

ಎನಲು ನಗುತೆತ್ತಿದನು ಸಾರಥಿ-
ತನವ ಕೈಕೊಂಡನು ಕೃಪಾಳುವಿ-
ನನುನಯುವನಾನೆತ್ತ ಬಲ್ಲೆನು ಭೃತ್ಯವರ್ಗದಲಿ ।
ತನಗಹಂಕೃತಿ[1]ಯಿಲ್ಲ ವೈರೋ-
ಚನಿಯು[1] ಪಡಿಹಾಜಿಕೆ ಕಿರೀಟಿಯು
ಮನೆಯು ಬಂಡಿಯು [2]ಬೋವತನವಲೆ ನೃಪತಿ ಕೇಳೆಂದ[2] || ೨೮ ||

---

೨. ಸಂಜಯನ ದೌತ್ಯ

ದ್ರುಪದರಾಜಪುರೋಹಿತನು ಕುರು-
ನೃಪನನಿತ್ತಲು ಬಂದು ಕಂಡನು
ವಿಪುಳಮತಿ ಮಾತಾಡಿದನು ನಿಜರಾಜಕಾರಿಯುವ ।
ಕೃಪಣತನದಲಿ ಕೌರವನು ಗುರು-
ಕೃಪರ ಭೀಷ್ಮರ ಮತವನೊಲ್ಲದೆ
ಚಪಳಕರ್ಣನ ಕೂಡಿ ನಿಶ್ಚೈಸಿದನು ಕಾಳೆಗವ || ೨೯ ||

---

೨೮. [1]ಯ್ಯೆವರಾಳೋಚನೆಯು (ಅ), ಸ್ವೀಪಾ (ಪ್ರ ಕ ಓ ಕುಮಾ ಅ). [2]ಬೋವನಾದನು ವೀರನಾರಾಯಣ (ಕುಮಾ).

[ವೈರೋಚನಿ-ಬಲಿಚಕ್ರವರ್ತಿ. ಪಡಿಹಾಜಿಕೆ-ಬಾಗಿಲು ಕಾಯುವ ಕೆಲಸ. ಬಂಡಿಯ ಬೋವ-ಬಂಡಿಕಾರ, ಸಾರಥಿ].

ನೆನೆದ [1]ಮಂತ್ರವ[1] ತನ್ನ ತಂದೆಯ
ಮನದ ಮಚ್ಚದೊಳೊಱೆದು ಕರ್ಣನ
ನೆನಹಿನಲಿ ಪುಟವಿಟ್ಟು ಶಕುನಿಯ ನೀತಿಯಲಿ ನಿಗುಚಿ ।
ಅನುಜಮತದಲಿ ವಿಸ್ತರಿಸಿ ವೈ-
ದುನನ ನುಡಿಯಲಿ ಬಣ್ಣವಿಟ್ಟನು
ಜನಪನಪಕೀರ್ತ್ಯಂಗನೆಗೆ ತೊಡಿಸಿದನು ಭೂಷಣವ ॥ ೩೦ ॥

ಹರುಷದಲಿ ಸಂಜಯನನಾಗಳೆ
ಕರಸಿ ಕುರುಪತಿ ಬುದ್ಧಿಗಲಿಸಿದ-
ನರಿನೃಪರ ಪಾಳೆಯಕೆ ಹೋಹುದು ನುಡಿವು[1]ದವಗಡಿಸಿ[1] ।
ಧರೆಯ ಬೇಡಿಸಿ ಕಳುಹಿದಿರಿ ಸಂ-
ಗರದೊಳಸಿಧಾರೆಯಲಿ ಕೊಡುವೆವು
ಬಱಿದೆ ಕೊಟ್ಟೊಡಧರ್ಮವೆಂಬುದು ಧರ್ಮಪುತ್ರಂಗೆ ॥ ೩೧ ॥

ಬೀಳುಕೊಂಡನು ಮಂತ್ರಿ ಪಯಣದ
ಮೇಲೆ ಪಯಣವನೆಯ್ದಿ ಪಾಂಡುನೃ-
ಪಾಲಕರ ಪಾಳೆಯಕೆ ಬಂದನು ರಾಯಗಱುಹಿಸಲು ।
ಕೇಳಿ ಬೀಡಾರವನು ಬೀಯವ
ಹೇಳಿಸಿದನಾ ಮಱುದಿವಸ ವೊ-
ಡ್ಡೋಲಗವ ರಚಿಸಿದನು ಕುಂತೀಸುತನು ರೀತಿಯಲಿ ॥ ೩೨ ॥

---

೩೦. [1]ಮತವನು (ಅ ಕುಮಾ), ಸ್ವೀಪಾ (ಕ ಓ k ಪ್ರ).
[ಮಂತ್ರ-(ರಾಜಕಾರ್ಯದ) ಆಲೋಚನೆ. ಮಚ್ಚ-ಒರೆಹಚ್ಚಿ ನೋಡುವುದಕ್ಕಾಗಿ ಅಕ್ಕಸಾಲಿಗನಿಂದ ಪಡೆದುಕೊಂಡ ಚಿನ್ನ ಬೆಳ್ಳಿ ಮುಂತಾದವುಗಳ ಚೂರು; (ಇಲ್ಲಿ) ಇಂಗಿತ, ಮನೋಗತ. ಒಱೆ-ಪರೀಕ್ಷಿಸು. ಪುಟವಿಡು-ಬೆಂಕಿಯಲ್ಲಿ ಕಾಯಿಸಿ ಶುದ್ಧಗೊಳಿಸು. ನಿಗುಚು-ಮಾಡು. ಬಣ್ಣವಿಡು-ಮೆರುಗು ಕೊಡು, ಸೊಗಸಾಗಿಸು (=ಒಪ್ಪವಿಡು)].

೩೧. [1]ದುರವಣಿಸಿ (ಅ ಕುಮಾ), ಸ್ವೀಪಾ (ಪ್ರ ಕ k ಅ).
[ಅವಗಡಿಸು-ಪ್ರತಿಭಟಿಸು, ಮುಂದೆ ನುಗ್ಗು, ಮೇಲೆ ಬೀಳು. ಸಂಗರ-ಯುದ್ಧ. ಅಸಿಧಾರೆ-ಕತ್ತಿಯ ಅಲಗು].

೩೨. [ಬೀಯ-ಆತಿಥ್ಯ].

ಹರಿ ವಿರಾಟ ದ್ರುಪದ ಕೇಕಯ-
ರಿರವು ಬಲವಂತದಲಿ ವಾಮದ-
ಲಿರೆ ವೃಕೋದರ ಫಲುಗುಣಾದಿಗಳಖಿಳ ಮಂತ್ರಿಗಳು ।
ತರುಣಿಯರು ಪರಿಮಳದ ಜಂಗಮ
ಭರಣಿಯರು ಮಮಮಥ[1][ವಿರಿಂಚಿಯ][1]
ತರುಣಿಯರು ಕುಳ್ಳಿರ್ದರರಸನ ಹಿಂದೆ [2]ಸಂದಣಿಸಿ[2] ॥ ೩೩ ॥

ಇಳುಹಿದನು [1]ಹೊರೆ[1]ಯಲಿ ಮಹೀಪತಿ
ಕಳುಹಿದುಡುಗೊಱೆಗಳನು ಭೂಪತಿ-
ತಿಲಕ ಧರ್ಮಜನೊಪ್ಪಿಗೊಂಡನು ನೃಪನ ಪಾವುಡವ ।
ಒಲವು ಬೊಪ್ಪನಲುಂಟಲಾ ಮ-
ಕ್ಕಳನು ಮಱೆಯನು ಲೇಸು ಸಂಜಯ
ತಿಳುಹು ತಾತನ ಕುಶಲವನು ಗಾಂಧಾರಿದೇವಿಯರ ॥ ೩೪ ॥

ಏನು ಬಂದಿಹ ಹದನು ನಿಮ್ಮವ-
ರೇನನೆಂದರು ಕೌರವೇಶ್ವರ-
ನೇನನೆಕ್ಕಟಿ ಬುದ್ಧಿಗಲಿಸಿದನಿವರ ಮಾತುಗಳ ।
ಏನುವನು ನೀನುಳಹದಿರು ವಿನ-
ಯಾನುಗತವಾಗಿರಲಿ ಮೇಣ್ [1]ಶೌ-[1]
ರ್ಯಾನುಗತವಾಗಿರಲಿ ಬಿನ್ನವಿಸೆಂದನಸುರಾರಿ ॥ ೩೫ ॥

---

೩೩. [1]ವಿರಿಂಚಿನ (ಅ ಕುಮಾ). [2]ಮೋಹರಿಸಿ (ಕುಮಾ), ಸ್ವೀಪಾ (ಪ್ರ ಅ).
[ವಾಮ-ಎಡ. ಬಲವಂಕ-ಎಡಪಕ್ಕ. ಪರಿಮಳದ ಜಂಗಮ ಭರಣಿಯರು-ಪರಿಮಳ ಯುಕ್ತರಾಗಿ ಚಲಿಸುವ ತರುಣಿಯರು. ವಿರಿಂಚಿ-ಬ್ರಹ್ಮ].

೩೪. [1]ಮಹಿ (ಅ ಕುಮಾ).
[ಹೊರೆ-ಸಮೀಪ. ಪಾವುಡ-ಉಡುಗೊರೆ. ಬೊಪ್ಪ-ತಂದೆ].

೩೫. [1]ಶಾ (ಅ). ಸ್ವೀಪಾ (ಪ್ರ ಕುಮಾ ಅ).
[ಹದನು-ಸಮಾಚಾರ. ಎಕ್ಕಟಿ-ರಹಸ್ಯವಾಗಿ. ಬುದ್ಧಿಗಲಿಸು-ಬುದ್ಧಿಹೇಳು. ವಿನಯಾನುಗತ-ವಿನಯದಿಂದ ಕೂಡಿದುದು. ಶೌರ್ಯಾನುಗತ-ಶೌರ್ಯದಿಂದ ಕೂಡಿದುದು].

ನಾಡ [1]ಬೇಡು[1]ವೊಡೆವೊ್ಮಡನೆ ಹೊ-
ಯ್ದಾಡುವುದು ಸಂಪ್ರತಿಗೆ ಚಿತ್ತವ
ಮಾಡಲಾಗದು ಸಂಧಿ ವೀರಕ್ಷತ್ರಿಯರ ಮತವೇ ।
ಬೇಡುವರೆ ಪಾರ್ಥಿವರು ತಾವದ-
ನಾಡಬಾರದು ತಮ್ಮ ಜನನವ
ನೋಡಿ ನುಡಿದರು ಪಾಂಡುಸುತರಲ್ಲೆಂದು ಹೇಳೆಂದ ॥ ೩೬ ॥

ಮೊದಲಲಮಳಬ್ರಹ್ಮಚರ್ಯವು
ಮದುವೆಯಾದುದು ಬಳಿಕ ವನವಾ-
ಸದಲಿ ವಾನಪ್ರಸ್ಥವೆಂಬಾಶ್ರಮುವನಳವಡಿಸಿ ।
ತುದಿಗೆ ತಾ ಸಂನ್ಯಾಸವನು ಮಾ-
ಡಿದನು ಮಗುಳಳುಪಿದೊಡೆ ರಾಜ್ಯದ
ಪದವಿಗನುಚಿತವಾಯ್ತು ಯಮುಜಂಗೆಂದು ಹೇಳೆಂದ ॥ ೩೭ ॥

ತಳಿತ ಜೌವನದುಬ್ಬುಗಳ ಕಳ-
ವಳಿಗರರ್ಜುನಭೀಮರೆಂಬವ-
ರೊಳಗೆ ವೈರವ ಬಿತ್ತಿ [1]ಬೆಳಸುವ[1] ಕೃಷ್ಣ ಹಗೆ ತಮಗೆ ।
ಉಳಿದ ದ್ರುಪದವಿರಾಟರೆಂಬೀ
ಹುಳು[2]ಕರೊಲಿದಂತೋ[2]ರೆಗೆಡೆವರು
ತಿಳಿಯೆ ತಾನೇ ಕಡೆಗೆ ಕೆಡದಿರನೆಂದು ಹೇಳೆಂದ ॥ ೩೮ ॥

---

೩೬. [1]ಬಯಸು (ಪ್ರ ಕ k ಅ).
[ಬೇಡು-ಬಯಸು, ಯಾಚಿಸು. ಸಂಪ್ರತಿ-ಸಂಧಿ, ಸಂಧಾನ].

೩೭. [ಅಮಳ-ಪರಿಶುದ್ಧವಾದ. ವಾನಪ್ರಸ್ಥ-(ಆಶ್ರಮಗಳಲ್ಲಿ ಮೂರನೆಯದು) ವನವಾಸಕ್ಕೆ ಹೊರಡುವುದು. ಮಗುಳು-ಮತ್ತೆ. ಅಳುಪು-ಆಸೆಪಡು].

೩೮. [1]ಸುಡುವನು (ಅ), ಸ್ವೀಪಾ (ಪ್ರ ಓ k ಅ ಕುಮಾ). [2]ಗಳೊದವಿಸಲೋ (ಅ), ಗಳವರಂತೋ (ಕುಮಾ ಅ), ಸ್ವೀಪಾ (ಪ್ರ k).
ತಳಿತ-ಚಿಗುರಿದ, ಹೊಸದಾದ. ಉಬ್ಬು-ಆಧಿಕ್ಯ. ಕಳವಳಿಗರು-ಕಾತರಪಡುವವರು. ಹುಳುಕರು-ಕ್ಷುದ್ರರು. ಒಲಿದಂತೆ-ಇಷ್ಟಬಂದಂತೆ. ಓರೆಗೆಡೆ-ವಾಲಿಕೊಳ್ಳು].

ಸಾಕು ಕೌರವನಾಯಮಾತನ-
ದೇಕೆ ಚಿತ್ತೈಸುವಿರಿ ದೂತನ
ನೂಕು ನೂಕು ಕುಠಾರದುರ್ಯೋಧನನನೊಡೆಹೊಯ್ದು ।
ಶಾಕಿನಿಯರನು ರಕುತವಾ[1]ರಿಯ-
ಲೋ[1]ಕುಳಿಯನಾಡಿಸುವೆ ನಿಲು ತಡ-
ವೇಕೆನುತ ಘುಡಿಘುಡಿಸಿ ಕಿಡಿಕಿಡಿ[2]ಯಾ[2]ದನಾ ಭೀಮ ॥ ೩೯ ॥

ಕದಡಿತಾ [2]ಆ[2]ಸ್ಥಾನ ಕಲ್ಪಾಂ-
ತದ ಮಹಾಸಿಡಿಲಂತೆ ವೀರರು
ಕೆದಱಿ ತಮತಮಗೆದ್ದು ನುಡಿದರು ಖಂಡೆಯವ ಜಡಿದು ।
ಉದಿರೆ ಹೊಯ್ವೆವು ಹಲುಗಳನು ಕಿ-
ಬ್ಬದಿಯಲುಗಿವೆವು ಕರುಳನಹಿತನ
ತಿದಿಯ ಸುಲಿವೆವು ಬೆಸಸು ನೇಮವನೆಂದರತಿರಥರು ॥ ೪೦ ॥

ಆತನಿಂದೇನಹುದು ಹೊಲ್ಲಹ-
ವಾತನಿಂದೇನಹುದು ಲೇಸುಗ-
ಳಾತನಿಂದೇ ಬರಲಿ ಹಿಂದಣಕಾನನಾ[1]ಲಯ[1]ದ ।
ಯಾತನೆಯ ಸೈರಿಸಿದ ನಮಗಿ-
ನ್ನಾತ ನುಡಿದೊಡೆ ಹಾನಿಯೇ ನೀವ್
ಕಾತರಿಸದಿರಿ ಯೆಂದು ಸಂತೈಸಿದನು ಯಮಸೂನು ॥ ೪೧ ॥

೩೯, [1]ಯೊಳೋ (ಅ ಕುಮಾ), ಸ್ವೀಪಾ-(k). [2]ಯೋ (ಕ ಓ k).
[ಕುಠಾರ-ಕೊಡಲಿ. ವಾರಿ-ನೀರು].

೪೦. [1]ಯಾ (ಅ); ಸ್ವೀಪಾ (ಓ).
[ಕದಡಿತು-ಕ್ಷೋಭೆಗೊಂಡಿತು. ಕಲ್ಪಾಂತ-ಪ್ರಳಯಕಾಲ. ಕೆದಱಿ-ಚೆದರಿ. ಖಂಡೆಯ-ಕತ್ತಿ. ಜಡಿ-ಝಳಪಿಸು. ಕಿಬ್ಬದಿ-ಪಕ್ಕೆಯ ಕೆಳಭಾಗ. ಉಗಿ-ಹೊರಕ್ಕೆ ತೆಗೆ. ಅಹಿತ-ಶತ್ರು. ತಿದಿ-ಚರ್ಮದ ಚೀಲ, ಶ್ವಾಸಕೋಶ].

೪೧. [1]ಯಸ (ಅ ಕುಮಾ), ಸ್ವೀಪಾ (ಪ್ರ ಕ ಓ k).
[ಹೊಲ್ಲಹ-ಕೆಟ್ಟದ್ದು. ಲೇಸು-ಒಳ್ಳೆಯದು].

ಹೊನ್ನಿನಲಿ ಮಧುರೋಕ್ತಿಯಲಿ ವಿವಿ-
ಧಾನ್ನದುಡುಗೊಱೆಗಳಲಿ ದೂತನ
ಮನ್ನಿಸಿದನವನೀಶನುಚಿತದಲವನ ಬೀಳ್ಕೊಟ್ಟ ।
ಪನ್ನಗನ ಸಿರಿಮಂಚದಾತನು
ಚೆನ್ನಲಿರಲೀ ಪಾಂಡುತನಯರಿ-
ಗಿನ್ನು ಮಂಗಳವೆನುತ ಸಂಜಯ ಬಂದನಿಭಪುರಿಗೆ ॥ ೪೨ ॥

---

೩. ಕೃಷ್ಣಸಂಧಾನ

ಕೇಳು ಜನಮೇಜಯ ಧರಿತ್ರೀ-
ಪಾಲ ಧರ್ಮಜನಹಿತಮಂತ್ರಿಯ
ಬೀಳುಕೊಟ್ಟನು ಬಂದನಸುರಾರಾತಿ[1]ಯೋಲಗಕೆ[1] ।
ಮೇಲಣನುವಿನ್ನೇನು ಲಕ್ಷ್ಮೀ-
ಲೋಲ ಕರುಣಿಸು ಕೌರವಕ್ಷಿತಿ-
ಪಾಲ[2]ನಲಿ ನ[2]ಮಗೇನು ಘಟಿಸುವುದೆಂದು ನೃಪ ನುಡಿದ ॥ ೪೩ ॥

ಏನು ನಿನ್ನಭಿಮತವು ವರಸಂ-
ಧಾನವೋ ಸಂಗ್ರಾಮವೋ ನಯ-
ವೇನು ಮನದೋವರಿಯೊಳಿರಿಸದೆ ಹೇಳು ನಿಶ್ಚಯವ ।
ನೀನೊಲಿದ ಹದನಾವುದದನೊಲಿ-
ದಾನು ಘಟಿಸುವೆನೆಂದು ಕುಂತೀ-
ಸೂನುವನು ಬೆಸಗೊಂಡನಸು[1]ರಾರಾತಿ[1] ನಸುನಗುತ ॥ ೪೪ ॥

---

೪೨. ಹೊನ್ನು–ಚಿನ್ನದ ನಾಣ್ಯ. ಮಧುರೋಕ್ತಿ–ಸವಿಯಾದ ಮಾತು. ಮನ್ನಿಸಿದ–ಗೌರವಿಸಿದ, ಸತ್ಕರಿಸಿದ. ಪನ್ನಗನ ಸಿರಿಮಂಚದಾತ–ಹಾವನ್ನೇ ಶ್ರೇಷ್ಠವಾದ ಮಂಚವಾಗಿ ಉಳ್ಳವನು; ವಿಷ್ಣು, ಶ್ರೀಕೃಷ್ಣ].

೪೩. [1]ಯುದ್ಧೆಡೆಗೆ (ಅ ಕುಮಾ), ನಸುನಗುತ (ಕ); ಸ್ವೀಪಾ-(ಪ್ರ k). [2]ಕರಲಿ (ಅ ಕುಮಾ), ಸ್ವೀಪಾ (ಪ್ರ ಕ).
[ಅನುವು–ಸಿದ್ಧತೆ, ಏರ್ಪಾಡು. ಘಟಿಸು–ಸಂಭವಿಸು].

೪೪. [1]ರವಿರೋಧಿ (ಅ ಕುಮಾ), ಸ್ವೀಪಾ (ಪ್ರ ಕ ಓ k).
[ಅಭಿಮತ–ಅಭಿಪ್ರಾಯ. ಸಂಗ್ರಾಮ–ಯುದ್ಧ. ನಯ–ಕಾರ್ಯನೀತಿ. ಓವರಿ–ಅತ್ಯಂತ ಒಳಭಾಗ. ಹದನು–ನಿಲವು. ಘಟಿಸು–ಆಗಮಾಡಿಸು. ಅರಾತಿ–ಹಗೆ, ಶತ್ರು].

ಅಳಿವುವೊಡ[1]ಲುಗಳ[1]ವನಿಸಾಗರ-
ವುಳಿಯಲುಳಿವುದು ಕೀರ್ತಿ ಸೋದರ-
ರೊಳಗೊಳಗೆ [2]ಕಡಿದಾಡಿ[2] ಕೆಟ್ಟರು ಯೆಂಬ ದುರ್ಯಶದ ।
ಹಳಿವು ಹೊಱುವುದು ದೇವ ಸುಡಲಾ
ನೆಲನನಾ ಕೌರವನ ಕೈಯಲಿ
ಕೆಲವು ನಗರಿಯ ಕೊಡಿಸಿ ನಮ್ಮನು ಸಂತವಿಡಿಯೆಂದ ॥ ೪೫ ॥

ನೀವು ಬಿಜಯಂಗೈದು ಸಂಧಿಯ-
ನಾವ ಪರಿಯಲಿ ಘಟಿಸಿ ಕುರುಭೂ-
ಪಾವಳಿಯೊಳೆಮ್ಮಿರವು ಸಂಭವಿಸುವವೊಲೆಸಗುವದು ।
ಲಾವಕರ ನುಡಿಗಳಲಿ ಕೆಡುವುದು
ಕೋವಿದರ ಮನವವರ ಮೇಲೆಮ-
ಗಾವ ಮನಮುನಿಸಿಲ್ಲ ಸಂಧಿಯ ಘಟಿಸಿ ಸಾಕೆಂದ ॥ ೪೬ ॥

ಅರಸನಭಿಮತವಿಂದು ಸಂಧಿಗೆ
ಮರಳಿತೆಲೆ ಪವಮಾನಸುತ ನಿ-
ನ್ನಜಿತವಾವುದು ಮನವ ವಂಚಿಸಬೇಡ ಹೇಳೆನಲು ।
ಧರಣಿಪತಿ ತಪ್ಪುವನೆ ಕರ್ಕಶ-
[1]ತರ[1]ದ ಕದನದಲೇನು ಫಲ ಸೋ-
ದರರ ವಧೆಗೊಡಬಡುವನಲ್ಲಸುರಾರಿ ಕೇಳೆಂದ ॥ ೪೭ ॥

---

೪೫. [1]ಲಿದು ಅ (ಅ ಕುಮಾ), ಸ್ವೀಪಾ-ಪ್ರ ಕ k). [2]ಹೊಯ್ದಾಡಿ (ಅ ಕುಮಾ), ಸ್ವೀಪಾ (ಪ್ರ ಓ k).
[ಅಳಿ-ನಾಶವಾಗು. ಅವನಿ-ಭೂಮಿ. ದುರ್ಯಶ-ಅಪಕೀರ್ತಿ. ಹಳಿವು-ನಿಂದೆ. ಹೊಱು-ನಿಲ್ಲು. ಸಂತವಿಡು-ಸಮಾಧಾನಪಡಿಸು].

೪೬. [ಇರವು-ಇರುವಿಕೆ, ಅಸ್ತಿತ್ವ. ಲಾವಕ-ನೀಚ, ಕೆಡುಕ. ಕೋವಿದ-ಬಲ್ಲವನು, ವಿದ್ವಾಂಸ, ಪಂಡಿತ].

೪೭. [1]ಭರ (ಅ ಕುಮಾ), ಸ್ವೀಪಾ-(ಪ್ರ k ಓ).
[ಅಜಿತ-ತಿಳಿವಳಿಕೆ. ಕರ್ಕಶತರದ-ಅತ್ಯಂತ ಕಠಿನವಾದ].

ಎಲೆ ಮಹಾದೇವಾಯ್ತು ಹಾಲಾ-
ಹಲ ಸುಧಾರಸ ವುಕ್ಕಿದುರಿಯ-
ಗ್ಗಳಿ[1]ಸಿ[1] ಶೀತಳವಾಯ್ತು ಸಿಡಿಲಾಟೋಪ ನಯವಾಯ್ತು ।
ಕೊಳುಗುಳಕೆ ಪವಮಾನನಂದನ-
ನಳುಕಿದನು ಮಝು ಮಾಯೆ ಕುಂತೀ-
ಲಲನೆ ಹೆತ್ತಳು [2]ಮಗನ[2]ನೆಂದನು ಶೌರಿ ನಸುನಗುತ ॥ ೪೮ ॥

ಈತನಭಿಮತವಿದು ಜಗದ್ವಿ-
ಖ್ಯಾತ ಸಾಹಸಿ ಪಾರ್ಥ ಹೇಳೈ
[1]ನೂತ[1]ನಾಳಾಪವನು [2]ಕೇಳ್ವೆವು[2] ಶ್ರುತಿರಸಾಯನವ ।
ಭೀತಿ ಬೇಡಿನ್ನೆನಲು ಬೇರೆಮ-
ಗೇತರಭಿಮತವೇನ ಬೆಸಸಿದ-
ಡಾತುಕೊಂಬೆನು ಶಿರದೊಳೆಂದನು ಪಾರ್ಥ ವಿನಯದಲಿ ॥ ೪೯ ॥*

ನಕುಲ [1]ನೀ ಹೇಳನುಮತವ ನಿ-
ನ್ನುಕುತಿ[1] ಸಮರವೊ ಸಾಮವೋ ನೋಕ್
ಸುಕರ ಮಂತ್ರವನರುಹು ನೀನಿನ್ನಂಜಬೇಡೆನಲು ।
ಯುಕುತಿ ನಮಗಿನ್ನೇನುಭಯ ರಾ-
ಜಕವ ಸಂತೈಸುವುದು ಬೇರಿ-
ಮ್ಮುಕುತಿಯೆಲ್ಲಿಯೆದೆಂದನಾ ಮಾದ್ರೇಯನೊಲವಿನಲಿ ॥ ೫೦ ॥*

---

೪೮. [1]ದ (ಕುಮಾ). [2]ಸುತರ (ಅ ಕುಮಾ), ಸ್ವೀಪಾ (ಪ್ರ ಓ k).
[ಹಾಲಾಹಲ-ಘೋರ ವಿಷ. ಸುಧಾರಸ-ಅಮೃತರಸ. ಅಗ್ಗಳಿಸು-ಹೆಚ್ಚು, ಅಧಿಕವಾಗು, ಪ್ರಬಲವಾಗು. ಕೊಳುಗುಳ-ಯುದ್ಧ. ಅಳುಕು-ಹೆದರು].

೪೯. [1]ಮಾತಿ (ಕುಮಾ), ಸ್ವೀಪಾ (ಪ್ರ ಅ). [2]ಕೇಳುವೆ (ಕುಮಾ), ಸ್ವೀಪಾ (ಪ್ರ ಅ).
[ಆಳಾಪ-ಮಾತು. ಶ್ರುತಿರಸಾಯನ-ಕೇಳಲು ಹಿತವಾದದ್ದು. ಅತುಕೊಳ್-ಸ್ವೀಕರಿಸು, ಧರಿಸು].

೫೦. [1]ಹೇಳೈ ಹದನ ನಿನ್ನಯ ಯುಕುತಿ (ಅ), ನೀ ಹೇಳೆನುಹದ ನಿನ್ನುಕುತಿ (ಪ್ರ).
[ಅನುಮತ-ಅಭಿಪ್ರಾಯ. ಉಕುತಿ—ಉಕ್ತಿ, ಮಾತು, ಹೇಳಿಕೆ. ಸಾಮ-ಸಂಧಾನ ಮಾರ್ಗ, ಸಾಮೋಪಾಯ. ಉಭಯ ರಾಜಕ-ಎರಡು ಪಕ್ಷಗಳ ರಾಜರ ಸಮೂಹ].

---

* ಈ ಎರಡು ಪದ್ಯಗಳು 'ಅ' ಪ್ರತಿಯಲ್ಲಿ ಇಲ್ಲ. ಇಲ್ಲಿ ಸೇರಿಸಿಕೊಂಡಿದೆ.

ಆವುದಭಿಮತವೇನು ಹದ ಸಹ-
ದೇವ ನೀ ಹೇಳೆನಲು ಬಿನ್ನಹ
ದೇವ ಸೇರದು ಸಂಧಿ ಸಂಗರವೆಮಗೆ ಸೇರುವುದು ॥
ಆವ ವಿಧದಲಿ ಸಮರವನೆ ಸಂ-
ಭಾವಿಸುವುದೆನೆ ನಗುತ ವರ ರಾ-
ಜೀವನಾಭನು ಕಳುಹಿದನು ದ್ರೌಪದಿಯೆಡೆಗೆ ಚರರ ॥ ೫೧ ॥*

ದೇವಿ ಚಿತ್ತೈಸುವುದು ವರವಸು-
ದೇವ[1]ನಂದನ[1]ನಟ್ಟಿದನು ಸಂ-
ಭಾವಿಸುವುದರಿರಾಯರಲಿ ಸಂಧಾನಸೌರಂಭ ।
ನೀವು ಬಿಜಯಂಗೈದು ಚಿತ್ತದೊ-
ಳಾವ ಹದನಾ ಹದನನಾ ರಾ-
ಜೀವನಾ[2]ಭಂಗರುಹಿಯೆಂದರು ಚರರು ಕೈಮುಗಿದು[2] ॥ ೫೨ ॥

ಏನು ಹದನೇನೆಲವೊ ವರಸಂ-
ಧಾನವೇ ಕೌರವರೊಳದು ಸು-
ಮ್ಮಾನವೇ ಪತಿಗಳಿಗೆ ಪಾಪಿಗಳಿಗೀವರೇ ಸತಿಯು ।
ದಾನವಾಂತಕನೆಸಗುವನೆ ತ-
ಪ್ಪೇನು ತಪ್ಪೇನೆನುತ ನಸುಮಸು-
ಳ್ದಾನನಾಂಬುಜ[1]ದಬಲೆ[1] ಬಂದಳು ಕೃಷ್ಣನೋಲಗಕೆ ॥ ೫೩ ॥

೫೧. [ಹದ–ಮನಸ್ಸಿನ ಸ್ಥಿತಿ, ಸಮಾಚಾರ. ಸೇರು–ಇಷ್ಟವಾಗು. ಸಂಗರ–ಯುದ್ಧ. ಸಂಭಾವಿಸು–ಘಟಿಸುವಂತೆ ಮಾಡು].

೫೨. [1]ಸುತ (ಅ ಕುಮಾ), ಸ್ವೀಪಾ (ಕ ಓ). [2]ಭಾದಿಗಳಿಗರುಹುವುದೆಂದರಾಚರರು (ಅ ಕುಮಾ), ಸ್ವೀಪಾ (ಪ್ರ ಓ k ಅ).
[ಅರಿರಾಯರು–ಶತ್ರುರಾಜರು. ಸೌರಂಭ–ಕಾರ್ಯ].

೫೩. [1]ವದನೆ (ಅ ಕುಮಾ), ಸ್ವೀಪಾ (ಪ್ರ ಓ k).
[ಮಸುಳ್ದ–ಮಂಕಾದ, ಕಳೆಗುಂದಿದ. ಅಬಲೆ–ಸ್ತ್ರೀ, ಹೆಂಗಸು].

* ಈ ಪದ್ಯವು 'ಅ' ಪ್ರತಿಯಲ್ಲಿ ಇಲ್ಲ. ಇಲ್ಲಿ ಸೇರಿಸಿಕೊಂಡಿದೆ.

ಭ್ರೂಲತೆಯು ಸುರಚಾಪ[1]ದು[1]ರುಕೇ-
ಶಾಳಿಗಳ ಕಾರ್ಮುಗಿಲಪಾಂಗದ
[2]ಸಾಲ[2] ಕುಡಿಮಿಂಚುಗಳ ನೂಪುರರವದ ಮೊಳಗುಗಳ ।
ಆ ಲತಾಂಗಿಯು ಗಮನವೇ ಮಳೆ-
ಗಾಲದಂತಿರೆ ಧಾರ್ತರಾಷ್ಟ್ರಕು-
ಲಾಳಿ ನಿಲುವುದೆ ಪವನಜನ ಸಂಪ್ರತಿಯು ಸೇರುವೆಗೆ ॥ ೫೪ ॥

ಎಲೆ ಸಮೀರಕುಮಾರ ಸಂಪ್ರತಿ-
ಗೆಳಸಿದೈ ಕಲಿ[1]ತನವ ನೀರಲಿ[1]
ಕಲಸಿದೈ ಕೈವಾರವಾದುದೆ ಕೌರವೇಂದ್ರನಲಿ ।
ಕಲಿಸಿದೈ ಕೃಷ್ಣಂಗೆ ನೀತಿಯು
ಬಳಸಿದೈ ಬಹು[2]ಮತವ[2] ನರಕದೊ-
ಳಿಳಸಿದೈ ಶಶಿಕುಲವನೆಂದನಿಲಜನ ನೋಡಿದಳು ॥ ೫೫ ॥

ಬೇಡಲಟ್ಟುವನೇ ಮಹೀಪತಿ
ನಾಡೊಳೈದೂರುಗಳನವರಲಿ
ಮಾಡುವಾತನು ಕೃಷ್ಣನೇ ಸಂಧಾನವನು ನಿಮಗೆ ।
ಕೇಡುಗನ ಕೌರವನೃಪಾಲನ
ಕೂಡಿ ಬದುಕುವ ಭೀಮಸೇನನೆ
ರೂಢಿಸಿತಲಾ ನಿಮ್ಮ ಸಿರಿ ಸೋದರರ ಸೇರುವೆಗೆ ॥ ೫೬ ॥

---

೫೪. [1]ವು (ಅ), ಸ್ವೀಕಾ (ಕುಮಾ ಓ k). [2]ಸಾಲು (ಅ), ಸ್ವೀಕಾ (ಕ ಓ k).
[ಭ್ರೂಲತೆ–ಬಳ್ಳಿಯಂತಿರುವ ಹುಬ್ಬು. ಸುರಚಾಪ–ಕಾಮನಬಿಲ್ಲು. ಕೇಶಾಳಿ–ಕೂದಲ ರಾಶಿ. ಕಾರ್ಮುಗಿಲು–ಮಳೆಗಾಲದ ಮೋಡ. ಅಪಾಂಗ–ಕಡೆಗಣ್ಣ ನೋಟ. ನೂಪುರ–ಕಾಲ್ಗೆಜ್ಜೆ. ಮೊಳಗು–ಗುಡುಗು. ಧಾರ್ತರಾಷ್ಟ್ರಕುಲಾಳಿ–ಧೃತರಾಷ್ಟ್ರನ ಮಕ್ಕಳ ಸಮೂಹ. ಪವನಜ–ಭೀಮ. ಸಂಪ್ರತಿ–ಸಂಧಾನ. ಸೇರುವೆ–ವಶ, ಸ್ವಾಧೀನ; ಇಷ್ಟ, ಒಪ್ಪಿಗೆ].

೫೫. [1]ಮುಳುವ ಕುಲದಲಿ (ಅ), ಸ್ವೀಕಾ (k). [2]ವಿಧದ (ಅ), ಸ್ವೀಕಾ (ಕ k ಕುಮಾ).
[ಸಮೀರ–ವಾಯು. ಎಳಸು–ಬಯಸು, ಅಪೇಕ್ಷಿಸು. ಕಲಸು–ಬೆರಸು, ಮಿಶ್ರ ಮಾಡು. ಕೈವಾರ–ಹೊಗಳಿಕೆ. ಬಳಸಿದೈ ಬಹುಮತವ–ಬಹುಜನರ ಅಭಿಪ್ರಾಯವನ್ನು ಅನುಮೋದಿಸು (ಬಳಸು–ಉಪಯೋಗಿಸು].

೫೬. [ಮಹೀಪತಿ–ಧರ್ಮರಾಯ. ರೂಢಿಸು–ಬೆಳಸು, ಅಭಿವೃದ್ಧಿಪಡಿಸು, ಕೂಡಹಾಕು].

ಯತಿಗಳಾದಿರಿ ನೀವು ರೋಷ-
ಚ್ಯುತರಲೇ ಬಳಿಕೇನು ಧರ್ಮ-
ಜ್ಞತೆಯು ನೆಲೆಗಳನಱಿದ ಮನವೆಱಗುವುದೆ [1]ಕಾಳೆಗ[1]ಕೆ ।
ಕ್ಷಿತಿಯು ಪಾಲಿಸುವುದು ವಿರೋ[2]ಧ[2]-
ವ್ಯತಿಕರವ [3]ಬಿಸುಡು[3]ವುದು ಕುಂತೀ-
ಸುತರು ಕೌರವ[4]ರೊಡನೆ[4] ಸುಖದಲಿ ರಾಜ್ಯ[5]ವಾಳು[5]ವುದು ॥ ೫೭ ॥

ಸೋಲ[1]ಗೆಲ್ಲವದೇಕೆ ಕುರುವಂ-
ಶಾಳಿಯೊಳು[1] ಸೋದರರು ನೀವ್ ಪಾಂ-
ಚಾಲರಾವೇ ಹೊಱಗು ನಿಮ್ಮೊಳು ಸಲುಗೆಯೇಕೆಮಗೆ ।
ಮೇಳವೇ ಸಿರಿ [2]ಗಳಿಸಲರಿದು[2] [3]ಜ-
ನಾಳಿ[3] ಹೆಂಡಿರಪೂರ್ವವೇ ಕ್ಷಿತಿ-
ಪಾಲಕರು ನೀವಾಗಲೆಮಗದು ಪರಮ ಪರಿಣಾಮ ॥ ೫೮ ॥

ಭೀಮ ಬಲ[1]ವದರಾತಿ[1]ಸೇನಾ-
ಭೀಮ ಕುರುಕುಲಕುಸುಮಮಾರ್ಗಣ
ಭೀಮ ಮೆಱೆದೈ ಮಾನಿನಿಯು [2]ಘನಮಾನ[2]ಹಾನಿಗಳ ।
ರಾಮನಬಲೆಗೆ ಕುದಿದ ಘನ ಸಂ-
ಗ್ರಾಮವನು ನೀ ಕೇಳಿದಱಿಯಾ
ಪ್ರೇಮದಲಿ ನೋಡೆನ್ನನೆಂದಳು ದ್ರೌಪದೀದೇವಿ ॥ ೫೯ ॥

---

೫೭. [1]ರಾರವ (ಅ ಅ), ಸ್ವೀಪಾ (ಓ k). [2]ಧ (ಅ ಕುಮಾ ಅ), ಸ್ವೀಪಾ (ಓ k). [3]ಬಿಡಿಸು (ಅ ಕುಮಾ ಅ), ಸ್ವೀಪಾ (ಓ). [4]ನೃಪರೊಡನೆ (ಅ), ಸ್ವೀಪಾ (ಅ ಕುಮಾ). [5]ಮಾಡು (ಅ ಅ), ಸ್ವೀಪಾ (ಓ ಕುಮಾ).
[ಯತಿ-ಸಂನ್ಯಾಸಿ. ರೋಷಚ್ಯುತರು-ಕೋಪವನ್ನು ಬಿಟ್ಟವರು. ಧರ್ಮಜ್ಞತೆ-ಧರ್ಮದ ಅರಿವು, ಧರ್ಮದ ತಿಳಿವಳಿಕೆ. ಎಱಗು-ಬಾಗು, ಓಲು, ಒಲೆ. ಕ್ಷಿತಿ-ಭೂಮಿ. ವಿರೋಧವ್ಯತಿಕರ-ವಿರೋಧದ ಸಂದರ್ಭ].

೫೮. [1]ಗೆಲವೇ ಕೌರವರ ಸಂಪಾಳಿಯೊಳು (ಅ ಕುಮಾ), ಗೆಲವೇ ಕೌರವರ ವಂಶಾಳಿಯಲಿ (ಅ) ಸ್ವೀಪಾ (ಪ್ರ ಓ k). [2]ಘಟಿಸಿತದು (ಅ), ಸ್ವೀಪಾ (ಸರ್ವತ್ರ). [3]ಜನಜಾಲ (ಅ), ಸ್ವೀಪಾ (ಸರ್ವತ್ರ).
[ಜನಾಳಿ-ಜನರ ಗುಂಪು. ಅರಿದು-ಅಸಾಧ್ಯ. ಪರಮ ಪರಿಣಾಮ-ಪರಮ ಸಂತೋಷ].

೫೯. [1]ವಾರಾತಿ (ಅ), ಸ್ವೀಪಾ (ಸರ್ವತ್ರ). [2]ಮಾನಾಪ (ಅ ಕುಮಾ), ಸ್ವೀಪಾ (k ಪ್ರ ಓ ಅ).
[ಅರಾತಿ-ಶತ್ರು. ಕುಸುಮಮಾರ್ಗಣಭೀಮ-ಮನ್ಮಥನಿಗೆ ಭಯಂಕರನಾದವನು, ಶಿವಸ್ವರೂಪನಾದವನು. ಕುದಿ-ಸಂಕಟಪಡು. ಅಱಿಯಾ-ಕೇಳಿ ಕಾಣೆಯಾ].

ಧರೆಗೆ ಕಟ್ಟಭಿಮಾನ ಹೆಂಡಿರ
ಹರಿಬವಾ ಹರಿಬದಲಿ ಕೆಡಹುವು-
ದರಿಯುನವಗಡಿಸಿದರೆ ಸಾವುದು [1]ಪಂಥವುಳ್ಳವರು[1] ।
ಸುರನರೋರಗರೊಳಗೆ ನಿಮ್ಮೈ-
ವರಿಗೆ ಸರಿಯಿಲ್ಲಬಲೆಯೊಬ್ಬಳ
ಹರಿಬದಲಿ ಹಂಗಾದಿರೆಂಬಪ[2]ದೆಸೆಗೆ ನೋನುವರೆ[2] ॥ ೬೦ ॥

ಮುಂದಲೆಯ ಹಿಡಿದೆಳೆದು ಸಭೆಯಲಿ
ತಂದು ಸೀರೆಯ ಸುಲಿದೊಡವದಿರ
ಮುಂದೆ ಮೌನದೊಳಿದ್ದರಲ್ಲದೆ ಪತಿಗಳುಸಿರಿದರೆ ।
ಅಂದು ನೀ ಹಿಂದಿಕ್ಕಿಕೊಂಡುದ-
ನಿಂದು ಮಱೆದೈ ಸಂಧಿಗೋಸುಗ
ಮುಂದುವರಿದೈ ಕೃಷ್ಣ ಯೆಂದಳು ದ್ರೌಪದೀದೇವಿ ॥ ೬೧ ॥

ತನಯರೈವರು ವೀರ ಸಹದೇ-
ವನು ಘಟೋತ್ಕಚನೀ ಸುಭದ್ರಾ-
ತನಯನೆಮ್ಮಯ ತಂದೆ ಮೂಜಕ್ಷೌಹಿಣೀಸೇನೆ ।
ಇನಿಬ[1]ರೇ[1] ಕಾದುವರು ದುಶ್ಶಾ-
ಸನನ [2]ರಕುತವ ಸುಱಿದು[2] ಕುರುಕುಲ-
ವನವ ಸುಡುವರು ನಿಮ್ಮ ಹಂಗೇಕೆಂದಳಂದುಮುಖಿ ॥ ೬೨ ॥

---

೬೦. [1]ವಾಸಿಯುಳ್ಳವರು (ಪ್ರ ಓ k), ಪಂಥವುಳ್ಳವರಿಗೆ (ಅ), ಸ್ವೀಪಾ (ಅ ಕುಮಾ).
[2]ದೆಸೆಯನಾನುವಿರಿ (ಅ), ಸ್ವೀಪಾ (ಸರ್ವತ್ರ).
[ಕಟ್ಟಭಿಮಾನ–ಅತ್ಯಭಿಮಾನ. ಹರಿಬ–ಕರ್ತವ್ಯಪಾಲನೆ. ಅವಗಡಿಸು–ಪ್ರತಿಭಟಿಸು. ಪಂಥ–ಪ್ರತಿಜ್ಞೆ ಹಂಗಾಗು–ದಾಕ್ಷಿಣ್ಯಕ್ಕೆ ಒಳಗಾಗು, ಋಣಿಯಾಗು. ಅಪದೆಸೆ–ಅಪಕೀರ್ತಿ. ನೋನು–ವ್ರತವಾಗಿ ಕೈಗೊಳ್ಳು].

೬೧. [ಸುಲಿ–ಕಳಚು. ಹಿಂದಿಕ್ಕಿಕೊಳ್ಳು–ಆಸರೆ ಕೊಡು].

೬೨. [1]ರುಂ (ಅ), ಸ್ವೀಪಾ (ಸರ್ವತ್ರ). [2]ಕರುಳನು ತೆಗೆದು (ಅ ಕ).
[ತನಯರೈವರು–ದ್ರೌಪದಿಯ ಐವರು ಮಕ್ಕಳು : ಪ್ರತಿವಿಂಧ್ಯ, ಶ್ರುತಸೋಮ, ಶ್ರುತಕೀರ್ತಿ, ಶತಾನೀಕ, ಶ್ರುತಸೇನ. ಸುಱಿ–ಹೀರು, ಕುಡಿ].

ವರಸತಿಯ ಬಿಸುಸುಯ್ಲ ಗಾಳಿಯೊ-
ಳುರಿ ಚಡಾಳಿಸಿ ರೋಷಮಯದು-
ಬ್ಬರದೊಳೌಡೊತ್ತಿದನು ಹಿಡಿದನು ಖತಿಯನಹಿತ[1]ರಲಿ[1] ।
ತರುಣಿ ಸೈರಿಸು ಸೈರಿಸಿನ್ನೀ
ಸುರಿವ ಕಂಬನಿಗಳಿಗೆ ಶತಸಾ-
ವಿರಮಡಿಯ ಕಂಬನಿಯ ಸುರಿಸುವೆ ಹಗೆಯ ಹೆಂಡಿರಲಿ ॥ ೬೩ ॥

ಯಮಸುತನ [1]ಹಜ್ಜವೆಂತೆಂಟೆಂತಾ-[1]
ಕ್ರಮಕೆ ಮೊಗದಿರುಹಿದೆನು ಬಳಿಕೀ
ಕಮಲವದನೆಯ ಹರಿಬವೆನ್ನದು ಪತಿಗಳಿನಿಬರಲಿ ।
ಎಮಗೆ ಸಂಪ್ರತಿ-ಗಿ[2]ಲ್ಲ ಮನ ಘನ-
ಸಮರವೇ ಸ[3]ರ್ವಾರ್ಥ[3] ಕೋಪ-
ಶ್ರಮಕೆ ರಿಪುರುಧಿರಾಂಬು[4]ಪಾನವೆ[4] ವಿಪುಳಫಲವೆಂದ ॥ ೬೪ ॥

ಕೆಡಹಿ ರಿಪುವನು ಕರುಳ ದಂಡೆಯ
ಮುಡಿಸುವೆನು ಮಾನಿನಿಗೆ ರಕುತವ
ಕುಡಿಯಲೆರೆವೆನು ಶಾಕಿನಿಯರಿಗೆ ಶತಸಹೋದರರ ।
ನಡೆದು ಸಂಧಿಯ ಮಾಡಿ ಮುರರಿಪು
ಕೊಡಿಸು [1]ನಾಲ್ಕೂರುಗಳನಿವರಿಗೆ[1]
ತಡೆಯ[2]ದೆರಡೂರುಗಳ[2] ಕೊಂಬೆನು ಕೌರವೇಂದ್ರನಲಿ ॥ ೬೫ ॥

---

೬೩. [1]ರಿಗೆ (ಅ), ಸ್ವೀಪಾ (ಅ ಪ್ರ ಕ k).
[ಬಿಸುಸುಯ್ಲು-ಬಿಸಿಯುಸಿರು. ಚಡಾಳಿಸು-ಹೆಚ್ಚಾಗು. ಖತಿ-ಕೋಪ].

೬೪ [1]ಬಗೆಯೆಂ (ಪ್ರ ಓ k). [2]ಯಿ (ಅ). [3]ಸರ್ವತ್ರ (ಅ), ಸ್ವೀಪಾ (ಪ್ರ ಓ k ಅ ಕುಮಾ) [4]ಹನನವೆ (ಅ), ಸ್ವೀಪಾ (ಸರ್ವತ್ರ).
[ಹ ಎವು ಎಣಿಕೆ. ಆಲೋಚನೆ ರುಧಿರಾಂಬು-(ಕುಡಿಯಲು) ರಕ್ತದ ನೀರು]

೬೫ [1]ಸಾಕೈ ಊರನಿವರಿಗೆ (ಅ ಕುಮಾ), ನಾಲ್ಕೂರುಗಳನಿವರಿಗೆ (ಅ), ಸ್ವೀಪಾ (ಓ).
[2]ದಾನೆರಡೂರ (ಅ ಕುಮಾ); ಸ್ವೀಪಾ (ಕ ಓ ಅ).
[ಊರು-ಪಟ್ಟಣ, ಗ್ರಾಮ; ಊರು (ಸಂ.)-ತೊಡೆ].

ಕೆಲರು ಸಂಪ್ರತಿಗೊಲಿವಂ[1]ದಱೊಳು[1]
ಕೆಲರು ವಿಗ್ರಹಕೆಳಸುವ[2]ರು ನಿ-
ಮ್ಮೊಳಗೆ[2] [3]ನಿಶ್ಚಯವಿ[3]ಲ್ಲದಿರೆ ನೃಪಕಾರ್ಯವೆಂತಹುದು ।
ತಿಳಿ[4]ದು[4]ಹೇಳವನೀಶ ಪರಮಂ-
ಡಲಕೆ ಪಯಣವ ಮಾಡು[5]ವೊಡೆ[5] ನಾ-
ವಳುಕಿದವರಲ್ಲೆನಲು ಕೃಷ್ಣಂಗರಸನಿಂತೆಂದ ॥ ೬೬ ॥

ವಿದಿತವೈದೂರುಗಳ ಕೊಟ್ಟೊಡೆ
ಹದುಳವಿಡುವುದು [1]ಮುಱಿ[1]ದರಾದೊಡೆ
ಕದನವನೆ [2]ಜೋಡಿಸುವುದು[2]ಚಿತಾನುಚಿತ[3]ದ[3]ನುವಱಿದು ।
ಹದನ ನೀನೇ ಬಲ್ಲೆ ಸಾಕೆ-
ನ್ನಿದು ನಿಧಾನವು ಬಗೆಯಲೆಮ್ಮ-
ಭ್ಯುದಯ ನಿಮ್ಮಾಧೀನವೆಂದನು ಧರ್ಮನಂದನನು ॥ ೬೭ ॥

ಪಯಣವನು ನಿಶ್ಚೈಸಿ ದನುಜಾ-
ರಿಯನು ಬೀಳ್ಕೊಂಡವನಿಪತಿ ಪಾ-
ಳಯದೊಳಗೆ ಸಾಱಿಸಿದನಗ್ಗದ ಮಂಡಲೀಕರಿಗೆ ।
ನಯ[1]ವಿದನು[1] ಮಱುದಿವಸ ಮಂಗಳ-
ಮಯ ಮುಹೂರ್ತದ ಜೋಯಿಸರ ಜೋ-
ಕೆಯಲಿ ನಿರ್ಗಮನಿರತನಾದನು ಕೃಷ್ಣನೊಲವಿನಲಿ ॥ ೬೮ ॥

---

೬೬. [1]ತ್ತಲು (ಅ ಕುಮಾ), ಸ್ವೀಪಾ (ಪ್ರ ಓ k ಅ). [2]ವಂದರೊಳಗೆ (ಅ ಕುಮಾ), ಸ್ವೀಪಾ (ಅ). [3]ನಿರ್ಮಳವ (ಅ), ಸ್ವೀಪಾ (ಕ ಓ ಅ ಕುಮಾ). [4]ಯ (ಅ ಕುಮಾ), ಸ್ವೀಪಾ (ಪ್ರ ಕ ಓ ಅ k). [5]ವೆವು (ಅ ಕುಮಾ), ಸ್ವೀಪಾ (ಪ್ರ ಓ k ಅ).

[ವಿಗ್ರಹ-ಯುದ್ಧ. ಎಳಸು-ಬಯಸು. ಪರಮಂಡಲ-ಶತ್ರುವಿನ ರಾಜ್ಯ].

೬೭. [1]ಮುನಿ (ಕ ಓ ಅ ಕುಮಾ). [2]ಕೈಕೊಳ್ವುದು (ಅ ಕುಮಾ), ಸ್ವೀಪಾ (ಕ ಓ k ಪ್ರ ಅ). [3]ವ (ಅ), ಸ್ವೀಪಾ (ಕ ಓ ಕುಮಾ ಅ).

[ವಿದಿತ-ಪ್ರಸಿದ್ಧವಾದ. ಹದುಳ-ಕ್ಷೇಮ, ನೆಮ್ಮದಿ. ಮುಱಿ-ಭಂಗಗೊಳಿಸು. ನಿಧಾನ-ಎಣಿಕೆ, ಪರ್ಯಾಲೋಚನೆ].

೬೮. [1]ದೊಳಾ (ಅ ಕುಮಾ), ಸ್ವೀಪಾ (ಕ ಓ)

[ನಯವಿದ-ರೀತಿನೀತಿಯನ್ನು ಬಲ್ಲವನು. ಜೋಕೆ ಎಚ್ಚರಿಕೆ. ನಿರ್ಗಮ-ಹೊರಡುವುದು].

ಕಳುಹುಕೈತಂದಖಿಳಪಾಂಡವ-
ಬಲಕೆ ನೇಮವ ಕೊಟ್ಟು ಧರ್ಮಜ
ಫಲುಗುಣರ ನಿಲಿಸಿದನು ಸಹದೇವನನು ನಕುಲನನು ।
ಕಳುಹಿದನು ನೀ ಮರಳೆನಲು ಬೆಂ-
ಬಳಿಯಲನಿಲಜನೈದಿ ಹಗೆಯಲಿ
ಕಲಹವನು ಮಸೆಯೆಂದು ನಂಬುಗೆಗೊಂಡು ಮರಳಿದನು ॥ ೬೯ ॥

ದೇವಿಯರು ಸೀವ್ ಮರಳಿಯೆನೆ ರಾ-
ಜೀವನಾಭನ ಹೊರೆಗೆ ದ್ರೌಪದಿ-
ದೇವಿ ಬಂದಳು ನೊಸಲ ಚಾಚಿದಳಂಘ್ರಿಕಮಲದಲಿ ।
ಸ್ಥಾವರಕೆ ಜಂಗಮಕೆ ನೀನೇ
ಜೀವಚೋಷ್ಟಕನವದಿರಂತ-
ರ್ಭಾವವನು ನೆಱೆ ಬಲಿಯಲಾಗದು ಸಂಧಿಕಾರ್ಯದಲಿ ॥ ೭೦ ॥

ಖಳರು [1]ತನ್ನು[1]ನ್ನತಿಯ ಕೀಲನು
ಕಳಚಿ ಕಳೆ[2]ದ[2]ರು [3]ಮರಳಿ ಹೂಡುವ್ರೊ-
ಡ[3]ಳುಕಿದರು ತನ್ನವರು ಪತಿಗಳೆ ಪರಮವೈರಿಗಳು ।
ಹಳಿವ ನೀನೇ ಬಲ್ಲೆ [4]ಇನ್ನೆ-
ನ್ನು[4]ಳಿವ ನೀನೇ ಬಲ್ಲೆ ಹಿಂದಾ-
ಗಳಲಿದೆನು ಸಲಹೆಂದು [5]ಹೊರಳಿದಳಬಲೆ ಚರಣದೊಳು[5] ॥ ೭೧ ॥

---

೬೯ [ನೇಮ-ಅಜ್ಞೆ. ಮಸೆ-ಹುರಿದುಂಬಿಸು, ಪ್ರೋತ್ಸಾಹಿಸು].

೭೦ [ಹೊರೆ-ಸಮೀಪ. ನೊಸಲು-ಹಣೆ. ಸ್ಥಾವರ-ಅಚಲ, ಅಚೇತನವಾದದ್ದು. ಜಂಗಮ-ಚಲಿಸುವದು, ಚೇತನವುಳ್ಳ ಪ್ರಾಣಿ. ಜೀವಚೇಷ್ಟಕ-ಜೀವವನ್ನು ಆಡಿಸುವವನು, ಕಾರ್ಯಪ್ರೇರಣೆ ಮಾಡುವವನು; ಭಗವಂತ. ಅಂತರ್ಭಾವ-ಒಳ ಮನಸ್ಸು. ಬಲಿ-ಬಲಪಡಿಸು].

೭೧. [1]ಯೆಮ್ಮು (ಅ), ತಮ್ಮು (ಕುಮಾ ಅ); ಸ್ವೀಪಾ (ಹಿ). [2]ವ (ಅ), ಸ್ವೀಪಾ (ಸರ್ವತ್ರ). [3]ಮರಳಿ ಮಾಡುವರ (ಅ), ಮರಳಿ ಮಾಡುವಡ (ಕುಮಾ), ಸ್ವೀಪಾ (ಅ ಪಿ). [4]ನೀನೆ (ಅ), ಎನ್ನಯ (ಅ ಕ); ಸ್ವೀಪಾ (ಹಿ). [5]ಕಂಬನಿ ದುಂಬಿದಂತ ತರಳೆ (ಅ ಕುಮಾ), ಸ್ವೀಪಾ (ಪ್ರ ಹಿ k).

[ಕೀಲು-ಆಘಾತ. ಹೂಡು-ಜೋಡಿಸು. ಹಳಿವು-ನಿಂದೆ].

ಏಳು ತಾಯೆ ಸರೋಜಮುಖಿ ವಿಪಿ-
ನಾಲಯದೊಳತಿ ನವೆದೆ ನಿನ್ನವ-
ರಾಳಿಗೊಂಡಂದವನು ಬಲ್ಲೆನು ನಿನ್ನ ಹರಿಬದಲಿ ।
ಕಾಳಗವನೇ ಬಲಿದು [1]ಬಹೆ[1] ನಿವ-
ರೇಳಿಲವ ಮಾಡಿದೊಡೆ ರಿಪುಗಳ
ಸೀಳಿ ಕರುಳನು ಮುಡಿಸದಿಹೆನೇ ನಿನ್ನ [2]ಕಬರಿಯಲಿ[2] ॥ ೭೨ ॥

ದೇವಕಿಯ ಮೇಲಾಣೆ ವರವಸು-
ದೇವನಂಘ್ರಿಗಳಾಣೆ [1]ಮನ್ಮಥ[1]
ದೇವನಾಣೆ ನಿಧಾನವನು ಕೇಳಬಲೆ ನಿನ್ನಾಣೆ ।
ನಾವು ಸಂಧಿಯನೆವದಲವದಿರ
ಭಾವವನು ಕಲಿಮಾಡಿ ಕೋಪವ
ತೀವಿ [2]ಸಂಧಿಯ ಮುರಿದು[2] ಬಹೆವಿದ ನಂಬು ನೀನೆಂದ ॥ ೭೩ ॥

ಹೊಗಳುತೈತಂದಸುರರಿಪು ಗಜ-
ನಗರವನು ಸುಯೋಧನ-
ನಗಣಿತೈಶ್ವರ್ಯವ ಮಹಾದೇವೆನುತ ನಲವಿನಲಿ ।
ಬಿಗಿದ ಬೀದಿಯ ನಯದ ನೆಲೆಗ-
ಟ್ಟುಗಳ ಮಣಿಮಯಹೇಮದುಪ್ಪರಿ-
ಗೆಗಳ ಕೇರಿಗಳೊಳಗೆ ಬರುತಿರ್ದನು ಮುರಧ್ವಂಸಿ ॥ ೭೪ ॥

---

೭೨. [1]ತಹೆ (ಅ ಕುಮಾ), ಸ್ವೀಪಾ (ಕ ಓ ಅ). [2]ಸಿರಿ ಮುಡಿಗೆ (ಪ್ರ k).
[ವಿಪಿನ–ಕಾಡು. ಅಳಿಗೊಳ್ಳು–ಕ್ಲೇಶಕ್ಕೆ, ಹಿಂಸೆಗೆ, ಒಳಗಾಗು. ಬಹೆನು–ಬರುತ್ತೇನೆ. ಏಳಿಲ–ತಿರಸ್ಕಾರ. ಕಬರಿ–ಕೇಶಪಾಶ, ತುರುಬು].

೭೩. [1]ಮನುಮಥ (ಅ ಕುಮಾ), ಸ್ವೀಪಾ (ಅ). [2]ಕಲಹವ ಮಸೆದು (ಪ್ರ k).
[ನಿಧಾನ–ಎಣಿಕೆ, ಪರ್ಯಾಲೋಚನೆ, ನಿಶ್ಚಯ, ನಿರ್ಧಾರ. ಕಲಿಮಾಡು–ಬಲಿಯಿಸು, ಹುರಿದುಂಬಿಸು. ತೀವು–ತುಂಬು].

ಮಂದ[1]ದಲಿ[1] ಸುಳಿವಾನೆ ಕುದುರೆಯ
ಸಂದಣಿಯ ಕೀಲಿಸಿದ ಭೂಮಿಪ-
ರಂದಣದ ಸಾಲುಗಳ ತೆಕ್ಕೆಯ [2]ಬಿರುದಿನಾ[2]ಳುಗಳ ।
ಮಂದಿಯಲಿ ಹೊಗಲನಿಲಗುಬ್ಬಸ-
ವೆಂದೊಡುಳಿದವರಳವೆ ಯೆನಲರ-
ವಿಂದನಾಭನು ಬಂದನಾ ಧೃತರಾಷ್ಟ್ರನರಮನೆಗೆ ॥ ೭೫ ॥

ಕೇಳಿದನು ಧೃತರಾಷ್ಟ್ರನಾ[1]ಸಿರಿ-
ಲೋಲನಾ[1]ಗಮನವನು ಚಿತ್ತವ
ಹೂಳಿ ಹೆಚ್ಚಿದ ಹರುಷದಲಿಯುಬ್ಬೆದ್ದನಡಿಗಡಿಗೆ ।
ಹೇಳಿದನು ವಿದುರಂಗೆ ಭಂಡಾ-
ರಾಲಯದೊಳುಳ್ಳಮಳ ಮೌಕ್ತಿಕ
ಜಾಳಿಗೆಯ ಪೆಟ್ಟಿಗೆಯೊಳಾಯಿಸು ವರ ಸುರತ್ನಗಳ ॥ ೭೬ ॥

ಇದಿರುಗೊಂಡನು ಕಾಣಿಕೆಯನಿ-
ಕ್ಕಿದನು ಕುಶಲಕ್ಷೇಮವನು ಕೇ-
ಳಿದನು ಭಕ್ತಿಯಲೆಱಗಿದನು [1]ಹರಿಯಡಿಗೆ[1] ಧೃತರಾಷ್ಟ್ರ ।
ಸದನವನು ಹೊಕ್ಕಂತೆ ನಿಮಿಷಾ-
ರ್ಧದಲಿ ಕುಳ್ಳಿರ್ದನಿಬರನು ಕಳು-
ಹಿದನು ಕಾರುಣ್ಯದಲಿ ಗದುಗಿನ ವೀರನಾರಯಣ ॥ ೭೭ ॥

---

೭೫. [1]ಗತಿ (ಅ), ಸ್ವೀಪಾ (k ಪ್ರ ಅ ಕುಮಾ). [2]ಗಳಿಯದಾ (ಅ), ಸ್ವೀಪಾ (ಅ ಕ).
[ಮಂದದಲಿ-ನಿಧಾನವಾಗಿ. ಕೀಲಿಸಿದ-ಸಂದು ಬಿಡದೆ ಸಾಲುಗೂಡಿದ. ಅಂದಣ-ಪಲ್ಲಕ್ಕಿ. ತೆಕ್ಕೆ-ಗುಂಪು. ಉಬ್ಬಸ-ಪ್ರಯಾಸ. ಅಳವು-ಸಾಮರ್ಥ್ಯ, ಸಾಧ್ಯ].

೭೬. [1]ಗ ಕೃಪಾಳುವಿನ (ಅ ಕುಮಾ ಅ), ಸ್ವೀಪಾ (ಪ್ರ),
[ಗಮನ-ಆಗಮನ, ಬರುವಿಕೆ. ಹೂಳಿ-ನೆಟ್ಟು. ಮೌಕ್ತಿಕಜಾಳಿಗೆ-ಮುತ್ತುಗಳ ರಾಶಿ].

೭೭. [1]ಚರಣದಲಿ (ಅ ಅ ಕುಮಾ), ಸ್ವೀಪಾ (ಕ).
[ಸದನ-ಮನೆ].

ತವತವಗೆ ಗಾಂಗೇಯಗುರುಕೃಪ-
ರವಿಸುತಾದಿಗಳಸುರರಿಪು ನಿಜ-
ಭವನಕೈತಹನೆಂದು ಸವೆದರು ಸಾರವಸ್ತುಗಳ ।
ಅವನಿಪನ ಬೀಳ್ಕೊಟ್ಟು ಕೌರವ-
ಭವನವನು ಹೊಱವಂಟು ವರ ಭಾ-
ಗವತಮಸ್ತಕರತ್ನ ವಿದುರನ ಮನೆಗೆ ನಡೆತಂದ ॥ ೭೮ ॥

ತೊಲಗಿದವು ಜನಮನದ ಬಲುಗ-
ತ್ತಲೆಗಳಿದಿರಲಿ ಕಂಡ ಜೀವರ
ಹಲವು ಜನ್ಮಾಂತರದ ದುರಿತಾಂಭೋಧಿ ಬತ್ತಿದವು ।
ಬಳಿ[1]ಯು[1] ಮುನಿಗಳು ಸಹಿತ ಕರುಣಾ-
ಜಲಧಿ [2]ತಾನಾ[2]ಕೌರವೇಂದ್ರನ
ಹೊಳಲೊಳಗೆ ನಿಜಶರಣ[3]ನಿಹ[3] ಮನೆಗಾಗೆ ಬರುತಿರ್ದ ॥ ೭೯ ॥

ಕರಣ ನಿರ್ಮಳವಾಯ್ತು ಮನವು-
ಬ್ಬರಿಸಿತತಿಪರಿತೋಷ[1]ಮಿಗೆ ತಾ[1]
ಪರಮಸುಖದಲಿ ತನುವ ಮಱೆದನು ನಯನಜಲ[2]ವು[2]ಗಲು ।
ಎರಡುದೋಱದ ಗಾಢಭಕ್ತಿಯ
ಭರದ ಲವಲವಿಕೆಯಲಿ ನಿಜಮಂ-
ದಿರವ [3][ತಾ ಹೊಱವಡುತ][3] ಕಂಡನು ವಿದುರನಚ್ಯುತನ ॥ ೮೦ ॥

---

೭೮. [ನಿಜ-ತಮ್ಮ. ಸವೆ-ಮಾಡು, ಸಿದ್ಧಪಡಿಸು, ರಚಿಸು. ಮಸ್ತಕರತ್ನ-ತಲೆವಣಿ, ಶಿರೋಮಣಿ, ಶ್ರೇಷ್ಠ].

೭೯. [1]ಕ (ಅ ಕುಮಾ), ಸ್ವೀಪಾ (ಪ್ರ ಓ k ಕ ಅ). [2]ವಹಿಲದಿ (ಪ್ರ ಓ k ಕ ಅ). [3]ನರ (ಪ್ರ ಓ k ಕ ಅ).
[ಬಲುಗತ್ತಲೆ-ಹೆಚ್ಚಾದ ತಮೋಗುಣ, ಅಜ್ಞಾನ. ದುರಿತ-ಪಾಪ. ಹೊಳಲು-ಪಟ್ಟಣ].

೮೦. [1]ದೇಳಿಗೆ (ಅ ಅ ಕುಮಾ), ಸ್ವೀಪಾ (ಕ). [2]ವೊ (ಅ ಕುಮಾ), ಸ್ವೀಪಾ (ಓ ಅ). ಹೊರವಂಡುತ್ತ (ಅ ಕುಮಾ), ಹೊಱವಡುವುತ್ತ (ಅ), ಹೊರವಡುತ (ಪ್ರ).
[ಕರಣ-ಇಂದ್ರಿಯ(ಗಳು). ನಯನಜಲ-ಕಣ್ಣೀರು. ಎರಡುದೋಱದ-ಏಕಾಗ್ರವಾದ, ಸ್ಥಿರವಾದ].

ಸಿರಿಮೊಗದ ಕಿಱುಬೆಮರ ತೇಜಿಯ-
ಖುರಪುಟದ ಕೆಂಧೂಳಿ ಸೋಂಕಿದ
ಸಿರಿಮುಡಿಯ [1]ಕುಡಿ[1]ಮೀಸೆಯಲಿ ಕೆಂಪಡ*ರ್ದ ರೇಣುಗಳ ।
ಖರಮರೀಚಿಯ ಝಳಕೆ ಬಾಡಿದ
ತರುಣತುಲಸಿಯ ದಂಡೆಯೊಪ್ಪುವ
ಗರುವದೇವನ ಬರವ ಕಂಡನು ಬಾಗಿಲಲಿ ವಿದುರ ॥ ೮೧ ॥

ತನುವ ಮಱೆದನು ಪುಳಕಜಲದಲಿ
ನನೆದು ನಾರಾಯಣನ ಪದ[1]ದ-
ರ್ಶನ[1]ದ [2]ಹರ್ಷಾರಣ್ಯದಲಿ ಮನಹೊಲಬುದಪ್ಪಿದನು ।
ನೆನೆವ ಸನಕಾದಿಗಳಿಗೊಮ್ಮೆಯು
ಮನಗೊಡದ ಮಹಿಮಾ[3]ವಲಂಬನು[3]
ಮನೆಗೆ ಬಹ ಕರುಣಾಳುತನ ಹೊಸತೆನುತ [4]ಹೊಂಗಿದನು[4] ॥ ೮೨ ॥

ನೋಡಿದನು ಮನದಣಿಯೆ ಮಿಗೆ ಕೊಂ-
ಡಾಡಿದನು ಬೀದಿಯಲಿ ಹರಿದೆಡೆ-
ಯಾಡಿದನು ಭ್ರಮೆಯಾಯ್ತು ವಿದುರಂಗೆಂಬ ಗಾವಳಿಯ ।
ಕೂಡೆ ಕುಣಿದನು ಮನೆಯ ಮುಱಿದೀ-
ಡಾಡಿದನು ಮೈಮಱೆದು ಹರುಷದ
ಗಾಢಿಕೆಯಲಪ್ರತಿಮನೆಸೆದನು ಭಕ್ತಿಕೇಳಿಯಲಿ ॥ ೮೩ ॥

---

೮೧. [1]ಕೊನೆ (ಕ ಓ ಅ), ಮೊನೆ (ಪ್ರ k).
[ಬೆಮರು-ಬೆವರು. ತೇಜಿ-ಕುದುರೆ. ಖುರಪುಟ-ಗೊರಸು. ರೇಣು-ಧೂಳಿನ ಕಣ. ಖರ-ಉಗ್ರವಾದ, ತೀಕ್ಷ್ಣವಾದ. ಮರೀಚಿ-ಸೂರ್ಯಪ್ರಕಾಶ, ಬಿಸಿಲು. ತರುಣ-ಎಳೆಯ. ಗರುವ-ಶ್ರೇಷ್ಠ].

೮೨. [1]ದರುಶನ (ಅ ಅ ಕುಮಾ), ಸ್ವೀಪಾ (ಕ ಓ). [2]ಹರುಷಾ (ಅ ಕುಮಾ), ಸ್ವೀಪಾ (ಕ ಅ). [3]ತಿರೀಕನ (ಪ್ರ k ಕ ಓ). [4]ಹಿಗ್ಗಿ (ಕ ಅ).
[ಪುಳಕ-ರೋಮಾಂಚ. ಹೊಲಬು-ದಾರಿ, ಮಾರ್ಗ. ಹೊಂಗು-ಸಂತೋಷಪಡು, ಹಿಗ್ಗು].

೮೩. [ಹರಿ-ಓಡು. ಎಡೆಯಾಡು-ಸುತ್ತಾಡು. ಭ್ರಮೆ-ಭ್ರಾಂತಿ, ಮನಸ್ಸಿನ ಗೊಂದಲ. ಗಾವಳಿ-ಗಲಭೆ, ಗದ್ದಲ. ಗಾಢಿಕೆ-ಅತಿಶಯ, ಹೆಚ್ಚಳ. ಭಕ್ತಿಕೇಳಿ-ಭಕ್ತಿಯ ಮೆರೆದಾಟ, ಭಕ್ತಿಕ್ರೀಡೆ].

ಹಸಿದು ನಾವೈತಂದೊಡೀ ಪರಿ
ಮಸಗಿ ಕುಣಿದಾಡಿದೊಡೆ ಮೇಣೀ
ವಸತಿಯನು [1]ನೀ ಮುಱಿದು[1] ಬಿಸುಟೊಡೆ [2]ನಮಗೆ[2] ತಣಿವಹುದೆ ।
ವಸುಮತಿಯ ವಲ್ಲಭರು ಮಿಗೆ* ಪ್ರಾ-
ರ್ಥಿಸಿದೊಡೊಲ್ಲದೆ ಬಂದೆವೈ ನಾ-
ಚಿಸದಿರೈ ಬಾ ವಿದುರ ಯೆನುತೊಳಹೊಕ್ಕನಸುರಾರಿ ॥ ೮೪ ॥

ನೆಱೆಯೆ ಕೃತ್ಯಾಕೃತ್ಯಭಾವವ
ಮಱೆದು ಕಳೆದನು ಮನ ಮುರಾರಿಯು-
ನಿಱಿಕಿಕೊಂಡವು ಕಂಗಳೊಡಬೆಚ್ಚುವು ಪದಾಬ್ಜದಲಿ ।
ಅಱಿವು ಮಯಣಾಮಯದ ಭಕ್ತಿ[1]ಯ-
ಲೆಱೆದ ಪುತ್ಥಳಿ[ಯೋ]ಯೆನಲು[1] ಕಡು
ಬೆಱಗ ಕೇ[2]ಣಿ[2]ಯ ಕೊಂಡು ಮೌನದೊಳಿದ್ದನಾ ವಿದುರ ॥ ೮೫ ॥

ಒಲ[1]ವರವು[1] ಕೌತುಕವು ಪಾಲ್ಗಡ-
ಲೊಳಗೆ ಮಲಗುವ ವಿಷ್ಣು ವಿದುರನ
ನಿಳಯದೊಳಗೊಕ್ಕುಡಿತೆಹಾಲಲಿ ಹಸಿವ ನೂಕಿದನು ।
ಹೊಲಬುಗೆಡಿಸಿದನಖಿಳ ನಿಗಮಂ-
ಗಳನು ತನ್ನಱಿಕೆಯಲಿ ಭಜಕಂ-
ಗೊಲಿದು ತಾನೈತರಲು ಕರುಣದ ಘನತೆಯೆನೆ ಲೋಕ ॥ ೮೬ ॥

---

೮೪. [1]ಸುಗಿದೆತ್ತಿ (ಅ ಕುಮಾ), ಸ್ವೀಪಾ (ಪ್ರ ಓ k ಅ). [2]ತನಗೆ (ಅ ಕುಮಾ), ಸ್ವೀಪಾ (ಅ).
[ತಣಿವು-ತೃಪ್ತಿ. ವಸುಮತಿ-ಭೂಮಿ].

೮೫. [1]ಯಲೆಱೆದ ಪುತ್ಥಳಿಯೆನಲು (ಸ್ವಲ್ಪ ಮಾರ್ಪಾಟನೊಡನೆ ಸ್ವೀಕೃತ), ಯಲೆರಗಿಸಿದ ಪುತ್ಥಳಿಯೆನಲು (ಪ್ರ k ಅ). [2]ಳಿ (ಕ).
[ಕೃತ್ಯಾಕೃತ್ಯಭಾವ-ಯಾವುದು ಮಾಡತಕ್ಕದ್ದು, ಯಾವುದು ಮಾಡತಕ್ಕದ್ದಲ್ಲ ಎಂಬ ಭಾವ, ಯೋಚನೆ. ಇಱಿಕಿಕೊಳ್ಳು-ಸಿಕ್ಕಿಸಿಕೊ, ಬಂಧಿಸು. ಒಡಬೆಚ್ಚು-ಒಡನೆ ಬೆಸುಗೆಯಾಗು, ಸೇರಿಹೋಗು. ಮಯಣ-ಮೇಣ. ಎಱೆದ-ಎಱಕ ಹೊಯ್ದ. ಪುತ್ಥಳಿ-ಬೊಂಬೆ, ವಿಗ್ರಹ. ಕೇಣಿ-ಗೇಣಿ, ಗುತ್ತಿಗೆ].

೮೬. ವೊರವೆ (ಅ), ಸ್ವೀಪಾ-(ಅ ಕುಮಾ).
[ಒಲವರ-ಪ್ರೀತಿ, ಪಕ್ಷಪಾತ. ಒಕ್ಕುಡಿತೆ-ಒಂದು ಬೊಗಸೆ. ನಿಗಮ-ವೇದ].

ಹರಿಯ ಪದಕಮಲಾಭಿಷೇಕದ
ವರಪಯೋಬಿಂದುಗಳು ಕೌರವ-
ನರಮನೆಯನೊಳಕೊಂಬವೋಲ್ ಕಡಲಾಗಿ [1]ಹರಿದುಬರೆ[1] ।
ಅರರೆ ಮುರಹರನೊಡನೆ ಹಾಲಿನ
ಶರಧಿ ಮೇರೆಯನೊಡೆದುದಿಳೆಗ-
ಚ್ಚರಿಯೆನುತ ಭೀಷ್ಮಾದಿಗಳು ಹೊಗಳಿದರು [2]ಹರ್ಷದಲಿ[2] ॥ ೮೭ ॥

ತೊಲಗಿದಸು ಬಂದಂತೆ ತರುಣಿಯ
ಹೊಳಹು ಸೋಂಕಿದ ಜಕ್ಕವಕ್ಕಿಯ
ಬಳಗದಂತಿರೆ ಕೃಷ್ಣರಾಯನ ಬರವ ತಾ ಕೇಳ್ದು ।
ಪುಳಕ ಪಸರಿಸೆ ಪರಮಹರ್ಷವ
ತಳೆದು ದೇವನ ಕಾಣಿಕೆಯ ಕಂ-
ಗಳಿಗೆ ಕಡುಲೋಲು[1]ಪತೆ[1] ಮಿಗೆ ಹರಿತಂದಳಾ ಕುಂತಿ ॥ ೮೮ ॥

ಬರವ ಕಂಡಸುರಾರಿ ಮಂಚದೊ-
ಳಿರದೆ ದಿಮ್ಮನೆ ನಿಂದು ನರರಾ-
ಚರಣೆಗಳ ನಾಟಕವ ತಾನೇ ನಟಿಸಿ ತೋಱಿದನು ।
ಹಿರಿಯರಿಗೆ ತಾ ಹಿರಿಯನೆಂಬೀ
ಗರುವತನವನು ಬಿಸುಟು ಕುಂತಿಗೆ
ಕರವ [1]ಮುಗಿದೆಱಗಿದನು ಮುನಿಜನನಿಕರ ಉಘೆಯೆನಲು[1] ॥ ೮೯ ॥

---

೮೭. [1]ಕೈಗೊಳಲು (ಅ ಕುಮಾ), ಹರಿತರಲು (ಕ ಅ), ಸ್ವೀಪಾ (ಓ). [2]ಮುರಹರನ (ಅ ಕುಮಾ), ಸ್ವೀಪಾ (ಪ್ರ ಓ k ಕ ಅ).
[ಪಯೋಬಿಂದು-ಹಾಲಿನ ಹನಿ. ಇಳೆ-ಲೋಕ].

೮೮. [1]ಪ್ರಿ (ಪ್ರ ಕ k).
[ಅಸು-ಪ್ರಾಣ. ತರಣಿ-ಸೂರ್ಯ. ಕಾಣಿಕ್ಕೆ-ಕಾಣ್ಕೆ, ದರ್ಶನ. ಲೋಲುಪತೆ-ಆಸಕ್ತಿ].

೮೯. [1]ಮುಗಿದನು ಸಕಲಸನಕಾದಿಗಳು ಘೇಯೆನಲು. (ಕ ಓ ಅ).
[ಗರುವತನ-ಶ್ರೇಷ್ಠತೆ].

ಲೋಕ ಮೆಚ್ಚಲು ನಿನ್ನ ಸುತರು ದ್ಯೂ-
ತೈಕಸತ್ಯರು ನುಡಿದ ಕಾಲವ
ನೂಕಿದರು ರಾಜ್ಯಾಭಿಲಾಷೆಗೆ ಬಲವ ನೆರಹಿದರು ।
ಆ ಕುಮಾರರಿಗರ್ಧರಾಜ್ಯವ-
ನೀ ಕುಠಾರರಲೀಸಿ ಕೊಡುವ ವಿ-
ವೇಕದಲಿ ತಾ ಬಂದೆನೆಂದನು ಕುಂತಿಗಸುರಾರಿ ॥ ೬೦ ॥

ಪರಮಪರಿತೋಷದಲಿ ಕೃಷ್ಣನ
ವರಸುಧಾಮಯವಚನವನು ಪಂ-
ಕರುಹಮುಖಿ ಕೇಳುತ್ತ ನನೆದಳು ನಯನವಾರಿಯಲಿ ।
ಮುರಮಥನನಾಕುಂತಿಗೆಲ್ಲವ-
ನೊರೆದು ವಿದುರನ ಕರೆದು ಕೌರವ-
ನರಮನೆಯ ಸಮಯವನು ನೋಡಿದು ನಮಗೆ ಹೇಳೆಂದ ॥ ೬೧ ॥

ಓಲಗದೊಳಿರ್ದಖಿಳಮೂರ್ಖರ
ಮೌಳಿಯನು ಕಂಡವಧರಿಸು ಸಿರಿ-
ಲೋಲ ಬಿಜಯಂಗೈಯಲವಸರವುಂಟೆ ಹೇಳೆನಲು ।
ನಾಳೆ ಕಾಣಿಸಿಕೊಂಬೆವಿನ್ನೇ-
ನಾಳಿಕಾಜನ ಬರವು ಹಗೆವರ
ಪಾಲಿ[1]ಸುವ[1] [2]ಭರ[2] ಸಂಧಿಕಾರ್ಯಕೆ ಬಾರದಿರನೆಂದ ॥ ೬೨ ॥

ನಾಳೆ ಬರಹೇಳೆಂದು ವಿದುರನ
ಬೀಳುಕೊಟ್ಟನು ಬೇಹ ಭಟರಿಗೆ
ವೀಳೆಯವ ನೀಡಿದನು ಹರಿದುದು ರಾಯನಾಸ್ಥಾನ ।

---

೬೦. [ನೆರಹು–ಒಟ್ಟುಗೂಡಿಸು. ಬಲ–ಸೈನ್ಯ. ಕುಠಾರ–ಕೊಡಲಿ, ವಂಶವಿನಾಶಕ].

೬೧. [ಸುಧಾಮಯ–ಅಮೃತಪ್ರಾಯವಾದ].

೬೨. [1]ಸಿಡಿ (ಅ), ಸ್ಪೀಪಾ (ಸರ್ವತ್ರ). [2]ಬಲ (ಅ), ಸ್ಪೀಪಾ (ಸರ್ವತ್ರ).
[ಮೂರ್ಖರ ಮೌಳಿ–ಮೂರ್ಖರಲ್ಲಿ ಕಿರೀಟಪ್ರಾಯನಾದವನು, ಕಡುಮೂರ್ಖ. ಅವಸರ–ಸಮಯ. ಆಳಿಕಾಜ–ಮೋಸಗಾರ, ಕಪಟಿ. ಭರ–ಉತ್ಸಾಹ].

ಜಾಳಿಸಿತು ತಮ ಮೂಡಣಾದ್ರಿಯ
ಮೇಲೆ [1]ತಲೆದೋಱಿದನು ರವಿ[1] ಭೂ-
ಪಾಲ ಕೌರವ[2]ನುದಯದೊ[2]ಡ್ಡೋಲಗವ ರಚಿಸಿದನು ॥ ೯೩ ॥

ಮಿಸುಪ ತಮ್ಮ ಮುಖೇಂದುವನು ಸೈ-
ರಿಸದ ಚಂದ್ರನ ಕಿತ್ತು ನಭದಲಿ
ಬಿಸುಟು ಬೇರ್ಗಳ ಹಿಡಿದರೋ ಹೇಳೆನಲು ಸಭೆಯೊಳಗೆ ।
ಶಶಿವದನೆಯರ ಕೈಯ ಸೀಗುರಿ
ಯೆಸೆದವಿಕ್ಕೆಲದಲಿ ಸುಯೋಧನ-
ವಸುಮತೀಶನ ವೈಭ[1]ವದಲಾ[1]ಸ್ಥಾನ ಚೆಲುವಾಯ್ತು ॥ ೯೪ ॥

ಕಲಹವಿಲ್ಲದೆ ನೂಲಿನೆಳೆಯಲಿ
ತಲೆಯನರಿವ ವಿರೋಧಿರಾಯರ-
ನಳುಕಿಸುವ ಸಾಮದಲಿ [1]ನಿಲಿಸುವ ನಿಖಿಳಭೂಭುಜರ[1] ।
ಒಲಿದೊಡೊಳಲಂಚದಲಿ ಛಿದ್ರಿಸಿ
ಕೊಲುವ ಮುನಿದೊಡೆ ಮಂತ್ರಶಕ್ತಿಯೊ-
ಳ[2]ಳಲಿ[2]ಸುವ ಮಂತ್ರಿಗಳು ಮೆಱೆದರು [3]ರಾಜಸಭೆಯೊಳಗೆ[3] ॥ ೯೫ ॥

---

೯೩. [1]ಕೆಂಪೆಸೆಯಿತ್ತು ಕುರು (ಕ). [2]ನಂದಿನೊ (ಅ ಆ ಕುಮಾ), ಸ್ವೀಪಾ (ಪ್ರ k).
[ಬೀಹ–ಆಪ್ತರಾದ, ಮುಖ್ಯರಾದ. ಹರೆ–ಚೆದರು. ಜಾಳಿಸು–ಚಲಿಸು, ಹೊರಟು ಹೋಗು].

೯೪. [1]ವಾಯಾ (ಅ), ವದೊಳಾ (ಓ); ಸ್ವೀಪಾ (ಆ ಕುಮಾ).
[ಮಿಸುಪ–ಪ್ರಕಾಶಿಸುವ, ಹೊಳೆಯುವ (ಧಾತು : ಮಿಸುಗು). ಮುಖೇಂದು–ಮುಖಚಂದ್ರ. ಸೀಗುರಿ–ಚಾಮರ. ಎಸೆ–ಶೋಭಿಸು, ಪ್ರಕಾಶಿಸು. ಇಕ್ಕೆಲ–ಎರಡು ಪಕ್ಕ].

೯೫. [1]ರಿಪು ಭೂಭುಜರ ಬೆದಱಿಸುವ (ಪ್ರ ಅ ಕ ಓ k). [2]ಳುಕಿ (ಅ ಆ ಕುಮಾ), ಸ್ವೀಪಾ (ಪ್ರ k). [3]ವಾಮಭಾಗದಲಿ (ಅ ಆ ಕುಮಾ), ಸ್ವೀಪಾ (ಕ ಓ).
[ಅರಿ–ಕತ್ತರಿಸು. ಅಳುಕಿಸು–ಹೆದರಿಸು. ನಿಲಿಸು–ತಟಸ್ಥರನ್ನಾಗಿ ಮಾಡು. ಒಲಿದರೆ–ಇಷ್ಟಬಂದರೆ. ಛಿದ್ರಿಸು–ಭೇದೋಪಾಯ ಮಾಡು. ಅಳಲಿಸು–ದುಃಖ ಪಡಿಸು].

ನಿಗಮತರ್ಕಪುರಾಣಕಾವ್ಯಾ-
ದಿಗಳ ವಿಸಟಂಬರಿಗಳೊತ್ತೊ-
ತ್ತುಗಳೊಳಿಟ್ಟೆಡೆಯಾಗಿ ಹಿಗ್ಗಿದ ಜಠರ[1]ದಗ್ರಿ[1]ಯರು ।
ಬಗೆಯುಪನ್ಯಾಸದ ಸುಶಾಖಾ-
ಳಿಗಳ ಬೀಳಲು ಬೆಳೆದ ಗಡ್ಡದ
ವಿಗಡಭೂಯೋಪಾಧ್ಯರಿದ್ದರು ರಾಜಸಭೆಯೊಳಗೆ ॥ ೯೬ ॥

ಆವ ದೇಸಿಯಿದಾವ ವಿಸ್ತರ-
ವಾವ ದೇಶದ ಸಿರಿಯು ಸಡಗರ-
ವಾವ ಪರಿಯು ವಿಳಾಸವಾವ ವಿಡಾಯಿ ತಾನೆನಲು ।
ಹಾವುಹಳವಿಗೆಯಾದ ರಾಯನು
ರಾವಣಾರಿಯು ಕಾಣಿಕೆಗೆ ಬಲು-
ರೀವಿಯನು ತೋಱಿದನು ಸಾಱುವ ಭಟ್ಟರೋಳಿಯಲಿ ॥ ೯೭ ॥

ಬರಲಿ ಕರೆ ಕೈತವದ ಶಿಕ್ಷಾ-
ಗುರುವನೆನುತವನೀಶ ದೂತರ
ಹರಿಯಬಿಟ್ಟನು ಹರಿಯು ನಿಳಯಕೆ ಹರಿಯು ಬೇಗದಲಿ ।
ಚರರು ಹರಿತಂದಸುರರಿಪುವಿನ
ಚರಣದಲಿ ವೈಯಿಕ್ಕಿ ನೊಸಲಲಿ
ಕರಪುಟಾಂಜಲಿ ಮೆಱೆಯುತಿರೆ ಬಿನ್ನಹವ ಮಾಡಿದರು ॥ ೯೮ ॥

---

೯೬. ದಂಷ್ಟ್ರ (ಅ). ಸ್ವೀಪಾ (ಅ ಕುಮಾ ಓ k ಪ್ರ).
[ವಿಸಟಂಬರಿ–ಇಷ್ಟಬಂದಂತೆ ಹರಡು. ಇಟ್ಟೆಡೆಯಾಗಿ–ಇದ್ದಲ್ಲಿಯೇ. ಜಠರ ದಗ್ರಿಯರು–ಹೊಟ್ಟೆ ಮುಂದಾಗಿರುವವರು. ಸುಶಾಖಾಳಿಗಳು-ಬೇರೆ ಬೇರೆ ವೇದ ಶಾಖೆಗಳಿಗೆ ಸೇರಿದವರು. ಬೀಳಲು–ಬಿಳಲು. ವಿಗಡ–ಅಸಾಧಾರಣರಾದ. ಭೂಯೋಪಾಧ್ಯರು (ಭೂಯಃ ಉಪಾಧ್ಯರು)-ಬಹಳಮಂದಿ ಉಪಾಧ್ಯರು].

೯೭. [1]ರೀತಿ (ಪ್ರ k ಠ).
[ದೇಸಿ–ದೇಶದ ರೂಢಿ, ದೇಶಾಚಾರ. ವಿಡಾಯಿ–ತೋರಿಕೆ, ಆಡಂಬರ. ಹಾವು ಹಳವಿಗೆ–ಸರ್ಪಧ್ವಜ. ರಾವಣಾರಿ–ರಾಮ (ವಿಷ್ಣುವಿನ ಅವತಾರ); ಕೃಷ್ಣ. ಭಟ್ಟರೋಳಿ–ಹೊಗಳುಭಟ್ಟರ ಸಮೂಹ],

೯೮. [ಕೈತವ–ಮೋಸ. ಹರಿ–ಕುದುರೆ. ಕರಪುಟಾಂಜಲಿ–ಮುಗಿದ ಕೈ. ನೊಸಲು–ಹಣೆ].

ದೇವ ದೇವರ ಸಮಯವೆನೆ ರಾ-
ಜೀವನಾಭನು ಮುಗುಳುನಗೆಯಲಿ
ಭಾವನವರಟ್ಟಿದರೆ ಹರ ಹರ ಬಹೆವು ನಡೆಯೆನುತ ।
ರಾವಣನ ಪರಿ ನೆಲಸಿತಿವನಲಿ
ಸಾವಿಗಂಜುವನಲ್ಲ ಖಳ[1]ಮಾ-
ಯಾವಿದನು[1] ನಮ್ಮುಕುತಿ ಕೊಳ್ಳದು ವಿದುರ ಕೇಳೆಂದ ॥ ೯೯ ॥

ಎನುತ ಮಂಚವನಿಳಿದು ವರಕಾಂ-
ಚನವರೂಥಕೆ ಕೈಗೊಡುವ ಯದು-
ಜನಪರು[1]ಗ್ಗ[1]ಡಣೆಯಲಿ ಬಿಜಯಂಗೈದನಸುರಾರಿ ।
ಮುನಿನಿಕರ ಸಂದಣಿಸಿತಭ್ರದೊ-
ಳನಿಮಿಷಾವಳಿ ನೆರೆದುದಿಭಪುರಿ-
ಜನವೊಡನೆ ನಡೆತರಲು ಹರಿ ಬರುತಿರ್ದನೋಲಗಕೆ ॥ ೧೦೦ ॥

ದೇವ ಬಂದನು ತನ್ನ ನೆನೆವರ
ಕಾವ ಬಂದನು ದೈತ್ಯಕುಲ[1]ವನ-[1]
ದಾವ ಬಂದನು ಭಾಗವತಜನಲೋಲುಪನು ಬಂದ ।
ಭಾವಿಸುವಡಘಹಾರಿ ಬಂದನು
ಓವಿ [2]ಭಜಿಸಲು[2] ತನ್ನ ಬೀಱುವ
ದೇವ [3]ಗದುಗಿನ[3] ವೀರನಾರಣ ಬಂದ[4]ನೋಲಗಕೆ[4] ॥ ೧೦೧ ॥

---

೯೯. [1]ನು ನ ಮಾಯಾವಿಳನು (ಅ ಕುಮಾ). ನನುನಯವಿಳಾಸನು (ಕ), ಸ್ವೀಪಾ (ಪ್ರ k ಓ ಅ).
[ಅಟ್ಟು-ಹೇಳಿಕಳಿಸು. ಉಕುತಿ ಕೊಳ್ಳದು-ಮಾತು ಹಿಡಿಯುವುದಿಲ್ಲ].

೧೦೦. [1]ಘೃ (ಅ), ಸ್ವೀಪಾ (ಕ ಕುಮಾ ಅ).
[ಕಾಂಚನವರೂಥ-ಚಿನ್ನದ ರಥ. ಅಭ್ರ-ಆಕಾಶ. ಅನಿಮಿಷಾವಳಿ-ದೇವತೆಗಳ ಸಮೂಹ].

೧೦೧. [1]ಮದ (ಅ), ಸ್ವೀಪಾ (ಸರ್ವತ್ರ). [2]ಬಂದೊಡೆ (ಅ), ಬಂದರೆ (ಕುಮಾ), ಸ್ವೀಪಾ (ಪ್ರ ಓ k). [3]ಬಂದನು (ಅ ಕುಮಾ), ಸ್ವೀಪಾ (ಓ ಅ). [4]ನರಮನೆಗೆ (ಅ ಕುಮಾ), ಸ್ವೀಪಾ (ಓ ಅ).
[ವನದಾವ-ಕಾಡುಗಿಚ್ಚು. ಅಘಹಾರಿ-ಪಾಪನಾಶಕ. ಓವು-ಪ್ರೀತಿಸು. ಬೀಱು-ಪ್ರಕಟಿಸು, ನಿಜವನ್ನು ತೋರು].

ಯಾದವರ ಕುಲತಿಲಕ ಬಂದನು
ಸಾಧುಸಜ್ಜನರರಸು ಬಂದನು
ಮೇದಿನೀರಿಪು[1]ವಿಪಿನದಹನ[1]ಕೃಶಾನು ಯಿದೆ ಬಂದ ।
ವೇದವೇದ್ಯನು ಬಂದನಿದೆ ಸನ-
ಕಾದಿಪೂಜ್ಯನು ಬಂದನಬುಜಭ-
ವಾದಿದೇವಪ್ರಿಯನು ಬಂದನು ನೃಪತಿಯೋಲಗಕೆ ॥ ೧೦೨ ॥

ಬರಲು ಮುರಹರನಿದಿರುವಂದರು
[1]ಸುರ[1]ನದೀಜದ್ರೋಣಗೌತಮ-
ಗುರುಸುತಾದಿಸಮಸ್ತಭೂಪಚಮೂಪಸಂದೋಹ ।
ಚರಣದಲಿ ಚಾಚಿದ[2]ವು[2] ಭೂಮಿ-
ಶ್ವರರ ಮುಕುಟವನಂತತಾರಾ-
ಪರಿವೃತೇಂದುವಿನಂತೆ ಮೆಱೆದವು ಹರಿಯ ಪದ[3]ಯುಗಳ[3] ॥ ೧೦೩ ॥

ಅರಿದಲೈ ಮುರವೈರಿ ಸನಕಾ-
ದ್ಯರ ಸಮಾಧಿಗೆ ಸುಳಿಯದಂಘ್ರಿಯ
ದರುಶನದ ಫಲಭೋಗ [1]ಸಾರಿತು ನಮ್ಮ ಪುಣ್ಯವಲೇ[1] ।
ಸುರನರೋರಗರೊಳು ಕೃತಾರ್ಥರು
ನಿರುತ ತಾವಲ್ಲದೊಡೆ ನಿಮ್ಮಯ
ಸರಸಿಜಾಂಘ್ರಿಯ ಸೇವೆ ದೊರಕುವುದಾವ ಮುನಿಗಳಿಗೆ ॥ ೧೦೪ ॥

---

೧೦೨. [1]ನಿವಹವಿಪಿನ (ಅ), ಸ್ವೀಪಾ (ಪ್ರ k).
[ಮೇದಿನೀರಿಪು–ಭೂಲೋಕದ ಶತ್ರು. ವಿಪಿನ ದಹನ ಕೃಶಾನು–ಕಾಡನ್ನು ಸುಡುವ ಬೆಂಕಿ].

೧೦೩. [1]ಗುರು (ಅ ಕುಮಾ), ಸ್ವೀಪಾ (ಪ್ರ k ಅ). [2]ರು (ಅ ಅ ಕುಮಾ), ಸ್ವೀಪಾ (ಪ್ರ k). [3]ನಖವು (ಕ ಕುಮಾ ಅ).
[ಸುರನದೀಜ–ಭೀಷ್ಮ. ಚಮೂಪ–ಸೇನಾಪತಿ. ಸಂದೋಹ–ಸಮೂಹ. ಪದಯುಗಳ–ಎರಡು ಪಾದಗಳು].

೧೦೪. [1]ಸಾರಿದುದಸ್ಮದಾದ್ಯರಿಗೆ (ಅ ಕುಮಾ), ಸ್ವೀಪಾ (ಕ ಅ).
[ಅರಿದು–ಅಸಾಧ್ಯ. ಸಮಾಧಿ–ಯೋಗಧ್ಯಾನ. ನಿರುತ–ನಿಶ್ಚಯವಾಗಿ].

ಎಂದು ಗಂಗಾನಂದನನು ನಲ-
ವಿಂದ ಕೈಗೊಡೆ ಸುರ[1]ಗಿರಿ[1]ಯ ತುದಿ-
ಯಿಂದ ಮಱಿಮಿಂಚುಗಳ ಮುಗಿಲಿಳಿವಂತೆ ಭೂತಳಕೆ ।
ಅಂದು ನೀಲಾಚಲನಿಕಾಯದ
ಸೌಂದರಾಂಗದ ಕೌಸ್ತುಭಪ್ರಭೆ-
ಯಿಂದ ಕಾಂಚನರಥವನಿಳಿದನು ದಾನ[2]ವಧ್ವಂಸಿ[2] ॥ ೧೦೫ ॥

ಸಮರಸರ್ವಜ್ಞರುಗಳಂಘ್ರಿಗೆ
ನಮಿಸಿದರು ಬಹಳೋಲಗದ ಸಂ-
ಭ್ರಮದ ಸಿರಿ ತಲೆವಾಗುತಿರ್ದುದು ನೊಸಲಕೈಗಳಲಿ ।
ಕಮಲ[1]ಕಣ್ಣಿನ[1] ದೇವನೇ ಸಾ-
ಕೆಮಗೆ ಮಾಡುವುದೇನೆನುತ ತ-
ಕ್ಕುಮತಿ ಕೌರವನಿಳಿಯದಿರ್ದನು ಸಿಂಹವಿಷ್ಟರವ ॥ ೧೦೬ ॥

ಸೆಣಸು ಸೇರದ ದೇವನಿದಿರಲಿ
ಮಣಿಯದಾತನ ಕಾಣುತವೆ ಧಾ-
ರಿಣಿಯನೊತ್ತಿದನುಂಗುಟದ ತುದಿಯಿಂದ ನಸುನಗುತ ।
ಮಣಿಖಚಿತಕಾಂಚನದ ಪೀಠದ
ಗೊಣಸು ಮುಱಿದುದು ಮೇಲೆ ಸುರಸಂ-
ದಣಿಗಳಾ ಯೆನೆ [1]ಹೊರಳಿ[1] ಬಿದ್ದನು ಹರಿಯ ಚರಣದಲಿ ॥ ೧೦೭ ॥

---

೧೦೫. [1]ನದಿ (ಅ), ಸ್ವೀಪಾ (ಅ ಕುಮಾ). [2]ವಾರಾತಿ (ಅ ಕುಮಾ), ಸ್ವೀಪಾ (ಪ್ರ ಕ ಓ k ಅ).
[ನಲವು–ಸಂತೋಷ. ನಿಕಾಯ–ಶರೀರ. ಕೌಸ್ತುಭ–ವಿಷ್ಣುವಿನ ವಕ್ಷಸ್ಥಲದಲ್ಲಿ ಇರುವ ರತ್ನ].

೧೦೬. [1]ನಯನದ (ಅ ಕುಮಾ), ಸ್ವೀಪಾ (ಪ್ರ ಓ ಕ k ಅ).
[ಕುಮತಿ–ಕೆಟ್ಟಬುದ್ಧಿಯವನು. ಸಿಂಹವಿಷ್ಟರ–ಸಿಂಹಾಸನ].

೧೦೭. [1]ಕವಿದು (ಅ ಕುಮಾ), ಕೆಡೆದು (ಕ ಅ); ಸ್ವೀಪಾ (ಓ).
[ಸೆಣಸು–ಹೋರಾಟ. ಮಣಿ–ಬಾಗು, ನಮಸ್ಕರಿಸು. ಉಂಗುಟ–ಹೆಬ್ಬೆರಳು, ಉಂಗುಷ್ಠ. ಗೊಣಸು–ಕೊಂಡಿ].

ಧರಣಿಪತಿ ಸಿಂಹಾಸನದ ಮೇ-
ಲಿರದೆ ಬಹರೇ ನಾವು ಬಂದೇ
ಹರಸುವೆವು ತಪ್ಪಾವುದೆನುತಿತ್ತಿದನು ಮಸ್ತಕವ ।
ಸುರನದೀಸುತ ಕೈಗೊಡಲು ಕೇ-
ಸರಿಯ ಪೀಠಕೆ ದೇವ ಬಂದನು
ಕುರುಕುಲಾಗ್ರಣಿಗಳ ಸುಸನ್ಮಾನವನು ಕೈಕೊಳುತ ॥ ೧೦೮ ॥

ಕುಶಲವೇ ಕುರುರಾಯ ಬಾರೈ
ಮುಸುಡ ದುಗುಡವಿದೇ[1]ನು[1] ಬಾಯೆಂ-
ದಸುರರಿಪು ಕೌರವನ ಕರೆದನು ತನ್ನ ಸಮ್ಮುಖಕೆ ।
ಉಸುರಲಮ್ಮೆನು ಭಾವತನದೊಂ-
ದೆ[2]ಸೆವ[2] ಸಲುಗೆ[3]ಗೆ[3] ನೇಮವಾದೊಡೆ
ಬಿಸಜಲೋಚನ ಬಿನ್ನಹವನವಧರಿಸಬೇಕೆಂದ ॥ ೧೦೯ ॥

ನೀವು ಬಿಜಯಂಗೈವಿರೆಂದು ಮ-
ಹಾ ವಿಳಾಸದೊಳಳವಡಿಸಿ ನಾ-
ನಾವಿಧದ ಷಡುರಸವ [1]ತರುಣಿಯರಿಂದ[1] ಸವೆಸಿದೆನು ।
ದೇವ ನಮ್ಮರಮನೆಗೆ ಬಾರದೆ
ನೀವು [2]ವಿದುರನ[2] ಮನೆಯಲುಂಡಿರಿ
ಗೋವಳಿಗತನ ನಿಮ್ಮ ಮೈಸಿರಿ ತಪ್ಪದಾಯ್ತೆಂದ ॥ ೧೧೦ ॥

---

೧೦೮. [ಮಸ್ತಕ-ತಲೆ].

೧೦೯. [1]ಕೆ (ಅ ಕುಮಾ), ಸ್ವೀಪಾ (ಪ್ರ ಕ kಅ). [2]ಸಕ (ಅ ಕುಮಾ), ಸ್ವೀಪಾ (ಪ್ರ ಓ ಕ k ಅ). [3]ಯ (ಅ ಕುಮಾ), ಸ್ವೀಪಾ (ಪ್ರ ಓ k ಅ).
[ಮುಸುಡು-ಮುಖ, ಮೋರೆ. ದುಗುಡ-ದುಃಖ. ಅಮ್ಮು-ಸಮರ್ಥನಾಗು. ಅಮ್ಮೆನು-ಸಮರ್ಥನಲ್ಲ, ಅಸಮರ್ಥ. ಎಸೆವ ಶೋಭಿಸುವ, ಮೆರೆಯುವ].

೧೧೦. [1]ಗರುಡಿಯಲಿಂದು (ಅ ಕುಮಾ), ಸ್ವೀಪಾ (ಪ್ರ ಓ ಕ k ಅ). [2]ತಿರುಕನ (ಕ).
[ಸವೆಸು-ಮಾಡಿಸು. ಗೋವಳಿಗತನ-ಗೊಲ್ಲತನ. ಮೈಸಿರಿ-ಸ್ವಭಾವ].

ಈ ಕೃಪನ[1] [ಈ][1] ದ್ರೋಣನೀ ಗಂ-
ಗಾಕುಮಾರನ ಮನೆಯ ಹೊಗದವಿ-
ವೇಕಿ ಶೂದ್ರನ ಮಗನ ಮನೆಯಲಿ ಹಸಿವ ನೂಕಿದಿರಿ ।
ಸಾಕಿದಾತನು ನಂದಗೋಪನು
ಕಾಕಬಳಸಲು ಸಲ್ಲದೇ ನಿಮ-
ಗೇಕೆ ರಾಯರ [2]ರೀವಿ[2]ಯೆಂದನು ನಗುತ ಕುರುರಾಯ ॥ ೧೧೧ ॥

ಕುರುಪತಿಯ ಬಿರುನುಡಿಯ ಕೇಳಿದು
ಕರಣದಲಿ ಕೋಪಾಗ್ನಿಯುಕ್ಕಲು
ಕೆರಳಿ ನಿರ್ಭೀತಿಯಲಿ ನುಡಿದನು ವಿದುರನರಸಂಗೆ ।
ದುರುಳ ನೀನಾಡಿದ ನುಡಿಗೆ ಉ-
ತ್ತರವನೀಯಲದೇಕೆ ನಿನ್ನಯ
ವರಜನನಿಗಾದಿಯಲಿ ಗಂಡ[1]ನ[1]ದಾರು ಹೇಳೆಂದ ॥ ೧೧೨ ॥

ಕಡುಮುಳಿ[1]ದು ಕಲಿಭೀಮ[1] ನಿನ್ನಯ
ಕೊಡೆಗಳನು [2]ಮುಱಿ[2]ವಾ ಸಮಯದೊಳು
ತಡೆದು ನಿನ್ನನು ಕಾಯಬೇಕೆಂದುಳುಹಿದೆನು ಧನುವ ।
ಕೆಡೆನುಡಿಸಿಕೊಂಡಿನ್ನು ಕಾವೆನೆ
[3]ನುಡಿದು ಫಲವೇನೆನುತ[3] ವಿದುರನು
ಹಿಡಿದ ಬಿಲ್ಲನು ಮುಱಿದನಾ ಕುರು[4]ರಾಯ ಬೆಜಗಾಗೆ[4] ॥ ೧೧೩ ॥

---

೧೧೧. [1]ನೀ (ಅ ಆ ಕುಮಾ). [2]ನೀತಿ (ಅ ಕುಮಾ), ಸ್ವೀಪಾ (ಪ್ರ ಕ ಓ k ಅ).
[ಕಾಕಬಳಸು–ಕೀಳುಮಾತನ್ನು ಉಪಯೋಗಿಸು].

೧೧೨. [1]ರ (ಅ ಕುಮಾ), ಸ್ವೀಪಾ (ಪ್ರ ಕ ಓ k ಅ).
[ಕರಣ–ಇಂದ್ರಿಯ].

೧೧೩. [1]ಸಿನಲಿ ಭೀಮ (ಅ ಕುಮಾ), ಸ್ವೀಪಾ (ಪ್ರ ಓ k ಕ). [2]ಕಡಿ (ಅ ಕುಮಾ), ಸ್ವೀಪಾ (ಕ ಓ). [3]ಪೊಡವಿಪತಿ ಕೇಳೆನುತ (ಪ್ರ k ಕ ಓ). [4]ಸೇನೆ ಕಳವಳಿಸೆ (ಪ್ರ ಓ ಕ k).
[ಮುಳಿ–ಕೋಪಿಸಿಕೊ. ಕೆಡೆನುಡಿ–ತೆಗಳು, ನಿಂದಿಸು].

ಧನು ಮುಱಿಯೆ ಗಾಂಧಾರಿಗತಲೋ-
ಚನರು ಮಮ್ಮಲ[1]ಮಱುಗಿತರಸನ
ನೆನಹಿನ್ನೈವಡಿಯಾಯ್ತು[1] ಭೀಷ್ಮದ್ರೋಣರಳಲಿದರು ।
ಮನದ ಹರುಷದಿ ನಗುತ ಮಧುಸೂ-
ದನನು [2]ನುಡಿದನು ಮರುಳು ಕೌರವ[2]
ಜನಪ [3]ಕೇಳೈ ಮತ್ತೆ[3] ನಮ್ಮಯ ಶೀಲ ಬೇಱೆಂದ ॥ ೧೧೪ ॥

ಹಗೆಯ[1]ನೊಳಗಿಡಲಾಗದದು[1] ವೈ-
ರಿಗಳ ನಿಳಯದಲನ್ನಪಾನಾ-
ದಿಗಳ[2] ಕೊಳಲಾ[2]ಗದು ನಿಧಾನಿಸೆ ರಾಜನೀತಿಯಿದು ।
ಬಗೆಯೆ ನೀ ಪಾಂಡವರಿಗಹಿತನು
ವಿಗಡಪಾಂಡವರೆನ್ನ ಜೀವನ
ಹಗೆಯ ನಂಬುವೆನೆಂತು ಹೇಳೈ ಕೌರವರ ರಾಯ ॥ ೧೧೫ ॥

ಸೇರುವನು ಸಕಳಂಕಚಂದ್ರನು
ವಾರಿಧಿಗೆ ನೀನಖಿಳಗೋಪೀ-
ಜಾರ ಜಾರೆಯ ಮಕ್ಕಳಿಗೆ ನೀ ಜೀವ ತಪ್ಪೇನು ।
ಆರು ತಮ್ಮಂದದ ಮಹಾತ್ಮರು
ಸೇರುವರಲೈ ಪಾಂಡುಪುತ್ರರ
ಕೂರುಮೆಗೆ [1]ನಾನಂಜೆ[1] ನೀ ಬಂದನುವ ಹೇಳೆಂದ ॥ ೧೧೬ ॥

---

೧೧೪. [1]ಮಱುಗಿದರು ಭೂ । ಪನ ದುಗುಡ ಮಿಗಿಲಾಯ್ತು (ಪ್ರ ಓ k ಕುಮಾ).
[2]ವಿದುರನ ತಿಳುಹಿ ಕೇಳೈ (ಪ್ರ ಓ k ಕ). [3]ಕೌರವರಾಯ (ಪ್ರ ಓ k ಕ).

೧೧೫. [1]ನುಣಿಸುವುದಾಗದೈ (ಪ್ರ ಓ ಕ k). [2]ನುಣಲಾ (ಅ ಕುಮಾ), ಸ್ವೀಪಾ (ಪ್ರ ಓ ಕ k).
[ನಿಧಾನಿಸು–ಬಗೆ, ಆಲೋಚಿಸು].

೧೧೬. [1]ನಾನೆನ್ನೆ (ಅ ಕುಮಾ), ತಾನಂಜ (ಕ); ಸ್ವೀಪಾ (ಪ್ರ ಓ k ಅ).
[ಕೂರುಮೆ-(=ಕೂರ್ಮೆ) ಪ್ರೀತಿ. ಅನು–ಕಾರ್ಯ, ಉದ್ದೇಶ].

ಅವಧಿ ಸವೆದುದು ಪಾಂಡವರು ನಿ-
ನ್ನವರು ವನವಾಸ[1]ಪ್ರಯಾಸ[1]ದೊ-
ಳವರು ನವೆದರು ಕೂಡಿ[2]ಕೊಂಡಿಹು[2]ದಧಿಕಗುಣ [3]ನಿ[3]ಮಗೆ ।
ಅವನಿಯರ್ಥವನೀವುದೀಯ-
ಧ್ರುವದ ಬಾಳಿಕೆಯೊಳಗೆ ಪುರುಷಾ-
ರ್ಥವನೆ ಸಂಚಿಸಕಲಿಯಬೇಹುದು ಭೂಪ ಕೇಳೆಂದ ॥ ೧೧೭ ॥

ಮಾಡಿದಪ[1]ರಾಧಂ[1]ಗಳನು ಮಱೆ-
ದಾಡರತಿಮೋಹದಲಿ ದಿಟ ನೀ-
ಕೂಡಿ ಬದುಕುವ [2]ಹದನ[2] ನುಡಿವರು [3]ನಿ[3]ಮ್ಮ ಮನ [4]ಮೆಚ್ಚಿ[4] ।
ಕಾಡಿನೊಳಗಾಡಿದರು ದುಃಖವ
ತೋಡಿದರು ನೀನವರಿಗುಚಿತವ
ಮಾಡಿ ನಾಡನು ಕೊಡುವುದೆಂದನು ದಾನವಧ್ವಂಸಿ ॥ ೧೧೮ ॥

ವಿದುರನುತ್ಸವ ಕೃಪನ ಸ[1]ಮ್ಮತ[1]
ನದಿಯಮಗನೊಲವಂಧನೃಪನ-
ಭ್ಯುದಯ ಕೇಳೆಂದಸುರರಿಪು ನಯನುಡಿಯ ಗಡಣಿಸಲು ।
ಮದದ ಮೈಗಾಣಿಕೆಯ ಮನಲೇ-
ಪದ ಮಹಾಖಳನಡ್ಡಮೊಗವಿಡ-
ಲುದಧಿಯೊಳಗದ್ದಂತೆ ಇರ್ದುದು ರಾಯನಾಸ್ಥಾನ ॥ ೧೧೯ ॥

---

೧೧೭. [1]ಪ್ರವಾಸ (ಅ ಕುಮಾ), ಸ್ವೀಪಾ (ಕ ಓ ಅ). [2]ಬದುಕುವು (ಪ್ರ k). [3]ನ (ಕ k ಪ್ರ ಕುಮಾ ಅ).
[ನವೆ-ಕೃಶವಾಗು. ಅಧ್ರುವ-ಅಶಾಶ್ವತ, ನಶ್ವರ. ಪುರುಷಾರ್ಥ-ನಾಲ್ಕು ಪುರುಷಾರ್ಥಗಳು (ಧರ್ಮ, ಅರ್ಥ, ಕಾಮ ಮತ್ತು ಮೋಕ್ಷ). ಸಂಚಿಸು-ಗಳಿಸು, ಸಂಗ್ರಹಿಸು].

೧೧೮. [1]ಕಾರ್ಯಂ (ಪ್ರ ಓ ಕ k ಅ). [2]ನುಡಿಯ (ಅ ಕುಮಾ ಅ), ಸ್ವೀಪಾ (ಪ್ರ k). [3]ನ (ಅ ಅ ಕುಮಾ), ಸ್ವೀಪಾ (ಕ). [4]ಮಱಿಯೆ (ಕ ಅ).
[ಅಡಿದರು-ತೊಳಲಿದರು. ತೋಡಿದರು-ಅನುಭವಿಸಿದರು].

೧೧೯. [1]ನ್ಮದ (ಪ್ರ ಓ k ಅ).
[ಉತ್ಸವ-ಸಂಭ್ರಮ, ಉತ್ಸಾಹ. ಸಮ್ಮತ-ಒಪ್ಪಿಗೆ. ನಯನುಡಿ-ನೀತಿಯ ಮಾತು. ಗಡಣಿಸು-ಒಟ್ಟುಗೂಡಿಸು. ಮದ-ಸೊಕ್ಕು, ಗರ್ವ. ಮೈಗಾಣಿಕೆ-ಶರೀರದಲ್ಲಿ ಪ್ರಕಟವಾಗುವುದು. ಮನಲೇಪ-ಮನಸ್ಸಿನಲ್ಲಿ ಅಂಟಿಕೊಂಡಿರುವುದು. ಅಡ್ಡಮೊಗವಿಡು-ಮುಖವನ್ನು ತಿರುಗಿಸು. ಉದಧಿ-ಸಮುದ್ರ. ಅದ್ದು-ಮುಳುಗು].

ಅವರಿಗಿಂದ್ರಪ್ರಸ್ಥದಲಿ ರಾ-
ಜ್ಯವನು ಕುಳಸಹಿತಿತ್ತು ನೀ ಪಾಂ-
ಡವ*ಪ್ರತಿಷ್ಠಾಚಾರ್ಯನೆಂಬೀ ಬಿರುದ [1]ಸಲಿಸಿದೊಡೆ[1] ।
ಅವನಿಯಲಿ ನಿನ್ನೊಡನೆ ತಲೆಯೆ-
ತ್ತುವ ನೃಪಾಲಕರಿಲ್ಲ ನುಡಿಗಳು
ಕಿವಿಗೆ ಕರ್ಕಶವೀಗಳಾದೊಡೆ [2]ತುದಿಗೆ[2] ಲೇಸೆಂದ ॥ ೧೨೦ ॥

ಧರೆಯ ನೃಪರಿಗೆ ಹಸ್ತಿನಾಪುರ-
ದರಮನೆಯ ಬಾಗಿಲಲಿ ಸಮಯವು
ದೊರಕಲಂತದು ಪುಣ್ಯವೆಂಬೀ ಸಾರ್ವಭೌಮ[1]ತೆಯು[1] ।
ಸಿರಿಗೆ ಪಾಂಡವರನ್ಯರಾದೊಡೆ
ಮೆಱೆಯಲಱಿವುದೆ [2]ನಿನ್ನ[2] ಸಿರಿ ಕಾ-
ತರಿಗತನವನು ಮಾಣು ಕೇಳೆಂದಸುರರಿಪು ನುಡಿದ ॥ ೧೨೧ ॥

ಯಮಜ ನಿನಗೊಳ್ಳಿದನು ಪಾರ್ಥನ
ಮಮತೆ ನಿನ್ನಲಿ ಹಿರಿದು ಭೀಮನ
ತಮದ ನುಡಿ ಹಿಂಗಿ[1]ದುದು[1] ನಕುಲನು ನಿನ್ನೊಳೆರಡಱಿಯ ।
ತಮತಮಗೆ ತಮ್ಮೈವ[2]ರುಱಿ[3][2] ನಿ-
ನ್ನಮಲವಚನವ ಹಾ[3]ರುತಿಹರು[3]-
ದ್ಧ್ರುಮಿತತನವನು ಮಾಡದಿರು ಸೋದರರ ಸಲಹೆಂದ ॥ ೧೨೨ ॥

---

೧೨೦. [1]ಧರಿಸಿದರೆ (ಕ ಓ); ಧರಿಸಿದಡೆ (ಅ). [2]ಮುಂದೆ (ಆ ಕುಮಾ), ಸ್ವೀಪಾ (ಕ ಅ).
[ಕುಳ–ಪರಿವಾರ. ಕರ್ಕಶ–ಕಠೋರ, ಅಹಿತ].

೧೨೧. [1]ರಿಗೆ (ಅ), ಸ್ವೀಪಾ (ಪ್ರ ಓ k ಆ ಕುಮಾ). [2]ಮ್ಮ (ಆ ಕುಮಾ), ಸ್ವೀಪಾ (ಪ್ರ ಓ k ಅ).
[ಸಮಯ–ಪ್ರವೇಶಾವಕಾಶ. ಕಾತರಿಗತನ–ದುರಾಸೆಪಡುವ ಸ್ವಭಾವ. ಮಾಣು–ಬಿಡು].

೧೨೨. [1]ದವು (ಆ ಕುಮಾ), ಸ್ವೀಪಾ (ಪ್ರ ಓ k). [2]ರುಂ (ಅ), ರೂ (ಕುಮಾ); ಸ್ವೀಪಾ (ಅ). [3]ರಿ ಹರುವು (ಆ ಕುಮಾ), ಸ್ವೀಪಾ (ಪ್ರ ಕ k ಅ).
[ತಮ–ಅಜ್ಞಾನ. ಎರಡಱಿಯ–ದ್ರೋಹಬುದ್ಧಿಯಿಲ್ಲದವನು. ಹಾರು–ನಿರೀಕ್ಷಿಸು. ಉದ್ಧ್ರುಮಿತತನ–ವಿಪರೀತ ಕಲ್ಪನೆ].

ಧರ್ಮಜನ ಕಡುಮೋಹವೆಂಬುದು
ನಿಮ್ಮ [1]ಚಿತ್ತ[1]ದೊಳಿರಲಿ ಭೀಮನು
[2]ಬಿ[2]ಮ್ಮು ತಮ್ಮೊಳಗಿರಲಿ ಫಲುಗುಣನೊಲವದಂತಿರಲಿ ।
ನಮ್ಮ ಭೂಮಿಯೊಳರೆಯ ಬೇಡುವ-
ರೆಮ್ಮ ಬಂಧುಗಳಲ್ಲ ಸಂಧಿಗೆ
ತಮ್ಮನೊಡಬಡನೆಂದು ದುಶ್ಶಾಸನನ ನೋಡಿದನು ॥ ೧೨೩ ॥

ಬೆರಳ ಮಾಸೆಯೊಳಿಡುತ ಕಿಜಿುನಗೆ-
ವೆರಸಿ ಕರ್ಣಾದಿಗಳ ವದನವ
ತಿರುಗಿ ನೋಡುತ ಹರಿಯ ನುಡಿಗಳ ಕಿವುಡುಗೇಳುತ್ತ ।
ಮರುಳುತನದಾಳಾಪವೇತಕೆ
ಮುರ[1]ಮಥನ[1] ಪಾಂಡವರ [2]ಕಥನವ-
ನೊರೆಯದಿರು[2] [3]ಕರ್ಣಕ್ಕೆ ಶೂಲವಿದೆಂದನಾ ಭೂಪ[3] ॥ ೧೨೪ ॥

ಅರಸುತನ ತನಗಧಿಕವಾಗುತ
ಬರಬರಲು ಕಣ್ಣಾಲಿಗಳು [1]ತರ-
ಹರಿಸಿ[1]ಕಾಣವು ವರ್ತಮಾನದ ನೃಪರ ಬಳಕೆ[2]ಯಿ[2]ದು ।
ಸಿರಿಯ ಮದವೆಂಬಧಿಕ ತಾಮಸ
ದೊರಕಿದಕ್ಷಿಗೆ ನೀತಿಕಾಜಿರ
[3]ಪರಮ ವಚನಾಂಜನದಿ[3] ಪ್ರಜ್ವಲಿಸುವುದು ನಯವೆಂದ ॥ ೧೨೫ ॥

---

೧೨೩. [1]ಚ ಣ (ಪ್ರ ಓ k ಅ) [2]ಡ (ಅ ಕುಮಾ), ಸ್ವೀಪಾ (ಪ್ರ ಓ k ಅ).
[ಬಿಮ್ಮು-ಬಿಂಕ, ಗರ್ವ]

೧೨೪ [1]ಹರನೆ (ಅ ಕುಮಾ), ಸ್ವೀಪಾ (ಪ್ರ k ಅ). [2]ಹಂಬಲ ಮರೆದು ಕಳೆ (ಅ ಕುಮಾ), ಸ್ವೀಪಾ (ಪ್ರ ಓ ಕ k ಅ). [3]ಕರಣಕ್ಕೆ ಖಾತಿಯ ಬಳಸಬೇಡೆಂದ (ಅ ಕುಮಾ), ಕರ್ಣಕ್ಕೆ ಬಾಧೆಯಿದೆಂದನಾ ಭೂಪ (ಪ್ರ k ಅ), ಸ್ವೀಪಾ (ಓ).
[ಕಿವುಡುಗೇಳು-ಅಸಡ್ಡೆ ಮಾಡು, ತಿರಸ್ಕಾರ ಮಾಡು. ಮರುಳತನದಾಳಾಪ-ಅವಿವೇಕದ ಮಾತು. ಒರೆ-ಹೇಳು].

೧೨೫. [1]ಗೋಚರಿಸಿ (k ಪ್ರ), ಸ (ಅ); ಸ್ವೀಪಾ (ಓ ಕುಮಾ ಅ). [2]ಯ (ಅ), ಸ್ವೀಪಾ (ಪ್ರ ಕ k ಕುಮಾ ಅ). [3]ನಿರುಪಮಿತ ವಚನದಲಿ (ಕ).
[ತರಹರಿಸು-ಸಮಾಧಾನಗೊಳ್ಳು, ಸಹಿಸಿಕೊಳ್ಳು. ಅಂಜನ-ಕಾಡಿಗೆ. ನಯ-ನೀತಿ].

ನೀತಿಗಾಲಯ ನಿಮ್ಮ ಕುಲವಿ-
ಖ್ಯಾತವದು ನೆಲೆ ಸಕಲಸೌಖ್ಯ-
ವ್ರಾತಕಿದು ಸದ್ಬೀಜವೆನಿಸಿತು ಕೌರವಾನ್ವಯವು ।
ಭೂತಳದ ಲೋಲು[1]ಪ್ತಿ[1]ಯೊಳು ಕುಲ-
ಘಾತಕನು ನೀನೆಂಬಕೀರ್ತಿಗೆ
ಓತು ನೆಲೆಯಾಗದಿರು ಬೇಡಿದೆನೆಂದು ಹರಿ ನುಡಿದ ॥ ೧೨೬ ॥

ಸಾಮವೆಂಬುದು ರಾಜನೀತಿಗೆ
ತಾ ಮನೋಹರರೂಪು ಬದುಕುವ
ಭೂಮಿಪಾಲರನಂತವಿಭವಕೆ ಬೀಜಮಂತ್ರವಿದು ।
ಸಾಮ ತಪ್ಪಿದ ಬಳಿಕ ನೀತಿ ವಿ-
ರಾಮವಾಗದೆ ಬಿಡದು ದಂಡದ
ಸೀಮೆಯೆಂಬುದುಪಾಯ[1]ದಲಿ[1] ಸಾಮಾನ್ಯತರವೆಂದ ॥ ೧೨೭ ॥

ಕೊಡು ವೃಕಸ್ಥಳವನು ಕುಶಸ್ಥಳ
ಪೊಡವಿಯಾವಂತಿಯನು ಕುಳ[1]ವನು[1]
ಕೊಡಿಸಿ ಕಳೆ ಸಿರಿಕರಣದವರಲಿ ವಾರಣಾವತವ ।
ಕೊಡು ನಿನಗೆ ಮನಬಂದುದೊಂದನು
ನಡಸಿಕೊಡುವೆನು ಪಾಂಡವರನವ-
ಗಡೆಯುತನ ಬೇಡಿನ್ನು ಕೇಳೆಂದಸುರರಿಪು ನುಡಿದ ॥ ೧೨೮ ॥

---

೧೨೬. [1]ಪತಿ (ಅ ಆ ಕುಮಾ), ಸ್ವೀಪಾ (ಪ್ರ k).
[ಅನ್ವಯ-ವಂಶ. ಲೋಲುಪ್ತಿ-ಅತ್ಯಾಸಕ್ತಿ. ಓ-ಪ್ರೀತಿಸು].

೧೨೭. [1]ದಳಿ (ಅ), ಸ್ವೀಪಾ (ಪ್ರ k ಕುಮಾ ಅ).
[ಸಾಮ-ಸಾಮೋಪಾಯ. ವಿಭವ-ವೈಭವ. ವಿರಾಮವಾಗು-ನಿಲುಗಡೆ ಹೊಂದು, ತಟಸ್ಥವಾಗು. ದಂಡ-ದಂಡೋಪಾಯ. ಸೀಮೆ-ವ್ಯಾಪ್ತಿ].

೧೨೮. [1]ಪಳಿ (ಅ), ಸ್ವೀಪಾ (ಓ ಕುಮಾ ಅ).
[ಕುಳ-ಪರಿವಾರ. ಸಿರಿಕರಣದವರು-ಶ್ರೇಷ್ಠರಾದ ಲೆಕ್ಕಿಗರು. ಅವಗಡೆಯುತನ-ಮೊಂಡತನ, ಮೂರ್ಖತನ].

ಬೇಡಿದೊಂದೊಂದೂರು ನಮ್ಮಯ
ನಾಡ ತಲೆಮಂಡೆಗಳು ರಾಜ್ಯದ
ರೂಢಿಯೈದೂರುಗಳ ಬಳವಿಗೆ ಹಸ್ತಿನಾನಗರ ।
ಬೇಡ[1]ಲಜ್ಜಿವನು[1] ಮಾನ[2]ನಿಧಿ ಕೊಂ-
ಡಾ[2]ಡಲೇತಕೆ [3]ಧರೆಯ[3]ನೀರಡಿ
ಮಾಡಿಕೊಂಡ ಮಹಾತ್ಮ ನಿನಗಂಜುವೆನು ನಾನೆಂದ ॥ ೧೨೯ ॥

ಸಲಲಿ [1]ನೀ[1] ಪಾಂಡವರೊಳೆತ್ತಿದ
ಛಲದ ಬಳವಿಗೆಯುಕಟ ನಿಮ್ಮಯ
ಬಳಗ ಬದುಕಲಿ ಮತ್ತೆ ನವೆಯಲಿ [2]ಪಾಂಡುನಂದನರು[2] ।
ಜಲಧಿಮೇರೆಯ ಮಹಿಯೊಳೊಂದೇ
ಸ್ಥಳವನೈವ[3]ರಿಗೀ[3]ವುದೆನೆ ಕಳ-
ವಳಿ[4]ಗನ[4]ವಗಡಿಸಿದನು [5]ಜಜ್ಜಿ[5]ದನು ದನುಜವೈರಿಯನು ॥ ೧೩೦ ॥

ನೆಲನೊಳರ್ಧವನೀವುದಿಲ್ಲೀ
ಸ್ಥಳವನೈದನು ಮುನ್ನ ಕೊಡೆ[1]ನೆ-[1]
ನ್ನಿಳೆ[2]ಯ ಭಾಗವನೀಸಕೊಟ್ಟೊಡೆ ನಿನ್ನ ಮೇಲಾಣೆ[2] ।
ನೆಲನ ಕಡೆಯಲಿ ಮುಳ್ಳುಮೊನೆಯು-
ಚ್ಚಳಿಪ ಧರಣಿಯನಿತ್ತೆನಾದೊಡೆ
ಬಳಿಕ ನೀ ನಗು ಹೋಗು [3]ಕದನವ[3] ಕೊಂಡು ಬಾ ಯೆಂದ ॥ ೧೩೧ ॥

---

೧೨೯. [1]ರಿಯೆನು (ಅ), ಸ್ವೀಪಾ (ಅ ಕುಮಾ). [2]ನಿನಗುಂಟಾ (ಪ್ರ ಓ k ಅ). [3]ನೆಲನ (ಓ ಕ ಅ), [4]ಮೂಜಡಿ (ಕ).

[ತಲೆಮಂಡೆ-ಶಿರಃಪ್ರಾಯ, ತಲೆಯಂತೆ ಉತ್ತಮ. ಈರಡಿ-ಎರಡು ಅಡಿ].

೧೩೦. [1]ನಿಜ (ಅ), ಸ್ವೀಪಾ (ಪ್ರ k ಅ ಕುಮಾ). [2]ಧರ್ಮನಂದನನು (ಅ ಕುಮಾ). [3]ವಂಗೀ (ಅ), ಸ್ವೀಪಾ (ಪ್ರ ಓ k ಕುಮಾ). [4]ಸಿಯ (ಅ), ಸ್ವೀಪಾ (ಸರ್ವತ್ರ). [5]ಜಡಿ (ಅ ಕುಮಾ), ಸ್ವೀಪಾ (ಓ ಕ).

[ಕಳವಳಿಗ-ಚಿಂತಿಸುವವನು].

೧೩೧. ಯೊ (ಅ), ಸ್ವೀಪಾ (ಸರ್ವತ್ರ). [2]ಯೊಳಡಿಯನು ಮುಟ್ಟಲೀಯೆನದೇಕೆ ಕೈವಾರ (ಅ), ಯ ಭಾಗವನೀಯೆನಿನ್ನಿದಕೇಕೆ ಕೈವಾರ (ಅ); ಸ್ವೀಪಾ (ಓ ಕುಮಾ). [3]ಕದನಕೆ (ಅ), ಬವರವ (ಓ), ಕಲಹವ (ಪ್ರ k); ಸ್ವೀಪಾ (ಅ ಕುಮಾ).

[ಉಚ್ಚಳಿಸು-ಹೊರಕ್ಕೆ ಬರುವಂತೆ ಮಾಡು, ಹೊರಕ್ಕೆ ತೆಗೆ].

*ಹಗೆಯು ಸಂಧಿಯು ನೆವದೊಳೆಮ್ಮಯ
ಬಗೆಯನಱಿಯಲು ಬಂದೆ ಯಾದವ-
ರಗಡುತನ ನಮ್ಮಲ್ಲಿ [1]ಸಲ್ಲದು[1] ಸಾಕು ನುಡಿಯದಿರು ।
[2]ಹಗೆಯನಾದೊಡೆ[2] ಕೊಂಡು ಬಾ ನಡೆ
ಮುಗು*ಳ್ದಿಡಱಿಯಲು ಬಹುದು ನೀ ಹಱಿ-
ಹುಗಿಲುಮಾಡುವ ಮಂತ್ರ ಸಾಕೆನ್ನೆಂದನವನೀಶ ॥ ೧೩೨ ॥

ಕಡೆಗೆ ಧೃತರಾಷ್ಟ್ರಾವನೀಶನು
ಮಡದಿಸಹಿತಲನಾಥನಾಗಿಯೆ
ಕೆಡುವನೆಂಬುದ ಬಲ್ಲೆ ನಾ ಪಾಂಡವರ [1]ಬಾಗಿಲೊಳು[1] ।
ಪಡಿಗೆ ಪವಮಾನಜನ ಸಮಯುವ
[2]ಪ[2]ಡೆಯದಿಹ ತಱುವಾಯು[3]ಲೀತನು[3]
ನಡಸಿಕೊಡು[4]ವುದು[4] ತಪ್ಪದಕಟಕಟೆಂದನಾ ವಿದುರ ॥ ೧೩೩ ॥

ಮನದ ಸಂಕೇತದಲಿ ದುರ್ಯೋ-
ಧನನ ಕಟ್ಟಿಲು ವಿದುರಗಂಗಾ-
ತನಯ ಧೃತರಾಷ್ಟ್ರಾವನಿಪರಾಲೋಚಿಸಿದ ಹದನ ।
ಮನದೊಳಱಿದನು ಬಳಿಕ ದುಶ್ಶಾ-
ಸನನು ದುರ್ಯೋಧನಗೆ ಇನಿಬರ
ನೆನಹ ಬಿನ್ನಹವಾಡಿದನು ಖಾತಿಯುಲಿ ಕಳವಳಿ[1]ಸೆ[1] ॥ ೧೩೪ ॥

---

೧೩೨. [1]ಸೇರದು (ಪ್ರ k). [2]ಬಗೆಗೆ ಬಂದರ (ಪ್ರ k).
[ಅಗಡುತನ-ದುಷ್ಟತನ, ತುಂಟತನ. ಮುಗುಳ್-ಹಿಂತಿರುಗು, ಮರಳು. ಹಱಿ ಹುಗಿಲುಮಾಡು-ಛಿದ್ರಛಿದ್ರ ಮಾಡು, ಭೇದಿಸು. ಮಂತ್ರ-ಆಲೋಚನೆ].

೧೩೩. [1]ರಾಜ್ಯದಲಿ (ಅ ಆ ಕುಮಾ), ಸ್ವೀಪಾ (ಪ್ರ ಓ k). [2]ಹ (ಅ ಕುಮಾ), ಸ್ವೀಪಾ (ಕ ಅ). [3]ನಿಸಗದು (ಕ ಅ), ನಮುಗದು (ಓ). [4]ವಸು (ಅ ಕುಮಾ), ಸ್ವೀಪಾ (ಪ್ರ ಓ k ಅ).
[ಪಡಿ-ಭಕ್ಷ್ಯ].

೧೩೪. [1]ಸಿ (ಅ ಕುಮಾ), ಸ್ವೀಪಾ (ಅ).
[ನೆನಹು-ವಿಚಾರ, ಆಲೋಚನೆ. ಖಾತಿ-ದುಃಖ].

---

* ಈ ಪದ್ಯ 'ಅ' ಮತ್ತು 'ಕುಮಾ' ಪ್ರತಿಗಳಲ್ಲಿ ಇಲ್ಲ. 'ಪ್ರ' ಪ್ರತಿಯಲ್ಲಿ ಹಲವು ವ್ಯತ್ಯಾಸಗಳೊಡನೆ ದೊರೆಯುತ್ತದೆ.

ಹೆತ್ತವರು [1]ಹಗೆಯ[ಹ]ಡೆ[1] ನಾವಿ-
ನ್ನೆತ್ತ [2]ತೊಲಗು[2]ವೆವಣ್ಣದೇವರೆ
ಚಿತ್ತವಿಸಿದಿರೆ ರಾಜಕಾರ್ಯದ ಹದ ವಿಸಂಚಿಸಿತು ।
ಮುತ್ತಯನ ಕಿಱಿಯಯ್ಯನಯ್ಯನ
ಚಿತ್ತ ಕೊಂಕಿತು ಸಾಕು ನಿಂ[3]ದಿರೆ-[3]
ನುತ್ತಲಗ್ರಜಸಹಿತ[4]ವೋ[4]ಲಗದಿಂದ ಹೊಱವಂಟ ॥ ೧೩೫ ॥

ಎರಡು ಬಲವನು ಮಸೆದು ಕೊಲಿಸುವ
ಭರವು ಯಾದವನದು ನಿಧಾನಿಸ-
ಲರಿ ನಮಗೆ ಮುರವೈರಿಯಲ್ಲದೆ ಪಾಂಡುನಂದನರೇ ।
ತರಿಸಿ ಹುರಿನೇಣುಗಳನೀತನ
ಕರವೆರಡನೊಡಬಿಗಿದೊಡವದಿರು
ಕೆರಳಿ ಮಾಡುವುದಾವುದೆಂದನು ಕೌರವರ ರಾಯ ॥ ೧೩೬ ॥

*ವೊಸತಲಾ ಶ್ರುತಿಕೋಟಿಮುಹದುಪ-
ನಿಷದರಾಶಿಗಳಱಿಸಿ ಕಾಣವು
ಬಸಿಱೊಳಗೆ ಬ್ರಹ್ಮಾಂಡಕೋಟಿಯ[1]ನಿಱಿಸಿ[1]ಕೊಂಡಿಹನು ।
ನುಸಿಗಳೀ ಕರ್ಣಾದಿದುಷ್ಟ-
ಪ್ರಸರಮಂತ್ರಿಗಳಿವನ ನೇಮದೊ-
ಳಸುರರಿಪುವನು ಬಿಗಿಯಲಳವಡಿಸಿದರು ನೇಣುಗಳ ॥ ೧೩೭ ॥

---

೧೩೫. [1]ಮರಳಿದರು (ಅ), ಮರುಳಹರೆ (ಕ ಕುಮಾ ಅ), ಹಗೆಯಾಗೆ (ಪ್ರ k); ಸ್ವೀಪಾ (ಹಗೆಯಹೊಡೆ) (ಓ). [2]ತಿರುಗು (ಅ ಕುಮಾ), ಸಾರು (ಅ ಓ ಕ ಪ್ರ k); ಸ್ವೀಪಾ (ಕ). [3]ದೆಗೆ (ಅ ಕುಮಾ), ಸ್ವೀಪಾ (ಕ ಓ ಅ). [4]ಲೋ (ಅ ಕುಮಾ), ಸ್ವೀಪಾ (ಓ ಅ).

[ವಿಸಂಚಿಸು–ವ್ಯರ್ಥವಾಗು. ಮುತ್ತಯ–ಭೀಷ್ಮ. ಕಿಱಿಯಯ್ಯ–ವಿದುರ. ಅಯ್ಯ–ಧೃತರಾಷ್ಟ್ರ. ಕೊಂಕು–ಮುರಿ, ವಕ್ರವಾಗು. ಅಗ್ರಜ–ಅಣ್ಣ; ದುರ್ಯೋಧನ].

೧೩೬. [ನಿಧಾನಿಸು–ಆಲೋಚನೆ ಮಾಡು. ಹುರಿನೇಣು–ಹಗ್ಗ. ಒಡಬಿಗಿ–ಕೂಡಿಸಿಕಟ್ಟು].

೧೩೭. [1]ಧರಿಸಿ (ಅ), ಸ್ವೀಪಾ (k).

[ಇಱಿಕಿಕೊಳ್ಳು–ಭದ್ರವಾಗಿ ಅಡಗಿಸಿಟ್ಟುಕೊ. ನುಸಿ–ಕ್ಷುದ್ರ ಕೀಟ, ನುಸಿಹುಳು. ನೇಮ–ಆಜ್ಞೆ, ಆದೇಶ].

---

* ಈ ಪದ್ಯವು ‘ಅ’ ಮತ್ತು ‘ಕುಮಾ’ ಮತ್ತು ‘ಪ್ರ’ ಪ್ರತಿಗಳಲ್ಲಿ ಕಂಡುಬರುವುದಿಲ್ಲ.

ದೂತರನು ಕಟ್ಟುವುದು ರಾಯರಿ-
ಗೇತಱುಚಿತವು ನಮ್ಮ [1]ಕಟ್ಟಲು[1]
ಕಾತರಿಸುತದೆ ನಿಮ್ಮ ಮೊಮ್ಮಂದಿರನು ನೀ ಕರಸಿ ।
ಮಾತನಾಡಿಸಿ ನೋಡು ನಮಗೀ
ಭೀತಿ ತಾನಿಲ್ಲೆನಲು ಗಂಗಾ-
ಜಾತ ಧೃತರಾಷ್ಟ್ರಂಗೆ ನುಡಿದನು ಕೌರವನ ಹದನ ॥ ೧೩೮ ॥

ಅವನಿಪತಿ ಕೇಳಿದನು [1]ಕನಲಿದು[1]
ಶಿವಶಿವೆಂದನು ವಿದುರ ಕರೆ ಕೌ-
ರವನು ಮಗನೇ ಮೃತ್ಯುವಲ್ಲಾ ಭರತಸಂತತಿಗೆ ।
ಅವಳ ಬರಹೇಳೆತ್ತ ಮಗನಾ-
ಟವನು ನೋಡಲಿ ಹೆತ್ತ ಮೋಹದ
ಹವಣುಗಳ ಬೆಸಗೊಂಬ ಗಾಂಧಾರಿಯನು ಕರೆ ಯೆಂದ ॥ ೧೩೯ ॥

ಜನಪನಾಜ್ಞೆಯ ಮೇಲೆ ದುರ್ಯೋ-
ಧನನ ತಂದರು ಸಭೆಗೆ [1]ಬಳಿಕೇ[1]
ವನಜಮುಖಿ[2]ಗೀ ಹದನನೆನೆ ಗಾಂಧಾರಿ ಹರಿ[2]ತಂದು ।
ದನುಜವೈರಿಯ ಕಟ್ಟುವೈ ಕೃ-
ಷ್ಣನನು ಬಿಗಿವೈ [3]ದಿಟ್ಟ ಮಗ[3] ಹೆ-
ತ್ತನಗೆ ಹರುಷವನಿತ್ತೆ ಯೆಂದಳು ಮುಳಿದು ಗಾಂಧಾರಿ ॥ ೧೪೦ ॥

---

೧೩೮. [1]ಬಿಗಿಯಲು (ಕ ಪ್ರ ಓ k ಅ).

೧೩೯. [1]ಅಗಳೆ (ಅ), ಸ್ವೀಪಾ (ಸರ್ವತ್ರ).
[ಹವಣು–ಪ್ರಮಾಣ].

೧೪೦. [1]ಮತ್ತೀ (ಅ ಕುಮಾ), ಸ್ವೀಪಾ (ಅ). [2]ಗೀ ಹದನನಜಿ ಹಿದರಾಗಳೈ (ಓ ಅ), ಗಿದನೆಂದೊಡಾ ಗಾಂಧಾರಿನಡೆ (ಅ ಕುಮಾ); ಸ್ವೀಪಾ (k). [3]ದಿಟ ಮಗನೆ (ಓ k ಕುಮಾ ಅ).
[ಹರಿತಂದು–ಓಡಿಬಂದು. ದಿಟ್ಟ–ಧೈರ್ಯಶಾಲಿ].

ಎಲೆ ಮರುಳೆ ಧೃತರಾಷ್ಟ್ರ [1]ನಂಟಿನ
ಬಳಕೆವಾತಿನ[1] ಬಂಧುಕೃತ್ಯದ
ಬಳಕೆಯಲಿ ನೀ ನಿನ್ನ ಕಂದನ ಬೇಡಿಕೊಳಲೇಕೈ ।
ಮುಳಿದು ಬಗುಳುವ ನಾಯ್ಗೆ ಚಂದ್ರಮ-
ನಳುಕುವನೆ ನರಿಯೊಱಲಿದೊಡೆ ಕಳ-
ವಳವಹುದೆ ಸಿಂಹಕ್ಕೆ ಯೆಂದನು ಖಾತಿಯಲಿ ವಿದುರ ॥ ೧೪೧ ॥

ಲೋಕ ವ್ಯೆಮಱೆವಂದು ಜಲಧಿಗ-
ಳಾಕಿ ಹಳಚುವ ಹೊತ್ತು ತಾನಿಹ-
ನೇಕಮೇವಾದ್ವಿತಿಯಪರಮೋ[1]ಕೈಕಮಹ*[ಶೆ]ಂದು[1] ।
[2]ಏಕನಾತುಮನೆಂದು[2] ವೇದಾ-
ನೀಕ ಕೈವಾರಿಸಲು ಮೆಱೆವ ನಿ-
ರಾಕೃತಿಯ [3]ಪರಬೊಮ್ಮತತ್ವವದೀತ ನೋಡೆಂದ[3] ॥ ೧೪೨ ॥

ವಿದುರನಿಂತಿಂತೆನಲು ಮಿಂಚಿನ
ಹೊದಱು ಹುರಿಗೊಂಡಂತೆ ರವಿಶತ-
ವುದುರಿದವು ವ್ಯೆಮುರಿದು ನಿಂದಡೆ ದೇವ[1]ನ[1]ಂಗದಲಿ ।
ಸದೆದುದಾಸ್ಥಾನವನು ಘನತೇ-
ಜದ ಲಹರಿ [2]ಮಿಗಿಲಾಗೆ[2] ಹರಿ ತೋ-
ಱಿದನು ನಿರುಪಮವಿಶ್ವರೂಪವನಾ ಮಹಾಸಭೆಗೆ ॥ ೧೪೩ ॥

---

೧೪೧. [1]ನಂಜಿನ ಬಳಗವೀತನ (ಆ ಕುಮಾ), ನಂಟಿನ ಬಳಗವಾತಿನ (ಅ); ಸ್ವೀಪಾ (ಓ k).

[ಖಾತಿ–ಕೋಪ].

೧೪೨. [1]ಕೋಹನೆಂದೆಂಬ (ಅ), *ಮೆ (ಅ). [2]ಏಕ ಆತ್ಮಾ ಯೆಂದು (ಆ ಕುಮಾ), ಏಕನಾತ್ಮನೆಂಬ (k); ಸ್ವೀಪಾ (ಓ ಅ). [3]ಪರಬೊಮ್ಮರೂಪಿನ ತಾತ ನೋಡೀತ (ಆ ಕುಮಾ), ಸ್ವೀಪಾ (ಅ).

[ಹಳಚು–ಅಪ್ಪಳಿಸು. ಏಕಮೇವ–ಒಬ್ಬನೇ ಆದ. ಅದ್ವಿತೀಯ–ಎರಡಿಲ್ಲದ. ಪರಮ–ಶ್ರೇಷ್ಠ. ಏಕೈಕಂ–ಒಬ್ಬನೇ ಆದವನು. ಅಹಂ–ನಾನು. ಮಹತ್–ಮಹತ್ ತತ್ವ (ಸಾಂಖ್ಯದರ್ಶನದ ೨೫ ಭೂತಗಳು ಅಥವಾ ತತ್ವಗಳಲ್ಲಿ ೨ನೆಯದು). ಕೈವಾರಿಸು–ಹೊಗಳು].

೧೪೩. [1]ರಂ (ಆ ಕುಮಾ), ಸ್ವೀಪಾ (ಕ ಓ k ಅ). [2]ನೆಲೆಯಲಿ (ಕ). ಲೀಲೆಯಲಿ (ಅ); ಲೀಲೆಮಿಗೆ (ಓ k).

[ಹೊದಱು–ಗುಂಪು. ಹುರಿಗೊಳ್ಳು–ಹೆಣೆದುಕೊ. ಸದೆ–ಅಪ್ಪಳಿಸು, ಹೊಡೆ. ಲಹರಿ–ಪ್ರವಾಹ].

ಒಳಗೆ ಹೊಳೆದನು ಬಾಹ್ಯದಲಿ ಪ-
ಜ್ಜಳಿಸಿದನು ತಾನಲ್ಲದನ್ಯರ
ಬಳಕೆ ಬೇಱೊಂದಿಲ್ಲದಂತಿರೆ ಕೂಡೆ ತೋಱಿದನು ।
ಒಳಗೆ ಬಿಗಿವೆವೊ ಹೊಱಗೆ ಕೃಷ್ಣನ
ಸಿಲುಕಿಸುವೆವೋ ತಿಳಿಯೆ ಕೃಷ್ಣರು
ಹಲಬರಿಹರಾರಾರ ಕಟ್ಟುವೆವೆಂದರಾ ಖಳರು ॥ ೧೪೪ ॥

ಅನುಪಮಾದ್ವಯದಲ್ಲಿ ಮುಳ್ಳಿನ
ಮೊನೆಗೆ [1]ಮೋಹುವಡಿ[1]ಲ್ಲ ತೆಱಹೆಂ-
ಬಿಸಿತು ಪರಿಪೂರ್ಣದಲಿ [2]ಸಚ್ಚಿನ್ಮಾತ್ರ[2] ರೂಪದಲಿ ।
ಮನದ ಬಗೆ ಮುಟ್ಟದ ಮಹಾಮಹಿ-
ಮನನು ಕಟ್ಟುವೆವೆಂತೆನುತ ತನ-
ತನಗೆ ಕರ್ಣಾದಿಗಳು ಕೈಗಳ ಕದಪ ತೂಗಿದರು ॥ ೧೪೫ ॥

[1]ಅಮಿತ[1] ಕರುಣಾಸಿಂಧು ನೀನನು-
ಪಮಚರಿತ್ರನು ನಿಮ್ಮಡಿಯ ಪದ-
ಕಮಲದರ್ಶನದಿಂದ ಹಿಂಗಿದವಘದರಾಶಿಗಳು ।
ಸಮತೆಯಲಿ ನೀ ನೋಡು ಶರಣರ
ಮಮತೆ ಬೇಹುದು ಜೀಯ ಲಕ್ಷ್ಮೀ-
ರಮಣ ಕೃಪೆಮಾಡೆನುತ ಮೈಯಿಕ್ಕಿದಳು ಗಾಂಧಾರಿ ॥ ೧೪೬ ॥

---

೧೪೪. [ಪಜ್ಜಳಿಸು (=ಪ್ರಜ್ವಲಿಸು)-ಅತ್ಯಂತ ಪ್ರಕಾಶಮಾನವಾಗಿರು].

೧೪೫. [1]ಮೋಹುವರಿಲ್ಲ (ಅ ಕುಮಾ ಅ), ತೋಱುವರಿಲ್ಲ (ಕ); ಸ್ವೀಪಾ (k ಪ್ರ).
[2]ಸಭೆಯಣುಮಾತ್ರ (ಅ ಕುಮಾ), ಸ್ವೀಪಾ (ಕ ಓ k ಪ್ರ ಅ).
[ಅದ್ವಯ-ಎರಡಲ್ಲದ್ದು, ಏಕೈಕವಾದ. ಮೋಹು (=ಮೋದು?)-ಹೊಡೆ, ತಾಗು, ಸೋಕು. ತೆಱವು-ತೆರವು, ಅವಕಾಶ. ಸಚ್ಚಿನ್ಮಾತ್ರ-ಸತ್ ಚಿತ್ ಮಾತ್ರ (ಯಾವಾಗಲೂ ಇರತಕ್ಕ, ಚೈತನ್ಯ ಮಾತ್ರವಾದ). ಕದಪು-ಕೆನ್ನೆ].

೧೪೬. [1]ವಿಮಳ (ಅ ಕುಮಾ), ಸ್ವೀಪಾ (ಅ).
[ಅಘ-ಪಾಪ].

ಕಂಗಳನು ಕರುಣಿಸಿದನಂಧನೃ-
ಪಂಗೆ ಬಳಿಕೀ ಕೃಷ್ಣರಾಯನ
ಮಂಗಳಶ್ರೀಮೂರ್ತಿಯನು ಮನ[1]ದ[1]ಣಿಯೆ ತಾ ನೋಡಿ ।
ಕಂಗಳಡಗಲಿ ದೇವ ನಿಮ್ಮಾ-
ಯಂಗವಟ್ಟವ ಕಂಡಬಳಿಕೀ
ಕಂಗಳಿತರವ ಕಾಣಲಾಗದು ಕೃಪೆಯ ಮಾಡೆಂದ ॥ ೧೪೭ ॥

ತಾತ ಹೆದಱದಿರೀ ಮುಕುಂದನ
ಕೈತವಕೆ ಬೆಚ್ಚದಿ[1]ರಿ[1] ಸಂಧಿಯ
ಮಾತು ತಾನಿದು ಹೃದಯವೇ ಬೆಸಗೊಳ್ಳಿ ಮುರಹರನ ।
ಈತನಂತರ್ಯಾಮಿ ಜೀವ-
ವ್ರಾತದಲಿ ಜನಜನಿತವೀ ಜಗ-
ವೀತನಾಜ್ಞೆಯೊಳೊಲೆವುದೆಂದನು ಕೌರವರ ರಾಯ ॥ ೧೪೮ ॥

ಎನ್ನ ಹೃದಯದೊಳಿರ್ದ್ದ ಮುಱಿವನು
ಗನ್ನದಲಿ ಸಂಧಿಯನು ರಿಪುಗ[1]ಳೊ-
ಳಿನ್ನು ತಾ ತನ್ನವರೊಳ[ರ್ದೀ]* ನುಡಿವನೀ ಹದನ[1] ।
ಭಿನ್ನನಂತಿರೆ ತೋಱಿ ಭಿನ್ನಾ-
ಭಿನ್ನ[2]ನೆನಿಸಿಯೆ[2] ಮೆಱೆವ ಕಿಳಿಯಲ-
ಭಿನ್ನ[3]ನೀ[3] ಮುರವೈರಿ ನಾವಿನ್ನಂಜಲೇಕೆಂದ ॥ ೧೪೯ ॥

---

೧೪೭. [1]ತ (ಅ), ಸ್ವೀಪಾ (ಕ ಕುಮಾ ಅ).
[ಅಂಗವಟ್ಟ–ಅಂಗಸೌಷ್ಠವ, ದೇಹಸೌಂದರ್ಯ, ಮೈಸೊಬಗು].

೧೪೮. [1]ರು (ಅ), ಸ್ವೀಪಾ (ಪ್ರ k).
[ಕೈತವ–ಮೋಸ. ಈತನಂತರ್ಯಾಮಿ ಜೀವವ್ರಾತದಲಿ–ಎಲ್ಲ ಜೀವರ ಒಳಗೂ ಇರುವ ಪರಮಾತ್ಮ. ಜನಜನಿತ–ಪ್ರಸಿದ್ಧ. ಒಲೆ–ಬಾಗು, ಚಲಿಸು].

೧೪೯. [1]ಳಯೆನ್ನ ತನ್ನವರೆನ್ನದೆಂದೆ ಹೊಯಿದಾಡಿಸುವ ಹದನ (ಕ), ಳ ನಿನ್ನ ತನ್ನವರಿವ ರೊಳಿರ್ದ್ದ ಹದನನಾಡಿಸುವ (ಅ). *ರ್ದ್ದ (ಅ). [2]ನಂತಿರೆ (ಅ), ಸ್ವೀಪಾ (ಪ್ರ ಓ k ಕುಮಾ ಅ). [3]ನೈ (ಅ ಕುಮಾ), ಸ್ವೀಪಾ (ಅ).
[ಗನ್ನ–ಮೋಸ. ಭಿನ್ನನು–ಬೇರೆಯಾಗಿ ಇರುವವನು].

ಹಳಚುವುವು ಹಾಹೆಗಳು ಸೂತ್ರವ
ನಲುಗಿದೊಡೆ ತತ್ಪುಣ್ಯಪಾಪಾ-
ವಳಿಗಳಾ ಹಾಹೆಗಳ[1]ಗುಂಟೇ[1] ಸೂತ್ರಧರನಿರಲು ।
ಕೊಲುವನನ್ಯರನನ್ಯರಿಂದವೆ
ಕೊಲಿಸುವನು ಕಮಲಾಕ್ಷನಲ್ಲದೆ
ಉಳಿದ ಜೀವವ್ರಾತಕೀ ಸ್ವಾತಂತ್ರ್ಯವಿಲ್ಲೆಂದ ॥ ೧೫೦ ॥

ಇಳಿದನವನಿಗೆ ಧಾರಿಣಿಯ ಹೊರೆ-
ಗಳೆಯಲೋಸುಗವಿಲ್ಲಿ ನಮ್ಮೊಳ-
ಗೊಳಗೆ ವೈರವ ಬಿತ್ತಿ ಬಱಿಕೈವನು ಮಹಾಬಲವ ।
ಛಲಕೆ ಮಣಿಯದೆ ರಾವಣಾದಿಗ-
ಳಳಿದ[1]ರಿದಲಾ[1] ಕೀರ್ತಿ ಕಾಯವಿ-
ದಳಿವುದಗ್ಗದ ಕೀರ್ತಿಯುಳಿ[2]ದಿಹುದಂಜ[2]ಲೇಕೆಂದ ॥ ೧೫೧ ॥

ನಾವು ಸಂಧಿಯನೊ[1]ಲಿ[1]ವೆವೆಮ್ಮಯ
ಭಾವದಲಿ ಹುಳುಕಿಲ್ಲ ಸಂಪ್ರತಿ
ದೇವನಭಿಮತವಲ್ಲ ಬಲ್ಲೆನು ಮುರಹರನ [2]ಮನವ[2] ।
ನೀವು ಮೇಗಱಿಯಱಿತದವರೀ
ರಾವಣಾರಿಯು ಬಗೆಯ[3]ನಱಿಯಿರಿ[3]
ಸಾವೆನೀತನ ಕೈಯ ಬಾಯಲಿ ಭೀತಿ ಬೇಡೆಂದ ॥ ೧೫೨ ॥

---

೧೫೦. [1]ಗೊಂದೇ (ಅ), ಸ್ವೀಪಾ (ಸರ್ವತ್ರ).
[ಹಳಚು-ಪ್ರತಿಭಟಿಸು, ತಾಕಲಾಡು. ಹಾಹೆ-(ಸೂತ್ರದ) ಬೊಂಬೆ. ಸೂತ್ರಧರ-ಬೊಂಬೆಗಳ ದಾರವನ್ನು ಹಿಡಿದು ಅವುಗಳನ್ನು ಆಡಿಸುವವನು].

೧೫೧. [1]ರೆಲಾ (ಅ), ಸ್ವೀಪಾ (ಸರ್ವತ್ರ). [2]ದಿರಲಂ (ಅ), ವುದುಅಂ (ಕುಮಾ ಅ); ಸ್ವೀಪಾ (ಪ್ರ ಓ k).
[ಬಱಿಕೈ-ಬರಿದು ಮಾಡು, ನಾಶಮಾಡು. ಕಾಯ-ಶರೀರ. ಅಳಿ-ನಾಶವಾಗು. ಅಗ್ಗದ-ಶ್ರೇಷ್ಠವಾದ].

೧೫೨. [1]ವಿ (ಅ), ಸ್ವೀಪಾ (ಅ ಕುಮಾ). [2]ಬರವ (ಅ ಕುಮಾ), ಸ್ವೀಪಾ (ಪ್ರ ಓ k ಅ). [3]ಬಲ್ಲೆನು (ಅ ಕುಮಾ), ಸ್ವೀಪಾ (ಪ್ರ ಓ k ಅ).
[ಹುಳುಕು-ದೋಷ, ಕಳಂಕ. ಸಂಪ್ರತಿ-ಸಂಧಾನ. ಮೇಗಱು-ಮೇಲಿನ ಅಂಚು, ಮೇಲ್ಭಾಗ, ಮೇಲುಮೇಲಿನ. ಅಱಿತ-ತಿಳಿವಳಿಕೆ. ಕೈಯಬಾಯಲಿ-ಕೈಯಿಂದ, ಕೈಯ ಮುಖಾಂತರ].

ಮಣಿದು ಬದುಕುವವನಲ್ಲ ಹಗೆಯಲಿ
ಸೆಣಸಿ ಬಿಡುವವನಲ್ಲ ದಿಟ ಧಾ-
ರಿಣಿಯು ಸಿರಿ[1]ಗೆಳಸು[1]ವವನಲ್ಲಳುಕಿಲ್ಲ ಕಾಯದಲಿ ।
ರಣಮಹೋತ್ಸವವೆನ್ನ ಮತ ಕೈ-
ದಣಿಯೆ ಹೊಯ್ದಾಡುವೆನು ಕೃಷ್ಣನ
ಕೆಣಕಿದಲ್ಲದೆ ವಹಿಲದಲಿ ಕೈವಲ್ಯವಿಲ್ಲೆಂದ ॥ ೧೫೩ ॥

[1]ಎನಲು ನಸು[1]ನಗುತಸುರರಿಪು ಮು-
ನ್ನಿನ [2]ಮನುಷ್ಯಾ[2]ಕಾರವನು ಮಗು-
ಳನುಕರಿಸಿ ಧೃತರಾಷ್ಟ್ರಭೀಷ್ಮರಿಗೆಂದನೀ ಹದನ ।
[3]ಜನಪ ಕೌರವ ಪಾಂಡುನಂದನ-
ರೆನಗೆ ಸರಿಯೀ ಚಿಂತೆಯೆ[3]ಮಗೇ-
ಕೆನುತ ರಾಜಾಲಯವನಸುರಧ್ವಂಸಿ ಹೊಱವಂಟ ॥ ೧೫೪ ॥

ಬಂದು ವಿದುರನ ಮನೆಗೆ ದೇವ ಮು-
ಕುಂದ ಕುಂತಿಯ ಕರೆದು ನಿನ್ನಯ
ಕಂದರೈವರ ಮೇಲೆ ಕೌರವನೃಪನ ಖತಿ [1]ಹಿರಿದು[1] ।
ಇಂದು ಮುಱಿದುದು ಸಂಧಿ ನಿನ್ನಯ
ಕಂದ ಕರ್ಣನ ಬೇಡಿಕೊಳು ನೀ-
ನೆಂದು [2]ಸೂಚಿಸಿ[2] ಮರಳಿದನು ಮುರವೈರಿ ಹರುಷದಲಿ ॥ ೧೫೫ ॥

---

೧೫೩. [1]ಗಳುವು (ಅ ಕುಮಾ), ಸ್ವೀಪಾ (ಪ್ರ k ಅ).
[ಎಳಸು-ಅಪೇಕ್ಷಿಸು, ಬಯಸು. ವಹಿಲ-ಬೇಗ. ಕೈವಲ್ಯ-ಮೋಕ್ಷ].

೧೫೪. [1]ಮನದೊಳಗೆ (ಪ್ರ k ಅ). [2]ಸರೂಪಾ (ಅ), ಸ್ವೀಪಾ (ಪ್ರ k ಕುಮಾ ಅ). [3]ಘನಸುಯೋಧನ ಪಾಂಡುವಿನ ನಂದನರೊಳಾದ ವಿವಾದ ನ (ಅ ಕುಮಾ), ಸ್ವೀಪಾ (ಪ್ರ ಓ k ಅ).

೧೫೫. [1]ಬಲುಹು (ಅ). [2]ನೇಮಿಸಿ (ಅ ಕುಮಾ), ಸ್ವೀಪಾ (ಪ್ರ k ಅ).

ನಯದೊಳೇಕಾಂತದಲಿ ಸಲೆ ತೋ-
ಱಿಯೆ ನುಡಿವುದವನಾಸೆಯನು ನೀವ್
ಬಯಸಲಾಗದು ಹಿತವನೇ [1]ಮಾಡುವುದು[1] ಕುರುಕುಲಕೆ ।
ನಿಯತವಿದು ಪಾಂಡವರೊಡನೆ ಸಂ-
ಧಿಯೆ [2]ಸರಸ[2] ಸಮ[3]ರಾ[3]ಂಗವೀಯ-
ನ್ವಯಕೆ ನಿರ್ಣಯವೆಂದು ನೀವಾತಂಗೆ [4]ಹೇಳುವುದು[4] ॥ ೧೫೬ ॥

ಎಂದು ಗಾಂಗೇಯಾದಿಗಳನರ-
ವಿಂದನಾಭನು ಬೀಳುಕೊಟ್ಟನು
ನಿಂದನಾ ರವಿಸುತನ ಕರೆದನು ರಥದ ಹೊರೆಗಾಗಿ ।
ಬಂದು ಕಿಱಿದೆಡೆಗಾಗಿ ಕಳುಹುವು-
ದೆಂದು ನೇಮಿಸಿ ಬಳಿಕ ತಾಪಸ-
ವೃಂದವನು [1]ಕಳುಹಿದನು ಗದುಗಿನ ವೀರನಾರಯಣ[1] ॥ ೧೫೭ ॥

---

೪ ಕರ್ಣನನ್ನು ಭೇದಿಸಿದ್ದು

ಇನತನೂಜನ ಕೂಡೆ ಮೈದುನ-
ತನದ ಸರಸವನೆಸಗಿ ರಥದೊಳು
ದನುಜರಿಪು ಬರಸೆಳೆದು ಕುಳ್ಳಿರಿಸಿದನು ಪೀಠದಲಿ ।
ಎನಗೆ ನಿಮ್ಮಡಿಗಳಲಿ ಸಮಸೇ-
ವನೆಯೆ ದೇವ ಮುರಾರಿಯಂಜುವೆ-
ನೆನಲು ತೊಡೆಸೋಂಕಿನಲಿ ಸಾರಿದು ಶೌರಿ ಯಿಂತೆಂದ ॥ ೧೫೮ ॥

---

೧೫೬. [1]ಬಯಸುವುದು (ಪ್ರ ಓ k ಅ). [2]ದರ (ಅ), ಸ್ವೀಪಾ (ಓ ಅ ಕುಮಾ). [3]ರಂ (ಅ), ಸ್ವೀಪಾ (ಓ ಕುಮಾ ಅ). [4]ಸಾರುವುದು (ಪ್ರ k ಅ).
[ಸಲೆ-ಹೆಚ್ಚಾಗಿ. ನಿಯತ-ನಿಶ್ಚಿತ, ಅಚಲ. ಅನ್ವಯ-ವಂಶ. ನಿರ್ಣಯ-ಅಂತ್ಯ, ಕೊನೆ].

೧೫೭. [1]ಕಾರುಣ್ಯನಿಧಿ ಗದುಗಿನ ವೀರನಾರಯಣ (ಅ ಕುಮಾ), ಸ್ವೀಪಾ (ಪ್ರ ಓ k ಅ).

೧೫೮. [ಎಸಗು-ಮಾಡು].

ಭೇದವಿಲ್ಲೆಲೆ ಕರ್ಣ [1]ನಿರ್ಮ್ಮಳು-[1]
ಯಾದವರು ಕೌರವರೊಳಗೆ ಸಂ-
ವಾದಿಸಿದೊಡನ್ವಯದ ಮೊದಲೆರಡಿಲ್ಲ ನಿನ್ನಾಣೆ ।
ಮೇದಿನೀಪತಿ ನೀನು ಚಿತ್ತದೊ-
ಳಾದುದಱಿವಿಲ್ಲೆನುತ ದಾನವ-
ಸೂದನನು ರವಿಸುತಗೆ ಕಿವಿಯಲಿ ಬಿತ್ತಿದನು [2]ಭಯ[2]ವ ॥ ೧೫೯ ॥

ದಾನವಾಂತಕ ಬೆಸಸು ವಂಶವಿ-
ಹೀನನನು ನಿಮ್ಮಡಿಗಳೊಡನೆ ಸ-
ಮಾನಿಸುವರೇ ಸಾಕೆನುತ ರವಿಸೂನು ಕೈಮುಗಿ[1]ಯೆ[1] ।
ಮಾನನಿಧಿ [2]ನನ್ನಾಣೆ[2] ಬಾರೈ
ನೀನು ನಮ್ಮೆಲ್ಲರ ಹವಣೆ ವರ-
ಭಾನುವಂಶಲಲಾಮ ನೀ ರಾಮಂಗೆ ಸರಿಯೆಂದ ॥ ೧೬೦ ॥

ಕಳೆದುಕೊಂಡನು ಪೀಳೆಯವನಂ-
ಜುಳಿಯಲಾತಂಗಿತ್ತು ಕರ್ಣನ
ಕೆಲಕೆ ಬರಸೆಳೆದವನ ಕರದೊಳು ಕರತಳವನಿಕ್ಕಿ ।
ಎಲೆ ದಿವಾಕರತನಯ ನಿನ್ನಯ
ಕುಲವನಱಿಯೆಯಲಾ ಸುಯೋಧನ-
ನಲಿ ವೃಥಾ ಸೇವಕತನದಲಿಹುದುಚಿತವಲ್ಲೆಂದ ॥ ೧೬೧ ॥

ಲಲನೆ ಪಡೆ[1]ದಾ[1] ಅಯ್ದು ಮಂತ್ರಂ-
ಗಳಲಿ ಮೊದ[2]ಲಿಗ[2] ನಿನ್ನನಂತರ-
ದಲಿ ಯುಧಿಷ್ಠಿರದೇವ ಮಾಱಜನೆಯಾತ ಕಲಿಭೀಮ ।

೧೫೯. [1]ನಿರ್ಮಳ (ಅ), ಸ್ವೀಪಾ (ಸರ್ವತ್ರ). [2]ವಿಷ (ಕ).
[ಸಂವಾದಿಸು–ಸರಿಸಮಾನವಾಗಿ ನೋಡು. ಮೊದಲು–ಮೂಲ].

೧೬೦. [1]ಡು (ಅ), ಸ್ವೀಪಾ (ಓ ಪ್ರ k). [2]ನಿನ್ನಾಣೆ (ಆ ಕುಮಾ ಅ), ಸ್ವೀಪಾ (ಕ).
[ವಂಶವಿಹೀನ–ಹೀನವಂಶದವನು. ಸಮಾನಿಸು–ಸರಿಸಮಾನವಾಗಿ ಕಾಣು. ಹವಣು–ವ್ಯಕ್ತಿತ್ವದ ಪ್ರಮಾಣ. ಭಾನುವಂಶ–ಸೂರ್ಯವಂಶ. ರಾಮ–ಪರಶುರಾಮ].

೧೬೧. [ಅಂಜುಳಿ(=ಅಂಜಲಿ)–ಬೊಗಸೆ. ಬರಸೆಳೆದು–ಹತ್ತಿರಕ್ಕೆ ಸೆಳೆದುಕೊಂಡು. ಕರತಳ–ಅಂಗೈ].

೧೬೨. [1]ದೀ (ಅ), ಸ್ವೀಪಾ (ಕ). [2]ಲಲಿ (ಅ), ಸ್ವೀಪಾ (ಸರ್ವತ್ರ).

ಫಲುಗುಣನು ನಾಲ್ಕನೆಯಲಯ್ದನೆ-
ಯಲಿ ನಕುಲಸಹದೇವರಾದರು
ಬಳಿಕ ಮಾದ್ರಿಯಲೊಂದು ಮಂತ್ರದೊಳಿಬ್ಬರುದಿಸಿದರು ॥ ೧೬೨ ॥

ಅದರಿಂ ನೀ ಪಾಂಡವರಲಯ್ವರ
ಮೊದಲಿಗನು ನೀನಿರಲು ಧರಣಿಯು
ಕದನವಿತ್ತಂಡಕ್ಕೆ ಕಾಮಿತವಲ್ಲ [1]ಭಾವಿಸಲು[1] ।
ಇದು ನಿಧಾನವು ಕರ್ಣ ನಿನ್ನ-
ಭ್ಯುದಯವನೆ ಬಯಸುವೆನು ನಿನ್ನಯ
ಪದಕೆ ಕೆಡಹುವೆನಯ್ವರನು [2]ಬಹುದೆನ್ನ[2] ಸಂಗಾತ ॥ ೧೬೩ ॥

ನಿನಗೆ ಹಸ್ತಿನಪುರದ ರಾಜ್ಯದ
ಘನತೆಯನು ಮಾಡುವೆನು ಪಾಂಡವ-
ಜನಪ ಕೌರವಜನಪರೋಲೈಸುವರು ಗದ್ದುಗೆಯ ।
ನಿನಗೆ ಕಿಂಕರ[1]ರೆ[1]ರಡು ಸಂತತಿ-
ಯೆನಿಸಲೊಲ್ಲದೆ ನೀನು ದುರ್ಯೋ-
ಧನನ ಬಾಯ್ದಂಬುಲಕೆ ಕೈಯಾನುವರೆ ಹೇಳೆಂದ ॥ ೧೬೪ ॥

ಎಡದ ಮೈಯಲಿ ಕೌರವೇಂದ್ರರ
ಗಡಣ ಬಲದಲಿ ಪಾಂಡುತನಯರ
ಗಡಣವಿದಿರಲಿ ಮಾದ್ರಮಾಗಧಯಾದವಾದಿಗಳು ।
ನಡುವೆ ನೀನೋಲಗದೊಳೊಪ್ಪುವ
ಕಡುವಿಳಾಸವ ಬಿಸುಟು ಕುರುಪತಿ
ನುಡಿಸೆ ಜೀಯ ಹಸಾದವೆಂಬುದು ಕಷ್ಟ ನಿನಗೆಂದ ॥ ೧೬೫ ॥

---

೧೬೩. [1]ನೀನಿರಲು (ಅ), ಸ್ವೀಪಾ (ಸರ್ವತ್ರ). [2]ನಡೆತನ್ನ (ಅ ಕುಮಾ), ನಡೆಯೆನ್ನ (ಅ); ಸ್ವೀಪಾ (ಪ್ರ ಓ k).
[ಕಾಮಿತ-ಬಯಸತಕ್ಕದ್ದು, ಅಪೇಕ್ಷಿಸತಕ್ಕದ್ದು].

೧೬೪. [1]ವೆ (ಅ ಕುಮಾ), ಸ್ವೀಪಾ (ಕ ಓ).
[ಕೈಯಾನು-ಕೈಯೊಡ್ಡು].

೧೬೫. [ಮೈಯಲಿ-ಪಕ್ಕದಲ್ಲಿ. ಗಡಣ-ಸಮೂಹ. ಮಾದ್ರ-ಶಲ್ಯ. ಮಾಗಧ-ಜರಾಸಂಧನ ಮಗ—ಇವನು ಕೌರವರ ಕಡೆ ಹೋರಾಡಿ ಮಡಿದನು].

ಶೌರಿಯದಲಿದಿರಿಲ್ಲ ಕುಲದಲಿ
ಸೂರಿಯನ ಮಗನೊಡನೆ ಹುಟ್ಟಿದ
ವೀರ[1]ರಗ್ಗದ[1] ಪಾಂಡುತನಯರು ನಿನ್ನ ವೈಭವಕೆ ।
ಆರು ಸರಿಯೈ ಕರ್ಣ ನಡೆ ನಡೆ
ಧಾರಿಣೀಪತಿಯಾಗು ನೀನಿರೆ
ವೈರವಿತ್ತಂಡಕ್ಕೆ ಬಳಿಕಿಲ್ಲೆಂದನಸುರಾರಿ ॥ ೧೬೬ ॥

ಕೊರಳ ಸೆರೆ ಹಿಗ್ಗಿದವು ದೃಗುಜಲ
ಉರವಣಿಸಿ ಕಡುನೊಂದನಕಟಾ
ಕುರುಪತಿಗೆ ಕೇಡಾದುದೆಂದನು ತನ್ನ ಮನದೊಳಗೆ ।
ಹರಿಯ ಹಗೆ ಹೊಗೆದೋಱದುರುಹದೆ
ಬಱಿದೆ ಹೋಹುದೆ ತನ್ನ ವಂಶವ-
ನಱುಹಿ ಕೊಂದನು ಹಲವು ಮಾತೇನೆಂದು ಚಿಂತಿಸಿದ ॥ ೧೬೭ ॥

ಕಾದಿ ಕೊಲುವೊಡೆ ಪಾಂಡುಸುತರು ಸ-
ಹೋದರರು ಕೊಲಲಿಲ್ಲ ಕೊಲ್ಲದೆ
ಕಾದೆನಾದೊಡೆ ಕೌರವಂಗವನಿಯಲಿ ಹೊಗಲಿಲ್ಲ ।
ಭೇದದಲಿ ಹೊಕ್ಕಿಱಿದನೋ ಮಧು-
ಸೂದನಕಟಕಟೆನುತ ಘನ ಚಿಂ-
ತೋದಧಿಯಲದ್ದವೊಲು ಮೌನದೊಳಿದ್ದನಾ ಕರ್ಣ ॥ ೧೬೮ ॥

ಏನು [1]ಹೇ[1]ಳೈ ಕರ್ಣ ಚಿತ್ತ-
ಗ್ಲಾನಿಯಾವುದು [2]ನಿನಗೆ[2] ಕುಂತೀ-
ಸೂನುಗಳ ಬೆಸಕೈಸಿಕೊಂಬುದು ಸೇರದೇ ನಿನಗೆ ।

---

೧೬೬. [1]ರೈವರು (ಅ ಕುಮಾ), ಸ್ವೀಪಾ (ಕ ಓ ಅ).
[ಶೌರಿಯ-ಶೌರ್ಯ, ಪರಾಕ್ರಮ. ಸೂರಿಯ-ಸೂರ್ಯ. ಅಗ್ಗ-ಶ್ರೇಷ್ಠ].

೧೬೭. [ಸೆರೆ-ರಕ್ತನಾಳ, ನರ. ದೃಗುಜಲ-ಕಣ್ಣೀರು. ಉರವಣಿಸು-ಅಧಿಕವಾಗು, ಹೆಚ್ಚಾಗು. ಉಱುಹು-ಸುಟ್ಟುಹಾಕು].

೧೬೮. ಕೊಲಲಿಲ್ಲ-ಕೊಲ್ಲಲವಕಾಶವಿಲ್ಲ. ಹೊಗಲಿಲ್ಲ-ಹೋಗಲು, ಹೋಗಿ ನೆಲಸಲು, ಸ್ಥಳವಿಲ್ಲ. ಹೊಕ್ಕಿಱಿ-ಒಳಹೊಕ್ಕು ಕೊಲ್ಲು. ಚಿಂತೋದಧಿ-ಚಿಂತೆಯೆಂಬ ಸಮುದ್ರ. ಅದ್ದು-ಮುಳುಗು].

೧೬೯. [1]ಪೇ (ಅ), ಸ್ವೀಪಾ (ಸರ್ವತ್ರ). [2]ಮನಕೆ (ಅ), ಸ್ವೀಪಾ (ಓ).
[ಚಿತ್ತಗ್ಲಾನಿ-ಮನಸ್ಸಿನ ಕ್ಷೋಭೆ. ಅಪದೆಸೆ-ದುರ್ಗತಿ].

ಹಾನಿಯಿಲ್ಲೆನ್ನಾಣೆ ನುಡಿನುಡಿ
ಮೌನವೇತಕೆ ಮರುಳುತನ ಬೇ-
ಡಾನು ನಿನ್ನಪದೆಸೆಯ ಬಯಸುವನಲ್ಲ ಕೇಳೆಂದ ॥ ೧೬೯ ॥

ಮರುಳುಮಾ[1]ಧ[1]ವ ಮಹಿಯ ರಾಜ್ಯದ
ಸಿರಿಗೆ ಸೋಲುವನಲ್ಲ ಕೌಂತೇ-
ಯರು ಸುಯೋಧನರೆನಗೆ ಬೆಸಕೈವಲ್ಲಿ ಮನವಿಲ್ಲ ।
ಹೊರೆದ ದಾತಾರಂಗೆ ಹಗೆವರ
ಶಿರವನರಿದೊಪ್ಪಿಸುವೆನೆಂಬೀ
ಭರದೊಳಿರ್ದೆನು ಕೌರವೇಂದ್ರನ ಕೊಂದೆ ನೀನೆಂದ ॥ ೧೭೦ ॥

ಒಡನೆ ಹುಟ್ಟಿದೆವೆಂಬ ಕಥನವ-
ನೆಡೆಗುಡದೆ ಬಣ್ಣಿಸಿದೆ [1]ವಿಜಯನ
[ಅಡಗ][1] ಬಾಣಕೆ ಬಲಿಯನಿಕ್ಕುವ [2]ಛಲವ ಮಾಣಿಸಿದೆ[2] ।
ನುಡಿದು ಫಲವೇನಿನ್ನು [3]ಕೇಳೆ-
ನ್ನೊ[3]ಡೆಯನಾದಂತಹೆನು ಬಾರೆನು
ಪೊಡವಿಯಲಿ ನೀ ಹರಹಿಕೊಳು ನಿನ್ನವರ ನಿಲಿಸೆಂದ ॥ ೧೭೧ ॥

ವೀರಕೌರವರಾಯನೇ ದಾ-
ತಾರನಾತನ ಹಗೆಯೆ ಹಗೆ ಕೈ-
ವಾರವೇ ಕೈವಾರವಾದಂತಹೆನು ಕುರುನೃಪತಿ ।
ಶೌರಿ ಕೇಳೈ ನಾಳೆ ಸಮರದ
[1]ಭಾರದೊಳು[1] ತೋಜುವೆನು ನಿಜಭುಜ-
[2]ಶೌರಿಯದ[2] ಸಂಪನ್ನತನವನು ಪಾಂಡುತನಯರಲಿ ॥ ೧೭೨ ॥

---

೧೭೦. [1]ಡು (ಅ). ಸ್ವೀಪಾ (ಸರ್ವತ್ರ).
[ದಾತಾರ-ದಾನಿ, ದಾತೃ. ಅರಿದು-ಕತ್ತರಿಸಿ. ಭರ-ಉತ್ಸಾಹ].

೧೭೧. [1]ವಿಜಯನ ನಗಡು (ಅ), ವಿಜಯನಗಡು (ಕುಮಾ), ಪಾಂಡವರಡಗು (ಅ), ವಿಜಯನ ಅಡಗು (ಓ ಕ). [2]ಹದನ ಮಾಡಿಸಿದೆ (ಅ), ಸ್ವೀಪಾ (ಕ ಓ k ಪ್ರ). [3]ಕೌರವರೊ (ಅ ಕ).
[ಎಡೆಗುಡದೆ-ನಿರಂತರವಾಗಿ, ಒಂದೇ ಸಮನೆ. ಅಡಗು-ಮಾಂಸ. ಹರಹಿಕೊಳು-ಕೀರ್ತಿವಂತನಾಗು. ನಿಲಿಸು-ಉಳಿಸು, ಕಾಪಾಡು].

೧೭೨. [1]ಸಾರದಲಿ (ಅ ಕುಮಾ), ಸ್ವೀಪಾ (ಓ ಕ ಅ). [2]ವಾಽತೆಯ (ಅ), ಸ್ವೀಪಾ (ಓ ಕ ಅ ಕುಮಾ).
[ದಾತಾರ-ದಾನಿ. ಕೈವಾರ-ಹೊಗಳಿಕೆ, ಪ್ರಶಂಸೆ. ಭಾರ-ಹೆಚ್ಚಳ, ರಭಸ].

ನೋಡಿ ತಣಿಯನು ಬಿರುದ ಹೊಗಳಿಸಿ
ಹಾಡಿ ತಣಿಯನು ನಿಚ್ಚಲುಚಿತವ
ಮಾಡಿ ತಣಿಯನು ಮಾನನಿಧಿಯನದೆಂತು ಮಱೆದಪೆನು ।
ಕಾಡಲಾಗದು ಕೃಷ್ಣ ಖಾತಿಯ
ಮಾಡಲಾಗದು ಬಂದೆನಾದೊಡೆ
ರೂಢಿ ಮೆಚ್ಚದು ಕೌರವನ ಹಗೆ ಹರಿಬ ತನಗೆಂದ ॥ ೧೭೩ ॥

ಎನಲು ಕರ್ಣನ ದೃಢವ ಕಂಡನು
ಮನದೊಳುತ್ಸಾಹಿಸಿದನಾದೊಡೆ
ತನಯರೈವರ ಹದನು ನಿನ್ನದು ಬಲುಹ ಮಾಡುವೊಡೆ ।
ಮನಕೆ ಖತಿಯಹುದಱುಹದಿರ್ದೊಡೆ
ತನಗೆ ಗುಣವಲ್ಲೆಂಬ ಕಾರಣ-
ವಿನಿತ [1]ನಾನಱುಹಿ[1]ದೆನು ನೀ ಸುಖಿಯಾಗು ಹೋಗೆಂದ ॥ ೧೭೪ ॥

ಬಂದೊಡೊಳ್ಳಿತು ಬಾರದಿದ್ದೊಡೆ
ಕಂದ ಕೇಳೈ ಮಧುರವಚನದಿ
ಮಂದಮತಿಯನು ತಿಳುಹಿ ತಮ್ಮಂದಿರಿಗೆ ರಾಜ್ಯವನು ।
ಇಂದು ಕೊಡಿಸುವುದುಚಿತ ಸಂಪ್ರತಿ-
[1]ಗಿಂ[1]ದು ಸೇರಿಸು ನಿನ್ನ ಮಾತನು
ಹಿಂದುಗಳೆಯನು ಕೌರವೇಶ್ವರನೆಂದನಸುರಾರಿ ॥ ೧೭೫ ॥

---

೧೭೩. [ನಿಚ್ಚ-ನಿತ್ಯ. ಉಚಿತ-ಕೊಡುಗೆ, ಬಹುಮಾನ. ಖಾತಿ-ಕೋಪ].

೧೭೪. [1]ನೊಡ್ಡೈಸಿ (ಅ ಕುಮಾ).

[ಬಲುಹು-ಬಲಾತ್ಕಾರ. ಖತಿ-ನೋವು, ದುಃಖ].

೧೭೫. [1]ಗೆ (ಅ), ಸ್ವೀಪಾ (ಓ ಕುಮಾ ಅ).

[ಹಿಂದುಗಳೆ-ತೆಗೆದುಹಾಕು, ತಿರಸ್ಕರಿಸು].

ಮಸೆದುದಿತ್ತಂಡದಲಿ ಮತ್ಸರ-
[1]ವಷಮಸಂಗರವೀಗ[1] [2]ಸಂಧಿಯ-[2]
ನುಸಿರಿದೊಡೆ ಮನಗಾ[3]ಣ[3]ನೇ ಕೌರವಮಹೀಶ್ವರನು ।
[4]ವಿಶಸನದ[4] ಕಟ್ಬಾಳು ಮಂತ್ರ[5]ವ-
ನೆಸಗ[5]ಲಾಗದು ತನ್ನ ವೀ[6]ರತೆ[6]
[7]ಮು[7]ಸುಳಹುದು ಮುರವೈರಿ ಸಂಧಿಯನಱಿಯೆ ನಾನೆಂದ ॥ ೧೭೬ ॥

ಕಳುಹಬೇಹುದು ದೇವ ದಿನಪತಿ
ಯಿಳಿದನಪರಾಂಬುಧಿಗೆ ಸಂಪ್ರತಿ-
ಯಳಿದ ಹೊತ್ತಿಂದೀಗ ನೆಟ್ಟನೆ ನೀವು ಪಾಂಡವರು ।
ಹುಲುಸರವಿ ಹಾವಹುದು ಹುತ್ತಿನ
[1]ತಲೆ[1]ಯಲಿರಲಜ್ಞ[2]ರಿ[2]ಗೆ ಹಿಸುಣರ
ಬಳಕೆ ಹೊಗುವುದು ಕಳುಹಬೇಕೆಂದೆಱಗಿದನು ಕರ್ಣ ॥ ೧೭೭ ॥

ಬೀಳುಕೊಂಡನು ಮನೆಗೆ ಬಂದು ವಿ-
ಶಾಲಮತಿ [1]ಬಿಸುಸುಯ್ದು[1]ನಾ ಸಿರಿ-
ಲೋಲ ಮಾಡಿದ ಮಂತ್ರ ಮನದಲಿ ನಟ್ಟು [2]ಬೇರ್ವರಿಯೆ[2] ।
ಕಾಳುಮಾಡಿದನಕಟ ಕೌರವ
ಬಾಳಲಱಿಯದೆ ಕೆಟ್ಟನೀ ಗೋ-
ಪಾಲ ಬಱಿದೇ ಬಿಡನು ಜೀವವ ಕೊಳ್ಳದಿರನೆಂದ ॥ ೧೭೮ ॥

---

೧೭೬. [1]ಪಸರಿಸಿತು ತಾನೀಗ (ಅ), ಸ್ವೀಪಾ (k ಓ ಅ ಕುಮಾ). [2]ನೀತಿಯ (ಅ ಅ ಕುಮಾ), ಸ್ವೀಪಾ (ಓ). [3]ಣ್ಬ (ಅ), ಸ್ವೀಪಾ (ಅ ಕುಮಾ). [4]ವಿಷಮವದು (ಅ), ವಿಷಮನದ (ಅ); ಸ್ವೀಪಾ (ಪ್ರ k ಕುಮಾ). [5]ದೊಳೆಸಗ (ಅ), ಸ್ವೀಪಾ (ಅ ಕುಮಾ). [6]ರಕೆ (ಕುಮಾ ಅ). [7]ನು (ಅ), ಸ್ವೀಪಾ (ಓ ಅ ಕುಮಾ).
[ವಿಶ(ಸ)ಸನ-ಯುದ್ಧ, ಕಾಳಗ. ಮಸುಳು-ಕಾಂತಿಹೀನತೆ, ಮಂಕು].

೧೭೭. [1]ಬಳಿ (ಕ ಅ). [2]ನಿ (ಅ), ಸ್ವೀಪಾ (ಅ ಕ ಕುಮಾ).
[ದಿನಪತಿ-ಸೂರ್ಯ. ಅಪರಾಂಬುಧಿ-ಪಶ್ಚಿಮ ಸಮುದ್ರ. ಹುಲುಸರವಿ-ಹುಲ್ಲಿನ ಹಗ್ಗ. ಹಿಸುಣ-ಚಾಡಿಕೋರ].

೧೭೮. [1]ಚಿಂತಿಸಿದ (ಅ ಕುಮಾ), ಸ್ವೀಪಾ (ಕ). [2]ಬೇರೂರಿ (ಅ), ಸ್ವೀಪಾ (ಪ್ರ ಕ k ಓ ಅ).
[ಕಾಳುಮಾಡು-ಕೆಡಕುಮಾಡು].

ವೀರ ರವಿಸುತನೊಂದುದಿನ ರವಿ-
ವಾರದಲಿ ಪರಿತೋಷ ಮಿಗೆ ಭಾ-
ಗೀರಥೀತೀರದಲಿ ತಾತಂಗರ್ಘ್ಯವನು ಕೊಡುತ ।
[1]ಸೌರ[1]ಮಂತ್ರವ ಜಪಿಸುತಿರ[2]ಲೌ-
ದಾರಿಯುದ ಸುರತರುವ[2] ಕುಂತೀ-
ನಾರಿ ಕಾಣಲು ಬಂದಳಾತ್ಮಜನಿದ್ದ ನದಿಗಾಗಿ ॥ ೧೭೯ ॥

ಬರಲು ತಾಯ್ಗಿದಿರಾಗಿ ರವಿಸುತ-
ನಿರದೆ ಬಂದನು ದಂಡದಂತಿರೆ
ಚರಣದಲಿ ಮೈಯಿಕ್ಕಲಾತನ ನೊಸಲ ನೆಗಹಿದಳು ।
ಬರಸೆಳೆದು ಬಿಗಿಯಪ್ಪಿದಳು ನೀ-
ರುರವಣಿಸಿದವು ನಯನದಲಿ ಸೆರೆ
ಕೊರಳಿಗೌಕಿದುದಳಲಿನಬುಧಿಯೊಳ[1]ದ್ದ[1]ಳಾ ಕುಂತಿ ॥ ೧೮೦ ॥

ಮಗನೆ ತಮ್ಮಂದಿರನು ಪಾಲಿಸು
ವಿಗಡತನವನು ಮಾಣು ನೀನೋ-
ಲಗಿಸುವರೆ ಕುರುಪತಿಯು ನಿನ[1]ಗಿತ್ತಂಡವನುಜರಲೆ[1] ।
ಸೊಗಸು ತಾನೆಂದುದನು ಹಿಸುಣರ
[2]ಹೊಗೆನುಡಿಯ[2] ಕೇಳದಿರು [3]ಪಟ್ಟವ
ಬಿಗಿಸಿಕೊಳು[3] ಸಲಿಸೆನ್ನ ವಚನವನೆಂದಳಾ ಕುಂತಿ ॥ ೧೮೧ ॥

---

೧೭೯. [1]ಸಾರ (ಅ ಕುಮಾ), ಸ್ವೀಪಾ (ಪ್ರ ಓ k ಅ). [2]ಲುದಾರಸುರಭೂಜನನು (ಅ), ಸ್ವೀಪಾ (ಪ್ರ ಓ k ಅ ಕುಮಾ).

[ತಾತ-ತಂದೆ (=ಸೂರ್ಯ). ಸೌರ-ಸೂರ್ಯಸಂಬಂಧವಾದ].

೧೮೦. [1]ಲ್ದ (ಅ ಕುಮಾ), ಸ್ವೀಪಾ (ಕ ಅ).

[ದಂಡ-ಕೋಲು. ನೊಸಲು-ಹಣೆ. ನೆಗಹು-ಮೇಲಕ್ಕೆ ಎತ್ತು. ನಯನ-ಕಣ್ಣು. ಅದ್ದು-ಮುಳುಗು].

೧೮೧. [1]ಗವರಿದಿರೆಯಿತ್ತಂಡ (ಅ ಕುಮಾ), ಸ್ವೀಪಾ (ಓ ಪ್ರ k ಅ). [2]ಬಗೆಯನೀ (ಅ ಕುಮಾ), ಹಗೆನುಡಿಯ (ಅ); ಸ್ವೀಪಾ (ಪ್ರ k). [3]ನೀ ಮನ ಬಿಗಿಸದಿರು (ಅ ಕುಮಾ), ಸ್ವೀಪಾ (ಪ್ರ ಓ k ಅ).

[ಸೊಗಸು-ಒಪ್ಪಿಕೋ. ಹಿಸುಣ-ಚಾಡಿಕೋರ. ಹೊಗೆನುಡಿ-ನಿರಾಧಾರವಾದ ಮಾತು, ಕರ್ಣಾಕರ್ಣಿಕೆಯ ಮಾತು].

ಕಾಯಹುದು [1]ನಾ[1] ಬಲ್ಲೆ [2]ನಿದನಾ-
ಕಾಯಜನ ಪಿತನಱುಹೆ ತಿಳಿದೆನು
ರಾಯರಿತ್ತಂಡಕ್ಕೆ[2] ಪಟ್ಟದ ಹಿರಿಯ ತಾನಹುದು ।
ರಾಯನೆನ್ನನು ನಚ್ಚಿ ಹೊರೆದನು
ಸಾಯಲಳುಕುವೆನೇ ಸುಡೇತಱ-
ದೀ ಯಿಳೆಯ ಬಾಳಿಕೆ ಕೃತಘ್ನತೆಗಿಲ್ಲ ಗತಿಯೆಂದ ॥ ೧೮೨ ॥

ಇಂದು ನೀವಱುಹಿದ ಬಳಿಕ ರವಿ-
ನಂದನ[1]ನೆ[1] ಯೆಂದಱಿದೆನಲ್ಲದೆ
ಹಿಂದೆ ದುರ್ಯೋಧನನದಾವುದ ನೋಡಿ ಸಲಹಿದನು ।
ಬಂದು ಪಾಂಡವರೊಡನೆ ಕೂಡಿದ-
ರಿಂದು [2]ಬಹುಪದಕೀರ್ತಿ ನಿಮ್ಮಡಿ
ಬಂದ ಕಾರ್ಯವ ಬೆಸಸಿ ಬೇಗದೊಳೆಂದನಾ ಕರ್ಣ[2] ॥ ೧೮೩ ॥

ಆದೊಡೈವರು ಮಕ್ಕಳನು ತಲೆ-
ಗಾದು ತೋಱ್ಕೈ ಕಂದ ನಿನ[1]ಗಿ-
ನ್ನೇ[1] ದುರಾಗ್ರಹ ವೊಪ್ಪುವುದೆ ಕೌರವನ ಸೇವೆಯಲಿ ।
ಹೋದ ಬಾಣವ ಮರಳಿ ತೊಡದಿರು
ಮಾದು ಕಳೆ ವೈರವನೆನಲ್ಕೆ ಹ-
ಸಾದವೆಂದನು ಬೀಳು[2]ಕೊಂಡನು[2] ಬಂದನರಮನೆಗೆ ॥ ೧೮೪ ॥

---

೧೮೨. [1]ತಾ (ಅ ಕುಮಾ), ಸ್ವೀಪಾ (ಅ). [2]ನದು । ಸಂಜಾಯತವು ಪಾಂಡವರು ತಮ್ಮದಿ।ರೀ ಯುಭಯ ರಾಯರಲಿ (ಅ ಕುಮಾ), ಸ್ವೀಪಾ (ಪ್ರ ಓ k ಅ). [ಕಾಯಜನಪಿತ–ಮನ್ಮಥನ ತಂದೆ, ವಿಷ್ಣು (=ಕೃಷ್ಣ)].

೧೮೩. [1]ನು (ಅ ಕುಮಾ ಅ), ಸ್ವೀಪಾ (ಓ). [2]ಶೌರಿಯ ಮಾತದಂತಿರ।ಲಿಂದು ನಿಮ್ಮಡಿ ಬಂದ ಕಾರ್ಯವ ಬೆಸಸಿ ನೀವೆಂದ (ಅ), ನಗದೇ ಲೋಕವಂತಿರ । ಲಿಂದು ನಿಮ್ಮಡಿ ಬಂದ ಕಾರ್ಯವ ಬೆಸಸಿ ನೀವೆಂದ (ಕುಮಾ), ... ಸಾಕೆಂದ (ಅ); ಸ್ವೀಪಾ (ಪ್ರ ಓ k).

೧೮೪. [1]ಗೇನೀ (ಓ). [2]ಕೊಟ್ಟನು (ಅ ಕುಮಾ), ಸ್ವೀಪಾ (ಅ). [ತಲೆಗಾಯ–ಕಾಪಾಡು, ರಕ್ಷಿಸು. ದುರಾಗ್ರಹ–ಕೆಟ್ಟಹಟ. ಮಾದು–ಬಿಟ್ಟು (ಮಾಣ್ದು > ಮಾದು)].

೫. ಕುರುಕ್ಷೇತ್ರಕ್ಕೆ ಪಯಣ

ಕೇಳು ಜನಮೇಜಯ ಧರಿತ್ರೀ-
ಪಾಲ ಸಂಧಿಯ ಮುರಿ[3]ದು ಲಕ್ಷ್ಮೀ-
ಲೋಲನೈತರುತಿವರ ಹೊರೆಗಟ್ಟಿದನು ಸಾತ್ಯಕಿಯ ।
ಕೇಳಿದ[1]ನು[1] ಮುರಹರನ ಬರವನು
ಮೌಳಿಮಸ್ತಕದಖಿಳಧರಣೀ-
ಪಾಲ[2]ರೊಡನಿದಿರಾಗಿ ಬಂದನು ಧರ್ಮನಂದನನು[2] ॥ ೧೮೫ ॥

ಭೂಮಿಪತಿ ನಿಜಬಾಂಧವರು ಸು-
ಕ್ಷೇಮಿಗಳು ತಾವೆಲ್ಲ [1]ನಿಮ್ಮಯ[1]
ಕ್ಷೇಮಕುಶಲವ ಕೇಳಿದರು ಕಳುಹಿದರು ಹರಕೆಗಳ ।
ಆ ಮಹಾಸಂಗ್ರಾಮ ಮುಖದಲಿ
ತೋಮರದ ಕಾಣಿಕೆಗಳಲಿ ಸು-
ಪ್ರೇಮವನು [2]ಬೆಸ[2]ಸುವುದು ದುರ್ಯೋಧನನ ಮತವೆಂದ ॥ ೧೮೬ ॥

ಭೂಮಿಯೊಳಗರ್ಧವನು ಬೇಡಿದೊ-
ಡಾ ಮಹಿ[1]ಮ ನಿಮ್ಮೈ[1]ವರಿಗೆ ಸಂ-
ಗ್ರಾಮಭೂಮಿಯನೈದೆ ಕೊಟ್ಟನು ನಿಮ್ಮೊಳಪ್ರಿಯನು ।
ಸಾಮದಲಿ ಸೊಗಸಿಲ್ಲ ನೀವ್ ನಿ-
ಸ್ಸೀಮರಾದೊಡೆ [2]ಕೂ[2]ಡಿಸುವುದು-
ದ್ದಾಮ ಕುರುಭೂಮಿಯಲಿ [3]ಬಲಸಹಿತವರ[3] ಪತಿಕರಿಸಿ ॥ ೧೮೭ ॥

---

೧೮೫. [1]ರು (ಅ). [2]ರಂದಿದಿರಾಗಿ ಬಂದರು ಸಕಲದಳಸಹಿತ (ಪ್ರ k ಅ).
[ಮೌಳಿ–ಕಿರೀಟ. ಮಸ್ತಕ–ತಲೆ, ಶಿರಸ್ಸು].

೧೮೬. [1]ನಿಮ್ಮಾ (ಅ ಕುಮಾ), ಸ್ವೀಪಾ (ಕ ಅ). [2]ಬಳ (ಓ), ಬೆಳ (ಪ್ರ k) ಸ್ವೀಪಾ (ಓ ಅ).
[ತೋಮರ–ಒಂದು ಬಗೆಯ ಆಯುಧ, ಈಟಿ].

೧೮೭. [1]ಪತಿಯ್ಯೆ (ಅ ಕುಮಾ), ಪನಿಮ್ಮೈ (ಪ್ರ k ಅ); ಸ್ವೀಪಾ (ಕ). [2]ಜೋ (ಅ ಕುಮಾ), ಹೂ (ಅ); ಸ್ವೀಪಾ (ಕ). [3]ಕುಳವರಂದವರ (ಅ ಕುಮಾ), ಸ್ವೀಪಾ (ಪ್ರ ಓ k ಅ).
[ಪತಿಕರಿಸು–ಅಂಗೀಕರಿಸು, ಸಾಧಿಸು ; ಎದುರಿಸು (?)].

ಮುನಿದೊಡೆಯು ನಿಮ್ಮೊಳಗೆ ನೀವೇ
ಮನಕಶವ ಮಾಡು[1]ಏರಿ[1] ಅಗ್ರಜ-
ರನುಜರಲಿ ಕದಡಾದೊಡುಪಶಮಿಸುವಿರಿ ನಿಮ್ಮೊಳಗೆ ।
ಎನಗೆ ನಿಮ್ಮಯ ದೂಸಱಿಂದಾ-
ಯ್ತಿನಿತು ಸಭೆಯಲಿ ಮಾನಹಾನಿಗ-
ಳೆನಲು ನೊಂದನು ಧರ್ಮಸುತನಿಂತೆಂದ ನಸುನಗುತ ॥ ೧೮೮ ॥

ಮುಳಿದು ಸುರಗಿಯನುಗಿದು ಗಗನಕೆ
ನಿಲುಕೆ ಮಾಡುವದೇನು ನಿಮ್ಮಡಿ-
ಗಳಿಗೆ ತಪ್ಪಿದ [1]ತರಳರಖಿಳ ವ್ಯಾಪ್ತಿ ಯೇಗುವುದು[1] ।
ಖಳರು ಮಾಡಿದ ಖತಿಯನೆನ್ನೊಳು
ತಿಳಿದು ಮಱೆಯಲುಬೇಕು ಕರುಣಾ-
ಜಲಧಿ ನೀನೆಂದಂಘ್ರಿಗಳ ಪಿಡಿದನು ಯುಧಿಷ್ಠಿರನು ॥ ೧೮೯ ॥

ಕೋಱು ನಡೆ ಗಜಬಜಿಸಲೇಕಿ-
ನ್ನಾಱು ತಿಂಗಳೆ ನಾಳೆ ಪಯಣಕೆ
ಸಾಱಿಸೇಳೆಂದವರುಪಪ್ಲಾವ್ಯಕ್ಕೆ ನಡೆತಂದು ।
ಬೇಱೆಬೇಱೆವನೀಶರಿಗೆ [1]ಪಡಿ-
ಹಾಱರನು[1] ಕಳುಹಿದರು ಕೃಷ್ಣನ
ದೂಱು ಬರಲಳವಡಿಸಿದರು ಸಂಗ್ರಾಮಸಾಧನವ ॥ ೧೯೦ ॥

---

೧೮೮. [1]ವರೆ (ಅ), ಸ್ವೀಪಾ (ಓ ಕ ಕುಮಾ ಅ).
[ಮನಕಶ-ಮನೋವ್ಯಥೆ. ಕದಡು-ವಿರಸ, ವೈಮನಸ್ಯ. ದೂಸಱು-ಕಾರಣ, ನಿಮಿತ್ತ].

೧೮೯. [1]ಖಳರುವಖಿಳವ್ಯಾಪ್ತಿಗೇಗುವರು (ಅ ಕುಮಾ), ಸ್ವೀಪಾ (ಪ್ರ ಓ k ಅ).
[ಮುಳಿ-ಕೋಪಿಸು. ಸುರಗಿ-ಕತ್ತಿ. ಉಗಿದು-ಸೆಳೆದು. ಏಗುವುದು-ಏನು ಮಾಡಬಲ್ಲುದು. ಖತಿ-ದುಃಖ].

೧೯೦. [1]ಮಣಿಹಾರರನು (ಅ).
[ಗಜಬಜಿಸು-ಗಲಭೆ ಮಾಡು. ಸಾಱಿಸು-ಡಂಗುರ ಹಾಕಿಸು, ಪ್ರಕಟಪಡಿಸು. ಪಡಿಹಾರ-ದ್ವಾರಪಾಲಕ, ಬಾಗಿಲು ಕಾಯುವವ; ರಾಜದೂತ (?)].

[1]ಆಳು[1] ಹರಿದುದು ದೆಸೆದೆಸೆಗೆ ಭೂ-
ಪಾಲರಿಗೆ ರಾಯಸದ ಹದನನು
ಕೇಳದಾಗಲೆ [2]ಕವಿದು[2] ಬಂದರು ತಮ್ಮ ದಳಸಹಿತ ।
ಸೂಳವಿಸಿದವು ಸನ್ನೆಯಲಿ ನಿ-
ಸ್ಸಾಳವಂದಿನ ಮಱುದಿವಸ [3]ವೈ-
ಹಾಳಿಯನು[3] ಹೊಱವಂಟರನಿಬರು ದೈತ್ಯರಿಪುಸಹಿತ ॥ ೧೯೧ ॥

ಗಜದ ಬೃಂಹಿತರವದ ವಾಜಿ-
ವ್ರಜದ ಹೇಷಾಧ್ವನಿಯ ತೇರಿನ
ವಿಜಯ ಚೀತ್ಕೃತಿರವದ ಬಿಲುಟಂಕಾರಕಳಕಳದ ।
ಗಜಬಜಿಕೆ ಗಾಢಿಸಿತು ಬೊಬ್ಬೆಯ
ಗಜಱುಗಳ ಗರ್ಜನೆಗೆ ನಡುಗಿತು
ತ್ರಿಜಗವೆನಲೈದಿದರು ಪಯಣದ ಮೇಲೆ ಪಯಣದಲಿ ॥ ೧೯೨ ॥

ಬಲದ ಮುಂಗುಡಿ ಭೀಮನದು ಪಿಂ-
ಗಳದಲಾತನ ಕಾಹು ಬೀಡಿನ
ವಳಯದಾರೈಕೆಗಳು ಸಾತ್ಯಕಿಪಾರ್ಥನಕುಲರಿಗೆ ।
ಬಲಮಹಾಂಬುಧಿಯೊಳಗಿರುಳ [1]ತಳ-
ವಳಿಕೆ[1] ಹೈಡಿಂಬಂಗೆ ಪಾಂಡವ-
ರುಳಿವು ಗದುಗಿನ ವೀರನಾರಾಯಣನ ಸುಯ್ಧಾನ ॥ ೧೯೩ ॥

---

೧೯೧. [1]ಚೂಳಿ (ಅ), ಜೋಳಿ (ಓ ಕ k ಕುಮಾ ಅ); ಸ್ವೀಪಾ (ಕಾ). [2]ಹರಿದು (ಕ). [3]ದೆಖ್ಖಾಳವನು (ಪ್ರ k).

[ಆಳು–ಯೋಧರು, ಭಟರು. ಹರಿ–ವೇಗವಾಗಿ ಚಲಿಸು. ರಾಯಸ–ನಿರೂಪ. ಕವಿ–ಮುತ್ತು. ಸೂಳವಿಸು–ಹೊಡೆ, ಬಾರಿಸು. ನಿಸ್ಸಾಳ–ಭೇರಿ, ವೈಹಾಳಿ–ಅಶ್ವಾರೋಹಣ ಪ್ರದರ್ಶನ, ಕುದುರೆಯ ಓಟ, ಕುದುರೆಯ ಸಂಚಾರ].

೧೯೨. [ಬೃಂಹಿತ–ಘೀಳಿಡುವಿಕೆ. ಹೇಷಾಧ್ವನಿ–ಕೆನೆತ. ಚೀತ್ಕೃತಿರವ–ಚೀತ್ಕಾರಶಬ್ದ. ಗಾಢಿಸು–ದಟ್ಟವಾಗು. ಗಜಱು–ಗದರಿಕೆ].

೧೯೩. [1]ತಳವರಿಕೆ (ಕಾ).

[ಮುಂಗುಡಿ–ಮುಂತುದಿ. ಪಿಂಗಳ–ರಣರಂಗದ ಹಿಂಭಾಗ. ಕಾಹು–ಕಾವಲು. ವಳಯ–ಪಾಳೆಯ. ಆರೈಕೆ–ಮೇಲ್ವಿಚಾರಣೆ. ತಳವಳಿಕೆ–ಕಾವಲು. ಹೈಡಿಂಬ–ಘಟೋತ್ಕಚ. ಸುಯ್ಧಾನ–ರಕ್ಷಣೆ].

ಭೀಷ್ಮಪರ್ವ*

೧. ಅರ್ಜುನನಿಗೆ ಕೃಷ್ಣನ ಉಪದೇಶ

ಕೇಳು ಜನಮೇಜಯ ಧರಿತ್ರೀ-
ಪಾಲ ಕೌರವರಾಯನಲ್ಲಿಗೆ
ಕಾಳಗದ ಕಾತರಿಗರಿವರಟ್ಟಿದರು ಭಟ್ಟರನು ।
ಕೇಳಿದನು ಕುರುಭೂಮಿಯಲಿ ರಿಪು-
ಜಾಲದುದಯವನಂದು ಕುರುಕುಲ-
ಮೌಳಿ [1]ಕರಸಿದನಾಪ್ತರನು ಪರಿಮಿತಕೆ[1] ಮಂತ್ರಿಗಳ ॥ ೧ ॥

ಭೂರಿ ನೆರೆದುದು [1]ನಾಡ ಗಾವಳಿ[1]
ಭಾರ ಧೃಷ್ಟದ್ಯುಮ್ನನದು ಗಡ
[2]ಜಾ[2]ರದೇವನ ಜೋಕೆ ಮಂದಿಯು ಕಾಹುಕಟ್ಟು ಗಡ ।
ಧಾರಿಣಿಯ ಲಂಪಟರು ಕದನವ
ಹಾರಿ ಬಂ[3]ದರು ಗಡ[3] ಕೃತಾಂತನ
ಭೂರಿಭೂತದ ಧಾತುವಾಯಿತು ಲೇಸುಲೇಸೆಂದ ॥ ೨ ॥

---

* ಪ್ರತಿಷ್ಠಾನದ ಹಸ್ತಪ್ರತಿ(ಪ್ರ)ಯಲ್ಲಿ ಇಲ್ಲಿಂದ ಮುಂದೆ ಕೃತಿಯ ಪಾಠ ಉಪಲಬ್ಧವಿಲ್ಲ. ಮತ್ತು ಈ 'ಅ' ಹಸ್ತಪ್ರತಿಯಲ್ಲಿ ಈ ಹಿಂದೆ ಬಳಸಿಕೊಂಡಿರುವ ಕ, ಸ, k, ಓ ಪ್ರತಿಗಳ ಪಾಠಾಂತರಗಳ ಉಲ್ಲೇಖಗಳು ನಮೂದಾಗಿಲ್ಲ. ಕಾರಣ ತಿಳಿಯದು. ಅಗತ್ಯವಿದ್ದೆಡೆ, ಅ ಕುಮಾ ಪಾಠಾಂತರಗಳನ್ನು ಮಾತ್ರ ಉದ್ಧರಿಸ್ಯ ಸ್ವೀಕರಿಸಬೇಕಾಗಿದೆ. ಹೀಗಿರುವುದರಿಂದ, ಪಾಠ ಸ್ವೀಕಾರವನ್ನು ಪ್ರತ್ಯೇಕವಾಗಿ ನಮೂದಿಸುವ ಗೋಜಿಗೆ ಹೋಗಿಲ್ಲ.

---

೧. [1]ಬರಿಸಿದ ಪರಿಮಿತಕೆ ತನ್ನಾಪ್ತ (ಅ), ಸ್ವೀಪಾ (ಅ ಕುಮಾ).
[ಕಾತರಿಗ–ಆತುರಪಡುವವನು, ಪರಿಮಿತ–ಹತ್ತಿರ, ಸಮೀಪ].

೨. [1]ಗಾವಳಿಯ ಗುರು (ಅ), ಸ್ವೀಪಾ (ಅ ಕುಮಾ). [2]ಚಾರ (ಅ ಕುಮಾ).
[3]ರಲ್ಲೈ (ಅ), ಸ್ವೀಪಾ (ಅ ಕುಮಾ).
[ಭೂರಿ–ಅಪಾರ, ಹೆಚ್ಚು ಪ್ರಮಾಣದಲ್ಲಿ. ಗಾವಳಿ–ಸದ್ದುಗದ್ದಲ. ಜಾರದೇವ–ಕೃಷ್ಣ. ಕಾಹುಕಟ್ಟು–ರಕ್ಷಣೆಯ ತಡೆಗಟ್ಟು. ಹಾರಿ–ಅಪೇಕ್ಷಿಸಿ, ಕೋರಿ. ಕೃತಾಂತ–ಯಮ. ಭೂರಿಭೂತದ ಧಾತು–ಅಪಾರವಾದ ಜೀವರಾಶಿಯ ಆಹಾರ ಸಾಮಗ್ರಿ].

ನೆರೆದ ದೊಡ್ಡಿಯನೊರಸಬಹುದೇ-
ನರಿದು ಜೀಯ ವಿರೋಧಿರಾಯರ
ನೆರವಿ ನಿನಗೇಗುವುದು ಗಹನವೆ ನಿನ್ನ ವೀರರಿಗೆ ।
ಕರಿಗಳಿಗೆ ಪ್ರತ್ಯೇಕವಿವೆ ಕೇ-
ಸರಿಗಳೆಮ್ಮನು ಕಳುಹು ನಿಮ್ಮಡಿ
ಪರಿಮಿತಕೆ ಬರಲಾವ ಭಾರವಿದೆಂದನಾ ಕರ್ಣ ॥ ೩ ॥

ಕಲಕುವೆನು ಪಾಂಡವರ ಸೇನಾ-
ಜಲಧಿಯನು ತೇರಿನಲಿ ತಲೆಗಳ
ಕಳುಹುವೆನು ಕದನದಲಿ ಕೈ[1]ದೋಱಿ[1]ದ ಕುಠಾರ[2]ಕರ[2] ।
ಹೊಳಲ ಹೊಱಿಶೂಲದಲಿ [3]ತಲೆ[3]ಗಳ
ಸೆಳಸುವೆನು ತಾ ವೀಳೆಯವನೆಂ-
ದಲಘುಭುಜಬಲಕರ್ಣ ನುಡಿದನು ಕೌರವೇಂದ್ರಂಗೆ ॥ ೪ ॥

ಕುಲಿಶಪರಿಯಂತೇಕೆ ನೇಗಿಲ
ಬಳಿಯ ಹುಲು[1]ವೆಟ್ಟ[1]ಕೆ ವಿರೋಧಿಗ-
[2]ಳಳಿ[2]ಬಲಕೆ ಕಲಿಕರ್ಣ ನೀ ಪರಿಯಂತ ಸಂಗರವೆ ।
ಹೊಳಲ ಪರಿವಾರಕ್ಕೆ ಸಾಱಿಸು
ಕೆಲಬಲದ ರಾಯರಿಗೆ ದೂತರ
ಕಳುಹಿ [3]ನೆರಹಿಸು[3] ಕಾದಿಸೆಂದನು ಕೌರವರ ರಾಯ ॥ ೫ ॥

ಹಿಂದೆ ಗಳಹುವನಿವನು ಬಾಯಿಗೆ
ಬಂದ ಪರಿಯಲಿ ಪಾಂಡುತನಯರ
ಕೊಂದನಾಗಳೆ ಕರ್ಣನಿನ್ನಾರೊಡನೆ ಸಂಗ್ರಾಮ ।

---

೩. [ದೊಡ್ಡಿ-ಸಾಮಾನ್ಯರ ಗುಂಪು. ನೆರವಿ-ಗುಂಪು. ಗಹನ-ಕಷ್ಟ].

೪. ಮಾರಿ(ಅ), ಸ್ವೀಪಾ (ಅ ಕುಮಾ); ರನು (ಅ), ರಿವು (ಅ ಕುಮಾ).
[ಕುಠಾರಕ-ವಂಶಕ್ಕೆ ಕೊಡಲಿಯಂತಿರುವವನು, ವಂಶಚ್ಛೇದಕ, ವಂಶಘಾತುಕ. ಹೊಳಲು-ಪಟ್ಟಣ. ಸೆಳಸು-ಎಳೆದುತರಿಸು].

೫. [1]ವೇಟ (ಅ). [2]ಅಳಿ (ಅ). [3]ಕರೆಯಿಸಿ (ಅ).
[ಕುಲಿಶ-ವಜ್ರಾಯುಧ. ಅಳಿ-ಅಲ್ಪವಾದ, ಸುಲಭವಾಗಿ ನಾಶವಾಗತಕ್ಕ].

ಹಿಂದೆ ಹಮ್ಮಿದ ಸಮರದೊಳು ನಡೆ
ತಂದು ಖೇಚರನಡಸಿ ಕಟ್ಟಿದ-
ಡಂದು ನಿನ್ನನು ಬಿಡಿಸಿದವನರ್ಜುನನೊ ರವಿಸುತನೊ || ೬ ||

ಸಾಹಸಿಗಳಲ್ಲಿಲ್ಲ ಹರಿ ತುರು-
ಗಾಹಿ ಪಾಂಡವರೈವರಡವಿಯ
ಮೇಹುಗಾಜರು ಬಂದ ಭೂಭುಜರೆಲ್ಲ ತಾ ನೆರವಿ ।
ಆಹವಕೆ ನಿನ್ನೂರ ತಳವರ
ಗಾಹಿನವರನು ಕಳುಹುವುದು ಸಂ-
ದೇಹವೇ ನೀನಿಲ್ಲಿ ಸುಖದಲಿ ರಾಜ್ಯ ಮಾಡೆಂದ || ೭ ||

ಎಲೆ ಸುಯೋಧನ ಕಾಳುಗೆಡೆದರೆ
ಫಲವನಿದರಲಿ ಕಾಣೆನಹಿತರ
ಬಲದ ಭಾರಣೆ ಬಿಗುಹು ಭೀಮಾರ್ಜುನರು ಬಲ್ಲಿದರು ।
ನಳಿನನಾಭನ ಮಂತ್ರಶಕ್ತಿಯು
ಬಲುಹು ನೀವ್ ನಿರ್ದೈವರವರ-
ಗ್ಗಳ ಸದೈವರು ಕೆಟ್ಟರಿನ್ನೇನೆಂದನಾ ದ್ರೋಣ || ೮ ||

ಅವರಿಗಸುರಾಂತಕ ಸಹಾಯನು
ನಿಮಗೆ ಗಂಗಾಸುತನ ಬಲವಾ-
ಹವವನಾತನ ನೇಮದಲಿ ನೆಗಳುವುದು ನೀತಿಯಿದು ।
ಅವರಿವರ ನುಡಿಗಳಲಿ ಫಲವಿ-
ಲ್ಲವನಿಪತಿ ಕೇಳೆನಲು ಕಲಶೋ-
ದ್ಭವನ ನುಡಿಯಲಿ ಬಳಿಕ ಮಣಿದನು ಕೌರವರ ರಾಯ || ೯ ||

---

೬. [ಹಮ್ಮು-ಹೂಡು, ನಡಸು. ಖೇಚರ-ಗಂಧರ್ವ. ಅಡಸು-ಮೇಲೆಬೀಳು, ಆಕ್ರಮಣ ಮಾಡು].

೭. [ಮೇಹುಗಾಜರು-ಮೇಯುವವರು, ತಿರಿದು ತಿನ್ನುವವರು. ಭೂಭುಜ-ರಾಜ].

೮. [ಕಾಳುಗೆಡೆ-ಹರಟು, ವೃಥಾ ಮಾತನಾಡು].

೯. [ಕಲಶೋದ್ಭವ-ದ್ರೋಣ. ನೆಗಳು-ಮಾಡು. ಮಣಿ-ತಲೆಬಾಗು, ಗೌರವಿಸು].

ಮುಂದೆ ಹರಿದರು ಕೈಯ ಕಂಬಿಯ
ಸಂದಣಿಯ [1]ಪಡಿಯಱರು[1] ಗಂಗಾ-
ನಂದನಂಗೀಹದನನಱುಹಲು ಬಂದನಿದಿರಾಗಿ ।
ಕಂದುಮೋಱೆಯ ರಾಯನನು ತೆಗೆ-
ದಂದಣದೊಳಾಲಂಗಿಸುತ ನಲ-
ವಿಂದ ಮನ್ನಿಸಿ ತಂದನರಮನೆಗುಚಿತವಚನದಲಿ ॥ ೧೦ ॥

ಏನಿರುಳು ನೀ ಬಂದ ಹದನಿದು
ಮಾನನಿಧಿ ಬೇಕಾದೊಡೆಮ್ಮನು
ನೀನು ಕರಸುವುದಱುಹುವುದು [1]ನಿಜಕಾರ್ಯಸಂಗತಿಯ[1] ।
ಏನ ಹೇಳುವೆ ನಗೆಯನನುಸಂ-
ಧಾನ[2]ದಲಿ[2] ಪಾಂಡವರು ಕುರುಭೂ-
ಮೀನಿವಾಸಕೆ ಬಂದುಬಿಟ್ಟರು ಕಿಱಿದು ಬಲವೆರಸಿ ॥ ೧೧ ॥

ಹರಿಯ ಹಿಸುಣಿಕೆಯವರ ಚಿತ್ತವ
ಬೆರಸಿ ವೈರವ [1]ಬಿತ್ತಿ[1] ಬಂದೀ
ಧರೆಯ ಭಾಗವ ಬೇಡಿ [2]ಕದನವ ಮಸೆದರೆಮ್ಮೊಡನೆ[2] ।
ಹರನ ಸಮದಂಡಿಗಳು ನೀವೆಮ-
ಗಿರಲು ಜಯಿಸುವ ವೀರನಾವನು
ಮರುಳತನವನು ಧರ್ಮಪುತ್ರನೊಳಱಿಯಲಾಯ್ತೆಂದ ॥ ೧೨ ॥

---

೧೦. [1]ಪಡಿವಳ (ಅ), ಪಡೆವಳ (ಕುಮಾ).
[ಕಂಬಿ-ಕೋಲು. ಪಡಿಯಱ-ಪ್ರತೀಹಾರಿ, ದ್ವಾರಪಾಲಕ. ಕಂದುಮೋಱೆ-ಬಾಡಿದ ಮುಖ].

೧೧. [1]ಬರವೇನು ಹೇಳೆನಲು (ಅ). [2]ವನು (ಅ).

೧೨. [1]ಬೆಳಸಿ (ಕುಮಾ). [2]ಕಲಹವ ಮಸೆದು ತನ್ನೊಡನೆ (ಅ), ಕದನವ ನೆನೆದರೆಮ್ಮೊಡನೆ (ಅ).
[ಹಿಸುಣಿಕೆ ಚಾಡಿಕೋರತನ. ಸಮದಂಡಿಗಳು-ಸರಿಸಮಾನರು].

ಬಂದರೇ ಪಾಂಡವರು ಸುದ್ದಿಯ
ತಂದರೇ ನಿನ್ನವರು ನಿನಗೇ-
ನೆಂದು ಭಾಷೆಯ [1]ಕೊಟ್ಟರೇ[1] ಕರ್ಣಾದಿ ನಾಯಕರು ।
ಇಂದು ಸಂತತಿ[2]ಗುಜುವ[2]ರಲ್ಲಾ
ಬಂದರೇನಪರಾಧವೇ ಇ-
ನ್ನೆಂದುಪರಿಯಂತವರು [3]ನವೆಯಲಿ[3] ಎಂದನಾ ಭೀಷ್ಮ ॥ ೧೩ ॥

ಮಿಕ್ಕ ಮಾತೇ[1]ನಿ[1]ನ್ನು ನೀ ಹಿಂ-
ದಿಕ್ಕಿಕೊಂಡೊಡೆ ಕೊಲುವನಾವನು
ಮಕ್ಕಳಾ[2]ವೆನಬೇಡ[2] ಬಲ್ಲೆನು [3]ನಿನ್ನ[3] ವಿಕ್ರಮವ ।
ಹೊಕ್ಕು ಹಗೆಗಳ ಹೊಯ್ದು ದಿಗುಬಲಿ-
ಯಿಕ್ಕಿ [4]ನ[4]ನ್ನಯ ಹರುಷಜಲಧಿಯ-
ನುಕ್ಕಿಸಲುಬೇಕೆನಲು ಕೇಳಿದು ಭೀಷ್ಮನಿಂತೆಂದ ॥ ೧೪ ॥

ದೈವಬಲವವರಲ್ಲಿ ನೀವೇ
ದೈವಹೀನರು ಧರ್ಮಪರರವ-
ರೈ[1]ವರೂ[1] ಸತ್ಪುರುಷಶೀಲರು ನೀವ-ಧರ್ಮಿಗಳು[2] ।
ಮುಯ್ಯನಾನುವದವರ್ಗೆ ಲೋಕವು
ಬೈವುದೈ ನಿಮ್ಮನಿಬರನು ನಿಮ-
ಗೈವಡಿಯ ಸಹಸಿಗಳವರು ದುರ್ಬಲರು ನೀವೆಂದ ॥ ೧೫ ॥

ದಯವನತ್ತಲು ತಿದ್ದಿ[1]ನ[1]ಮ್ಮನು
ಭಯಮಹಾಬ್ಧಿಯೊಳದ್ದಿ ಸಮರದ
ಜಯವನವರಿಗೆಮಾಡಿ ನಮ್ಮಭಿಮತವ [2]ನೀಗಾಡಿ[2] ॥

---

೧೩. [1]ನಿತ್ರರೈ (ಅ). [2]ಗರುಹ (ಅ). [3]ನವೆವರು (ಕುಮಾ).
[ಉಜುವರು-ಶ್ರೇಷ್ಠರು. ನವೆ-ಕ್ಷೀಣಿಸು, ಕೃಶವಾಗು].

೧೪. [1]ಕಿ (ಕುಮಾ). [2]ದೊಡದೇನು (ಅ). [3]ನಿಮ್ಮ (ಅ). [4]ತ (ಅ).

೧೫. [1]ರುಂ (ಅ). [2]ಧಾರ್ಮಿಕರು (ಅ ಕುಮಾ).
[ಮುಯ್ಯನಾನು-ಹೆಗಲುಕೊಡು, ಬೆಂಬಲಕೊಡು].

೧೬. [1]ಯಿ (ಅ). [2]ಮರುಳ್ಮಾಡಿ (ಅ).

ನಯವ ನೀವೊ[3]ಡ್ಡವರೆ[3] ನಿಮ್ಮನು
ನಿಯಮಿಸುವರಾರುಂಟು ಭಾಗ್ಯೋ-
ದಯವಿಹೀನ[4]ನು ತಾನೆ[4]ನುತ ಕುರುರಾಯ ಬಿಸುಸುಯ್ದ ॥ ೧೬ ॥

ಉಚಿತವನು [1]ನಾವಱಿಯೆವಾರ್ಥಿಕ-[1]
[2]ರಚಿತ ನಿಜವನು[2] ನುಡಿಯೆ ಸಿನಗದು
[3]ರುಚಿಸದಿರ್ದೊಡೆ ಮಾಣಲಹಿತವ ನುಡಿವರಾವಲ್ಲ[3] ।
ವಚನವತಿಗಾಢದಲಿ ನಟ್ಟುದು
ಸಚಿವನಯವಿನ್ನೇಕೆ ಸೇನಾ-
ನಿಚಯಕೆಮ್ಮನು ಮೊದಲಿಗನ ಮಾಡರಸ ಹೋಗೆಂದ ॥ ೧೭ ॥

ಮಗನೊಡನೆ ಮೂದಲಿಸಿ ಭೀಷ್ಮನು
[1]ಹೊ[1]ಗುವ ಗಡ ಪರಸೇನೆ[2]ಯನು[2] ಕಾ-
ಳಗವ ನೋಡುವೆನೆಂಬವೊಲು ತಲೆದೋಱಿದನು ದಿನಪ ।
ನಗೆಯುಡುಗಿ ನಾಚಿದವು ಕುಮುದಾ-
ಳಿಗಳು [3]ಹೊಂ[3]ಗಾಣಿಕೆಯ ಹರುಷದೊ-
ಳೊಗೆ[4]ದು ವಿರಹವ ಬೀಳುಕೊಟ್ಟವು ಜಕ್ಕವಕ್ಕಿಗಳು ॥ ೧೮ ॥

---

೧೬. [3]ಯ್ದಿವರೆ (ಅ). [4]ದುನಾವೆ (ಅ).
[ನೀಗಾಡು-ತಿರಸ್ಕರಿಸು, ಕಳೆದುಹಾಕು. ನಯ-ನೀತಿ. ನಿಯಮಿಸು-ತಡೆ, ಅಡ್ಡಿಪಡಿಸು, ಹತೋಟಿಯಲ್ಲಿಟ್ಟುಕೊ].

೧೭. [1]ನಾನರಿಯೆ ವಾರ್ಥಕ (ಕುಮಾ). [2]ರುಚಿತವನು ನೆರೆ (ಅ). [3]ರುಚಿಸವೇ ಮಾಣಲಿಯದಂತಿರಲೀ ಕುಮಂತ್ರಿಗಳ (ಅ ಕುಮಾ).
[ಆರ್ಥಿಕ ರಚಿತ ನಿಜ-ಅರ್ಥಶಾಸ್ತ್ರಕ್ಕೆ ಅನುಗುಣವಾದ ಸತ್ಯ, ರಾಜನೀತಿಯ ಸತ್ಯ. ಮಾಣಲಿ-ಹೋಗಲಿ. ಸಚಿವನಯ-ಮಂತ್ರಾಲೋಚನೆಯ ನೀತಿ. ಮೊದಲಿಗ-ಮೊದಲ ನಾಯಕ].

೧೮. [1]ಘು (ಅ). [2]ಯಲಿ (ಅ). [3]ಮುಂ (ಅ ಕುಮಾ). [4]ಳಗಿ (ಅ ಕುಮಾ).
[ಮಗ-ಸೂರ್ಯನ ಮಗನಾದ ಕರ್ಣ. ಮೂದಲಿಸಿ-(ತನ್ನ ಮಗನಾದ ಕರ್ಣನಿಗೆ ಸೇನಾಧಿಪತ್ಯವು ಸಿಕ್ಕಲಿಲ್ಲವಲ್ಲಾ ಎಂದು ಭೀಷ್ಮ ದ್ರೋಣರನ್ನು) ಹೀಯಾಳಿಸಿ, ತಿರಸ್ಕರಿಸಿ. ತಲೆದೋಱು-ಉದಯಿಸು. ಉಡುಗು-ಕುಗ್ಗು. ಕಡಮೆಯಾಗು. ಹೊಂಗಾಣಿಕೆ-ಸೂರ್ಯೋದಯದ ಹೊನ್ನಿನ ಕಾಂತಿಯ ದರ್ಶನ. ಒಗೆದು-ಬಿಸುಟು. ಜಕ್ಕವಕ್ಕಿ-ಚಕ್ರವಾಕ ಪಕ್ಷಿ].

ಕಮಲಜನ ಹೋಲುವೆಯು ಧಾರುಣಿ-
ಯಮರಕರದಲಿ ನಿಗಮಪೂತೋ-
ತ್ರಮು[1]ಸುಧಾರೆ[1]ಗಳಿಳಿದು[2]ಮಜ[2]ಸನ್ನಿಭನ ಮಸ್ತಕಕೆ ।
[3]ಅಮುಮು ಉರುತರ*ವ್ಯೋಮ[3]ಗಂಗಾ-
ವಿಮಲನದಿ ಯಿಳಿತಂದು ಸಾರ್ದುದೊ
ಹಿಮಗಿರಿಯ[4]ನೆಂಬಂತಿರೆಸೆದುದು[4] ಪಟ್ಟದಭಿಷೇಕ ॥ ೧೯ ॥

ಈ ನದೀನಂದನನ ಬಲದಲಿ
ಸೇನೆ ಶಿವಗಂಜುವುದೆ ಕುಂತೀ-
ಸೂನುಗಳಿಗಾರಣ್ಯಜಪವಿನ್ನವರಿಗಿಳೆಯೇಕೆ ।
ಮಾನನಿಧಿ ಭೀಷ್ಮಂಗೆ ಸಮರ ಸ-
ಮಾನ ಭಟನಿನ್ನಾವನೆಂದು ಮ-
ನೋನುರಾಗದ ಮೇಲೆ ಕೌರವರಾಯ ಬಣ್ಣಿಸಿದ ॥ ೨೦ ॥

ಎಲೆ ಮರುಳೆ ಭೂಪಾಲ ಕೌರವ-
ಕುಲಪಿತಾಮಹನಹನು ಧರ್ಮಂ-
ಗಳಲಿ ಪರಿಣತನಹನು ಕಾಳೆಗ[1]ವೆತ್ತಲಿವರೆತ್ತ[1] ।
ಗಳದ ಗರಳ[2]ನ ದೊರೆಯು[2] ಭಟಮಂ-
ಡಳಿಯೊ[3]ಡನೆ[3] ಮನ್ನಣೆಯೆ ಹೇಳೈ
ಕಳಿದ ಹರೆಯಂಗೆಂದು [4]ಗಹಗಹಿಸಿ[4]ದನು ಕಲಿಕರ್ಣ ॥ ೨೧ ॥

---

೧೯. [1]ಸುವಾರಿ (ಕುಮಾ). [2]ವಿಭ (ಅ). [3]ಕಮಲಜನ ಕರದಿಂದ (ಕುಮಾ). [4]ಲೆಂಬಂತೆ ಯೆಸೆದುದು (ಅ), ನೆಂಬಂತಿರಿಳಿದುದು (ಕುಮಾ).

[ಧಾರುಣಿಯಮರ-ಭೂಸುರ, ಬ್ರಾಹ್ಮಣ. ನಿಗಮಪೂತೋತ್ತಮಸುಧಾರೆ-ವೇದ ಮಂತ್ರ ಪಠನದಿಂದ ಪವಿತ್ರವಾದ ಮತ್ತು ಶ್ರೇಷ್ಠವಾದ ನೀರಿನ ಧಾರೆ. ಅಜಸನ್ನಿಭ-ಬ್ರಹ್ಮನಿಗೆ ಸಮಾನನಾದ ಭೀಷ್ಮ. ಉರುತರ-ಶ್ರೇಷ್ಠವಾದ. ವ್ಯೋಮಗಂಗಾ-ಆಕಾಶಗಂಗೆ].

೨೦. [ನದೀನಂದನ-ಗಂಗಾಸುತ, ಭೀಷ್ಮ. ಬಲ-ಸಾಮರ್ಥ್ಯ, ಪರಾಕ್ರಮ. ಅರಣ್ಯಜಪ-ಪುನಃ ಕಾಡಿಗೆ ಹೋಗಬೇಕಾಗುವುದೆಂಬ ಚಿಂತೆ. ಭಟ-ಶೂರ. ಮನೋನುರಾಗ-ತುಂಬುಮನಸ್ಸಿನ ಪ್ರೀತಿ].

೨೧. [1]ವೇಳೆಯಿವರೇಳೆ (ಅ). [2]ದ ದನಿಯ (ಅ). [3]ಳಗೆ (ಕುಮಾ). [4]ಕಳಕಳಿಸಿ (ಅ).

[ಅಹನು-ಆಗಿರುವನು. ಪರಿಣತ-ನುರಿತವನು. ಗಳದ ಗರಳ-ವಿಷಕಂಠ, ಶಿವ. ದೊರೆ-ಸಮಾನ. ಮನ್ನಣೆ-ಗೌರವ. ಕಳಿದ ಹರೆಯ-ಕಳೆದುಹೋದ ಪ್ರಾಯ, ಮುಪ್ಪು. ಗಹಗಹಿಸು-ಗಟ್ಟಿಯಾಗಿ ನಗು].

ತೊಗಲು ಸಡಿಲಿದ ಗಲ್ಲ ಬತ್ತಿದ
[1]ಹೆಗಲು ನಱುಕಿದ[1] ನರೆತ ಮೀಸೆಯ
ಜಗುಳ್ದ ಹಲುಗಳ [2]ಹಾಯಿದೆಲುಗಳ[2] ನೆಗ್ಗಿದವಯವದ ।
ಅಗಿಯಲಲುಗುವ ತಲೆಯ ಮುಪ್ಪಿನ
ಮುಗುದನೀತನ [3]ಕಾದ[3]ಹೇಳಿದು
ನಗೆ[4]ಯ ಸುರಿದೈ[4] ರಾಯಕಟಕದೊಳೆಂದನಾ ಕರ್ಣ ॥ ೨೨ ॥

ಇಲ್ಲಿ ಭೀಷ್ಮ[1]ನು[1] ರಾಘವನ
ಬಲದಲ್ಲಿ ಜಾಂಬವ[2]ನು[2]ಭಯವೀರರು
ಬಲ್ಲಿದರು ಬಳಿಕುಳಿದ [3]ವೀರರ[3] ಶೌರ್ಯವೊಪ್ಪುವುದೆ ।
ನಿಲ್ಲು ನೀ ಕೊಲಲೆಳಸುವೊಡೆ ಹಗೆ-
ಯಲ್ಲಿಗೊಪ್ಪಿಸಿ ಕೊಲಿಸ[4]ಲೇ[4]ತಕೆ
ಬಿಲ್ಲಿನಲಿ ಬ[5]ಡಿ[5]ದಡ್ಡಗೆಡಹುವೆನೆಂದನಾ ಕರ್ಣ ॥ ೨೩ ॥

ಹಾ ನುಡಿಯದಿರು ನಿನ್ನ ಹವಣಿನ
ಮಾನಿಸನೆ ಸುರಸಿಂಧು[1]ಜಾತನು[1]
ನೀ[2]ನು ಮಿಗೆ[2] ಮೇಲಱಿಯೆ ಜವ್ವನದುಬ್ಬುಗೊಬ್ಬಿನಲಿ ।
ನೀನು ಸರಿಯೇ ರಾಮಕಟಕದ
ಹಾನಿಯನು [3]ಕಾಯ್ದಾತ[3] ಜಾಂಬವ-
[4]ಗೇ[4]ನು ಕೊಱತೆಯೆನುತ್ತ [5]ಜಱಿ[5]ದನು ಗರುಡಿಯಾಚಾರ್ಯ ॥೨೪॥

---

೨೨. [1]ಹೆಗಲನಗುಳಿದ (ಅ). [2]ನಟ್ಟಕಂಗಳ (ಅ). [3]ಜಯಿಸ (ಅ). [4]ಯೆಸೆದುದೈ (ಅ).
[ನಱುಕು-ಕುಗ್ಗು, ಕುಸಿ. ಜಗುಳ್ದ-ಉದುರಿಹೋದ. ಹಾಯಿದ-ಹೊರಕ್ಕೆ ಚಾಚಿಕೊಂಡಿರುವ. ಎಲು-ಎಲುಬು, ಮೂಳೆ. ನೆಗ್ಗು-ಜಜ್ಜುಹೋಗು, ತಗ್ಗಲಾಗು. ಮುಗುದ-ಮುಗ್ಧ, ಏನೂ ಅರಿಯದವನು. ಹೇಳಿದು-ಹೇಳಿ. ರಾಯಕಟಕ-ರಾಜನ ಸೈನ್ಯ].

೨೩. [1-2]ರು (ಅ). [3]ಸುಭಟರ (ಕುಮಾ). [4]ರೇ (ಅ). [5]ಲಿ (ಅ).

೨೪. [1]ಜನು ತಾ (ಕುಮಾ). [2]ನಿನಱ (ಅ). [3]ತಲೆಗಾಯ್ದ (ಕುಮಾ). [4]ನೇ (ಅ). [5]ನುಡಿ (ಅ).
[ಹವಣು-ಪ್ರಮಾಣ, ಅಳತೆ. ಕಟಕ-ಸೈನ್ಯ].

ರಣದೊಳೊಡ್ಡಿದರಾತಿಗಳನೀ-
ಹಣೆಯು ಪಟ್ಟದ ವೀರ ಜಯಿಸಲು
ಹಣವಿಗಾನೋಲ್ಲೈಸೆ ಮಾಡು[1]ವೆನಡವಿಯುಲಿ[1] ತಪವ ।
ರಣದಲಿವ[2]ನ[2]ಡಗೆಡೆದ[3]ನಾ[3]ದೊಡೆ
ಮಣಿಯುದಿಜು[3]ದಪೆನ[4]ನ್ನ[4]ಬರ ಮಾ-
ರ್ಗಣೆಯುನಾಹವದೊಳಗೆ [5]ಸರಳಿಸೆ[5]ನೆಂದನಾ ಕರ್ಣ ॥ ೨೫ ॥

ಗಳಹದಿರು ರಾಧೇಯ ನಿನ್ನಯ
ಕುಲವ ನೋಡದೆ ಮೇರೆದಪ್ಪುವ
ಸಲುಗೆಯುದಲೇ ಸ್ವಾಮಿಸಂಪತ್ತಿನ ಸಗಾಢತನ ।
ಕಲಿಗಳುಳಿದಂತೆನ್ನ ಸರಿಸಕೆ
ನಿಲುವನಾವನು ದೇವದಾನವ-
ರೊಳಗೆ ನಿನ್ನೊಡ[1]ನೊರಲಿ[1] ಫಲವೇನೆಂದನಾ ಭೀಷ್ಮ ॥ ೨೬ ॥

ಹರಿಯು ಚಕ್ರವ ತುಡುಕಿಸುವೆ ವಾ-
ನರಪತಾಕನ ರಥವ ಹಿಂದಕೆ
ಮುರಿಯುಲೆಸುವೆನು ಮಹಿಪುರಿಬ್ಬರ ನಡವಳಿಯು ಕೆಡಿಸಿ ।
ಸುರನರೋರಗರೊಳಗೆ [1]ಮಿಡುಕು-
ಳ್ಳರಿಗೆ[1] ಕಟ್ಟಿದ ತೊಡರು [2]ನೀನು-[2]
ಬ್ಬರಿಸಿ ನುಡಿ[3]ವ[3]ರೆ ನೊರಜ ಕೊಲುವೊಡೆ ಕೈದುವೇಕೆಂದ ॥ ೨೭ ॥

---

೨೫. [1]ವಿ ಸಮರದಲಿ (ಅ). [2]ರ (ಅ). [3]ರಾ (ಅ). [4]ನ್ನ (ಅ). [5]ಸಂಧಿಸೆ (ಕುಮಾ).
[ಅರಾತಿ-ಶತ್ರು. ಹಣವು-ಪಣ, ಪಂದ್ಯ, ಪ್ರತಿಜ್ಞೆ. ಓಲೈಸೆ-ಓಲೈಸುವುದಿಲ್ಲ, ಬದ್ಧನಾಗುವುದಿಲ್ಲ, ಕಟ್ಟುಬೀಳುವುದಿಲ್ಲ. ಅಡಗೆಡೆ-ಉರುಳಿ ಬೀಳು, ಅಡ್ಡನಾಗಿ ಕೆಳಕ್ಕೆ ಬೀಳು. ಮಣಿ-ತಲೆಬಾಗು. ಇಜು-ಕೊಲ್ಲು. ಅನ್ನೆಬರ-ಅಲ್ಲಿಯವರೆಗೆ, ಮಾರ್ಗಣೆ-ಬಾಣ. ಸರಳಿಸು-ವ್ಯರ್ಥ ಮಾಡು ; ಲಘುವಾಗಿ ಪ್ರಯೋಗಿಸು (?)

೨೬. [1]ನೆಂದು (ಅ).
[ಗಳಹು-ಹರಟು. ಮೇರೆದಪ್ಪು-ಮಿತಿಮೀರು, ಗೆರೆಮೀರು. ಸಗಾಢತನ-ಬೆಂಬಲ, ಸಾಮರ್ಥ್ಯ. ಸರಿಸ-ಸಮೀಪ. ಒರಲು-ಕೂಗಾಡು, ಅರಚು].

೨೭. [1]ಮೀಟಾದರಿಗೆ (ಕುಮಾ). [2]ಇವನು (ಕುಮಾ). [3]ದ (ಕುಮಾ).
[ತುಡುಕಿಸು-ಹಿಡಿಯುವಂತೆ ಮಾಡು. ವಾನರಪತಾಕ-ಅರ್ಜುನ, ಕಪಿಧ್ವಜ. ಮುರಿ-ತಿರುಗು. ಎಸು-ಬಾಣಪ್ರಯೋಗ ಮಾಡು. ಸುರನರೋರಗರು-ದೇವತೆಗಳು, ಮನುಷ್ಯರು ಮತ್ತು ನಾಗಲೋಕದವರು. ಮಿಡುಕು-ಪರಾಕ್ರಮ. ತೊಡರು-ಬಿರುದಿನ ಬಳೆ. ನೊರಜು-ಸೊಳ್ಳೆ. ಕೈದು-ಆಯುಧ].

ಜಲಧಿಯುಬ್ಬಿದವೊಲು ಸಭಾವಂ-
ಡಳಿ[1]ಯ ಸೌಹೃದವಾಗ್ವಿವಾದದ[1]
ಕಳಕಳಕೆ ದಿಗುತಟವ ಗಬ್ಬರಿಸಿದುದು [2]ಗಾಢ[2]ದಲಿ ।
ಕೆಲರು ಭೀಷ್ಮನನಿನತನೂಜನ
ಕೆಲರು ಕೊಂಡಾಡಿದರು [3]ಕೌರವ-
ನ[3]ಳುಕಿ ಭೀಷ್ಮನ ಬೇಡಿಕೊಂಡನು ವಿನಯಪರನಾಗಿ ॥ ೨೮ ॥

ಬೀಳುಕೊಂಡುದು ರಜನಿ ಮಱುದಿನ-
ವಾಳುಕುದುರೆಯು ನೆರಹಿ ಧರಣೀ-
ಪಾಲ ಸುಮುಹೂರ್ತದಲಿ ಹೊಯ್ಸಿದನಂದು ಹೊಜಿಗುಡಿಯ ।
ಸೂಳವಿಸಿದವು ಲಗ್ಗೆಯಲಿ ನಿ-
ಸ್ಸಾಳಕೋಟಿಗಳುರುಚತುರ್ಬಲ
ಮೇಳ[1]ವಿಸಿ[1] [2]ಬಂದುದು[2] ಸಮಸ್ತಮಹಾಮಹೀಶ್ವರರು ॥ ೨೯ ॥

ಮುರವಿಜಯ [1]ನಿಜ[1] ಪಾಂಚಜನ್ಯನ-
ನಿರದೆ ಫಲುಗುಣ ದೇವದತ್ತ
ಸ್ಫುರಿತರವ[2]ವನು[2] ರಚಿಸಿದರು ಮೂಲೋಕ ವ್ಯೆಮಱೆ[3]ಯೆ ।
ತುರಗವನು [3]ಬೋ[3]ಳೈಸಿ ವಾಘೆಯ
ತಿರುಹಿ ಚಮ್ಮಟಿಗೆಯಲಿ ಕೇಜಿಯ
ಬರಿ[4]ಯ[4] ಬೆದಱಿಸಿ ಕೃಷ್ಣ ಪಾರ್ಥನ ರಥವ [5]ಹೊಳಿಸಿದನು[5] ॥ ೩೦ ॥

---

೨೮. [1]ಯೊಳಗೆ ಸಂವಾದ ಹೃದಯರ (ಅ). [2]ಗುಪಿತ (ಅ). [3]ಭೂಪತಿಯ (ಅ).
[ಸೌಹೃದ ವಾಗ್ವಿವಾದ–ಸ್ನೇಹಭಾವದಿಂದ ಕೂಡಿದ ಚರ್ಚೆ. ಗಬ್ಬರಿಸು–ಭೇದಿ
ಸೀಳು. ಗಾಢ–ದಟ್ಟ. ಅಳುಕು–ಹೆದರು, ಭಯಪಡು].

೨೯. [1]ಐಲಿ (ಅ). [2]ನಡೆದುದು (ಕಾಮಾ).
[ರಜನಿ–ರಾತ್ರಿ, ಇರುಳು. ಹೊಯ್ಸು–ಸ್ಥಾಪಿಸು, ಏರಿಸು. ಹೊಜಿಗುಡಿ–ಹೊ
ಹಾಕುವ ಬಾವುಟ. ಸೂಳವಿಸು–ಹೊಡೆ, ಬಾರಿಸು. ಲಗ್ಗೆ–ಆಕ್ರಮಣ. ನಿಸ್ಸಾ
ಭೇರಿ].

೩೦. [1]ನಾ (ಅ). [2]ವನೆ (ಅ). [3]ಮೇ (ಅ). [4]ದೆ (ಅ). [5]ಲುಳಿವಡೆದ (ಕುವ
[ಮುರವಿಜಯ–ಕೃಷ್ಣ. ಪಾಂಚಜನ್ಯ–ಕೃಷ್ಣನ ಶಂಖ. ದೇವದತ್ತ–ಅರ್ಜು
ಶಂಖ. ಸ್ಫುರಿತ–ಹೊರಹೊರಟ. ಬೋಳೈಸು–ಚಪ್ಪರಿಸು, ಹುರಿದುಂ
ಚಮ್ಮಟಿಗೆ–ಬಾವಟ. ಕೇಜಿ–ಕುದುರೆ. ಬರಿ–ಪಕ್ಕೆ. ಹೊಳಸು–ಚಲಿಸು
ಮಾಡು, ಮುಂದಕ್ಕೆ ನಡಸು].

ಆಳುಮಯವಖಿಳೋರ್ವಿ ಪದಹತಿ-
ಧೂಳಿಮಯವಾಕಾಶ ರಥತುರ-
ಗಾಳಿಮಯ ದಿಗುಜಾಲವೇನೆಂಬೆನು ಮಹಾದ್ಭುತವ ।
ಕಾಳಗಕೆ ನೀನಲ್ಲದವನಿಯೊ-
ಳಾಳ ಕಾಣೆನು ಪಾರ್ಥ ಸಾಕಿ-
ನ್ನೇಳು ಬಾಣವ ತೂ[1]ಗು[1] ಮಾತಾಡಿಸು ಮಹಾಧನುವ ॥ ೩೧ ॥

ಎಲೆ ಧನಂಜಯ ಹಗೆಯ ಹೆಚ್ಚಿದ
ಹಳುವವಿದೆ[1]ಲಾ ವಜ್ರಸುತ ನಿ-
ನ್ನಳವಿಯಲಿ ತಱುಬಿದೆ[1] ಸುಯೋಧನಸೈನ್ಯಗಿರಿ[2]ನಿಕರ[2] ।
ಎಲೆ ಸಮೀರ[3]ಜನನುಜ[3] ರಿಪುಬಲ-
ವಿಲಯ ಮೇಘನಿಕಾಯವಿದೆ ಭುಜ-
ಬಲವ ತೋಱೈ ತಂದೆ ನೋಡುವೆನೆಂದನಸುರಾರಿ ॥ ೩೨ ॥

ಮೆಟ್ಟಿ ನೋಡಿದನಹಿತರಾಯರ
ಥಟ್ಟುಗಳ ತೆರಳಿಕೆಯನುತ್ಸ[1]ವ[1]-
ಗೆಟ್ಟು ಫಲುಗುಣ ಸೆಡೆದು ಮನದಲಿ ನೊಂದು ತಲೆ[2]ವಾ[2]ಗಿ ।
ಕೆಟ್ಟಕಾಯದ ಸುಖಕಳುಪಿ ಒಡ-
ಹುಟ್ಟಿದರ ಕೈಯಾಜಿ ಕೊಂದರೆ
ಮುಟ್ಟದೇ ಕಡುಪಾಪ ಘನಪರಿತಾಪ ತನಗೆಂದ ॥ ೩೩ ॥

---

೩೧. [1]ಗಿ (ಅ).

[ಅಖಿಳೋರ್ವಿ-ಸಮಸ್ತ ಭೂಮಿ. ಪದಹತಿಧೂಳಿ-ಪಾದದ ತುಳಿತದಿಂದ ಎದ್ದ ಧೂಳು. ಆಳು-ಶೂರ].

೩೨. [1]ನಿನ್ನತುಳ ಕೋಪಾನಳನನೌತಣಿಸೈ (ಅ). [2]ವಜ್ರ (ಅ). ಕುಮಾರ (ಅ).

[ಹಳುವ-ಕಾಡು. ವಜ್ರಸುತ-ಇಂದ್ರನ ಮಗ, ಅರ್ಜುನ. ಅಳವಿ-ಕಣ್ಣಳತೆ. ತಱುಬು-ಎದುರು ನಿಲ್ಲು. ಸಮೀರಜ-ಭೀಮ. ವಿಲಯ-ನಾಶ. ನಿಕಾಯ-ಸಮೂಹ].

೩೩. [1]ಹ (ಅ ಕುಮಾ). [2]ಮಾ (ಅ).

[ಮೆಟ್ಟು-ತುದಿಗಾಲಮೇಲೆ ನಿಲ್ಲು. ಥಟ್ಟು-ಸೈನ್ಯ. ತೆರಳಿಕೆ-ಸಮೂಹ. ಉತ್ಸವ-ಉತ್ಸಾಹ. ಸೆಡೆದು-ಮನಸ್ಸಿನಲ್ಲಿ ಮುದುಡಿಕೊಂಡು, ಹಿಂದೆಗೆದು].

ಕೆಲಬರೊಡಹುಟ್ಟಿದರು ಗುರುಗಳು
ಕೆಲರು ಕೆಲಬರು ಮಾವವೈದುನ-
ನಳಿಯ ಮಗ ಹಿರಿಯಯ್ಯ ಮುತ್ತಯ ಮೊಮ್ಮನೆನಿಸುವರು ।
ಕಳನೊಳನಿಬರ ಕೊಂದು ಶಿವಶಿವ
ಕೆಲವು ದಿವಸದ ಸಿರಿಗೆ ಸೋಲಿದು
ಮುಳುಗುವೆನೆ [1]ಹಾಹಾ ಭವಾಬ್ಧಿಯೊಳೆ[1]ನುತ ಮನಮುರಿದ ॥ ೩೪ ॥

ಎಡಹಿದೊಡೆ ರುಜೆಯಾಗಿಯಾಪ-
ತ್ತಡಸಿದೊಡೆ ಮೇಣಾವ ತೆಱದಿಂ-
ದೊಡಲುವಿಡಿದೊಡೆ ಮರಣ ತಪ್ಪದು ಸುರರಿಗೊಳಗಾಗಿ ।
ಕೆಡುವ ಕಾಯವ [1]ನಚ್ಚಿ[1] ಬಂಧುಗ-
ಳೊಡನೆ ವೈರವ ಮಸೆದು ನರಕಕೆ
[2]ಕೆಡೆ[2]ವೆನೇ ತಾನೆನುತ ರಥದಲಿ ಬಿಲ್ಲನಿಳುಹಿದನು ॥ ೩೫ ॥

ಕರಗಲಂತಃಕರಣ ಚಿಂತಾ-
ತುರನು ಸಂಗ್ರಾಮದ ವಿರಕ್ತಿಯ-
ಲಿರಲು ಕಂಡನು ಕಮಲನಾಭನು ನಗುತ ಮನದೊಳಗೆ ।
ತರಳನಿವನದ್ವೈತ ಕಲೆಯಲಿ
ಪರಿಣತನು ತಾನಲ್ಲ [1]ನೆವದಿಂ[1]
ನರನ ಬೋಧಿಸಬೇಕೆನುತ ನುಡಿಸಿದನು ಫಲುಗುಣನ ॥ ೩೬ ॥

ತರುಣಿಯರ ಮುಂದಸ್ತ್ರಶಸ್ತ್ರವ
ತಿರುಹಬಹುದು[1]ಬ್ಬರಿಸಬ[1]ಹುದ-
ಬ್ಬರಿಸಬಹುದೆನಗಾರು ಸರಿ [2]ತಾ[2] ಧೀರನೆನಬಹುದು ।

---

೩೪. [1]ಭವಸಿಂಧುವಿನೊಳಾನೆ (ಕುಮಾ).
[ಭವಾಬ್ಧಿ–ಸಂಸಾರಸಾಗರ].

೩೫. [1]ನಂಬಿ (ಅ). [2]ನಡೆ (ಅ).
[ರುಜೆ–ರೋಗ. ಒಡಲುವಿಡಿ–ಶರೀರ ಧರಿಸು, ಜನ್ಮವೆತ್ತು, ಮತ್ತೆ ಹುಟ್ಟು. ಕೆಡೆ–ಬೀಳು].

೩೬. [1]ನಯದಲಿ (ಅ).
[ವಿರಕ್ತಿ–ವೈರಾಗ್ಯ, ಆಸಕ್ತಿಯಿಲ್ಲದಿರುವುದು. ಕಲೆ–ವಿದ್ಯೆ].

೩೭. [1]ಬ್ಬೇಳಬ (ಕುಮಾ). [2]ನಾ (ಕುಮಾ).

ಕರಿತುರಂಗದ ಬಹಳ ಶಸ್ತ್ರೀ-
ತ್ಸರ[3]ದ ಬಾಣದ[3] [4]ಹರ[4]ಹಿನಲಿ [5]ಮೊಗ-[5]
ದಿರುಹದಿಹ ಕಲಿಯಾರು ಕುಂತೀಸೂನು ಕೇಳೆಂದ ॥ ೩೭ ॥

ಬಲುಹ ನೀ ನೋಡುವೊಡೆ ಪರಮಂ-
ಡಳಿಕರನು ತಂದೊಡ್ಡು ಬಳಿಕೆ-
ನ್ನಳವನೀಕ್ಷಿಸು ಸೆಡೆದೆನಾದೊಡೆ ನಿಮ್ಮ ಮೈದುನನೆ ।
ಕೊಲುವೆನೆಂತೈ ಭೀಷ್ಮರನು ಮನ-
ವಳುಕದೆಂತೈ ತಪ್ಪುವೆನು ಗುರು-
ಗಳಿಗೆ ಕೃಪಗುರುಸುತರನಿಜಿವುದಿದಾವ ನಯವೆಂದ ॥ ೩೮ ॥

ಎಲವೊ ಫಲುಗುಣ ನುಡಿದ ಭಾಷೆಯ
ಸಲಿಸಿ ಕಾನನದೊಳಗೆ ತೊಟ್ಟನೆ
ತೊಳಲಿ ಹದಿಮೂಱಬುದ ಬಂದಾಪತ್ತನನುಭವಿಸಿ ।
ನೆಲನ ಭಾ[1]ಗವ[1] ಬೇಡಿ ಸಂಧಿಗೆ
ಕಳುಹಿದಿರಿ ಕೌರವನು ನೂಕಿಸಿ
ಕಳೆದ ನಿಮಗಿ[2]ನ್ನೇನು[2] ಹೊಲ್ಲೆಹವೆಂದನಸುರಾರಿ ॥ ೩೯ ॥

ಲಾಲಿಸದೆ ಕುಲಛಲವ ನೀತಿಯ
ಪಾಲಿಸದೆ ಕೊಲೆಗಡಿಕತನದಲಿ
ಮೇಲುಗಾಣದೆ ಬಂಧುಗಳ ಗುರುಗಳ ಸಹೋದರರ ।
ಕೋಲ ಮೊನೆಯಲಿ ಕೊಂದು ನೆತ್ತರ-
ಗೂಳನುಂಬವೊಲಖಿಳರಾಜ್ಯದ
ಮೇಲೆ ಸೊಗಸುವ ಸಿರಿಯನೊಲ್ಲೆನು ಕೊಲುವನಲ್ಲೆಂದ ॥ ೪೦ ॥

---

೩೭. [3]ಕೃಪಾಣದ (ಕುಮಾ). [4]ತಗ (ಅ). [5]ಮುಖ (ಅ).

೩೮. [ಪರಮಂಡಳಿಕರು–ಶತ್ರುಮಂಡಲದವರು. ಅಳವು-ಶಕ್ತಿ, ಸಾಮರ್ಥ್ಯ. ಸೆಡೆ–ಹಿಮ್ಮೆಟ್ಟು, ಹಿಂದೆಗೆ. ಮನವಳುಕು–ಹಿಂಜರಿ, ಸಂಕೋಚಪಡು, ಆತಂಕಗೊಳ್ಳು].

೩೯. [1]ಗೆಯ (ಅ). [2]ಸ್ನಾವ (ಕುಮಾ).
[ಅಬುದ (=ಅಬ್ದ)–ವರ್ಷ. ಹೊಲ್ಲೆಹ–ಕೆಟ್ಟದ್ದು, ನೀಚತನ].

೪೦. [ಲಾಲಿಸು–ಕಾಪಾಡು. ಮೇಲು-ಲೇಸು, ಶ್ರೇಯಸ್ಸು].

ಆರನೈ ನೀ ಕೊಲುವೆ ನಿನ್ನಿಂ-
ದಾರು ಸಾವರು ದೇ[1]ಹವನೊ[1] ನಿಜ-
ಧೀರನಾತ್ಮನ ಕೊಲುವೆಯೋ ದಿಟ ನಿನ್ನ [2]ಹವಣೇ[2]ನು ।
ಚಾರುದೇಹಕೆ ಭೂತನಿಕರಕೆ
ವೈರವಿಲ್ಲುಳಿದಂತೆ ವಿಗತವಿ-
ಕಾರನಚಲನಗಮ್ಯನದ್ವಯನಾತ್ಮ ನೋಡೆಂದ ॥ ೪೧ ॥

ತನುವಳಿದ ಬಳಿಕಿನಲಿ ತನು ಸಂ-
ಜನಿಸುಗೆಂಬುದು ಭವ[1]ಭವಂಗಳ[1]
ತನುವಿನಲಿ ಕೌಮಾರಯೌವನವಾರ್ಧಕಂಗಳಲಿ ।
ತನು ವಿಕಾರಿಸುವುದು ಸುಕರ್ಮದ
ವಿನುತದುಷ್ಕೃತವೆಂಬ ಹುಸಿಕ-
ಲ್ಪನೆ ಶರೀರಕ್ಕಲ್ಲದಾತ್ಮಂಗಿಲ್ಲ ಕೇಳೆಂದ ॥ ೪೨ ॥

ಅಳಿವನಲ್ಲುದಯಿಸುವನಲ್ಲ-
ಗ್ಗಳಿಸುವವನಲ್ಲಡಗುವವನ-
ಲ್ಲಳಿವ ದೇಹದ [1]ಬಳಿಯ[1] ಹೊಣೆಯೇ ಸಚ್ಚಿದಾತ್ಮಕನು ।
ಕಳ[2]ಚಿದೊಡೆ ಕಳಚುವುದು ಕಾಯವಿ[2]-
ದುಳಿ[3]ದೊಡಳಿ[3]ವುದು ಚಿನುಮಯಂಗೀ
ಕಳಕಳದ ಕಾಲಾಟ ಕೊಳ್ಳದು ಪಾರ್ಥ ಕೇಳೆಂದ ॥ ೪೩ ॥

---

೪೧. [1]ಹಿಯೋ (ಅ). [2]ಬಗೆಯೇ (ಕುಮಾ).
[ಹವಣು–ಎಣಿಕೆ, ಸಿದ್ಧತೆ. ಭೂತನಿಕರ–ಪ್ರಾಣಿಗಳ ಸಮೂಹ. ವಿಗತವಿಕಾರ ಚಲನಗಮ್ಯನದ್ವಯನಾತ್ಮ (ವಿಗತವಿಕಾರನು + ಅಚಲನು + ಅಗಮ್ಯನು + ಅದ್ವಯನು + ಆತ್ಮ)–ಆತ್ಮನು ಯಾವ ವಿಧವಾದ ಮಾರ್ಪಾಡನ್ನೂ ಹೊಂದದವನು ಚಲಿಸದವನು, ಬಳಿ ಸೇರಲಾಗದವನು, ಎರಡಲ್ಲದವನು].

೪೨. [1]ವ ಬಳಸುವ (ಕುಮಾ).
[ತನು–ದೇಹ. ಭವಭವಂಗಳ–ಜನ್ಮ ಜನ್ಮಾಂತರಗಳ. ಕೌಮಾರ–5 ವರ್ಷ (ಬಾಲ್ಯ) ಮತ್ತು 16 ವರ್ಷಗಳ (ಯೌವನ) ನಡುವಣ ವಯಸ್ಸು. ವಿಕಾರಿಸು ರೂಪಾಂತರ, ಬದಲಾವಣೆ, ಹೊಂದು. ಸುಕರ್ಮ–ಒಳ್ಳೆಯ ಕರ್ಮ. ದುಷ್ಕೃತ ಕೆಟ್ಟ ಕರ್ಮ].

೪೩. [1]ಬಗೆಗೆ (ಕುಮಾ). [2]ಚುವೊಡೆ ಕಾಯದೆ ಕಳಲ್ಚುವುದು ಕಾಯವಿ (ಅ)
[3]ವುದಾ (ಅ).

ನಿನಗೆ ಸಾವವನಲ್ಲ ನಿನ್ನಂ-
ಬಿನಲಿ ನೋವವನಲ್ಲ ದಿಟ ನೀ
ಮುನಿದು ಗಗನಕ್ಕಲಗನುಗಿದೊಡೆ ಗಗನವಳುಕುವುದೆ ।
ತನುವಿ[1]ನೀ[1] ಗುಣಧರ್ಮಕರ್ಮದ
ಹೊನಲ ಹೊಗು[2]ವನೆ[2] [3]ನಿತ್ಯ[3]ನಿರ್ಮಲ-
ಚಿನುಮಯಾತ್ಮಕನೆಲೆ ವೃಥಾಹಂಕಾರವೇಕೆಂದ || ೪೪ ||

ಹರಿಯೆ ಚಿತ್ತೈಸೈ ಅಹಿಂ[1][ಸೆಯೆ][1]
ಪರಮಧರ್ಮ[2]ವು[2] ಎಂಬ ವಾಕ್ಯೋ-
ಚ್ಚರಣೆ ಸಾರೋದ್ಧಾರವಲ್ಲಾ ಸಕಲದರ್ಶನಕೆ ।
ನೆರವಿಯಿನಿಬರ ತನ್ನವರ ಕೊರ-
ಳರಿತದಲಿ ಕೊರ್ಕ್ಕರಿಸದಿರ್ದೊಡೆ
ನರಕದೊಳು ನೂರೊಂದು ಕುಲ ಮುಳುಗಾಡದಿರದೆಂದ || ೪೫ ||

ನಿರುತವರ್ಜುನ ಕೇಳಹಿಂಸಾ-
ಪರಮಧರ್ಮದ ತತ್ಸ್ವರೂಪವ-
ನೊರೆವೆನಾಲಿಸು ಸಚ್ಚಿದಾನಂದೈಕಘನವೆನಿಪ ।
ನಿರುಪಮಾತ್ಮನ ನಿಲವ[1]ನರಿಯ[1]ದೆ
ನರಕಿ ಜಡ ನಾ ಜೀವನೆಂಬೀ
[2]ತರಳ[2]ತನವೇ ಹಿಂಸೆಯರಿತೊಡಹಿಂಸೆ ಕೇಳೆಂದ || ೪೬ ||

---

೪೩. [ಉದಯಿಸು-ಹುಟ್ಟು. ಅಗ್ಗಳಿಸು-ಹೆಚ್ಚಾಗು. ಅಡಗು-ಮರೆಯಾಗು. ಬಳಿಯ-ಅನಂತರದ. ಹೊಣೆ-ಉತ್ತರವಾದಿತ್ವ. ಚಿನುಮಯ-ಚಿನ್ಮಯ, ಚೈತನ್ಯ ಸ್ವರೂಪನಾದ ಆತ್ಮ. ಕಳಕಳದ ಕಾಲಾಟ ಕೊಳ್ಳದು-ಜಂಜಾಟದ ಜನ್ಮಜನ್ಮಾಂತರಗಳ ಹುಟ್ಟು ಸಾವಿನ ಸಂಬಂಧವಿರುವುದಿಲ್ಲ].

೪೪. [1]ಗೀ (ಅ). [2]ವುದೆ (ಕುಮಾ). [3]ಶುದ್ಧ (ಅ).
[ಅಲಗು-ಕತ್ತಿ. ಉಗಿ-ತಿವಿ, ಇರಿ. ಹೊನಲು-ಪ್ರವಾಹ, ಗಮನ, ಗತಿ].

೪೫. [1]ಸಾ (ಅ ಕುಮಾ). [2]ವೆ (ಅ).
[ಸಾರೋದ್ಧಾರ-ಮುಖ್ಯತತ್ವ. ಅರಿತ-ಕತ್ತರಿಸುವುದು. ಕೊರ್ಕ್ಕರಿಸು-ಹೇಸು. ಕುಲ-ತಲೆಮಾರು].

೪೬. [1]ನೋಡ (ಅ). [2]ದುರುಳ (ಅ).
[ನಿರುತ-ನಿಶ್ಚಯ. ನಿಲವು-ಸ್ಥಿತಿ, ಸ್ವರೂಪ. ನರಕಿ ಜಡ-ನರಕಕ್ಕೆ ಹೋಗುವ ಜಡದೇಹ. ಜೀವ-ಜೀವಾತ್ಮ. ತರಳತನ-ಬಾಲಿಶತನ, ಹುಡುಗತನ, ದಡ್ಡತನ].

ಕರ್ಮವೇ ಹೂಡುವುದು ತೆನುವನು
ಕರ್ಮವೇ ಸಲಹುವುದು ಕಡೆಯಲಿ
ಕರ್ಮವೇ ಕಳಚುವುದು [1]ಜೀವ[1]ಭ್ರಮೆಯ ಬಾಹಿರರ ।
ಕರ್ಮ ತಾನೇನಾದೊಡಾಗಲಿ
ನಿರ್ಮಮತೆಯಲಿ ಮಾಡಿ ನಮ್ಮಲಿ
ನಿರ್ಮಿಸಲು ಕಲಿಪಾರ್ಥ ನೀ ನಿರ್ಲೇಪನಹೆಯೆಂದ ॥ ೪೭ ॥

ಸುಕೃತದುಷ್ಕೃತವೆಂಬವೇ ಬಾ-
ಧಕವು ಜೀವರಿಗೀಯಹಂಕೃತಿ
ವಿಕಳತೆಗೆ ತಾ [1]ಬೀಜ ಜನ್ಮದ[1] [2]ಚಿ[2]ಟ್ಟುಮುರಿಗಳಿಗೆ ।
ಸಕಲಕರ್ತೃತ್ವಾದಿಭೋಕ್ತೃ-
ತ್ವರಕವಿದಾತ್ಮಂಗಿಲ್ಲ ಪಿತ್ತಾ-
ಧಿಕನು ತಿರುಗುತ ಲೋಕ ತಿರುಗುವುದೆಂಬ [3]ತೆಱನಂತೆ[3] ॥ ೪೮ ॥

ಮರುಳೆ ಫಲುಗುಣ ಕೇಳು ಸಚರಾ-
ಚರವೆನಿಪ ಜಗವೆನ್ನ ಲೀಲಾ-
ಚರಿತದಲಿ ತೋಱುವುದು ಹರೆವುದು ನನ್ನ ನೇಮದಲಿ ।
ನಿರುತ ನೀ ಕೇಳುವೊಡೆ [1]ತಿರ್ಯಚ್[1]
ನರಸುರಾದಿಗಳೆಂಬ ಸಚರಾ-
ಚರವಿದಾನಲ್ಲದೆ ವಿಚಾರಿಸಲನ್ಯವಿಲ್ಲೆಂದ ॥ ೪೯ ॥

---

೪೭. [1]ಚಿತ್ತ (ಅ).

[ಜೀವಭ್ರಮೆ-ದೇಹವೇ ಜೀವಾತ್ಮ ಎಂಬ ತಪ್ಪು ತಿಳುವಳಿಕೆ. ಬಾಹಿರ-ಹೊರಗಾದವನು. ನಿರ್ಮಮತೆ-ನಿರಹಂಕಾರ ಭಾವ. ನಮ್ಮಲಿ ನಿರ್ಮಿಸು-ಪರಮಾತ್ಮನಾದ ನನ್ನಲ್ಲಿ ಅರ್ಪಿಸು. ನಿರ್ಲೇಪ-ಯಾವುದಕ್ಕೂ ಅಂಟಿಕೊಳ್ಳದವನು].

೪೮. [1]ಜೀವ ಬೀಜದ (ಅ). [2]ಚು (ಅ ಕುಮಾ). [3]ತೆರನೆಂಬ್ಯೆ (ಅ).

[ಬಾಧಕ-ತೊಂದರೆ, ವಿಘ್ನ. ಅಹಂಕೃತಿ-ಅಹಂಕಾರ. ವಿಕಳತೆ-ಕೊರತೆ, ಅರೆಕೊರೆ. ಚಿಟ್ಟುಮುರಿ-ಮುಟ್ಟಿ ಹಿಡಿಯುವಾಟ; ಚೂಟಾಟ (ಕಿಟ್ಟು > ಚಿಟ್ಟು = ಮುಟ್ಟು), ಕರ್ತೃತ್ವ-ಕರ್ಮ ಮಾಡುವುದು. ಭೋಕ್ತೃತ್ವ-ಫಲವನ್ನು ಅನುಭವಿಸುವುದು. ಪಿತ್ತಾಧಿಕ-ಪಿತ್ತ ಹೆಚ್ಚಾದವನು].

೪೯. [1]ತಿಳಿಯವು (ಅ).

[ಲೀಲಾಚರಿತ-ಲೀಲೆಯ ನಡೆವಳಿಕೆ. ಹರೆ-ಚೆದರು, ಮರೆಯಾಗು. ನೇಮ-ಅಜ್ಞೆ. ತಿರ್ಯಚ್-(ತಿರ್ಯಕ್) ಪ್ರಾಣಿವರ್ಗ].

ಏಕನಾತ್ಮನನಂತನಚಲನ-
ಶೋಕನದ್ವಯನಮಲನಭವನ-
ಲೋಕನಿಸ್ಪೃಹನವಿತನಕ್ರಿಯನಹತನಭ್ರಮನು ।
ಲೋಕಗತಿ ಮಾಯಾವಿಲಾಸ ವಿ-
ವೇಕಿಗಳಿಗಿದು ಬಯಲು ಫಲುಗುಣ
ಸಾಕು ಗರ್ವವ ಬೀಳುಕೊಡು ಸೆಳೆ ಶರವ ಹಿಡಿ ಧನುವ ॥ ೫೦ ॥

ದಾಸ ನಾನೆನಗಮಲಮೂರ್ತಿ ವಿ-
ಲಾಸವನು ತೋರುವುದು ಸಲಹುವು-
[1]ದೇ[1]ಸಜವನ್ನೈ ನಾನು ಸಮ್ಯಜ್ಞಾನಭಾ[2]ವನೆಗೆ[2] ।
ಮೀಸಲಳಿಯದ ಮಿಕ್ಕ ಬ[3]ಳ[3]ಕೆಯ
ಪಾಶ ತಾಗದ ನಿನ್ನ ಲೀ[4]ಲಾ-[4]
ಭಾಸುರಶ್ರೀಮೂರ್ತಿಯನು ವ್ಯೆದೋರಬೇಕೆಂದ ॥ ೫೧ ॥

ಆದೊಡರ್ಜುನ ನೋಡೆನುತ ಕಮ-
ಳೋದರನು ಕೈಕೊಂಡನಗ್ಗದ-
ನಾದಿಪುರುಷ ಶ್ರೀನಿಜವ ವಿಶ್ವಾತ್ಮಕಾಕೃತಿಯ ।
ಸಾಧಿಸುವ ಷಟ್ತರ್ಕಗಿರ್ಕದ
ಭೇದಕೊಳ್ಳದ ಸಕಲಲೋಕದ
ಬೀದಿ ವಿಸಟಂಬರಿವ ವಿಮಳವಿರಾಟರೂಪವನು ॥ ೫೨ ॥

---

೫೦. [ಅಭವ-ಹುಟ್ಟು ಇಲ್ಲದವನು. ಅಲೋಕ-ಯಾವ ಲೋಕದಲ್ಲೂ ನಿವಾಸಿಯಲ್ಲದವನು. ನಿಸ್ಪೃಹ-ಆಸೆ ಇಲ್ಲದವನು. ಅಕ್ರಿಯ-ಯಾವ ಕರ್ಮವನ್ನೂ ಮಾಡದಿರುವವನು. ಅಹತ-ಕೊಲ್ಲಲ್ಪಡದವನು. ಅಭ್ರಮ-ಭ್ರಮೆಯಿಲ್ಲದವನು. ಲೋಕಗತಿ ಮಾಯಾವಿಲಾಸ ವಿವೇಕಿಗಳಿಗಿದು ಬಯಲು-ಲೋಕದ ಸ್ವರೂಪವೆಲ್ಲವೂ ಮಾಯೆಯ ವಿಲಾಸ ಎಂಬ ಅರಿವುಳ್ಳ ವಿವೇಕಜ್ಞಾನವುಳ್ಳವರಿಗೆ ಇದು ಕೇವಲ ಶೂನ್ಯ].

೫೧. [1]ದೈ (ಕುಮಾ). [2]ಜನಕೆ (ಅ ಕುಮಾ). [3]ಯ (ಅ ಕುಮಾ). [4]ಲೆಯ (ಕುಮಾ). [ವಿಸಜವನು-ಎಷ್ಟರವನು, ಗಣನೆಗೆ ಬಾರದವನು. ಸಮ್ಯಗ್ಜ್ಞಾನ-ಪರಿಪೂರ್ಣಜ್ಞಾನ. ಭಾಸುರ-ಪ್ರಕಾಶಮಾನವಾದ. ವ್ಯೆದೋರು-ಕಾಣಗೊಡು, ಪ್ರತ್ಯಕ್ಷವಾಗಿಸು].

೫೨. [ಅಗ್ಗದ-ಶ್ರೇಷ್ಠವಾದ. ಶ್ರೀನಿಜ-ಮಂಗಳಕರವಾದ ಸತ್ಯಸ್ವರೂಪ. ವಿಶ್ವಾತ್ಮಕ-ಸಕಲ ವಿಶ್ವವನ್ನೂ ಒಳಗೊಂಡ. ಷಟ್‌ತರ್ಕ-ಸಾಂಖ್ಯ, ಯೋಗ, ನ್ಯಾಯ, ವೈಶೇಷಿಕ, ಮೀಮಾಂಸ, ವೇದಾಂತ—ಎಂಬ ಆರು ಶಾಸ್ತ್ರಗಳು. ಭೇದಕೊಳ್ಳದ-

ಬಿಳಿದುಕರಿದೆಂಬಾಱು[1]ಬಣ್ಣ[1]ದ
ಹೊಲಬು ಹೊದ್ದದ ಸೂರ್ಯಕೋಟಿಯು
ಹೊಳ[2][ಹ][2] ನಖದೀಧಿತಿಯು ಹೋಲದ ನಿಜದ ಹೊಸಪರಿಯು ।
ಅ[3]ಳಿ[3]ವಿನಳತೆಯು [4]ಜನನ[4]ವಾರ್ತೆಯು
ಸುಳಿವು ಸೋಂಕದ ಸಕಲಲೋಕ-
ಪ್ರಳಯಕಾರಣ ತೆಗೆದನಗ್ಗದ ವಿಶ್ವರೂಪವನು ॥ ೫೩ ॥

ಉಬ್ಬಿದನು ಹರುಷದಲಿ ಕಂಗಳ
ಗಬ್ಬ ಮುಱಿದುದು ಮನದ ನಿಗುರಿನ
ಹಬ್ಬುಗೆಯು ಹೊಲಬಳಿಯೆ ನಾಲಗೆಯುಡುಗೆ ಹೆಡತಲೆಗೆ ।
ಸಬ್ಬಗತನೈ ಶಿವಶಿವಾ ಬಲು-
ಮಬ್ಬಿನಲಿ ಮುಂದಱಿಯದೆನ್ನಯ
ಕೊಬ್ಬನೇವಣ್ಣಿಸುವೆನೆಂದಡಿಗಡಿಗೆ ಬೆಱಗಾದ ॥ ೫೪ ॥

ಇದೆ ನಿರಂಜನತತ್ವಸಾಮ್ರಾ-
ಜ್ಯದ [1]ಸಗಾಢಿಕೆ[1] ನಾವು ಕಡುಮೂ-
ರ್ಖದಲಿ ಮೈಮಱೆದೆವು ಶರೀರದ ಬಂಧುಕೃತ್ಯದಲಿ ।
ಯದುಗಳನ್ವಯದಾತ ನಮಗೊ-
ಳ್ಳಿದನು ಸೋದರಭಾವನೆಂದೇ
ಮದಮುಖನು ಕಡುಗೇಡ ಕೆಟ್ಟೆನು ಶಿವಶಿವಾ ಎಂದ ॥ ೫೫ ॥

---

೫೨. ವಿಭೇದಕ್ಕೆ ಒಳಗಾಗದ. ಸಕಲ ಲೋಕದ ಬೀದಿ ವಿಸಂಟಂಬರಿವ-ಎಲ್ಲ ಲೋಕಗಳಲ್ಲಿಯೂ ಅಡೆತಡೆಯಿಲ್ಲದೆ ಸ್ವೇಚ್ಛೆಯಾಗಿ ವಿಹರಿಸುವ (ಅಂದರೆ, ಸರ್ವಾಂತರ್ಯಾಮಿಯಾದ). ವಿರಾಟರೂಪ-ವಿಶ್ವರೂಪ].

೫೩. [1]ವರ್ಣ (ಕುಮಾ). [2]ವು (ಅ), ಹು (ಕುಮಾ). [3]ಳ (ಕುಮಾ). [4]ಜಗದ (ಅ ಕುಮಾ).
[ಆರು ಬಣ್ಣ-ಕಪ್ಪು, ಬಿಳಿಪು, ಹಸಿರು, ಹಳದಿ, ಕೆಂಪು, ನೀಲಿ. ಹೊಲಬು-ದಾರಿ, ಮಾರ್ಗ. ನಖದೀಧಿತಿ-ಉಗುರಿನ ಕಾಂತಿ. ತೆಗೆದನು-ಪ್ರಕಟಪಡಿಸಿದನು].

೫೪. [ಗಬ್ಬ (=ಗರ್ಭ)-ಒಳಭಾಗ. ನಿಗುರಿನ-ನೇರವಾಗಿರುವ. ಹೆಡತಲೆ-ತಲೆಯ ಹಿಂಭಾಗ. ಸಬ್ಬಗತ (=ಸರ್ವಗತ)-ಎಲ್ಲದರಲ್ಲಿಯೂ ಅಡಗಿರುವವನು].

೫೫. [1]ಸಘಾಟಿಕೆ (ಅ ಕುಮಾ).
[ನಿರಂಜನ ತತ್ವ-ಪರಮಾತ್ಮ ತತ್ವ. ಮದಮುಖ-ಗರ್ವಿಷ್ಠ].

ಮುರಹರ ತ್ರಾಯಸ್ವ ಕರುಣಾ-
ಕರ ಪರಿತ್ರಾಯಸ್ವ ಲಕ್ಷ್ಮೀ-
ವರ ಪರಿತ್ರಾಯಸ್ವ ದನುಜಾಂತಕ ಪರಿತ್ರಾಹಿ ।
ಚರಣಭಜಕಕುಟುಂಬಕನೆ ಘನ-
ದುರಿತ[1]ವಿಪಿನಕೃಶಾನುವೇ[1] [2]ಭವ[2]
ಹರ ನಿರೀಕ್ಷಿ[3]ಸು[3] ರಕ್ಷಿಸೆನ್ನನೆನುತ್ತ ಹೊರಳಿದನು ॥ ೫೬ ॥

ದೇವ ಭಕ್ತಜನಾರ್ತಪಾಲಕ
ದೇವ ಬಹಳಕೃಪಾಮಹಾರ್ಣವ
ದೇವ ಸರ್ವೇಶ್ವರ ಸದಾತ್ಮಕ ಸಕಲನಿಷ್ಕಳನೆ ।
ಸೇವಕರಲಾರ[1]ಯ್ವುದೇ[1] ಸುಗು-
ಣಾವಗುಣವನು ನಿಮ್ಮ ಭೃತ್ಯನ
ಭಾವ [2]ಬೆ[2]ಚ್ಚಿತು ವಿಶ್ವರೂಪವ ಬೀಳುಕೊಡಿ ಯೆಂದ ॥ ೫೭ ॥

ಎಳನಗೆಯ ಸಿರಿಮೊಗದ [1]ಮಿಂಚಿನ[1]
ಹೊಳೆಹೊಳೆವ ನಿಟ್ಟೆಸಳುಗಂಗಳ
ತೊಳಪ ಕದಪಿನ [2]ಮಿಸುಪ[2] ಕಾಂತಿಯ ಮಕರಕುಂಡಲದ ।
ಲಲಿತಕಂಠದ ಕೌಸ್ತುಭೋ[3]ರ-[3]
ಸ್ಥಳದ ನಿಡಿದೋಳುಗಳ ಕೋಮಲ-
[4]ತಳಿತ[4] ಪೀತಾಂಬರದ ಮುನ್ನಿನ ರೂಪ ತೋಱಿಂದ ॥ ೫೮ ॥

---

೫೬. ಕುಂಜರಕೇಸರಿಯೆ (ಅ). [2]ಮುರ (ಅ). [3]ಸಿ (ಅ).
[ತ್ರಾಯಸ್ವ, ಪರಿತ್ರಾಹಿ-ರಕ್ಷಿಸು, ಕಾಪಾಡು. ದುರಿತ-ಪಾಪ. ವಿಪಿನ-ಕಾಡು. ಕೃಶಾನು-ಬೆಂಕಿ. ಭವ-ಜನ್ಮ, ಹುಟ್ಟು].

೫೭. [1]ಯ್ವರೇ (ಅ ಕುಮಾ). [2]ಹೆ (ಅ).
[ಅರ್ಣವ-ಸಮುದ್ರ. ಸಕಲ-ವಿಶ್ವದ ಎಲ್ಲ ಭಾಗಗಳನ್ನೂ ಒಳಗೊಂಡು ಸಗುಣನಾಗಿರುವವನು. ನಿಷ್ಕಲ-ನಿರ್ಗುಣ, ನಿರಾಕಾರ. ಆರಯ್-ವಿಚಾರಮಾಡು, ಪರಿಗಣಿಸು].

೫೮. [1]ಚೆಲುವಿನ (ಕುಮಾ). [2]ಮುಖದ (ಅ). [3]ರು (ಅ). [4]ವಲಯ (ಅ).
[ನಿಟ್ಟೆಸಳು-ನಿಡಿದಾದ (= ಉದ್ದನೆಯ) ಎಸಳು, ದಳ. ಮಕರ ಕುಂಡಲ-ಒಂದು ಬಗೆಯ ಕಿವಿಯ ಆಭರಣ. ಕೌಸ್ತುಭೋರಸ್ಥಳ-ಕೌಸ್ತುಭ ರತ್ನದಿಂದ ಶೋಭಿಸುವ ವಕ್ಷ (ಎದೆ) ಸ್ಥಳ. ತಳಿತ-ಸುತ್ತುಗಟ್ಟಿದ].

ಪರಮಪುರುಷನು ನೀನು ಕರ್ಮದ
¹ಸರಣಿ¹ ನನ್ನದು ನೀ ಚರಾಚರ-
ಭರಿತಭಾರಿಯವಿಶ್ವಮಯನವ್ಯಕ್ತನದ್ವಯನು ।
ನರನ ಮತಿಯಿದು ಮಂದಮತಿ ಗೋ-
ಚರಿಸಲಱಿವುದೆ ²ದೇವ ಕರುಣಿಸು²
ಕರುಣಿಸೈ ಪದ್ಮೋಜ ತನ್ನೊಡನಾಡಿತನದನುವ ॥ ೫೯ ॥

ನಿಗಮನಿಕರವ ಸೆಳೆವ ತಿರುಗುವ
ನಗಕೆ ಬೆನ್ನನು ಕೊಡುವ ¹ಜಲನಿಧಿ
ಮುಗುಚಿ¹ ಮಹಿಯನು ನೆಗೆವ ಮಗುವಿನ ನುಡಿಗೆ ಮೈಗುಡುವ ।
ಗಗನಕಂಘ್ರಿಯನಿಡುವ ತಾಯ-
²ಕ್ಕೆ²ಗಳೆಗಳೆಯ ಕೋರ್ವ ರಾಣಿಯ
ಸೊಗಸ ಸಲಿಸುವ ³ಕೃಪೆ³ಯನೆನ್ನಲಿ ⁴ತೋಱಬೇಕೆಂದ⁴ ॥ ೬೦ ॥

ದೇವ ಲಕ್ಷ್ಮೀಕಾಂತ ¹ಸಿತ¹ರಾ-
ಜೀವಲೋಚನ ಭೂತಭಾವನ
ರಾವಣಾಂತಕ ಗೋಪವೇಷವಿಲಾಸ ಜಯವಾಸ ।
ದೇವಕೀನಂದನ ಯಶೋದಾ-
ದೇವಿಯುನ್ನತಪುಣ್ಯಫಲ ತಲೆ-
ಗಾವುದೈ ತರುವಲಿಗೆ ತೋಱೈ ಮುನ್ನಿನಾಕೃತಿಯ ॥ ೬೧ ॥

---

೫೯. ¹ಶರಣ (ಅ). ²ಜೀಯಮುಪಹರ (ಅ).
[ಸರಣಿ–ಶ್ರೇಣಿ, ಸಾಲು, ಪರಂಪರೆ].

೬೦. ¹ಜಲಧಿಯ ಹೊಗುವ (ಅ). ²ಕ್ಕ (ಅ). ³ಬಗೆ (ಅ). ⁴ಕೃಪೆಯ ಮಾಡೆಂದ (ಅ).
[ನಿಗಮ–ವೇದಗಳು. ನಗ–ಪರ್ವತ. ಮಹಿ–ಭೂಮಿ. ನೆಗೆ–ಮೇಲಕ್ಕೆ ಎತ್ತು. ಅಕ್ಕೆ (ಅಳ್ಕೆ)–ಅಳು(ಪಿಕೆ). ಈ ಪದ್ಯದಲ್ಲಿ ಶ್ರೀವಿಷ್ಣುವಿನ ಏಳು ಅವತಾರಗಳನ್ನು (ಎಂದರೆ ಮತ್ಸ್ಯ, ಕೂರ್ಮ, ವರಾಹ, ನಾರಸಿಂಹ, ವಾಮನ, ಪರಶುರಾಮ, ರಾಮ) ಸೂಚಿಸಿದೆ].

೬೧. ¹ವರ (ಕುಮಾ).
[ಸಿತರಾಜೀವ–ಬಿಳಿಯ ತಾವರೆ. ಭೂತ ಭಾವನ–ಪ್ರಾಣಿಗಳೆಲ್ಲವೂ ತಾನೇ ಆಗಿರುವವನು. ತಲೆಗಾಯು–ರಕ್ಷಿಸು. ತರುವಲಿ–ತಬ್ಬಲಿ].

ಮಱೆದು ನಾಲಗೆಗೊನೆಗೆ ನಾಮದ
ನಿಱಿಗೆ ನೆಲೆಗೊಳೆ ನಿನ್ನನೇ ನಲಿ
ತೆಱುವ ಬಿರುದನು ಬಲ್ಲೆನೊರಲಿದು ನಿನ್ನ ಹಲುಬಿದೊಡೆ ।
ಉಱುವ ಪೆಂಗುಸಿಗುನ್ನತಿಕೆಯುಲಿ
ಸೆಱಗು ಬೆಳೆದುದ [1]ಕಂಡೆ[1]ನೈ ಸೈ-
ಗಱೆವುದೈ ಕಾರುಣ್ಯವರ್ಷವನೆನ್ನ ಮೇಲೆಂದ ॥ ೬೨ ॥

ಪಸುಳೆಗಮರಾಚಲದ ಹೊಱೆ ಸೈ-
ರಿಸುವುದೇ ಮಱಿಹುಲ್ಲೆ ಸಿಂಹದ
ಮುಸಕಕಿದಿರೇ ಎಳಲತೆಯು ಕುಡಿ ಮಾಳಗೆಗೆ ತೊಲೆಯೆ ।
ಪಸಿ[1][ದೆ][1]ರಳೆ ಸಿಡಿಲೆಱಗಿದೊಡೆ ಜೀ-
ವಿಸುವುದೇ ನಿಮ್ಮಡಿಯು ವಿಶ್ವ-
ಪ್ರಸರರೂಪಿಂಗಾನುಲಕ್ಷ್ಯವೆ [2]ದೇವ ಹೇಳೆಂದ[2] ॥ ೬೩ ॥

ನೆನೆದೊಡಜಕೋಟಿಗಳು ನಿನ್ನಯ
ಮನದೊಳಗೆ ಜನಿಸುವರುಪೇಕ್ಷೆಯೊ-
ಳನಿತು ಕಮಲಜರಳಿವರೆಂದೊಡೆ ನಿನ್ನ ಮಹಿಮೆಯನು ।
ನೆನೆಯಲಳವೇ ದೇವ ಸಾಕೆ-
ನ್ನನುವರದೊಳೆನಗೇನ ಬೆಸಸಿದೊ-
ಡನಿತುವನು ಮುಖದಿರುಹಿದೊಡೆ ಡಿಂಗರಿಗನಲ್ಲೆಂದ ॥ ೬೪ ॥

---

೬೨. [1]ಬಲ್ಲೆ (ಅ ಕುಮಾ).

[ನಿಱಿಗೆ–ಸ್ವರೂಪ, ಪರಿಣಾಮ. ಒರಲು–ಕೂಗಿ ಕರೆ. ಹಲುಬು–ಬೇಡಿಕೊ, ಮೊರೆಯಿಡು, ಗೋಳಾಡು. ಉಱುವ–ಶ್ರೇಷ್ಠವಾದ ಉನ್ನತಿಕೆ–ವಿಶೇಷ, ಹೆಚ್ಚಳ, ಮೇಲ್ಮೆ. ಸೆಱಗು–ವಸ್ತ್ರದ ತುದಿ (ಇಲ್ಲಿ ಸೀರೆಯ ತುದಿ, ಸೀರೆ). ಸೈಗಱೆ–ಚೆನ್ನಾಗಿ ಮಳೆಗರೆ, ಸುರಿಸು].

೬೩. [1]ದ (ಅ ಆ ಕುಮಾ). [2]ನಲಹಬೇಕೆಂದ (ಆ).

[ಅಮರಾಚಲ–ಮೇರುಪರ್ವತ. ಮುಸಕ–ರೋಷ, ಆಕ್ರೋಶ. ಪಸಿದೆರಳೆ–(ಪಸಿ+ತೆರಳೆ)–ಕ್ಷುದ್ರವಾದ ಒಂದು ಬಗೆಯ ಹುಳು. ವಿಶ್ವಪ್ರಸರ–ವಿಶ್ವವ್ಯಾಪಿ. ಲಕ್ಷ್ಯ–ಈಡು, ಗುರಿ].

೬೪. [ಅಜಕೋಟಿ–ಕೋಟಿ ಬ್ರಹ್ಮರು. ಅನುವರ–ಯುದ್ಧ. ಡಿಂಗರಿಗ–ಸೇವಕ].

ಮರಳಿ ಮುನ್ನಿನ ರೂಪನಂಗೀ-
ಕರಿಸಿ ಚಾಪವ ಕೊಂಡು [1]ತುರಗವ-
ತಿರುಹಿ ಉಳಿವಡೆಸುತ್ತ[1] ಪಾರ್ಥಗೆ ಮಾಯೆಯನು ಬೀಸಿ ।
ಶರಧನುವ ಕೊಳ್ಳೇಳು ಕೈಕೋ
ಪರಬಲದ ತೋಟಿಯನು ತೋಱು
ಬಿರುದ ಘಾತಕತನವನೆಂದನು ನಗುತ ಮುರವೈರಿ ॥ ೬೫ ॥

ಮೋಹ ಮಿಗೆ ಪಾಂಡವ ಮಮ ಪ್ರಾ-
ಣಾ ಹಿ ಯೆಂಬೀ ಬಿರುದ ಸ[1]ಲಿಸ[1]ಲು
ಗಾಹಿನಲಿ ಮೇದಿನಿಯ ತಿಣ್ಣವ [2]ನಿಳುಹ[2]ಲೋಸುಗ[3]ವೆ[3] ।
ಆಹವದಲರ್ಜುನನ ರಥದಲಿ
ವಾಹಕನು ತಾನಾಗಿ ಶರಣ-
ಸ್ನೇಹಸಂಸಾರಾನುರಾಗನು ಸುಳಿಸಿದನು ರಥವ ॥ ೬೬ ॥

೨. ಪಡೆಗಳ ಕಾಳಗ

ಎರಡು ಬಲ ಕೈಲಾಗನೀಕ್ಷಿಸು-
ತಿರೆ ಕೃತಾಂ[1]ತನ ಪುರಕೆ[1] ವಾಹಿನಿ
ಸರಿವುದೆಂಬಂದದಲಿ ಕೈವೀಸಿದರು ಭೂಭುಜರು ।
ಅರರೆ ಮೂಡಣಶರಧಿ ಪಡುವಣ-
ಶರಧಿಗಾಂತುದೊ ರಣಚಮತ್ಕೃತಿ
ಸುರರ ನಯನಾಂಗಣಕೆ ಕವಿಸಿತು ಕೌತುಕಾಂಬುಧಿಯ ॥ ೬೭ ॥

---

೬೫. [1]ತುರಗಾವಳಿಯಲುಳಿವಡೆಸುತ್ತ (ಅ).
[ತಿರುಹಿ-ತಿರುಗಿಸಿ ಉಳಿವಡೆ-ಚುರುಕುಗೊಳಿಸು. ಕೈಕೋ-ಕೈಕೊಳ್ಳು, ಸ್ವೀಕರಿಸು. ತೋಟಿ-ಕಾದಾಟ, ಜಗಳ. ಘಾತಕತನ-ಪರಾಕ್ರಮ, ಶೌರ್ಯ].

೬೬. [1]ಲುಹ (ಅ). [2]ತಿದ್ದ (ಅ). [3]ರ (ಕುಮಾ).
[ಪಾಂಡವ ಮಮ ಪ್ರಾಣಾಹಿ (= ಮಮ ಪ್ರಾಣಾ ಹಿ ಪಾಂಡವಾಃ)-'ಪಾಂಡವರು ನನ್ನ ಪ್ರಾಣಕ್ಕೆ ಸಮಾನ' ಎಂಬ ಶ್ರೀಕೃಷ್ಣನ ಹೇಳಿಕೆ. ಗಾಹು-ಕೈವಾಡ, ಪ್ರಭಾವ. ತಿಣ್ಣ-ಭಾರ. ಆಹವ-ಯುದ್ಧ. ವಾಹಕ-ಸಾರಥಿ. ಶರಣ ಸ್ನೇಹ ಸಂಸಾರಾನುರಾಗನು-ಭಕ್ತರ ಸ್ನೇಹರಸಾತಿಶಯದಲ್ಲಿ ಪ್ರೀತಿಯುಳ್ಳವನು].

೬೭. [1]ತಾಲಯಕೆ (ಕುಮಾ).
[ಕೈಲಾಗು-ಕೈಚಳಕ. ಕೃತಾಂತ-ಯಮ. ವಾಹಿನಿ-ಸೈನ್ಯ. ಆನು(ಧಾ)-ಎದುರಾಗು. ನಯನಾಂಗಣ-ನೋಟದ ವ್ಯಾಪ್ತಿ].

ಪುಲಿದೊಗಲ ಸೀಸಕದ ಕಿಗ್ಗ-
ಟ್ಟೊಲಿವ ಸುರಗಿಯ ಕಾಂಚನದೊಳ[1]ರೆ[1]
ಬಲಿದ ಬಿಲ್ಲಿನ ಬಿಗಿದ ತಿರುವಿನ ಬೆರಳ [2]ಹೊಯ್ಲು[2]ಗಳ ।
ಬಲಿದ ಮುಂಗೈಹೊಡೆಯ ಬಿರುದಿನೊ-
ಳುಲಿವ ಘಂಟೆಯ ಚಿನ್ನ[3]ಗಿ[3]ನ ಬ-
ತ್ತಳಿಕೆಗಳಲ್ಲೈದಿದರು ಬಿಲ್ಲಾಳುಭಯಸೇನೆಯಲಿ ॥ ೬೮ ॥

ವೀರ ಧಣಾಧಣಾ ಪೂತುರೇ ಬಿಲು-
ಗಾರ ಮುಚ್ಛುರೇ ಚಾಪತಂತ್ರವಿ-
ಶಾರದಾ ಯೆನುತೊಬ್ಬರೊಬ್ಬರ ಬಿರುದ ಮೂದಲಿಸಿ ।
ಓರಣದ ಕಣೆಗಳಲಿ ತಲೆಗಳ
ತೋರಣವ ಕಟ್ಟಿದರು ಸೇನಾ-
[1]ಮಾರಣವ ಬೇಳಿದರು ಅರುಣಜಲಾಜ್ಯದಾಹುತಿಯ[1] ॥ ೬೯ ॥

ನೆಲಕೆ ನಿಗುರಿದ ಗಂಗೆವಾಳದ
ಬಿಳಿಯ ಚೌರಿಯಲುಲಿವ ಘಂಟೆಯ
ತೊಳಪ ಬದ್ದುಗೆದಾರ ಕಾಂಚನಮಯದ ಗೊಂಡೆಯದ ।
ಉಲಿವ ಗೆಜ್ಜೆಯ ಚಲ್ಲಣದ ಹೊಂ-
ಬಳಿದ ಹರಿಗೆಯ ಹೊಳೆವ ಕಡಿತಲೆ-
ಗಳ [1]ವಿಲಾಸದೊಳಂದು ಹೊಕ್ಕುದು ತುಳುವ[1] ಪಡೆ ಕಡುಗಿ ॥ ೭೦ ॥

---

೬೮ [1]ತಿ (ಅ). [2]ಕೋಲು (ಕುಮಾ). [3]ಲೆ (ಕುಮಾ).
[ಸೀಸಕ-ಶಿರಸ್ತ್ರಾಣ. ಕಿಗ್ಗಟ್ಟು-ಸೊಂಟಪಟ್ಟಿ. ಒಲೆ-ಅತ್ತಿತ್ತ ತೂಗಾಡು. ಕಾಂಚನ-ಚಿನ್ನ. ಬಲಿ-ಮಾಡು. ತಿರು-ಹೆದೆ. ಹೊಯ್ಲು-ಹೊಡೆತ, ಏಟು, ಮಿಡಿತ. ಹೊಡೆ-ಗೌಸು, ಹಸ್ತರಕ್ಷೆ. ಅಗಿ-ತೂಗಾಡು, ಕೊನೆದಾಡು].

೬೯. [1]ಮಾರಣಾಧ್ವರವೆಸೆದುದರುಣ ಜಲಾಜ್ಯ ಧಾರೆಯಲಿ (ಕುಮಾ).
[ಓರಣದ-ಕ್ರಮವಾದ, ನಿರಂತರವಾದ. ಕಣೆ-ಬಾಣ. ಮಾರಣ-ಮಾರಣ ಹೋಮ, ಬೇಳು-ಯಜ್ಞಮಾಡು. ಅರುಣಜಲಾಜ್ಯ-ರಕ್ತವೆಂಬ ತುಪ್ಪ].

೭೦. [1]ವಿಲಾಸರು ಬಂದು ಹೊಕ್ಕರು ಕುಳವ (ಅ).
[ನಿಗುರಿದ-ನೆಟ್ಟಗೆ ಇಳಿಬಿದ್ದ. ಗಂಗೆವಾಳ-ಉದ್ದನಾದ ಕೂದಲು ಚೌರಿ-ಚಮರೀ ಮೃಗದ ಕೂದಲ ಕುಚ್ಚು. ಬದ್ದುಗೆ ದಾರ-ಕರೆಯ, ಅಂಚಿನ ದಾರ. ಗೊಂಡೆಯ-ಕುಚ್ಚು. ಹೊಂಬಳಿದ-ಚಿನ್ನ ಲೇಪಿಸಿದ. ಹರಿಗೆ-ಗುರಾಣಿ ಕಡಿತಲೆ-ಕತ್ತಿ. ಕಡುಗು-ಉತ್ಸಾಹಗೊಳ್ಳು, ಉತ್ಸಾಹಿಸು].

ಅಳವನಱಿಯದೆ ಕೆಣಕಿ ತತ ಮುಂ-
ಕೋಲಸಿ [1]ಕದನದ[1] ಕೋಡಕೈಯ[2]ವ
ರಳವಿಗೊಟ್ಟರೆ ನೋಡಿ[2] ಸಿಡಿಮಿಡಿಗೊಂಡು ಕೆಲಸಿಡಿವ ।
ಗೆಲಿಮೊಡುತ್ತಾಹಿಸುವ ಸಿಲುಕಿದೊ-
ಡಳುವ ಕಟ್ಟೋಡಿದೊಡೆ ಪುರದಲಿ
ನಿಲುವ ನಿರುಪಮವೀರರೊದಗಿತು ತಿಗುಳರಾವುತರು ॥ ೭೧ ॥

ಬವರ ಸವೆಯದೆ ತೇಜಿಗಳ ಬಲು-
ಜವವು ಜಾಜಿವೆ ಬಿಡುವ ತಿವಿದೊಡೆ
[1]ಸವಗವನು ಸರಳಿಸುವ[1] ಕವಿದಡೆ ಕಾಲಯಮನಂತೆ ।
ಕವಿವ[2]ರವಗಡಿಸಿದೊಡೆ[2] ಹಿನ್ನೆ-
ಟ್ಟುವರು ಭೂಮಾನದೊಳುಪಾಯದ
[3]ವಿವರ[3]ದೋಜೆಯಲೊದಗಿದರು ಕರ್ನಾಟ[4]ರಾವುತ[4]ರು ॥ ೭೨ ॥

[1]ಬಾರ[1]ಸಂಕಲೆ ಪಕ್ಷಘಂಟೆಯ
ಚಾರುಚಮರಿಯ ಕೊಡತಿಗಳ ಕೈ-
[2]ಜಾರ[2] ಕೂರಂಕುಶದ ಬಿರುದರು ಹೊದ್ದಿದರು ಗಜದ ।
ಬಾರದೂಹತ್ತಿಗಳ ಗುಂಡಿನ
ಕೋರಲೌಡಿಯ ಕೊಟ್ಟ ಬಲುಮದ-
ವಾರಣದ [3]ಮೋ[3]ಹರದ ನೂಕಿದರುಭಯ ಸೇನೆಯಲಿ ॥ ೭೩ ॥

---

೭೧. [1]ಕವಿದರ (ಅ). [2]ಲಿ ಯೋಳವೆಗೆದು ನೋಹಿದೊ (ಅ).
[ಅಳವು-ಸಾಮರ್ಥ್ಯ. ಕೋಡಕೈಯವರು-ಕೈಯಲ್ಲಿ ಕೊಂಬಿನಂಥ ಆಯುಧವನ್ನು ಹಿಡಿದವರು. ಅಳವಿಗೊಡು- ಎದುರು ನಿಲ್ಲು, ಪ್ರತಿಭಟಿಸು. ಸಿಡಿಮಿಡಿಗೊಳ್ಳು, ಕೋಪಗೊಳ್ಳು. ಕೆಲಸಿಡಿ-ಪಕ್ಕಕ್ಕೆ ಹಾರು. ಸಿಲುಕು-ಸಿಕ್ಕುಹಾಕಿಕೊ, ಸಿಕ್ಕು. ತಿಗುಳ-ತಮಿಳುನಾಡಿನವನು].

೭೨. [1]ಸವಗವುಚ್ಚಳಿಸುವವು (ಕುಮಾ). [2]ರವಗೆಡಿಸಿದೊಡೆ (ಅ). [3]ಬವರ (ಕುಮಾ). [4]ನಾಯಕ (ಅ).
[ಬವರ-ಯುದ್ಧ. ತೇಜಿ-ಕುದುರೆ. ಜವ-ವೇಗ. ಸವಗ-ಮೈಜೋಡು, ಕವಚ. ಸರಳಿಸು-ಬಾಣವನ್ನು ಬಿಡು. ಅವಗಡಿಸು-ಹೀಯಾಳಿಸು, ಭಂಗಿಸು, ಸೋಲಿಸು. ಭೂಮಾನದೊಳು-ಗೊತ್ತಾದ ಭೂಮಿಯ ಅಳತೆಯಲ್ಲಿ. ಓಜೆ-ಕ್ರಮ, ರೀತಿ].

೭೩. [1]ಭಾರಿ (ಅ). [2]ಯಾರ (ಅ). [3]ದೋ (ಕುಮಾ)
[ಬಾರ-ಚರ್ಮದ ಪಟ್ಟಿಯ. ಸಂಕಲೆ-ಸಂಕೋಲೆ. ಕೂರಂಕುಶ-ಹರಿತವಾದ ಅಂಕುಶ. ಹೊದ್ದು-ಸಮೀಪಿಸು, ಸೇರು. ಬಾರದೂಹತ್ತಿ-ಚರ್ಮದ ಪಟ್ಟಿ ತೂಗುಹಾಕಿರುವ ಎರಡು ಅಲಗಿನ ಕತ್ತಿ. ಗುಂಡು-ಕಬ್ಬಿಣದ ಗುಂಡು. ಕೋರ ದೊಡ್ಡದಾದ. ಲೌಡಿ=(ಲವುಡಿ)-ಒಂದು ಬಗೆಯ ಕಬ್ಬಿಣದ ಆಯುಧ. ವಾರಣ-ಆನೆ. ಮೋಹರ-ಸೈನ್ಯ].

ಮುಟ್ಟಿ ಸೀಳಿದುಹಾಯ್ಕ್ವ ದಾಡೆ[1]ಯೊ-
ಳೊಟ್ಟಿ[1] ಮೋಱೆ[3][2]ಯುನೊ[2]ಲೆ[3]ದು[3] ಹರಿದಱ[3]
ಯಟ್ಟಿ ಹಿ[4]ಡಿ[4]ದಪ್ಪಳಿಸಿ ಜೋದರನಂಘ್ರಿ[5]ಯೊಳು ಮೆಟ್ಟಿ[5] ।
ಇಟ್ಟಿ ಕೆಡಹು[6][ತ][6] ಹೆಣನ[7]ನೊಟ್ಟಿಲೊ-
ಳೊಟ್ಟಿ[7] ಮುಸಗಿತು ತುರಗನರರಥ-
[8]ವಿಟ್ಟಣಿಸೆ ಸವಱಿ[8]ದವು[8] ದಂತಿವ್ರಾತವುಭಯದಲಿ ॥ ೭೪ ॥

ನೊಗನ ಬಿಗುಹಿನ ಕಂಧರದ ವಾ-
ಜಿಗಳು ಕುಣಿದವು ಪಲ್ಲವದ ಸೆಱ-
ಗಗಿಯೆ ಟೆಕ್ಕೆಯುವೆತ್ತಿದವು ಮುಮ್ಮೊನೆಯು ಸೂನಗೆಯು ।
ಹೊಗರುಗಳ ತೀಡಿದರು ಕೀಲ-
ಚ್ಚುಗಳ ಮೇಳೈಸಿದರು ಬಲು[1]ನಂ-[1]
ಬುಗೆಯು ಬದ್ದರದೊಳಗೆ ತುಂಬಿದರಸ್ತ್ರ[2]ಶಸ್ತ್ರಗಳ[2] ॥ ೭೫ ॥

---

೭೪. [1]ಯು ಕೊಟ್ಟು (ಕುಮಾ). [2]ಯೊಳೊ (ಅ). [3]ವ (ಅ]. [4]ಠ (ಅ). [5]ಯುಂದರೆದು (ಕುಮಾ). [6]ಹಲು (ಕುಮಾ), ಹು[illegible] (ಅ). [7]ಲೊಟ್ಟ್ಯಲೊಟ್ಟ (ಕುಮಾ). [8]ದಿಟ್ಟಿದೆಯು ಸಲಿಸಿದವು (ಅ).

[ದಾಡೆ-ಕೊಂಬು. ಒಟ್ಟು-ರಾಶಿಹಾಕು. ಮೋಱೆ[3]-ಮುಖ. ಒಲೆದು-ತೂಗಾಡಿಸಿ. ಹರಿ-ಓಡು. ಅಱ[3]ಯಟ್ಟು-ಬೆನ್ನಟ್ಟು. ಜೋದ-ಯೋಧ. ಇಡು-ಹೊಡೆ. ಒಟ್ಟಿಲೊಳೊಟ್ಟು-ರಾಶಿಯಾಗಿ ಮಾಡಿ. ಮುಸಗು-ವಿಜೃಂಭಿಸು. ತುರಗನರರಥ-ಕುದುರೆ, ಕಾಲಾಳು ಮತ್ತು ರಥಗಳ ಸೈನ್ಯ. ಇಟ್ಟಣಿಸು-ಗುಂಪುಗೂಡು. ಸವಱು-ನಾಶಪಡಿಸು. ದಂತಿವ್ರಾತ-ಆನೆಗಳ ಸಮೂಹ. ಉಭಯದಲಿ-ಎರಡು ಕಡೆಗಳಲ್ಲಿಯೂ].

೭೫. [1]ಗಂ (ಅ). [2]ಸಂತತಿಯ (ಅ).

[ಬಿಗುಹು-ಬಿಗಿಯುವಿಕೆ. ಕಂಧರ-ಕೊರಳು. ವಾಜಿ-ಕುದುರೆ. ಪಲ್ಲವ-ಅಯಾಲು, ಕುದುರೆಯ ಕುತ್ತಿಗೆಯ ಮೇಲಿನ ಕೂದಲು. ಸೆಱಗು-ಅಂಚು, ತುದಿ. ಅಗಿ-ಅಲುಗಾಡು. ಟೆಕ್ಕೆಯ-ಬಾವುಟ. ಸೂನಗೆ-ಒಂದು ಬಗೆಯ ಕತ್ತಿ. ತೀಡು-ಮಸೆ, ಹರಿತಗೊಳಿಸು. ಕೀಲಚ್ಚು-ರಥದ ಗಾಲಿಯ ನಡುವಣ ದಂಡ. ಮೇಳೈಸು-ಸೇರಿಸು, ಕೂಡಿಸು. ನಂಬುಗೆಯು-ನಂಬಿಕೆಯು. ಬದ್ದರ-ಆನೆ].

ತಿರುಗೆ ತಿರುಗಿದ[1]ರೆಚ್ಚೊಡೆಚ್ಚರು[1]
ಮರಳೆ ಮರಳಿದರೌಕಲೌಕಿದ-
ರುರವಣಿಸಲುರವಣಿಸಿದರು ಮಾರ್ತಾಗೆ ತಾಗಿದರು ।
ಸರಳಿಗಂಬನು ಸೂತವಾಜಿಯು
ಶಿರಕೆ ಶಿರವನು ರಥಕೆ ರಥವನು
ಸರಿ[2]ಗಡಿದು[2] ಕಾದಿದರು ಸಮರಥಘನಮಹಾರಥರು ॥ ೭೬ ॥

ಕಲಹದಲಿ ಕರಿಘಟೆಯು ಹೊಯ್ ಹೊ-
ಯ್ದಲಸಿ ಕೌರವ[1]ನ[1]ನುಜನನು ಮುಂ-
ಕೊಳಿಸಿ ಕೊಳ್ಳದೆ ಕಳುಹಿ ಬೇಸ[2]ಱುತ[2]ಸಿಲಸುತ ಮಸಗಿ ।
ನೆಲನ [3]ಲುಬ್ಧನ[3] ಬುದ್ಧಿ ಮರಣಕೆ
ಫಲಿಸಬೇಹುದು ಕರೆ ಸುಯೋಧನ
ನಿಲಲಿ ಬವರಕ್ಕೆನುತ ಗದೆಯನು [4]ತೂಗಿ[4]ದನು ಭೀಮ ॥ ೭೭ ॥

ಅದಟನಡ್ಡೈಸಿ[1]ದೊಡೆ[1] [2]ದುರುಳನ[2]
ಮದವ ತೊಡೆವೆನು ಬಾಯ ಹೊಯ್ ಹೊಯ್
ಕದನದಲಿ ನಡುಗಿಸುವ ನಾಯಕವಾಡಿಗಳನೆನುತ ।
[3]ಬದಗನಿ[3]ದಿರಾದನು ಜಯ[4]ಶ್ರೀ-[4]
ಮದನಕಾ[5]ಯ[5]ನು ಕಪಟದಾಯನು
ವಿದಿತಮಾಯನು ರಣ[6]ದ[6]ಜೇಯನು ಕೌರವರ ರಾಯ ॥ ೭೮ ॥

---

೭೬. [1]ರೆಚ್ಚರೆಚ್ಚರು (ಕುಮಾ). [2]ಯೆಣಿಸಿ (ಅ).
[ಮಾರ್ತಾಗೆ–ಪ್ರತಿಯಾಗಿ ತಾಕಲು. ಸೂತ-ಸಾರಥಿ. ಸರಿಗಡಿ-ಸಮಸಮನಾಗಿ ಕಡಿದುಹಾಕು].

೭೭. [1]ರ (ಅ). [2]ರದ (ಅ). [3]ಲೋಭಿಯ (ಕುಮಾ). [4]ತಿರುಹಿ (ಅ).
[ಕರಿಘಟೆ–ಆನೆಗಳ ಸಮೂಹ. ಅಲಸು–ಆಯಾಸಗೊಳ್ಳು. ಮುಂಕೊಳ್ಳು–ಮುಂದಾಗಿ ಬರಮಾಡಿಕೊ. ನೆಲನಲುಬ್ಧ–ನೆಲಕ್ಕೆ ಆಸೆಪಡುವವನು, ರಾಜ್ಯಲೋಭಿ. ಮರಣಕೆ ಫಲಿಸಬೇಹುದು–ಮರಣದಲ್ಲಿ ಕೊನೆಗಾಣಬೇಕು].

೭೮. [1]ದನು (ಕುಮಾ). [2]ಹೊದ್ದಿಹ (ಅ). [3]ಬೆದರದಿ (ಅ). [4]ಸ್ತ್ರೀ (ಅ). [5]ಮ (ಅ). [6]ವಿ (ಅ).
[ಅದಟ–ಪರಾಕ್ರಮಿ, ಶೂರ. ಮದ-ಗರ್ವ, ಸೊಕ್ಕು. ತೊಡೆ–ಅಳಿಸಿಹಾಕು, ನಾಶಪಡಿಸು. ಬಾಯಹೊಯ್ ಹೊಯ್ಯ ಕದನ–ಬಾಯಲ್ಲಿ ಶೌರ್ಯವನ್ನು ತೋರಿಸುವ ಯುದ್ಧ. ನಾಯಕವಾಡಿಗಳು–ಗ್ರಾಮ ಮುಖಂಡರ ನಿವಾಸಗಳಲ್ಲಿ ವಾಸಮಾಡಲು ಯೋಗ್ಯರಾದಂಥ ಹೇಡಿ ನಾಯಕರು. ಬದಗ–ನೀಚ, ಕೀಳುಮನುಷ್ಯ. ಕಾಯ–ಶರೀರ. ಕಪಟದಾಯ–ಮೋಸ ಮಾಡುವುದರಲ್ಲಿ ಚತುರ. ವಿದಿತಮಾಯ–ಮಾಯಾ ಮೋಸಗಳಲ್ಲಿ ಪ್ರಸಿದ್ಧನಾದವನು. ರಣದಜೇಯ (ರಣದ + ಅಜೇಯ)–ಯುದ್ಧದಲ್ಲಿ ಗೆಲ್ಲಲಾಗದವನು, ಅಪ್ರತಿಮಶೂರ].

ಎಲವೊ ಮಾರುತಿ ನಿಮ್ಮೊಳಗೆ ಕೋ-
ಮಳೆಯು ಹುದುವನು ಮೆಚ್ಚಿ ನಮ್ಮೊಳ-
ಗಿಳೆಯು ಹುದುವನು ಬಯಸಿದೈ ಛಲದಂಕನೆಂದಱಿಯಾ ।
ನೆಲನ ಬೇಟವ ಬಿಸುಟು ಜೀವದ-
ಲುಳಿದು ತೊಲಗೆನೆ ಪವನಸುತ ಕಳ-
ಕಳಿಸಿ ನಗುತವೆ ಕೌರವೇಂದ್ರಂಗೆಂದನುತ್ತರವ ॥ ೨೯ ॥

ಕೆಡಹಿ ದುಶ್ಶಾಸನನ ರಕುತವ
ಕುಡಿದು ನಿನ್ನೂರುಗಳನೀಕ್ಷಣ-
ವುಡಿದು ಕೊಂಬೆನು ಧರೆಯನಲ್ಲದೆ ಹುದುವ ಬಯಸುವೆನೆ ।
ಪೊಡವಿ ದ್ರುಪದಕುಮಾರಿಯೆಮ್ಮಯ
ಮಡದಿಗನ್ಯರು ಮನವಿಡಲು ಬಳಿ-
ಕಡಗುದಱಿವೆನೆನುತ್ತ ಹೊಕ್ಕನು ಭೀಮನವಗಡಿಸಿ ॥ ೩೦ ॥

ಗಾಳಿಯುಱುಬೆಗೆ ಮಲೆತ ಮೇಘದ
ತೋಳುವಲ ನಗೆಗೆಡೆಯಲಾ ಕುರು-
ಪಾಲನೆತ್ತಲು ಭೀಮನೆತ್ತಲು ಶಿವಶಿವಾ ಎನುತ ।
ಮೇಲಣಮರರ ಮಂದಿ ನಗೆ ನೃಪ
ಮೌಳಿ ಜವಗೆಡೆ ಖಾತಿಯೊಳು ಕ-
ಟ್ಟಾಳು ಹೊಕ್ಕದು ಭೀಮಸೇನನ ರಥವ ಮುಱಿಯೆಸುತ ॥ ೩೧ ॥

---

೨೯. [ಹುದು–ನಂಟು, ಜೊತೆಗೂಡಿಕೆ, ಬಾಂಧವ್ಯ. **ಛಲದಂಕ**–ಹಟವನ್ನು ಬಿರುದಾಗಿ ಉಳ್ಳವನು, ಛಲಗಾರನೆಂದು ಹೆಸರಾದವನು. **ಅಱಿಯಾ?**–ತಿಳಿದಿಲ್ಲವೇ? ಬೇಟ–ಬೇಡಿಕೆ, ಅಪೇಕ್ಷೆ, ಪ್ರಣಯಾಸಕ್ತಿ].

೩೦. [ಊರು–ತೊಡೆ. ಉಡಿ–ಮುರಿ. ಮನವಿಡು–ಅಪೇಕ್ಷಿಸು, ಬಯಸು. ಅಡಗುದಱಿ (ಅಡಗು + ತಱಿ)–ಮಾಂಸವನ್ನು ಕತ್ತರಿಸಿಹಾಕು. **ಅವಗಡಿಸು**–ಪ್ರತಿಭಟಿಸು, ಮೇಲೆ ನುಗ್ಗು, ತಾಗು].

೩೧. [ಉರುಬೆ–ರಭಸ. ಮಲೆ–ಇದಿರಿಸು, ವಿರೋಧಿಸು. ಜವಗೆಡು–ಬಲಗುಂದು, ಶಕ್ತಿಗುಂದು. ಮುಱಿಯೆಸು–ಚೂರುಚೂರಾಗುವಂತೆ ಬಾಣಪ್ರಯೋಗ ಮಾಡು].

ಕಾಳಗಕ್ಕೆದಿ[1]ರಾದ[1] ಭೀಷ್ಮನ
ಕೋಲ ಹತಿಯಲಿ ಮಡಿದ ರಿಪುಭೂ-
ಪಾಳಿ ಹರಿದುದು ಸುರರ ಹೆಂಡಿರ [2]ಮುರಿದ[2] ಮುಂದಲೆಗೆ ।
ಮೇಲೆ ಮೇಲ್ಪೈತಪ್ಪ ವೀರಭ-
ಟಾಳಿ[3]ಯೊಡ್ಡಿನಲಿದ್ದ[3] ಸುಭಟರು
ಸೂಳೆಬಂಟಿಕೆಯಿಂದ [4]ಹೊಯ್ದಾಡಿದರು ನಾಕದಲಿ[4] ॥ ೮೨ ॥

ವೀರಶಲ್ಯ ದ್ರೋಣ ಕೃಪ ಭಾ-
ಗೀರಥೀನಂದನ[1]ರು[1] ಪಾಂಡುಕು-
ಮಾರಕರ ಸೇನೆಯಲಿ ಗೆಲಿದರು ಮುರಿ[3]ದರ[2]ತಿಬಲ[2]ರ ।
[3]ವೀ[3]ರಸುಭಟರ ರಕ್ತಧಾರಾ-
ಸಾರಲೋಹಿತಬಿಂಬ[4]ವನು ಕೂ-
ಪಾರದಲಿ[4] ತೊಳೆ[5]ವಂತೆ[5] ಪಶ್ಚಿಮಜಲಧಿಗಿನನಿಳಿದ ॥ ೮೩ ॥

[1]ತ[1]ಡಿಯ ಬಲಿಸುವ ಗುಳವ[2]ಜ[3]ಂಜೆ[2]ಯ
ಗಡಣಿಸುವ ಹಕ್ಕರಿಕೆಗಳ[3]ನಳ-
ವಡಿಪ[3] [4]ವರಕಡಿಯಣದ ಕಂಬಿಯ ಕೊಂಡಿಗಳ ಬಲಿವ[4] ।
ಉ[5]ಡಿ[5]ದ ದೂಹತ್ತಿ[6]ಗಳ[6] ಕೀಲ್ಗಳ-
ನಡಸಿ[7]ಬೆಟ್ಟುವ[7] [8]ಗಾಲಿಗ[8]ಚ್ಚನು
ತೊಡಿಸುತಿರಲಾಯ್ತೆರಡು ಬಲದಲಿ ನಿದ್ರೆಗವಮಾನ ॥ ೮೪ ॥

---

೮೨. [1]ರೊಡ್ಡಿ (ಕುಮಾ). [2]ಮುಡಿಯ (ಅ). [3]ಯೊಡನಲ್ಲಿಂದ (ಕುಮಾ). [4]ಖಾಡಾಖಾಡಿಗೈದಿದರು (ಅ).
[ಕೋಲಹತಿ–ಬಾಣದ ಪೆಟ್ಟು. ಹರಿ–ಓಡಿಹೋಗು. ಮುರಿದ–ಕುಟಿಲವಾದ. ಒಡ್ಡು–ಗುಂಪು, ಸಮೂಹ. ಸೂಳೆಬಂಟಿಕೆ–ಸೂಳೆಯರನ್ನು ಸೇವಿಸಿ ಒಲಿಸಿ ಕೊಳ್ಳುವುದು].

೮೩. [1]ನು (ಅ) [2]ರಿಭಟರ (ಅ). [3]ಧೀ (ಕುಮಾ). [4]ವನು ಘನವಾರಿಯಲಿ (ಕುಮಾ). [5]ದಂ (ಕುಮಾ).
[ಮುರಿ–ಧ್ವಂಸಮಾಡು. ಆಸಾರ–ಮಳೆ ಲೋಹಿತ–ಕೆಂಪಾದ. ಬಿಂಬ–ಆಕೃತಿ, ರಕ್ತಪ್ರವಾಹದ ಮಳೆಯಿಂದ ಕೆಂಪಾದ ಗುಂಡಾದ ಆಕೃತಿ. ಕೂಪಾರ–ಸಾಗರ. ಇನ–ಸೂರ್ಯ].

೮೪. [1]ದ (ಅ). [2]ರೆಂಜೆ (ಅ). [3]ನಾಯ್ದಡಿಸಿ (ಕುಮಾ). [4]ಹೂಲಿಸುವ ಕಬ್ಬಿಗಳ ಕೊಂಡಿಗಳ ಮಿಗೆ ಬಲಿವ (ಕುಮಾ). [5]ಒಡೆ (ಕುಮಾ). [6]ಗೆಗೆ (ಕುಮಾ). [7]ಬೆಟ್ಟುವ (ಕುಮಾ). [8]ಲೋಹದ (ಅ)

ಹಱಿದ ಕೊರಳನು ಬಿಗಿದ [1]ಭುಜದಲಿ[1]
ಮುಱಿದ ಬಾಣವ ಕೀಳ್ವ ಹೊಟ್ಟೆಯ
[2]ಹಱಿ[2]ಗರುಳ[3]ನಣೆದೊತ್ತಿ[3] ಹೊಲಿಸುವ ಮದ್ದುಗಳ [4]ಗ[4]ಡಿವ ।
ಉ[5]ಱು[5]ವ ಸೇಕದ ನಸ್ಯದಲಿ ಹದ-
[6]ನಱಿವ ತುರಗದ[6] ವೈದ್ಯತತಿಯೆ-
ಚ್ಚಱಿಕೆಯಲಿ [7]ಸಂತೈಸಿದರು ವಾಜಿಗಳ ತುರಗದ ವೇದನೆಯ[7] ॥ ೮೫ ॥

ಒಡ[1]ಲೊಳಗೆ[1] ಪೋ[2][ಗ][2]ಟ್ಟ ಸಬಳವ-
ನುಡಿಯಲೀಯದೆ ಕೀಳ್ವ ಮದ್ದನು
ಗಿಡಿವ ಜೀವಣಿಗೆಯಲಿ [3]ಸಪ್ರಾಣಿಸುವ ದುರ್ವ್ರಣವ[3] ।
ತೊಡೆದು ಕಟ್ಟುವ ಹಸ್ತಿವೈದ್ಯರ
ಗಡಣವುಭಯದಲೆಸೆ[4]ದುದಂತ್ಯದ[4]
ಕಡಲ ರಭಸಕೆ ತೊಡ[5]ಕನಿಕ್ಕಿತು ಬಹಳ ಬಲ ಜಲಧಿ[5] ॥ ೮೬ ॥

[ತಡಿ-ಜೀನು. ಬಲಿಸು-ಹವಣಿಸು, ಜೋಡಿಸು. ಗುಳ-ಆನೆ ಕುದುರೆಗಳ ಮೇಲೆ ಹಾಕುವ ಪಾವುಡ. ಜ[3]ಂಚಿ-ಆನೆಯ ಜೂಲು; ಆನೆ ಕುದುರೆಗಳ ಮೇಲೆ ಹೊದಿಸುವ ಒಂದು ಬಗೆಯ ಪಾವುಡ. ಹಕ್ಕರಿಕೆ-ಗುಳ, ಜಂಚಿ [ಗುಳವೆಂದು ಆನೆ ಕುದುರೆಗಳ ಪಕ್ಕರಕೆ (ಶಬ್ದಮಣಿ ದರ್ಪಣ)]. ಪಕ್ಕರಿಕೆ-ಹಕ್ಕರಿಕೆ-ಪಕ್ಷರಕ್ಷೆ (ಕಿಟ್ಟೆಲ್ ಪು. 916 ನೋಡಿ). ಕಡಿಯಣ-ಕಡಿವಾಣ. ಉಡಿ-ಮುರಿ. ದೂಹತ್ತಿ-ಎರಡು ಅಲಗಿನ ಕತ್ತಿ. ಅಡಸು-ಬಿಗಿ. ಚಿಟ್ಟು-ಚುಚ್ಚು, ನಾಟು].

೮೫. [1]ಉರದೊಳು (ಕುಮಾ). [2]ನಿರಿ (ಕುಮಾ). [3]ನೊಳಗಿಕ್ಕಿ (ಕುಮಾ). [4]ನಿಡಿ (ಕುಮಾ). [5]ರಿ (ಕುಮಾ). [6]ನರಿದುದಗ್ಗದೆ (ಅ). [7]ಸಂತವಿಸುತಿರ್ದುದು ವಾರುವಂಗಳನು (ಅ).
[ಹಱಿದ-ತುಂಡರಿಸಿದ. ಬಿಗಿ-ಕೂಡಿಸು, ಬಂಧಿಸು. ಹರಿದ + ಕರುಳು-ಕತ್ತರಿಸಿ ಹೋದ ಕರುಳು. ಅಣೆ-ತಡೆದು. ಒತ್ತಿ-ಒಳಕ್ಕೆ ನೂಕಿ. ಗಿಡಿ-ಒಳಕ್ಕೆ ತುಂಬು. ಉಱುವ-ಉತ್ತಮವಾದ. ಸೇಕ-ಶಾಖ ಕೊಡುವುದು, ನಸ್ಯ-ಮೂಗಿಗೇರಿಸುವ ಔಷಧದ್ರವ್ಯ. ಸಂತೈಸು-ಉಪಶಮನ ಮಾಡು].

೮೬. [1]ಲಿನೊಳು (ಕುಮಾ). [2]ಮುರಿದಿದ್ದ (ಕುಮಾ). [3]ಸಪ್ರಾಣಿಸುವುದಾವ್ರಣವ (ಅ). [4]ವವಂತ್ಯದ (ಕುಮಾ), ವಂತ್ಯದ (ಕುಮಾ). [5]ರಣಿಕ್ಕಿದುದುಭಯ ಸೇನೆಯಲಿ (ಅ).
[ಪೋಗಿಟ್ಟ-ನಾಟುವಂತೆ ಪ್ರಯೋಗಿಸಿದ. ಸಬಳ-ಭರ್ಜಿ, ಭಲ್ಲೆಯ. ಉಡಿ-ಮುರಿ. ಗಿಡಿ-ತುಂಬು. ಜೀವಣಿಗೆ-ಸಂಜೀವಿನಿ, ಸತ್ತವರನ್ನು ಬದುಕಿಸುವುದೆಂದು ಹೇಳಲಾದ ಒಂದು ಬಗೆಯ ಮೂಲಿಕೆ. ಸಪ್ರಾಣಿಸು-ಪ್ರಾಣ ಬರುವಂತೆ ಮಾಡು. ದುರ್ವ್ರಣ-ಕೆಟ್ಟ ಹುಣ್ಣು. ಅಂತ್ಯದ ಕಡಲು-ಪ್ರಳಯ ಕಾಲದ ಸಮುದ್ರ. ತೊಡಕನಿಕ್ಕು-ಅಡ್ಡಿ ಪಡಿಸು].

ಬಾದಣಿಸಿದೇಱುಗಳ ಬಾಯಲಿ
ಕಾದ [1]ಭಾ[1]ರಂಗಿಗಳನಳಕಿಗೆ
ಕೋದು [2]ವಾಮದೊಳೆಯ್ದಿ ಹಿಡಿದರು ತೈಲಧಾರೆಗಳ[2] ।
ಆದ ವ್ಯೈಗಂಡಿಗಳ ರಕುತವ
ಸೋದಿಸುತ ಹಳದುಪ್ಪವನು ತೊಡೆ-
ದಾದರಿಸಿ[3]ದುದು[3] ವೈದ್ಯಸಂತತಿ ವೀರಭಟರುಗಳ ॥ ೮೭ ॥

ಖಡುಗದಡ[1]ಹೊಯ್ಲುಗಳೊಳಗೆ[1] ಮ-
ದ್ದಡಸಿದರು ಸೂಕರನ ತುಪ್ಪವ
ತೊಡೆದರಱಿದೇಱನಲಿ ಬಟ್ಟರು ತೈಲಧಾರೆಗಳ ।
ತುಡಿಸಿದರು ಮಂತ್ರೋದಕವನೊಳ-
ಗಡಸಿ ಕರುಳನು ಮುಚ್ಚಿ ಮಂತ್ರಿಸಿ
ತೊಡೆದರಖಿಳೌಷಧಿಗಳನು ನೃಪಸೇನೆಯೆರಡಱಲಿ ॥ ೮೮ ॥

---

೩. ಕೃಷ್ಣನ ಕೋಪ

ಜೋಳವಾಳಿಯೊಳುಂಡು ಮಾಡಿದ
ಸಾಲವನು ತಲೆಗಳಲಿ ತಿದ್ದಿದ-
ರಾಳತರುಬುವ ಪತಿಗೆ ಹರುಷವ ಮಾಡಿ ತವತವಗೆ ।

---

೮೭. [1]ಬಾ (ಅ ಕುಮಾ). [2]ಕೊಂಡರುವುಲಿಯ ಹೋಳಕದೆ ಹಿಡಿದ ಗಾಯವನು (ಅ). [3]ದರು (ಅ).
[ಬಾದಣಿಸು-ರಂಧ್ರಮಾಡು, ಒಳಗೆ ಕೊರೆದು ಬಾಯಿ ಬಿಡಿಸು. ಏಱು-ಗಾಯ. ಹಾರಂಗಿ-ಒಂದು ಬಗೆಯ ಆಯುಧ. ಕೋದು (ಧಾ. ಕೊೞ್)-ಒಳಕ್ಕೆ ಸೇರಿಸಿ. ವಾಮ-ಎಡಭಾಗ. ಆದರಿಸು-ಉಪಚರಿಸು. ಸಂತತಿ-ಸಮೂಹ].

೮೮. [1]ಪೊಯ್ಲುಗಳಲಡು (ಕುಮಾ).
[ಅಡಹೊಯ್ಲು-(ಕತ್ತಿಯನ್ನು) ಅಡ್ಡನಾಗಿ ಬೀಸಿ ಹೊಡೆದ ಹೊಡೆತ. ಮದ್ದಡಸು-ಔಷಧದ ಹುಡಿಯನ್ನು ಗಿಡಿ, ತುಂಬು. ಸೂಕರನತುಪ್ಪ-ಹಂದಿಯ ಕೊಬ್ಬು. ಇಱಿದೇಱು-ತಿವಿತದಿಂದ ಆದ ಗಾಯ].

೮೯. [ಜೋಳವಾಳಿ-ಅನ್ನದ ಋಣ. ತಲೆಗಳಲಿ ತಿದ್ದಿದರು-ತಮ್ಮ ತಲೆಗಳನ್ನು ಕೊಟ್ಟು (ಎಂದರೆ ಯುದ್ಧದಲ್ಲಿ ಮಡಿದು) ತೀರಿಸಿದರು. ತರುಬು (ತಱುಬ್, ತಬ್ಬು)-ಅಪ್ಪಿಕೊ, ಆಲಿಂಗಿಸು (ಆಳ ತರುಬುವ ಪತಿಗೆ-ಆಲಿಂಗಿಸಿಕೊಂಡು ಪ್ರೀತಿಯನ್ನು

ಕಾಲನೂರ್ಬೈದದು ಸುರಸ್ತ್ರೀ-
ಜಾಲ ನೆಱೆಯದು ಗಗನ ಸುಭಟರ
ಸಾಲೊಳಡಗಿತು ಚಿತ್ರವೆನೆ ಹೊಯ್ದಾಡಿತುಭಯಬಲ ॥ ೮೯ ॥

ಕೋಲಕೋಲಗು ಕಲಿಭೀಷ್ಮ ವೃದ್ಧರಿ-
ಗೆಳಭಟರ ಕೂಡಾವುದಂತರ-
ವಳಿಬಲರ ಹೆದಱಿಸಿದ ಹೆಕ್ಕಳವೇಕೆ ಸಾರೆನುತ ।
ತುಳುಕಿದನು ಕೆಂಗೋಲ [1]ವುಳೆಯುನು[1]
ನೆಲನದಾವುದು ದಿಕ್ಕದಾವುದು
ಸಲೆ ನಭೋಮಂಡಲವದಾವುದೆನಲ್ಕೆ [2]ಕಲಿಪಾರ್ಥ[2] ॥ ೯೦ ॥

ಮೊಗದ ಹೊಗರವಗಡಿಸೆ ಸುಯ್ಲುಲಿ
ಹೊಗೆಯು ಹೊದಱಂಕುರಿಸೆ ಬಿಡುಗ-
ಣ್ಣುಗಳೊಳೊಕ್ಕುದು ಕೆಂಪು ಸೊಂಪಡಗಿತು [1]ಮುಖಸ್ನೇಹ[1] ।
ತೆಗೆವೆನರ್ಜುನನಸುವನೆನುತಾ-
ಳುಗಳ ದೇವನು ಭೀಷ್ಮನಡಿಗಡಿ-
ಗೊಗುಮಿಗೆಯ ಕೋಪದಲಿ ಕೋದನು [2]ಕಣೆಗಳಲಿ[2] ನರನ ॥ ೯೧ ॥

ಕೋರಿಸುವ ಒಡೆಯನಿಗೆ). ಕಾಲನೂರ್ಬೈದದು–ಯಮಪುರಿ ಸೇರಿಸಿಕೊಳ್ಳುವುದಿಲ್ಲ (ಎಂದರೆ, ತುಂಬಿಹೋಗಿದೆ). ನೆಱೆಯದು–(ಸಂಖ್ಯಾದೃಷ್ಟಿಯಿಂದ) ಪೂರಯಿಸದಾಯಿತು, ಸಾಕಾಗದಾಯಿತು. ಅಡಗಿತು–ಮುಚ್ಚಿಹೋಯಿತು. ಚಿತ್ರ–ಆಶ್ಚರ್ಯ].

೯೦. [1]ಜಲಧಿಯ (ಕುಮಾ). [2]ನರನೆಚ್ಚ (ಅ).
[ಎಳಭಟರು–ಯುವಕರಾದ ಸೈನಿಕರು. ಅಳಿಬಲರು–ದುರ್ಬಲರು. ಹೆಕ್ಕಳ–ಹೆಮ್ಮೆ, ಗರ್ವ. ತುಳುಕು–ಅಧಿಕವಾಗಿ ಸುರಿಸು. ಕೆಂಗೋಲು–ಕೆಂಪಾದ ಗರಿಯುಳ್ಳ ಬಾಣ(?)].

೯೧. [1]ಮಹಾದೇವ (ಅ). ಸರಳಿನಲಿ (ಕುಮಾ).
[ಹೊಗರು–ಕಾಂತಿ. ಅವಗಡಿಸು–ಪ್ರಜ್ವಲಿಸು. ಸುಯ್ಲು–ನಿಟ್ಟುಸಿರು. ಹೊದರು–ಗುಂಪು, ಮೊತ್ತ ಉಗು–ಹೊರಸೂಸು. ಮುಖಸ್ನೇಹ–ಮುಖದ ಹೊಳಪು. ಆಳುಗಳದೇವ–ವೀರರಾದ ಸೈನಿಕರ ಒಡೆಯ, ಸೇನಾಪತಿ, ಒಗುಮಿಗೆಯ–ಅತ್ಯಧಿಕವಾದ. ಕೋ(ಥಾ)–ಪೋಣಿಸು].

ಕೆರಳಿದನು ಕಲಿಭೀಷ್ಮನರ್ಜುನ-
ನುರವಣೆಯು ಗೆಲುವೊಡೆ ಮುರಾರಿಯು
ಭರವಸವ [1]ತಗ್ಗಿಸಿದಹಲ್ಲದೆ ಕಾವಲರಿದೆನುತ[1] |
ಹರಿಯ ಸಿರಿ[2]ಯೊ[2]ಡಲಿನಲಿ ಸರಳಿನ
ಸರಿವಳೆಯ ಸೈಗ[3]ಱೆ[3]ಯ ಜೋಡಿನ
ಸರಪಳಿಯುಲಕ್ಕಾಡಿ[4]ದವು ಕಲಿ[4] ಭೀಷ್ಮನಂಬುಗಳು ॥ ೯೨ ॥

ಮತ್ತೆ ರಥವನು ಹರಿಸಿ ಭೀಷ್ಮನ
ಹತ್ತೆಬರೆ ಕಟ್ಟಳವಿಯಲಿ ಪಾ-
ಮುತ್ತಯನು ಸಿಲುಕಿದನು ಶಿವಶಿವ ಯೆನುತ ಬಲ ಬೆದಱೆ |
ಹತ್ತು ಶರದಲಿ ಕೃಷ್ಣರಾಯನ
ಮತ್ತೆ ಮುಸುಕಿದ ಬಳಿಕ ಭಾರ್ಗವ-
ದತ್ತ ಬಾಣವ ತೊಡಚಿ ಕೃಷ್ಣನ ನೊಸಲ ಕೀಲಿಸಿದ ॥ ೯೩ ॥

ಕೆಂಗಱಿಯ ಮಱಿದುಂಬಿ ತಾವರೆ-
ಗಂಗವಿಸಿದವೊಲಸುರರಿಪುವಿನ
ಮಂಗಳಾನನಕಮಲದಲಿ ಶರ[1]ವಾಳೆ ಗಱಿಗಡಿಯೆ[1] |
ತುಂಗವಿಕ್ರಮನಂಬು ಕಿತ್ತು ತ-
ದಂಗರ[2]ಕ್ತನಿ[2]ಷೇಕ ರೌದ್ರಾ-
ಲಿಂಗಿತನು ಬಲುಖತಿಯ ಹಿಡಿದನು ಭೀಷ್ಮನುಪಟಳಕೆ ॥ ೯೪ ॥

---

೯೨. [1]ಬಲಿಸಿದೊಡೆ ಸೋಲುವುದೆನುತ ನಸುನಗುತ (ಅ). [2]ವೊ (ಅ). [3]ರ(
[4]ಡಾಯ್ದವು (ಅ).
[ಉರವಣೆ-ರಭಸ. ಅರಿದು-ಅಸಾಧ್ಯ. ಸರಳು-ಅಂಬು, ಬಾಣ. ಸರಿ
ಜಡಿಮಳೆ. ಸೈಗಱೆ-ಒಂದೇ ಸಮನಾಗಿ ಸುರಿಸು. ಜೋಡು-ಜೋಡಿ. ಅಕ್ಕ
ಅಳ್ಳಾಡು, ಪೂರ್ಣವಾಗಿ ನಾಶವಾಗು].

೯೩. ಹರಿಸಿ-ಓಡಿಸಿ. ಹತ್ತೆ-ಹತ್ತಿರ, ಸಮೀಪ. ಕಟ್ಟಳವಿ-ಅತ್ಯಂತ ಸಮ
ಮುತ್ತಯ-ಮುತ್ತಜ್ಜ (ಭೀಷ್ಮ). ಬಲ-ಸೈನ್ಯ. ಭಾರ್ಗವ-ಪರಶುರ
ದತ್ತ-ಕೊಟ್ಟಿದ್ದು. ತೊಡಚು-ಹೂಡು. ಕೀಲಿಸು-ನಾಟಿಸು].

೯೪. [1]ಬಾಲವಿಸಿದುಗರಿಯ (ಅ). [2]ರುತಭ (ಅ).
[ಕೆಂಗಱಿ-ಕೆಂಪಾದ ರೆಕ್ಕೆ. ಅಂಗವಿಸು-ಮೇಲೆರಗು. ಆನನ-ಮುಖ. ಶರ
ಬಾಣವೆಂಬ ವಾಳೆ ಜಾತಿಯ ಮೀನು. ಗಱಿಗಡಿಯೆ-ರೆಕ್ಕೆಯು ಕತ್ತರಿಸಿಹೋ
ತುಂಗವಿಕ್ರಮ-ಮಹಾಪರಾಕ್ರಮಿಯಾದ ಕೃಷ್ಣ. ನಿಷೇಕ-ಅಭಿಷೇಕ. ರೌ
ಲಿಂಗಿತನು-ರೌದ್ರಾಕಾರವನ್ನು ತಳೆದವನು. ಖತಿ-ಕೋಪ. ಉಪಟಳ-ತೊಂ

ಕೆಂಪ ಕಾರ್ಜಿದವಾಲಿಗಳು ಪೆಸ್ರ-
ಕಂಪಿಸಿದುದಡಿಗಡಿಗೆ ರೋಷದ
[1]ಜಂಪಿ[1]ಸಲಿ ಶಗ್ಗದಸು ಗಂಟಿಕ್ಕಿ[2]ದವು[2] ಹುಬ್ಬು[3]ಗಳು[3] ।
ಕೊಂಪುಗೆಟ್ಟುದು ಶಿವನದನ ಮನ-
ದಿಂಪು ಬೀತುದು ಭ[4]ಕ್ತ[4]ನೋಕರ-
ಲಂಪು ಮಸುಳಿಸಿತು ಬಿಸುಟು ಕಳೆದನು ಹಯದ ವಾಘೆಗಳ ॥ ೯೫ ॥

ಸಕಲ ಜಗದಳಿವಿನಲಿ ರುದ್ರಾ-
ಕ್ಷಕನು ವಿಷ್ಣುವೆ ಎಂಬ ನುಡಿ ಸು-
ವ್ಯಕುತವಾಗಲು ತೋರ್ಜಿದನು ಘನರೋಷ ತಾಮಸವ ।
ಚಕಿತ ವದನವ ಕೆಂಪಿನಬುಜಾಂ-
ಬಕಯುಗಳನೊಳಿದೊಳಿದು ರೋಷ-
ಪ್ರಕಟಪಾವಕ ವಿಸ್ಫುಲಿಂಗಿತನಾದನಡಿಗಡಿಗೆ ॥ ೯೬ ॥

ಎಲೆಲಿದೆತ್ತಣ ಧರಣಿಯೆತ್ತಣ
ಕುಲಗಿರಿಗಳೆತ್ತಣ ದಿಶಾಗಜ
ಕುಲವಿದೆತ್ತಣ ಸುರರಿದೆತ್ತಣ ಹರ ಚತುರ್ಮುಖರು ।
ಸಲಹುವಯ್ಯನು ಮುಳಿದು ಲೋಕದ
ಕೊಲೆಗೆಲಸಕಂಗೈಸಿದನೆ ಹಾ
ಪ್ರಳಯವಾದುದಕಾಲದಲಿಯೆಂದಮರರೆದೆಯಾರೆ ॥ ೯೭ ॥

. [1]ಹಿಂ (ಅ). [2]ದವು (ಕುಮಾ). [3]ಗಳ (ಕುಮಾ). [4]ತತ (ಅ). [5]ಸಗಿ (ಅ).
[ಬಿಂಪು (=ಬಿಣ್ಪು)-ಭಾರ, ಆಧಿಕ್ಯ. ಬೀತುದು (ಕ್ರಿ. ಬೀ)-ನಾಶವಾಗು, ಇಲ್ಲವಾಗು. ಅಲಂಪು-ಪ್ರೀತಿ, ಸಂತೋಷ. ಮಸುಳಿಸು (ಧಾ; ಮಸುಳ್)-ಮಂಕಾಯಿತು, ಮಾಸಿಹೋಯಿತು].

. [ಅಳಿವು-ನಾಶ. ರುದ್ರಾಕ್ಷಕನು-ಪ್ರಳಯಕಾಲದ ಭಯಂಕರನಾದ ಈಶ್ವರನೊಬ್ಬ. ಸುವ್ಯಕುತ-ಸುವ್ಯಕ್ತ, ಚೆನ್ನಾಗಿ ಪ್ರಕಟವಾಗುವುದು. ತಾಮಸ-ತಮೋಗುಣ. ಪಾವಕ-ಅಗ್ನಿ. ವಿಸ್ಫುಲಿಂಗ-ಬೆಂಕಿಯ ಕಿಡಿ (ವಿಸ್ಫುಲಿಂಗಿತ-ಬೆಂಕಿಯ ಕಿಡಿಯುಳ್ಳ)].

[ಕುಲಗಿರಿಗಳು-ಏಳು ಪರ್ವತಗಳು : ಮಹೇಂದ್ರ, ಮಲಯ, ಸಹ್ಯ, ಶುಕ್ತಿಮಂತ, ಋಕ್ಷವಂತ, ವಿಂಧ್ಯ, ಪಾರಿಯಾತ್ರ. ದಿಶಾಗಜಕುಲ-ಅಷ್ಟದಿಗ್ಗಜಗಳು. ಸಲಹುವಯ್ಯ-ಕಾಪಾಡುವ ತಂದೆ; ವಿಷ್ಣು. ಮುಳಿ-ಕೋಪಗೊಳ್ಳು. ಅಂಗೈಸು-ಅಪೇಕ್ಷಿಸು, ಬಯಸು, ಮನಸ್ಸುಮಾಡು. ಎದೆಯಾರೆ-ಎದೆತುಂಬ, ಪ್ರತ್ಯಕ್ಷವಾಗಿ].

ಮುರಮಥನ ಕೆಲ್ಲೈಸಿ ನೋಡಿದ-
ನುರುಭಯಂಕರಚಕ್ರವನು ದು-
ರ್ಧರುಷಧಾರಾಲೂಯಮಾನನಿಶಾ[1]ತ[1]ಚಕ್ರವನು ।
ತರಳ ತರಣೀ ಚಕ್ರವನು ಸಂ-
ಗರವಿನಿರ್ಜಿತ ಚಕ್ರವನು ಭಯ-
ಭ[2]ರವಿವರ್ಜಿತ[2] ಚಕ್ರವನು ಕಡುಗೋಪ [3]ಕಿಡಿ[3]ಯಿಡಲು ॥ ೯೮ ॥

ತುಡುಕಿದನು ಚಕ್ರವನು ರಥದಿಂ
ಪೊಡವಿಯಲಿ ಧುಮ್ಮಿಕ್ಕಿದನು [1]ಮು-
ಕ್ಕೊಡನೆ ಬಳಿವರಿದೈದಲೊಡ[1]ಬಿದ್ದವರನೊದೆತುಳಿದು ।
ಸುಡುವೆನಹಿತಾನ್ವಯವ ಭೀಷ್ಮನ
ಕಡಿದು ಭೂತಗಣಕ್ಕೆ ಬೋನವ
[2]ಹಿಡಿವೆ ನೋಡೆನ್ನಲ್ಲಿ[2] ಮೇಳವೆಯೆನುತ ಸೈವರಿದ ॥ ೯೯ ॥

ಹರಿ ಮುಕುಂದ ಮುರಾರಿ ಲಕ್ಷ್ಮೀ-
ವರನೃಕೇಸರಿ ಯೆನುತ ಚಾಪವ
ಶರವನವನಿಗೆ ಬಿಸುಟು ಮೈಯಿಕ್ಕಿದನು ಕಲಿಭೀಷ್ಮ ।
ಕರಯುಗವ ಮುಗಿದೆದ್ದು ಮುರಹರ
ಸರಸಿಜಾಂಬಕ ರಾಮು ರಕ್ಷಿಸು
ತರಳನಲಿ ಗುಣದೋಷದಜಿಕೆಯು ದೇವ ಹೇಳೆಂದ ॥ ೧೦೦ ॥

---

೯೮. [1]ಟ (ಅ). [2]ಭರಿತನಿರ್ಜರ (ಅ). [3]ಕುಡಿ (ಕುಮಾ).

[ಕಲ್ಲೈಸು-ಉದ್ರೇಕಗೊಳ್ಳು, ಕೆರಳು. ದುರ್ಧರುಷ-ಪ್ರತಿಭಟಿಸಲಾಗದ, ಎದುರಿಸಲಾಗದ. ಲೂಯಮಾನ-ಕೊಲ್ಲತಕ್ಕ, ವಿನಾಶಕಾರಿಯಾದ. ನಿಶಾತ-ಹರಿತವಾದ. ತರಳತರಣೀಚಕ್ರ-ಬಾಲಸೂರ್ಯನಂತೆ ಪ್ರಕಾಶಮಾನವಾದ ಚಕ್ರ. ಸಂಗರವಿನಿರ್ಜಿತ-ಯುದ್ಧದಲ್ಲಿ ಗೆದ್ದಿರುವ. ಭಯಭರವಿವರ್ಜಿತ-ಭಯವನ್ನು ವರ್ಜಿಸಿರುವ, ಕಳೆದುಕೊಂಡಿರುವ].

೯೯. [1]ಹತ್ತಡವಹಾಯ್ಕು ಹರಿದನೊಡ (ಕುಮಾ). [2]ಬಡಿಸುವೆನು ನೋಡಿಲ್ಲಿ (ಕುಮಾ).

[ಬಳಿವರಿ-ಹತ್ತಿರಕ್ಕೆ ಬರು. ಒಡಬಿದ್ದವರು-ಕೂಡಲೆ ಕೆಳಕ್ಕೆ ಬಿದ್ದವರು. ಒದೆತುಳಿ-ಖಂಡತುಂಡಾಗುವಂತೆ ತುಳಿ. ಅಹಿತಾನ್ವಯ-ಶತ್ರುಗಳ ವಂಶ. ಬೋನ-ಭೋಜನ. ಮೇಳ-ಜೊತೆ, ಎಣೆ].

೧೦೦. [1]ಕುಂದ (ಕುಮಾ). [2]ನೇ ಕೇಶವ (ಅ).

[ಅಜಿಕೆ-ಹುಡುಕುವುದು, ಅನ್ವೇಷಣೆ].

ದೇವ ನೀ ದಿಟ ಕೊಲುವೊಡೆಯು [1]ನಾ[1]
ಸಾವೆನೇ [2]ನಾ[2]ನಾವನೆಂಬುದ
ದೇವರಱಿಯಿರಲಾ ವೃಥಾ ಸಂಭಿನ್ನರೋಷದಲಿ ।
ದೇವ ನಾವುದ ಜೋಡು [3]ನ[3]ನ್ನನು
ಕಾವುದೈ [4]ನೀ[4] ಮುನಿದೊಡೆಯು [5]ನಿಮ-
ಗಾವು[5] ಹೆದಱೆವು ನಾಮಧಾ[6]ರಿಗಳ[6]ತುಳಬಲರೆಂದ ॥ ೧೦೧ ॥

ಭಂಗವಲ್ಲಿದು ನಿನ್ನ ಘನತೆಗೆ
ಡಿಂಗರಿಗರೇ ಮಿಗಿಲು ನಿನಗೆಯು
ಡಿಂಗರಿಗರೇ ಬಲ್ಲಿದರು ದಾಕ್ಷಿಣ್ಯವೇನಿದಕೆ
ಮಂಗಳಾತ್ಮಕ ಕೇಳು ನಿನ್ನಯ
ಹಂಗನೊಲ್ಲೆನು ಮುಕುತಿಪಥದೊಳ-
ಭಂಗ ಪೆಂಡೆಯುದಾಳಲ್ಕೆ ನಿಮ್ಮಡಿಯ ಸಿರಿನಾಮ ॥ ೧೦೨ ॥

ಕಳುಹಿ ಕಳೆವುದು ಖಾತಿಯನು ನೀ-
ನುಳುಹಿಕೊಂಬುದು ತೇಜವನು ದಿಟ
ಕೊಲುವ ಮನವೇ ಬಿಸುಡು ಚಕ್ರವನೆನ್ನ ಕಾಯದಲಿ ।
ಅಳುಕಿ [1]ರೂದಲು[1] ಹಱಿದುದಾದೊಡೆ
ಬಳಿಕ ನಾ ಡಿಂಗರಿಗ[2]ನೇ ಯೀ[2]
ಕಳಕಳಿಕೆಗಾನಂಜುವವನೇ ದೇವ [3]ಮರ[3]ಳೆಂದ ॥ ೧೦೩ ॥

---

೧೦೧. [1]–[2]ತಾ (ಅ). [3]ತನ್ನ (ಅ). [4]ನೀ (ಕುಮಾ ಅ ಯಿಂದ ಸ್ವೀಕೃತ). [5]ನಿಮ್ಮಗೆ ನಾವು (ಅ). [6]ರಕರ (ಅ).

[ಸಂಭಿನ್ನರೋಷ–ಹೆಚ್ಚಾದ ರೋಷ. (ಜೋಡು–ಜೊತೆಯಾಗಿರುವುದು, ರಕ್ಷೆ, ಕವಚ) ನಾಮಧಾರಿ–ಭಗವಂತನ ನಾಮವನ್ನು ಮನಸ್ಸಿನಲ್ಲಿ ಧಾರಣೆ ಮಾಡಿರುವವನು; (ವಿಷ್ಣು) ಭಕ್ತ].

೧೦೨. [ಭಂಗ–ಹಾನಿ, ಅವಮಾನ. ಡಿಂಗರಿಗ–ಸೇವಕ, ಭಕ್ತ. ಹಂಗು–ಋಣ. ಅಭಂಗಪೆಂಡೆಯು–ಸೋಲಿಲ್ಲದ ಬಿರುದಿನ ಬಳೆ (ಮಹಾರಾಷ್ಟ್ರ)ದಲ್ಲಿ ದಾಸಗೀತೆಗಳನ್ನು ಹಾಡುವವರು ಕಾಲಿಗೆ ಕಟ್ಟಿಕೊಂಡು ಕುಣಿಯುತ್ತಿದ್ದ ಒಂದು ಬಗೆಯ ಬಿರುದಿನ ಕಾಲ್ಕಡಗ(?)].

೧೦೩. [1]ರೋಮವು (ಅ). [2]ನಲ್ಲೀ (ಅ ಕುಮಾ). [3]ಹೇ (ಅ).

[ಮನವೇ–ಮನಸ್ಸಿನಲ್ಲಿರುವುದೇ ಆದರೆ. ಕಾಯ–ಶರೀರ. ಹಱಿ–ಕತ್ತರಿಸಿ ಹೋಗು. ಕಳಕಳಿಕೆ–ಆಟೋಪ].

ನಚ್ಚಿ[1]ನಾ[1]ಳಿನ ಬಿನ್ನಹಕೆ ಹರಿ-
ಮೆಚ್ಚಿ ಮನದೊಳು ನಾಚಿ ಚಕ್ರವ
ಮುಚ್ಚಿದನು ಮುರಿದನು ಕಿರೀಟಿಯು ರಥವ ಹೊರೆಗಾಗಿ ।
ಬೆಚ್ಚಿ ಬೆದಱುವ ಸೇನೆಗಭಯವ
ಹಚ್ಚಿಕೊಟ್ಟನು [2]ವೀರ[2] ಭೀಷ್ಮನ
ನಿಚ್ಚಟದ ಭಕ್ತಿಯನು ನೆನೆನೆನೆದೊ[3]ಲೆದನಡಿಗಡಿಗೆ[3] ॥ ೧೦೪ ॥

---

೪. ಸಾಮೋಪಾಯ

ಮುಗುಳುನಗೆ ನಸು ಮೊಳೆಯೆ ಭೀಮಾ-
ದಿಗಳಿಗೆಂದನು ಕೃಷ್ಣನರಸ[1]ನ[1]
ಸೊಗಸು ಬನದಲಿ ಬಱಿಯ ಮನವೀ ಕದನಕೇಳಿಯಲಿ ।
ವಿಗಡತನವಂತಿರಲಿ ಭೀಷ್ಮನ
ಬೆಗಡುಗೊಳಿಸಲು ಹರನ ಹವಣ-
ಲ್ಲಗಣಿತನ ಸಾಮದಲಿ ಮುಱಿಯಲುಬೇಕು [2]ನಾವೆಂದ[2] ॥ ೧೦೫ ॥

ಇರುಳು ಗುಪ್ತದಲವನಿಪತಿ ಸೋ-
ದರರು ಮುರರಿಪು ಸಹಿತ ಬಂದನು
ಸುರನದೀನಂದನನ ಮಂದಿರಕಾಗಿ ವಹಿಲದಲಿ ।
ಕರೆದು ಪಡಿಹಾಱರಿಗೆ ಬಂದುದ-
ನಱುಹಲವದಿರು ಹೊಕ್ಕು ಸಮಯವ-
ನಱಿದು ಭೀಷ್ಮಂಗೀ ಕದನ ಬಿನ್ನಹವ ಮಾಡಿದರು ॥ ೧೦೬ ॥

---

೧೦೪. [1]ದಾ (ಕುಮಾ). [2]ರಾಯ (ಅ). [3]ನೆದ ಹರಿ ಶಿರವ (ಕುಮಾ).
[ನಚ್ಚಿನ–ನಂಬಿಕೆಯ, ವಿಶ್ವಾಸದ. ಆಳು–ಭಟ. ಮುರಿ–ಹಿಂತಿರುಗು. ಹೊರೆ–ಸಮೀಪ. ಹಚ್ಚಿಕೊಡು–ವಿತರಣೆ ಮಾಡು, ಎಲ್ಲರಿಗೂ ದೊರಕುವಂತೆ ಮಾಡು. ನಿಚ್ಚಟ–ನಿಶ್ಚಲ. ಒಲೆ–ತೂಗಾಡು].

೧೦೫. [1]ಗೆ (ಕುಮಾ). [2]ನಮಗೆಂದ (ಅ).
[ಬೆಗಡುಗೊಳಿಸು–ಭಯಗೊಳಿಸು. ಹವಣು–ಸಾಮರ್ಥ್ಯ. ಅಗಣಿತ–ಅಸಾಧಾರಣ ಮನುಷ್ಯ. ಸಾಮ–ಸಾಮೋಪಾಯ. ಮುಱಿ–ಭಂಗಿಸು].

೧೦೬. [ವಹಿಲ–ವೇಗ, ಪಡಿಹಾಱ–ದ್ವಾರಪಾಲಕ].

ಬಂದನೇ ಧರ್ಮಜನು [1]ಮುರರಿಪು[1]
[2]ಕಂ[2]ದನೇ ಕೌರವ[3]ರನಕಟಾ
ಕೊಂದನೇ ಶಿವಶಿವ ಯೆನುತ ಮೌನದಲಿ ಮುಳುಗಿದರ್[3] ।
ಮುಂದಿಯನು ಹೊಜಗಿರಿಸಿ ಬರಹೇ-
ಳೆಂದೊಡಾಗಲೆ ಕೃಷ್ಣ ಕುಂತೀ-
ನಂದನರು ಬರಲಿದಿರುವಂದಸು ಭೀಷ್ಮ ವಿನಯದಲಿ ॥ ೧೦೭ ॥

ಎಮಗೆ ಜಯವೆಂತಹುದು ರಾಜ್ಯ-
ಭ್ರಮೆಯ ರಾಜಸಬುದ್ಧಿಗಳು ವಿ-
ಕ್ರಮವಿಹೀನರು ನಾವು ನೀವ್ ತ್ರೈಲೋಕ್ಯವಿಜಯಿಗಳು ।
ಸಮರ ಸೋತುದು ನಮ್ಮ ಸುಭಟರು
ಯಮನ ಸೇವಕರಾಯ್ತು ಕೃಪೆಯಿಂ-
ದೆಮಗೆ ನಿಮ್ಮಭಿಮತವ ಬೆಸಸುವುದೆಂದನಾ ಭೂಪ ॥ ೧೦೮ ॥

ಶೀದುದೆಮ್ಮಯ ಸೇನೆ ನಸುಸೊ-
ಪ್ಪಾದುದಿಲ್ಲರಿಸೇನೆ ನಿಮ್ಮನು
ಕಾದಿ [1]ಗೆ[1]ಲುವೊಡೆ ಮೊಲೆಯನೂಡಿದ ತಾಯಿ ಜಾಹ್ನವಿಯೇ ।
ಕಾದಿದೆವು ಕಟ್ಟಿದೆವು ಗೆಲಿದೆವು
ಮೇದಿನಿಯ[2]ನಿನ್ನೇನು[2] ಮುನ್ನಿನ
[3]ಹೋ[3]ದ ವನವಾಸಕ್ಕೆ ನೇಮವ ಕೊಟ್ಟು ಕಳುಹೆಂದ ॥ ೧೦೯ ॥

ಮುನ್ನಿಸುವೊಡೀ ಉಭಯ ರಾಯರು
ನಿನ್ನ ಮೊಮ್ಮಂದಿರುಗಳಿದರೊಳು
ನಿನ್ನ ಕುಣಿಕೆಯಲಿಹುದು ಕುಂತೀಸುತರ ಜೀವನವು ।

---

೧೦೭. [1]ಕಟಕಟ (ಅ). [2]ಕೊಂ (ಅ). [3]ನಿನ್ನೇನೆಂದು ಮನದಲಿ ಮರುಗಿ ಮೌನದೊಳಿದ್ದ ನಿಮಿಷದಲಿ (ಅ).

೧೦೮. [ರಾಜಸಬುದ್ಧಿ-ರಜೋಗುಣದ ಕ್ಷಾತ್ರವುಳ್ಳವರು].

೧೦೯. [1]ಕೊ (ಅ). [2]ನಾವಿನ್ನು (ಕುಮಾ). [3]ಶೀ (ಕುಮಾ).
[ಶೀದುದು (ಶೀರ್ದುದು)-ಶೀರಿಹೋಯಿತು, ನಾಶವಾಯಿತು. ಸೊಪ್ಪಾಗು-ಶಕ್ತಿಗುಂದು. ಮೇದಿನಿ-ಭೂಮಿ ಹೋದ-ಕಳೆದ. ನೇಮ-ಅಪ್ಪಣೆ].

ನಿನ್ನನೇ ನಂಬಿಹರು ನೀನೇ
ಮುನ್ನ ಶಿಶುತನ[1]ದಿಂದ[1] ಸಲಹಿ[2]ದ[2]
ಮನ್ನಣೆಯು ನೀ ಬಲ್ಲೆಯೆಂದನು ದಾನವಧ್ವಂಸಿ ॥ ೧೧೦ ॥

ಎನಲು ಮೊಮ್ಮಂದಿರುಗಳಳಲಿನ
ಘನತೆಯನು ಕಿವಿಗೊಟ್ಟು ಕೇಳದು
ನನೆದುದಂತಃಕರಣ ಕಂಬನಿದುಂಬಿ[1]ದನು ಭೀಷ್ಮ[1] ।
ನನಗೆ [2]ಸಾವು[2] ಸಮೀಪ ಮಗನೇ
ನಿನಗೆ ಭಯಬೇಡಿನ್ನು ಕುರುಪತಿ
ದನುಜವೈರಿಗೆ ತಪ್ಪಿದಂದೇ ನಿಮಗೆ ಜಯವೆಂದ ॥ ೧೧೧ ॥

ಗಂಡುತನ ತಾನೆರವು ನಿಮ್ಮ ಶಿ-
ಖಂಡಿಯನು ಮುಂದಿರಿಸಲಾತನ
ಕಂಡು ನಾನ್ ಕಾಳಗವ ಮಾಡೆನು ಕೈದುಗಳ ಬಿಸುಟು ।
ಚಂಡಿತನವನು ಮಾದು ಮಿಗೆ ಕೈ-
ಕೊಂಡು ಫಲುಗುಣನೆಸಲಿ ತನುವನು
ದಿಂಡುಗೆಡಹ[1]ಲಿ[1] ಬಳಿಕ ಗೆಲುವಿರಿ ಕೌರವೇಶ್ವರನ ॥ ೧೧೨ ॥

ಎನಲು ಶಿವಶಿವಶಿವ ಮಹಾದೇ-
ವೆನುತ ಕಿವಿಗಳ ಮುಚ್ಚಿದನು ಕಂ-
ಬನಿಯ[1]ನುಗುರಲಿ[1] ಮಿಡಿದು ನೊಂದನು ಪಾರ್ಥ ಹೃದಯದಲಿ ।
ಎನಗೆ [2]ಜಯ[2]ವಾಯ್ತಿದು ಕೃತಾರ್ಥರು
ಜನದಲೆಮ್ಮವೊಲಾರು ಬಳಿಕೇ-
ನೆನಗೆ ನಿಮ್ಮವೊಲಾರು ಹಗೆಗಳು ಜಗದೊಳುಂಟೆಂದ ॥ ೧೧೩ ॥

---

೧೧೦. [1]ದಲ್ಲಿ (ಕುಮಾ). [2]ದೆ (ಕುಮಾ).
[ಮನ್ನಿಸು–ಮಾನ್ಯಮಾಡು, ಪರಿಗಣಿಸು. ಕುಣಿಕೆ–ಕೊರಳಿಗೆ ಬಿಗಿಯುವ ಹಗ್ಗ, ಉರಲು. ಮನ್ನಣೆ–ಆದರ].

೧೧೧. [1]ದುಗುಡದಲಿ (ಅ). [2]ಕಾಲ (ಕುಮಾ).

೧೧೨. [1]ಲು (ಅ).
[ಗಂಡುತನ–ಶೌರ್ಯ, ಪರಾಕ್ರಮ. ಎರವು–ಹೊರಗು. ಕೈದು–ಆಯುಧ. ಚಂಡಿತನ-ಛಲ, ಹಟಮಾರಿತನ. ಮಾದು–ಬಿಟ್ಟುಬಿಟ್ಟು. ಎಸಲಿ–ಬಾಣಪ್ರಯೋಗ ಮಾಡಲಿ. ದಿಂಡುಗೆಡಹು–ಕೆಳಕ್ಕೆ ಉರುಳಿಸು].

೧೧೩. [1]ಬೆರಳಲಿ (ಅ). [2]ಗೆಲ (ಅ ಕುಮಾ).
[ಮಿಡಿ–ಚಿಮ್ಮು, ಕೊಡಹು].

[1]ಕ[1]ಳಿದನಡವಿಯೊಳಯ್ಯನಲ್ಲಿಂ
ಬಳಿಕ ಭೀಷ್ಮನ [2]ತೋಳ[2] ತೊಟ್ಟಿಲಿ-
ನೊಳಗೆ ಬಳೆದೆವು ಸಲಹಿದನು ಧೂಳಾಟವೊದಲಾಗಿ ।
ಬ[3]ಲಿ[3]ಯುಲೆಜಿಕೆಗಳೆಮಗೆ ಭಾವಿಸಿ
ನೆಲನ ಕೊಟ್ಟನು ಭೀಷ್ಮನೀತನ
ಕೊಲೆಗೆ ಬಯಸುವ ಮನವಿದೆಂತುಟೊ ಕೃಷ್ಣ ಹೇಳೆಂದ ॥ ೧೧೪ ॥

ಯಂತ್ರಿ ಮಿಡಿದೊಡೆ ಕಾದಿ ಬೀಳ್ವವು
ಯಂತ್ರಮಯ[1]ಹಾಹೆ[1]ಗಳು ವಧೆಯಾ
ಯಂತ್ರಿಗೋ ಹಾಹೆಗಳಿಗೋ [2]ನೀ ಹೇಳು ನಿಶ್ಚಯವ[2] ।
ಯಂತ್ರಿ ಕೃಷ್ಣನು ನಾವು ನೀವೀ
ತಂತ್ರ [3]ಸಕಲ[3]ಚರಾಚರಂಗಳು
ಯಂತ್ರ[4]ರೂಹುಗಳಲ್ಲಿ[4] ಕಾರಣವಿಲ್ಲ [5]ನಿನಗೆಂದ[5] ॥ ೧೧೫ ॥

ಒಂದು ಮುಖದಲಿ ಜಗವ ಹೂಡುವ-
ನೊಂದು [1]ಮುಖದ[1]ಲಿ ಜಗವ ಸಲಹುವ-
ನೊಂದು [2]ಮುಖದಲಿ ಬೇಳು[2]ವನು ನಯನಾಗ್ನಿಯಲಿ ಜಗವ ।
ಕೊಂದು ಹಗೆಯಲ್ಲೀತ ಸಲಹಿದ-
ನೆಂದು ಮೋಹಿತನಲ್ಲ ಪರಮಾ-
ನಂದಮಯಹರಿ[3]ಯಿ[3]ದಕೆ ಕಾರಣವಿಲ್ಲ ನಿನಗೆಂದ ॥ ೧೧೬ ॥

---

೧೧೪. [1]ಅ (ಅ). [2]ತೊಡೆಯ (ಅ). [3]ಳಿ (ಅ).
[ಕಳಿ-ಸಾಯಿ. ಎಜಿಳೆ-ರೆಕ್ಕೆ].

೧೧೫. [1]ರೂಹು (ಅ). [2]ಹೇಳಾರನೆಮ್ಮುವುದು (ಅ ಕುಮಾ). [3]ಅಖಿಲ (ಕುಮಾ). [4]ರೂಪುಗಳೆಲ್ಲ (ಕುಮಾ). [5]ಕೇಳೆಂದ (ಕುಮಾ).
[ಯಂತ್ರಿ-ಸೂತ್ರಬೊಂಬೆಗಳ ಸೂತ್ರವನ್ನು ಹಿಡಿದು ಬೊಂಬೆಗಳನ್ನು ಆಡಿಸುವವನು; ಸೂತ್ರಧಾರ. ಮಿಡಿ-ಬೆರಳಿನಿಂದ ಮಿಡಿದು ಚಾಲನೆ ಮಾಡು. ಹಾಹೆ-ಬೊಂಬೆ].

೧೧೬. [1]ಹೆಸರಲಿ (ಅ). [2]ಪರಿಯಯುರುಹು (ಅ). [3]ನಿ (ಅ).
[ಹೂಡು-ಸ್ಥಾಪನೆ ಮಾಡು, ಸೃಷ್ಟಿಸು. ಬೇಳು-ಯಜ್ಞದಲ್ಲಿ ಆಹುತಿ ಕೊಡು].

ಕಾವೊಡೀತನ ಕರುಣ ಮುನಿದೊಡೆ
ಸಾವೆವೀತನ ಕೈಯ ಬಾಯಲಿ
ನೀವು ತಾವೀ ಮತ್ತೆ ಕೆಲಬರು ಮುನಿದೊಡಂಜುವೆನೆ ।
ನಾವು [1]ಹೇಳಿದ ಮಾತು[1] ನಿನಗಿ-
ನ್ನಾವ ಭಯವಿಲ್ಲಿನ್ನು ಚಿತ್ತದ
ಭಾವಶುದ್ಧಿಯೊಳೆಮ್ಮ ನಂಬಿರಿ ಹೋಗಿ ನೀವೆಂದ ॥ ೧೧೭ ॥

---

೫. ಭೀಷ್ಮನ ಶರಶಯನ

ಸೂಳು ಮಿಗಲಳ್ಳಿ[1]ಱಿವ ಘನ[1]ನಿ-
ಸ್ಸಾಳತತಿ ಮುಂಜಾವದಲಿ ಹೆ-
ಗ್ಗಾಳೆ ಮೊರೆದವು ಕುಣಿದು ಗಜಱಿದವಾನೆಕುದುರೆಗಳು ।
ತೂಳುವಱೆಗಳ ಭಟರ [2]ಘೋಳಾ-
ಘೋಳಿ[2] ದೆಸೆಗಳ ಬಗಿಯೆ ಮೂಡಣ-
ಶೈಲಮಂಚದಲುಪ್ಪವಡಿಸಿದನಬುಜಿನೀರಮಣ ॥ ೧೧೮ ॥
ಇಂದಲೇ ಪಾಂಡವರ [1]ಪರಮಾ-[1]
ನಂದ ಚಿತ್ರ[2]ಕೆ ಧೂಮದರ್ಶನ-
ವಿಂದಲೇ ಕೌಂತೇಯರಿಗೆ ಸುರಪುರದ ವೈಹಾಳಿ ।
ಇಂದಲೇ ಪವನಜನ ಪಾರ್ಥನ
ಸಂದವಿಕ್ರಮವಿಷಕೆ ಗಾರುಡ-
ವೆಂದೆನುತ ಬೊಬ್ಬಿಱಿದು ಕವಿದುದು ಸಕಲಕುರುಸೇನೆ ॥ ೧೧೯ ॥

---

೧೧೭. [1]ಬೆಸಸಿದ ಮಾಡಿ (ಕುಮಾ).
[ಕೈಯಬಾಯಲಿ–ಕೈಯಿಂದ, ಕೈಯ ಮುಖಾಂತರ].
೧೧೮. [1]ಱಿದ ಉರು (ಕುಮಾ). [2]ಹಾಳಾಹಾಳಿ (ಅ), ಘಾಳಾಘೂಳಿ (ಅ).
[ಸೂಳು-ಸರದಿಯ ಎಚ್ಚರಿಕೆ ಕೊಡುವ ಶಬ್ದ. ಅಳ್ಳಿಱಿ-ಧ್ವನಿ ಮಾಡು, ಶಬ್ದ ಮಾಡು. ನಿಸ್ಸಾಳ-ಚರ್ಮವಾದ್ಯ, ಭೇರಿ. ಹೆಗ್ಗಾಳೆ-ದೊಡ್ಡ ಕಹಳೆ. ತೂಳುವಱೆ-ಯುದ್ಧ ಕಾಲದಲ್ಲಿ ಆಕ್ರಮಣದ ಸೂಚನೆ ನೀಡುವ ಒಂದು ಬಗೆಯ ವಾದ್ಯ. ಘೋಳಾಘೋಳಿ-ಗದ್ದಲ. ಅಬುಜಿನೀ (=ಅಬ್ಜಿನೀ!) ರಮಣ-ಸೂರ್ಯ].
೧೧೯. [1]ಚಿತ್ತಾ (ಕುಮಾ). [2]ತ್ತ (ಅ).
[ಧೂಮದರ್ಶನ-ಹೊಗೆ ಕಾಣುವುದು, ಹೊಗೆ ಮುತ್ತಿ ಕಪ್ಪಾಗುವುದು ವೈಹಾಳಿ-ಕುದುರೆ ಸವಾರಿಯ ವಿಹಾರ. ಗಾರುಡ-ಗರುಡಮಂತ್ರ].

ಭುವನಗರ್ಭಿತವಾ[1]ಯ್ತು ಸಲೆ[1] ಮಾ-
ಧವನ ಜಠರದ ವೋಲು [2]ವರ[2]ಭಾ-
ಗವತರಂತಿರೆ ವಿಷ್ಣುಪದ ಸಂ[3]ಸಕ್ತ[3]ತನುವಾಯ್ತು ।
ರವಿಯು ವೊಲು ಶತಪತ್ರಸಂಘಾ-
ತವನು ಪಾದದಲಣೆದು ಕೆಂಧೂ-
ಳವಗಡಿಸೆ ಕುರುಸೇನೆ ಕೈಕೊಂಡುದು ರಣಾಂಗಣವ ॥ ೧೨೦ ॥

ರಣಕೆ ತವಕಿಸಿ ಬಳಿಕ ತಾಗುವ
ಕಣೆಯು ದಾಳಿಗೆ [1]ತಳ್ಳುವಾಜು[1]ವ
ಗುಣವಿದೆಂತುಟೊ ಭಂಡರಿವದಿ[2]ರು ಸಾರಕೇಳಿಸುತ[2] ।
ಕೆಣಕಿದ[3]ನು[3] ಬಿಲುದಿರು[4]ವ[4]ನುರುಮಾ-
ರ್ಗಣದ ಹೊದೆಗಳ ಕೆದಱಿ ಸಮರಾಂ-
ಗಣಕೆ ಸಮ್ಮುಖನಾದನರ್ಜುನ ಸಿಂಹನಾದದಲಿ ॥ ೧೨೧ ॥

ಅಗಲದಲಿ ದಿಗುವಳೆಯು[1]ವೀ[1]ಯುಂ-
ಬುಗಳನೀದುದೊ ವೋಣು ಬಾಣದ
ಮುಗಿಲ[2]ಮಾ[2]ಲೆಯು ಕೊಯ್ದುದೋ ಜರುಹಿದರೊ ಶರನಿಧಿಯು ।
ಝುಗಝುಗಿಸಿ ಹೊಳೆಹೊಳೆವ ಬಾಯ್ಧಾ-
ರೆಗಳ ಹೊಳಹಿನ [3]ದಾಳಿ ಧೀಂಕಿಡೆ[3]
ಮೊಗೆದವರ್ಜುನನಂಬು[4]ರಿಪು[4] ಚತುರಂಗ [5]ಜೀವನವ[5] ॥ ೧೨೨ ॥

---

೧೨೦. [1]ದುದಾ (ಕುಮಾ), ಯ್ತು ತಲೆ (ಅ ಪೇ). [2]ನೆರೆ (ಅ). [3]ತಪ್ತ (ಅ ಪೇ). [ವಿಷ್ಣುಪದ ಸಂಸಕ್ತತನು–ವಿಷ್ಣುವಿನ ಪಾದಗಳಲ್ಲಿ ಸಂಪರ್ಕ ಹೊಂದಿದ ಶರೀರ. ಶತಪತ್ರ ಸಂಘಾತ–ಕಮಲಪುಷ್ಪಗಳ ಸಮೂಹ. ಅಣೆ-ಸೋಕು, ಸ್ಪರ್ಶಿಸು. ಅವಗಡಿಸು–ವ್ಯಾಪಿಸು, ಹರಡು].

೧೨೧. [1]ದಳ್ಳುಜಾರುವ (ಅ). [2]ರ ಹೋಗ ಹೇಳೇನು (ಕುಮಾ). [3]ದು (ಅ). [4]ವಿ (ಅ). [ತವಕಿಸಿ-ಆತುರ ತೋರಿ. ತಳ್ಳುವಾಜು–ತಲ್ಲಣಿಸು, ತತ್ತರಿಸು. ಬಿಲುದಿರುವು–ಬಿಲ್ಲಿನ ಹೆದೆ, ಮಾರ್ಗಣ. ಕಣೆ–ಬಾಣ].

೧೨೨. [1]ವಿಧಿ (ಅ). [2]ಮಾ (ಅ). [3]ಧಾರೆಬಿಂಕವ (ಅ). [4]ಗಳು (ಅ). [5]ಮೋಹರ (ಅ). [ಅಗಲದಲಿ–ವಿಸ್ತಾರವಾಗಿ. ದಿಗುವಳೆಯ-ದಿಗ್ವಲಯ, ದಿಕ್ಕುಗಳ ಮಂಡಲ. ಈನು–ಪ್ರಸವಿಸು, ಹೆರು (ಈಂದುದೋ > ಈದುದೋ). ಬಾಣ–ಬಾನು, ಆಕಾಶ. ಮುಗಿಲು–ಮೋಡ. ಜರಹು–ಜೀಳಿಸು, ಉರುಳಿಸು, ಕೆಡಹು. ಶರನಿಧಿ–ಸಮುದ್ರ, ಬತ್ತಳಿಕೆ. ಬಾಯ್‌ಧಾರೆ–ಬಾಣದ ಮೂತಿಯ ಹರಿತವಾದ ಅಲಗು. ಧೀಂಕಿಡು–ನೆಗೆ, ಹಾರು. ಮೊಗೆ–ತುಂಬಿಕೊ, ಕುಡಿ. ರಿಪು ಚತುರಂಗ–ಶತ್ರು ಪಕ್ಷದ ಆನೆ, ಕುದುರೆ, ರಥ, ಕಾಲಾಳುಗಳನ್ನುಳ್ಳ ಸೈನ್ಯ. ಜೀವನ–ಪ್ರಾಣ, ನೀರು].
ಟಿಪ್ಪಣಿ: ಈ ಪದ್ಯದಲ್ಲಿ ಶ್ಲೇಷಾಲಂಕಾರವಿರುವುದನ್ನು ಗಮನಿಸಬಹುದು.

ಎಸುವನೊಬ್ಬನೆ ಪಾರ್ಥನನಿತುವ
ಕುಸುರಿದಱಿವರು ಗುರುಸುತಾದಿಗ-
ಳೆಸುವರನಿಬರು ತಱಿವ[1]ನೊಬ್ಬನೆ ಅ[1]ಮರಪತಿಸೂನು ।
ಎಸುವರಿವರರ್ಜುನನ ಮೈಯಲಿ
ಮಸೆಯ ಕಾಣೆನು ಪಾರ್ಥನನಿಬರ
ವಿಶಿಖವನು ನೆಱೆ ಕಡಿದು [2]ಕೆತ್ತುವನನಿಬರೊಡಲುಗಳ[2] ॥ ೧೨೩ ॥

ಉರಿಯ ರಾಜ್ಯವ ಸೂಱೆಗೊಳಲೆಂ-
ದರಗು ಹಂದವೊಲಾಯ್ತು ಮೇಘದ
ನೆರವಿ ಗಾಳಿಯ ಮನೆಗೆ ಬಿದ್ದಿನ ಬಂದ ತೆಱನಾಯ್ತು ।
ಗಿರಿಯ ಮಕ್ಕಳು ನಗುತ ವಜ್ರದ
ಶರವ ಹೊಯ್ದಂತಾಯ್ತು ಪಾರ್ಥನ
ಸರಳಸೀವೆಯ ಬೆರಸಿದವು ರಿಪುಸುಭಟರಂಬುಗಳು ॥ ೧೨೪ ॥

ಆಳು ಮುಱಿ[1]ದುದು[1] ಮೇಲೆ ಹೊಕ್ಕು ನೃ-
ಪಾಲಕರು ಬೊಬ್ಬಿಱಿದು ಭೀಷ್ಮನ
ಕೋಲ ಕೊಳ್ಳದೆ ಕೊಂಡು ಹರಿ[2]ದರು[2] ರಥದ ಹೊರೆಗಾಗಿ ।
ಆಳುತನದಂಗವಣೆಯೊಳ್ಳಿತು
ಮೇಳವೇ ಬಳಿಕೇನು ಪೃಥ್ವೀ-
ಪಾಲರಲ್ಲಾ ಪೂತುರೇ ಎನುತೆಚ್ಚನಾ ಭೀಷ್ಮ ॥ ೧೨೫ ॥

---

೧೨೩. [1]ನನಿತುವನ (ಅ). [2]ಮೆತ್ತಿದನೊಡಲೊಳಂಬುಗಳ (ಅ).
[ಕುಸುರಿದಱಿ–ಚೂರುಚೂರಾಗಿ ಕತ್ತರಿಸು. ಮಸೆ–ಸಣ್ಣಗಾಯ. ವಿಶಿಖ–ಬಾಣ].

೧೨೪. [ಅರಗು–ಲಾಕ್ಷಾ (ಕಾವಿಗೆ ಕರಗುವ ಒಂದು ಬಗೆಯ ದ್ರವ್ಯ). ಬಿದ್ದಿನ–ಔತಣ. ವಜ್ರ–ವಜ್ರಾಯುಧ. ಸರಳು–ಬಾಣ].

೧೨೫. [1]ದವು (ಕುಮಾ). [2]ದುದು (ಅ).
[ಆಳು–ಸೈನ್ಯದ ದಳ. ಆಳುತನ–ಶೌರ್ಯ, ಪರಾಕ್ರಮ. ಅಂಗವಣೆ–ರೀತಿ, ವಿಧಾನ].

ಅಂಗವಿಸಿ ಮಱಿಹುಲ್ಲೆ ಖುರದಲಿ
ಸಿಂಗವನು ಹೊಯ್ವಂತೆ ನೃಪರು-
ತ್ತುಂಗಸಹಸಿಯು ಮೇಲೆ ಕೈಮಾಡಿದರು ಖಡ್ಗದಲಿ ।
ಅಂಗವಣೆಯನು ಪೊಗಳುತವೆ ದಿವಿ-
ಜಾಂಗನಾಕಾಮುಕರ ಮಾಡಿ[1]ಯು-[1]
[2]ಭಂಗ ಭೀಷ್ಮನು ಮೆಱಿದನುನ್ನತ[2]ಬಾಹುವಿಕ್ರಮವ ॥ ೧೨೬ ॥

ಬಲವನದ ಹೊದಱಿ[1]ಲ್ಲಿ ಸೇನಾ-
ಜಲನಿಧಿಯ ಸುಳಿವೆಲ್ಲಿ ಸುಭಟರ
ಕಳಕಳದ ಕಡುಹೆಲ್ಲಿ [1]ಕರೆಯಿರೆ[1] ರಥಿಕರವರೆಲ್ಲಿ ।
ಹೊಳೆದು ಮೊಳಗಿದನಲ್ಲಿ ಬಾಣದ
ಬಲೆಯ ಬೀಸಿದನಲ್ಲಿ ರಕುತದ
ಹೊಳೆಯ ಹರಿಸಿದನಲ್ಲಿ ಗಂಗಾಸೂನು ಖಾತಿಯಲಿ ॥ ೧೨೭ ॥

ಬಲವನಾಯಕವೇ ವೃಥಾ ಹುಲು-
ದಳದೊಳಗೆ ನಿಮ್ಮಗ್ಗಳಿಕೆ ಕೈ-
ಯಳವ ಮನ[1]ಗಲಿತನದಳವ[1] ಬಿಲುಗಾರತನದ[2]ಳ[2]ವ ।
ಬಲಿ[3]ಯಿರೇ[3] ನಮ್ಮೊಡನೆ ಮೆಚ್ಚಿಸಿ
ಬಳಿಕ ಪಡೆಯಿರೆ ಬಿರುದನೆನುತವೆ
ಫಲುಗುಣನು ಕೈಯಿಕ್ಕಿದನು ಗಂಗಾಕುಮಾರನಲಿ ॥ ೧೨೮ ॥

---

೧೨೬. [1]ಯೆ (ಅ). [2]ಭಂಗವಿಲ್ಲದೆ ಭೀಷ್ಮ ಮೆರೆದನು (ಅ).
[ಅಂಗವಿಸಿ-ಮೇಲೆ ಬಿದ್ದು, ಪ್ರತಿಭಟಿಸಿ. ಖುರ-ಗೊರಸು. ದಿವಿಜಾಂಗನಾ ಕಾಮುಕರ ಮಾಡಿ-ದೇವತಾಸ್ತ್ರೀಯರನ್ನು ಕಾಮಿಸುವಂತೆ ಮಾಡಿ (ಎಂದರೆ, ವೀರ ಸ್ವರ್ಗದ ನಿವಾಸಿಗಳನ್ನಾಗಿ ಮಾಡಿ; ಅರ್ಥಾತ್ ಕೊಂದು). ಅಭಂಗ-ಭಂಗಪಡದ, ಅಜೇಯ].

೧೨೭. [1]ಖರೆಯುದ (ಕುಮಾ).
[ಬಲವನ-ಸೇನೆಯೆಂಬ ಕಾಡು. ಹೊದರು-ಪೊದೆ. ಕಡುಹು-ಸಾಮರ್ಥ್ಯ. ಮೊಳಗು-ಗುಡುಗಿನಂತೆ ಧ್ವನಿ ಮಾಡು].

೧೨೮. [1]ದಳಲುಗಳನೀ (ಅ). [2]ಸು (ಅ). [3]ಯರೈ (ಅ).
[ಹುಲುದಳ-ಕೈಲಾಗದ, ಅಸಮರ್ಥವಾದ ಸೈನ್ಯ. ಮನಗಲಿತನ-ಮಾನಸಿಕ ಪರಾಕ್ರಮ. ಅಳವು-ಸಾಮರ್ಥ್ಯ. ಬಲಿ-ಸಾಧಿಸಿ ತೋರಿಸು. ಪಡೆ-ಹೊಂದು, ಗಳಿಸಿಕೊ].

ನಾವು ವೃದ್ಧರು ಬಿ[1]ರು[1]ದುಗಿ-ರು[2]ದಿನ
ಲಾವಣಿಗೆ ನಮಗೇಕೆ ಹೇಳೈ
ನೀವಲೇ ಜವ್ವನದ [3]ಬ[3]ಂಟರು ರಣದ [4]ಧುರಭರ[4]ಕೆ ।
ನೀವಿರಲು ನಿ[5]ರ್ನಾ[5]ಯಕವೆ ಸೇ-
ನಾವಳಿ [6]ಮಹಾ[6]ದೇವ ಮೂದಲೆ-
ಗಾವು ಲಕ್ಷ್ಯವೆ ಹೇಳು ಫಲುಗುಣ ಎಂದನಾ ಭೀಷ್ಮ ॥ ೧೨೯ ॥

ಕಟಕಿಯೇ[1]ತಕೆ[1] ಪರಶುರಾಮನ
ಪಟುತ[2]ನ[2]ಕೆ ಮದ್ದ[3]ರೆವ[3]ಸೆಂಬೀ-
ನಿಟಿಲನೇತ್ರನ ಭುಜ[4]ಬಲಕೆ[4] ಸಮಜೋಳಿ ಗಡ [5]ನೀವು[5] ।
ಕುಟಿಲಭಣಿತೆಯುನರಿ[6]ಯೆನಿದಱೊ[6]ಳು
ಭಟರು ನೀವ[7]ಹಿರೆನ್ನ[7] ಶರಸಂ-
ಘಟ[8]ನೆಯುನು[8] ಚಿತ್ತೈಸಿಯೆಂದನು ಪಾರ್ಥ ನಸುನಗುತ ॥ ೧೩೦ ॥

ಬೞಿಯ ಮಾತೋ ಚಾಪವಿದ್ಯದೊ-
ಳಱಿತವುಂಟೋ ಹೊತ್ತುಗಳೆಯದೆ
ಹೆೞಿಸಿರೇ ನಾರಿಯುನು ನಿಮ್ಮಯ ಬಾಣಗರ್ಭಿಣಿಯು ।

---

೧೨೯. [1]–[2]ರಿ (ಅ). [3]ಭಂ (ಅ ಕುಮಾ). [4]ಧರಧುರ (ಅ). [5]ಣಾ (ಅ). [6]ಯ ಮಹ (ಅ).

[ಲಾವಣಿಗೆ–ಆಡಂಬರ. ಧುರಭರ–ನಿರ್ವಹಣೆಯ ಹೊಣೆಗಾರಿಕೆ. ನಿರ್ನಾಯಕ–ನಾಯಕನಿಲ್ಲದಿರುವುದು, ನಾಯಕನ ಅಭಾವ. ಮೂದಲೆ–ತಿರಸ್ಕಾರ. ಲಕ್ಷ್ಯ–ಗುರಿ].

೧೩೦. [1]ಕಿದು (ಕುಮಾ). [2]ರ (ಅ). [3]ರವ (ಅ), ರೆದೆ (ಕುಮಾ). [4]ದೊಳಗೆ (ಅ). [5]ನಿಮಗೆ (ಅ). [6]ವುದಿದರೊ (ಅ). [7]ಹಿರೆಂದ (ಅ), ಹುದೆನ್ನ (ಕುಮಾ). [8]ನವನು (ಕುಮಾ).

[ಕಟಕಿ–ವ್ಯಂಗ್ಯ, ಚುಚ್ಚುಮಾತು. ಪಟುತನ ಸಾಮರ್ಥ್ಯ, ಕೌಶಲ್ಯ. ಮದ್ದರೆ–ಸೇಡು ತೀರಿಸು, ಪ್ರತೀಕಾರ ಮಾಡು. ನಿಟಿಲನೇತ್ರ–ಹಣೆಗಣ್ಣ, ಈಶ್ವರ. ಸಮಜೋಳಿ–ಸರಿಸಮಾನ, ಸಮಜೋಡಿ. ಕುಟಿಲ–ವಕ್ರವಾದ. ಭಣಿತೆ–ಹೇಳಿಕೆ, ಮಾತು. ಅಹಿರಿ–ಆಗಿರುವಿರಿ. ಶರಸಂಘಟಿ–ಬಾಣಪ್ರಯೋಗ].

೧೩೧. [ಬೞಿಯ–ವ್ಯರ್ಥವಾದ, ಪೊಳ್ಳಾದ. ಅಱಿತ–ತಿಳಿವಳಿಕೆ. ಹೆೞಿಸು–ಪ್ರಸವ ಮಾಡಿಸು. ನಾರಿ (ಶ್ಲೇಷಾರ್ಥ)–೧. ಸ್ತ್ರೀ, ೨. ಬಿಲ್ಲಿನ ಹೆದೆ. ಬಾಣಗರ್ಭಿಣಿ–

ಅಱಿಯಲಹುದೆನಲಹುದಹುದು ಕೈ-
ಮಱಿಯದಿರು ಕೈಕೊಳ್ಳೆನುತ ಬೊ-
ಬ್ಬಿಱಿದು ಪಾರ್ಥನನದ್ದಿದನು ಬಾಣಾಂಬುರಾಶಿಯಲಿ ॥ ೧೩೧ ॥

*ಬಸಿವ ರಕುತವ ಬಳಿದು ಖಾತಿಯು
ಮುಸಕದಲಿ ಕೈಮಱಿದು ಮಿಗೆ ದ-
ಳ್ಳಿಸುತ ಹೊಗಱಿಡುತೌಡುಗಚ್ಚುತ ಹುಬ್ಬುಗಳ ಬಲಿದು ।
ಹೊಸಮುಸೆಯ ಬಾಯ್ಧಾರೆಗಳ ಶರ
ವಿಸರವನು ತೊಡಚಿದನು ಭೀಷ್ಮನ
ಮುಸುಕಿದನು ಮಗುಳೆಚ್ಚು ಪುನರಪಿ ಕರೆದನಂಬುಗಳ ॥ ೧೩೨ ॥

ಮುತ್ತಿದವು ನರನಂಬು[1]ಫಣಿ[1]ಗಳು
ಹುತ್ತ ಹೊಗುವಂದದಲಿ ಖಂಡವ
[2]ತುತ್ತಿ[2] ಹಾಯ್ದವು [3]ಕೆತ್ತಿ ಹರಿದವು ಕಿಬ್ಬರಿಗಳೆಲುವ[3] ।
[4]ಮುತ್ತಿದವು ಮೈ[4]ಗಳಲಿ [5]ತಲೆಯನು
ಕುತ್ತಿದವು[5] ವಜ್ರಾಂಗಿಯಲಿ ಭಟ-
ನತ್ತಲಿತ್ತಲೆನಲ್ಕೆ [6]ಬಳಸಿದವಾ[6] ನದೀಸುತನ ॥ ೧೩೩ ॥

ಬಾಣವನ್ನು ಬಸಿರಿನಲ್ಲಿ ಧರಿಸಿರುವವಳು, ಬಾಣವನ್ನು ಹೆದೆಯ ಮಧ್ಯಭಾಗದಲ್ಲಿ ಇರಿಸಿರುವುದು. ಕೈಮಱು[3]–ನಿನ್ನ ಕೈಯ ಸಾಮರ್ಥ್ಯವನ್ನು ಮರೆ. ಅದ್ದು–ಮುಳುಗಿಸು].

೧೩೨. [ಬಸಿ–ಹೊರಸುರಿ. ಮುಸಕ–ವಿಜೃಂಭಣೆ, ಉದ್ರೇಕ. ದಳ್ಳಿಸು–ಭುಗಿಲೆನ್ನು. ಹೊಗಱಿಡು–ಪ್ರಜ್ವಲಿಸು. ಬಲಿ–ಗಂಟಿಕ್ಕು. ವಿಸರ–ವಿಸ್ತಾರ, ಹರಹು].

೧೩೩. [1]ಕಣೆ (ಅ). [2]ಕುತ್ತಿ (ಕುಮಾ). [3]ಕೆಲವು ಕೆಲವೌಕಿದವು ಕಿಬ್ಬದಿಯ (ಅ). [4]ಮೆತ್ತಿದವು ಕೈ ಮೈ (ಕುಮಾ), [5]ತಲೆಯೊತ್ತಿದವು (ಕುಮಾ). [6]ಬಳಲಿಸಿದನು (ಅ).

[ಫಣಿ–ಹಾವು. ಖಂಡ–ಮಾಂಸ. ತುತ್ತು–ನುಂಗು, ಕಬಳಿಸು. ಕೆತ್ತು–ಕೊರೆ, ಮೇಲ್ಭಾಗವನ್ನು ಸುಲಿ. ಕುತ್ತು–ತಿವಿ, ಹೊಡೆ, ಬಡಿ. ವಜ್ರಾಂಗಿ–ಅಭೇದ್ಯವಾದ ಕವಚ].

ಸಾರು ಫಡ ಕೆಲಬಲದ ಹಂಗಿನ
ವೀರ[1]ನೇ ಕಲಿ[1] ಭೀಷ್ಮ ಮುನಿದೊಡೆ
ಹೋರಟೆಗೆ ಬರಹೇಳು [2]ಭರ್ಗನನಿವನ[2] ಪಾಡೇನು ।
[3]ಸೈರಿಸಿದೆ ನಾ[3] ಮಕ್ಕಳೆಂದೇ
[4]ವೈರವನು ಕೈಕೊಳ್ಳಿಸಿವನಿರೆ
ಧೀರತನವನು ನೋಡೆನುತ ಮುನಿದೆಚ್ಚನಾ[4] ಭೀಷ್ಮ ॥ ೧೩೪ ॥

ಆವ ವಿಧದಲಿ ಪಾರ್ಥನೆಸುವನ
ದಾವ ವೇಗದಿ ಮುಱಿವನೀತನ
ದಾವ ಚಾಪರಹಸ್ಯವಿದ್ಯೆಗಳೊಳಗೆ ಬಳಸಿದನೊ ।
ಆ ವಿಧದಲಾಪರಿಯಲಾ ಸಂ-
ಭಾವನೆಯಲಾಲುಳಿಯಲಾ ನಾ-
ನಾ ವಿಧಾನದಲೊದಗಿ ಸರಿವಿಗಿಲೆನಿಸಿದನು ಭೀಷ್ಮ ॥ ೧೩೫ ॥

ನರನ ಬೆಂಬಲವಾಗಿ ಪಾಂಚಾ-
ಲರನು ಮತ್ಸ್ಯನ ಭೀಮಸೇನನ
ವರನಕುಲಸಹದೇವಧೃಷ್ಟದ್ಯುಮ್ನಸಾತ್ಯಕಿಯ ।
ಅರಸನಟ್ಟಿದನಿತ್ತಲಂಬಿನ
ತಿರುಹುವೇಱಿನ ಮೊರೆವ ಬಿಲ್ಲಿನ
ವರರಥನ ದುವ್ವಾಳಿ ಮೊಱೆಯೆ ಶಿಖಂಡಿ ನಡೆತಂದ ॥ ೧೩೬ ॥

---

೧೩೪. [1]ತನವೇ (ಅ). [2]ಭಾರ್ಗವನಿವ (ಅ). [3]ಮೋರೆಗಿದ್ದೆನು (ಕುಮಾ). [4]ಬಂಧನ ಬಿಟ್ಟೆನಕಟ ವಿಕಾರಿತನನೇ ನಮ್ಮೊಡನೆಯೆನುತೆಚ್ಚನಾ (ಕುಮಾ). [ಕೆಲಬಲದ–ಪ್ರತಿಪಕ್ಷದ. ಹೋರಟೆ–ಹೋರಾಟ, ಕಾದಾಟ. ಭರ್ಗ–ಈಶ್

೧೩೫. [ಮುಱಿ–ಭಂಗಿಸು, ಖಂಡಿಸು. ಸಂಭಾವನೆ–ಆಲೋಚನಾ ರೀತಿ. ಲುಳಿ ಚಳಕ, ಚಾತುರ್ಯ].

೧೩೬. [ಪಾಂಚಾಲರು–ಪಾಂಚಾಲ ದೇಶದ ಅರಸರು. ಮತ್ಸ್ಯ–ವಿರಾಟ. ದುವಾ ವೇಗದ ಓಟ. ಶಿಖಂಡಿ–ದ್ರುಪದನ ಹಿರಿಯ ಮಗ. ಮೊದಲು ಸ್ತ್ರೀತ್ವ ಪಡೆದು, ಅನಂತರ ಪುರುಷತ್ವವನ್ನು ಪಡೆದನು. ಭೀಷ್ಮನನ್ನು ಎದುರಿಸು ನಪುಂಸಕನಾಗಿದ್ದನು].

ಒದಱಿ ಜೇವಡೆಗೈದು ಬಾಣವ
ಕೆದಱಿದನು ದಟ್ಟೈಸಿ ಚಾಪವ-
ನೊದೆದು ಹಾಯ್ದುವು ¹ತೋ¹ದವಂಬುಗಳರಿಯು ²ನೆತ್ತರ²ಲಿ |
ಇದಿರೊಳುಲಿದು ಶಿಖಂಡಿ ಶರಸಂ-
³ಘ³ದಲಿ ಹೂ⁴ಳೆ⁴ದನಾಗ ಭೀಷ್ಮನ
ಹೃದಯದಲಿ ವೈರಾಗ್ಯ ಮನೆಗಟ್ಟಿ⁵ದುದು⁵ ನಿಮಿಷದಲಿ ॥ ೧೩೭ ॥

ಎಲೆ ಮಹಾದೇವೀ ನಪುಂಸಕ-
ನಲಿ ನಿರಂತರ ನಮಗೆ ಸಮರವೆ
ಗೆಲವಿದೊಳ್ಳಿತು ಸುಡು ಶಿಖಂಡಿಯು ಕೂಡೆ ಬಿಲುವಿಡಿದು |
ಅಳುಕದಿಚ್ಛನಲಾ ದುರಾತ್ಮನ
ನಿಲವ ತೆಗೆತೆಗೆ ಯೆನುತ ಚಾಪವ-
ನಿಳುಹಿದನು ರಥದೊಳಗೆ ಗಂಗಾಸೂನು ¹ವಹಿಲ¹ದಲಿ ॥ ೧೩೮ ॥

ಹರಿಯು ಕೌಮೋದಕಿಯ ಹೊಯ್ಲನು
ಧರಳಲಾನುವೆನಖಿಳ ಕುಲಗಿರಿ
¹ಬಿ¹ರಿದು ಬೀಳುವೊಡಾನಲಾಪೆನು ನಖದ ²ಮೊನೆಯಿಂದ² |
³ಧುರ³ದೊಳಾದಿವರಾಹ ದಾಡೆಯು-
ಲಿಱಿದೊಡೆಯು ನರಸಿಂಹನಖದಲಿ
ಕೆರೆದೊಡೆಯು ಸೈರಿಸುವೆನಂಜುವೆನರ್ಜುನನ ಶರಕೆ ॥ ೧೩೯ ॥

---

೩೭. ¹ತೋ (ಕುಮಾ). ²ರಕುತದ (ಅ), ನೆತ್ತಿಯ (ಕುಮಾ). ³ಗ (ಅ). ⁴ಡಿ (ಅ). ⁵ತ್ತು (ಕುಮಾ).
[ಒದಱು-ಅರ್ಭಟಿಸಿ. ಜೇವಡೆಗೈ-ಬಿಲ್ಲಿನ ಹೆದೆಯನ್ನು ಮೀಟಿ ದನಿಮಾಡಿ. ತೋಯು-ನನೆ. ನೆತ್ತರು-ರಕ್ತ. ಸಂಘ-ಗುಂಪು. ಮನೆಗಟ್ಟು-ನೆಲಸು, ಮನೆ ಮಾಡು].

೩೮. ¹ತವಕ (ಅ).

೩೯. ¹ಜ (ಕುಮಾ). ²ಕೊನೆಗಳಲಿ (ಕುಮಾ). ³ಧರ (ಕುಮಾ).
[ಕೌಮೋದಕಿ-ವಿಷ್ಣುವಿನ ಗದೆ. ಹೊಯ್ಲು-ಹೊಡೆತ. ಆನು-ಧರಿಸು, ಹಿಡಿ. ನಖ-ಉಗುರು. ಧುರ-ಯುದ್ಧ. ಆದಿವರಾಹ-ವಿಷ್ಣುವಿನ ಮೂರನೆಯ ಅವತಾರ. ದಾಡೆ-ಕೋರೆಹಲ್ಲು. ಕೆರೆ-ಗೀರು].

ಚೇಳ ಬೆನ್ನಿನಲೊಡೆದು ಮೂಡುವ
ಬಾಲವೃಶ್ಚಿಕನಂತೆ [1]ಮಸೆದಿಹ[1]
ಬೋಳೆಯಂಬುಗಳೊಡೆದು [2]ಕಡೆ[2]ಮೂಡಿದವು ಬೆನ್ನಿನಲಿ ।
ಕೋಲು ಪಾರ್ಥನವಿವು ಶಿಖಂಡಿಯ
ಕೋಲುಗಳು ತಾನಲ್ಲ ನೊಂದುದು
ಕಾಳಗವು [3][ನ][3]ಮಗೆನುತ ಮೆಲ್ಲನೆ ಮುಲುಗಿದನು ಭೀಷ್ಮ ॥ ೧೪೦ ॥

ತೂಳಿಸೋಯಿತು ಬಾಣದಲಿ ಮೈ
ತೋಳು ತೊಡೆ [1]ಜೊ[1]ಂಡೆದ್ದು ರಕುತದ
ಸಾಲು [2]ತೊರಳೆ[2]ಯು ಕರುಳ ಕುಸುರಿಯು ಬಸಿವ ನೆಣವಸೆಯು ।
ಮೂಳೆಯೊಟ್ಟಿಲ ನೆಲನ [3]ಮುಟ್ಟಿದ[3]
ಜಾಳಿ[4]ಗೆಯ[4] ತೊಗಲೊಗುವ ಕೆಂಗರು-
ಗೋಲ ಮಂಚದ ಮೇಲೆ ರಣದಲಿ ಭೀಷ್ಮ ಪವಡಿಸಿದ ॥ ೧೪೧ ॥

ಮುಲುಗಿದನು ಕಲಿಭೀಷ್ಮನೆನೆ [1]ತ-
ಲ್ಲ[1]ಳಿಸಿದನು ಕುರುರಾಯನುದರದೊ-
ಳಳಿದುದಾಯುಧನೆಂಬ ತೆರದಲಿ ತಳ್ವು [2]ವಾರಿ[2]ದನು ।
ಬಲಿದುಸುರ ಬಿಸುಸುಯ್ಲ [3]ಹಬ್ಬಿದ[3]
ಕಳಕಳದ ಕಂಬನಿಯ [4]ಕಿಬ್ಬೊನ-[4]
ಲಿಳಿವ ಕದಪಿನ ಹೊತ್ತ ದುಗುಡದ ಮೊಗದಲೈತಂದ ॥ ೧೪೨ ॥

---

೧೪೦. [1]ಮುಸಗಿದ (ಅ). [2]ಮೊನೆ (?). [3]ನಮಗೆ (ಕುಮಾ), ತಮಗೆ (ಅ, ವೇ).
[ಬಾಲವೃಶ್ಚಿಕ–ಮರಿಚೇಳು. ಮಸೆದಿಹ–ಹರಿತ ಮಾಡಿದ. ಬೋಳೆಯಂಬ (ಚೇಳಿನ ಕೊಂಡಿಯ ಹಾಗೆ, ತುದಿ ಎಲೆಯ/ಹೂವಿನ ಎಸಳಿನಾಕಾರವಿರುವ) ಒಂ ಬಗೆಯ ಬಾಣ].

೧೪೧. [1]ಹುಂ (ಅ). [2]ಗೊಳಚೆ (ಕುಮಾ). [3]ಮುರಿದೆಲು (ಅ) [4]ಯಲಿ (ಅ).
[ಜೊಂಡೇಳು–ಮುದ್ದೆಮುದ್ದೆಯಾಗು, ಜಿಗಿಜಿಗಿಯಾಗು. ತೊರಳೆ–ಗುಲ್ಮ ಪ್ಲೀಹ. ಜಾಳಿಗೆ–ಬಲೆಬಲೆಯಾಗಿರುವ, ಜಾಳುಜಾಳಾಗಿರುವ].

೧೪೨. [1]ಕಳವ (ಅ). [2]ಳ್ಳು ಜಾರಿ (ಅ). [3]ಕಾಯದ (ಅ). [4]ಕಂಗಳ (ಅ).
[ತಲ್ಲಳಿಸು–ತಲ್ಲಣಗೊಳ್ಳು, ಕಳವಳಿಸು. ತಳ್ವುವಾರು–ತತ್ತರಿಸು, ಕಂಪಿಸು. ಬಿಸುಸುಯ್ಲ–ಬೆಚ್ಚನೆಯ ಉಸಿರು. ಕಳಕಳ–ಕಳಕಳ (ದುಃಖದ) ಶಬ್ದ. ಕಿಬ್ಬೊನಲು–ಕೆಳಕ್ಕೆ ಇಳಿಯುತ್ತಿರುವ ಪ್ರವಾಹ. ಕದಪು–ಕೆನ್ನೆ].

ಬಂದು ಭೀಷ್ಮನ ಚರಣ[1]ಕಮಲದ-[1]
ಲಂದು ಕಾಯುವ ಕೆಡಹಿ ವಿಗತಾ-
ನಂದಭೂಪತಿ ಹೊರಳಿದನು ಹೇರಾಳಶೋಕದಲಿ ।
ಒಂದು ಮಗ್ಗುಲ ಕೆಲದಲಿವರ್ಬೈ-
ತಂದು ನಿಂದರು ಗುರುಕೃಪಾದಿಗ-
ಳೊಂದು ಮಗ್ಗುಲ [2]ಸಾರಿನಿಂದರು ಕೃಷ್ಣಪಾಂಡವರು[2] ॥ ೧೪೩ ॥

ಏನ ನೆನೆದಾವುದನೊಡರ್ಚಿದೆ-
ನೇನ ಹೇಳುವೆನೆನ್ನ ಪುಣ್ಯದ
ಹಾನಿಯನು ಕೈತಪ್ಪನೆನೆದೆನು ನಿಮ್ಮ ಸಿರಿಪದಕೆ ।
ತಾನದಾವುದೊ ಧರ್ಮತತ್ವನಿ-
ಧಾನವೆಂದಱಿ[3]ಯದೆ ಕೃತಾಂತಂ-
ಗಾನು ಹಂಗಿಗನಾದೆನೆಂದೊರಲಿದನು ಯಮಸೂನು ॥ ೧೪೪ ॥

ಖೇದವೇಕೆಲೆ ಮಗನೆ ನಿನ್ನೋ-
ಪಾದಿಯಲಿ [1]ಚರಿತಾರ್ಥ[1]ನಾವನು
ಮೇದಿನಿಯೊಳಾ ಮಾತು ಸಾ[2]ಕ್ಷಾತ್ರ[2]ಧರ್ಮವನು ।
ಆದರಿಸುವುದೆ ಧರ್ಮ ನಿಮಗಪ-
[3]ರಾಧ[3]ಪಾತಕವಿಲ್ಲ ಸುಕೃತ-
ಕ್ಕೀ ದಯಾಂಬುಧಿ ಕೃಷ್ಣ ಹೊಣೆ ನಿಮಗಂಜಲೇಕೆಂದ ॥ ೧೪೫ ॥

ಮಗನೆ [1]ಕೇಳೈ[1] ಪಾರ್ಥ ಕೂರಂ-
ಬುಗಳ ಹಾಸಿಕೆ [2]ಚೆಂ[2]ದವಾಯಿತು
ಹೊಗರಲಗ ತಲೆಗಿಂಬ ರಚಿಸೆನೆ ಪಾರ್ಥ ಕೈಕೊಂಡು ।

---

೧೪೩. [1]ಸೀಮೆಯ (ಕುಮಾ). [2]ಕೆಲನಸಾರಿತು ಕೃಷ್ಣ ಸಹಿತಿವರು (ಅ).
[ವಿಗತಾನಂದ–ಸಂತೋಷವು ಹೋದ. ಕೆಲ–ಪಕ್ಕ. ಸಾರಿ–ಸಮೀಪಿಸಿ].

೧೪೪. [ಒಡರ್ಚು–ಮಾಡು, ತೊಡಗು. ಕೈತಪ್ಪು–ಅಪರಾಧ. ನಿಧಾನ–ಸ್ವರೂಪ, ಸ್ಥಿತಿ. ಕೃತಾಂತ-ಯಮ. ಹಂಗಿಗ–ಋಣಿ. ಒರಲು–ಗೋಳಾಡು].

೧೪೫. [1]ಸುಚರಿತ್ರ (ಅ ಕುಮಾ). [2]ಕ್ಷೈಕ್ಷ (ಕುಮಾ). [3]ವಾದ (ಅ ಕುಮಾ).

೧೪೬. [1]ನಿಂದಿರು (ಅ). [2]ಯಂ (ಅ). [3]ಕ್ಷಣ ಕೇಳು ಧೃತರಾಷ್ಟ್ರ (ಅ).
[ಅಲಗು–ಕತ್ತಿ. ತಲೆಗಿಂಬು–(ತಲೆದಿಂಬು) ತಲೆಗೆ ಆಸರೆ. ಕವಲಂಬು–ಅರ್ಧ

ಬಿಗಿದ ಬಿಲುಗೊಂಡೆದ್ದು ಮಂಡಿಸಿ
ಹೊಗರ ಕವಲಂಬೈದನೆಚ್ಚನು
ನೆಗಹಿದನು ಮಸ್ತಕವನಾ[3]ಗಂಗಾಕುಮಾರಕನ[3] ॥ ೧೪೬ ॥

ಒಡಲ ಜಡಿದವು ರೋಮರೋಮದೊ-
ಳಡಸಿದಂಬುಗಳಂಗವೇದನೆ
ತೊಡಕಿತುಬ್ಬರಿಸಿತ್ತು ಥಗೆ ಗೋನಾಳಿನೀರ್ದಗೆಯೆ ।
ನುಡಿಯಲಾಱನು ಮಕ್ಕಳಿರ ನೀ-
ರಡಸಿದೆನು ಪಿರಿದಾಗಿಯೆನೆ ನಡ-
ನಡುಗಿ ದುರ್ಯೋಧನನು ದೂತರ ಕರೆದು ನೇಮಿಸಿದ ॥ ೧೪೭ ॥

ತರಿಸಿದನು ಹಿಮರುಚಿಯ ಹಿಂಡಿದ
ಪರಮಶೀತೋದಕವೊ ತಾನೆನೆ
ಸುರಭಿಪರಿಮಳಪಾನವನು ಪರಿಪರಿಯ ಕುಡಿನೀರ ।
ಸರಸಬಹುವಿಧ ಭಕ್ಷ್ಯಭೋಜ್ಯವ
ನೆರಹಿದನು ಕುಡಿನೀರಗಿಂಡಿಯ-
ನರಸನೀಡಲು ಕಂಡು ನಕ್ಕನು ಭೀಷ್ಮನಿಂತೆಂದ ॥ ೧೪೮ ॥

ಏಱು ನೋವಿನಲಾದ ತೃಷ್ಣೆಯ-
ನಾಱಿಸುವೊಡಿವಱಳವೆ ಸಾಕಿವ
ತೋಱದಿರು ತೆಗೆ ತೊಲಗು ಮೂರ್ಥರಪರಮಗುರು ನೀನು ।
ಆಱಿತ್ತೆ ಗೋನಾಳಿ ಫಲುಗುಣ
ತೋಱು ನಿನ್ನ[1]ಱಿಕೆಯನು[1] ಸಲಿಲವ
ಬೀಱು ಬೇಗದಲೆನಲು ಬಿಲುಗೊಂಡೆದ್ದನಾ ಪಾರ್ಥ ॥ ೧೪೯ ॥

ಚಂದ್ರಾಕೃತಿಯ ಅಲಗುಳ್ಳ ಬಾಣ. ನೆಗಹು-ಮೇಲಕ್ಕೆತ್ತು. ಮಸ್ತಕ-ಶಿರಸ್ಸು, ತಲೆ].

೧೪೭. [ಜಡಿ-ಹೊಡೆ, ತಿವಿ, ಚುಚ್ಚು. ಅಡಸು-ತುಂಬು, ನಾಟಿಕೊಳ್ಳು. ತೊಡಕು-ಪ್ರಾರಂಭಿಸು. ಉಬ್ಬರಿಸಿತ್ತು-ಹೆಚ್ಚಾಯಿತು. ಗೋನಾಳಿ-ಗಂಟಲು. ನೀರ್ದಗೆ-ಒಣಗು. ನೀರಡಸು-ಬಾಯಾರು].

೧೪೮. [ಹಿಮರುಚಿ-ಚಂದ್ರ, ಪಚ್ಚಕರ್ಪೂರ. ಶೀತೋದಕ-ತಣ್ಣೀರು. ಸುರಭಿ-ಸುಗಂಧ. ಸರಸ-ರಸವತ್ತಾದ. ನೆರಹು-ಒಟ್ಟುಗೂಡಿಸು].

೧೪೯. [1] ರಿತವನು (ಕುಮಾ).
ಏಱು-ಗಾಯ. ತೃಷ್ಣೆ-ಬಾಯಾರಿಕೆ. ಗೋನಾಳಿ-ಗಂಟಲು. ಅಱಿಕೆ-ತಿಳಿವಳಿಕೆ. ಸಲಿಲ-ನೀರು. ಬೀರು-ಹೊಯ್ಯು].

[1]ಸಲಿಲ[1]ಬಾಣದಲವಳಗಂಗಾ-
ಜಲವ ತೆಗೆದನು ತಪ್ತಲೋಹದ
[2]ಜಲದವೊಲುತನಿ[2] ಹೊಳೆವ [3]ಸಲಿಲದ[3] ಬಹಳ ಧಾರೆಯನು ।
ಇಳುಹಿದನು ಸರಳಿಂದ ವದನದ
ಬಳಿಗೆ [4]ಬಲುತೃಷ್ಣೆಯನು ಭೀಷ್ಮಗೆ
ತೊಲಗಿಸಿದನಾ ತಾಪವಡಗಿತು ಜಲದ ಧಾರೆಯಲಿ[4] ॥ ೧೫೦ ॥

ಸಾಕು ಸಾಕೈ ತಂದೆ ನನ್ನನು
ಸಾಕಿಕೊಂಡೈ ಪಾರ್ಥ ಘನತೃ-
ಷ್ಣಾಕುಲತೆ ಬೀಳ್ಕೊಂಡುದತಿಶಯತುಷ್ಟಿ ತನಗಾಯ್ತು ।
ಸಾಕೆನುತ ಫಲುಗುಣನ ಪರಮವಿ-
ವೇಕವನು ಪತಿಕರಿಸಿ ನಿಜ ಚಿಂತಾ-
ಕುಳನ ಮಾಡಿದನು ಕೌರವರಾಯನನು ಭೀಷ್ಮ ॥ ೧೫೧ ॥

ತಂದೆ ಕಂಡೈ ಕೌರವೇಶ ಪು-
ರಂದರಾತ್ಮಜ[1]ನಳಬಳವನೀ-
ನಿಂದೆ[1] ಕಾಣಲು ಬೇಹುದೈ ಹಲವಂಗದಲಿ ನರನ ।
[2]ಹಿಂದಣೆಡೆಯಲಿ[2] ದ್ರೋಣಕೃಪಗುರು-
ನಂದನಾದಿಗಳೆಲ್ಲ [3]ಬಲ್ಲರು[3]
ಮಂದಮತಿ[4]ಯನು[4] [5]ಬಿಡುವುದರಸ[5] ಕೃಪಾಳುವಾಗೆಂದ ॥ ೧೫೨ ॥

---

೧೫೦. [1]ಜಲದ (ಅ). [2]ಬೆಳಕಿನಂತಿರೆ (ಅ). [3]ಸುಲಲಿತ (ಅ). [4]ಬಿಡೆ ಬಹಳಾರ್ತ ಭೀಷ್ಮನು ಗೆಲಿದನಂತಸ್ತಾಪವನು ನರನಾಥ ಕೇಳೆಂದ (ಕುಮಾ).
[ತಪ್ತಲೋಹದ ಜಲ–ಕಾದ ಲೋಹವು ಕರಗಿದ ನೀರು. ತನಿಹೊಳೆವ–ನಿಗಿ ನಿಗಿ ಹೊಳೆಯುವ].

೧೫೧. [ಸಾಕಿಕೊಳು–ಸಲಹು. ತೃಷ್ಣಾಕುಲತೆ–ಬಾಯಾರಿಕೆಯ ಬಾಧೆ. ತುಷ್ಟಿ–ತೃಪ್ತಿ. ಪತಿಕರಿಸು–ಕೊಂಡಾಡು. ಚಿಂತಾಕುಳ–ವ್ಯಾಕುಲವಾದ ಚಿಂತೆಯಿಂದ ಕೂಡಿದವನು].

೧೫೨. [1]ಅತಿಬಳವನೇನೆಂದು (ಅ). [2]ಹಿಂದೆ ಬಲ್ಲರು (ಕುಮಾ). [3]ಕೇಳ್ವೈ (ಕುಮಾ). [4]ತನ (ಕುಮಾ). [5]ಬೇಡವಿನ್ನು (ಕುಮಾ).
[ಪುರಂದರಾತ್ಮಜ–ಇಂದ್ರನ ಮಗ, ಅರ್ಜುನ. ಅಳಬಳ–ಸಾಮರ್ಥ್ಯ. ಬೇಹುದೈ–ಬೇಕು. ಹಲವಂಗ–ಅನೇಕ ರೀತಿ. ಹಿಂದಣೆಡೆ–ಹಿಂದಣ ಸಂದರ್ಭ. ಮಂದಮತಿ–ಅವಿವೇಕ, ಹೆಡ್ಡತನ].

ಅಳಿದರೊಡಹುಟ್ಟಿದರು ಹಲಬರು
ನೆಲನ ರಾಯರು ಸವೆ[1]ದರ[1]ತಿಬಲ-
ರಳುಕುವರು ನರನೆಂದೊಡೀ ದ್ರೋಣಾದಿನಾಯಕರು ।
ಅಲಗಿನಂಬಿನ ಹಕ್ಕೆ ನಮಗಾ-
ಯ್ತೊಳಜಗಳ ಸಾಕಿನ್ನು ಸೋದರ-
ರೊಳಗೆ ಸಂಪ್ರತಿಯಾಗಿ ಬದುಕುವುದೆಂದನಾ ಭೀಷ್ಮ ॥ ೧೫೩ ॥

ನಿನಗರೋಚಕ ನಮ್ಮ ಮಾತುಗ-
ಳನಿಬರಿಗೆ [1]ರುಚಿಸುವವು[1] ಪಾಂಡವ-
ರನುಮತವು ಬೇಡಿಲ್ಲ [2]ನಮ್ಮ[2]ನುಮತ[3]ದೊಳಡಗಿಹರು[3] ।
ತನುಜ ಕದನದ [4]ಕಡ್ಡ[4]ತನ ಬೇ-
ಡೆನ[5]ಗಿದು[5]ಪಕಾರವು ವೃಥಾ ಕುರು-
ವನಕೆ ವಹ್ನಿಯ ಬಿತ್ತಬೇಡಕಟೆಂದನಾ ಭೀಷ್ಮ ॥ ೧೫೪ ॥

ಮಾತು ಕಿವಿವೊಗದಾನು [1]ಸಮರ-
ಕ್ಕಾತುರನು[1] ಛಲದಂಕನೆಂಬೀ
[2]ಖ್ಯಾತ ಮಱೆ[3]ವವನಲ್ಲ ಕೇಳ್ ರಾಜ್ಯಾಭಿಲಾಷೆಯಲಿ[2] ।
ಸೋತ ಮನದವನಲ್ಲ ಭುವನ-
ಖ್ಯಾತನೆನಿಪೊಂದಾ[3]ನುಡಿಯೆ[3] ದಿಟ
ನೀತಿಗಳೆದರೆ ಬಳಿಕ ನಿಮ್ಮಯ ಮೊಮ್ಮನಲ್ಲೆಂದ ॥ ೧೫೫ ॥

---

೧೫೩. [1]ದುದ (ಅ).

[ಸವೆದರು–ನಾಶವಾದರು. ಅಳುಕು–ಹೆದರು. ಅಲಗಿನಂಬು–ಮೊನಚಾದ ಬಾಣ. ಹಕ್ಕೆ–ವಾಸಸ್ಥಾನ, ಶಯ್ಯೆ. ಸಂಪ್ರತಿ–ಒಪ್ಪಂದ, ಸಂಧಾನ].

೧೫೪. [1]ಸೊಗಸುವುದು (ಕುಮಾ). [2]ನಿನ್ನ (ಅ). [3]ವ ಬಯಸುವರು (ಅ) [4]ಷ್ಟ (ಅ). [5]ಗೆ ಉ (ಅ).

[ಅರೋಚಕ–ಸೇರದುದು, ಅಪಥ್ಯ. ಅನುಮತ–ಅಭಿಪ್ರಾಯ. ಕಡ್ಡತನ–ಮೂರ್ಖತನ, ದಡ್ಡತನ. ಕುರುವನ–ಕುರುವಂಶವೆಂಬ ಕಾಡು. ವಹ್ನಿ–ಬೆಂಕಿ. ಬಿತ್ತು–ಹಾಕು, ಇಡು].

೧೫೫. [1]ಸಮರಕ್ಕಾತುರದ (ಅ), ಸಮರಂಗಾತುರನು (ಕುಮಾ). [2]ಖ್ಯಾತಿಯನು ಮರೆದಾತನಲ್ಲದೆ ರಾಜ್ಯಪದವಿಯಲಿ (ಕುಮಾ). [3]ಶೆಯನು (ಕುಮಾ).

[ಕಿವಿವೊಗು–ಕೇಳಿಸು. ಛಲದಂಕ–ಹಟ ಸಾಧಿಸುವ ಬಿರುದುಳ್ಳವನು. ದಿಟ ನೀತಿಗಳೆ–ನನ್ನ ನೀತಿಯನ್ನು ಕೈಬಿಟ್ಟರೆ. ಮೊಮ್ಮ–ಮೊಮ್ಮಗ].

ನೊಡಲೊಳೆಂದಿರಿ ನೀವು ಬಳಿಕೀ
ಯದುಕುಲಾಧಿಪ ಕೃಷ್ಣ[1]ನುಜ[3][1] ಹೇ-
ಳಿದನು ಋಷಿಗಳು ಬೊಪ್ಪನವರೀಹದನ [2]ಹೇಳಿ[2]ದರು ।
ವಿದುರ ಹೇಳಿದನೆಲ್ಲರಿಗೆ ತಾ-
ನಿದುವೆ [3]ನಿಶ್ಚಯುವೆನ್ನ ಮತ ನೀ-
ಗದಿದು ಬುದ್ಧಿಯು ಹೇಳಬೇಡೆಂದೆಬಗಿದನು ಪದಕೆ[3] ॥ ೧೫೬ ॥

ಒಂದು ಮತವೆ[1]ನ[1]ಗೊಂದು ನುಡಿ ಮನ-
ವೊಂದು ಮತ್ತೊಂದಿಲ್ಲ ಸಾಕಿದ-
ನೆಂದು ಫಲವೇನಿನ್ನು ಸಂಧಿಯೆ ಪಾಂಡುತನಯು[2]ರಲಿ[2] ।
ಇಂದು ನಿಮಗೀಹದನನಾ[3]ನೇ[3]
ತಂದು ಬಳಿ[4]ಕೆ[4]ನ್ನೊಡಲ ಸಲಹು[5]ವ[5]
ಚೆಂದವೊಳ್ಳಿತು ತಪ್ಪನಾಡಿ[6]ದಿ[6]ರೆಂದು ನೃಪ ನುಡಿದ ॥ ೧೫೭ ॥

ಕಾಯದಲಿ ಕಕ್ಕುಲಿತೆ[1]ಯೇಕಿ[1]ದ-
ಱಾಯುಸವು [2]ತಾನೇ[2]ಸುದಿನ ಕ-
ಲ್ಪಾಯುಗಳಿಗೊಳಗಾಗಿ ಕಾಲನ ರಾಜಕಾರಿಯುವು ।
ಹೇಯು[3]ವೀ[3] ಸಿರಿಯಿದಱ ಸ್ವೈವಶ-
ದಾಯು[4]ತಿಕೆ ನನಗಿಲ್ಲ[4] ಪಾಂಡವ-
ರಾಯುಮಸ್ತಕಶೂಲನೆಂಬೀ ಬಿರುದ ಬಿಡೆನೆಂದ ॥ ೧೫೮ ॥

---

೧೫೬. [1]ನರೆ (ಕುಮಾ). [2]ಹೇಳಿ (ಅ). [3]ಮತವೆನಗೊಬ್ಬಗೆಯು ಬಲುಗದನವೇ ಮತ ವೆಂದು ಹೇಳಿದೆ ಹಿಂದು ನಿಮಗೆಂದ (ಕುಮಾ).
[ಉಱ[3]-ಅತಿಶಯವಾಗಿ. ಬೊಪ್ಪ-ತಂದೆ (ಧೃತರಾಷ್ಟ್ರ). ಈ ಹದನ-ಈ ಸಂಧಿಯ ವಿಚಾರವನ್ನು. ನೀಗದು-ಕಳೆದು ಹೋಗದು].

೧೫೭. [1]ಮ (ಅ). [2]ರಿಗೆ (ಅ). [3]ನ್ಯೆ (ಅ). [4]ಕಿ (ಅ). [5]ವೆ (ಅ). [6]ದ (ಅ).
[ಮತ-ಅಭಿಪ್ರಾಯ].

೧೫೮. [1]ಯೆನಗಿ (ಅ). [2]ತನಗೇ (ಅ). [3]ಸದ (ಅ). [4]ತದ ಮನದಲ್ಲಿ (ಅ).
[ಕಾಯ-ಶರೀರ. ಕಕ್ಕುಲಿತೆ-ಪ್ರೀತಿ, ಒಲವು. ಏಸು-ಎಷ್ಟು. ಕಲ್ಪಾಯು-ಕಲ್ಪಾಂತವಾದ ಅಯುಸ್ಸು (ಕಲ್ಪ=ಬ್ರಹ್ಮನ ಒಂದು ದಿನ ಅಥವಾ ಸಹಸ್ರ ಯುಗಗಳ ಕಾಲಾವಧಿ). ಕಾಲ-ಯಮ. ರಾಜಕಾರಿಯ-ರಾಜಕಾರ್ಯ, ರಾಜನ ಪ್ರಭುತ್ವ, ಆಡಳಿತ. ಹೇಯವು-ತಿರಸ್ಕಾರಯೋಗ್ಯ, ನಿಂದ್ಯ. ಸ್ವೈವಶದಾಯತಿಕೆ-ಸ್ವಾಧೀನದ ಅತಿಶಯ, ಹೆಚ್ಚಳ. (ಪಾಂಡವರಾಯರ) ಮಸ್ತಕ ಶೂಲ-ತಲೆಗೆ ಶೂಲಪ್ರಾಯನಾದವನು].

ಎಲವೊ ಭೀಷ್ಮರ ಮಾತುಗಳ ನೀ-
ನೊಲುವೊಡೆಯು ಸಂಧಾನದಲಿ ನೀ
ನಿಲುವೊಡೆಯು ದೇಹಾಭಿಲಾಷೆಗೆ ಬಲಿವೊಡೆಯು ಮನವ ।
[1]ಒಲಿವೆನೇ [ನಾ] ಭೀಮ[1] ಸಂಧಿಯ
ಕಳಚಿ ನಿನ್ನೊಡಹುಟ್ಟಿ[2]ದಾ[2]ತನ
ತಿಳಿರಕುತವನು [3]ಕುಡಿದೊ[3]ಡಲ್ಲದೆ [4]ಬಿಡೆ[3]ದೆ ಬಿ[ಡೆ]ನೆಂದ[4] ॥ ೧೫೯ ॥

ಹಾ ನುಡಿಯದಿರು [1]ಕುರು[1]ಪಿತಾಮಹ-
ನೇನ ಬೆಸಸಿದುದಕೆ ಹಸಾದವು
ನೀನು ನಡೆ ಪಾಳಯಕೆ [2]ಮಿಡುಗಲಿ[2]ತನದ ಮಾಣೆಯುಲ ।
ಮೌನಮುದ್ರೆಯ ಹಿಡಿಯೆನಲು ಪವ-
ಮಾನನಂದನ ಖಾತಿಯಲಿ ಯಮ-
ಸೂನುವನು [3]ಬಿಡೆನೋಡಿ ಮೆಲ್ಲನೆ[3] ಸರಿದನಲ್ಲಿಂದ ॥ ೧೬೦ ॥

ಬೀಳುಕೊಡಿರೇ ಸಾಕು ಭೀಮನು
ಬಾಲಭಾಷಿತನಾದನೀ ಭೂ-
ಪಾಲ ಕೌರವನೆಂ[1]ಬವನು[1] ಮೊದಲಿಗನು ಮೂರ್ಖರಿಗೆ ।
ಕಾಳಗದೊಳೊಡೆಹಾಯ್ದು ಸಾಯಲಿ
ಬಾಳಲೊಲಿದಂತಾಗಿ ಹೋಗಲಿ
ಹೇಳದಿರಿ ನಿಮ್ಮಿಂದ ತಪ್ಪಿಲ್ಲೆಂದನಸುರಾರಿ ॥ ೧೬೧ ॥

---

೧೫೯. [1]ಒಲಿದ ಭೀಮನೆ ನಿನ್ನ (ಕುಮಾ). [2]ದೀ (ಕುಮಾ). [3]ಸುರಿವನ (ಕುಮಾ). [4]ಬರಿದೆ ಬಿಡನೆಂದ (ಅ), ಬಿಡುವನಲ್ಲೆಂದ (ಕುಮಾ).
[ಸಂಧಿ-ಸಂಧಾನ. ಕಳಚಿ-ಮುರಿದು, ತಿರಸ್ಕರಿಸಿ].

೧೬೦. [1]ನಿಲು (ಕುಮಾ). [2]ಬಿಡುಗುರಿ (ಕುಮಾ). [3]ನೋಡುತ್ತಲೆದ್ದುದು (ಅ).
[ಹಸಾದ-ಅಪ್ಪಣೆ. ಮಿಡುಗಲಿತನ-ಉಗ್ರಪರಾಕ್ರಮ. ಮಾಣ್-ಬಿಡು. ಬಿಡೆ-ಬಿಡದೆ, ಒಂದೇ ಸಮನೆ].

೧೬೧. [1]ಬೆನೇ (ಕುಮಾ).
[ಬಾಲಭಾಷಿತ-ಹುಡುಗಾಟಿಕೆಯ ಮಾತು. ಒಡೆಹಾಯ್ದು-ಒಡನೆಯೇ ನುಗ್ಗಿ].

ಮುರಹರನ [1]ಮತವ[1]ಹುದು ಸಾಕಿ-
ನ್ನರಸ ಧರ್ಮಜ ಹೋಗು ದ್ರುಪದಾ-
ದ್ಯರಿಗೆ ನೇಮವು ಪಾರ್ಥ ಮರಳೈ ತಂದೆ ಪಾಳಯಕೆ।
ಧರೆಯ ಲೋಲುಪ್ತಿಯಲಿ [2][ನಿ]ಮ್ಮನು
ಧುರದೊಳಗೆ ನೋಯಿಸಿದೆವೆಂಬೀ[2]
ಧರಧುರವ ನೆನೆಯದಿರಿ ವಿಜಯಿಗಳಾಗಿ [3]ನೀವೆಂದ[3] ॥ ೧೬೩ ॥

ಬೀಳುಕೊಂಡರು ರಾಯರಿಬ್ಬರು
ಪಾಳೆಯಂಗಳಿಗಿತ್ತ ಪಡುವಣ-
ಶೈಲ[1]ವಿಪುಳ[1]ಸ್ತಂಭದೀಪಿಕೆಯಂತೆ ರವಿ ಮೆಱೆದ ।
ಮೇಲುಮುಸುಕಿನ [2]ಹೊತ್ತದುಗುಡದ[2]
ಕಾ[3]ಳಿಕೆಯ[3] ದುಮ್ಮಾನಜಲಧಿಯ
ಕಾಲುವೆಗಳೆನೆ ಕೌರವ[4]ರು[4] ಹೊಕ್ಕ[5]ರು[5] ನಿಜಾಲಯವ ॥ ೧೬೪ ॥

---

೧೬೩. [1]ಮಾತ (ಕುಮಾ). [2]ಸಲೆ ಕಾತರಿಸಿ ತಪ್ಪಿದೆವೆಮ್ಮೆಂಬೀ (ಕುಮಾ). [3]ಹೋಗೆಂದ (ಅ).
[ಮತ-ಅಭಿಪ್ರಾಯ. ನೇಮ-ಅಪ್ಪಣೆ. ಲೋಲುಪ್ತಿ-ಲೋಲುಪತೆ, ಅತಿಯಾದ ಆಸಕ್ತಿ. ಧರಧುರ-ಉಗ್ರವಾದ ಕಾಳೆಗವನ್ನು ನಡೆಸಿದ ಸಂಗತಿ].

೧೬೪. [1]ವಿಗಳ (ಅ). [2]ಮುಖದ ಚಿತ್ತದ (ಕುಮಾ). [3]ಳಗದ (ಅ). [4]–[5]ರು(ಅ).
[ವಿಪುಳ-ಘನವಾದ, ಭವ್ಯವಾದ. ಮೇಲು ಮುಸುಕಿನ-ಮೇಲೆ ಕವಿದಿರುವ. ಕಾಳಿಕೆ-ಕರಿಕು. ದುಮ್ಮಾನ-ಕುಗ್ಗಿದ ಮನಸ್ಸು, ದುಃಖ].

ದ್ರೋಣಪರ್ವ

೧. ಧರ್ಮರಾಜನನ್ನು ಹಿಡಿಯಲು ದ್ರೋಣನ ಪ್ರಯತ್ನ

ಗಾಹು[1][ಗೊ][1]ಳ್ಳದ ಭೀಮಪಾರ್ಥರ
ಸಾಹಸವನೆಣಿಸುತ ಕಠಾರಿಯ
ಮೋಹಳದ ಮೇಲಿಟ್ಟ ಗಲ್ಲದ ಮುಕುಟದೊಲಹುಗಳ ।
ಊಹೆದೆಗಹಿನ ಕಂಬನಿಯ ತನಿ-
ಮೋಹರದ ಘನಶೋಕವಹ್ನಿಯ
ಮೋಹುಗಾಡಿನ ಮನದ ಕೌರವನಿತ್ತನೋಲಗವ ॥ ೧ ॥

ಇತ್ತ ಬಾರೈ ಕರ್ಣ ಕುರುಕುಲ-
ಮತ್ತವಾರಣ ಕುಳ್ಳಿರೈ ಬಾ
ಇತ್ತ ಬಾ ತನ್ನಾಣೆಯೆನುತವೆ ಸೆಱಗ ಹಿಡಿದೆಳೆದು ।
ಹತ್ತಿರಾತನ ನಿಲಿಸಿ ಬಟ್ಟಲ-
ಲಿತ್ತು ವೀಳೆಯವನು ಸುಯೋಧನ
ಕೆತ್ತುಕೊಂಡಿರೆ ನುಡಿಸಿದನು ಕಲಿಕರ್ಣನವನಿಪನ ॥ ೨ ॥

---

೧. [1]ಕೊ (ಅ ಕುಮಾ).

[ಗಾಹುಗೊಳ್ಳದ-ಆಳ ಅಗಲಗಳನ್ನು ಅರಿಯಲಾಗದ, ಅಗಾಧವಾದ. ಮೋಹಳ-ಹಿಡಿ. ಒಲಹು-ಒಲೆತ, ತೂಗಾಟ. ಊಹೆದೆಗಹು-ವಿಚಾರಶೂನ್ಯತೆ. ಕಂಬನಿಯ ತನಿ ಮೋಹರ-ಕಣ್ಣೀರ ಹನಿಗಳ ದಟ್ಟವಾದ ಒಗ್ಗೂಡಿಕೆ, ಗುಂಪು. ಮೋಹುಗಾಡಿನ ಮನ-ದಾರಿಗಾಣದ, ದಿಕ್ಕುಗೆಟ್ಟ, ಮನಸ್ಸು].

೨. [ಮತ್ತವಾರಣ-ಮದಿಸಿದ ಆನೆ. ಕೆತ್ತುಕೊಳ್ಳು-ಖಿನ್ನನಾಗಿರು, ಖೇದಗೊಂಡಿರು].

ಜೇಯು ದುಗುಡವಿದೇಕೆ ಬಿಡು ಗಾಂ-
ಗೇಯನಳುಕಿದೊಡೇನು ಕಾಣಿಯು
ಬೀಯದಲಿ ಬಡವಹುದೆ ಕನಕಾಚಲ ನಿಧಾನಿಸಲು ।
ರಾಯ ಜಗಜಟ್ಟಿಗಳು ರಣದೊಳ-
ಜೇಯರಿರೆ ಪರಿವಾರವನು ನಿ-
ರ್ದಾಯದಲಿ [1]ತ[1]ಣಿಸುವೆನು ರಿಪುಗಳ ಸಿರಿಯ ಸೂಱೆಯಲಿ ॥ ೩ ॥

ಕರ್ಣ ಕರ್ಣಕಠೋರಸಾಹಸ
ನಿರ್ಣಯಿಸು ಪರಸೈನ್ಯಸುಭಟ ಮ-
ಹಾರ್ಣವಕೆ ಬಿಡು ನಿನ್ನ ವಿಕ್ರಮ[1]ಬಾಡಬಾನಳನ[1] ।
ಪೂರ್ಣಕಾಮನು ನೀನು ಕುರು[2]ಬಲ-[2]
ಕರ್ಣಧಾರನು ನೀನು ವಿಶ್ವವಿ-
ಕರ್ಣ ನೀನೇ ರಕ್ಷಿಸೆಂದುದು ನಿಖಿಳಪರಿವಾರ ॥ ೪ ॥

ಕಾದುವೆನು ರಿಪುಭಟರ ಜೀವವ
ಸೇದುವೆನು [1]ರಣ[1]ರಂಗಭೂಮಿಯು
ನಾದುವೆನು ನೆಣಗೊಬ್ಬಿನಹಿತರ ಗೋಣ ರಕುತದಲಿ ।
ಹೋದ ದಿವಸಂಗಳಲಿ ಕಾಳಗ-
ಮಾದುದಂದಿನ ಭೀಷ್ಮರೊಡನೆ ವಿ-
ವಾದಕಾರಣ ಬೇಡಿಕೊಳಬೇಹುದು ನದೀಸುತನ ॥ ೫ ॥

---

೩. [1]ದ (ಅ ಕುಮಾ).
[ದುಗುಡ–ದುಃಖ. ಕಾಣಿ–ಅತ್ಯಂತ ಕಡಮೆ ಬೆಲೆಯ ನಾಣ್ಯ. ಬೀಯ–ವ್ಯಯ, ವೆಚ್ಚ. ಕನಕಾಚಲ–ಚಿನ್ನದ ಬೆಟ್ಟ (ಮೇರು ಪರ್ವತ). ನಿಧಾನಿಸು–ವಿಚಾರ ಮಾಡು, ಯೋಚಿಸು. ನಿರ್ದಾಯ–ಸಂಪೂರ್ಣತೆ, ಪೂರ್ತಿ. ತಣಿಸು–ತೃಪ್ತಿ ಪಡಿಸು].

೪. [1]ವಾಡನಳನ (ಅ). [2]ಬಲ (ಅ).
[ಕರ್ಣಕಠೋರ ಸಾಹಸ–ಕೇಳುವವರಿಗೆ ಅಸೂಯೆ ಹುಟ್ಟಿಸುವ ಮಟ್ಟಿಗೆ ಕೇಳಲು ಕರ್ಕಶವಾದ ಪರಾಕ್ರಮವುಳ್ಳವನು. ಮಹಾರ್ಣವ–ಮಹಾಸಮುದ್ರ. ಬಾಡಬಾನಳ (=ಬಡಬಾನಲ)–ಬಡಬಾಗ್ನಿ, ಕಡಲ ಕಿಚ್ಚು. ಕರ್ಣಧಾರ–ಹಡಗಿನ ಚುಕ್ಕಾಣಿ ಹಿಡಿದಿರುವವನು; ನಾಯಕ. ವಿಶ್ವವಿಕರ್ಣ–ವಿಶ್ವವಿಖ್ಯಾತ (?); ವಿಶ್ವಕೆ ಬಾಣ ದಂತಿರುವವನು (?).

೫. [1]ಸಮ (ಅ ಕುಮಾ).
[ಸೇದು–ಸೆಳೆ, ಹೀರಿಕೊ. ನಾದು–ತೋಯಿಸು. ನೆಣ–ಕೊಬ್ಬು. ಮಾಯು–ಕಳೆದುಹೋಗು].

ಎಂದು ನೃಪತಿಯು ಬೀಳುಕೊಂಡಿನ
ನಂದನನು ಬೊಂಬಾಳ ದೀಪದ
ಸಂದಣಿಗಳೊಳು ಸೆಳೆದ[1]ಡಾಯುಧ[1]ಭಟರ [2]ತಿಂತಿಣಿ[2]ಯು ।
ಮುಂದೆ ಹಾಯುವಧಾರು ರಿಪುನೃಪ-
ಬಂದಿಕಾರವಧಾರು ಧಿರುಪಯ-
ವೆಂದು ಕಳಕಳ ಗಡಣ ಮಿಗೆ ಕುರುಭೂಮಿಗೈತಂದ ॥ ೬ ॥

ಸರಳ ಮಂಚವ ಹೊದ್ದಿ ಭೀಷ್ಮನ
ಚರಣಕಮಲವ ಹಿಡಿದು ನೊಸಲಿನೊ-
ಳೊರಸಿಕೊಂಡನು ನಾದಿದನು ಕಂಬನಿಯೊಳಂಘ್ರಿಗಳ ।
ಕರುಣಿಸೈ ಗಾಂಗೇಯ ಕರುಣಾ-
ಶರಧಿಯೈ ಖಳತಿಲಕ ಕರ್ಣನ
ದುರುಳತನವನು ಮಱೆದು ಮೆಱೆವುದು ನಿಮ್ಮ ಸದ್ಗುಣವ ॥ ೭ ॥

ಎನಲು ಹೃದಯಾಂಬುಜದ ಪೀಠದ
ವನಜನಾಭಧ್ಯಾನಸುಧೆಯಲಿ
ನನೆದು ಹೊಂಗಿದ ಕರಣ ಹೊರೆಯೇಱಿತ್ತು ನಿಮಿಷದಲಿ ।
ತನುಪುಳಕ ತಲೆದೋಱೆ ರೋಮಾಂ-
ಚನದ ಬಿಗುಹಡಗಿತ್ತು ಕಂಗಳ
ನನೆಗಳರಳಿದವಾಯ್ತು ಭೀಷ್ಮಂಗಿತ್ತಣವಧಾನ ॥ ೮ ॥

---

೬. [1]ಡಾಯ್ದುವ (ಅ ಕುಮಾ). [2]ಮುತ್ತಿಗೆ (ಅ ಕುಮಾ).
[ಬೊಂಬಾಳ ದೀಪ-ದೀವಟಿಗೆ. ಅಡಾಯುಧ-ಒಂದು ಬಗೆಯ ಕತ್ತಿ. ಹಾಯುವ ಧಾರು-ಹಾದವೆಚ್ಚರಿಕೆ. ಬಂದಿಕಾರ-ಸೆರೆ ಹಿಡಿಯುವವನು. ಧಿರುಪಯ-ಒಂದು ಮೆಚ್ಚಿಕೆಯ ಮಾತು. ಗಡಣ-ಗದರುವಿಕೆ].

೭. [ಹೊದ್ದು-ಸೇರು. ಸರಳ ಮಂಚ-ಬಾಣಗಳ ಹಾಸಿಗೆ. ನೊಸಲು-ಹಣೆ].

೮. [ವನಜನಾಭ-ವಿಷ್ಣು, ಕೃಷ್ಣ. ಧ್ಯಾನಸುಧೆ-ಧ್ಯಾನಾಮೃತ. ಹೊಂಗು-ಉಬ್ಬು. ಕರಣ-ಇಂದ್ರಿಯ. ಹೊರೆಯೇಱು-ಸಂತೋಷಗೊಳ್ಳು, ಹಿಗ್ಗು. ತನುಪುಳಕ-ರೋಮಾಂಚನ, [illegible]. ಬಿಗುಹು-ಬಿಗಿಯಾಗಿರುವ ಸ್ಥಿತಿ. ನನೆ-ಮೊಗ್ಗು. ಅವಧಾನ-ಗಮನ].

ಅಳಲದಿರು ಬಾ ಮಗನೆ ಕುರುಕುಲ-
ತಿಲಕನವಸರದಾನೆ ರಿಪುವಂ-
ಡಳಿಕಮಸ್ತ್ರಕಶೂಲ ಬಾರೈ ಕರ್ಣ ಬಾರೆನುತ ।
ತುಳುಕಿದನು ಕಂಬನಿ[1]ಯು ಕೋಮಳ
ತಳದಿ[1] [2]ವೈ[2]ದಡಹಿದನು ಕೌರವ-
ನುಳಿವು ನಿನ್ನದು ಕಂದ ಕದನವ ಜಯಿಸು ಹೋಗೆಂದ ॥ ೯ ॥

ಗಾಱುಗೆಡೆದೆನು ನಿಮ್ಮನೋಲೆಯು-
ಕಾಱತನದುಬ್ಬಿನಲಿ ತನಿಮದ-
ವೇಱಿ ನಿಮ್ಮಲಿ ಸೆಣಸಿದೆನು ಸೇನಾಧಿಪತ್ಯದಲಿ ।
ದೂಱಿ ಹೊಕ್ಕೆನು ರಣದ ಮಿಸಲಿ-
ನೇಱು ತಪ್ಪಿತು ನೀಲಮಣಿ ತಲೆ-
ಗೇಱಿಸಿದ ತೃಣವದಕೆ ಸರಿಯೇ ಭೀಷ್ಮ ಹೇಳೆಂದ ॥ ೧೦ ॥

ತನುಜ ತಪ್ಪೇನಿದಕೆ ಕಾಳೆಗ-
ವೆನಗೆತನಗೆನಬೇಕು ವೀರರು
ಮನದ ಕಲಿತನದುಬ್ಬುಗೊಬ್ಬಿನಲೆಂಬರಿದಕೇನು ।
ಮನದೊಳಗೆ ಖತಿಯಿಲ್ಲ ದುರ್ಯೊ-
ಧನನೃಪತಿಯೋಪಾದಿ ನೀ ಬೇ-
ಱೆನಗೆ ಲೋಗನೆ ಕಂದ ಕದನವ ಜಯಿಸು ಹೋಗೆಂದ ॥ ೧೧ ॥

---

೯. [1]ಗಳನು ಕೋಮಲನು (ಅ). [2]ಕೈ (ಅ).
[ಅವಸರದಾನೆ–ಸಮಯಕ್ಕೆ ಒದಗುವ ಬಂಟ. ತಳ–ಅಂಗೈ].

೧೦. [ಗಾರುಗೆಡೆ–ಧಿಕ್ಕರಿಸು, ಹೀಯಾಳಿಸು. ಓಲೆಯಕಾಱತನ–ಸೇವಕತನ. ಉಬ್ಬು–ಗರ್ವ. ತನಿ–ಪೂರ್ಣವಾದ. ಮದ–ಅಹಂಕಾರ. ಸೆಣಸು–ಹೋರಾಡು, ಸ್ಪರ್ಧಿಸು. ಮೀಸಲಿನ–ವೀರೋಚಿತವಾದ. ಏಱು–ಗಾಯ. ತೃಣ–ಹುಲ್ಲುಕಡ್ಡಿ].

೧೧. [ಲೋಗ–ಸಾಮಾನ್ಯ].

ಅಲವಟ್ಟದ ಗಾಳಿಯಲಿ ಮೇ-
ಘಾಳಿ ಮುಱಿವುದೆ ಮಿಂಚುಬುಳುವಿಗೆ
ಸೋಲುವುದೆ ಕತ್ತಲೆಯ ಕಟಕವು ಜೀಯ ಚಿತ್ತೈಸು ।
ಸೀಳಬಹುದೇ ಸೀಸದುಳಿಯಲಿ
ಶೈಲವನು ಹರಿಯೊಲಿದ ಮನುಜರ
ಮೇಲೆ ಮುನಿದೇಗುವರು ಕೆಲಬರು ಭೀಷ್ಮ ಹೇಳೆಂದ ॥ ೧೨ ॥

ಭಾನುಸನ್ನಿಭ ಮರಳು ಭೂಪನ
ಹಾನಿವೃದ್ಧಿಗಳೆಲ್ಲ ನಿನ್ನದು
ನೀನು ಪಂತದ ಜಾಣನಲ್ಲಾ ವಿಜಯನಾಗೆನಲು ।
ಆ ನದೀಸುತನಡಿಗೆಱಗಿ ರವಿ-
ಸೂನು ಕಳುಹಿಸಿಕೊಂಡು ಬಹಳ ಮ-
ನೋನುರಾಗದಲೈದಿದನು ಕುರುರಾಯನೋಲಗವ ॥ ೧೩ ॥

ಭಾನುಸುತ ಕುಳ್ಳಿರು ನದೀಸುತ-
ನೇನನೆಂದನು ತನ್ನ ಚಿತ್ತ
[1]ಗ್ಲಾನಿಯ[1]ನು ಬಿಸುಟೇನ ನುಡಿದನು ಭಾವಶುದ್ಧಿಯಲಿ ।
ಏನನೆಂಬೆನು ಜೀಯ ಬಹಳ ಕೃ-
ಪಾನಿಧಿಯಲಾ ಭೀಷ್ಮನನುಸಂ-
ಧಾನವಿಲ್ಲದೆ ಬೆಸಸಿ ಕಳುಹಿದನೆಂದನಾ ಕರ್ಣ ॥ ೧೪ ॥

---

೧೨. [ಆಲವಟ್ಟ–ಬೀಸಣಿಗೆ. ಮುಱಿ–ಚದುರು, ತುಂಡಾಗು. ಕಟಕ ಸೈನ್ಯ. ಏಗು–ಏನು ಮಾಡು].

೧೩. ಭಾನುಸನ್ನಿಭ–ಸೂರ್ಯ ಸಮಾನ. ಪಂತ–ಸ್ಪರ್ಧೆ. ಜಾಣನಲ್ಲಾ–ಜಾಣನಲ್ಲವೆ? ಮನೋನುರಾಗ–ಪ್ರೀತಿಯಿಂದ ಕೂಡಿದ ಮನಸ್ಸು. ಓಲಗ–ಸಭೆ, ದರ್ಬಾರು].

೧೪. [1]ಜ್ಞಾನವ (ಅ).

[ಚಿತ್ತಗ್ಲಾನಿ–ಮನಸ್ಸಿನ ಕ್ಷೋಭೆ, ಕಲಕು. ಅನುಸಂಧಾನ–ಒಂದೇ ಮನಸ್ಸು, ಇಬ್ಬಗೆಯ ಮನಸ್ಸಿಲ್ಲದಿರುವಿಕೆ].

ಇನ್ನು [1]ದಳಪತಿ[1]ತನವದಾರಿಗೆ
ನಿನ್ನ ಮತವೇನುದಯವಾಗದ
ಮುನ್ನ ಬವರವ ಹಿಡಿಯಬೇಹುದು ವೈರಿರಾಯರಲಿ ।
ಎನ್ನು ನಿನ್ನಭಿಮತವನೆನೆ ಸಂ-
ಪನ್ನಭುಜಬಲ ದ್ರೋಣ[2]ನಿರುತಿರ-
ಲಿನ್ನು[2] ಸೇನಾಪತಿ[3]ಗಳಾರೈ ಭೂಪ ಹೇಳೆಂದ[3] ॥ ೧೫ ॥

ಪ್ರಭೆಯುದಾರಿಂಗೆ ಸೂರ್ಯನಿದಿರಿನೊ-
ಳಭವನಿರೆ ತಾನಾರು ಲೋಕಕೆ
ವಿಭುಗಳೈ ವೈಕುಂಠನಿದಿರಿನೊಳಾವ ದೇವತೆಯೋ ।
ವಿಭವ ನದಿಗಳಿಗುಂಟೆ ಜಲಧಿಯ
ರಭಸದಿದಿರಲಿ [1]ನಮ್ಮ[1] ಬಲದಲಿ
ಸುಭಟ[2]ರಾ[2]ರೈ ದ್ರೋಣನಿರುತಿರಲೆಂದನಾ ಕರ್ಣ ॥ ೧೬ ॥

ಜಾಗುಜಾ[1]ಗುರೆ[1] ಕರ್ಣ ಪರರ ಗು-
ಣಾಗಮವ ಪತಿಕರಿಸಿ ನುಡಿವವ
ನೀಗಳಿನ ಯುಗದಾತನೇ ಮಝು ಭಾಪುಭಾಪೆನುತ ।
ತೂಗುವೆರಳಿನ ಮಕುಟದೊಲಹಿನೊ-
ಳಾಗರುವ ಭಟರುಲಿಯೆ ಲಹರಿಯ
ಸಾಗರದ ಸೌರಂಭದಂತಿರೆ ಮಸಗಿತಾಸ್ಥಾನ ॥ ೧೭ ॥

---

೧೫. [1]ಸೇನಾಪತಿ (ಅ ಕುಮಾ). [2]ನಿರಲಾರಿನ್ನು (ಅ ಕುಮಾ). [3]ಗಳೆಂದನು ಭೂಪತಿಗೆ ಕರ್ಣ (ಅ ಕುಮಾ).
[ಬವರ–ಯುದ್ಧ].

೧೬. [1]ನಿನ್ನ (ಅ). [2]ನಾ (ಅ).
[ಪ್ರಭೆ–ಪ್ರಕಾಶ, ಕಾಂತಿ. ಅಭವ–ಈಶ್ವರ. ವಿಭು–ಒಡೆಯ, ಸ್ವಾಮಿ. ವೈಕುಂಠ–ವಿಷ್ಣು. ವಿಭವ–ವೈಭವ].

೧೭. [1]ಗೆಲೆ (ಅ).
[ಗುಣಾಗಮ–ಗುಣದ ಹೆಚ್ಚಳ. ಪತಿಕರಿಸು–ಪ್ರಶಂಸಿಸು, ಪುರಸ್ಕರಿಸು, ಮೆಚ್ಚು. ಈಗಳಿನ–ಈಗಿನ. ಗರುವ–ಶ್ರೇಷ್ಠರಾದ. ಉಲಿ–ಘೋಷಿಸು. ಲಹರಿಯ–ಅಲೆಯೆದ್ದ. ಸೌರಂಭ–ಸಂಭ್ರಮ. ಮಸಗು–ವಿಜೃಂಭಿಸು].

ಸಕಲಸಾಮಂತರು ಮಹೀಪಾ-
ಲಕರು ಬಂದುಮು ಚರಣದಲಿ ಕಾ-
ಣಿಕೆಯನಿಕ್ಕಿತು ಕೈಯ ಮುಗಿದುದು ನಿಖಿಲಪರಿವಾರ ।
ಮಕುಟರತ್ನದ ಲಹರಿ ಖಡ್ಗದ
ವಿಕಟಧಾರಾರಶ್ಮಿ[1]ದೀಪ-[1]
ಪ್ರಕರದಲಿ ಥಳಥಳಿಸೆ ರವಿಯವೊಲೆಸೆದನಾ ದ್ರೋಣ ॥ ೧೮ ॥

ಅರಸ ಬೇಡೈ ವರವನೆನ್ನನು
ಕರೆದು [1]ಪತಿಕರಿಸಿದ ಬಳಿಕ ನಾ[1]
ಬಱಿದೆ ಹೋಹೆನೆ ಮೆಚ್ಚಿದುದ ನುಡಿ ಬೇಡತನವೇಕೆ ।
[2]ಹೊರೆ[2]ಹೊಗದೆ ಹೇಳೆನಲು ನಗೆಮೊಗ-
ವರಳೆ ಹೊಂಪುಳಿವೋಗಿ ಕೌರವ-
ರರಸ ನುಡಿದನು ಕಟ್ಟಿಕೊಡು ಧರ್ಮಜನ ತನಗೆಂದು ॥ ೧೯ ॥

ಕೊಡುವೊಡಿದು ವರವಲ್ಲದಿದ್ದೊಡೆ
ನುಡಿಗೆ ಮೊಳೆ ಹೊಮ್ಮುವೊಡೆ ನಿಮ್ಮಯ
ತೊಡಕನೊಲುವವನಲ್ಲ ನೀವೆ ಬಲ್ಲಿರೆನೆ ನಗುತ ।
ಹಿಡಿದು ಬಿಗಿವೆನು [1]ಧರ್ಮಜನ[1] ಕೆಲ
ಕಡೆಗೆ [2]ತೊಲಗಿಸು ಪಾರ್ಥನನು[2] [3]ನಾ
ನುಡಿಯು ತಪ್ಪೆನು[3] ಪುಣ್ಯದಳತೆಯನಱಿಯಬಹುದೆಂದ ॥ ೨೦ ॥

---

೧೮. [1]ದೀಪ್ತಿ (ಅ).

[ವಿಕಟಧಾರರಶ್ಮಿ-ಭಯಂಕರವಾದ ಅಲಗಿನ ಕಿರಣ. ಪ್ರಕರ-ಸಮೂಹ].

೧೯. [1]ಮಿಗೆ ಪತಿಕರಿಸೆ ಬಳಿಕಾ (ಅ ಕುಮಾ). [2]ಹೊರ (ಅ).

[ಬೇಡತನ-ಹೇವರಿಕೆ. ಹೊರೆಹೊಗು-ದಾಕ್ಷಿಣ್ಯಕ್ಕೆ ಒಳಗಾಗು, ದಾಕ್ಷಿಣ್ಯಪಡು. ಹೊಂಪುಳಿವೋಗು-ರೋಮಾಂಚಗೊಳ್ಳು].

೨೦. [1]ಪಾರ್ಥನನು (ಅ ಕುಮಾ). [2]ತಪ್ಪಿಸಿ ಧರ್ಮಪುತ್ರನ (ಅ ಕುಮಾ). [3]ಬಿಡೆನ ನಿನ್ನಯ.(ಕುಮಾ)

[ನುಡಿಗೆ ಮೊಳೆ ಹೊಮ್ಮುವೊಡೆ-ಆಡಿದ ಮಾತಿಗೆ ತಪ್ಪುವಹಾಗಿದ್ದರೆ (ಮಾತು ಎರಡಾಗುವುದಾದರೆ). ತೊಡಕು-ಅಡ್ಡಿ, ಆತಂಕ (ದ್ರೋಣನು ಧರ್ಮಜನನ್ನು ಕಟ್ಟಿಹಾಕಹೋದರೆ ಅರ್ಜುನನು ಖಂಡಿತ ಬಿಡಿಸಿಕೊಳ್ಳಲು ಬಂದೇಬರುತ್ತಾನೆ, ಅವನನ್ನು ತಡೆಯಲಾಗುವುದಿಲ್ಲ ಎಂಬ ದ್ರೋಣನ ಶಂಕೆಯೇ ಇದರ ತೊಡಕು). ಕೆಲಕಡೆ-ಪಕ್ಕದ ಸ್ಥಳ, ಇನ್ನೊಂದು ಕಡೆ].

*ಹರಿದುದೋಲಗವಿತ್ತ ಭುವನದೊ-
ಳಿರುಳಡವಿಗಡಿತಕ್ಕೆ ಹರಿದವು
ಕಿರಣತೆತ್ತಿದವಭ್ರದಲಿ ತಾರ[1]ಕೆ[1]ಯು ತೀರುಗಳ ।
ಹರಿವ ಮಂಜಿನ ಹದಿಯು ಹೂಳ್ದವು
ಸರಸವಾಯಿತು ಗಗನತಳ ತಾ-
ವರೆಯಸಖ ನಿಜರಥವ ನೂಕಿದನುದಯಪರ್ವತಕೆ ॥ ೨೧ ॥

**ಕೆದರಿದವು ನಿಸ್ಸಾಳ ಬಹುಸಿಡಿ-
ಲದುಭುತಧ್ವನಿಯಲಿ ನಿರಂತರ
ವೊದರಿದ್ದವು ಕಹಳೆ ಬಿರುದಾವಳಿಯಲತಿರಥರ ।
ಕದುಬಿದವು ತಂಬಟದ ದನಿ ದಿಗು-
[1]ವ[1]ದನವನು ಬಹುಬೊಬ್ಬೆಯಲಿ ನೆಲ-
ನದಿರೆ ನಡೆದುದು ಸೇನೆ ಕಲಶೋದ್ಭವನ ಸನ್ನೆಯಲಿ ॥ ೨೨ ॥

ಆಳುತನವುಳ್ಳವರ ಕರೆ ಪಾಂ-
ಚಾಲರೊಳ್ಳಿಗರಿವದಿರಂಬಿನ
ಕೋಲಕಾ[1]ಣ[1]ದ ಮುನ್ನ ಹಮ್ಮೈಸುವರು ಹುರಿಯೊಡೆದು ।

---

೨೧. [1]ಗೆ (ಅ).

[ಹರಿ-ಚೆದರು. ಇರುಳಡವಿಗಡಿತ-ರಾತ್ರಿಯೆಂಬ ಅರಣ್ಯವನ್ನು ಕತ್ತರಿಸುವುದು. ಹರಿದವು-ಧಾವಿಸಿ ಬಂದವು. ತೆತ್ತು-ಅಡಗು, ಕಣ್ಮರೆಯಾಗು. ತಾರಕೆ-ತಾರಗೆ, ನಕ್ಷತ್ರ. ಹೂಳು-ನಾಶಮಾಡು, ಮುಚ್ಚು. ಸರಸ-ಹೊಸದು, ಸ್ವಚ್ಛ. ತಾವರೆಯ ಸಖ-ಕಮಲಮಿತ್ರ, ಸೂರ್ಯ].

೨೨. [1]ಸ (ಅ ಕುಮಾ).

[ಕೆದರು-(ಧ್ವನಿಯನ್ನು) ಹರಡು, ಪ್ರಸರಿಸು. ನಿಸ್ಸಾಳ-ಭೇರಿ. ಬಹುಸಿಡಿಲು-ಬಿರುಸಾದ ಸಿಡಿಲು. ಒದರು-ಅಬ್ಬರಿಸು. ಅತಿರಥ-ನಾಲ್ಕು ಬಗೆಯ ರಥಿಕರಲ್ಲಿ ಅತ್ಯಂತ ಶ್ರೇಷ್ಠನಾದವನು. ಕದುಬು-ಆವರಿಸು, ಮುತ್ತು. ದಿಗುವದನ-ದಿಕ್ಕಿನ ಮುಖ. ಕಲಶೋದ್ಭವ-ದ್ರೋಣ].

೨೩. [1]ವ (ಅ).

[ಆಳುತನ-ಪರಾಕ್ರಮ. ಒಳ್ಳಿಗರು-ನೀರಹಾವಿನಂತೆ ಹಾನಿಮಾಡಲಾರದವರು.

---

* ಈ ಪದ್ಯವು 'ಅ' ಮತ್ತು 'ಕುಮಾ' ಪ್ರತಿಗಳಲ್ಲಿ 4ನೇ ಸಂಧಿಯ 12ನೇ ಪದ್ಯವಾಗಿದೆ.
** ಈ ಪದ್ಯವು 'ಅ' ಮತ್ತು 'ಕುಮಾ' ಪ್ರತಿಗಳಲ್ಲಿ 4ನೇ ಸಂಧಿಯ 13ನೇ ಪದ್ಯವಾಗಿದೆ.

ಖೂಳರಿವರಂತಿರಲಿ ದೊರೆಕ-
ಟ್ಟಾಳುಗಳ ಕರೆ ಧರ್ಮಪುತ್ರನ
ತೋಳ ಬಲುಹನು ನೋಡಬೇಕೆನುತುಱುಬಿದನು ದ್ರೋಣ ॥ ೨೩ ॥

ಸವಱಿ ಪೊಕ್ಕನು ಕೆಲಬಲದ ಪಾಂ-
ಡವಮಹಾರಥರನು ವಿಭಾಡಿಸಿ
ಪವನಜನ ಮುಱಿಯೆಚ್ಚು ನಕುಲನ ರಥವ ಹುಡಿಮಾಡಿ ।
ಕವಲುಗೋಲಲಿ ಮತ್ಸ್ಯದ್ರುಪದರ-
ನವಗಡಿಸಿ ಹೈಡಿಂಬನಭಿಮ-
ನ್ಯುವನು ಮಸೆಗಾಣಿಸಿ ಮಹೀಶನ ರಥಕೆ ಮಾಱಾಂತ ॥ ೨೪ ॥

ಅರಸ ಫಡ ಹೋಗದಿರು ಸಾಮದ
ಸರಸ ಕೊಳ್ಳದು ಬಿಲ್ಲ ಹಿಡಿಹಿಡಿ
ಹರನ ಮಱೆವೊಗು ನಿನ್ನ ಬಿಡೆನು ಹೋಗುಹೋಗೆನುತ ।
ಸರಳಮುಷ್ಟಿಯು ಕೆನ್ನೆಯೋರೆಯು
ಗುರು ಛಡಾಳಿಸೆ ಧನುವನೊದಱಿಸಿ
ಧರಣಿಪತಿ [1]ಮಿಗೆ ಹಳಚಿ[1] ಹೂಳಿದನಂಬಿನಲಿ [2]ರಥವ ॥ ೨೫ ॥

---

೨೩. ಹಮ್ಮೈಸು–ಮೂರ್ಛೆ ಹೋಗು. ಹುರಿಯೊಡೆ–ಶಕ್ತಿಹೀನವಾಗು. ದೊರೆಕಟ್ಟಾಳುಗಳು–ಸಮಾನ ಬಲಶಾಲಿಗಳಾದ ಸೈನಿಕರು. ಉಱುಬು–ಮೇಲೆ ಬೀಳು].

೨೪. [ಸವಱು–ನಾಶಮಾಡು. ಕೆಲಬಲ–ಅಕ್ಕಪಕ್ಕ. ಮಹಾರಥ–ನಾಲ್ಕು ಬಗೆಯ ರಥಿಕರಲ್ಲಿ ಎರಡನೆಯವನು–ಒಬ್ಬನೇ ಹತ್ತುಸಾವಿರ ಬಿಲ್ಲುಗಾರರನ್ನು ಎದುರಿಸಬಲ್ಲ ಯೋಧ. ವಿಭಾಡಿಸು–ನಾಶಮಾಡು. ಮುಱಿಯೆಸು–ಬಲಹೀನನಾಗುವಂತೆ ಬಾಣ ಬಿಡು. ಕವಲುಗೋಲು–ಅರ್ಧಚಂದ್ರಾಕಾರದ ಬಾಣ. ಅವಗಡಿಸು–ಭಂಗಿಸು, ಸೋಲಿಸು, ಹೈಡಿಂಬ–ಘಟೋತ್ಕಚ. ಮಸೆಗಾಣಿಸು–ಆಯುಧಗಳ ರುಚಿ ತೋರಿಸು, ಗಾಯಗೊಳಿಸು. ಮಾಱಾನು–ಎದುರಿಸು, ಪ್ರತಿಭಟಿಸು].

೨೫. [1]ಹಳಚಿದನು (ಅಕುಮಾ). [2]ನಭ (ಅ).
[ಸಾಮು–ಸಾಮೋಪಾಯ. ಕೊಳ್ಳದು–ನಿರರ್ಥಕ. ಸರಳು–ಬಾಣ. ಒದಱಿಸು–ಧ್ವನಿಮಾಡು. ಧರಣಿಪತಿ–ಧರ್ಮಪುತ್ರ, ಯುಧಿಷ್ಠಿರ. ಹಳಚು–ಎದುರಿಸು, ಪ್ರತಿಭಟಿಸು].

ಶಿವಶಿವಾ ಬೆಳುದಿಂಗಳಲಿ ನೆಯ್ಯ
ಬೆವರುವುದೆ ಕಲಿಧರ್ಮಪುತ್ರನ
ಬವರದಲಿ ಬೆಂಡಹರೆ ವೀರರು ಕಂಡೆವದುಭುತವ ।
ಸಿವಗಿಡೆತ್ತಣ ಕೈಮೆ ಕೋಲ್ಗಳ
ಕವಿಸುವಂದವಿದೊಳ್ಳಿತಿ[1]ದ[1]ಲೇ-
[2]ನ[2]ವಗಭೀಷ್ಟವೆನುತ್ತ ಕಟ್ಟಳವಿಯಲಿ ಕೈಕೊಂಡ ॥ ೨೬ ॥

ಎಲೆಲೆ ದೊರೆ ಸಿಕ್ಕಿದನು ಕರೆ ಪಡಿ-
ತಳಿಸಹೇಳೋ ಸ್ವಾಮಿದ್ರೋಹರು
ದಳದೊಳಿದ್ದವರೆತ್ತ ಹೋದರು ನಾಯಕಿತ್ತಿಯರು ।
ಕಳವಳಿಸಿ ಸಾತ್ಯಕಿಘಟೋತ್ಕಚ-
ರುಲಿದು ಹರಿತರೆ ಕೇಳಿದಾಕ್ಷಣ-
ದಲಿ ಮುರಾಂತಕಸಹಿತ ವಹಿಲದಿ ಬಂದನಾ ಪಾರ್ಥ ॥ ೨೭ ॥

ಕಾಳಕೂಟದ ಬಹಳ ದಾಳಿಗೆ
ಶೂಲಿ[1]ಯೊ[1]ಡ್ಡೈಸಿದವೊಲವನೀ-
ಪಾಲಕನ ಹಿಂದಿಕ್ಕಿ ತಡೆದನು ಕಲಶಜನ ರಥವ ।
ಅಲಿಯು[2]ಳು[2]ಕಿತು ತಿರುಹಿದಂಬಿನ
ಕೋಲ ಝಳಪಿಸಿ ಪೂತು ಮಝ ಮೇ-
ಲಾಳು ಬಂದುದೆ ಅಕಟೆನುತ ಹಲುಮೊರೆದನಾ ದ್ರೋಣ ॥ ೨೮ ॥

---

೨೬. [1]ರ (ಅ). [2]ನೆ (ಅ).
[ಬೆಂಡಹರೆ-ಶಕ್ತಿಗುಂದುತ್ತಾರೆಯೆ? ಕೈಮೆ-ಕೆಲಸ. ಕಟ್ಟಳವಿ-ವಿಶೇಷವಾದ ಸಾಮರ್ಥ್ಯ].

೨೭. [ಪಡಿತಳಿಸು-ಆಕ್ರಮಿಸು, ಮುತ್ತು. ನಾಯಕಿತ್ತಿ-ನಾಯಕನ ಹೆಂಡತಿ (ವ್ಯಂಗ್ಯವಾಗಿ ನಪುಂಸಕರು ಎಂಬ ಅರ್ಥ). ಹರಿತರು-ಓಡಿಬರು].

೨೮. [1]ಯು (ಅ). [2]ಳ (ಅ).
[ಕಾಳಕೂಟ-ಘೋರ ವಿಷ. ಒಡ್ಡೈಸು-ಎದುರಾಗು, ಪ್ರತಿಭಟಿಸು. ಅಳಿ(ಲಿ)-ಕಣ್ಣು, ಕಣ್ಣುಗುಡ್ಡೆ. ಅಳುಕು-ನೋಯು. ಮೇಲಾಳು-ಸಮರ್ಥರಾದ ವೀರರು. ಹಲುಮೊರೆ-ಹಲ್ಲು ಕಡಿ].

ಮಂದಭಾಗ್ಯನು ಕೌರವನು ನಾ-
ವೆಂದು ಮಾಡುವುದೇನು [1]ನಿಮಿಷವು[1]
ನಿಂದನಾದೊಡೆ ಹಿಡಿವೆನೀಗಳೆ ಧರ್ಮನಂದನನ ।
ಬಂದು ಫಲುಗುಣನಡ್ಡವಿಸಲಿ-
ನ್ನಿಂದುಧರ ಮುನಿದೇನ ಮಾಡುವ-
ನೆಂದು ಖಾತಿಯು ಹಿಡಿದು ರಥವನು ತಿರುಹಿದನು ದ್ರೋಣ ॥ ೨೯ ॥

*ದುಗುಡವೇಕೈ ನಿಮಗೆ ಕರ್ಣಾ-
ದಿಗ[1]ಳು ನೀವಕ್ಕುಡರೆ[1] ಬಲುಗಾ-
ಳಗದೊಳಗೆ ಕೈಮಾಡಿ ನೊಂದಿರಿ ಕೊಂದಿರರಿಭಟರ ॥
ಹಗೆಯು ಕಟ್ಟಲು ಕೊಟ್ಟ ಭಾಷೆಗೆ
ಬಿಗುಹು ಬೀತುದು ಗುರುಗಳಲಿ ನಂ-
ಬುಗೆ ನಿರರ್ಥಕವಾಯ್ತೆನುತ ಕುರುರಾಯ ಬಿಸುಸುಯ್ದ ॥ ೩೦ ॥

ಬಲದೊಳಗೆ ಹೆಸರುಳ್ಳವರು ಮು-
ಮ್ಮಳಿತವಾಯಿತ್ತಾನೆಕುದುರೆಗ-
ಳಳಿದುದಕೆ ಕಡೆಯಿಲ್ಲ ಪವನಜಪಾರ್ಥರುಬ್ಬಟೆಯು ।
ನಿಲಿಸುವಾಪತ್ತಿಗರು ನಮಗಿ-
ಲ್ಲಳಲಿ ಮಾಡುವುದೇನೆನುತ ನೃಪ-
ತಿಲಕ ಬೇಸಱ ನುಡಿಯೆ ಬಳಿಕಿಂತೆಂದನಾದ್ರೋಣ ॥ ೩೧ ॥

---

೨೯. [1]ರಣದೊಳು (ಅ).

[ಮಂದಭಾಗ್ಯ–ಅದೃಷ್ಟಹೀನ. ಅಡ್ಡವಿಸು–ಅಡ್ಡಗಟ್ಟು].

೩೦. [1]ಳ ನೀವಕ್ಕಾಡಿ (ಅ).

[ಅಕ್ಕುಡ–ಸತ್ವಹೀನ, ದುರ್ಬಲ. ಕೈಮಾಡು–ಯುದ್ಧಮಾಡು. ಬಿಗುಹು–ಬಿಗಿ. ಬೀಯು–ವ್ಯರ್ಥವಾಗು, ನಾಶವಾಗು].

೩೧. [ಮುಮ್ಮಳಿತ–ರೂಪುಗೆಟ್ಟ ಘೋರ ಮರಣ. ಉಬ್ಬಟೆ–ಆಟೋಪ. ಆಪತ್ತಿಗ–ಆಪತ್ತಿನಲ್ಲಿ ಆಗತಕ್ಕವನು].

---

* 4ನೇ ಸಂಧಿಯ 5ನೇ ಪದ್ಯವಾಗಿದೆ.

ಪರಮಗರುಡೋದ್ಗಾರಮಣಿಯನು
ಗರಳ ಸುಡುವುದೆ ಕೃಷ್ಣರಾಯನ
ಕರುಣಕವಚವನೊಡೆಯಲಾಪವೆ ನಮ್ಮ ಕೈದುಗಳು ।
ಅರಸ ಮರುಳೈ ಧರ್ಮಪುತ್ರನ
ಬೆರಸಿ ತುಡುಕಲು ತಡೆದನರಿಯಾ
ಮುರಹರನ ಮೈದುನನು ಬಳಿಕೆಮ್ಮಳವೆ ಹೇಳೆಂದ ॥ ೩೨ ॥

ನಾಳೆ ಫಲುಗುಣ ತಪ್ಪಿದರೆ ಭೂ-
ಪಾಲಕನ ಕಟ್ಟುವೆನು ರಣದಲಿ
ಶೂಲಿಯಡ್ಡೈಸಿದರೆ ಹಿಡಿವೆನು ಚಿಂತೆ ಬೇಡಿದಕೆ ।
ಕೇಳು ಪದ್ಮವ್ಯೂಹದಲಿ ಹೊ-
ಕ್ಕಾಳು ಮರಳಿದಡಸ್ತ್ರವಿದ್ಯಾ
ಭಾಳಲೋಚನನೆಂಬ ಬಿರುದನು ಬಿಟ್ಟೆ ನಾನೆಂದ ॥ ೩೩ ॥

---

೨. ಪದ್ಮವ್ಯೂಹ—ಅಭಿಮನ್ಯುವಿನ ಕಾಳಗ

ಉಲಿದು ಸಮಸಪ್ತಕರು ತಮ್ಮಯ
ಕಳನ ಗೆಲಿದರು ಚಾತುರಂಗದ
ದಳದ ತೆರಳಿಕೆ ತೆಕ್ಕೆ ವಿಗೆ [1]ಕುರುಭೂಮಿಗೈತಂದು[1] ।

---

೩೨. [ಗರುಡೋದ್ಗಾರಮಣಿ–ಗರುಡನಂತೆ ವಿಷವನ್ನು ಪರಿಹರಿಸುವ ಗುಣವುಳ್ಳ ಮಣಿ. ಗರಳ ವಿಷ. ಬೆರಸಿ–ಒಟ್ಟಾಗಿ. ತುಡುಕು–ತ್ವರೆಯಿಂದ ಹಿಡಿದುಕೊ. ಅರಿಯಾ–ಕಾಣೆಯಾ. ಮುರಹರನ ಮೈದುನ–ಅರ್ಜುನ].

೩೩. ಶೂಲಿ-ಈಶ್ವರ. ಪದ್ಮವ್ಯೂಹ–ಕಮಲಪುಷ್ಪದ ಆಕಾರದಲ್ಲಿ ಒಡ್ಡಿದ ಒಂದು ರೀತಿಯ ಸೈನ್ಯದಳಗಳ ವಿನ್ಯಾಸ. ಹೊಕ್ಕಾಳು(=ಹೊಕ್ಕ ಆಳು) ಪ್ರವೇಶಿಸಿದ ಸೈನಿಕ. ಭಾಳಲೋಚನ–ಈಶ್ವರ].

೩೪. [1]ಕುರುಸೇನೆ ನಡೆತಂದು (ಆ ಕುಮಾ). [2]ಲ (ಆ).

[ಉಲಿದು–ಧ್ವನಿಮಾಡಿ, ಉದ್ಘೋಷಿಸಿ. ಸಮಸಪ್ತಕರು–ಯುದ್ಧದಲ್ಲಿ ಶಪಥ ಮಾಡಿ ಹೋರಾಡುವವರು, ತ್ರಿಗರ್ತ ರಾಜನಾದ ಸುಶರ್ಮ ಮತ್ತು ಅವನ ತಮ್ಮಂದಿರಾದ ಸತ್ಯೇಷು, ಸತ್ಯಕರ್ಮ, ಸತ್ಯದೇವ, ಸತ್ಯರಥ– ಈ ಐವರಿಗೆ ಈ

ಕಳನ ವೆಂಠಣಿಸಿದವು ರಾಯನ
ಕೆಲಬಲದ ಸುಯಗ್ಗಾನದಲಿ ರಿಪು-
ವಳಯ ಧೂಳೀಪಟ[1]ನು[2] ಹೊಕ್ಕನು ರಣವನಾದ್ರೋಣ || ೩೪ ||

ಎಸಳೆಸಳು ಮಿಗೆ ಸಂಸದಲಿ ಜೋ-
ಡಿಸಿದನವನೀಪಾಲರನು ತ-
ದ್ಬಿಸಜಕರ್ಣಿಕೆಯೊಡ್ಡಿನಲಿ ಬಲಿದನು ಸುಯೋಧನ ।
ಪಸರಿಸಿತು ಕೌರವಕುಮಾರ-
ಪ್ರಸರ ಕೇಸರವಾ[1]ಯ್ತು[1] ವ್ಯತ್ಯವಿ-
ನೊಸಗೆಗೆತ್ತಿದ ಗುಡಿ[2]ಗಳೆನೆ[2] ತಳಿತವು ಪತಾಕೆಗಳು || ೩೫ ||

ಹಿಳುಕ ತಿರುಹುತ ಸಂಮುಖದ
ಬಲದಳವಿಯಲಿ ಗಿರಿಯಂತೆ ಸೈಂಧವ
ಬಿಲುದುಡು[1]ಕೆ[1] ಮೋಹರಿಸಿದರು ಭೂರಿಶ್ರವಾದಿಗಳು
ದಳದ ಕೆಲಬಲದೊಳಗೆ ನೃಪಸಂ-
ಕುಲವ ನಿಲಿಸಿದನವುಮು ಕಾಲನ
ಬಳಗಕೌತಣ[2]ವೆನಲು ಪದ್ಮವ್ಯೂಹ ರಂಜಿಸಿತು[2] || ೩೬ ||

---

೩೪. ಹೆಸರು ಸಲ್ಲುತ್ತವೆ. ತಮ್ಮಯ ಕಳನ ಗೆಲಿವದು-ತಮ್ಮ ಸರತಿಯ ಯುದ್ಧವನ್ನು ಗೆದ್ದರು. ತೆರಳಿಕೆ-ಗುಂಪು. ತೆಕ್ಕೆಮಿಗು-ನಿಬಿಡವಾಗು. ವೆಂಠಣಿಸು-ಮುತ್ತು, ವ್ಯಾಪಿಸು. ಸುಯಿದಾನ-ರಕ್ಷಣೆ, ಕಾವಲು. ಧೂಳೀಪಟ-ನಿಶ್ಶೇಷವಾಗಿ ಧ್ವಂಸ ಮಾಡುವವನು].

೩೫. [1]ಗಿ (ಅ). [2]ಯೆನಲು (ಅ).
[ಎಸಳೆಸಳುಮಿಗೆ-ದಳದಳವಾಗಿ ಹೆಚ್ಚಲು. ಸರಿಸ-ಸಮೀಪ, ಪಕ್ಕ. ಬಿಸಜ-ಕಮಲ. ಕರ್ಣಿಕೆ-ಮಧ್ಯಭಾಗ. ಒಡ್ಡು-ಸೈನ್ಯವ್ಯೂಹ. ಬಲಿ-ಭದ್ರವಾಗಿ ನಿಲ್ಲಿಸು. ಒಸಗೆ-ಹಬ್ಬ, ಉತ್ಸವ. ಗುಡಿ-ಬಾವುಟ. ತಳಿತವು-ಮೇಲೆದ್ದು ಕಾಣಿಸಿಕೊಂಡುವು].

೩೬. [1]ಕಿ (ಅ). [2]ವಾಯ್ತು ಚಕ್ರವ್ಯೂಹ ರಚನೆಯಲಿ (ಅ).
[ಹಿಳುಕು-ಬಾಣದ ಹಿಂಭಾಗ, ಬಾಣದ ಗರಿ. ಮೋಹರಿಸು-ಗುಂಪುಗೂಡು].

ಆ ಮಹಾಮೋಹರವನೊಡೆಯಲು
ಸೋಮಕುಲಜರು ಭೀತರಾದರು
ಹಾ ಮಹಾದೇವೆನುತ ಧರ್ಮಜ ನೋಡಿ ತಲೆದೂಗಿ ।
ರಾಮನಱಿವನು ಕೃಷ್ಣನಱಿವನು
ಸೀಮೆಯಲಿ ಕಲಿಪಾರ್ಥನಱಿವನು
ಭೂಪತಿಗಳೊಳುಳಿದ [1]ಸುಭಟರಿಂಗಱಿವುದಿಲ್ಲೆಂದ[1] ॥ ೩೭ ॥

*ಸುಳಿಯಬಹುದಂಬುಧಿಯ ನಡುವಣ
ಸುಳಿಯೊ[1]ಳಗೆ[1] ಸಂವರ್ತಕನ [2]ಕೊರ-
ಳೊಳಗೆ[2] [3]ಕುಣಿ[3]ಯಲುಬಹುದು ಮೃತ್ಯುವಿನಣಲ ಹೊಳಲೊಳಗೆ ।
ಹೊಳಕಬಹುದಹಿಪ[4]ನ ಫಣಾ[4]ಮಂ-
ಡಲದೊಳಾ[5]ಡ[5]ಲುಬಹುದು ಕಾಣೆನು
ಗೆಲುವ ಹದನನು [6]ಮಗನೆ[6] ಪದ್ಮವ್ಯೂಹ[7]ದೊಡ್ಡಣೆಯ[7] ॥ ೩೮ ॥

**ಹೊಗಲುಬಲ್ಲನು ಹೊಕ್ಕುವೊಲು ಹೆಱ-
ದೆಗೆಯಲಱಿಯನು [1]ವೀರ[1] ಪಾರ್ಥನ
ಮಗನು ಮತ್ತೈದನೆಯ [2]ಸುಭಟರ[2] ಕಾಣೆ ನಾನೆನುತ ।
ಆಗಿವ ಚಿಂತೆಯೊಳರಸ [3]ಕ[3]ದನದ
ದುಗುಡಭಾರದಲಿರಲು ಮುಂಗೈ-
ನಿಗಳವನು ತಿರುಹುತ್ತ ನಸುನಗುತಿದ್ದನಭಿಮನ್ಯು ॥ ೩೯ ॥

೩೭. [1]ಭಟರಿಂಗೆ ಹರಿವುದಲ್ಲೆಂದ (ಅ).

೩೮. [1]ಳೀ (ಅ). [2]ಕಣನೊಳಗೆ (ಅ) [3]ಸುಳಿ (ಅ) [4]ತಿಯ ಮಣಿ (ಅ). [5]ನ (ಅ) [6]ನಮಗೆ (ಅ). [7]ಭೇದನವ (ಅ).
[ಸಂವರ್ತಕ–ಪ್ರಳಯಾಗ್ನಿ. ಅಣಲು–ಅಂಗಳು. ಹೊಳಲು–ಪೊಟ್ಟರೆ, ಕುಹರ (ಪೊೞಲ್ > ಪೊಳಲ್ > ಹೊಳಲ್ — ಕಿಟಿಲ್) ಪಟ್ಟಣ ಬೀಡು. ಹೊಳಕು–ಪ್ರಕಾಶಿಸು, ಹೊಳೆ, ಕಾಣಿಸಿಕೊಳ್ಳು, ಚಿಗಿ, ಚಿಮ್ಮು. ಆಡು–ಕುಣಿ, ನರ್ತಿಸು. ಒಡ್ಡಣೆ–ರಚನೆ].

೩೯. [1]ರಾಯ (ಅ). [2]ಮಹಿಮರ (ಅ). [3]ವ (ಅ).
[ಹೆಱದೆಗೆ–ಹಿಂದಿರುಗು. ಆಗಿವ–ಭಯಗೊಳಿಸುವ. ನಿಗಳ–ಕೈಗೆ ತೊಡುವ ಒಂದು ಆಭರಣ, ಕಡಗ].

* ‘ಅ’ ಮತ್ತು ‘ಕುಮಾ’ ಪ್ರತಿಗಳಲ್ಲಿ ಇದು 37ನೇ ಪದ್ಯವಾಗಿ ಬಂದಿದೆ.
** 4ನೇ ಸಂಧಿಯ 34ನೆಯ ಪದ್ಯ.

ಜನಪನಂಘ್ರಿಗೆ ಮಣಿದು ಕೈಮುಗಿ-
ದೆನಗೆ ಬೆಸಸೈ ಬೊಪ್ಪ ನಾ ಬ-
ಲ್ಲೆನು ಮಹಾಹವದೊಳಗೆ ಪದ್ಮವ್ಯೂಹಭೇದನವ ।
ಅನುವರವ ಗೆಲುವೆನು ಕೃತಾಂತನ
ಮನೆಗೆ ಕಳುಹುವೆನಹಿತರನು ನೀ-
ನಿಸಿತು ಚಿಂತಿಸಲೇಕೆ ಕಾಳಗಕೆನ್ನ ಕಳುಹೆಂದ ॥ ೪೦ ॥

*ಜವನ ಜಕ್ಕುಲಿಸುವರನೇಕರು
ಶಿವನ ಸಮುಗೈವೀರರಹರದು
ನವಗೆ ಸಹಿತಳವಲ್ಲ ನೀನೆಂತೆಲ್ಲ ಪಟುಭಟರ ।
ತಿವಿದು ಹೊಗುವೈ ಮಗನೆ ನಿನ್ನು-
ತ್ಸವದ ನುಡಿಯೇ ಸಾಕೆನುತ ತ-
ಕ್ಕವಿಸಿ ಮೋಹದ ಕಡಲೊಳವನಿಪ ಮೂಡಿ ಮುಳುಗಿದನು ॥ ೪೧ ॥

*ಮಗನೆ ರಾಯರ ದಳಕೆ ನಿನ್ನನು
ನುಗುವನಱಿದಱಿದೆಂತು ಕಳುಹುವ
ಬಗೆಯು ತಹೆನೈ ಭೀಮ ಪೇಳ್ ಶಿಶುವಿಂಗೆ ಬುದ್ಧಿಯನು ।
ಅಗಣಿತದ ರಿಪುಕಟಕವೋರೆಯು
ವಿಗಡರಿದಿರಿಗೆ ಕಳುಹಲಾಱೆನು
ಹಗೆಯು ಗೆಲುವುದು ನಿಲಲಿ ಧರಣಿಯುನೊಲ್ಲೆ ನಾನೆಂದ ॥ ೪೨ ॥

**ಗಾಳಿ ಬೆಮರುವುದುಂಟೆ ವಹ್ನಿ-
ಜ್ವಾಲೆ ಹಿಮಕಂಜುವುದೆ ಮಂಜಿನ
ಮೇಲುಗಾಳೆಗವುಂಟೆ ಬಲು ಬೇಸಗೆಯ ಬಿಸಿಲೊಳಗೆ ।

---

೪೦. ಮಹಾ + ಆಹವ = ಮಹಾಹವ-ದೊಡ್ಡ ಯುದ್ಧ. ಅನುವರ-ಯುದ್ಧ. ಅಹಿತರು-ಶತ್ರುಗಳು].

೪೧. [ಜವ-ಯಮ. ಜಕ್ಕುಲಿಸು-ಸೋಲಿಸು, ಹಿಮ್ಮೆಟ್ಟಿಸು. ಸಮುಗೈವೀರರು-ಸಮಾನ ಶೂರರು. ಉತ್ಸವ-ಉತ್ಸಾಹ. ತಕ್ಕವಿಸು-ಅಲಿಂಗಿಸು].

೪೩. [ಮೇಲುಗಾಳೆಗ ಮೇಲುಗೈಯನ್ನು ಹೊಂದುವ (ಎಂದರೆ ಗೆಲ್ಲುವ) ಕಾಳೆಗ.

---

* ಈ ಪದ್ಯಗಳು 'ಅ' ಮತ್ತು 'ಕುಮಾ' ಪ್ರತಿಗಳಲ್ಲಿ ಕಂಡುಬರುವುದಿಲ್ಲ.

** 'ಅ' ಪ್ರತಿಯಲ್ಲಿಲ್ಲದ ಈ ಪದ್ಯವನ್ನು 'ಅ' ಪ್ರತಿಯಿಂದ ತೆಗೆದುಕೊಂಡಿರುತ್ತೆ.

ಬಾಲನಿವನೆನ್ನದಿರು ದುಗುಡವ
ತಾಳಲಾಗದು ಬೊಪ್ಪ ನಿಮ್ಮಡಿ
ಯಾಲಿಗಳಿಗೌತಣವನಿಕ್ಕುವೆನೊರಸಿ ರಿಪುಬಲವ ॥ ೪೩ ॥

ಕೆತ್ತುಕೊಂ[1]ಡಿ[1]ರೆ [2]ಬಿಸುಡು[2]ವೆನು ರಥ-
ವೆತ್ತಲುಱುಬಿದೊಡತ್ತ [3]ಕೊಳನಲಿ[3]
ಮತ್ತಗಜ [4]ತುಳಿವಂತೆ ಕದಡುವೆ ವೈರಿವಾಹಿನಿಯ[4] ।
ಹೊತ್ತಿಹೊ[5]ಗೆ[5]ವ ಪರಾಕ್ರಮಾಗ್ನಿಯ
ತುತ್ತು ಪದ್ಮವ್ಯೂಹ ದೇವರು
ಚಿತ್ತವಿಸುವುದು ಹೊತ್ತ ನೂಕದೆ ತನ್ನ ಕಳುಹೆಂದ ॥ ೪೪ ॥

ಶರನಿಧಿಯ ವಡಬಾನಳನ ದ-
ಳ್ಳುರಿಯ ವರ್ಮವ ಶಿವಿವ ತುಂಬಿಯ
ಮುರಳುದಲೆಯುಂಟಾದೊಡದು ಭವಭವದ ಪುಣ್ಯ[1]ವಲಾ[1] ।
ಅರಿಬಲವನೀ ಖಂಡಿಗಳೆ ಮೋ-
ಹರಸಹಿತ ನಾ ಬಹೆನು ನಡೆಯೆಂ-
ದರಸನಭಿಮನ್ಯುವಿಗೆ ನೇಮವ ಕೊಟ್ಟನಾಹವಕೆ ॥ ೪೫ ॥

---

೪೩ ಆಲಿ-ಕಣ್ಣು. ಒರಸು-ಧ್ವಂಸಮಾಡು].

೪೪. [1]ಡ (ಅ). [2]ಬಿಡಿಸು (ಅ ಕುಮಾ). [3]ಕಣನೊಳು (ಅ ಕುಮಾ). [4]ಮುರಿದಂತೆ ಕದಡುವೆನಹಿತ ಮೋಹರವ (ಅ ಕುಮಾ). [5]ಗು (ಅ).

[ಕೆತ್ತುಕೊಳ್ಳು-ಅಡ್ಡಗಟ್ಟು, ತಡೆಗಟ್ಟು (?). ಉಱುಂಬು ವಿಜೃಂಭಿಸು. ವೈರಿ ವಾಹಿನಿ-ಶತ್ರುಸೈನ್ಯದ ಪ್ರವಾಹ. ತುತ್ತು-ನುಂಗು].

೪೫. [1]ಫಲ (ಅ ಕುಮಾ).

[ವಡಬಾನಳ(=ಬಡಬ, ಬಡಬಾನಲ)-ಸಮುದ್ರದೊಳಗಿನ ಅಗ್ನಿ. ದಳ್ಳುರಿ-ಮುಂದೆ ನುಗ್ಗುವ ಉರಿಯ ನಾಲಗೆ. ವರ್ಮ-ಕವಚ, ಮೈಯ್ಜೋಡು. ಮುರಳುದಲೆ-ಹಿಂದಿರುಗುವಿಕೆ. ಖಂಡಿಗಳೆ-ಖಂಡಿಸಿ ನಿವಾರಿಸು, ಕತ್ತರಿಸಿ ಹೋಗಲಾಡಿಸು. ಮೋಹರ-ಸೈನ್ಯ].

ಲಲಿತಚಂದ್ರಿಕೆಗೇಕೆ ದಾವಾ-
ನಳನ ಖಾಡಾಖಾಡಿ ಸುರಲತೆ-
ಯೆಳೆಯು ಕುಡಿ ಮುಱಿದೊತ್ತಲಾಪು[1]ದೆ[1] ವಜ್ರಧಾರೆ[2]ಗಳ[2] ।
ನಳಿನನಾಳವು ಗಜದ ಕೈಯೊಡ-
ನಳವಿಗೊಡಲಂತರವೆ ಪಾಪಿಗ-
ಳೆಳಮಗನ [3]ನೂಕಿ[3]ದರು ಕಾಳಗಕೆಂದುದಮರಗಣ ॥ ೪೬ ॥

ಬಿಗಿದು ಗಂಡುಡಿಗೆ[1]ಯನು[1] ಹೊನ್ನಾ-
ಯು[2]ಗದ[2] ಹೊಳೆವ ಕಠಾರಿಯನು ಮೊನೆ
ಮಗುಚಿ ಸಾಧುಜವಾಜಿಕಸ್ತೂರಿಗಂಧಲೇಪದಲಿ ।
ಮಘಮಘಿಪ ಹೊಂದೊಡರ [3]ಹೀರಾ-
ಳಿಗಳ[ಲೊ][3]ಪ್ಪಂಬಡೆದು [4]ಕಿಱು[4]ನಗೆ-
ವೊಗದ ಸೊಂಪಿನೊಳಾಹವಕ್ಕನುವಾದನಭಿಮನ್ಯು ॥ ೪೭ ॥

---

೪೬. [1]ವೆ (ಅ). [2]ಯಲಿ (ಅ). [3]ಕಳುಹಿ (ಅ).

[ಚಂದ್ರಿಕೆ-ಬೆಳುದಿಂಗಳು. ದಾವಾನಳ-ಕಾಡುಗಿಚ್ಚು. ಖಾಡಾಖಾಡಿ-ಕಾಳಗ, ಯುದ್ಧ ಸುರಲತೆ-ದೇವಲೋಕದ ಬಳ್ಳಿ (= ಕಲ್ಪಲತೆ, ಕಲ್ಪವೃಕ್ಷ). ಮುಱಿದು ಒತ್ತಲಾಪುದೆ-ಕತ್ತರಿಸಿ ಅದುಮಿಡಲು ಸಮರ್ಥವಾಗುವುದೆ? ನಳಿನನಾಳ-ತಾವರೆ ದಂಟು. ಗಜದ ಕೈ-ಆನೆಯ ಸೊಂಡಿಲು. ಅಳವಿಗೊಡು-ಪ್ರತಿಭಟಿಸು, ಎದುರಾಗು. ಅಂತರವೆ-ಸಾಧ್ಯವೆ? ಅಮರಗಣ-ದೇವತೆಗಳ ಸಮೂಹ].

೪೭. [1]ಯಲಿ (ಅ ಕುಮಾ). [2]ದೆ (ಅ). [3]ಹಾರಾದಿಗಳಲೊ (ಅ ಕುಮಾ), ಹೀರಾಳಿಗಳನೊ (ಅ). [4]ನಸು (ಅ ಕುಮಾ).

[ಬಿಗಿ-ಬಲವಾಗಿ ಉಡು, ಧರಿಸು. ಹೊನ್ನಾಯುಗ (ಹೊನ್ನ + ಆಯುಗ)-ಚಿನ್ನದ ಹಿಡಿ. ಮೊನೆಮಗುಚಿ-ತುದಿಯನ್ನು ಮೇಲುಮಾಡಿ. ಸಾಧು (= ಸಾದು) ಜವಾಜಿ-ಒಂದು ಬಗೆಯ ಪರಿಮಳ ದ್ರವ್ಯ. ಹೊಂದೊಡರು-ಚಿನ್ನದ ಒಡವೆ. ಹೀರಾಳಿ-ವಜ್ರಗಳ ಸಮೂಹ. ಒಪ್ಪಂಡೆ-ಸೊಗಸಾಗು, ಚೆಲುವಾಗು. ಸೊಂಪು-ಚೆಲುವಿಕೆ, ಒಟ್ಟಂದ. ಅನುವಾಗು-ಸಿದ್ಧವಾಗು].

ಎಲೆ ಕುಮಾರಕ ಹರಕುಮಾರಂ-
ಗಳವಿಯಲಿ ನಿಲಲರಿದು ಕೊರಳಿನ
ಬಲುಹನಱಿಯದೆ ಗಿರಿಯ ಹೊಜಲಂಘೈಸುವರೆ ಭಟರು ।
ಬಲುಗಡಿಯನೀ ದ್ರೋಣನೀ ಕೃಪ-
ನಲಘುಭುಜಬಲಭಾನುಸುತನ-
ಗ್ಗಳೆಯ ಸೈಂಧವನೆಂದು ಸಾರಥಿ ತೂಗಿದನು ಶಿರವ ॥ ೪೮ ॥

*ಹಾಳಿಹಸುಗೆಯನಱಿಯದದಟನು
ಹೇಳುವೊಡೆ ಹದಿನಾಲ್ಕು ವರುಷದ
ಬಾಲನೈದಿದನಸಮಚಕ್ರವ್ಯೂಹಮೋಹರವ ।
ಜಾಳಿಸಿತು ರಿಪುಕಟಕ ಸುಮನೋ-
ಭಾಳಲೋಚನನೆನಿಸುವರ್ಜುನ
ಬಾಳುಗೆನುತುದ್ದಂಡ ಕೋದಂಡವನು ಜೇವೊಡೆದ ॥ ೪೯ ॥

*ಬಾಗಿಲಲಿ ಸೈಂಧವನ ಸೇನಾ-
ಸಾಗರವ ಮುಕ್ಕುಳಿಸಿ ತಾ ಕೈ-
ಲಾಗು ಮಿಗೆ ಸರಳೆರಡಱಿಂದೆಚ್ಚನು ಜಯದ್ರಥನ ।
ತೂಗಿ ತೆಗೆತೆಗೆದೆಚ್ಚು ಗರುಡಿಯ
ಲಾಗುಕಾಱನ ರಥವ ಮುಱಿದನು
ಮೇಗಣಮರರು ಪಾಯ್ಕೆನಲು ಕಲಕಿದನು ಪರಬಲವ ॥ ೫೦ ॥

೪೮. [ಹರಕುಮಾರ–ಈಶ್ವರಪುತ್ರ; ಷಣ್ಮುಖ. ಅಳವಿ–ಸಾಮರ್ಥ್ಯ. ಅರಿದು–ಅಸಾಧ್ಯ. ಅಂಘೈಸು–ಹವಣಿಸು, ಪ್ರಯತ್ನಿಸು. ಬಲುಗಡಿಯ–ಬಹಳ ಪರಾಕ್ರಮಿ. ಅಲಘು ಭುಜಬಲ–ಅತಿಶಯವಾದ ತೋಳ ಬಲವುಳ್ಳವನು. ಭಾನುಸುತ–ಕರ್ಣ].

೪೯. [ಹಾಳಿಹಸುಗೆ–ಕ್ರಮ ಮತ್ತು ಔಚಿತ್ಯಜ್ಞಾನ. ಅದಟ–ಪರಾಕ್ರಮವುಳ್ಳವನು. ಜಾಳಿಸಿತು–ಕ್ಷೋಭೆಗೊಂಡಿತು, ಕಲಕಿಹೋಯಿತು. ರಿಪುಕಟಕ–ಶತ್ರುಸೈನ್ಯ. ಸುಮನೋಭಾಳಲೋಚನನೆನಿಸುವ–ದೇವತೆಗಳಿಗೆ ಈಶ್ವರನು ಹೇಗೋ ಹಾಗಿರುವ, ಉದ್ದಂಡ–ಶ್ರೇಷ್ಠವಾದ].

೫೦. [ಮುಕ್ಕುಳಿಸು–ಧ್ವಂಸಮಾಡು. ಕೈಲಾಗು–ಕೈಚಳಕ, ಆವೇಶ. ಗರುಡಿಯ ಲಾಗುಕಾಱ–ಗರುಡಿಯ ಆಚಾರ್ಯ ಎಂದರೆ ದ್ರೋಣಾಚಾರ್ಯ. ಪಾಯ್ಕುಎನು–ಪ್ರಶಂಸೆಮಾಡು, ಕೊಂಡಾಟದ ನುಡಿ].

* ಈ ಪದ್ಯಗಳು 'ಅ' 'ಕುಮಾ' ಪ್ರತಿಗಳಲ್ಲಿ ಕಂಡುಬರುವುದಿಲ್ಲ. ಪೇಟೆ ಮುದ್ರಣದಲ್ಲಿ ಇದೆ.

*ಕೊಲಗಿರ್ಸೆ ಕಾಲಾಳು ಮೇಲಾ-
ಳಳವಿಗುಡಲಿ ಮಹಾರಥರು ಕೈ-
ಕೊಳಲಿ ಜೋದರು ದಿಟ್ಟರಾದೊಡೆ ಕವಿಸಿ ಕರಿಘಟೆಯು ।
ಕೆಲದ ದೊರೆಗಳು ಬರಲಿ ಮಾಱಿದ
ತಲೆಯ ಭಂಡರು ಹೊತ್ತಿರದೆ ಕೈ-
ಕೊಳಲಿ ಕರ್ಣಾದಿಗಳೆನುತ ತೆಗೆದೆಚ್ಚನಭಿಮನ್ಯು ॥ ೫೧ ॥

ಸರಳ ಮೊನೆಯಲಿ ವೈರಿಸುಭಟರ
[1]ಕರುಳ ತೆಗೆದನು[1] ರಣದೊಳಾಡುವ
ಮರುಳು ಬಳಗವ ತಣಿಸಿದನು ಕಡಲಾದುದರುಣಜಲ ।
ತರಳನಱೆಯಟ್ಟಿದನು ರಣದಲಿ
ದುರುಳದುರ್ಯೋಧನನ ಮಕ್ಕಳ
ಮರಳಲೀಯದೆ ಭಟರ ಕೇಣಿಯ ಕೊಂಡನಭಿಮನ್ಯು ॥ ೫೨ ॥

ಉರಗನಿಕ್ಕಡಿಗಾಱ ಹು[1]ಲ್ಲಿ[1]ನ
ಸರವಿಗಂಜುವುದುಂಟೆ ಕರ್ಣಾ-
ದ್ಯರನು ಕಡ್ಡಿಗೆ ಬಗೆಯನೀ [2]ಹೂ[2]ಹೆಗಳ ಗಣಿಸುವನೇ ।
ಎರಡು ಶರದಲಿ ಲಕ್ಷಣನ ಕ-
ತ್ತರಿಸಿದನು ಹದಿನೆಂಟು ಬಾಣದ-
ಲರಿದನುಳಿದ ಕುಮಾರಕರನಭಿಮನ್ಯು ನಿಮಿಷದಲಿ ॥ ೫೩ ॥

೫೧. ಅಳವಿಗುಡು–ಸಾಮರ್ಥ್ಯವನ್ನು ತೋರಿಸು. ಕೈಕೊಳು–ಯುದ್ಧಮಾಡು. ಜೋಧ–ಯೋಧ, ಸೈನಿಕ. ಮಾಱಿದತಲೆಯ–ತಮ್ಮನ್ನು ತಾವು ಮಾರಿಕೊಂಡ, ಹಣಕ್ಕಾಗಿ ಯುದ್ಧಮಾಡುವ. ಹೊತ್ತಿರದೆ–ತಡಮಾಡದೆ, ಬೇಗನೆ (?)].

೫೨. [1]ಕೊರಳ ಸೆಳೆದನು (ಅ).
[ಆಡು–ಕುಣಿ, ನೃತ್ಯಮಾಡು. ಮರುಳು–ಪಿಶಾಚಿ (ರಣರಂಗದ ಪಿಶಾಚಿಗಳು). ಅರುಣಜಲ–ರಕ್ತ. ಅಱೆಯಟ್ಟು–ಹೊಡೆದೋಡಿಸು, ಬೆನ್ನಟ್ಟು. ಕೇಣಿಯಕೊಳ್–ಗುತ್ತಿಗೆ ಪಡೆ, (ಯುದ್ಧಕ್ಕಾಗಿ) ಹಿಡಿದಿಡು (ಕೇಣಿ–ಗೇಣಿ)].

೫೩. [1]ತ್ತಿ (ಅ). [2]ಹಾ (ಅ).
[ಉರಗ–ಹಾವು. ಇಕ್ಕಡಿಗಾಱ–ಎರಡು ತುಂಡಾಗಿ ಕತ್ತರಿಸುವವನು. ಸರವಿ–ಹಗ್ಗ. ಕಡ್ಡಿಗೆಬಗೆ–ಹುಲ್ಲುಕಡ್ಡಿಗೆ ಸಮಾನವಾಗಿ ಎಣಿಸು. ಹೂಹೆ–ಎಳೆಯ ಮಗು. ಅರಿ–ಕತ್ತರಿಸು].

* ಈ ಪದ್ಯ 'ಅ' ಮತ್ತು 'ಕುಮಾ' ಪ್ರತಿಗಳಲ್ಲಿ ಕಂಡುಬರುವುದಿಲ್ಲ. ಪೇಟೆ ಮುದ್ರಣದಲ್ಲಿ ಇದೆ.

*ತಳಿತ ಚೂತದ ಪಸಿಗಳವನಿಗೆ
ಮಲಗುವಂತಿರೆ ರಾಜಪುತ್ರರು
ಹೊಳೆವ ಪದಕದ ಕೊರಳ ತಲೆಗಿಂಬಾದ ತೋಳುಗಳ ।
ಬಳಿರಕುತದಲಿ ನನೆದ ಸೀರೆಯ
ತಳಿತ ಖಂಡದ ಬಿಗಿದ ಹುಬ್ಬಿನ
ದಳಿತ ದಂಷ್ಟ್ರಾನನದಲೆಸೆದರು ಸಾಲ ಶಯನದಲಿ ॥ ೫೪ ॥

ಹಱಿದು ಬಿದ್ದವು ಜೋಡು ಮೈಯಲಿ
[1]ಮುಱಿದವಗಣಿತ[1] ಬಾಣ[2]ದೇ[2]ಱಿನೊ-
ಳೊಱೆ[3]ವ[3] ರಕುತದ ಧಾರೆ ನಾದಿತು ರಥದ ಹಲಗೆಗಳ ।
[4]ಅಱಿವುಮರೆ[4]ದಪಕೀರ್ತಿನಾರಿಯ
ಸೆಱಗ ಹಿಡಿದರು ಹೇಳಲೇನದ-
ನಱಿ[5]ಯಲೇ[5]ಕಾಂತದಲಿ ಕರ್ಣನ ಕರೆದನಾ ದ್ರೋಣ ॥ ೫೫ ॥

ಇದಿರೊಳಾನು[1]ವೊಡ[1]ರಿದು ಹಸುಳೆಯ
ಕದನ ಹಂಗಿಗರಾದೆವಾಳ್ದನ
ವದನಕಮಲಕೆ ನಮ್ಮ ಪೌರುಷವಿಂದು ಹಿಮವಾಯ್ತು ।
ಇದಿರೊಳಾನಿಹೆ ಶಲ್ಯನೆಡವಂ-
ಕದಲಿ [2]ಬಲದಲಿ ಕೃಪನಪರಭಾ-
ಗದಲಿ[2] ನೀ ಬಂದೆಸು ಕುಮಾರನ ಕರದ ಕಾರ್ಮುಕವ ॥ ೫೬ ॥

೫೪. ತಳಿತ–ಚಿಗುರಿದ. ಚೂತ–ಮಾವಿನಮರ. ಇಂಬು–ಆಸರೆ, ಆಶ್ರಯ. ಬಳಿರಕುತ–ಸಮೀಪದಲ್ಲಿ ಚೆಲ್ಲಿರುವ ರಕ್ತ. ಸೀರೆ–ವಸ್ತ್ರ. ತಳಿತ–ಹೊರಕ್ಕೆ ಬಂದ. ಖಂಡ–ಮಾಂಸದ ತುಂಡು. ಬಿಗಿದ–ಗಂಟಿಕ್ಕಿದ. ದಳಿತ ದಂಷ್ಟ್ರಾನನ–ಹೊರಕ್ಕೆ ಕಾಣುವ ಹಲ್ಲಿನಿಂದ ಕೂಡಿದ, ಅರಳಿದ ಮುಖ].

೫೫. [1]ಮುಱಿದು ಬಿದ್ದವು (ಅ). [2]ವೇ (ಅ). [3]ದ (ಅ ಕುಮಾ). [4]ಹಱಿವುದೆಗೆ (ಅ). [5]ಯೆನೇ (ಅ ಕುಮಾ).
[ಹಱಿದು–ಕತ್ತರಿಸಿ. ಜೋಡು–ರಕ್ಷಾಕವಚ. ಏಱು–ಗಾಯ. ಒಱೆವ–ಸುರಿಯುವ. ನಾದು–ತೊಯ್. ಅಱಿವು ಮರೆದು–ತಿಳಿವಳಿಕೆ ಮರೆತು ಹೋಗಿ, ವಿವೇಕವು ಹೋಗಿ],

೫೬. [1]ವುದು (ಅ ಕುಮಾ). [2]ಕೃಪಬಲನಪರಭಾಗದೊಳೊದವಿ (ಅ).
[ಆನು–ಎದುರಿಸು, ಪ್ರತಿಭಟಿಸು. ಹಂಗಿಗರಾದೆವು–ಹಂಗಿಗೆ, ಋಣಕ್ಕೆ ಒಳಗಾಗಿದ್ದೇವೆ. ಎಡವಂಕ–ಎಡಪಕ್ಕ. ಅಪರಭಾಗ–ಹಿಂದುಗಡೆ. ಎಸು–ಬಾಣ ಬಿಡು. ಕಾರ್ಮುಕ–ಬಿಲ್ಲು].

* 'ಆ' ಪ್ರತಿಯಲ್ಲಿ ಇಲ್ಲದ ಈ ಪದ್ಯವನ್ನು 'ಅ' ಪ್ರತಿಯಿಂದ ತೆಗೆದುಕೊಂಡಿದೆ.

ಚಾಪವೀತನ ಕೈ[1]ಯಲಿರಲಿ-
ನ್ನಾ[1] ಪಿನಾಕಿಗೆ ಗೆಲವು [2]ಘಟಿಸದು[2]
ವೈಪರೀತ್ಯಕೆ ಬೆದಱಲಾಗದು ಸ್ವಾಮಿಕಾರ್ಯವಿದು ।
ರೂಪುದೋಱದೆ ಬಂದು [3]ಸುಭಟನ[3]
ಚಾಪವನು ಖಂಡಿಸುವುದಿದು ಕುರು-
ಭೂಪನುಳಿವೆಂದಿನಸುತನನೊಡಬಡಿಸಿದನು ದ್ರೋಣ ॥ ೫೭ ॥

ಆರಯಿದು ಮಗನೆನಿಸುವೀ ಮಮ-
ಕಾರವೆನ್ನೊಳು ಮೊಳೆತಡಾ ದಾ-
ತಾರನುಳಿವೆನ್ನಿಂದ ತಪ್ಪುವುದೆನುತ ಮನದೊಳಗೆ ।
ಕೂರಲಗನಾ ಕರ್ಣ ಬರಸೆಳೆ-
ದಾರಿ ಹಿಂದಣಿನೆಚ್ಚು ಪಾರ್ಥಕು-
ಮಾರಕನ ಚಾಪವನು ಮುಕ್ಕಡಿಯಾಗಿ ಖಂಡಿಸಿದ ॥ ೫೮ ॥

ಉಱುವ ಜಯವಧುವೊಕ್ಕತನದಲಿ
ಮುಱಿದ ಕಡ್ಡಿಯಿದೆನಲು ಕರದಿಂ
ಮುಱಿದು ಬಿದ್ದುದು ಚಾಪವಿಂದ್ರಕುಮಾರನಂದನನ ।
ಬೆಱಗಿನಲಿ ಮುಖದಿರುಹಿ ಹಿಂದಣಿ-
ನಿಱಿದ ಕರ್ಣನ ನೋಡಿ ಮುಖದಲಿ
ಕಿಱುನಗೆಯು ಕೇವಣಿಸಿ ನುಡಿದನು ಬೆರಳನೊಲೆದೊಲೆದು ॥ ೫೯ ॥

---

೫೭. [1]ಯೊಳಿದ್ದೊಡೆಯಾ (ಅ). [2]ಸೂಕದು (ಅ). [3]ರಿಪುವಿನ (ಅ).
[ಪಿನಾಕಿ-ಈಶ್ವರ (ಪಿನಾಕ-ಈಶ್ವರನ ಬಿಲ್ಲು). ಘಟಿಸು-ಉಂಟಾಗು, ಲಭಿಸು. ವೈಪರೀತ್ಯ-ಪ್ರತಿಕೂಲತೆ. ರೂಪುದೋಱದೆ-ಮೈದೋಱದೆ, ಕಾಣಿಸಿಕೊಳ್ಳದೆ. ಸುಭಟ-ಮಹಾಪರಾಕ್ರಮಿ (ಅಭಿಮನ್ಯು)].

೫೮. [ಆರಯಿದು-ವಿಚಾರಮಾಡಿ, ಆಲೋಚನೆಮಾಡಿ. ಮಮಕಾರ-ಮಮತೆ, ನನ್ನದು ಎಂಬ ವಿಚಾರ. ಮೊಳೆ-ಹುಟ್ಟು, ಉಂಟಾಗು. ದಾತಾರ-ಸ್ವಾಮಿ. ಕೂರಲಗು-ಹರಿತವಾದ ಬಾಣ. ಬರಸೆಳೆ-ಕಿವಿವರೆಗೆ (ಬಿಲ್ಲನ್ನು) ಎಳೆ. ಆರಿ (ಧಾ., ಆರ್)-ಗರ್ಜಿಸಿ, ಗಟ್ಟಿಯಾಗಿ ಕೂಗಿ. ಹಿಂದಣಿನೆಚ್ಚು-ಹಿಂದುಗಡೆಯಿಂದ ಬಾಣಪ್ರಯೋಗ ಮಾಡಿ. ಮುಕ್ಕಡಿ-ಮೂರು ತುಂಡು].

೫೯. [ಉಱುವ-ಪ್ರಸಿದ್ಧವಾ(ಳಾ)ದ. ಒಕ್ಕತನ-ಒಡಬಾಳುವಿಕೆ, ಕೂಡಿಬಾಳುವುದು. ಮುಱಿದ ಕಡ್ಡಿ-ಮುರಿದುಬಿದ್ದ ಬದುಕು. ಕೇವಣಿಸಿ-ಸೇರಿಸಿ, ಬೆರಸಿ].

ಆವ ಶರಸಂಧಾನ[1]ವಚ್ಚರಿ[1]
[2]ಯಾವ ಸರಳ ವಿಲಾಸ ಭಾವು ಇ-
ದಾವಪರಿ ಮರ್ಝು ಪೂತು ಧಣುಧಣು ದೇವ ಬಿಲ್ಲಾಳೆ[2] ।
ಈ ವಿವೇಕ[3]ವನಾರು ಬಲ್ಲರು[3]
[4]ಯಾವಗಹುದಿದು[4] ಹಿಂದೆ ಬಂದೆಸು-
ವೀ ವಿಗಡತನ ನಿನಗೆ ಸಲುವುದು ಕರ್ಣ ಕೇಳೆಂದ ॥ ೬೦ ॥

ತುಡುಕುವೊಡೆ ಧನುವಿಲ್ಲ ಮುಂದಡಿ-
ಯಿಡಲು ಸಾರಥಿಯಿಲ್ಲ ರಥಕಡಿ-
ವಡೆದುದಿನ್ನೆಂತೊದಗುವನೊ ಸುಕುಮಾರ ತಾನೆನುತ ।
ಪಡೆ ಬಿಡದೆ ಬೊಬ್ಬಿಡಲು ಬೆದಱದೆ
ಕಡುಗಿ ಖಡುಗವ ಕೊಂಡು ರಿಪುಗಳ
ಕಡಿದು ಹರಹುತ ಬೀದಿವರಿದನು [1]ರಣನ[1] ಮಧ್ಯದಲಿ ॥ ೬೧ ॥

ವೈರಿ[1]ಸುಭಟರಿಗಮರಲೋಕದ[1]
ನಾರಿಯರಿಗೆ ವಿವಾಹವನು ವಿ-
ಸ್ತಾರಿ[2]ಸಿದ[2] ಸಮಯದೊಳ[3]ಗಾಂತ[3]ಸಿತಾಕ್ಷತಾವಳಿಯು ।
ತಾರಕೆಗಳೆಸೆದ[4]ಭ್ರವೆಸೆ[4] ರಿಪು-
ವಾರಣದ ಮಸ್ತಕದ ಮುತ್ತುಗ-
ಳೋರಣಿಸಲೊಪ್ಪಿ[5]ದವು[5] ಖಡ್ಗ ಸುರೇಂದ್ರಸುತಸುತನ ॥ ೬೨ ॥

---

೬೦. [1]ಲಾಘವ (ಅ ಕುಮಾ). [2]ದಾವ ಪರಿ ಮಝು ಪೂತು ಪಾಯಿಕು ದೇವ ಬಿಲ್ಲಾಳೆಂತು ಕಡಿದೈ ಕರ್ಣ ನೀ ಧನುವ (ಅ ಕುಮಾ). [3]ವಿದಾರ ಸೇರುವೆ (ಅ ಕುಮಾ). [4]ಭಾವನಹುದೈ (ಅ).
[ಸರಳು-ಬಾಣ. ವಿಗಡತನ-ನೀಚತನ, ದುಷ್ಟತನ].

೬೧. [1]ಬಲದ (ಅ).
[ತುಡುಕು-ಹಿಡಿದುಕೊ. ಒದಗು-ಯುದ್ಧಕ್ಕೆ ಸಿದ್ಧವಾಗು. ಬೊಬ್ಬಿಡು-ಬೊಬ್ಬೆಯಿಡು. ಕಡುಗು-ಉತ್ಸಾಹಿಸು. ಬೀದಿವರಿ-ಎಲ್ಲೆಲ್ಲೂ ಓಡಾಡು. ಕಣ-ಕಳ-ಯುದ್ಧರಂಗ].

೬೨. [1]ವೀರಪ್ರತತಿಗಮರೀ (ಅ ಕುಮಾ). [2]ಸುವ (ಅ ಕುಮಾ). [3]ಗಾದ (ಅ). [4]ನಭದೋಲ್ (ಅ). [5]ದುದು (ಅ ಕುಮಾ).
[ಸಿತಾಕ್ಷತಾವಳಿ-ಬಿಳಿಯ ಅಕ್ಷತೆಯ ಕಾಳಿನ ರಾಶಿ. ತಾರಕೆ-ನಕ್ಷತ್ರ. ಅಭ್ರ-ಆಕಾಶ. ರಿಪುವಾರಣ-ಶತ್ರುವೆಂಬ ಆನೆ. ಮಸ್ತಕ-ತಲೆ, ಕುಂಭಸ್ಥಳ. ಓರಣಿಸು-ಸಾಲಾಗಿರು, ಒಪ್ಪವಾಗಿರು. ಸುರೇಂದ್ರಸುತಸುತ-ಇಂದ್ರನ ಮಗನ (ಅರ್ಜುನನ) ಮಗ (ಅಭಿಮನ್ಯು)].

*ಎಳೆಯ ರವಿರಶ್ಮಿಗಳು ರಕ್ತೋ-
ತ್ಪಲದೊಳಗೆ [1]ಹೊಳೆವಂತೆ[1] ಹೊನ್ನರೆ*
ಬಳಿದ ಹಿಳುಕನೆ ಕಾಣಲಾಯಿತು ಭಟನ ಕಾಯದಲಿ ।
[2]ಹೊಳೆದು ಹೊಮ್ಮಿಗ[2] ಹೊಯ್ವವೋಲ-
ವ್ವಳಿಸಿ ಕರ್ಣನ ಹಯರಥವನ-
ಪ್ಪಳಿಸಿ ಮರಳುತ ಲಾಗಿನಲಿ ಖಂಡೆಯವ ಖಂಡಿಸಿದ ॥ ೬೩ ॥

ಶರಮಯವು ಸರ್ವಾಂಗವಿನ್ನಿ-
ಸರಳು ನಡಲಿಂಬಿಲ್ಲ ವೈರಿಗಳೊ-
ಳಜಿಯನದನಭಿಮನ್ಯು ಕರ್ಣನ ಮೇಲುವಾಯಿದನು ।
ತರಹರಿಸಿ ಕೆಲಸಿಡಿದು ರಿಪುಭಟ-
ನುರವನುದರವನೆಡಬಲನ ಕಿ-
ಬ್ಬರಿಯನೆಚ್ಚನು ಕರ್ಣ ನೂಱ್ಱವತ್ತು ಬಾಣದಲಿ ॥ ೬೪ ॥

ಸರಳು ನಡಲುಚ್ಚಿದ್ದು ಬೊಬ್ಬಿಱ-
ದುರವಣಿಸಿಬರೆ ದಿವ್ಯಶರದಲಿ
ಕರವೆರಡ ಹಱಿಯೆಚ್ಚೊಡಾಗಲೆ ಕೆಡೆದು[1]ವ[1]ವನಿಯಲಿ ।
ಇರದೆ ಗಹಗಹಿಸಿದನು [2]ಭಟನೆಲೆ[2]
ಮರುಳೆ ಸೂತಜ ಕೈಮುಱಿಯೆ ಸಂ-
ಗರದ ಸಿರಿ ಹಿಂ[3]ಗುವುದೆ[3] ತನ್ನನೆನುತ್ತ ಗರ್ಜಿಸಿದ ॥ ೬೫ ॥

---

೬೩. [1]ಕವಿದಂತೆ (ಅ). [2]ಒಲೆದು ಕೇಸರಿ (ಅ ಕುಮಾ).

[ರಕ್ತೋತ್ಪಲ-ಕೆಂಪುನೈದಿಲೆ. ಹೊನ್ನರೆ-ಚಿನ್ನದ ಲೇಪ, ಮುಲಾಮು. ಕಾಯ-ಶರೀರ. ಹೊಮ್ಮಿಗ-ಚಿನ್ನದ ಬಣ್ಣದ ಜಿಂಕೆ].

೬೪. [ನಡು-ಒಳಹೊಗು. ಇಂಬು-ಅವಕಾಶ, ಎಡೆ. ತರಹರಿಸು-ಸೈರಿಸು, ತಾಳಿಕೊಳ್ಳು. ಉರ-ಎದೆ, ಉದರ-ಹೊಟ್ಟೆ. ಕಿಬ್ಬರಿ-(ದೇಹದ) ಪಕ್ಕೆಯ ಕೆಳಭಾಗ; ಕೆಳಪಕ್ಕೆ].

೬೫. [1]ದ (ಅ). [2]ಕೇಳೆಲೆ (ಅ ಕುಮಾ). [3]ವಳೆ (ಅ ಕುಮಾ).

[ಹಱಿಹೆಚ್ಚೊಡೆ-ಕತ್ತರಿಸಿಹೋಗುವಂತೆ ಬಾಣಪ್ರಯೋಗ ಮಾಡಲು. ಕೆಡೆ-ಬೀಳು. ಸಂಗರದ ಸಿರಿ-ಯುದ್ಧದ ಸಂಪತ್ತು, ಪರಾಕ್ರಮ, ವೀರಶ್ರೀ. ಹಿಂಗು-ತೊರೆ, ಬಿಟ್ಟುಹೋಗು].

---

* ಹೊನ್ನೊರೆ (?) (ಸೂ.ಪಾ.) 50ನೇ ಪದ್ಯ.

ಸುರಿವ [1]ರುಧಿರ[1]ದ ಸರಿಯು ಸೆಱಗಿನೊ-
ಳೊರಸಿ ರಥದಚ್ಚುಗಳನೊದೆದನು
ತಿರುಹಿ ಗಾಲಿಯು [2]ತೆಗೆದು[2] ಮುಂಗೈಗೊಂಡು ನಡೆನಡೆದು ।
ಅರಿಬಲವನಿಡೆ ಮುಗ್ಗಿ ಕೆಡೆ[3]ದವು[3]
ತುರಗವಜಿಗಿಜಿಯಾದವಿಭರಥ
[4]ವು[4]ರುಳಿದವು [5]ಹೊ[5]ರಳಿದವು ಹೂಣಿಗರಟ್ಟೆ ಸಮರದಲಿ ॥ ೬೬ ॥

ಮನದ ಖತಿ [1]ಹೊಗರೇಱಿ[1] ದುಶ್ಶಾ-
ಸನನ ಸುತನಿದಿರಾಂತು ಖಡುಗದ
ಮೊನೆಯ ಚೂರಿಸಿ ದಂ[2]ಡ[2]ವಲಗೆಯ [3]ತೊಡೆಯೊ[3]ಳೊದಱಿಸುತ ।
ತನಗೆ ಮೃತ್ಯುವ ಕರೆವವೊಲು ಪಾ-
ರ್ಥನ ಕುಮಾರನ ಕರೆದು ಹಳಚಿದ-
ನನಿಮಿಷಾವಳಿ ಪೂತು ಪಾಯ್ಕನೆ [4]ಹೆಣ[4]ಗಿದರು ಭಟರು ॥ ೬೭ ॥

ಕರಹತಿಗೆ ಧಡಧಡಿಸಿ ತಿಱ್ರನೆ
ತಿರುಗಿ ಬೀಳುತ ಧೈರ್ಯ[1]ದಲಿ[1] ಹೊಡ-
ಕರಿಸಿ ಹೊ[2]ಲ[2]ಬಿನೊಳೆದ್ದು [3]ಹೊಯ್[3]ದನು ಪಾರ್ಥನಂದನ[4]ನ[4] ।
ಅರಿಕೃಪಾಣದ ಗಾಯ[5]ವನು[5] ತರ-
ಹರಿಸ[6]ಲಾಱದೆ[6] [7]ಬೀಳು[7]ತಹಿತನ-
ನೆಱಗಿದನು ಬಳಿಕವನಿಗೊಱಗಿದರಾ ಕುಮಾರಕರು ॥ ೬೮ ॥

---

೬೬. [1]ರಕುತ (ಅ ಕುಮಾ). [2]ಕೊಂಡು (ಅ). [3]ದುದು (ಅ ಕುಮಾ). [4]ಹೊ (ಅ). [5]ವು (ಅ).

[ಸರಿ-ಮಳೆ. ತೆಗೆದು-ಕಳಚಿ. ಇಡು-ಹೊಡೆ. ಮುಗ್ಗು-ಎಡವು, ಕುಸಿ. ಇಭ-ಆನೆ. ಹೂಣಿಗರು-ಪರಾಕ್ರಮಿಗಳು, ಸಾಹಸಿಗರು. ಅಟ್ಟೆ-ತಲೆಯಿಲ್ಲದ ದೇಹ, ಮುಂಡ].

೬೭. [1]ಬಿಗುಹೇರಿ (ಅ). [2]ಡೆ (ಅ). [3]ಗತಿಗ (ಅ). [4]ಮೊಳ (ಅ).

[ಹೊಗರೇಱು-ಹುರಿಗೊಳ್ಳು. ಚೂರಿಸು-ತಿವಿ, ಇರಿ. ದಂಡವಲಗೆ-ಒಂದು ಬಗೆಯ ಉದ್ದನೆಯ ದಂಡಾಕಾರದ ಗುರಾಣಿ. ತೊಡೆಯೊಳೊದಱಿಸುತ-(?). ಹಳಚು-ತಾಗು, ಪ್ರತಿಭಟಿಸು. ಅನಿಮಿಷಾವಳಿ-ದೇವತೆಗಳ ಸಮೂಹ].

೬೮. [1]ವನು (ಅ). [2]ಱ (ಅ), ರ (ಕುಮಾ). [3]ತಿವಿ (ಅ). [4]ನು (ಅ). [5]ದಲಿ (ಅ). [6]ಲಱಿಯದೆ (ಅ ಕುಮಾ). [7]ಕೆಡಹು (ಅ).

[ಹೊಡಕರಿಸು-ಪ್ರಕಾಶಿಸು, ಮೆರೆ, ವಿಜೃಂಭಿಸು. ಹೊಲಬು-ಸನ್ನಿವೇಶ, ಸ್ಥಿತಿ. ಅರಿಕೃಪಾಣ-ಶತ್ರುವಿನ ಕತ್ತಿ].

ಕಾಳುಗಿಚ್ಚೆದ್ದಡವಿಯನು ಕುಡಿ-
ನಾಲಗೆಯೊಳಳವಡಿಸಿ ದಳ್ಳುರಿ-
[1]ಜಾಲ[1] ತಗ್ಗಿದವೋಲು ಗಗನದ ಮುಗಿಲ ಮೋಹರದ ।
ಧಾಳಿಯಲಿ ಅಜ[3]ಯಟ್ಟೆ [2]ಸುಂಟುರ[2]
ಗಾಳಿಯುರವಣೆ ನಿಂದವೊಲು ಸುರ-
ಪಾಲತನಯನತನಯನಸ್ತಮಿಸಿದನು ರಣದೊಳಗೆ ॥ ೬೯ ॥

ಕೋಳ ತಲೆಗಿಂಬಿನಲಿ ಕೈದುಗ-
ಳೋಳಿಗಳ ಹಾಸಿನಲಿ ತನ್ನಯ
ಕಾಲದೆಸೆಯಲಿ ಕೆಡೆದ ಕೌರವಸುತರು ನೂರ್ವರಲಿ ।
ಬಾಲಕನು ಬಳಲಿದನು ಸಮರದ
ಲೀಲೆಯಲಿ ಕುಣಿ[1]ದಾಡಿ[1] ಬಸವಳಿ-
ದಾಳುಗಳ ದೇವನು ಮಹಾಹವದೊಳಗೆ ಪವಡಿಸಿದ ॥ ೭೦ ॥

*ಸಸಿಯ ಬಿಂಬವ ಬಗೆಯದದಟನ
ಮುಸುಡು [1]ಮುರಿಯ[1]ದು ಮೈಯ ದೀಧಿತಿ
ಮುಸುಳಿಸದು ಕಣ್ಣಾಲಿ ಕರಗದು ಕಾಯ ಜವಗೆಡದು ।
ಎಸಕ ಮುಸುಳದು ಸಮರದಲಿ ಪೌ-
ರುಷ[2]ವ[2] ಮಾಡಿ ವಿರೋಧಿರಾಯರ
ಕುಸುರಿ[3]ದರಿ[3]ದನು ಕೆಡಹಿ[3] ಪಾರ್ಥನ ಸೂನು ರಂಜಿಸಿದ ॥ ೭೧ ॥

---

೬೯. [1]ಜ್ವಾಲೆ (ಅ ಕುಮಾ). [2]ಬಿಸುಡುವ (ಅ).
[ದಳ್ಳುರಿ ಜಾಲ–ನುಗ್ಗುವ ಉರಿಯ ವ್ಯಾಪನೆ. ಮೋಹರ–ಗುಂಪು. ಅಜ[3]ಯಟ್ಟು–ಬೆನ್ನಟ್ಟು, ಹೊಡೆದೋಡಿಸು. ಉರವಣೆ–ರಭಸ. ಸುರಪಾಲ ತನಯನ ತನಯ–ಅರ್ಜುನನ ಮಗ, ಅಭಿಮನ್ಯು. ಅಸ್ತಮಿಸು–ಗತಿಸು].

೭೦. [1]ಕುಣಿದು (ಅ ಕುಮಾ).
[ಬಸವಳಿ–ಮೈಮರೆ. ಮಹಾಹವ–ಘೋರಯುದ್ಧ. ಪವಡಿಸು–ಮಲಗು].

೭೧. [1]ಕಂದ (ಅ). [2]ವು (ಅ). [3]ದಡೆಗೆಡಹಿದನು (ಅ).
[ಸಸಿ–ಶಶಿ, ಚಂದ್ರ. ಮುಸುಡು–ಮೋರೆ, ಮುಖ. ಮುರಿ–ಹಿಮ್ಮೆಟ್ಟು. ದೀಧಿತಿ–ಕಾಂತಿ. ಮುಸುಳಿಸು–ಕಳೆಗುಂದು, ಕಾಂತಿಹೀನವಾಗು. ಕರಗು–ಇಂಗಿಹೋಗು. ಜವಗೆಡು–ನಿಷ್ಕ್ರಿಯವಾಗು. ಎಸಕ–ಪರಾಕ್ರಮ, ಪ್ರತಾಪ, ಸಾಮರ್ಥ್ಯ. ಪೌರುಷ–ಗಂಡಸುತನ. ಸೂನು–ಮಗ].

---

* ಈ ಪದ್ಯವು 'ಕುಮಾ' ಪ್ರತಿಯಲ್ಲಿ ಕಂಡುಬರುವುದಿಲ್ಲ; 'ಅ' ಪ್ರತಿಯಲ್ಲಿ ಅಧಿಕಪಾಠವಾಗಿ ಅಡಿಯಲ್ಲಿ ಕೊಟ್ಟಿದೆ.

ಬಿಗಿದ ಹುಬ್ಬಿನ ಬಿಟ್ಟ ಕಂಗಳ
ಹೊಗರುಮೋಱೆ³ಯ ಹಿಣಿಲ ಮಂಡೆಯ
¹ಜಿಗಿ[ವ]¹ ²ನೆತ್ತರ²ಜೋಱೆ³ನೊಡಲಿನ ತುಱುಗಿದಂಬುಗಳ ।
ಹೆಗಲ ಕೊಯ್ಲಿನ ತಗ್ಗಿನಲಿ ಸೈ-
ನೆಗೆದ ರೋಮದ ವಿಕ್ರಮಾಗ್ನಿಯ
ತಗಹು ಬಿಡದಭಿಮನ್ಯು³ವೆಸೆ³ದನು ಶಸ್ತ್ರಶಯನದಲಿ ॥ ೭೨ ॥

ಹಲವು ¹ಗಜವೊಂದಾಗಿ ಸಿಂಹದ
ಮೊಲೆಮುಱಿಯ ಕೊಂ[ದ]ಂತೆ¹ ಹಾವಿನ
ಬಳಗ ಗರುಡನ ಮುಱಿಯ²ನಿಱಿದ²ವೊಲಾಯಿತಕಟೆನುತ ।
ಅಳಲಿದುದು ಸುರಕಟಕವವ³ನಿಗೆ
ಇ³ಳಿದರಪ್ಸರಗಣಿಕೆಯರು ಕೋ-
ಮಲನ ತಂದರು ವಾಸವನ ಸಿಂಹಾಸನದ ಹೊರೆಗೆ ॥ ೭೩ ॥

ಧುರದ ಪ್ರಳಯಕೃತಾಂತನನು ಪರಿ-
ಹರಿಸಿದೆವು ಮೃತ್ಯುವಿನ ಪಾಶದ
ಕೊರಳ ಬಳಚಿದೆವೆನುತ ಕೌರವಬಲದ ನಾಯಕರು ।
ಶಿರವ ತಡಹುತ ತಮ್ಮ ಶಿಬಿರಕೆ
ತಿರುಗಿದರು ಬಾಲಕನನೀಕ್ಷಿಸ-
ಲರಿದು ತನಗೆಂಬಂತೆ ರವಿ ಜಾಱಿದನು ಪಶ್ಚಿಮಕೆ ॥ ೭೪ ॥

---

೭೨. ¹ಬಿಗಿಯ (ಅ), ಜಿಗಿಯ (ಅ ಕುಮಾ). ²ರಕುತದ (ಅ ಕುಮಾ). ³ಮೆರೆ (ಅ ಕುಮಾ).

[ಬಿಗಿದ-ಗಂಟಿಕ್ಕಿದ. ಹೊಗರು ಮೋಱೆ-ಕಾಂತಿಯುಕ್ತವಾದ ಮುಖ. ಹಿಣಿಲು-ಜಡೆ, ಹೆರಳು. ಜಿಗಿವನೆತ್ತರ ಜೋಱೆನೊಡಲು-ಚಿಮ್ಮುತ್ತಿರುವ ರಕ್ತವು ಸೋರಿ ಹರಿಯುತ್ತಿರುವ ದೇಹ. ತುಱುಗು-ಒತ್ತಾಗಿ ನಾಟು. ಕೊಯ್ಲು-ಕತ್ತರಿಸುವಿಕೆ. ಸೈನೆಗೆದ-ಚೆನ್ನಾಗಿ ನಿಮಿರಿನಿಂತ. ತಗಹು-ಸಂಪರ್ಕ].

೭೩. ¹ಗಜಗಳು ಸಿಂಹಶಿಶುವನು ಗೆಲಿದ ಪರಿಯಂತಾಯ್ತು (ಅ ಕುಮಾ). ²ಮುಱಿದ (ಅ ಕುಮಾ). ³ಯೊಳಿಳಿದ (ಅ ಕುಮಾ).

[ಇಱಿ-ಕೊಲ್ಲು. ಸುರಕಟಕ-ದೇವತೆಗಳ ಸಮೂಹ. ಗಣಿಕೆ-ವೇಶ್ಯೆ. ವಾಸವ-ಇಂದ್ರ. ಹೊರೆ-ಸಮೀಪ].

೭೪. [ಕೃತಾಂತ-ಯಮ. ಪರಿಹರಿಸು-ನಿವಾರಿಸು, ಹೋಗಲಾಡಿಸು. (ಪಾಶದ) ಕೊರಳು-(ಹಗ್ಗದ) ಕುಣಿಕೆ (?). ಬಳಚು-ನಾಶಮಾಡು, ಕತ್ತರಿಸು].

ಕುಲಿಶಹತಿಯಲಿ ಕುಲಶಿಲೋಚ್ಚಯ-
ಏಳಿಗೆ ಕೆಡೆವಂದದಲಿ ನಿಜಸುತ-
ನಳಿದ ವಾರ್ತಾವಚನದುಪಟಳಕವನಿಪಾಲಕನು ।
ಮಲಗಿದನು ಮೈಮಱಿದು ಮಹಿಮಂ-
ಡಲಿಕರೊಳು ಗುಜುಗುಜಿನ[1][ಲುಱಿ][1] ಕಳ-
ವಳಿಕೆ ಮೊಳೆತುದು ಕಟಕದಲಿ ದುಮ್ಮಾನವಃಯವಾ[2]ಯ್ತು[2] ॥ ೭೫ ॥

ಹೊಳಲ ಗಜಬಜವಡಗಿ[1]ತರವುನೆ
ಯೊಳಗೆ ಪಸರಿಸಿತತುಳ ಶೋಕಾ-
ನಲನು[1] ಭೂಪಾಲಕನ ಸೈರಣೆಗಾಯ್ತು ಮಹನವಮಿ ।
ಒಳಗುರಿವ ಹಸಿಮರನ ತುದಿಯಲಿ
ಜಲವೊಗುವವೊಲು ಹೃದಯಶಿಖಿಯುಱಿ
ತಳಿತು ಲೋಚನವಾರಿ ತುಳುಕಿ[2]ದುದನಿಲ[2]ಜಾದಿಗಳ ॥ ೭೬ ॥

ಬಂದು ಫಲುಗುಣನೆನ್ನ ಮೋಹದ
ಕಂದನಾವೆಡೆಯೆಂದೊಡಾನೇ-
ನೆಂದು ಮಾಱುತ್ತರವ ಕೊಡುವೆನು ವೈರಿನಾಯಕರು ।
ಕೊಂದರೆಂಬೆನೊ [1]ಶಿವಮಹಾದೇ-
ವೆಂದು ಪುತ್ರಸ್ನೇಹ ಮಿಗೆ ಸಂ-
ಬಂಧವಲಿ ಹಂಬಲಿಸಿ ಹಲುಬಿದನಂದು ಯಮಸೂನು[1] ॥ ೭೭ ॥

೭೫. [1]ನೊಳಿರೆ (ಅ ಕುಮಾ), ನಲಿರೆ (ಅ). ನಲು–[3] ('ಶ್ರೀ' ತಿದ್ದುಪಡಿ).

[ಕುಲಿಶಹತಿ–ವಜ್ರಾಯುಧದ ಹೊಡೆತ. ಕುಲಶಿಲೋಚ್ಚಯ–ಕುಲಪರ್ವತಗಳ ಸಮೂಹ (ಕುಲಪರ್ವತಗಳು ಏಳು). ಉಪಟಳ–ಕಾಟ, ಪೀಡೆ, ತೊಂದರೆ. ಉಱಿ–ಹೆಚ್ಚಾಗಿ. ಕಟಕ–ಸೈನ್ಯ. ದುಮ್ಮಾನ–ದುಃಖ].

೭೬. [1]ತರಸನ ಹೊಳಲೊಳಗೆ ಪಸರಿಸಿತು (ಅ). [2]ತುಷವನ (ಅ ಕುಮಾ).

[ಹೊಳಲು–ಪಟ್ಟಣ. ಮಹನವಮಿ–ಕಗ್ಗೊಲೆ (?). ಒಗು–(ಉಗು) ಹೊರ ಸೂಸು, ಚೆಲ್ಲು. ಶಿಖಿ–ಅಗ್ನಿ. ತಳಿತು–ಹೊರಹೊಮ್ಮಿ, ಕಾಣಿಸಿಕೊಂಡು. ಲೋಚನವಾರಿ–ಕಣ್ಣೀರು].

೭೭. [1]ಮೇಣು ನಾನೇ ಕೊಂದೆನೆಂಬೆನೊ ಶಿವಮಹಾದೇವೆಂದು ಪುತ್ರ ಸ್ನೇಹ ಸೌರಂಭ ದಲಿ ಹಲುಬಿದನು (ಅ ಕುಮಾ).

[ಹಂಬಲಿಸಿ–ನೆನೆನೆನೆದು. ಹಲುಬು–ಗೋಳಾಡು].

*ಅಸಮಚಕ್ರವ್ಯೂಹವದು ನೀ
ಶಿಶುವು ನಿನಗಸದಳವು ಎಂದೊಡೆ
ನಸುನಗುತ ಕೈಕೊಂಡೆ ರಣದಲಿ ನಲಿದು ರಿಪುಗಳನು ।
ಕುಸುರಿದಱಿದಱಿದವರ ಮರ್ದಿಸಿ
ಅಸುವ ಕಡೆಯಲಿ ಕಳಚಿ ನಮಗೀ
ಬಸುಱಲಿಕ್ಕಿದೆ ಕಿಚ್ಚ ಹಾ ಯೆಂದೊರಲಿದನು ಭೀಮ ॥ ೭೮ ॥

ಅರಮನೆಯ ಗಜಬಜವ ಕೇಳಿದು
[1]ದೊರೆಗಳೊಳಗಿಂದಳಿದರಾರೆಂ-[1]
ದರಸಿಯರು ಬೆಸಗೊಳಲು ದ್ರೌಪದಿಗಱುಹಿದರು ಹದನ ।
ಉರಿಯ ಡಾವರವೆಳೆಯ ಬಾಳೆಯ
ಬೆರಸುವಂತಿರೆ ರಾಯಕುವರನ
ಮರಣವಾರ್ತೆಯನಾ ಸುಭದ್ರಾದೇವಿ ಕೇಳಿದಳು ॥ ೭೯ ॥

ಅಳ[1]ಲಶಿಖಿ[1]ಯಲಿ ಬಾಡಿದಾನನ
ಜಲರುಹದ ಕಡುವೇದನೆಯ ಕಳ-
ಕಳದ ಹಾಹಾರವದ ರೌದ್ರೆ ಸುಭದ್ರೆ ನಡೆತಂದು ।
ನೆಲಕೆ ಧೊಪ್ಪನೆ ಕೆಡೆದು ಸಭೆಯಲಿ
ಹಲುಬಿದಳು ಕೊಳುಗುಳಕೆ ಕಂದನ
ಕಳುಹಿದವರಿಗೆ ಸಂದುದೇ ಪರಿಣಾಮವೆಂದೆನುತ ॥ ೮೦ ॥

---

೭೮. [ಅಸದಳ-ಅಸಾಧ್ಯ. ಮರ್ದಿಸು-ಅಡಗಿಸು, ದಮನಮಾಡು].

೭೯. [1]ದೊರೆಯೊಳಾವವನಳಿದನಕಟೆಂ (ಅ ಕುಮಾ)
[ಹದನು-ಸಮಾಚಾರ, ಸಂಗತಿ. ಡಾವರ-ಧಗೆ, ತಾಪ].

೮೦. ಉಕಶಿಖಿ (ಅ).
[ಅಳಲಶಿಖಿ ದುಃಖದ ಬೆಂಕಿ. ಆನನ ಜಲರುಹ-ಮುಖಕಮಲ. ಕೊಳುಗುಳ-ಯುದ್ಧ. ಪರಿಣಾಮ-ಬಯಸಿದ ಫಲ].

---

* 'ಅ' 'ಕುಮಾ'ಗಳಲ್ಲಿ ಕಂಡುಬರುವುದಿಲ್ಲ, ಪೇಟೆ ಮುದ್ರಣದಲ್ಲಿ ಎಂಟನೇ ಸಂಧಿಯ 15ನೇ ಪದ್ಯವಾಗಿದೆ.

ಎಲೆ ಯುಧಿಷ್ಠಿರದೇವ ಸಾಲದೆ
ಕೆಲನ ನೆಟ್ಟಿಸುವಳಲು ಲೋಚನ-
ಜಲವ ತೊಡೆಯ್ಯ ಭೀಮ ಬಲ್ಲನು ನಿಮ್ಮ ನೆನಹುಗಳ ।
[1]ಅಳದಿರೈ[1] ಸಹದೇವನಕುಲರು
ನಿಲಿಸಿರೈ ನಿಮ್ಮಿಷ್ಟಸಿದ್ಧಿಯು
ಬೆಳಸು ಫಲವಾಯ್ತೇಕೆ ನೋವಿನ್ನೆಂದಳಿಂದುಮುಖಿ ॥ ೮೧ ॥

[1]ಮಗನು ಪಂಚದ್ರೌಪದೇಯರ
ಬಗೆಯುನೆಂದೀ ರಾಜ್ಯವೆಲ್ಲವ
ಹೊಗಸಲುಗೆಯಿಲ್ಲೆಂದು ಕಳುಹಿದಿರೆನ್ನ ಕಂದನನು ।
ಹಗೆ ಹಣಿದುದಿಂದಿನಲಿ ದ್ರೌಪದಿ-
ಮಗಗೆ ರಾಜ್ಯವನಿತ್ತು ಪಟ್ಟವ
ಬಿಗಿಸಿ ಸುಖಸಾಮ್ರಾಜ್ಯವಾಳಿರೆ ಎನುತ ಹಲುಬಿದಳು[1] ॥ ೮೨ ॥

ಅಕಟ ಮಗನೇ ಬಹಳಪಾಪಾ-
ತ್ಮಕ[1]ರ[1] ಬಸುರಲಿ ಬಹುದ[2]ಣಿಂದೀ[2]
ನಕುಲನುವರದೊಳಾಗಲೀ ಧರ್ಮಜನ ಜತನದಲಿ ।
[3]ಸುಕೃತಿ ನೀನುದಯಿಸಲು ಬಹು ಕಂ-
ಟಕರು ಬಳಿಕಾರುಂಟು[3] ಕಡುಪಾ-
ತಕಿಯುಲಾ ನಿಮ್ಮಯ್ಯ[4]ನೆಂದಳು ಫಲುಗುಣನ ರಾಣಿ[4] ॥ ೮೩ ॥

---

೮೧. [1]ಅಳಲದಿರಿ (ಅ ಕುಮಾ).

[ಕೆಲನ–ಅಕ್ಕಪಕ್ಕದವರನ್ನು. ಲೋಚನಜಲ–ಕಣ್ಣೀರು. ತೊಡೆ–ಒರಸು, ಅಳಿಸು. ನೆನಹು–ಆಲೋಚನೆ].

೮೨. [1]ಮಗನು ಪಂಚದ್ರೌಪದೇಯರ । ಬಗೆಯುನೆನ್ನವನಿರಲು ರಾಜ್ಯವ । ಹೊಗಿಸಲನುವಿಲ್ಲೆಂದು ಕಂದನ ರಣಕೆ ನೂಕಿದಿರಿ । ಬಗೆಯೊಲವು ಫಲವಾಯ್ತಲಾ ಕಾ । ಳಗದ ಗೆಲಿದೈವರು ಕುಮಾರರು । ಹೊಗಿಸಿರೈ ಗಜಪುರವನೆಂದು ಸುಭದ್ರೆ ಹಲುಬಿದಳು । (ಅ ಕುಮಾ).

[ಪಂಚದ್ರೌಪದೇಯರು–ದ್ರೌಪದಿಯ ಐವರು ಕುಮಾರರು—ಪ್ರತಿವಿಂಧ್ಯ, ಶ್ರುತಸೋಮ, ಶ್ರುತಕೀರ್ತಿ, ಶತಾನೀಕ ಮತ್ತು ಶ್ರುತಸೇನ. ಬಗೆ–ಲಕ್ಷಿಸು. ಹೊಗಿಸಲುಗೆ–ಪ್ರವೇಶಿಸುವ ಅವಕಾಶ. ಬಿಗಿಸಿ–ಕಟ್ಟಿ].

೮೩. [1]ನ (ಅ). [2]ಕಿಂಪವೆ (ಅ). [3]ಸುಕೃತ ದುಷ್ಕೃತವುದಯಿಸಿದೆ ಕಂಟಕಿಗಳಾದರ ಸಾಕು (ಅ). [4]ನೆಂದು ಸುಭದ್ರೆ ಹಲುಬಿದಳು (ಅ).

[ಪಾಪಾತ್ಮಕರು ಎಂದರೆ ಅರ್ಜುನ ಮತ್ತು ಸುಭದ್ರೆ. ಸುಕೃತಿ–ಪುಣ್ಯಶಾಲಿ].

ಧುರವ ಹೊಗಲಕ್ಕವನೆ ಚಿಕ್ಕವ-
ನಿಱಿಯಲಾಪನೆ ಬಹನೆ ಮರಳಿದು
ಧರೆಯ ವೈಭವ[1]ಕಳುಪಿ[1] ಕಳುಹಿದರೆನ್ನ ಕಂದನನು ।
ವರಯುಧಿಷ್ಠಿರನೃಪತಿ ಲೋಕ[2][ದೆ][2]
ಕರುಣಿಯೆಂಬರು [3]ಕುನ್ನಿಗಳು ಮಱೆ[3]
[4]ಗೊ[4]ರಳುಗೊಯ್ಕನನಱಿಯರೆಂದಳು ಫಲುಗುಣನ ರಾಣಿ ॥ ೮೪ ॥

*ಅಗಡು ಕೌರವರೆಮಗೆ ಹಗೆಗಳು
ಮಗನೆ ಹೊಗಬೇಡೆಂದೆನಾಗಳೆ
ನಗುತ ಚರಣದೊಳೆಱಗಿ ಕಂಗಳಲೊಗುವ ಕಂಬನಿಯ ।
ತೆಗೆದು ಸೆಱಗಿನೊಳೊರಸಿ ರಿಪುಗಳ
ಬ[1][ಗಿ][1]ದು ರಣಬಲಿಗೊಟ್ಟು ಬಹೆನೆಂ-
ದಗಲುವರೆ ಬಾ ಕಂದ ಬಾಯೆಂದಪ್ಪುವಳು ಬಯಲ ॥ ೮೫ ॥

*ಶೋಕವಿಮ್ಮಡಿಸಿತ್ತು ಚಿತ್ತ
ವ್ಯಾಕುಳತೆಯಾ ಸತಿಯ ನುಡಿಗಳ-
ನೇಕ ಸಾಣೆಯಸರಳು ಮುಱಿದವು ನೃಪನ ಹೃದಯದಲಿ ।
ಆ ಕುಮಾರ ವಿಯೋಗವಹ್ನಿಗೆ
ಯಾಕೆಯಳಲು ಸಮೀರನಾಯ್ತು ದಿ-
ವೌಕಸರ ಸಮ್ಮೇಳವೇ ಪುರುಷಾರ್ಥ ತನಗೆಂದ ॥ ೮೬ ॥

---

೮೪. [1]ರಾಗಿ (ಅ). [2]ದ (ಅ ಆ ಕುಮಾ). [3]ಸಿನ್ನ ಮುನಿಗಳು (ಅ). [4]ಕೊ (ಅ).
[ಅಪನೆ-ಸಮರ್ಥನಾಗುವನೆ. ಅಳುಪು-ಆಶಿಪದು. ಕುನ್ನಿಗಳು-(=ನಾಯಿಮರಿಗಳು)-ಕೈಲಾಗದವರು, ಹೇಡಿಗಳು. ಮಱೆಗೊರಳುಗೊಯ್ಕ-ಮರೆಯಲ್ಲಿ ಕೊರಳು ಕೊಯ್ಯುವನು (=ಕರ್ಣ)].

೮೫. [1]ಗಿ (ಪೇ).
[ಅಗಡು-ತುಂಟ, ದುಷ್ಟ. ಎಱಗು-ಮೇಲೆ ಬೀಳು, ಆಕ್ರಮಣ ಮಾಡು. ಒಗು-ಸುರಿ, ಸೂಸು].

೮೬. [ಸರಳು-ಸಾಣೆ ಹಿಡಿದು ಹರಿತ ಮಾಡಿದ ಬಾಣ. ವಿಯೋಗ ವಹ್ನಿ-ಅಗಲಿಕೆಯ ಬೆಂಕಿ. ಸಮೀರ-ಗಾಳಿ. ದಿವೌಕಸ-ದೇವತೆ ಸಮ್ಮೇಳ-ಜೊತೆಗೂಡುವಿಕೆ ಎಂದರೆ ಸ್ವರ್ಗಸ್ಥನಾಗುವುದು. ಪುರುಷಾರ್ಥ-ಪರಮ ಪ್ರಯೋಜನ].

---

* ೮೫ನೆಯ ಪದ್ಯ 'ಅ' ಮತ್ತು 'ಕುಮಾ' ಪ್ರತಿಗಳಲ್ಲಿ ಕಂಡುಬರುವುದಿಲ್ಲ. ಇದನ್ನು ಪೇಟೆಯ ಮುದ್ರಣದಿಂದ ಸ್ವೀಕರಿಸಿದೆ.

*ಎಲೆ ವೃಕೋದರ ನಕುಳ ಸಾತ್ಯಕಿ
ನಿಲಿಸಿರೈ ತಂಗಿಯನು ತನ್ನಯ
ಕೊಲೆಗೆ ಮಗನಳಿವೊಂದು ಸಾಲದೆ ತನ್ನ ನುಡಿಯೇಕೆ ।
ನಳಿನನಾಭನ ಕರುಣದೊಜತೆಯು
ಕಳಿದರಾರೇಗುವರು ಶಿವಶಿವ
ನೆಲನೊಳೆನ್ನವೊಲಾರು ಪಾಪಿಗಳೆಂದು ಬಿಸುಸುಯ್ದ ॥ ೮೭ ॥

ಧರಣಿಪನ ಶೋಕಾತಿಶಯವನು
ವರ ಸಮಾಧಿಯೊಳಱಿದು ಮುನಿಪತಿ
ಕರುಣದಲಿ ಕಡುನೊಂದು ಸಕಲ ಜಗಕ್ಕನುಗ್ರಹವ ।
ಕರುಣಿಸುವವೊಲು ಕರುಣಿತನವನು
ಮೆಱೆಯಲೋಸುಗವಿರದೆ ಗಗನೇ-
ಚರದ ಗತಿಯಲಿ ಬಂದನೈ ದ್ವೈಪಾಯನ ವ್ರತಿಪ ॥ ೮೮ ॥

ಬಂದು ವೇದವ್ಯಾಸಮುನಿ ನೃಪ
ಮಂದಿರವ ಹೊಗಲೆದ್ದು ಪದದಲಿ
ಸಂದಣಿಸಿ ಚಾಚಿದನು ಮಕುಟವನವನಿಪಾಲಕನು ।
ನೊಂದವರು ಸತ್ಸಂಗತಿಯಲಾ
ನಂದವಡೆವುದೆನುತ್ತ ಮುನಿಪತಿ
ಕಂದುಮೋಱೆಯ ಮಹಿಪತಿಯ ನೆಗಹಿದನು ಕರುಣದಲಿ ॥ ೮೯ ॥

ಎಲೆ ಯುಧಿಷ್ಠಿರ ನೃಪ ಕುಮಾರ
ಪ್ರಳಯದಾಪತ್ತಾಯ್ತೆ ಭೀಮನ
ನಲವಿಗೂಣೆಯವಾಯ್ತೆ ದುಸ್ಥಿತಿಯಾಯ್ತೆ ನಕುಲಂಗೆ ।

---

೮೭. [ಒಜತೆ–ಚಲುಮೆ. ಕಳಿ–ಬತ್ತಿಹೋಗು, ನಾಶವಾಗು. ಏಗುವವರು–ಏನು ಮಾಡ ಬಲ್ಲರು].

೮೮. [ದ್ವೈಪಾಯನ–ವೇದವ್ಯಾಸ. ವ್ರತಿಪ–ವ್ರತವನ್ನು ಪಾಲಿಸುವವನು].

೮೯. [ಸತ್ಸಂಗತಿ–ಸಜ್ಜನ ಸಹವಾಸ. ನೆಗಹು–ಮೇಲಕ್ಕೆ ಎತ್ತು].

೯೦. [ನೃಪಕುಮಾರ ಪ್ರಳಯ–ಅಭಿಮನ್ಯುವಿನ ಮರಣ. ನಲವು–ಸಂತೋಷ

---

* ಈ ಎರಡು ಪದ್ಯಗಳನ್ನು 'ಅ' ಪ್ರತಿಯಿಂದ ಹೊಸದಾಗಿ ಸೇರಿಸಿದೆ. 'ಅ' ಪ್ರತಿಯಲ್ಲಿದ್ದ ಪೇಟೆ ಮುದ್ರಣದ ಪ್ರತಿಯಿಂದ ಸ್ವೀಕರಿಸಿದ್ದ ಏಳು ಪದ್ಯಗಳನ್ನು ಕೈಬಿಡಲಾಗಿದೆ.

ಬಲು ದುಗುಡ ಸಹದೇವನಲಿ ಸಂ-
ಗಳಿಸಿತೇ ದ್ರೌಪದಿ ಸುಭದ್ರಾ
ಲಲನೆಯರಿಗನುಚಿತವು ಘಟಿಸಿತೆ ಎಂದನಾ ಮುನಿಪ ॥ ೯೦ ॥

ಅಡಸಿದಾಪತ್ತಿನಲಿ ಧೈರ್ಯವ
ಹಿಡಿವುದೇ ಸುಪ್ರೌಢಿ ಸಾಕಿ-
ನ್ನೊಡಲು ಕರಗಿದೊಡೇಳಲಱಿವನೆ ಹಿಂಗಿದಭಿಮನ್ಯು ।
ಒಡನೆ ಬಂದವು ಬಿಡವು ಭವದಲಿ
ತೊಡಕಿ ಸುಕೃತವು ದುಷ್ಕೃತಂಗಳು
ಕಡೆಗೆ ತಿಳಿವಿನೊಳಲ್ಲದಿಹಪರ ಸೌಖ್ಯವಿಲ್ಲೆಂದ ॥ ೯೧ ॥

ಜನನವೇ ಲಯ ಬೀಜ ಮರಣವೆ
ಜನನ ಬೀಜವು ತೋಱಿ ಕೆಡುವೀ
ತನುವಿನಭಿರಂಜನೆಯ ಸೌಖ್ಯಕೆ ಮಾಱದಿರು ಮನವ ।
ಘನ ಪರಂಜ್ಯೋತಿ ಸ್ವರೂಪದ
ನೆನಹ ಮಱೆದೀ ಮೋಹಮಯ ಬಂ-
ಧನದೊಳಗೆ ಮರುಳಹರೆ ಮಗನೇ ನಿನ್ನನಱಿಯೆಂದ ॥ ೯೨ ॥

ಹರನೊಡನೆ ಹೊಯ್ದಾಡಿದಗ್ಗದ
ನರನು ತಂದೆ ಸಮಸ್ತ ಭುವನೇ
ಶ್ವರನಲಾ ಮುರವೈರಿ ಮಾವನು ನಿನ್ನ ತನಯನಿಗೆ ।
ಧುರದೊಳೀ ಹದನಾಯ್ತು ಮಿಕ್ಕಿನ
ನೊರಜುಗಳ ಪಾಡೇನು ಕಾಲನು
ಹರಿಹರಬ್ರಹ್ಮಾದಿಗಳ ಕೈಕೊಂಬನಲ್ಲೆಂದ ॥ ೯೩ ॥

---

೯೦. ಊಣೆಯ—ಕುಂದು, ಕೊರತೆ. ಸಂಗಳಿಸು (=ಸಂಗಡಿಸು)—ಜೊತೆಯಾಗು. ಘಟಿಸು—ಪ್ರಾಪ್ತವಾಗು].

೯೧. [ಅಡಸು—ಕವಿ, ಮೇಲೆ ಬೀಳು. ಸುಪ್ರೌಢಿ—ವಿವೇಕ. ಕರಗು—ಮಾಯವಾಗು, ನಾಶವಾಗು. ಹಿಂಗು—ಮರಣಹೊಂದು. ಭವ—ಜನ್ಮ. ತಿಳಿವು—ಜ್ಞಾನ].

೯೨. [ಲಯ—ಸಾವು. ಅಭಿರಂಜನೆ—ಮೆರೆತ, ಸಂತೋಷಪಡಿಸುವಿಕೆ. ಮಾಱು—ತೆರು, ಒಪ್ಪಿಸು, ವಶಪಡಿಸು. ಪರಂಜ್ಯೋತಿಸ್ವರೂಪ—ಪರಬ್ರಹ್ಮ. ನೆನಹು—ಧ್ಯಾನ. ಮೋಹಮಯ—ಆಕರ್ಷಕವಾದ].

೯೩. [ಅಗ್ಗದ—ಶ್ರೇಷ್ಠನಾದ. ನರ—ಅರ್ಜುನ. ನೊರಜು—ಸೊಳ್ಳೆ; ಅಲ್ಪರು, ಕ್ಷುದ್ರ ಜೀವಿಗಳು. ಕಾಲ—ಮೃತ್ಯುದೇವತೆ. ಕೈಕೊಂಬನಲ್ಲ—ಬಿಡುವವನಲ್ಲ].

ದೇಹ ತಾನಭಿಮನ್ಯುವೋ ದಿಟ
ದೇಹಿ ತಾನಭಿಮನ್ಯುವೋ ಜಡ
ದೇಹ ತಾನಭಿಮನ್ಯುವಲ್ಲದು ಕೆಟ್ಟರೇನಾಯ್ತು ।
ದೇಹವೆಂಬುದನಿತ್ಯ ನಿನ್ನವ-
ರಾಹವದೊಳಳಿದವ[1][ರು][1] ಬಿಡು ಸಂ-
ದೇಹವನಹಮ್ಮಮತೆಗಳ ಬೀಳ್ಕೊಟ್ಟು ನೋಡೆಂದ ॥ ೯೪ ॥

ಎನ್ನದಾನೆಂಬೆರಡಱಿಂದವೆ
ಬನ್ನಬಡುವನು ಜೀವನಲ್ಲದೆ
ಮುನ್ನವಿನ್ನೆಂದೆಂದಿಗಾತ್ಮಂಗಿಲ್ಲ ಭವ ಬಂಧ ।
ನಿನ್ನ ನೀನಱಿ ಸಾಕು ಮಾಯೆಯ
ಗನ್ನಗತಕವ ಗೆಲುವೆ ಕನಸಿನ
ಹೊನ್ನ ಕಾಣದೆ ದುಃಖಪಡುವರೆ ಭೂಪ ಕೇಳೆಂದ ॥ ೯೫ ॥

ಇರುಳು ಹಗಲಿನ ಬೀಜ ನೆರವಿಯೆ
ಹರೆವುದಕೆ ಮೊದಲುನ್ನತೋನ್ನತ
ಮರುಳೆ ಕೇಡಿನ ಕಾಳಕೂಟವೆ ವೀರ [ನಿರ್ವಹಣ] ।
ಸಿರಿ ದರಿದ್ರತೆಗಡಹು ಜನನವೆ
ಮರಣ ಫಲವಿದನಱಿದು ಬುಧರಾ-
ಚರಿಸುವುದು ಕೇಳೆಂದು ವೇದವ್ಯಾಸಮುನಿ ನುಡಿದ ॥ ೯೬ ॥

---

೯೪. [1]ರ (ಆ ಕುಮಾ).

[ದೇಹಿ-ಆತ್ಮ. ಜಡ-ಅನಿತ್ಯ (ಚೈತನ್ಯಹೀನ), ನಾಶವಾಗತಕ್ಕ. ಅನಿತ್ಯ-ಅಶಾಶ್ವತ. ಅಳಿದವರು-ನಾಶವಾದವರು. ಅಹಮ್ಮಮತೆಗಳು-ಅಹಂಕಾರ ಮತ್ತು ನನ್ನದು ಎಂಬ ಭಾವನೆ].

೯೫. [ಎನ್ನದು-ನನ್ನದು ಎಂಬ ಮಮತೆ. ಆನು-ನಾನು ಎಂಬ ಅಹಂಕಾರ. ಬನ್ನ-ಭಂಗ. ಭವಬಂಧ-ಸಂಸಾರದ ಕಟ್ಟುಪಾಡು. ನಿನ್ನ ನೀನಱಿ-ಆತ್ಮಜ್ಞಾನವನ್ನು ಪಡೆದುಕೋ. ಗನ್ನಗತಕ-ಮೋಸ].

೯೬. [ನೆರವಿಯು ಹರೆವುದಕೆ ಮೊದಲು-ಚದರಬೇಕಾದರೆ ಗುಂಪುಗೂಡಲೇಬೇಕು. ಉನ್ನತೋನ್ನತ-ಅತ್ಯಂತ ಉನ್ನತಿಗೆ ಏರುವುದು. ಕೇಡಿನ ಕಾಳಕೂಟ-ಘೋರ ವಿಷಕ್ಕೆ ಸಮಾನವಾದ ಅವನತಿ. ವೀರ (ನಿರ್ವಹಣ)-ವೀರನೂ ಮಡಿಯಲೇಬೇಕು (?). ಅಡಹು-ಆಸರೆ, ಆಶ್ರಯ. ಫಲ-ಪರಿಣಾಮ ಬುಧರು-ಬಲ್ಲವರು, ಜ್ಞಾನಿಗಳು]

೩. ಸೈಂಧವನ ವಧೆ

ಹರಿಕಿರೀಟಿಗಳತ್ತ ಶಿಬಿರಕೆ
ತಿರು[1]ಗಿದರು[1] ಸುತಶೋಕಸೂಚನೆ
ನರನ ಚಿತ್ತದೊಳಾ[2]ಯ್ತು[2] ವೆಂಠಣಿಸಿತ್ತು ಪರಿತಾಪ ।
ಕೊರಳ ಸೆರೆ ಹಿಗ್ಗಿದವು ಕಂಬನಿ
[3]ಸುರಿಯಲಾಯ್ತುರಿ ಮಸಗಿ[3] ಜಠರದೊ-
ಳುರವಣಿಸಿದಾಕಸ್ಮಿಕದ ಭಯವಾಯ್ತು ಪಾರ್ಥಂಗೆ ॥ ೯೭ ॥

ದೆಸೆದೆಸೆಯ ನೋಡಿದೊಡೆ ಕತ್ತಲೆ
ಮಸಗುವುದು ಪರಿತಾಪ ತನುವನು
ಮುಸುಕುವುದು ಮನ ಮಱುಗುವುದು ಕಳವಳಿಸುವುದು ಧೈರ್ಯ ।
ಮಸೆದ ಶರವೊಡಲೊಳಗೆ ಮುಱಿದವೊ-
ಲುಸುರಿಗುಬ್ಬಸವಾಯ್ತು ಬಲ್ಲೊಡೆ
ಬೆಸಸು ಮುರಹರ ಹಿರಿದು ಬಳಲಿಸಬೇಡ ಹೇಳೆಂದ ॥ ೯೭ಅ ॥

ಅಳಿಯುನಳಿವನು ಹೇಳಬಾರದು
ತಿಳಿಯು[1]ಲರಿ[1]ದೆಂದೆನುತ ಚಿಂತಿಸಿ
ನಳಿನಲೋಚನ ಬರುತ ಕಂಡನು [2]ಘನ[2]ಸರೋವರವ ।
ಇಳಿದು ರಥವನು ರಣಪರಿಶ್ರಮ-
ಗಳೆವೆನೆನುತ ಕಿರೀಟಿಸಹಿತಾ
ಕೊಳನ ಹೊಕ್ಕನು ಜಗದುದರಲೀಲಾವತಾರಕನು ॥ ೯೮ ॥

---

೯೭. [1]ಗಲಾ (ಅ). [2]ಗೆ (ಅ). [3]ದುರುಗಿದವು ಕಡುಶೋಕ (ಅ ಕುವೂ).
[ಹರಿಕಿರೀಟಿ–ಕೃಷ್ಣಾರ್ಜುನರು. ವೆಂಠಣಿಸು–ವ್ಯಾಪಿಸು, ಹರಡು, ಹೆಚ್ಚಾಗು. ಉರಿ–(ದುಃಖದ) ಬೆಂಕಿ. ಮಸಗು–ವಿಜೃಂಭಿಸು. ಉರವಣಿಸು–ಅಧಿಕವಾಗು. ಆಕಸ್ಮಿಕ–ಅನಿರೀಕ್ಷಿತ].

೯೮. [1]ಲಿಪ (ಅ ಕುವೂ). [2]ವರ (ಅ ಕುವೂ).
[ಜಗದುದರಲೀಲಾವತಾರಕ–ಜಗತ್ತನ್ನು ಹೊಟ್ಟೆಯಲ್ಲಿ ಅಡಗಿಸಿಕೊಂಡು ಅದನ್ನು ಯಶೋದೆಗೆ ಬಾಯಲ್ಲಿ ತೋರಿಸುವ ಲೀಲೆಯನ್ನು ಮೆರೆದ ಅವತಾರಪುರುಷ].

ಎಲೆ ಸುರೇಂದ್ರಕುಮಾರ ಕೇಳ್ ನಿ-
ನ್ನೊಲುಮೆಯಣುಗನು ರಣದೊಳಗೆ ರಿಪು-
ಬಲವ [1]ಕೋಳಾಹಳಿಸಿ[1] ಕೌರವಸುತರ ನೂರ್ವರನು ।
ತಲೆಯನರಿದೀಡಾಡಿ [2][ಅ][2] ಸುರ-
ಲಲನೆಯರ ಚೆಲುವಿಂಗೆ [3]ತಾ ಮನ-
ವೊಲಿದು ಹಾಯ್ದನೆನುತ್ತ ಹರಿ ನರಗಖಿಳ ಮುಳುಗಿದನು[3] ॥ ೯೯ ॥

ಆ ಸುತನ ಶೋಕದ[1]ಲಿ ಕಿವಿಗಾ-[1]
ಕಾಶವಚನದೊಳಾಯ್ತು ಶಿವಶಿವ
ವಾಸುದೇ[2]ವ ಎ[2]ನುತ್ತ ಫಲುಗುಣ ಜಲವ ಬಗಿದೆ[3]ದ್ದ[3] ।
ಗಾಸಿಯಾದನು ಮಗನಕಟ ಸಂ-
ತೋಷವೆಲ್ಲಿಯದೆನುತ ಮಾಯಾ-
ವೇಷಿಯನು ಕರೆದನು ವಿಲೋಚನವಾರಿಪೂರದಲಿ ॥ ೧೦೦ ॥

ಎನಲು ಧಿಮ್ಮನೆ ಕೊಳನೊಳಗೆ ಸಿಂ-
ದನು ಮುಕುಂದನು ಸುರಪಸುತನಾ-
ನನವ ನೋ[1]ಡುತದೇನದೇನೆನೆ[1] ನರ ಬಿಕ್ಕಿಬಿರಿದಳುತ ।
ತನಯನಳಿಯದೆ ಮಾಣ ಗಗನ-
ಧ್ವನಿಯೊಳಾದುದು ವಚನ ಕರ್ಣಕೆ
ಮೊನೆಯ ಸರಳೆನೆ ಬಾರೆನುತ ರಥವೇಱಿಸಿದ ನರನ ॥ ೧೦೧ ॥

---

೯೯. [1]ತೊತ್ತಳದುಳಿದು (ಅ). [2]ತಾ (ಅ). [3]ಸೋತನು ಕಳಿದನೆನುತವೆ ನುಡಿದು ಹರಿ ಮುಳುಗಿದನು ಜಲದೊಳಗೆ (ಅ).
[ಕೋಳಾಹಳಿಸಿ–ಕೋಲಾಹಲಕ್ಕೆ ಒಳಗುಮಾಡಿ, ಕ್ಷೋಭೆಗೊಳಿಸಿ. ಹಾಯ್ದನು–ಧಾವಿಸಿದನು, ಹೊರಟು ನಡೆದನು].

೧೦೦. [1]ಮಜುಕವಾ (ಅ). [2]ವಾ ಯೆ (ಅ). [3]ದ್ದು (ಅ).
[ಆಕಾಶವಚನ–ಆಕಾಶವಾಣಿ. ಬಗಿದು–ಸೀಳಿಕೊಂಡು. ಗಾಸಿಯಾಗು–ಕ್ಲೇಶಪಡು, ತೊಂದರೆಗೊಳ್ಳು. ಮಾಯಾವೇಷಿ–ಕೃಷ್ಣ. ವಿಲೋಚನವಾರಿ ಪೂರ–ಕಣ್ಣೀರಿನ ಪ್ರವಾಹ].

೧೦೧. [1]ಡಿ ಯುದೇನೆನಲು (ಅ).

*ತೆಗೆವುತಿವೆ ಕಣ್ಣಿನಲಿ ಕಂಬನಿ
ಹೊಗೆವುತಿದೆ ಶೋಕಾಗ್ನಿ ಜಠರದಿ
ಬಗೆವುತಿದೆ ಬಾಲಕನ ಮೋಹದ ಕಲೆಯು ನೆನೆನೆನೆದು ।
ಮಗನ ಕಾಂಬೆನೊ ಕಾಣೆನೋ ಸಂ-
ಪಗೆಯೆಸಳ ನಾಸಿಕದ ಕಂದನ-
ನಗಲುವೆನೊ ನಾನಱಿಯೆನಭಿಮನ್ಯುವನು ಹೇಳೆಂದ ॥ ೧೦೨ ॥

**ತಂದೆ ಧೃತಿಗೆಡಬೇಡ ನಡೆ ನಿಜ-
ನಂದನನನಾರೈವೆವೆನುತೈ-
ತಂದು ಕೋಟೆಯ [1]ಕಳಿ[1]ದು ಬಂದರು ರಾಜಬೀದಿಯಲಿ ।
ಕಂದನಿರವನು ಕಾಣಲಾಪೆನೊ
ಕೊಂದರೆಂಬುದ ಕೇಳ್ವೆನೋ ಎನ-
ಗಿಂದು ಗತಿಯೇನೆನುತ ಬಂದನು ರಾಜಮಂದಿರಕೆ ॥ ೧೦೩ ॥

ಹರಿ ರಥವನಿಳಿದಂತೆ ಪಾರ್ಥನ
ಭರದ ಕೋಪವ ಕಂಡು ನಿಜಮಂ-
ದಿರಕೆ ಮೆಲ್ಲನೆ ಜುಣುಗಿದನು ಯಾದವರ ಗಡಣದಲಿ ।
ವರಧನುವ ಶಸ್ತ್ರಾಸ್ತ್ರಕವಚವ-
ನಿರಿಸಿ ಕೈಗೊಡು[1]ವವರ್ಗೆ[1] ಕನಲು-
[2]ತ್ತ[2]ರಮನೆಯ ಪೊಕ್ಕನು ಯುಧಿಷ್ಠಿರರಾಯನೋಲಗವ ॥ ೧೦೪ ॥

---

೧೦೨. ತೆಗೆ–ಸುರಿ. ಬಗೆ–ಯೋಚಿಸು, ಚಿಂತಿಸು. ಕಲೆ–ಕಾಂತಿ, ತೇಜಸ್ಸು].

೧೦೩. [1]ಕಳೆ (ಅ).
[ಧೃತಿ–ಧೈರ್ಯ. ಆರೈ–ವಿಚಾರಿಸಿಕೊ. ಕಳಿ–ದಾಟು].

೧೦೪. [1]ವವರ (ಅ). [2]ತ ಆ (ಅ).
[ಭರದ–ಆವೇಶದಿಂದ ಕೂಡಿದ, ರಭಸದ. ಜುಣುಗು–ಜಾರು. ಕೈಗೊಡುವವರು–ಕೈಯಾಸರೆ ಕೊಡುವವರು. ಕನಲು–ಕೋಪಿಸಿಕೊ].

---

* ಈ ಪದ್ಯ 'ಅ ಕುಮಾ'ಗಳಲ್ಲಿಲ್ಲ; ಪೇಟೆ ಮುದ್ರಣದಲ್ಲಿದೆ (ಸಂ. ೯, ಪ. ೧೦).
** ೮ನೇ ಸಂಧಿ, ೧೦ನೇ ಪದ್ಯ.

ತಲೆಯು ಮುಸುಕಿನ ಕಂಗಳೊಱಿತೆಯ
ಜಲದ ದುಗುಡದ ಧರಣಿಪಾಲಕ
ಫಲುಗುಣನನೆತ್ತಿದನು ತಲೆಗುತ್ತಿದನು ಭೀತಿಯಲಿ ।
ಮಲಗಿದನು ವರಭೀಮ [1]ಸಭೆ
ತಲ್ಲಳಿಸಿತರ್ಜುನ[1] ಬಂದನೆನೆ ಬಸ-
ವಳಿದು ಬಂದು ಸುಭದ್ರೆ ಪತಿಯಂಘ್ರಿಯಲಿ ಹೊರಳಿದಳು ॥ ೧೦೫ ॥

ಕಂದನಾವೆಡೆ ತನ್ನ [1]ಬಿರುದಿನ
ಸಿಂಧ[1]ವಾವೆಡೆ ತನುಜ [2]ನವಪೂ-
ರ್ಣೇಂದು[2]ವಾವೆಡೆ ಹೇಳೆನುತ ತೊದಳಿಸುತ ಫಲುಗುಣನು ।
[3]ಕಂದಿದನು ಕಡುಮೋಹದಲಿ ಮನ-
ನೊಂದು ಸುತಶೋಕದಲಿ[3] [4]ಬೆದಬೆದ[4]
ಬೆಂದು ಯಮರಾಜನ ಕುಮಾರನ ಮೊಗವ ನೋಡಿದನು ॥ ೧೦೬ ॥

ಬರಲು ಬಹನಿದಿರಾಗಿ [1]ರಥವನು
ಹರಿದು[1] *[ತಾ] ಬಂದೇಱುವನು ನಿಜ-
ಕರತಳದಿ ಮೈದಡವಿ ಗಾಯವ ನೋಡಿ ಮಱುಗುವನು ।
ತರಳನಿದಿರೈತರಲು ತನ್ನಯ
ಧುರದ ಬಳಲಿಕೆ ಹಿಂಗುವುದು [2]ಹೇ-[2]
ಳರಸ ಕಂದನ [3]ಸುಳುಹ[3] ಕಾಣೆನು ಕರಸಿ ತೋಱಿಂದ ॥ ೧೦೭ ॥

---

೧೦೫. [1]ಸೇನನು ಸಲೆ ನರನು ತಾ (ಅ).
[ತಲೆಗುತ್ತು–ತಲೆಯನ್ನು ಬಗ್ಗಿಸು. ಬಸವಳಿ–ಮೈಮರೆ].

೧೦೬. [1]ಮೋಹದ ಸಿಂಧು (ಅ). [2]ವನ ಮಾಕಂದ (ಅ ಕುಮಾ). [3]ನೊಂದು ಮನದಲಿ ಪಾರ್ಥ ನಾ ಸತಿಯಂದವನು ಕಾಣುತ್ತ (ಅ ಕುಮಾ). [4]ಬೆದೆಬೆದೆ (ಕುಮಾ).
[ಸಿಂಧ–ಬಾವುಟ, ಪತಾಕೆ].

೧೦೭. [1]ತನ್ನಯ ವರರಥವ (ಅ ಕುಮಾ). [2]ಕೇ (ಅ). [3]ಸುಳಿವ (ಅ ಕುಮಾ).
[ಹರಿ–ಓಡು. ಕರತಳ–ಅಂಗೈ].

---

* 'ಶ್ರೀ' ಸೂಚಿತ ಪಾಠ.

ಮಗನ ಮಣಿರಥವೆಲ್ಲಿ ಹೂಡಿದ
ವಿಗಡತೇಜಗಳೆಲ್ಲಿ ಮಣಿಮೇಳ-
ಗುಗಳ ಛತ್ರವದೆಲ್ಲಿ ಚಾಮರವೆಲ್ಲಿ ಧನುವೆಲ್ಲಿ ।
ಹಗೆಯುರಲಿ ಹತವಾದನೇ ಹಾ
ಸುಗುಣನಿಲ್ಲಿಗೆ ಬಾರನೇ ತಾ
ಮೊಗವ ಕಾಣದೆ ಹೋದೆನೇ ಎನಗೇನು ಗತಿಯೆಂದ ॥ ೧೦೮ ॥

ಕಂದ ಬಾರೋ ಯೆನ್ನ ಮನಕಾ-
ನಂದ ಬಾರೋ ಬಾಲಕರ ಪೂ-
ರ್ಣೇಂದು ಬಾರೋ ರಿಪುಕುಲಾಂತಕ ನಿಪುಣ ಮುಖದೋಜಾತ ।
ತಂದೆ ನಿನಗೆನ್ನಲ್ಲಿ ಋಣಸಂ-
ಬಂಧ ಸವೆದುದೆ ಶಿವಶಿವಾ ತಾ
ಮಂದಭಾಗ್ಯಂಗಣುಗ ದಕ್ಕುವನಲ್ಲ ಎನಗೆಂದ ॥ ೧೦೯ ॥

ವೀರರಿನಿಬರು ನೆರೆದು ರಿಪುಪರಿ-
ವಾರವನು ಹೊಗಲಂಜಿ ಹೊಜಗಣ
ಮಾರಿ [1]ಹೊಜಗೇ ಎಂಬ ಪೋಲ್[1]ನಂದನನ [2]ನೂಕಿ[2]ದಿರಿ ।
ಆರ ನಂಬಲುಬಹುದು ನಿಮಿಷವು
ದೂರ ತಾ ತೊಲಗಿದೊಡೆ ತನ್ನ ಕು-
ಮಾರನಿದ್ದರೆ ಹಱಿವನೆನೆದಿರಿ ಹೊಲ್ಲೆಹೇನೆಂದ ॥ ೧೧೦ ॥

ಕೆಡೆನುಡಿದು ಫಲವೇನು ಸಾಕಿ-
ನ್ನೊಡೆಯ[1]ನಿ[1]ಲ್ಲದ ವಸ್ತುವಾದೆನು
[2]ಕಡೆಗೆ ಧರ್ಮಜ[2] ಹೇಳು ಕೊಂದ[3]ವನಾ[3]ರು ನಂದನನ ।
ಕಡುಹಗೆಯುದಾರವರ ಬಲದಲಿ
ನುಡಿ ನಿದಾನವನವನ ಜೀವಕೆ
ಹಿಡಿ ಮಹೀಪತಿ ಸಂಚಕಾರವನೆಂದನಾ ಪಾರ್ಥ ॥ ೧೧೧ ॥

---

೧೦೯. [ರಿಪು ಕುಲಾಂತಕ–ಶತ್ರುಗಳ ಕುಲಕ್ಕೆ ಯಮಸ್ವರೂಪನಾದವನು. ಸವೆ–ತೀರಿ ಹೋಗು].

೧೧೦. [1]ಹೊರ ಹೊರಗೆಂಬವೊಲು (ಅ). [2]ನಿಕ್ಕಿ (ಅ).
[ಹಱಿವು–ಅಂಶ, ಕೊನೆ, ತೀರ್ಮಾನ. ಹೊಲ್ಲೆಹ–ನೀಚತನ, ಕೇಡು, ಕೆಡುಕು].

೧೧೧. [1]ರಿ (ಅ ಕುಮೂ). [2]ನುಡಿಯುಧಿಷ್ಠಿರ (ಅ). [3]ರಾ (ಅ).
[ಕೆಡೆನುಡಿ–ನಿಂದಿಸು, ದೋಷಾರೋಪಣೆ ಮಾಡು. ಕಡುಹಗೆ–ಪರಮಶತ್ರು. ನಿದಾನ–ಕಾರಣ, ಪರೀಕ್ಷೆ, ಪರಿಶೀಲನೆ. ಸಂಚಕಾರ–ಕೇಡು.

ಹೇಳಿ ಫಲವೇನಿನ್ನು [1]ಶೋಕ-
ಜ್ವಾಲೆಗಿಂಧನವೆನ್ನ ನುಡಿ[1] ರಿಪು-
ಜಾಲವನು ನೀ ಖಂಡಿಗಳೆ ಬಹೆವಾವು ಬಳಿಸಲಿಸಿ ।
ಕಾಳಿಗವ ಜಯಿಸುವೆವು ನಡೆ ಯೆನೆ
ಬಾಲನುರವಣಿಸುತ್ತ ಮಸಗಿದ
ಕಾಲರುದ್ರನ ರೂಪುದಾಳ್ದನು ವೈರಿಸೇನೆಯಲಿ ॥ ೧೧೨ ॥

ಅರಸು ಮಕ್ಕಳ ಕೊಂದನೈ ನೂ-
ರ್ವರನು ಮೂಜಕ್ಷೋಣಿ ಸೇನೆಯ-
ನೊರಸಿದನು ಮಸೆಗಾಣಿಸಿದನಗ್ಗದ ಮಹಾರಥರ ।
ಧುರವ ಗೆಲಿದನು ಪಡಿತಳಿಸಿ ನಾ-
ವುರವಣಿಸಲಡಹಾಯ್ದು ನಮ್ಮನು
ಹರನ ವರವುಂಟೆಂದು ಗೆಲಿದನು ಸಿಂಧುಭೂಪಾಲ ॥ ೧೧೩ ॥

ವಿರಥನಾದನು ಭೀಮ ನಕುಲನು
ತಿರುಗಿದನು ಸಹದೇವ [1]ಕೊರಳಲಿ
ಹರಣವಿರೆ[1] ಹಿಮ್ಮೆಟ್ಟಿದ[2]ನು[2] ದ್ರುಪದಾದಿ ನಾಯಕರು ।
ಧುರದೊಳೋಸರಿಸಿದರು ಸೈಂಧವ
ಹರನ ವರದಲಿ ನಮ್ಮ ಗೆಲಿದನು
ಮರಣವನು ಕಂದಂಗೆ ತಂದವನವನು ಕೇಳೆಂದ ॥ ೧೧೪ ॥

---

೧೧೨. [1]ವಹ್ನಿಜ್ವಾಲೆಯಿಂದಿನ ನೋಹರವು (ಅ).
[ಖಂಡಿಗಳೆ-ಕತ್ತರಿಸಿ ನಾಶಮಾಡು, ನಿವಾರಿಸು. ಬಳಿಸಲಿಸಿ (ಬಳಿಸಲ್)-ಹಿಂಬಾಲಿಸಿ, ಸಹಾಯಕ್ಕಾಗಿ].

೧೧೩. [ಒರಸು-ಧ್ವಂಸಮಾಡು. ಮಸೆಗಾಣಿಸು-ಆಯುಧದ ಹರಿತವನ್ನು ಕಾಣಿಸು, (ಆಯುಧದಿಂದ) ಗಾಯಗೊಳಿಸು. ಅಗ್ಗದ-ಶ್ರೇಷ್ಠರಾದ. ಪಡಿತಳಿಸು-ಪ್ರತಿಭಟಿಸು, ಎದುರಾಗು].

೧೧೪. [1]ಕೊರಳಿನ ಹರಣದಲಿ (ಅ ಕುಮಾ). [2]ರು (ಅ).
[ಕೊರಳಲಿ ಹರಣವಿರೆ-ಪ್ರಾಣ ಹೋಗುವ ಸ್ಥಿತಿಯಲ್ಲಿ, ಕಂಠಗತಪ್ರಾಣನಾಗಿರಲು, ಪ್ರಾಣವಾಯು ಕೊರಳಿನವರೆಗೆ ಏರಿರಲು. ಓಸರಿಸು-ಹಿಮ್ಮೆಟ್ಟು. ಸೈಂಧವ-(ದುರ್ಯೋಧನನ ತಂಗಿಯಾದ ದುಶ್ಶಳೆಯ ಗಂಡ) ಜಯದ್ರಥ].

ಇನ್ನು ಹೇಳುವುದೇನೆನುತ ಕೈ-
ಸನ್ನೆಯಲಿ ಮಾತಾಡಿ ಭೂಪತಿ
ಬೆನ್ನ ಕಿತ್ತನು ಭೀಮಸೇನನ ವಿಪುಳವಕ್ಷದಲಿ ।
ತನ್ನ ಮಱೆದನು ನಯನಧಾರಾ
ಭಿನ್ನ [1]ಚಾರು ಕಪೋಲನಿರೆ[1] ಸಂ-
ಪೂರ್ಣಶೋಕಾಗ್ನಿಯಲಿ ಬೆಂದುದು [2]ಫಲುಗುಣನ[2] ಹೃದಯ ॥೧೧೫॥

ಘನ ವಿಕರ್ಮದ ವಿಲಗದಲಿ ನಿಜ-
ತನುಜ ಶೋಕದ ತಗಹಿನೊಳಗ-
ರ್ಜುನನು ಧೈರ್ಯದರಿದ್ರನಾದನದೇನು ಹೇಳುವೆನು ।
ಮನ ಬಳಲಿ ಮೈಮಱೆದು ತಾಪದಿ
ಕನಸ ಕಂಡನು ಝಾಡಿಕೆ ಮಿಗೆ ಝೊ-
ಮ್ಮನ ಸುಷುಪ್ತಿಯೊಳಿದ್ದು ನಿಮಿಷದೊಳೆದ್ದು ಕಣ್ದೆಱೆದಾ ॥ ೧೧೬ ॥

ಅಳಲ ಮುಕ್ಕುಳಿಸಿದನು [1]ಮೋಹ[1]ದ
ಬೆಳವಿಗೆಯ ಗವಸಣಿಸಿದನು ಕಳ-
ವಳಿಕೆ ಹಿಂಗಿದುದಶ್ರುಜಲವನು ಕಣ್ಣಿನಲಿ ಕುಡಿದು ।
ಪ್ರಳಯರುದ್ರನ ಕೋಪಶಿಖಿ [2]ವೆ-
ಗ್ಗಳಿಸಿತೆನೆ[2] ಕಂಗಳಲಿ ಕಿಡಿಗಳು
ತುಳುಕಿದವು ರೌದ್ರಾನುಭಾವದ [3]ರಸದ ಭಂಗಿಯಲಿ[3] ॥ ೧೧೭ ॥

---

೧೧೫. [1]ವಾದೊಡೆ ಮುಸುಡ ಮಿಗೆ (ಅ). [2]ಧರ್ಮಜನ (ಅ), ಸಕಲಜನ (ಅ ಕುಮಾ); ಸ್ತ್ರೀಪಾ (ಅ ಪಾಠಾಂತರ).

೧೧೬. [ವಿಕರ್ಮ-ಮೋಸ, ಕುತಂತ್ರ. ವಿಲಗ-ವೇದನೆ, ಸಂಕಟ, ಪೀಡನೆ. ತಗಹು-ಹಿಡಿತ, ಪ್ರತಿಬಂಧಕ, ಬಿಗುವು. ಝಾಡಿಕೆ-ತೀವ್ರತೆ. ಝೊಮ್ಮು-ಮೈಮರೆವು. ಸುಷುಪ್ತಿ-ಗಾಢನಿದ್ರೆ].

೧೧೭. [1]ರೋಷ (ಅ). [2]ಕಳವಳಿಸಿತೆನೆ (ಅ). [3]ಕೋಪ ಕಿಡಿಯುಡಲು (ಅ).
[ಅಳಲು-ದುಃಖ. ಮುಕ್ಕುಳಿಸು-ಹೊರಕ್ಕೆ ಹಾಕು, ಕಳೆದುಕೊ. ಗವಸಣಿಸು-ಮುಸುಕು ಹಾಕು. ವೆಗ್ಗಳಿಸು-ಅಧಿಕವಾಗು, ಹೆಚ್ಚಾಗು, ಮಿತಿಮೀರು. ರೌದ್ರಾನುಭಾವ-ರೌದ್ರರಸಭಾವದ ಪ್ರಕಟನೆ].

ಹೇಳು ಹೇಳೆನ್ನೊಮ್ಮೆ ಮಾರಿಯ
ಮೇಳವಾಡಿದನೇ ಜಯದ್ರಥ-
ನಾಳುತನವನು ಸಮರದಲಿ [1]ನಮ್ಮೊಡನೆ[1] ತೋಱಿದನೆ ।
ನಾಳೆ ಬೈಗಿಂದೊಳಗೆ ರಿಪುವನು
ಸೀಳುವೆನು ಸೀಳದೊಡೆ ಧರ್ಮಜ
ಕೇಳು ಭಾಷೆಯನೆನುತ ಮಿಗೆ ಗರ್ಜಿಸಿದನಾ ಪಾರ್ಥ ॥ ೧೧೮ ॥

ಹರನ ದುರ್ಗದೊಳಿರಲಿ ಮೇಣಾ
ಹರಿಯ ಕಡಲೊಳಗಿರಲಿ ಬ್ರಹ್ಮನ
ಕರಕಮಂಡಲದೊಳಗೆ ಹುದುಗಲಿ ರವಿಯ ಮಱೆಹೊಗಲಿ ।
ಉರಗ[1]ಭು[1]ವನದೊಳಿರಲಿ ಮೇಣ್ ಸಾ-
ಗರವ ಮುಳುಗಲಿ ನಾಳೆ ಪಡುವಣ-
ತರಣಿ ತೊಲಗದ ಮುನ್ನ ಕೊಲುವೆನು ವೈರಿಸೈಂಧವನ ॥ ೧೧೯ ॥

ಗುರುವಿಘಾತಿಯ ವೇದನಿಂದಾ-
ಪರನ ಪರದಾರಾಭಿಗಾಮಿಯ
ಹರಮುರಾರಿಯಭೇದವಾದಿಯ ವಿಪ್ರನಿಂದಕನ ।
ಪರಗುಣಾಸೂಯಕನ ಹಿಂಸಾ-
ಪರನ ಪಿಸುಣನ ಶಠನ ಕೃಪಣನ
ನರಕವಾಗಲಿ ಕೊಲ್ಲದಿದ್ದರೆ ನಾಳೆ ಸೈಂಧವನ ॥ ೧೨೦ ॥

---

೧೧೮. [1]ತನ್ನೊಡನೆ (ಅ ಕುಮಾ).
[ಮಾರಿಯ ಮೇಳ-ಮಾರಿಯ ಎಂದರೆ ಮೃತ್ಯುದೇವತೆಯ ಜೊತೆಗೂಡುವಿಕೆ ಆಳುತನ-ಪರಾಕ್ರಮ. ಬೈಗು-ಸಂಜೆ].

೧೧೯. [1]ಭ (ಅ).
[ಹರನ ದುರ್ಗ-ಕೈಲಾಸ ಪರ್ವತ. ಹರಿಯ ಕಡಲು-ಕ್ಷೀರಸಾಗರ. ಉರಗಭುವನ ಸರ್ಪಗಳ ಲೋಕ, ಪಾತಾಳ. ಪಡುವಣತರಣಿ-ಪಶ್ಚಿಮ ದಿಕ್ಕಿನ ಸೂರ್ಯ ಮುಳುಗುತ್ತಿರುವ ಸೂರ್ಯ].

೧೨೦. [ಗುರುವಿಘಾತಿ-ಗುರುವನ್ನು ಕೊಂದವನು. ಪರದಾರಾಭಿಗಾಮಿ-ಪರಸ್ತ್ರೀಯೊಡ ಸಂಭೋಗಿಸುವವನು. ಹರಮುರಾರಿಯ ಭೇದವಾದಿ-ಹರಿಹರರಲ್ಲಿ ಭೇದ ಮಾಡ ಪವನು. ವಿಪ್ರ-ಬ್ರಾಹ್ಮಣ. ಪರಗುಣಾಸೂಯಕ-ಇತರರ ಗುಣವನ್ನು ಕಂಡ ಹೊಟ್ಟೆಕಿಚ್ಚು ಪಡುವವನು. ಪಿಸುಣ-ಚಾಡಿಕೋರ. ಶಠ-ಮೂರ್ಖ, ದುಷ್ಟ ಕೃಪಣ-ಲೋಭಿ, ಜಿಪುಣ].

ನಾಳೆ ಖಚರೀ ಜನದ [1]ತೊಡವಿನ-[1]
[2]ತೋಳನವ[2]ನಸು [3]ನೆಮ್ಮ[3]ದಿರ್ದೊಡೆ
ಕಾಳೆಗದೊಳೆನ್ನೊಡಲ [4]ಬಿಸುಡುವೆನ[4]ಗ್ನಿಕುಂಡದಲಿ ।
ಕೇಳು ಧರ್ಮಜಯೆಂಬ ನುಡಿ[5]ಗಳು[5]
ಕಾಳೆಗದ ಸೊಗಸಾ[6]ಗೆ[6] ಲಕ್ಷ್ಮೀ-
ಲೋಲ[7]ನೈತಂದರ್ಜುನನ ಹೊಗಳಿದನು ಪತಿಕರಿಸಿ[7] ॥ ೧೧ ॥

ತೀರಿತಿನ್ನೇನರಿನೃಪನ ಸಂ-
ಸಾರ ನೀನೂರ್ಜಿಸಿದ ನುಡಿಗಳ-
ನಾರು ಕಳಚಲು ಬಲ್ಲರಗ್ಗದ ದೇವದೈತ್ಯರಲಿ ।
ವೀರರಾಮನ ನುಡಿಗೆ ರಾಮನು-
ದಾರಬಾಣಕೆ ನಿನ್ನ ನುಡಿಗಳು
ಕೂರಲಗು ಸಮಜೋಳಿ ಜಗದೊಳಗೆಂದನಸುರಾರಿ ॥ ೧೨ ॥

[1]ಹರಿದು ಚರರಾ ಪಾರ್ಥನಾಡಿದ[1]
ನಿರುಪಮಿತಗಾಢಪ್ರತಿಜ್ಞೆಯು
ಚರಿತವನು ಕೌರವನ ಸಭೆಯಲಿ ತಂದು ಹರಹಿದರು ।
ಮರಣ ಸೈಂಧವಗಲ್ಲದಿರ್ದೊಡೆ
ಮರಣ ಪಾರ್ಥಂಗಲ್ಲ[2]ದಿನ್ನಿದ[2]
ಪರಿಹರಿಸುವುದ ಕಾಣೆವೆಂದರು [3]ನಾಳಿನದ್ಭುತವ[3] ॥ ೧೩ ॥

---

೧೧. [1]ಕುಚಯುಗ (ಅ). [2]ಹೂಳಲ (ಅ). [3]ವೊರಗ (ಅ). [4]ಬಿಡುವೆನು ಅ, (ಅ). [5]ಗಳು (ಅ). [6]ಗಿ (ಅ). [7]ಕೇಳುತ ಬಂದು ಪಾರ್ಥನ ಬಿರುದ ಹೊಗಳಿದನು (ಅ ಕುಮಾ).

[ಖಚರೀಜನ-ಗಂಧರ್ವ ಸ್ತ್ರೀಯರು. ತೊಡವು-ಆಭರಣ, ಒಡವೆ. ಅಸು-ಜೀವ, ಪ್ರಾಣ. ನೆಮ್ಮು-ಒರಗಿಕೊಳ್ಳು, ಆಶ್ರಯಿಸು. ಪತಿಕರಿಸು-ಅಂಗೀಕರಿಸು, ಒಪ್ಪು].

೧೨. [ದೈತ್ಯ-ರಾಕ್ಷಸ. ವೀರರಾಮ-(ಕ್ಷತ್ರಿಯರನ್ನು ಸಂಹಾರ ಮಾಡುವುದಾಗಿ ಪ್ರತಿಜ್ಞೆ ಮಾಡಿದ) ಪರಶುರಾಮ. ಉದಾರಬಾಣ-ವ್ಯರ್ಥವಾಗದ ಶ್ರೇಷ್ಠ ಬಾಣ. ಕೂರಲಗು-ಹರಿತವಾದ ಕತ್ತಿ. ಸಮಜೋಳಿ-ಸರಿಜೋಡಿ].

೧೩. [1]ಇರುಳುಬೇಹಿನ ಚರರು ಪಾರ್ಥನ (ಅ ಕುಮಾ). [2]ದೆಸೆಯಲಿ (ಅ ಕುಮಾ). [3]ಚರರು ಭೂಪತಿಗೆ (ಅ ಕುಮಾ).

[ಹರಿ-ಓಡು. ನಿರುಪಮಿತ-ಹೋಲಿಕೆಯಿಲ್ಲದ, ಅಸಾಧಾರಣವಾದ. ಚರಿತ-ಸಂಗತಿ. ಪರಿಹರಿಸು-ನಿವಾರಿಸು, ಹೋಗಲಾಡಿಸು].

ಏನ ಹೇಳುವೆನರ್ಜುನನು ನಿಜ-
ಸೂನು ಮಡಿಯೆ ದುರಾಭಿ[1]ಘಾತದೊ-
ಳೀ[1]ನನೆಂದನು [2]ಕೇ[2]ಳಿರೈ ಕರ್ಣಾದಿನಾಯಕರು ।
ತಾನು ಗಡ ಸೈಂಧವನ [3]ತಲೆಯು[3]ನು
ಭಾನುವಡಗದ ಮುನ್ನ [4]ತೆಗೆವೆನು[4]
ಹೀನ[5]ವಾ[5]ದೊಡೆ ಹೊಗುವೆನೆಂದನು ಹವ್ಯವಾಹನನ ॥ ೧೨೪ ॥

ಕೊಂದವನು ದುಶ್ಯಾಸನನ ಮಗ
ಬಂದುದಪ[1]ವಾದ[1]ವು ಜಯದ್ರಥ-
ಗಿಂದಿವನ ಪತಿಕರಿಸಬೇಹುದು ರಣದಲರ್ಜುನನ ।
ಮುಂದುಗೆಡಿಸಲುಬೇಕು ಭೀಷ್ಮರು
ಸಂದ ಬಳಿಕೆಮಗಾಪ್ತ[2]ಹಿತವರು[2]
ತಂದೆ [3]ನೀವೆಂ[3]ದೆಱಗಿದನು ನೃಪ [4]ಗುರುವಿಸಂಘ್ರಿಯಲಿ[4] ॥ ೧೨೫ ॥

ವ್ಯೂಹವನು ರಚಿಸುವೆನು ನಾಳಿ[1]ನೊ-
ಳಾ[1]ಹವಕೆ ತಳತಂತ್ರವೊಂದೇ
ಮೋಹರಕೆ ನಡೆತರಲಿ ಷಡುರಥರಾದಿ[2]ನಾಯಕರು[2] ।
ಸಾಹಸವನುದಯದಲಿ ತೋಱುವೆ
ಬಾಹುಬಲ [3]ವಿಗೆ[3] ಸೈಂಧವನ ಮೈ-
ಗಾಹ ಬಲಿವೆನು [4]ರಾಯ ಚಿತ್ತೈಸೆಂದನಾ ದ್ರೋಣ[4] ॥ ೧೨೬ ॥

---

೧೨೪. [1]ಮಾನದಲೇ (ಅ ಕುಮಾ). [2]ಹೇ (ಅ). [3]ಶಿರವ (ಅ). [4]ಕೊಂಬೆನು (ಅ ಕುಮಾ). [5]ನಾ (ಅ ಕುಮಾ).
[ದುರಾಭಿಘಾತ (ದುರಭಿಘಾತ ಎಂದು ಸರಿಯಾದ ಶಬ್ದರೂಪ; ಛಂದಸ್ಸಿಗಾಗಿ ವ್ಯಾಕರಣವನ್ನು ಬಲಿಕೊಟ್ಟಿದೆ)–ಕ್ರೂರವಾದ ಬಲವಾದ ಪೆಟ್ಟು. ಭಾನುವಡಗದ-ಮುನ್ನ–ಸೂರ್ಯ ಮುಳುಗುವುದಕ್ಕಿಂತ ಮುಂಚೆ. ಹೀನವಾದೊಡೆ–(ಪ್ರತಿಜ್ಞೆ) ಕೆಟ್ಟುಹೋದರೆ. ಹೊಗು–ಪ್ರವೇಶಿಸು. ಹವ್ಯವಾಹನ–ಅಗ್ನಿ].

೧೨೫. [1]ರಾಧ (ಅ ಕುಮಾ). [2]ನೀನೇ (ಅ ಕುಮಾ). [3]ನೆ (ಅ ಕುಮಾ). [4]ಅವರ ಚರಣದಲಿ (ಅ ಕುಮಾ).
[ಮುಂದುಗೆಡಿಸು–ದಿಕ್ಕುಗೆಡಿಸು. ಸಂದಬಳಿಕ–ಇಲ್ಲವಾದಮೇಲೆ].

೧೨೬. [1]ನೊಂದಾ (ಅ). [2]ಯಾದವರು (ಕುಮಾ). [3]ವನು (ಅ ಕುಮಾ). [4]ಕಾಂಬೆ ಕೃಷ್ಣನ ನೆನಹ ಬಳಿಕೆಂದ (ಅ ಕುಮಾ).
[ಆಹವ–ಯುದ್ಧ. ಷಡುರಥರು–ಮಹಾರಥಿಕರಾದ ಆರು ಮಂದಿ ಪಾಂಡವ ಪಕ್ಷದ ಯಾದವರು (?). ಮೈಗಾಹು–ದೇಹರಕ್ಷಣೆ, ಮೈಗಾವಲು ವ್ಯವಸ್ಥೆ. ಬಲಿ–ಭದ್ರಪಡಿಸು].

ಮುಂದೆ ಶಕಟವ್ಯೂಹದಲಿ ನಡೆ-
ತಂದು ನಿಂದನು ದ್ರೋಣ ¹ನಿಜ¹ಬಲ-
²ದಂದವನು² ನಿಜ³ ನೋಡಿ ³ಮಕುಟನ ತೂಗಿ ನಲವಿನಲಿ³ ।
ಇಂದು ಗೆಲಿದೊಡೆ ಧರ್ಮಸುತನವ-
ರಿಂದುಕುಲದಗ್ಗಳರು ಬರಹೇ-
ಳೆಂದು ಭಟ್ಟರನಟ್ಟಿದನು ಪಾಂಡವರ ಪಾಳೆಯಕೆ ॥ ೨೭ ॥

ಅದೆ ಕಿರೀಟಿಯ ಸಿಂಹಗರ್ಜನೆ-
ಯದೆ ಸಿತಾಶ್ವನ ಬಿಲ್ಲ ಜೇವೊಡೆ-
ಯದೆ ಮುರಾರಿಯ ಮನಕೆ ¹ಮುಂಚುವ¹ ಹಯದ ಖುರಪಿನದ ।
ಇದೆ ವಿಜಯನಸ್ತ್ರೌಘವಿತ್ತಲು
ಕದನಕಾಲಾನಲನ ತೀವ್ರ²ತೆ-²
ಯಿದೆ ಯಮಸುತ ³ಹೆದಱದೆ³ಯು ಬಿರುದರು ಬಿಸುಟರುತ್ಸಾಹವ ॥೨೮॥

ಹರಿಯ ಬೊಬ್ಬೆ ರಥಾಶ್ವದಬ್ಬರ
ನರನ ಬಿಲು¹ಟ¹ಂಕಾರ ಕೇರಿನ
ಧರಧುರದ ಚೀತ್ಕಾರ ಹನುಮನ ಸಿಂಹನಿರ್ಘೋಷ ।
ಅರಿಬಲನ ಶಿವಿದುದು ಚತುರ್ಬಲ
ಹೊರಳಿ ಯೊಡೆದುದು ಸುಭಟರೆದೆ ಜ-
ರ್ಝರಿತ²ವಾಗಲು² ಪಾರ್ಥ ಹೊಕ್ಕನು ಸೈಂಧವನ ದಳವ ॥ ೨೯ ॥

---

೨೭. ¹ಸೇ (ಅ). ²ಸಂದಣಿಯ (ಅ). ³ನೋಡಿ ಕಿರೀಟವನು ತೂಗಿ (ಅ ಕುಮಾ).
[ಶಕಟವ್ಯೂಹ-ಬಂಡಿಯಾಕಾರದಲ್ಲಿ ಸೈನ್ಯದ ರಚನೆ. ನಿಜಬಲ-ತನ್ನ ಸೈನ್ಯ. ಅಂದ-ರೀತಿ, ಸ್ವರೂಪ. ಭಟ್ಟ-ಸೈನಿಕ, ಸೇವಕ].

೨೮. ¹ಮುಚ್ಚುವ (ಅ). ²ಕೆ (ಅ). ³ರದೆ (ಅ).
[ಕಿರೀಟಿ, ಸಿತಾಶ್ವ, ವಿಜಯ-ಅರ್ಜುನನ ಹೆಸರುಗಳು. ಜೇವೊಡೆ-ಹೆದೆಯನ್ನು ಮೀಟುವುದರ ಶಬ್ದ, ಧನುಷ್ಟಂಕಾರ. ಮನಕೆ ಮುಂಚುವ-ಮನೋವೇಗವನ್ನೂ ಮೀರಿಸುವ. ಅಸ್ತ್ರೌಘ-ಬಾಣಗಳ ಸಮೂಹ. ಕದನ ಕಾಲಾನಲ-ಯುದ್ಧದಲ್ಲಿ ಪ್ರಳಯಕಾಲದ ಅಗ್ನಿಸ್ವರೂಪನಾದವನು].

೨೯. ¹ಝೇ (ಅ). ²ವಾದುದು (ಅ ಕುಮಾ).
[ಹರಿ-ಕೃಷ್ಣ. ನರ-ಅರ್ಜುನ. ಧರಧುರ-ಅತಿಶಯ ರಭಸ. ನಿರ್ಘೋಷ-ನಾದ, ಗರ್ಜನೆ. ಹೊರಳು-ಪಕ್ಕಕ್ಕೆ ಸರಿ. ಒಡೆ-ಚೆಲ್ಲಾಪಿಲ್ಲಿಯಾಗು, ಚದರಿ ಹೋಗು].

*ಬೀಳುತಿರ್ದರು ಭಟರು ಶಂಕೆಯ
ಹೇಳಲೆನ್ನಳವಲ್ಲ ಕರಿತುರ-
ಗಾಳಿಯನೆ ನೆಱೆಸೀಳಿ ಬಿಸುಟನು ಪದ್ಮಸಂಖ್ಯೆಯಲಿ ।
ಕಾಳುಕಿಚ್ಚುಱೆಯಟ್ಟೆ ಶೈಲವ-
ನಾಳಿಗಳ ಸುಡುವಂತೆ ಕವಿ[1]ದೆಸು-[1]
ವಾಳ ತತ್ತಱದಱಿದನಕ್ಷೋಹಿಣಿಯ ನಿಮಿಷದಲಿ ॥ ೧೩೦ ॥

ನೊಂದು ಮರಳದೆ ಮಸಗಿ ಸೂರ್ಯನ
ನಂದನನು ತಾಗಿದನು ಗುರುಸುತ
ಮುಂದುವರಿದನು [1]ತಲೆಹಱಿದೊಡೆನ್ನಟ್ಟೆ ಕಲಿ[1]ಯೆನುತ ।
ಇಂದಿನಲಿ ಮಹನವಮಿ ತಲೆಗಳೆ-
ಗೆಂದು ಕವಿ[2]ದುದು[2] ಸಕಲಭಟರರ-
ವಿಂದಸಖ ಹೊದ್ದಿದನು ಮೆಲ್ಲನೆ ಪಶ್ಚಿಮಾಂಬುಧಿಯ ॥ ೧೩೧ ॥

ಮೇಲೆ ಬಿದ್ದುದು ಸೇನೆ ಸವೆಯದು
ನಾಳೆಪರಿಯಂತರೆಗಳಗೆ[1]ಗ[1]ನ-
ನಾಳುವನು ಜಲಧಿಯಲಿ ಕಾಣೆ[2]ನು[2] ವೈರಿಸೈಂಧವನ ।
ಹೇಳಿ ಫಲವೇನಿನ್ನು ವಹ್ನಿ
ಜ್ವಾಲೆ ಕೊಳ್ಳಲಿ ದೇಹವನು ಸಾ-
ಕೇಳು ಮುರಹರ ತೀರ ತಿರುಹಿನ್ನೆಂದನಾ ಪಾರ್ಥ ॥ ೧೩೨ ॥

---

೧೩೦. [1]ದನು (ಪೇ).

[ಪದ್ಮಸಂಖ್ಯೆ-ನೂರುಕೋಟಿ ಸಂಖ್ಯೆ. ಶೈಲವನಾಳಿ-ಬೆಟ್ಟ ಮತ್ತು ಕಾಡುಗಳ ಗುಂಪು. ಎಸುವ + ಆಳು-ಬಾಣ ಪ್ರಯೋಗಿಸುವ ಭಟರು, ಯೋಧರು].

೧೩೧. [1]ತರಹರಿಸದಿರಿಯಟ್ಟೆಕವಿ (ಅ). [2]ದರು (ಅ ಕುಮಾ).

[ಸೂರ್ಯನಂದನ-ಕರ್ಣ. ಗುರುಸುತ-ಅಶ್ವತ್ಥಾಮ. ಹಱಿದೊಡೆ-ಕತ್ತರಿಸಿ ಬಿದ್ದರೆ. ಅಟ್ಟೆ-ಮುಂಡ, ತಲೆಯಿಲ್ಲದ ದೇಹ. ಅರವಿಂದಸಖ-ಸೂರ್ಯ. ಹೊದ್ದು-ಸೇರು, ಸಮೀಪಿಸು].

೧೩೨. [1]ಯಿ (ಅ). [2]ವು (ಅ).

[ಸವೆ-ಮುಗಿ, ತೀರು. ಆಳು-ಮುಳುಗು].

---

* ಈ ಪದ್ಯವು 'ಅ' ಮತ್ತು 'ಕುಮಾ' ಪ್ರತಿಗಳಲ್ಲಿಲ್ಲ. ಪೇಟೆ ಮುದ್ರಣದಲ್ಲಿ 14ನೇ ಸಂಧಿಯ 38ನೇ ಪದ್ಯವಾಗಿ ಬಂದಿದೆ.

ಸಲಿಸಬೇಹುದು ಭಕುತ[1]ನಾ[1]ಡಿದ
ಛಲದ ಭಾಷೆಯನೆನುತ ರವಿಮಂ-
ಡಲಕೆ ಮಱೆ[2]ಯೊ[2]ಡ್ಡಿದನು ಮುರರಿಪು ವರಸುದರ್ಶನವ ।
ಕಳನೊಳಗೆ ಕತ್ತ[3]ಲಿಸಿತ[3]ಹಿತನ
[4]ಕೊ[4]ಲೆಗೆ ಕಾವಳ ಮಸಗಿದವೊಲರೆ-
ಗಳಿಗೆಯಲಿ ಸುಮ್ಮಾನವುಕ್ಕಿತು ಸಕಲಕುರುಬಲಕೆ ॥ ೧೩೩ ॥

ಸೆಱಗ ಬೀಸಿದರಾ[1]ಲಿ[1]ದರು ಬೊ-
ಬ್ಬಿಱೆ[2]ದರುರು[2]ಗಂಭೀರಭೇರಿಯು
ಬಿಱು[3]ದನಿಗಳ[3]ಬ್ಬರಿಸಿದವು ಗಬ್ಬರಿಸಿದವು ನಭವ ।
ತೆಱಹುಗೊಡುಗೊಡು ಭಾಷೆಗಾರನು
ಮೊಱೆದು ಹೋಗಲಿ ವಹ್ನಿಕುಂಡದೊ-
ಳೊಱಗುವುದ ನೋಡುವೆವೆನುತ ತ[4]ನಿ[4]ಗೆದಱೆತರಿಸೇನೆ ॥ ೧೩೪ ॥

ಹೊಲಬುದಪ್ಪಿದ ತಳಪಟದ ಹೆ-
ಬ್ಬುಲಿಯವೊಲು ನಿನ್ನಾತ ಸಿಲುಕಿದ
ನಿಲುಕಿ ನೋಡಿದನೆಲ್ಲಿ ಕೋಱಜರ್ಜುನನ [1]ತನ[1]ಗೆನುತ ।
ಉಲಿಯೆ ಸೈಂಧವನಿತ್ತ ಪಾರ್ಥನ
ಮುಳಿದು ಜಱಿದನು ಕೃಷ್ಣನಹಿತನ
ತಲೆಗೆ ಹರಹಿಡಿವಂಬ ಕೊಡು ಕೊಡು ಬೇಗ [2]ನೀನೆಂದ[2] ॥ ೧೩೫ ॥

---

೧೩೩. [1]ಮಾ (ಅ ಕುಮಾ). [2]ಮಾಡಿ (ಅ). [3]ರಿಸುವ (ಅ). [4]ತ (ಅ).
[ಅಹಿತ-ಶತ್ರು. ಕಾವಳ-ಕತ್ತಲೆ. ಸುಮ್ಮಾನ-ಸಂತೋಷ].

೧೩೪. [1]ಲಿ (ಅ). [2]ದುವರ (ಅ). [3]ದ ದನಿಯ (ಅ). [4]ನ (ಅ).
[ಸೆಱಗು-ವಸ್ತ್ರದ ಅಂಚು, ತುದಿ. ಅಲು-ಗರ್ಜಿಸು. ಗಬ್ಬರಿಸು-ಸೀಳು, ಭೇದಿಸು. ತೆಱಹುಗೊಡು-ಅವಕಾಶ ಕೊಡು. ಭಾಷೆಗಾರ-ಪ್ರತಿಜ್ಞೆ ಮಾಡಿದವನು. ಒಱಗು-ಸಾಯಿ. ತನಿಗೆದಱು-ಪೂರ್ತಿಯಾಗಿ ಚೆದರಿಹೋಗು, ಚಲ್ಲಾಪಿಲ್ಲಿಯಾಗು].

೧೩೫. [1]ನೆನ (ಅ ಕುಮಾ). [2]ಮಾಡೆಂದ (ಅ ಕುಮಾ).
[ಹೊಲಬುದಪ್ಪು-ದಾರಿ ತಪ್ಪು. ತಳಪಟ-ಮೈದಾನ, ಬಯಲು ಪ್ರದೇಶ. ನಿಲುಕಿ-ತುದಿಗಾಲಿನಲ್ಲಿ ನಿಂತು. ಉಲಿ-ಗಟ್ಟಿಯಾಗಿ ಕೂಗು, ಸಂತೋಷದಿಂದ ಕೂಗು. ಹರಹಿಡಿವ ಅಂಬು-ಪಾಶುಪತಾಸ್ತ್ರ].

ದೇವ ರವಿಯಸ್ತಮಿಸಿದನು ನೀ-
ನಾವುದುಚಿತವ ಕಂಡಿರೆನೆ ನಿನ-
ಗಾವ ಭಯ ಬೇಡಾಡಬಾರದು ತೊಡು ಮಹಾಶರವ |
ಈ ವಿರೋಧಿಯ ಕೆಡಹು ಸೂರ್ಯನ
ನಾವು ತೋಱಿಸಿಕೊಡುವೆವೆನೆ ಗಾಂ-
ಡೀವದಲಿ ಹೂಡಿದನು ಫಲುಗುಣ ಪಾಶುಪತಶರವ || ೧೩೬ ||

ಬಲಿದು [1]ಮುಷ್ಟಿಯೊಳೌಂಕಿ[1] ಕೆನ್ನೆಗೆ
ಸೆಳೆದು [2]ಬಿಟ್ಟನು[2] ಪಾರ್ಥನಹಿತನ
ತಲೆಯನೆಚ್ಚನು ಗೋಣ ಕಡಿದುದು ಪಾಶುಪತಬಾಣ |
ಹೊಳೆವ ಮಕುಟದ ವದನ [3]ಗಗನದ
ನೆಲೆಗೆ[3] ಚಿಮ್ಮಿತು ರಕ್ತಧಾರಾ-
ವಳಿಯ ಝಿಂಗಣವಾಯ್ತು ಮುಂಡದ ತಲೆಯ ಮಧ್ಯದಲಿ || ೧೩೭ ||

೪. ಇರುಳು ಕಾಳಗ—ಘಟೋತ್ಕಚನ ಸಾವು

ಇಳಿದುದೀ ಕಳನೊಳಗೆ ದಿಗುಮಂ-
ಡಲದ ಸಂಧ್ಯಾರಾಗವೆನೆ ಪರಿ-
[1]ದಳಿತ[1] ಚತುರಂಗದಲಿ ಮಸಗಿದುದರುಣಜಲರಾಶಿ |
ಕಲಿಗಳುಬ್ಬಿನ ರೋಷತಾಮಸ
ತುಳುಕಿತೆನೆ ದಿಗುವಳಯದಲಿ [2]ಕುಡಿ-
ವೆಳಗ[2] ಕುಡಿಕುಡಿ[3]ದಡರು[3]ತಿರ್ದುದು ತಿಮಿರ[4]ಲತೆ ಜಗವ[4] || ೧೩೮ ||

೧೩೭. [1]ಮುಂಡಿಯನೂರಿ (ಅ ಕುಮಾ). [2]ಮುಷ್ಟಿಯ (ಅ ಕುಮಾ). [3]ಗಗನಾಂಗಳಕೆ (ಅ ಕುಮಾ).
[ಬಲಿ–ಭದ್ರಪಡಿಸು. ಗೋಣು–ಕೊರಳು. ಝಿಂಗಣ–ಕುಣಿತ, ನರ್ತನ].

೧೩೮. [1]ತಳಿತ (ಅ). [2]ತುಳುವೆಳಗು (ಅ). [3]ದುಗುಳು (ಅ). [4]ಬಲಚಯವ (ಅ).
[ಪರಿದಳಿತ–ಸೀಳಿದ, ಇಬ್ಭಾಗವಾದ, ಚೆದರಿಹೋದ. ಅರುಣಜಲ–ಕೆನ್ನೀರು, ರಕ್ತ. ರೋಷತಾಮಸ–ರೋಷವೆಂಬ ಕತ್ತಲೆ. ಕುಡಿವೆಳಗು–ಕೊನೆ ಬೆಳಕು, ಸಂಜೆಯ ತುಸಬೆಳಕು. ತಿಮಿರಲತೆ–ಕತ್ತಲೆಯೆಂಬ ಬಳ್ಳಿ].

ಜಡಿವ ಖಡುಗದ ಕಿಡಿಗಳಲಿ ಬೇ-
ಗಡೆ[1]ಯನಾಂತುದು[1] ಮಕುಟಬದ್ಧರ
ಮುಡಿಯ ರತ್ನಪ್ರಭೆಗಳಲಿ ಜರ್ಝರಿತತನುವಾಯ್ತು ।
ಗಡಣದಂಬಿನ ಮಸೆಯ ಬೆಳಗಿನೊ-
ಳಡಸಿದಾಕ್ಷಣ ಮತ್ತೆ ನಿಮಿಷಕೆ
ಹೊಡಕರಿಸಿ ಹಬ್ಬಿದುದು ಮಬ್ಬಿನ ದಾಳಿ ದೆಸೆದೆಸೆಗೆ ॥ ೧೩೯ ॥

ಖಳರ ಹೃದಯದ ಗರುಡಿ ಘೂಕಾ-
ವಳಿಯ ನಯನಾಂಜನ ಧರಿತ್ರಿಯ
ನಳಿನಕೆಣಗಿದ ತುಂಬಿ ಸುಭಟಸ್ವಾಂತಶಶಿರಾಹು ।
ಪ್ರಳಯ ತಿಮಿರದ ಬೀಜ ನೀಲಾ-
ಚಲದ ಸಾಯುಜ್ಯವೊ [1]ನಭೋ[1]ಮಂ-
ಡಲದೊ[2]ಳದನೇ ವೊಗಳುವೆನು[2] ಮಸಗಿತು [3]ತಮ[3]ಸ್ತೋಮ ॥ ೧೪೦ ॥

ತೆಗೆಸು ಚೂಣಿಯ ದಳವ [1]ದೀವಟಿ-
ಗೆಗಳ[1] ಕರೆಕರೆ ತೈಲಪೂರ್ಣದ
ತೊಗಲ ಕುಣಿಕಿಲ ಬಂಡಿ [2]ಕವಿ[2]ಯಲಿ ಕೋಟಿಸಂಖ್ಯೆಯಲಿ ।
ಬಿಗಿದ ಮಳವೆಯನೆಣ್ಣೆಗೊಪ್ಪರಿ-
ಗೆಗಳೊಳದ್ದಲಿ ಗಳೆಗಳಲಿ ಸೀ-
ರೆಗಳ ಸುತ್ತಲಿಯೆಂದು ಕೈವೀಸಿದನು ಕಲಿದ್ರೋಣ ॥ ೧೪೧ ॥

---

೧೩೯. [1]ಗಳಾದವು (ಅ).

[ಬೇಗಡೆ–ಥಳಥಳಿಸುವ ತಗಡು. ಮಕುಟಬದ್ಧ-ಕಿರೀಟಧಾರಿ. ಗಡಣದಂಬು–ಬಾಣದ ರಾಶಿ. ಮಸೆ–ಹೊಳಪು, ಪ್ರಕಾಶ. ಅಡಸು–ಮೇಲೆ ಕವಿ, ಆಕ್ರಮಿಸು. ಹೊಡಕರಿಸು–ತಟ್ಟನೆ ಗೋಚರಿಸು].

೧೪೦. [1]ಸಭಾ (ಅ). [2]ಡನ ಹೇಳಿಕೆಯದೆನೆ (ಅ). [3]ಕುರು (ಅ).

[ಗರುಡಿ–ನೆಲೆ, ವಾಸಸ್ಥಾನ. ಘೂಕಾವಳಿ–ಗೂಗೆಗಳ ಸಮೂಹ. ನಯನಾಂಜನ–ಕಣ್ಣಿನ ಕಾಡಿಗೆ. ಧರಿತ್ರಿ–ಭೂಮಿ. ನಳಿನ-ತಾವರೆ. ಸುಭಟ ಸ್ವಾಂತ ಶಶಿರಾಹು–ಸಮರ್ಥ ಸೈನಿಕರ ಮನಸ್ಸೆಂಬ ಚಂದ್ರನಿಗೆ ರಾಹು. ಸಾಯುಜ್ಯ–ಐಕ್ಯ. ತಮಸ್ತೋಮ–ಕತ್ತಲೆಯ ಮೊತ್ತ].

೧೪೧. [1]ದೀವಟ್ಟಿಗರ (ಅ ಕುಮಾ). [2]ಕುಣಿ (ಅ).

[ಚೂಣಿ–ಸೈನ್ಯದ ಮುಂಭಾಗ. ಕುಣಿಕಿಲು–ಎಣ್ಣೆ ತುಂಬುವ ಚೀಲ, ಬುದ್ದಲಿ. ಮಳವೆ-ಬಣವೆ, ಒಟ್ಟಿಲು. ಗಳೆ-ಗಣೆ, ಗಳು, ಬಿದಿರಿನ ಕೋಲು].

ತಿಮಿರವಡಗಿತು ಮನದ ¹ರೋಷ¹ದ
ತಿಮಿರವಡಗದ ಮುನ್ನ ಭುಜವಿ-
ಕ್ರಮದ ²ಮನ್ನಣೆಯುಳ್ಳೊಡವಸರವಿದು ನೃಪಾಲರಿಗೆ ।
ನಿಮನಿಮಗೆ ಮುಂಕೊಂಡು ³ವಂಶ-
ಕ್ರಮ³ಸಮಾಗತಕೀರ್ತಿಸತಿಯಲಿ
ಮಮತೆಗಳ ನೆಱೆಮಾಡಿಯೆಂದನು ದ್ರೋಣ ನಿಜಬಲಕೆ ॥ ೧೪೨ ॥

ಹಯಕೆ ಹಯ ರಥ ರಥಕೆ ಪಯದಳ
ಪಯದಳಕೆ ಗಜಸೇನೆ ಗಜಸೇ-
ನೆಯಲಿ ಭಾ¹ಷೆ¹ಯ ಭಟರು ಭಾ¹ಷೆ¹ಯ ಭಟರ ಗಡಣದಲಿ ।
ನಿಯತಚಾತುರ್ಬಲವೆರಡು ನಿ-
ರ್ಭಯದಲೊದಗಿತು ಮುಕುಟಮಸ್ತಕ-
ಮಯ ಮಹೀತಳವೆನಲು ಹಳಚಿತು ಹೊಯ್ದುದುಭಯಬಲ ॥ ೧೪೩ ॥

ಕೌರವನ ತಳತಂತ್ರ ಕಟಕಾ-
ಚಾರಿಯನ ಕಾಹಿನಲಿ ರಿಪುಪರಿ-
ವಾರ ನಿಂದುದು ಭೀಮಸೇನನ ಮಗನ ¹ಕಾಹಿ¹ನಲಿ ।
ಅರಿದನು ಜಗ ನಡುಗೆ ಬೊಬ್ಬಿಯ
²ಭಾರಿ ದೇಹನು ವೈರಿ²ಬಲಸಂ-
ಹಾರರುದ್ರನು ಕಲಿಘಟೋತ್ಕಚ³ನೈದಿದನು ರಣವ³ ॥ ೧೪೪ ॥

---

೧೪೨. ¹ದೋಷ (ಅ). ²ವಿತರಣೆ (ಅ ಕುಮಾ). ³ವಂಶೋತ್ತಮ (ಅ).

[ಅವಸರ-ಸಮಯ. ಮುಂಕೊಂಡು-ಮುಂದಾಗಿ, ಮುಂದೆ ನುಗ್ಗಿ. ವಂಶ
ಸಮಾಗತ ಕೀರ್ತಿಸತಿ-ವಂಶಾನುಕ್ರಮವಾಗಿ ಬಂದ ಕೀರ್ತಿ ಎಂಬ ಪತ್ನಿ. ಮ
ಪ್ರೀತಿ. ನೆಱೆಮಾಡು-ಕೂಡಿಸು].

೧೪೩. ¹_¹ರ (ಅ).

[ಪಯದಳ-ಪದಾತಿ, ಕಾಲಾಳು. ನಿಯತ-ಗೊತ್ತಾದ. ಹಳಚು-ತಾಗು, ಅಪ್
ಕಾದಾಡು].

೧೪೪. ¹ಬಳಸು (ಅ ಕುಮಾ). ಭಾರವಲಿ ವೈರಿಗಳ (ಅ ಕುಮಾ). ³ಪೊಕ್ಕನ
(ಅ ಕುಮಾ).

[ತಳತಂತ್ರ ಪದಾತಿ ಸೈನ್ಯ. ಕಟಕಾಚಾರಿಯ-ಸೇನಾಪತಿ (ದ್ರೋಣ).
ಕಾವಲು, ರಕ್ಷೆ. ಅರು-ಗರ್ಜಿಸು].

ಅಗಡು ದಾನವನವನು ಕಡ್ಡಿಗೆ
ಬಗೆವನೇ ಸಾಗರವನುಜವ-
ಟ್ಟೆಗೆಯುಸಿಟ್ಟಿಡೆ ವಡಬನಲ್ಲಾ ನೀರ ಕುಡಿವವನು ।
ಹೊಗೆದುದ್ದ ಹೆಜ್ಜಾಳಗಳ ನಗೆ-
ಮೊಗ[1]ವು[1] ಮೋದಾಮೋದಿಯಲಿ ಕೈ-
ಮಗುಚಿ ಕಳೆದನು ನಿಮಿಷದಲಿ ಹೇರಾಳರಾಶಿಗಳ || ೧೪೫ ||

ಬೀಳಕೊಡ್ಡುವ ಬಿರುದರನು ಬಿಜು-
ಗಾಳರಾಗಿ ವರೂಥ[1]ಕ[1]ದವನು
ಕಾಳುರೆಜ್ಜೆಗುರುಹಿದನು ಘಟೆಯಾಗಿ ತುದುಕಿದನು ।
ಮೇಳಿ ಕವಿ[2]ದನು[2] ಜಲಧಿಯಾಗಿ ನೃ-
ಪಾಲಪಿಕರದೊಳು[3]ಳ[3]ದನು ಗಿರಿ-
ಜಾಲವಾಗಿ ಘಟೋತ್ಕಚನು ಘಳ್ಳಿಸಿದ[4]ಅತಿರಥ[4] || ೧೪೬ ||

ದೊಪ್ಪೆದಾನೆಂದೊಡೆ ಮುಪ್ಪವೇ ಸಿ-
ವಾರಣದೀಕ್ಷಿತನಾದನಾತನ
ಕಾಚಿನ್ನಿ ಗುರುಸುತಗದ್ಯಷ್ಟಾಂಜನವ ಸಿದ್ಧಿಸಿತು ।
ಹೊಣೆಗರು ಮುತ್ತಾರು ಕಲ್ಯ-
ಕ್ಷೋಣಿಪತಿಕೃತವರ್ಮ ಕೃಪರಿ-
ಜಾಣರೋಟಿದವಿದ್ಯೆಗೆಟ್ಟಿದರ್ಮದು ಘಟಸಿದ್ಧ್ರಯು || ೧೪೭ ||

---

೧. [1]ವ (ಅ).

[ಅಗಡು ದಾನವ–ದುಷ್ಟ ರಾಕ್ಷಸ. ಕಡ್ಡಿ–ಸಾಮಾನ್ಯ. ವಡಬ–ವಡಬಾನಲ, ಸಮುದ್ರದ ಅಗ್ನಿ. ಹೊಗೆ–ಕಟ್ಟು. ಮೋದಾಮೋದಿ–ಸಾಮಾನ್ಯ ಯುದ್ಧ. ಕೈಮಗುಚು–ಕೊಳ್ಳೆಯನ್ನು ಪ್ರದರ್ಶಿಸು].

೨. [1]ಜ (ಅ ಕುಮಾ). [2]ದುದು (ಅ). [3]ಡಿ (ಅ). [4]ಅರಿಬಲವ (ಅ).

[ಉರುಹು–ಸುಟ್ಟುಹಾಕು. ಘಟೆ–ಸರ್ಪ. ತುದುಕು–ಹಿಸಿದುಕೊ. ಕವಿ–ಆವರಿಸು. ಘಳ್ಳಿಸು–ಪೀಡಿಸು, ಕಾಡಿಸು].

೩. [ಸಿವಾರಣ ದೀಕ್ಷಿತ–ಕಾಣದಾಗುವ ದೀಕ್ಷೆಯನ್ನು ಪಡೆದವನು. ಅದೃಷ್ಟಾಂಜನ–ಕಣ್ಣಿಗೆ ಕಾಣಿಸಿಕೊಳ್ಳದಂತಾಗುವುದಕ್ಕೆ ಲೇಪಿಸುವ ಕಾಡಿಗೆ. ಹೊಣೆಗರು–ಹರಾಕ್ರಮಶಾಲಿಗಳು, ಸಾಹಸಿಗಳು. ಕ್ಷೋಣಿಪತಿ–ಭೂಪತಿ, ರಾಜ (ದುರ್ಯೋಧನ)].

ಏನ ಹೇಳುವೆ[1]ನವಮು[1] ಬಹಳಾಂ-
ಭೋನಿಧಿಯು[2]ವಿಷಮು[2]ಯು ದಾಳಿಗೆ
ದಾನವಾಮರರಿಂದುಮೌಳಿಯು ಮಱೆಯು ಹೊಗುವಂತೆ ।
ದಾನವಾಚಲಮಥಿತಸೇನಾಂ-
ಭೋನಿಧಿಯು ಪರಿಭವ[3]ದ ವಿಷ[3]ದುರಿ-
ಗಾ ನರೇಂದ್ರ[4]ರು ಬಂದು ಹೊಕ್ಕರು [4]ರವಿಸುತನ ಮಱೆಯು ॥ ೧೪೮ ॥

ತಳಿತ ಕಿಡಿಗಳ ಕೈದುವಿನ ಮೈ-
ಝುಳದ [1]ದಾಳಿ[1]ಯೊಳುಭಯ ಬಲದ-
ಗ್ಗಳದ ಹರುಷವಿ[2]ಷಾದವಾರಿಧಿ[2] ಕಾಲು[3]ಹೊಳೆಯಾ[3]ಯ್ತು ।
ಬಳಿಯು ಚೌರಿಗಳೆಸೆಯೆ [4]ಘಂಟಾ-[4]
ವಳಿಗಳಣಸಿನ ಹೊಗರನುಗುಳುವ
ಹೊಳೆವ ಧಾರೆಯು ಭಾರಿ[5]ಶಕ್ತಿಯ[5] ತೂಗಿದನು ಕರ್ಣ ॥ ೧೪೯ ॥

ಕಾಯಲಾಪೊಡೆ ದನುಜ ಕರೆ ಕಮ-
ಲಾಯತಾಕ್ಷನನಿಂದು ಬದುಕುವು-
ಪಾಯವುಳ್ಳೊಡೆ ಬೇಗ ಬೆಸಗೊಳು ಭೀಮಫಲುಗುಣರ ।
ಆಯುಧಕೆ [1]ತೆಱ[1]ವಿಟ್ಟೆನೈ ನಿ-
ನ್ನಾಯುಷವ ಹಿಂದಿಕ್ಕಿಕೊಂಬನ
ತಾ ಯೆನುತ ಬೊಬ್ಬಿರಿದು ಶಕ್ತಿಯೊಳಿಟ್ಟ[2]ನವನುರವ[2] ॥ ೧೫೦ ॥

---

೧೪೮. [1]ನಂದು (ಅ). [2]ಲೆದ್ದುರಿ (ಅ). [3]ದೊಲೆಸೆ (ಅ). [4]ನಿಕಾಯ ಪೊಕ್ಕುದು (ಅ ಕುಮಾ).

[ಇಂದುಮೌಳಿ–ಈಶ್ವರ. ದಾನವಾಚಲಮಥಿತಸೇನಾಂಭೋನಿಧಿ–ಘಟೋತ್ಕಚ ರಾಕ್ಷಸನೆಂಬ ಪರ್ವತದಿಂದ ಕಡೆಯಲ್ಪಟ್ಟ ಸೇನಾಸಮುದ್ರ. ಪರಿಭವ–ಸೋಲು, ಅಪಜಯ].

೧೪೯. [1]ಝಾಡಿ (ಅ ಕುಮಾ). [2]ಹಾರ ಶರಧಿಯ (ಅ). [3]ವೆಯೊಳಾ (ಅ). [4]ರೌದ್ರಾ (ಅ). [5]ಯಸ್ತ್ರವ (ಅ).

[ತಳಿತ ಉಂಟಾದ, ಹೊಮ್ಮಿದ. ಮೈಝುಳದ ದಾಳಿ–ಮೈ ಕಾಂತಿಯ ಆಕ್ರಮಣ. ಕಾಲುಹೊಳೆ–ಆಳವಿಲ್ಲದ ಹೊಳೆ. ಅಣಸು–ಲೋಹದ ಹಿಡಿ. ಹೊಗರು–ಕಾಂತಿ, ಪ್ರಕಾಶ. ಶಕ್ತಿ–ಶಕ್ತ್ಯಾಯುಧ].

೧೫೦. [1]ಕರ (ಅ). [2]ನಾ ಕರ್ಣ (ಅ ಕುಮಾ).

[ತೆಱವಿಡು–ಪಣವಾಗಿ ಇಡು. ಉರ–ಎದೆ].

ಅರದನು ಪರಿಹರಿಸುವನು ಜಂ-
ಭಾರಿ ಕೊಟ್ಟನು ಕವುಲಭವಕಾ-
ಮಾರಿಗಳಿಗುಬ್ಬಸದ ಕೈದು[1]ವಜೇಯುವೆಂದಿದನು[1] ।
ಧಾರೆಯುಲಿ ದಳ್ಳಿಸುವ ಕಿಡಿಗಳ
ಭೂರಿಯಾಯುಧವಸುರನೆದೆಯುನು
ಡೋಱುಗಳೆದುದು ಹಾಯ್ದು ಹೋದುದು [2]ವಾಸವನ ಹೊರೆಗೆ[2] ॥ ೧೫೧ ॥

ಒಳಗೊಳಗೆ ಹೊಯ್ದಾಡಿ ಹೊರಳುವ
ಬಲುಭಟರನಗಿದೊಗುವ [1]ಕಗ್ಗ-
ತ್ತಲೆಯು[1] ಕೋಳಾಹಳ[2]ವನುಭಯದ[2]ಚಾತುರಂಗದಲಿ ।
ಬಲಿದ ತೂಕಡಿಕೆಗ[3]ಳ[3] ನಸುಬೆದ-
ಱಿಲ[4]ಹು[4] [5]ಹೆಚ್ಚಿದ ರ್ಘುಳದ[5] ರ್ಘೂವ್ಮಿನ
ಬಲೆಗೆ ಸಿಲುಕಿದ ಬಲವನರ್ಜುನದೇವನೀಕ್ಷಿಸಿದ ॥ ೧೫೨ ॥

ಶಿವಶಿವಾ [1]ಬಳಲಿದುದು ಬಲವಗಿ-
ದವಗಡಿಸಿದುದು ನಿದ್ರೆ ನೂಕದು[1]
ಬವರವುಬ್ಬಿದ ತಿಮಿರವಳಿಯುಲಿ ಸಾಕು ರಣವೆನುತ ।
ದಿವಿಜಪತಿಸುತನೆದ್ದು ಸೇನಾ-
ನಿವಹದಲಿ ಸಾಱಿದನು ಲಗ್ಗೆಯ
ರವವ ನಿಲಿಸಿದನಖಿಲಘನಗಂಭೀರನಾದದಲಿ ॥ ೧೫೩ ॥

---

೧೫೧. [1]ವನೀಗಳಿಂದಿವನು (ಅ). [2]ಅಸು ಕಳೇಬರವ (ಅ).

[ಪರಿಹರಿಸು–ನಿವಾರಿಸು. ಜಂಭಾರಿ–ಇಂದ್ರ. ಕಮಲಭವ–ಬ್ರಹ್ಮ. ಕಾಮಾರಿ–ಈಶ್ವರ. ಉಬ್ಬಸ–ಕಷ್ಟ, ತೊಂದರೆ. ಡೋಱುಗಳೆ–ರಂಧ್ರಮಾಡು, ತೂತು ಕೊರೆ. ವಾಸವ–ಇಂದ್ರ].

೧೫೨. [1]ಕತ್ತಲೆಯಳುಕಿಸಿತು (ಅ). [2]ದ ಭಯ (ಅ). [3]ಳ (ಅ). [4]ವು [5]ಗಳ ಜವವೆದ್ದ (ಅ ಕುಮಾ).

[ಅಗಿದೊಗುವ–ಉಚ್ಚಳಿಂದು ಹೊರಚೆಲ್ಲುವ (ಕಾಣದಂತೆ ಮುಸುಕಿ, ಬಳಿಕ ಕಾಣಗೊಡುವ ಎಂದು ಭಾವ). ಬೆದಱಿಲವು–ಬೆದರಿಕೆಯ ತೂಗಾಟ].

೧೫೩. [1]ಬಲುಬಳಲಿರೆಂದಾ । ಹವದೊಳಗೆ ಕಡುಗೈದು ನೂಕಿತು (ಅ).

[ಅಗಿ–ಹೆದರು. ಅವಗಡಿಸು–ಸೋಲು. ನೂಕದು–ಸಾಧ್ಯವಾಗದು. ಬವರ–ಯುದ್ಧ. ಲಗ್ಗೆ–ಮುತ್ತಿಗೆ, ಆಕ್ರಮಣ. ರವ–ಸದ್ದು].

ಎಲೆ ಮಿಡುಕದೆರಡೊಡ್ಡು [1]ಲೆಪ್ಪದ[1]
[2]ಬಲದ[2] ವೊಲು ನಿದ್ರಾಸಮುದ್ರ[3]ದಿ[3]
ಮುಳುಗಿ ಘೂರ್ಮಿನ [4]ಘೂರ್ಣಿತೆಯಲಿ[4] ಘೂಂಪಿಸಿದುದ[5]ರೆಜಾವ[5] ।
ಕಳಿತ ಮುಱವೆಯ ಪಾಳೆಯದ [6]ಕ-
ಗ್ಗೊಲೆಗೆ[6] ಕವಿವ ಗುರೂಪದೇಶಾ-
ವಳಿಯ ವೊಲು ಮೈಮೋಱಿದವು ಹಿಮರುಚಿಯ ರಶ್ಮಿಗಳು ‖ ೧೫೪ ‖

ನಳಿನ[1]ದ[1]ಳದೊಳ[2]ಗಡಗಿ[2]ದವು ಸೈ-
ದಿಲೆಗಳಲಿ ತನಿ [3]ಮೊರೆವ[3] ತುಂಬಿಯು
ಕಳ[4]ರವ[4]ಕೆ ಬೆಚ್ಚಿದವು [5]ಹೊಕ್ಕವು[5] [6]ಬಗಿದು[6] ತಿಳಿಗೊಳನ ।
ಧುಳಕೆ ಸೈರಿಸದೆಳಲತೆಯ ನೆಳ-
ಲೊಳಗೆ ನಿಂದವು ಬೇ[7]ಗೆ[7] ಬಲುಹಿಂ-
ದಳುಕಿ ಮುಮ್ಮುಲ ಮಱುಗುತಿರ್ದವು ಜಕ್ಕವಕ್ಕಿಗಳು ‖ ೧೫೫ ‖

ವಿರಹಿಜನದೆದೆಗಿಚ್ಚು ಮನ್ಮಥ-
ನರಸುತನದಭಿಷೇಕಘಟ ತಾ-
ವರೆಯ ಕಗ್ಗೊಲೆಕಾಱನುತ್ಪಲವನವಿದೂಷಕನು ।
ಹರನ ಹಗೆ[1]ಯೊ[1]ಡ್ಡಣ ವಿಲಾಸಿನಿ-
ಯರ ಮನೋರಥಫಲವೆನಲು ಮಿಗೆ
ಮೆಱೆದನುದಯಾಚಲದ ಚಾವಡಿಯೊಳು ಸುಧಾಸೂತಿ ‖ ೧೫೬ ‖

---

೧೫೪. [1]ಲೇಪದ (ಅ). [2]ಜಲದ (ಅ). [3]ದ (ಅ ಕುಮಾ). [4]ಘೂರ್ಣಿಯಲಿ (ಅ ಕುಮಾ). [5]ರಿಜಾಲ (ಅ). [6]ಪಾಯದಲಿ (ಅ). [6]ಕಗ್ಗೊಲೆಗೆ (ಅ).
[ಮಿಡುಕು–ಚಲಿಸು, ಅಲುಗಾಡು. ಒಡ್ಡು–ಸೈನ್ಯ. ಲೆಪ್ಪ–(ಎರಕ ಹೊಯ್ದ) ಬೊಂಬೆ. ಅರೆಜಾವ–ಅರ್ಧ ಜಾವ. ಹಿಮರುಚಿ–ಚಂದ್ರ].

೧೫೫. [1]ಗೊ (ಅ). [2]ಗ್ಗಿಂತ (ಅ). [3]ಮೊರೆದ (ಅ). [4]ಕಳ (ಅ). [5]ಜಗಿದು ದ: (ಅ). [6]ಕೂಡೆ (ಅ). [7]ಗ (ಅ).
[ಕಳರವ–ಇಂಪಾದ ದನಿ. ಜಕ್ಕವಕ್ಕಿ–ಚಕ್ರವಾಕ ಪಕ್ಷಿ].

೧೫೬. [1]ಯು (ಅ ಕುಮಾ).
[ವಿರಹಿಜನ–ಪರಸ್ಪರ ಅಗಲಿದ ಪ್ರೇಮಿಗಳು. ಘಟ–ಮಡಕೆ, ಕುಂಭ. ವಿದೂಷಕ–ಹಾಸ್ಯಗಾರ. ಒಡ್ಡಣ–ಸೈನ್ಯ. ಸುಧಾಸೂತಿ–ಚಂದ್ರ].

ತಳಿತ ತಂಬಿನ ತಂಗದಿರ ಕೊಱ-
ಯೊಳಗೆ ತೇಱಾಡಿದುದು ಬಲ¹ವ-¹
ಗ್ಗಳದ ಬಳಲಿಕೆ ಬೀಳುಕೊಂಡುದು ಒಲಿದುದಂಗವಣೆ ।
ಒಲೆದು ಬರಿಕ್ಕೆ ತೂಗಿ ಕಿವಿಗಳ-
²ನಲುಗಿ²ದವು ಕರಿನಿಕರ ³ವವಿಲಣ.
ಘಲಿಲೆನಲು³ ಕೊಡಹಿದವು ವಳಯಾವಳಿಯ ಹಯನಿಕರ ॥ ೧೫೭ ॥

ತುಱುಬ ಒಲಿದೊಳಗೊಂಕಿ ಮೊನೆಮುಂ-
ಜೆಱಗನಳವಡಿಸಿ¹ಕ್ಕಿ¹ ಸುತ್ತಿಸೊ-
ಳಿಱುಕಿ ಬಿಗಿ²ದ² ಕಠಾರಿದಾರದ ಗೊಂಡೆಯಾವ ಕೆದಱಿ ।
ಒಱಗಿದೆಡಬಲದವರನೆಬ್ಬಿಸಿ
ಜಱಿದು ಪೀಳೆಯುಗೊಂಡು ಕೈದುವ
ತಿರುಹುತಾಯತವಾಯ್ತು ಪಡೆಯೊಡಱೊಳು ಪಾಯುದಳ ॥ ೧೫೮ ॥

ಚೂಣಿ ತೆಗೆಯಲಿ ಮಿಸುಕಿದೊಡೆ ನೃಪ-
ನಾಣೆ ಬಱಿದೇಕಾಳುಕುದುರೆಯು
ಗೋಣನವರಿಗೆ ಮಾ¹ಱುವಿ¹ರ ಕೌರವನ ಘಟ್ಟಿನಲಿ ।
ದ್ರೋಣನಲ್ಲಾ ರಕ್ಷಕನು ರಣ-
ಹೂಣಿಗರು ²ನಿ²ಲಿ ಭೀಮಪಾರ್ಥರು
ಕಾಣಬಹುದೋ ಕರೆ ಯೆನುತ ಗರ್ಜಿಸಿದನಾಚಾರ್ಯ ॥ ೧೫೯ ॥

---

೭. ¹ದ(ಅ). ²ನಿಲುಕಿ (ಅ). ³ಜಯುಫಿಲ್ಲಳಪೆನಲು (ಅ).
[ತಂಗದಿರು—ತಂಪಾದ ಕಿರಣ. ತೇಱಾಡು—ತೇಲಾಡು. ಅಂಗವಣೆ—ಬಯಕೆ. ಒಲೆ—ತೂಗಾಡು. ಬರಿಕ್ಕೆ—ಬರಿದಾದ ಸೊಂಡಿಲು. ಅವಿಲಣ—ಕಡಿವಾಣ. ವಳಯ—ಬಳೆ, ಗುಂಡು, ಆಭರಣ].

೮. ¹ಕ್ಕೆ (ಅ). ²ದು (ಅ).
[ಮುಂಜೆಱಗು—ಮುಂಭಾಗದ ಸೆರಗು. ಆಯತವಾಗು—ಸಿದ್ಧವಾಗು, ಸನ್ನದ್ಧವಾಗು].

೯. ¹ಱದಿ (ಅ). ²ಕ (ಅ).
[ಬಱಿದೆ—ವ್ಯರ್ಥವಾಗಿ].

ಆಳನೊಪ್ಪಿಸಿ ಜಾಱದಿರು ಪಾಂ-
ಚಾಲಪತಿ ಫಡ ನಿಲ್ಲೆನುತ [1]ಶರ-
ಜಾಲದಲಿ[1] ಹೂಳಿದನು ದ್ರುಪದನ ಕೆಲದ ಬಲದವರ ।
ಖೂಳ ಫಡ ಹಾರುವರು ಬಱುವಾ-
ತಾಳಿಗಳು [2]ನೀ[2]ವೇಕೆ [3]ನಾವೇ-
ಕಾ[3]ಳುತನ ನಿಮಗೆತ್ತಲೆನುತಿದಿರಾದನಾ ದ್ರುಪದ ॥ ೧೬೦ ॥

ಹಿಂದನಱಿಯಾ ಖೂಳ [1]ನಾವಾ-
ರೆಂದು[1] ಮಱ[3]ದಾ ಸಾಕದಂತಿರ-
ಲೊಂದನಲ್ಲದೆ ನಿನ್ನ ತಲೆಗೆರಡಂಬ ತೊಡಚಿದೊಡೆ ।
ಇಂದು ನಿನ್ನಯ ಬಾಯ ತಂಬುಲ
ತಿಂದವನು ನೋಡೆನುತ [2]ಪೆಱ[3][2]ಯಂ-
ಬಿಂದ[3]ಲಿಕ್ಕಡಿಮಾಡಿದನು[3] ಪಾಂಚಾ[4]ಲಪತಿಶಿರವ[4] ॥ ೧೬೧ ॥

ಮುಱಿದುದಾ ಬಲವಿಳೆಯೊಡೆಯೆ ಬೊ-
ಬ್ಬಿಱಿದುದೀ ಬಲವಪಜಯದ ಮಳೆ-
ಗಱಿದುದವರಿಗೆ ಹಱಿದುದಿವರಿಗೆ [1]ರಜ್ಜು ಸರ್ಪ[1]ಭಯ ।
ತೆರಳಿತಾಚೆಯ ಥಟ್ಟು ಮುಂದಣ-
ಗುರವಣಿಸಿತೀಯೊಡ್ಡು ಕೌರವ-
ರರಸನುತ್ಸಾಹವನು ಬಣ್ಣಿಸಲಱಿಯೆ ನಾನೆಂದ ॥ ೧೬೨ ॥

---

೧೬೦. [1]ಕೆಂಗಱಿಗೋಲಿನಲಿ (ಅ). [2]ತಾ (ಅ ಕುಮಾ). [3]ನಮ್ಮೊಳಗಾ (ಅ).

೧೬೧. [1]ಮರ್ಮವನಿಂದು (ಅ). [2]ಹೊದೆ (ಅ). [3]ಕಡಿದಿಳುಹಿದನು (ಅ ಕುಮಾ).
[4]ಲಾಧಿಪನಶಿರವ (ಅ ಕುಮಾ).

[ಪೆಱೆಯಂಬು–ಚಂದ್ರಾಸ್ತ್ರ (ಅರ್ಧಚಂದ್ರಾಕಾರದ ತಲೆಯುಳ್ಳ ಬಾಣ)].

೧೬೨. [1]ಸರ್ಪರಜ್ಜುಭಯ (ಅ ಕುಮಾ).

[ಇಳೆಯೊಡೆಯೆ–ಭೂಮಿ ಬಿರಿಯುವಂತೆ. ರಜ್ಜುಸರ್ಪಭಯ–ಹಗ್ಗವನ್ನು ಹಾವು
ಎಂದು ಭ್ರಮಿಸುವ ಭಯ, ಅನಗತ್ಯವಾದ ಹೆದರಿಕೆ].

೫. ದ್ರೋಣನ ಸಾವು

ಬಾಲಸೂರ್ಯನ ವೊಲ್ ಪ್ರತಿಕ್ಷಣ-
ದೇಳಿಗೆಯು ತೇಜದ ವಿಕಾರ ಥ-
ಡಾಳಿಸಿತು ವಿಕ್ರಮದ ಝುಳ ಜಗವಳುಕೆ ಝೋಂಪಿಸಿತು ।
ಹೇಳಲೇನರ್ಜುನನ ಭೀಮನ
ಸೋ[1]ಲವ[1]ದು ತಾ ಮೃತ್ಯುವೀಪರಿ
ಕಾಳಗವನಾನಱಿಯೆನಮರಾಸುರರ [2]ಸಮರದಲಿ[2] ॥ ೧೬೩ ॥

ಸಾಕು ನಿಮಗಾಗದು ವೃಥಾ ನೀ-
ವೇಕಹಂಕರಿಸುವಿರಿ ಸೇನಾ-
ನೀಕ ಹೊದ್ದಲಿ ಹೊಗಲಿ ಧೃಷ್ಟದ್ಯುಮ್ನ ಮೊದ[1]ಲಾಗಿ[1] ।
ಆಕೆವಾಳರು ನಿಲಲಿ ಕುಪಿತ ಪಿ-
ನಾಕಯುಱಿಯಾ ದ್ರೋಣನೆನುತ ನ-
ರಾಕೃತಿಯು ಪರಬೊಮ್ಮರೂಪನು ತಿರುಹಿದನು ರಥವ ॥ ೧೬೪ ॥

ಮೇಲೆ ಬಿದ್ದುದು ಮುಳಿಸಿನಲಿ ಪಾಂ-
ಚಾಲರಾಯನ ಥಟ್ಟು ನಿಶಿತಶ-
ರಾಳಿಯಲಿ ಹೂಳಿದನು ಧೃಷ್ಟದ್ಯುಮ್ನನಂಬರವ ।
ಬಾಲಕರಲೇ ಖಡ್ಗಧಾರೆಯು
ಮೇಲೆ ಮೋ[1]ಹಿದ[1] ಮಧು[2]ವ[2]ಸವಿಯಲಿ
ನಾಲಗೆಯು[3]ಲಿ[3]ವರೊಲ್ಲರೆಂದನು ನಗುತ ಕಲಿದ್ರೋಣ ॥ ೧೬೫ ॥

---

೧೬೩. [1]ಲುವು (ಅ). [2]ಥಟ್ಟಿನಲಿ (ಅ ಕುಮಾ).
[ವಿಕಾರ–ರೂಪಾಂತರ, ಬದಲಾವಣೆ].

೧೬೪. [1]ಲಾದ (ಅ).
[ಸೇನಾನೀಕ–ಸೈನ್ಯ ಸಮೂಹ. ಆಕೆವಾಳ–ಶೂರ, ಪರಾಕ್ರಮಿ].

೧೬೫. [1]ದುವ (ಅ). [2]ರ (ಅ). [3]ವ (ಅ).
[ನಿಶಿತ–ಹರಿತವಾದ. ಹೂಳು–ಮುಚ್ಚು, ಮುಸುಕು. ಮೋಹು–ಕವಿ, ವ್ಯಾಪಿಸು, ಲೇಪಿಸು].

*ಉದಧಿಯುದರದೊಳಿಳಿವ ತೆರೆಗಳ-
ನೊದೆವ ಮಂದರದಂತೆ [1]ವನ[1]ಕರಿ
ಕದಳಿಯಲಿ ಕೈಮಾಡುವಂದದಿ ಪರರ ಥಟ್ಟಿನಲಿ ।
ಹೊದಜ [2]ಹ[2]ಜ[3]ಗಡಿದೌಕಿದ[3]ನು[3] ತೋ-
ಕಿದ[3][ನು][3] ಸುಭಟರ ಜೀವವನು ಹಳಿ-
ಬಿದಿರ ಮೆಳೆಯಲಿ ಮೊಳಗಿದುರಿಯು ಪೊಲುರುಹಿದನು ದ್ರೋಣ ||೧೬೬||

ಬೆರಳ ಬಾಯ್ಗಳ ಬಿಸುಟ ಕೈದುಗ-
ಳರೆಗಿರಿದ ಹಲ್ಲುಗಳ ಕೂಡಿದ
ಕರಪುಟದ ಬಿಡುದಲೆಯ ಬಸಿವೇಜುಗಳ ಶೋಣಿತದ ।
[1]ನರಳುವಾ[1]ರೋಹಕರ ರಾವ್ತರ
ವರಮಹಾರಥಪಾಯದಳದು-
ಬ್ಬರದ [2]ಬೇಗೆಯ[2]ನೇನನೆಂಬೆನು ವೈರಿಸೇನೆಯಲಿ || ೧೬೭ ||

ಮುಂದೆ ಹೊಗುವ[1]ತಿ[1]ಬಲರು [2]ಹಾ[2]ರಿತು
ಹಿಂದಣವ[3]ರನು ಹಿಂದೆ ನಿಲುವರು
ಮುಂದಣವರಾಸೆಯಲಿ ನಿಂದುದು[3]ಪಾರ್ಥ ಪರಿಯಂತ ।
ಅಂದು ಪಾರ್ಥನು ಕೃಷ್ಣ ಬಲದಲಿ
ನಿಂದನೇವೇಳುವೆನು ನಿನ್ನವ-
ರೆಂದು ಗೆಲ್ಲರು ಗಾಹು[4]ಗತ[4]ಕವನುಳಿದು ಕಾದುವೊಡೆ || ೧೬೮ ||

---

೧೬೬. [1]ಮದ (ಅ ಕುಮಾ). [2]ಹೊ (ಅ). [3]ವು (ಅ).
[ಉದಧಿಯುದರ-ಸಮುದ್ರದ ಒಳಭಾಗ, ಗರ್ಭ. ವನಕರಿ-ಕಾಡಾನೆ. ಕದಳಿ-ಬಾಳೆಯ ಗಿಡ. ಕೈಮಾಡು-ಹಾವಳಿಮಾಡು. ಪರರ-ಶತ್ರುಗಳ. ಹೊದಜ ಹೊಜ[3]ಗಡಿ-ಪೊದೆಯನ್ನು ಕಟ್ಟುಕಟ್ಟ ಕಡಿ. ತೋಕು-ಹೊಡೆದಟ್ಟು].

೧೬೭. [1]ಸರಳಲಾ (ಅ). [2]ಭಂಗವ (ಅ ಕುಮಾ).
[ಕರಪುಟ-ಮುಗಿದ ಕೈ, ಜೋಡಿಸಿದ ಕೈ. ಏಜು-ಗಾಯ. ಶೋಣಿತ-ರಕ್ತ. ಆರೋಹಕರು-ಸವಾರರು. ರಾವ್ತ-(ರಾವುತ) ಕುದುರೆ ಸವಾರ. ಬೇಗೆ-ತಾಪ, ಸಂಕಟ].

೧೬೮. [1]ರ (ಅ). [2]ಹೋ (ಅ). [3]ರಾಸೆಯಲಿ ನಿಂದುದು ನಿಂದುದಾ ಬಲು ಹುಯ್ಲು ಪವನಜ (ಅ). [4]ತದ (ಅ).
[ಗಾಹುಗತಕ-ಕಪಟ, ಮೋಸ].

---

* ಈ ಪದ್ಯವು 17ನೇ ಸಂಧಿಯ 27ನೇ ಪದ್ಯ.

ಕರಸಿದನು ಹರಿ ಧರ್ಮಪುತ್ರನ-
ನರಸ ಕೇಳಿಂದಿನಲಿ ಗುರುವನು
ಸರಳ ಮೊನೆಯಲಿ ಗೆ[1]ಲಲು[1] ನೂಕದು ಭೂತನಾಥಂಗೆ ।
[2]ಧುರದ ಜಯವಹುದೊಂದು ಪರಿಯಲಿ
ನಿರುತವಲ್ಲದ ನುಡಿಯ ನುಡಿದೊಡೆ
ಪರಿಹರಿಸಬಹುದೆಂದನಸುರಾರಾತಿ ನಸುನಗುತ[2] [2]॥ ೧೬೯ ॥

ಕಿವಿಯ ಮುಚ್ಚಿದನರ್ಜುನನು ಹರಿ-
ಯವಗಡಿ[1]ಸೆ ಕೈಕೊಂಡನರಸನು[1]
ಪವನಸುತನಾನೂತ ಕೊಂಡನು ಹೊಕ್ಕನಾಹವವ ।
ತವಕದಲಿ ತೆಗೆದೆಸುತ ರಿಪುಶರ-
ನಿವಹವನು ಖಂಡಿಸುತಲಿಂದಿನ
ಬವರದಲಿ ಕಡಿವಡೆದುದಶ್ವತ್ಥಾಮ[2]ಕೇಳೆಂ[2]ದ ॥ ೧೭೦ ॥

ಶಿವಶಿವಾ ಕರ್ಣಜ್ವರಾಯುತ-
ರವವಿದೆತ್ತಣದೋ ಕುಮಾರನ
ಶಿವಿದ[1]ರಾರೋ ತಾನಿದದುಭುತ[1]ವೆನುತ [2]ಮನದೊ[2]ಳಗೆ ।
ತವಕಿಸುತ ತಿಳಿದನು ವೃಕೋದರ-
ನಿವ ದುರಾತ್ಮನು ತನ್ನ ಮಗನಾ-
ಶಿವನೊಡನೆ ಸಮಜೋಳಿ ಹುಸಿ ಹೋಗೆಂದನಾದ್ರೋಣ ॥ ೧೭೧ ॥

---

೧೬೯. [1]ಲುವು (ಅ). [2]ತೆರಳಿ ಬರುತಿದೆ ನಮ್ಮ ಬಲ ಸಂ। ಗರದ ಜಯವಹುದೆಂತು ಹೇಳೈ । ಧರಣಿಪತಿ ನೀನೆನಲು ನೀವೇ ಬಲ್ಲಿರಿದನೆಂದ । (ಅ ಕುಮಾ).
[ನೂಕು–ಸಾಧ್ಯವಾಗು. ಭೂತನಾಥ–ಈಶ್ವರ. ನಿರುತವಲ್ಲದ–ಸತ್ಯವಲ್ಲದ. ಪರಿಹರಿಸು–ನಿವಾರಿಸು]

೧೭೦. [1]ಸಿ ಕೊಂಡರಸನನುಪಮ (ಅ). [2]ಗಜವೆಂ (ಅ).
[ಅವಗಡಿಸು–ಪ್ರತಿಭಟಿಸು. ಕಡಿವಡೆ–ಕಡಿದುಹೋಗು].

೧೭೧. [1]ರೇ ತಾನೇನಿದದ್ಭುತ (ಅ). [2]ತನ್ನೊ (ಅ ಕುಮಾ).
[ಕರ್ಣಜ್ವರಾಯುತ ರವ–ಕಿವಿಗಳಿಗೆ ತಾಪವನ್ನು ಉಂಟುಮಾಡುವಷ್ಟು ಅಪಾರವಾದ ಶಬ್ದ. ಸಮಜೋಳಿ–ಸರಿಸಮಾನ].

ಎಲೆ ಯುಧಿಷ್ಠಿರ ಯೆನ್ನ ಸುತ[1]ನಿಂ-
ದ[1]ಳಿದನೇ ಹುಸಿಯಲ್ಲಲೇ ನಿ-
ರ್ಮಳವಚೋನಿಧಿ ನೀನು ಹೇಳೆನಲಸುರ[2]ರಿಪು[2] ನಗುತ ।
ಎಲೆಲೆ ನುಡಿಯಾ ಪಾಪಿ ಕದನದೊ-
ಳಳಿದುದಶ್ವತ್ಥಾಮನೆಂಬ-
ಗ್ಗಳದ ಕರಿ ಮಾಳವ[3]ರ ಥಟ್ಟಿನೊಳಂ[3]ಜಬೇಡೆಂದ ॥ ೧೭೨ ॥

ಆದೊಡಶ್ವತ್ಥಾಮಗಜವಿದಿ-
ರಾದುದಳಿದುದು [1]ನಿರುತವೆನೆ[1] ಬಿಸು-
ಸುಯ್ದು ನರಸನ ನುಡಿಯ ನಂಬಿದನಕಟ ಮಗನೆನುತ ।
ಕೈದು ಕೈಯ್ಯಲಿ ಜಾಜಿ ರೋಮಾಂಚಿಸಿ
ಖೇದದಲಿ ಕಾತರಿಸಿ[2]ದಂತಃ-
ಸ್ವೇದದಲಿ[2] ಕಳವಳಿಸಿ ಕರೆದನು ರೋಷತಾಮಸವ ॥ ೧೭೩ ॥

ಕೇಳಿದನು ಕಡುನೊಂದನಡಿಗಡಿ-
ಗಾಲಿ ನೀರೇಜಿ[3]ದವು ಕೈಯಲಿ
ಕೋಲು [1]ಬಿಲು ಸಡಿಲಿದವು ಸಾಕೀದೇಹವೇಕೆನುತ[1] ।
ಮೇಲುದುಗುಡದ ಮುಖದಲವನೀ-
ಪಾಲಕರ್ಣಕೃಪಾದಿಭಟರಿಂಗೆ
ಹೇಳಿದನು ಮಗನಳಿದ[2]ನ[2]ಸ್ತ್ರತ್ಯಾಗ ತನಗೆಂದ ॥ ೧೭೪ ॥

---

೧೭೨. [1]ನೀನ (ಅ ಕುಮಾ) [2]ಹರ (ಅ ಕುಮಾ). [3]ರೊಳಳಿದುದು ಅಂ (ಅ).
[ನಿರ್ಮಳ ವಚೋನಿಧಿ-ಪರಿಶುದ್ಧವಾದ ಮಾತನ್ನೇ (ಸತ್ಯವಚನವನ್ನೇ) ಸಂಪತ್ತಾಗಿ ಉಳ್ಳವನು. ಪಾಪಿ ಕದನ-ಹಾಳುಯುದ್ಧ, ಕೆಟ್ಟಯುದ್ಧ].

೧೭೩. [1]ದಿಟವೆನಲು (ಅ ಕುಮಾ). [2]ಚಿತ್ತವಿಭೇದದಲಿ (ಅ ಕುಮಾ).
[ಖೇದ-ದುಃಖ. ಕಾತರಿಸು-ಉಕ್ಕು, ತುಳುಕು. ಅಂತಃಸ್ವೇದ-ಒಳಗಿನ ಬೆಮರು. ರೋಷತಾಮಸ-ತಮೋಗುಣದಿಂದ ಕೂಡಿದ ರೋಷ].

೧೭೪. [1]ಸಡಿಲಿದುದುಳಿದುದೀತನ ಮನದ ಕಡುತವಕ (ಅ). [2]ಡ (ಅ).
[ಆಲಿ ನೀರೇಜಿದುವು-ಕಣ್ಣನಲಿ ನೀರು ತುಂಬಿದುವು. ಕೋಲು-ಬಾಣ].

ಎನುತ ರಥದಲಿ ರಚಿಸಿ ಪದುಮಾ-
ಸನವನಿಂದ್ರಿಯಕರಣವೃತ್ತಿಯ-
ನನಿತುವನು ತಡೆದೆತ್ತಿ ಮೂಲಾಧಾರಮಾರುತನ ।
ಇನಶಶಿಗಳೊಂದಾಗೆ ನಾಡಿಗ-
[1]ಳನಿಲನಿಕರವನುಗಿದು ಬಿಂದು[1]
ಧ್ವನಿಕಳಾಪರಿಲುಳಿತ[2]ನಿದ್ದನು[2] ವರಸಮಾಧಿಯಲಿ ॥ ೧೭೫ ॥

ಒಡೆದು [1]ನಡು ನೆತ್ತಿಯನು ಝಳಪಿಸಿ
ಕಡುವೆಳಗು ಥಳಥಳಿಸಿ ತರಣಿಯ
ತುಡುಕಿ ಹಾಯ್ದುದು ರಶ್ಮಿ ರಂಜಿಸಿತಖಿಳ ದಿಗುತಟವ[1] ।
ಕುಡಿವೆಳಗನಸುರಾರಿ ಮುನಿಗಳ
ಗಡಣವರ್ಜುನ[2]ಕೃಪರು[2] ಕಂಡರು
ಪಡೆಯೊಳಗೆ ತಾನುಳಿಯೆ ಕಂಡವರಿಲ್ಲ ಬಳಿಕೆಂದ ॥ ೧೭೬ ॥

ಕೇಳು ಧೃತರಾಷ್ಟ್ರಾವನಿಪ ಗುರು
ಬೀಳುಕೊಟ್ಟನು ದೇಹವನು ನ-
ಮ್ಮಾಳ ವಿಧಿಯೇನಪಜಯದ ತವನಿಧಿಯಲೇ ನಮಗೆ ।
ಮೇಲೆ ಬಂದುದು ಕಷ್ಟವರಿಭೂ-
ಪಾಲರಿಗೆ ಕೇಳಿದನು ಖಳ ಪಾಂ-
ಚಾಲಸುತನೈತಂದನಲ್ಲಿಗೆ ಜಡಿವಡಾಯುಧದಿ ॥ ೧೭೭ ॥

---

೧೭೫. [1]ಳನು ಕೊಳಿಸಿ ಮುಮುಕಾರವಳಿದ (ಅ). [2]ನೆಸೆದನು (ಅ ಕುಮಾ).

[ಇಂದ್ರಿಯಕರಣವೃತ್ತಿ–ಇಂದ್ರಿಯ ಚಲನವಲನ, ಅನಿತುವನು–ಅಷ್ಟನ್ನೂ. ತಡೆದು–ನಿಗ್ರಹಿಸಿ, ನಿರೋಧಿಸಿ. ಮೂಲಾಧಾರ–ಯೋಗಶಾಸ್ತ್ರದಲ್ಲಿ ಹೇಳಿರುವ ಷಟ್ಚಕ್ರಗಳಲ್ಲಿ ಒಂದು. ಇನ ಶಶಿಗಳು–ಯೋಗಶಾಸ್ತ್ರಕ್ಕೆ ಸಂಬಂಧಿಸಿದ ಅಭಿಮಾನಿ ದೇವತೆಗಳು, ಸೂರ್ಯ ಚಂದ್ರರು. ನಾಡಿಗಳು–ಯೋಗಶಾಸ್ತ್ರದಲ್ಲಿ ಹೇಳಿರುವ ಇಳಾ, ಪಿಂಗಳಾ, ಸುಷುಮ್ನಾ ಮೊದಲಾದ ನಾಡಿಗಳು. ಬಿಂದುಧ್ವನಿಕಳಾ–ಬ್ರಹ್ಮ ವಸ್ತುವಿನ ಮೂರು ಅವಸ್ಥೆಗಳು. ಪರಿಲುಳಿತ–ಕೂಡಿದ, ಸೇರಿದ. ಸಮಾಧಿ–ಯೋಗದ ಸಿದ್ಧಿ].

೧೭೬. [1]ದೊಡಲಲಿ ಜ್ಯೋತಿ ತಡೆಯದೆ ನಡುವೆಳಗು ಥಳಥಳಿಸಿದುದು ಮೇಣ್ ತುಡುಕಿ ಭೂಲೋಕಾದಿಯಾಗಿರ್ದಖಿಳ ಲೋಕವನು (ಅ). [2]ನವರು (ಅ).

[ಒಡೆದು–ಸೀಳಿಕೊಂಡು. ತರಣಿ–ಸೂರ್ಯ. ತುಡುಕು–ತ್ವರೆಯಿಂದ ಹಿಡಿ].

೧೭೭. [ತವನಿಧಿ–ಕ್ಷಯವಾಗದ ಐಶ್ವರ್ಯ. ಪಾಂಚಾಲಸುತ–(ದ್ರುಪದನ ಮಗ) ಧೃಷ್ಟದ್ಯುಮ್ನ. ಅಡಾಯುಧ–ಮೇಲಕ್ಕೆ ಬಾಗಿದ ಕತ್ತಿ].

ಐದಿ ಮುಂದಲೆವಿಡಿದು ಬಾಗಿಸಿ
ಕೊಯ್ದನಾತನ ಕೊರಳನೆಡದಲಿ
ಹೊಯ್ದು ಮುಱಿದನು ಬರಿಯುಲಪ್ಪಳಿಸಿದನು ಬೆನ್ನೆಲುವ ।
ಕೈದಣಿಯೆ ಕಡಿಖಂಡಮಯವೆನೆ
ಹೊಯ್ದು ರಥದಲಿ ಕೆದಱಿ ಜಡಿದನ-
ಡಾಯ್ದವನು ಕಡುಗೋಪದಲಿ ನೋಡಿದನು ರಿಪುಶಿರವ ॥ ೧೭೮ ॥

ಏನಿದಚ್ಚರಿ ಕೌರವೇಂದ್ರನ
ಸೇನೆ ತಲೆಕೆಳಗಾಗುತಿದೆ ರಿಪು-
ಸೇನೆ ಬೊಬ್ಬಿಱಿದಾರುತಿದೆ ಮಡಿದಾತನಾವವನೋ ।
ಸೇನೆಗೊಡೆಯನು ಬೊಪ್ಪನಿದು ತಾ-
ನೇನು ರಥವೇ ಬಱಿದೆ ಬರುತಿದೆ
ಹಾನಿ ಜನಕಂಗಾಯ್ತೊ ಶಿವಶಿವ ಎಂದನಾ ದ್ರೋಣಿ ॥ ೧೭೯ ॥

ಕೆದಱಿ ಹೊರಳುವ ಸಾರಥಿಯನೆ-
ತ್ತಿದನು ರಣವೃತ್ತಾಂತವನು ಕೇ-
ಳಿದನು ಶಮೆ ಸೈರಣೆ ವಿವೇಕವ ನೂಕಿದನು ಸೆಱೆಗೆ ।
ಒದೆದನಳಲನು ರೋಮ[1]ಪುಳಕವ[1]
ಹೊದೆದು ಹೊರೆ ಹೆಚ್ಚಿದನು ಕಾಹೇ-
ಱಿದನು ಕಲಿ ಮನವಳುಕಿ ತಗ್ಗಿತು ರೋಷಭಾವದಲಿ ॥ ೧೮೦ ॥

---

೧೭೮. [ಐದಿ-ಬಳಿಸಾರಿ. ಬರಿ-ಪಕ್ಕೆ. ಕಡಿ ಖಂಡಮಯ-ಕತ್ತರಿಸಿಹಾಕಿದ ಮಾಂಸದಿಂದ ತುಂಬಿದ. ಅಡಾಯ್ದ-ಅಡಾಯುಧ].

೧೭೯. [ಆರು-ಗರ್ಜಿಸು. ಬೊಪ್ಪ-ತಂದೆ (ದ್ರೋಣ). ಬಱಿದೆ-ಬರಿದಾಗಿ, ಶಿರವಾಗಿ. ದ್ರೋಣಿ-ಅಶ್ವತ್ಥಾಮ].

೧೮೦. [1]ಹರುಷವ (ಅ).

[ಅಳಲು-ದುಃಖ. ರೋಮಪುಳಕ ರೋಮಾಂಚನ. ಹೊರೆ-ಹೆಚ್ಚು, ಉತ್ಸಾಹ. ಕಾಹೇಱು (ಕಾಹು + ಏಱು)-ಕೋಪದಿಂದ ಉದ್ವೇಗಗೊಳ್ಳು].

ದನುಜಹರಮಂತ್ರವನು ಮನದಲಿ
ನೆನೆದು ಕೈನೀಡಿದನು ತುದಿಯಂ-
ಬಿನಲಿ ತುಱುಗಿದ ಕಿಡಿಯ ಬಿಱು ಕೇಸುರಿಯ ದಾಳಿಗಳ ।
ತನಿವೊಗರ ಬಲುವೊಗೆಯ ಹೊರಳಿಯ
ಕನಕರಸರೇಖಾವಳಿಯ ವ್ಯ-
ಮಿನುಗುಗಳ ಹೊಂಗಱಿಯ ನಾರಾಯಣ ಮಹಾಶರಕೆ ॥ ೧೮೧ ॥

ಅಕಟ ಗುರುಹತ್ಯಾಮಹಾಪಾ-
ತಕವನೇ ನೆಱೆ ಮಾಡಿತಲ್ಲದೆ
ಸಕಲ ಲೋಕದ ಬೇರುಗೊಲೆಗೆಲೆ ಪಾಪಿ ನೀನಾದೈ ।
ವಿಕಟ ವಿಕ್ರಮ ವಿಸ್ಫುಲಿಂಗ-
ಪ್ರಕರದಲಿ ಧಗಧಗಿಸುತಿದೆ ಸಾ-
ಯಕವ ನಿಲಿಸಾ ನೀನೆನುತ ಭಂಗಿಸಿತು ಪರಿವಾರ ॥ ೧೮೨ ॥

ಅವನ ಗುರುತನವೇನು ವಿಪ್ರಾ-
ಧಮನಲಾ ಶಸ್ತ್ರೋಪಜೀವನ-
ನಿವನು ಋಷಿಯೇ ದ್ರೋಣವಧೆಯನ್ಯಾಯವೇ ತನಗೆ ।
ಇವನು ತಮ್ಮಯ್ಯನನು ನೆಱೆ ಪರಿ-
ಭವಿಸನೇ ಚಿಕ್ಕಂದು ನಿಮಗೇ-
ಕಿವನನಿಱಿದರೆ ಖಾತಿಯೆಂದನು ದ್ರುಪದಸುತ ಮುಳಿದು ॥ ೧೮೩ ॥

---

೧೮೧. [ದನುಜಹರ ಮಂತ್ರ-ನಾರಾಯಣ ಮಂತ್ರ. ತುಱುಗು-ಒತ್ತಾಗಿ, ದಟ್ಟವಾಗಿ, ತುಂಬು. ಕೇಸುರಿ-ಕೆಂಪಾದ ಉರಿ. ತನಿವೊಗರು ಹೆಚ್ಚಾದ ಕಾಂತಿ, ಕಡುಗಾಂತಿ. ಹೊರಳಿ-ಮೊತ್ತ. ಕನಕರಸರೇಖಾವಳಿ-ಚಿನ್ನದ ಲೇಪದ ಗೆರೆಗಳ ಸಮೂಹ. ಮಿನುಗು-ಹೊಳಪು, ಪ್ರಕಾಶ. ಹೊಂಗಱಿ-ಚಿನ್ನದ ಗರಿ]

೧೮೨. [ನೆಱೆ-ಹೆಚ್ಚಾಗಿ. ಬೇರುಗೊಲೆ-ಸಮೂಲಹತ್ಯೆ, ಸಂಪೂರ್ಣ ಹತ್ಯೆ ವಿಸ್ಫುಲಿಂಗ ಪ್ರಕರ-ಕಿಡಿಗಳ ಸಮೂಹ. ಸಾಯಕ-ಬಾಣ].

೧೮೩. [ವಿಪ್ರಾಧಮ-ನೀಚಬ್ರಾಹ್ಮಣ. ಶಸ್ತ್ರೋಪಜೀವನನು-ಶಸ್ತ್ರಗಳನ್ನು ಉಪಯೋಗಿಸಿ ಜೀವಿಸುವವನು. ಪರಿಭವಿಸು-ಅವಮಾನ ಮಾಡು, ತಿರಸ್ಕಾರ ಮಾಡು. ಇಱಿ-ತಿವಿ].

ಬೀಳೆ ತನುಗೊಂಡಾಳುತನವುರಿ-
ಗೂಳೆಗೊಳುತಿದೆ ಜಗವನಿತ್ತಲು
ಕೌಳಿಡುವ ಕಾಲಾಗ್ನಿಯಿದೆ ಕಟ್ಟೊಗೆಯು ಕವಚವಲಿ ।
ಕೋಳುಲಾಪರೆ ಬಾಹುಸತ್ವವ
ಕೋಳ್ಳೈ ದಿಟ ಪಂಥವೋಲೆಯು-
ಕಾಳಗದೊಳೆನುತಸುರರಿಪು ಗದುಗಜವ ನಿಲಿಸಿದನು ॥ ೧೮೪ ॥

ಹಾ ಮುರಾಂತಕ ಹಾ ಯುಧಿಷ್ಠಿರ
ಹಾ ಮರುತ್ಸುತ ಹಾ ಧನಂಜಯ
ಹಾ ಮಗನೆ ಹಾ ತಂದೆ ಹಾ ಒಡವುಟ್ಟಿದನೆ ಯೆನುತ ।
ಭೂಮಿ ಕೆಳೆಯುಳಿ ಬಾಯನಕಟಕ-
ಟಾ ಮಹೋದಧಿ ದೂರವಿನ್ನೀ-
ನೀ ಮಹಾಸ್ತ್ರಕೆ ಸಿಕ್ಕಿದೆವೆ ಯೆಂದೊಱಲಿತರಿಸೇನೆ ॥ ೧೮೫ ॥

ಪಾಯಕಂಜದಿರಂಜದಿರಿ ಘಡ
ಬಾಯಬಿಟ್ಟರೆ ಹೋಹುದೇ ನಿ-
ಮ್ಮಾಯುಷಕೆ ಹೊಣೆ ತಾನು ಹೇಳಿತ ಮಾಡಿ ಬೇಗದಲಿ ।
ಆಯುಧಂಗಳ ಬಿಸುಟು ಕರಿ ರಥ
ಜಾಯಿಲಂಗಳನಿಳಿದು ಬದುಕುವು-
ಪಾಯವೆಂದಸುರಾರಿ ಸಾಱಿದನಂದು ಕೈನೆಗಹಿ ॥ ೧೮೬ ॥

ಮುರಿಮುರಿದು ಕಟ್ಟೊಗೆಯು ಹೊಸಱಿನ
ಹೊರಳಿ ಹರಿದುದು ಸೂಸುಗಿಡಿಗಳ
ನೆರವಿ ನಸಿದುದು ನಿರ್ಮಿಸ ಹೊಂಗಱಿಯಂಬು ಹೊಳೆಹೊಳೆದು ।
ಮುರಹರನ ಪಾದಾರವಿಂದದ
ಹೊರೆಯೊಳಡಗಿತು ಹೋಯ್ತು ಭಯವು-
ಬ್ಬರವನೊಳಗೆ ಬೊಬ್ಬಿರಿದವರು ನಿಸ್ಸಾಳಕೋಟಿಗಳು ॥ ೧೮೭ ॥

---

೧೮೪. [ಕೌಳಿಡು-ಸುಟ್ಟುಹಾಕಲು ಕೊಡು. ಪಂಥವೋಲೆಯು ಕಾಳಗದೊಳು-ಶಪಥದ ನೆರವೇರಿಸುವ ಕಾದಾಟದಲ್ಲಿ]

೧೮೫. [ಮಹೋದಧಿ ಮಹಾಸಮುದ್ರ. ಒಱಲು-ಚೀರು, ಗೋಳಿಡು].

೧೮೬. [ಪಾಯ-ಅಸ್ತ್ರ, ಆಪತ್ತು. ಹೇಳಿತ ಹೇಳಿದ್ದನ್ನು. ಜಾಯಿಲ-ಜಾತಿಯ ಕುದುರೆ. ಕೈನೆಗಹಿ-ಕೈ ಎತ್ತಿ].

೧೮೭. [ಮುರಿಮುರಿದು-ತುಂಡುತುಂಡಾಗಿ. ಹರಿ-ಹ್ಯಾರಿಸು. ಸೂಸುಗಿಡಿ-ಹೊರಚೆಲ್ಲುವ ಕಿಡಿ. ನಸಿ-ನಾಶವಾಗು. ಹೊರೆ-ಸಮೀಪ. ನಿಸ್ಸಾಳ-ಒಂದು ಬಗೆಯ ಚರ್ಮವಾದ್ಯ].

ಜಗದುಸುರು ಪಸರಿಸಿತು ಹರುಷದ
ಹೊಗರು ಮಸಗಿತು ರಿಪು ವ್ರಜದ ಹಿ-
ನ್ನಗಡುಮಾಗ್ಯಮಿತ್ತ್ರಕುವದ್ದುದು ಶೋಕ ಪಂಕದಲಿ ।
ಹೊಗೆದ ಮೋಹಾಂಧ ಕಲ್ಪ್ಯಾಗ್ಲದ
ಬಿಗಿದ ಜೋಗಿಪ ಜಕಿಯೊಳಗುಸುರುವ
ನಗೆಯೊಳಿಕ್ಕೃತ್ಯಾಮಸಿದ್ದನು ಮೊಗದ ಮೋನದಲಿ ॥ ೧೮೮ ॥

ಏನು ಮಾಡುವೆ ನಿನ್ನ ಭಾಗ್ಯವಿ-
ಹೀನ ಪಕಟಾ ಕೌರವನು ಸುರ-
ಧೇನು ನಿನಗಿಂದಾಯ್ತು ಸುರತರು ಕಾಡುಮರನಾಯ್ತು ।
ಹಾನಿಯುವದಿಂಗೊಲಿದುದಾರಿ-
ದ್ದೇನಹುದು ಪರದೈವದನುಸಂ-
ಧಾನವತ್ತಲು ಸುಡಲಿ ನಿನ್ನ ವಿರೋಧದನು ಹಾಳಿಯುಕೆ ॥ ೧೮೯ ॥

ಆವ ಶರದಲಿ ಕೊಂಡೆ ನಿನ್ನವ-
ರಾವ ಬಲದಲಿ ಕಾಂಡು ಭುವನದೊ-
ಳಾವನ್ಯೆ ಸಮಜೋಳಿ ನಿನ್ನರಮನೆಯ ಸುಭಟರಿಂಗೆ ।
ಆವನಿದ್ದೇ[1]ಗುವನು[1] ಜಗದಧಿ-
ದೈವದಲಿ ಸೆಣಸಿದಿರಿ ಪಾಂಡವ-
ಜೀವದೊಡನಾಡಿದನು[2] ಗದುಗಿನ ವೀರನಾರಾಯಣ ॥ ೧೯೦ ॥

---

೮೮. [ಜಗದು-ಉಸ್ಸಿರು, ದುಃಖ. ಅಡ್ಡು-ಮುಂಗಾಗಿ. ಶೋಕಪಂಕ-ದುಃಖವೆಂಬ ಕೆಸರು. ಹೊಗೆದ-ಕಪ್ಪಿಟ್ಟ. ಮೋನ-ಮೌನ].

೮೯. [ಸುರಧೇನು-ಕಾಮಧೇನು. ಸುರತರು-ಕಲ್ಪವೃಕ್ಷ. ಅನುಸಂಧಾನ-ವಿಚಾರ].

೯೦. [1]ನಡುವುದು (ಅ ಕುಮಾ). [2]ರುಹಿದನು (ಅ).

[ಬಗುವನು-ಏನು ಮಾಡಬಲ್ಲನು. ಸೆಣಸು-ಸ್ಪರ್ಧಿಸು, ಹೋರಾಡು. ಪಾಂಡವ ಜೀವ-ಪಾಂಡವರನ್ನೇ ತನ್ನ ಜೀವವಾಗಿ ಉಳ್ಳವನು].

ಕರ್ಣಪರ್ವ

೧. ಶಲ್ಯನು ಕರ್ಣನಿಗೆ ಸಾರಥಿಯಾದದ್ದು

ಬಿಗಿದ ತಿಮಿರದ [1]ಥಟ್ಟು[1] ಸೂರ್ಯನ
ಸೊಗಡು ಹೊಯ್‌ದರೆ ಮುಱಿಯದೇ ಕಾ-
ಳೆಗಕೆ ಕರ್ಣನ ಕೈದು ಭಂಡಾರಿಸಿದುದಿನ್ನೆಬರ ।
ತೆಗೆಸುವೆನು ನಾಳಿನಲಿ [2]ನಿಮ್ಮಯ[2]
ಮೊಗದ ದುಗುಡದ ದಡ್ಡಿಯನು ಮೈ-
ದೆಗೆಯದಿರಿ ಕಲಿಯಾಗಿ ಯೆಂದನು [3]ನೃಪತಿ ಸುಭಟಂಗೆ[3] ॥ ೧ ॥

ಜೀಯ ಸಂಶಯವಿಲ್ಲ ಗುರು ಗಾಂ-
ಗೇಯರಳುಕಿದರೇನು ಕಲಿ ರಾ-
ಧೇಯನೇ ವಜ್ರಾಂಗಿಯಲ್ಲಾ ನಮ್ಮ ಮೋಹರಕೆ ।
ರಾಯ ನೀ ಪತಿಕರಿಸಿದರೆ ಚ-
ಕ್ರಾಯುಧನ ಚಾತುರ್ಯ ಕೊಳ್ಳದು
ಜೀಯ ಕರ್ಣನ ಮುಂದೆಯೆಂದುದು ನಿಖಿಳಪರಿವಾರ ॥ ೨ ॥

ವಿರಚಿಸಿತು ಪಟ್ಟಾಭಿಷೇಕೋ-
ತ್ಕರುಷ ಮಂತ್ರಾಕ್ಷತೆಯ ಮಳೆಗಳ
ಕಱೆ[3]ದರ[1]ಮಳದ್ವಿಜರು[1] ಜಯರವ [2]ವೇದ[2]ಘೋ[3]ಷದ[3]ಲಿ ।
ಗುರುಸುತಾದಿಮಹಾಪ್ರಧಾನರು
ದರುಶನವ ನೀಡಿದರು ಕರ್ಣನ
ಬಿರುದಿನುಬ್ಬಟೆಲಹರಿ ಮಸಗಿತು ವಂದಿಜಲಧಿಯಲಿ ॥ ೩ ॥

---

೧. [1]ಕೆಚ್ಚು (ಅ ಕುಮಾ). [2]ರಾಯರ (ಅ). [3]ಕೌರವರ ರಾಯ (ಅ).
[ಸೊಗಡು-ಸ್ಪರ್ಶ, ಸೋಂಕು. ಮುಱಿ-ಭಂಗವಾಗು. ಭಂಡಾರಿಸು-ಭಂಡಾರವನ್ನು ಸೇರು. ದಡ್ಡಿ-ಮುಖ ಪರದೆ, ತೆರೆ. ಮೈದೆಗೆ-ಹಿಮ್ಮೆಟ್ಟು].

೨. [ವಜ್ರಾಂಗಿ-ವಜ್ರಕವಚವನ್ನು ಧರಿಸಿರುವವನು, ಕರ್ಣ. ಚಕ್ರಾಯುಧ-ಕೃಷ್ಣ. ಕೊಳ್ಳದು-ಫಲಕಾರಿಯಾಗುವುದಿಲ್ಲ].

೩. [1]ವನೀಸುರರು (ಅ ಕುಮಾ). [2]ಘೋಷ (ಅ ಕುಮಾ), ಸ್ತೋತ್ರ (ಅ-ಅಡಿಟಿಪ್ಪಣಿ). [3]ಹೆಯ (ಅ).
[ಉತ್ಕರುಷ-ಆಧಿಕ್ಯ, ಅತಿಶಯತೆ. ಅಮಳದ್ವಿಜರು-ಪವಿತ್ರರಾದ ಬ್ರಾಹ್ಮಣರು. ಉಬ್ಬಟೆ-ಆಡಂಬರ. ಲಹರಿ-ತರಂಗ. ವಂದಿ-ಹೊಗಳುಭಟ್ಟ]

ಇಂದು ಬರಹೇಳರ್ಜುನನ ರಣ-
[1]ವಿ[1]ಂದಲೇ ಭೀಮಂಗೆ [2]ಭಾರಿಯು[2]
ಕಂದುಕಸರಿಕೆ ಬೇಡ ಕಾದಲಿ ಧರ್ಮನಂದನನು ।
ಹಿಂದೆ [3]ನಂಬಿಸಿ[3] ಭೀಷ್ಮಗುರುಗಳ
ಕೊಂದ ಗೆಲವಿನಲುಬ್ಬಬೇಡೆವು-
ಗಿಂದು ದಳ[4]ಪತಿ[4] ಕರ್ಣನೆಂದುದು [5]ನಿಖಿಳಪರಿವಾರ[5] ॥ ೪ ॥

ಬಂದುದಿರುಳೋಲಗಕೆ ರಾಯನ
ಮುಂದಿ ದಳಪತಿ [1]ಶಲ್ಯ[1]ಕೃಪಗುರು-
ನಂದನಾದಿ[2]ಮಹಾಪ್ರಧಾನರು ದೊರೆಯು ನೇಮದಲಿ[2] ।
ಇಂದಿನಾಹವದೊಳಗೆ ಕುಂತೀ-
ನಂದನರ ಬೊಬ್ಬಾಟ ಬಲುಹಾ-
ಯ್ತೆಂದು ಮೆಲ್ಲನೆ ಮಾತು ತೆಗೆದನು ಕೌರವರ ರಾಯ ॥ ೫ ॥

ಬಲುಹಲೇ ಬಳಿಕೇನು ಹಗೆಯ-
ಗ್ಗಳಿಕೆ ಮೆಱೆಯದೆ ಮುರವಿರೋಧಿಯ
ಬಲುಹ [1]ನೋಡಾ[1] ಪಾರ್ಥನೆಂಬವನಾವ ಮಾನಿಸನು ।
ಬಲುಹು ಸಾರಥಿಯಿಂದ ರಿಪುಗಳ
ಗೆಲವು ಸಾರಥಿಯಿಂದ ಸಾರಥಿ-
ಯೊಲಿದ[1]ಡೇನೇನಾಗದೆಂದನು ಭೂಪತಿಗೆ ಕರ್ಣ[1] ॥ ೬ ॥

---

೪. [1]ದಿಂ (ಅ). [2]ಮನದಲಿ (ಅ ಕುಮಾ). [3]ನಮ್ಮೀ (ಅ). [4]ವಾಯಿ (ಅ ಕುಮಾ).
[5]ಭಟರು ಬೊಬ್ಬಿರಿದು (ಅ ಕುಮಾ).
[ಕಂದು ಕಸರಿಕೆ–ಮನಸ್ಸಿನ ಅಸಮಾಧಾನ ಮತ್ತು ಖಿನ್ನತೆ].

೫. [1]ಶಕುನಿ (ಅ ಕುಮಾ). [2]ಪ್ರಕೃತಿ ಸಚಿವಪಸಾಯಿತರು ಸಹಿತ (ಅ ಕುಮಾ).

೬. [1]ಡೆನಗಹುದೆಂದು ಕರ್ಣನು ಕೌರವನೊಳೆಂದ (ಅ).
[ಮುರವಿರೋಧಿ–ಕೃಷ್ಣ. ಮಾನಿಸ–ಮನುಷ್ಯ].

*ಭಾರಿ ಧನುವಿದ್ದೇನು ತೋಳಿನ
ತೋರದಲಿ ಫಲವೇನು* ಕೈದುಗ-
ಳಾರನಂಜಿಸಲಾಪವಾಹವರಂಗ ಮಧ್ಯದಲಿ ।
ಸಾರಥಿಯು ಬಲುಹಿಲ್ಲದಿದ್ದೊಡೆ
ಭೂರಿ ಸಾಧನವಿವು ನಿರರ್ಥಕ-
ಮಾರಿಗುಸುರುವೆನೆನ್ನ ಕೊಱತೆಯನೆಂದನಾ ಕರ್ಣ || ೭ ||

ಲೇಸನಾಡಿದೆ ಕರ್ಣ ನಿನ[1]ಗಿ-
ನ್ನೈ[1]ಸಲೇ ಸಾರಥಿಯ ಕೊಱತೆ ಸು-
ರಾಸುರರ ಥಟ್ಟಿನಲಿ ತೊಡಕುವ [2]ರಾರು[2] ನಿನ್ನೊಡನೆ ।
ಈ ಸಮಸ್ತನೃಪಾಲವರ್ಗದೊ-
ಳಾಸೆಯಾರಲಿ ಸೂತಕರ್ಮಾ-
ಭ್ಯಾಸಿಯನು ಜೋಡಿಸುವೆನೆಂದನು ಕೌರವರ ರಾಯ । || ೮ ||

ಹಲವು ಮಾತೇಕರಸ ನುಡಿದುದು
ಫಲಿಸಲರಿ[1][ದ][1]ದು ದೈವಗತಿಯಲಿ
ಫಲಿಸಿತಾ[2][ದೊಡೆ][2] ರಾಜ್ಯಲಕ್ಷ್ಮಿಗೆ ಸೂಳೆತನವಹುದೆ ।
ಸುಲಭವಾದೊಡೆ ಮಾದ್ರರಾಜನ
ತಿಳುಹಿ [3]ಸೇರಿ[3]ಸು ರಿಪುಗಳೈವರ
ತಲೆಗೆ [4]ನೀ ಹಿಡಿ[4] ಸಂಚಕಾರವನೆಂದನಾ ಕರ್ಣ || ೯ ||

---

೭. * .... * ಈ ಗುರುತುಗಳ ನಡುವಣ ಪದ್ಯಭಾಗ ಮಾತ್ರ ‘ಅ’ ಪ್ರತಿಯಲ್ಲಿ ಇರುವಂತೆ ಇದ್ದು, ಉಳಿದ ಪದ್ಯ ಭಾಗವನ್ನು ಅ-ಕುಮಾ ಪ್ರತಿಗಳಿಂದ ತೆಗೆದುಕೊಂಡು ಪದ್ಯವನ್ನು ಪೂರ್ಣಮಾಡಿದೆ.
[ತೋರ-ದೊಡ್ಡದು, ದಪ್ಪನೆಯದು. ಭೂರಿ-ಅಪಾರ, ಹೆಚ್ಚಿನ].

೮. [1]ಗೇಸ್ಸೈ (ಅ). [2]ನಾವ (ಅ).
[ಸೂತಕರ್ಮಾಭ್ಯಾಸಿ-ಸಾರಥಿಯ ಕೆಲಸದಲ್ಲಿ ಅನುಭವವುಳ್ಳವನು].

೯. [1]ಯ (ಅ ಆ ಕುಮಾ). [2]ದಡೆ (ಅ ಕುಮಾ), ದರೆ (ಅ). [3]ಸ್ಯೆ (ಅ ಕುಮಾ). ಹಾಯಸ್ಕು (ಅ ಕುಮಾ).
[ಅರಿದದು (ಅರಿದು + ಅದು)-ಕಷ್ಟಸಾಧ್ಯವಾದುದು. ಮಾದ್ರರಾಜ-ಶಲ್ಯ].

ಉಬ್ಬಿದನು ರೋಮಾಂಚ ಮೈಯಲಿ
ಹಬ್ಬಿದುದು ಹೊರೆ[1]ಯೇಱಿ[1] ಮಱವೆಯ
ಮಬ್ಬು ಕವಿದುದು ಕರ್ಣನಾಡಿದ ಮಾತ [2]ಸವಿಸವಿ[2]ದು ।
ಟೆಬ್ಬರಿಸುವಿಂದ್ರಿಯತುರಂಗದ
[3]ಕಬ್ಬಿ[3] ಕಳಚಿತು ಕೌರವೇಂದ್ರನು
[4]ಶಬ್ಬ[4]ಲಗ್ಗೆಯ ಹರುಷದಲಿ ಹೊಱವಂಟನರಮನೆಯ ॥ ೧೦ ॥

ಹರಿದರರಸಾಳುಗಳು ರಾಯನ
ಬರವನಾತಂಗೆಱಹಿದರು ಕಡು-
ಹರುಷದಲಿ ಕಲಿಶಲ್ಯ ಹೊಱವಂಟನು ನಿಜಾಲಯವ ।
ಅರಸುಮಕ್ಕಳ ವಜ್ರಮಣಿಯಾ-
ಭರಣಕಿರಣಸ್ತೋಮದೀ[1]ಪ್ತಿ-[1]
ಸ್ಫುರಿತದ್ಯುಳಮಧ್ಯದಲಿ ಕಂಡನು ಕೌರವೇಶ್ವರನ ॥ ೧೧ ॥

ಅಂದಳವನಿಳಿದರಸನಾತಗೆ
ವಂದಿಸಿದನಾ ಮಾದ್ರಪತಿ ಸಾ-
ನಂದದಲಿ ತೆಗೆದಪ್ಪಿ ತಂದನು ರಾಜಮಂದಿರಕೆ ।
ಇಂದಿದೇನಿದ್ದಿ[1]ದ್ದು[1] ನೀನೇ
ಬಂದ ಕಾರ್ಯವಿಶೇಷವೇನುಂ-
ಟೆಂದು ಕೌರವರಾಯನನು ಬೆಸಗೊಂಡನಾ ಶಲ್ಯ ॥ ೧೨ ॥

---

೧೦. [1]ಹೆಚ್ಚಿ (ಅ). [2]ನೆನೆನೆನೆ (ಅ). [3]ಗಬ್ಬ (ಅ). [4]ಸರ್ಬ (ಅ ಕುಮಾ).
[ಹೊರೆಯೇಱು-ಉತ್ಸಾಹಗೊಳ್ಳು. ಟೆಬ್ಬರಿಸು-ಮೊಂಡಾಟಮಾಡು, ತುಂಟತನ ಮಾಡು. ತುರಂಗ-ಕುದುರೆ. ಕಬ್ಬಿ-ಕಡಿವಾಣ. ಸಬ್ಬಲಗ್ಗೆಯ-ಒಟ್ಟಾಗಿ ಆಕ್ರಮಣ ಮಾಡಿದ, ಕವಿದ].

೧೧. [1]ಪ (ಅ ಕುಮಾ).
[ಸ್ತೋಮ-ಸಮೂಹ. ದೀಪ್ತಿ-ಕಾಂತಿ. ಸ್ಫುರಿತ-ಹೊಳೆದ].

೧೨. [1]ರವು (ಅ).
[ಅಂದಳ (ಣ)-ಪಲ್ಲಕ್ಕಿ. ಇದ್ದಿದ್ದು-ಇದ್ದಕ್ಕಿದ್ದಂತೆ, ಅಕಸ್ಮಾತ್ತಾಗಿ].

ಏನ ಹೇಳುವೆನೆನ್ನ ಪುಣ್ಯದ
ಹಾನಿಯನು ನುಗ್ಗಾಯ್ತು ಬಲ ಸು-
ಮ್ಮಾನ ಬೀತುದು ಬಿರುದರಿಗೆ ಕಾಲೂರಿತವಮಾನ ।
[1]ಜ್ಞಾನ[1]ದೀಕ್ಷೆಯ ಹಿಡಿದವರೆನ್ನ ಸು-
ಮಾನಸುಭಟರು ಜಯಸಿರಿಯ ಸಂ-
ಧಾನ ಮುರಿದುದು ಮಾವ [2]ನಿಮಗಜ್ಞಾತ[2]ವೇನೆಂದ ॥ ೧೩ ॥

ಮುರಿವಡೆದು ಕಲಿಭೀಷ್ಮ[1]ನೇ ಕಾ-
ಲ್ಗರಿಸಿ[1]ದನು ದ್ರೋಣಂಗೆ ಬಂದುದ-
ನರುಹಲೇ[2]ಕದ[2] ಬಳಿಕ ಕರ್ಣನ ವೀರಪಟ್ಟದಲಿ ।
ನೆರವಣಿಗೆಯುಂಟಾದೊಡೊಂದೇ
ಕೊರತೆಯಿದು ನಿಮ್ಮಿಂದ ಕಡೆಯಲಿ
ನೆರತೆಯಹು[3]ದೆನಗು[3]ತ್ತರೋತ್ತರಸಿದ್ಧಿಯಹುದೆಂದ ॥ ೧೪ ॥

ಮಾವ ಸಾರಥಿಯಾಗಿ ಕರ್ಣನ
ನೀವು ಕೊಂಡಾಡಿದೊಡೆ ಫಲುಗುಣ-
ನಾವಪಾಡು ಸುರಾಸುರರ ಕೈಕೊಂಬನೇ ಬಳಿಕ ।
ಆವುದೆನಗಭ್ಯುದಯವವನೀ-
ಪಾವಪರಿಯಲಿ ಮನ್ನಿಸಿದೊಡರೆ-
[1]ಜೀವಿ[1]ಕೌರವವಂಶ[2]ವೇ ಸಪ್ರಾ[2]ಣಿಸುವುದೆಂದ ॥ ೧೫ ॥

---

೧೩. [1]ಜ್ಯೈನ (ಅ ಕುಮಾ). [2]ನಿನ್ನಜ್ಞಾನ (ಅ).
[ನುಗ್ಗಾಗು-ಹುಡಿಗುಟ್ಟಿಹೋಗು, ಧ್ವಂಸವಾಗು. ಸುಮ್ಮಾನ (ಸುಮಾನ
ಸಂತೋಷ. ಬೀತುದು-ನಷ್ಟವಾಯಿತು, ಕ್ಷಯವಾಯಿತು (ಧಾ, ದೀ). ಜ್ಞಾ
ದೀಕ್ಷೆ-ಅನಾಸಕ್ತಿ (?). ಅಜ್ಞಾತ-ತಿಳಿಯದುದು].

೧೪. [1]ಸರಳನುಧರಿ (ಅ). [2]ಕಕೆ (ಅ ಕುಮಾ). [3]ದಿಸ್ವ (ಅ ಕುಮಾ).
[ಮುರಿವಡೆದು-ಸೋತು. ನೆರವಣಿಗೆ-ನೆರತೆ-ಪರಿಪೂರ್ಣತೆ. ಉತ್ತರೋತ್ತ
ಭವಿಷ್ಯದಲ್ಲಿ].

೧೫. [1]ಜೀವಿ (ಅ ಕುಮಾ). [2]ವೇ ನೆಃ[3] ಸತ್ರ್ಯಾ (ಅ).
[ಹಾಡು-ಲೆಕ್ಕ. ಸಪ್ರಾಣಿಸು-ಪುನಶ್ಚೇತನಗೊಳ್ಳು].

ಖೂಳನೆಂಬೆನೆ ನೀ[1]ನು ನಿಪುಣನು
ಬಾಲನೆಂಬೆನೆ ಸಕಲ ಪ್ರೌಢಿಕೆ[1]
ಮೇಲೆ ಸಲಿಕದ ಬೀಡು ಬಿಟ್ಟಿದೆ ನಿನ್ನ ಮನದೊಳಗೆ[2] ।
ಹೇಳು ಹೇಳಸ್ಸೊವ್ಯ ನುಡಿನುಡಿ
ಕೇಳುವೆನು ಕಿವಿಯಾರ ಕರ್ಣನ
ಕಾಳಗಕೆ ನಾವ್ ಸಾರಥಿಗಳೇ ಶಿವಶಿವಾ ಎಂದ ॥ ೧೬ ॥

ಅರುಣ ಸಾರಥಿ ಭುವನ ಕಾರ್ಯದ
ಧುರವ ಹೊಱನೇ ಕೃಷ್ಣನಲ್ಲಾ
ನರನ ಸಾರಥಿಯಾಗನೇ ಪರಕಾರ್ಯದನುವರಿದು ।
ಹರನ ಸಾರಥಿ ಕಮಲಸಂಭವ
ಸುರರ ಕಾರ್ಯಕ್ಕೊದಗನೇ ಸ-
ತ್ಪುರುಷರೇ ಪರಕಾರ್ಯನಿಷ್ಠರು ಕೋಪಿಸನೇಕೆಂದ ॥ ೧೭ ॥

ಖೂಳನನು ಹಿಡಿತಂದು ಧರಣೀ-
ಪಾಲ[1]ರಲಿ ಸರಿಮಾಡಿ[1] ರಾಜ್ಯದ
ಮೇಲೆ ನಿಲಿಸಿ[2]ದೆ[2] ಬಳಿಕ ಬಂದುದು ಖೂಳತನ ನಿನಗೆ ।
ಕೇಳು ಮೇಲಿನ [3]ನೀನು[3] ನಿನ್ನಲಿ
ಬೀಳುಕೊಂಡುದು ಸಾಕು ನಮಗಿ-
ನ್ನಾಳುತನವೇಕೆನುತ [4]ಮಾದನುರಿದೆದ್ದ[4]ನಾ ಶಲ್ಯ ॥ ೧೮ ॥

---

೧೬. [1]ಸಮಸ್ತ ಕಲಾಕೌಶಲ ನಿಪುಣನು ಬಾಲನೆಂಬೆನೆ (ಅ ಕಾಪಿ). [2]ತಳೆತ ತನುವಿನಲಿ (ಅ ಕಾಪಿ).

[ಸಕಲ ಪ್ರೌಢಿಕೆ-ಎಲ್ಲ ವಿಷಯಗಳಲ್ಲಿಯೂ ಪ್ರಾವೀಣ್ಯ. ಸಲಿಕ-ಸಲಿಗೆಯು. ಬೀಡುಬಿಟ್ಟಿದೆ-ನೆಲೆಸಿದೆ].

೧೭. [ಅರುಣ-ಸೂರ್ಯನ ಸಾರಥಿ. ಧುರ-ಭಾರ, ಹೊಣೆಗಾರಿಕೆ. ಅನುವ-ಸಂದರ್ಭವನ್ನು. ಕಮಲಸಂಭವ-ಬ್ರಹ್ಮ].

೧೮. [1]ಸರಿ ಮಾಡಿದೊಡೆ (ಅ). [2]ದ (ಅ). [3]ನಾಕಿ (ಅ). [4]ಭಿಮ್ಮನೆ ಹಿಂದ (ಅ ಕಾಪಿ).

[ಸರಿಮಾಡಿ-ಸಮಾನನನ್ನಾಗಿ ಮಾಡಿ. ನೀನೆ-ಎಲ್ಲ, ದಿಟ. ಬೀಳುಕೊಂಡುದು-ಹೊರಟುಹೋಯಿತು. ಆಳುತನ-ಸೇವಕತನ. ಮಾದನುರಿ-ಹಿಮ್ಮೆಟ್ಟು, ಹಿಂದೆಗೆ].

ಒಡನೆ ನಿಂದನು ಸೆಱಗೆ ಹಿಡಿದವ-
[1]ಗಡವಿದೇ[1]ಕೆನ್ನೆನುತ ಗುಣದಲಿ
ನುಡಿದು ಕುಳ್ಳಿರಿಸಿದನು ಸಂತೈಸಿದನು ವಿನಯದಲಿ ।
ನುಡಿಗೆ ಕೋಪಿಸಲೇಕೆ ಮನ[2]ಕೊ[2]ಡ-
ಬಡುವದೇ ಕೈಕೊಂಬುದಲ್ಲ[3]ದೊ-
ಡೊ[3]ಡೆಯರುಂಟೇ ನಿಮಗೆ ಯೆಂದನು ಕೌರವರ ರಾಯ ॥ ೧೯ ॥

ಸವಱದರು ಕುರುವಂಶವನು ಪಾಂ-
ಡವರು ಸ[1]ಕಲ[1] ಮಹಾರಥರು ಸಲೆ
ಸವೆದುದಿಲ್ಲಿ ನದೀಸುತದ್ರೋಣಾದಿ[2]ನಾಯಕರು[2] ।
ಅವ[3]ರೊಳ[3]ಳಿದವರಿಬ್ಬರೇ ನ-
ಮ್ಮವಸರಕೆ [4]ಸಾರಥ್ಯವನು[4] ನಿ-
ಮ್ಮವರ ಮೇಲನು[5]ರಾಗವುಳ್ಳೊ[5]ಡೆ ಮಾ[6]ಡು[6] ಮಾಣೆಂದ ॥ ೨೦ ॥

ನಿನ್ನ ಕೈಯಲಿ [1]ಬ[1]ರಲಿ ಸತ್ತಿಗೆ
ಎನ್ನ ಕೈಯಲಿ ಹೊಡಿಸು ಬಂಡಿಯ
ನಿನ್ನ ತಮ್ಮನ ಹೆಗಲಲಾತನ ಹಡಪ ಹಾಯ್ಕಿರಲಿ ।
ನಿನ್ನ ಬಂಧುಗಳವನ ಬೇಟೆಯ
ಕುನ್ನಿಗಳ ಹಿಡಿಯಲಿ ಸುಯೋಧನ
ನಿನ್ನ ಭಾಗ್ಯವನೊದೆದು ಕಳೆ ಕೇಡಾವುದೆನಗೆಂದ ॥ ೨೧ ॥

---

೧೯. [1]ಗಡಿಸಲೇ (ಅ ಕುಮಾ). [2]ವೊ (ಅ ಕುಮಾ). [3]ದೆಯೋ (ಅ).
[ಅವಗಡ–ಪ್ರತಿಭಟನೆ. ಗುಣದಲಿ–ಒಳ್ಳೆಯತನದಿಂದ, ನಯವಾಗಿ].

೨೦. [1]ಹಿತ (ಅ). [2]ಗಳು ಸಹಿತ (ಅ ಕುಮಾ). [3]ರಲ (ಅ). [4]ಸಾಹಸಿಗರ್ಕೈ (ಅ).
[5]ಮಾನವಿದ್ದೊ (ಅ). [6]ಋ (ಅ).
[ಸವಱು–ನಾಶಮಾಡು. ಸಲೆ–ಸಂಪೂರ್ಣವಾಗಿ. ಸವೆ–ಕಳೆ. ಅವಸರ–ಸಮಯ.
ಅನುರಾಗ–ಪ್ರೀತಿ. ಮಾಣು–ಬಿಡು].

೨೧. [1]ಯಿ (ಅ).
[ಸತ್ತಿಗೆ–ಛತ್ರಿ. ಬಂಡಿ–ರಥ. ಹಡಪ–ಚೀಲ. ಕುನ್ನಿ–ನಾಯಿ].

ಗೆ[1]ಲುವೆ[1]ನವದಿರನೆಂಬ ಬ[2]ಜ್ಜಿ[2]ಕ-
ಕ್ಕುಲಿತೆಯಲ್ಲದೆ ದ್ರೋಣಭೀಷ್ಮರಿ-
ಗಳುಕದರಿಭಟರಿವನ [3]ಕೊಂಬರೆ[3] ಕಂಡು ಮರುಳಾದೈ ।
ಬಲುಬಿದಿರನುಚ್ಚಳಿಸುವಳಿಮುಖ-
ಕೆಳೆಯ ಕಬ್ಬಾನುವುದೆ ಕೌರವ-
ಕುಲವನದ್ದಿದೆ ಪಾಪಿ ಕಷ್ಟವ ನೆನೆದೆ ಹೋಗೆಂದ ॥ ೨೨ ॥

ಅಸುರದ ಬೆಱಗೇಕೆ ನಮ್ಮೊಡ-
ನೀಸು ಮಾಣೇಕೆಮ್ಮ ರಕ್ಷಿಸು-
ವಾಸೆಯುಂಟೇ ಮಾ[1]ಡು[1] ಮಾಣ್ಬುದು ಕರುಣವಿಲ್ಲದೊಡೆ ।
ವಾಸಿವಟ್ಟವ ನೋಡಿದನೆ ಲ-
ಕ್ಷ್ಮೀಶನವರಲಿ ಸೂತಕರ್ಮಾ-
ಭ್ಯಾಸಿಯೇ ಮುರವೈರಿ[2]ಯೆಂದನು ಕೌರವರಾಯ ॥ ೨೩ ॥

ಒಣಗುತಿದೆ ಕುರುವಂಶ[1]ಲತೆ[1] ಫಲು-
ಗುಣನ ಕೋಪಾನಲನ ನಾಲಗೆ
ಕೆಣಕುತಿದೆ ಕಕ್ಕುಲಿತೆ[2]ಪಟ್ಟೊಡೆ[2] ಕಾಣೆ ಕಾವವರ ।
ಅಣಕಿಸದೆ ಕಾರುಣ್ಯವರ್ಷವ-
ನೊಣ[3]ಗಲ[3]ಲಿ ಸುರಿ ಪಾಪಿಮಕ್ಕಳ
ಹೆಣನ ಕಾಣುತ ದುಃಖವಿಲ್ಲ[4]ವೆ ಮಾವ ನಿಮಗೆಂದ[4] ॥ ೨೪ ॥

---

೨೨. [1]ಲಿ ದೆನಿ (ಅ). [2]ಲು (ಅ). [3]ಬಗೆವರೆ (ಅ).
[ಬಜ್ಜಿ–ವ್ಯರ್ಥವಾದ. ಕಕ್ಕುಲಿತೆ–ವ್ಯಾಮೋಹ. ಕೊಂಬರೆ–ಲೆಕ್ಕಿಸುತ್ತಾರೆಯೆ. ಉಚ್ಚಳಿಸು–ಸೀಳು. ಅಳಿಮುಖ–ದುಂಬಿ. ಅನು–ತಡೆ].

೨೩. [1]ಡಿ (ಅ ಕುಮಾ). [2]ಮುನ್ನೆಂದನು ಸುಯೋಧನನು (ಅ ಕುಮಾ).
[ಅಸುರದ–ಭಯಂಕರವಾದ, ಬೇಸರದ. ಈಸು–ಇಷ್ಟೊಂದು. ಮಾಣ್–ಬಿಡು. ವಾಸಿವಟ್ಟ–ಮೇಲು ಕೀಳು ಎಂಬ ಭಾವನೆ, ಖ್ಯಾತಿ ಅಪಖ್ಯಾತಿಗಳ ಪದವಿ. ಸೂತ ಕರ್ಮಾಭ್ಯಾಸಿ–ರಥ ನಡಸುವ ಅಭ್ಯಾಸವುಳ್ಳವನು].

೨೪. [1]ವೀ (ಅ). [2]ಬಟ್ಟರೆ (ಅ ಕುಮಾ). [3]ಗಿನಲಿ (ಅ). [4]ದುರಾತ್ಮ ನೀನೆಂದ (ಅ ಆ ಕುಮಾ); ಸ್ವೀಪಾ (ಅ ಪ್ರತಿಯ ಪಾಠಾಂತರ).
[ಕೋಪಾನಲ-ಕೋಪಾಗ್ನಿ. ಕಾರುಣ್ಯವರ್ಷ–ಕರುಣೆಯ ಮಳೆ. ಒಣಗಲು–ಒಣಗಿಹೋದದ್ದು, ಬಾಡಿಹೋದದ್ದು (=ಒಣಗಿದ ಕುರುವಂಶ ಲತೆ).]

ಸೂತಕುಲಸಂಭವನೆ ಭುವನ-
ಖ್ಯಾತಕರ್ಣನು ಸಾಕಿದಾತನು
ಸೂತನಾದೊಡೆ ಮಾವ ಕೇಳನ್ವಯಕೆ ಹಳಿವುಂಟೇ ।
ಸ್ವಾತಿಯುದಕದೊಳಾದ [1]ಮುಕ್ತಾ-[1]
ವ್ರಾತ[2]ಕಯ್ಯನೆ ಚಿಪ್ಪ[2] ನಿಮಗಿ-
ನ್ನೇತಕೀ ಸಂದೇಹ [3]ರವಿಸುತ ಸೂತನಲ್ಲೆಂದ[3] ॥ ೨೫ ॥

ಈ ದುರಾಗ್ರಹ ನಿನ್ನ ಚಿತ್ತದೊ-
ಳಾದುದೇ ತಪ್ಪೇನು ಕೋಗಿಲೆ-
ಯಾದರಿಸಿದೊಡೆ ಬೇವು ಮಾವಹುದಾದೊಡೆಮಗೇನು ।
ಕಾದಿ ಗೆಲುವೊಡೆ ಭಾರಿಗುರುಭೀ-
ಷ್ಮಾದಿಭಟರೇನಾದರೈ ತಾ-
ನಾದುದಾಗಲಿ ನಾವು ಸಾರಥಿಯಾದೆವೇಳೆಂದ ॥ ೨೬ ॥

ನಿಮ್ಮ ವಿಜಯಶ್ರೀಯ ಕಡೆಗ-
ಣ್ಣೆಮ್ಮಮುಖದಲಿ ಮುರಿದುದಾದೊಡೆ-
ನಮ್ಮ ಕೊರತೆಯದೇಕೆ ಕರಸ್ವೈ ಸೂತನಂದನನ ।
ನಮ್ಮ ಹೇಳಿಕೆಯಾವುದದನೀ-
ತಮ್ಮ ಮೀಱಿದು ನಡೆದನಾದೊಡೆ
ನಮ್ಮ ವಾಘೆಯ ಬೀಳುಕೊಡುವೆವು ರಾಯ ಹೇಳೆಂದ ॥ ೨೭ ॥

---

೨೫. [1]ಮೌಕ್ತಿಕ (ಅ ಕುಮಾ). [2]ಕಯ್ಯನೆ ಚಿಪ್ಪ (ಅ ಕುಮಾ), [3]ಸಾರಥಿಯಾಗಿ ಸಾಕೆಂದ (ಅ)

[ಸೂತಕುಲಸಂಭವ–ಸಾರಥಿ ವಂಶದಲ್ಲಿ ಹುಟ್ಟಿದವನು. ಅನ್ವಯ–ವಂಶ. ಹಳಿವು–ನಿಂದೆ, ಅಪಕೀರ್ತಿ. ಸ್ವಾತಿಯುದಕ–ಸ್ವಾತಿ ನಕ್ಷತ್ರದ ಮಳೆಹನಿಯ ನೀರು. ಮುಕ್ತಾವ್ರಾತ–ಮುಕ್ತಾವಳಿ, ಮುತ್ತಿನ ರಾಶಿ].

೨೬. [ದುರಾಗ್ರಹ–ಕೆಟ್ಟಹಟ].

೨೭. [ವಿಜಯಶ್ರೀ–ವಿಜಯಲಕ್ಷ್ಮಿ. ಕಡೆಗಣ್ಣು–ಕಡೆಗಣ್ಣ ನೋಟ, ಕಟಾಕ್ಷ. ಮುರಿ–ತಿರುಗು. ವಾಘೆ–ಲಗಾಮು].

ಬೀಳುಕೊಂಡನು ಶಲ್ಯನನು ಭೂ-
ಪಾಲನಿತ್ತಲು ಕರ್ಣನಾಯುಧ-
ಶಾಲೆಯಲಿ ಶುಚಿಯಾಗಿ ಶಸ್ತ್ರಾಸ್ತ್ರವನು ಪೂಜಿಸಿದ ।
ಸಾಲದೀವಿಗೆಗಳನು ಶಸ್ತ್ರ-
ಜ್ವಾಲೆ ಮಿಕ್ಕವು ತೀಕ್ಷ್ಣಧಾರಾ-
ಭೀಳವಿಕ್ರಮವಿಸ್ಫುಲಿಂಗಿತವಾದವಡಿಗಡಿಗೆ ॥ ೨೮ ॥

---

೨. ಧರ್ಮರಾಯನ ನೋವು—ಅರ್ಜುನನ ಪ್ರತಿಜ್ಞೆ

ವರನಿಭಾರಿಯ [1]ಬಿಳಿದಿ[1]ನಲಿ ಬಲ
ಮುರಿಯ [2]ಬಲಿದನು[2] ಪದಮುಖಕೆ ಮುಂ-
ಜೆಜಿಗ ಜಟ್ಟನು ಬಿಗಿದ ಬದ್ದುಗೆ ದಾರಗೊಂಡೆಯವ ।
ಕಿರಣಲಹರಿಯ ವಜ್ರಮಾಣಿಕ-
ಪರಿರಚಿತಭುಜಕಂಠಕರ್ಣಾ-
ಭರಣಚರಣದ ಕಡೆಯದಲಿ ರಂಜಿಸಿದನಾ ಕರ್ಣ ॥ ೨೯ ॥

---

೨೮. [ಮಿಕ್ಕವು–ಮೀರಿಸಿದುವು (ಧಾ., ಮಿಗು–ಹೆಚ್ಚಾಗು, ಮಿಗಾರು). ತೀಕ್ಷ್ಣಧಾರೆ–ಹರಿತವಾದ ಅಲಗು. ಅಭೀಳ–ಭಯಂಕರವಾದ. ವಿಕ್ರಮ–ಪರಾಕ್ರಮದ (ಗುರುತಾದ). ವಿಸ್ಫುಲಿಂಗ–ಕಿಡಿ].

೨೯. [1]ಬಳಿಬಿ (ಅ ಕುಮಾ). [2]ಬಿಗಿದನು (ಅ ಕುಮಾ).

[ನಿಭಾರಿ–ಸೊಂಟಪಟ್ಟಿ. ಬಿಳಿದು–ಇಳಿ ಬೀಳುವುದು. ಬಲಮುರಿ–ಬಲಗಡೆಗೆ ತಿರುಗಿರುವುದು. ಪದಮುಖ–ಪಾದದ (ಅಡಿಯ) ಮೇಲ್ಭಾಗ, ಮುಂಭಾಗ. ಬದ್ದುಗೆ–ವಸ್ತ್ರದ ಜೂಲುಜೂಲಾದ ಅಂಚು. ಕ(ಖ)ಡೆಯ–ಕಾಲ ಕಡಗ, ಚಿನ್ನದ ಕಾಲಬಳೆ].

ಅತಿರಭಸ[1]ವಿಂ[1]ದಾಯ್ತು ಸೇನಾ-
ಪತಿಯ ಪಯಣವಲಾ ಎನುತ ಗುರು-
ಸುತಶಕುನಿಕೃತವರ್ಮಕೃಪದುಶ್ಶಾಸನಾದಿಗಳು ।
ವಿತತಸನ್ನಾಹದಲಿ ಕುರುಭೂ-
ಪತಿಸಹಿತ ಹೊಱವಂಟು ಭಾಸ್ಕರ-
ಸುತನ ಸನ್ನೆಯುವೋಲೆ ನಡೆ[2]ದುದು[2] ಮುಂದೆ ಸಂದಣಿಸಿ ॥ ೩೦ ॥

ಬಳಿಯ ನೆಲನುಗ್ಗಡಣೆಗಳ ವೆ-
ಗ್ಗಳೆಯ ಸುಭಟರ ಮೇಳದಲಿ ಬಂ-
ದಿಳಿದು ದಂಡಿಗೆಯಿಂದ ನಸುನಗುತೇಱಿದನು ರಥವ ।
[1]ಚಳಹಯಂಗಳ ಹುರಿಯ ವಾಘೆಯ-[1]
ನಳವಡಿಸಿ ಬಲನೆಡಕೆ [2]ತೇಜಿ[2]ಯ
ಸುಳಿಸಿ ಸಾರಥಿತನವ ತೋಱಿದನಂದು [3]ಮಾದ್ರೇಶ[3] ॥ ೩೧ ॥

ಓಡಿ ನಾಚಿಸುವವರು ನಿಲಿ ರಣ-
ಖೇಡರೀಗಳೆ [1]ಹೋಗಿ[1] ಮನವ-
ಲ್ಲಾಡಿ ಮಱುಗುವರೇಳಿ ಮರಣದಲಾವ ಫಲಸಿದ್ಧಿ ।
[2]ಕೂಡುಗಲಕರು[2] ನಿಲ್ಲಿ ಇಹಪರ-
ಗೇಡಿಗಳು ಹೆಱಸಾರಿ ಗುಣದಲಿ
ಬೇಡಿಕೊಂ[3]ಡೆ[3]ನು ಖಾತಿಗೊಳ್ಳೆನು [4]ಮರಳಿ ಸಾಕೆಂದ[4] ॥ ೩೨ ॥

---

೩೦. [1]ದಿ (ಅ ಕುಮಾ). [2]ದರು (ಅ ಕುಮಾ).

[ವಿತತ–ವಿಸ್ತಾರವಾದ].

೩೧. [1]ಚಳಕದಲಿ ಹರಿಹಯ ಹಯಂಗಳ (ಅ). [2]ವಾಜಿ (ಅ ಕುಮಾ). [3]ಕಲಿಶಲ್ಯ (ಅ ಕುಮಾ).

[ಉಗ್ಗಡಣೆ–ಉದ್ಘೋಷ. ವೆಗ್ಗಳೆಯ–ಶ್ರೇಷ್ಠರಾದ. ದಂಡಿಗೆ–ಪಲ್ಲಕ್ಕಿ. ಚಳ–ವೇಗವಾಗಿ ಚಲಿಸುವ. ಹುರಿಯ–ಚೆನ್ನಾಗಿ ಹೊಸೆದ. ವಾಘೆ–ಲಗಾಮು. ತೇಜಿ–ಕುದುರೆ].

೩೨. [1]ಮರಳಿ (ಅ ಕುಮಾ). [2]ಕೂಡಗಲಿಗರು (ಅ). [3]ಜೆ (ಅ ಕುಮಾ). [4]ಹೋಗಿ ನೀವೆಂದ (ಅ ಕುಮಾ).

[ರಣಖೇಡರು–ರಣಹೇಡಿಗಳು. ಮಱುಗು–ಕೊರಗು. ಕೂಡುಗಲಕರು–ಒಗ್ಗಟ್ಟನ್ನು ಮುರಿಯುವವರು. ನಿಲ್ಲಿ–ಹಿಂದೆ ಉಳಿದುಬಿಡಿ. ಹೆಱಸಾರಿ–ಹಿಂದಕ್ಕೆ ಹೋಗಿ. ಗುಣದಲಿ–ಬಾರಿಬಾರಿಗೂ, ಮತ್ತೆಮತ್ತೆ. ಖಾತಿ–ಕೋಪ].

ಸಂದ ಸುಭಟರು ಬನ್ನಿ ಸಗ್ಗದ
ಬಂದಿಕಾಱರು ಬನ್ನಿ ಮನದಿಂ-
ಮುಂದು ಹೆಜ್ಜೆಯ ತವಕಿಗರು ಬಹುದೆನ್ನ ಸಂಗಾತ ।
ನೊಂದೊಡುಬ್ಬುವರಿತ್ತ ಬನ್ನಿ ಪು-
ರಂದರನಸವುಗದ್ದುಗೆಯ ಮನ-
ಸಂದವರು ಹೊಗಿ ರಣವನೆಂದನು ಕರ್ಣ ಕೈಮುಗಿದು ॥ ೩೩ ॥

ನರನ [1]ನೆಲೆಗಾಣಿ[1]ಸಿದವಗೆ ಸಾ-
ವಿರದ ಪಟ್ಟಣವರ್ಜುನನ ಮೋ-
ಹರವದೇ ಯೆಂದವಗೆ ಕೊಡುವೆನು ಹತ್ತುಸಾವಿರವ ।
ನರನ [2]ಕೆ[2]ರಳಿಚಿ ತಂದು ನಮ್ಮೊಡ-
ನಱುಹಿದಗೆ [3]ಗಜನೂಱು[3] ಹಯಸಾ-
ವಿರದ ವಳಿತವ ಬರಸಿ ಕೊಡುವೆನು ರಾಯನಾಣೆಂದ ॥ ೩೪ ॥

*ತಳಿತು ಮು[1]ತ್ತಿದ[1] ಮುಗಿಲ ಝಾಡಿ[2]ಯು[2]
ಝಳಪಿಸುವ ರವಿಯಂತೆ ಭುವನವ
ಬೆ[3]ಳಗಲು[3]ದ್ರೇಕಿಸುವ [4]ಭರ್ಗನ[4] ಭಾಳಶಿಖಿಯಂತೆ ।
ಹೊಳಹೊಳೆವ ಕರ್ಣಪ್ರತಾಪಾ-
ನಳನ ನಾಟ್ಯವ ಕಂಡು ಕೌರವ-
ಬಲದೊಳೊಸಗೆಯು ಲಗ್ಗೆ ಮಸಗಿತು [5]ಕೇಳು ಧೃತರಾಷ್ಟ್ರ[5] ॥ ೩೫ ॥

---

೩೩. [ಸಂದ-ಪ್ರಸಿದ್ಧರಾದ. ಸಗ್ಗದ ಬಂದಿಕಾಱರು-ವೀರಮರಣ ಹೊಂದಿ ಸ್ವರ್ಗಕ್ಕೆ ಹೋಗಲು ಅರ್ಹರಾದವರು. ಮನದಿಂ ಮುಂದು ಹೆಜ್ಜೆಯ ತವಕಿಗರು-ಮನೋವೇಗವನ್ನೂ ಮೀರಿಸಬೇಕೆಂಬ ವೇಗಾತುರರು. ಉಬ್ಬು-ಉತ್ಸಾಹಪಡು. ಪುರಂದರ-ಇಂದ್ರ. ಗದ್ದುಗೆ-ಪೀಠ, ಸಿಂಹಾಸನ. ಮನಸಂದವರು-ಇಷ್ಟವುಳ್ಳವರು. ಹೊಗು-ಪ್ರವೇಶಿಸು].

೩೪. [1]ತೋರಿಸಿ (ಅ ಕುಮಾ). [2]ತಿ (ಅ ಕುಮಾ). [3]ನೂಱಾನೆ (ಅ ಕುಮಾ).
[ನೆಲೆಗಾಣಿಸು-ಸ್ಥಳವನ್ನು ತೋರಿಸು. ಮೋಹರ-ಸೈನ್ಯ. ಕೆರಳಿಚು-ಕೋಪಗೊಳಿಸು. ವಳಿತ-ಸ್ವಾಮ್ಯ, ಅಧಿಕಾರ].

೩೫. [1]ತ್ತುವ (ಅ ಕುಮಾ). [2]ಸಿ (ಅ ಕುಮಾ). [3]ಳಗಲು (ಅ). [4]ಭಾರ್ಗವ (ಅ ಕುಮಾ). [5]ಭೂಪ ಕೇಳೆಂದ (ಅ ಕುಮಾ).
[ತಳಿತು-ಒಟ್ಟುಗೂಡಿ. ಝಾಡಿ-ಪಟ್ಟಣೆ. ಭರ್ಗ-ಈಶ್ವರ. ಭಾಳಶಿಖಿ-ಹಣೆಗಣ್ಣಿನ ಅಗ್ನಿ. ಪ್ರತಾಪಾನಳ-ಶೌರ್ಯದ ಅಗ್ನಿ. ಒಸಗೆ ಸಂತೋಷ, ಉತ್ಸಾಹ. ಲಗ್ಗೆ-ಆಕ್ರಮಣ, ಮುತ್ತಿಗೆ. ಮಸಗು-ವಿಜೃಂಭಿಸು].

ರಾಯನಳ[1]ವಿ[1]ಗರಿವ[2]ರ[2]ಘಾಟಿದ
ನಾಯಕರು ಕಾಣಿರೆ ಸಮೀರನ
ಲಾಯದಲಿ ಲಂಬಿಸಿದವಕಟ ತುಷಾರತೇಜಿಗಳು ।
ಆಯಿತಿದು ತಪ್ಪೇನೆನುತ ಕ-
ರ್ಣಾಯತಾಸ್ತ್ರದಿ ಹರಿಗಡಿದು ರಿಪು-
ರಾಯನಸ್ಲಿಗೆ ರಥವ [3]ದುವ್ವಾಳಿಸಿದನಾ[3] ಕರ್ಣ ॥ ೩೬ ॥

ಗಂಡುಗರ್ವವನೆನ್ನೊಡನೆ ಕೋ-
ದಂಡದಲಿ ಮೆಱೆ[1]ಸಾಕು[1] ನಿನ್ನಯ
ಭಂಡವಿದ್ಯೆಯ ಮೆಱೆವೊಡಿದೆಲಾ ಕೌರವಾಸ್ಥಾನ ।
ದಿಂಡುದರಿವನು ಸೈರಿಸೆನುತಅ-
ಖಂಡಶರನಿಕರದಲಿ ರಿಪುಮಾ-
ರ್ತಾಂಡತನಯನನೆಚ್ಚು ಬೊಬ್ಬಿರಿದನು ಮಹೀಪಾಲ ॥ ೩೭ ॥

ಆಲಿಕಲುಗಳು ಸಿಡಿಲಮಱೆಗಳ
ಮೇಲುವಾಯ್ದುವು ಗಡ ಯುಧಿಷ್ಠಿರ-
ನಾಳುತನದಲಿ ನವ್ಯ ಜಱೆದನು ಶಲ್ಯ ನೋಡೆನುತ ।
ಬೋಳೆಯಂಬೈದಱಲಿ ರಾಯನ
ತೋಳನೆಚ್ಚನು ಜಡಿವ ಜೋಡಿನ
ಮೇಲೆ ಮುಱಿದವು ಬಾಣ ನೃಪ ಮಗುಳೆಚ್ಚ ರವಿಸುತನ ॥ ೩೮ ॥

---

೩೬. [1]ಲಿ (ಅ ಕುಮಾ). [2]ೞ (ಅ). [3]ಬಿಟ್ಟನು ಸೂಟಿಯಲಿ (ಅ ಕುಮಾ).

[ಅಳವಿಗರು–ಸಮರ್ಥರು. ಅಘಾಟಿದ–ಅದ್ಭುತವಾದ, ಅತಿಶಯದ. ಸಮೀರ–ವಾಯು. ಲಂಬಿಸು–ಜಿಗಿಸು. ತುಷಾರ ತೇಜಿ–ಮಂಜಿನಂತೆ ಬೆಳ್ಳಗಿರುವ ಕುದುರೆಗಳು, ಕರ್ಣಾಯತಾಸ್ತ್ರ–ಕಿವಿಯವರೆಗೆ ಎಳೆದ ಮಂತ್ರಿಸಿದ ಬಾಣ. ಹರಿಗಡಿ–ಕತ್ತರಿಸಿ ಚೆಲ್ಲಾಪಿಲ್ಲಿ ಮಾಡಿ. ದುವ್ವಾಳಿಸು–ವೇಗವಾಗಿ ಓಡಿಸು].

೩೭. [1]ಸೋಕು (ಅ).

[ಗಂಡುಗರ್ವ–ಶೂರನೆಂಬ ಹೆಮ್ಮೆ. ಕೋದಂಡ–ಬಿಲ್ಲು. ಮೆಱೆ–ತೋರಿಸು. ದಿಂಡುದರಿ–ತುಂಡುತುಂಡಾಗಿ ಕತ್ತರಿಸು. ಅಖಂಡ ಶರನಿಕರ–ನಿರಂತರವಾದ ಬಾಣಗಳ ಸಮೂಹ. ಮಾರ್ತಾಂಡತನಯ–ಕರ್ಣ. ಮಹೀಪಾಲ–ಧರ್ಮರಾಯ].

೩೮. [ಆಳುತನ–ಪರಾಕ್ರಮ. ಬೋಳೆಯಂಬು–ಒಂದು ಬಗೆಯ ಬಾಣ, ದಿವ್ಯಾಸ್ತ್ರ(?). ಜೋಡು–ಕವಚ].

ಅಕಟ ಚಂದ್ರಿಕೆ ಗೆದ್ದುದೋ ಪಾ-
ವಕನ ಝಳವೀ ಧರ್ಮಪುತ್ರನ
ವಿಕಳಶರದಲಿ ಕರ್ಣ ನೊಂದನಲಾ ಮಹಾದೇವ ।
ಅಕುಟಿಲರು ನೀವೆಮ್ಮವೊಲು ಬಾ-
ಧಕರೆ ಪರರಿಗೆ [1]ಪರುಷತರ[1]ಸಾ-
ಯಕದ ಸವಿ ನೋಡಾದೊಡೆನುತೆಚ್ಚನು ಮಹೀಪತಿಯ ॥ ೩೯ ॥

ವರನದಿಗಳಲಿ ಮುಳುಗಿ ಮೂಗಿನ
ಬೆರಳೊಳೂರ್ಧ್ವಶ್ವಾಸಪವನನ
ಧರಿಸಿ ಕಾಲತ್ರಯ ಜಪಾನುಷ್ಠಾನ[1]ವಿಧಿಗಳಲಿ[1] ।
ಪರಮಋಷಿಮಧ್ಯದಲಿ ನೀವಾ-
ಚರಿಸುವುದು ಬಿಸು[2]ಟಾಯುಧದ ನೆಱೆ[3][2]
ಹೊರಳಿಗಿಡಿಗಳ ಹೊದ[3]ಱಿನಲಿ ಮುಳುಗುವರೆ[3] ನೀವೆಂದ ॥ ೪೦ ॥

ಕೆದಱಿದನು ಮಾರ್ಗಣೆಯಲರಸನ
ಹೊದಿಸಿದನು ಹುಸಿಯೇಕೆ ರಾಯನ
ಹುದಿದ ಕವಚವ [1]ಬಿಡಿಸಿದನು[1] ಒಳಬಿದ್ದವಂಬುಗಳು ।
ಎದೆಯಲೌಕಿದ ಬಾಣ ಬೆನ್ನಲಿ
ತುದಿವೊನೆಯ ತೋಱಿದವು [2]ಬಲುಗಾ-
ಯದಲಿ ಗಾಸಿಯ[2]ಲರಸ ಕಳವಳಿಸಿದನು ಕಂಪಿಸುತ ॥ ೪೧ ॥

---

೩೯. [1]ಪರಶುಧರ (ಅ ಕುಮಾ).
[ಚಂದ್ರಿಕೆ–ಬೆಳುದಿಂಗಳು. ಪಾವಕ–ಅಗ್ನಿ. ವಿಕಳ–ಕೊರತೆಯುಳ್ಳ. ಅಕುಟಿಲರು–ಸರಳ ಸ್ವಭಾವದವರು, ನಿಷ್ಕಪಟಿಗಳು. ಪರುಷತರ–ಹೆಚ್ಚು ಕಠಿನವಾದ. ಸಾಯಕ–ಬಾಣ].

೪೦. [1]ಹೋಮದಲಿ (ಅ ಕುಮಾ). [2]ಟುಗಿವಡಾಯುಧದ (ಅ ಕುಮಾ). [3]ಹೊದಱೊಳಾಚರಿಸುವರೆ (ಅ ಕುಮಾ).
[ಊರ್ಧ್ವಶ್ವಾಸಪವನ–ಉಚ್ಛ್ವಾಸದ ಗಾಳಿ (ಪ್ರಾಣಾಯಾಮದಲ್ಲಿ ಪೂರಕಶ್ವಾಸ). ಕಾಲತ್ರಯ–ಪ್ರಾತಃಕಾಲ, ಮಧ್ಯಾಹ್ನ, ಸಂಧ್ಯಾಕಾಲ. ಹೊರಳಿಗಿಡಿಗಳ ಹೊದಱು–ಗುಂಪುಗುಂಪಾಗಿ ಹೊರಡುವ ಕಿಡಿಗಳ ಗುಂಪಲು].

೪೧. [1]ಭೇದಿಸಿದ (ಅ ಕುಮಾ). [2]ಪೂಗಾಯದ ವಿಘಾತಿಯ (ಅ ಕುಮಾ).
[ಮಾರ್ಗಣೆ–ಪ್ರತ್ಯಸ್ತ್ರ, ಎದುರು ಬಾಣ (ಕಣೆ–ಬಾಣ). ಹುದಿದ–ಮುಚ್ಚಿದ, ಆವರಿಸಿದ. ಬಿಡಿಸಿದನು–ಬೇರ್ಪಡಿಸಿದನು, ಭೇದಿಸಿದನು. ಗಾಸಿ–ಹಿಂಸೆ, ವೇದನೆ].

ಜಯಸಮರ ಜಾಱಾಯ್ತು ತೆಗೆ ಪಾ-
ಳೆಯಕೆ ಮರಳಿಚು ರಥವನಿನ್ನೆ-
ಲ್ಲಿಯದು ನೆಲ ನೆಱೆ[3] ಕುದಿ[1]ವ[1] ಕುರುಡನ ಮಕ್ಕಳೀ ಕೊಳಲಿ ।
ನಿಯತವೆಮ್ಮಿಬ್ಬರಿಗೆ ರಾಯನ
ಲಯವೆ [2]ಲ[2]ಯು[3]ವೆಂದೆ[3]ನುತಲಾ ಮಾ-
ದ್ರಿಯ ಕುಮಾರರರು ದೊರೆಸಹಿತ ತಿರುಗಿದರು ಪಾಳೆಯಕೆ ॥ ೪೨ ॥

[1]ಕುರು[1]ಬಲದ ಲಗ್ಗೆಯನು ನಿಜಮೋ-
ಹರದ ಮುರಿ[2]ವಿನ[2] ಸುದ್ದಿಯನು ಧರ-
ಧುರದ ಪರಬಲದೊಸಗೆಯನು ನಿಜಬಲದ ಹಸುಗೆ[3]ಯನು[3] ।
ಮುರಮಥನ [4]ನೋಡಿದನು[4] ಮೂಗಿನ
ಬೆರಳ ತೂಗುವ ಮುಕುಟದೊಲ[5]ಹಿ[5]ನ
ಬೆರಳ [6]ತುದಿ[6]ಚಮ್ಮಟಿಗೆಯಲಿ ಸೂಚಿಸಿದನರ್ಜುನಗೆ ॥ ೪೩ ॥

ಜೀವಿ[1]ಸುವೊಡಾ[1]ವಾವಲೇಸಿನ
ಠಾವ ಕಾಣೆವು ಜೀಯ ಕರ್ಣ[2]ನೊ-
ಳಾ[2]ವು ತೊಡ[3]ಕು[3]ವರಲ್ಲ [4]ಮರ[4]ಳಿಚು ಪಾಳೆಯಕೆ ರಥವ ।
ಈ ವಿಗಡನಂತಿರಲೆನುತ ಗಾಂ-
ಡೀವಿ ಚಾಪವನಿಳುಹೆ ರಥವನು
ದೇವಕೀಸುತ ನೂಕಿದನು ಪವಮಾನವೇಗದಲಿ ॥ ೪೪ ॥

---

೪೨. [1]ದ (ಅ). [2]ಜ (ಅ). [3]ವಿನ್ನೆ (ಅ ಕುಮಾ).

[ಜಯಸಮರ–ಗೆಲ್ಲಬೇಕಾಗಿದ್ದ ಯುದ್ಧ. ಜಾಱಾಯ್ತು–ಜಾರಿಹೋಯಿತು, ಕೈ ತಪ್ಪಿತು. ಕುದಿವ–ಕೊರಗುವ. ನಿಯತ–ನಿಶ್ಚಿತವಾದದ್ದು. ಲಯ–ನಾಶ, ಅಪಜಯ].

೪೩. [1]ಅರಿ (ಅ ಕುಮಾ). [2]ದಿಹ (ಅ). [3]ಗಳ (ಅ). [4]ನೀಕ್ಷಿಸಿದ (ಅ). [5]ವಿ (ಅ). [6]ಕುಡಿ (ಅ ಕುಮಾ).

[ಮುರಿವು–ಹಿಂದಿರುಗುವುದು. ಧರಧುರ–ಆಧಿಕ್ಯ, ಹೆಚ್ಚಳ. ಹಸುಗೆ–ಪಾಲಾಗುವಿಕೆ. ಒಲಹು–ಅಲುಗಾಟ. ಚಮ್ಮಟಿಗೆ–ಚಾವಟಿ].

೪೪. [1]ಸಿರಲಾ (ಅ ಕುಮಾ). [2]ನವಾ (ಅ ಕುಮಾ). [3]ಚು (ಅ ಕುಮಾ). [4]ತಿರ (ಅ ಕುಮಾ).

[ಲೇಸಿನ–ಮೇಲಾದ, ಒಳ್ಳೆಯ. ಠಾವು–ಸ್ಥಳ. ತೊಡಕು–ಸೆಣಸು, ಎದುರಿಸು].

ಬರಲು ಪಾರ್ಥನ ಕಂಡು [1]ಪರಿ[1]ಜನ
ಹ[2]ರೆದುದ[2]ಲ್ಲಿಯದಲ್ಲಿ ದುಗುಡದ
ಭರದ ಗುಜುಗುಜುಗೋಷ್ಠಿಗಳ ಜನಜನದ ಮುಸುಕುಗಳ ।
ಮುರಿದ [3]ನೀಹಾರದ ವಿ[3]ಹಾರದ
ಸರಸಿರುಹವನದಂತೆ ಪಾಳೆಯ-
ದಿರವು ಲೇಸಲ್ಲೆನುತ ಬಂದನು ರಾಜಮಂದಿರಕೆ ॥ ೪೫ ॥

ಎಲೆ ಧನಂಜಯ ಸೂತತನಯನ
ಗೆಲಿದು ಬಂದೆಯೊ ದಿವಿಜನಗರಿಗೆ
ಕಳುಹಿ ಬಂದೆಯೊ ಕಂಡು ಕೆಣಕದೆ ಬಂದೆಯೋ ಮೇಣು ।
ಉಳುಹಿ ಬಿಡುವನೆ [1]ಕದನ[1]ಮುಖದಲಿ
ಮಲೆತನಾದೊಡೆ ಕರ್ಣನೇನ-
ಗ್ಗಳಿಕೆವಡೆದನೊ ಶಿವಶಿವಾ ಯೆಂದರಸ ಬಿಸುಸುಯ್ದ ॥ ೪೬ ॥

ಈಸುಪರಿಯಲಿ ನಿಮ್ಮ ಚಿತ್ತದೊ-
ಳಾಸಱಾಯಿತೆ ನಮ್ಮ ದುಷ್ಕೃತ-
ವಾಸನಾ[1]ಫಲ[1]ವೈಸಲೇ [2]ನಿಮಗೆತ್ತಲೀ ವ್ಯಸನ[2] ।
ಆ ಸುಯೋಧನವಿಗಡಭಟವಾ-
ರಾಶಿಯನು ಮುಕ್ಕುಳಿಸುವೆನು ಧರ-
ಣೀಶ ನೇಮವ ಕೊಂಡೆ ನಿಮ್ಮಡಿಯಾಣೆ ತನಗೆಂದ ॥ ೪೭ ॥

---

೪೫. [1]ಪುರ (ಅ ಕುಮಾ). [2]ರಿಯ (ಅ). [3]ಮಂಜಿನ ನಿಡುನಿ (ಅ).
[ನೀಹಾರ–ಹಿಮ, ಇಬ್ಬನಿ].

೪೬. [1]ಸಮರ (ಅ ಕುಮಾ).
[ಸೂತತನಯ–ಕರ್ಣ. ದಿವಿಜನಗರಿ–ಅಮರಾವತಿ. ಮಲೆತನಾದೊಡೆ–ಸೊಕ್ಕಿದರೆ, ಗರ್ವಿಷ್ಠನಾದರೆ. ಅಗ್ಗಳಿಕೆ–ಶ್ರೇಷ್ಠತೆ, ಮೇಲ್ಮೆ].

೪೭. [1]ಮಯ (ಅ). [2]ತಾನಿದ್ದು ಫಲವೇನು (ಅ ಕುಮಾ).
[ಅಸಱು–ಬೇಸರ. ದುಷ್ಕೃತವಾಸನಾಫಲ–ಪೂರ್ವಜನ್ಮದ ದುಷ್ಕಾರ್ಯದ ಪರಿಣಾಮ. ವಾರಾಶಿ–ಸಮುದ್ರ. ನೇಮ–ಅಪ್ಪಣೆ].

ನಿನಗೆ [1]ಮಣಿವ[1]ವನಲ್ಲ ರಾಧಾ-
ತನಯನವ ಹೆಚ್ಚಾಳು ಕಡಿಯ
ಮೊನೆ[2]ಗೆ ಕೊಂಬನೆ ನಿನ್ನನೀ[2] ಹೆಮ್ಮಕ್ಕಳೆದಿರಿನಲಿ ।
ಕನಲಿ ಕಳವಳಿಸಿದೊಡೆ ನೀನಾ-
ತನ ವಿಭಾಡಿಸಲಾಪಸತ್ವ[3]ನೆ[3]
ಮನವ ಬಲ್ಲೆನು ಪಾರ್ಥ ನುಡಿಯದಿರೆಂದನಾ ಭೂಪ ॥ ೪೮ ॥

ಜಾಣ[1]ಪಣ[1]ದಲಿ ಕಾದಿ ಹಿಂಗುವ
ದ್ರೋಣನಲ್ಲಳವಿಯಲಿ ಕಳವಿನ
ಕೇಣದಲಿ ಕೊಂಡಾಡುವೊಡೆ ಗಾಂಗೇಯನಿವನಲ್ಲ ।
ಸಾಣೆ[2]ಗಂ[2]ಡಲಗಿವನು ಸಮರಕೆ
ಹೂಣಿಗನು ರಿಪುಬಲ[3]ಕೆ[3] ಹಾಣಾ-
ಹಾಣಿಕಾಱನು ಕರ್ಣ[4]ನಾರೆಂದಱಿಯೆ ನೀನೆಂದ[4] ॥ ೪೯ ॥

ಜಾಳಜಱೆದು ಜಡಾತ್ಮರಿಗೆ ಜಂ-
ಘಾಳತನವನು ಮೆಱೆದು ಖೋಡಿಯ
ಖೂಳರನು ಖೊಪ್ಪರಿಸಿ ಚೂಣಿಯ [1]ಚರರಚಪ್ಪರಿಸಿ[1] ।
ಆಳುತನದಲಿ ಮೆಱೆವ ನಿನಗವ
ಸೋಲಲಱಿಯನು ನಿನ್ನ ಗಂಟಲ
ಗಾಳ[2]ವೆನಿಸುವ ಕರ್ಣನಾರೆಂದಱಿಯೆ ನೀನೆಂದ[2] ॥ ೫೦ ॥

---

೪೮. [1]ಕೀಳ (ಅ). [2]ಗಣೆಯ ಕೈಕೊಂಬನೆ (ಅ ಕುಮಾ). [3]ದ (ಅ ಕುಮಾ).
[ಮಣಿ-ಬಾಗು ಕಡ್ಡಿಯ ಮೊನೆಗೆ-ಸ್ವಲ್ಪಕ್ಕೆ. ಕನಲು-ಕೋಪಗೊಳ್ಳು, ವಿಭಾಡಿಸು-ನಾಶಮಾಡು. ಆಪ-ಸಮರ್ಥವಾದ. ಸತ್ವನೆ-ಶಕ್ತಿಯುಳ್ಳವನೆ].

೪೯. [1]ತನ (ಅ ಕುಮಾ). [2]ಗೂ (ಅ). [3]ದ (ಅ ಕುಮಾ). [4]ನಳುಕುವನಲ್ಲ ನಿನಗೆಂದ (ಅ ಕುಮಾ).
[ಜಾಣಪಣ-ಜಾಣತನ. ಹಿಂಗು-ಹಿಮ್ಮೆಟ್ಟು. ಅಳವಿ-ಸಾಮರ್ಥ್ಯ. ಕಳವಿನಕೇಣ-ಕದ್ದೋಡುವ ಹುರುಡು. ಸಾಣೆಗಂಡಲಗು-ಮಸೆದ ಪರಾಕ್ರಮವೆಂಬ ಕತ್ತಿಯ ಮೊನೆಯಂಥವನು. ಹೂಣಿಗ-ಪ್ರತಿಜ್ಞೆ ಮಾಡಿದವನು. ಹಾಣಾಹಾಣಿಕಾಱ-ಮುಖಾಮುಖಿ ಯುದ್ಧ ಮಾಡುವವನು].

೫೦. [1]ಭಟರನಪ್ಪಳಿಸಿ (ಅ). [2]ಗಾಳ ನಿನಗಳುಕುವನೆ ಕರ್ಣನು ಪಾರ್ಥ ಹೇಳೆಂದ (ಅ ಕುಮಾ)
[ಜಾಳಜಱೆ-ವ್ಯರ್ಥವಾಗಿ ನಿಂದಿಸು. ಜಡಾತ್ಮ-ತಾಮಸ ಗುಣದವನು, ನಿಧಾನ ಪ್ರಕೃತಿಯವನು. ಜಂಘಾಳತನ-ವೇಗವಾಗಿ ಚಲಿಸುವಿಕೆ. ಖೋಡಿಯ ಖೂಳ-ನೀಚರಲ್ಲಿ ನೀಚ. ಖೊಪ್ಪರಿಸು-ಸದೆಬಡಿ. ಚಪ್ಪರಿಸು-ಅಪ್ಪಳಿಸು, ಹೊಡೆ. ಗಂಟಲ ಗಾಳ-ಪ್ರಾಣಘಾತಕ].

ಎಲ್ಲಿ ಕರ್ಣನು ತಿರುಗಿನೋಡಿದೊ-
ಡಲ್ಲಿ ತಾನೆಡವಂಕಬಲವುುಖ-
ದಲ್ಲಿ ಸೂತ[1]ಜ[1]ನೆಂಟುದೆಸೆಗಳ [2]ನೋಡೆ[2] ಕರ್ಣಮಯ ।
ಎಲ್ಲಿ ನೋಡಿದೊಡಲ್ಲಿ ಕರ್ಣನ
ಬಿಲ್ಲ ಬೊಬ್ಬೆ ರಥಾಶ್ವರವವೆದೆ-
ದಲ್ಲಣದ ದೆಖ್ಖಾಳರಚನಾರಸಿಕ[3]ನವನೆಂದ[3] ॥ ೫೧ ॥

ಮಲೆತು ಧಾಳಾಧೂಳಿಯುಲಿ ಬಲ
ಸುಳಿವುಸಗಿ [1]ಎನ್ನೊಬ್ಬನನು ವ್ಯೈ[1]
ಬಳಸಿ ಕಾದಿತು [2]ಕರ್ಣನೊಬ್ಬನ[2] ಕೂಡೆ ತಲೆಯೊತ್ತಿ ।
ಒಲವರವು ನಿನಗುಳ್ಳೊಡಾಗಲೆ
ನಿಲಿ[3]ಸಿದಾ[3] ನೀ ಬಂದು ಬಯಲ-
ಗ್ಗಳಿಕೆಯ[4]ನು[4] ಬಿಡೆ [5]ಕೆದರು[5]ತಿಹೆ [6]ಸಾರೆಂದನಾನೃಪತಿ[6] ॥ ೫೨ ॥

ತೊಡಕಿದನು ಗಡ ಗರುಡ ಹಾವಿನ
ತಡಿಕೆವಲೆಯುಲಿ ನಿನ್ನ ಗಮನವ
ತಡೆದ[1]ರ್ರೈ[1] ತಪ್ಪೇನು ಕೌರವದಳದ ನಾಯಕರು ।
[2]ಕಡುಹಿನಲಿ ತಡವಾದುದುಳಿದಂ-[2]
ತೆಡೆಯುಲುಳಿ[3]ವರ್ಜುನನೆ[3] ನಮ್ಮವ-
ಗಡವ ಕೇಳದು ನಿಲ್ಲನೆಂದನು ನಗುತ ಯಮಸೂನು ॥ ೫೩ ॥

---

೫೧. [1]ನ (ಅ). [2]ಕೂಡಿ (ಅ). [3]ತನವೆಂದ (ಅ).
[ಎಡವಂಕ-ಎಡಪಕ್ಕ. ಎದೆದಲ್ಲಣದ-ಎದೆಯನ್ನು ನಡುಗಿಸುವ. ದೆಖ್ಖಾಳ-ಅಬ್ಬರ].

೫೨. [1]ತನ್ನುವನುವೇಷ್ಟಿಸಿ (ಅ). [2]ವೀರಕರ್ಣನ (ಅ ಕುಮಾ). [3]ಸೆಯಾ (ಅ). [4]ನೆ (ಅ ಕುಮಾ). [5]ಬೆರೆಯು (ಅ). [6]ಮಾಣೆಂದು ನೃಪ ನುಡಿದ (ಅ ಕುಮಾ).
[ಮಲೆತು-ಸೊಕ್ಕಿ. ಒಲವರ-ವಿಶೇಷವಾದ ಪ್ರೀತಿ. ಬಯಲಗ್ಗಳಿಕೆ-ವ್ಯರ್ಥವಾದ ಮೇಲ್ಮೆ. ಕೆದರು-ಹರಡು].

೫೩. [1]ರೇ (ಅ). [2]ತಡವಿನಲಿ ತಡವಾಯ್ತು ವುಳಿದಂ (ಅ). [3]ದರ್ಜುನಗೆ (ಅ).
[ತೊಡಕು-ಸಿಲುಕಿಕೊ, ಸಿಕ್ಕಿಹಾಕಿಕೊ. ತಡಿಕೆವಲೆ-ಒಂದು ಬಗೆಯ ಬಲೆ. ಗಮನ-ಗತಿ. ಕಡುಹು-ಸಾಮರ್ಥ್ಯ ತೋರುವುದು. ಎಡೆಯಲಿ-ಮಧ್ಯದಲ್ಲಿ. ಉಳಿ-ಹಿಂದುಳಿ. ಅವಗಡ-ಅಪತ್ತು, ತೊಂದರೆ].

ಎವಗೆ ವಿಕ್ರಮವೆಂ[1]ಬೊಡೀ ರೌ[1]
ರವವ ಕಂಡೆವು ಕರ್ಣನಂ[2]ಶಿರ-[2]
ಲೆನಗೆ [3]ದೀವಸಗೊಂಡು[3] ಕಾದು[4]ವರೆಂಬರವ[4]ರಿಲ್ಲ ।
ಬವರ ಗೆಲುವೊಡೆ ಹರಿಗೆ ಕೊಡು ಗಾಂ-
ಡಿವವ ಸಾರಥಿಯಾಗು ನೀನೆಂ-
ದವಗಡಿಸಿದನು ವೀರನಾರಾಯಣನ ಮೈದುನನ ॥ ೫೪ ॥

*ಉಕ್ಕಿ ಕುದಿದುದು ವೀರರಸ ಮಗು-
ಳುಕ್ಕಿ ಕುದಿದುದು ರೌದ್ರರಸವದ-
ರಕ್ಕಜವ ಕೆಲಕೊತ್ತಿ ಕುದಿದುದು ಶಾಂತರಸಲಹರಿ ।
ಮಿಕ್ಕು ಬಹಳಕ್ರೋಧ ವೊಳವೊಳ-
ಗುಕ್ಕಿತಮಳೋತ್ಸವದ ಚಾಪಲ
ಸೊಕ್ಕಿತೊಂದೇ ನಿಮಿಷ ಮೌನದೊಳಿರ್ದನಾಪಾರ್ಥ ॥ ೫೫ ॥

ಎಲೆ ಯುಧಿಷ್ಠಿರ ಜನಿಸಿದೈ ಶಶಿ-
ಕುಲದ [1]ವಿಮಲ[1]ಕ್ಷತ್ರ[2]ವಂಶದ-
ಲಳಿ[2]ಮನದ ಕಾಳಿಕೆಯು ತೊಡಹದ ಗಂಡುರೂಪಿನಲಿ ।
ನೆಲನ ಕೊಂಡರು ನಿನ್ನ ಮೋಜಿ[3]ಯ
ಬಲುಹ ಕಂ[3]ಡೇ[3] ಕೌರವರು ನಿ-
ನ್ನೊಳಗೆ ಬಲ್ಲಿದನೆನ್ನ ಭಂಗಿಸ[4]ಲೇಕೆ ನೀನೆಂದ[4] ॥ ೫೬ ॥

---

೫೪. [1]ಬರೌರವ (ಅ). [2]ದದ (ಅ). [3]ದೀವಸಿಯಾಗಿ (ಅ ಕುಮಾ). [3]ವೊಡೆಂಬಡವ (ಅ).
[ರೌರವ–ನರಕ ಸಮಾನವಾದ ಘೋರ ದೃಶ್ಯ. ದೀವಸಗೊಳ್ಳು–ಎದೆಗಾರಿಕೆಯನ್ನು ಪಡೆ. ಅವಗಡಿಸು–ಹೀಯಾಳಿಸು].

೫೫. [ಅಕ್ಕಜ–ಅದ್ಭುತ, ಆಶ್ಚರ್ಯ. ಸೊಕ್ಕು–ಕೊಬ್ಬು].

೫೬. [1]ವೀರ (ಅ ಕುಮಾ). [2]ಪಂತಿಯೊಲೆಳ (ಅ ಕುಮಾ). [3]ಡಾ (ಅ). [4]ಲೆಂದನಾ ಪಾರ್ಥ (ಅ).
[ಅಳಿಮನ–ಕೆಟ್ಟಮನಸ್ಸು, ನೀಚಮನಸ್ಸು. ಕಾಳಿಕೆ–ಕರಿಕು, ಕಳಂಕ, ದೋಷ. ತೊಡಹು–ಬಳಿತ, ಲೇಪ. ಬಲ್ಲಿದನು–ಪರಾಕ್ರಮಿ, ಬಲಿಷ್ಠ].

---

* ಈ ಪದ್ಯವು ಅ ಕುಮಾ ಮತ್ತು ಪೇಟೆ ಪ್ರತಿಗಳಲ್ಲಿ ಕಂಡುಬರುವುದಿಲ್ಲ.

ನಿನ್ನ ಜೂಜಿನ [1]ವಿಲಗ[1]ದಲಿ ಸಂ-
ಪನ್ನರಾಜ್ಯವ ಬಿಸುಟು ನಿನ್ನಯ
[2]ಬೆನ್ನೊಳಗೆ ತೊಳಲಿದೆವು[2] [3]ಹದಿಮೂಱುಬುದ ವನದಲ್ಲಿ[3] ।
ಮನ್ನಿಸದೆ ಲೇಸಾಗಿ ಕೌರವ-
ರಿನ್ನು ಕೊಡುವರೆ [4]ರಾಜ್ಯವನು ನೀ-
ನಿನ್ನು ಭೀಮನ ಹಿಡಿದು ಬದುಕುವುದೆಂದನಾ[4] ಪಾರ್ಥ ॥ ೫೭ ॥

ರಣದ ಘಾರಾಘಾರಿಯಾರೋ-
ಗಣೆಯು ಮನೆಯುಲ್ಲರಸ ಸಿರದಲಿ
ಕುಣಿವಡಾಯ್ದುಕೆ [1]ಸೀಳ್ವ[1] ಸುರಗಿಗೆ ತಿವಿವ ಭಲ್ಲೆ[2]ಯುಕೆ[2] ।
[3]ಹಣಿವ[3] ಲೌಡಿಗೆ ಹಾಯ್ದು ಬೀಳುವ
ಕಣೆಗೆ ಖಂಡ[4]ದ[4] ರುಧಿರರ[5]ಸ[5]ದೌ-
ತಣವ ರಚಿಸದೆ [6]ರಾಜ್ಯಸಿರಿ ನಿನಗೊಲಿವಳಲ್ಲೆಂದ[6] ॥ ೫೮ ॥

ಇಂದಿನಲಿ ಹದಿನೇಳು ದಿನ[1]ವಿ-[1]
ಲ್ಲಿಂದ ಹಿಂದಣ ಬವರದಲಿ ನೀ
ನೊಂದುದುಂಟೇ ದ್ರೋಣಭೀಷ್ಮರ ಕೋಲ ತೋಹಿನಲಿ ।
ಒಂದು [2]ತೂಱಿಂ[2]ಬಿನಲಿ ಗಡ ನೀ-
[3]ನಿಂ[3]ದು ಜೀವವ ಜಾಱಿಸುವೆ [4]ಸುಡ-
ಲಿಂದು[4]ಕುಲಕಂಟಕರನಿಱಿದೊಡೆ ದೋಷ[5]ವಿಲ್ಲೆಂದ[5] ॥ ೫೯ ॥

---

೫೭. [1]ವಿಗಡ (ಅ). [2]ಜೆನ್ನಲಡವಿಯಲಾಡಿದೆವು (ಅ ಕುಮಾ). [3]ಹನ್ನೆರಡು ವರುಷದಲಿ (ಅ ಕುಮಾ). [4]ನಿನಗೆ ರಾಜ್ಯವ ನಿನ್ನ ಹಿಡಿದೇ ಭೀಮ ಬದುಕಲಿ ಎಂದನಾ (ಅ ಕುಮಾ).
[ವಿಲಗ-ತೊಂದರೆ, ಕಷ್ಟ].

೫೮. [1]ಸುಳಿವ (ಅ ಕುಮಾ). [2]ಹ (ಅ ಕುಮಾ). [3]ಹಣೆದು (ಅ). [4]ವ (ಅ). [5]ಣ (ಅ ಕುಮಾ). [6]ಬರಿದೆ ರಾಜ್ಯವ ಕೊಂಬೆ ನೀನೆಂದ (ಅ).
[ಘಾರಾಘಾರಿ-ಕೋಲಾಹಲದ. ಆರೋಗಣೆಯ ಮನೆ-ಊಟದ ಮನೆ. ಅಡಾಯ್ದ, ಸುರಗಿ-ಬಗೆ ಬಗೆಯ ಕತ್ತಿಗಳು. ಹಣಿ-ಹೊಡೆ. ಲೌಡಿ-ಕಬ್ಬಿಣದ ಒಂದು ಆಯುಧ. ಖಂಡ-ಮಾಂಸ].

೫೯. [1]ದ (ಅ). [2]ಕೂರಂ (ಅ). [3]ನೊಂ (ಅ). [4]ಸಾಕಿಂದು (ಅ). [5]ವೇನೆಂದ (ಅ ಕುಮಾ).
[ಕೋಲು-ಬಾಣ. ತೋಹು-ಮೋಸ, ವಂಚನೆ. ತೂಱಿಂಬು-ತೂರಿಬಿಡುವ ಬಾಣ].

ಎನುತಡಾ[1]ಯ್ದುವನೊರೆ[1]ಯುನುಗಿದ-
ರ್ಜುನನು ತನ್ನಯ ಕೊರಳ ಸಂಧಿಗೆ
ಮನದೊಳಗೆ ಖಯಖೋಡಿಯಿಲ್ಲದೆ ಚಾಚಿದನು ಬಳಿಕ ।
ದನುಜರಿಪುವಡಹಾಯ್ದು [2]ಹಿಡಿದಾ-[2]
ತನ ಕೃಪಾಣವ ಕೊಂಡು ನಿನ್ನಯ
ನೆನಹಿದೇನೈ ಪಾರ್ಥ ಹೇಳೆನ್ನಾಣೆ ಹೇಳೆಂದ ॥ ೬೦ ॥

ಏನ ಹೇಳುವೆನಡ್ಡಹಾಯಿದು
ನೀನೆ ಕೆಡಿಸಿದೆಯೆಮ್ಮನಲ್ಲದ-
ಡೇನ ಮಾಡೆನು ಸತ್ಯಶೌರ್ಯದ ಹಾನಿಹರಿಬದಲಿ ।
ಈ ನರೇಂದ್ರನ ಕೊಂದ ನನಗಿ-
ನ್ನೇನು ದೇಹಕೆ ತಲೆಯೊಡನೆ ಸಂ-
ಧಾನವೇ ಸಾಕೆನ್ನ ಕೈದುವನೆನಗೆ ನೀಡೆಂದ ॥ ೬೧ ॥

ಎಲವೊ ಖೂಳ ಕಿರೀಟಿ ಮತ್ತೆಯು
ತಿಳಿಯೆಲಾ ನೀನಾವಪರಿಯಲಿ
ಮುಳಿದು ರಾಯನನಿಜರಿದೆ ನಿನಗೆಯು ತದ್ವಿಧಾನದಲಿ ।
ಅಳಿವ ನೆನೆಯಾ ಸಾಕು ದೇಹವ-
ನಳಿವುದೇ ಕೊಲೆಯಲ್ಲ ನಿನ್ನ-
ಗ್ಗಳಿಕೆಗಳ ನೀನಾಡಿ ನಿನ್ನನೆ ಕೊಂದುಕೊಳ್ಳೆಂದ ॥ ೬೨ ॥

---

೬೦. [1]ಯುಧದೊರೆ (ಅ). [2]ಪಿಡಿದೀ (ಅ ಕುಮಾ).

[ಸಂಧಿ-ಸೇರಿಕೆ, ಕೂಡಿಕೆ, ಸೇರುವ, ಕೂಡುವ, ಸ್ಥಳ. ಖಯಖೋಡಿ-ಅಳುಕು, ಹಿಂಜರಿಕೆ. ಅಡಹಾಯ್ದು-ಅಡ್ಡನುಗ್ಗಿ. ಕೃಪಾಣ-ಕತ್ತಿ. ನೆನಹು-ಆಲೋಚನೆ].

೬೧. [ಸತ್ಯಶೌರ್ಯದ ಹಾನಿ ಹರಿಬ-ಸತ್ಯ ಶೌರ್ಯಗಳು ನಷ್ಟವಾದ ಸಂದರ್ಭದಲ್ಲಿ ಕೈಗೊಳ್ಳ ಬೇಕಾದ ಕರ್ತವ್ಯ ಕೈದು-ಆಯುಧ].

೬೨. [ಮುಳಿ-ಕೋಪಿಸಿಕೊ. ಅಳಿವು-ನಾಶ, ಸಾವು. ಅಗ್ಗಳಿಕೆ-ಶ್ರೇಷ್ಠತೆ].

ಸಂದ ಪರಿಯಿದು ಜಗಕೆ ಲೋಗರ
ನಿಂದಿಸುವುದೇ ಹಿಂಸೆ ತನ್ನನೆ
ಕೊಂದವನು ತನ್ನಾಳುತನವನು ತಾನೆ ಹೊಗಳಿದರೆ ।
ಎಂದಡರ್ಜುನನವನಿಪಾಲಂ-
ಗೆಂದನೆನಗಿದಿರಾಗಿ ರಣದಲಿ
ನಿಂದು ಕಾದುವನಾರು ದನುಜಾಮರರ ಥಟ್ಟಿನಲಿ ॥ ೬೩ ॥

ಉಂಟು ಫಲುಗುಣ ನಿನ್ನ ಹೋ[1]ಲುವ-
ರುಂಟೆ[1] ಸುಭಟರು ದೇವದೈತ್ಯರೊ-
ಳೆಂಟುಮಡಿ ನಾವಱಿಯೆವೇ ಕೈವಾರವೇ[2]ಕಿ[2]ದಕೆ ।
[3]ಟಿ[3]ಂಟಣಿಸದಿರು ಕೃಷ್ಣನಿಕ್ಕಿದ
ಗಂಟಿನಲಿ ಸಿಲುಕದಿರು ಯೆನ್ನಯ
ಗಂಟಲಿದೆ [4]ನಿಶಿತಾಸ್ತ್ರ[4]ವಿದೆ ನೀ ಬೇಗಮಾಡೆಂದ ॥ ೬೪ ॥

ಇಱಿದು ಮೆಱೆವ ವಿನೋದವಿಗ್ರಹ-
ದಿಱಿತವೇ ಹಿಂದಾಯ್ತು ಹರಹಿನೊ-
ಳುಱುವ ಪಲಿತದ ಬೀಡು ಬಿಟ್ಟುದು [1]ತನ್ನ[1] ತನುವಿನಲಿ ।
ಇಱಿದ ಕರ್ಣನೆ ಸಾಲದೇ ಹೆಣ-
ನಿಱಿದು ಹಗೆಯೇಕೆಂಬ ಮಾತನು
ಮಱೆದು ಕಳೆ[2]ಯ್ಯ[2] ತಮ್ಮ ಯೆಂದವನೀಶ ಬಿಸುಸುಯ್ದು ॥ ೬೫ ॥

---

೬೩. [ಸಂದ-ಪ್ರಸಿದ್ಧವಾದ. ಪರಿ-ರೀತಿ. ಲೋಗರು-ಲೋಕದ ಜನ. ಆಳುತನ-ಪರಾಕ್ರಮ. ದನುಜ-ರಾಕ್ಷಸ. ಅಮರ-ದೇವತೆ].

೬೪. [1]ಲಿಸಲುಂಟೆ (ಅ ಕುಮಾ). [2]ನ (ಅ ಕುಮಾ). [3]ಕಂ (ಅ ಕುಮಾ). [4]ಶಸ್ತ್ರೌಘ (ಅ ಕುಮಾ).

[ಕೈವಾರ-ಹೊಗಳಿಕೆ, ಪ್ರಶಂಸೆ. ಟಿಂಟಣಿಸು-ಉಬ್ಬಿಹೋಗು. ಗಂಟು-ಕಟ್ಟು, ಕುಣಿಕೆ. ನಿಶಿತಾಸ್ತ್ರ-ಹರಿತವಾದ ಬಾಣ].

೬೫. [1]ನಮ್ಮ (ಅ ಕುಮಾ). [2]ದೈ (ಅ ಕುಮಾ).

[ವಿನೋದ ವಿಗ್ರಹ-ವಿನೋದಕ್ಕಾಗಿ ಮಾಡುವ ಯುದ್ಧ. ಉಱುವ-ಶ್ರೇಷ್ಠವಾದ. ಪಲಿತ-ನರೆಗೂದಲು ಕಾಣಿಸಿಕೊಂಡಿತು ಎಂದರೆ ಮುಪ್ಪಡಸಿತು. ಹಗೆ-ಶತ್ರುತ್ವ, ವೈರ].

ನಿನ್ನ ಜನನಿಯು ಜಠರದಲಿ ತಾ
ಮುನ್ನ ಜನಿಸಿದೆನೀ ಗುರುತ್ವಕೆ
ಮನ್ನಿ[1]ಸಿ[1]ದೆ ಸಾಕೈಸಲೇ ಸರ್ವಾಪರಾಧವನು ।
ಎನ್ನನೊಬ್ಬನನುಳಿ[2]ಯಲು[2]ಳಿದರ
ಭಿನ್ನ [3]ಸಾಹೋದರ್ಯ[3] ಸಂಪ್ರತಿ-
ಪನ್ನಗುಣರವರೊಡನೆ ಸುಖದಲಿ ರಾಜ್ಯಮಾಡೆಂದ ॥ ೬೬ ॥

ಎನುತ ನಯನೋದಕದ [1]ಸ[1]ರಿಯಲಿ
ನನೆದ ವಲ್ಲಿಯ ಬಾಹುಮೂಲದ
ಕನಕದೊಜ[3]ಯ ಕಠಾರಿಯವನಿಪನೆದ್ದು ಸಂವರಿಸಿ ।
ಮನದ ದುಗುಡದ ದಡಿಯ ಮೋಜ[3]ಯ
ತನಿಹೊಗರ [2]ಚಾವಡಿಯ[2] ತವಕದ
ಬನದ ಪಯಣ[3]ವ[3] ಧರ್ಮಸುತ ಹೊಜವಂಟನರಮನೆಯ ॥ ೬೭ ॥

ಸದನವನು [1]ತನತನಗೆ[1] ಹೊಜವಂ-
ಟುದು ನೃಪಾಲಸ್ತೋಮ ದುಮ್ಮಾ-
ನದಲಿ ಧೃಷ್ಟದ್ಯುಮ್ನಸಾತ್ಯಕಿಚೇಕಿತಾನಕರು ।
[2]ಕದಡಿತಾ[2] ಪರಿವಾರವಾರಿಧಿ
[3]ಕೆದಜ[3] ಹೊಜವಂಟುದು ಕಿರೀಟಿಯ
ಹೃದಯ ಹೊಗೆದುದು ಹೊತ್ತಿದನುಪಮಶೋಕವಹ್ನಿಯಲಿ ॥ ೬೮ ॥

---

೬೬. [1]ಸ (ಅ). [2]ಯೆ ನು (ಅ). [3]ಸೋದರಿಯರನು (ಅ).
[ಗುರುತ್ವ-ಹಿರಿತನ. ಅಭಿನ್ನ-ಕಡಿದುಹೋಗದ. ಸಾಹೋದರ್ಯ-ಸೋದರಿಕೆ. ಸಂಪ್ರತಿಪನ್ನಗುಣರು-ಶೌರ್ಯಗುಣವನ್ನು ಹೊಂದಿದವರು].

೬೭. [1]ಪ (ಅ). [2]ಬಿಸುಸುಯ್ಲು (ಅ ಕುಮಾ). [3]ದ (ಅ ಕುಮಾ).
[ನಯನೋದಕ-ಕಣ್ಣೀರು. ಸರಿ-ಪ್ರವಾಹ. ವಲ್ಲಿ-ಉತ್ತರೀಯ, ಮೇಲು ಹೊದಿಕೆ. ಬಾಹುಮೂಲ-ಕಂಕುಳು. ಕನಕದೊಜ[3] (ಕನಕದ + ಒಜ[3])-ಚಿನ್ನದ ಕತ್ತಿಯ ಕೋಶ. ಸಂವರಿಸು-ಸಿದ್ಧತೆ ಮಾಡಿಕೊ. ದಡಿಯ-ಉಬ್ಬಿದ, ದಪ್ಪನಾದ. ತನಿಹೊಗರು-ವಿಶೇಷವಾದ ಕಾಂತಿ. ಚಾವಡಿ-ನೆಲೆ. ತವಕದ ಬನದ ಪಯಣ-ಆತುರದ ವನ ಪ್ರಯಾಣ (ವಾನಪ್ರಸ್ಥ). ಹೊರವಂಟನು-ಬಿಟ್ಟು ಹೊರಟನು].

೬೮. [1]ತಮತಮಗೆ (ಅ ಕುಮಾ). [2]ಕೆದರಿತಾ (ಅ). [3]ಕದಡಿ (ಅ).
[ಸದನ-ಮನೆ. ದುಮ್ಮಾನ-ದುಃಖ. ಕದಡು-ಕಲಕಿಹೋಗು].

ಹರಿದು ಬೀದಿಯೊಳವನಿಪಾಲನ
ಚರಣದಗ್ರದೊಳೊಡಲ ಹಾಯಿಕಿ
ಹೊರಳಿದನು ಹೊನಲಿಡುವ ಲೋಚನವಾರಿಪೂರದಲಿ ।
ಧರಣಿಪಾಲ ದುರಾತ್ಮಕನನು-
ದ್ಧರಿಸಬೇಹುದು ಜೀಯ ಕರುಣಾ-
ಕರನಲಾ ನೀನೆನುತ ಹಿಡಿದನು ಭೂಪನಂಘ್ರಿಗಳ ॥ ೬೯ ॥

ಮಾಡಿದೆನ್ನಪರಾಧಶತವನು
ನೋಡಲಾಗದು [1]ಚಿತ್ತ[1]ದಲಿ [2]ಖಯು
ಖೋಡಿಯಿಲ್ಲದೆ ಮನವ ಕೊಡದಿರು[2] ಖತಿಯ ಘಲ್ಲಣೆಗೆ ।
ನೋಡುವುದು ಕಾರುಣ್ಯದೃಷ್ಟಿಯೊ-
ಳೀಡಿಱಿವ ಘನಶೋಕವಹ್ನಿಗೆ
ಖೇಡನಾದೆನು ಜೀ[3]ಯ ಯೆಂದೊರಲಿ[3]ದನು ಕಲಿಪಾರ್ಥ ॥ ೭೦ ॥

ಸಾಕು ಪಾರ್ಥನ ಬಿನ್ನಹವ ಕೆಡೆ
ನೂಕದಿರು ನೆಳಲಿಂಗೆ ಬೇಱೆ ವಿ-
ವೇಕಚೇಷ್ಟೆಗಳೇ ಸಹೋದರರೀ ಚತುಷ್ಟಯಕೆ ।
ಈ ಕಮಲಮುಖಿಯರ್ಗೆ ನಿನ್ನಯ
ಲೋಕವಲ್ಲದೆ ಬೇಱೆ ಕಾರ್ಯ-
ವ್ಯಾಕುಲತೆ ಬೇಡೆಂದು ಮುರರಿಪು ತಿರುಹಿದನು ನೃಪನ ॥ ೭೧ ॥

---

೬೯. [ಹರಿ-ಓಡು. ಹೊನಲಿಡು-ಪ್ರವಹಿಸು. ಲೋಚನವಾರಿಪೂರ-ಕಣ್ಣೀರಿನ ಪ್ರವಾಹ].

೭೦. [1]ಕರುಣ (ಅ ಕುಮಾ). [2]ನೀ ಖೋಡಿಯನು ಬಿಡು ಚಿತ್ತಗೊಡದಿರು (ಅ ಕುಮಾ). [3]ಯೆನುತ ಹಲುಬಿದನು (ಅ ಕುಮಾ).

[ಘಲ್ಲಣೆ-ಘಾಸಿ, ತೊಂದರೆ. ಈಡಿಱಿವ-ರಭಸದಿಂದ ಇರಿಯುವ. ಖೇಡ-ಆಶ್ರಯ, ನೆಲೆ. ಒರಲು-ದುಃಖಿಸು].

೭೧. [ಕೆಡೆನೂಕು-ತಳ್ಳಿಹಾಕು. ನೆಳಲಿಂಗೆ-ಧರ್ಮರಾಯನ ನೆರಳಿನಂತಿರುವವರಿಗೆ. ಬೇಱೆ-ಪ್ರತ್ಯೇಕವಾದ. ವಿವೇಕಚೇಷ್ಟೆ-ಸ್ವಬುದ್ಧಿಯ ನಡೆವಳಿಕೆ. ಕಾರ್ಯವ್ಯಾಕುಲತೆ-ಕಾರ್ಯದ ಜಂಜಾಟ].

೩. ದುಶ್ಶಾಸನ ವಧೆ

ಕೇಳು ಧೃತರಾಷ್ಟ್ರಾವನಿಪ ಭೂ-
ಪಾಲನನು ಸಾಮದಲಿ ಮುರರಿಪು
ಬೋಳವಿಸಿ ಭಾವಜ್ಞ ನಂದಿಸಿದನು ಮನೋವ್ಯಥೆಯ ।
ಮೇಲುಸುರ ಬಿಕ್ಕುಳಿನ ಬಿಗುಹಿನ
ತಾಳಿಗೆಯ ನೀರುಗಳ ಮುಕ್ಕುಳಿ
ವಾಲಿಗಳ ನರನಾಥ ತೆಗೆದಪ್ಪಿದನು ಫಲುಗುಣನ || ೭೨ ||

ಚಳಯುದಲಿ ಫಲುಗುಣನ ಮೋಹರ
ಕಳನ ಹೊಕ್ಕುದು ಹಲವು[1]ಮುಖ[1]ದಲಿ
ತಳಿತು ನಿಂದುದು ಜಡಿವ ಬಹುವಿಧವಾದ್ಯರಭಸದಲಿ ।
ಅಳುಕಿ[2]ದರು[2] ನಮ್ಮವರು ಭೀಮನ
ಸುಳುವಿನಲಿ ಸೊಪ್ಪಾದವರ್ಜುನ-
ನೆಳತಟಕೆ ನಿಲ[3]ಲೆಂ[3]ತೆನುತ ನೆಗ್ಗಿದುದು [4]ಕುರುಸೇನೆ[4] || ೭೩ ||

ಹರೆದ ಬಲ ಹುರಿಗಟ್ಟಿ [1]ಖಾತಿಯು[1]
ದೊರೆಯ ಕೂಡೊದಗಿದುದು ಬೀಜುವ
ಬಿರು[ಬುಗಹಳೆಯ ದನಿಯುಘಾ[2]ಟ[2]ದ ಭೂರಿಭೇರಿಗಳ ।
ಮೊರೆವ ಬಹುವಿಧವಾದ್ಯರಭಸದ
ಧರಧುರದ ಕೆಂದೂಳಿಯಲಿ ಮೋ-
ಹರಿಸಿ [3]ನಿಂದುದು[3] ಭೀಮಸೇನನ ರಥದ [4]ಸಮ್ಮುಖಕೆ[4] || ೭೪ ||

---

೭೨. [ಸಾಮ–ಸಾಮೋಪಾಯ. ಬೋಳವಿಸು–ಸಮಾಧಾನಪಡಿಸು. ಭಾವಜ್ಞ–ಇಂಗಿತಜ್ಞನಾದ ಕೃಷ್ಣ. ನಂದಿಸು–ಆರಿಸು. ಬಿಗುಹಿನ ತಾಳಿಗೆ–ಬಿಗಿದ ಗಂಟಲು, ಕಟ್ಟಿದ ಕೊರಳು. ಮುಕ್ಕುಳು–ಸುಳಿತ, ಹೊರಚೆಲ್ಲುವಿಕೆ. ಆಲಿ–ಕಣ್ಣು].

೭೩. [1]ಮೊನೆ (ಅ ಕುಮಾ). [2]ತೀ (ಅ ಕುಮಾ). [3]ವೆಂ (ಅ ಕುಮಾ). [4]ದುಗುಡದಲಿ (ಅ ಕುಮಾ).

[ಚಳಯ–ವೇಗ. ತಳಿತು–ಒಟ್ಟುಗೂಡಿ. ಜಡಿವ–ಶಬ್ದಮಾಡುವ, ಬಾಜಿಸುವ. ಸೊಪ್ಪಾಗು–ಶಕ್ತಿಗುಂದು. ಎಳತಟ–ಎಳೆದಾಟ, ಕಿರುಕುಳ. ನೆಗ್ಗು–ಚೂರಾಗು, ಪುಡಿಪುಡಿಯಾಗು].

೭೪. [1]ಖತಿಯಲಿ (ಅ ಕುಮಾ). [2]ಯ (ಅ ಕುಮಾ). [3]ಮುಸುಕಿತು (ಅ ಕುಮಾ). [4]ಬಳಸಿನಲಿ (ಅ ಕುಮಾ).

[ಹರೆ–ಚೆಲ್ಲಾಪಿಲ್ಲಿಯಾಗು. ಹುರಿಗಟ್ಟು–ಉತ್ಸಾಹಗೊಳ್ಳು. ಖಾತಿ–ಕೋಪ. ಬೀಜು–ಹರಡು, ಪ್ರಸಾರಮಾಡು. ಬಿರುಬುಗಹಳೆ–ರಭಸವಾಗಿ ಧ್ವನಿಮಾಡುವ ಕಹಳೆ. ಅಘಾಟದ–ಅತಿಶಯವಾದ. ಧರಧುರ–ಆಧಿಕ್ಯ, ಹೆಚ್ಚಳ. ಮೋಹರಿಸು–ಗುಂಪುಗೂಡು. ಸಮ್ಮುಖಕೆ–ಎದುರಿನಲ್ಲಿ].

ಸಾರಹೇ[1]ಳೋ[1] ರಾಯಕುವರ ಮು-
ರಾರಿ ದುಶ್ಶಾಸನಕಣಾ ಫಡ
ವೈರಿಭೀಮದ್ವಿರದ ಕುಂಭಸ್ಥಳಕೆ ಪಂಚಮುಖ ।
ವೀರಮದನನ ತ್ರಿಪುರಹರಜ-
ಜ್ಝಾರ[2]ಭಟ[2] ಜಗಜಟ್ಟಿಗಿದಿರೆ ವಿ-
ಕಾ[3]ರಿಯೋ[3] ಫಡ ಭೀಮ[4]ನೆ[4]ನುತೈದಿತು ಭಟಸ್ತೋಮ ॥ ೭೫ ॥

ಬಲನೆಡನ [1]ಗದೆಖಡ್ಗದಲಿ ರಿಪು[1]
ಜಲನಿಧಿಯನೀ[2]ಸಾ[2]ಡಿದನು ಹೆ-
[3]ಬ್ಬಲದ ಹೆಬ್ಬೆಳೆ ಸಾಲ[3] ಕೊಯ್ಲಿನ ಮೆದೆಗಳೊಟ್ಟಿನಲಿ ।
[4]ತಳುಕುಗಳ ವರ ರಥ ಹಯದ[4] ಹೊಸ-
ಮೆಳೆಯ ಕಡಿತದ ಕ[5]ರಿ[5]ಘಟಾಳಿಯ.
ಬಲುಮೊಱಡಿಗಳ [6]ಸವಱಿ[6] ತಳಪಟಮಾಡಿದನು ಭೀಮ ॥ ೭೬ ॥

ಇಂದಲೇ ನೀವ್ ಗದೆಯ ಹಬ್ಬಕೆ
ಬಂದಿ[1]ರ್ಪೈ[1] ಲೇಸಾಯ್ತು ನೀವೇ-
ನೆಂದಿರ್ಪೈ ನಿಮ್ಮಣ್ಣದೇವನ ಮುಂದೆ ಭಾಷೆಗಳ ।
ತಂದಿರ್ಪೈ ತಳ್ಳಂಕವನು ನಮ-
ಗೆಂದು ಕೊಡುವಿರಿ ಕೌರವನ ತ-
ಮ್ಮಂದಿರ್ಪೈ ನೀವೆನುತ ಸುಳಿದನು ಸಿಂಹನಾದದಲಿ ॥ ೭೭ ॥

---

೭೫. [1]ಳಾ (ಅ). [2]ರಿಪು (ಅ). [3]ರವೇ (ಅ). [4]ಯೆ (ಅ).
[ವೈರಿಭೀಮದ್ವಿರದ–ಶತ್ರುವಾದ ಭೀಮನೆಂಬ ಆನೆ. ಪಂಚಮುಖ–ಸಿಂಹ. ತ್ರಿಪುರಹರ–ಈಶ್ವರ. ಜಜ್ಝಾರಭಟ–ವೀರಸೈನಿಕ. ವಿಕಾರಿ–ದುಷ್ಟ].

೭೬. [1]ಖಡ್ಗದಲಿ ಗದೆಯಲಿ (ಅ). [2]ಜಾ (ಅ). [3]ಬ್ಬೆಳೆಯ ಹೆಬ್ಬೆಳಸಾಯ್ತು (ಅ). [4]ತುಳುಕುಗಳನಾ ಹಯರಥದ (ಅ). [5]ಲಿ (ಅ). [6]ತೂಱಿ (ಅ).
[ಹೆಬ್ಬಲ–ದೊಡ್ಡ ಸೈನ್ಯ. ಹೆಬ್ಬೆಳೆ–ಹುಲುಸಾದ ಬೆಳೆ. ತಳುಕುಗಳ–ಒಟ್ಟು ಸೇರಿಕೊಂಡಿರುವ. ಮೆಳೆ–ಗುಂಪು. ಕರಿಘಟಾಳಿ–ಆನೆಗಳ ಸಮೂಹ. ಮೊಱಡಿ–ಗುಡ್ಡ. ಸವಱು–ಕತ್ತರಿಸಿಹಾಕು. ತಳಪಟಮಾಡು–ಹಾಳುಗೆಡವು, ಧ್ವಂಸಮಾಡು].

೭೭. [1]ರಿದು (ಅ).
[ತಳ್ಳಂಕ–ಚಿಂತೆ, ಕಳವಳ].

ನೋ[1]ಕುವಿರಿ[1] ಸಂಘಟಿಸಿ ಹೋ ಹೋ
ಸಾಕು ಸಾಕಾ ಮೆಚ್ಚಿದೆನು ತ[2]ಡ-[2]
ವೇಕೆ ದುಶ್ಶಾಸನ ವೃಥಾ ನೀ ಹೊತ್ತುಗಳೆವೆಯಲಾ ।
ನೀ ಕಳೆದುಕೊಳು ಧನುವ ನಮ್ಮ ವಿ-
ವೇಕವನು ದಳ ನೋಡುತಿರಲಿ ನಿ-
ರಾಕುಳದಲೆಚ್ಚಾಡುವೆವು ನಿಲ್ಲೆಂದನಾ ಭೀಮ ॥ ೭೮ ॥

ಕೊಲಗಿರ್ಯ [1]ಪರಿವಾರ[1] ಬಾಳೆಯ
ತಳಿ[2]ರ[2] ಮುಱಿವತಿಸಹಸಿ ಗಡ ಮುಱಿ-
ಮೊಲನ ಬೇಟೆಯ ವೀರ ಗಡ ಬಾಣಪ್ರಯೋಗದಲಿ ।
ಸಲೆ ಮೃಗದ ಸಾಹಸಿಗೆ ಗಡ ಕು-
[3]ಟ್ಮ[3]ಳಿತಕೇತಕಿತೀಕ್ಷ್ಣ ಗಡ ನೀ-
ವಳವಿಗೊಡದಿರಿ ಎನುತ ನಿನ್ನ ಕುಮಾರನನುವಾದ ॥ ೭೯ ॥

ಸವೆಯೆ ಸರಳೆಚ್ಚಾಡಿದರು ಕಲಿ-
ಪವನಸುತದುಶ್ಶಾಸನರು ರಣ-
ದವಕಿಗ[1]ರು[1] ಕೋಪಾಗ್ನಿ ಭುಗಿಭುಗಿಲೆಂದುದಡಿಗಡಿಗೆ ।
ಅವನಿಗಿಳಿಬಿಡು ಧನುವ ತೆಗೆ ಖಡು-
ಗವನೆನುತ ರಥದಿಂದ [2]ಚಿಗಿದರು[2]
[3]ಬವರಿಗಳ[3] ಬಿನ್ನಣದಿ ಹೊಯ್ದಾಡಿದ[4]ರು ಗದೆಗಳಲಿ[4] ॥ ೮೦ ॥

---

೭೮. [1]ಕದಿರಿ (ಅ). [2]ತಳು (ಅ).
[ಸಂಘಟಿಸಿ–ಒಂದುಗೂಡಿ, ಒಂದಾಗಿ ಸೇರಿ. ನಿರಾಕುಳದಲಿ–ಕ್ಲೇಶವಿಲ್ಲದೆ].

೭೯. [1]ಕಾಲಾಳು (ಅ). [2]ಯ (ಅ). [3]ಸುಮ (ಅ).
[ತಳಿರು–ಚಿಗುರೆಲೆ. ಮೃಗ–ಜಿಂಕೆ. ಕುಟ್ಮಳಿತಕೇತಕಿತೀಕ್ಷ್ಣ–ತಾಳೆಯ ಮೊಗ್ಗಿನ (ಮುಳ್ಳುಗಳ) ಹರಿತ, ಮೊನಚು. ಅಳವಿಗೊಡು–ಪ್ರತಿಭಟಿಸು, ಕಾಳೆಗಕ್ಕೆ ನಿಲ್ಲು].

೮೦. [1]ರ (ಅ). [2]ಹಾಯ್ದರು (ಅ). [3]ಬವರಿಗರು (ಅ). [4]ರಡಾಯುಧದಿ (ಅ).
[ಸವೆ–ತೀರಿಹೋಗು. ರಣದವಕಿಗರು–ಯುದ್ಧಕ್ಕಾಗಿ ತವಕಿಸುವವರು. ಇಳಿಬಿಡು–ಕೆಳಕ್ಕೆ ಹಾಕು. ಬವರಿಗಳ ಬಿನ್ನಣ–ಮಲ್ಲಯುದ್ಧದಲ್ಲಿ ಸುತ್ತು ತಿರುಗುವ ಒಂದು ಕಲೆ, ಕೌಶಲ್ಯ].

[1]ಸಾಕಿದೇತಕೆ[1] ಮಲ್ಲಶ್ರಮದಲಿ
ನೂಕಿ ನೋಡುವೆ[2]ವಿನ್ನು[2] ಕೈದುಗ-
ೞೇಕೆ ದೃಢಮುಷ್ಟಿಪ್ರಹಾರಪ್ರಕಟಸತ್ವರಿಗೆ ।
ಈ ಕುಮಾರಕರೊಳಗೆ ನೀನೇ
ಜೋಕೆಯುಳ್ಳವನಹೆ[3]ನಿ[3]ಯುದ್ಧ-
ವ್ಯಾಕರಣ ಪಾಂಡಿತ್ಯ[4]ವೆ[4]ಮಗುಂಟೆಂದನಾ ಭೀಮ ॥ ೮೧ ॥

ತರಿಸಿ ಬಿಗಿದರು ಚಲ್ಲಣವ[1]ಠ-[1]
ಪ್ಪರವನಳವಡೆ ಕಟ್ಟಿದರು ಕ-
ತ್ತುರಿಯ ತಿಲಕವನೊಟ್ಟಿದರು ನೊಸಲಿನಲಿ ಮುಡುಹಿನಲಿ ।
ಕರತಳವ ಮಾಱುದ್ದಿ ಭುಜದಲಿ
ಸಿರದ[2]ಲಂದಖ್ಖಡ[2]ದ ಮಣ್ಣನು
ಬೆರಳಲುದುರ[3]ಸಿ[3] ಬಾಳುಗೆಂದರು ನೆನೆದು ನಿಂಬಜೆಯ ॥ ೮೨ ॥

ಮೈಗೆ ಮೇಣದ ಹಾಹೆ ಸರಿ ಮುಂ-
ಗೈಗೆ ಮೇರುವಿನಿ[1]ರ[1]ವು ದೊರೆ ಹೊಜಿ-
ಗೈಗೆ ವಜ್ರದ ಹೊಯ್ಲು ಪಡಿಘಟ್ಟಣೆ ಮಹಾದೇವ ।
ಕೈಗಡಿಯ ಪಟುಭಟರೊಳಗೆ ಬಲು-
ಗೈಗಳೆಂದ[2]ಸುರಾರಿ[2] ಹೊಗಳಲು
ಹೊ[3]ಯ್ಲು[3]ೞಿನ ಹೊಸನಾಟಕವನಭಿನಯಿಸಿ [4]ಹೆಣಗಿ[4]ದರು ॥ ೮೩ ॥

---

೮೧. [1]ಸಾಕುನೋಡುವ (ಅ). [2]ನೆನುತ (ಅ). [3]ಯೊ (ಅ). [4]ನಿ (ಅ).
[ದೃಢಮುಷ್ಟಿ ಪ್ರಹಾರ ಪ್ರಕಟಸತ್ವರು-ಬಲವಾದ ಮುಷ್ಟಿಯ ಹೊಡೆತವನ್ನು ತೋರಿಸುವ ಶಕ್ತಿಯುಳ್ಳವರು (ಮುಷ್ಟಿಯುದ್ಧ ಸಮರ್ಥರು). ಜೋಕೆ-ಎಚ್ಚರಿಕೆ, ಜಾಗ್ರತೆ. ಅಹೆ-ಆಗಿರುವೆ. ನಿಯುದ್ಧ ವ್ಯಾಕರಣ ಪಾಂಡಿತ್ಯ-ಮಲ್ಲಯುದ್ಧ ಮಾಡುವುದರಲ್ಲಿ ವಿಶೇಷವಾದ ಜ್ಞಾನ].

೮೨. [1]ರ (ಅ). [2]ಲಾಧಟ್ಟಣಡ (ಅ). [3]ಚಿ (ಅ).
[ತಪ್ಪರ-ಸೊಂಟಕ್ಕೆ ಬಿಗಿಯುವ ವಸ್ತ್ರ ಅಥವಾ ಪಟ್ಟಿ. ಒಟ್ಟು-ಇಡು, ಧರಿಸು. ಮುಡುಹು-ಹೆಗಲು. ಕರತಳ-ಅಂಗೈ. ಮಾಱುದ್ದು-ಅಂಗೈಯನ್ನು ಒಂದರೊಡನೊಂದನ್ನು ಉಜ್ಜು. ಅಖ್ಖಡ-ಅಖಾಡ, ಮಲ್ಲಯುದ್ಧ ಮಾಡುವ ಹುಡಿಮಣ್ಣಿನ ಸ್ಥಳ. ನಿಂಬಜೆ-ರಣಚಂಡಿ].

೮೩. [1]ದ (ಅ). [2]ಮುರಾರಿ (ಅ). [3]ಯ್ಗ (ಅ). [4]ಕಾದಿ (ಅ).
[ಮೇಣದ ಹಾಹೆ-ಮೇಣದ ಬೊಂಬೆ. ಸರಿ-ಸಮ. ಇರವು-ಸ್ಥಿತಿ. ದೊರೆ-ಸಮಾನ. ಹೊಯ್ಲು-ಹೊಡೆತ. ಪಡಿಘಟ್ಟಣೆ-ಸಮನಾದ ಹೊಡೆತ. ಕೈಗಡಿ-ಕೈಚಳಕ. ಬಲುಗೈಗಳು-ಹೆಚ್ಚು ಶಕ್ತಿಯುಳ್ಳವರು. ಹೊಯ್ಲುಗಳು-ಹೊಡೆತಗಳು. ಹೆಣಗು-ಹೋರಾಡು].

ತ್ರಾಣವೆಳದಾ[1]ಯಿತ್ತು ಧೈರ್ಯದ[1]
ಚೂಣಿ ಮುಱಿದುದು ಘರ್ಮಜಲವು-
ಗ್ರಾಣಿಸಿತು ಭುಜಬಲವನಂಕುರಿಸಿತ್ತು ರಣಭೀತಿ ।
ಪ್ರಾಣಪವನನ ಬೀಡು ಬಿಟ್ಟುದು
ಗೋಣಿನಲಿ ಗರುವಾಯಿಗೆಡೆ ರಣ-
ಹೂಣಿಗನು ದುಶ್ಶಾಸನನು ಜವಗುಂದಿದನು ಬಳಿಕ || ೬೮ ||

[1]ಹಾಯ್ದು ಮುಂದಲೆವಿಡಿದು ತೊಡೆಗಾ-
ಲ್ವೊಯ್ದು[1] ಕೆಡಹಿದ [2]ಸದೆ[2]ಬಡಿದು ಹೊಯ್-
ಹೊಯ್ದು ಬಿಡೆ ಖೊಪ್ಪರಿಸಿ ಡೊಕ್ಕರವಿಕ್ಕಿ [3]ರಾಘೆ[3]ಯಲಿ ।
ಹಾಯ್ದವಾಲಿಗಳುಸುರಪಾಳೆಯ
[4]ವೆ[4]ಯ್ದೆ ಬಿಟ್ಟುದು ಮೂಗಿನಲಿ ಕೈ-
ಗೆಯ್ದು [5]ಕುಡಿತೆಯ[5] ಶೋಣಿತಕೆ ಲಟಕಟಿಸಿದನು ಭೀಮ || ೬೯ ||

---

೬೮. [1]ಯ್ತಖಿಳ ಶೌರ್ಯದ (ಅ).

[ತ್ರಾಣ-ಶಕ್ತಿ. ಎಳದಾಯಿತ್ತು-ಕುಗ್ಗಿಹೋಯಿತು. ಚೂಣಿ-ಮುಂಭಾಗ. ಘರ್ಮಜಲ-ಬೆವರು. ಉಗ್ರಾಣಿಸು-ಸಂಗ್ರಹವಾಗು, ತುಂಬಿಕೊಳ್ಳು. ಅಂಕುರಿಸು-ಕಾಣಿಸಿಕೊ. ಪ್ರಾಣಪವನ-ಪ್ರಾಣವಾಯು. ಗೋಣು-ಕೊರಳು, ಗಂಟಲು. ಗರುವಾಯಿಗೆಡು-ಹಿರಿಮೆ ಅಳಿ, ಹೆಮ್ಮೆ ಕುಸಿ. ರಣಹೂಣಿಗ-ಛಲದಿಂದ ಯುದ್ಧ ಮಾಡುವವನು. ಜವಗುಂದು-ಶಕ್ತಿಹೀನವಾಗು].

೬೯. [1]ಹೊಯ್ದು ತುರುಬನು ಹಿಡಿದು ತಡೆಗಾಲ್ವೊಯ್ದು (ಅ). [2]ನಸ (ಅ). [3]ವಾಘೆ (ಅ). [4]ಮೆ (ಅ). [6]ತುಡುಕಿದ (ಅ).

[ಹೊಯ್ದು-ಹೊಡೆದು. ಖೊಪ್ಪರಿಸು=ಕೊಪ್ಪರಿಸು-ಸದೆಬಡಿ. ಡೊಕ್ಕರವಿಕ್ಕು-ಮಲ್ಲಯುದ್ಧದ ವರಸೆಯಲ್ಲಿ ಹೊಡೆ. ರಾಘೆ-ತೊಡೆ. ಆಲಿ-ಕಣ್ಣುಗುಡ್ಡೆ. ಕೈಗೆಯ್-ಸಿದ್ಧವಾಗು, ಸಜ್ಜಾಗು, ಅಣಿಯಾಗು. ಕುಡಿತೆ-ಪಾನ, ಕುಡಿಯುವುದು. ಶೋಣಿತ-ರಕ್ತ. ಲಟಕಟಿಸು-ಆತುರಪಡು, ತವಕಿಸು].

ಹರಿ ಮದೋತ್ಕಟದಂತಿಯನು ಡೊ-
ಕ್ಕರಿಸಿ ಡಾವರಿಸುವ ವೊಲಾ ನರ-
ಹರಿ ಹಿರಣ್ಯಕಶಿಪುವನಂಕದ ಮೇಲೆ [1]ಸೀಳ್ದಂತೆ[1] ।
ಅರಸ ನಿನ್ನ ಕುಮಾರ[2]ನನು[2] [3]ಕಡು-
ಧು[3]ರದೊಳಗೆ ಕೆಡಹಿದನು ಕೊಬ್ಬಿದ
[4]ಕರುಷರಸನಾ[4] ಯುದ್ಧದ[5][ಕ್ಕು][5]ಡನಾದನಾ ಭೀಮ ॥ ೮೬ ॥

ಸಿಕ್ಕಿದೆಯಲಾ ಸ್ವಾಮಿದ್ರೋಹಿಯೆ
ಸೊಕ್ಕಿದೆಯಲಾ ಹಿಂದೆ ಜೂಜಿನ-
ಲಕ್ಕಜವ ಮಾಡಿದೆಯಲಾ ಮಾನಿನಿಯ ಮುಡಿವಿಡಿದು ।
ಚುಕ್ಕಿಗಳಲಾ ನಿನ್ನವರು ಕೈ-
ಯಿಕ್ಕ ಹೇಳಾ ನಿನ್ನನೊಬ್ಬನ-
ನಿಕ್ಕಿ ನೋಡಿದರಕಟೆನುತ ಮೂದಲಿಸಿದನು ಭೀಮ ॥ ೮೭ ॥

*ಖಳನ ವಕ್ಷದ ಮೇಲೆ ಮಡವನು
ಬಲಿದು ಕೈಗಳನೊತ್ತಿ ಮುಗ್ಗುಲ-
ನುಲುಕಲೀಯದೆ ವಜ್ರ[1]ಬಂಧುರ[1]ಮುಷ್ಟಿಯನು ನೆಗಹಿ ।
ಒಳಗೊಡೆಯಹಾಯ್ದೀಕ್ಷಿಸಿದ ಕಂ-
ಗಳಲಿ ಕೆಂಪಡರಿದವು ಭೀಮನ
ಬಲವು ಘನವೆಗ್ಗಳಿಸೆ ರೋಷಾವೇಶದಡಿಗಡಿಗೆ ॥ ೮೮ ॥

---

೮೬. [1]ತೆಗೆವಂತೆ (ಅ ಕುಮಾ) [2]ನನು (ಅ ಕುಮಾ). [3]ನಡುತರ (ಅ ಕುಮಾ). [4]ಮರುಷಹರುಷ (ಅ ಕುಮಾ). [5]ಕ್ಕ (ಅ ಆ ಕುಮಾ).
[ಹರಿ-ಸಿಂಹ. ಮದೋತ್ಕಟದಂತಿ-ಮದೋದಕದ ಹೆಚ್ಚಳವುಳ್ಳ ಆನೆ. ಡೊಕ್ಕರಿಸು-ಒತ್ತಿಹಿಡಿ, ಅದುಮು. ಡಾವರಿಸು-ಉತ್ಸಾಹಗೊಳ್ಳು. ಅಂಕ-ತೊಡೆ. ಕಡುಧುರ-ಘೋರ ಯುದ್ಧ. ಕರುಷ-ಸೆಳೆತದ, ಆಕರ್ಷಣೆಯ, ನೋಯಿಸುವ. ರಸನಾ-(ನಾಲಗೆಯ) ಅಬ್ಬರ, ಆರ್ಭಟೆ. ಅಕ್ಕುಡ-ಶೂರ, ಸತ್ವಶಾಲಿ].

೮೭. [ಅಕ್ಕಜ-ಬೆರಗು, ಆಶ್ಚರ್ಯ. ಚುಕ್ಕಿ-ಅಲ್ಪ, ಹೀನ].

೮೮. [1]ಬಂಧದ (ಸೂಚಿತ ಪಾಠ).
[ವಕ್ಷ-ಎದೆ. ಮಡ-ಅಡಿಯ ಹರಡು, ಹಿಮ್ಮಡಿ. ಉಲುಕು-ಅಲ್ಲಾಡು, ಅಲುಗು. ವಜ್ರಬಂಧುರ-ವಜ್ರದಂತೆ ಮನೋಹರವಾದ (ಕಠಿಣವಾದ). ನೆಗಹು-ಮೇಲಕ್ಕೆ ಎತ್ತು. ಒಡೆಯ ಹಾಯ್ದು-ಬಿರಿಯುವಂತೆ ನುಗ್ಗಿಸಿ].

---

* ಈ ಪದ್ಯವು ಅ ಮತ್ತು ಕುಮಾ ಪ್ರತಿಗಳಲ್ಲಿ ಕಂಡುಬರುವುದಿಲ್ಲ ಪೇಟೆ ಪ್ರತಿಯಲ್ಲಿ 19ನೇ ಸಂಧಿಯ 54ನೇ ಪದ್ಯವಾಗಿದೆ.

*ಎಱಗಿದನು ಕಟವಾಯಿಹಲುಗಳ
ಮುಱಿಯಲುಗುರಲಿ [1]ತೆಗೆದು[1] ಹೃದಯವ-
ನುಱೆ ಬಗಿದು ಮೊಗೆಮೊಗೆದು ರಕುತವ ಕುಡಿತೆಕುಡಿತೆಯಲಿ ।
ಸುಱಿದು ಸುಱಿದಡಿಗಡಿಗೆ ಮಿಗೆ ಚ-
ಪ್ಪಱಿದು ಚಪ್ಪಱಿದಱಿ ಮಧುರಕೆ
ನೆಱೆವುದೇ ಸುಧೆ ಯಿಕ್ಷುರಸಗಸವೆಂದನಾ ಭೀಮ ॥ ೮೯ ॥

ಉಭಯವೀರರ ನೋಡಿ ಸಂಗರ-
ರಭಸದಲಿ ಮೂದಲಿಸಿ ಚಾಪ-
ಪ್ರಭವಚಪಳರ ಚದುರುಗೆಡಿಸಿದ ಭುಜಬಲೋನ್ನತಿಯ ।
ಸಭೆಯೊಳಾದವಮಾನದಹನ-
ಪ್ರಭೆಯ ನಂದಿಸಲಾಯ್ತಲಾ ರಿಪು-
ಸುಭಟನುರವೆಂಬಭ್ರಸಂಭವರುಧಿರಜಲವೆಂದ ॥ ೯೦ ॥

**ಐದುಮುಖವೀರೈದುಭುಜ ಹದಿ-
ನೈದು ಕಂಗಳ ವಿಲಯರುದ್ರನು
ಮೇದಿನಿಯ ಮೇಲೊಂದುಮುಖಭುಜವೆರಡನಳವಳಿಸಿ ।
ಆದಿಪುರುಷನು ಭೀಮವೇಷದ-
ಲೈದಿಹನು ಬಳಿಕಾತನಿದಿರಲಿ
ಕೈದುಕಾಱನದಾವನೈ ಕಲಿಪಾರ್ಥ ಕೇಳೆಂದ ॥ ೯೧ ॥

---

೮೯. [ಎಱಗು-ಮೇಲೆ ಬೀಳು. ಕಟವಾಯಿ-ಬಾಯಿಯ ಕಡೆಯ ಭಾಗ. ಕುಡಿತೆ-ಬೊಗಸೆ. ಸುಱಿದು-ಹೊಯ್ದುಕೊಂಡು. ಚಪ್ಪಱಿ-ಚಪ್ಪರಿಸು. ಮಧುರ-ಸಿಹಿ, ಸವಿ. ನೆಱೆ-ಸರಿಗೂಡು, ಸಮನಾಗಿ ಸೇರು. ಸುಧೆ-ಅಮೃತ. ಇಕ್ಷುರಸ-ಕಬ್ಬಿನರಸ].

೯೦. [ಸಂಗರ-ಯುದ್ಧ. ಚಾಪಪ್ರಭವಚಪಳರು-ಬಿಲ್ಲುವಿದ್ಯೆಯಲ್ಲಿ ಉಂಟಾದ ಆಸಕ್ತಿಯುಳ್ಳವರು. ಚದುರುಗೆಡಿಸು-ಜಾಣ್ಮೆಯನ್ನು ಹಾಳುಮಾಡು. ದಹನಪ್ರಭೆ-ಸುಡುವ ಕಾಂತಿ. ನಂದಿಸು-ಆರಿಸು. ಉರ-ಎದೆ. ಅಭ್ರ-ಮೋಡ. ಸಂಭವ-ಹುಟ್ಟಿದ. ರುಧಿರಜಲ-ರಕ್ತ ಎಂಬ ನೀರು].

೯೧. [ಈರೈದು-ಹತ್ತು. ಮೇದಿನಿ-ಭೂಮಿ. ಕೈದುಕಾರ-ಆಯುಧ ಹಿಡಿದವನು].

---

* ಈ ಪದ್ಯವು ಪೇಟೆ ಪ್ರತಿಯಲ್ಲಿ ಅಧಿಕ ಪಾಠವಾಗಿ 95ನೇ ಪದ್ಯವಾಗಿದೆ.

** ಈ ಪದ್ಯವು ಅ, ಕು.ಮಾ ಪ್ರತಿಗಳಲ್ಲಿ ಕಂಡುಬರುವುದಿಲ್ಲ. ಪೇಟೆ ಪ್ರತಿಯಲ್ಲಿ 103ನೇ ಪದ್ಯವಾಗಿದೆ.

*ಎಂದು ಪಾರ್ಥನ ತಿಳುಹಿ ತಿರುಗಿ ಮು-
ಕುಂದ ರಥವೇರಿಸಿದನಿತ್ತಲು
ಕುಂದುಮೋಱೆಯ ಕೌರವಾದಿಗಳೆಲ್ಲ ಬೆಱಗಾಗಿ ।
ನಿಂದು ನೋಡುತ್ತಿರಲು ಕುಂತೀ-
ನಂದನನು ಮೊಗನೆಗಹಿ ದಿವಿಜರ
ವೃಂದವನು ಕೈವೀಸಿ ಕರೆದನು ರಣಕೆ ಬೊಬ್ಬಿಡುತ ॥ ೯೨ ॥

ಬಳಿಕ ಪರಿತೋಷದಲಿ ಮಾರುತಿ
ಲಲನೆಯಲ್ಲಿಗೆ ಕಳುಹಿದನು ತ-
ನ್ನೊಲವಿನಾಹವವಾದುದೈತಹುದೆನಲು ಬೇಗದಲಿ ।
ನಳಿನಮುಖಿ ನಲವೇಱೆ ಮೇಳದ
ಕೆಳದಿಯರು ಕೈಗೊಡಲು ನೇವುರ-
ದೆಳಮೊಳಗು ಮೋಹಿಸಲು ಮಾನಿನಿ ಬಂದ[1]ಳೊಲವಿನಲಿ[1] ॥ ೯೩ ॥

ತರುಣಿ ಕುಳ್ಳಿರು ಸ್ವಾಮಿದ್ರೋಹಿಯ
ಕರುಳ ಮುಡಿ ಬಾ ನಿನ್ನ ಖಾತಿಯು
ಪರಿಹರಿಸುವೆನು ಖಳನ ರುಧಿರಸ್ನಾನಕೆಳಸುವರೆ ।
ಸರಸಿಜಾನನೆ ಕೊಳ್ಳೆನುತ ಖಳ-
ನುರವನಿಬ್ಬಗಿಮಾಡಿ ಕುಡಿತೆಯು-
ಲರುಣಜಲವನು ಮೊಗೆದು ಮಾನಿನಿಗಿತ್ತನಾ ಭೀಮ ॥ ೯೪ ॥

---

೯೨. [ಕುಂದುಮೋಱೆ–ಕಳೆಗುಂದಿದ ಮುಖ].

೯೩. [1] ಳಾಯೆಡೆಗೆ (ಅ ಕುಮಾ).

[ಮಾರುತಿ–ಭೀಮ. ಆಹವ–ಯುದ್ಧ. ನಲವು–ಹಿಗ್ಗು, ಸಂತೋಷ. ಮೇಳದ–ಜೊತೆಯ. ನೇವುರ–ಕಾಲ್ಗೆಜ್ಜೆ. ಮೊಳಗು–ದನಿ].

೯೪. [ಖಾತಿ–ದುಃಖ. ಇಬ್ಬಗಿ–ಎರಡು ಭಾಗ. ಮೊಗೆ–ತುಂಬಿಕೊಳ್ಳು].

---

* ಈ ಪದ್ಯವು ಅ, ಕುಮಾ ಪ್ರತಿಗಳಲ್ಲೂ ಕಂಡುಬರುವುದಿಲ್ಲ ಪೇಟೆ ಪ್ರತಿಯಲ್ಲಿ 108ನೇ ಪದ್ಯವಾಗಿದೆ.

ಶೋಣಿತಾಂಬುವಿನಿಂದ ತರುಣಿಯು
ವೇಣಿಯನು ನಾದಿದನು ದಂತ-
ಶ್ರೇಣಿಯು[1]ಲಿ[1] ಬಾಚಿದನು ಬೈತಲೆದೆಗೆದು [2]ಸೊಗಸಿನಲಿ[2] ।
ರಾಣಿ ಹುಸಿಯುದೆ ಹೇಳುಹೇಳೆ-
ನ್ನಾಣೆ ಸೊಗಸೇ ಖಳನ ದಂತ-
ಶ್ರೇಣಿ[3]ಯಾ ಬಾಚಣಿಗೆ[3] ಎಂದನು ಪವನಸುತ ನಗುತ ॥ ೯೫ ॥

ಮುಡಿಗೆ ಹಾಯ್ದ್ದವನುದರರಕುತವ
ತೊಡೆದು ಕಬರಿಯು ಕಟ್ಟಿ ಕಟ್ಟುವೆ-
ನುಡಿಗೆ[1][ಯೆಳೆ][1]ದನ ಚರ್ಮವನು ನೀನುಡಿಸಲುಟ್ಟಪೆನು ।
ಎಡೆಯುಲೊಯ್ಯಾರದಲಿ ಕಟ್ಟಿನು
ಮುಡಿಯು ಮುಡಿಯುುಡೆನೆಂಬ ತೇಜದ
ನುಡಿದ ನುಡಿ [2]ಸತಿ[2] ಸಂದುದೇ ಎನ್ನಾಣೆ ಹೇಳೆಂದ ॥ ೯೬ ॥

*ನುಡಿವುದರಿದೇ ನುಡಿದ ಭಾಷೆಯು
ಕಡೆತನಕ ಪೂರೈಸಿ ಮಾಡುವ
ಕಡುಗಲಿಗಳಾರುಂಟು ಜಗದಲಿ ಭೀಮಸನ್ನಿಭರು ।
ಮೃಡಪರಾಕ್ರಮಿಯೆನ್ನ ಹೋಲುವ
ಮುಡದಿಯುರು ನಿನ್ನಂದದೊಡೆಯುರ
ಪಡೆವುದೇ ಪರಮೈಕ್ಯಸೌಖ್ಯವಿದೆಂದಳಿಂದುಮುಖಿ ॥ ೯೭ ॥

೯೫. [1]ನು (ಅ ಕುಮಾ). [2]ಚಲುವಿನಲಿ (ಅ ಕುಮಾ). [3]ತವೆ ಪಾವನವೆ (ಅ ಕುಮಾ).
[ಶೋಣಿತಾಂಬು-ರಕ್ತ. ವೇಣಿ-ಕೂದಲು. ನಾದು-ತೋಯಿಸು. ದಂತಶ್ರೇಣಿ-ಹಲ್ಲುಸಾಲು].

೯೬. [1]ಯುಡಿ (ಅ), ಯುಳಿ (ಅ ಕುಮಾ). [2]ಸಲೆ (ಅ ಕುಮಾ).
[ಕಬರಿ-ಹೆರಳು, ಜಡೆ. ಉಟ್ಟಪೆ-ಉಡುತ್ತೇನೆ. ಎಡೆಯಲಿ-ಮಧ್ಯಕಾಲದಲ್ಲಿ. ಮುಡಿ-ತುರುಬು. ತೇಜ-ಪ್ರಕಾಶ].

೯೭. [ಅರಿದೇ-ಅಸಾಧ್ಯವೇ. ಸನ್ನಿಭರು-ಸಮಾನರು. ಮೃಡಪರಾಕ್ರಮಿ-ಈಶ್ವರನಿಗೆ ಸಮನಾದ ಪರಾಕ್ರಮವುಳ್ಳವನು].

* ಈ ಪದ್ಯವು ಅ, ಕುಮಾ ಪ್ರತಿಗಳಲ್ಲಿ ಕಂಡುಬರುವುದಿಲ್ಲ. ಪೇಟೆ ಪ್ರತಿಯಲ್ಲಿ 80ನೇ ಪದ್ಯವಾಗಿದೆ.

ಮಡದಿಯನು ಕಳುಹಿದನು ಕೆಳದಿಯ-
ರೊಡನೆ ನಡೆತರೆ ನಾಲ್ಕು ಕಡೆಯಲಿ
ಹಿಡಿದ ಜವನಿಕೆಗಳಲಿ ಜಲರುಹವದನೆ ಗಮಿಸಿದಳು ।
ತುಡುಕಿ ವಾಮಾಂಘ್ರಿಯಲಿ ಹಗೆಯನು
ಮಡದಲೊದೆದನು [1]ಕೌರವೇಂದ್ರನ
ಪಡೆಗೆ[1] ಪವನಜ ಕೊಟ್ಟನಂತಕಪುರವನಾಂತರ[2]ವ[2] ॥ ೯೮ ॥

ಅರಿಯ ಹೆಣನನು ಹಾಯ್ಕಿ ನೊರೆನೆ-
ತ್ತರಲಿ ಬೊಬ್ಬಿಟ್ಟನು ವರೂಥದ
ಹೊ[1]ರೆ[1]ಗೆ ಬಂದನು ಕಲಶಜಲದಲಿ [2]ಪದಯುಗವ ತೊಳೆದು[2] ।
[3]ಕರವದನಶುದ್ಧಿಯಲಿ[3] ವರಕ-
ರ್ಪುರದ ಕತ್ತುರಿಗಂಧಲೇಪ[4]ದೊ-
ಳೊರಸಿ[4] ಹೊಸಮಡಿವರ್ಗದಲಿ ರಂಜಿಸಿದನಾ ಭೀಮ ॥ ೯೯ ॥

ಏನ ಹೇಳುವೆನರಸ ಕೌರವ-
ಸೇನೆ ಗರಹೊಡೆದಂತೆ ಬಹಳಾಂ-
ಭೋನಿಧಿಯುಲದ್ದಂತೆ ಬೆಗಡಿನ ಸೊಗ[1]ಡ[1] [2]ಸೆಜಿ[3]ವಿಡಿದು[2] ।
ಮೌನದಲಿ ಮನ[3]ಮುಳುಗಿ[3] ಯೋಗ-
ಧ್ಯಾನಪರರಾದಂತೆ ಚಿತ್ತ-
ಗ್ಲಾನಿ[4]ಯೊಳಗೆವೆ[4]ಮಿಡುಕದಿದ್ದುದು ನಿನ್ನ ಪರಿವಾರ ॥ ೧೦೦ ॥

---

೯೮. [1]ಬಳಿಕ ಕೌರವ ಪಡೆಯ (ಅ). [2]ಕೆ (ಅ).
[ಜವನಿಕೆ–ತೆರೆ. ವಾಮಾಂಘ್ರಿ–ಎಡದ ಪಾದ. ಮಡ–ಹಿಮ್ಮಡಿ. ಅಂತಕಪುರವ-ನಾಂತರ–ಯಮಪುರಿಯ ಉದ್ಯಾನ].

೯೯. [1]ರ (ಅ). [2]ತೊಳೆದು ಕರಪದವ (ಅ). [3]ಪರಿಹೃತಶ್ರಮನಾಗಿ (ಅ), ಶುದ್ಧಿಯಲಿ (ಸ್ವೀಪಾ) ಆ ಪ್ರತಿಯ ಅಡಿಟಿಪ್ಪಣಿಯ ಪಾಠ. [4]ವನೊರಸಿ (ಅ).
[ನೊರೆನೆತ್ತರು–ನೊರೆನೊರೆಯಾದ ರಕ್ತ. ಹೊರೆ–ಸಮೀಪ. ಹೊಸಮಡಿವರ್ಗ–ಹೊಸದಾದ ಮಡಿವಸ್ತ್ರಗಳು].

೧೦೦. [1]ಡು (ಅ). [2]ಸಜ್ಜೆ[3]ಹಿಡಿದು (ಅ). [3]ವಳುಕೆ (ಅ). [4]ಗಳಲೆಲೆ (ಅ)..
[ಗರ–ಗ್ರಹ. ಅದ್ದು–ಮುಳುಗು. ಬೆಗಡು–ಆಶ್ಚರ್ಯ. ಸೊಗಡು–ಪ್ರಭಾವ. ಚಿತ್ತಗ್ಲಾನಿ–ಕಲಕಿದ ಮನಸ್ಸು, ಮನಸ್ಸಿನ ಗೊಂದಲ. ಮಿಡುಕು–ಚಲಿಸು, ಅಲುಗು].

ಫಡ ವಿಕಾರವೆ ನೋಡು ನೆತ್ತರು
ಗು[1]ಡುಹಿ[1]ತನವೇ ನಮ್ಮೊಡನೆ [2]ಮೊಲೆ-
ಮುಡಿಯ[2] ಮೂದಲೆಗರುಹರೇ ಕರ್ಣಾದಿನಾಯಕರು ।
ಕುಡಿದ [3]ನೆತ್ತರ[3]ಜಿಗು[4]ಳೆನೀ[4] ನಿ-
ನ್ನೊಡಲ ನಿಗುಚುವೆ ನಿಲ್ಲೆನುತ ಬಲ-
[5]ದೆಡದ[5] ಬಿರುದರ ಮೇಳದಲಿ [6]ತೂಳಿ[6]ದನು ವೃಷಸೇನ ॥ ೧೦೧ ॥

ಅರಸ ಕೇಳೈ ಬಳಿಕ ಭೀಮನ
ತರಹರವನಱಿದಾಚೆಯಲಿ ಸಂ-
ವರಿಸಿಕೊಂ[1]ಡನು[1] ನಕುಲ ಬಿಟ್ಟನು ಸೂಟಿಯಲಿ ರಥವ ।
ತರುವಲಿ[2]ಯೆ[2] ನೀಸಿದಿರ[3]ಹರೆ[3] ಫಡ
ಸರಿಸ[4]ಮನೆ[4] ಭೀಮಂಗೆ ನೀನೆನು-
ತ[5]ರಿ[5]ಭಟನ ಕೆಣಕಿದನು ಕೆದಱಿದನಸ್ತ್ರಸಂತತಿಯ ॥ ೧೦೨ ॥

ಕೆಣಕಿದುರಿಯಂದದಲಿ ದಂಡೆಯ-
ಲಣೆದ ಕಾಳೋರಗನವೊಲು [1]ಚ-
ಡ್ಡಣೆ[1]ಯ ಚಪಳಕ್ರೋಧಶಿಖಿ ಮೋಹಿದುದು ಮೋಱೆಯಲಿ ।
ಕಣೆಗಳೋ ಕಲ್ಪಾಂತವಹ್ನಿಯ
[2]ಡೊ[2]ಣೆಗಳೋ ಹಾಳಾಹಳದ ದಾ-
ವಣೆಗಳೋ ನಾವಱಿಯೆವೆಚ್ಚನು ವೀರವೃಷಸೇನ ॥ ೧೦೩ ॥

---

೧೦೧. [1]ಡಿವ (ಅ). [2]ಮೂರೆಡೆಯ (ಅ). [3]ರಕುತದ (ಅ). [4]ಳೊಡನೆ (ಅ) [5]ನೆಡನ (ಅ). [6]ತೂಗಿ (ಅ).
[ನೆತ್ತರುಗುಡುಹಿತನ-ರಕ್ತವನ್ನು ಕುಡಿಯುವ ಚಟ. ಮೊಲೆಮುಡಿಯಮೂದಲೆ-ಹೆಂಗಸರು ಎಂಬ ತಿರಸ್ಕಾರ. ಜಿಗುಳೆ-ಜಿಗಣೆ (ರಕ್ತ ಹೀರುವ ಒಂದು ಕೀಟ). ನಿಗುಚು-ಉದ್ದನಾಗಿ ಮಲಗಿಸು. ತೂಳು-ಮುನ್ನುಗ್ಗು].

೧೦೨. [1]ಡುದು (ಅ). [2]ಗೆ (ಅ). [3]ಹುದೆ (ಅ). [4]ಮೇ (ಅ). [5]ರ (ಅ).
[ತರಹರ-ಅವಸ್ಥೆ, ಆತುರ. ಸಂವರಿಸಿಕೊಳ್ಳು-ಸಿದ್ಧವಾಗು. ಸೂಟಿ-ಚುರುಕು, ವೇಗ. ತರುವಲಿ-ತಬ್ಬಲಿ. ಅಹರೆ ಆಗುವರೆ. ಕೆದಱು-ಹರಡು].

೧೦೩. [1]ಚಂಡಣೆ (ಅ). [2]ಹೊ (ಅ).
[ಅಣೆ-ತಡೆಗಟ್ಟು. ಕಾಳೋರಗ-ಕೃಷ್ಣಸರ್ಪ. ಚಡ್ಡಣೆ-ಅತಿಶಯ, ಆಧಿಕ್ಯ. ಚಪಳಕ್ರೋಧಶಿಖಿ-ಚಂಚಲವಾದ ಕೋಪವೆಂಬ ಬೆಂಕಿ. ಮೋಹು-ಅಪ್ಪಳಿಸು. ಡೊಣೆ-ಬತ್ತಳಿಕೆ. ಹಾಳಾಹಳ-ಘೋರವಾದ ವಿಷ. ದಾವಣೆ-ಆವರಣ, ಆಶ್ರಯ ಸ್ಥಾನ, ನೆಲೆ].

ಉಗುಳುಗುಳು ದುಶ್ಶಾಸನ[1]ನ[1] ನೀ-
ನುಗುಳು [2]ಮಗುಳಿನ್ನಾರ ಬಸುಜಿನು[2]
ಹೊಗುವೆ ಮೊಲೆಮುಡಿ[3]ಯಾ[3]ರಗಿವು ಫಡ ನಿಲ್ಲು[4]ನಿ[4]ಲ್ಲೆನುತ ।
ಹೊಗರೊಗುವ ಹೊಸಮಸೆಯ ಬಾಯ್ಧಾ-
ರೆಗಳ ಬಂಬಲುಗಿಡಿಯ ಬಾಣಾ-
ದಿಗಳೊಳಾತನ [5]ಹೂಳಿ[5]ದನು ಕಾಣೆನು ವೃಕೋದರನ ॥ ೧೦೪ ॥

ಕಳವಳಿಸಿತರಿಸೇನೆ [1]ಚೂಣಿ[1]ಯೊ-
ಳುಲಿದುದೀ ನಮ್ಮವರು ಕಂಡ[2]ನು[2]
ಬಳಿಕ ಮುರರಿಪು ತೋಱಿ[3]ದನು ಪಾರ್ಥಂಗೆ ಪವನಜನ ।
ಎಲೆ ಧನಂಜಯ ಭೀಮಲಯ ನಿ-
ಮ್ಮಳಿವು [3]ನಿ[3]ಮ್ಮ ಪರೋಕ್ಷದಲಿ ನಾ-
ವುಳಿವುದಿಲ್ಲೀ [4]ಹದನ[4] ಕಂಡೆನು ಕರ್ಣತನಯನಲಿ ॥ ೧೦೫ ॥

ಈಸು ಘನವೇ ಕೃಷ್ಣ ಮಗುವಿ[1]ವ[1]
ನೇಸಱಿವನೆಂದಿರ್ದೆನಾದೊಡೆ
ಹಾಯ್ಸು ರಥವನು ಭೀಮಸೇನನ ರಥದ ಮುಂಗುಡಿಗೆ ।
ವಾಸಿಯೇಕೆವ[2]ನಲಿ ವಚೋವಿ-[2]
ನ್ಯಾಸದಿಂ ರಥ ಮುಂಚಿತಹಿತನ
ಗಾಸಿಯಿಂದನಿಲಜನನುಗಿದನು ಬಗಿದು ರಿಪುಶರವ ॥ ೧೦೬ ॥

---

೧೦೪. [1]ನೇ (ಅ). [2]ಮಗುಳಿ ನೀನಿನ್ನಾರ ಬಸುರಿನಲಿ (ಅ). [3]ಗಾ (ಅ). [4]ನೆ (ಅ). [5]ನಂದಿ (ಅ).
[ಮಗುಳ್-ಮತ್ತೆ. ಹೊಗರೊಗು-ಕಾಂತಿಯನ್ನು ಸೂಸು. ಹೊಸಮಸೆಯ-ಹೊಸದಾಗಿ ಮಸೆದ, ಹೊಸದಾಗಿ ಹರಿತ ಮಾಡಿದ. ಬಾಯ್ಧಾರೆ-ಅಲಗು. ಬಂಬಲುಗಿಡಿ-ಗೊಂಚಲು ಗೊಂಚಲಾದ ಕಿಡಿ].

೧೦೫. [1]ಬೊಬ್ಬೆ (ಅ). [2]ರು (ಅ). [3]ನ (ಅ). [4]ಹವಣ (ಅ).
[ಹದನು-ಸಮಾಚಾರ].

೧೦೬. [1]ನ (ಅ). [2]ನರಿವ ಚೋದಿಂ (ಅ).
[ಏಸಱಿವನು-ಎಷ್ಟು ಮಾತ್ರದವನು. ಮುಂಗುಡಿ-ಮುಂಭಾಗದ ತುದಿ. ವಾಸಿ-ಸ್ಪರ್ಧೆ. ವಚೋವಿನ್ಯಾಸ-ಮಾತಿನ ಚಾತುರ್ಯ. ಮುಂಚು-ಮುಂದಾಗು. ಅಹಿತ-ಶತ್ರು. ಗಾಸಿ-ಹೊಡೆತ. ಉಗಿ-ಹೊರತೆಗೆ. ಬಗಿದು-ಬೇರ್ಪಡಿಸಿ].

ಎಸುಗೆ[1]ಯೊಳಿ ತು[1] ಹಾಲುಗಲ್ಲದ
ಹಸುಳೆಯಂಗವಿದಲ್ಲ ತುಂಬಿಯು
ದೆಸೆಗೆ ಕೆಂದಾವರೆಯು [2]ಬ[2]ನವೇ [3]ವನ[3]ದವಾನಲನು ।
ಉಸುರದೀ ಜಯದೊಪ್ಪದಲಿ ಜಾ-
ಳಿಸುವುದೊಳ್ಳಿತು ಕೊಲಗೆನುತ ನಿ-
ಪ್ಪಸರದಲಿ ತೆಗೆದೆಚ್ಚನರ್ಜುನನಿನಜನಂದನನ ॥ ೧೦೭ ॥

ಆಯಿತಿದು ಸಮರದಲಿ ಗುರು ಗಾಂ-
ಗೇಯಕರ್ಣದ್ರೋಣಿಗಳ ತಱು-
ವಾಯ ಲೆಕ್ಕಕೆ ಸಂದನೇ ಮಝು ಪೂತು ಪಾಯ್ಕೆನುತ ।
ಸಾಯಕ[1]ವನ[1]ಭಿಮಂತ್ರಿಸುತ ವೈ-
ನಾಯ[2]ಕವ ಹೂಡಿದನು ಕುರು[2]ಬಲ
ಬಾಯ ಬಿಡೆ ಚಿಗಿದಂಬು ಕಡಿದುದು ಕರ್ಣ[3]ಸುತಶಿರವ[3] ॥ ೧೦೮ ॥

ಉರಿ[1]ಯು ಸರಿಗೇ[1]ರಿದ ಪತಂಗಕೆ
ಮರಳುದಲೆಯೆಲ್ಲಿಯದು ರಣದಲಿ
ನರನೊಡನೆ [2]ಕಳನೇರಿದಾತನ[2] ಸತಿ ಸುವಾಸಿನಿಯೆ ।
ಅರಳ್ವ ಹೊಸಸಂಪಗೆಯ ಮಧುವನು
ಮಱಿಗೆ ತಹವೇ ತುಂಬಿಗಳು ಕೇ-
ಳರಸ ಹರಿಬಕೆ ಹೊಕ್ಕ ಸುಭಟರ [3]ವಿಧಿಯ ನೋಡೆಂದ[3] ॥ ೧೦೯ ॥

---

೧೦೭. [1]ಚೆಲುವನು (ಅ). [2]ವ (ಅ). [3]ಬಲ (ಅ).

[ಎಸುಗೆ- ಬಾಣಪ್ರಯೋಗ. ಹಾಲುಗಲ್ಲದ ಹಸುಳೆ–ಎಳೆಯ ಮಗು. ಅಂಗ–ರೀತಿ. ವನದವಾನಲ–ಕಾಳ್ಗಿಚ್ಚು. ಜಯದ–ಒಪ್ಪದಲಿ–ಜಯವು ಲಭಿಸಿರುವ ಸಮಯದಲ್ಲಿ. ಜಾಳಿಸು–ಮುನ್ನುಗ್ಗು. ಒಳ್ಳಿತು- ಒಳ್ಳೆಯದು. ನಿಪ್ಪಸರದಲಿ–ನಿಷ್ಠುರತೆಯಿಂದ, (ನಿರಂತರವಾಗಿ). ಇನಜನಂದನ–ಕರ್ಣನ ಮಗ, ವೃಷಸೇನ].

೧೦೮. [1]ದೊಳ (ಅ ಕುಮಾ). [2]ಶಾಸ್ತ್ರವ ಹೂಡಿದನು ಬಲ (ಅ ಕುಮಾ). [3]ನಂದನನ (ಅ ಕುಮಾ).

[ದ್ರೋಣಿ–ಅಶ್ವತ್ಥಾಮ. ಸಾಯಕ–ಬಾಣ. ವೈನಾಯಕ–ವಿನಾಯಕಾಸ್ತ್ರ].

೧೦೯. [1]ಗೆ ಸರಿಯೇ (ಅ). [2]ತಲೆಯಿತ್ತಿಡವದಿರ (ಅ). [3]ಕಾಣೆನಾನೆಂದ (ಅ ಕುಮಾ).

[ಸರಿಗೇರಿದ–ಸಮುಕ್ಕೆ ಏರಿಹೋದ. ಮರಳುದಲೆ–ಹಿಂದಿರುಗುವುದು. ಸುವಾಸಿನಿ–ಮುತ್ತೈದೆ. ಅರಳು–ಹೂವು. ತಹವೇ–ತಂದುಕೊಡುವವೇ? ಹರಿಬ–ಕರ್ತವ್ಯ ನಿರ್ವಹಣೆ].

ಅಳುವವನ ನಗಿಸುವುದು ನಗುವನ-
ನಳಿಸುವುದು ಗೆಲಿದವನ ಸೋಲಿಸಿ
ಗೆಲಿಸುವುದು ಸೋತವನನಿದು ವಿಪರೀತವಿವಿಧಗತಿ ।
ಅಳಲದಿರು ಸುಮ್ಮಾನದಲಿ ವೆ-
ಗ್ಗಳಿಸದಿರು ನಿನ್ನವರು ನಿಮಿಷದೊ-
ಳಳಲುದೊಱೆಯೊಳು ಮುಳುಗದಂದವನಿನ್ನು ಕೇಳೆಂದ ॥ ೧೧೦ ॥

---

೪. ಕರ್ಣಾರ್ಜುನರ ಕಾಳಗ

ಮಗನು ದಳಪತಿಯಾದಗಡ ಕಾ-
ಳಗವ ನೋಡುವೆನೆಂಬವೊಲು ಜಗ-
ದಗಲದಲಿ [1]ಕರ[1]ಕಡಿತವಿಕ್ಕಿತು ತಿಮಿರ ವನದೊಳಗೆ ।
ಹೊಗರು ಕುವಲಯುಕಳಿಯೆ ಸೊಂಪಿನ
ನಗೆ ಸರೋರುಹ[2]ಕೊಗೆಯೆ[2] ವಿರಹದ
ಧಗೆ ರಥಾಂಗ[3]ವ ತುಳಿಯುಲಿನನು[3]ದಯಾಚಲಕೆ ಬಂದ ॥ ೧೧೧ ॥

---

೧೧೦. [ವಿಪರೀತ ವಿವಿಧಗತಿ–ವ್ಯತ್ಯಾಸ ಹೊಂದುವ ಬೇರೆಬೇರೆ ಅವಸ್ಥೆಗಳು. ಸುಮ್ಮಾನ–ಸಂತೋಷ. ವೆಗ್ಗಳಿಸು–ಹೆಮ್ಮೆಪಡು. ಅಳಲುದೊಱೆ–ದುಃಖದ ಹೊಳೆ].

೧೧೧. [1]ನೆಱೆ (ಅ ಕುಮಾ). [2]ಕಿಳಿಯೆ (ಅ). [3]ದೊಳಳಿಯೆರವಿ (ಅ ಕುಮಾ).

[ಕರ–ವಿಶೇಷ. ಕಡಿತ–ಬಳಪದಿಂದ ಬರೆಯುವ ಕಪ್ಪುಮಾಡಿದ ಬಟ್ಟೆ (ಕಡಿತ ವಿಕ್ಕು–ಕಡಿತದ ಬಟ್ಟೆಯನ್ನು ಹೊದಿಸು). ತಿಮಿರ–ಕತ್ತಲೆ. ಹೊಗರು–ಕಾಂತಿ. ಕುವಲಯ–ಕನ್ನೈದಿಲೆ ಹೂ. ಅಳಿ–ನಾಶವಾಗು. ಬಗೆ–ಹುಟ್ಟು, ಕಾಣಿಸಿಕೊ. ರಥಾಂಗ–ಚಕ್ರವಾಕ ಪಕ್ಷಿ. ಇನ–ಸೂರ್ಯ].

ಕುಱಿಯ ಹಣಿದದ ಕೋಳಿ ಕೋಣನ
ಮುಱಿದಲೆಯ ಮೀಸಲಿನ ರಕುತದ
ದುಱುದುಱಿಪದೊಂಡೆಯಲಿ ಕಲಸಿದ ಕೂಳ ಮುದ್ದೆಗಳ ।
ಹೊಱಗೆ ಬಡಿಸಿದ ಭೂತಬಲಿ ಬೊ-
ಬ್ಬಿಱಿದರೊಡನುಬ್ಬೇಳ್ವ ಲಗ್ಗೆಯ
ಹಱೆಗಳಬ್ಬರವಾಯ್ತು ಕರ್ಣನ ಶಸ್ತ್ರಪೂಜೆಯಲಿ ॥ ೧೧೨ ॥

ಚರಿಸಿ ಸಾದುಜವಾದಿಗಳ ಹೊಂ-
ಭರಣ[1]ಯಲಿ[1] ಮೊಗೆಮೊಗೆದು ಶಲ್ಯಗೆ
ಸುರಿದು ಹಡಪಿಗ ಚವುರ[2][ವಾ][2]ಹಿಯ ಬಾಣದಾಯಕರ ।
ಕರೆದು ಮನ್ನಿಸಿ ತನ್ನನತಿವಿ-
ಸ್ತರಿಸಿ ಹೊಸಮಡಿವರ್ಗದಲಿ ಮಿಗೆ
ಮೆಱೆದು ರಣಸುಮ್ಮಾನದಲಿ ಹೊ[3]ರೆಯೇಱಿ[3]ದನು ಕರ್ಣ ॥ ೧೧೩ ॥

ಕೇಳಿರೈ ಪರಿವಾರ ಯಿಂದಿನ
ಕಾಳಗವಲೇ ನಮಗೆ ಭೀಷ್ಮ[1]ನ[1]
ಕೋಲಗುರುವಿನ ಹರಿಬವನು ಮ[2]ನ[2]ವಾರೆ ಹೊತ್ತ[3]ವ[3]ಲಾ ।
ಸೋಲವೋ [4]ಕುರುಪತಿಯ[4] ಭಾಗ್ಯದ
ಕಾಲವೋ [5]ವಿಧಿ ಬಲ್ಲದೆ[5]ನ್ನಯ
ತೋಳಬಲುಹನು ಹಗೆಗೆ ತೋಱುವೆನೆಂದನಾ ಕರ್ಣ ॥ ೧೧೪ ॥

---

೧೧೨. [ಹಣಿದ–ಹೊಡೆಯುವುದು, ಕತ್ತರಿಸುವುದು. ಮುಱಿದಲೆ–ಕತ್ತರಿಸುವಿಕೆ. ದುಱುದುಱಿಪ–ಧಾರಾಕಾರವಾಗಿ ಸುರಿಯುವ. ದೊಂಡೆ–ಗಡ್ಡೆಕಟ್ಟಿದ, ಗರಣೆಗಟ್ಟಿದ. ಹಱೆ–ತಮಟೆ].

೧೧೩. [1]ಗಳ (ಅ). [2]ಬಾಹೆ (ಅ ಕುಮಾ). [3]ಚಾಹಿ (ಅ), ಬಾಹೆ (ಅ ಕುಮಾ). [4]ಗರೇಱಿ (ಅ ಕುಮಾ).

[ಸಾದುಜವಾದಿ–ಸುಗಂಧ ದ್ರವ್ಯಗಳು. ಹಡಪಿಗ–ತಾಂಬೂಲದ ಚೀಲ ಹೊತ್ತವನು. ಚಮರವಾಹಿ–ಚಾಮರ ಹಿಡಿದವನು. ಬಾಣದಾಯಕ–ಬಾಣಗಳನ್ನು ಕೊಡುವವನು. ಹೊರೆಯೇಱು–ಉತ್ಸಾಹಗೊಳ್ಳು, ಹುರುಪುಗೊಳ್ಳು].

೧೧೪. [1]ರ (ಕುಮಾ). [2]ನೆ (ಅ). [3]ನ(ಅ). [4]ಕೌರವನ (ಕುಮಾ). [5]ಹರಿ ಬಲ್ಲನೆ (ಅ).
[ಕೋಲಗುರು–ಚಾಪವಿದ್ಯಾ ಗುರುಗಳು, ದ್ರೋಣಾಚಾರ್ಯರು. ಹರಿಬ–ಕರ್ತವ್ಯ].

ನರನ ಶರಹತಿಗೆನ್ನ ತನು ಜ-
ರ್ಝರಿತವಾಗಲಿ ನನ್ನ ಕಣೆಯಲಿ
ಬಿರಿಯಲಾತನ ದೇಹ ಖಾಡಾಖಾಡಿಯುದ್ಧದಲಿ ।
ಕರುಳು ಕರುಳಲಿ ತೊಡಕಿ ನೊರೆನೆ-
ತ್ತರಲಿ ನೆತ್ತರು ಕೂಡಿ ಕಡಿಯಲಿ
ಬೆರಸಿ ಕಡಿ ಪಲ್ಲಟಿಸೆ ಕಾದುವೆನೆಂದು ಹಗೆಯೊಡನೆ ॥ ೧೧೫ ॥

ಸರಳು ಸರಳಿಂಗೊವ್ವೆ ರೋಮಾಂ-
ಕುರದ ಗುಡಿಯಲಿ ರಕ್ತಜಲದಲಿ
ಕರುಳ ಹೂಮಾಲೆಯಲಿ ವೀರರಣಾಭಿಷೇಕವನು ।
ಧರಿಸಿ ವೈರಿಯು ಘಾಯ ಘಾಯದ
ಧರಧುರಕೆ ತನಿಹೆಚ್ಚಿ ಮನದು-
ಬ್ಬರದಲಿಬ್ಬರು ಹೋರಾಡಿದರೆ ದಿಟ ಕೃತಕೃತ್ಯತಾನೆಂದ ॥ ೧೧೬ ॥

ಅವನ ಮುಂದಲೆ ತನ್ನ ಕೈಯಲಿ
ಅವನ ಕೈಯಲಿ ತನ್ನ ಮುಂದಲೆ
ಅವನ ಗಾಯವ ತನ್ನ ದೇಹದ ಗಾಯ ಚುಂಬಿಸುತ ।
ಅವನ ಖಡುಗಕೆ ತನ್ನ ವೈ [1]ನಾ[1]
ತಿವಿದ ಖಡುಗಕೆ [2]ನರನ[2] ವೈ ಲವ-
ಲವಿಸಲಡಿಮೇಲಾಗಿ ಹೊರಳ್ದೊಡೆ ಧನ್ಯ ತಾನೆಂದ ॥ ೧೧೭ ॥

ಕೈದಣಿಯೆ ಹೊಯ್ದು [1]ರಯು[1] ಸೀಳಿದು
ಬಾಯ್ದಣಿಯೆ ಮೂದಲಿಸಿ ಹೆಚ್ಚಿದ
ವೈದಣಿಯೆ ರಿಪುಭಟನ ಹೊಯ್ಲಲಿ ಗಾಯವನು ಪಡೆದು ।

---

೧೧೫. [ಕಣೆ–ಬಾಣ. ಕಡಿ–ರಕ್ತಸ್ರಾವ. ಪಲ್ಲಟಿಸು–ವ್ಯತ್ಯಾಸಹೊಂದು].

೧೧೬. [ರೋಮಾಂಕುರ–ರೋಮಾಂಚನ ಗುಡಿ–ಬಾವುಟ, ಧ್ವಜ (ಪ್ರಕಟಗೊಳ್ಳುವಿಕೆ). ತನಿಹೆಚ್ಚು–ವಿಶೇಷವಾಗಿ ಹೆಚ್ಚು. ಉಬ್ಬರ–ಉತ್ಸಾಹ].

೧೧೭. [1]ತಾ (ಅ). [2]ತನ್ನ (ಅ).
[ಲವಲವಿಸು–ಹುರುಪಿನಿಂದ ಕೂಡಿರು].

೧೧೮. [1]ಣಿಯೆ (ಅ). [2]ಖಿರಿರಯ್ದು (ಅ). [3]ಕಂಡನಾದರೆ (ಅ ಕುಮಾ).

ಹಾಯ್ದ ಕರುಳಿನ ಮಿದುಳ ಜೋಂಜಿನ
ತೊಯ್ದ ರಕ್ತಾಂಬರದಲಾ[2]ನಿರ-
ಲೆಯ್ದಿ[2] ಕುರುಪತಿ [3]ಬಂದು ಕಂಡೊಡೆ[3] ಧನ್ಯ ತಾನೆಂದ ॥ ೧೧೮ ॥

ರಥವಿಳಿದು ಬಲವಂದು ನಿಜಸಾ-
ರಥಿಗೆ ಕೈಮುಗಿದಶ್ವಚಯಕತಿ-
ರಥಭಯಂಕರನೆಱಗಿ ಕಂದವತಟ್ಟಿ ಬೋಳೈಸಿ ।
ರಥವನಡರಿದು ನೋಡಿ ಗಗನದ
ರಥಿಗೆ ತಲೆವಾಗಿದನು ಲೋಕ-
ಪ್ರಥಿತಸಾಹಸಮಲ್ಲ ಮುದದಲಿ ತುಡುಕಿದನು ಧನುವ ॥ ೧೧೯ ॥

ಭೀತಿಗೊಳುತಿವೆ ಮಾರ್ಬಲವು ಮುಳ್ಪು
ಫೂತು ಧಕ್ಕಟ ಧಟ್ಟರಿಪುಸಂ-
ಘಾತ [1]ವೈರಿಘರಟ್ಟ ವೈರಿನಿಕಾಯಗಿರಿವಜ್ರ[1] ।
ಜಾತರಿಪುನಿರ್ಮಥನ ವೈರಿ-
ವ್ರಾತ[2]ಕಾನನ[2]ಧೂಮಕೇತುವ-
ರಾತಿಹರ ಜಯ ಜೀಯ ಯೆಂದುದು [3]ಭಟ್ಟ[3]ಸಂದೋಹ ॥ ೧೨೦ ॥

---

೧೧೮. [ಕೈದಣಿಯೆ-ಕೈ ಸೋಲುವವರೆಗೆ. ಜೋಂಜು-ಸೋರುವಿಕೆ. ಎಯ್ದೆ-ಚೆನ್ನಾಗಿ].

೧೧೯. [ಬಲವರು-ಪ್ರದಕ್ಷಿಣೆ ಮಾಡು. ಕಂದ-ಕುತ್ತಿಗೆ. ಬೋಳೈಸು-ಸಮಾಧಾನಪಡಿಸು. ಅಡರು-ಏರು. ಗಗನದರಥಿ-ಸೂರ್ಯ. ಲೋಕಪ್ರಥಿತಸಾಹಸಮಲ್ಲ-ಲೋಕ ವಿಖ್ಯಾತನಾದ ಪರಾಕ್ರಮಿಯಾದ ಹೋರಾಟಗಾರ].

೧೨೦. [1]ವಾರಿಧಿ ಬಾಡಬಾನಲ ಕೀರ್ತಿ ಜಗಜಂಪ (ಅ ಕುಮಾ). [2]ದಾನವ (ಅ). [3]ವಂದಿ (ಅ ಕುಮಾ).

[ಧಕ್ಕಟ-ಸಾಹಸ, ಶೌರ್ಯ. ರಿಪುಸಂಘಾತ-ಶತ್ರು ಸಮೂಹ. ವೈರಿಘರಟ್ಟ-ಶತ್ರುಗಳನ್ನು ಸಂಹರಿಸುವವನು. ವೈರಿನಿಕಾಯಗಿರಿವಜ್ರ-ಶತ್ರು ಸಮೂಹವೆಂಬ ಪರ್ವತಕ್ಕೆ ವಜ್ರಾಯುಧದಂತಿರುವವನು. ಜಾತರಿಪು-ಹುಟ್ಟು ಶತ್ರು. ನಿರ್ಮಥನ-ನಾಶ ಮಾಡುವವನು. ವೈರಿವ್ರಾತ ಕಾನನ ಧೂಮಕೇತು-ಶತ್ರು ಸಮೂಹವೆಂಬ ಕಾಡಿಗೆ ಧೂಮಕೇತುವಿನಂತಿರುವವನು. ಅರಾತಿಹರ-ಶತ್ರುಗಳನ್ನು ಸಂಹರಿಸುವವನು. ಭಟ್ಟಸಂದೋಹ-ಹೊಗಳುಭಟ್ಟರ ಗುಂಪು].

ಮುಸುಕಿತೋ ಕರ್ಣಪ್ರತಾಪದ
ಬಿಸಿಲು ಪಾಂಡವಕುಮು[1]ದಕಾ[1]ನನ-
ವಿಸರವನು ವಿಗ್ರಹದ ಮುಖ[2]ಲೇಸೆ[2]ನುತ ಕುರುಸೇನೆ ।
ಮಸಗಿದಂಬುಧಿಯಂತೆ ಮಿಗೆ ಗ-
ರ್ಜಿಸಲು [3]ಗ[3]ರುವರಗಾಢಶೌರ್ಯದ
ಬೆಸುಗೆ ಬಿಡೆ ಗಾಂಡಿವ[4]ದ[4] ದನಿ[5]ದೋಱಿ[5]ದನು ಕಲಿಪಾರ್ಥ ॥ ೧೨೧ ॥

ಹರಿಗೆ ಕೈಮುಗಿದೆಱಗಿ ತೇರಿನ
[1]ಹರಿಗೆ[1] ವಂದಿಸಿ ನಿಜಪತಾಕೆಯ
ಹರಿಗೆ ನಮಿಸಿ ನಿಜಾಯುಧಕೆ [2]ಪೊಡವಟ್ಟು ಕೈಮುಗಿದು[2] ।
ಹರಿಧನಂಜಯಧರ್ಮನೈರುತಿ-
ವರುಣಮಾರುತವೈಶ್ರವಣಶಂ-
ಕರವಿರಿಂಚಾದಿಗಳಿಗಭಿವಂದಿಸಿದನಾ ಪಾರ್ಥ ॥ ೧೨೨ ॥

ನೆಲನ ರಾಜ್ಯಶ್ರೀಯು [1]ತುಱು[1]ಬಿಂ-
ಗಳುಕದಂಗೈ[2]ಸಿದ[2] ವಿರೋಧಿಯ
ಲಲನೆಯರ ಶ್ರುತಿಪತ್ರ ಸೀಳಲಿ ಸಾಲ ಹಿಂಗಿತಲಾ ।
ಅಳಿದ ವೃಷಸೇನಕನ ತಾಯ್ಗಳು
ಮೆಲಲಿ ವೀಳೆಯವನು ಕಿರೀಟಿಯ
ತಲೆಯ ತೆಱಿಗೆಗೆ ತಾವೆ ಹೊಣೆಯೆಂದುದು [3]ಕುರು[3]ಸ್ತೋಮ ॥೧೨೩॥

---

೧೨೧. [1]ದಾ (ಅ). [2]ವೇಸೆ (ಅ). [3]ಗು (ಅ). [4]ವ (ಅ ಕುಮಾ). [5]ಮಾಡಿ (ಅ ಕುಮಾ).
[ಕುಮುದ ಕಾನನ ವಿಸರ–ಕನ್ನೈದಿಲೆಯ ಸಮೂಹದ ವಿಸ್ತಾರ. ವಿಗ್ರಹ–ಯುದ್ಧ. ಮುಖ–ಪ್ರಾರಂಭ. ಮಸಗು–ವಿಜೃಂಭಿಸು, ಉಬ್ಬು, ಉಕ್ಕು. ಗರುವ–ಶ್ರೇಷ್ಠ. ಶೌರ್ಯದ ಬೆಸುಗೆ ಬಿಡೆ–ಶೌರ್ಯದ ಸಂಬಂಧ ಸಡಿಲವಾಗಲು].

೧೨೨. [1]ಹರಿಗಳಿಗೆ (ಅ ಕುಮಾ). [2]ಕೈಮುಗಿದು ಜೀವೊಡೆದು (ಅ ಕುಮಾ).
[ಹರಿ ಎಂಬ ಪದಕ್ಕೆ ಈ ಪದ್ಯದಲ್ಲಿ ನಾನಾರ್ಥಗಳಿವೆ. ಹರಿ ಶಬ್ದಕ್ಕೆ ಅನುಕ್ರಮವಾಗಿ ಅರ್ಥ ಕೊಟ್ಟಿದೆ: 1. ಕೃಷ್ಣ, 2. ಕುದುರೆ, 3. ಕಪಿ (ಆಂಜನೇಯ). 4. ಇಂದ್ರ. ಧನಂಜಯ–ಅಗ್ನಿ. ಧರ್ಮ–ಯಮ. ನೈರುತಿ–ನಿಋತಿ. ಮಾರುತ–ವಾಯು. ವೈಶ್ರವಣ–ಕುಬೇರ. ವಿರಿಂಚಿ–ಬ್ರಹ್ಮ].

೧೨೩. [1]ದುರು (ಅ). [2]ಸಲಿ (ಅ). [3]ಭಟ (ಅ ಕುಮಾ).
[ಅಂಗೈಸು–ಇಷ್ಟಪಡು, ಆಸೆಪಡು. ಶ್ರುತಿಪತ್ರ–ಕರ್ಣಪತ್ರ–ಒಡವೆಯ ರೀತಿಯಲ್ಲಿ ಕಿವಿಗೆ ಧರಿಸುವ (ಚಿನ್ನದ) ಪತ್ರ, ಪತ್ರಾಕಾರದ ಕಿವಿಯ ಒಡವೆ. ಮೆಲು (ಮೆಲ್ಲು)–ತಿನ್ನು. ಕಿರೀಟಿ–ಅರ್ಜುನ. ತಲೆಯ ತೆಱಿಗೆ–ತೆರಿಗೆಯ ರೂಪದಲ್ಲಿ ತಲೆಯನ್ನು ಪಡೆಯುವುದು (ಅಂದರೆ ತಲೆ ತೆಗೆಯುವುದು, ಮರಣ)].

ಇಟ್ಟಣಿಸುತಿದೆ [1]ಧುರಕೆ[1]ರಾಯುಘ-
ರಟ್ಟ ಪಾರ್ಥನ ತೇರು ತೇಜ[2]ವ[2]
ದಿಟ್ಟಿಸಿದೊಡೆವೆ ಸೀಯುನೇ ಫಡ ಸೂತಸುತನಳವೇ ।
ಕೆಟ್ಟುದಿನ್ನೇನಹಿತಬಲ ಜಗ-
ಜಟ್ಟಿ ಗೆಲಿದನು ಧರ್ಮಪುತ್ರನ
ಪಟ್ಟದಾನೆ ಯೆನುತ್ತಲಿರ್ದುದು ಪಾಂಡವರ ಸೇನೆ ॥ ೧೨೪ ॥

ಏನ ಹೇಳುವೆನವನಿಪತಿ ವೈ-
ಮಾನಿಕರ ಹಂತಿಗಳ ಹರಚತು-
ರಾನನ[1]ರ[1] ವೊಡ್ಡೋಲಗದ ವಾಗ್ವನಿತವಿಗ್ರಹವ ।
ಭಾನುಜನ ಭಾರಣೆಯನರ್ಜುನ-
ನಾನಲಳವೇ ಫಲುಗುಣಗೆ ರವಿ-
ಸೂನು ಫಡ ಪಾಡೇನು ಎಂದುದು ಮೇಲೆ ಸುರಕಟಕ ॥ ೧೨೫ ॥

*ಯಮುನೆ ಕರ್ಣನ ಪಕ್ಷ ಗಂಗಾ-
ವಿಮಲನದಿ ಪಾರ್ಥಂಗೆ ಗೌರಿಯು
ಮಮತೆ ಕರ್ಣನ ಮೇಲೆ ಶಂಕರನೊಲುಮೆ ಪಾರ್ಥನಲಿ ।
ದ್ಯುಮಣಿ ಕರ್ಣನ ಹೊಗಳಲಾಗಲೆ
ಸುಮನಪತಿ ಭಂಗಿಸಿದನಿಬ್ಬರು
ಸಮರಸನ್ನಾಹದಲಿ ನಿಂದಂದವನು ಕೇಳೆಂದ ॥ ೧೨೬ ॥

---

೧೨೪. [1]ರಾಯ (ಅ). [2]ಜಯ (ಅ).
[ಇಟ್ಟಣಿಸು-ಗುಂಪಾಗು. ರಾಯಘರಟ್ಟ-ರಾಜರನ್ನು ಧ್ವಂಸಮಾಡುವವನು. ಅಳವೇ-ಸಾಧ್ಯವೇ. ಧರ್ಮಪುತ್ರನಪಟ್ಟದಾನೆ-ಅರ್ಜುನ (ಪಟ್ಟದಾನೆಯ ಹಾಗೆ ಶ್ರೇಷ್ಠನಾದವನು)].

೧೨೫. [1]ನ (ಅ).
[ವೈಮಾನಿಕ-(ವಿಮಾನದಲ್ಲಿ ಸಂಚರಿಸುವ) ದೇವತೆ. ಹಂತಿ-ಪಂಕ್ತಿ, ಸಾಲು. ವಾಗ್ವನಿತವಿಗ್ರಹ-ವಾಗ್ಯುದ್ಧ, ವಾಗ್ವಾದ. ಭಾನುಜ-ಕರ್ಣ. ಭಾರಣೆ-ಹಿರಿಮೆ, ಜೋರು. ಆನಲಳವೇ-ತಡೆದುಕೊಳ್ಳಲು ಶಕ್ಯವೇ ? ಪಾಡೇನು-ಸಮವೇ ? ಸುರಕಟಕ-ದೇವತೆಗಳ ಸಮೂಹ].

೧೨೬. [ದ್ಯುಮಣಿ-ಸೂರ್ಯ. ಸುಮನಪತಿ-ದೇವೇಂದ್ರ. ಸಮರ ಸನ್ನಾಹ-ಯುದ್ಧ ಸಿದ್ಧತೆ].

---

* ಈ ಪದ್ಯವು ಅ, ಕುಮಾ ಪ್ರತಿಗಳಲ್ಲಿ ಕಂಡುಬರುವುದಿಲ್ಲ. ಪೇಟೆ ಪ್ರತಿಯಲ್ಲಿ 14ನೇ ಪದ್ಯವಾಗಿದೆ.

ಅರಸ ಕೇಳಾ ಶಕ್ರಸೂರ್ಯರ
ಮರುಳತನವೋ ಮೇಣು ಮರ್ತ್ಯ-
ಚರಣೆಗಳ ನಾಟಕವೊ ಮೇಣ್ ಸಾಂಸಾರಿಕಭ್ರಮೆಯೊ ।
ನರನಲೇ ಲೋಕೈಕವೀರೋ-
ತ್ತರನು ಮಝು ಭಾಪೆಂಬ ಸಡಿ ಫಡ
ಸರಿಯೆ ಕರ್ಣಂಗೆಂಬ ಕಳಕಳ ಕೇಳಲಾಯ್ತೆಂದ ॥ ೧೨೭ ॥

ಈಪರಿಯೊಳೆರಡಿಟ್ಟ ಜಗದಾ-
ಳಾಪವನು ಕರ್ಣಾರ್ಜುನರ ಪ-
ಕ್ಷೋಪಚಾರಪ್ರಕಟಕಲಹಕಠೋರಕಳಕಳವ ।
ಆ ಪುರಂದರಕಮಲಸಖರಾ-
ಟೋಪವನು ಭುವ[1]ನೋ[1]ಪಘಾತವ-
ನಾ ಪಿತಾಮಹನಜನಿದು ಸಂತೈಸಿದನು ಸಾಮದಲಿ ॥ ೧೨೮ ॥

ಧಾರಿಣೀಪತಿ ಕೇಳು ಬಿಲುಟಂ-
ಕಾರ ಕದನೋಪಕ್ರಮದೊಳೋಂ-
ಕಾರವಾದುದು ಕಾರ್ಮುಕಸ್ವಾಧ್ಯಾಯವಿಸ್ತರಕೆ ।
ಭೂರಿಬಹುವಿಧಬಾಣ[1]ಗರ್ತ[1]ವಿ-
ಹಾರರೆಸೆದರು ಕರ್ಣಪಾರ್ಥರು-
ದಾರಸಮರಾರಂಭವಳ್ಳಿಱಿದವು ಜಗತ್ತ್ರಯವ ॥ ೧೨೯ ॥

[ಶಕ್ರ-ಇಂದ್ರ. ಮರ್ತ್ಯಚರಣೆಗಳ ನಾಟಕ-ಮನುಷ್ಯರ ನಡವಳಿಕೆಯ ಅನುಕರಣೆ].

[1]ನಾ (ಅ ಕುಮಾ).

[ಎರಡಿಟ್ಟ-ಎರಡು ಪಕ್ಷಗಳಾದ. ಜಗದಾಳಾಪ-ಲೋಕದ ಮಾತು, ಲೋಕವಾರ್ತೆ. ಪಕ್ಷೋಪಚಾರ ಪ್ರಕಟ ಕಲಹ ಕಠೋರ ಕಳಕಳ-ಪಕ್ಷಗಳನ್ನು ವಹಿಸಿಕೊಂಡು ಪ್ರಕಟವಾಗಿ ಜಗಳವಾಡುವ ಉಗ್ರವಾದ ಗಲಭೆ. ಪುರಂದರ-ಇಂದ್ರ. ಕಮಲಸಖ-ಸೂರ್ಯ. ಭುವನೋಪಘಾತ-ಲೋಕಕ್ಕೆ ಉಂಟಾಗುತ್ತಿರುವ ಕೊಂದರೆ, ಹಾನಿ. ಸಾಮದಲಿ-ಸಾಮೋಪಾಯದಿಂದ].

[1]ವರ್ಗ (ಅ ಕುಮಾ).

[ಕದನೋಪಕ್ರಮ-ಯುದ್ಧ ಪ್ರಾರಂಭ. ಓಂಕಾರ-ಮಂಗಳಸೂಚಕವಾದ 'ಓಂ' ಎಂಬ ಶಬ್ದ. ಕಾರ್ಮುಕಸ್ವಾಧ್ಯಾಯ ವಿಸ್ತರ-ಧನುರ್ವಿದ್ಯಾಭ್ಯಾಸದ ವಿಸ್ತಾರ. ಭೂರಿ-ಹೆಚ್ಚಾದ. ಗರ್ತ-(ನೀರಿನ) ಸುಳಿ, ಗಿರ್ರನೆ ತಿರುಗುವುದು. ಅಳ್ಳಿಱಿ-ಕಲಕು, ಭೇದಿಸು].

ರಾಯತನದಲಿ ಬೆರಿತು ರಾಜ್ಯ-
ಶ್ರೀಯ ನೆರಿ ಹೋಗಾಡಿ ಪರರಿಗೆ
ಜೀಯ ಬೆಸಸುವುದೆಂದು ಜೀವಿಸುವವರು ನಾವಲ್ಲ ।
ರಾಯತನ ನಮಗಿಲ್ಲ ಕೌರವ-
ರಾಯನೋಲೆಯಕಾಱರಹೆವೆ-
ನ್ನಾಯತವು ತಾ ಬೇರಿನುತ ಕೆಗದೆಚ್ಚನಾ ಕರ್ಣ ॥ ೧೩೦ ॥

*ಆವ ಹಂಜರಗೂಳಿವೊಗವಲೆ-
ಗಾವಗಾಳಕೆ ಬೀಸುವಲೆಗಳ
ಕೀವಿದುದಕದ ಮಡುವೆಯಿದು ಸಂಗ್ರಾಮಭೂಮಿಕಣಾ ।
ನಾವು ನಿಮ್ಮಯ ಹೃದಯಸರಸಿಯ
ಜೀವಮತ್ಸ್ಯಕೆ ಗಾಳವಿಕ್ಕುವ
ಧೀವರರು ನೋಡೆನುತ ಪಾರ್ಥನನೆಚ್ಚನಾಕರ್ಣ ॥ ೧೩೧ ॥

ಮೊಲನ ಬೇಂಟೆಗೆ ಶಿವಿದು ಹಾಸವ
ಕಳಚುವರೆ ಕೇಸರಿಯನಕಟಾ
ಕೊಳಚೆಯುದಕಕೆ ಕೊಂಬರೇ ಹರಿಗೋಲಬಾಡಿಗೆಯ ।
ಗಳಹತನವೇ ಹರನ ಬಾಣಾ-
ವಳಿಗೆ ಗುರಿಯೇ ನೀನೆನುತ ಕೈ-
ಚಳಕದಲಿ ರಿಪುಶರವ ಖಂಡಿಸಿ ತುಳುಕಿದನು ಸರಳ ॥ ೧೩೨ ॥

---

೧೩೦. [ಹೋಗಾಡು–ಕಳೆದುಕೊ, ಹಾಳುಮಾಡಿಕೊ. ಬೆಸಸು–ಅಪ್ಪಣೆಮಾಡು. ಓಲೆಯಕಾಱ–ಸೇವಕ. ಆಯತ–ಹೆಚ್ಚಳ]

೧೩೧. [ಹಂಜರಗೂಳಿ–ಮೀನು ಹಿಡಿಯಲು ಉಪಯೋಗಿಸುವ ಪಂಜರದಂತಹ ಬುಟ್ಟಿ. ವೊಗವಲೆ–ಒಂದು ಬಗೆಯ ಬಲೆ. ಜೀವಮತ್ಸ್ಯ–ಜೀವವೆಂಬ ಮೀನು. ಧೀವರ–ಬೆಸ್ತ].

೧೩೨. [ಶಿವಿ–ಮುಂಡೆ ನುಗ್ಗು. ಹಾಸ–ಪಾಶ, ಹಗ್ಗ. ಹರಿಗೋಲು–ನದಿಯನ್ನು ದಾಟಲು ಉಪಯೋಗಿಸುವ ತೊಗಲಿನ ಗೂಡೆಯಂತಹ ಸಾಧನ. ಗಳಹತನ–ಹರಟೆ ಕೊಚ್ಚುವ ಸ್ವಭಾವ].

---

* 22ನೇ ಸಂಧಿಯಲ್ಲಿಯ 28ನೆಯ ಪದ್ಯದ ಪೂರ್ವಾರ್ಧ, 29ನೆಯ ಪದ್ಯದ ಉತ್ತರಾರ್ಧ ಸೇರಿ ಒಂದು ಪದ್ಯವಾಗಿರುವುದನ್ನು 'ಅ' ಪ್ರತಿಯ ಅಡಿಟಿಪ್ಪಣಿಯಲ್ಲಿ ಕೊಟ್ಟಿದೆ. ಈ ಪಾಠವನ್ನು ಇಲ್ಲಿ ಸ್ವೀಕರಿಸಿದೆ.

ನಿಮಿಷನಿಮಿಷಕೆ ಹೆಚ್ಚುತಿಬ್ಬರ
ತಿಮಿರಮಯಘನರೋಷವಿಬ್ಬರ
ಸಮರ[1]ಸಾಹಸಶೌರ್ಯ[1]ವಿಬ್ಬರ ಕಣೆಯ ಕೈಚಳಕ ।
ಶ್ರಮನಿಧಾನವ್ಯಾಪ್ತಿ ಯಿಬ್ಬರ
[2]ಸಮತೆ[2] ಯಿಬ್ಬರ ಗಾಢವಿಬ್ಬರ
ಗಮಕವಿಬ್ಬರ ಗರ್ವವಿಬ್ಬರ ತೀವ್ರತರತೇಜ ॥ ೧೩೩ ॥

ಅರಸ ಹೇಳುವುದೇನು ಬಳಿಕಿ-
ಬ್ಬರ ಮಹಾಕೋದಂಡಚಂಡ-
ಸ್ಫುರಿತಮೌರ್ವೀನಾದ ಮುಸುಕಿತು ಸಕಲದಿಗುತಟವ ।
ಸ್ಫುರದಮಂದೋ[1]ಡ್ಡೀನ[1]ಭಾಸ್ವ-
ತ್ಕಿರಣಗರ್ಭಕಳಾಪಭದ್ರಾ-
ಕರಣಕಳಿತಧ್ವಾಂತಬಿಂಬಕಳಂಬಸಂತತಿಯ ॥ ೧೩೪ ॥

ಮನದೊಳಗೆ ಮೊಗೆದೀಂಟಿದರು [1]ಮೂ-
ಗಿನಲಿ ಸೂಸಿದ[1]ರಡಿಗಡಿಗೆ [2]ಕ-
ಣ್ಣಿನಲಿ[2] ಕುಡಿಕುಡಿದುಗುಳಿದರು ಮೂದಲೆಯ [3]ಮಾತಿನಲಿ[3] ।
ಮನದಲಂಕುರವಾಗಿ ಕಡೆಗ-
ಣ್ಣಿನಲಿ ಪಲ್ಲವವಾಗಿ ರಣವಾ-
ತಿನಲಿ ಪೂತುದು ಕರ್ಣಪಾರ್ಥರ ರೋಷಮಯ [4]ಬೀಜ[4] ॥ ೧೩೫ ॥

---

೧೩೩. [1]ಸಾಧನಕಾರ್ಯ (ಅ). [2]ಗಮಕ (ಅ ಕುಮಾ).
[ತಿಮಿರಮಯ–ತಮೋಗುಣದಿಂದ ಕೂಡಿದ. ಶ್ರಮನಿಧಾನವ್ಯಾಪ್ತಿ–ಶ್ರಮಪಡುವ ರೀತಿಯ ಅಪಾರತೆ. ಗಾಢ–ಹೆಚ್ಚಳ, ಅತಿಶಯತೆ. ಗಮಕ–ಶೀಘ್ರಗತಿ].

೧೩೪. [1]ದ್ಭಿನ್ನ (ಅ ಕುಮಾ).
[ಚಂಡಸ್ಫುರಿತ–ಭಯಂಕರವಾಗಿ ಸ್ಫುರಿಸುವ, ಹೊರಡುವ. ಮೌರ್ವೀನಾದ–ಹೆದೆಯ ಟಂಕಾರ. ಸ್ಫುರತ್–ಚಿಮ್ಮುವ. ಅಮಂದೋಡ್ಡೀನ–ತೀವ್ರವಾದ, ವೇಗವಾದ ಹಾರಾಟ. ಭಾಸ್ವತ್–ಪ್ರಕಾಶಮಾನವಾದ. ಕಿರಣ ಗರ್ಭ ಕಳಾಪ–ಕಿರಣಗಳನ್ನು ಒಳಗೊಂಡ ವಿನ್ಯಾಸ. ಭದ್ರಾಕರಣ–ಮಂಗಳಪ್ರದವಾದ. ಕಳಿತ–ಕೂಡಿಕೊಂಡ. ಧ್ವಾಂತ ಬಿಂಬ ಕಳಂಬ ಸಂತತಿ–ಕತ್ತಲೆಯ ಬಿಂಬದಂತಿರುವ ಬಾಣಗಳ ಸಂತತಿ].

೧೩೫. [1]ಕಣ್ಣನಲಿ ಕಾರಿದ (ಅ ಕುಮಾ). [2]ಕಿಪಿಗೊನೆಗಳಲಿ (ಅ ಕುಮಾ). [3]ಮಾತುಗಳ (ಅ ಕುಮಾ). [4]ಜಾಲ (ಅ), ಚೂತ (ಅ ಕುಮಾ); ಸ್ವೀಪಾ ('ಅ'ದ ಅಡಿಟಿಪ್ಪಣಿ).
[ಮೊಗೆದು–ತುಂಬಿಕೊಂಡು. ಈಂಟು–ಕುಡಿ. ಸೂಸು–ಚೆಲ್ಲು. ಅಂಕುರ–ಮೊಳಕೆ. ಪಲ್ಲವ–ಚಿಗುರು. ಪೂತುದು–ಹೂಬಿಟ್ಟಿತು].

ಕ್ರೋಧಶಿಖಿ [1]ಭುಲ್ಲೈಸಿ[1] ಮುಳಿದು ವಿ-
ರೋಧಿಯನು ನೋಡಿದನು ಮುಳಿಂಗಲಿ
ರಾಧೆ ಕಂಬನಿಗಳಲಿ [2]ಕುದಿ[2]ಯಲಿ ಪುತ್ರ ಶೋಕದಲಿ ।
ಆಧಿ ತೀರಲಿ ನಮ್ಮ ಸೇನಾ-
ವ್ಯಾಧಿಗಿದೆ ಮದ್ದೆನುತ ಪರಬಲ-
[3]ಸಾಧಕ[3]ಬ್ರಹ್ಮಾಸ್ತ್ರವನು ತೊಟ್ಟೆಚ್ಚನಾ ಪಾರ್ಥ ॥ ೧೩೬ ॥

ಶಿವಶಿವಾ ಬ್ರಹ್ಮಾಸ್ತ್ರವಿದಲಾ
ಭುವನಜನಸಂಹಾರ[1]ಕರ[1] ಸಂ-
ಭವಿಸಿ[2]ತೇ[2] ಹಾ ಯೆನುತ ಹರಿದುದು ಮೇಲೆ ದಿವಿಜಗಣ ।
ತವಕದಲಿ ಶತ್ರುಶಿಮಹಾಸ್ತ್ರವ
ಜವಳಿವೆರಳೆಂದುಗಿದು ಬಿಡೆ ಶಿವಿ-
ಶಿವಿದು ತನ್ಮೊಳಗಡಗಿದವು ದಿವ್ಯಾಸ್ತ್ರವಭ್ರದಲಿ ॥ ೧೩೭ ॥

ರಾಯ ಕೇಳೈ ಮತ್ತೆ ಕರ್ಣರ-
ಸಾಯನವ ಕಟ್ಟಾಳು ರಣದಲಿ
ಸಾಯಲಾಗದೆ ಶಿವಶಿವಾ ಸಾಯದೆ ಸುರಾಸುರರು ।
ಬಾಯ ಬಿಡೆ [1]ಪರ[1]ಸೇನೆ ಭೀತಿಯ
ಲಾಯದಲಿ ಕಟ್ಟಿದನು ಪಾರ್ಥನ
ವಾಯುಜನ ಕರಣೇಂದ್ರಿಯಾಶ್ವಂಗಳನು ಕಲಿಕರ್ಣ ॥ ೧೩೮ ॥

---

೧೩೬. [1]ಭುಲ್ಲವಿಸೆ (ಅ ಕುಮಾ). [2]ಬೆರೆ (ಅ). [3]ಸಾಧಕನು (ಅ ಕುಮಾ).

[ಕ್ರೋಧಶಿಖಿ-ಕೋಪಾಗ್ನಿ. ಭುಲ್ಲೈಸು-ಭುಗ್ಗನೆ ಏಳು. ಆಧಿ-ಮನೋವ್ಯಥೆ. ವ್ಯಾಧಿ-ರೋಗ. ಮದ್ದು-ಔಷಧ. ಪರಬಲ ಸಾಧಕ-ಶತ್ರು ಸೈನ್ಯವನ್ನು ಜಯಿಸುವ. ತೊಡು (ಧಾ) ತೊಟ್ಟು-ಹೂಡಿ].

೧೩೭. [1]ವೇ (ಅ). [2]ತೋ (ಅ ಕುಮಾ).

[ಹರಿದುದು-ಚದರಿಹೋಯಿತು. ಜವಳಿವೆರಳು-ಎರಡು ಬೆರಳು. ಉಗಿಯು-ತೆಗೆಯು. ಅಭ್ರ-ಆಕಾಶ].

೧೩೮. [1]ನೃಪ (ಅ).

[ಕರ್ಣ ರಸಾಯನ-ಕಿವಿಗೆ ಮಧುರವಾದದ್ದು. ಕರಣೇಂದ್ರಿಯಾಶ್ವಂಗಳು-ಪಂಚೇಂದ್ರಿಯಗಳೆಂಬ ಕುದುರೆಗಳು].

ಎಲೆ ಮುರಾಂತಕ ಸಾಕು ರಥದಿಂ-
ದಿಳಿ ಸುದರ್ಶನವೆಲ್ಲಿ ಚಾಪವ
ಕಳೆದು[1]ಕೊಳು[1] ಕೌಮೋದಕಿಯ ಹಿಡಿ ಹಾಯ್ಕು ವಾಘೆಯವ ।
ಉಳುಹುವವರಾವಲ್ಲ ಕೊಳ್ಳೆನು-
ತಳವಿಯಲಿ ಕೈ[2]ಮಾಡಿ[2] ಕೃಷ್ಣನ-
ನಳುಕದೆಚ್ಚನು ನೂಱುಶರದಲಿ ಕರ್ಣ ಬೊಬ್ಬಿಱಿದು ॥ ೧೩೯ ॥

ಜೋಡಿನಲಿ ಸೀಸಕದ ಮೇಲ-
ಕ್ಕಾಡಿದವು ಕವಲಂಬು ಕವಚವ
ತೋಡಿ ನಟ್ಟವು ನೂಕಿದವು ನಾರಾಚ ಗಱಿಸಹಿತ ।
ನೋಡಲೀ ವ್ಯಥೆಯುಂಟೆ ಭುವನದ
ಗೂಡು ಕೃಷ್ಣನ ದೇಹವಿದು ನಾ-
ಡಾಡಿಗಳ ನಾಟಕವಲೇ ನರನಾಥ ಕೇಳೆಂದ ॥ ೧೪೦ ॥

ಉರಿಯ ಮಳೆಗಾಲದಲಿ ದಡ್ಡಿಯ-
ನರಗಿನಲಿ ಮಾಡಿದರು [1]ಗಡ[1] ಕಾ-
ರಿರು[2]ಳ[2] ಕೋಟೆಯ ರಚಿಸಿದರು ಗಡ ರವಿಯ ಮುತ್ತಿಗೆಗೆ ।
ಹರಿಗೆ ಸೀಸಕಜೋಡು ಕಾವವೆ
ಕೆರಳಿದೊಡೆ ಕರ್ಣಾಸ್ತ್ರ[3]ಕೇ[3]ನಿ-
ಬ್ಬರದ ರಣದುಬ್ಬಟೆಯ ಕಂಡುಬ್ಬಿದನು ಕುರುರಾಯ ॥ ೧೪೧ ॥

---

೧೩೯. [1]ಕೋ (ಅ). [2]ಕೊಂಡು (ಅ ಕುಮಾ).
[ಕಳೆದುಕೊಳು-ತೆಗೆದು ಹಿಡಿದುಕೊ. ಕೌಮೋದಕಿ-ಕೃಷ್ಣನ ಗದೆ. ವಾಘೆ-ಲಗಾಮು. ಕೊಳ್-ಹಿಡಿ. ಅಳವಿಯಲಿ-ಸಾಮರ್ಥ್ಯದಿಂದ. ಕೈಮಾಡು-ಪರಾಕ್ರಮವನ್ನು ತೋರಿಸು, ಯುದ್ಧಕ್ಕೆ ತೊಡಗು].

೧೪೦. [ಜೋಡು-ಕವಚ ಸೀಸಕ-ಶಿರಸ್ತ್ರಾಣ. ಅಕ್ಕಾಡು-ನಾಶವಾಗು. ನಾರಾಚ-ಬಾಣ. ಗೂಡು-ಆಶ್ರಯಸ್ಥಾನ ನಾಡಾಡಿಗಳು-ಸಾಮಾನ್ಯರು]

೧೪೧. [1]ಮಿಗೆ (ಅ). [2]ಳು (ಅ). [3]ವನು (ಅ ಕುಮಾ).
[ದಡ್ಡಿ-ತೆರೆ, ಜವನಿಕೆ. ಕಾವವೆ-ಕಾಪಾಡುತ್ತವೆಯೆ. ನಿಬ್ಬರ-ರಭಸದ ಹೆಚ್ಚಳ. ಉಬ್ಬಟೆ-ಹೆಚ್ಚಳ].

ನರನ ಬಿಗಿದುದು ಮೂರ್ಛೆ ಭೀಮನ
ಹರಣ ಕೊರಳಲಿ ಮಿಡುಕುತಿದೆ ಮುರ-
ಹರ[1]ನುಸುರ ವೈಹಾಳಿ[1]ಯಿದೆ ಮೂಗಿನಲಿ ಮೋಹರಿಸಿ ।
ಬಿರುದಸಾತ್ಯಕಿನಕುಲಸಹದೇ-
ವರಿಗದಾವುದು ಹದನು [2]ಬಲುಧರ-
ಧುರವ ನೋಡಿರೆ ನೀವು[2] ಎಂದನು ನಗುತ ಕುರುರಾಯ ॥ ೧೪೨ ॥

[1]ಕೂಡೆ[1] ಮಕ್ಕಳನಿಕ್ಕಿ ತಂದೆಗ-
ಳೋಡುತಿದೆ ಸರಳಂಗೆ ತಮ್ಮನ
ನೀಡಿ ಕೋಱಿಸಿ ಜಾಱುತಿದೆ ಅಣ್ಣಂದಿರಾಪವರು ।
ಓಡುತಿದೆ ಆಳೊಡೆಯನನು ಬಿಸು-
ಟೋಡಿ ತಾಯಿಗೆ ಮಕ್ಕಳಾಗದೆ
ಕೂಡಿ [2]ಮುಮ್ಮುಳಿಮುಸಗು[2]ತಿದೆ ಗುರುಸೂನು ನೋಡೆಂದ ॥ ೧೪೩ ॥

ಒಂದು ಕಡೆಗಣ್ಣಿನಲಿ ಕೌರವ-
ವೃಂದವನು ನೋಡುವಳು ಕೈಯೊಡ-
ನೊಂದು ಕಡೆಗಣ್ಣಿನಲಿ ಮಾತಾಡಿಸುವಳಂಬಲವ ।
ಇಂದು ಜಯವಧು [1]ದೃಢ[1] ಪತಿವ್ರತೆ
ಯೆಂದು ಬಗೆದೈ ಭೂಪ ಹುಸಿ ಹೋ-
ಗೆಂದು ಗುರುಸುತ [2]ಜಱಿದು[2] [3]ಹೊಕ್ಕನು[3] ತನ್ನ [4]ಪಾಳೆಯವ[4]
॥ ೧೪೪ ॥

---

೧೪೨. [1]ನ ಮುಸುರೊಯ್ಯಾಳಿ (ಅ). [2]ನಾವಿನ್ನರಿಯೆವೈ ನೀವ್ ನೋಡಿ (ಅ ಕುಮಾ).
[ಹರಣ-ಪ್ರಾಣ ಮಿಡುಕು-ಚಲಿಸು. ಉಸುರ ವೈಹಾಳಿ-ಉಸುರೆಂಬ ಕುದುರೆಯ ವಿಹಾರ(ಉಸುರಿನ ಹೊಯ್ದಾಟ). ಮೋಹರಿಸು-ಒಟ್ಟುಗೂಡು. ಬಿರುದ-ಬಿರುದುಳ್ಳ. ಹದನು-ಗತಿ].

೧೪೩. [1]ನೋಡಿ (ಅ ಕುಮಾ). [2]ಮುಮ್ಮುಳಿ ಮುಸುಗು (ಅ).
[ಇಕ್ಕಿ-ಒಡ್ಡಿ, ಮುಂದಬಿಟ್ಟು. ಮುಮ್ಮುಳಿ ಮುಸಗು-ವಿಕಾರ ಹೊಂದಿದ ಸಾವು ಹೆಚ್ಚು]

೧೪೪. [1]ದಿಟ (ಅ). [2]ನಗುತ (ಅ ಕುಮಾ). [3]ಹೋದನು (ಅ ಕುಮಾ). [4]ಮೋಹರಕೆ (ಅ ಕುಮಾ).
[ಕೈಯೊಡನೆ-ಆ ಕೂಡಲೆ, ಒಡನೆಯೆ].

ಹೋಗದಿರಿ ಹೋಗದಿರಿ ದಳಪತಿ-
ಯಾಗುಹೋಗಱಿಯದೆ ನೃಪಾಲನ
ಮೂಗನಾರಿಗೆ ಮಾಱಿದಿರಿ ಕೊಂಬವರು ನಾವಲ್ಲ ।
ಈಗರುವರೀಪರಿ ಪಲಾಯನ-
ಯೋಗಸಿದ್ಧರೆ ಸಾಹಸಿ[1]ಗ[1]ರೈ
[2]ಚಾ[2]ಗೆನುತ ಬೆಂಬತ್ತಿ ಹುಡಿಗುಟ್ಟಿದ[3]ನು ಕಲಿಪಾರ್ಥ[3] ॥ ೧೪೫ ॥

ಅರಸ ಕೇಳೈ [1]ಕರಿಯ[1] ಗರ್ಜನೆ-
ಗು[2]ರ[2]ವಣಿಪ ಕೇಸರಿಯವೋಲು ಕೃಪ-
ಗುರುಸುತರ [3]ಬಿಟ್ಟ[3]ತ್ತ [4]ಹರಿದನು[4] ಹಗೆಯ ಸಮ್ಮುಖಕೆ ।
ತಿರುವು ಸದರ[5]ವೆ[5] ನಿನಗೆ ಗತಿ ಕಾ-
ಹುರಕಣಾವಳಿಕಂಠಗತ ಬಾ-
ಹಿರನು ನೀನೆಲೆ ಕರ್ಣ ಫಡ ಹೋಗೆನುತ ತೆಗೆದೆಚ್ಚ ॥ ೧೪೬ ॥

ಝಳಪಿಸಿದುದೆರಡಂಕದಲಿ ನಿ-
ಷ್ಕಲಿತತೇಜಃಪುಂಜವಿಬ್ಬರ
ಹಳಹಳಿಕೆ ಹಬ್ಬಿದುದು ಗಬ್ಬರಿಸಿದುದು ಗಗನದಲಿ ।
ಹಿಳುಕ[1]ನೀ[1]ದವೊ ಹಿಳು[2]ಕ[2] [3]ಮುಮ್ಮೊನೆ-
ಯಲಗನುಗುಳ್ದವೊ[3] ಕಣೆಗಳಲಿ ಕಣೆ
ತಳಿತವೋ ತ್ರೈಲೋಕ್ಯಬಾಣಾದ್ವೈತವಾಯ್ತೆಂದ ॥ ೧೪೭ ॥

---

೧೪೫. [1]ಕ (ಅ ಕುಮಾ). [2]ಬಾ (ಅ), ಜಾ (ಅ ಕುಮಾ). [3]ಮಹಾರಥರ (ಅ ಕುಮಾ). [ಆಗುಹೋಗು-ಭವಿಷ್ಯ. ಗರುವರು-ಶ್ರೇಷ್ಠರು. ಪಲಾಯನ ಯೋಗ ಸಿದ್ಧರು-ಪಲಾಯನ ಮಾಡುವ ಯೋಗದಲ್ಲಿ ಸಿದ್ಧಿ ಹೊಂದಿದವರು. ಚಾಗು-ಭಲೆ].

೧೪೬. [1]ಸಿಡಿಲ (ಅ ಕುಮಾ). [2]ರು (ಅ). [3]ಬಿಸುಟ (ಅ ಕುಮಾ). [4]ಹಾಯ್ದನು (ಅ ಕುಮಾ). [5]ವು (ಅ ಕುಮಾ).
[ಉರವಣಿಸು-ರಭಸವನ್ನು ತೋರು. ತಿರುವು-ತಿರುಗುವುದು, ಬೆನ್ನುಕೊಟ್ಟು ಹೋಗುವುದು. ಸದರ-ಸುಲಭ. ಕಾಹುರಕಣಾವಳಿ-ಪ್ರವಾಹದೋಪಾದಿಯಲ್ಲಿ ಬರುತ್ತಿರುವ ಬಾಣಗಳ ಸಮೂಹವು. ಕಂಠಗತ (ನಿನ್ನ) ಕೊರಳಿಗೆ ಹೋಗ ತಕ್ಕದ್ದು. ಬಾಹಿರ-ಪರಕೀಯ, ಹೊರಗಿನವನು].

೧೪೭. [1]ನುಗಿ (ಅ). [2]ಕು (ಅ ಕುಮಾ). [3]ಮೊನೆಯಲಗಲಗನುಗುಳ್ದವೊ (ಅ ಕುಮಾ). [ಅಂಕ-ಯುದ್ಧರಂಗ (?). ನಿಷ್ಕಲಿತ-ಅಖಂಡವಾದ. ತೇಜಃಪುಂಜ-ತೇಜಸ್ಸಿನ ರಾಶಿ. ಹಳಹಳಿಕೆ-ಆವೇಶ, ರಣೋತ್ಸಾಹ. ಗಬ್ಬರಿಸು-ವ್ಯಾಪಿಸು, ಹರಡು. ಹಿಳುಕನೀದವೊ-ಬಾಣದ ಹಿಂಭಾಗವನ್ನು ಮರಿಹಾಕಿದವೊ. ಈನ್, ಈಯು (ಧಾ). ಮುಮ್ಮೊನೆ-ಬಾಣದ ತುದಿ, ಅಗ್ರಭಾಗ. ಅಲಗು-ಹರಿತವಾದ ಭಾಗ. ತಳಿತವೊ-ಕೂಡಿಕೊಂಡುವೊ. ತ್ರೈಲೋಕ್ಯ ಬಾಣಾದ್ವೈತವಾಯ್ತು-ಮೂರು ಲೋಕಗಳೂ ಬಾಣಗಳಿಂದ ತುಂಬಿ ಒಂದಾಗಿ ಕಂಡವು].

ಅವನಿಪತಿ ಕೇಳುವೊಡೆ ಸಾವಿರ
ಕಿವಿಗಳೈದವು ನಿಮ್ಮ ಕರ್ಣನ
ಬವರದಲಿ ರೂಢಿಸಿದ ರೌದ್ರದ ರಾಜಕಾರಿಯವ ।
ಸವಡಿವೆರಳಿನ ಸೇದುವಂಬಿನ
ತವಕಿಗನ ತಗ್ಗಿಸುವೆ ನಿಲ್ಲೆನು-
ತವಗಡದ ಕೋಪದಲಿ ಕಿಡಿಕಿಡಿವೋದನಾ ಕರ್ಣ ॥ ೧೪೮ ॥

ಉಗಿದನುರಗಾಸ್ತ್ರವನು ಹೊಮ್ಮಾ-
ಡಿಗೆಯೊಳಗೆ ಹೊಜಕೈಯ ಗಾಳಿಗೆ
ಹೊಗೆಯ ಹೊದಜಿನ ಹೊರಳಿ ಹಬ್ಬಿತು ಕೂಡೆ ಕಿಡಿಯಿಡುತ ।
ಗಗನಗಮನದ ನಿಖಿಳವಿಹಗಾ-
ಳಿಗಳು ಬೆಂದವು ಗಾಢಗರಳದ
[1]ಸೆಗೆಗಳುಕಿ ಸಲೆ ಮುಸುಗಿ ದಿವಿಜರ ಥಟ್ಟು ಕಳವಳಿಸೆ[1] ॥ ೧೪೯ ॥

ಬೆರಳಲಂಬನು ತೂಗಲುರಿ [1]ಫೂತ್-[1]
ಕರಣೆಯುಲಿ ಸುಂಟಿಸಿತು ಸುಯ್ಲಿನ
ಧರಧುರದ ಬೆಳ್ನೊರೆಯ [2]ಲಹರಿಯು[2] ವಿಷದ [3]ಲೋಳೆಗಳ[3] ।
ಉರವಣಿಸಿದವು ಗರಳರಸ[4]ದು-[4]
ಬ್ಬರದ ಬೊಬ್ಬುಳಿಕೆಗಳು ಮುಸು[5]ಕಿತು[5]
ಹೊರಳಿ [6]ಗಡಿ[6]ಗಳ ಛಟಛಟಧ್ವನಿ ಮುಸುಗಿತಡಿಗಡಿಗೆ ॥ ೧೫೦ ॥

---

೧೪೮. [ಎಯ್ದವು-ಬಾರವು, ಸಾಲ್ಪುದಿಲ್ಲ. ಸವಡಿವೆರಳು-ಜೋಡಿ (ಎರಡು) ಬೆರಳು. ಸೇದುವಂಬು-ಎಳೆಯುವ ಬಾಣ. ತವಕಿಗ-ಆತುರಗಾರ. ಅವಗಡದ-ಉಗ್ರವಾದ, ಭಯಂಕರವಾದ].

೧೪೯. [1]ಸೊಗಡಸೋಡಿಗೆ ಕಂಠಣಿಸಿತೆರಡೊಡ್ಡು ಕಳವಳಿಸಿ (ಅ ಕುಮಾ).

[ಉಗಿ-ಹೊರಕ್ಕೆ ತೆಗೆ. ಹೊಮ್ಮಾಡಿಗೆ-ಚಿನ್ನದ ಬತ್ತಳಿಕೆ. ಹೊಜಕೈಯ-ಹೊರಗಡೆಯ. ಹೊರಳಿ-ಮೊತ್ತ. ಗಗನಗಮನದ-ಆಕಾಶದಲ್ಲಿ ಹೋಗುತ್ತಿರುವ. ನಿಖಿಳ-ಸಮಸ್ತ, ಎಲ್ಲ. ವಿಹಗಾಳಿ-ಪಕ್ಷಿಸಮೂಹ. ಗಾಢಗರಳ-ದಟ್ಟವಾದ ವಿಷ. ಸೆಗೆ-ಸೆಕೆ, ಉಷ್ಣತೆ. ಥಟ್ಟು-ಸಮೂಹ].

೧೫೦. [1]ಹೂಂ (ಅ). [2]ಲೊದಳೆಯ (ಅ). [3]ಲಹರಿಗಳು (ಅ). [4]ದ (ಅ ಕುಮಾ). [5]ಕದ (ಅ). [6]ಹೊಗೆ (ಅ).

[ಫೂತ್‌ಕರಣೆ-ಆರ್ಭಟ. ಸುಂಟಿಸು-ಸುತ್ತುವರಿ, ಆವರಿಸು. ಬೊಬ್ಬುಳಿಕೆ-ಬುದ್ಬುದ, ನೊರೆ].

ಹೂಡಿದನು ತಿರುವಿನಲಿ ಬಾಣದ
ಝಾಡಿಯುರಿನಾಲಗೆಯ ನಿರುತವ
ನೋಡಿ ಪಾರ್ಥನ ಗಳಕೆ ಸಂಧಾನವ ನಿಧಾನಿಸುತ ।
ನೋಡಿದನು ಶಲ್ಯನನು ಮಿಗೆ [1]ಮಾ-
ತಾ[1]ಡಿದನು ಕುರುಪತಿಯ ಪುಣ್ಯದ
ಬೀಡು ಬಿಡುವೊಡೆ ಕಾಣಲಿನ್ನಹುದೆಂದನಾ ಕರ್ಣ ॥ ೧೫೧ ॥

ಏನು ಸಾರಥಿ ಸರಳು ಪಾಂಡವ-
ಸೇನೆಯನು ಗೆಲಲಹುದೆ ಪಾರ್ಥನ
ಮಾನಿನಿಗೆ ವೈಧವ್ಯದೀಕ್ಷಾವಿಧಿಯ ಕೊಡಬಹುದೆ ।
ಅನಲಮ್ಮುವರುಂಟೆ ನಿನಗಿದು
ಸಾನುರಾಗವೆ ಹೇಳೆನಲು ರವಿ-
ಸೂನುವಿನ [1]ರೌದ್ರಾ[1]ಸ್ತ್ರವನು ಹೊಗಳಿದನು ಮಾದ್ರೇಶ ॥ ೧೫೨ ॥

ಕೊರಳಿಗೊಡ್ಡಿದೆ ಹೊಳ್ಳುವಾಜಿಾದ
ಸರಳು ಮಕುಟವ ತಾಗುವು[1]ದು[1] ತೆಗೆ-
ದುರಕೆ ತೊಟ್ಟೊಡೆ ಕೊಯ್ವುದೀಗಳೆ ಕೊರಳನರ್ಜುನನ ।
ಮರಳಿ ತೊಡುತೊಡು ಬೇಗ ಕೌರವ-
ನರಸುತನವುಳಿವುದು ಕಣಾ ಹೇ-
ವರಿಸದಿರು ಹೇಳು[2]ವೊಡೆ ಪಂಥ[2]ವಿದೆಂದನಾ ಶಲ್ಯ ॥ ೧೫೩ ॥

---

೧೫೧. [1]ತೂಗಾ (ಅ ಕುಮಾ).

[ತಿರುವು–ಹೆದೆ. ನಿರುತ ನಿಸ್ಸಂಧಿಗ್ಧತೆ, ನಿಶ್ಚಿತತ್ವ. ಗಳ–ಕತ್ತು, ಕೊರಳು. ಸಂಧಾನ–(ಬಾಣ) ಹೂಡುವುದು, ಪ್ರಯೋಗ. ನಿಧಾನಿಸು–ಆಲೋಚಿಸು].

೧೫೨. [1]ಸರ್ಪಾ (ಅ).

[ಮಾನಿನಿ–ಸ್ತ್ರೀ, ಪತ್ನಿ. ಅನು–ಎದುರಿಸು. ಅಮ್ಮು (ಅಣ್ಮು)–ಸಾಹಸ, ಪರಾಕ್ರಮ (ಅಮ್ಮುವರುಂಟೆ–ಸಾಹಸ ತೋರುವವರು ಇದ್ದಾರೆಯೆ?)].

೧೫೩. [1]ದೆ (ಅ). [2]ವುದು ಪಥ್ಯ (ಅ ಕುಮಾ).

[ಹೊಳುವಾಜು–ನಿಷ್ಪ್ರಯೋಜಕವಾಗು, ಪೊಳ್ಳಾಗು, ಹುಸಿಯಾಗು. ಉರ–ಎದೆ. ತೊಡು–ಹೂಡು. ಹೇವರಿಸು–ಹಿಂದೆಗೆ. ಪಂಥ–ಶಪಥ, ಪಂದ್ಯ].

ಒಂದು ಶರಸಂಧಾನ ನಾಲಗೆ-
ಯೊಂದು ನಮ್ಮಲಿ ಕುಟಿಲವಿದ್ಯೆಯು-
ನೆಂದು ಕಂಡ್ಯೆ ಶಲ್ಯ ನಾವಡಿಯಿಡುವ ಧರ್ಮಪಲಿ ।
ಇಂದು ಹೂಡಿದ ಸರಳನಿಳುಹುವು-
ದಂದವೇ ನೀನಱಿಯೆ ಹೆಱಸಾ-
ರೆಂದು ಶಿರುವಿನಲಂಬನೊದೆದನು ಕರ್ಣ ಬೊಬ್ಬಿಱಿದು ॥ ೧೫೪ ॥

ಏನ ಹೇಳುವೆ ಬಳಿಕ ಭುವನ-
[1]ಗ್ಲಾನಿಯನು[1] ತೆಗೆದೋಡಿದರು ವೈ-
ಮಾನಿಕರು ವೆಂಠಣಿಸಿತುರಿಯುಪ್ಪಳಿಸಿತಂಬರವ ।
ಕಾನಿಡುವ ಕರ್ಬೊಗೆಯು ಚೂರಿಸು-
ವಾನನದ ಕಟವಾಯ [2]ಲೊದಳೆ[2]ಯು
ಜೇನಹುಟ್ಟಿಯ ಬಸಿವ ವಿಷದಲಿ ಬಂದುದುರಗಾಸ್ತ್ರ ॥ ೧೫೫ ॥

ನಡುಗುತಿರ್ದುದು ಸುರನಿಕರ ಬೊ-
ಬ್ಬಿಡುತಲಿರ್ದುದು ನಮ್ಮವರು ಬಾ-
ಯ್ಬಿಡುತಲಿರ್ದುದು ಪಾರ್ಥನಳವಿಗೆ ಪಾಂಡುಸುತಸೇನೆ ।
ತಡೆಯದ್ಯೆದಂಗುಲಕೆ ರಥವನು
[1]ನೆಡಿಸಿದನು ಹರಿ ಧರೆಗೆ[1] ಪಾರ್ಥನ
ಮುಡಿಯ ಸರಿಸಕೆ ಬಾಣ ಬಂದುದು ಕೊಲುವ ತವಕದಲಿ ॥ ೧೫೬ ॥

---

೧೫೪. [ಕುಟಿಲವಿದ್ಯೆ-ಮೋಸದ ವಿದ್ಯೆ. ಇಳುಹು-ಕೆಳಕ್ಕೆ ಇಳಿಸು, ತೆಗೆದುಬಿಡು. ಅಂದವೇ-ಸರಿಯೇ. ಒದೆ-ನೂಕು].

೧೫೫. [1]ಜ್ಞಾನ (ಅ). [2]ಲೋಳೆ (ಅ ಕುಮಾ).
[ಭುವನಗ್ಲಾನಿ-ಲೋಕದ ನಾಶ. ವೆಂಠಣಿಸು-ವ್ಯಾಪಿಸು, ಹರಡು. ಅಂಬರ-ಆಕಾಶ. ಕಾನಿಡು-ಕಾಡಿನಂತೆ ದಟ್ಟವಾಗು. ಚೂರಿಸು-ಹುಡಿಮಾಡು, ನಾಶಗೊಳಿಸು. ಲೊದಳೆ-ಸೊರೆ, ಜೊಲ್ಲು. ಬಸಿ-ಸುರಿ].

೧೫೬. ನಡಿಸಿ ಕೂಳಿದನು ನೆಲಕೆ (ಅ).
[ಮುಡಿ-ಕಿರೀಟ. ಸರಿಸ-ಸಮೀಪ]

ಅಣೆದು[1]ದಹಿ[1] ಮುಕುಟವನು ತಾರಾ-
ಗಣದ ಮಧ್ಯದ ಚಂದ್ರಮನ [2]ಹೊ-
ಯ್ದಣಲೊಳಡಸಿದ[2] ರಾಹುವಿನ ರಹಿಯಾಯ್ತು ನಿಮಿಷದಲಿ ।
ಕುಣಿಕೆ ಮುಱಿದುದು ಮೌಕ್ತಿಕದ ಕೀ-
ಲಣದ ವಜ್ರದ ಮಾಣಿಕದ ವರ-
ಮಣಿಗಳೊಕ್ಕವು ರಕುತ[3]ಮಿದುಳೊಡಸೂಸಿ[3]ದಂದದಲಿ ॥ ೧೫೭ ॥

ಬಿದ್ದುದೇ ಫಲುಗುಣನ ತಲೆ [1]ಯಡಿ-
ಗ[1]ದ್ದುದೇ ನಮ್ಮಾಟ ಜಯಸಿರಿ
ಕದ್ದಳೇ ರಣದೊಸಗೆ[2]ಗೇಳ್ವಳೆ[2] ದ್ರೌಪದೀದೇವಿ ।
ಇದ್ದುದೇ ಧರ್ಮಜನ ಸಿರಿ ತಳ-
ಕದ್ದುದೇ ನಮ್ಮೊಡಲನಸುಬಿಡ-
ದಿದ್ದುದೇ [3]ಹಾ[3]ಯೆನುತ ಭೀಮಾದಿಗಳು ಹೊರಳಿದರು ॥ ೧೫೮ ॥

ಕೊಡು ಕೊ[1]ಡಿ[1]ನ್ನೊಮ್ಮೆ[2]ನ್ನನ[2]ಕಟಾ
ಕೆಡಿಸಿದೆಯಲಾ ಸ್ವಾಮಿಕಾರ್ಯವ
ನುಡಿದು ಹೇಳನೆ ನಿನ್ನ ಸಾರಥಿ ಲಕ್ಷ್ಯಭೇದನವ ।
ಅಡಗಲಿನ್ನೀರೇಳು ಭುವನದೊ-
ಳಡಗ ತಿಂಬೆನು ನರನನೆನುತವ-
ಗಡಿಸಿ ಕರ್ಣನ ಬೆಸನ ಬೇಡಿತು ಮತ್ತೆ ಫಣಿಬಾಣ ॥ ೧೫೯ ॥

---

೧೫೭. [1]ದಾ (ಅ). [2]ಭಾರಣೆಯೊಳಡಗಿದ (ಅ). [3]ದೊಳೊಡೆಗಲಸಿ (ಅ).

[ಅಣೆ–ತಾಗು, ಸೋಕು. ಅಹಿ–ಸರ್ಪ. ಅಣಲು–ಬಾಯಿಯ ಒಳಭಾಗ. ಅಡಸು–ಆಕ್ರಮಿಸು. ರಹಿ–ರೀತಿ, ಪ್ರಕಾರ. ಒಕ್ಕವು (ಧಾ., ಒಗು)-ಸುರಿದುಹೋದುವು].

೧೫೮. [1]ನೆರೆಯ (ಅ). [2]ಗದ್ದಳೆ (ಅ). [3]ಹರ (ಅ).

[ಅಡಿಗದ್ದು–ಆಳಕ್ಕೆ ಮುಳುಗು, ಸರ್ವನಾಶವಾಗು. ಕದ್ದಳೇ–ಕದ್ದು ಹೊರಟು ಹೋದಳೇ. ರಣದೊಸಗೆಗೇಳ್ವಳೇ (ರಣದೊಸಗೆ+ಕೇಳ್ವಳೇ)–ಯುದ್ಧ ಗೆಲುವಿನ ಸಮಾಚಾರವನ್ನು ಕೇಳುತ್ತಾಳೆಯೇ? ತಳಕದ್ದು–ತಳಕ್ಕೆ ಮುಳುಗು. ಅಸು–ಪ್ರಾಣ].

೧೫೯. [1]ಡುಯಿ (ಅ). [2]ಯ (ಅ).

[ಲಕ್ಷ್ಯಭೇದನ–ಗುರಿಗೆ ಹೊಡೆಯುವುದು. ಈರೇಳುಭುವನ–ಹದಿನಾಲ್ಕು ಲೋಕ. ಅಡಗು–ಮಾಂಸ. ಅವಗಡಿಸು–ಹೀಯಾಳಿಸು. ಬೆಸನು–ಅಪ್ಪಣೆ. ಫಣಿಬಾಣ–ಸರ್ಪಾಸ್ತ್ರ].

ಕೊಡುಕೊಡೆಲವೋ ಶರಳ ರಿಪುವನು
ತಡೆಗಡಿವೆನೆಂದೊರಲುತಿದೆ ನೃಪ-
ನೊಡೆತನವ ನೀ ಬಯ[1]ಸುವಾ ಮತ[1]ವುಂಟೆ ರಿಪುಗಳಲಿ ।
ನುಡಿದ ಮಾತೇ ನಾವು ಹೇಳಿ[2]ತ-
ನೊ[2]ಡಬಡುವನೀನಲ್ಲ ಕುರುಪತಿ
ಬಿಡದೆ ನಿನ್ನನು ಸಲಹಿ[3]ತಕ್ಕುಪಕಾರವಾಯ್ತೆಂದ[3] ॥ ೧೬೦ ॥

ಎಲವೊ ನಿನ್ನನು ಜಗವಱಿಯೆ ಕ-
ಬ್ಬಿಲನ ಮಗನನು [1]ಮಱಸಿ ಕುರುಪತಿ[1]
ಕುಲಜನನು ಮಾಡಿದನಲಾ ಒಡನುಂಡು ಪತಿಕರಿಸಿ ।
ನೆಲನು ಹೇಸದೆ ನಿನ್ನ ಕೀರ್ತಿಯು
ಬೆಳಗು ಮಾಸದೆ ಬಿಡದೆ ಸಾಕಿದ
ಹೊಲೆಯಃನವಸರಕೊದಗುವನು ನೀ ಕಷ್ಟ ಹೋಗೆಂದ ॥ ೧೬೧ ॥

ನಂಬಿ ಹಿಡಿದರೆ ನದಿಯ ಮಗ ಹಗೆ-
ಯಂಬಿಗಿತ್ತನು ಕಾಯುವನು ಮಗ-
ನೆಂಬ ನೆವದಲಿ ತನುವ ಬಿಸುಟನು ಗರುಡಿಯಾಚಾರ್ಯ ।
ಅಂಬು ಬೆಸನನು ಬೇಡಿದೊಡೆ ನೀ-
ನೆಂಬನೀ ವಿಧಿಯಾದೆ ಮೂವರ
ನಂಬಿ ಕೆಟ್ಟನು ಕೌರವೇಶ್ವರನೆಂದನಾ ಶಲ್ಯ ॥ ೧೬೨ ॥

---

೧೬೦. [1]ಬಯಸಿದಾಮತ (ಅ ಕುಮಾ). [2]ಬಯಸುವಾಯತ (ಅ). [2]ದಕೊ (ಅ). [3]ತಕ್ಕುಪಕಾರಿ ನೀನೆಂದ (ಅ ಕುಮಾ), ದಕ್ಕುಪಕಾರವಾಯ್ತೆಂದ (ಅ).

[ತಡೆಗಡಿ–ತಡೆದು, ಅಡ್ಡಗಟ್ಟಿ, ಕಡಿದುಹಾಕು. ಒರಲು–ಕೂಗಿಕೊ, ಅರಚು. ಮತ–ಅಭಿಪ್ರಾಯ. ಹೇಳಿತನು–ಹೇಳಿದ್ದನ್ನು. ಒಡಬಡು–ಒಪ್ಪು, ಅಂಗೀಕರಿಸು. ಸಲಹಿತಕ್ಕೆ–ಕಾಪಾಡಿದ್ದಕ್ಕೆ].

೧೬೧. [1]ತಂದು ವಂಚಿಸಿ (ಅ).

[ಕಬ್ಬಿಲ–ಬೆಸ್ತ. ಕುಲಜ–ಒಳ್ಳೆಯ ವಂಶದಲ್ಲಿ ಹುಟ್ಟಿದವನು. ಪತಿಕರಿಸು–ಸತ್ಕರಿಸು. ದಯೆತೋರು. ಅವಸರಕೊದಗು–ಸಮಯಕ್ಕೊದಗು, ಅಗತ್ಯ ಬಿದ್ದಾಗ ನೆರವಾಗು. ಕಷ್ಟ–ನೀಚ, ಕೆಟ್ಟವನು].

೧೬೨. [ಹಗೆಯಂಬಿಗೆ–ಶತ್ರುವಾದ ಅರ್ಜುನನ ಬಾಣಕ್ಕೆ. ನೀನೆಂಬನು–ನಂಬಿಕೊಂಡಿದ್ದ ನೀನು. ಈ ವಿಧಿಯಾದೆ–ಈ ರೀತಿಯಾದೆ].

ಮಾತೆಗಿತ್ತನು ಭಾಷೆಯನು ನಿ-
ನ್ನಾತಗಳೊಳೈವರೊಳಗಾರಿದಿ-
ರಾದೊಡೆಯುಂ ತಲೆ[1]ಗಾವೆನೆಂದೆನು ಮರಳಿ ತೊಡೆನೆಂಬ[1] ।
ಮಾತುಗಳು ಕವಲಾದ ಬಳಿಕಿ-
ನ್ನೇತರೀ ತನುವಿದನು ಪಾರ್ಥನ
ಘಾತಿಗೊಪ್ಪಿಸಿ ಕಳೆವೆನೆಂದನು ತನ್ನ ಮನದೊಳಗೆ ॥ ೧೬೩ ॥

ಮರು[1]ಳೆ ಮಾದ್ರಾಧೀಶ[1] ಮರಳಿ[2]ದ[2]
ಸರಳ ತೊಡುವೆನೆ ಸೈರಿಸೆನೆ ಕಾ-
ತರಿಸಿ ವಾಘೆಯ ಬಿಸುಟು ಕಿಡಿಕಿಡಿವೋಗಿ ಖಾತಿಯಲಿ ।
ಅರಸನೊಲಿದೆಂತಾಗಲೆನ್ನದು
ಮರುಳುತನ ಕುಲಹೀನನಲಿ ಗುಣ-
ವಱಸಲೇನಹುದೆನುತ ದುಮ್ಮಿಕ್ಕಿದನು ಧಾರುಣಿಗೆ ॥ ೧೬೪ ॥

ಕಂಡುದೀವ್ಯತಿಕರವನೀತನ-
ನಂಡಲೆದು ಫಲವಿಲ್ಲಲಾ ಕೈ-
ಕೊಂಡು ನೋಡುವೆನೆನ್ನ ಸಾಮರ್ಥ್ಯದ ಸಘಾ[1]ಡಿಕೆಯ[1] ।
ಚಂಡಿಯಾದೆ[2]ನೆ[2] ತಾನೆನುತ ಖತಿ-
ಗೊಂಡು ಮರಳಿತು ಸರ್ಪಶರವಾ-
ಖಂಡಲಾತ್ಮಜನತ್ತ [3]ಹಾಲಾಹಲದ[3] ಚೂಣಿಯಲಿ ॥ ೧೬೫ ॥

---

೧೬೩. [1]ಗಾದುಬಿಡುವೆನು ಕೊಲುವುದಿಲ್ಲೆಂದು (ಅ).
[ತಲೆಗಾವೆ–ಕಾಪಾಡುತ್ತೇನೆ. ತೊಡೆನು–(ನಾನು) ತೊಡುವುದಿಲ್ಲ, ಹೂಡುವುದಿಲ್ಲ. ಕವಲಾಗು–ಎರಡಾಗು, ತಪ್ಪಿಹೋಗು. ಘಾತಿ–ಹೊಡೆತ].

೧೬೪. [1]ಳಲಾ ಮದ್ರೇಶ (ಕುಮಾ). [2]ತೆ (ಅ).
[ಮರಳಿದ–ಹಿಂದಿರುಗಿದ].

೧೬೫. [1]ಡದಲಿ (ಅ ಕುಮಾ). [2]ನು (ಅ ಕುಮಾ). [3]ಹಾಲಾಹಲದ (ಅ).
[ವ್ಯತಿಕರ–ಸಂದರ್ಭ, ಸನ್ನಿವೇಶ. ಅಂಡಲೆ–ಕಾಡು, ಪೀಡಿಸು. ಸಘಾಡಿಕೆ–ಅಧಿಕ್ಯ, ಹೆಚ್ಚಳ. ಚಂಡಿ–ಹಟಮಾರಿ. ಆಖಂಡಲಾತ್ಮಜ–ಇಂದ್ರನ ಮಗ (ಅರ್ಜುನ)].

ಇವನ ಬಲ್ಲೈ ಪಾರ್ಥ ಚಕ್ಷು-
ಶ್ರವ[1]ನ ಸುತ[1] ತಕ್ಷಕನ ಮಗ ಖಾಂ-
ಡವದ ಬೇಳಂಬದಲಿ ಬದುಕಿದ ತಲೆ[2]ಯುನ[2]ಡಹಾಯ್ದು ।
ಇವನ ಮೂಡಿಗೆಯೊಳಗೆ ಶರವಾ-
ಯ್ತಿವನು ತಾನೇ ಮರಳಿದನು ನೀ-
ನವಧರಿಸಿಕೊಳ್ಳೆಂದು ನುಡಿದನು [3]ಕೃಷ್ಣನರ್ಜುನನ[3] || ೧೬೬ ||

ಆ[1]ಗಳಿ[1]ಳಿದುದು ಸರ್ಪಶರ ತಾ-
ನಾಗಲೇ ಕುರುರಾಜಭುಜವನು
ನೀಗಿದಳು ಜಯವಧು ಧರಾವಧು ಭಾಗ್ಯವಧು[2]ವೆಂದು[2] ।
ಆಗಲೇ ಬಿನ್ನೈ[3]ಸೆನೇ[3]ರಣ-
ದಾಗುಹೋಗಿನ ಹೊಱಿಗೆಯನು ತಾ
ನೀಗಿ ಬಿಸುಟನು ತನ್ನ ಸತ್ಯಸ್ಥಿತಿಗೆ ಕಲಿಕರ್ಣ || ೧೬೭ ||

ಅದೊಡೇನದು ಮತ್ತೆ ಕರ್ಣನ
ಕೈದುಕಾಱತನಕ್ಕೆ ಸುಭಟರು
ಮೇದಿನಿಯುಲಾರುಂಟು [1]ಪಡಿ[1] ದೈವಾಭಿಮುಖವುಳಿಯೆ ।
ಹೋದೆ ಹೋಗಿನ್ನೆನುತ ಕಣೆಗಳ-
[2]ನಾದರಿಸಿ[2] ತನಿವೀರರಸದಲಿ
ಕೇದು [3]ಚಿತ್ರ[3]ವ ಬರೆದನರ್ಜುನನಂಗಭಿತ್ತಿಯಲಿ || ೧೬೮ ||

---

೧೬೬. [1]ನಿವನು (ಅ ಕುಮಾ). [2]ಯೊಳ (ಅ ಕುಮಾ). [3]ದೈತ್ಯರಿಪುನಗುತ (ಅ ಕುಮಾ).
[ಚಕ್ಷುಶ್ರವ–ತಕ್ಷಕನ ಮಗ. ಬೇಳಂಬ–ಆಹುತಿ. ಮೂಡಿಗೆ–ಬತ್ತಳಿಕೆ. ಅವಧರಿಸಿಕೊಳ್ಳು–ಮನಸ್ಸಿಟ್ಟು ಕೇಳು, ಆಲಿಸು].

೧೬೭. [1]ಳ (ಅ ಕುಮಾ). [2]ಸಹಿತ (ಅ ಕುಮಾ). [3]ಸ (ಅ).
[ಆಗುಹೋಗು–ಜಯಾಪಜಯ, ಲಾಭ ನಷ್ಟ. ಹೊಱಿಗೆ–ಹೋರಾಟ, ಸ್ಪರ್ಧೆ, ಹೊರೆ, ಹೊಣೆ. ನೀಗು–ಕಳೆದುಕೊ].

೧೬೮. [1]ಫಡ (ಅ). [2]ಸಾದುಗಳ (ಅ ಕುಮಾ). [3]ಚಿತ್ರ (ಅ).
[ಕೈದುಕಾಱತನ–ಆಯುಧ ಪ್ರಯೋಗ ಕೌಶಲ. ಪಡಿ–ಪ್ರತಿ. ದೈವಾಭಿಮುಖ–ದೈವ ತನ್ನಕಡೆಗಿರುವುದು, ದೈವಕೃಪೆ. ಉಳಿ–ಬಿಟ್ಟುಹೋಗು. ಅಂಗಭಿತ್ತಿ–ದೇಹವೆಂಬ ಗೋಡೆ].

ಬಾಯುಬಡಿಕನಲಾ ವೃಥಾ ರಾ-
ಧೇಯ ಮದವೇಕಿನ್ನು ನಿನಗಹಿ-
ಸಾಯಕದ [1]ಸಾವಿ[1]ನಲಿ ನೀರಿಳಿಸುವೆನು ನೆತ್ತರಲಿ ।
ತಾಯ ಬಸುಱಿಂಬಿಲ್ಲ ನೀನುಳಿ-
ವಾಯತಿಕೆ ಯಿನ್ನೆಂತು ಕೌರವ-
ರಾಯ ನೋಡಲಿ ಕರೆ ಯೆನುತ ತೆಗೆದೆಚ್ಚನಾಪಾರ್ಥ ॥ ೧೬೯ ॥

ಧರೆ ನೆನೆದ ದುಷ್ಕೃತವದೇನೆಂ-
ದರಸ ಬೆಸಗೊಂಬೈ ನಿರಂತರ
ಸುರಿವ ರುಧಿರಾಸಾರದಲಿ ಕೆಸಱಿದ್ದು ಕಳನೊಳಗೆ ।
ಹರಿವ ಬಿಂಕದ ರಥದ ಗಾಲಿಯ
ಗರುವತನ ಗಾಳಾಯ್ತುಲೇ ಖೊ-
ಪ್ಪರಿಸಿ ತಗ್ಗಿತು ತೇರು ತಡೆದುದು ಭಟನ ಸಾಹಸವ ॥ ೧೭೦ ॥

*ದುರುಳದುರ್ಯೋಧನನ ನಿಖಿಳೈ-
ಶ್ವರಿಯವಿಳೆಗದ್ದಂತೆ ಕರ್ಣನ
ತುರಗಸಹಿತವನಿಯೊಳಗದ್ದುದು ತೇರು ಕುಕ್ಕಱಿಸೆ ।
ಕೆರಳಿ [1]ಕಂಬಿ[1]ಯ ಸೆಳೆದು ವಾಘೆಯ
ತಿರುಹಿ ಚಪ್ಪರಿಸಿದರೆ ಸತ್ವದ-
ಲುರವಣಿಸಿ ತಲೆವಾಗಿ ಜವಗುಂದಿದವು ತೇಜಿಗಳು ॥ ೧೭೧ ॥

---

೧೬೯. [1]ಸಾಲಿ (ಅ).
[ಮದ–ಗರ್ವ. ಅಹಿಸಾಯಕ–ಸರ್ಪಾಸ್ತ್ರ. ನೀರಿಳಿಸ ವೆನು ನೆತ್ತರಲಿ–ಧಾರಾಕಾರವಾಗಿ ರಕ್ತವನ್ನು ಸುರಿಸಿಬಿಡುತ್ತೇನೆ (?). ಬಸುಱಿಂಬಿಲ್ಲ–ಬಸುರಿನಲ್ಲಿ (ಹೊಟ್ಟೆಯಲ್ಲಿ) ಅವಕಾಶವಿಲ್ಲ. ಉಳಿವ–ಬದುಕುವ. ಆಯತಿಕೆ–ಅವಕಾಶ (?).

೧೭೦. [ದುಷ್ಕೃತ–ಕೆಟ್ಟಕೆಲಸ, ಅಪಕಾರ ರುಧಿರಾಸಾರ–ರಕ್ತದ ಮಳೆ, ಸುರಿತ. ಗಾಳಾಗು–ಹಾಳಾಗು. ಖೊಪ್ಪರಿಸು–ಹೆಚ್ಚು, ಮಿತಿಮೀರು].

೧೭೧. [1]ಕಬ್ಬಿ (ಅ).
[ಕಂಬಿ(=ಕಬ್ಬಿ)–ಕಡಿವಾಣ. ಜವಗುಂದು–ವೇಗವನ್ನು ಕಳೆದುಕೊ].

---

* 'ಅ' ಪ್ರತಿಯಲ್ಲಿ ಅಧಿಕ ಪದ್ಯವೆಂದು ಪರಿಗಣಿಸಲಾಗಿದೆ.

ಮೂಗಿನಲಿ ಬೆರಳಿಟ್ಟು ಮುಕುಟವ
ತೂಗಿ ಕೊನೆದನು [1]ಭಾವು ವಿಧಿ[1] ನಿ-
ರ್ಭಾಗಧೇಯನು ರಾಯನಕಟಾ ಶಿವಮಹಾದೇವ ।
ಈಗಲಿದು ತಾನೇನ ವಿಧಿಬರೆ-
ದೋಗಟೆಯೋ ಕುರುವಂಶವಜ್ರದ
ಬೇಗಡೆಯೊ ಮಾಮಾ ಯೆನುತ ಮರುಗಿದನು ಕಲಿಕರ್ಣ ॥ ೧೭೨ ॥

ಶಿವನ ಬಲುಹುಂಟೆಂಬೆನೇ ಶಿವ-
ನವರ ಕಡೆ ಹರಿಯೆಂಬೆನೇ ಪಾಂ-
ಡವರ ಬಂಡಿಯ ಬೋವನಿಂದ್ರಾದ್ಯರು ಸಹಾಯಿಗಳು ।
ಅವರು ಸಾಕ್ಷಾತ್ತರ್ಜುನರು ನ-
ಮ್ಮವನಿ ನಮಗುಂಟೆಂ[1]ಬೆ[1]ನೇ ಕೌ-
ರವನ ಪುಣ್ಯ[2]ವಿದೇ ಯೆನುತ ಮರುಗಿದನು ಕಲಿಕರ್ಣ[2] ॥ ೧೭೩ ॥

ಇಳುಹಿದನು ರಥದೊಳಗೆ ಚಾಪವ-
ನಳವಡಿಸಿದನು ಸೆರಗನಲ್ಲಿಂ-
ದಿಳಿದು ಗಾಲಿಯನಲುಗಿ ಪಾರ್ಥನ ನೋಡಿ ನಸುನಗುತ ।
ಎಲೆ ಧನಂಜಯ ಸೈರಿ[1]ಸಿನ್ನರೆ-
ಗಳಿಗೆಯಲಿ[1] ರಥವೆತ್ತಿ ನಿನಗಾ-
ನಳವಿಗೊಡುವೆನು ನನ್ನ ಪರಿಯನು ಬಳಿಕ ನೋಡೆಂದ ॥ ೧೭೪ ॥

---

೧೭೨. [1]ಪೂತು ಮಝು (ಅ).

[ನಿರ್ಭಾಗಧೇಯ-ನಿರ್ಭಾಗ್ಯದವನು, ದುರದೃಷ್ಟಶಾಲಿ. ಓಗಟೆ-ಒಗಟು. ಬೇಗಡೆ-ವೆಜ್ಜ, ರಂಧ್ರ].

೧೭೩. [1]ಬ (ಅ). [2]ವನ. [3]ಯೆನಿದು ಹದನೆಂದನಾ ಕರ್ಣ (ಅ ಕುಮಾ).

[ಬಂಡಿಯ ಬೋವ-ಬಂಡಿ ಹೊಡೆಯುವವನು (ಸಾರಥಿ)].

೧೭೪. [1]ಸುವುದರೆಗಳಿಗೆಯನು (ಅ ಕುಮಾ).

[ಅಳವಿಗೊಡು-ಸಾಮರ್ಥ್ಯವನ್ನು ತೋರಿಸು].

ರೂಢಿಸಿದ ಭಟ ನೀನು ಪಂತದ
ಪಾಡುಗಳ ನೀ ಬಲ್ಲೆ ಶಾಸ್ತ್ರವ
ಖೋಡಿಗಳೆವವನಲ್ಲ ವೈದಿಕಲೌಕಿಕಸ್ಥಿತಿಯ ।
ನಾಡೆ ಬಲ್ಲಿರಿ ಶಸ್ತ್ರಹೀನರ
ಕೂಡೆ ವಾಹನ[1]ರಹಿತ[1]ರಲಿ ಕೈ-
ಮಾಡಲನುಚಿತವೆಂಬ ಮಾರ್ಗವನೆಂದನಾ ಕರ್ಣ ॥ ೧೭೫ ॥

ಎನುತ ಗಾಲಿಯನಲುಗಿ ಕೀಲ-
ಚ್ಚಿನಲಿ ಮುಂಗೈಗೊಟ್ಟು ಪೊಳಕಾ-
ಲಿನಲಿ ಧರಣಿಯನೌಕಿ [1]ಮು[1]ಗ್ಗಿದ ರಥವ ನೆಗಹುತಿರೆ ।
ದನುಜರಿಪು ಚಮ್ಮಟಿಕೆಯಲಿ ಫಲು-
ಗುಣನ ತಿವಿದನು ನೋಡು ರಾಧಾ-
ತನುಜನಿರವನು ಬೇಗ ಮಾಡೆಂದರ್ಜುನನ ಜಱಿದ ॥ ೧೭೬ ॥

ಎಸೆ ಮರುಳೆ ಗಾಂಡೀವಿ ಆಪ-
ತ್ತೆಸಗಿದಾಗಳೆ ಹಗೆಯ ಗೆಲುವುದು
ವಸುಮತೀಶರ ನೀತಿ ತೊಡು ತೊಡು ದಿವ್ಯಮಾರ್ಗಣವ ।
ವಿಷಮವೀರನು ರಥವ ಮೇಳಾ-
ಪಿಸದ ಮುನ್ನವೆ ಹಱುವ ನೆನೆ [1]ನೀ-
[ನೊ[1]ಸೆದು ಏಱಿದ ಬಳಿಕ[1] ಕೈಕೊಂಬನೆ ತ್ರಿಯಂಬಕನ ॥ ೧೭೭ ॥

---

೧೭೫. [1]ಹೀನ (ಅ ಕುಮಾ).

[ರೂಢಿಸಿದ-ಪಳಗಿದ, ಅನುಭವ ಹೊಂದಿದ. ಪಂತದಪಾಡು-ಹೋರಾಟದ ಸ್ಥಿತಿ-ಗತಿ, ನಿಯು..ು. ಖೋಡಿಗಳೆ-ತಿರಸ್ಕರಿಸು, ಹೀಯಾಳಿಸು. ನಾಡೆ-ಚೆನ್ನಾಗಿ].

೧೭೬. [1]ತ (ಅ ಕುಮಾ).

[ಮುಗ್ಗು-ಹೂತುಹೋಗು, ತಗ್ಗು. ನೆಗಹು-ಮೇಲಕ್ಕೆ ಎತ್ತು. ಚಮ್ಮಟಿಕೆ-ಚಾವಟಿ, ಬಾರುಕೋಲು. ಇರವು-ಸ್ಥಿತಿ].

೧೭೭. [1]ಸೈರಿಸಿದ ಬಳಿಕೀ ಕರ್ಣ (ಅ ಕುಮಾ) *ವೊ (ಅ).

[ಎಸೆ-ಬಾಣಪ್ರಯೋಗ ಮಾಡು. ಎಸಗು-ಬರು, ಕಾಣಿಸಿಕೊ. ವಿಷಮವೀರ-ಅಸಮಾನ ಶೂರ. ಮೇಳಾಪಿಸು-ಜೋಡಿಸು, ಸರಿಪಡಿಸು. ಹಱುವ-ತೀರ್ಮಾನವನ್ನು. ಒಸೆ-ನಿಶ್ಚಯಿಸು, ನಿರ್ಧಾರ ಮಾಡು. ಏ..ು-ಉತ್ಸಾಹಗೊಳ್ಳು. ಕೈಕೊಂಬನೆ-ಎದುರಿಸಲಾರನೆ ಎಂದರೆ ಎದುರಿಸಿಯೇ ತೀರುತ್ತಾನೆ. ತ್ರಿಯಂಬಕ-ಈಶ್ವರ].

ಮುಕ್ಕಿದನು ಮಹಿಮೆಯನು [1]ಕಣ್ಣಲಿ
ಮುಕ್ಕುಳಿಸಿದನು[1] ನೀರನಹಿತನೊ-
[2]ಳುಕ್ಕಿದನು[2]ರಾಗದಲಿ ಕೊಂಡನು ಬಳಿಕ ವೀಳೆಯವ ।
ಸಿಕ್ಕಿದನು ಕರುಣಾಲತಾಂಗಿಯ
ತೆಕ್ಕೆಯಲಿ ನಾನೇನ ಹೇಳುವೆ-
ನೊಕ್ಕಲಿಕ್ಕಿತು ಶೋಕವರ್ಜುನನಂತರಂಗದಲಿ ॥ ೧೭೮ ॥

ತೇರಿನಲಿ ಚಾಚಿದನು ಮೆಲ್ಲನೆ
ಭಾರಿಧನುವನು ಕೈಯ ಕಣೆಗಳ
ಸೋರೆಯಲಿ ಸೈ[1]ತಿರಿಸಿ[1] ಕಂಡನು ಮತ್ತೆ ಮುರವೈರಿ ।
ಹಾರವೇಕೈ ಕಂಗಳಲಿ ಕ-
ಸ್ತೂರಿಯೇಕೈ ಕದಪಿನಲಿ ಶೃಂ-
ಗಾರವಿದು ವಿಪರೀತವೇ[2]ನೆಲೆ[2] ಪಾರ್ಥ ಹೇಳೆಂದ ॥ ೧೭೯ ॥

ದೇವ ಹಗೆಯಾಗಿರನು ಕರ್ಣ[1]ನ-[1]
ದಾವ ಹದನೆಂದರಿಯೆ ಮನದಲಿ
ನೋವು ಮಿಗು[2]ತಿದೆ[2] ಕೈಗಳೇಳವು ತುಡುಕುವೊಡೆ ಧನುವ ।
ಜೀವ[3]ವಾ[3]ತನ ಮೇಲೆ ಕರಗುವು-
ದಾವಸಖನೋ ಶತ್ರುವೆಂಬೀ
ಭಾವನೆಯು ಬಗೆ ಬೀಳುಕೊಂಡುದು ಕರ್ಣನಾರೆಂದ ॥ ೧೮೦ ॥

---

೧೭೮. [1]ಕಂಗಳು ಮುಕ್ಕುಳಿಸಿದವು (ಅ ಕುಮಾ). [2]ಳುಕ್ಕುವನು (ಅ ಕುಮಾ).
[ಮುಕ್ಕು–ನುಂಗಿಕೊ. ಮುಕ್ಕುಳಿಸು–ಸುರಿಸು. ಅಹಿತ–ಶತ್ರು. ತೆಕ್ಕೆ–ಆಲಿಂಗನ. ಒಕ್ಕಲಿಕ್ಕು–ನೆಲಸು].

೧೭೯. [1]ರಿಸಲು (ಅ). [2]ನೈ (ಅ ಕುಮಾ).
[ಓರೆ–ಪಕ್ಕ. ಸೈತಿರಿಸು–ಸುಮ್ಮನಿರಿಸು. ಹಾರ–ಕಂಬನಿ. ಕದಪು–ಕೆನ್ನೆ. ವಿಪರೀತ–ವ್ಯತಿರಿಕ್ತವಾದದ್ದು].

೧೮೦. [1]ನಿ (ಅ ಕುಮಾ). [2]ವುದು (ಅ ಕುಮಾ). [3]ವೀ (ಅ ಕುಮಾ).
[ಮಿಗು–ಹೆಚ್ಚು. ತುಡುಕು–ಹಿಡಿದುಕೊ. ಬೀಳುಕೊಂಡುದು–ಹೊರಟು ಹೋಯಿತು].

*ಈತನೀ ಭವದಲ್ಲಿಯೊಡವಂ-
ದಾತನೊ ಮೇಣ್ ಪೋದ ಜನ್ಮದ-
ಲೀತನೊಡವಂದಾತನೋ ಮೇಣೆನ್ನ ಸಂದೇಹ ।
ಮಾತಿನಲಿ ಮನದಲ್ಲಿ ಗುಣದಲಿ
ನೀತಿಯಲಿ ಸತ್ವಾತಿಶಯದಲಿ
ಸೂತಕುಲದವನಲ್ಲ ಕರ್ಣನದಾರು ಹೇಳೆಂದ ॥ ೧೮೧ ॥

ಕೌರವನ ಮೇಲಿಲ್ಲ[1]ದ[1]ಗ್ಗದ
ವೈರವೀತನ ಮೇಲೆ ನಮಗಪ-
ಕಾರಿ[2]ಯಾ[2]ತನು ಮರಣ[3]ದ[3]ನುಸಂಧಾನವಿ[4]ನ್ನೆ[4]ಬರ ।
ವೈರವುಪಶಮಿಸಿತು ಯುಧಿಷ್ಠಿರ
ವೀರನಿಂದಿಮ್ಮಡಿಯ ನೇಹದ
ಭಾರವಣೆ ತೋರುವುದಿದೇಸೈ ಕರ್ಣನಾರೆಂದ ॥ ೧೮೨ ॥

ಧರೆಯ [1]ಬಿಡುವೆವು[1] ಕುರುಪತಿಗೆ ನಾ-
ವರುವರೊಡಹುಟ್ಟಿದರು ವಿಪಿನಾಂ-
ತರದೊಳಗೆ ಭಜಿಸುವೆವು ನಿಮ್ಮನು ಭಾವಶುದ್ಧಿಯಲಿ
ತೆರಳುವೀಸಿರಿಗೋಸುಗವು ಸೋ-
ದರನ ಕೊಲುವೆನೆ ಕೃಷ್ಣ ಕರುಣಿಸು
ಕರುಣಿಸಕಟಾ ಕೃಷ್ಣ [2]ಕರುಣಿಸು[2] ಕರ್ಣನಾಗೆಂದ ॥ ೧೮೩ ॥

---

೧೮೧. [ಭವ-ಜನ್ಮ. ಒಡವಂದಾತ-ಒಡಹುಟ್ಟಿದವನು].

೧೮೨. [1]ವ (ಅ). [2]ಯಾ (ಅ). [3]ವ (ಅ). [4]ನ್ನ (ಅ).
[ಅಗ್ಗದ-ವಿಶೇಷವಾದ, ಹೆಚ್ಚಾದ. ಅನುಸಂಧಾನ-ಏರ್ಪಾಡು, ಸಿದ್ಧತೆ. ಇನ್ನೆಬರ-ಇಲ್ಲಿಯವರೆಗೆ. ಉಪಶಮಿಸು-ಶಾಂತವಾಗು, ತಣ್ಣಗಾಗು. ನೇಹ-ಸ್ನೇಹ, ಪ್ರೀತಿ. ಭಾರವಣೆ-ಒತ್ತಡ].

೧೮೩. [1]ಬಿಟ್ಟೆವು (ಅ). [2]ಹೇಳೈ (ಅ).
[ವಿಪಿನ-ಕಾಡು. ಭಜಿಸು-ಸೇವಿಸು. ತೆರಳುವ-ಹೊರಟುಹೋಗುವ, ಅಶಾಶ್ವತವಾದ ಸಿರಿ-ಸಂಪತ್ತು].

---

* ಈ ಪದ್ಯವು ಅ ಮತ್ತು ಕುಮಾ ಪ್ರತಿಗಳಲ್ಲಿಲ್ಲ. ಪೇಟೆ ಪ್ರತಿಯಲ್ಲಿ ಇದೆ.

ಅರಸ ಕೇಳೈ ಬಳಿಕ ಪಾರ್ಥನ
ಕರುಣರಸ[1]ಧಾರೆಗಳ[1] ವಾಗ್ವಿ-
ಸ್ತರಕೆ ಮನದಲಿ ಮಱುಗಿದನು ಮುರವೈರಿ ನಸುನಗುತ ।
ಕೆರಳಿದನು ಮಾತಿನಲಿ ಸುಡು ಬಾ-
ಹಿರನಲಾ ನೀ ನಿನ್ನ ವಂಶಕೆ
ಸರಿಯೆ ಸೂತ[2]ಜನೆಂದು ಮುರರಿಪು ಜಱೆದನರ್ಜುನನ[2] ॥ ೧೮೪ ॥

ಕ್ಷಿತಿಯೊ[1]ಳಗೆ[1] ಕ್ಷತ್ರಿಯರ ಧರ್ಮ-
ಸ್ಥಿತಿಯನಱಿಯಾ ಕೃಷ್ಣ ಚಾಪ-
ಚ್ಯುತರನಪಗತವಾಹನರ ಪರಿಮುಕ್ತಕೇಶಿಗಳ ।
ಗತಿವಿಹೀನರ ದೈನ್ಯವಾಚಾ-
ಯುತರ [2]ತರುವಲ್ಮೀಕ[2] ಜಲಸಂ-
ಗತರನಿಱಿವುದು ಧರ್ಮವೇ ನಾವಱಿಯೆವಿದನೆಂದ ॥ ೧೮೫ ॥

ಹೇಳು ಹೇಳಿನ್ನೊಮ್ಮೆ ಧರ್ಮವ
ಕೇಳಿದಱಿಯೆವು ನಿನ್ನ ಕೈಯಲಿ
ಕೇಳಲಾಗದೆ ರಾಜಧರ್ಮ ಪುರಾಣಸಂಗತಿಯ ।
[1]ಆಳುತನದಾಟವ[1] ದೊಠಾರಿಸಿ
ಸೋಲಿಸುವುದೇನರಿದೆ ಬಲುಗೈ-
ಯಾಳಲಾ ದಿಟ ರಣಕೆ ನೀ ವಸುದೇವನಾಣೆಂದ ॥ ೧೮೬ ॥

---

೧೮೪ [1]ಪಾಳಾಪ (ಅ ಕುಮಾ). [2]ನಮಗಿನ್ನಿದೇನೆಂದಸುರರಿಪು ಜಱೆದ (ಅ ಕುಮಾ).
[ವಾಗ್ವಿಸ್ತರ-ವಿಸ್ತಾರವಾದ ಮಾತುಗಾರಿಕೆ ಬಾಹಿರ-ಪರಕೀಯ, ಹೊರಗಿನವನು ಸೂತಜ-ಸೂತಪುತ್ರ, ಕರ್ಣ].

೧೮೫. [1]ಳೀ (ಅ ಕುಮಾ). [2]ವಲ್ಮೀಕತರು (ಅ).
[ಚಾಪಚ್ಯುತರು-ಬಿಲ್ಲನ್ನು ಕೆಳಗಿಟ್ಟವರು. ಅಪಗತವಾಹನರು-ರಥದಿಂದಿಳಿದವರು ಪರಿಮುಕ್ತ ಕೇಶಿಗಳು-ಕೂದಲನ್ನು ಬಿಚ್ಚಿ ಇಳಿಬಿಟ್ಟುಕೊಂಡವರು. ಗತಿವಿಹೀನರು ಗತಿಯಿಲ್ಲದವರು ದೈನ್ಯವಾಚಾಯುತರು-ದೀನತೆಯ ಮಾತುಗಳನ್ನಾಡುವವರು ತರುವಲ್ಮೀಕ ಜಲಸಂಗತರು-ಮರ ಮತ್ತು ಹುತ್ತವನ್ನು ಏರಿದವರು ಮತ್ತು ನೀರಿನಲ್ಲಿ ಇಳಿದವರು ಇಱಿ-ಕೊಲ್ಲು]

೧೮೬. [1]ಅಳಿವನಘಾಟವ (ಅ ಕುಮಾ).
[ಕೇಳಿದು ಕೇಳಿ. ಆಳುತನದಾಟ-ಶೌರ್ಯದ ವಿನೋದ. ದೊಠಾರಿಸು-ಗರ್ವದಿಂ ಮೆರೆ. ಅರಿದೆ-ಅಸಾಧ್ಯವೆ? ಬಲುಗೈಯಾಳು-ಪರಾಕ್ರಮಶಾಲಿ].

¹ಈಗಳೀಧರ್ಮಶ್ರವಣ¹ ನೀ-
ನಾಗಳೇಕೆಸಿ ನುಡಿದ ಧಾಟಿ²ಯು²
ಮೂಗು ತೋರ³ದೆ³ ಮುಚ್ಚಿದಲಾ ಪಾತಕಗಳು ⁴ಹಳಸುವವೆ⁴ ।
ಹೋಗಲಿಲ್ಲಿ ಮರುಳೇ ವಿಭಾಡಿಸು
ಬೇಗದಲಿ ಬಹುರಾಜಕಾರ್ಯವ-
ನೀಗಲೇ ⁵ತಿದ್ದುಸುವೆ⁵ ಕೊಲುಗನು ಹೊಕಳಜನ ಶಿರವ ॥ ೧೮೭ ॥

ಅಕಟ ನಿಮ್ಮ ರುಚಿಯು ವೃಥಾ ಪಾ-
ತಕವಿದೇಕೈ ¹ನಿನಗೆ¹ ಜಯಕಾ-
ಮುಕನು ²ನಾವ್ ಕೊಲ್ಲದೊಡೆ² ನಿನಗೇಕೀಸುನಿರ್ಬಂಧ ।
ಪ್ರಕಟಕುರುವಂಶದಲಿ ಯದುರಾ-
ಜಕ³ದೊಳಗೆ³ ಹಗೆಯಿಲ್ಲಲೇ ಮತಿ-
ವಿಕಳನಾದೆನು ಕೃಷ್ಣ ಕರ್ಣನ ಕೊಲುವನಲ್ಲೆಂದ ॥ ೧೮೮ ॥

ಬಿಸುಟು ಹೋದನು ರಥವ ಸಾರಥಿ
ವಸುಧೆಯೊಳು ತೇರದ್ದಿ ಕೆಡೆದುದು
ನಿಶಿತಮಾರ್ಗಣವಿಲ್ಲ ಕೈಯಲಿ ದಿವ್ಯಧನುವಿಲ್ಲ ।
ಎ¹ಸುವೊಡೆ¹ಂತೆಳಸುವುದು ಕೈ ಸೀ
ಬೆಸಸುವೊಡೆ ಮನವೊತ್ತು ಬಂದುದು
ಬಸುಱಕಿಚ್ಚಿ ಬಲುಹಾಯ್ತು ಕರ್ಣನ ಕೊಲುವನಲ್ಲೆಂದ ॥ ೧೮೯ ॥

---

೮೭. ¹ಈಗ ಧರ್ಮಶ್ರವಣವಿದು (ಅ). ²ಗೆ (ಅ ಕುಮಾ) ³ದು (ಅ). ⁴ಹೆಚ್ಚುವರೆ (ಅ). ⁵ತಿದ್ದುವೆನು (ಅ ಕುಮಾ).

[ಮೂಗು ತೋರು–ಪ್ರಾಮುಖ್ಯವು ಹೊರಟುತೋರು. ಹಳಸು–ಹಳೆಯದಾಗು. ವಿಭಾಡಿಸು–ನಾಶಮಾಡು. ತಿದ್ದುಸು–ಸರಿಪಡಿಸು].

೮೮. ¹ಹೇಳು (ಅ ಕುಮಾ). ²ನಾವೊಲ್ಲದಡೆ (ಅ ಕುಮಾ). ³ದೊಳಗೆ (ಅ ಕುಮಾ).

[ಜಯಕಾಮುಕನು–ಜಯವನ್ನು ಬಯಸುವವನು. ಈಸು–ಇಷ್ಟು. ನಿರ್ಬಂಧ–ಬಲಾತ್ಕಾರ. ಪ್ರಕಟ–ಪ್ರಸಿದ್ಧವಾದ. ರಾಜಕ–ರಾಜವಂಶ. ಮತಿವಿಕಳನು–ಬುದ್ಧಿಭ್ರಮೆ ಹೊಂದಿದವನು].

೮೯. ¹ಎಸೆಯಲೆಂ (ಅ).

[ಅದ್ದಿ–ಮುಳುಗಿಹೋಗಿ. ಕೆಡೆ–ಬೀಳು. ನಿಶಿತಮಾರ್ಗಣ–ಹರಿತವಾದ ಬಾಣ. ಬೆಸಸು–ಅಪ್ಪಣೆಮಾಡು. ಬಸುಱಕಿಚ್ಚು–ಹೊಟ್ಟೆಯ ಬೆಂಕಿ, ತಳಮಳ. ಬಲುಹು–ಹೆಚ್ಚು].

ಗುರುವನೆಸುವೊಡೆ ಮೇಣು ಭೀಷ್ಮರ
ಸರಳು[1]ಮಂಚಕೆ[1] ಚಾಚುವೊಡೆ ಧಿ-
ಕ್ಕರಿ[2]ಸಿದೆನೆ[2] [3]ಕುರುಪತಿಯ ಶಕುನಿಯ ಶಲ್ಯಸೈಂಧವರ[3] ।
[4]ಕೆರಳಿಚಲು[4] ತೇರೈಸಿದೆನೆ [5]ಹಾ
ಮುಱುಗಿ[5]ದೆನೆ [6]ಕರ್ಣನಲಿ[6] ಕಲಿತನ
ಕರಗಿತೇನೆಂದಱಿಯೆ ಕರ್ಣನ ಕೊಲುವನಲ್ಲೆಂದ ॥ ೧೯೦ ॥

ಎಲೆ ಧನಂಜಯ [1]ನೀನು[1] ಹಿಮಕರ-
ಕುಲದ ಸುಕುಮಾರಕನು ಲೋಕದ
ಕುಲವಿಹೀನನು ಕರ್ಣ[2]ನಿ[2]ವ ನಿನಗೆಂತು ಸರಿಯಹನು ।
ತಲೆಯ ಮಾಱಿ ಶರೀರವನು ನೆಱಿ
ಸಲಹಲೋಸುಗ ಕೌರವನ ತಂ-
ಬುಲಕೆ ಕೈಯಾಂತವನು ಬಂಧುವೆ ಪಾರ್ಥ ಹೇಳೆಂದ ॥ ೧೯೧ ॥

[1]ಕಾಡಿನೆಡೆಯೊಳು[1] ನಿಮ್ಮ ಬೇಂಟೆಯ-
ನಾಡಿ[2]ಸಿದನಿವ[2] ಜೂಜನಾಡಿಸಿ
ನಾಡ ಕೊಳಿಸಿದ ಹಿಸುಣನಿವ ನಿಮ್ಮೆಲ್ಲರನು ಕೆಡಿಸಿ ।
ನಾಡ ಸಂಧಾನವನು ನಾವ್ ಮಾ-
ತಾಡಲೆಮ್ಮನು ಬಿಗಿಯಲನುವನು
ಮಾಡಿ[3]ಸಿದ[3]ನೀ ಕರ್ಣ ನಿ[4]ನ[4]ಗತಿಹಿತವನಹನೆಂದ ॥ ೧೯೨ ॥

---

೧೯೦ [1]ತಡಿಕೆಗೆ (ಅ ಕುಮಾ). [2]ಸುವಡೆ (ಅ ಕುಮಾ). [3]ಕೃಪಶಲ್ಯಸೈಂಧವ ಮುಖ್ಯ ಬಾಂಧವರ (ಅ ಕುಮಾ). [4]ತೆರಳಿದೆನೆ (ಅ ಕುಮಾ). [5]ಹೇಸರಿಸಿ (ಅ ಕುಮಾ). [6]ಹೋರಿದೆನೆ (ಅ ಕುಮಾ).

[ಕೆರಳಿಚು-ರೇಗಿಸು, ಉದ್ರೇಕಗೊಳಿಸು. ತೇರೈಸು-ಹಿಮ್ಮೆಟ್ಟು, ಹಿಂಜರಿ].

೧೯೧. [1]ವಿಮಲ (ಅ). [2]ನ (ಅ).

[ಹಿಮಕರಕುಲ-ಚಂದ್ರವಂಶ. ತಂಬುಲ-ಎಂಜಲು. ಕೈಯಾನು-ಕೈಯೊಡ್ಡು].

೧೯೨. [1]ಕೇಡಹೊತ್ತಿಸಿ (ಅ ಕುಮಾ). [2]ದವ (ಅ). [3]ದವ (ಅ). [4]ಮ (ಅ ಕುಮಾ).

[ಹಿಸುಣ-ಚಾಡಿಕೋರ. ಬಿಗಿಯಲನುವನು-ಕಟ್ಟಿಹಾಕಲು ಸಿದ್ಧತೆಯನ್ನು. ಹಿತವನಹನು-ಬೇಕಾದವನು, ಹಿತ ಕೋರುವವನು, ಆಗುತ್ತಾನೆ].

ಕೊಲ್ಲನೇ ಅಭಿಮನ್ಯುವನು ಹಗೆ-
ಯಲ್ಲವೇ ಮಾರುತಿಯು ಕೊರಳನು
ಬಿಲ್ಲ ಕೊಪ್ಪಿನಲೆಳೆಯನೇ ಕೆಡೆಯೆಸನೆ ಧರ್ಮಜನ ।
[1]ಖುಲ್ಲ[1] ನೀತಿ[2]ಯು[2] ನೆನೆಯದಿರು ನೀ-
ನೆಲ್ಲಿಯುವನಿವ ವೈರಿ ಕರ್ಣನ-
ದೆಲ್ಲಿಯುವನೆಸು ಮರುಳೆ ಯೆಂದನು ನಿಜವ ತೋಱಿಸದೆ ॥ ೧೯೩ ॥

ಬೀಸಿದನು ನಿಜಮಾಯೆಯನು ಡೊ-
ಳ್ಳಾಸದಲಿ ಹರಹಿದನು ತಮವನು
ರೋಪವನು ಬಿತ್ತಿದನು ಮನದಲಿ ನರನ ಕಲಿಮಾಡಿ ।
ಐಸೆ ಬಳಿ[1]ಕೇನೆನ್ನ[1]ವಿಲಗುಣ-
ದೋಷ ನಿನ್ನದು ಪುಣ್ಯಪಾಪದ
ವಾಸಿ [2]ನಮ[2]ಗೇಕೆನುತ ಕೊಂಡನು ಧನುವನಾಪಾರ್ಥ ॥ ೧೯೪ ॥

ಹಿಡಿ ಧನುವನನುವಾ[1]ಗು[1] ಸಾಕಿ-
ನ್ನೆಡಬಲನ ಹಾರದಿರೆನುತ ಕೈ-
ಗಡಿಯ[2]ಲೆ[2]ಚ್ಚನು ನೂಱುಶರದಲಿ ಸೂತನಂದನನ ।
ತೊಡಗಿತೇ ಕಕ್ಕುಲಿತೆ ಮನದಲಿ
ಫಡ ಯೆನುತ ನೂಱಿಂಬನೆಡೆಯಲಿ
ಕಡಿದು ಬಿಸುಟನು ಸೆಳೆದು ಕಿಗ್ಗಟ್ಟಿನ ಕಠಾರಿಯಲಿ ॥ ೧೯೫ ॥

---

೧೯೩. [1]ನಿಲ್ಲು (ಅ). [2]ಯು (ಅ).
[ಕೊಪ್ಪು-ಬಿಲ್ಲಿನ ತುದಿ. ಎಸು-ಬಾಣದಿಂದ ಹೊಡೆ].

೧೯೪. [1]ಕಿನ್ನೇನ (ಅ). [2]ಯೆನ (ಅ).
[ಡೊಳ್ಳಾಸ-ಮೋಸ, ವಂಚನೆ. ತಮ-ಅಜ್ಞಾನದ, ಮರವೆಯ, ಕತ್ತಲೆ. ಐಸೆ-ಅಷ್ಟೇ ಅಲ್ಲವೆ. ವಾಸಿ-ಕೀರ್ತಿ, ವಿಚಾರ, ಗೊಡವೆ (?)].

೧೯೫. [1]ಗ (ಅ ಕುಮಾ). [3]ನೆ (ಅ ಕುಮಾ).
[ಹಾರು-ನೋಡು. ಕೈಗಡಿ-ಕೈಚಳಕ. ಕಿಗ್ಗಟ್ಟು-ಕೆಳಭಾಗದ ಕಟ್ಟು, ಸೊಂಟಪಟ್ಟಿ].

ಅಳುಕಿದನೆ ರಥ ಮುಗ್ಗಿದೊಡೆ ಕಳ-
ವಳಿಸಿದನೆ ಶಲ್ಯಾಪಸರಣಕೆ
ಕೆಲಬಲನ ಹಾರಿದನೆ ನರನವಗಡಿಸಿ ಕಾದಿದೊಡೆ ।
ಬಲಿಮಥನ ಮರುಳು ಭಾಪು ಪಾಂಡವ-
ಬಲದಿಶಾಪಟರಾಯ ಮದನ-
ಪ್ರಳಯಹರ ಭಾಪೆಂದು ಹೊಗಳಿತು ¹ಭಟ್ಟ¹ಸಂದೋಹ ॥ ೧೯೬ ॥

ತೂಳಿದನು ಕಲಿಪಾರ್ಥನೀತನ
ಮೇಲೆ ಶಿವಶಿವ ಕಣೆಯ ಕಡೆವಳಿ-
ಗಾಲ ತಪ್ಪ¹ಲೆನುತ್ತ¹ ತರಿದನು ಕರ್ಣನಂಬುಗಳ ।
ಮೇಲೆ ಪೋಲೆಚ್ಚಂಬುಗಳ ಸಲೆ
ಸೀಳೆ ಕರ್ಣಧ್ವಜದ ಕಂಭದ
ಕೂಲ ಮುರಿಯೆಸಲುಡಿದು ಬಿದ್ದುದು ವರರಥಾಗ್ರದಲಿ ॥ ೧೯೭ ॥

ದ್ರೋಣಭೀಷ್ಮರ ನೆಚ್ಚಿದರೆ ಮುಂ-
ಗಾಣಿಕೆಯಲೇ ಮಡಿದರೆನ್ನಯ
ಗೋಣ ಕೊಯ್ದನು ಕೃಷ್ಣ ಮುನ್ನಿನ ಕುಲವನೆಚ್ಚರಿಸಿ ।
ಪ್ರಾಣ ಪಾಂಡವರೆಂಬ ನುಡಿಯನು
ಜಾಣಿನಲಿ ಹರಿ ಒಲಿದನೊಡೆಯಗೆ
ಕಾಣೆನಾಪ್ತರನೆಂದು ¹ಮಮ್ಮಲ¹ ಮರುಗಿದನು ಕರ್ಣ ॥ ೧೯೮ ॥

---

೧೯೬. ¹ವಂಥಿ (ಅ ಕುಮಾ)

[ಶಲ್ಯಾಪಸರಣಕೆ-ಶಲ್ಯನು ತನ್ನನ್ನು ಬಿಟ್ಟು ಹೋದದಕ್ಕೆ. ಕೆಲಬಲ-ಅಕ್ಕಪಕ್ಕದವರ ಸಹಾಯ. ಹಾರು-ನಿರೀಕ್ಷಿಸು. ಬಲಿಮಥನ-ಕೃಷ್ಣ, ವಿಷ್ಣು. ದಿಶಾಪಟ-ದಿಕ್ಕು ದಿಕ್ಕಿಗೆ ಶತ್ರುಗಳನ್ನು ಓಡಿಸಿದವನು ರಾಯ ಮದನ-ರಾಜರಲ್ಲಿ ಮನ್ಮಥ. ಪ್ರಳಯ ಹರ-ಪ್ರಳಯಕಾಲದ ರುದ್ರ].

೧೯೭. ¹ಲ್ಲೆನುತ (ಅ ಕುಮಾ)

[ತೂಳು-ಬೆನ್ನಟ್ಟು. ಕಣೆಯ ಕಡೆವಳಿಗಾಲ-ಬಾಣಪ್ರಯೋಗದ ಅಂತ್ಯ. ತರಿ-ಕತ್ತರಿಸು. ಕೂಲು-ತುದಿ, ಕೊನೆ. ಮುರಿಯೆಸು-ಮುರಿಯುವಂತೆ ಬಾಣ ಪ್ರಯೋಗ ಮಾಡು. ಉಡಿದು-ಮುರಿದು, ತುಂಡಾಗಿ].

೧೯೮. ¹ಮನದಲಿ (ಅ ಕುಮಾ).

[ಮುಂಗಾಣಿಕೆಯಲೇ-ಬಹು ಮುಂಚಿತವಾಗಿಯೇ. ಗೋಣು-ಕತ್ತು. ಜಾಣು-ಚಾತುರ್ಯ, ಬುದ್ಧಿವಂತಿಕೆ. ಬಲಿ-ಬಲಪಡಿಸು, ದೃಢಪಡಿಸು].

ಕುಲಕೆ ಕೀಳಿವನೆಂದು [1]ಟೆ[1]ಕ್ಕರಿ-
ಗಳೆಯಲಾ[2]ಗ[2]ಳೆ ಬಂಧುವರ್ಗ[3]ಕೆ
ಮುಳಿದು[3] ಸಿಂಹಾಸನದಲೆನಗಭಿಷೇಕವನು ಮಾಡಿ ।
[4]ಕುಲದಮಲಿನ[4]ವ ತೊಳೆದು [5]ತನ್ನಯ[5]
ಕುಲದೊ[6]ಳೊಡ[6]ಬೆಚ್ಚವನಿಪಾಲಕ-
ತಿಲಕ ಕುರುಪತಿಗಾಪ್ತರಿಲ್ಲೆಂದಳಲಿದನು ಕರ್ಣ ॥ ೧೯೯ ॥

ಸಲಹಿದೊಡೆಯನ ಜೋಳವಾಳಿಗೆ
ತಲೆಯ ಮಾಱುವದೊಂದು ಪುಣ್ಯದ
[1]ಬೆಳಸು[1] ಮರಣದ ಹೊತ್ತು ಕೃಷ್ಣನ ಕಾಂಬ ಸುಕೃತಫಲ ।
ಇಳೆ[2]ಯೊಳಿಂದೆನಗ[2]ಲ್ಲದಾರಿಗೆ
ಫಲಿಸುವುದು ತಾ ಧನ್ಯನೆನುತೆವೆ
ಹಳಚದಸುರಾಂತಕನನೀಕ್ಷಿಸುತಿರ್ದನಾ ಕರ್ಣ ॥ ೨೦೦ ॥

ಒಳಗೆ ಹೃದಯಾಂಬುಜದ ಮಧ್ಯ
ಸ್ಥಳದೊಳಗೆ ಮುರವೈರಿಯನು ಹೊಱ-
ವಳಯದಲಿ ಫಲುಗುಣನ ಮಣಿರಥದಗ್ರಭಾಗದಲಿ ।
ಹೊಳೆವ ಹರಿಯನು ಕಂಡಸಿದು ಹೊಱ-
ಗೊಳಗೆ ಹರಿ ತಾನೆಂಬಭೇದವ
ತಿಳಿದು ನಿಜದೆಚ್ಚಱ ಸಮಾಧಿಯೊಳಿರ್ದನಾ ಕರ್ಣ ॥ ೨೦೧ ॥

---

೧೯೯. [1]ಠಿ (ಅ). [2]ವೆ (ಅ). [3]ವನುಳಿದು (ಅ ಕುಮಾ). ಕುಲಮಲಿನ (ಅ). [5]ಕೌರವ (ಅ ಕುಮಾ). [6]ಳಗೆ (ಅ).

[ಟೆ (ಟಿ, ಠಿ)ಕ್ಕರಿಗಳೆ-ಹೀಯಾಳಿಸು, ಕಡೆಗಣಿಸು. ಮಲಿನ-ಕೊಳೆ, ಕಳಂಕ. ಒಡಬೆಚ್ಚು-ಒಡನೆ ಕೂಡಿಸು, ಸೇರಿಸಿಕೊ].

೨೦೦. [1]ಫಲವು (ಅ ಕುಮಾ). [2]ಯ ಮೇಲೆನಗ (ಅ ಕುಮಾ).

[ಜೋಳವಾಳಿ-ಅನ್ನದ ಋಣ, ಸೇವಕ ವೃತ್ತಿ. ತಲೆಯ ಮಾಱುವುದು-ಆತ್ಮಾರ್ಪಣೆ ಮಾಡಿಕೊಳ್ಳುವುದು. ಬೆಳಸು-ಏಳಿಗೆ. ಎವೆಹಳಚು-ಎವೆಯಿಕ್ಕು].

೨೦೧. [ಒಳಗು-ಅಂತರಂಗ. ಹೊಱವಳಯ-ಹೊಱಪ್ರಾಂತ, ಹೊಱಗಡೆ, ಬಹಿರಂಗ. ಅಭೇದ-ಭೇದವಿಲ್ಲದಿರುವುದು, ಏಕೀಭಾವ, ಐಕ್ಯತೆ. ಎಚ್ಚಱ ಸಮಾಧಿ-ಎಚ್ಚರದಲ್ಲಿಯೇ ಸಮಾಧಿ ಸ್ಥಿತಿ, ಸ್ಥಿತಪ್ರಜ್ಞೆ].

*ಬಳಲಿದನು ಬಸವಳಿದು ಮೆಲ್ಲನೆ
ಹಳವಿಗೆಯ ನೆಮ್ಮಿದನು ಲಕ್ಷ್ಮೀ-
ನಿಳಯನನು ನೋಡುತ್ತ ರವಿಸುತನಿರಲು ಕಂಡಾಗ ।
ಹೊಳೆದ ಕುಂಡಲವಿರಲು ಪ್ರಾಣವು
ತೊಲಗದಲ್ಲಿಂದಾಗ ಕೃಷ್ಣನು
ತಿಳಿದು ವಿಪ್ರನ ರೂಪ ತಾಳ್ದವನಲ್ಲಿಗೈತಂದ ॥ ೨೦೩ ॥

ತ್ಯಾಗಿ ಜಗದೊಳಗೆಂಬ ಕೀರ್ತಿಯು
ಲೋಗರಿಂದವೆ [1]ಕೇಳಿ ಬಂದೆವು[1]
[2]ಮೋಗಳ[2]ತಿಶಯ[3]ಫಲವ[3]ನೊಲಿವೊಡೆ ಮನದ ಬಯಕೆ[4]ಯನು[4] ।
ಈಗ[5]ಳೀ[5]ವುದು ನಿನ್ನಭೀಷ್ಟ-
ಶ್ರೀಗೆ ಮಂಗಳವೆಂದು ಹರಸಿದ-
ನಾಗ[6]ಳಱಿದಾ[6] ಕರ್ಣ ನಸುನಗುತಿರ್ದ ಮನದೊಳಗೆ ॥ ೨೦೪ ॥

ತ್ಯಾ[1]ಗಿ[1] ಸಿಂಹಾಸನದ ಮೇಲಿ-
ದ್ದಾಗ [2]ಬೇಡಿತನೀವೆನಾ ನೀ-
ವೀಗ ರಣದಲಿ ಬಂದು ಬೇಡುವುದುಂಟೆ ಹೇಳೆನಲು[2] ।
ತೂಗು[3]ತಿಹ[3] ಕುಂಡಲವ[4]ನೀವುದು[4]
ಬೇಗ ಧಾರೆಯನೆಱೆದು ಕೊಡು ಎನ-
ಲಾಗಲುದಕವನಱಸಿ [5]ಕಾಣದೆ[5] ಕೆಲನ ನೋಡಿದನು ॥ ೨೦೫ ॥

---

೨೦೩. [ಬಸವಳಿ-ಪ್ರಜ್ಞಾತಪ್ಪು, ಎಚ್ಚರತಪ್ಪು. ಹಳವಿಗೆ-ಧ್ವಜಸ್ತಂಭ ನೆಮ್ಮು-ಒರಗು. ಕುಂಡಲ-ಕರ್ಣಕುಂಡಲ].

೨೦೪. [1]ಕೇಳ್ದು ಬಂದೆನು (ಅ ಕುಮಾ). [2]ಈಗಲ (ಅ). [3]ಪದವ (ಅ ಕುಮಾ). [4]ಗಳ (ಅ ಕುಮಾ). [5]ಲಾ (ಅ). [6]ಲರಿದನು (ಅ).

[ಲೋಗರು-ಲೋಕದ ಜನ ಮೋಗಳತಿಶಯ ಫಲ-ಮೋಕ್ಷ. ಅಭೀಷ್ಟ ಶ್ರೀ-ಇಷ್ಟಾರ್ಥವೆಂಬ ಸಂಪತ್ತು].

೨೦೫. [1]ಗ (ಅ). [2]ಬೇಡಿತನೀಯಬೇಹುದು ಈಗಳೀವುದ ಬೆಸಸಿಯೆನೆ ನಗುತೆಂದನಾ ವಿಪ್ರ (ಅ ಕುಮಾ). [3]ವೀ (ಅ ಕುಮಾ). [4]ನೀಗಲೆ (ಅ). [5]ಕರ್ಣನು (ಅ).

[ಬೇಡಿತನು-ಬೇಡಿದುದನ್ನು]

ಉದಕವನು ಹೊಱಗಱಸುತಿರಲಾ
ಪದುಮನಾಭನು [1]ನಗುತ[1] ನಿನ್ನಯ
ಹೃದಯದೊಳಗಿದ್ದಮಲಗಂಗಾಜಲವ ತೆಗೆದೆನಗೆ ।
ಪದುಳದಿಂದೆಱೆ[3] ಧಾರೆಯನು ಸಂ-
ಪದದ ಮುಕ್ತಿಯ ಪದವನೊಲುವೊಡೆ
ಇದು ಶುಭೋದಯವೆಂದು ಮಾಯಾವಿಪ್ರನಱುಹಿದನು ॥ ೨೦೫ ॥

ಪರಳ ತೆಗೆದನು ಸರಸಿಜಪ್ರಿಯ-
ವರಸುತನು ತನ್ನುರವ ಬಗಿದನು
ಘುಳಿಘುಳಿಲುಘುಳಿಲೆನಲು ತೆಗೆದನು ನಿರ್ಮಲೋದಕವ ।
ಪರಮಸಂತೋಷದಲಿ ಧಾರೆಯ-
[1]ನೆಱೆದು ಕುಂಡಲವೀಯೆ[1] ಮೇಲಣ
ಸುರರುಘೇಯೆಂದೆ[2]ನಲು[2] [3]ಮುರರಿಪು ವೊಲಿದು ಕೈಕೊಂಡ[3] ॥ ೨೦೬ ॥

ಪರಮಕರುಣಾಸಿಂಧು ಕರ್ಣಂ-
ಗಿರದೆ ನಿಜಮೂರ್ತಿಯನು ತೋ[1]ಱಿದ-
ನು[1]ರುತರ ಪ್ರೇಮದಲಿ ಮುಕ್ತಿಯ ಪದವ ನೇಮಿಸಿದ ।
ನರ[2]ನನೆಚ್ಚಱಿ[2]ಸಿದನು ಕರು[3]ಣೆಗೆ
ಕರುಣದ[3]ನುಸಂಧಾನ ಮಾ[4]ಣದು[4]
ಧರೆಯೊಳೇನಚ್ಚರಿ ಯೆನುತ [5]ಬೆಱಗಾಯ್ತು ಸುರಕಟಕ[5] ॥ ೨೦೭ ॥

---

೨೦೫. [1]ನುಡಿದ (ಅ).

[ಪದುಳದಿಂದ-ನೆಮ್ಮದಿಯಿಂದ. ಪದ-ಪದವಿ. ಶುಭೋದಯ-ಮಂಗಳದ ಪ್ರಾರಂಭ].

೨೦೬. [1]ನಿಱದೆ ಮಾಡುತ್ತಿರಲು (ಅ). [2]ಪುಷ್ಕರದ ಜನ ಜಯಯೆ (ಅ ಕುಮಾ). [3]ಪುಷ್ಪಕ ವಿಳಿದುದಂಬರದಿ (ಅ).

[ಉರ-ಎದೆ. ಬಗಿ-ಸೀಳು].

೨೦೭. [1]ಱಿಸಿದನು (ಅ). [2]ನೊಳೆಚ್ಚರಿಸಿ (ಅ). [3]ಣಾಕರನು ಅ (ಅ). [4]ಡಲು (ಅ). [5]ಬೆರಗಿನೊಳಿದ್ದುದಮರಗಣ (ಅ ಕುಮಾ).

[ನಿಜಮೂರ್ತಿಯನು-ನಿಜಾಕಾರವನ್ನು. ಮಾಣು-ಬಿಡು. ಕಟಕ-ಸಮೂಹ].

[1]ಅಂದು[1] ಪಾಶುಪತಕ್ಕೆ ಬ[2]ಳು[2]ವಳಿ
ಬಂದುದಂಜನಬಾಣವ[3]ನು ಡೊ[3]ಣೆ-
ಯಿಂದ ತೆಗೆದನು ಗಿರಿಜೆಯಂಘ್ರಿಯ ನೆನೆದು ಮಂತ್ರಿಸುತ ।
ಮಂದರಾಚಲ ನಡುಗೆ ಕಿಡಿಗಳ
ಸಂದಣಿಯ [4]ಬಾಯ್ಧಾರೆಯಂಬಿನೊ-
ಳಂದು ಕರ್ಣನ ಶಿರವನೆ[4]ಚ್ಚನು ವಾಸವನ ಸೂನು ॥ ೨೦೮ ॥

ಆ ಮಹಾಸ್ತ್ರದ ಬಹಳತೇಜ-
ಸ್ತೋಮದಲಿ ಕಣ್ಮುಚ್ಚಿ ಮುಚ್ಚಿದು-
ದೀ ಮಹೀಶವ್ರಾತವೆರಡೊಡ್ಡಿನಲಿ ಕಣ್ದೆರೆಯೆ ।
ಆ ಮುಹೂರ್ತಕೆ ಕರ್ಣಶಿರವು-
ದ್ದಾಮಮಣಿಗಳ ರುಚಿರಧಾಮ-
ಸ್ತೋಮದಲಿ ಪಲ್ಲಟಿಸೆ ಮೆಱೆ[3]ದುದು ಗಗನಮಾರ್ಗದಲಿ ॥ ೨೦೯ ॥

ಅರಸ ಕೇಳೈ ಕರ್ಣನೊಡಲಲಿ
ಪರಮತೇಜಃಪುಂಜ [1]ಹೊಳೆ[1]ದು-
ಪ್ಪುರಿಸಿ [2]ನೆಗೆದುದು[2] [3]ಹೋದು[3]ದಿನಮಂಡಲದ ಮಧ್ಯದಲಿ ।
ಅರರೆ ಭಾಪುರೆ ಕರ್ಣ ಮಜ ಭಾ-
ಪುರೆ ಭಟಾಗ್ರಣಿ ನಿನ್ನ ಸರಿದೊರೆ
ಯೆರಡುಯುಗದಲಿ ಕಾಣೆನೆಂದಳಲಿದನು ಕಲಿಹನುಮ ॥ ೨೧೦ ॥

---

೨೦೮. [1]ಹಿಂದೆ (ಅ ಕುಮಾ). [2]ಲು (ಅ). [3]ದರೆ (ಅ ಕುಮಾ). [4]ಸುರಿವಂಬನಾ ರವಿನಂದನ ಕೊರಳೆಡೆಯೊಳೆ (ಅ ಕುಮಾ).

[ಬಳುವಳಿ-ಕೊಡುಗೆ. ಅಂಜನಬಾಣ-ಅಂಜಲಿಕಾಸ್ತ್ರ, ಪಾರ್ವತಿ ಅರ್ಜುನನಿಗೆ ಕೊಟ್ಟ ಬಾಣ. ಡೊಣೆ-ಬತ್ತಳಿಕೆ. ಬಾಯ್ಧಾರೆ-ಅಲಗು. ವಾಸವನ ಸೂನು-ಇಂದ್ರನ ಮಗ, ಅರ್ಜುನ].

೨೦೯. [ಉದ್ದಾಮಮಣಿ-ಶ್ರೇಷ್ಠವಾದ ರತ್ನ. ರುಚಿರಧಾಮಸ್ತೋಮ-ಮನೋಹರವಾದ ನೆಲೆಗಳ ರಾಶಿ. ಪಲ್ಲಟಿಸು-ವ್ಯತ್ಯಾಸಹೊಂದು].

೨೧೦. [1]ಪೊದೆ (ಅ ಕುಮಾ). [2]ಹಾಯ್ದುದು (ಅ ಕುಮಾ). [3]ಹೊಳೆದು (ಅ ಕುಮಾ).

[ಉಪ್ಪರಿಸು-ಮೇಲೆ ಚಿಮ್ಮು. ಹೋದುದು-ಪ್ರವೇಶಿಸಿತು. ಸರಿದೊರೆ-ಸಂಸಮಾನ. ಎರಡು ಯುಗ-ಕೃತ ಮತ್ತು ತ್ರೇತಾಯುಗಗಳು].

ಕೊಟ್ಟ ಭಾಷೆ[1]ಯು ಮೀಱ[1] ಬಾಣವ
ಕೊಟ್ಟನೇ ತಾನೊಡೆಯನೆಂದಱ[3]
ಯಟ್ಟದನೆ ಪಾಂಡವರೊಳನುಸಂಧಾನವನು [2]ಮಾಡಿ[2] ।
ನೆಟ್ಟ ಕಣೆಗಳುಕಿದನೆ ಕೌರವ
ಕೆಟ್ಟನಕಟಕಟೆಂದು ಕಾಯುವ
ಬಿಟ್ಟ ಕರ್ಣ[3]ಂಗಾ[3]ರು ಸರಿ ಯೆನುತಿರ್ದುದಮರಗಣ ॥ ೨೧೧ ॥

ಬಲುವಿಡಿಯು ಬಿಲು ವಾಮದಲಿ ಬೆರ-
ಳೊಳಗೆ ಸವಡಿಸಿ ತೆಗೆ[1]ದ[1] ತಿರುವಿನ
ಹಿಳುಕು ನಿಮಿರಿದ ತೋಳತೋಱಿಕೆ ಬಲದ ಭಾಗದಲಿ ।
ಬಲಿದ ಮುಂಡಿಯು ಬಾಗಿದೊಡಲಿನ
ಹೊಳೆವ ತನುಕಾಂತಿಯು ಮಹೀಪತಿ-
ತಿಲಕ ಕೇಳ್ಕೆ ಕರ್ಣನೆಸೆದನು ರಥದ ಮಧ್ಯದಲಿ ॥ ೨೧೨ ॥

ಕಳಚಿ ದುರ್ಯೋಧನನ ಬೆಳುಗೊಡೆ
ನೆಲಕೆ ಬೀಳ್ವಂದದಲಿ ಕೌರವ-
ಕುಲದ ನಿಖಿಳೈಶ್ವರ್ಯವಿಳೆಗೊಗ್ಗುಡಿಸಿ ಕೆಡೆದಂತೆ ।
ಥಳಥಳಿಪ ನಗೆಮೊಗದ [1]ಬಿಗಿಹೆ-
ಕ್ಕಳದ[1] ಹುಬ್ಬಿನ ಬಿಟ್ಟ ಕಂಗಳ
ಹೊಳೆವ ಹಲುಗಳ ಕರ್ಣಶಿರ ಕೆಡೆದುದು ಧರಿತ್ರಿಯಲಿ ॥ ೨೧೩ ॥

---

೨೧೧. [1]ಗೆ ಮುರಳಿ (ಅ ಕುಮಾ). [2]ಬಿಸುಟು (ಅ ಆ ಕುಮಾ), ಸ್ವೀಪಾ (ಅ ಅಡಿಟಿಪ್ಪಣಿ). [3]ಂಗಾ (ಅ ಕುಮಾ).

[ಅಱಯಟ್ಟು-ಬೆನ್ನಟ್ಟಿ ಹೋಗು].

೨೧೨. [1]ವ (ಅ ಕುಮಾ).

[ಬಲುವಿಡಿ-ಬಲವಾದ ಹಿಡಿತ, ಬಿಗಿಮುಷ್ಟಿ. ವಾಮದಲಿ-ಎಡಗಡೆಯಲ್ಲಿ. ಸವಡಿಸು-ಸೇರಿಸು, ಜೊತೆಗೂಳಿಸು. ತಿರುವು-ಹೆದೆ. ಹಿಳುಕು-ಬಾಣದ ಹಿಂಭಾಗ. ನಿಮಿರು-ನೆಟ್ಟಗೆ ನಿಲ್ಲು].

೨೧೩. [1]ಗಂಟಿಕ್ಕಿ ಬಲಿದ (ಅ ಕುಮಾ).

[ಬೆಳುಗೊಡೆ-ಶ್ವೇತಚ್ಛತ್ರಿ. ಒಗ್ಗುಡಿಸಿ-ಒಟ್ಟಾಗಿ ಸೇರಿ. ಕೆಡೆ-ಬೀಳು. ಬಿಗಿಹೆಕ್ಕಳದ-ಬಿಗಿಯಾಗಿ ಗಂಟಿಕ್ಕಿದ].

ರಾಯ ಹಮ್ಮೈಸಿದನು ಹಾ ರಾ-
ಧೇಯ [1]ಹಾ ಯೆನ್ನಾನೆ ಬಾರೈ
ಮಾಯವಾಗದೆ ನಿನ್ನ ತೋಱಾ ಕರ್ಣ ತೋಱನುತ[1] ।
ಬಾಯ ಬಿಟ್ಟುದು ಕೈಯ ಕೈದುವ
ಹಾಯಿಕಿತು ಕಂಬನಿಯ ಕಡಲೊಳು
ಹಾಯಿ[2]ದುದು ನೆಱ[2] ಹೊರಳುತಿರ್ದುದು [3]ನಿಖಿಳ[3]ಪರಿವಾರ ॥ ೨೧೪ ॥

ಕಿತ್ತರೋ ಕಲ್ಪದ್ರುಮವ ಕೆಡೆ-
ಗುತ್ತಿದರೊ ಸುರಧೇನುವನು ಕೈ-
ವರ್ತಿಸಿದರೋ ಪರುಷವನು ಹಾ ಜಲಧಿಮಧ್ಯದಲಿ ।
ಎತ್ತಣದು ಭಾರತದ ರಣ [1]ತಾ-
ನೆ[1]ತ್ತಲಜಸುತ ಬಂದುದಕಟಾ
ಮೃತ್ಯುವೆಂದೊರಲಿತ್ತು ಮಂದಿಗಳೆರಡು ಥಟ್ಟಿನಲಿ ॥ ೨೧೫ ॥

ದ್ಯುಮಣಿ ಕರ್ಣದ್ಯುಮಣಿ[1]ಯೊಡನ-[1]
ಸ್ತಮಿಸೆ ಕಮಲಿನಿ ಕೌರವನ ಮುಖ-
ಕಮಲ ಬಾಡಿತು ತಿಮಿರ ಹೆಚ್ಚಿತು ಶೋಕತಮದೊಡನೆ ।
ಅಮಳ ಚಕ್ರಾಂಗಕ್ಕೆ ಭೂಪೋ-
ತ್ತಮನ ವಿಜಯಾಂಗನೆಗೆಯುಗಲಿಕೆ
ಸಮನಿಸಿತು ನೀ ಕೇಳು ಜನಮೇಜಯ ಮಹೀಪಾಲ ॥ ೨೧೬ ॥

---

೨೧೪. [1]ಹಾ ರಾಧೇಯ ಹಾ ರಾಧೇಯ ಹಾ ಎನ್ನಾನೆ ಬಾರೈ ನಿನ್ನ ತೋಱನುತ (ಅ ಕುಮಾ). [2]ದೆದ್ದುದು (ಅ ಕುಮಾ). [3]ಕೂಡೆ (ಅ ಕುಮಾ).
[ಹಮ್ಮೈಸು–ಮೂರ್ಛೆ ಹೋಗು].

೨೧೫. [1]ನಮಗೆ (ಅ ಕುಮಾ).
[ಕಲ್ಪದ್ರುಮ–ಕಲ್ಪವೃಕ್ಷ. ಕೆಡೆಗುತ್ತು–ಬೀಳುವಂತೆ ಗುದ್ದು. ಸುರಧೇನು–ಕಾಮಧೇನು. ಕೈವರ್ತಿಸು–ಬಿಸುಡು. ಪರುಷ–ಸ್ಪರ್ಶಮಣಿ. ಒರಲು–ಗೋಳಾಡು].

೨೧೬. [1]ಸಹಿತ (ಅ ಕುಮಾ).
[ದ್ಯುಮಣಿ–ಸೂರ್ಯ. ಅಸ್ತಮಿಸು–ಮುಳುಗು. ಕಮಲಿನಿ–ಕಮಲ. ತಿಮಿರ–ಕತ್ತಲೆ. ಶೋಕತಮ–ಶೋಕವೆಂಬ ಕತ್ತಲೆ. ಚಕ್ರಾಂಗ–ಚಕ್ರವಾಕ ಪಕ್ಷಿ. ಭೂಪೋತ್ತಮ–ರಾಜಶ್ರೇಷ್ಠನಾದ ದುರ್ಯೋಧನ. ವಿಜಯಾಂಗನೆ-ಜಯವಧು, ಗೆಲವೆಂಬ ಸ್ತ್ರೀ. ಸಮನಿಸು–ಉಂಟಾಗು, ಪ್ರಾಪ್ತವಾಗು].

ಶಲ್ಯಪರ್ವ

೧. ಶಲ್ಯನ ಸಾವು

ತಾಪವಡಗಿತು ಮನದ ಕಡುಹಿನ
ಕೋಪ ತಳಿತುದು ಭೀಮಪಾರ್ಥರ
ರೂಪು ಮುಖದಲಿ ಕರ್ಣದುಶ್ಯಾಸನರ ಕಲ್ಪಿಸಿದ ।
ಭೂಪ ಕೇಳೈ ಪಾಳಯಕೆ ಕುರು-
ಭೂಪ ಬಂದನು ನಾಳೆ ಕರ್ಣೋ-
ತ್ಥಾಪನವಲಾ ಎನುತ ಹೊಕ್ಕನು ಭದ್ರಮಂಟಪವ ॥ ೧ ॥

ಹಿಮದ ಹೊಯ್ಲಲಿ ಸೀದು ಸಿಕ್ಕಿದ
ಕಮಲವನದಂದದಲಿ ಹತವಿ-
ಕ್ರಮದ ಕೀರ್ತಿಯು ಬಹಳ[1]ಭಾರಕೆ ಬಳುಕಿದಾನನದ[1] ।
ಸುಮುಖತಾವಿಚ್ಛೇದಕಲುಷ-
ಸ್ಥಿತಿಯರಿರವನು ಕಂಡು ನಾಳಿನ
ಸಮರಕೇನುದ್ಯೋಗವೆಂದನು ಕೃಪನ ಗುರುಸುತನ ॥ ೨ ॥

---

೧. [ತಾಪ-ಮನಸ್ಸಿನ ಸಂತಾಪ. ಕಡುಹು-ಪರಾಕ್ರಮ, ಶೌರ್ಯ. ತಳಿತುದು-ಉಂಟಾಯಿತು, ಹೊಮ್ಮಿತು. ಉತ್ಥಾಪನ-ಪ್ರತಿಷ್ಠಾಪನೆ, ನಿಲ್ಲಿಸುವಿಕೆ. ಭದ್ರಮಂಟಪ-ಶುಭಕಾರ್ಯದ ಮಂಟಪ].

೨. [1]ಭಂಗಳ ಬಂದುದಾಸ್ಥಾನ (ಅ).

[ಹೊಯ್ಲು-ಹೊಡೆತ. ಸೀದು-ಕಂದಿಹೋಗಿ, ಬಾಡಿಹೋಗಿ. ಹತವಿಕ್ರಮ-ನಷ್ಟವಾದ ಪರಾಕ್ರಮ. ಬಳುಕಿದ ಆನನ-ತಗ್ಗಿದ ಮುಖ. ಸುಮುಖತೆ-ಸುಮುಖತಾ ವಿಚ್ಛೇದ .... ರಿರವು-ಸತ್ಪರಿಣಾಮದ ತಡೆಯಿಂದುಂಟಾದ ಮನಸ್ಸಮಾಧಾನದ ಸ್ಥಿತಿ. ಉದ್ಯೋಗ-ಕಾರ್ಯ ಪ್ರಯತ್ನ].

ಆದದಾ ಭೀಷ್ಮಾದಿಸುಭಟರು
ಕಾದಿ ನೆಗ್ಗಿದ ಕಳನ ಹೊಗುವೊಡೆ
ಕೈದುಕಾಱರ ಕಾಣೆನೀ ಮಾದ್ರೇಶ ಹೊಱ[1]ತಾಗಿ[1] ।
ಈ ದುರಂತ[4]ದ[2] ಸಮರಜಯ ನಮ-
ಗಾದೊಡೊಳ್ಳಿತು ಶಲ್ಯನಲಿ ಸಂ-
ಪಾದಿಸಿರೆ ಸೇನಾಧಿಪತ್ಯವ[3]ನೆಂದನಾ ದ್ರೌಣಿ[3] ॥ ೩ ॥

ತರಿಸಿ ಮಂಗಳವಸ್ತುಗಳನಾ-
ದರಿಸಿ ಭದ್ರಾಸನದೊಳೀತನ-
ನಿರಿಸಿ ನೃಪ ವಿಸ್ತರಿಸಿದನು ಮೂರ್ಧಾಭಿಷೇಚನವ ।
ಮೊರೆವ ವಾದ್ಯದ ಸಿಡಿಲ ಧರಣೀ-
ಸುರರ ಮಂತ್ರಾಕ್ಷತೆಯ ಮಳೆಗಳೊ-
ಳಿರುಳನುಗಿದವು ಮಕುಟಮಣಿರಾಜಿಗಳ ಮಿಂಚುಗಳು ॥ ೪ ॥

ದೇವ ಚಿತ್ತೈಸಿ[1][ದಿ][1]ರೆ ಬೊಪ್ಪನ
ಭಾವನನು ಸೇನಾಧಿಪತ್ಯ[2]ವ
ನೋ[2]ವಿದರಲೇ ಶಲ್ಯ ಮಾಡಿದ ಭಾಷೆ [3]ನಮ್ಮೊಡನೆ[3] ।
ಆವನಂಗೈಸುವ[4]ನು[4] ಪಾರ್ಥನೊ
ಪಾವಮಾನಿಯೊ ನಕುಲನೋ ಸಹ-
ದೇವನೋ ತಾನೋ ನಿ[5]ಧಾ[5]ನಿಸಲಱಿಯೆ ತಾನೆಂದ ॥ ೫ ॥

---

೩. [1]ಗ (ಅ). [2]ರ (ಅ). [3]ನಾ ದ್ರೌಣಿ (ಸ್ವೀಪಾ) (ಅ ಅಡಿಟಿಪ್ಪಣಿಯ ಪಾಠ). [4]ನರಸ ಕೇಳೆಂದ (ಅ).

[ನೆಗ್ಗಿದಕಳ–ಧ್ವಂಸ ಮಾಡಿದ ಯುದ್ಧರಂಗ. ಕೈದುಕಾಱ-(ಶಸ್ತ್ರಧಾರಿಯಾದ) ಯೋಧ, ವೀರ. ಸಂಪಾದಿಸಿರೆ–ಸಂಪಾದಿಸಿಕೊಳ್ಳಿರಿ (ಸಂಪಾದಿಸಿರ್‌ಎ)].

೪. [ಭದ್ರಾಸನ–ಮಂಗಳಕರವಾದ ಪೀಠ. ಮೂರ್ಧಾಭಿಷೇಚನ–ಮಸ್ತಕಾಭಿಷೇಕ. ಸಿಡಿಲ–ಸಿಡಿಲಿನಂತಹ ಆರ್ಭಟದ. ಇರುಳನು ಉಗಿದವು–ರಾತ್ರಿಯನ್ನು ತಿರಸ್ಕರಿಸಿದುವು].

೫. [1]ದ (ಅ ಆ ಕುಮಾ). [2]ದಲೋ (ಅ ಕುಮಾ). [3]ಯವರೊಡನೆ (ಅ ಕುಮಾ). [4]ನೊ (ಅ ಕುಮಾ). [5]ದಾ (ಅ ಕುಮಾ).

[ಬೊಪ್ಪನ ಭಾವ–ಧೃತರಾಷ್ಟ್ರನ ಭಾವನಾದ ಶಲ್ಯ. ಓವು–ಪ್ರೀತಿಸು, ಒಪ್ಪಿಕೊ. ಭಾಷೆ–ಪ್ರತಿಜ್ಞೆ. ಅಂಗೈಸು–ಎದುರಿಸು, ಪ್ರತಿಭಟಿಸು. ಪಾವಮಾನಿ–ಭೀಮ. ನಿಧಾನಿಸು–ಆಲೋಚಿಸು, ಯೋಚಿಸು].

ಹಱಿಯದರ್ಜುನನಿಂದ ಭೀಮನ
ನೆಱವಣಿಗೆ ನೋಯಿಸದು ನಕುಲನ
ಹೊಱಿಗೆಯೊದಗದು ಸೈರಿಸದು ಸಹದೇವನಾಟೋಪ ।
ಇಱಿವಡಾ ಮಾದ್ರೇಶ್ವರನ ನೆಱಿ
ಮುಱಿವಡೆಯು ನಿನಗಹುದು ನಿನ್ನನು
ತಱುಬಿದವರೇ [1]ಕೆಟ್ಟ[1]ರೆಂದನು ನಗುತ ಮುರವೈರಿ ॥ ೬ ॥

ಲೇಸನಾಡಿದೆ ಕೃಷ್ಣ ಶಲ್ಯಂ-
ಗೀಸು ಬಲುಹುಂಟಾದೊಡನುಜರು
ಗಾಸಿಯಾದರು ಹಿಂದೆ ಭೀಷ್ಮಾದಿಗಳ [1]ಬವರ[1]ದಲಿ ।
ಈ ಸಮರ[2]ಜಯವೆನಗೆ[2] ನಾಳಿನೊ-
ಳೈಸಲೇ ನಳನಹುಷಭರತ ಮ-
ಹೀಶವಂಶೋತ್ಪನ್ನ ನಾನೆಂದನು ಮಹೀಪಾಲ ॥ ೭ ॥

ತಾಯಿ ಹೆಱಳೇ ಮಗನ [1]ನಿನ್ನನು[1]
[2]ನಾ[2]ಯಕನೆ ಲೋಕೈಕವೀರರ
ತಾಯಲಾ ನಿಮ್ಮವ್ವೆ[3]ಯಾ[3] ಮೊಲೆ[4]ವಾ[4]ಲ ಬಲುಹಿನಲಿ ।
ರಾಯ ನೀ ಕ್ಷತ್ರಿಯನು ಸೇಸೆಯ
ತಾ ಯೆನುತ ತೂಪಿಱಿದು ಕಮಲದ-
ಳಾಯತಾಂಬಕ[5]ನಪ್ಪಿ[5]ಕೊಂಡನು ಧರ್ಮನಂದನನ ॥ ೮ ॥

---

೬. [1]ಕಷ್ಟ (ಅ ಕುಮಾ).
[ಹಱಿ-ಸಾಗು, ಕೈಯಲ್ಲಾಗು. ನೆಱವಣಿಗೆ-ಬೆಂಬಲ, ಸಹಾಯ (?). ನೋಯಿಸು-ಬಾಧಕವಾಗು, ಅಡ್ಡಿಯಾಗು. ಹೊಱಿಗೆ-ಹೊಣೆಗಾರಿಕೆ. ನೆಱಿ-ಪೂರ್ಣವಾಗಿ. ಮುಱಿ-ಭಂಗಿಸು, ಸೋಲಿಸು. ತಱುಬು-ಬೆನ್ನಟ್ಟು].

೭. [1]ಕದನ (ಅ). [2]ದುರವಣೆಗೆ (ಅ).
[ಐಸಲೇ-ಆಗುವುದಲ್ಲವೇ].

೮. [1]ನೀನನು — ಸೂಚಿತ ಪಾಠ 'ಶ್ರೀ' ? [2]ಸಾ (ಅ). [3]ಯರ (ಅ). [4]ಹಾ (ಅ). [5]ಬೀಳು (ಅ).
[ಬಲುಹು-ಶಕ್ತಿ, ಸಾಮರ್ಥ್ಯ. ಸೇಸೆ-ಮಂತ್ರಾಕ್ಷತೆ. ತೂಪಿಱು-ದೃಷ್ಟಿ ಪರಿಹಾರಾರ್ಥವಾಗಿ ನೆತ್ತಿಯ ಮೇಲೆ ಉಫ್ಫೆಂದು ಊದು].

ಅರಸ ಕೇಳ್ಶೈ ಹೊಕ್ಕ ಚೂಣಿಯು-
ನೆರಡು ಬಲದಲಿ ಕಾಣೆನಗ್ಗದ
ದೊರೆಗಳನುವಾಯ್ತಾಚೆಯಲಿ ಧರ್ಮಜನನೀವುದಲಿ ।
ಗುರುಜಕೃಪ ಕೃತವರ್ಮ ಯವನೇ-
ಶ್ವರ ಸುಶರ್ಮ ಸುಬಾಹು ಶಕುನಿಗ-
ಳುರವಣಿಸಿತೀಚೆಯಲಿ ಶಲ್ಯನ ಬೆಂಳ ಸನ್ನೆಯಲಿ ॥ ೯ ॥

ಆರಿವರು ಸಹದೇವ ನಕುಲರೆ
ಭಾರಿಯಾಳುಗಳಹಿರಲೇ ಬಿಲು-
ಗಾಜಿರಲ್ಲಾ ಕಳಶಸಿಂಧನ ಕೋಲ ಮಕ್ಕಳಲೇ ।
ಸೈರಿಸದಡೊಪ್ಪುವದಲೇ ಜ-
ಜ್ಝಾರತನಕಾಭರಣವಹುದೆನು
ತಾರುಭಟೆಯಲಿ ಶಲ್ಯ ಹಳಚಿದನರ್ಜುನಾನುಜರ ॥ ೧೦ ॥

ಅರಸ ಕೇಳಿತ್ತಲು ಯುಧಿಷ್ಠಿರ
ನರಪತಿಯುನಅಸಿದನು ಮಾದ್ರೇ-
ಶ್ವರನು ¹ಸರಳಸರಾಗ[ದಲಿ]¹ ಮುಸುಕಿದನು ಧರ್ಮಜನ ।
ಧರೆಗೆ ಕಾಮಿಸಿದೈ ಸುಯೋಧನ
ನರಸಿಯುಲ್ಲಾ ಧಾತ್ರಿ ನಿಮ್ಮ-
ಲ್ಲರಿಗೆ ಹುದುನೆಲನಲ್ಲವೆಂದೆನುತೆಚ್ಚನಾ ಶಲ್ಯ ॥ ೧೧ ॥

---

೧೦. [ಅಹಿರಲೇ–ಆಗಿರುವಿರಲ್ಲವೇ ? ಕಳಶ ಸಿಂಧ–ಕಲಶದ ಚಿಹ್ನೆಯುಳ್ಳ ಬಾವುಟ. ಆ ಬಾವುಟವನ್ನು ಉಳ್ಳವನು ದ್ರೋಣ (?). ಕೋಲ ಮಕ್ಕಳು–ಧನುರ್ವಿದ್ಯೆಯ ಶಿಷ್ಯರು. ಜಜ್ಝಾರತನ–ಶೌರ್ಯ, ಪರಾಕ್ರಮ. ಆಭರಣ–ಭೂಷಣ. ಹಳಚು–ತಾಗು, ಎದುರಿಸು].

೧೧. ¹ರಾವುರಿಯೆಸುಗೆಯಲಿ (ಅ ಆ ಕುಮಾ), ಸ್ವೀಪಾ (ಪೇ), ದಿಂ (ಪೇ).
[ಧರೆ, ಧಾತ್ರಿ–ಭೂಮಿ, ರಾಜ್ಯ. ಹುದುನೆಲ–ಇಬ್ಬರಿಗೂ ಸೇರಿದ ರಾಜ್ಯ].

ಮಾವ ಮಾಯಾಡಂಬರದ ದು-
ರ್ಭಾವವೇತಕೆ ಕೌರವನೊಳೆಮ-
ಗೀ ವಸುಧೆ ಹುದುವಲ್ಲ ನೆಲನೇಕಾಧಿಪತ್ಯವಲೆ ।
ನೀವು ಕೌರವ ಸರ್ವದಳದ ದು-
ರಾವಹರಲೇ ಬಾಣ ಸೃಷ್ಟಿ ಕೃ-
ತಾವಧಾನವ ತೋಱಿನುತ ನೃಪನೆಚ್ಚು ಬೊಬ್ಬಿಱಿದ ॥ ೧೨ ॥

ಅರಸ ಕೇಳ್ಳೈ ಮುಳಿದ ಮಾದ್ರೇ-
ಶ್ವರನ ಖತಿಯೋ ಕುಪಿತ ಯಮ-
ನುಬ್ಬರದ ಕೋಪವೊ ಕಾಲರುದ್ರನ ಹಣೆಯ ಹೆಗ್ಗಡಿಯೊ ।
ಉರಿದನಗ್ಗದ ರೋಷದಲಿ ಹೊಗೆ
ಹೊರಳಿಗಟ್ಟಿತು ಸುಯ್ಲಿನಲಿ ಸಂ-
ವರಿಸಿಕೊಳು ಕೌಂತೇಯ ಎನುತೆಚ್ಚನು ಮಹೀಪತಿಯ । ॥ ೧೩ ॥

ಮಾವನವರೇ ನಿಮ್ಮ ಹಿಂಸೆಗೆ
ನಾವು [1]ಕ[1]ಡುಗೆವು ಕ್ಷತ್ರಜಾತಿಯ
ಜೀವನವಲೇ ಕಷ್ಟವಿದು ಕಾರ್ಪಣ್ಯತರವಾಗಿ ।
ನೀವು ಸೈರಿಸಬೇಕು ನಮ್ಮ ಶ-
ರಾವಳಿಯನೆನುತವನಿಪತಿ ಬಾ-
ಣಾವಳಿಯ ಕೆದಱಿದನು ಸೇನಾಪತಿಯ ಸಮ್ಮುಖಕೆ ॥ ೧೪ ॥

---

೧೨. [ಮಾಯಾಡಂಬರ-ಹುಸಿಮೆರೆತ. ದುರ್ಭಾವ-ಕೆಟ್ಟ ಆಲೋಚನೆ. ವಸುಧೆ-ಭೂಮಿ. ಹುದುವು-ಜೊತೆ, ಸಂಗಡಿಕೆ. ಏಕಾಧಿಪತ್ಯ-ಒಬ್ಬರ ಆಡಳಿತ. ಸರ್ವದಳ-ಸರ್ವ ಸೈನ್ಯ. ದುರಾವಹರು-ಕಷ್ಟಸಾಧ್ಯವಾದ ಕಾರ್ಯಭಾರವನ್ನು ಹೊತ್ತವರು (?). ಬಾಣಸೃಷ್ಟಿ ಕೃತಾವಧಾನ-ಬಾಣ ಬಿಡುವುದರಲ್ಲಿ ಗಮನ ಹೊಂದಿರುವುದು].

೧೩. [ಹೆಗ್ಗಡಿ-ದೊಡ್ಡ ಕಿಡಿ. ಹೊರಳಿಗಟ್ಟು-ಗುಂಪಾಗು, ರಾಶಿಯಾಗು. ಸುಯ್ಲು-ನಿಟ್ಟುಸಿರು. ಸಂವರಿಸಿಕೊಳು-ಸಮಾಧಾನ ತಂದುಕೊ].

೧೪. [1]ನ (ಅ).

[ಕಡುಗು-ಸಿಟ್ಟಾಗು, ಕೋಪಗೊಳ್ಳು, ಕಠಿಣವಾಗು. ಕಾರ್ಪಣ್ಯತರವಾಗು-ಹೆಚ್ಚು ಹಿಂಸೆ ಕೊಡು. ಕೆದಱು-ಹರಡು, ಪ್ರಸರಿಸು].

ರಥಕೆ ಬಂದು ಪಸಾಯವನು ಸಾ-
ರಥಿಗೆ ಕೊಟ್ಟನು ಚಾಪಶರವನು
ರಥದೊಳಗೆ ತುಂಬಿದನು ನಂಬಿಸಿದನು ಸುಯೋಧನನ ।
ಪೃಥೆಯ ಮಕ್ಕಳ ರಣಪರಾಕ್ರಮ
ವೃಥೆಕಣಾ ಕರ್ಣಾದಿ ಸುಭಟ
ವ್ಯಥೆಯ ಸಿಲಿಸುವೆನೆನುತ ಮೂದಲಿಸಿದನು ಧರ್ಮಜನ ॥ ೧೫ ॥

ಸಾರಥಿಗೆ ಸೂಚಿಸಿ ನೃಪಾಲನ
ಸಾರೆ ದುವ್ವಾಳಿಸಲು ಮಿಗೆ ನೃಪ
ನೋರೆಗೊಂಡನು ತಿರುಗೆ ತಿರುಗಿದನೊಲೆದೊಡೊಡನೊಲೆದು ।
ಚೂರಿಸುವ ನಾರಾಚವಿಕ್ರಮ
ದೋರಣೆಗೆ ನಾರಾಚಿಸಿತು ವಿ-
ಸ್ತಾರದಲಿ ವಿಸ್ತರಿಸಿದನು ಜಯಸಮರ ಸಾಹಸವ ॥ ೧೬ ॥

ಅರಸ ಕೇಳೈ ಕೃಷ್ಣಶಕ್ತಿ-
ಸ್ಫುರಣವೈಸಲೆ ನಿಮ್ಮ ಬಲಸಂ-
ಹರಣಕಾವುದು ಬೀಜ ನಿರ್ದೈವರ ವಿಲಾಸವಿದು ।
ಹರಿ ಯುಧಿಷ್ಠಿರನೃಪನನೆಕ್ಕಟಿ-
ಗರೆದು ¹ವರ¹ಶಕ್ತಿಪ್ರಯೋಗವ-
ನೊರೆದಡೊಡಬಟ್ಟನು ಹಸಾದದ ಮಧುರವಚನದಲಿ ॥ ೧೭ ॥

---

೧೫. [ಪಸಾಯ-ಉಡುಗೊರೆ. ಪೃಥೆ-ಕುಂತಿ. ವೃಥೆ-ವ್ಯರ್ಥ].

೧೬. [ಸಾರು-ಹತ್ತಿರಕ್ಕೆ ಹೋಗು. ದುವ್ವಾಳಿಸು-ಕುದುರೆಯನ್ನು ತ್ವರೆಯಾಗಿ ನಡೆಸು. ಓರೆಗೊಳ್ಳು-ಪಕ್ಕಕ್ಕೆ ಸರಿ. ಚೂರಿಸು-ತೀಕ್ಷ್ಣವಾಗಿ ನಾಟು. ಓರಣೆ-ಕ್ರಮಬದ್ಧತೆ, ವ್ಯವಸ್ಥೆ. ನಾರಾಚಿಸು-ಪ್ರತಿಯಾಗಿ ಬಾಣಗಳನ್ನು ಹೊರಡಿಸು, ಬಿಡು].

೧೭. ನಿಜ (ಅ).

[ಕೃಷ್ಣಶಕ್ತಿ ಸ್ಫುರಣ-ಕೃಷ್ಣನ ಶಕ್ತಿ ಪ್ರಯೋಗದ ಪ್ರೇರಣೆ. ಬೀಜ-ಮೂಲ ಕಾರಣ. ನಿರ್ದೈವರು-ದೈವಬಲವಿಲ್ಲದವರು. ಎಕ್ಕಟಿಗರೆದು-ಹತ್ತಿರಕ್ಕೆ ಕರೆದು. ಶಕ್ತಿ-ದಿವ್ಯಶಕ್ತಿಯುಳ್ಳ ಬಾಣ. ಹಸಾದ-ಅಪ್ಪಣೆಯನ್ನು ಭಕ್ತಿಯಿಂದ ಸ್ವೀಕರಿಸುವುದು (=ಪ್ರಸಾದ)].

[1]ಆಯಿದನು[1] ಶಸ್ತ್ರಾಸ್ತ್ರದಲಿ ದಿ-
ವ್ಯಾಯುಧವ[2]ನರೆ[2] ಬಳಿದ ವರ ತಪ-
ನೀಯರೇಖೆಯು ಹೊಳೆವ ಹೊಂಗಿಱುಗೆಜ್ಜೆ ಘಂಟೆಗಳ ।
ಬಾಯುಧಾರೆಯು ತೈಲಲೇಪನ-
ದಾಯತದ ಚೌರಿಗಳ ರಿಪುಭಟ-
ನಾಯುಷದ ಕಡೆ[3]ವಗಲ[3] [4]ಭುಕ್ತಿಯ[4] ಶಕ್ತಿಯನು ನೃಪತಿ ॥ ೧೮ ॥

ಕಾಱಿದನು [1]ರಕುತ[1]ವನು ಧರಣಿಗೆ
ಹಾಱಿಬಿದ್ದನು ಮಾದ್ರಪತಿಯೆಡೆ-
ಡೋಱಿನಲಿ ಡಾವರಿಸಿದವು ರಕ್ತಾಂಬುಧಾರೆಗಳು ।
ನಿಱಿತಸು ಕಂಠ[2]ವನು[2] ನಾಸಿಕ-
ಕೇಱಿದುದು ನಿಟ್ಟುಸು[3]ರಿನಗಲಿಕೆ[3]
ಚೀಱಿದುದು ಕುರುರಾಯದಳ ಶಲ್ಯಾವಸಾನದಲಿ ॥ ೧೯ ॥

ಕೇಳಿದನು ಕುರುರಾಯ ಮಾದ್ರನೃ-
ಪಾಲನವಸಾನವನು ಕರಸಿದ-
ನಾಳುಕುದುರೆಯು ರಥಮದೋತ್ಕಟಗಜಘಟಾವಳಿಯ ।
ಮೇಳವದ ಮೋಡಿಯಲಿ ಬಲ ದು-
ವ್ವಾಳಿಸಿ[1]ತು ಫಡ[1] ಪಾಂಡು[2]ಪುತ್ರರ[2]
ಸಾಲ ಹೊಯ್ ಹೊಯ್ಯೆನುತ ಹೊಕ್ಕನು ಲಳಿಯ ಲಗ್ಗೆಯಲಿ ॥ ೨೦ ॥

---

೧೮. [1]ಆಯುದಲಿ (ಅ). [2]ನೆರೆ (ಅ). [3]ವೊನಲ (ಅ). [4]ಮುರಿಯನು (ಅ).
[ಆಯಿ–ಆಯ್ಕೆ ಮಾಡು. ಅರೆಬಳಿದ–ಅರ್ಧದವರೆಗೆ ಲೇಪಿಸಿದ. ತಪನೀಯರೇಖೆ–ಸುವರ್ಣರೇಖೆ. ಹೊಂಗಿಱು ಗೆಜ್ಜೆ–ಚಿನ್ನದ ಸಣ್ಣ ಸಣ್ಣ ಗೆಜ್ಜೆ. ಬಾಯಧಾರೆ–ಹರಿತವಾದ ಅಲಗು. ಆಯತದ–ದೊಡ್ಡದಾದ. ಚೌರಿ–ಚಾಮರ. ಕಡೆವಗಲು–ಅಂತ್ಯಕಾಲ (ಮರಣ). ಭುಕ್ತಿ–ಬುತ್ತಿ, ಉಣಿಸು, ಆಹಾರ].

೧೯. [1]ರುಧಿರ (ಅ). [2]ದಲಿ (ಅ). [3]ರಿನಗಲಿಕೆ (ಅ).
[ಡೋಱು–ಡೊಗರು, ಕುಳಿ. ಡಾವರಿಸು–ಚಿಮ್ಮು, ನೆಗೆ. ನಿಟ್ಟುಸಿರಿನಗಲಿಕೆ–ಕೊನೆಯ ದೀರ್ಘ ನಿಶ್ವಾಸ].

೨೦. [1]ತಲ್ಲೈ (ಅ). [2]ತನುಜರ (ಅ).
[ಮದೋತ್ಕಟ–ವಿಶೇಷವಾಗಿ ಮದಿಸಿದ. ಗಜಘಟೆ–ಆನೆಗಳ ಸಮೂಹ. ಮೇಳವ–ಒಟ್ಟು ಸೇರಿಸುವಿಕೆ ಮೋಡಿ–ವೈಖರಿ. ಸಾಲ–ಸಾಲನ್ನು, ಪಂಕ್ತಿಯನ್ನು. ಲಳಿ–ವೇಗ. ಲಗ್ಗೆ–ಆಕ್ರಮಣ].

ಕೆದಱುತಿದೆ ನಮ್ಮವ[1]ರ ದಳ[1] ದೊರೆ-
ಯದಟು [2]ಸುಕ್ಕಿತು[2] ರಾಯನೊಬ್ಬನೆ
ಕದನದಲಿ ಕೈದೋಱಿ ಭಂಗಿಸಿದನು ಮಹಾ[3]ರಥ[ರು][3] ।
[4]ಹೆದರಿ[4] ಹೊಕ್ಕರು ಲಗ್ಗೆ [5]ವರ[5]ಮೌ-
ನದಲಿ ಮ[6]ಗುಳ್ದ[6]ವು ಪಾರ್ಥ ದಿವ್ಯಾ-
ಸ್ತ್ರದಲಿ ಕೈಮಾಡೆಂದು [7]ನುಡಿ[7]ದನು ವೀರನಾ[8]ರ[8]ಯಣ ॥ ೨೧ ॥

---

೨೧. [1]ರು ಬಲ (ಅ). [2]ಸಿಲುಕಿತು (ಅ). [3]ದೇವ (ಅ), ರಥರ (ಅ). [4]ಹೊದಱು ತಳಿತುದು (ಅ). [5]ರೆ (ಅ). [6]ರ (ಅ). [7]ಮುನಿ (ಅ). [8]ರಾ (ಅ). [ಕೆದಱು-ಚೆದರು. ಅದಟು-ಪರಾಕ್ರಮ. ಸುಕ್ಕು-ನಲುಗು, ಬಾಡು, ಕಂದಿ ಹೋಗು. ಕೈದೋಱು-ಬಲಪ್ರದರ್ಶನ ಮಾಡು. ಭಂಗಿಸು-ಸೋಲಿಸು. ಪರಮೌನ-ದಟ್ಟವಾದ ಮೌನ. ಮಗುಳ್ದವು-ಹಿಮ್ಮೆಟ್ಟಿದುವು].

ಗದಾಪರ್ವ

೧. ಸಹದೇವನು ಶಕುನಿಯನ್ನು ಕೊಂದದ್ದು

ಕೇಳು ಧೃತರಾಷ್ಟ್ರಾವನಿಪ ಸಿರಿ-
ಲೋಲಸಹಿತರ್ಜುನನು ಸೇನಾ-
ಜಾಲವನು ಸಂತೈಸಿ ದೊರೆ ಸುಯ್ದಾನವೆಂದೆನುತ ।
ಆಳೊಡನೆ ಬೆರಸಿದನು ಕುರುಭೂ-
ಪಾಲಕನ ಥಟ್ಟಿನಲಿ ಶಸ್ತ್ರ-
ಜ್ವಾಲೆಗಳ ಕೆದಱಿದನು ಹೊದಱಿನ ಹಿಂಡ ಹರೆಗಡಿ[1]ದು[1] ॥ ೧ ॥

ಎಲವೋ ಕಪಟದ್ಯೂತಕೇಳೀ
ಕಲುಷಿತಾಂತಃಕರಣ ನಿನ್ನೀ
ಬಲಕೆ ಪತಿ ನೀನೋ ಕೃಪಾಚಾರಿಯನೊ ಗುರುಸುತನೋ ।
ಖಳಸುಶರ್ಮನೊ ಶಕುನಿಯೋ ನಿ-
ನ್ನಳಿದ[1]ರೊಡವುಟ್ಟಿದರೊ[1] ರಾಜಾ-
ವಳಿಯೊಳಾರಳ[2]ವಿ[2]ಗರು ನಿನಗೆನುತೆಚ್ಚನಾ ಪಾರ್ಥ ॥ ೨ ॥

ಕರಿಘಟೆಗಳೈನೂಱು ಮೂವ-
ತ್ತೆರಡುಸಾವಿರ ಪಾಯದಳ ಸಾ-
ವಿರದ [1]ನೂಱು ವರೂಥವಂಗಡದವನಿಪರು ಸಹಿತ[1] ।

---

೧. [1]ದ (ಅ).
[ಸುಯ್ದಾನ–ಎಚ್ಚರಿಕೆ, ಜಾಗ್ರತೆ. ಥಟ್ಟು–ಸೈನ್ಯ. ಹೊದಱು–ಸೈನ್ಯದ ಗುಂಪು. ಹರೆಗಡಿ–ತುಂಡು ತುಂಡು ಮಾಡು].

೨. [1]ವೊಡ ಹುಟ್ಟಿದನೋ (ಅ). [2]ಲಿ (ಅ).
[ಕಪಟದ್ಯೂತಕೇಳೀಕಲುಷಿತಾಂತಃಕರಣ–ಮೋಸದ ಜೂಜಾಟದಿಂದ ಕಳಂಕಿತವಾದ ಮನಸ್ಸುಳ್ಳವನು. ಅಳವಿಗರು–ಸಮರ್ಥರು].

೩. [1]ನೂರ್ವರು ದೊರೆಸಹಿತ ನಿಂದನು ಮಹೀಪಾಲ (ಅ). [2]ಶಕುನಿ ಥಟ್ಟಿನ ಬಲದ ಬಾಹೆಯಲಿ (ಅ ಕುಮಾ).

ತುರುಕ ಬರ್ಬರಪಾರಸೀಕರ
ತುರಗನೈಸಾವಿರಸಹಿತ ಮೋ-
ಹರಿಸಿ ನಿಂದನು [2]ಪಾರ್ಥನಿದಿರಲಿ ಶಕುನಿ ಮೊನೆದೋಱಿ[2] ॥ ೩ ॥

ಶಕುನಿ ಸಹದೇವನನುಲೂಕನು
ನಕುಲನನು ಕುರುರಾಯನನುಜ[1]ರು[1]
ಚಕಿತಚಾಪನ ಕೆಣಕಿದ[2]ರು[2] ಪವಮಾನನಂದನನ ।
ಅಕಟ ಫಲುಗುಣಯೆನುತ ಸಂಸ-
ಪ್ತಕರು ಕವಿದರು ನೂಱುಗಜದಲಿ
ಸಕಲಬಲಕೊತ್ತಾಗಿ ನಿಂದನು ಕೌರವರ ರಾಯ ॥ ೪ ॥

ವ್ಯರ್ಥವಲೆ ಸಹದೇವ ನಿನ್ನ ಕ-
ದರ್ಥ[1]ನಕೆ[1] ಫಲವಿಲ್ಲ ನೀ [2]ಕದ-
ನಾರ್ಥಿ[2]ಯೋ ದಿಟ ತೋಱು[3]ಸಾಮೊದೆ ಬಾಹುವಿಕ್ರಮವ ।
ಪಾರ್ಥಭೀಮರ ಮಱೆ[3]ಯೊಳಿರ್ದ ನಿ-
ರರ್ಥಕರನಿಱಿ[3]ದಿಱಿ[3]ದು ಜಯವ ಸ-
ಮರ್ಥಿಸುವೆ ಫಡ ಹೋಗೆನುತ ತೆಗೆದೆಚ್ಚನಾಶಕುನಿ ॥ ೫ ॥

ತೇಱು ಹುಡಿಹುಡಿಯಾಗೆ ಹೊಯ್ದನು
ವಾರುವ[1]ದ[1] ಮೇಲುಗಿದಡಾ[2]ಯ್ದು ದ-[2]
ಲಾಱಿ[3]ಟ್ಟ[3]ನು ಸೂಠಿಯಲಿ ಸಹದೇವನಭಿಮುಖಕೆ ।
ವೀರನಹೆಯೋ ಶಕುನಿ ಜೂಜಿನ
ಚೋರವಿದ್ಯೆಯ ಬಿಟ್ಟೆಲಾ ಜ-
ಜ್ಝಾರನಹೆ ಮಝ ಪೂತೆನುತ ಖಂಡಿಸಿದನಾ ಹಯವ ॥ ೬ ॥

---

೩. [ವರೂಥ-ರಥ. ಐಸಾವಿರ-ಐದುಸಾವಿರ. ಮೋಹರಿಸಿ-ಗುಂಪುಗೂಡಿ. ಮೊನೆದೋಱು-ಯುದ್ಧ ಸಿದ್ಧತೆಯನ್ನು ಪ್ರದರ್ಶಿಸು, ಯುದ್ಧಸನ್ನದ್ಧನಾಗು].

೪. [1], [2]ನು (ಅ).
[ಉಲೂಕ-ಶಕುನಿಯ ಮಗ. ಚಕಿತಚಾಪ-ಭೀತನಾಗಿ ಬಿಲ್ಲುಹಿಡಿದ].

೫. [1]ವಲಿ (ಅ). [2]ಕಲಹಾರ್ಥಿ (ಅ).
[ಕದರ್ಥನ-ಅವಹೇಳನ, ಮೂದಲಿಕೆ, ಕೆಣಕು. ಕದನಾರ್ಥಿ-ಯುದ್ಧವನ್ನು ಅಪೇಕ್ಷಿಸುವವನು. ನಿರರ್ಥಕರು-ನಿಷ್ಪ್ರಯೋಜಕರು, ಕೈಲಾಗದವರು].

೬. [1]ನ (ಅ). [2]ಯುಧ (ಅ). [3]ದ್ದ (ಅ).
[ವಾರುವ-ಕುದುರೆ. ಅಱ (ಅರ್, ಅಱು)-ಗರ್ಜಿಸಿ. ಜಜ್ಝಾರ-ಧೈರ್ಯಶಾಲಿ. ದಿಟ್ಟ].

ಬಳಿಕ ಕಾಲಾಳಾಗಿ ಖಡುಗವ
ಝಳಪಿಸುತ ಬರೆ ಶಕ್ತಿಯಲಿ ಕೈ-
ಚಳಕದಲಿ ಸಹದೇವನಿಟ್ಟನು ಸುಬಲನಂದನನ ।
ಖಳನೆದೆಯನೊಡೆದಪರಭಾಗಕೆ
ನಿಲುಕಿತದು ಗಾಂಧಾರಬಲ ಕಳ-
ವಳಿಸೆ ಸುಳಿದನು ಶಕುನಿ ಸುರತರುಣಿಯರ ಗೋಷ್ಠಿಯಲಿ ॥ ೭ ॥

---

೩. ಕೌರವನು ಕೊಳವನ್ನು ಹೊಕ್ಕದ್ದು

ಕೇಳು ಜನಮೇಜಯ ಧರಿತ್ರೀ-
ಪಾಲ ಕುರುಪತಿ ಹೆಗಲ ಗದೆಯಲಿ
ಕಾಲುನಡೆಯಲಿ ಹಾಯ್ದನೇಕಾಂಗದಲಿ ಕಳನೊಳಗೆ ।
ಆಳ ಕಾಣೆನು ಛತ್ರಚಮರದ
ವೀಳೆಯದ ವಿಸ್ತಾರವಿಭವವ
ಬೀಳುಕೊಟ್ಟನು ನಡೆದನಿಂದ್ರದಿಶಾಭಿಮುಖನಾಗಿ ॥ ೮ ॥

ಎಡಹುದಲೆಗಳ ದಾಂಟಿ ರಕುತದ
ಮಡುವಿನೊಳು ಗದೆಯೂರಿ ನೆಲೆಗಳ
ಪಡೆದು ಕಂಪಿಸಿಕ್ಕುಣಿವ ಮುಂಡವ ಗದೆಯೊಳಪ್ಪಳಿಸಿ ।
ಅಡಿಗಡಿಗೆ ಹೇರಾನೆಗಳ ಹೇ-
ರೊಡಲ ಹತ್ತಿಳಿದೇರಿ ಝೊಂಪಿಸಿ
ಮಿಡುಕಿ ನಿಲುವನು ಬಳಲಿ[1]ದೂರ್ಧ್ವಶ್ವಾಸಲಹರಿಯಲಿ ॥ ೯ ॥

---

೭. [ಶಕ್ತಿ-ಒಂದು ಬಗೆಯ ಆಯುಧ, ಈಟಿ. ಇಡು-ಹೊಡೆ. ಅಪರಭಾಗ-ಹಿಂಭಾಗ].

೮. [ಏಕಾಂಗ-ಒಬ್ಬಂಟಿಗ. ಇಂದ್ರದಿಶೆ-ಪೂರ್ವದಿಕ್ಕು].

೯. [1]ಯೂ (ಅ).

[ಎಡಹುದಲೆ-ಕಾಲಿಗೆ ತೊಡರಿಕೊಂಡು ಮುಗ್ಗರಿಸಿ ಬೀಳುವಂತೆ ಮಾಡುವ ರುಂಡಗಳು. ನೆಲೆ-ಆಸರೆ. ಝೊಂಪಿಸು-ಆಯಾಸಗೊಳ್ಳು, ಸೊರಗು. ಮಿಡುಕು-ವೇದನೆಪಡು, (ಆಯಾಸದಿಂದ) ನರಳು. ಊರ್ಧ್ವಶ್ವಾಸ-ಮೇಲುಸಿರು].

ಹೇಳುವೊಡೆ ಕುರುಪತಿಯನೇ ನೆಱ[3]
ಹೋಲುವನು ಗದೆ ಹೆಗಲಲದೆ [1]ಮೇ-
ಲಾಳ[1] ಕಾಣೆನು [2]ಛತ್ರ ಚಾಮರ[2]ಗಜಹಯಾವಳಿಯ ।
ಹೋಲುವದು ಜನವೊಬ್ಬರೊಬ್ಬ[3]ರ-
ನಾ[3]ಳೊಳೊಬ್ಬನೊ ಮೇಣು ಕುರುಭೂ-
ಪಾಲಕನೊ ನೋಡುವೆನೆನುತ ಸಂಜಯನು ನಡೆತಂದ ॥ ೧೦ ॥

ಬಂದು ಕಂಡನು ರಾಜವನವಾ-
ಕಂದನನು ಧೃತರಾಷ್ಟ್ರರಾಯನ
[1]ಕ[1]ಂದನನು [2]ಸೌಜನ್ಯ[2]ವಲ್ಲೀ ವಿಪುಲಕಂ[3]ದನ[3]ನು ।
ಮುಂದುವರಿವ ವಿಲೋಚನಾಂಬುಗ-
ಳಿಂದ ಸೈರಣೆ ಮಿಗದೆ ಸಂಜಯ
[4]ನಂದು[4] ದೊಪ್ಪನೆ ಕೆಡೆದು ಹೊರಳಿದನರಸನಂಘ್ರಿಯಲಿ ॥ ೧೧ ॥

ಕಡಲ ತಡಿಪರಿಯಂತ ರಾಯರ
ಗಡಣದಲಿ ನೀನೊಬ್ಬನೆಂಬೀ
ನುಡಿಗೆ ನಿಶ್ಚಯವೀಗಳಾ[1]ದುದೆ[1] ತಂದೆ ಕುರುರಾಯ ।
ಬಿಡದೆ ಬಾಗುವ ನೃಪರ ಮುಕುಟದೊ-
ಳಿಡುವ ಕೋಮಲಚರಣವಿದಱೊಳು
ನಡೆಯಲೆಂತೈ ಕಲಿತೆ ಎಂದನು ಸಂಜಯನು ನೃಪನ ॥ ೧೨ ॥

---

೧೦. [1]ಮೊಳಕಾಲ (ಅ). [2]ಚಮರಚಾಹಿ (ಅ ಕುಮಾ). [3]ರೊಳಾ (ಅ).
[ಮೇಲಾಳು-ಹೆಚ್ಚಿನ ಸೈನಿಕ].

೧೧. [1]ನ (ಅ) ದೌರ್ಜನ್ಯ (ಅ ಕುಮಾ). [3]ದರ (ಅ). [4]ನಿ (ಅ).
[ಮಾಕಂದ-ಮಾವಿನಮರ. ಕಂದ-ಮಗು (ಗ). ಸೌಜನ್ಯವಲ್ಲೀ-ಸಜ್ಜನಿಕೆಯೆಂಬ ಬಳ್ಳಿ ವಿಪುಲಕಂದ-ದೊಡ್ಡದಾದ ಗಡ್ಡೆ ವಿಲೋಚನಾಂಬು-ಕಣ್ಣೀರು. ಮಿಗದೆ-ಹೆಚ್ಚಾಗದೆ (ಅಂದರೆ, ಸಾಲದಾಗಿ). ಕೆಡೆ-ಬೀಳು].

೧೨ [1]ಯಿತು (ಅ).
[ತಡಿ-ತೀರ. ಗಡಣ-ಸಮೂಹ]

ಶಶಿರುಚಿಗೆ ಸೈರಿಸದ ಸಿರಿಮು[1]ಖ[1]
ಬಿಸಿಲ ಸೆಕೆಗಾಂತುದೆ ಸುಗಂಧ-
ಪ್ರಸರಪೂ[2]ರ್ಣಘ್ರಾಣವೀ[2] ಹಳಿವೆಣನ ಹೊಲಸಿನಲಿ ।
ಉಸುರು[3]ದೆಗೆವಂತಾಯ್ತು[3] ಗೀತದ
ರಸದ ಮಧು[4]ರವನಾಂತ[4] ಕಿವಿ ವಾ-
ಯಸಸೃಗಾಲಧ್ವನಿಗೆ ಸೊಗಸಿತೆ [5]ಎನುತ ಹೊರಳಿದನು[5] ॥ ೧೩ ॥

ಕೇಳು ಸಂಜಯ ಪೂರ್ವಸುಕೃತದ
ಶಾಲಿವನವೊಣಗಿದೊಡೆ ಭಾರಿಯ
ತೋಳುಗುತ್ತಿನ ಜಯ[1]ಲಕುಮಿ ಜಂ[1]ಗಳವ [2]ಜಾಜಿ[2]ದೊಡೆ ।
ಭಾಳಲಿಪಿಗಳ ಲೆಕ್ಕವನು ಪ್ರತಿ-
ಕೂಲವಿಧಿ ಪಲ್ಲಟಿಸಿ ಬರೆದೊಡೆ
ಹೇಳಿ ಫಲವೇನೆನುತ ತುಂಬಿದನರಸ ಕಂಬನಿಯ ॥ ೧೪ ॥

ಕದಡಿ[1]ತ[1]ಂತಃಕರಣ ವಿಕ್ರಮ-
ದುದಧಿ ನೆಲೆಯಾ[2]ಯಿತು[2] ನಿರರ್ಥ[3]ಕೆ
ಒ[3]ದ[4]ಜಿದಿರು ಬೆದಜಿದಿರು[4] ಸಂಜಯ ಹಿಂದನೆಣಿಸದಿರು ।
ಕದನದಲಿ ದುಶ್ಶಾಸನನ ತೇ-
ಗಿದನಲಾ ಬಕವೈರಿ ತಮ್ಮನ-
ನುದರದಲಿ ತೆಗೆವೆನು ವಿಚಿತ್ರವ ನೋಡು ನೀನೆಂದ ॥ ೧೫ ॥

---

೧೩. [1]ಡಿ (ಅ ಕುಮಾ). [2]ರ ಘ್ರಾಣಗಳು (ಅ). [3]ದೆಗಹಾದುದೆ (ಅ ಕುಮಾ). [4]ಖಿಂಗಾಂತ (ಅ ಕುಮಾ). [5]ತಂದೆ ಕುರುರಾಯ (ಅ ಕುಮಾ).
[ಶಶಿರುಚಿ–ಚಂದ್ರನ ಕಿರಣ (ಬೆಳುದಿಂಗಳು). ಸಿರಿಮುಖ–ಸಂಪದ್ಯುಕ್ತವಾದ ಮುಖ. ಆನು–ಒಡ್ಡು. ಸುಗಂಧ ಪ್ರಸರ ಪೂರ್ಣ ಘ್ರಾಣ–ಸುವಾಸನೆಯಿಂದ ಪೂರ್ಣವಾಗಿ ವ್ಯಾಪ್ತವಾದ ಘ್ರಾಣೇಂದ್ರಿಯ. ಉಸುರುದೆಗೆ–ಉಸಿರು ತೆಗೆದುಕೊ, ಉಸಿರಾಡು. ಆನ್–ಪಡೆ, ಹೊಂದು ವಾಯಸ–ಕಾಗೆ. ಸೃಗಾಲ–ನರಿ].

೧೪. [1]ದ ಸಿರಿಯಂ (ಅ). [2]ದಾಂಟಿ (ಅ).
[ಪೂರ್ವ ಸುಕೃತ–ಪೂರ್ವ ಪುಣ್ಯ. ಶಾಲಿವನ–ಬತ್ತದ ಗದ್ದೆ. ತೋಳಗುತ್ತಿನ–ಬಾಹುಪರಾಕ್ರಮವುಳ್ಳ, ಬಾಹುವನ್ನು ಆಶ್ರಯಿಸಿರುವ. ಜಂಗಳ–ಕೃಶವಾಗು ವಿಕೆ (?). (ಜನ್ಮಕಣ–ಹುಟ್ಟುವ ಸ್ಥಳ). ಭಾಳಲಿಪಿ–ಹಣೆಯ ಬರಹ. ಪ್ರತಿ ಕೂಲ ವಿಧಿ–ಪ್ರತಿಕೂಲ ದೈವ. ಪಲ್ಲಟಿಸು–ವ್ಯತ್ಯಾಸವಾಗು].

೧೫. [1]ದ (ಅ). [2]ದುದು (ಅ). [3]ಕಕೊ (ಅ). [4]ಜರಿದಡೆ ಫಲವೇನು (ಅ ಕುಮಾ).
[ಉದಧಿ–ಸಮುದ್ರ. ತೇಗಿದನು–ತಿಂದು ತೇಗಿದನು (ಅಂದರೆ, ಕೊಂದು ತೃಪ್ತಿ ಹೊಂದಿದ). ಬಕವೈರಿ–ಭೀಮ. ಉದರದಲಿ–(ಭೀಮನ) ಹೊಟ್ಟೆಯೊಳಗಿನಿಂದ].

ನರನ ಬಸುಱಿಲಿ ಕರ್ಣನನು [1]ನೃಪ-
ವರನ ಸೀಳಿದು[1] ಶಲ್ಯನನು ಕಾ-
ತರಿಸದಿರು ಶಕುನಿಯನುಲೂಕನ ಯಮಳರಿಬ್ಬರಲಿ ।
ಹರಿಬಕೆ[2]ದೆಲಾ ಗದೆ[2] ಮುರಾಂತಕ
ಹರಹಿಕೊಳಲಿ ಮದೀಯಬಾಹು-
ಸ್ಫುರಣಶಕ್ತಿಗೆ ಭಂಗ ಬಾರದು ನೋಡು ನೀನೆಂದ ॥ ೧೬ ॥

ಖಾತಿ ಕಂದದು ಮನದ ಧೈರ್ಯದ
ಧಾತು ಕುಂದದು ಲಜ್ಜೆಯಭಿಮತ
ಜಾತಿಗೆಡದು ವಿರೋಧಬಿಡದು ಯುಧಿಷ್ಠಿರಾದ್ಯರಲಿ ।
ಏತಕಿದು ನಿನ್ನೀ ಪ್ರಳಾಪ ವಿ-
ಧೂತರಿಪು ಕುರುರಾಯನೆಂಬೀ
ಖ್ಯಾತಿಯಲ್ಲದೆ ಬೇಱೆ ರಾಜ್ಯವನೊಲ್ಲೆ ನಾನೆಂದ ॥ ೧೭ ॥

ಜೀಯ ನಿಮ್ಮಡಿಗಳಿಗೆ ಗುರುಗಾಂ-
ಗೇಯವಿದುರಾದಿಗಳು ಹೇಳಿದ
ಜೋಯಿಸವ ಕೈಕೊಂಡಿರೇ ನಮ್ಮಾಪ್ರಳಾಪದಲಿ ।
ರಾಯ ಫಲವೇನೈ ಯುಧಿಷ್ಠಿರ-
ರಾಯನೊಲಿದಂತಿರಲಿ ನಿಮ್ಮಯ
ತಾಯಿತಂದೆಗೆ ಹೇ[1]ಳ್ವನೇ[1]ನನು ಬುದ್ಧಿಗಲಿಸೆಂದ ॥ ೧೮ ॥

---

೧೬. [1]ನೃಪವರನೊಳಾ (ಅ). [2]ದಿರಾಗಲಿ (ಅ ಕುಮಾ).
[ನೃಪವರ-ಯುಧಿಷ್ಠಿರ. ಯಮಳರು-ನಕುಲಸಹದೇವರು. ಹರಿಬ-ಕರ್ತವ್ಯ ನಿರ್ವಹಣೆ. ಇದೆಲಾ-ಇದೆಯಲ್ಲವೇ. ಮುರಾಂತಕ-ಕೃಷ್ಣ. ಹರಹಿಕೊಳಲಿ-ಬೇಕಾದಷ್ಟು ಸಹಾಯ ಮಾಡಲಿ. ಮದೀಯ-ನನ್ನ. ಬಾಹುಸ್ಫುರಣಶಕ್ತಿ-ತೋಳಿನಲ್ಲಿ ಚಿಮ್ಮುವ ಶಕ್ತಿ, ಸಹಜವಾದ ತೋಳಿನ ಬಲ. ಭಂಗ-ಅಡ್ಡಿ].

೧೭. [ಧಾತು-ಸತ್ವ. ಲಜ್ಜೆಯಭಿಮತ ಜಾತಿಗೆಡದು-(?). ವಿರೋಧ-ವೈರ. ವಿಧೂತರಿಪು-ನಾಶಮಾಡಲ್ಪಟ್ಟ ಶತ್ರುಉಳ್ಳವನು].

೧೮. [1]ಳಲೇ (ಅ).
[ಜೋಯಿಸ-ಜ್ಯೋತಿಷ್ಯ, ಭವಿಷ್ಯ. ಕೈಕೊಳ್ಳು-ಅಂಗೀಕರಿಸು, ಒಪ್ಪಿಕೊಳ್ಳು, ನಂಬು. ಬುದ್ಧಿಗಲಿಸು-ತಿಳಿವಳಿಕೆ ಕೊಡು].

ಇದೆ ಸರೋವರವೊಂದು ಹರಿದೂ-
ರದಲಿ ಭುವನಖ್ಯಾ[1]ತಿಯೊಳು ಧ್ಯಾ-
ನ[1]ದಲಿ ಮುಳುಗಿಹೆನೊಂದುದಿನ ಪರಿಯಂತ ಸಲಿಲದಲಿ ।
ಕದನದಲಿ ಕೌಂತೇಯರನು ಯಮ-
ಸದನದಲಿ ತೋಱುವೆನು ತಾನೆಂ-
ಬುದು ರಹಸ್ಯವು ಜನನಿಜನಕರಿಗಱುಹು ನೀನೆಂದ ॥ ೧೯ ॥

ತೆಗಸು ಪಾಳೆಯವೆಲ್ಲವನು ಗಜ-
ನಗರಿಗೈದಿಸು ರಾಣಿಯರ ದಂ-
ಡಿಗೆಯ ಕಳುಹಿಸು ಸೂತಸುತದುಶ್ಶಾಸನಾದಿಗಳ ।
ಹಗೆಯ ವಿಜಯದ ಹರಹದಿರು ನಂ-
ಬುಗೆಯ ನುಡಿಯಲಿ ಭಾನುಮತಿಯರ
ಬಗೆಯ ಸಂತೈಸೆಂದು ಬೋಳೈಸಿದನು ಸಂಜಯನ ॥ ೨೦ ॥

[1]ನಿ[1]ಂದು ತಡಿಯಲಿ ಸಂಜಯನ ಕರೆ-
ದೆಂದನೀ ಸರಸಿಯಲಿ ಮುಳುಗಿಹೆ-
ನಿಂದಿನೀ ದಿವಸವನು [2]ಕಳೆ[2]ವೆನು ಕೊಳನ ಮಧ್ಯದಲಿ ।
ಮುಂದೆ ಪಾಂಡವರೈವರನು ಗೆಲಿ-
ದಂದು ಹೊಗುವೆನು ಗಜಪುರವನಿಂ-
ತೆಂದು ಜನನಿಗೆ ಜನಕವಿದುರರಿಗಱುಹು ನೀನೆಂದ ॥ ೨೧ ॥

---

೧೯. [1]ತ ತನ್ಮಧ್ಯ (ಅ ಕುಮಾ).
[ಹರಿದೂರ-ಹರಿದಾರಿಯಷ್ಟು ದೂರ. ಭುವನ ಖ್ಯಾತಿ-ಪ್ರಪಂಚದಲ್ಲಿಯ ಕೀರ್ತಿ. ಸಲಿಲ-ನೀರು].

೨೦. [ದಂಡಿಗೆ-ಪಲ್ಲಕ್ಕಿ. (ಹಗೆಯ ವಿಜಯದ) ಹರಹದಿರು-(ಶತ್ರುಗಳಾದ ಪಾಂಡವರ ಗೆಲುವಿನ ಸುದ್ದಿಯನ್ನು) ಹರಡಬೇಡ. ಬಗೆ-ಮನಸ್ಸು. ಬೋಳೈಸು-ಸಂತೈಸು, ಸಮಾಧಾನಪಡಿಸು].

೨೧. [1]ಬ (ಅ ಆ ಕುಮಾ), ಸ್ವೀಪಾ ‘ಅ’ ಅಡಿ ಟಿಪ್ಪಣಿಯ ಪಾಠಾಂತರ). [2]ಳಿ (ಅ).
[ತಡಿ-ದಡ. ಸರಸಿ-(ವೈಶಂಪಾಯನ ಅಥವಾ ದ್ವೈಪಾಯನ) ಸರೋವರ. ಹೊಗು-ಪ್ರವೇಶಿಸು].

ಚಾರುಚಂದ್ರೋ[1]ಪ[1]ಲದ ರಮ್ಯಾ-
ಗಾರದಲಿ ಮಣಿಮಯದ [2]ರಚನೋ-
ದಾರದಿಂ ಹೊಳೆಹೊಳೆವ[2] ಭವನದ ಚಿತ್ರಶಾಲೆಯಲಿ ।
ಸಾರಮಣಿಪರಿಯಂಕಪರಿಸಂ-
ಸ್ಕಾರದಲಿ ಮಲಗುವ ಮಹೀಪತಿ
ನೀರೊಳೊಱಗುವನೆಂದು ಸಂಜಯನೊಱಲಿದನು ಹೊರಳಿ ॥ ೨೨ ॥

ಒಱಲದಿರು ಸಂಜಯ ವಿರೋಧಿಗ-
ಳಱಿ[1]ವರೆನ್ನಿ[1]ದ್ದೆಡೆಯನಿಲ್ಲಿಯೆ
ಮಱೆದು ಕಳೆ ಪಾಳೆಯವ ತೆಗಸಬುಜಾಕ್ಷಿಯರ ಕಳುಹು ।
ತೆಱಹುಗೊಡು ನೀ ಹೋಗೆನುತ ಮುಂ-
ಜೆಱಗನಳವಡೆ ಸೆಕ್ಕಿ ಪೂರ್ವದ-
ಲಱಿದ ಸಲಿಲಸ್ತಂಭವಿದ್ಯೆಯನರಸ ಚಿಂತಿಸಿದ ॥ ೨೩ ॥

ದ್ಯುಮಣಿಮೊದಲಾದಖಿಳ ಸುರರಿಗೆ
ನಮಿಸಿ ವರುಣಧ್ಯಾನವನು ಹೃ-
ತ್ಕಮಲದಲಿ ನೆಲೆಗೊಳಿಸಿ ನಾಲುಕುದೆಸೆಯನಾರೈದು ।

---

೨೨. [1]ಪ್ಪ (ಅ). [2]ಬಹು ವಿ। ಸ್ತಾರಭದ್ರೋಪರಿಯ (ಅ ಕುಮಾ).

[ಚಂದ್ರೋಪಲ (ಚಂದ್ರ + ಉಪಲ)-ಚಂದ್ರಕಾಂತ ಶಿಲೆ. ರಮ್ಯಾಗಾರ-ಮನೋಹರವಾದ ಮನೆ (ಅರಮನೆ). ಮಣಿಮಯದ-ರತ್ನದಿಂದ ವ್ಯಾಪ್ತವಾದ, ರತ್ನ ಖಚಿತ. ರಚನೋದಾರ-ನಿರ್ಮಿತಿಯ ವೈಶಾಲ್ಯ, ವಿಶಾಲವಾಗಿ ನಿರ್ಮಿಸಿದ್ದು. ಸಾರಮಣಿ ಪರಿಯಂಕ (=ಪರ್ಯಂಕ)-ಶ್ರೇಷ್ಠವಾದ ರತ್ನಗಳಿಂದ ಅಲಂಕೃತವಾದ ಮಂಚ. ಪರಿಸಂಸ್ಕಾರ-ಚೆನ್ನಾಗಿ ಶುದ್ಧ ಮಾಡುವುದು, ಲೋಪದೋಷಗಳಿಲ್ಲದಂತೆ ಪರಿಷ್ಕರಿಸುವುದು. ಒಱಗು-ಮಲಗು. ಒಱಲು-ಗೋಳಾಡು].

೨೩. [1]ಅನಿ (ಅ ಕುಮಾ).

[ಎನ್ನಿದ್ದೆಡೆ-ನಾನು ಇರುವ ಸ್ಥಳ. ತೆಱಹುಗೊಡು-(ನನಗೆ) ಅವಕಾಶ ಕೊಡು. ಮುಂಜೆಱಗು-ವಸ್ತ್ರದ ಅಂಚಿನ ಮುಂಭಾಗ. ಅಳವಡೆ-ಸರಿಯಾಗಿ ಸೇರಿಕೊಳ್ಳುವಂತೆ. ಪೂರ್ವದಲಱಿದ-ಹಿಂದೆ ತಿಳಿದುಕೊಂಡಿದ್ದ. ಸಲಿಲಸ್ತಂಭವಿದ್ಯೆ-ಜಲಸ್ತಂಭ (ನ) ವಿದ್ಯೆ (ನೀರಿನಲ್ಲಿ ಬಹುಕಾಲ ಮುಳುಗಿರಬಲ್ಲ ಮಂತ್ರವಿದ್ಯೆ)].

೨೪. [1]ಗಳ ಮುಖ (ಅ ಕುಮಾ).

[ದ್ಯುಮಣಿ-ಸೂರ್ಯ. ವರುಣ-ಪಶ್ಚಿಮ ದಿಕ್ಕಿನ ಅಧಿಪತಿ ಹಾಗೂ ಸಮುದ್ರಾಧಿಪತಿ, ವರ್ಷಾಧಿಪತಿ (ವರ್ಷ-ಮಳೆ); ಜಲಾಧಿಪತಿ. ದೆಸೆ-ದಿಕ್ಕು. ಆರಯ್-ಪರೀಕ್ಷಿಸು,

ಕುಮತಿ ಯಿಳಿದನು ಜಾನುಕಟಿ ಹೃ-
ತ್ಕಮ[1]ಲವಾನನ[1] ಮೂರ್ಧಪರಿಯಂ-
ತಮರಿದುದಃ ಜಲ ಕೊಳನಮಧ್ಯದಲರಸ ಪವಡಿಸಿದ || ೨೪ ||

ಅರಸ ಕೇಳ್ ಕೃಪಗುರುಜಕೃತವ-
ರ್ಮರು ರಥಾಶ್ವಂಗಳನು ದೂರದ-
ಲಿರಿಸಿ ತಲೆಮುಸುಕಿನಲಿ ಬಂದರು ಕೊಳನ ತಡಿಗಾಗಿ |
ತರುಲತೆಗ[1]ಳಿಜುಬಿ[1]ನಲಿ ಕಂಜಾ-
ಕರ[2]ದ ತಡಿಯಲಿ[2] [3]ನಿಲುಕಿ[3] ಮೆಲ್ಲನೆ
ಕರೆದು [4]ಸೂಚಿಸಿ[4] ಹೇಳಿದರು ತಮತಮ್ಮ ಹೆಸರುಗಳ || ೨೫ ||

ಬದುಕಿ ಬಂ[1]ದಿರೆ[1] ಭೀಮ ನಿಮ್ಮನು
ಗದೆಯು ಸವಿಗಾಣಿಸನಲಾ ಸಾ-
ಕಿದನ ಸಮ[2]ಯ[2]ಕೆ ಸುಳಿದಿರೈ ಸಾಹಿತ್ಯರೇಖೆಯಲಿ |
ಕದನದಲಿ ಸೌಬಲಸುಶರ್ಮರ
ಹೊದಱ ಹರೆಗಡಿ[3]ವ[3]ಲ್ಲಿ ನೀವ್ ಮಾ-
ಡಿದ ಪರಾಕ್ರಮವಾವುದೆಂದನು ನೃಪತಿ ಖಾತಿಯಲಿ || ೨೬ ||

---

೨೪. ಚೆನ್ನಾಗಿ ನೋಡು. ಕುಮತಿ-ಕೆಟ್ಟಬುದ್ಧಿಯುಳ್ಳವನು. ಜಾನು-ಮೊಳಕಾಲು. ಕಟಿ-ಸೊಂಟ. ಆನನ-ಮುಖ. ಮೂರ್ಧ-ನೆತ್ತಿ. ಅಮರು-ಮೇಲೆ ಕವಿ, ಆವರಿಸು. ಪವಡಿಸು-ಮಲಗು].

೨೫. [1]ಳುಬ್ಬಿ (ಅ). [2]ದೊಳೊಯ್ಯನೆ (ಅ). [3]ನಿಂದು (ಅ ಕುಮಾ). [4]ಕೇಳಿಸಿ (ಅ ಕುಮಾ).

[ಇಜುಬು-ಇಕ್ಕಟ್ಟಾದ ಸ್ಥಳ. ಕಂಜಾಕರ-ಸರೋವರ, ಕೊಳ. ನಿಲುಕು-ತುದಿಗಾಲೂರಿ ನಿಲ್ಲು].

೨೬. [1]ದೊಡೆ (ಅ). [2]ರ (ಅ). [3]ತದಲಿ (ಅ).

[ಸವಿಗಾಣಿಸನಲಾ-ರುಚಿ ತೋರಿಸಲಿಲ್ಲ, ಅಲ್ಲವೇ? ಸಾಕು-ಸಲಹು, ಪೋಷಿಸು. ಸಮಯ-ಆಪತ್ಕಾಲ. ಸಾಹಿತ್ಯರೇಖೆ-ಒಟ್ಟಿಗೆ ಸಾಲಾಗಿ, ಒಟ್ಟುಗೂಡಿ. ಸೌಬಲ-ಶಕುನಿ. ಸುಶರ್ಮ-ತ್ರಿಗರ್ತ ದೇಶದ ರಾಜ (ಕೌರವ ಪಕ್ಷದವನು), ಕರ್ಣನ ಮಗ (?). ಹೊದಱ ಹರೆಗಡಿವಲ್ಲಿ-ಪೊದೆಗಳ ಕೊಂಬೆ ರೆಂಬೆಗಳನ್ನು ಕತ್ತರಿಸುವಾಗ (ಅರ್ಥಾತ್ ಸೈನ್ಯವನ್ನು ಕೊಲ್ಲುವಾಗ)].

ಅರಸ ಪೊಱಮಡು ಭೀಮಪಾರ್ಥರ
ಕರುಳ ಬೀಯುವ ಭೂ[1]ತ[1]ನಿಕರ[2]ಕೆ[2]
ಬಱಿಸುವೆವು ನೀ ನೋಡಲೊಡ್ಡುವೆವಸ್ತ್ರಸಂತತಿಯ ।
ಗರುವರಿಹರೇ ನೀರೊಳಾ ಹಿಮ-
ಕರಮಹಾನ್ವಯ ಕೀರ್ತಿ ಜಲದೊಳು
ಕರಗದಿಹುದೇ ಕಷ್ಟವೃತ್ತಿಯಿದೆಂದ[3]ರ[3]ವನಿಪನ ॥ ೨೭ ॥

ಅರಸ ಕೇಳೈ ದೈವಯೋಗವ
ಪರಿಹರಿಸಲಾರಳವು ಪವನಜ-
ನರಮನೆಯ ಮೃಗಬೇಂಟೆಕಾಱರು ಮಾಂಸಭಾರದಲಿ ।
ಬರುತ ನೀರಡಿಸಿದರು ಕಂಡರು
ಸರಸಿಯನು ನೀರ್ಗುಡಿಯಲೈತಂ-
ದಿರಿಸಿದರು ತೀರದಲಿ ಬಹಳಾಮಿಷದ ಕಂಬಿಗಳ ॥ ೨೮ ॥

ಚರಣವದನವ ತೊಳೆದು ನಿರ್ಮಳ-
ತರವರಾಂಬುವನೀಂಟಿದರು ಕೃಪ-
ಗುರುಸುತರ ನುಡಿಗಳನು ನಡುನೀರಿನ ನೃಪಧ್ವನಿಯ ।
ಅಱಿದರಿವರಾಲಿಸಿದರೇನಿದು
ಕುರುಪತಿಯು ತತ್ಸುಭಟವಾ[1]ದೋ[1]-
ತ್ತರವಲಾ ಲೇಸಾಯ್ತೆನುತ ಕೇಳಿದರು ಮಱೆವಿಡಿದು ॥ ೨೯ ॥

---

೨೭. [1]ರಿ (ಅ). [2]ಬಳಗ (ಅ ಕುಮಾ). [3]ನ (ಅ).
[ಪೊಱಮಡು-ಹೊರಡು, ಹೊರಕ್ಕೆ ಬಾ. ಬೀಯ-ಆಹಾರ, ಉಣಿಸು. ಭೂತನಿಕರ-ರಣಹದ್ದು ಕಾಗೆ ನರಿ ಮುಂತಾದ ಪ್ರಾಣಿಪಕ್ಷಿಗಳ ಸಮೂಹ. ಅಸ್ತ್ರಸಂತತಿ-ಬಾಣಗಳ ಪರಂಪರೆ. ಗರುವರು-ಶ್ರೇಷ್ಠರಾದವರು, ಮಾನಧನರು. ಹಿಮಕರಮಹಾನ್ವಯ-ಮಹಾ ಚಂದ್ರವಂಶ. ಕಷ್ಟವೃತ್ತಿ-ಕಠಿನವಾದ, (ಅಥವಾ ಅವಮಾನಕರವಾದ) ನಡವಳಿಕೆ].

೨೮. [ದೈವಯೋಗ-ಅದೃಷ್ಟದ ಘಟನೆ. ಪರಿಹರಿಸು-ಹೋಗಲಾಡಿಸು. ಅಳವು-ಸಾಮರ್ಥ್ಯ, ಸಾಧ್ಯತೆ. ಆಮಿಷ-ಮಾಂಸ. ಕಂಬಿ-ಅಡ್ಡೆ].

೨೯. [1]ಚೋ (ಅ).
[ಚರಣವದನ-ಪಾದ ಮತ್ತು ಮುಖ. ವರಾಂಬು-ಶ್ರೇಷ್ಠವಾದ ನೀರು. ಈಂಟು-ಕುಡಿ. ನೃಪಧ್ವನಿ-ದುರ್ಯೋಧನನ ಧ್ವನಿ. ಆಲಿಸಿದರು-ಕೇಳಿಸಿಕೊಂಡರು. ತತ್ಸುಭಟವಾದೋತ್ತರ- ಆ ಮಹಾವೀರರ (ಎಂದರೆ ಕೃಪ, ದ್ರೋಣ, ಕೃತವರ್ಮರ) ಮಾತಿಗೆ (ಕೌರವ) ಕೊಟ್ಟ ಉತ್ತರ. ಮಱೆವಿಡಿದು-ಮರೆಯಾಗಿರುವ ಸ್ಥಳವನ್ನು ಹಿಡಿದು, ಆಶ್ರಯಿಸಿ].

ಆಯಿತಿದು ನೃಪ ರಾಜಕಾರ್ಯದ
ದಾಯಕಿದು[1]ಧುರ ಪಥ[1]ವಲಾ ಕುರು-
ರಾಯಗುಪ್ತನಿವಾಸ[2]ವರ್ಥ[2]ಪ್ರದವಲಾ ನಮಗೆ ।
ಕಾ[3]ಯ[3]ದಿರು ಕಂ[4]ಡಾ[4] ಸರೋಜದ
ತಾ[5]ಯೆ[5] ಸರಸಿಯೆನುತ್ತ ಹಾಯ್ದರು
ವಾಯುತನುಜನ ಬೇಂಟೆಕಾರರು ನಗುತ ಪಾಳೆಯಕೆ ॥ ೩೦ ॥

ಜೀಯ ಕುರುಪತಿ ಗುಪ್ತದಲಿ ದ್ವೈ-
ಪಾಯನನ ಸರಸಿಯಲಿ ಸಮರವಿ-
ಧಾಯಕದ ವಾರ್ತೆಯನು ತನ್ನವರೊಡನೆ ತೀರದಲಿ ।
ಬಾಯಿಗೇಳಿಸುತಿರ್ದ ನಾವ್ ತ-
ತ್ತೋಯಪಾನಕೆ [1]ಬಂದು[1] ಕಂಡೆವು
ರಾಯನಂಘ್ರಿಗಳಾಣೆಯೆಂದರು ಶಬರರನಿಲಜಗೆ ॥ ೩೧ ॥

ಬಂದುದರಿಬಲ ಕೊಳನ ತೀರದ-
ಲಂದು ವೇಢೈಸಿದರು ಸರಸಿಯ
ಬಂದಿಕಾರರು ಜೊಬ್ಬುಜಿತದಬ್ಬರಕೆ ಧರೆ ಬಿರಿಯೆ ।
ಅಂದಳದಲೈತಂದು ಧರ್ಮಜ
ನಿಂದನರ್ಜುನಭೀಮಯಮಳಮು-
ಕುಂದಸಾತ್ಯಕಿದ್ರುಪದಸೂನುಶಿಖಂಡಿಗಳು ಸಹಿತ ॥ ೩೨ ॥

---

೩೦. [1]ದುರಫಲ (ಅ). [2]ವಾರ್ತಾ (ಅ). [3]ಯಿ (ಅ ಕುಮಾ). [4]ಡೌ (ಅ ಕುಮಾ). [5]ಯಿ (ಅ ಕುಮಾ).
[ಆಯಿತು-ಆಗಬಂದಿತು, ಒದಗಿ ಬಂದಿತು. ನೃಪರಾಜಕಾರ್ಯ-ಯುಧಿಷ್ಠಿರನ ರಾಜಕಾರ್ಯ. ದಾಯ-ಸಮಯ, ಸಂದರ್ಭ. ಧುರಪಥ-ಯುದ್ಧಕ್ಕೆ (ಅನುಕೂಲವಾದ) ದಾರಿ. ಗುಪ್ತನಿವಾಸ-ರಹಸ್ಯವಾಗಿ, ಗುಟ್ಟಾಗಿ ಇರುವ ಸ್ಥಳ. ಅರ್ಥಪ್ರದ-ಪ್ರಯೋಜನಕಾರಿ. ಕಾಯದಿರು-ರಕ್ಷಿಸಬೇಡ, ಕಾಪಾಡಬೇಡ. ಕಂಡಾ-ಕಂಡೆಯಾ. ಸರೋಜದ ತಾಯೆ-ಕಮಲಗಳನ್ನು ಪೋಷಿಸುವ ತಾಯಿ (ಕಮಲಗಳನ್ನು ಪೋಷಿಸುವ ಹಾಗೆ ದುರ್ಯೋಧನನನ್ನು ಪೋಷಿಸಬೇಡ ಎಂದು ಧ್ವನಿತಾರ್ಥ). ಸರಸಿ-ಸರೋವರ, ಕೊಳ. ಹಾಯ್ದರು-ಧಾವಿಸಿದರು, ಓಡಿದರು].

೩೧. [1]ತಿರುಗಿ (ಅ ಕುಮಾ).
[ಸಮರವಿಧಾಯಕ-ಯುದ್ಧದ ವಿಧಿ ವಿಧಾನ. ಬಾಯಿಗೇಳಿಸು-(ನೀರಿನಲ್ಲಿ ಅಡಗಿಕೊಂಡಿದ್ದರೂ) ತಾನು ಹೇಳಿದ್ದು ಕೇಳುವ ಹಾಗೆ ಮಾಡುತಿದ್ದ. ತತ್ತೋಯಪಾನಕೆ-ಆ ಸರೋವರದ ನೀರನ್ನು ಕುಡಿಯುವುದಕ್ಕೆ, ಶಬರ-ಬೇಡ].

೩೨. [ವೇಢೈಸು-ಸುತ್ತುವರಿ, ಮುತ್ತಿಕೊಳ್ಳು. ಸರಸಿಯ ಬಂದಿಕಾರರು-ಸರೋವರವನ್ನು ಸುತ್ತುವರಿದವರು, ಆಕ್ರಮಣ ಮಾಡಿದವರು].

೩. ಭೀಮನ ಮೂದಲೆ

ಏಳು ಕೌರವರಾಯ ಸಲಿಲ-
ವ್ಯಾಳನೇ ನೀನಕಟ ಜಲದೊಳ-
ಗಾಳುವರೆ ಕಾಳಾಯ್ತು ನಿನ್ನಲಿ ಗರುವಶಶಿವಂಶ ।
ಕಾಳಗದೊಳದ್ದಿದೆ ಸಹೋದರ-
ಜಾಲಪುತ್ರಜ್ಞಾ[1]ತಿ[1] ಬಂಧು ನೃ-
ಪಾಲರನು ನೀನೀರೊಳಡಗಿದೆ ಕಷ್ಟ ಹೋಗೆಂದ ॥ ೩೩ ॥

ಜಾ[1]ತಿ[1]ಮಾತ್ರದ ಮೇಲೆ [2]ಬಂದ[2]
ಖ್ಯಾತಿವಿಖ್ಯಾತಿಗಳು ನಮಗೆನೆ
[2]ಖ್ಯಾ[2]ತರಾದೆವು ನಾವು ನಿರ್ಮಳಸೋಮವಂಶದಲಿ ।
ಭೀತಿಯಲಿ ನೀ ನೀರ ಹೊಕ್ಕೊಡೆ
ಮಾತು [4]ತಾಗದೆ[4] ನಮ್ಮನಕಟಾ
ಬೂತುಗಳ ಕೈಬಾಯ್ಗೆ ಬಂದೈ ತಂದೆ ಕುರುರಾಯ ॥ ೩೪ ॥

ಕಂಡೆನೆಂದೊಬ್ಬನ ಪಲಾಯನ-
ಪಂಡಿತನನುತ್ತರನನಾತನ
ಗಂಡ ನೀನಾದ್ಲೆ ಪಲಾಯನಸಿರಿಯ ಸೂಱೆ[3]ಯಲಿ ।
ಭಂಡರಿಬ್ಬರು ಭೂಮಿಪರೊಳಾ
ಭಂಡ[1]ನಿಗೆ[1] ನೀ ಮಿಗಿಲು ಸಲಿಲದ
ಕೊಂಡ[2]ವನು[2] ಹೊಕ್ಕನೆ ವಿರಾಟಜನೆಂದನಾ ರಾಯ ॥ ೩೫ ॥

---

೩೩. [1]ನಿ (ಅ).

[ಸಲಿಲವ್ಯಾಳ–ನೀರಹಾವು. ಅಳು–ಮುಳುಗು. ಕಾಳಾಗು–ಕಳಂಕಗೊಳ್ಳು, ಕಪ್ಪಿಡು. ಗರುವ–ಶ್ರೇಷ್ಠವಾದ. ಅದ್ದಿದೆ–ಮುೞುಗಿಸಿಬಿಟ್ಟದೆ].

೩೪. [1]ತ (ಅ). [2]ಬಂದವು (ಅ), [3]ಜಾ (ಅ ಕುಮಾ). [4]ಹೊರದೇ (ಅ).

[ಜಾತಿ–ಹುಟ್ಟು, ಜನ್ಮ. ಖ್ಯಾತಿ–ಕೀರ್ತಿ. ಮಾತು–ಆಡಿಕೆಯ ಮಾತು, ಅಪಖ್ಯಾತಿ. ತಾಗು–ತಗುಲಿಕೊ, ಸೋಕು. ಬೂತು–ಹೇಡಿ, ಭಂಡ, ಮಾನಗೆಟ್ಟವನು. ಕೈಬಾಯಿ–ನಿಂದೆ, ಹೀಯಾಳಿಕೆ].

೩೫. [1]ನೀನೇ (ಅ). ದಲಿ (ಅ ಕುಮಾ).

[ಪಲಾಯನ ಪರಾಜಿತ–(ಹೇಡಿಯಂತೆ) ಓಡಿಹೋಗುವುದರಲ್ಲಿ ಗಟ್ಟಿಗ. ಆತನ ಗಂಡ–ಹೇಡಿತನದಲ್ಲಿ ಆತನನ್ನು ಮೀರಿಸಿದವನು. ಸಲಿಲದ ಕೊಂಡ–ನೀರಿನ ಹೊಂಡ, ಕೊಳ].

*ಅನಿಲಸುತ ಬಾ ಕುರುಕುಲಾನ್ವಯ-
ವನದವಾನಲ ವೈರಿ[ಗೋ]ತ್ರಜ-
ಘನಶರಧಿವಡಬಾಗ್ನಿ ಬಾರೈ ನುಡಿಸು ಕುರುಪತಿಯ ।
ಎನೆ ಹಸಾದವ ಹಾಯ್ಕಿ ಯಮನಂ-
ದನನ ನೇಮವ ಕೊಂಡು ಕೌರವ-
ನನು ವಿಭಾಡಿಸಿ ಬೈದು ನುಡಿದನು ಖಾತಿಯಲಿ ಭೀಮ ॥ ೩೬ ॥

ವಿಷವನಿಕ್ಕಿದೆ ಹಾವಿನಲಿ ಬಂ-
ಧಿಸಿದೆ ಮಡುವಿನೊಳಿಕ್ಕಿ ಬಳಿಕು-
ಬ್ಬಸವ ಮಾಡಿದೆ ಹಿಂದೆ ಮನಮುನಿಸಾಗಿ ಬಾಲ್ಯದಲಿ ।
ವಸತಿಯಲಿ ಬಳಿಕಗ್ನಿದೇವರ
ಪಸರಿಸಿದೆ ಪುಣ್ಯದಲಿ ನಾವ್ ಜೀ-
ವಿಸಿದೆವಡಗಿದಡಿನ್ನು ಬಿಡುವೆನೆ ಯೆಂದನಾ ಭೀಮ ॥ ೩೭ ॥

ಎಲವೊ ರಾಯನ ಪಟ್ಟದರಸಿಯ
ಸುಲಿಸಿದಾ ಛಲವೆಲ್ಲಿ ಹಗೆಗಳ
ಹಳುವದಲಿ ಹೊಗಿಸಿದ [1]ಮಹಾಪೌರುಷದ ಸಿರಿಯೆಲ್ಲಿ[1] ।
ಖಳಶಿರೋಮಣಿ ನಿನ್ನ ತಲೆಕೂ-
ದಲಲಿ [2]ಕೈಗಳ[2] ಕಟ್ಟಿ ಖೇಚರ-
ನೆಳೆ[3]ಯೆ[3] ಬಿಡಿಸಿದ[4]ರಾ[4]ರು ಕೌರವ ಎಂದನಾ ಭೀಮ ॥ ೩೮ ॥

೩೬. [1]ಪು (ಪೇ).

[ಕುರುಕುಲಾನ್ವಯವನದವಾನಲ-ಕುರುವಂಶವೆಂಬ ಕಾಡನ್ನು ಸುಡುವ ಕಾಡು ಕಿಚ್ಚು. ವೈರಿಗೋತ್ರಜಘನಶರಧಿವಡಬಾಗ್ನಿ-ಶತ್ರುವಂಶದಲ್ಲಿ ಹುಟ್ಟಿದವರೆಂಬ ದೊಡ್ಡ ಸಮುದ್ರಕ್ಕೆ ಬಡಬಾಗ್ನಿಯಂತಿರುವವನು. ಹಸಾದವ ಹಾಯ್ಕು-ಅನುಗ್ರಹ ಎಂದು ಹೇಳಿ. ನೇಮ-ಅಪ್ಪಣೆ. ವಿಭಾಡಿಸು-ಧಿಕ್ಕರಿಸು].

೩೭. [ವಸತಿ-(ಅರಗಿನ) ಮನೆ. ಅಡಗು-ಅವಿತುಕೊ].

೩೮. [1]ನೆನಿಪ ಸುಮ್ಮಾನ ತಾನೆಲ್ಲಿ (ಅ ಕುಮಾ). [2]ಕೈದುವ (ಅ). [3]ಯ (ಅ). [4]ನಾ (ಅ).

[ಸುಲಿಸು-ಕಳಚುವಂತೆ ಮಾಡು, ಬಿಚ್ಚಿಸು. ಹಳು(ವ)-ಕಾಡು. ಖೇಚರ-ಆಕಾಶದಲ್ಲಿ ಸಂಚರಿಸುವ ದೇವತೆ, ಗಂಧರ್ವರು ಮೊದಲಾದವರು].

* ಈ ಪದ್ಯ 'ಅ' ಮತ್ತು 'ಕುಮಾ' ಪ್ರತಿಗಳಲ್ಲಿ ಕಂಡುಬರುವುದಿಲ್ಲ. ಪೇಟೆ ಪ್ರತಿಯಲ್ಲಿದೆ.

ಭೀಮನೆನೆ ಭುಗಿಲೆಂಬ ರೋಷದ
ತಾಮಸವ ಬೀಳ್ಕೊಟ್ಟೆಲಾ ನಿ-
ರ್ನಾಮವಾ[1]ಯಿತೆ[1] ಬಿರುದು ಪಾಂಡವತಿಮಿರರವಿಯೆಂಬ ।
ಭೀಮವನದಾವಾಗ್ನಿ ಹೊಱವಡು
ಭೀಮಭಾಸ್ಕರರಾಹು ಹೊಱವಡು
ಭೀಮಗರ್ಜನೆ ಮಧುರಗೀತವೆ ನೃಪತಿ [2]ಏಳೆಂದ[2] ॥ ೩೯ ॥

ಕೆಡಹಿ ದುಶ್ಶಾಸನನ ರಕುತವ
ಕುಡಿದವನು ನಾನಲ್ಲಲೇ ನಿ-
ನ್ನೊಡನೆ ಹುಟ್ಟಿದ ನೂಱ ನುಂಗಿದ ಕಾಲಯಮನಲ್ಲಾ ।
ಅಡಗಿದೊಡೆ ಬಿಡುವೆನೆ ಭಯಜ್ವರ
ಹಿಡಿದ ನಿನ್ನನು ಸೆಳೆದು ರಣದಲಿ
ತೊಡೆಯ ಕಳಚುವ ಮೃತ್ಯು ಭೀಮನ ಕೈಯ ನೋಡೆಂದ ॥ ೪೦ ॥

ಅರಸ ಕೇಳೈ ನಿನ್ನ ಮಗನು-
ಬ್ಬರಿಸಿದನು ರೋಮಾಂಚದಲಿ ಗ-
ಬ್ಬರಿಸಿ[1]ತ[1]ಧಿಕಕ್ರೋಧಶಿಖಿ ಕರಣೇಂದ್ರಿಯಾದಿಗಳ ।
[2]ತುಱುಗ[2]ದಂತಃಖೇದ ಮಂತ್ರಾ-
ಕ್ಷರಕೆ ಜವನಿಕೆಯಾ[3]ದುದಾ[3] ನಿ-
ರ್ಭರದ ವೀರಾವೇಶದಲಿ ಪಲ್ಲಟಿಸಿದನು [4]ಭೂಪ[4] ॥ ೪೧ ॥

---

೩೯. [1]ದುದೆ (ಅ ಕುಮಾ). [2]ಬಾರೆಂದ (ಅ).

[ತಾಮಸ-ತಮೋಗುಣ. ತಿಮಿರ-ಕತ್ತಲೆ].

೪೧. [1]ದ (ಅ). [2]ತರುಬಿ (ಅ).

[ಗಬ್ಬರಿಸು-ಮುತ್ತು, ಆವರಿಸು. ಶಿಖಿ-ಅಗ್ನಿ. ಕರಣೇಂದ್ರಿಯ-(ಜ್ಞಾನೇಂದ್ರಿಯ)-ಕಣ್ಣು, ಕಿವಿ, ಮೂಗು, ನಾಲಗೆ ಮತ್ತು ಚರ್ಮ— ಇವು ಐದೂ ಕರಣೇಂದ್ರಿಯಗಳು ಎನ್ನಿಸಿಕೊಳ್ಳುತ್ತವೆ. ತುಱುಗು-ತುಂಬು. ಅಂತಃಖೇದ-ಒಳಗಿನ ಬೇಗುದಿ, ವ್ಯಥೆ. ಮಂತ್ರಾಕ್ಷರ-ಜಲಸ್ತಂಭನ ವಿದ್ಯೆಯ ಮಂತ್ರದ ಅಕ್ಷರಗಳು. ಜವನಿಕೆ-ತೆರೆ. ನಿರ್ಭರ-ರಭಸ, ತೀವ್ರತೆ. ಪಲ್ಲಟಿಸು-ವ್ಯತ್ಯಾಸ ಹೊಂದು, ಮಾರ್ಪಡು].

ಮುಱಿ[3]ದುದುದಕಸ್ತಂಭ ಸಲಿಲದ
ಹೊಱಗೆ ಬೊಬ್ಬುಳಿ[1]ಕೆಗಳ[1] ತೆರೆನೊರೆ
[2]ತಱು[2]ಬಿದವು ಘುಳಿಘುಳಿಸಿ ಬಲುಬುದ್ಬುದದ ಚೂಣಿಯಲಿ ।
ದುಱುದುಱಿಪ ಬಿಸುಸುಯ್ಲ ಸೆಕೆಯಲಿ
ಮುಱುಗಿ ಕುದಿದುದು ನೀರು ಭೀಮನ
ಬಿಱುನುಡಿಯ ಬೇಳಂಬದಲಿ ಬೆಂಡಾದನಾ ಭೂಪ ॥ ೪೨ ॥

ಜಲಧಿಮಧ್ಯದೊಳೀಳ್ವ ವಡಬಾ-
ನಲನವೊಲು ತವಕದಲಿ ತಡಿ[1]ಗು-
ಚ್ಚಳಿಸಿ[1]ದನು ತತ್ಕ್ರೋಧಶಿಖಿ ಕಿಡಿಮಸಗೆ ಕಂಗಳಲಿ ।
ಹೊಳೆವ ಭಾರಿಯ ಹೆಗಲ ಗದೆ ಕರ-
ತಳದ ವಿಪುಳಸ[2]ಘಾಟ[2]ಗರ್ವದ
ಚಲನಯನದ ಛಡಾಳಛಲದ ನೃಪಾಲ ಹೊಱವಂಟ ॥ ೪೩ ॥

ಧರಣಿಪತಿ ಕೇಳ್ ಕೊಳನ ತಡಿಯಲಿ
ಕುರುಕುಲಾಗ್ರಣಿ ನಿಂದು ನೋಡಿದ-
ನರಿಭಟರ ಸುಮ್ಮಾನವನು [1]ಸಂಭ್ರಾಂತ[1]ಚೇತನವ ।
ಉರಿದುದಾ ಮಸ್ತಕದ [2]ರೋಷೋ-
ತ್ಕರದ[2] ಝಳ ಝಾಡಿಸಿತು [3]ಶುಭ್ರ-
ಸ್ಫುರಣ ದಂತನಿಪೀಡಿತಾಧರನಾದನಾ ಭೂಪ[3] ॥ ೪೪ ॥

---

೪೨. [1]ಗಳುಕೆ (ಅ). [2]ದುಱುಗಿ (ಅ ಕುಮಾ).
[ಉದಕಸ್ತಂಭ-ಜಲಸ್ತಂಭ ವಿದ್ಯೆ. ಬೊಬ್ಬುಳಿಕೆ-ನೀರಗುಳ್ಳೆ. ತಱುಬು-ಅಟ್ಟು, ಅಟ್ಟಿಕೊಂಡು ಹೋಗು. ಬುದ್ಬುದ-ನೀರಗುಳ್ಳೆ ಚೂಣಿ-ಮುಂಭಾಗ. ದುಱುದುಱಿಸು-ಧಾರಾಕಾರವಾಗಿ,ಒಂದೇ ಸಮನೆ,ಹೊರಹೊರಡು. ಬಿಸುಸುಯ್ಲು-ಬೆಚ್ಚನೆಯ ಉಸಿರು. ಮುಱುಗು-ಮರಳು, ಕುದಿ. ಬಿಱುನುಡಿ-ಬಿರುಸಾದ ಕಠಿನವಾದ ಮಾತು. ಬೇಳಂಬ-ಉಪಹತಿ, ಹೊಡೆತ. ಬೆಂಡಾಗು-ಶಕ್ತಿಗುಂದು].

೪೩. [1]ಗವ್ವಳಿಸಿ (ಅ ಕುಮಾ). [2]ಘಾಡ (ಅ ಕುಮಾ).
ಉಚ್ಚಳಿಸು (ಉತ್ + ಚಲಿಸು), ಚಿಗಿ, ನೆಗೆ. ಸಘಾಟ ಅತಿಶಯವಾದ. ಚಲನಯನ-ಚಲಿಸುವ ಕಣ್ಣು. ಛಡಾಳ-ಅಧಿಕವಾದ, ಹೆಚ್ಚಾದ].

೪೪. [1]ಸುಭ್ರಾಂತಿ (ಅ). [2]ಮರುಕೋತ್ತರದ (ಅ). [3]ಸತ್ವಸ್ಫುರಣ ಕಿಡಿಯಿಡಲಮುಮರೋಷಿತನಾದನಾ ಭೂಪ (ಅ).
[ಸಂಭ್ರಾಂತ ಚೇತನ-ವಿಶೇಷ ಭ್ರಾಂತಿಗೆ ಒಳಗಾದ ಮನಸ್ಸು. ರೋಷೋತ್ಕರ-ಕೋಪಾಧಿಕ್ಯ. ದಂತನಿಪೀಡಿತಾಧರ-ಹಲ್ಲಿನಿಂದ ಕಚ್ಚಿದ ತುಟಿ].

ಅರಸ ತೊಡು ಕವಚವನು ಚಾಮೀ-
ಕರಪರಿಷ್ಕೃತವಜ್ರಮಯ ಬಂ-
ಧುರದ ಸೀಸಕವಿದೆ ದುಕೂಲವರಾನುಲೇಪನವ ।
ಪರಿಹರಿಸಬೇಡೊಲವಿನಲಿ ಪತಿ-
ಕರಿಸೆನುತ ಪೆಟ್ಟಿಗೆಯ ಮುಚ್ಚಳ-
ದೆಱೆದು ಮುಂದಿರಿಸಿದನು ಸೌಹಾರ್ದದಲಿ ಯಮಸೂನು ॥ ೬೫ ॥

ಪೂರವಿಸಿದನು ಗಂಧವನು ಶರ-
ಓರೆಪೋರೆಯ ಮೈಯ ಗಾಯದ
[1]ಹೋರು[1]ಗಳ [2]ಮೆತ್ತಿದನು ಘಟ್ಟಿಸಿ ಗಂಧಸಾರದಲಿ[2] ।
ಸಾರತರಸಾದಿನ ಜವಾದಿಯ
ಭೂರಿಪರಿಮಳದಿಂದ ಪರಿಕ-
ಸ್ತೂರಿತಿಲಕವ ರಚಿಸಿ ಗೆಲಿದನು ತಿಗುರ ತವಕದಲಿ ॥ ೬೬ ॥

ತೆಗೆದು ವಜ್ರಾಂಗಿಯನು ಮೈಯಲಿ
ಬಿಗಿದು ಹೊಂಬರಹದ ಸುರತ್ನಾ-
ಳಿಗಳ ಬಲುಸೀಸಕವನಳವಡಿಸಿದನು ಸಿರಿಮುಡಿಗೆ ।
ಝಗಝಗಿಪ ಬೆಳುದಿಂಗಳಿನ ತೆಳು-
ದಗಡೆನಲು ತೊಳಗುವ ದುಕೂಲವ
ಬಿಗಿದು ಮೊನೆಮುಂಜೆಱಗನಳವಡಿಸಿದನು [1]ಭೂಪಾಲ[1] ॥ ೬೭ ॥

---

೬೫ [ಚಾಮೀಕರ ಪರಿಷ್ಕೃತ ವಜ್ರಮಯ ಬಂಧುರದ ಸೀಸಕ–ಚಿನ್ನದ ಕೆಲಸದಿಂದ ಒಪ್ಪುವ, ವಜ್ರಗಳು ಕೆತ್ತಿದ, ಮನೋಹರವಾದ, ಶಿರಸ್ತ್ರಾಣ (ತಲೆಗಾಪು, *helmet*). ದುಕೂಲ–ನಯವಾದ ರೇಶ್ಮೆ ವಸ್ತ್ರ. ಅನುಲೇಪನ–ಸುಗಂಧ ದ್ರವ್ಯದ ಬಳಿತ. ಪರಿಹರಿಸು–ಬೇಡವೆನ್ನು. ಪತಿಕರಿಸು–ಸ್ವೀಕರಿಸು].

೬೬. [1]ಹೇರು (ಅ ಕುಮಾ). [2]ಹೂಳಿದನು ವರ ಕಸ್ತುರಿಯ ಸಾರದಲಿ (ಅ).

[ಪೂರವಿಸು–ಪೂರ್ತಿಯಾಗಿ ಲೇಪಿಸು. ಸರಳು–ಬಾಣ. ಓರೆಪೋರೆಯ–ಹೆಚ್ಚು ಕಡಮೆಯಾಗಿರುವ. ಹೋರು–ತೂತು, ರಂಧ್ರ. ಗಂಧಸಾರ–ಶ್ರೀಗಂಧ. ಸಾದು ಜವಾದಿ–ಬಗೆಬಗೆಯ ಪರಿಮಳ ದ್ರವ್ಯಗಳು. ತಿಗುರತವಕ–(ಸುಗಂಧ ದ್ರವ್ಯವನ್ನು) ಲೇಪಿಸುವಲ್ಲಿ ಆತುರ ಗೆಲಿದನು–ಗೆಲುವಾಗಿ ಕಂಡನು, ಸಂತುಷ್ಟನಾದನು].

೬೭. [1]ದೇಸಿಯಲಿ (ಅ ಕುಮಾ).

[ಮಿಡುಕು–ಉತ್ಸಾಹಿಸು. ಹೊಡಕರಿಸು–ಮೆರೆ, ಪ್ರಕಾಶಿಸು, ವಿಜೃಂಭಿಸು. ಪಂಗಡ–ತಂಡ, ಗುಂಪು].

ಹಿಡಿ ಧನುವನೆಲೆ ಭೂಪ ಪವನಜ
ತುಡುಕು ಗದೆಯನು ಪಾರ್ಥ ಸಮರಕೆ
ತಡೆಯದಿರು ಮಾದ್ರೀಕುಮಾರಕರೇಳಿ ಕಾಳೆಗಕೆ ।
ಮಿಡುಕು ಧೃಷ್ಟದ್ಯುಮ್ನ ಸಾತ್ಯಕಿ
ಹೊಡಕರಿಸು ಪಾಂಚಾಲ ನೀ ನಂ-
ಗಡದೊಳೆಮ್ಮೊಡನೇಳ್ವುದೊಬ್ಬನೆ ನಿಲುವೆ ತಾನೆಂದ ॥ ೪೮ ॥

ಮೆಚ್ಚಿದನು ಯಮಸೂನು ಛಲ ನಿನ-
ಗೊಚ್ಚತವಲ್ಲೈ ವೈರಿ[1]ಭಟರ[1]ಲಿ
[2]ಬೆಚ್ಚಿದಾಡಿದೆ ಯೋಧರೆಮ್ಮೈವರೊಳಗೊಬ್ಬನನು[2] ।
ಮೆಚ್ಚಿ[3]ದವರನು[3] ವರಿ[4]ಸಿ[4] ಕಾದುವು-
ದಚ್ಚರಿಯು ಮಾ[5]ಣೇನು[5] ಗೆಲವಿನ
ನಿಚ್ಚಟನೆ ನೆಲಕೊಡೆಯನಹುದಿದು ಸಮಯಕೃತವೆಂದ ॥ ೪೯ ॥

ನಿನಗೆ [1]ಸೋಲವೇ[1] ನಾವು ಭೂಕಾ-
ಮಿನಿಯನಾ[ಳೆ]ವು ನಮ್ಮೊಳೊಬ್ಬರು
ನಿನಗೆ ಸೋತೊಡೆ ಮಿಕ್ಕ ನಾಲ್ವರು ನಿನಗೆ ಕಿಂಕರರು ।
ನಿನಗೆ ಹಸ್ತಿನಪುರದ ಸಿರಿ ಸಂ-
ಜನಿತವೀ ಸಂಕೇತವೇ ಸಾ-
ಧನ[2]ವು ನಿಮಗೆಮ[2]ಗೆಂದು ನುಡಿದನು ಧರ್ಮಸುತ ನಗುತ ॥ ೫೦ ॥

---

೪೯. [1]ಬಲದ (ಅ). [2]ಬೆಚ್ಚಿದಾಡಿದೆ ಯಾದಡೇನದು ನಮ್ಮೊಳೈವರಲಿ (ಅ ಕುಮಾ). [3]ದವರ ಸೀ (ಅ ಕುಮಾ). [4]ಸು (ಅ). [5]ಡುವುದು (ಅ).

[ಒಚ್ಚತ-ಒಪ್ಪತಕ್ಕದ್ದು, ಹಿತಕರವಾದದ್ದು. ನಿಚ್ಚಟ-ನಿಶ್ಚಿತನಾದವನು (ಗೆದ್ದವನೆಂದು) ನಿಶ್ಚಯಿಸಲ್ಪಟ್ಟವನು].

೫೦. [1]ಬಲುಹೊ (ಅ). [2]ನಿಮಗೆ ನಮ (ಅ ಕುಮಾ).

[ಸಂಜನಿತವು-ಪ್ರಾಪ್ತವಾಗತಕ್ಕದ್ದು. ಸಂಕೇತ-ಗೊತ್ತುಪಾಡು. ಸಾಧನ-ಮಾರ್ಗೋಪಾಯ, ಕಾರ್ಯನೀತಿ].

ಹಾ ಯುಧಿಷ್ಠಿರ ನಿಮ್ಮ ಕೂಡೆಮ-
ಗಾ*[1]ವ[1] ಛಲವಿಲ್ಲರ್ಜುನನು ಮಗು
ಳೀ ಯಮಳ[2]ರಲಿ[2] ಕೈದುಗೊಳ್ಳೆನು ಹೊಯ್ದು ಕೆಣಕಿದೊಡೆ ।
ಬಾ[3]ಯಿ[3]ಬಡಿಕನು ಸತ್ವದಲಿ ನಾ-
ಗಾಯುತದ ಬಲ[4]ನೆಂ[4]ಬ ಡೊಂಬಿನ
ವಾಯುವಿನ ಮಗನೆನ್ನೊಡನೆ ಮಾಱಾಂತೊಡಹುದೆಂದ ॥ ೫೧ ॥

ವರಿಸಿದೆನು ಭೀಮನನು ನೀವಾ-
ದರಿಸುವೊಡೆ ಧರ್ಮವನು ದುರ್ಜನ-
ಸರಣಿಯಲಿ ನೀವ್ ಬಹಡೆ ದಳಸಹಿ[1]ಕೈವರಿದಿರಹುದು[1] ।
ತೆರಳು[2]ವವರಾ[2]ವಲ್ಲ ನೀವ್ ಪತಿ-
ಕರಿಸಿದು[3]ದೆ[3] [4]ನಮ್ಮಿ[4]ಷ್ಟವೆನೆ ಮುರ-
ಹರ ಯುಧಿಷ್ಠಿರನೃಪನೆಕ್ಕಟಿಕರೆದು ಗರ್ಜಿಸಿದ ॥ ೫೨ ॥

ಮರುಳೆ ನೀ ಹೆಚ್ಚಾ[1]ಳು ತನಕು-[1]
ಬ್ಬರಿಸಿ ನುಡಿದೆ ಸುಯೋಧನನ ನೀ-
ನಱಿಯಲಾಗದೆ ಕೈಗೆ ಬಂದೊಡೆ ಕದನಭೂಮಿಯಲಿ ।
ಸರಿಸದಲಿ ಮುಲೆತನವನು ಜೀವಿಸಿ
ಮರಳಲಱಿವನೆ -ನ[2]ಮ್ಮೊಳೊಬ್ಬ[3]ನ[3]
ವರಿಸು ವಿಗ್ರಹಕೆಂದು ನಮ್ಮನು ಕೊಂದೆ ನೀನೆಂದ ॥ ೫೩ ॥

---

೫೧. [1]ಯು (ಅ ಆ ಕುಮಾ). ರಿಗೆ (ಅ ಕುಮಾ). [3]ಯು (ಅ). [4]ವೆ (ಅ ಕುಮಾ).
[ನಾಗಾಯುತದ–ಆನೆಗಿರುವ. ಡೊಂಬು–ಬಡಾಯಿ. ಮಾಱಾನು–ಎದುರಿಸು, ಪ್ರತಿಭಟಿಸು].

೫೨. [1]ತೇೞೆ ಕಾಳಗಳೆ (ಅ). [2]ವರು ನಾ (ಅ). [3]ದು (ಅ). [4]ನಿ (ಅ).
[ದುರ್ಜನ ಸರಣಿ–ದುರ್ಜನರ ರೀತಿ. ತೆರಳು–ಹಿಂದಕ್ಕೆ ಸರಿ. ಎಕ್ಕಟಿ–ಸಮೀಪ].

೫೩. [1]ಳ್ತ ನದಿಯು (ಅ). [2]ನಿ (ಅ). [3]ರ (ಅ).
[ಹೆಚ್ಚಾಳುತನ–ಅಧಿಕವಾದ ಪರಾಕ್ರಮ. ಉಬ್ಬರಿಸು–ಕೊಬ್ಬು. ಸರಿಸ–ಸಮೀಪ. ಮುಲೆ–ಗರ್ವಿಸು, ಸೊಕ್ಕು. ವಿಗ್ರಹ–ಯುದ್ಧ].

---

* ಇಲ್ಲಿ ಪ್ರಾಸ ಭಂಗವಾಗಿದ್ದರೂ ಸಂದರ್ಭೋಚಿತವಾಗಿದೆ.

ಇಂದು [1]ನ[1]ಮ್ಮಯ ಭಾಗ್ಯಲಕ್ಷ್ಮಿಯ
ಕಂದೆಱವೆಯಲಿ ಭೀಮ ಕಾದುವು-
ದೆಂದು ಜಾಱಿಸಿ ನಿಮ್ಮ ಬಿಟ್ಟನು ನಮ್ಮ ಪುಣ್ಯದಲಿ ।
ಇಂದಿನೀ ಸಮರದಲಿ ಪವನಜ
ನಿಂದೊಡೇನಹುದೆಂಬ [2]ಚಿತ್ತ್ರದ[2]
ಸಂದೆ[3]ಗವು[3] ನಮಗುಂಟು ಕೌರವನೈಸು ಬಲುಹೆಂದ ॥ ೫೪ ॥

ಎಲೆ ಮುರಾಂತಕ ನಿಮ್ಮ ಮುಂದ-
ಗ್ಗಳೆಯತನ[1]ವೆಮಗಿಲ್ಲ[1] ನಿಮ್ಮಡಿ-
ಗಳ ಸುಧಾಕರುಣಾವ[2]ಲೋಕನ[2] ವಜ್ರಕವಚವಲಾ ।
ಮಲೆತ ಹಗೆವನ ಪಡಿಮುಖದ [3]ಬಲು-
ವಲಗೆಯಲಿ ಗದೆಯಿಂದ[3] ರಾಯನ
ಬಲು[4]ಹ[4] ಬಿರುದಾವಳಿಯಲೇನಹುದೆಂದನಾ ರಾಯ ॥ ೫೫ ॥

---

೪. ಗದಾಯುದ್ಧ

ಗದೆಯ ಕೊಂಡನು ಕೌರವೇಂದ್ರನ-
ನಿದಿರುಗೊಂಡನು ಭೀಮ ಬಲವಂ-
ಕದಲಿ [1]ವಾಮಾಂಗದಲಿ[1] ಬಳಸಿದರಗ್ರಜಾನುಜರು ।

---

೫೪. [1]ನಿ (ಅ). [2]ಚಿತ್ತ್ರದ (ಅ ಕುಮಾ). [3]ಯ (ಅ ಕುಮಾ).
[ಕಂದೆಱವೆ–ಕಣ್ಣುಬಿಟ್ಟು ನೋಡುವುದು, ಕೃಪೆ, ಅನುಗ್ರಹ. ಜಾಱಿಸು–ಕಳೆದು ಹಾಕು, ಹೊರತುಪಡಿಸು. ಸಂದೆಗ–ಸಂದೇಹ. ಐಸು–ಅಷ್ಟು].

೫೫. [1]ನಗೇಕೆ (ಅ). [2]ಧಾನವೆ (ಅ ಕುಮಾ). [3]ತನಿ ಹೊಳೆವ (ಅ). [4]ಹು (ಅ).
[ಅಗ್ಗಳೆಯತನ–ಶ್ರೇಷ್ಠತ್ವ. ಸುಧಾಕರುಣಾವಲೋಕ–ಅಮೃತಮಯವಾದ ಕೃಪಾದೃಷ್ಟಿ. ಮಲೆತ–ಕೊಬ್ಬಿದ, ಸೊಕ್ಕಿದ. ಪಡಿಮುಖ-(=ಪ್ರತಿಮುಖ)–ಎದುರಾಗುವಿಕೆ. ಬಲುವಲಗೆ–ದೊಡ್ಡಗುರಾಣಿ].

೫೬. [1]ವಾಮದಲಿವರು (ಅ). [2]ಬಿಡವರಿದು (ಅ ಆ), ಸ್ವೀಪಾ (ಅ ಪ್ರತಿಯ ಅಡಿಟಿಪ್ಪಣಿಯ ಪಾಠಾಂತರ). [3]ವೈದೆ (ಅ). [4]ವಿವಿಧ (ಅ).

ಕದನಭೂಮಿಯ [2]ಬಿಡೆಯಱಿದು[2] ನಿಂ-
ದುದು ಚತುರ್ಬಲ[3]ಸುತ್ತಿ[3] ಗಗನದೊ-
ಳೊದಗಿದುದು ಸುರನಿಕರ[4]ತೀವಿ[4]ವಿಮಾನವೀಧಿಯಲಿ || ೫೬ ||

ಚಟುಳತರಭಾರಂಕ[1]ದಂಕದ-[1]
ಭಟರು ತಱುಬಿದರುಬ್ಬಿನಲಿ ಲಟ-
ಕಟಿಸಿದವು ಕಣ್ಣಾಲಿ ಬದ್ಧಭ್ರುಕುಟಿ [2]ಭಂಗಿಯಲಿ[2] ।
ಕಟುವಚನವಿಕ್ಷೇಪರೋಷ-
ಸ್ಫುಟನವೇಲಿತವಾಕ್ಯಭಂಗಿಯ
ಘಟನವಿಘಟನದಿಂದ ಮೂದಲಿಸಿದರು ಮುಳಿಸಿನಲಿ || ೫೭ ||

ಅರಸ ಕೇಳಿವರಿಬ್ಬರುಬ್ಬಿನ
[1]ಧರಧುರದ ದನಿ ಧಟ್ಟಿಸಿತು[1] ಸುರ-
ನರರನಾಸಮುಯುದಲಿ ಪೂರ್ವೋತ್ತರದ [2]ಭಾಗದಲಿ[2] ।
ವರಮುನಿಸ್ತೋಮದ ನಡುವೆ ಕಂ-
ಧರದ ಮುಸಲದ ವಿಮಲನೀಲಾಂ-
ಬರದ ರಾಮನ [3]ಬರವ[3] ಕಂಡರು ಕೃಷ್ಣಪಾಂಡವರು || ೫೮ ||

---

೫೬. [ಬಲವಂಕ-ಬಲಪಕ್ಕ, ಬಲಭಾಗ. ಬಿಡೆಯಱಿದು-(ಕದನ ಭೂಮಿಯಲ್ಲಿ ಗದಾಯುದ್ಧಕ್ಕೆ) ಬಿಡಬೇಕಾದ ಸ್ಥಳವನ್ನು ಅರಿತುಕೊಂಡು. ವಿಮಾನವೀಧಿ-ಆಕಾಶಮಾರ್ಗ].

೫೭. [1]ದಲಿ ಬಲು (ಅ). [2]ಭಂಗಿಯಲಿ (ಅ). [3]ದಲಿ ತದ್ವಾ (ಅ).

[ಚಟುಳ-ವೇಗದಿಂದ ಕೂಡಿದ, ತ್ವರಿತವಾದ. ಭಾರಂಕದಂಕದ-ಭಾರಿಯಾದ ಯುದ್ಧದಲ್ಲಿ ಪ್ರಸಿದ್ಧಿ ಪಡೆದ. ಲಟಕಟಿಸು-ಉದ್ರೇಕಗೊಳ್ಳು. ಬದ್ಧಭ್ರುಕುಟಿ-ಗಂಟಿಕ್ಕಿದ ಹುಬ್ಬು ಕಟುವಚನ ವಿಕ್ಷೇಪ-ಕರ್ಕಶವಾದ, ಕಠಿನವಾದ, ಮಾತುಗಳನ್ನು ಆಡುವುದು. ರೋಷಸ್ಫುಟನವೇಲಿತವಾಕ್ಯ ಭಂಗಿ-ಕ್ರೋಧದಿಂದ ಸ್ಫುಟವಾಗಿ (ಸ್ಪಷ್ಟವಾಗಿ) ಕಂಪಿಸುವ (ನಡುಗುವ) ಮಾತುಗಾರಿಕೆ. ಘಟನವಿಘಟನ-ಆಗುವುದು ಬಿಡುವುದು].

೫೮. [1]ಧುರದ ಥಟ್ಟಣೆ ಪಸರಿಸಿತು (ಅ ಕುಮಾ). [2]ದೆಸೆಯಿಂದ (ಅ ಕುಮಾ). [3]ಸುಳಿವ (ಅ ಕುಮಾ).

[ಉಬ್ಬು-ಪರಾಕ್ರಮದ ಗರ್ವ. ಧಟ್ಟಿಸು-ಅಪ್ಪಳಿಸು, ಹೊಡೆ. ಕಂಧರ-ಕಂಠ. ಮುಸಲ-ಮುಸಲಾಯುಧ. ನೀಲಾಂಬರದ ರಾಮ-ನೀಲವಸ್ತ್ರವನ್ನು ಧರಿಸಿರುವ ಬಲರಾಮ].

ಆಹವ[1]ದಿ[1] ಪಾಂಡ[2]ವ[2]ರು ಮಮ ಪ್ರಾ-
ಣಾ ಹಿ ಎಂಬೀ ನುಡಿಯು ಸಲಿಸಿದೆ
ಬೇಹವರನುಳುಹಿದೆ ಕುಮಾರರ ನಿನ್ನ ಮೈದುನರ |
ಗಾಹುಗತಕದೊಳೆಮ್ಮ ಶಿಷ್ಯಂ-
ಗೀ ಹದನ ವಿರಚಿಸಿದೆ ನಿನ್ನಯ
ಮೋಹದವರೇ ಗೆಲಲಿ ಎಂದನು ಹರಿಗೆ ಬಲರಾಮ || ೫೯ ||

ತಿಳಿದು ನೋಡಿರೆ ರಾಮ ಧರ್ಮ-
ಸ್ಥಳಕೆ ನೀವು ಸಹಾಯವಿನಿಬರ
ಗೆಲವು ನಿರ್ಮಳಧರ್ಮಮೂಲವೊ ಧರ್ಮವಿರಹಿತವೊ |
ಛಲವ ಬಿಡಿರೇ ನಿಮ್ಮ ಶಿಷ್ಯನು
[1]ವೃಕೋದರನಲ್ಲವೇ ತವೆ[1]
ಬಳಸಬಹುದೇ ಪಕ್ಷಪಾತದೊಳೆಂದನಸುರಾರಿ || ೬೦ ||

ನಿಮಗೆ ಪಾಂಡವಪಕ್ಷಪಾತ
ವ್ಯವಹರಣೆ ಹುಸಿ ನಾವಲೇ ಕೌ-
ರವರ [1]ಪಕ್ಷಾವೇ[1]ಶಿಗಳು ಸಾಕೆನ್ನದಂತಿರಲಿ |
ಎಮಗೆ ಸರಿ ಯಿಬ್ಬರು ಗದಾಭ್ಯಾ-
ಸವನು ನಮ್ಮಲಿ [2]ಮಾಡಿದರು[2] ತಾ-
ವಿವರು ಕಾದಲಿ ನಾವು ನೋಡುವೆವೆಂದನಾ ರಾಮ || ೬೧ ||

---

೫೯. [1]ಕೆ (ಅ). [2]ವಾ (ಅ).
[ಮಮ ಪ್ರಾಣಾಹಿ–ನನ್ನ ಪ್ರಾಣ. ಬೇಹವರು–ಇಷ್ಟರಾದವರು. ಗಾಹುಗತಕ–ಮೋಸ, ವಂಚನೆ. ಹದನು–ಸ್ಥಿತಿ, ರೀತಿ].

೬೦. [1]ಸುಯೋಧನನಲ್ಲದಿರ್ದೊಡೆ (ಅ).
[ಧರ್ಮಸ್ಥಳ–ಧರ್ಮದ ನೆಲೆ. ಸಲೆ–ವಿಶೇಷವಾಗಿ].

೬೧. [1]ಪಕ್ಷೋದ್ದೇ (ಅ). [2]ಕಲಿತವರು (ಅ ಕುಮಾ).
[ವ್ಯವಹರಣೆ–ವ್ಯವಹಾರ. ಪಕ್ಷಾವೇಶಿಗಳು–ಪಕ್ಷಪಾತ ಹೊಂದಿರುವವರು].

ಹಳಚಿದರು ಸುಳಿಗಾಳಿಯಂತಿರೆ
ಸುಳಿದು ಖಗಪತಿಯಂತೆ [1]ಹೊಯ್ದರು[1]
ಬಳಸಿ [2]ಬಿಗಿ[2]ದೆಜಗಿದರು ಬಿಡೆಯದ ಮತ್ತಗಜದಂತೆ ।
[3]ಅಳುವಿ[3]ದರು ಶಿಖಿಯಂತೆ ಚೂರಿಸಿ
[4][ತಳ][4]ಕಿದರು ಫಣಿಯಂತೆ ಪಯವೈ-
ಲುಳಿಯಲೊಲೆದರು ಪಾದರಸದಂದದಲಿ ಪಟುಭಟರು ॥ ೬೨ ॥

ಗದೆಗದೆಯ [1]ಹೊಯ್ಲುಗಳ[1] ಖಣಿಖಣಿ-
ಲೊದಗಿತಬ್ಬರ ಬೊಬ್ಬೆ ಭುವನವ
ಬೆದಱಿಸಿತು ಪದ[2]ಘಟ್ಟನೆಯು ಘಲ್ಲಣೆ[2]ಯು ಘಾತಿಯಲಿ ।
ಅದುರಿತಿಳೆ ಮುಗ್ಗು ಭಾಪು ಭಟರೆಂ-
ದೊದ[3]ಱಿತಾ[3] ಪರಿವಾರದಬ್ಬರ
ತ್ರಿದಶನಿಕರದ ಸಾಧುರವವಂಜಿಸಿತು ಮೂಜಗವ ॥ ೬೩ ॥

ಹೊಕ್ಕು ಕುರುಪತಿ ಭೀಮಸೇನನ-
ನಿಕ್ಕಿದನು ಕಂದದಲಿ ಗದೆಯನು
ಸೆಕ್ಕಿದನು ವಾಮಾಂಗದಲಿ ಪವಮಾನನಂದನನ ।
ಜಕ್ಕುಲಿಸಿದ ವೊಲಾಯ್ತು ಜಱಿದು ನ-
ಭಕ್ಕೆ ಪುಟನೆಗೆದನಿಲಜನ [1]ಸೀ-
ಸಕ್ಕೆ ಹೊಯ್ದಾರಿದನು ಕೌರವನೃಪತಿ[1] ಖಾತಿಯಲಿ ॥ ೬೪ ॥

---

೬೨. ಹೊಯ್ಲಲಿ (ಅ ಕುಮಾ). [2]ಬಗಿ (ಅ). [3]ನಿಲುಕಿ (ಅ). [4]ತುಳುಕಿ (ಅ), ನಿಲುಕಿ (ಅ ಕುಮಾ).
[ಹಳಚು-ಪರಸ್ಪರ ತಾಗು. ಖಗಪತಿ-ಗರುಡ. ಬಿಗಿ-ಬಲವಾಗಿ ತಬ್ಬು. ಬಿಡೆಯ-ಸೆಣಸಾಟ, ಸ್ಪರ್ಧೆ, ಹೋರಾಟ. ಅಳುವು-(=ಅಳ್ಪು)-ಉರಿ, ಸುಡು. ಶಿಖಿ-ಅಗ್ನಿ. ಚೂರಿಸು-ಹಿಂಸಿಸು, ಪೀಡಿಸು. ತಳಕು-ಹೆಣೆದುಕೊ. ಪಯ-ಪದ, ಪಾದ, ಅಡಿ. ಲುಳಿ-ಚಾಕಚಕ್ಯತೆ, ಚುರುಕು. ಒಲೆ-ಓರೆಯಾಗು, ಪಕ್ಕಕ್ಕೆ ಬಾಗು].

೬೩. [1]ಹೊಯ್ಗಳಲಿ (ಅ). [2]ಥಟ್ಟಣೆಯು ಘಟ್ಟಣೆಯು (ಅ ಕುಮಾ). [3]ರುವಾ (ಅ).
[ಪದಘಟ್ಟನೆ-ಪಾದಗಳ ಬಲವಾದ ತುಳಿತ. ಘಲ್ಲಣೆ-ಬಲವಾದ ಶಬ್ದ. ಘಾತಿ-ಪೆಟ್ಟು, ಹೊಡೆತ. ಒದಱು-ಕೂಗುಹಾಕು, ಬೊಬ್ಬೆಯಿಡು. ತ್ರಿದಶನಿಕರ-ದೇವತೆಗಳ ಸಮೂಹ. ಸಾಧುರವ-ಭಲೇ ಎಂಬ ಶಬ್ದ].

೬೪. [1]ಸೀಸಕ್ಕೆ ಮುರಿಯಲು ಹೊಯ್ದು ಕೌರವ ನೃಪನು (ಅ).
[ಕಂದ (ಸ್ಕಂಧ)-ಹೆಗಲು. ವಾಮಾಂಗ-ಶರೀರದ ಎಡಭಾಗ. ಜಕ್ಕುಲಿಸು-ಅಪಹಾಸ್ಯ ಮಾಡು. ಜಱಿ-ಸಿಂದಿಸು, ಹೀಯಾಳಿಸು. ಸೀಸ-(ಶೀರ್ಷ) ತಲೆ. ಆರು-ಗರ್ಜಿಸು].

[1]ದೂ[1]ಟ ಬಿದ್ದವು ಸೀಸಕವು [2]ಸಮ-
ಕೋಟಿಗಾಯದ ಘಟ್ಟಣೆಗೆ ಶತ-
ಕೋಟಿಗಾಯಕೆ[2] ಸಿಡಿದ ಹೇಮಾಚಲದ ತುದಿಯಂತೆ ।
ತಾಟಿ[3]ತಸು[3] ಕಂಠದಲುಸು[4]ರ ಪರಿ-
ಪಾಟಿ[4] ತಪ್ಪಿತು ಮೃತ್ಯುವಿನ [5]ದರ-[5]
ಚೀಟಿ ಹಿಡಿದನೊ ಹೇಳೆನಲು ಮೈಮಱಿ[3]ದು ಮಲಗಿದನು ॥ ೬೫ ॥

ಒಲೆದು ಬಿದ್ದನು ಭೀಮ ಕುಲಗಿರಿ
ಮಲಗುವಂದ[1]ದಲೇಱ[1] ಬಾಯಿಂ-
ದಿಳಿದ ಶೋಣಿತಧಾರೆ ಮಗ್ಗುಲ ಮುಸಿಕಿತವನಿಯಲಿ ।
ಎಲೆ ಮಹಾದೇವಾ ವೃಕೋದರ-
ನಳಿದನೇ ಹಾ ಭೀಮ ಹಾ ಯೆಂ-
[2]ದಳಲಿದರು[2] ಪರಿವಾರಸಾತ್ಯಕಿಸೃಂಜಯಾದಿಗಳು ॥ ೬೬ ॥

ಮಿಡಿದವನ ಹೊಯ್ಯೆನು ಧನಂಜಯ
ಕೊಡು ಮಹಾಸ್ತ್ರವನವನಿಪತಿ ಬಿಲು-
ದುಡುಕು ಯಮಳರು ಕೈದುಗೊಳಿ ಸಾತ್ಯಕಿ ಶರಾಸನವ ।
ಹಿಡಿ ಶಿಖಂಡಿ ದ್ರುಪದಸುತರವ-
ಗಡಿಸಿ[1]ರೇ[1] ನಿಮ್ಮವನ ಹರಿಬಕೆ
ಮಿಡುಕುವೊಡೆ ಬಹುದೆನುತ ತೂಗಿದನವನಿಪತಿ ಗದೆಯ ॥ ೬೭ ॥

---

೬೫. [1]ದಾಟ (ಅ). [2]ಶತಕೋಟಿ ಘಾಯದ ಘಟನೆ [ಯೊಳು] ಶತಕೋಟಿ ಘಾಯಕೆ (ಅ ಕುಮಾ). [3]ಸಿತು (ಅ). [4]ರು ನಿಜ ನೋಟ (ಅ). [5]ಧರ (ಅ), ತರ (ಅ ಕುಮಾ).

[ದೂಟ ಬಿದ್ದವು-ಕಳಚಿ ಬಿದ್ದವು, ಹಾರಿ ಬಿದ್ದವು. ಸೀಸಕ-(ಶಿರಸ್ತ್ರಾಣ)-ತಲೆಗಾಪು. ಸಮಕೋಟಿ-ಸಮಸಮನಾದ ಕಾಳಗ. ಘಟ್ಟಣೆ-ಉಲ್ಬಣ. ತಾಟು-ತಡೆದು ನಿಲ್ಲು. ಪರಿಪಾಟಿ-ಕ್ರಮ. ದರಚೀಟಿ-ಬೆಲೆಚೀಟಿ (?)].

೬೬. [1]ದಿ ನೆರವು (ಅ). [2]ದೊರಲಿದರು (ಅ). [3]ದಳಲಿದುದು (ಅ ಕುಮಾ).

[ಏಱು-ಗಾಯ. ಶೋಣಿತ-ರಕ್ತ].

೬೭. [1]ಕೈ (ಅ ಕುಮಾ).

[ಶರಾಸನ-ಧನುಸ್ಸು. ಅವಗಡಿಸು-ಎದುರಾಗು, ಪ್ರತಿಭಟಿಸು. ಮಿಡುಕು-ಸಾಮರ್ಥ್ಯ ತೋರು].

ದುಗುಡದಲಿ ಹರಿ [1]ರೌ[1]ಹಿಣೇಯನ
ಮೊಗವ ನೋಡಿದೊಡಾತನಿದು ಕಾ-
ಲೆಗ[2]ವ[2]ಲೇ ಕೃತಸಮಯರಾದಿರಿ ಪೂರ್ವಕಾಲದಲಿ ।
ಹಗೆಯ ಬಿ[3]ಡಿ[3] ಕೌರವಪತಿ[4][ಯು][4] ಸಂಧಿಗೆ
ಸೊಗಸಿ[5]ಸಲಲಿ[5] ಯುಧಿಷ್ಠಿರನ ಮಾ-
ತುಗಳ ಕೆಡಿಸದಿರೆಂದನಾ ಕೃಷ್ಣಂಗೆ ಬಲರಾಮ ॥ ೬೮ ॥

ಅರಸ ಕೇಳೈ ಬಿದ್ದ ಭೀಮನ
ಹೊರೆಗೆ ಬಂದರ್ಜುನನು ಮರುಗಿ[1][ಗೆ][1]
ಬೆರಳ [2]ನೊಡ್ಡಿ[2] ಸಮೀರನಂದನನುಸುರನಾರೈದು ।
ಮರಳಿದನು ಮುರಹರನನೆಕ್ಕಟಿ-
ಗರೆದು ಸ[3]ಪ್ರಾ[3]ಣನು ಗದಾನಿ-
ರ್ಭರಪರಿಶ್ರಮಭೀಮ ಬಳಲಿದನೆಂದನಾ ಪಾರ್ಥ ॥ ೬೯ ॥

ಧಾತುಗೆಟ್ಟನು ಭೀಮ ಮುಸುಕಿತು
ಭೀತಿ ನಮ್ಮೆಲ್ಲರನು ದೇವ-
ವ್ರಾತವಾತನ ಕೊಂಡುಕೊನರಿತು ಹೊಯ್ದು ಹೂಮಳೆಯ ।
ಪಾತಕಕೆ [1]ಪಡ[1]ವಾಗದಮಳ-
ಖ್ಯಾತಿ [2]ಕಂದದೆ[2] ವಿಜಯಸಿರಿ ರಾ-
ಗಾತಿಶಯದಲಿ ನಮ್ಮ ರಮಿಸುವ [3]ಬಗೆಯ[3] [4]ಬೆಸಸೆಂದ[4] ॥ ೭೦ ॥

---

೬೮. [1]ರೋ (ಅ). [2]ವೆ (ಅ). [3]ಡು (ಅ). [4]ಯ (ಅ ಆ ಕುಮಾ). [5]ನಲ್ಲಿ (ಅ).
[ರೌಹಿಣೇಯ-(ರೋಹಿಣಿಯ ಮಗ) ಬಲರಾಮ. ಕೃತಸಮಯರಾದಿರಿ-ಒಡಂಬಡಿಕೆಯನ್ನು ಪಾಲಿಸಿದವರಾದಿರಿ. ಸೊಗಸಿ-ಒಲಿದು].

೬೯. [1]ನ (ಅ). [2]ನೋಡಿ (ಅ). [3]ಕ್ಷಾ (ಅ).
[ಹೊರೆ-ಸಮೀಪ. ಸಮೀರನಂದನ-ಭೀಮ. ಅರೈದು-ಪರೀಕ್ಷಿಸಿ. ಎಕ್ಕಟಿಗರೆ-ಸಮೀಪಕ್ಕೆ ಕರೆ. ಸಪ್ರಾಣನು-ಜೀವಸಹಿತ ಇರುವವನು. ಗದಾ ನಿರ್ಭರ ಪ
ಶ್ರಮ-ಗದಾಯುದ್ಧದ ಅತ್ಯಧಿಕವಾದ ಹೋರಾಟದಿಂದ].

೭೦. [1]ಪಲ (ಅ). [2]ನೋಯದ (ಅ ಕುಮಾ). [3]ದೆಸೆಯ (ಅ ಕುಮಾ). [4]ಹೇಳೆಂ
(ಅ).
[ಧಾತುಗೆಡು-ಶಕ್ತಿಗುಂದು. ಮುಸುಕು-ಆವರಿಸು. ದೇವವ್ರಾತ-ದೇವತೆಗ
ಸಮೂಹ. ಕೊಂಡು ಕೊನರು-ಸ್ತೋತ್ರಮಾಡು, ಹೊಗಳು. ಹೊಯ್ದು-ಸುರಿ
ಪಡವಾಗು-ವಶವಾಗು. ಕಂದು-ಕಾಂತಿಹೀನವಾಗು. ರಾಗಾತಿಶಯ-ಪ್ರೀತಿಯ
ಅಧಿಕ್ಯ. ರಮಿಸು-ಸಂತೋಷಪಡಿಸು].

ಅನಿಲಸುತ ನ[1]ಪ್ರಾಣಿಸಲಿ[1] ನೃಪ-
ಜನಪಸೂರುವಿ[2]ಭಂಗ[2]ವೇ ಮು-
ನ್ನಿನ ಪ್ರತಿಜ್ಞೆಯುಲಾ ಸಭಾಮಧ್ಯದಲಿ ಕುರುಪತಿಯು ।
ನೆನೆಸಿಕೊಂ[3]ಡ[3] ಸಾಕಿನ್ನು ಬೇಟೆಗಂ-
ದನುನಯವು ತಾನೇನು ವಿಜಯಾಂ-
ಗನೆಗೆ ದ್ರುಪದಕುಮಾರಿ ತನ್ನೆಡೆ ಸವತಿಯುತಳೆಂದ ॥ ೨೧ ॥

ಅರಸ ಕೇಳಾಕ್ಷಣದೊಳನಿಲ-
ಸ್ಮರಣೆಯಾನು ಹರಿ ಮಾಡಿ[1]ದೊಡೆ[1] ಸಂ-
ಚರಿಸಿದನು ತತ್ತನುಜನಂಗೋಪಾಂಗವೀಧಿಯಲಿ ।
ತರತರದ ನಾಡಿಗಳೊಳಗೆ ವಿ-
ಸ್ತರಿಸಿ ಮೂಲಾಧಾರದಲಿ ಚೇ-
ತರಿಸಿ ಸರ್ವಾಂಗದಲಿ ಜೀವಸಮೀರ ಪಸರಿಸಿದ ॥ ೨೨ ॥

[1]ತ್ರಾಣ[1]ವಿಸ್ಮೃತಿಸಿತ್ತು ತಿರುಗಿದ
ಗೋಣು ಮರಳಿತು ರೋಪವಳ್ಳಿಗೆ
ಸಾಣೆಹಿಡಿದಪ್ರೊಲಾಯ್ತು ಕಣ್ಣು [2]ಗುಳದುವು[2] ಕೇಸರಿಯು ।

೨೧. [1]ಸತ್ತ್ವಜನಲು (ಅ). [2]ಭಾಗ (ಅ). [3]ಡು (ಅ).
[ಊರುವಿಭಂಗ-ತೊಡೆಯನ್ನು ಮುರಿಯುವುದು. ಅನುನಯ-ಅನುಸರಿಸಬೇಕಾದ ನೀತಿ].

೨೨. [1]ದನು (ಅ ಕುಮಾ).
[ಅನಿಲಸ್ಮರಣೆ-ವಾಯುಸ್ಮರಣೆ. ಹರಿ-ಕೃಷ್ಣ. ಅಂಗೋಪಾಂಗವೀಧಿಯಲಿ-ದೊಡ್ಡ ಸಣ್ಣ ಅವಯವಗಳ ಮಾರ್ಗದಲ್ಲಿ. ನಾಡಿ-ಪ್ರಾಣವಾಯು ಸಂಚರಿಸುವ ನರಗಳು. ವಿಸ್ತರಿಸಿ-ಹರಡಿಕೊಂಡು. ಮೂಲಾಧಾರ-ಯೋಗಶಾಸ್ತ್ರದಲ್ಲಿ ಹೇಳುವ ಆರು ಚಕ್ರಗಳಲ್ಲಿ ಅತ್ಯಂತ ಕೆಳಗಿನದು (ಮೂಲಾಧಾರ, ಸ್ವಾಧಿಷ್ಠಾನ, ಮಣಿಪೂರ, ಅನಾಹತ, ವಿಶುದ್ಧ, ಆಜ್ಞಾ—ಇವು ಸುಷುಮ್ನಾ ನಾಡಿಯ ಷಟ್ಚಕ್ರಗಳು. ಮೋಕ್ಷಸ್ಥಾನವಾದ ಸಹಸ್ರಾರ ಚಕ್ರವೂ ಸೇರಿದರೆ ಚಕ್ರಸಪ್ತಕಗಳೆನಿಸಿಕೊಳ್ಳುವುವು). ಚೇತರಿಸಿ-ಶಕ್ತಿಗೂಡಿಕೊಂಡು. ಜೀವಸಮೀರ-ಪ್ರಾಣವಾಯು. ಪಸರಿಸು-ಹರಡು, ವ್ಯಾಪಿಸು].

೨೩. [1]ಪ್ರಾಣ (ಅ). [2]ಗಳಿತದವು (ಅ). [3]ತ್ರಾಣ (ಅ). [4]ಸವಿದ (ಅ). [5]ದನಿ (ಅ).
[6]ಸಂ (ಅ).

[3]ಶಾ[3]ಣ [4]ಸಡಿಲಿದ[4] [5]ಗದೆಯು[5] ರಣಬಿ-
ನ್ನಾಣ ಮಸುಳಿದ ಮಾನಮರ್ದನ-
ದೂಣೆಯುದ [6]ಸ[6]ವ್ಯಥೆಯು ಭಟ ಸಂತೈಸಿದನು ತನುವ ॥ ೭೩ ॥

ಕೊಡಹಿದನು ತನುಧೂಳಿಯನು ಧಾ-
ರಿಡುವ ರುಧಿರ[1]ವ[1] [2]ಸೆಱಗ[2]ನಲಿ [3]ತೊಡೆ-[3]
ತೊಡೆದು [4]ವರಕರ್ಪೂರ ಕವಳವನಣಲೊಳಡಸಿದನು[4] ।
ತೊಡೆಯು ಹೊಯ್ದಾ[5]ರು[5]ವ ಮುರಾರಿಯು
ನೆಡೆಯುಡುಗ[6]ದೀ[6]ಕ್ಷಿಸುತ ದೂರಕೆ
ಸಿಡಿದ ಗದೆಯನು ತುಡುಕಿ ನೃಪತಿಯ ತೊಡೆಗೆ ಲಾಗಿಸಿದ ॥ ೭೪ ॥

ಹೊಯ್ದು [1]ಲು[1]ಳಿಯಲಿ ಕರಣಗತಿಯಲಿ
ಹಾಯ್ದು ನಭಕುಪ್ಪರಿಸಿ ಮರಳಿದು
ಹೊಯ್ದು ಹಿಂಗುವ ನೃಪನ ತೊಡೆಗಳನಿಟ್ಟನಾ ಭೀಮ ।
[2]ಹೊಯ್ದು[2] ಗದೆ ಹೆದ್ದೊಡೆಗಳನು ಮುಱಿ
ದೈದಿತವನಿಯ[3]ನ[3]ರುಣಜಲದಲಿ
ತೊಯ್ದು ಧೊಪ್ಪನೆ ಕೆ[4]ಡೆ[4]ದನಿಳೆಯಲಿ ಕೌರವರಾಯ ॥ ೭೫ ॥

---

೭೩. [ಪ್ರಾಣ-ಶಕ್ತಿ. ಗೋಣು-ಕತ್ತು, ಕೊರಳು. ಮರಳಿತು-ಹಿಂದಕ್ಕೆ ಬಂದಿತು. ರೋಷವಹ್ನಿ-ಕ್ರೋಧಾಗ್ನಿ. ಸಾಣೆಹಿಡಿ-ಮಸೆ. ಕೇಸುರಿ-ಕೆಂಪಾದ ಬೆಂಕಿಯ ಜ್ವಾಲೆ. ಶಾಣ ಸಡಿಲಿದ-ಎಡೆ ತಪ್ಪಿದ, ಸ್ಥಾನ ಬದಲಾಯಿಸಿದ. ರಣಬಿನ್ನಾಣ-ಯುದ್ಧ ವಿದ್ಯೆ. ಮಸುಳು-ಕಾಂತಿಹೀನವಾಗು, ಕುಂದು. ಮಾನಮರ್ದನ ದೂಣೆಯ-ಅಭಿಮಾನವನ್ನು ಪುಡಿಗಟ್ಟಿದ ಕೊರತೆ. ಸವ್ಯತೆಯ-ಕೊರಗುಳ್ಳ. ಸಂತೈಸಿದನು ತನುವ-ತನ್ನ ಶರೀರವನ್ನು ಎಂದಿನ ಸ್ಥಿತಿಗೆ ತಂದುಕೊಂಡನು].

೭೪. [1]ದ (ಅ). [2]ಸೆರಗಿ (ಅ). [3]ಸಲೆ (ಅ ಕುಮಾ). [4]ಕರ್ಪೂರದ ಕವಳವನಣಲೊಳಳವಡಿಸಿ (ಅ ಕುಮಾ). [5]ಡು (ಅ). [6]ವೀ (ಅ).

[ಧಾರಿಡು-ಧಾರಾಕಾರವಾಗಿ ಸುರಿ. ಕವಳ-ತುತ್ತು (ಒಂದು ಉಂಡೆ). ಅಣಲು-ಗಂಟಲು. ಅಳವಡಿಸು-ಸೇರಿಸು, ಹಾಕಿಕೊ. ಆರು-ಗರ್ಜಿಸು. ಎಡೆಯುಡುಗದೆ-ಒಂದೇ ಸಮನಾಗಿ. ಸಿಡಿದ-ಎಗರಿಬಿದ್ದ. ಲಾಗಿಸು-ಗುರಿಯಿಟ್ಟು ಹೊಡೆ].

೭೫. [1]ಲ (ಅ ಕುಮಾ). [2]ಹಾಯ್ದು (ಅ ಕುಮಾ). [3]ಲ (ಅ). [5]ಡ (ಅ).

[ಲುಳಿ-ಕೌಶಲ್ಯ, ಚಾಕಚಕ್ಯತೆ. ಕರಣಗತಿ-ವರಸೆಯ ರೀತಿ. ಹಾಯ್ದು-ನುಗ್ಗಿ. ಉಪ್ಪರಿಸು-ನೆಗೆ, ಹಾರು. ಹಿಂಗು-ಹಿಮ್ಮೆಟ್ಟು. ಇಡು (ಧಾ)-ಹೊಡೆ. ಐದಿತು-ಸೇರಿತು. ಅರುಣಜಲ-ಕೆನ್ನೀರು, ರಕ್ತ. ಕೆಡೆ-ಬೀಳು].

ಹಾರ [1]ಹರಿ[1]ದುದು ಕರ್ಣಪೂರದ
ಚಾರುಮೌಕ್ತಿಕನಿಕರ ಸಿಡಿದವು
ಧಾರಿಡುವ ರಕ್ತಾಂಬು ಮಡು[2]ಗಟ್ಟಿ[2]ದುದು ಮಗ್ಗುಲಲಿ ।
ವೀರಭೀ[3]ಮಾ[3] ಮುರಳು ಯೆಸುತ ಬಲ-
ವಾರಿದುದು ನಿಸ್ಸಾಳಸೂಳಿನ
ವೀರಪ[4]ಟಹ[4]ದ ಲಗ್ಗೆ ಮಸಗಿತು ಪರರ ಥಟ್ಟಿನಲಿ ॥ ೭೬ ॥

ಬಿದ್ದನೈ ನಿನ್ನಾತ [1]ನೀ ನೆನೆ-
ದಿದ್ದುದಾಯ್ತೀ ಜೂಜಿನಲಿ ನೃಪ[1]
ಗೆದ್ದುದಕೆ ಫಲ ಬಂದುದೀ ಸಂಧಾನದಲಿ ಛಲವ ।
ಹೊದ್ದಿ[2]ತ[2]ಕೆ ಹು[3][ಲಿ][3]ಸಾಯ್ತು ಬಲುವಗೆ
ಬಿದ್ದನೆಂದು[4]ಳುಹಿದನ್[4] ಪವನಜ-
ನುದ್ದುರುಟತನಕೇನನೆಂಬೆನು ನೃಪತಿ ಕೇಳೆಂದ ॥ ೭೭ ॥

ಅವನಿಪತಿ ಕೇಳೀಚೆಯಲಿ ಕೌ-
ರವನ ಹೊರೆಗೈತಂದು ನಿಂದನು
ಸವಡಿ ಕೈಗದೆಯಣಸುಗಲ್ಲದ ಗಾಢಗರ್ವದಲಿ ।
[1]ಪವನಸುತ[1] ನುಡಿಸಿದನಲೈ ನಿ-
ನ್ನವನನೇನೈ ಭೂಪ ಕೊಡುವೈ
ನವಗೆ ನೆಲನರ್ಧವನು ನಾಚಿಕೆಯೇಕೆ ನುಡಿಯೆಂದ ॥ ೭೮ ॥

---

೭೬. [1]ರುಚಿ (ಅ ಕುಮಾ). [2]ಗಿ (ಅ). [3]ಭೀಮನ (ಅ). [4]ಪಣಹ (ಅ ಕುಮಾ).
[ಹರಿ-ಕತ್ತರಿಸಿಹೋಗು, ಹರಿದುಹೋಗು. ಕರ್ಣಪೂರ-ಕಿವಿಯ ಒಡವೆ. ಚಾರು-ಮನೋಹರವಾದ. ಮೌಕ್ತಿಕನಿಕರ-ಮುತ್ತುಗಳ ಸಮೂಹ. ಬಲ-ಸೈನ್ಯ. ನಿಸ್ಸಾಳ ಪಟಹ-ತಮ್ಮಟೆ, ಚರ್ಮವಾದ್ಯಗಳು. ಲಗ್ಗೆ-ಆಕ್ರಮಣ. ಪರರ ಥಟ್ಟು-ಶತ್ರು ಸೈನ್ಯ].

೭೭. [1]ನಿನ್ನೀನೆದ್ದರ್ಕೈ ದಾಯಿಗರು ಜೂಜನು (ಅ ಕುಮಾ). [2]ದ (ಅ). [3]ಲು (ಅ). [4]ಳಿಹಿದನು (ಅ).
[ಹೊದ್ದಿತಕೆ (ಹೊದ್ದಿದುದಕ್ಕೆ)-ಪಟ್ಟು ಹಿಡಿದದ್ದಕ್ಕೆ. ಹುಲಿಸಾಗು-ಹೊರವಾಗು, ಚೆನ್ನಾಗಿ ಬೆಳೆ. ಬಲುವಗೆ-ಕಡುವೈರ]

೭೮. [1]ನಜನ (ಅ).
[ಸವಡಿ-ಜೋಡಿ, ಜೊತೆ. ಅಣಸು-ಗದೆಯ ತುದಿ].

ಊ[1]ರು[1] ಬೇಡಿದೆವೈ[2]ದ[2] [3]ನೀನೆ[3]ರ-
ಡೂರುಗ[4]ಳ[4]ನೇ ಕೊಟ್ಟೈಯ್ಯ ನಿಜ-
ಧಾರಿಣಿಯು ಕೊಡೆನೆಂ[5]ದೆಲಾ[5] ಸೂ[6]ಚ್ಯ[6]ಗ್ರಸಂಮಿತವ ।
ನಾರಿ ಋತುಮತಿಯೆಂದೊಡೆಯು ಸುಳಿ
ಸೀರೆಗಳನೆಂಬಗ್ಗಳಿಕೆ ಕಾ-
ಸಾರದಲಿ ಕರಗಿತೆ ಸುಯೋಧನ ಎಂದನಾ ಭೀಮ ॥ ೭೯ ॥

ಎತ್ತಿ ಕ[1]ಳೆದೈ[1] ವನಕೆ ನಾವ್ ನಿ-
ವೃತ್ತಗಳ[2]ಲಾ[2] ಬೆರಳಲೇಡಿಸಿ-
ದೆತ್ತಗಳ ಕೂಡೇಕೆ ಸರಿನುಡಿ ಸಾರ್ವಭೌಮರ್ಗೆ ।
ಇತ್ತಲೇತಕೆ ಬಿಜಯಮಾಡಿದಿ-
[3]ರೊತ್ತದೇ[3]ಕಲುನೆಲನು ಪವಡಿಸಿ
ಮತ್ತೆ ತೊಡೆಗಳ ತಿವಿಯ[4]ಬೇಕೇ ಎ[4]ಂದನಾ ಭೀಮ ॥ ೮೦ ॥

ಕೃತ್ರಿಮವ ನಿರ್ಮಿಸಿದ ಫಲ ಕೈ-
ವರ್ತಿಸಿದ ನೀ[1]ವರಗುಮನೆಯಲಿ[1]
ಹೊತ್ತಿಸಿದ [2]ಫಲ[2] ಬಂದುದೇ ವ್ಯವಧಾನವಾದು[3]ದೆಲಾ[3] ।
ಬಿತ್ತಿದಿರಿ ವಿಷಬೀಜವನು ನೆಲ[3]
ದತ್ತ ಫಲ ಕೈಸಾರ್ದುದಾ[4]ದೊಡೆ[4]
[5]ಕೆ[5]ತ್ತುಕೊಂಡಿರಲೇಕೆ ನುಡಿ [6]ಎ[6]ನ್ನಾಣೆ ನುಡಿಯೆಂದ ॥ ೮೧ ॥

---

೭೯. [1]ರ (ಅ ಕುಮಾ). [2]ದೆ (ಅ). [3]ನಾವೆ (ಅ ಕುಮಾ). [4]ಳೆ (ಅ). [5]ದಲ್ಲೆ (ಅ ಕುಮಾ). [6]ಚ್ಯಾ (ಅ ಕುಮಾ).

[ಊರು–[1]ಪಟ್ಟಣ, [2]ತೊಡೆ. ಐದ–ಐದನ್ನು. ಎಂದೆಲಾ–ಎಂದೆಯಲ್ಲವೆ? ಸೂಚ್ಯಗ್ರ ಸಂಮಿತವ–ಸೂಜಿಯ ಮೊನೆಯಷ್ಟನ್ನು. ಋತುಮತಿ–ಮುಟ್ಟಾಗಿರುವವಳು, ಹೊರಗಾಗಿರುವವಳು. ಸುಳಿ–ಸೆಳೆ, ಕಳಚು. ಕಾಸಾರ–ಕೊಳ],

೮೦. [1]ಕಳುಹಿದೆ (ಅ). [2]ಲ್ಲೈ (ಅ ಕುಮಾ). [3]ರೆತ್ತದೆ (ಅ). [4]ಲೇಕಿನ್ನೆಂ (ಅ).

[ಎತ್ತಿಕಳೆ–ಓಡಿಸು, ಅಟ್ಟು. ಏಡಿಸು–ತಿರಸ್ಕರಿಸು. ಸರಿನುಡಿ–ಸಮಾನತೆಯ ಮಾತು].

೮೧. [1]ಗರುವವೆಮ್ಮಲಿ (ಅ). [2]ಛಲ (ಅ). [3]ದಲೆ (ಅ ಕುಮಾ). [4]ಗಳೆ (ಅ). [5]ತೆ (ಅ). [6]ಯೆ (ಅ).

[ಕೃತ್ರಿಮ–ಮೋಸ, ವಂಚನೆ. ಕೈವರ್ತಿಸು–ಕೈವಶವಾಗು. ವ್ಯವಧಾನ–ಸಮಾಧಾನ. ದತ್ತ–ಕೊಟ್ಟ. ಕೈಸಾರು–ಕೈವಶವಾಗು. ಕೆತ್ತುಕೊಂಡಿರು–ತಳಮಳಿಸು].

ಹಿಂದಣಪ[1]ಕಾರ[1]ವನು ಲೆಕ್ಕಿಸು-
ತೊಂದೆರಡು ಮೂಱಾಯ್ತು ನಾಲ್ಕೈ-
ದೆಂದು ಮೆಟ್ಟಿದನವನಿಪಾಲನ ಮಕುಟಮಸ್ತಕವ ।
ಇಂದುಮುಖಿಯನು ಬೂತುಗೆಡೆದುದ-
ಕೊಂದು ಗಾಯವ ಕೊಳ್ಳೆನುತ [2]ಮದ-[2]
ದಿಂದ ವದನವನೊದೆದು ಹಲ್ಗಳ [3]ಕಳೆದನಾ[3] ಭೀಮ ॥ ೮೨ ॥

*ಹಳುವದಲಿ ನಾನಾಪ್ರಕಾರದ-
ಲಳಲಿಸಿದ ಫಲಭೋಗವನು ನೀ
ತಲೆಯುಲೇ ಧರಿಸೆಂದು ವಾಮಾಂಘ್ರಿಯನು ಮಕುಟದಲಿ ।
ಇಳುಹಿದನು [1]ಕುರುಕುಲದ ರವಿಯೆಂ[1]
ದುಲಿದೆಲಾ ಎನುತೊದೆದು ಮಕುಟವ
ಕಳಚಿದನು ಕೀಲಣದ ಮಣಿಗಳು ಕೆದಱಿದೆಸೆದೆಸೆಗೆ ॥ ೮೩ ॥

ಭೀಮ ಹಾ ಹಾ ಕಷ್ಟವಿದು ಸಂ-
ಗ್ರಾಮಜಯವೇ ಸಾಲದೇ ಕುರು-
ಭೂಮಿಪತಿಯಶ್ಲಾಘ್ಯನೇ ಲೋಕೈಕಮಾನ್ಯನಲಾ ।
ನೀ ಮರುಳಲಾ ಸಾ[1]ರೆ[1]ನುತ ತ-
ತ್ಸೀಮೆಗೈತಂದನಿಲತನುಜನ-
ನಾ ಮಹೀಪತಿ ನೂಕಿ ಸಂತೈಸಿದನು ಕುರುಪತಿಯ ॥ ೮೪ ॥

---

೮೨. [1]ರಾಧ (ಅ ಕುಮಾ). [2]ಮಡ (ಅ ಕುಮಾ). [3]ಕಳಚಿದನು (ಅ ಕುಮಾ).
[ಲೆಕ್ಕಿಸು-ಲೆಕ್ಕಹಾಕು. ಮಕುಟಮಸ್ತಕ-ಕಿರೀಟ ಧರಿಸಿದ ತಲೆ. ಬೂತುಗೆಡೆ-ಅಶ್ಲೀಲವಾದ ಮಾತುಗಳಿಂದ ನಿಂದಿಸು].

೮೩. [1]ಗೌ ಗೌರ್ಗವೆನುತ ಬಿಡ (ಅ ಕುಮಾ).
[ಹಳುವ-ಕಾಡು. ಅಳಲಿಸು-ದುಃಖಪಡಿಸು. ಫಲಭೋಗ-ಫಲಾನುಭವ. ವಾಮಾಂಘ್ರಿ-ಎಡದ ಪಾದ. ಉಲಿ-ಸಾರಿ ಹೇಳು. ಕೀಲಣದ-ಕೆತ್ತಿದ, ಜೋಡಿಸಿದ. ಮಣಿ-ರತ್ನ. ಕೆದಱು-ಚೆದರು, ಚಲ್ಲಾಪಿಲ್ಲಿಯಾಗು].

೮೪. [1]ಕೆ (ಅ).
[ಅಶ್ಲಾಘ್ಯ-ಹೊಗಳಿಕೆಗೆ ಅಪಾತ್ರನಾದವನು. ಲೋಕೈಕಮಾನ್ಯ-ಲೋಕದಿಂದ ಗೌರವಿಸಲ್ಪಡತಕ್ಕವನು. ಸಾರು-ದೂರ ಸರಿ. ತತ್ಸೀಮೆಗೆ-ಆ ಜಾಗಕ್ಕೆ. ನೂಕಿ-ಪಕ್ಕಕ್ಕೆ ತಳ್ಳಿ].

---

* ಅ ಪ್ರತಿಯಲ್ಲಿ ಇಲ್ಲಿನ ೮೩ನೆಯ ಪದ್ಯ ೮೨ನೆಯ ಪದ್ಯಕ್ಕೆ ಮೊದಲೇ ಬಂದಿದೆ. ಇಲ್ಲಿನ ಅನುಕ್ರಮವೇ ಸರಿಯೆಂದು ತೋರುತ್ತದೆ.

ಗುಣನಿಧಿಯುನೇಕಾದಶಾಕ್ಷೋ-
ಹಿಣಿಯ ಪತಿಯುನಶೇಷಪಾರ್ಥಿವ-
ಮಣಿಮುಕುಟಕಿರಣೋಪಲಾಲಿತಪಾದಪಲ್ಲವನ ।
ರಣದೊಳನ್ಯಾಯದಲಿ ತೊಡೆಗಳ
ಹಣಿದುದಲ್ಲದೆ ಪಾದದಲಿ ನೀ
ಕೆಣಕುವರೆ ಕುರುರಾಯುಮೌಳಿಯುನೆಂದನಾ ರಾಯ ॥ ೮೫ ॥

ಕಂಡನೀ ವ್ಯತಿಕರವನರಸನ
ಮಂಡೆಯುಂಘ್ರಿಯು ಭೀಮಸೇನನ
ದಂಡಿಯುನು [1]ಘಟ್ಟಿಸೆ ಸುಯಿ ದಳ್ಳುರಿಯು[1] ಚೂಣಿಯುಲಿ ।
ಗಂಡುಗೆದಜಿದ ರೋಷಶಿಖಿ ಹುರಿ-
ಗೊಂಡುದಕ್ಷಿಗಳಲಿ ವೃಕೋದರ
ಕೊಂಡನೇ [2]ತಪ್ಪೇನೆ[2]ನುತ ನಿಂದಿರ್ದನಾ ರಾಮ ॥ ೮೬ ॥

ಎಲವೆಲವೊ ಪಾಂಡವರಿರಾ ನೀ-
ವಳುಪಿದಿರೆಲಾ ನಾಭಿಯಿಂದವೆ
ಕೆಳಗೆ ಕೈಮಾಡುವುದು ಸಲ್ಲದು ಗದೆಯ ಕದನದಲಿ ।
ಚ[1]ಲಿ[1]ಸಲಾಗದು ಧರ್ಮನಿರ್ಣಯ-
ದೊಳಗಿದೊಂದೇ ಭಾಷೆ ಮಾಡಿದಿ-
ರಳಿ[2]ದಿ[2]ರನ್ಯಾಯದಲಿ ಕೊಂದಿರಿ ಕೌರವೇಶ್ವರನ ॥ ೮೭ ॥

---

೮೫. [ಏಕಾದಶಾಕ್ಷೋಹಿಣಿಯ ಪತಿ-ಹನ್ನೊಂದು ಅಕ್ಷೋಹಿಣಿ ಸಂಖ್ಯೆಯ ಚತುರಂಗ ಸೈನ್ಯಕ್ಕೆ ಒಡೆಯ. ಅಶೇಷ ಪಾರ್ಥಿವ ಮಣಿಮುಕುಟ ಕಿರಣೋಪಲಾಲಿತ ಪಾದ ಪಲ್ಲವ-ಸಮಸ್ತ ರಾಜರ ರತ್ನಖಚಿತವಾದ ಕಿರೀಟಗಳ ಕಿರಣಗಳಿಂದ ಸೇವಿಸಲ್ಪಟ್ಟ, ಪಾದಗಳೆಂಬ ಚಿಗುರು ಉಳ್ಳವನ (ಎಂದರೆ, ಸಮಸ್ತ ರಾಜರುಗಳಿಂದ ನಮಸ್ಕಾರ ಮಾಡಿಸಿಕೊಳ್ಳುತ್ತಿದ್ದವನು ಎಂದು ತಾತ್ಪರ್ಯ). ಹಣಿ-ಥಳಿಸು, ಹೊಡೆ].

೮೬. [1]ದಟ್ಟೈಸಿ ದಳ್ಳುರಿ ತಿರುಳು (ಅ). [2]ತಪ್ಪಲ್ಲೆ (ಅ).
[ವ್ಯತಿಕರ-ಆಪತ್ತು, ವಿಪತ್ತು, ವಿಷಮ ಸಂದರ್ಭ. ದಂಡಿ-ಕ್ರೌರ್ಯ, ಕಾಠಿನ್ಯ. ಘಟ್ಟೈಸು-ಸಾಂದ್ರವಾಗು, ಒತ್ತಾಗು, ಒಟ್ಟುಗೂಡು. ಸುಯಿ ದಳ್ಳುರಿ-ನಿಟ್ಟುಸಿರಿನ ಜ್ವಾಲೆ. ಚೂಣಿ-ಮುಂಭಾಗ, ಮುಂತುದಿ. ಗಂಡುಗೆದಱು-ಪೌರುಷದ, ಪರಾಕ್ರಮದ ಮಾತುಗಳನ್ನು ಆಡು. ರೋಷಶಿಖಿ-ಕ್ರೋಧಾಗ್ನಿ. ಹುರಿಗೊಳ್ಳು-ಹೊರಹೊಮ್ಮು].

೮೭. [1]ರಿ (ಅ). [2]ದ (ಅ).
[ಅಳುಪು-ನಾಶಮಾಡು, ಹಾಳುಮಾಡು. ಚಲಿಸು-ಮೀರು. ಭಾಷೆಮಾಡು-ಪ್ರತಿಜ್ಞೆ ಮಾಡು. ಅಳಿದಿರಿ-ನಾಶವಾದಿರಿ, ಕೆಟ್ಟಿರಿ].

ನೀವು ಮಾಡಿದ ಸತ್ಯಭಾಷೆಗೆ
ನೀವಲಾ ತಪ್ಪಿದಿರಿ ನೋಟಕ-
ರಾವು ಮಧ್ಯಸ್ಥಿತರಲೇ ಧರ್ಮೈಕ ರಕ್ಷಕರು ।
ನಾವು ಸಾಕ್ಷಿ[1]ಗಳಲ್ಪ[1]ರೆಂದೇ
ನೀವು ನೃಪತಿಯ ತೊಡೆಯನುಡಿದಿರಿ
ಡಾವರವೆ ಸಾಕೈಸೆ ಕಾಲಿಕ್ಕಿದಿರಿ ಸಿರಿಮುಡಿಗೆ ॥ ೮೮ ॥

ಎಂದು ನೇಗಿಲ ತುಡುಕಿ ಯೆಡಗೈ-
ಯಿಂದ ನೆಗಹಿ ಮಹೋಗ್ರಮುಸಲವ-
ನೊಂದು [1]ಕೈಯ[1]ಲಿ ತಿರುಹಿ ಕೊಬ್ಬಿದ ಖತಿಯ ಭಾರದಲಿ ।
ಮುಂದೆ ನಡೆತರೆ ಸಕಲಸೇನಾ-
ವೃಂದ ನಡುಗಿತು ಬಹಳ ಭೀತಿಯ
ಬಂದಿಯಲಿ ಜ[2]ಱುಗಿ[2]ದವು ಜವಳಿಯ ಜ[3]ಗ[3]ದ ಜೋಡುಗಳು ॥ ೮೯ ॥

ಹಲಧರನ ಮಸಕವನು ಪಾಂಡವ-
ಬಲದ ದುಶ್ಚೇಷ್ಟೆಯನು ಭೀಮನ
ಫಲುಗುಣನ ಧರ್ಮಜನ ಯಮಳರ ಚಿತ್ತವಿಭ್ರಮವ ।
ಬಲಿಮಥನನೀಕ್ಷಿಸುತ ರಜತಾ-
ಚಲವ ತಱುಬುವ ನೀಲಗಿರಿಯ ವೊ-
ಲಳುಕವಿದಿರಲಿ ನಿಂದು ಹಿಡಿದನು ಬಲನ ಬಲಗೈಯ ॥ ೯೦ ॥

---

೮೮. [1]ಕರಬಲ (ಅ), ಗಳಬಳ (ಅ); ಸ್ವೀಪಾ (ಅ ಪ್ರತಿಯ ಅಡಿಟಿಪ್ಪಣಿಯ ಪಾಠ).
[ಮಧ್ಯಸ್ಥಿಕರು-ಮಧ್ಯಸ್ಥಿಕೆಯಲ್ಲಿರುವವರು. ಅಲ್ಪರು-ಲೆಕ್ಕಕ್ಕೆ ಬಾರದವರು. ಉಡಿ-ಮುರಿ. ಡಾವರ-ಹಿಂಸೆ, ಕೋಟಲೆ].

೮೯. [1]ಕರದ (ಅ). [2]ರುಹಿ (ಅ). [3]ವ (ಅ).
[ಮುಸಲ-ಗದೆ. ಬಂದಿ-ಹಿಡಿತ. ಜರುಗು-ಹಿಂಜರಿ. ಜವಳಿಯ ಜಗದ ಜೋಡುಗಳು ಎರಡೂ ಕಡೆಯ ಸೇನಾಪ್ರಪಂಚದ ದಳಗಳು].

೯೦. [ಹಲಧರ-ಬಲರಾಮ. ಮಸಕ-ರೋಷ. ಪಾಂಡವಬಲ-ಪಾಂಡವರ ಪರಾಕ್ರಮ. ದುಶ್ಚೇಷ್ಟೆ-ಕೀಟಲೆ, ತುಂಟತನ, ನಾಶಕಾರಕವಾದ ಕಾರ್ಯ. ಚಿತ್ತವಿಭ್ರಮ-(ಮನಸ್ಸಿನ) ಭ್ರಾಂತಿ, ತಪ್ಪು ತಿಳಿವಳಿಕೆ. ಬಲಿಮಥನ-ಕೃಷ್ಣ. ರಜತಾಚಲ-ಬೆಳ್ಳಿ ಬೆಟ್ಟ, ಕೈಲಾಸ. ತಱುಬು-ಅಟ್ಟಿಕೊಂಡು ಹೋಗು. ಅಳುಕು-ಹೆದರು].

ಚಿತ್ತವಿಸಿರೇ ಬಱಿಯ ರೋಷಕೆ
ಕಿತ್ತಡೇನಹುದಂತರಂಗವ-
ನುತ್ತಮರ ಪದ್ಧತಿಗಳಲಿ ಶಾಸ್ತ್ರಾರ್ಥಸಿಕ್ಷ್ಯಯುವ ।
ಬಿತ್ತರಿಸುವುದು ಕೌರವೇಂದ್ರನ
ಕಿತ್ತಡವ ನೀವಱಿಯಿರೇ ನಿಮ-
ಗೆತ್ತಿದಾಗ್ರಹ ನಿಲಲಿ ತಿಳುಹುವೆನೆಂದನಸುರಾರಿ ॥ ೯೧ ॥

ಏನ ತಿಳುಹುವೆ ನೀನು ಶಾಸ್ತ್ರದೊ-
ಳೇನ ನಡೆದರು ನಿನ್ನವರು ಯಮ-
ಸೂನು ನುಡಿಯನೆ ಸಮಯವನು ಶಾಸ್ತ್ರೌಘಸಂಗತಿಯ ।
ಹೀನಗತಿ ಪಡಿತಳದ ಹೊಯ್ಲು-
ತ್ತಾನಗಾಯದಲೊದಗಬೇಕೆಂ-
ಬೀ ನಿಬಂಧನವಾರಲಳಿದುದು ಕೃಷ್ಣ ಹೇಳೆಂದ ॥ ೯೨ ॥

ಹರಿದು ಹಿಡಿದನು ಮತ್ತೆ ನೀಲಾಂ-
ಬರನ ಸೆಱಗನು ನಿಮ್ಮ ಕುರುಪತಿ
ಚರಿಸಿದನಲಾ ಧರ್ಮವಿಸ್ತರವನು ವಿ'ಭಾಡಿ'ಸದೆ ।
ಕರಸಿ ಕಪಟದ್ಯೂತದಲಿ ನೃಪ-
ವರನ ಸೋಲಿಸಿ ಪಟ್ಟದರಸಿಯ
ಕರಸಿ ಸುಲಿಸುವದಾವ ಋಷಿಮತ ಧರ್ಮಶಾಸ್ತ್ರದಲಿ ॥ ೯೩ ॥

---

೯೧. [ಅಂತರಂಗ–ಮನಸ್ಸು. ಕಿತ್ತಡ–ಕಪಟ, ಮೋಸ. ಆಗ್ರಹ–ರೋಷ. ತಿಳುಹು–ತಿಳಿಸು, ವಿವರಿಸು].

೯೨. [ಸಮಯ-ಒಪ್ಪಂದ. ಶಾಸ್ತ್ರೌಘಸಂಗತಿ- ಶಾಸ್ತ್ರಗಳ ವಾಕ್ಯ. ಹೀನಗತಿ ಪಡಿತಳದ ಹೊಯ್ಲುತ್ತಾನ ಘಾಯ- ಕೀಳುನಡತೆಯ ದುರಾಕ್ರಮಣದ ಪರಿಣಾಮದ(ಭೀಮನ) ಹೊಡೆತದ ಅತಿರೇಕದಿಂದಾದ ಗಾಯ, ಪೆಟ್ಟು. ನಿಬಂಧನ–ಕಟ್ಟುಪಾಡು. ಅಳಿ–ನಾಶವಾಗು].

೯೩. [1]ಚಾರಿ (ಅ).

[ಹರಿದು-ಓಡಿಹೋಗಿ. ನೀಲಾಂಬರ–ಬಲರಾಮ. ಚರಿಸು–ಆಚರಿಸು, ನಡೆದುಕೊ, ಅನುಷ್ಠಾನಕ್ಕೆ ತರು. ವಿಭಾಡಿಸು–ನಾಶಮಾಡು, ಹಾಳುಮಾಡು. ಋಷಿಮತ–ಋಷಿಗಳ ಅಭಿಪ್ರಾಯ.

ಎಣಿಸಬಹುದೇ ನಿಮ್ಮ ನೃಪನವ-
ಗುಣವನನ್ಯಾಯಪ್ರಬಂಧಕೆ
ಗಣನೆಯುಂಟೇ ಭೀಮ ಗಡ [1]ತುಂಡಿ[1]ಸಿದ ತೊಡೆಗಳನು ।
ಕೆಣಕಿದನು ಮೈತ್ರೇಯನನು ನೃಪ-
ನಣಕಿಸಲು ಶಪಿಸಿದನು ತೊಡೆ[2]ಯಾಲಿ[2]
ಹಣಿದವಾ[3]ಗ[3]ಲಿ ಎಂದನದು ತಪ್ಪುವುದೆ ಋಷಿವಚನ ॥ ೯೪ ॥

ಆ ಪತಿವ್ರತೆ ಬಯ್ದಳೀ ಕುರು-
ಭೂಪ ತೊಡೆಗಳ ತೋರಿ[3] ಜರಿ[3]ಯಲು
ದ್ರೌಪದಿಯ ನುಡಿ ತಪ್ಪುವುದೆ ಋಷಿವಚನದನುಗತಿಗೆ ।
ಕೋಪ ಕುಡಿಯಿಡಲೀ ವೃಕೋದರ
ನಾಪನಿತು ನುಡಿದನು ಪ್ರತಿಜ್ಞಾ-
ಸ್ಥಾಪನಕೆ ಬಳಿಕೇನ ಮಾಡುವುದೆಂದನಸುರಾರಿ ॥ ೯೫ ॥

ಎಂದು ರಾಮನ ಮನವ ನಯನುಡಿ-
ಯಿಂದ ತಿಳುಹಿದ[1]ನೈ[1]ಸಲೇ ಬಳಿ-
[2]ಕಂ[2]ದು ದುಗುಡದಲವ[3][ನು][3] ನಡೆದ[4][ನು][4] ದ್ವಾರಕಾಪುರಿಗೆ ।
ಬಂದ ಕಂಟಕ [5]ಬಳಿ[5]ಚಿತೇ [6]ಸಾ-
ಕೆ[6]ಂದು ಹರಿ ಕುರುಪತಿಯ ಹೊರೆಗೈ-
ತಂದು ಬೋಳೈಸಿದನು ಭೀಮಾರ್ಜುನಯುಧಿಷ್ಠಿರರ ॥ ೯೬ ॥

---

೯೪. [1]ಋಂಡಿ (ಅ ಕುಮಾ). [2]ಗಳ (ಅ ಕುಮಾ). [3]ದ (ಅ ಕುಮಾ).
[ಪ್ರಬಂಧ-ಕಟ್ಟು, ಒಟ್ಟುಗೂಡಿಕೆ. ಮೈತ್ರೇಯ-ಒಬ್ಬ ಋಷಿ. ಹಣಿದ-ಹೊಡೆತ].

೯೫. [ಅನುಗತಿಗೆ-ಅನುಸಾರವಾಗಿ. ಅಪನಿತು (ಅರ್ಪ + ಅನಿತು)-ಸಾಮರ್ಥ್ಯವಿದ್ದಷ್ಟು. ಪ್ರತಿಜ್ಞಾ ಸ್ಥಾಪನೆ-ಪ್ರತಿಜ್ಞೆಯನ್ನು ನೆಲೆಗೊಳಿಸುವುದು, ನೆರವೇರಿಸುವುದು].

೯೬. [1]ದೈ (ಅ). [2]ಕೆಂ (ಅ). [3]–[4]ರು ('ನು' ಪಾಠ ಶ್ರೀ ಸೂಚಿತ). [5]ಕಳ (ಅ). [6]ಹಾಯೆಂ (ಅ).
[ನಯನುಡಿ-ನೀತಿಯುತವಾದ, ಮೃದುವಾದ ಮಾತು. ತಿಳುಹಿದ-ಸಮಾಧಾನಪಡಿಸಿದ. ದುಗುಡ-ದುಃಖ. ಕಂಟಕ-ಅಡ್ಡಿ. ಬಿಳಿಚು-ಬಿಟ್ಟುಹೋಗು, ಪರಿಹಾರವಾಗು. ಬೋಳೈಸು-ಸಮಾಧಾನಪಡಿಸು].

ಅರಸ ತಲೆಗುತ್ತಿದನು ದೃಗುಜಲ
ವುರವಣಿಸಿ ಮೋನದಲಿ ಫಲುಗುಣ-
ನಿರೆ ಮುರಾರಿ ಸುಯೋಧನನ ಸರ್ವಾವಗುಣಗಣವ ।
ಪರಿಪರಿಯಲೆಚ್ಚಱಿಸಿ ದುಗುಡವ
ಪರಿಹರಿಸಿ ಸಂತೈಸಿದಡೆ ಮುರ-
ಹರನ ಬೈದನು ನಿನ್ನ ಮಗ ನಾನಾವಿಡಂಬದಲಿ ॥ ೯೭ ॥

ಆರ ಬಸುಱಲಿ ಬಂದು ಮೊಲೆಯುಂ-
ಡಾರ ಮಡಿಲೊಳು ಬಳೆದು ಬಳಿಕೆನೊ-
ಳಾರ ಹೆಂಡಿರ ಕೊಂಡು ಕಱುತುಱುಗಾದು ಕಳವಿನಲಿ ।
ವೀರದೈತ್ಯನ ಸವೆಬಡಿದು ಕುರು-
ವೀರವಂಶದ ರಾಯರೆನ್ನೊಳು
ವೈರಬಂಧವ ಬಿತ್ತಿ ಕೊಂದವ ಕೃಷ್ಣ ನೀನೆಂದ ॥ ೯೮ ॥

ಬಣಗುಗಳು ಭೀಮಾರ್ಜುನರು ಕಾ-
ರಣಿಕ ನೀ ನಡುವಾಯಿ ಧರ್ಮದ
ಕಣಿ ಯುಧಿಷ್ಠಿರನೆತ್ತಬಲ್ಲನು ನಿನ್ನ ಮಾಯೆಗಳ ।
ಸೆಣಸನಿಕ್ಕಿದೆ ನಮ್ಮೊಳಗೆ ಧಾ-
ರುಣಿಯ ಭಾರವ ಬಿಡಿಸಲೋಸುಗ
ರಣವ ಹೊತ್ತಿಸಿ ನಮ್ಮ ಬೇಂಟೆಯನಾಡಿಸಿದೆಯೆಂದ ॥ ೯೯ ॥

---

೯೭. [ತಲೆಗುತ್ತು-ತಲೆ ತಗ್ಗಿಸು. ದೃಗುಜಲ-ಕಣ್ಣೀರು. ಉರವಣಿಸಿ-ಹೆಚ್ಚಿ, ಅಧಿ ವಾಗಿ. ಮೋನ-ಮೌನ. ಸರ್ವಾವಗುಣಗಣ-ಎಲ್ಲಾ ದುರ್ಗುಣಗಳ ಸಮೂಹ. ವಿಡಂಬ-ಹೀಯಾಳಿಕೆ, ವ್ಯಂಗ್ಯವಾದ, ಅಪಹಾಸ್ಯದ ಮಾತು].

೯೮. [ವೀರದೈತ್ಯ-ರಾಕ್ಷಸ ವೀರನಾದ ಕಂಸ. ವೈರಬಂಧ-ಶತ್ರುತ್ವ].

೯೯. [ಬಣಗುಗಳು-ಕೈಲಾಗದವರು, ಅಶಕ್ತರು. ಕಾರಣಿಕ-ಎಲ್ಲಕ್ಕೂ ಕಾರಣನಾದವನು. ನಡುವಾಯಿ-(ಇಬ್ಬರ) ಮಧ್ಯ ಮಾತನಾಡುವವನು, ನಡುವೆ ತಲೆ ತೂರಿಸುವವನು, ಕಿತಾಪತಿ ಮಾಡುವವನು. ಸೆಣಸು-ಸ್ಪರ್ಧೆ, ಹೋರಾಟ].

*ಪೊಡವಿಯಲಿ ಜಾದವರು ಕ್ಷತ್ರಿಯ-
ಗೆಡುಗರೆಂದಖಿಲರ ಹುಟ್ಟಿದನು ಕೊಲೆ-
¹[ಗ]¹ಡುಗ ಶಾಪಿನ ಪುತ್ರದಲಿ ಹಾವ್ಯಕ್ಕೆ ಬೆಳೆದಂತೆ ||
ನಡವಳಿಯ ನೋಡುವರೆ ಲೋಗರ
ಮಡದಿಯರು ತನ್ನವರು ತಕ್ಕಿನ
ಕಡಲು ಕೃಷ್ಣನ ನಂಬಿದರಿಗಪಜಯಗಳಿಲ್ಲೆಂದ || ೧೦೦ ||
ಪಾಪ ನಿನಗೀ ಗೋತ್ರವಧೆಯ¹ನು-
ತಾಪ¹ ನಿನ್ನನು ತಾಗಲೀಸ-
ರ್ವಾಪರಾಧವು ನಿನ್ನದೀ ಕೌರವರ ಪಾಂಡವರ |
ಕೋಪವನು ²ಕೊನರಿ²ಸುವ ನೃಪ³ರ³ನು-
ತಾಪವನು ⁴ತೂಳಿ⁴ವ ⁵ಕುಬುದ್ಧಿ-⁵
ವ್ಯಾಪಕನು ನೀ ವೈರಿಯಲ್ಲದೆ ಭೀಮನಲ್ಲೆಂದ || ೧೦೧ ||
ರಣಮುಖದೊಳೀ ಕ್ಷಾತ್ರಧರ್ಮದ
ಕುಣಿಕೆ ತಪ್ಪದೆ ವೇದಶಾಸ್ತ್ರದ
ಭಣಿತೆ ನೋಯದೆ ವೀರವೃತ್ತಿಯ ಪದದ ಪಾಡರಿದು |
ಸೆಣಸು ¹ಸೋಲ¹ದ ಛಲ ²ಛಡಾಳ²ಯೊ-
ಳ³ಣು³ವ ಹಿಂಗದೆ ಜೀವದಾಸೆಗೆ
ಮಣಿಯದಳಿದುದನೆಲ್ಲ ಬಲ್ಲರು ಕೃಷ್ಣ ಕೇಳೆಂದ || ೧೦೨ ||

---

೧೦೦. ¹ಗೆ (ಅ).
[ಕ್ಷತ್ರಿಯಗೆಡುಗರು-ಕ್ಷತ್ರಿಯರಲ್ಲಿ ಕೇಡುಂಟುಮಾಡುವವರು. ಹಾವ್ಯಕ್ಕೆ-ಒಂದು ಬಗೆಯ ವಿಷಸರ್ಪ. ಲೋಗರು-ಸಾಮಾನ್ಯರು].

೧೦೧. ¹ವಿತಾಪ (ಅ ಕುಮಾ). ²ಕೆರಳಿಗಿ (ಅ). ³ನ (ಅ). ⁴ತುಳುಕು (ಅ). ⁵ಬುದ್ಧಿ (ಅ).
[ಗೋತ್ರ-ಕುಲ, ವಂಶ. ಅನುತಾಪ-ವ್ಯಸನ, ಪಶ್ಚಾತ್ತಾಪ. ಕೊನರಿಸು-ಮೊಳೆಯಿಸು, ಚಿಗುರಿಸು. ತೂಳು-ಹೆಚ್ಚಿಸು, ಬೆಳೆಸು. ಕುಬುದ್ಧಿ ವ್ಯಾಪಕ-ಕುಬುದ್ಧಿಯನ್ನು ಹರಡುವವನು].

೧೦೨. ¹ಸೋಲಂತೆ (ಅ ಕುಮಾ). ²ದವಾಳಿ (ಅ ಕುಮಾ). ³ನು (ಅ).
[ಕುಣಿಕೆ-ಗಂಟು, ಸಂಬಂಧ, ಮರ್ಯಾದೆ. ಭಣಿತೆ-ಉಕ್ತಿ, ಹೇಳಿಕೆ, ಮಾತು. ನೋಯದೆ-ಭಂಗವಾಗದೆ. ಪದ-ಸ್ವರೂಪ, ನೆಲೆ. ಪಾಡು-ಸ್ಥಿತಿಗತಿ. ಸೆಣಸು-ಸ್ಪರ್ಧೆ, ಹೋರಾಟ. ಛಡಾಳ-ತೀವ್ರತೆ. ಅಣು-ಲವಲೇಶವೂ, ಲೇಶಮಾತ್ರವೂ, ಸ್ವಲ್ಪವೂ. ಹಿಂಗು-ಹಿಮ್ಮೆಟ್ಟು. ಮಣಿ-ತಲೆಬಾಗು].

---

* ಈ ಪದ್ಯವು ಅ, ಕುಮಾ ಹಾಗೂ ಪೇಟೆ ಪ್ರತಿಗಳಲ್ಲಿ ಇಲ್ಲ.

ಮತ್ತೆ ಹೂವಿನ ಮಳೆಗಳೀತನ
ನೆತ್ತಿಯಲಿ ಸುರಿದವು ಮುರಾಂತಕ-
ನತ್ತ ತಿರುಗಿದನವನಿಪನ ಕರತಳವ ತಳುಕಿಕ್ಕಿ ।
ಮುತ್ತಿದರು ಮಾಗಧರು ವಂದಿಗ-
ಳೆತ್ತಣ[1]ದೊ[1] ನಾನಱಿಯೆನರಸ ವಿ-
ಯತ್ತಳವನಳ್ಳಿಱಿದುದಾ ಸ್ತುತಿಪಾಠಕರ ರಭಸ ॥ ೧೦೩ ॥

---

೫. ಅಶ್ವತ್ಥಾಮನು ಎಸಗಿದ ಕಗ್ಗೊಲೆ

ನರ ಯುಧಿಷ್ಠಿರ ಭೀಮ ಸಹದೇ-
ವರು ನಕುಲ ಸಾತ್ಯಕಿ ಸಹಿತ ಮುರ-
ಹರನು ಹೊಕ್ಕನು ಕೌರವೇಂದ್ರನ ಶೂನ್ಯ ಶಿಬಿರವನು ।
ಅರಸ ಕರ್ಣ ದ್ರೋಣಮಾದ್ರೇ-
ಶ್ವರನ ಭಗದತ್ತನ ನದೀಜಾ-
ದ್ಯರ [1]ನಿವಾಸಂಗಳನು ಕಂಡಳಲಿದನು ಯಮಸೂನು[1] ॥ ೧೦೪ ॥

ಇಳಿ ರಥವನೆಲೆ ಪಾರ್ಥ ಬಳಿಕಾ-
ನಿಳಿವೆನೆಂದನು ಶೌರಿ [1]ನೀವ್[1] ಮು-
ನ್ನಿಳಿವುದಂದನು ಪಾರ್ಥನಾಯ್ತು ವಿವಾದವಿಬ್ಬರಿಗೆ ।
ಎಲೆ [2]ಮರುಳೆ[2] ನಾ ಮುನ್ನಿಳಿಯೆ ನೀ-[3]
[ನ][3]ಳಿವೆಲಾ ಸಾರೆನ್ನು ಗರ್ವದ
ಗಳಹತನವನು ಬಳಿಕ ತೋಱುವೆ ರಥವನಿಳಿಯೆಂದ ॥ ೧೦೫ ॥

---

೧೦೩. [1]ದು (ಅ ಕುಮಾ).
[ಈತನ-ಈ ದುರ್ಯೋಧನನ. ಅವನಿಪ-ಧರ್ಮರಾಯ. ಕರತಳ-ಹಸ್ತ, ಅಂಗೈ. ತಳುಕಿಕ್ಕು-ಹೆಣೆದುಕೊ, ಜತೆಗೂಡು. ಮಾಗಧರು ವಂದಿಗಳು-ಹೊಗಳುಭಟರು. ವಿಯತ್ತಳ-ಬಾನಂಚು. ಅಳ್ಳಿಱಿ-ತಿವಿಯುವಂತೆ ಮೊಳಗು].

೧೦೪. [1]ನಿವಾಸದ ನಿಳಯಗಳ ಕಂಡಳಲಿದನು ನೃಪತಿ (ಅ).

೧೦೫. [1]ನೀ (ಅ). [2]ಳೆ (ಅ). [3]ನಿನ್ನು (ಅ).
[ಗರ್ವದಗಳಹತನ-ಅಹಂಕಾರದ ಹರಟೆ].

ಬಳಿಕ ಫಲುಗುಣ ರಥದ ಮೇಲಿಂ-
ದಿಳೆಗೆ ಹಾಯ್ದನು ಕೃಷ್ಣ ನೀನಿ-
ನ್ನಿಳಿಯೆನಲು ಚಮ್ಮಟಿಗೆವಾಘೆಯ ನೇಣ ರಥದೊಳಗೆ ।
ಇಳುಹಿ ನಗುತ ಮುಕುಂದ ರಥದಿಂ-
ದಿಳಿಯೆ ಛಟಛಟಯೆಂದು ಕಿಡಿಯು-
ಚ್ಚಳಿಸಲುರಿದುದು ತೇರು ಕೇಸುರಿ ನಭವನಪ್ಪಳಿ[1]ಸೆ[1] ॥ ೧೦೬ ॥

ಧ್ವಜದ ಹಲಗೆಯನೊಡೆದು ಹಾಯ್ದನು
ನಿಜನಿವಾಸಕೆ ಹನುಮ ಧೂಮ
ಧ್ವಜನ ಮಯವಾದುದು ರಥಾಶ್ವರಥಾಂಗರಾಜಿಯಲಿ ।
ವಿಜಯ ಭೀಮಾದಿಗಳು ಕಂಡ-
ಚ್ಚಜದೊಳಾಕಸ್ಮಿಕದ ಕಿಚ್ಚಿನ
ಗಜಬಜವಿದೇನೆನುತ ನಿಜ[3] ಬೆಚ್ಚಿದರು ಭೀತಿಯಲಿ ॥ ೧೦೭ ॥

ಹರಿ ಯಿದೇನಾಕಸ್ಮಿಕದ ದ-
ಳ್ಳುರಿಯೊಳದ್ದುದು ತೇರು ನಮಗೀ-
ಯುರಿಯ ಭಯ [1][ಬಾರಿ]ಸಿತೇನು[1] ನಿಮಿತ್ತವಿದಕೆನಲು ।
ಉರಿ[2]ವು[2]ದಂದೇ ತೇರು ಕರ್ಣನ
ಗುರುನದೀನಂದನ[3]ರ[3] ದೈವಿಕ-
ಶರಹತಿಯೊಳೆಮ್ಮಿಂದ[4]ಲುಳಿ[4]ದುದು ಪಾರ್ಥ ಕೇಳೆಂದ ॥ ೧೦೮ ॥

---

೧೦೬. [1]ಸಿ (ಅ).

[ಹಾಯ್ದನು-ಧುಮುಕಿದನು. ಚಮ್ಮಟಿಗೆ-ಚಾವಟಿ. ವಾಘೆಯನೇಣು-ಲಗಾಮಿನ ಹಗ್ಗ. ಉಚ್ಚಳಿಸು-ಮೇಲಕ್ಕೆ ಚಿಮ್ಮು, ಹಾರು. ಕೇಸುರಿ-ಕೆಂಪಾದ ಉರಿ. ಅಪ್ಪಳಿಸು-ರಭಸದಿಂದ ಹೊಡೆ].

೧೦೭. [ಹಾಯ್ದನು-ಲಂಘಿಸಿದನು, ಹಾರಿದನು. ಧೂಮಧ್ವಜ-ಹೊಗೆಯೇ ಬಾವುಟವಾಗಿ ಉಳ್ಳವನು, ಅಗ್ನಿ. ರಥಾಶ್ವ-ರಥದ ಕುದುರೆ. ರಥಾಂಗ-ರಥದ ಚಕ್ರ. ರಾಜಿ-ಸಮೂಹ. ವಿಜಯ-ಅರ್ಜುನ. ಅಚ್ಚಜ-ಆಶ್ಚರ್ಯ].

೧೦೮. [1]ಭಾರಿಸಿತಿದೇನು (ಅ ಕುಮಾ), ಭಾರೈಸಿತೇನು (ಅ). [2]ದು (ಅ). [3]ರು (ಅ). [4]ನಿಂ (ಅ ಕುಮಾ).

[ಅದ್ದು-ಮುಳುಗು. ಬಾರಿಸು-ನಡುಕ ಹುಟ್ಟಿಸು. ನಿಮಿತ್ತ-ಕಾರಣ. ಉರಿವುದು-ಉರಿದುಹೋಗುತ್ತಿತ್ತು. ದೈವಿಕ ಶರಹತಿ-ದಿವ್ಯಾಸ್ತ್ರಗಳ ಹೊಡೆತ].

ಧರಣಿಪತಿ ಕೇಳೀಚೆಯಲಿ ಕೃಪ-
ಗುರು[1]ತನುಜ[1] ಕೃತವರ್ಮಕರು ನ-
ಮ್ಮರಸನೇನಾದನೊ ವಿರೋಧಿಯ ದಳ[2]ದ ವೇ[ಡೆ]ಯಲಿ[2] ।
ತರಣಿ ತಿಮಿರಕೆ ತೆಱಹುಗೊಟ್ಟನು
ಭರತಖಂಡವನಿನ್ನು ರಾಯನ
ಪರಿಗತಿಯನಾರಯ್ವೆವೆನುತೇಱಿದರು ನಿಜರಥವ ॥ ೧೦೯ ॥

ಉಡಿದ ತೊಡೆಗಳ ಮಗ್ಗುಲ[1]ಲಿ[1] ಹೊನ-
ಲಿಡುವ ರಕುತದ ಭೀಮಸೇನನ
ಮಡದ [2]ಹೊಯ್ಲಲಿ[2] ಕೆಲಕೆ ಸೂಸಿದ ಮಕುಟಮಣಿ[3]ಗಣದ[3] ।
[4]ಕೆಡೆದು[4] ಮೈವೇದನೆಗೆ ನರಳುವ
ನಿಡುಸರದ ಖಗಜಂಬುಕೌಘ[5]ವ-
ನಿ[5]ಡುವ ಕೈಗಲ್ಲುಗಳ ನೃಪತಿಯ ಕಂಡ[6]ರ[6]ವರಂದು ॥ ೧೧೦ ॥

ಒಱಲಿದರು ಧರೆ ಬಿರಿಯೆ ಹುಡಿಯಲಿ
ಹೊರಳಿದರು ಬಾಯ್ಗಳನು ಹೊಯ್ ಹೊ-
ಯ್ದಱಿಚಿ ಕೆಡೆದರು ಕುಂದಿದರು ಕಾತರಿಸಿ ಕಳವಳಿಸಿ ।
ಮಱುಗಿದರು ಮನಗುಂದಿದರು ಮೈ-
ಮಱೆದರದ್ದರು ಶೋಕಜಲಧಿಯೊ-
ಳಱಲುಗೊಂಡರು ತಳ್ಳಬಾಱಿದರವರು ನಿಮಿಷದಲಿ ॥ ೧೧೧ ॥

---

೧೦೯. [1]ಸುತರು (ಅ). [2]ಕೆ ವೆಡ್ಡೈಸಿ (ಅ). [3]ವೇಢೆ (ಅ ಆ ಕುಮಾ).

[ವೇಡೆ-(ವೇಷ್ಟಃ (ಸಂ)-ಸುತ್ತುಗಟ್ಟುವಿಕೆ, ಆಕ್ರಮಣ, ಮುತ್ತಿಗೆ. ತರಣಿ-ಸೂರ್ಯ. ತಿಮಿರ-ಕತ್ತಲೆ. ತೆರಹುಗೊಡು-ಎಡೆಗೊಡು, ಅವಕಾಶ ಕೊಡು. ಪರಿಗತಿ-ಪರಿಸ್ಥಿತಿ. ಅರಯ್-ವಿಚಾರಿಸು].

೧೧೦. [1]ಲೆ (ಅ). [2]ಗಾಯಕೆ (ಅ). [3]ಮಯದ (ಆ ಕುಮಾ). ಗಣವ (ಅ). [4]ಕಡಿದ (ಅ). [5]ದಲಿ (ಅ). [6]ರಿ (ಅ ಕುಮಾ).

[ಉಡಿದ-ಮುರಿದ. ಹೊನಲಿಡುವ-ಪ್ರವಾಹದೋಪಾದಿಯಲ್ಲಿ ಹರಿಯುವ. ಮಡ-ಪಾದದ ಹರಡು. ಹೊಯ್ಲು-ಹೊಡೆತ. ಕೆಡೆ-ಕೆಳಕ್ಕೆ ಬೀಳು. ವೇದನೆ-ನೋವು. ನಿಡುಸರ-ದೀರ್ಘವಾದ ಸ್ವರ, ನಿಡುದನಿ. ಖಗ-ಪಕ್ಷಿ. ಜಂಬುಕ-ನರಿ. ಓಘ-ಸಮೂಹ. ಇಡು-ಹೊಡೆ. ಕೈಗಲ್ಲು-ಕೈಯಲ್ಲಿ ಹಿಡಿದಿರುವ ಕಲ್ಲು].

೧೧೧. [ಒಱಲು-ಕಿರಿಚು, ನರಳು. ಅಱಿಚು-ಅರಚು. ಅಱಲುಗೊಳ್ಳು-ಬಾಯಾರು. ತಳ್ಳಬಾಱು-(ಧಾ) ಕಂಪಿಸು, ನಡುಗು, ಧೈರ್ಯಗುಂದು. ತಳ್ಳಬಾಱಿದರು-ಕಂಪಿಸಿದರು, ನಡುಗಿದರು. ಧೈರ್ಯಗುಂದಿದರು].

ಹದುಳಿಸಿರೆ ಸಾಕೇಳಿ [1]ಸಾಕಿ-[1]
ನ್ನಿದಱ[2]ಲಿನ್ನೇನಹುದು[2] ದೈವದ
ಕದಡು ಮನಗಾಣಿಸಿತು ನಮಗೀ ಕಂಟಕವ್ಯಥೆಯು ।
ಉದಯದಲಿ ನಾವೀ ಶರೀರವ-
ನೊದೆದು ಹಾಯ್ವೆವು ನೀವು ನಿಜಮಾ-
ರ್ಗದಲಿ ಬಿಜಯಂಗೈವುದೆಂದನು ಕುರುರಾಯ ॥ ೧೧೨ ॥

ಶೋಕವಡಗಿದು[1]ದ[1]ವರಂಗಂತ-
ರ್ವ್ಯಾಕುಲತೆ ಬೀಳ್ಕೊಂಡುದಹುದಿ-
ನ್ನೇಕೆ [2]ಸಂಸಾರಾನುಭೂತಾವೇಶದುರ್ವ್ಯಸನ[2] ।
ಸಾಕದಂತಿರಲಿನ್ನು ಬಿಡು ನೀ
ಸಾಕಿ[3]ತ[3]ಕೆ ಫಲವೆನಿಸಿ ರಜನಿಯೊ-
ಳಾಕುಠಾರರ ತಲೆಗಳನು ತಹೆ[4]ನೆಂ[4]ದನಾ ದ್ರೌಣಿ ॥ ೧೧೩ ॥

ಅ[1]ಕಟ[1] ಮರು[2]ಳೀ[2] ಗುರುಸುತನ ಮತಿ-
ವಿಕಳತನವನು ಕೃಪರು ಕೃತವ-
ರ್ಮಕರು ಕಂಡಿರೆ ಪಾಂಡವ[3]ರ[3] ತಲೆ ತನಗೆ ಗೋಚರವೆ ।
ಬಕನ ಧರ್ಮ[4]ಸ್ಥಿತಿ[4]ಯವೊಲು ದೇ-
ವಕಿಯ ಮಗ ಕಾದಿಹ[5]ನಲೇ[5] ಕೌ-
ಳಿಕದಸಿದ್ಧನ ಕೃತಿಯನಾರಿಗೆ ವಿಾಱಬಹುದೆಂದ ॥ ೧೧೪ ॥

---

೧೧೨. [1]ನೀವಿ (ಅ). [2]ಲೇನಹುದಿನ್ನು (ಅ).
[ಹದುಳಿಸು-ಸಮಾಧಾನದಿಂದಿರು, ನೆಮ್ಮದಿಹೊಂದು. ದೈವ-ವಿಧಿ, ಅದೃಷ್ಟ. ಕದಡು-ಕಲಕಾಟ, ಕ್ಷೋಭೆ, ವಕ್ರಗತಿ. ಕಂಟಕವ್ಯಥೆ-ಚುಚ್ಚುವ ವೇದನೆ].

೧೧೩. [1]ದಿ (ಅ). [2]ಸಂವೇಶಃನು ಭೂತಾನುಭವದುರ್ವ್ಯಸನ (ಅ ಕುಮಾ). [3]ದ (ಅ). [4]ವೆಂ (ಅ).
[ಅಂತರ್ವ್ಯಾಕುಲತೆ-ಮನಸ್ಸಿನ ಒಳಗಿನ ವ್ಯಥೆ. ಸಂಸಾರಾನುಭೂತಾವೇಶ ದುರ್ವ್ಯಸನ-ಸಂಸಾರದ ಕಷ್ಟಸುಖಗಳ ಅನುಭವದ ಅತಿರೇಕದ ದುಶ್ಚಟ. ಸಾಕಿತಕೆ-ಸಾಕಿದ್ದಕ್ಕೆ, ಕಾಪಾಡಿದ್ದಕ್ಕೆ. ಫಲ-ಪ್ರತಿಫಲ, ಋಣ. ರಜನಿ-ರಾತ್ರಿ. ಕುಠಾರರು-ಕುಲಕ್ಕೆ ಕೊಡಲಿಯಂತಿರುವವರು].

೧೧೪. [1]ರಸ (ಅ). [2]ಳ್ಕೈ (ಅ). [3]ಕ (ಅ). [4]ಪ್ರುತಿ (ಅ). [5]ನೆಲ್ಕೆ (ಅ).
[ಮತಿವಿಕಳತನ-ಬುದ್ಧಿಭ್ರಮಣೆ. ಬಕನ ಧರ್ಮಸ್ಥಿತಿ-ಬಕಪಕ್ಷಿಯ ಧರ್ಮಕ್ಕೆ ಅನುಸಾರವಾಗಿ ಕಾಣುವ ಧ್ಯಾನದ ಸೋಗಿನ ಸ್ಥಿತಿ (ಕೃಷ್ಣನ ತಾಟಸ್ಥ್ಯವನ್ನು ಇದಕ್ಕೆ ಹೋಲಿಸಿದೆ. ಪಾಂಡವರಿಗೆ ಕೇಡು ಸಂಭವಿಸಿದಾಗ ಅವನು ಪಾಂಡವ ಪಕ್ಷಪಾತಿಯೇ ಹೌದು). ಕೌಳಿಕದ ಸಿದ್ಧ-ಮೋಸಗಾರನಾದ ಸಿದ್ಧನ ಮೋಸಕಾರ್ಯ].

ಹರಿಹರಬ್ರಹ್ಮಾದಿ ದೇವರು-
ವೆರಸಿ ಕಾಯಲಿ ರಾತ್ರಿಯಲಿ ರಿಪು-
ಶಿರವ ತಹೆನಿದಕೇಕೆ ಸಂಶಯವೆನ್ನ ಕಳುಹುವುದು ।
ಇರಲಿ ಕೃಪಕೃತವರ್ಮಕರು ಹ-
ತ್ತಿರೆ ರಣಾಧ್ಯಕ್ಷದಲಿ ಭಾಷಾ-
ಚರಣ ಪೈಸರಿಸಿದಡೆ ದ್ರೋಣನ ತನಯನಲ್ಲೆಂದ ॥ ೧೧೫ ॥

ಆಗಲಾ ಪಾಂಡವರ ವಧೆ ನಿನ-
ಗಾಗಲರಿಯದು ನಿನ್ನ ಭುಜಬಲ-
ವಾಗು[1]ರಿ[1]ಯು ವೇಢೆಯಲಿ ಬೀಳದು ಕೃಷ್ಣಬುದ್ಧಿಮೃಗ ।
ಈಗ[2]ಳೀ[2] ನಿರ್ಬಂಧವಚನವಿ-
ರಾಗವೆಮಗೇಕಾರಿಗಾವುದು
ಭಾಗಧೇಯವದಾಗಲೆಂದನು ಕೌರವೇಶ್ವರನು ॥ ೧೧೬ ॥

ವರಚಮೂಪತಿ ನೀನು ಬಳಿಕಿ-
ಬ್ಬರು ಚಮೂವಿಸ್ತಾರವೆನೆವಿ-
ಸ್ತರಿಸಿ ರಚಿಸುವುದೆಂದು ರಥಿಕತ್ರಯಕೆ ನೇಮಿಸಿದ ।
ಗುರುಜಕೃಪಕೃತವರ್ಮರೀ ಮೂ-
ವರು ನರೇಂದ್ರನ ಬೀಳುಕೊಂಡರು
ಕರೆದು ಸೂತರ ಸನ್ನೆಯಲಿ ಬಂಡೇಱಿದರು ರಥವ ॥ ೧೧೭ ॥

---

೧೧೫. [ವೆರಸಿ (ಬೆರಸಿ)–ಕೂಡಿಕೊಂಡು. ರಣಾಧ್ಯಕ್ಷದಲಿ–ರಣರಂಗವನ್ನು ನೋಡಿಕೊಳ್ಳುತ್ತ, ರಣರಂಗದ ಕಾವಲಿನಲ್ಲಿ. ಭಾಷಾಚರಣ–ವಚನಪಾಲನೆ. ಪೈಸರಿಸು–ಹಿಂಜರಿ, ಹಿಮ್ಮೆಟ್ಟು].

೧೧೬. [1]ರೆ (ಅ). [2]ಳಿನೆ (ಅ).
[ಅರಿಯದು–ಅರಿದಾದದ್ದು, ಅಸಾಧ್ಯವಾದದ್ದು. ವಾಗುರಿ–ಬಲೆ, ಜಾಲ. ವೇಢೆ–ಆಕ್ರಮಣ, ಮುತ್ತಿಗೆ. ಕೃಷ್ಣಬುದ್ಧಿಮೃಗ–ಕೃಷ್ಣನ ತೀಕ್ಷ್ಣಬುದ್ಧಿಯೆಂಬ ಜಿಂಕೆ. ನಿರ್ಬಂಧವಚನವಿರಾಗ–ಮಾಡಿದ ಪ್ರತಿಜ್ಞೆಯಲ್ಲಿ ಬಲಾತ್ಕಾರದಿಂದ ವೈರಾಗ್ಯ (ಉಪೇಕ್ಷೆ). ಭಾಗಧೇಯ–ವಿಧಿ, ದೈವ, ಅದೃಷ್ಟ].

೧೧೭. [ಚಮೂಪತಿ–ದಳಪತಿ. ಚಮೂವಿಸ್ತಾರ–(ಇಬ್ಬರೆ) ವಿಸ್ತಾರವಾದ ಸೈನ್ಯ. ರಥಿಕತ್ರಯ–ಮೂವರು ರಥಿಕರು. ಸೂತ–ಸಾರಥಿ].

ಕೇಳು ಧೃತರಾಷ್ಟ್ರಾವನಿಪ ನಿ-
ಸ್ನಾಳಚಿತ್ತದ [1]ಪ[1]ಟುಳಪಣದ ಚ-
ಡಾಳತನವನು ಸಂಗರದೊಳುದ್ದಾಮ ಸತ್ವದಲಿ ।
ಪಾಳೆಯವ ಸಾರಿದರು ವಿಟಪ[2]ಲ-
ತಾಳಿ[2]ವಿಶ್ರಮತಿಮಿರಗಹನವಿ-
ಶಾಲವಟಕುಜವಿರಲು ಕಂಡರು ನಿಲಿಸಿದರು ರಥವ ॥ ೧೧೮ ॥

ಒಳಗೆ ತೊಳಲಿಕೆಯು[1]ಕ್ಕದಕೆ[1] ಕಳ-
ವಳಿಸಿ [2]ಹೊ[2]ಯ್ದರ[3]ದೊಮ್ಮೆ[3] ಮತ್ತಂ
[4]ತ[4]ಲೆವಿಡುಕದಾಲಿಸಿ ನಿಧಾನಿಸಿ ಸಾರಿದರು ಮರನ ।
ಬಳಲಿಕೆಯ ಬೇಸಱಿನೊಳಾಕೃಪ
ಮಲಗಿದನು ಕೃತವರ್ಮನೊಲೆದಾ-
ಕಳಿಸಿ ತೂಕಡಿಸಿದನು ತೆಗೆದುದು ನಿದ್ರೆ ತನುಮನವ ॥ ೧೧೯ ॥

ಕುಸಿದು [1]ಜೊ[1]ಮ್ಮನ ಜಾಡ್ಯದಲಿ ಝೊಂ-
ಪಿಸಿದರಿಬ್ಬರು [2]ರಾಯ ಗರುಡಿಯ[2]
ಜಸದ ರಹಿಯಲಿ ಸ್ವಾಮಿಕಾರ್ಯದ ಹೊತ್ತ ಹೊಱಿಗೆಯಲಿ ।
ಉಸುರು ಮಿಡುಕದೆ ನಿದ್ರೆ ನೆನಹಿನ
ಮುಸು[3]ಕ[3]ನುಗಿಯದೆ ಇಷ್ಟಸಿದ್ಧಿಯ
ವಿಷಮಸಮಸಂಧಿಗಳ ಸ[4]ರಿ[4]ವಿನೊಳಿರ್ದನಾದ್ರೌಣಿ ॥ ೧೨೦ ॥

---

೧೧೮. [1]ಚ (ಅ ಕುಮಾ). [2]ನಿತಾಳಿ (ಅ).
[ಪಟುಳ (ಲ) ಪಣ–ಬಲಿಷ್ಠವಾದ ಪಂಥ, ಪ್ರತಿಜ್ಞೆ. ಚ(ಛ)ಡಾಳತನ–ಅತಿಶಯತೆ, ಹೆಚ್ಚಳ, ಆಧಿಕ್ಯ. ಸಂಗರ–ಯುದ್ಧ. ಉದ್ದಾಮಸತ್ವ–ಅತ್ಯಂತ ಸಾಮರ್ಥ್ಯ. ವಿಟಪಲತಾಳಿ ವಿಶ್ರಮ ತಿಮಿರ ಗಹನ ವಿಶಾಲ ವಟಕುಜ–ಮರ ಬಳ್ಳಿಗಳ ಸಮೂಹದಲ್ಲಿ ನೆಲಸಿರುವ ಗಾಢಕತ್ತಲೆಯಲ್ಲಿ ಹರಡಿಕೊಂಡಿದ್ದ ಆಲದಮರ].

೧೧೯. [1]ಬ್ಬರಕೆ (ಅ). [2]ಹೊ (ಅ). [3]ದೊಂದು (ಅ). [4]ತೆ (ಅ ಕುಮಾ).
[ತೊಳಲಿಕೆ–ಸಂಕಟ, ಆತಂಕ. ಹಾಯು–ಮುಂದೆ ನುಗ್ಗು. ತಲೆವಿಡುಕದೆ–ತಲೆಯಲ್ಲಾಡಿಸದೆ].

೧೨೦. [1]ಝೋ (ಅ) [2]ರಾಜಕಾರ್ಯದ (ಅ). [3]ಕು (ಅ). [4]ರು (ಅ).
[ಜೋಮು–ತೂಕಡಿಕೆ. ಜಾಡ್ಯ–ಆಲಸ್ಯ. ಝೊಂಪಿಸು–ಮೈಮರೆ, ಎಚ್ಚರತಪ್ಪು. ಜಸ (ಯಶ)–ಕೀರ್ತಿ. ರಹಿ–ಆಡಂಬರ, ವೈಭವ. ನೆನಹು–ಜ್ಞಾಪಕಶಕ್ತಿ. ಉಗಿ–ತೆಗೆದುಹಾಕು, ಕಳಚು. ಇಷ್ಟಸಿದ್ಧಿಯ ವಿಷಮ ಸಮಸಂಧಿಗಳ ಸರಿವು–ಇಷ್ಟಾರ್ಥ ನೆರವೇರುವುದೋ ಇಲ್ಲವೋ ಎಂಬ ಸಂದಿಗ್ಧ ಸ್ಥಿತಿಯ ಸರಿದಾಟ, ಅತ್ತ ಇತ್ತ ತೂಗಾಟ].

ಭಾಗ ಬೀತುದು ರಜನಿಯಲಿ ಸರಿ-
ಭಾಗವಿದ್ದುದು ಮೇಲೆ ತಕ್ಷಣ
ಗೂಗೆ ಬಂದುದದೊಂದು ವಟಕುಜದಗ್ರಭಾಗದಲಿ ।
ಕಾಗೆಗಳ ಗೂಡುಗಳ ಹೊಯ್ದು ವಿ-
ಭಾಗಿಸಿತು ತುಂಡದಲಿ ಬಿದ್ದವು
ಕಾಗೆ ಸುಭಟನ ಸಮ್ಮುಖದಲಿ ಸಹಸ್ರಸಂಖ್ಯೆಯಲಿ ॥ ೧೨೧ ॥

ಇದು ಮದೀಯ ಮನೋ[1]ರಥದ[1] [2]ಸೌ-[2]
ಹೃದಯುದೊಲು ಸಂಕಲ್ಪಕಾರ್ಯಾ-
ಭ್ಯುದಯಸೂಚಕವೆನುತ ನಿದ್ರಾಮುದ್ರಿತೇಕ್ಷಣರ ।
ಪದವ ಹಿಡಿದಲ್ಲಾಡಿದೊಡೆ ಸ್ಮೈ
ಬೆದ[3]ಱಿತೇ[3]ನೇನೆನುತ ನಿದ್ರಾ-
ಮದವಿಘೂರ್ಣನವಡಗೆ ಕುಳ್ಳಿರ್ದರು ಮಹಾರಥರು ॥ ೧೨೨ ॥

ಏನು ಗುರುಸುತ ಕಾರ್ಯದನುಸಂ-
ಧಾನವೇನೆನೆ ವಾಯಸಂಗಳ-
ನಾ ನಿಶಾಟನನಿಱಿವುತಿದೆ ಗೂಡುಗಳ [1]ಗ[1]ಬ್ಬರಿಸಿ ।
ಈ ನಿದರ್ಶನದಿಂದ ಪಾಂಡವ-
ಸೇನೆಯನು ಕ[2][ಳ್ಗೊ]ಲ[2]ಲೆಯೊಳಗೆ ಕೊಲ-
ಲೇನು [3]ಹೊಲ್ಲೆಹ ಮಾವ ಎಂದನು[3] ಕೃಪಗೆ ಗುರುಸೂನು ॥ ೧೨೩ ॥

---

೧೨೧. [ಭಾಗ-ರಾತ್ರಿಯ ಪೂರ್ವಾರ್ಧ ಭಾಗ. ಬೀತುದು-ನಷ್ಟವಾಯಿತು, ಕಳೆದು ಹೋಯಿತು (ಧಾ., ಬೀ). ಸರಿಭಾಗ-ಉಳಿದ ಅರ್ಧ ರಾತ್ರಿಯ ಭಾಗ. ಅಗ್ರ ಭಾಗ-ತುದಿಯ ಭಾಗ. ತುಂಡ-ಕೊಕ್ಕು].

೧೨೨. [1]ಹೃದಯ (ಅ). [2]ಸಂ (ಅ ಕುಮಾ). [3]ರದೇ (ಅ).
[ಮದೀಯ-ನನ್ನ. ಸೌಹೃದಯ-ಸಹೃದಯತೆ. ಸಂಕಲ್ಪಕಾರ್ಯಾಭ್ಯುದಯ ಸೂಚಕ-ನಿಶ್ಚಯಿಸಿರುವ ಕಾರ್ಯದ ಏಳಿಗೆಯನ್ನು ಸೂಚಿಸುವಂಥದು. ನಿದ್ರಾ ಮುದ್ರಿತೇಕ್ಷಣರು-ನಿದ್ದೆಯಿಂದ ಕಣ್ಣು ಮುಚ್ಚಿದವರು. ನಿದ್ರಾಮದವಿಘೂರ್ಣನ ವಡಗೆ-ನಿದ್ರೆಯ ಜಡತ್ವದ (ಸ್ಮೈಮರೆತಿರುವುದು) ದೊಡ್ಡ ಶಬ್ದವು (ಎಂದರೆ, ಗೊರಕೆ) ಅಡಗಿಹೋಗಲು].

೧೨೩. [1]ನ (ಅ ಕುಮಾ). [2]ಗ್ಗೊ (ಅ ಕುಮಾ). ಲ್ಗೊ (ಅ). [3]ಸಂಶಯವಾವುದೆಂದನು (ಅ).
[ಅನುಸಂಧಾನ-ವ್ಯವಸ್ಥೆ, ಏರ್ಪಾಡು. ವಾಯಸ-ಕಾಗೆ. ನಿಶಾಟನ-ಗೂಬೆ(ಗೆ). ಗಬ್ಬರಿಸು-ಸೀಳು, ಒಡೆದುಹಾಕು. ಕಳ್ಗೊಲೆ(=ಕಗ್ಗೊಲೆ)-(ಮೋಸದಿಂದ ಎಸಗಿದ) ಭೀಕರವಾದ ಕೊಲೆ. ಹೊಲ್ಲೆಹ- ಹೊಲ್ಲದು, ಕೆಟ್ಟದ್ದು, ನೀಚತನ].

ಎರಡು ಬಾಗಿ[1]ಲು[1] ಪಾಳೆಯಕೆ ಕೃಪ-
ನಿರಲಿ ಮೂಡಲು ಪಶ್ಚಿಮಾಂ[2]ಗ[2]ದೊ-
ಳಿರಲಿ ಕೃತವರ್ಮಕನು ಬಾಗಿಲೊಳಾಂತ[3]ರಿಪು[3]ಜನವ ।
ಕರಿತುರಗರಥಪತ್ತಿಗಳ ಸಂ-
ಹರಿಸುವುದು ನೀವಿಲ್ಲಿ ಮಧ್ಯದೊ-
ಳರಸುವೊತ್ತಕೆ [4]ಮೃತ್ಯ[4] ತಾನಹೆನೆಂದು ಕೈಕೊಂಡ ॥ ೧೨೪ ॥

ಎರಡು ಬಾಗಿಲಲಿವರನಿಬ್ಬರ-
ನಿರಿಸಿ ಚಾಪವ ಪಿಡಿದು ಬಾಣವ
ತಿರುಹುತೊಬ್ಬನೆ ರಥವ ಬಿಟ್ಟನು ರಾಜಬೀದಿಯಲಿ ।
ಅರಸ ಕೇಳದ್ಭುತವನಾ ನಡು-
ವಿರುಳು ನೃಪವೀಥಿಯಲಿ [1]ನಿಂ[1]ದುದು
ಧರೆಗೆ ಗಗನಕೆ ಕೀಲನಿಕ್ಕಿದ ವೋಲುಮಹಾಭೂತ ॥ ೧೨೫ ॥

ನಿಟಿಲನಯುನದ ಜಡಿವ ಜೂಟದ
ಜಟೆಯು [1]ಹೂಂಕೃತಿಯಲ್ಲಿ[1] ನಾಸಾ-
ಪುಟದ [2]ಕಕ್ಷದಲೆಸೆವ[2] ವಿಷಧರಪತಿಯು ವಾಸುಗಿಯು ।
ಚಟುಳಚಪಳಪ್ರಭೆಯು ಘನಸಂ-
ಘಟಿತವೆನೆ ಘರ್ಘರದ ಘೋರ-
ಸ್ಫುಟರವದ ರೌದ್ರಾಭಿ[3]ನಯು[3]ದಲಿ ರಂಜಿಸಿತು [4]ರಭಸ[4] ॥ ೧೨೬ ॥

---

೧೨೪. [1]ಲ (ಅ ಕುಮಾ). [2]ಕ (ಅ). [3]ನೃಪ (ಅ). [4]ಮಿತ್ತು (ಅ ಕುಮಾ).
[ಪಶ್ಚಿಮಾಂಗ-ಪಶ್ಚಿಮದಕಡೆ, ಪಶ್ಚಿಮ ಭಾಗ. ಅಂತ-ಎದುರಿಸಿದ. ಪತ್ತಿ (ಅ ಕುಮಾ). (=ಪದಾತಿ)-ಕಾಲಾಳು].

೧೨೫. [1]ನಾ (ಅ).
[ನೃಪವೀಧಿ-ರಾಜಮಾರ್ಗ. ಕೀಲನಿಕ್ಕು-ಜೋಡಣೆ ಮಾಡು, ಕೊಂಡಿಹಾಕು].

೧೨೬. [1]ಫೂತ್ಕೃತಿಯುರಿಯ (ಅ ಕುಮಾ). [2]ವೈಕಕ್ಷಕಪ (ಅ ಕುಮಾ). [3]ರತಿ [4]ಭೂತ (ಅ ಕುಮಾ).
[ನಿಟಿಲನಯನ-ಹಣೆಗಣ್ಣು. ಜಡಿವ-ಹೊಡೆವ, ಬಾರಿಸುವ. ಜೂಟದ ಜಡೆ-ಜಡೆಗಟ್ಟಿದ ಜುಟ್ಟು. ನಾಸಾಪುಟ-ಮೂಗಿನ ಹೊಳ್ಳೆ. ಕಕ್ಷ-ಪಕ್ಕ. ವಿಷಧರ-ಸರ್ಪ, ನಾಗರಹಾವು. ವಾಸುಗಿ(ಕಿ)-ಸರ್ಪರಾಜ. ಚಟುಳಚಪಳಪ್ರಭೆ-ಚುರುಕಾದ (ತೀವ್ರವಾದ) ಚಂಚಲವಾದ ಕಾಂತಿ. ಘರ್ಘರ-ಘುರಘುರ ಎಂಬ ಶಬ್ದ. ರವ-ಶಬ್ದ. ರೌದ್ರಾಭಿನಯ-ರೌದ್ರರಸ ಪ್ರಕಟವಾಗುವ ಅಭಿನಯ, ನಟನೆ].

ಇದು ವಿರೂಪಾಕ್ಷನ ಮನಃಕ್ಷೋ-
ಭದ ವಿಕಾರವಲಾ ಪಿನಾಕಿಯ
ಪದವ ಹಿಡಿದೋಲೈಸುವೆನು ಸರ್ವಾಂಗಯಜ್ಞದಲಿ ।
ಇದಕುಪಾಯವ ಬಲ್ಲೆನೆನುತು-
ಬ್ಬಿದನು ಬೊಬ್ಬಿಱಿದಾರಿ ತೋಡಿದ-
ನುದರವಹ್ನಿಯುವಿದಿರೊಳಗ್ನಿತ್ರಯವ ನಿರ್ಮಿಸಿದ ॥ ೧೨೭ ॥

ಸೆರೆನರಂಗಳ ದರ್ಭೆ ಮಿದುಳಿನ
ಚರು ಕಪಾಲದ ಪಾತ್ರೆ ಯೆಲುವಿನ
ಬೆರಳ ಸಮಿಧೆ[1]ನಿಶಾಳದನು[1]ಮಜ್ಜೆಗಳ ಪೃಷದಾಜ್ಯ ।
ಅರುಣಜಲದಾಜ್ಯಾಹುತಿಯು [2]ವಿ-
ಸ್ತರವ ವಿರಚಿಸಿ ನಿಗಮ[2] ಮಂತ್ರೋ-
ಚ್ಚರಣೆಯಲಿ ಪೂರ್ಣಾಹುತಿಗೆ ತನ್ನೊಡಲನೊಪ್ಪಿಸಿದ ॥ ೧೨೮ ॥

ಮೆಚ್ಚಿದನು ಮದನಾರಿ ಹೋಮದ
ಕಿಚ್ಚು ತೊಡಕದ ಮುನ್ನ ತೆಗೆದನು
ಬಿ[1]ಚ್ಚು[1] ಜಡೆಗಳ ಜಹ್ನುಸುತೆಯಲಿ ನಾದಿದನು ಭಟನ ।
[2]ಅ[2]ಚ್ಚಶರವಿದೆ ಖಡ್ಗವಿದೆ ಕೋ
ಮುಚ್ಚುಮುಱಿ[3]ಯೇಕಿನ್ನು ಸುತರಲಿ
ಚೊ[3]ಚ್ಚಿ[3]ಲವ ನೀನೆಂದು ಮೈದಡವಿದನು ಶಶಿಮೌಳಿ ॥ ೧೨೯ ॥

---

೧೨೭. [ವಿರೂಪಾಕ್ಷ ಪಿನಾಕಿ–ಮುಕ್ಕಣ್ಣ, ಈಶ್ವರ. ಓಲೈಸು–ಸೇವಿಸು. ಸರ್ವಾಂಗ ಯಜ್ಞ–ಪರಿಪೂರ್ಣ ಯಜ್ಞ. ಆರಿ–ಗರ್ಜಿಸಿ (ಅರ್, ಧಾ.). ಉದರವಹ್ನಿ–ಜಠರಾಗ್ನಿ. ಅಗ್ನಿತ್ರಯ–ಆಹವನೀಯ, ಗಾರ್ಹಪತ್ಯ, ದಕ್ಷಿಣ ಎಂಬ ಮೂರು ಬಗೆಯ ಪವಿತ್ರಾಗ್ನಿಗಳು].

೧೨೮. [1]ಯುಸಾಲಡಗು (ಅ). [2]ವಿಸ್ತರ ಕರಣವನು ವಿರಚಿಸಿದ (ಅ).
[ಸೆರೆ-ಗಂಟಲಿನ ನರ. ಚರು–ಹವಿಸ್ಸು. ಅನುಮಜ್ಜೆ-ಜತೆಗೂಡಿ ಬರುವ ಮೂಳೆಯ ರಸ. ಪೃಷದಾಜ್ಯ-ಹೋಮ ಮಾಡುವ ತುಪ್ಪ]

೧೨೯. [1]ಚ್ಚಿ (ಅ). [2]ಎ (ಅ ಕುಮಾ). [3]ಚ್ಚ (ಅ).
[ಮದನಾರಿ-ಶಿವ, ಈಶ್ವರ. ತೊಡಕು–ಆವರಿಸು, ಕವಿ, ಮುತ್ತು. ಜಹ್ನುಸುತೆ-ಜಾಹ್ನವಿ, ಗಂಗೆ. ನಾದು-ತೋಯಿಸು. ಅಚ್ಚಶರ-ಶ್ರೇಷ್ಠವಾದ, ಪರಿಶುದ್ಧವಾದ ಬಾಣ. ಚೊಚ್ಚಿಲವ-ಜ್ಯೇಷ್ಠ, ಮೊದಲಿನವನು].

ಎನೆ ಪುರಾರಿಯು ಪದಯುಗಕೆ ಗುರು-
ತನುಜ ಮೈಯಿಕ್ಕಿದನು ಬೀಳ್ಕೊಂ-
ಡನು ತಿರೋಹಿತನಾದನೀಶ್ವರನೀತನನು ಕಳುಹಿ ।
ಧನುವ ಕೊಂಡನು ಧೂರ್ಜಟಿಯ ರೂ-
ಹಿನ ಮಹಾರ[1]ಥಿ[1] ರಥವನೇರಿದ-
ನನುವರದ ರೌರವವನಂಗೈಸಿದನು ರಜನಿಯಲಿ ॥ ೧೩೦ ॥

ಧರಣಿಪತಿ ಕೇಳ್ ರಾಜಬೀದಿಯೊ-
ಳುರವಣಿಸಿ ಗುರುಸೂನು ರಥದಲಿ
ಬರುತ ಕಂಡನಲೈ ಯುಧಿಷ್ಠಿರರಾಜಮಂದಿರವ ।
ಇವರು ಪಾಂಡವರಿಲ್ಲಿ ಮೋ[1]ಣಿ[1]ವ-
ರಿರಲಿ ಬಳಿಕಾರೈವೆನಯ್ಯನ
ಹರಿಬ ಹೋಗಲಿ ಮುನ್ನ ಕೊಲುವೆನು ದ್ರುಪದನಂದನನ ॥ ೧೩೧ ॥

ಕೊಳಕೊಳಗುವಿಕ್ಕೆಲದ ದೀಪದ
ಬೆಳಕಿನಲಿ ಮಣಿರುಚಿಯ ಚಿತ್ರಾ-
ವಳಿಯ ಮೇಲ್ಕಟ್ಟಿನಲಿ ಲಲಿ[1]ತಾ[1]ಸ್ತರಣ ಮಧ್ಯದಲಿ ।
ಹೊಳೆಹೊಳೆವ ನವರತ್ನಭೂಷಣ-
ಕಲಿತಕಾಯನ ಕಂಡು ರೋಷ-
ಪ್ರಳಯಭೈರವರೂಪನೊದೆದನು ವಾಮಪಾದದಲಿ ॥ ೧೩೨ ॥

---

೧೩೦. [1]ಥ (ಅ ಕುಮಾ).
[ಮೈಯಿಕ್ಕು-ನಮಸ್ಕರಿಸು. ತಿರೋಹಿತನಾಗು-ಅಂತರ್ಧಾನನಾಗು, ಮರೆಯಾಗು. ಧೂರ್ಜಟಿಯ ರೂಹಿನ ಮಹಾರಥಿ-ಈಶ್ವರನ ರೂಪವನ್ನೇ ಹೋಲುವ ಮಹಾರಥಿಯಾದ ಅಶ್ವತ್ಥಾಮ. ಅನುವರ-ಯುದ್ಧ. ರೌರವ-ಒಂದು ಘೋರ ನರಕ. ಅಂಗೈಸು-ಸ್ವೀಕರಿಸು, ಅಂಗೀಕರಿಸು. ರಜನಿ-ರಾತ್ರಿ].

೧೩೧. [1]ಜ (ಅ ಕುಮಾ).
[ಆರೈ-ವಿಚಾರಿಸಿಕೊಳ್ಳು. ಅಯ್ಯನ-ತಂದೆಯ. ಹರಿಬ-ಹಗೆ, ದ್ವೇಷ, ಸೇಡು. ಹೋಗಲಿ-ತೀರಲಿ. ದ್ರುಪದನಂದನ-ಧೃಷ್ಟದ್ಯುಮ್ನ].

೧೩೨. [1]ತ (ಅ ಕುಮಾ).
[ಮಣಿರುಚಿ-ರತ್ನಗಳ ಕಾಂತಿ. ಚಿತ್ರಾವಳಿ-ಚಿತ್ರಗಳ ಸಮೂಹದಿಂದ ಅಲಂಕೃತವಾದ. ಮೇಲ್ಕಟ್ಟು-ಮೇಲೆ ಕಟ್ಟಿದ ಬಟ್ಟೆ. ಲಲಿತಾಸ್ತರಣ-ಮೃದುವಾದ ಹಾಸಿಗೆ. ನವರತ್ನಭೂಷಣ ಕಲಿತಕಾಯ-ಬಗೆಬಗೆಯ ನವರತ್ನಗಳುಳ್ಳ ಒಡವೆಗಳಿಂದ ಕೂಡಿದ ಶರೀರ. ವಾಮಪಾದ-ಎಡದ ಅಡಿ].

ಘೀಳಿಡನೆದ್ದನಿದಾರು ನಿದ್ರೆಯ-
ನಳಿದವನ ಶಿವಿಯೆನುತ ಮುಂದಣ
ಪ್ರಳಯರುದ್ರನ ರಹಿಯ ರೌದ್ರದ ರಣಭಯಂಕರನ ।
ನಿಲುವ ಕಂಡ[1]ನಡಾ[1]ಯುಧವ ತಾ
ಹಲಗೆಯಾವೆಡೆಯೆಂಬವನ ಮುಂ-
ದಲೆಯ ಹಿಡಿದಡಗೆಡಹಿ ಕುಸುಕಿ[2]ರಿದರಿಯಸ[2] ಬಡಿದ ॥ ೧೩೩ ॥

ಉಗಿದು ಬಿಲ್ಲಿನ ತಿರುವ ಕೊರಳಲಿ
ಬಿಗಿದು [1]ದ್ರುಪದಾತ್ಮಜನು ತಾ[1] ಬೆರ-
ಳುಗಳ ಬಾಯಲಿ ಬೀಡಿಕೊಂಡನು ದ್ರೋಣನಂದನನ ।
ಉಗಿದ [2]ಖಡ್ಗ[2]ದಲೆನ್ನ ಶಿರವನು
ತೆಗೆದು ಕಳೆಯೈ ಶಸ್ತ್ರಘಾತದಿ-
ನುಗುಳಿಸಸುವನು ತನಗೆ ವೀರಸ್ವರ್ಗವಹುದೆಂದ ॥ ೧೩೪ ॥

ಅಕಟ ಗುರುಹತ್ಯಾಮಹಾಪಾ-
ತಕಿಯೆ ನಿನಗೇ ಸ್ವರ್ಗ ದೇ[1]ವ-[1]
ಪ್ರಕರ ನಿನ್ನನು ಹೊಗಿಸಿದೊಡೆ ಸುಡುವೆನು ಸುರಾಲಯವ ।
[2]ಕ್ರಕಚ[2]ಕುಂಭೀಪಾಕಮುಖನಾ-
ರಕವೊಳಿರವುನೆ ನಿನಗೆ ಕೌ[3]ಕ್ಷೇ-[3]
ಯಕದ[4]ಹತಿಗಡ ತನಗೆನುತ[4] ಕಟ್ಟಿದನು ತಿರುವಿನಲಿ ॥ ೧೩೫ ॥

---

೧೩೩. [1]ವನಾ (ಅ). [2]ರಿದವನ ಸದೆ (ಅ).

[ಘೀಳಿಡನೆ–ತಟ್ಟನೆ. ಅಳಿದವನು–ನಾಶ ಮಾಡಿದವನು, ಕೆಡಿಸಿದವನು. ರಹಿ–ರೀತಿ, ಪ್ರಕಾರ. ಅಡಾಯುಧ–ಒಂದು ಬಗೆಯ ಕತ್ತಿ. ಹಲಗೆ–ಗುರಾಣಿ. ಅಡಗೆಡಹಿ–ಅಡ್ಡವಾಗಿ ಕೆಡವಿ. ಕುಸುಕಿರಿ–ಅಪ್ಪಳಿಸಿ ಗುದ್ದಿಗುದ್ದಿ ತಿವಿ. ಅಸಬಡಿ–ಸದೆಬಡಿ, ತದಕಿಹಾಕು]

೧೩೪. [1]ಭಯದಲಿ ದ್ರುಪದಸುತ (ಅ ಕುಮಾ) [2]ಡಾಯ್ದ (ಅ ಕುಮಾ).

[ಉಗಿದು–ಕಳಚಿ. ತಿರು–ಹೆದೆ. ಉಗಿದ ಖಡ್ಗ–ಸೆಳೆದ ಕತ್ತಿ. ಉಗುಳಿಸು–ಹೊರತೆಗೆ. ಅಸು–ಪ್ರಾಣ].

೧೩೫. [1]ಶ (ಅ). [2]ಪ್ರಕಟ (ಅ). [3]ರಶೇ (ಅ). [4]ಹರಿಗೆಳೆತನವೆನುತ (ಅ).

[ಏಸ್ವರ್ಗ–ಯಾವ ಸ್ವರ್ಗ. ಹೊಗಿಸು–ಪ್ರವೇಶ ಮಾಡಿಸು. ಸುರಾಲಯ–ಸ್ವರ್ಗ. ಕ್ರಕಚ ಕುಂಭೀಪಾಕ ಮುಖನಾರಕ–ಕ್ರಕಚ ಮತ್ತು ಕುಂಭೀಪಾಕವೆಂಬ ಪ್ರಮುಖವಾದ ನರಕಗಳು. ಕೌಕ್ಷೇಯಕ–ಕತ್ತಿ. ಹತಿ–ಹೊಡೆತ, ಪೆಟ್ಟು. ತನಗೆ–ನಿನಗೆ].

ಉಜ್ಜಾಲ ಹತ್ತಿಸಿ ಸೆಳೆದು ಗೋಣಲಿ
ಗುರುಗುರಿಸಲಸು ಜಾರಿದುದು ಬೊ-
ಬ್ಬಿರಿದು ಹೊಕ್ಕನು ಕದವನೊಡೆದು ಶಿಖಂಡಿಯಮಂದಿರವನೆಯು ।
ತರಿದನಾತನನುತ್ತಮೌಂಜಸ-
ನರಸಿ ಹೊಯ್ದನು ಹೊಕ್ಕು ಬಾಗಿಲ
ಮುರಿದು ವೈ[1]ಗುರಾಹಿಸಿ[1] ಯುಧಾಮನ್ಯುವ ವಿ[2]ದಾರಿ[2]ಸಿದ
॥ ೧೩೬ ॥

ಗಜಬಜವಿದೇನೆನುತ ನಿದ್ರೆಯ
ಮುಜಡರೊಳಗೊಳಗಿರ್ದರೀತನ
ಭುಜಬಲಕೆ ಮಲೆತವರ ಕಾಣೆನು ಸೃಂಜಯಾದಿಗಳ ॥
ರಜನಿಯಲಿ ರೌಕುಳವ ಮಾಡಿದ-
ನಜಿತಸಾಹಸನಿತ್ತ ದ್ರುಪದಾ-
ತ್ಮಜರ ಭವನದ ಹೊರೆಗೆ ಬಂದನು ಪಾಂಡವರನರಸಿ ॥ ೧೩೭ ॥

ಇದು ಯುಧಿಷ್ಠಿರ ರಾಜಗೃಹವೆಂ-
ದೊದೆದು ಕದವನು ಕಾಹಿನವರನು
ಸದೆದು ಹೊಕ್ಕನು ಸೆಜ್ಜೆಯಲಿ ಧರ್ಮಜನ ನಂದನನ ।
ಒದೆದಡೆದ್ದನು ಸುರಗಿಯಲಿ ಕಾ-
ದಿದನು ಖಡುಗವ ಜಡಿದು ನಿಮಿಷಾ-
ರ್ಧದಲಿ ತಲೆಯನು ನೆಗಹಿ ಪ್ರತಿವಿಂಧ್ಯಕನಸುಗಳೆದ ॥ ೧೩೮ ॥

---

೧೩೬. [1]ಯುಜಾಂಹಿಸಿ (ಅ). [2]ಭಾಡಿ (ಅ).
[ಉಜ್ಜಾಲು-ಹಗ್ಗ, ನೇಣು. ಹತ್ತಿಸಿ-ಬಿಗಿದು. ಗೋಣು-ಕತ್ತು, ಕೊರಳು. ಗುರುಗುರಿಸು-ಗೊರಗೊರ ಎಂದು ಸದ್ದು ಮಾಡು. ಶಿಖಂಡಿ-ಧೃಷ್ಟದ್ಯುಮ್ನನ ಅಣ್ಣ. ತರಿ-ಕತ್ತರಿಸು. ಉತ್ತಮೌಂಜಸ-ಧೃಷ್ಟದ್ಯುಮ್ನನ ಮತ್ತೊಬ್ಬ ಸಹೋದರ. ಅರಸಿ-ಹುಡುಕಿ. ಅ…ಹಿಸು-ಎಚ್ಚರಗೊಳಿಸು. ವಿದಾರಿಸು-ಸೀಳಿಹಾಕು].

೧೩೭. [ಮುಜಡ-ಅಲಸ್ಯ, ಅಹಿತ ಶತ್ರು; ಮಲೆತವರು-ಪ್ರತಿಭಟಿಸಿದವರು. ರಜನಿ-ರಾತ್ರಿ. ರೌಕುಳ-ಅಧಿಕ್ಯ, ಹೆಚ್ಚಳ. ಅಜಿತಸಾಹಸನು-ಗೆಲ್ಲಲಾಗದ ಪರಾಕ್ರಮವುಳ್ಳವನು (ಅಶ್ವತ್ಥಾಮನು) ಅರಸು-ಹುಡುಕು].

೧೩೮. [ಸದೆ-ಬಡಿ, ಹೊಡೆ. ಕಾಹಿನವ-ಕಾವಲುಗಾರ. ಸೆಜ್ಜೆ-ಶಯ್ಯಾಗೃಹ, ಮಲಗುವ ಮನೆ. ಸುರಗಿ-ಕತ್ತಿ. ನೆಗಹು-(ಮೇಲಕ್ಕೆ) ಎತ್ತು, ಎತ್ತಿಹಿಡಿ. ಅಸುಗಳೆ-ಪ್ರಾಣ ತೆಗೆ, ಸಾಯಿಸು].

ಜನಪ ಕೇಳೈ ಬಳಿಕ ಸುತಸೋ-
ಮನನು ಶ್ರುತಕೀರ್ತಿಯು ಶತಾನೀ-
ಕನನು ಶ್ರುತವರ್ಮಕನ ತರಿದನು ದ್ರೌಪದೀಸುತರ ।
ಜನಪರೈವರ ತಲೆಗಳೆಂದೇ
ಕನಕರಥದೊಳಗಿರಿಸಿ ಹೊಕ್ಕನು
ಮನೆಮನೆಗಳಲಿ ಸವರಿದನು ಸೋಮುಪ್ರಬದ್ಧಕರ ॥ ೧೩೯ ॥

ಬಸಿವ ರಕ್ತದಡಾಯುಧದ ನೆಣ-
ವಸೆಯ ತೊಂಗಲುಗರುಳ ಬಂಧದ-
ವಸನ ಕೈವ್ಯೆಗಳ ಕಠೋರ ಭ್ರುಕುಟಿಭೀಷಣದ ।
ಮುಸುಡ ಹೊಗರಿನ ದಂತದಂಶಿತ-
ದಶನವಾಸದ ವೈರಿಹಿಂಸಾ-
ವ್ಯಸನ ವೀರಾವೇಶಿ ಬಂದನು ಕೃಪನ ಸಮ್ಮುಖಕೆ ॥ ೧೪೦ ॥

ಕೇಳು ಧೃತರಾಷ್ಟ್ರಾವನಿಪ ರಿಪು-
ಜಾಲಗೀರ್ವಾ[1]ಣಕ[1] ಕದಂಬ-
ಸ್ಥೂಲಲಕ್ಷನು ಬಂದು ಕಂಡನು ಭೋಜಗೌತಮರ ।
ಲೀಲೆಯಲಿ ರಥವೇರಿ[2] ಕುರುಭೂ-
ಪಾಲನಲ್ಲಿಗೆ ಬಂದರುಬ್ಬಿನ
ಮೇಲುಮದದ ಜಯಪ್ರಚಂಡರು ಕಂಡರವನಿಪನ ॥ ೧೪೧ ॥

---

೧೩೯. [ಸುತಸೋಮ-ಶ್ರುತಸೋಮ; ಶ್ರುತವರ್ಮಕ-ಶ್ರುತಸೇನ, ಶ್ರುತವರ್ಮ (ಈ ಹೆಸರುಗಳು ಒಂದೊಂದು ಕಡೆ ಒಂದೊಂದು ವಿಧವಾಗಿವೆ). ಜನಪರೈವರು-ಪಂಚ ಪಾಂಡವರು. ಸೋಮುಪ್ರಬದ್ಧಕರು (?)].

೧೪೦. [ನೆಣವಸೆ-ಕೊಬ್ಬು. ಭ್ರುಕುಟಿ-ಹುಬ್ಬುಗಂಟು. ತೊಗಲುಗರುಳು-ಜೋಲಾಡುವ ಕರುಳು. ವಸನ-ವಸ್ತ್ರ, ಬಟ್ಟೆ. ಭೀಷಣ-ಭಯಂಕರ(ತೆ). ಮುಸುಡು-ಮುಖ. ಹೊಗರು-ಕಾಂತಿ. ದಂತದಂಶಿತದಶನವಾಸದ-ಹಲ್ಲುಮುಡಿ ಕಚ್ಚಿ, ಬಟ್ಟೆ ಕಚ್ಚಿ ಕೊಂಡಿರುವ. ವೈರಿಹಿಂಸಾವ್ಯಸನವೀರಾವೇಶಿ-ಶತ್ರುಗಳನ್ನು ಹಿಂಸೆಮಾಡುವ ಆಸಕ್ತಿಯ ವೀರಾವೇಶವುಳ್ಳವನು].

೧೪೧. [1]ಣೀ (ಅ ಕುಮಾ). [2]ವ (ಅ ಕುಮಾ).
[ಗೀರ್ವಾಣಕ ಕದಂಬ ಸ್ಥೂಲಲಕ್ಷನು-ದೇವತೆಗಳ ಸಮೂಹದ ಒಟ್ಟು ನೋಟಕ್ಕೆ ಗುರಿಯಾಗಿದ್ದವನು (ಅಂತರಿಕ್ಷದಲ್ಲಿ ದೇವತೆಗಳೆಲ್ಲರೂ ನೆರೆದು ಅಶ್ವತ್ಥಾಮನ ಹಿಂಸಾ ಕಾರ್ಯವನ್ನು ನೋಡುತ್ತಿದ್ದರು ಎಂದು ತಾತ್ಪರ್ಯ). ಭೋಜ-ಕೃತವರ್ಮ. ಗೌತಮ-(ಕೌರವ ಪಕ್ಷದ) ಪುರೋಹಿತ (?). ಮೇಲುಮದದ ಜಯಪ್ರಚಂಡರು-ಗೆಲುವಿನ ಅಹಂಕಾರದಿಂದ ಮೆರೆಯುವ, ಭಯಂಕರರಾದ ಕೃಪ ಅಶ್ವತ್ಥಾಮರು].

ಏನನೆಂಬೆನು ಜೀಯ ದ್ರುಪದನ
ಸೂನು ಪಂಚದ್ರೌಪದೇಯರ
ಹಾನಿಯನು ಸೃಂಜಯಶಿಖಂಡಿಪ್ರಮುಖರುಪಹತಿಯ ।
ವೈನತೇಯನಲಳಿಯನಹಿಕುಲ-
ವಾನುವುದೆ ಪಾಂಚಾಲಕದಳೀ-
ಕಾನನವ ನಿನ್ನಾನೆ ಸವಱಿತು ಹೇಳಲೇನೆಂದ ॥ ೧೪೨ ॥

ದೈವಕೃಪೆಜವನಿಕೆಯ ಮಱೆಗೊಂ-
ಡೈವರುಳಿದರು ಮೇಲೆ ಸಾತ್ಯಕಿ
ದೈವದೊಡಹುಟ್ಟಿದನಲೇ [1]ತಾನಿಲ್ಲ[1] ಶಿಬಿರದಲಿ ।
ದೈವಬಲವಿನಿತಕ್ಕೆ [2]ದಿಟ[2] ನಿ-
ರ್ದೈವಬಲ ನಿಶ್ಶೇಷ[3]ವನಿತ್ತೈ[3]
ದೈವವೆತ್ತಿದ ಛಲದ [4]ಭಾಷೆಯು[4] ರಾಯ ಕೇಳೆಂದ ॥ ೧೪೩ ॥

ಎಲೆ ಕೃಪಾಚಾರಿಯ ವಿರೋಧಿಗ-
ಳುಳಿದರೈವರು ಬಲ್ಲೆ [1]ನಾ[1]ನಸ-
ದಳದ ಕೃಪೆಯಲಿ ಬಸಿದು ಬೀಳುವನವ[2]ರಗಸುರಾರಿ[2] ।
ಅಳಿದುದೇ ನಿಶ್ಶೇಷಪಾಂಡವ-
ದಳ ಕುಮಾರರು ಸಹಿತವಿನ್ನ-
ಗ್ಗಳೆಯನಶ್ವತ್ಥಾಮನಹನೆಂದನು ಮಹೀಪಾಲ ॥ ೧೪೪ ॥

---

೧೪೨. [ಸೂನು-ಮಗ. ದ್ರುಪದನ ಸೂನು-ಧೃಷ್ಟದ್ಯುಮ್ನ. ಪಂಚದ್ರೌಪದೇಯರು-(ಪದ್ಯ ೧೩೮-೧೩೯ರ ಅರ್ಥ ನೋಡಿ). ಸೃಂಜಯ-ಶೈಬ್ಯರಾಜನ ಮಗ. ಉಪಹತಿ-ಹೊಡೆತ, ಪೆಟ್ಟು. ವೈನತೇಯ-ಗರುಡ. ಅಳಿ-ಪರಾಕ್ರಮ. ಅಹಿಕುಲ-ಸರ್ಪಕುಲ. ಆನು-ತಡೆದುಕೊ ಪಾಂಚಾಲಕದಳೀಕಾನನ-ದ್ರೌಪದಿಯ ಮಕ್ಕಳೆಂಬ ಬಾಳೆಯ ತೋಟ. ಸವರು-ನಾಶಮಾಡು].

೧೪೩. [1]ಯವರಿಲ್ಲ (ಅ). [2]ಕೇಳ್ (ಅ ಕುಮಾ). [3]ವಿನಿತೇ (ಅ ಕುಮಾ). [4]ವಾಸಿಗೆ (ಅ ಕುಮಾ).
[ಜವನಿಕೆ-ತೆರೆ. ಮಱೆಗೊಳ್ಳು-ಆಶ್ರಯಿಸು. ನಿರ್ದೈವಬಲ-ದೈವಬಲವಿಲ್ಲದಿರುವಿಕೆ. ನಿಶ್ಶೇಷ-ಏನೂ ಉಳಿಯದಿರುವುದು. ದೈವವೆತ್ತಿದ ಛಲದ ಭಾಷೆ-ಇಲ್ಲಿ ಕವಿಯು ಕೃಷ್ಣನ 'ಮಮಪ್ರಾಣಾಹಿ ಪಾಂಡವಾಹ' ಎಂಬ ಅಭಯವಚನವನ್ನು ಸೂಚಿಸುತ್ತಿದ್ದಾನೆ].

೧೪೪. [1]ನದ (ಅ ಕುಮಾ). [2]ಗೆ ಮುರವೈರಿ (ಅ).
[ಅಸದಳ-ಅಸಾಧ್ಯ. ಕೃಪೆಯಲಿ ಬಸಿದು ಬೀಳುವನು-ತನ್ನ ಕೃಪೆಯನ್ನು ಸಂಪೂರ್ಣವಾಗಿ ಎರೆದು ಅವರನ್ನು ರಕ್ಷಿಸುತ್ತಾನೆ. ಮಹೀಪಾಲ-ದುರ್ಯೋಧನ].

ಹರಿಬ ಬಂದುದೆ ಪಾಂಡುಸುತರುಳಿ-
ದಿರಲಿ ಸಾಕಂತಿರಲಿ ನಿಮ್ಮಡಿ
ಪುರಕೆ ಬಿಜಯಂಗೈ[1]ಯಿರೇ ಚೈತನ್ಯಗತಿಯೆಂತು[1] ।
ಹರಣವುಳಿದೊಡೆ ಪಾಂಡು ತನುಜರ
ಶಿರವ ಕೇವಣಿಸುವೆ[2]ನು ತಾ[2] ಕೇ-
ಸರಿಯ ಪೀಠವಲೆಂದನಶ್ವತ್ಥಾಮ ಕೈಮುಗಿದು ॥ ೧೪೫ ॥

ಸಾಕದಂತಿರಲಿನ್ನು ವೈರಿ-
ವ್ಯಾಕರಣಪಾಂಡಿತ್ಯದಲ್ಲಿ ವಿ-
ವೇಕಶೂನ್ಯರು ನಾವು ಮೊದಲಾ[1]ಗೌ[1]ರ್ಧ್ವ ದೈಹಿಕ[2]ವ[2] ।
ಆಕೆವಾಳರಿಗಱುಹಿ ನೀ[3]ವ-
ಸ್ತೋ[3]ಕಪುಣ್ಯರ ತಿಳುಹಿ ವಿ[4]ಗ[4]ಳಿತ-
ಶೋಕರೆನಿಸುವುದಂಧನೃಪಗಾಂಧಾರಿದೇವಿಯರ ॥ ೧೪೬ ॥

ಎನುತ ಕಣ್ಮುಚ್ಚಿದನು ಜೀವಾ-
ತ್ಮನು ಜವಾಯಿಲತನ[1]ದಿನಡ[1]ಹಾ-
ಯ್ದನು ಸು[2]ನಾ[2] ಸಾಲಂಬಿತಶ್ವಾಸದ ಸಮಾಪ್ತಿಯಲಿ ।
ಜನಪ ಮಱೆದೊಱಗಿದನಲಾ ಹಾ
ಯೆನುತ ವದನಾಂಜಳಿಯ ಪುಟತಾ-
ಡನದಲಿವರಳಲಿದರು ಕುರುರಾಜಾವಸಾನದಲಿ ॥ ೧೪೭ ॥

---

೧೪೫. [1]ವುದೆಂಪನು ಕೌರವರ ರಾಯ (ಅ). ನಲ್ಮೆ (ಅ ಕುಮಾ).
[ನಿಮ್ಮಡಿ-ನೀವುಗಳು. ಚೈತನ್ಯಗತಿ-ದೈವಗತಿ. ಹರಣ-ಪ್ರಾಣ. ಕೇವಣಿಸು-ಜೋಡಿಸು, ಪೋಣಿಸು].

೧೪೬. [1]ಗೂ (ಅ). [2]ದ (ಅ). [3]ನಾಶೋ (ಅ) [4]ದ (ಅ).
[ವೈರಿ ವ್ಯಾಕರಣ ಪಾಂಡಿತ್ಯ-ಶತ್ರುಗಳೊಡನೆ ಯುದ್ಧಮಾಡುವ ವ್ಯವಹಾರ ಜ್ಞಾನ. ಔರ್ಧ್ವದೈಹಿಕ-ಸದ್ಗತಿಯನ್ನು ಕಾಣಿಸಲು ಮಾಡಬೇಕಾದ ಅಪರಕರ್ಮಗಳು. ಆಕೆವಾಳರು-ಪರಾಕ್ರಮಿಗಳು. ಅಸ್ತೋಕಪುಣ್ಯರು-ಅಧಿಕವಾದ ಪುಣ್ಯಶಾಲಿಗಳು. ತಿಳುಹು-ಸಂತೈಸು, ಸಮಾಧಾನಪಡಿಸು. ವಿಗಳಿತ-ಇಲ್ಲವಾದ, ನಷ್ಟವಾದ].

೧೪೭. [1]ದಲೊಡೆ (ಅ ಕುಮಾ). [2]ರರ (ಅ).
[ಜವಾಯಿಲತನ-ಚುರುಕು, ವೇಗ. ಅಡಹಾಯು-ಅಡ್ಡವಾಗಿ ನುಗ್ಗು. ನಾಸಾಲಂಬಿತ ಶ್ವಾಸದ ಸಮಾಪ್ತಿ-ಮೂಗಿನಿಂದ ಕೊನೆಯುಸಿರೆಳೆಯುವುದು. ವದನಾಂಜಳಿಯ ಪುಟತಾಡನ-ಕೈಯಿಂದ ಬಾಯಿ ಬಡಿದುಕೊಳ್ಳುವುದು].

೬. ಕೌರವನ ತಂದೆತಾಯಿಗಳ ದುಃಖ—ಸಮಾಧಾನ

ಆ ಸಮಯದಲಿ ದೇವವೇದ-
ವ್ಯಾಸಮುನಿ ಬಂದನು ಗತಾಕ್ಷಮ-
ಹೀಶನನು ಚರಣದಲಿ ಹೊರಳಿದೊಡೆತ್ತಿದನು ಹಿಡಿದು ।
ಆ ಸತಿಯ ಕರಸಿದನು ರಾಣೀ-
ವಾಸವೆಲ್ಲವ ಬರಿಸಿ ಧರ್ಮವಿ-
ಲಾಸವನು ವಿಸ್ತರಿಸಿದನು ವೈದಿಕವಿಧಾನದಲಿ ॥ ೧೪೮ ॥

ಧರ್ಮವೆಲ್ಲಿಹುದಲ್ಲಿ ಜಯ ಸ-
ತ್ಕರ್ಮವೆಲ್ಲಿಹುದಲ್ಲಿ ಸಿರಿ ಸ-
ದ್ಧರ್ಮಸಂರಕ್ಷಕರು ಹರಿ ಧೂರ್ಜಟಿ ಪಿತಾಮಹರು ।
ಧರ್ಮದೂರನು ನಿನ್ನವನು ಸ-
ತ್ಕರ್ಮಬಾಹಿರನಾತ್ಮರಚಿತ ವಿ-
ಕರ್ಮದೋಷದಲಳಿದನಿನ್ನೇನೆಂದನಾ ಮುನಿಪ ॥ ೧೪೯ ॥

ಬಹವಿಪ[1]ತ್ತಿನ ಶರಕೆ ಜೋಡೆಂ-
ದಿ[1]ಹುದಲಾ ಸುವಿವೇಕಗತಿ ನಿ-
ರ್ದಹಿಸದೇ ಶೋಕಾಗ್ನಿ ಧರ್ಮದ್ರುಮದ ಬೇರುಗಳ ।
ಅಹಿತರೇ ಜನಿಸಿ[2]ದೊಡೆ[2] ಸುತರೆನೆ-
ಬಹುದೆ ದುರ್ಯೋಧ[3]ನನೆ[3] ಹಗೆ ನಿನ-
ಗಿಹಪರದ ಸುಖಗತಿಗೆ ಸಾಧನ ಧರ್ಮಸುತನೆಂದ ॥ ೧೫೦ ॥

---

೧೪೮. [ಗತಾಕ್ಷ ಮಹೀಶ-(ಕುರುಡರಾಜ) ಧೃತರಾಷ್ಟ್ರ. ಸತಿ–ಗಾಂಧಾರಿ].

೧೪೯. [ಧೂರ್ಜಟಿ–ಈಶ್ವರ. ಪಿತಾಮಹ–ಬ್ರಹ್ಮ. ಆತ್ಮರಚಿತ ವಿಕರ್ಮದೋಷ–ತಾನೇ ಮಾಡಿದ ಕೆಟ್ಟ ಕಾರ್ಯದ ಫಲ].

೧೫೦. [1]ತ್ತೀ ನರಕ ಭಯವಿದು ಬ (ಅ). [2]ದರು (ಅ). [3]ನನು (ಅ ಕುಮಾ).
[ವಿಪತ್ತಿನ ಶರ–ವಿಪತ್ತು ಎಂಬ ಬಾಣ. ಜೋಡು–ರಕ್ಷಾ ಕವಚ, ನಿರ್ದಹಿಸು–ವಿಶೇಷವಾಗಿ ಸುಡು. ಧರ್ಮದ್ರುಮ–ಧರ್ಮವೆಂಬ ವೃಕ್ಷ].

ಅರಸ ಕೇಳ್ ಧೃತರಾಷ್ಟ್ರಸಂಜಯು-
ವರಮುನಿಪವಿದುರಾದಿಪರಿಜನ-
ಪುರಜನಾವಳಿ ಯಿದ್ದುದುಪವನದೊಂದುಬಾಹೆಯಲಿ ।
ನೆರೆದುದೀಚೆಯೊಳೊಂದೆಸೆಯೊಳು-
ತ್ತರೆ ಸುಭದ್ರಾದೇವಿ ಮೊದಲಾ-
ದ[1]ರಸಿಯರು ಸಹಿತೊಜಲುತಿರ್ದ[2]ಳು[2] ದ್ರೌಪ[3]ದೀದೇವಿ[3] ॥ ೧೫೧ ॥

ಇದಕೆ ಸಂಶಯವೇನು ಬೊಪ್ಪನ
ಪದಯುಗವ ಕಾಣಿಸುವುದೆಮ್ಮನು
ಹದುಳವಿಡುವುದು ಹಸ್ತಿನಾಪುರದರಸುತನ ನಮಗೆ ।
ಒದೆದು ನೂಕಿದ ಹದನ ಮಕುಟಾ-
ಗ್ರದಲಿ ಧರಿಸುವೆವೆಂದು ಬಿನ್ನೈ-
ಪುದು ಮಹೀಪತಿಗೆಂದು ಮುನಿಗಱುಹಿದನು ಯಮಸೂನು ॥ ೧೫೨ ॥

ಲೇಸನಾಡಿದೆ ಮಗನೆ ಧರ್ಮದ
ಮಿಸಲಲ್ಲಾ ನಿನ್ನ ಮತಿ ಬಳಿ-
ಕೈಸಲೇಯೆನುತವರು ಬಂದರು ಭೂಪತಿಯ ಹೊರೆಗೆ ।
ಆ ಸುಯೋಧನ ನಿನ್ನ ಮಗನ-
ಲ್ಲೇ ಸಮಂಜಸ ಧರ್ಮಜನ ಹಿಡಿ-
ದೀಸುವುದು ಭವಜಲನಿಧಿಯನೆಂದಮಳ ಮುನಿ ನುಡಿದ ॥ ೧೫೩ ॥

---

೧೫೧. [1]ದ್ರೆಯರಾದಿ ಯಾದವರ (ಅ ಕುಮಾ). [2]ರು (ಅ). [3]ದಿಯು ಸಹಿತ (ಅ).
[ಬಾಹೆ-ಹೊರಗಡೆ. ಒಜಲು-ಗೋಳಾಡು].

೧೫೨. [ಬೊಪ್ಪ-ತಂದೆ (ಧೃತರಾಷ್ಟ್ರ). ಹದುಳವಿಡು-ನೆಮ್ಮದಿಯಾಗಿರಿಸು, ಕ್ಷೇಮವಾಗಿಡು. ಹಸ್ತಿನಾಪುರದರಸುತನ ನಮಗೆ ಒದೆದು ನೂಕಿದ ಹದನ ಮಕುಟಾಗ್ರದಲಿ ಧರಿಸುವೆವು-ಹಸ್ತಿನಾಪುರದ ಅರಸುತನವನ್ನು ನೀವು ನಮಗೆ ಕೊಡದೆ ಒದೆದು ನೂಕಿದ್ದರೂ ನಾವು ಅದನ್ನು ನೆನೆಯದೆ ನಿಮ್ಮ ಆಜ್ಞೆಯನ್ನು ಶಿರಸಾವಹಿಸುವೆವು ಎಂದು ತಾತ್ಪರ್ಯ].

೧೫೩. [ಧರ್ಮದ ಮಿಸಲಲ್ಲಾ-ಧರ್ಮಾಚರಣೆಗೆ ಮಿಸಲಾಗಿದೆಯಲ್ಲವೇ? ಐಸಲೇ-ಅಷ್ಟೇ ಅಲ್ಲವೆ. ಸಮಂಜಸ-ಯೋಗ್ಯನಾದ, ಒಪ್ಪತಕ್ಕ. ಹಿಡಿದು-ತಬ್ಬಿಕೊಂಡು, ಆಶ್ರಯಿಸಿ. ಅವಲಂಬಿಸಿ. ಭವಜಲಧಿ-ಸಂಸಾರಸಾಗರ].

ನೃಪನ ಕಾಣಿಸಿಕೊಂಬುದನಿಬರ-
ನುಪಚರಿಸುವುದು ನಿನ್ನ ಮಕ್ಕಳ
ಕೃಪಣತೆಯನಾರೈವರಲ್ಲವರೈವರುತ್ತಮರು ।
ಉಪಹತಿಯ ನೆನೆಯದಿರು ದುರ್ಜನ-
ರಪಕೃತಿಗೆ ಫಲವಾಯ್ತು ಧರ್ಮವೆ
ರಪಣವಿಹಪರಲೋಕಕೆಲೆ ಧೃತರಾಷ್ಟ್ರ ಕೇಳೆಂದ ॥ ೧೫೪ ॥

ಹೈ ಹಸಾದವು ನಿಮ್ಮ ಚಿತ್ತಕೆ
ಬೇಹಹದನೇ ಕಾರ್ಯಗತಿ ಸಂ-
ದೇಹವೇ ಪಾಂಡುವಿನ ಮಕ್ಕಳು ಮಕ್ಕಳವರೆವಗೆ ।
ಕಾಹುರರು ಕಲ್ಮಷರು ಬಂಧು-
ದ್ರೋಹಿಗಳು ಗತವಾಯ್ತು ನಿಷ್ಪ್ರ-
ತ್ಯೂಹವಿನ್ನೇನವರಿಗೆಂದನು ಮುನಿಗೆ ಧೃತರಾಷ್ಟ್ರ ॥ ೧೫೫ ॥

ಖಳನ ಹೃದಯದ ಕಾಳಕೂಟದ
ಗುಳಿಗೆಗಳನಿವರೆತ್ತ ಬಲ್ಲರು
ತಿಳುಹಿ ನುಡಿದೊಡಬಡಿಸಿದರು ನಾನಾಪ್ರಕಾರದಲಿ ।
ಗಳಿಲನೀಚೆಗೆ ಬಂದು ಹದನನು
ನಳಿನನಾಭಂಗರುಹೆ ನಸುನಗು-
ತೊಳಗೊಳಗೆ ಹರಿ ವಿಶ್ವಕರ್ಮನ ನೆನೆದು ನೇಮಿಸಿದ ॥ ೧೫೬ ॥

---

೧೫೪. [ಕೃಪಣತೆ-(ರಾಜ್ಯ) ಲೋಭ, ಸಂಕುಚಿತ ಮನಸ್ಸು. ಆರೈವರಲ್ಲ-ಗಮನಿಸತಕ್ಕವರಲ್ಲ, ವಿಚಾರ ಮಾಡತಕ್ಕವರಲ್ಲ. ರಪಣ-ಐಶ್ವರ್ಯ, ಸಂಪತ್ತು].

೧೫೫. [ಹಸಾದ-ಪ್ರಸಾದ, ಅಪ್ಪಣೆ. ಬೇಹ ಹದನು-ಬೇಕಾಗುವ, ಒಪ್ಪಿತವಾದ ಸಂಗತಿ. ಕಾರ್ಯಗತಿ-ಅನುಸರಿಸಬೇಕಾದ ಕಾರ್ಯ. ಕಾಹುರರು-ಉದ್ವೇಗವುಳ್ಳವರು, ದುಡುಕು ಸ್ವಭಾವದವರು. ಗತವಾಯ್ತು-(ಕಾಹುರರು, ಇತ್ಯಾದಿಗಳು) ಇಲ್ಲವಾದರು, ಹೊರಟುಹೋದರು, ಸತ್ತುಹೋದರು. ನಿಷ್ಪ್ರತ್ಯೂಹ-ನಿರಾತಂಕ, ಅಡ್ಡಿಯಿಲ್ಲದಿರುವುದು].

೧೫೬. [ಖಳ-ನೀಚ, ಕ್ರೂರಿ (ಇಲ್ಲಿ, ಧೃತರಾಷ್ಟ್ರ). ಕಾಳಕೂಟದ ಗುಳಿಗೆ-ಉಗ್ರವಾದ ವಿಷದ ಗುಳಿಗೆ. ಗಳಿಲನೆ-ಬೇಗನೆ, ತತ್‍ಕ್ಷಣ. ಹದನು-ಸಮಾಚಾರ. ವಿಶ್ವಕರ್ಮ-ದೇವತೆಗಳ ಶಿಲ್ಪಿ (ತ್ವಷ್ಟನ ಮಗ)].

ನೆನೆದ ಗಳಿಗೆಯೊಳಾತ ಕಟ್ಟು-
ಕ್ಕಿನಲಿ ಸರ್ವಾವಯುವ[1]ವನು[1] ಸಂ-
ಜನಿಸಿದನು ಪ್ರತಿರೂಪವನು ಪವಮಾನನಂದನನ ।
ದನುಜರಿಪು ಸಹಿತಿವರು ಬಂದರು
ಮುನಿಯೊಡನೆ ಬಳಿಕಂಧನೃಪತಿಗೆ
ವಿನಯದಲಿ ವೈಯಿಕ್ಕಿದನು ಭಕ್ತಿಯಲಿ ಯಮಸೂನು ॥ ೧೫೭ ॥

ಬಾ ಮಗನೆ ಕುರುರಾಜವಂಶ ಶಿ-
ರೋಮಣಿಯೆ ನಿರ್ಧೂತರಾಜಸ-
ತಾಮಸನೆ ಸತ್ಕೈಕಸಿಧಿ ಬಾ ತಂದೆ ಬಾರೆನುತ ।
ಭೂಮಿಪನ ತೆಗೆದಪ್ಪಿ ಬಹಳ
ಪ್ರೇಮದಲಿ ಮುಂಡಾಡಿದನು ಕಲಿ-
ಭೀಮನೋ ಬಾ ಮಗನೆ ಬಾರೈ ತನುಜ ಬಾರೆಂದ ॥ ೧೫೮ ॥

ಭೀಮನನು ಹಿಂದಿಕ್ಕಿ ಲೋಹದ
ಭೀಮನನು ಮುಂದಿರಿಸಲಾ ಸು-
ಪ್ರೇಮನಪ್ಪಿದನೇನನೆಂಬೆನು ಮೋಹವನು ಮಗನ ।
ಆ ಮಹಾವಜ್ರಾ[1]ಯುಧ[1]ಪ್ರೋ-
[2]ದ್ದಾ[2]ಮದಾಯಸಭೀಮತನು ನಿ-
ರ್ನಾಮವೆನೆ ನುಗ್ಗಾಗಿ ಬಿದ್ದುದು ನೃಪನ [3]ತಕ್ಕೆ[3]ಯಲಿ ॥ ೧೫೯ ॥

---

೧೫೭. [1]ತಾ (ಅ).

[ಕಟ್ಟುಕ್ಕು-ಪೆಡಸಾದ, ಕಠಿನವಾದ, ಉಕ್ಕು. ಸರ್ವಾವಯುವ-(ದೇಹದ) ಸಮಸ್ತ ಅಂಗೋಪಾಂಗಗಳು. ಸಂಜನಿಸು-ಸೃಷ್ಟಿಸು, ನಿರ್ಮಿಸು. ವೈಯಿಕ್ಕು-ನಮಸ್ಕಾರ ಮಾಡು].

೧೫೮. [ನಿರ್ಧೂತ ರಾಜಸ ತಾಮಸ-ಹೋಗಲಾಡಿಸಿದ ರಜೋಗುಣ ತಮೋಗುಣ ಇಲ್ಲದವನು. ಮುಂಡಾಡು-ಮುದ್ದಾಡು, ಮುದ್ದಿಸು].

೧೫೯. [1]ಯುತ (ಅ ಕುಮಾ). [2]ದ್ಧೂ (ಅ). [3]ಕೆ (ಅ).

[ವಜ್ರಾಯುಧ ಪ್ರೋದ್ದಾಮ-(ಇಂದ್ರನ) ವಜ್ರಾಯುಧದಷ್ಟು ಭಯಂಕರವಾದ. ಆಯಸಭೀಮತನು-ಕಬ್ಬಿಣದಿಂದ ಮಾಡಿದ ಭೀಮನ ಶರೀರ. ನಿರ್ನಾಮವೆನೆ-ಹೇಳ ಹೆಸರಿಲ್ಲದಂತೆ. ನುಗ್ಗಾಗು-ಪುಡಿಪುಡಿಯಾಗು].

ಮಗನೆ ಹಾ ಹಾ ಭೀಮ ನೊಂದ್ಯೆ
ಮಗನೆ ಕೆಟ್ಟೆನು [1]ಕಟ,ನಕಟೆಂ-[1]
ಒಗುಮಿಗೆಯ ಶೋಕದಲಿ ನೆಱೆ ಮಱುಗಿದನು ಧೃತರಾಷ್ಟ್ರ ।
ದುಗುಡಬೇಡೆಮ್ಮಿಂಗೆ ನಿ[2]ಮ್ಮ[2]ಯ
ಮಗನುಳಿದ ನಿಮ್ಮಧಿಕರೋಷದ
ಹಗರಣದ ಹಗೆ ಹೋಯಿತೆಂದನು ನಗುತ ಮುರವೈರಿ ॥ ೧೬೦ ॥

ಕುರುಮಹೀಪತಿ ನಮ್ಮ ಪೂರ್ವ[1]ಜ-
ರ[1]ರಸು ತತ್ಸಂತಾನಪಾರಂ-
ಪರೆಯನಳಿವೊಡೆ ಕೆಲಬರಾದರು ಹೋದ[2]ರವರಿಂದು[2] ।
ಭರತಕುಲವನು ಹೊರೆದು ಮಿಗೆ ವಿ-
ಸ್ತರಿಸು ಮಗನೆ ಸುಯೋಧನಾದ್ಯರ
ದುರುಳತನದವಗುಣವನೆಮ್ಮನು ನೋಡಿ ಮಱೆಯೆಂದ ॥ ೧೬೧ ॥

ಅಳಿದವರಿಗಳಲುವುದು ಸಲ್ಲದು
ನಿಲಲಿ ಸಾಕದು ನಿಮ್ಮ ಚಿತ್ತದ
ನೆಲೆಯ ಬಯಕೆಯ ಬೆಸಸಿರೇ ಕರ್ತವ್ಯವೇನೆಮಗೆ ।
ಕಳವಳಿಪ ಕುಂತೀಸುತರ ಕಣು-
ವಳೆಗವಗ್ರಹವಾಗು ನಿರ್ಜರ-
ರೊಳಗೆ ಮಕ್ಕಳ ಮಾನ್ಯರನು ಮಾಡೆಂದನಾ ಮುನಿಪ ॥ ೧೬೨ ॥

---

೧೬೦. [1]ಮಗನೆ ಮಗನಂ (ಅ). [2]ನ್ನ (ಅ).
[ಒಗುಮಿಗೆ–ಅಧಿಕ್ಯ, ಹೆಚ್ಚಳ. ಹಗರಣ–ಸಂದರ್ಭ, ಪ್ರಕರಣ, ಸನ್ನಿವೇಶ].

೧೬೧. [1]ದಲ (ಅ). [2]ರಿನ್ನಿವರು (ಅ).
[ಕುರುಮಹೀಪತಿ–(ಇಲ್ಲಿ) ಧರ್ಮರಾಜ. ಸಂತಾನಪಾರಂಪರೆ–ವಂಶದ ಪರಂಪರೆ. ಹೊರೆ–ಪೊರೆ, ಕಾಪಾಡು. ಅಳಿ–ನಾಶವಾಗು, ನಾಶಪಡಿಸು].

೧೬೨. [ಅಳಿದವರು–ಸತ್ತವರು. ಅಳಲು–ದುಃಖಪಡು, ಕೊರಗು. ಕಣುವಳೆ(=ಕಣ್ಮಳೆ)–ಕಂಬನಿ. ಅವಗ್ರಹ–ಅಡ್ಡಿ, ತಡೆ. ನಿರ್ಜರರೊಳಗೆ ಮಕ್ಕಳ ಮಾನ್ಯರನು ಮಾಡು–ದೇವತೆಗಳ ಸಮೂಹದಲ್ಲಿ ನಿನ್ನ ಮಕ್ಕಳಿಗೆ ಮನ್ನಣೆ ದೊರೆಯುವಂತೆ ಮಾಡು (ನಿನ್ನ ಮಕ್ಕಳಿಗೆ ಸದ್ಗತಿ ಕಾಣಿಸು ಎಂದು ತಾತ್ಪರ್ಯ)].

ರಾಯನನು ಕಾಣಿಸಿದಿರೇ ಪ್ರ-
ಜ್ಞಾಯತಾಕ್ಷನ ತಿಳಿಹಿ ಬಂದಿರೆ
ತಾಯಿಗಳು ನಾವೈಸಲೇ ಬಲುಹುಂಟೆ ನಮಗಿನ್ನು ।
ಸಾಯೆ ಸಾವೆನು ಕುರುಕುಲಾಗ್ರಣಿ
ನೋಯೆ ನೋವೆನು ತನಗೆ ದುರಭಿ-
ಪ್ರಾಯವುಂಟೇ ಪಾಪ ಎಂದಳು ಮುನಿಗೆ ಗಾಂಧಾರಿ ॥ ೧೬೩ ॥

ಹರಿ ವಿದುರ ಪಾರಾಶರಾತ್ಮಜ
ವರ ಮಹೀಪತಿ ಭೀಮ ಮಾದ್ರೀ-
ಯರು ಧನಂಜಯ ಸಹಿತ ಬಂದರು ಬಹಳ ವಿನಯದಲಿ ।
ಚರಣದಲಿ ಮೈಯಿಕ್ಕಿದರೆ ನೃಪ-
ವರನ ನೆಗಹಿದಳನಿಲಸುತ ಸಿತ
ತುರಗ ಮಾದ್ರೀಸುತರು ಪದಕೆಱಗಿದರು ಭೀತಿಯಲಿ ॥ ೧೬೪ ॥

ಏಳಿರೈ ಸಾಕೇಳಿ ಮಕ್ಕಳಿ-
ರೇಳಿರೈ ದೇಸಿಗರು ನಾವ್ ಭೂ-
ಪಾಲಕರು ನೀವೀಸು ನಮ್ಮಲಿ ಭೀತಿ ನಿಮಗೇಕೆ ।
ಬಾಲೆಯರು ನಾವಂಧಕರು ನಿ-
ಮ್ಮಾಳಿಕೆಯೊಳೇ ನಿಮ್ಮ ಹಂತಿಯ
ಕೂಳಿನಲಿ ಬೆಂದೊಡಲ ಹೊರೆವವರೆಂದಳಿಂದುಮುಖಿ ॥ ೧೬೫ ॥

---

೧೬೩. [ರಾಯ-(ರಾಜನಾದ) ಧೃತರಾಷ್ಟ್ರ. ಪ್ರಜ್ಞಾಯತಾಕ್ಷ-ಪ್ರಜ್ಞೆಯೆಂಬ ವಿಶಾಲವಾದ ಕಣ್ಣುಳ್ಳವನು (ಕಣ್ಣುರುಡಾದರೂ ಪ್ರಜ್ಞೆ ಉಳ್ಳವನು) ಧೃತರಾಷ್ಟ್ರ. ತಿಳಿಹು-ಸಮಾಧಾನಪಡಿಸು. ಕುರುಕುಲಾಗ್ರಣಿ-ಧೃತರಾಷ್ಟ್ರ. ನೋಯು-ದುಃಖಪಡು].

೧೬೪. [ಹರಿ-ಕೃಷ್ಣ. ಪರಾಶರಾತ್ಮಜ-ವ್ಯಾಸರು. ಮಹೀಪತಿ-(ರಾಜನಾದ) ಧರ್ಮರಾಜ. ಧನಂಜಯ-ಅರ್ಜುನ. ನೆಗಹು-ಮೇಲಕ್ಕೆ ಎತ್ತು. ಅನಿಲಸುತ-ಭೀಮ. ಸಿತ ತುರಗ (=ಶ್ವೇತವಾಹನ)-ಬಿಳಿ ಕುದುರೆಯನ್ನು ವಾಹನವಾಗಿ ಉಳ್ಳವನು, ಅರ್ಜುನ].

೧೬೫. [ದೇಸಿಗರು-ದಿಕ್ಕಿಲ್ಲದವರು. ಈಸು-ಇಷ್ಟು. ಅಂಧಕ-ಕುರುಡ. ಹಂತಿ-ಪಂಕ್ತಿ. ಕೂಳು-ಅನ್ನ. ಹೊರೆ-ಕಾಪಾಡು].

ತಾಯೆ ಖತಿಬೇಡಿನ್ನು ಧರಣಿಗೆ
ರಾಯನೇ ಧೃತರಾಷ್ಟ್ರನಾತನ
ಬಾಯ ತಂಬುಲ ಬೀಳುಡೆಯು ಬಲದಿಂದ ಬದುಕುವೆವು ।
ತಾಯೆ ನೀವಿನ್ನೆಮಗೆ ಕುಂತಿಯು
ತಾಯಿತನವಂತಿರಲಿ ಕರುಣಿಸಿ
ಕಾಯಬೇಕೆಂದರಸ ಮಗುಳೆಱಗಿದನು ಚರಣದಲಿ ॥ ೧೬೬ ॥

ಧರ್ಮ ನಿಮ್ಮದು ಮಗನೆ ಬಟ್ಟೆಯು ¹ವಿ-¹
ಕರ್ಮವೆಮ್ಮದು ²ತ²ನ್ನ ಮಕ್ಕಳು
ದುರ್ಮತಿಗಳನ್ಯಾಯಶೀಲರಸಾಧುಸಂಗತರು ।
ನಿರ್ಮಳರು ನೀವೈವರಾಹವ-
ಕರ್ಮಕುಶಲರು ಲೋಕವೆಚ್ಚಲು
ಧರ್ಮ ನಿಮಗಿನ್ನೆನುತ ತಲೆಗುತ್ತಿದಳು ಗಾಂಧಾರಿ ॥ ೧೬೭ ॥

ಎನುತ ಬರೆಬರೆ ಮುಂದೆ ಕಂಡಳು
ತನುಜನನು ಭೀಮನ ಗದಾಘ-
ಟ್ಟನದ ಗಾಯದ ಮೆಯ್ಯ ಖಂಡಿಸಿದೂರುಮಂಡಲದ ।
ನನೆದ ಹುಡಿಮುಗ್ಗುಲಿನ ರಕುತದ
ಹೊನಲ ಹೊಲಸಿ¹[ನ]¹ ಘೂಕಕಾಕ
ಧ್ವನಿ ಭಯಂಕರ ಸನ್ನಿಧಾನದ ಕೌರವೇಶ್ವರನ ॥ ೧೬೮ ॥

---

೧೬೬. [ಖತಿ–ದುಃಖ. ಬೀಳುಡೆ–ತೆಗೆದು ಬಿಸುಟ ವಸ್ತ್ರ. ಮಗುಳ್–ಮತ್ತೆ, ಪುನಃ].

೧೬೭. ¹ಅ (ಅ). ²ಯಿ (ಅ). ³ಗೆಂದೆ (ಅ).
[ವಿಕರ್ಮ–ಮಾಡಬಾರದ ಕೆಲಸ, ಕೆಟ್ಟ ಕೆಲಸ. ದುರ್ಮತಿ–ಕೆಟ್ಟ ಬುದ್ಧಿಯವನು. ಅಸಾಧುಸಂಗತ–ದುರ್ಜನರ ಸಹವಾಸವುಳ್ಳವನು. ಆಹವಕರ್ಮಕುಶಲರು–ಯುದ್ಧ ಕಾರ್ಯದಲ್ಲಿ ನಿಪುಣರು. ತಲೆಗುತ್ತು–ತಲೆದೂಗು (ಮೆಚ್ಚಿಗೆಯ ಸೂಚನೆ)].

೧೬೮. ¹ದ (ಅ ಕುಮಾ).
[ಘಟ್ಟನ–ಹೊಡೆತ. ಊರುಮಂಡಲ–ತೊಡೆಯ (ವಿಶಾಲವಾದ) ಭಾಗ. ಹೊನಲು–ಪ್ರವಾಹ. ಸನ್ನಿಧಾನದ–ಬಳಿಯಿರುವ. ಘೂಕ–ಗೂಗೆ].

ಇತ್ತ ನೋಡೈ ಕೃಷ್ಣ ತನ್ನಯ
ಮತ್ತದಂತಿಯನಿಂದುಕುಲ ರಾ-
ಜೋತ್ತಮನನೇಕಾದಶಾಕ್ಷೋಹಿಣಿಯ ವಲ್ಲಭನ ।
ಹತ್ತೆ ಹಿಡಿದೋಲಗಿಸುವರು ವರ
ಮತ್ತಕಾಶಿನಿಯರುಗಳೀಗಳು
ಸುತ್ತಮುತ್ತಿತು ಘೂಕ ವಾಯಸ ಜಂಬುಕವ್ರಾತ ॥ ೧೬೯ ॥

ಎನುತ ಬಿದ್ದಳು ಮೂರ್ಛೆಯಲಿ ಮಾ-
ನಿನಿಯನೆತ್ತಿದನಸುರರಿಪು ನೃಪ
ವನಿತೆಯರು ಭಾನುಮತಿ ಮೊದಲಾದಖಿಳ ರಾಣಿಯರು ।
ಜನಪತಿಯ ಮುಕ್ಕುಱುಕಿದರು ತ-
ಜ್ಜನಿತ ಶೋಕಾದ್ಭುತದ ಹಾ ಹಾ
ಧ್ವನಿಯು ಧಟ್ಟಣೆ ಘಟ್ಟಿಸಿತು ಬ್ರಹ್ಮಾಂಡಮಂಡಲವ ॥ ೧೭೦ ॥

ಜನಪ ಕೇಳೀಚೆಯಲಿ ಕುಂತೀ-
ವನಿತೆ ಕರ್ಣನ ಮೇಲೆ ಹೊರಳಿದ-
ಳೆನತನುಜ ಹಾ ಕರ್ಣ ಹಾಹಾ ಯೆನುತ ಹಂಬಲಿಸಿ ।
ನಿನಗೆ ಧರ್ಮಸುತಾದಿಭೂಮಿಪ-
ರನುಜರೀ ಮಾಯಾವಿ ಮಧುಸೂ-
ದನನೆ ಮಱೆಯಿಸಿ ಕೊಂದನಕಟೆಂದೊರಲಿದಳು ಕುಂತಿ ॥ ೧೭೧ ॥

ಅಱಿದನಂತಕಸೂನು ಮುರಹರ-
ನಱಿದನೇ ನಾವಿನ್ನು ಕರ್ಣಗೆ
ಕಿಱಿಯರೈ ಲೇಸಾಯ್ತು ಗುರುಜನಬಂಧುಜನಹನನ ।
ಉಱುವ ಶಶಿವಂಶದ ಮಹಾನೃಪ-
ರೆಱಗಿದರೆ ಪಾತಕಕೆ ಮುನ್ನೆ-
ಚ್ಚಱಿಸದಕಟಾ ತಾಯಿ ಕೆಡಿಸಿದಳೆಂದು ಬಿಸುಸುಯ್ದ ॥ ೧೭೨ ॥

---

೧೬೯. [ಮತ್ತದಂತಿ–ಮದಿಸಿದ ಆನೆ. ಇಂದುಕುಲರಾಜೋತ್ತಮ–ಚಂದ್ರ ವಂಶದ ರಾಜ ಶ್ರೇಷ್ಠ. ಏಕಾದಶಾಕ್ಷೋಹಿಣಿಯ ವಲ್ಲಭ-ಹನ್ನೊಂದು ಅಕ್ಷೋಹಿಣಿ ಸಂಖ್ಯೆಯ (ಚತುರಂಗ) ಸೈನ್ಯದ ಒಡೆಯ. ಹತ್ತೆ–ಹತ್ತಿರ. ಮತ್ತಕಾಶಿನಿ–ಸುಂದರಿ, ಲಾವಣ್ಯವತಿ. ವಾಯಸ–ಕಾಗೆ ಜಂಬುಕವ್ರಾತ–ನರಿಗಳ ಹಿಂಡು].

೧೭೦. [ಮುಕ್ಕುಱುಕು–ಮುತ್ತು, ಮುಸುರು, ಸುತ್ತುಗಟ್ಟು. ಧಟ್ಟಣೆ-ರಭಸದ ಮೊತ್ತ ಘಟ್ಟಿಸು..ಬಲವಾಗಿ ತಾಕು].

೧೭೨. [ಅಂತಕಸೂನು–ಯಮಧರ್ಮನ ಮಗ (ಯುಧಿಷ್ಠಿರ). ಉಱುವ-ಶ್ರೇಷ್ಠ, ಹನನ–ವಧೆ, ಕೊಲೆ].

ಹೋಗಲಿನ್ನಾ ಕ್ಷತ್ರಧರ್ಮ-
ತ್ಯಾಗದುರ್ವ್ಯಸನಪ್ರಪಂಚವ
ನೀಗಿ ಕಳೆಯೆಂದಸುರರಿಪು ಸೈತೆಂದು [1]ಮಂತ್ರಿ[1]ಸಿದ।
ಮೇಗಿವರ ಸಂಸ್ಕಾರಕಾರ್ಯನಿ-
ಯೋಗವಿದೆ ಭಾರಾಂಕ ನಿನಗೆ ಸ-
ರಾಗದಲಿ ಸಂತೈಸಿಯೆಂದನು ಭೂಪತಿಗೆ ಶೌರಿ ॥ ೧೭೩ ॥

ಕುರುಪತಿಯು ರವಿಸುತನ ಮಾದ್ರೇ-
ಶ್ವರನ ದುಶ್ಶಾಸನನ ವಿಕರ್ಣಾ-
ದ್ಯರ ಜಯದ್ರಥ ಬಾಹ್ಲಿಕರ ಭಗದತ್ತ ಲಕ್ಷಣರ।
ಗುರುವರನ ಪಾಂಚಾಲ ಮತ್ಸ್ಯೇ-
ಶ್ವರರ ಕುಂತೀಭೋಜನೃಪ ಮು-
ಖ್ಯರನು ವಿಧಿಪೂರ್ವಕದಿ ದಹಿಸಿದರಾಹಿತಾಗ್ನಿಯಲಿ ॥ ೧೭೪ ॥

ಕಳದ ಶೌಕವ ಸುತ್ತಲೊಟ್ಟಿಸಿ
ತಳಿಗಳನು ಬಹಳಾಗ್ನಿಯನು ಕೈ-
ಗೊಳಿಸಿದರು ದಹಿಸಿದರು ಬಹಳಾಕ್ಷೌಹಿಣೀ ಭಟರ।
ಬಳಿಕ ಹಸ್ತಿನಪುರದ ಸೀಮಾ-
ಸ್ಥಳಕೆ ಬಂದರು ನಿಖಿಳಕಾಂತಾ-
ವಳಿಸಹಿತ ಗಂಗಾವಗಹನವ ಮಾಡಿದನು ನೃಪತಿ ॥ ೧೭೫ ॥

---

೧೭೩. [1]ಮನ್ನಿ (ಅ ಅ ಕುಮಾ); ಸ್ವೀಪಾ (ಅ ಪ್ರತಿಯ ಪಾಠಾಂತರ).
[ಹೋಗಲಿನ್ನಾ ಕ್ಷತ್ರಧರ್ಮತ್ಯಾಗ-ಆದದ್ದು ಆಯಿತು, ಇನ್ನು ಉಳಿದಿರುವುದು ಕ್ಷತ್ರಿಯ ಧರ್ಮವಾದ ಯುದ್ಧವನ್ನು ತ್ಯಜಿಸುವ ಕಾರ್ಯ. ದುರ್ವ್ಯಸನ ಪ್ರಪಂಚ-ಜೂಜು ಮುಂತಾದ ಕೆಟ್ಟ ಆಸಕ್ತಿಗಳು, ಚಟಗಳು. ಮಂತ್ರಿಸಿದ-ಬುದ್ಧಿ ಹೇಳಿದನು. ಮೇಗೆ-ಇನ್ನುಮೇಲೆ. ಸಂಸ್ಕಾರಕಾರ್ಯ ನಿಯೋಗ-ಮಡಿದ ಕೌರವ ಪಾಂಡವ ಬಂಧುವರ್ಗದವರ ಉತ್ತರಕ್ರಿಯೆಯನ್ನು ಮಾಡಿಸುವ ಕರ್ತವ್ಯ. ಭಾರಾಂಕ-ಹೊಣೆಗಾರಿಕೆ. ಸರಾಗದಲಿ-ಪ್ರೀತಿಯಿಂದ. ಸಂತೈಸಿ-ದುಃಖ ಶಮನ ಮಾಡಿರಿ. ಶೌರಿ-ಶ್ರೀಕೃಷ್ಣ].

೧೭೪. [ಆಹಿತಾಗ್ನಿ-(ಎಲ್ಲ ನಿಘಂಟುಗಳಲ್ಲೂ ಅಗ್ನಿಹೋತ್ರಿಯಾದ ಬ್ರಾಹ್ಮಣ ಎಂಬ ಅರ್ಥವಿದೆ) ಪವಿತ್ರಾಗ್ನಿ, ಶವಸಂಸ್ಕಾರದಲ್ಲಿ ಮಂತ್ರಪೂರ್ವಕ ಹೊತ್ತಿಸುವ ಅಗ್ನಿ].

೧೭೫. [ಕಳ-ಯುದ್ಧರಂಗ. ತಳಿ-ಮರದ ಕೊರಡು. ಕೈಗೊಳಿಸು-ಕೈಯಿಂದ ಇಡು. ಸೀಮಾಸ್ಥಳ-ಹೊರಗಿನ ಎಲ್ಲೆಕಟ್ಟು, ಅಂಚು. ಕಾಂತಾವಳಿ-ಪತ್ನಿಯರ ಸಮೂಹ. ಗಂಗಾವಗಹನ-ಗಂಗೆಯಲ್ಲಿ ಮುಳುಗುವುದು, ಗಂಗಾ ಸ್ನಾನ].

ಆ ನದಿಯ ತೀರದಲಿ ತಿಂಗಳು
ಮಾನನಿಧಿ ತತ್ಪ್ರೇತರಿಗೆ ಜಲ-
ದಾನವಿಧಿವಿಹಿತಪ್ರಪಂಚದ ಸಕಲ[1]ಸತ್ಕ್ರಿಯೆ[1]ಯು ।
[2]ಭೂನುತನು[2] ಮಾಡಿ[3]ದನು[3] ಬಂದುದು
ಜಾನಪದಜನವೈದೆ ಕುಂತೀ-
ಸೂನುವನು ದರುಶನವ ಮಾಡಿತು ಕಾಣಿಕೆಯ ನೀಡಿ || ೧೭೬ ||

ತಿಳುಹಿ ರಾಯನ ಹೃದಯಸಂಚಿತ-
ಕಲುಷವನು ಖಂಡಿಸಿ ಗತಾಕ್ಷನ
ಬಲಿದ ಚಿತ್ತವ್ಯಥೆಯನಾಱಿಸಿ ನೃಪವಧೂಜನದ ।
ಅಳಲನಾಱಿಸಿ ಗಜಪುರದ ನೃಪ-
ನಿಳಯವನು ಹೊಗಿಸಿದನು ಯದುಕುಲ-
ತಿಲಕ ಗದುಗಿನ ವೀರನಾರಾಯಣನು [1]ಪಾಂಡವರ[1] || ೧೭೭ ||

---

೧೭೬. [1]ಸಂಸ್ಕೃತಿ (ಅ ಕುಮಾ). [2]ಭೂನೃಪನು (ಅ). [3]ದುದು (ಅ).

[ತತ್ಪ್ರೇತರಿಗೆ–ಪ್ರೇತರೂಪದಲ್ಲಿರುವ ಬಂಧುವರ್ಗಕ್ಕೆ (ಉತ್ತರಕ್ರಿಯೆ ಮಾಡುವುದಕ್ಕಿಂತ ಪೂರ್ವದ ಮೃತರ ಸ್ಥಿತಿಗೆ ಪ್ರೇತ ಎಂದು ಹೇಳಿದೆ). ಜಲದಾನ ವಿಧಿವಿಹಿತ ಸಂಸ್ಕೃತಿ–ಜಲತರ್ಪಣವೇ ಮುಂತಾಗಿ ಶಾಸ್ತ್ರೋಕ್ತ ಮರಣೋತ್ತರ ಕರ್ಮಗಳು, ಅಪರಕರ್ಮಗಳು. ಭೂನುತ–ಭೂಮಿಯ ಜನರಿಂದ ಹೊಗಳಲ್ಪಟ್ಟವನು. ಜಾನಪದ ಜನ–ದೇಶದ, ರಾಜ್ಯದ, ಜನ. ಐದೆ(=ಎಯ್ದೆ)–ಚೆನ್ನಾಗಿ].

೧೭೭. [1]ಕರುಣದಲಿ (ಅ).

[ತಿಳುಹು–ಸಮಾಧಾನಪಡಿಸು. ಸಂಚಿತಕಲುಷ–ಕೂಡಿಹಾಕಿಕೊಂಡ ಪಾಪ, ಕಳಂಕ. ಗತಾಕ್ಷ–ಕಣ್ಣು ಹೋದವನು, ಕುರುಡ (ಧೃತರಾಷ್ಟ್ರ). ಬಲಿದ–ಹೆಚ್ಚಾದ. ಚಿತ್ತವ್ಯಥೆ–ಮನಸ್ಸಿನ ಕೊರಗು. ನೃಪವಧೂಜನ–ರಾಜನ ಪತ್ನಿಯರು. ಅಳಲು–ದುಃಖ. ಹೊಗಿಸು–ಪ್ರವೇಶಿಸುವಂತೆ ಮಾಡು].

೭. ಧರ್ಮರಾಜನ ಪಟ್ಟಾಭಿಷೇಕ

ಕೇಳು ಜನಮೇಜಯ ಧರಿತ್ರೀ-
ಪಾಲ ಹಿಮಗಿರಿ ತೊಡಗಿ ಸಾಗರ-
ವೇಳೆ ಪರಿಯಂತವಿಳೆ ನಗರ ಗ್ರಾಮ ಪುರವರದ ।
ಮೇಲುವರ್ಣ ಪ್ರಮುಖವಾಚಾಂ-
ಡಾಲರವಧಿ ಸಮಸ್ತ ಭೂಜನ-
ಜಾಲ ಹಸ್ತಿನಪುರಿಗೆ ಬಂದುದು ಕಂಡುದವನಿಪನ ॥ ೧೭೮ ॥

ಚ್ಯವನ ಮುದ್ಗಲ ಕಣ್ವ ಕಠ ಭಾ-
ರ್ಗವ ಭರದ್ವಾಜಾಂಗಿರಸ ಗಾ-
ಲವ ಪುಲಸ್ತ್ಯರುಮಣ್ವ ಗೌತಮ ಯಾಜ್ಞವಲ್ಕ್ಯಮುನಿ ।
ಧ್ರುವ ವಿಭಾಂಡಕ ಗಾರ್ಗ್ಯ ಘಟಸಂ-
ಭವ ಮೃಕಂಡುಸುತಾದಿ ಭೂಮಿ-
ಪ್ರವರ ಮುನಿಗಳು ಬಂದು ಕಂಡರು ಧರ್ಮನಂದನನ ॥ ೧೭೯ ॥

ಜಲಧಿಮಧ್ಯದ ಕುಜುವಘಟ್ಟಾ-
ವಳಿಯ ಕೊಳ್ಳದ ಕುಹರಕುಂಜದ
ನೆಲೆಯ ಗಿರಿಸಾನುಗಳ ಶಿಖರದ ದುರ್ಗವೀಥಿಗಳ ।
ನೆಲನಶೇಷಪ್ರಜೆಸಿಪಿಳಮಂ-
ಡಳಿಕಮನ್ನೆಯ ವಂದಿಜನಸಂ-
ಕುಲ ಮತಂಗಜಪುರಕೆ ಬಂದುದು ನೃಪನ ಕಾಣಿಕೆಗೆ ॥ ೧೮೦ ॥

---

೧೭೮. [ಮೇಲುವರ್ಣ-ಬ್ರಾಹ್ಮಣ, ಕ್ಷತ್ರಿಯ, ವೈಶ್ಯ. ಶೂದ್ರ. ಚಾಂಡಾಲ-ನಾಲ್ಕು ವರ್ಣಗಳಿಗಿಂತಲೂ ಕೀಳು ಹುಟ್ಟಿನವನು, ವರ್ಣಬಾಹಿರ].

೧೭೯. [ಘಟಸಂಭವ-ಅಗಸ್ತ್ಯಮುನಿ. ಮೃಕಂಡುಸುತ-ಮಾರ್ಕಂಡೇಯ. ಭೂಮಿಪ್ರವರ-ಲೋಕದಲ್ಲಿ ಶ್ರೇಷ್ಠರಾದವರು].

೧೮೦. ಜಲಧಿಮಧ್ಯದ-ಸಮುದ್ರದ ನಡುವೆ ಇರುವ. ಕುಜುವ-ದ್ವೀಪ. ಘಟ್ಟಾವಳಿ-ಪರ್ವತಸ್ತೋಮ, ಬೆಟ್ಟಗಳ ಸಾಲು. ಕುಹರ-ಗವಿ. ಕುಂಜ-ಬಳ್ಳಿಮಾಡ, ಗಿಡಬಳ್ಳಿಗಳು ಬೆಳೆದಿರುವ ಸ್ಥಳ. ಗಿರಿಸಾನು-ಬೆಟ್ಟದ ತಪ್ಪಲು. ದುರ್ಗವೀಥಿ-ನಡೆದಾಡಲು, ಪ್ರವೇಶಿಸಲು, ಕಷ್ಟಕರವಾದ ದಾರಿಗಳು. ಅಶೇಷ-ಎಲ್ಲಾ, ಸಮಸ್ತ. ಮಂಡಳಿಕ-ಸಾಮಂತ ರಾಜ, ಮಂಡಲಾಧಿಪತಿ ಮನ್ನೆಯ-ಮನ್ನಣೆಗೆ ಪಾತ್ರರಾದವರು. ವಂದಿಜನ ಸಂಕುಲ-ಹೊಗಳುಭಟ್ಟರ ಸಮೂಹ. ಮತಂಗಜಪುರ-ಹಸ್ತಿನಾವತಿ].

ತರಿಸಿ ಮಂಗಳವಸ್ತುಗಳ ಸಂ-
ವರಿಸಿ ಬಹುವಿಧವಾದ್ಯರವ ವಿ-
ಸ್ತರದ ಪಂಚಮಹಾನಿನಾದದ ಸರ್ವಜನಮನದ ।
ಹರುಷಪೂರದ ವೇದಮಂತ್ರೋ-
ಚ್ಚಾರಣಸಾರದ ನೃಪನ [1]ಪಟ್ಟದ
ವರಮಹೋತ್ಸವವೆಸೆಯಲೆಸಗಿ[1]ದನಸುರರಿಪುವೆಂದು ॥ ೧೮೧ ॥

ಅರಸ ಕೇಳ್ಪ ಪಟ್ಟವದು ಹಿರಿ-
ಯರಸನದು ಯುವರಾಜಪಟ್ಟಕೆ
ಹರಿತನೂಜನೊಳಾಯ್ತು ಸೇನಾಪತಿ ಧನಂಜಯನು ।
ವರಕುಮಾರರು ಯಮಳರಲ್ಲಿಗೆ
ಹಿರಿಯ ಸಚಿವರು ವಿದುರನವನಿಪ
ಪರುಠವಿಸಿದ ಯುಯುತ್ಸುವನು ಸರ್ವಾಧಿಕಾರದಲಿ ॥ ೧೮೨ ॥

ಗೌಳಬರ್ಬರ ಮಗಧ ಸಿಂಧು ನೇ-
ಪಾಳವಾಂಧ್ರವಿದೇಹಕುರು ಮಳೆ-
ಯಾಳವತ್ಸತ್ರಿಗರ್ತ ಮತ್ಸ್ಯವಿದರ್ಭ [1]ಕರ್ನಾಟ ಕಾಂಭೋಜ[1] ।
ಮಾಳವಾಂಗಕಿರಾತವಲಿ ಬಂ-
ಗಾಳಜೋನೆಗಚೀನಖರ್ಪರ
ಚೋಳ ಕೊಡಗನೃಪಾಲ ಕೊಂಕಣಕರುಶಮಹರಾಷ್ಟ್ರ ॥ ೧೮೩ ॥

---

೧೮೧. [1]ಪಟ್ಟಾಭ್ಯುದಯವಸೆಯಲುತ್ಸವವನೆಸಗಿ (ಅ ಕುಮಾ).
[ಸಂವರಿಸು–ಸಿದ್ಧಗೊಳಿಸು. ಪಂಚಮಹಾನಿನಾದ–ಭೇರಿ, ಶಂಖ, ಕಹಳೆ, ಘಂಟೆ, ವೀಣೆ (ಇವುಗಳ ಶಬ್ದ) ಹರುಷಪೂರ–ಸಂತೋಷದ ಪ್ರವಾಹ].

೧೮೨. [ಹರಿತನೂಜ–ವಾಯುಪುತ್ರ, ಭೀಮ. ಧನಂಜಯ–ಅರ್ಜುನ. ಯಮಳರು–(ಅವಳಿ ಮಕ್ಕಳಾದ) ನಕುಲ ಸಹದೇವರು. ಪರುಠವಿಸು–ನೇಮಿಸು].

೧೮೩. * ಈ ಪದ್ಯ 'ಅ' ಪ್ರತಿಯಲ್ಲಿ ಅಧಿಕ ಪಾಠವಾಗಿ ಕೊಟ್ಟಿರುವ ಪದ್ಯಗಳಲ್ಲಿ ಕಂಡು ಬರುತ್ತದೆ.

*ಅಂಗ ಕುಂತಲಲಾಟ ಪೌಂಡ್ರಕ-
ಳಿಂಗ ಗುರ್ಜರ ಪಾಂಡ್ಯ ಕೇಕಯ
ಸಿಂಗಳ ದಶಾರ್ಣವತುರುಷ್ಕಸಮುದ್ರ ಹೋಸಲದ ।
ತುಂಗವಿಕ್ರಮ ನೃಪರನವರವ-
ರಂಗಚಿತ್ರವನಿತ್ತು ಲಾಲಿಸಿ
ಮಂಗಳೋತ್ಸವದಿಂದ ಮನ್ನಿಸಿ ಕಳುಹಿದನು ನೃಪತಿ ॥ ೧೮೪ ॥

ಬಳಿಕ ಭೀಷ್ಮನ ಬಾಣಶಯನ-
ಸ್ಥಳಕೆ ಧರ್ಮಜ ಬಂದು ಧರ್ಮಂ-
ಗಳನು [1]ಕೇಳ್ದನು[1] ರಾಜಧರ್ಮ [2]ಪುರಾಣಸಂಗತಿಯ[2] ।
ತಿಳಿದನಗ್ಗದ ದಾನಧರ್ಮಾ-
ವಳಿಯನಾತನ ರಾಜ್ಯಪಾಲನ
ನಳನಹುಷಭರತಾದಿಭೂಪರ ಗತಿಗೆ ಗುರುವಾಯ್ತು ॥ ೧೮೫ ॥

ಕದನದಲಿ ಕೈಯಾರೆ ದೈತ್ಯರ
ಸದೆದು ಭೂಭಾರವನು ಪರಹ-
ಸ್ತದಲಿ [1]ಮಾಡಿಸಿ[1] ಕೊಟ್ಟಭಾಷೆ[2]ಗೆ ಯು[2]ತ್ತರವೆನಿಸಿ ।
ನದಿಯ ನಂದನನನು ಪರಾನಂ-
ದದಲಿ ಸೇರಿಸಿ ಪರಮಪರಿತೋ-
ಷದಲಿ ಪಯಣವ ಮಾಡಿದನು ಮುರವೈರಿ ನಿಜಪುರಿಗೆ ॥ ೧೮೬ ॥

---

೧೮೪. [ಹೋಸಲ-ಹೊಯ್ಸಳ ಎನ್ನುವುದಕ್ಕೆ ಹೋಸಲ ಎಂದು ಪ್ರಯೋಗವಾಗಿರುವ ಹಾಗೆ ಕಂಡುಬರುತ್ತದೆ. ಅಂಗಚಿತ್ರ-ಪಾರಿತೋಷಿಕ, ಉಡುಗೊರೆ].

೧೮೫. [1]ಕೇಳಿದು (ಅ ಕುಮಾ). [2]ಸಮಸ್ತ ಧರ್ಮವನು (ಅ ಕುಮಾ).

[ಬಾಣಶಯನ ಸ್ಥಳ-ಬಾಣಗಳ ಮೇಲೆ ಮಲಗಿರುವ ಸ್ಥಳ. ರಾಜ್ಯಪಾಲನ-ರಾಜ್ಯಭಾರ, ರಾಜ್ಯವನ್ನು ಪಾಲಿಸುವುದು. ಗತಿ-ರೀತಿನೀತಿ, ನಡಸುವ ಕ್ರಮ. ಗುರುವಾಯ್ತು-ಮೇಲೆನಿಸಿತು, ಹೆಚ್ಚಿನದೆನಿಸಿತು].

೧೮೬. [1]ಕಟ್ಟಿಸಿ (ಅ ಕುಮಾ). [2]ಯನು (ಅ ಕುಮಾ).

[ಪರಹಸ್ತದಲಿ-ಇನ್ನೊಬ್ಬರ ಕೈಯಿಂದ].

---

* ಈ ಪದ್ಯವು ಯಾವ ಪ್ರತಿಯಲ್ಲಿಯೂ ಕಂಡುಬಂದಿಲ್ಲ.

ದೇವ ದುಂದುಭಿರವದ ಗಗನದ
ಹೂವಳೆಯು ಪೂರದ ಸಮುಸ್ತ ಜ-
ನಾವಳಿಯ ಜಯ ಜೀಯ ನಿರ್ಘೋಷದ ಗದಾವಣೆಯು ।
ದೇವಕಿಯು ವಸುದೇವ ರುಕುಮಿಣಿ
ದೇವಿಯಾದಿಯ ಹರುಷದಾವಿ-
ರ್ಭಾವ ಮಿಗೆ ನಿಜಪುರವ ಹೊಕ್ಕನು ವೀರನಾರಯಣ ॥ ೧೮೭ ॥

---

೮. ಮಂಗಳ

ಭವದುರಿತಹರವಕಟ ಹರಿನಾ-
ಮವನೆ ನೆನೆವರು ಕಾಲಚಕ್ರದ
ಜವನ ಬೇಗೆಯ ಜುಣಾಗಿ ಜಾಜುವರಖಿಳಮಾನವರು ।
ಕವಿಕುಮಾರವ್ಯಾಸಸೂಕ್ತದ
ಸವಿಯುದಮೃತವನೊಲಿದೊಲಿದು ಸು-
ಶ್ರವಣದಲಿ ಕುಡಿಕುಡಿದು ಪದವಿಯ ಪಡೆವುದೀಲೋಕ ॥ ೧೮೮ ॥

ವೇದಪಾರಾಯಣದ ಫಲ ಗಂ-
ಗಾದಿ ತೀರ್ಥಸ್ನಾನಫಲ ಕೃ-
ಚ್ಛ್ರಾದಿ ತಪಸಿನ ಫಲವು ಜ್ಯೋತಿಷ್ಟೋಮ ಯಾಗಫಲ ।
ಮೇದಿನಿಯನೊಲಿದಿತ್ತ ಫಲ ವ-
ಸ್ತ್ರಾದಿ ಕನ್ಯಾದಾನಫಲವಹು-
ದಾದರಿಸಿ ಭಾರತದೊಳೊಂದಕ್ಷರವ ಕೇಳ್ದಂಗೆ ॥ ೧೮೯ ॥

— ಸಮಾಪ್ತಂ —

---

೧೮೭. [ಪೂರ-ಪ್ರವಾಹ. ನಿರ್ಘೋಷ-ಅತಿಶಯವಾದ ಘೋಷಣೆ, ಕೂಗಿ ಹೇ
ಗದಾವಣೆ-ಕೋಲಾಹಲ, ಗಜಬಿಜ. ಆವಿರ್ಭಾವ-ಉತ್ಪತ್ತಿ, ಉಂಟಾಗು

೧೮೮. [ಭವದುರಿತಹರ-ಜನ್ಮಾಂತರಗಳ ಪಾಪವನ್ನು ಕಳೆಯುವ. ಅಕಟ-ಅ
ಸೂಚಿಸುವ ಪದ. ಜವನ ಬೇಗೆ-ಯಮನು ಕೊಡುವ ಬಾಧೆಯ ತಾಪ.
ನ ಬಿಡಿಸಿಕೊಳ್ಳು. ಸೂಕ್ತ-ಒಳ್ಳೆಯ ಮಾತು. ಸುಶ್ರವಣ-ಚೆನ್ನಾ
ಕೊಳ್ಳುವುದು. ಪದವಿ-ಮೋಕ್ಷದ ಪದವಿ, ಉತ್ತಮ ಸ್ಥಿತಿ, ಮೇಲ್ಮೆ].

೧೮೯. [ಕೃಚ್ಛ್ರ-ಪ್ರಾಯಶ್ಚಿತ್ತ. ಮೇದಿನಿ-ಭೂಮಿ].